UNIVERSAL
LIBRARY
OU_198368
UNIVERSAL
LIBRARY

ವಾಚಕರಲ್ಲಿ ಅರಿಕೆ

ಮಲಪ್ರಭೆಯತಿ ಪುಣ್ಯತೀರದಿ ।
ಚೆಲುವ ಗುರುನವಪುರದ ಕ್ಷೇತ್ರದಿ ।
ನೆಲಿಸಿರುವ ಕೈವಲ್ಯ ಮೂರುತಿ ಗುರುವು ತಾನೆನಿಸಿ ॥
ಸಲಿಸುತಲಿ ಪರಶಿವಗೆ ಸೇವೆಯ ।
ಬೆಳಸುತಲಿ ಪರಶಿವನ ಕೀರ್ತಿಯ ।
ಪಳಗಿಸುತ ಶಿಷ್ಯರನು ಕಾರ್ಯದಿ ಶ್ರೀಚಿದಂಬರನ ॥

ಶ್ರೀ ಸಮರ್ಥಸದ್ಗುರು ಶ್ರೀ ಕೈವಲ್ಯಾಶ್ರಮ ಸ್ವಾಮೀ ಮಹಾರಾಜರ ಎಲ್ಲ ಭಾವಿಕ ಸದ್ಭಕ್ತರಿಗೆ ನಾನು ಮಾಡಿಕೊಳ್ಳುವ ವಿನಂತಿಯೇನೆಂದರೆಃ

ನಾನು ಪಾಮರನು. ಈ ಅರಿಕೆಯನ್ನು ಬರೆಯುವ ದೊಡ್ಡಸ್ತಿಕೆಯು ನನಗೆ ಬೇಕಾಗಿಲ್ಲ. ಆ ಯೋಗ್ಯತೆಯೂ ನನ್ನಲ್ಲಿಲ್ಲ. ಆದರೂ ಕರ್ತವ್ಯ ವೆಂದು ಈ ಕೆಲಸವನ್ನು ಮಾಡುತ್ತಿದ್ದೇನೆ.

ಮಹಾತ್ಮರೂ, ಜ್ಞಾನಿಗಳೂ ಆದ ಸತ್ಪುರುಷರ ಚರಿತ್ರೆಗಳೆಂದರೆ ಈ ದುಸ್ತರವಾದ ಸಂಸಾರವನ್ನು ದಾಟಿಸುವ ನಾವೆಗಳೇ ಸರಿ !

ಶ್ರೀಗಳವರ ಪ್ರತ್ಯಕ್ಷದರ್ಶನ ಮತ್ತು ಸಹವಾಸಗಳಲ್ಲಿ ಯಾವ ಯಾವ ಪುಣ್ಯವಂತರಿಗೆ ಶ್ರೀಗಳ ಪ್ರೇಮರೂಪ ಬೋಧಾಮೃತದ ಲಾಭವು ಸಿಕ್ಕಿತೋ, ಆ ಭಾವಿಕ ಭಕ್ತರು ಅತ್ಯಂತ ಧನ್ಯರೇ ಸರಿ.

ಶ್ರೀಗಳವರ ಪಾರ್ಥಿವ ಶರೀರದ ವಿಯೋಗವಾಗಿ ಇಂದಿಗೆ ೩೬ ವರುಷ ಗಳಾದವು. ಚಿಕ್ಕಂದಿನಿಂದಲೇ ಏಕನಿಷ್ಠ ತಪಃ ಪ್ರಭಾವದಿಂದ ಕರ್ಮ-ಉಪಾ

ಸನಾ-ಜ್ಞಾನಗಳಿಂದೊಡಗೂಡಿದ ಶುದ್ಧ ಜ್ಞಾನದ ಉಪಾಸನೆ ಮತ್ತು ನಾಮ ಮಹಾತ್ಮ್ಯಗಳಿಂದ ಅವರ ಚರಿತ್ರೆಯು ಒಡಗೂಡಿದೆ. ಇವುಗಳನ್ನು ವಿಶದೀಕರಿಸಿ, ಅವರ ವೈರಾಗ್ಯ ವೃತ್ತಿಯನ್ನು ಸ್ಪಷ್ಟವಾಗಿ ವರ್ಣಿಸುವ, ಮತ್ತು ಅವರ ಬೋಧಾಮೃತವನ್ನು ಸೂರೆಮಾಡುವ ಆವರ ದಿವ್ಯವಾದ ಚರಿತ್ರೆಯನ್ನು ಈ ಪೂರ್ವದಲ್ಲಿಯೇ ಪ್ರಕಟಪಡಿಸಿ, ಅದರ ಲಾಭವು ಎಲ್ಲರಿಗೂ ಸಿಕ್ಕುವಂತೆ ಮಾಡಬೇಕೆಂದು ನನ್ನ ದೇನೋ ಉತ್ಕಟೇಚ್ಛೆ ಇತ್ತು. ಆದರೆ ಆ ಯೋಗವು ಮಾತ್ರ ಇಲ್ಲಿಯ ವರೆಗೂ ಬಂದಿರಲಿಲ್ಲ.

ಶ್ರೀಗಳವರ ಏಕನಿಷ್ಠ ಸೇವಕರಾದ ಶ್ರೀ ವಾಜೀಂದ್ರ ಶ್ರೀನಿವಾಸ— ಪ್ರೇಮಾನಂದಬುವಾ — ಅವರು ಶ್ರೀಗಳವರ ಲಘುಜೀವನ ಚರಿತ್ರೆಯನ್ನು ಮಹಾರಾಷ್ಟ್ರ ಭಾಷೆಯಲ್ಲಿ ಒತ್ತಟ್ಟಿಗೆ ಶೇಖರಿಸಿ, ಸನ್ ೧೯೧೧-೧೨ ರಲ್ಲಿ ಅಚ್ಚುಹಾಕಿಸಿ ಪ್ರಸಿದ್ಧಗೊಳಿಸಿದರು. ಮತ್ತು ಅದರಲ್ಲಿಯೇ ಅವರು ಭಕ್ತ ಜನರ ಸಲಹೆ ಸೂಚನೆಗಳಿಗನುಸಾರವಾಗಿ ಶ್ರೀಗಳವರ ವಿಸ್ತೃತ ಚರಿತ್ರೆಯನ್ನು ಆದಷ್ಟು ತೀವ್ರ ಸಿದ್ಧಪಡಿಸಿ ಎಲ್ಲರಿಗೂ ಕಳಿಸುವ ಇಚ್ಛೆಯನ್ನು ವ್ಯಕ್ತ ಪಡಿಸಿದ್ದರು. ಆದರೆ ಈಶ್ವರನ ಸಂಕಲ್ಪವು ಬೇರೆಯಾಗಿತ್ತು. ಕಾರಣ ಕಾಲಮಾನಕ್ಕನುಸರಿಸಿ ಅನೇಕ ಅಡಚಣೆಗಳುಂಟಾಗಿ ಆ ಕೆಲಸವು ಹಾಗೆಯೇ ನಿಂತು ಹೋಯಿತು. ಇಷ್ಟೇ ಅಲ್ಲ; ವಾಜೀಂದ್ರರು ಶ್ರೀಗಳವರ ಚರಿತ್ರೆಯ ಸಲುವಾಗಿ ಬರೆದಿಟ್ಟದ್ದ ಟಿಪ್ಪಣಿಗಳೂ ನೆನಪುಗಳೂ ಕೂಡ ಕಳೆದುಹೋದುದರಿಂದ, ಮನಸಿಗೆ ಬಹಳ ವ್ಯಥೆಯಾಯಿತು.

ಈ ಪರಿಸ್ಥಿತಿಯಲ್ಲಿ ಚರಿತ್ರೆಯ ಕೆಲಸವು ಹೇಗೆ ಕೊನೆಗಂಡೀತೆಂದು ಮನಸಿಗೆ ಬಹಳ ಚಡಪಡಿಕೆಯಾಗಹತ್ತಿತು. ಕೊನೆಗೆ ಶ್ರೀಚರಣಗಳಲ್ಲಿಯೇ ಈ ಬಗ್ಗೆ ಪ್ರಾರ್ಥನೆ ಮಾಡಿಕೊಂಡು, ಚರಿತ್ರೆಯನ್ನು ಬರೆಯುವ ಬಗ್ಗೆ ಅನೇಕ ಜನ ಭಾವಿಕ ಭಕ್ತರಿಗೆ ವಿಜ್ಞಾಪನೆ ಮಾಡಿಕೊಂಡು, ಚರಿತ್ರೆಯ ಕೆಲಸವನ್ನು ಪ್ರಾರಂಭಿಸಿದೆನು. ಆದರೆ ಆದರಲ್ಲಿ ಕೂಡ ನಾನಾತರದ ಅಡಚಣೆಗಳುಂಟಾದುದರಿಂದ ಕೆಲಸವು ಪೂರ್ಣವಾಗಲೇ ಇಲ್ಲ. ಶ್ರೀಗಳವರಿಗೆ ಮತ್ತೊಮ್ಮೆ ಪ್ರಾರ್ಥನೆಮಾಡಿಕೊಂಡೆ. ಈ ಸಲ ಅವರು ನನ್ನ ಪ್ರಾರ್ಥನೆಗೆ ಓಕೊಟ್ಟರು. ಆಯಿತು, ದೊಡ್ಡವರ ಮನಸಿಗೆ ಬಂದಮೇಲೆ ಕೇಳುವದೇನು? ಅವರು ಇಚ್ಛಿಸಿದರೆ ''ಮೂಕಂ ಕರೋತಿ ವಾಚಾಲಂ, ಪಂಗುಂ ಲಂಘಯತೇ

ಗಿರಿಂ'' ಅಲ್ಲವೇ? ''ಚಿದಂಬರನ ಸಾಮರ್ಥ್ಯವು ಅಗಾಧವಾಗಿರುವದಲ್ಲವೇ?'' ಈ ನ್ಯಾಯದಿಂದ ಶ್ರೀಗಳವರ ಸೇವಾ ಕೃಪೆಗೆ ಪಾತ್ರರಾದ ಶ್ರೀ ನಾರಾಯಣ ರಾವ ಕುಲಕರ್ಣಿ, ಎಮ್. ಎ. ಎಲೆಲ್. ಬಿ. ಇವರಿಗೆ ಪ್ರೇರಣೆಯಾಗಿ, ಈ ಸೇವೆಯು ಅವರ ಕೈಗೆ ಬಂದುದರಿಂದ, ಅದರ ಪೂರ್ತತೆಯಾಯಿತು.

ನಾರಾಯಣರಾಯರು ಬರೆದ ಈ ಚರಿತ್ರೆಯು ಸರ್ವಾಂಗಸುಂದರವಾಗಿದೆ. ಇದರಿಂದ ಎಲ್ಲ ಭಾವಿಕ ಭಕ್ತರಿಗೆ ಶ್ರೀಗಳವರ ಬಾಲ್ಯದಿಂದ ಕೊನೆಯವರೆಗಿನ ಗುಣವರ್ಣನವು ಯಥಾಸ್ಥಿತವಾಗಿ ಕೇಳಲಿಕ್ಕೆ ಸಿಕ್ಕುವಂತಾಗಿದೆ ಇದಕ್ಕಾಗಿ ಶ್ರೀ ನಾರಾಯಣರಾಯರನ್ನು ಪ್ರೇಮಪೂರ್ವಕವಾಗಿ ಅಭಿನಂದಿಸುತ್ತೇನೆ. ಮತ್ತು ಅವರ ಕಡೆಯಿಂದ ಶ್ರೀಗಳವರು ಸೇವೆತಕ್ಕೊಂಡದ್ದರಿಂದ, ಅವರಿಗೆ ಅಖಂಡ ಕಲ್ಯಾಣವಾಗಲೆಂದು ಶ್ರೀಚರಣಗಳಲ್ಲಿ ಪ್ರಾರ್ಥಿಸಿ ಈ ಅರಿಕೆಯನ್ನು ಮುಗಿಸುತ್ತೇನೆ.

ನಾಗಪಂಚಮಿ, ಶ್ರಾವಣ
ಶುದ್ಧ ಪಂಚಮಿ ಶಕೆ ೧೮೬೯

ಶ್ರೀಚರಣರಜ ಸೇವಕ
ವಿಷ್ಣು ಕೃಷ್ಣ ಕವೀಶ್ವರ
ಕಾರ್ಯದರ್ಶಿಗಳು
ಶ್ರೀ ಕೈವಲ್ಯಾಶ್ರಮಸ್ವಾಮೀ
ಸಂಸ್ಥಾ ಗುರ್ಲಹೊಸೂರ

ಲೇಖಕರ ಅರಿಕೆ

ಶ್ರೀ ಸದ್ಗುರುವರ್ಯ ಶ್ರೀ ಕೈವಲ್ಯಾಶ್ರಮಸ್ವಾಮೀ ಮಹಾರಾಜರ ಚರಿತ್ರೆಯನ್ನು ಬರೆಯುವ ಯೋಗ್ಯತೆಯವನಾಗಲಿ, ಅಧಿಕಾರವಾಗಲಿ, ನನ್ನಲ್ಲಿ ಎಷ್ಟೂ ಇಲ್ಲ. ಆ ಪುಣ್ಯಪುರುಷರು ದೇಹವಿಟ್ಟಾಗ ನಾನು ಆರೇಳು ವರುಷದ ಬಾಲಕನಿದ್ದೆ. ಅವರನ್ನು ನೋಡುವ, ಅವರ ಸಹವಾಸದಲ್ಲಿ ಕಾಲಕಳೆಯುವ, ಅಥವಾ ಅವರ ಬೋಧನನ್ನು ಕೇಳುವ ಭಾಗ್ಯವು ನನಗೆ ದೊರೆತಿಲ್ಲ. ಮೇಲಾಗಿ ನಾನು ಸಾಹಿತಿಯೂ ಅಲ್ಲ. ನನ್ನ ಕನ್ನಡ ಭಾಷೆಯ ಜ್ಞಾನವೂ ಅಷ್ಟಕ್ಕಷ್ಟೇ.

ಹೀಗಿದ್ದರೂ ನಾನು ಈ ಚಾಪಲಕ್ಕೆ ಕೈಹಾಕಿನ ಕಾರಣವು ಬೇರೆ ಇದೆ: ನಾನು ಜೀವನದಲ್ಲಿ ನಿರಾಶನಾಗಿ, ಬೆಳಕನ್ನು ಕಾಣದೆ ಕೊರಗುತಿರುವಾಗ, ಶ್ರೀ ಸ್ವಾಮೀ ಮಹಾರಾಜರು ತಾವಾಗಿ ಕರುಣೆದೋರಿದರು ಕಗ್ಗತ್ತಲೆಯ ನನ್ನ ಜೀವನದಲ್ಲಿ ಬೆಳಕು ತೋರಿದರು ಕಠಿಣವಾದ ಜೀವನವನ್ನು ಹಗುರಾಗಿ ಮಾಡಿದರು. ಸರಿಯಾದ ಉಪದೇಶಮಾಡಿ, ನನಗೆ ಸನ್ಮಾರ್ಗವನ್ನು ತೋರಿದರು. ಮ್ಮ ಚರಿತ್ರೆ ಬರೆದು ಪರರಿಗೆ ಬೋಧಿಸಬೇಕೆಂದು ಆಜ್ಞೆ ಮಾಡಿದರು. ಶ್ರೀ ಸ್ವಾಮಿಗಳವರ ಜೀವಂತ ಪ್ರತೀಕವಾದ ಶ್ರೀ ವಿಷ್ಣುಬುವಾ ಅವರೂ ಸ್ವತಂತ್ರವಾಗಿ ನನಗೆ ಇದೇ ಮಾತನ್ನೇ ಅಪ್ಪಣೆ ಕೊಡಿಸಿದರು. ಅದಕ್ಕಾಗಿ ನಾನು ಈ ಪುಸ್ತಕವನ್ನು ಬರೆದು ನನ್ನ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುವ ಪ್ರಯತ್ನ ಮಾಡಿದ್ದೇನೆ.

ಆಜ್ಞೆಯೇ ಪ್ರಮಾಣವೆಂದು ನಡೆಯುವದು ಭಕ್ತಿಯೋಗವೆಂದೆನಿಸಿಕೊಳ್ಳುವದು. ಅದಕ್ಕನುಸಾರವಾಗಿ ನಾನೀ ಪುಸ್ತಕವನ್ನು ಬರೆದು ಶ್ರೀ ಸ್ವಾಮಿಗಳವರ ದಿವ್ಯ ಚರಣಾರವಿಂದಗಳಿಗೆ ಸಮರ್ಪಣೆ ಮಾಡಿದ್ದೇನೆ.

ಅಥವಾ ಅವರೇ ನನ್ನ ಕಡೆಯಿಂದ ಇದನ್ನು ಬರೆಸಿದ್ದಾರೆಂದು ಹೇಳುವದು ಹೆಚ್ಚು ಸರಿಯಾಗಬಹುದು. ಚರಿತ್ರೆಯ ಪ್ರಯತ್ನವು ಹೇಗಿದ್ದರೂ, ಕೈವಲ್ಯ ಮಾತೆಯು ಅಜ್ಞ ಬಾಲಕನ ಈ ಕಾಣಿಕೆಯನ್ನು ಪ್ರೀತಿಯಿಂದ ಸ್ವೀಕರಿಸುವ ಳೆಂದು ನಂಬಿದ್ದೇನೆ.

ಚರಿತ್ರೆಯೆಂದರೆ ನಿಜವಾದ ಇತಿಹಾಸವು. ಆದರೆ ಈ ಪುಸ್ತಕವನ್ನು ಬರೆಯುವಾಗ ಬರೆ ಇತಿಹಾಸವನ್ನು ಬರೆಯುವ ದೃಷ್ಟಿಯನ್ನಿಟ್ಟುಕೊಂಡಿಲ್ಲ. ಇತಿಹಾಸದೊಂದಿಗೆ ವಾಚಕರು ಆ ಮಹಾತ್ಮರ ಜೀವನಕ್ರಮದ ತ್ರೇಸ್ಕರವಾದ ಆದರ್ಶವನ್ನು ತಮ್ಮ ಜೀವನಕ್ಕೆ ಹೇಗೆ ಅನ್ವಯಿಸಿಕೊಳ್ಳಬಹುದೆಂಬುದನ್ನೂ ತೋರಿಸುವ ಯತ್ನ ಮಾಡಿದ್ದೇನೆ. ಶ್ರೀ ಸ್ವಾಮೀ ಮಹಾರಾಜರ ಚರಿತ್ರೆಯು ಎಲ್ಲರಿಗೂ ಅನುಕರಣೀಯ ವಾಗಿದೆಯೆಂದು ನನ್ನ ತಿಳಿವಳಿಕೆಯಾಗಿದೆ. ಬಾಲಕರು; ತರುಣರು; ಪ್ರೌಢರು; ಮುದುಕರು; ಸಂಸಾರಿಕರು; ಸಂನ್ಯಾಸಿಗಳು: ಮುಮುಕ್ಷುಗಳು; ಮುಕ್ತರು; ಸಾಧಕರು; ಸಿದ್ಧರು; ಹೆಂಗಸರು; ಗಂಡಸರು: ಸಿರಿವಂತರು, ಒಡವರು, ಕಲಿತವರು, ಕಲಿಯದಿದ್ದವರು, ಸುದೈವಿಗಳು, ದುರ್ದೈವಿಗಳು— ಎಲ್ಲರೂ ಮಹಾರಾಜರ ಚರಿತ್ರೆಯಿಂದ ಕಲಿಯಬಹುದಾಗಿದೆ; ಅವರ ಉದಾಹರಣೆಯಿಂದ ತಮ್ಮ ಜೀವನವನ್ನು ಮಾರ್ಪಡಿಸಿಕೊಳ್ಳಬಹುದಾಗಿದೆ. ನಾನೀ ಪುಸ್ತಕ ಬರೆಯುವಾಗ ಇದೇ ದೃಷ್ಟಿಯನ್ನು ಮುಖ್ಯವಾಗಿಟ್ಟುಕೊಂಡಿದ್ದೇನೆ. ಅದು ಸಾಧಿಸಿರುವದೋ ಇಲ್ಲವೋ ಎಂಬದನ್ನು ನಿರ್ಣಯಿಸುವ ಕೆಲಸವು ವಾಚಕರದು.

ಮಹಾರಾಜರು ದೇಹವಿಟ್ಟ ವರುಷವೇ ಎಂದರೆ ಇಸ್ವಿಸನ್ ೧೯೧೧-೧೨ ರಲ್ಲಿ, ಅವರ ಶಿಷ್ಯರಾದ ವಾಜೀಂದ್ರರು ಅವರ ಲಘು ಚರಿತ್ರೆಯನ್ನು ಮಹಾರಾಷ್ಟ್ರ ಭಾಷೆಯಲ್ಲಿ ಪ್ರಕಟಗೊಳಿಸಿದರು. ಅವರ ವಿಸ್ತೃತ ಚರಿತ್ರೆಯನ್ನು ಬರಿಸಬೇಕೆಂದು ಅವರ ಮನಸ್ಸಿನಲ್ಲಿದ್ದರೂ, ಅದು ಅವರ ಕೈಯಿಂದ ಪೂರ್ತಿಯಾಗಲಿಲ್ಲ. ಆಮೇಲೆ ಅಗಡಿಯ ಸದ್ಬೋಧ ಚಂದ್ರಿಕೆಯಲ್ಲಿ ಮತ್ತು ದೊಡ್ಡವಾಡದ ಹಿತಚಿಂತಕ ಮಾಸಪತ್ರಿಕೆಯಲ್ಲಿ ಮಹಾರಾಜರ ಪೂರ್ವಾಶ್ರಮದ ವಿಷಯಕವಾದ ಕೆಲವು ಸಂಗತಿಗಳು ಪ್ರಕಟವಾದವು. ಮಹಾರಾಜರ ಕೃಪಾಪಾತ್ರರಾದ ಶ್ರೀ ವ್ಹಿ. ವ್ಹಿ. ಲಿಮಯೇ, ಎಮ್. ಎ., ಎಂಬುವವರು ಮಹಾ

ರಾಜರ ಚರಿತ್ರೆಯ ಪೂರ್ವಾರ್ಧವನ್ನು ಬರೆದು ಶ್ರೀ ಸ್ವಾಮೀ ಸಂಸ್ಥೆಯ ವಾರ್ಷಿಕ ವರದಿಗಳಲ್ಲಿ ಪ್ರಸಿದ್ಧಿಸಿದರು. ಅದು ಮಹಾರಾಷ್ಟ್ರ ಭಾಷೆಯಲ್ಲಿದೆ. ಮುಂದೆ ಶ್ರೀ ವಿಷ್ಣುಬುವಾ ಅವರ ಪ್ರಾರ್ಥನೆಗನುಸರಿಸಿ ಕೈ. ವಾ. ಶ್ರೀ. ಬಾಳಕೃಷ್ಣ ದೇವಣಭಟ್ಟ ಜೋಶಿ, ಹೆಡ್ ಮಾಸ್ತರರು ಸ್ವಾಮಿಗಳವರ ವಿಸ್ತೃತವಾದ ಚರಿತ್ರೆಯನ್ನು ಕನ್ನಡದಲ್ಲಿ ಬರೆದುಕೊಟ್ಟರು. ಅವರು ಕನ್ನಡದಲ್ಲಿ ಬರೆದ ಲಘುಚರಿತ್ರೆಯನ್ನು ಶ್ರೀ. ಚಿ. ಶ್ರೀ. ಕುಲಕರ್ಣಿ, ಬಾಗೇವಾಡಿ ಇವರು ಅಚ್ಚುಹಾಕಿಸಿ ಈ ಮೊದಲೇ ಪ್ರಕಟಗೊಳಿಸಿದ್ದಾರೆ. ಆದರೆ ಅವರು ಬರೆದ ವಿಸ್ತೃತ ಚರಿತ್ರೆಯು ಚನ್ನಾಗಿದ್ದರೂ ಎಲ್ಲ ಜನರ ಮನ್ನಣೆಗೆ ಪಾತ್ರವಾಗಲಿಲ್ಲ. ಅನಂತರದಲ್ಲಿ ಶ್ರೀ. ಕಾಶೀನಾಥ ಯಜ್ಞೇಶ್ವರ ಜೋಶಿ, ದೊಡ್ಡವಾಡ, ಇವರೂ ಶ್ರೀಗಳವರ ವಿಸ್ತಾರವಾದ ಚರಿತ್ರೆಯನ್ನು ಬರೆದು ಸಂಸ್ಥೆಗೆ ಸಮರ್ಪಣೆ ಮಾಡಿದರು. ಆ ಚರಿತ್ರೆಯಾದರೂ ಹೃದಯಂಗಮವಾಗಿದೆ ಆದರೆ ಆದೂ ಎಲ್ಲರ ಒಪ್ಪಿಗೆಯನ್ನು ಪಡೆಯಲಿಲ್ಲ. ಈ ಪರಿಸ್ಥಿತಿಯನ್ನು ನೋಡಿ ಶ್ರೀ. ಸಂಗಮೇಶ್ವರ ಮಾಸ್ತರರು ಈ ಚರಿತ್ರೆ ಬರೆಯುವ ಕೆಲಸವನ್ನು ತಾವು ಕೈಕೊಂಡರು. ಆದರೆ ಅವರ ಕಡೆಯಿಂದಲೂ ಆ ಕೆಲಸವು ಪೂರ್ಣವಾಗಲಿಲ್ಲ. ಹೀಗಾಗಿ ಕೊನೆಗೆ ನನ್ನ ಪಾಲಿಗೆ ಈ ಸೇವೆಯ ಲಾಭವು ಸಿಕ್ಕಿತು. ಇದೊಂದು ನನ್ನ ಪುಣ್ಯವೆಂದೇ ನಾನು ಭಾವಿಸಿದ್ದೇನೆ.

ಈ ಚರಿತ್ರೆಯನ್ನು ಬರೆಯುವಾಗ ಮೇಲೆ ವಿವರಿಸಿದ ಮತ್ತು ಸದ್ಯಕ್ಕೆ ಉಪಲಬ್ಧವಿರುವ ಎಲ್ಲ ಸಲಕರಣೆಗಳನ್ನೂ ಉಪಯೋಗಿಸಿಕೊಂಡಿದ್ದೇನೆ. ಇದರ ಹೊರತಾಗಿ ಶ್ರೀ. ಗುರುನಾಥ ವೆಂಕಟೇಶ ಕಿತ್ತೂರ, ಬಿ. ಎ. ಬೆಳಗಾಂವ ಇವರು ಶಕೆ ೧೮೪೯ರಲ್ಲಿ ಮಹಾರಾಜರ ಚರಿತ್ರೆಯನ್ನು ಸಂಸ್ಕೃತ ಭಾಷೆಯಲ್ಲಿ ಬರೆದಿದ್ದು, ಅದನ್ನು ನಾನು ನೋಡಿದ್ದೇನೆ. ಈ ಎಲ್ಲ ಗ್ರಂಥಕಾರರಿಗೆ ನಾನು ಕೃತಜ್ಞನಾಗಿರುವೆನೆಂದು ಬೇರೆ ಹೇಳಲಿಕ್ಕೆ ಬೇಡ. ಇಷ್ಟೇ ಅಲ್ಲದೆ, ನಾನು ಅನೇಕ ಜನ ಸ್ವಾಮಿಭಕ್ತರಿಗೆ ಬೆಟ್ಟಿಯಾಗಿ ಅವರ ಬಾಯಿಂದ ಅನೇಕ ಸಂಗತಿಗಳನ್ನು ಕೇಳಿಕೊಂಡಿದ್ದೇನೆ. ಶ್ರೀಯುತರಾದ ವಿಷ್ಣುಬುವಾ, ರಾವಬಹಾದ್ದೂರ ನಾರಾಯಣರಾವ ಜೋಸಿ, ಹತ್ತಿ ರಾಚಪ್ಪನವರು, ಆಬಾ ಸಾಹೇಬ ಇನಾಮದಾರ (ಅಷ್ಟಗಿ), ಶಂಭುಭಟ್ಟ ಗ್ರಾಮೋಪಾಧ್ಯೆ, ಚಿಂತಾಮಣ ತೀರ್ಥೋ ನವಲಗುಂದ, ದತ್ತೋಪಂತ ಹಣಬರಹಟ್ಟಿ ಮೊದಲಾದವರ

ಹೆಸರುಗಳನ್ನು ಈ ಸಂದರ್ಭದಲ್ಲಿ ಉಲ್ಲೇಖಮಾಡಬಹುದು. ಇವರೆಲ್ಲರಿಗೂ ನಾನು ಕೃತಜ್ಞನಾಗಿರುವೆನೆಂಬದು ಸ್ಪಷ್ಟವಿದೆ.

ಈ ಪುಸ್ತಕವನ್ನು ಅಚ್ಚುಹಾಕಿ ಪ್ರಕಟಪಡಿಸುವ ಕೆಲಸದಲ್ಲಿ ನಮಗೆ ಅನೇಕರು ಸಹಾಯ ಮಾಡಿದ್ದಾರೆ. ಶ್ರೀ ಶೇಷಾಚಲ ಪ್ರೆಸ್ಸಿನ ಒಡೆಯರಾದ ಶ್ರೀ. ಬಿ. ಪಿ. ಕಾಳೆಯವರ ಹೆಸರನ್ನು ಈ ಸಂದರ್ಭದಲ್ಲಿ ಎಲ್ಲಕ್ಕೂ ಮೊದಲು ನೆನಿಸಬೇಕು. ಈ ಪುಸ್ತಕವನ್ನು ಅಂದವಾಗಿ ಅಚ್ಚುಹಾಕಿ ಕೊಟ್ಟವರು, ಧಾರವಾಡದ ವಿಜಯ ಪ್ರೆಸ್ಸಿನ ಒಡೆಯರಾದ ಶ್ರೀ. ಎನ್. ಎ. ಹೊಸಕೇರಿಯವರು. ಬ್ಲಾಕುಗಳನ್ನು ಸಿದ್ಧಪಡಿಸಿದವರು ಶ್ರೀನಿವಾಸ ಮತ್ತು ಕಂಪನಿಯ ಶ್ರೀ ಬೋಧರಾವ ಬೆಂಗೇರಿಯವರು. ಶ್ರೀ. ಚಿ. ತ್ರೀ. ಕುಲಕರ್ಣಿಯವರು ನಮಗೆ ಈ ಕೆಲಸದಲ್ಲಿ ನಾನಾ ಬಗೆಯಿಂದ ಸಹಾಯಮಾಡಿದವರು. ಆಸ್ಥೆಯಿಂದ ಈ ಪುಸ್ತಕದ ಮೊಳೆಗಳನ್ನು ಜೋಡಿಸಿಕೊಟ್ಟವರು ವಿಜಯ ಪ್ರೆಸ್ಸಿನ ಶ್ರೀ. ಶಿದ್ದಪ್ಪಾ ರಾಮಚಂದ್ರಪ್ಪಾ ಬಾಗೋಡಿ ಎಂಬ ಕೆಲಸಗಾರರು. ಇವರೆಲ್ಲರ ಸೇವೆಯು ಶ್ರೀ ಸ್ವಾಮೀ ಚರಣಗಳಲ್ಲಿ ಅಂಗೀಕೃತವಾಗಿದೆ. ಇವರೆಲ್ಲರಿಗೂ ಶ್ರೀ ಕೈವಲ್ಯಾಶ್ರಮ ಸ್ವಾಮೀ ಸಂಸ್ಥೆಯು ಋಣಿಯಾಗಿದೆ

ಈ ಪುಸ್ತಕದ ಮುದ್ರಣನೆಚ್ಚಕ್ಕೆಂದು ಬೆಳಗಾಂವಿಯ ರಾವಬಹಾದ್ದೂರ ನಾರಾಯಣರಾವ ಜೋಶಿ ಅವರು ೫೦೧ ರೂಪಾಯಿಗಳನ್ನು ಕೊಟ್ಟರುತ್ತಾರೆ. ಅವರಿಗೆ ನನ್ನ ಕೃತಜ್ಞತೆಗಳನ್ನು ಎಷ್ಟು ಸಲ್ಲಿಸಿದರೂ ಕಡಿಮೆಯೇ. ಸ್ವಾಮೀ ಮಹಾರಾಜರ ಪಟ್ಟಶಿಷ್ಯರಾದ ಶ್ರೀ ವಿಷ್ಣುಬುವಾ ಕವೀಶ್ವರ ಇವರ ಉಪಕಾರವನ್ನಂತೂ ಸರಿಯಾಗಿ ಸ್ಮರಿಸುವದೇ ಶಕ್ಯವಿಲ್ಲ. ಈ ಚರಿತ್ರೆ ಬರೆಯುವ ಕೆಲಸ ನಡೆದಾಗೆಲ್ಲ ಅವರು ನನ್ನನ್ನು ಬಹಳ ಪ್ರೀತಿಯಿಂದ ಶ್ರೀ ಸ್ವಾಮೀ ಮಹಾರಾಜರು ಲೀಲಾವಿಹಾರ ಮಾಡಿದ ಅನೇಕ ಸ್ಥಳಗಳಿಗೆ ಕರಕೊಂಡು ಹೋಗಿ, ಅವುಗಳ ದರುಶನ ಮಾಡಿಸಿಕೊಟ್ಟಿದ್ದಾರೆ.


ಈ ಪುಸ್ತಕದ ಮೊದಲನೆಯ ಪ್ರಕರಣ ಬರೆದದ್ದು ತಾ. ೧೯-೪-೧೯೪೪ನೆಯ ದಿವಸ; ಕೊನೆಯ ಪ್ರಕರಣ ಮುಗಿದದ್ದು ತಾ. ೨೪-೮-೧೯೪೭ನೆಯ ದಿವಸ. ಈ ದೀರ್ಘ ಕಾಲಾವಧಿಯಲ್ಲಿ ಈ ಚರಿತ್ರದ ನೆಪದಿಂದ ನನಗೆ ಸ್ವಾಮೀ ಮಹಾರಾಜರ ಧ್ಯಾನ ಮಾಡುವ ಸುಯೋಗವು ಸಿಕ್ಕದ್ದು ನನ್ನ

ಸುದ್ದಿವವೇ ಸರಿ. ಚರಿತ್ರೆಯನ್ನು ಬರೆಯುವಾಗ ನಾನು ತನ್ಮಯನಾಗಿ ಬರೆದಂತೆ, ಓದುವಾಗ ವಾಚಕರೂ ತನ್ಮಯರಾಗಿ ಓದಿದರೆ, ನನ್ನ ಈ ಸೇವೆಯು ಸಫಲವಾಯಿತೆಂದು ತಿಳಿಯುತ್ತೇನೆ.

ಕೊನೆಗೆ ಎಲ್ಲ ವಾಚಕರಲ್ಲಿ ಇನ್ನೊಂದು ಪ್ರಾರ್ಥನೆಯಿದೆ: ಚರಿತ್ರೆಯೆಂದರೆ ಇದ್ದ ಸಂಗತಿಗಳನ್ನು ಇದ್ದಂತೆ ಬರೆಯುವದಷ್ಟೇ. ನಾವು ಈ ಚರಿತ್ರೆ ಬರೆಯುವಾಗ ಎಷ್ಟೋ ಸಂಗತಿಗಳ ಮತ್ತು ವ್ಯಕ್ತಿಗಳ ಉಲ್ಲೇಖಮಾಡುವದು ಅಪರಿಹಾರ್ಯವಾಗಿದೆ. ಆದರೆ ನಮ್ಮ ಉದ್ದೇಶವು ಯಾರ ಮನಸ್ಸಿಗೂ ದುಃಖಕೊಡುವದಿಲ್ಲೆಂಬುದನ್ನು ಪ್ರಾಮಾಣಿಕವಾಗಿ ಹೇಳಬಲ್ಲೆವು. ಆದುದರಿಂದ ನಾವಿಲ್ಲಿ ಬರೆದ ಸಂಗತಿಗಳ ಬಗ್ಗೆ ದಯವಾಡಿ ಯಾರೂ ತಪ್ಪು ತಿಳಿದುಕೊಳ್ಳಬಾರದೆಂದು ಪುನಃ ಪುನಃ ಬೇಡಿಕೊಳ್ಳುತ್ತೇವೆ. ಚರಿತ್ರೆಯನ್ನು ಸಂಪೂರ್ಣಗೊಳಿಸಲಿಕ್ಕೆ ಆವಶ್ಯಕವೆಂದೆನಿಸಿವ ಸಂಗತಿಗಳನ್ನು ಬರೆದಿರುವ ಪ್ರಸಂಗಗಳಲ್ಲಿ ಯಾರಿಗಾದರೂ ಮನಸಿಗೆ ಹತ್ತುವಂತೆ ನಮ್ಮ ಬರವಣಿಗೆ ಯಾಗಿರುವದೆಂದೆನಿಸಿದರೆ, ಅವರು ನಮ್ಮ ಉದ್ದೇಶವು ಹಾಗೆ ಇಲ್ಲೆಂಬದನ್ನು ನೆನಿಸಿ, ನಮ್ಮನ್ನು ಸಹೃದಯತೆಯಿಂದ ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇವೆ.

ಕೃಷ್ಣಾಷ್ಟಮೀ
ಶ್ರಾವಣ ವದ್ಯ ಅಷ್ಟಮೀ
ಶಾ. ಶ. ೧೮೬೯

ಶ್ರೀಗಳವರ ಕೃಪಾಭಿಲಾಷಿ,
ಕುಲಕರಣಿ ನಾರಾಯಣರಾಯ
ಕೆ. ಈ. ಬೋರ್ಡ್ಸ ಆರ್ಟ್ಸ ಕಾಲೇಜ ಧಾರವಾಡ



ಶ್ರೀಮತ್ಪರಮಹಂಸ ಸದ್ಗುರು ಕೈವಲ್ಯಾಶ್ರಮ ಸ್ವಾಮಿ ಮಹಾರಾಜರು

ಜನ್ಮ ಶಕೆ ೧೭೭೮, ಪೌಷ್ಯ ವದ್ಯ ೧೩ ಸಮಾಧಿ ಶಕೆ ೧೮೫೩, ಆಶ್ವೀಜ ಶು. ೯

ಅಮ್ಮಾ , ಪ್ರೇಮಮಯಿಯಾದ

ಕೈವಲ್ಯ ಮಾತೆಯೇ!

ನಿನ್ನ ಅಜ್ಞಾನಾದ ಬಾಲಕನು ಅರ್ಪಿಸುವ
ಈ ಪುಸ್ತಕವನ್ನು ಸ್ವೀಕರಿಸು, ತಾಯಿ.
ನಿನ್ನ ಕಾರುಣ್ಯವು ಅಪಾರವಾದುದು.
ಅದಕ್ಕೆ ಪ್ರತಿಯಾಗಿ ಯಾರು ಏನು ಕೊಟ್ಟರೂ
ಕಡಿಮೆಯೇ. ಬಾಲಕರ ಕಡೆಯಿಂದ ತಾಯಿಯು
ಪ್ರತಿಫಲವನ್ನೂ ಅಪೇಕ್ಷಿಸುವದಿಲ್ಲ.
ಸರ್ವಶಕ್ತಿಗಳ ತವರುಮನೆಯಾದ ನಿನ್ನ
ಸೇವೆ ಮಾಡುವ ಸಾಮರ್ಥ್ಯವು ನನ್ನಲ್ಲಿಲ್ಲ.
ಅಮ್ಮಾ ಎಂದು ಒದರಿ, ತಾಯಿಯ
ಬರುವಿಕೆಯನ್ನು ಅಪೇಕ್ಷಿಸುವದು ಬಾಲಕರ
ಸ್ವಭಾವ. ಅಲ್ಲವೇ, ತಾಯಿ ?
ಮುಂದಿನದೆಲ್ಲ ನಿನ್ನನ್ನು ಕೂಡಿದೆ.
ನಿನ್ನ ಮನಸಿಗೆ ಹೇಗೆ ಬರುವದೋ
ಹಾಗೆ ಮಾಡು. ಹೆಚ್ಚು ಹೇಳಲಾರೆ.

ಅನುಕ್ರಮಣಿಕೆ

ಪೂರ್ವಾರ್ಧ

೧	ಜನ್ಮಪೂರ್ವಕಾಲೀನ ಭಾರತ	೧— ೬
೨	ಜನ್ಮಕಾಲೀನ ಪರಿಸ್ಥಿತಿ	೮— ೧೫
೩	ಜನನ ಮತ್ತು ಬಾಲ್ಯ	೧೬— ೨೩
೪	ಉಪನಯನ	೨೪ — ೩೦
೫	ಮುರಗೋಡ	೩೧— ೩೬
೬	ವ್ಯಾಥಮಿಕ ಶಿಕ್ಷಣವೂ ಭಾಗವತ ಸಪ್ತಾಹವೂ	೩೭ — ೪೪
೭	ಕೆಂಗೇರಿಯ ದರುಶನ	೪೫— ೫೦
೮	ಚಿದಂಬರ ಸಂಪ್ರದಾಯದ ದೀಕ್ಷೆ	೫೧— ೫೮
೯	ಸಗುಣ ಸಾಕ್ಷಾತ್ಕಾರದ ಹಂಬಲ	೫೯— ೭೨
೧೦	ಸಗುಣ ಸಾಕ್ಷಾತ್ಕಾರ ಮತ್ತು ಪ್ರಸಾದ	೭೩— ೮೯
೧೧	ಅಣ್ಣಂದಿರಿಗೆ ಉಪದೇಶ ಮತ್ತು ಶ್ರೀ ಸ್ವಾಮೀಸಮರ್ಥರ ಕೃಪೆ	೯೦—೧೦೮
೧೨	ಲೋಕ ಸಂಗ್ರಹವೇ ನಸ್ಸ ಆಯುಷ್ಯದ ಮುಖ್ಯ ಕರ್ತವ್ಯವು	೧೦೧—೧೧೦
೧೩	ಲೋಕ ಸಂಗ್ರಹವೆಂದರೇನು ?	೧೧೧—೧೨೧
೧೪	ಬಂಗಾರದ ಪರೀಕ್ಷೆಯು ಬೆಂಕಿಯಲ್ಲಿಯೇ !	೧೨೨—೧೩೩
೧೫	ಬೈರಾಗಿಯ ಭವಿಷ್ಯ	೧೩೪—೧೪೨
೧೬	ಪುನರ್ಮಿಲನ	೧೪೩- ೧೫೭
೧೭	ನಮ್ಮ ಮರಣವನ್ನು ನಾವೇ ನೋಡುವ ಬಗೆ	೧೫೮—೧೭೦
೧೮	ಆದರ್ಶ ಶಿಕ್ಷಕರು	೧೭೧—೧೮೨
೧೯	ಜೀವನೊಬ್ಬ, ನಾಮ ಹಲವು	೧೮೩—೧೯೫
೨೦	ಮಹಾರಾಜರ ಗೃಹಸ್ಥಾಶ್ರಮ	೧೯೬—೨೧೬

ಉತ್ತರಾರ್ಧ

೧	ಸಂನ್ಯಾಸ ಧರ್ಮದ ಶ್ರೇಷ್ಠತೆ	೨೧೭—೨೨೬
೨	ಸಂನ್ಯಾಸದ ಪರೀಕ್ಷೆ	೨೨೭ —೨೩೭

೩	ದೀಕ್ಷೆ	೨೩೮ — ೨೪೭
೪	ಶ್ರೀ ಶಾಂತಾಶ್ರಮ ಸ್ವಾಮಿಗಳವರ ಅನುಗ್ರಹ	೨೪೮ — ೨೫೭
೫	ಸಂನ್ಯಾಸ ತಕ್ಕೊಂಡದ್ದು ಚಿದಂಬರ ಸೇವೆಗಾಗಿಯೇ	೨೫೮ — ೨೬೭
೬	ಗುರ್ಲಹೊಸೂರ	೨೬೮ — ೨೭೮
೭	ಕಾಲಪುರುಷನ ಲೀಲೆ	೨೭೯ — ೨೮೮
೮	ಜೀರ್ಣೋದ್ಧಾರ ಅಧವಾ ಸುವರ್ಣ ವೃಷ್ಟಿ	೨೮೯ — ೩೦೫
೯	ಚಿದಂಬರನ ಆಗಮೋಕ್ತ ಉತ್ಸವ	೩೦೬ — ೩೧೪
೧೦	ಮಹಾರಾಜರು ಮಾಡಿದ ಚಿದಂಬರೋತ್ಸವಗಳು	೩೧೫ ೩೩೦
೧೧	ಮಹಾರಾಜರು ಮಾಡಿದ ಚಿದಂಬರೋತ್ಸವಗಳು (ಮುಂದುವರೆದದ್ದು)	೩೩೧- ೩೫೦
೧೨	ಮಹಾರಾಜರು ಮತ್ತು ಟೇಂಬೇ ಸ್ವಾಮಿಗಳವರು	೩೫೩—೩೬೭
೧೩	ಮಹಾರಾಜರು ಮತ್ತು ಲೋಕಮಾನ್ಯ ತಿಳಕರು	೩೬೮—೩೭೭
೧೪	ರಾಜಕಾರಣವು ಅಧ್ಯಾತ್ಮಕ್ಕೆ ತಲೆಬಾಗಿತು	೩೭೮ – ೩೮೬
೧೫	ಕಾತ್ಯಾಯನ ಪರಿಷತ್ತು	೩೮೭— ೩೯೫
೧೬	ಗಲಗಲಿಯ ದತ್ತಮಂದಿರ	೩೯೬—೪೦೫
೧೭	ಶಿಕ್ಷಣ ಪದ್ಧತಿ	೪೦೬—೪೨೩
೧೮	ಮಹಾರಾಜರ ಚಾತುರ್ಮಾಸ್ಯಗಳು	೪೨೪—೪೩೦
೧೯	ಮಹಾರಾಜರ ತೀರ್ಥಯಾತ್ರೆಗಳು	೪೩೧—೪೪೩
೨೦	ಮಹಾರಾಜರ ಭಕ್ತಸೇವಕ ವರ್ಗ	೪೪೪ - ೪೬೭
೨೧	ಮಹಾರಾಜರ ಭಕ್ತಸೇವಕ ವರ್ಗ (ಮುಂದುವರೆದದ್ದು)	೪೬೮—೪೮೨
೨೨	ಮಹಾರಾಜರ ಲೀಲೆಗಳು	೪೮೩—೪೯೭
೨೩	ಮಹಾರಾಜರ ಉನ್ಮನ್ನಾವಸ್ಥೆಯ ಪ್ರಸಂಗಗಳು	೪೯೮—೫೧೮
೨೪	ಮಹಾಸಮಾಧಿ	೫೧೯—೫೩೬
೨೫	ಶ್ರೀ ಕೈವಲ್ಯಾಶ್ರಮ ಸ್ವಾಮೀ ಸಂಸ್ಥೆ	೫೩೭—೫೫೨

ಒಪ್ಪೋಲೆ

●

ಸೂಚನೆ:— ನಾವು ಎಷ್ಟೇ ಎಚ್ಚರಿಕೆಯಿಂದ ಕೆಲಸ ಮಾಡಿದರೂ ಅಚ್ಚಿನ ದೋಷಗಳು ಉಳಿದೇ ಇರುತ್ತವೆ. ಅನೇಕ ಕಡೆಗೆ ಒತ್ತಕ್ಕರದ ಮೊಳೆಗಳು ಸರಿಯಾಗಿ ಮೂಡಿರುವದಿಲ್ಲ. ಇದರ ಹೊರತಾಗಿಯೂ ಹಲ ಕೆಲವು ಚಿಲ್ಲರೆ ತಪ್ಪುಗಳು ಆಗಿರುತ್ತವೆ. ಆದರೆ ಅವೆಲ್ಲ ವಾಚಕರಿಗೆ ಸಹಜವಾಗಿ ಗೊತ್ತಾಗುವಂತಿವೆ. ಅಂತಹ ತಪ್ಪುಗಳನ್ನು ನಾವಿಲ್ಲಿ ಕಾಣಿಸಿರುವದಿಲ್ಲ. ನಮಗೆ ಕಂಡುಬಂದ ಕೆಲ ಮಹತ್ತ್ವದ ತಪ್ಪುಗಳನ್ನು ಮಾತ್ರ ನಾವಿಲ್ಲಿ ಕಾಣಿಸಿದ್ದೇವೆ. ವಾಚಕರು ದಯವಿಟ್ಟು ತಪ್ಪುಗಳನ್ನು ತಿದ್ದಿಕೊಂಡು ಓದ ಬೇಕೆಂದು ಬೇಡಿಕೊಳ್ಳುತ್ತೇವೆ.

ಪುಟ	ಸಾಲು	ತಪ್ಪು	ಒಪ್ಪು
೩೨	೫	೧೬೮೬	೧೬೮೦
೩೨	೨೩	ಹೊಂದಿದ	ಕೊಂಡದ
೩೩	೨೬	೧೭೩೮	೧೭೩೭
೪೨	೩	ಸಂಸ್ಕೃತಿ	ಸಂಸ್ಕೃತಿ
೪೨	೮	ಆ ಶಕ್ತಿಯು	ಆಸಕ್ತಿಯು
೪೨	೨೫	ಮಹಾಜನರ	ಮಹಾರಾಜರ
೪೫	೧೦	ಸ್ಥಾಣುರ್ಯಂ ಮಾರ ಹಾರಃ	ನ್ಥಾಣುರಯಂ ಭಾರಹಾರಃ
೫೨	೯	ಸರ್ವಶಸ್ತ್ರ	ಸರ್ವಶಾಸ್ತ್ರ
೬೪	೨೫	೧೬೭೧	೧೬೭೧
೭೦	೭	ನಾಮಾನ್ಯ	ನಾಮ
೯೦	೧೯	ಕಷ್ಟ.	ಕಷ್ಟ. ಪರಮಾರ್ಧದ ಕಡೆಗೆ ಹೊರಳಿದರೂ ಕಷ್ಟ.

ಪುಟ	ಸಾಲು	ತಪ್ಪು	ಒಪ್ಪು
೯೪	೧೦	ಸಾಧ್ಯವಾಗಿಲ್ಲ	ಸುಲಭವಾಗಿಲ್ಲ
೧೦೪	೨೦	ಮರ್ಯಾದಿತವೂ ಆದ	ಮರ್ಯಾದಿತವಾದ
೧೭೦	೨೬	ಅಪೂರ್ಣವಾದ	ಅಪೂರ್ವವಾದ
೨೪೨	೨೫	ನಿರ್ಮೂಲ	ನಿರ್ಮಲ
೨೪೮	ಈ ಪ್ರಕರಣದಲ್ಲಿ ಎಲ್ಲ ಕಡೆಗೆ ''ಶಾಂತಾಶ್ರಾಮ'' ಎಂದು ಇದ್ದಲ್ಲಿ ''ಶಾಂತಾಶ್ರಮ'' ಎಂದು ಓದಬೇಕು.		
೨೬೭	೧೪	೧೮೫೨	೧೮೧೨
೩೦೨	೧೬-೨೦	ಕೆಲವು ಶಬ್ದಗಳು ಎರಡೆರಡು ಸಾರೆ ಬಿದ್ದಿವೆ. ತಿದ್ದಿಕೊಳ್ಳಬೇಕು.	
೩೧೭	೮	ಬಾಬಾಭಟ್ಟ	ಬಾಬಾದೀಕ್ಷಿತ
೪೧೩	೧೪	ಭಜಿಸುವದಕ್ಕೆ	ಭಜಿಸುವ
೪೪೩	೧೧	ಗೊತ್ತಾ ದೀತು	ಗೊತ್ತಾ ಯಿತು
೪೯೯	೨೬	ಸಾವನ್ನು	ಸಾಮ್ಯವನ್ನು
೫೧೧	೨೩	ಬಚ್ಚಲಲ್ಲಿಯೂ	ಬಚ್ಚಲದಲ್ಲಿಯೂ
೫೩೬	೨	ಶಿರೋ ಛೇದನ	ಶಿರೋಭೇದನ

॥ ಓಂ ॥

ಶಿವಚಿದಂಬರ

ಗುರುರ್ಬ್ರಹ್ಮಾ ಗುರುರ್ವಿಷ್ಣುರ್ಗುರುರ್ದೇವೋ ಮಹೇಶ್ವರಃ ।
ಗುರುಃ ಸಾಕ್ಷಾತ್ ಪರಂಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥

ಶ್ರೀ ಸದ್ಗುರು

ಕೈವಲ್ಯಾಶ್ರಮ (ಶ್ರೀಬೋಳೆ) ಸ್ವಾಮೀ ಮಹಾರಾಜರವರ ಚರಿತ್ರೆಯು

ಪೂರ್ವಾರ್ಧ

೧ ಜನ್ಮಪೂರ್ವಕಾಲೀನ ಭಾರತ

ಭಾರತವು ಎಂದಿನಿಂದಲೂ ಅಧ್ಯಾತ್ಮದ ನಾಡೆಂದು ಪ್ರಸಿದ್ಧವಾಗಿದೆ. ಇತಿಹಾಸದ ಕಡೆಗೆ ದೃಷ್ಟಿ ಹೊರಳಿಸಿದರೆ ಈ ಮಾತು ಸತ್ಯವೆಂದು ತೋರುತ್ತದೆ. ಉಳಿದೆಲ್ಲ ದೇಶಗಳೊಳಗೆ ಮೊದಲಿದ್ದ ಧರ್ಮಗಳೂ, ಸಂಸ್ಕೃತಿಗಳೂ ಸಂಪೂರ್ಣವಾಗಿ ಅಳಿಸಿ ಹೋಗಿ, ಬೇರೆ ಧರ್ಮಗಳೂ ಸಂಸ್ಕೃತಿಗಳೂ ಕಾಣಿಸಿಕೊಂಡಿವೆ. ಆದರೆ ನಮ್ಮ ಭಾರತದ ಮಾತು ಮಾತ್ರ ಹಾಗಲ್ಲ. ಇಲ್ಲಿ ಮೊದಲಿನಿಂದಲೂ ಆರ್ಯರು ಬಂದಾಗಿನಿಂದ ರೂಢವಾದ ಧರ್ಮ ಮತ್ತು ಸಂಸ್ಕೃತಿಗಳು ಇಂದಿಗೂ ಅಖಂಡವಾಗಿ ಜೀವಂತವಾಗಿಯೇ ಉಳಿದಿರುತ್ತವೆ ಇದಕ್ಕೆ ಕಾರಣವೇನೆಂದರೆ ಭಾರತದ ಅಧ್ಯಾತ್ಮಿಕ ಜ್ಯೋತಿಯೇ ಅಹುದೆಂದು ನಿರ್ಭಯದಿಂದ ಹೇಳಬಹುದು.

ಸನಾತನ ವೈದಿಕ ಧರ್ಮಕ್ಕೆ ಮೇಲಿಂದ ಮೇಲೆ ಪ್ರಚಂಡವಾದ ಆಘಾತಗಳು ಆಗಿಲ್ಲವೆಂತಲ್ಲ. ಒಂದಕ್ಕಿಂತ ಒಂದು ಬಲಿಷ್ಠವಾದ ಅನೇಕ ಆಘಾತಗಳು ಆಗುತ್ತಲೇ ಬಂದಿವೆ. ಆದರೆ ಅದು ತನ್ನ ಸ್ವಾಭಾವಿಕವಾದ ಸತ್ತ್ವದಿಂದ ಅವುಗಳನ್ನೆಲ್ಲ ಸಹಿಸಿಕೊಂಡು ಇನ್ನೂ ತಲೆಯೆತ್ತಿ ನಿಂತಿರುವ ದೆಂದು ಇತಿಹಾಸವು ಹೇಳುತ್ತದೆ. ವೈದಿಕ ಧರ್ಮದ ವಿರುದ್ಧವಾಗಿ ದೊಡ್ಡ ಪ್ರಮಾಣದಲ್ಲಿ ಬಂಡೆಬ್ಬಿಸಿದವರಲ್ಲಿ ಗೌತಮಬುದ್ಧನು ಮೊದಲನೆಯವನು. ಅವನು ಸ್ಥಾಪಿಸಿದ ಬೌದ್ಧಧರ್ಮವು ಹಿಂದುಸ್ಥಾನದಲ್ಲಿ ಸುಮಾರು ಒಂದು ಸಾವಿರ ವರುಷಗಳ ವರೆಗೆ ಒಳ್ಳೇ ಪ್ರಬಲವಾಗಿತ್ತು. ಆದರೆ ಮುಂದೆ ಇಲ್ಲಿಯೇ ಹುಟ್ಟಿದ ಆ ಧರ್ಮವು ಇದೇ ದೇಶದಲ್ಲಿ ನಾಮಶೇಷವಾಗಿ ಹೋದುದು ಎಂತಹ ಆಶ್ಚರ್ಯಕರವಾದ ಮಾತು! ಇದಕ್ಕೆ ವೈದಿಕ ಧರ್ಮದ ಶ್ರೇಷ್ಠತೆಯೇ ಕಾರಣವಲ್ಲದ ಬೇರೆ ಏನು? ಹಜರತ್ತ ಮಹಮ್ಮದ ಪೈಗಂಬರರಿಂದ ಸುಸಂಘಟಿತರಾದ ಮುಸಲ್ಮಾನರು ಸ್ವಲ್ಪಾವಧಿಯಲ್ಲಿಯೇ ಏಶಿಯಾ, ಆಫ್ರಿಕಾ ಮತ್ತು ಯುರೋಪ ಖಂಡಗಳಲ್ಲಿ ತಮ್ಮ ವರ್ಚಸ್ವವನ್ನು ಬೀರಿದರು. ಆದರೆ ಅವರ ಆಟವು ಐದಾರುನೂರು ವರುಷಗಳ ವರೆಗೆ ಈ ದೇಶದ ಮೇಲೆ ನಡೆಯಲಿಲ್ಲ. ಮುಂದೆ ಪೃಥ್ವೀರಾಜ ಮತ್ತು ಜಯಚಂದ ಇವರೊಳಗಿನ ವೈಮನಸ್ಸಿನ ಲಾಭವು ಮುಸಲ್ಮಾನರಿಗೆ ಸಿಕ್ಕಿತು. ಮತ್ತು ೧೧—೧೩ನೆಯ ಶತಮಾನದಿಂದ ಆರೇಳು ನೂರು ವರುಷಗಳ ವರೆಗೆ ಈ ದೇಶದ ರಾಜಕೀಯ ಸೂತ್ರಗಳೆಲ್ಲ ಮುಸಲ್ಮಾನರ ಕೈಯಲ್ಲಿಯೇ ಉಳಿದವು. ಧರ್ಮಾಂಧನಾದ ಔರಂಗಜೇಬನಂತಹ ಪ್ರಬಲರಾದ ರಾಜರನೇಕರು ಹಿಂದುಸ್ಥಾನವನ್ನೆಲ್ಲ ಸ್ಲೇಂಚ್ಛಮಯವಾಗಿ ಮಾಡಿಬಿಡಬೇಕೆಂದು ಆಮರಣಾಂತ ಪ್ರಯತ್ನಮಾಡಿದರೂ, ಹಿಂದೂಧರ್ಮವು ಮಾತ್ರ ಅದಕ್ಕೆ ತಲೆಬಾಗಿಸದೆ ಅಜೇಯವಾಗಿಯೇ ನಿಂತುಕೊಂಡಿತು. ವಿಜ್ಞಾನ ಶಾಸ್ತ್ರದಲ್ಲಿಯೂ ರಾಜಕೀಯ ವ್ಯವಹಾರ ಜಾತುರ್ಯದಲ್ಲಿಯೂ ಒಳ್ಳೇ ಪಟುಗಳೆಂದು ಹೆಸರುಗೊಂಡ ಪಾಶ್ಚಾತ್ಯರು ಈ ದೇಶವನ್ನು ಕಳೆದ ೧೫೦ ವರುಷಗಳಿಂದ ಆಳುತ್ತಿದ್ದರೂ, ಹಿಂದೂ ಧರ್ಮಕ್ಕೆ ಮಾತ್ರ ಅವರಿಂದ ಏನೂ ಮಾಡುವದಾಗಲ್ಲ. ಇದೆಲ್ಲಕ್ಕೆ ಕಾರಣವು ವೈದಿಕ ಧರ್ಮದ ತಳಹದಿಯು ಸ್ವಾಭಾವಿಕವಾಗಿ ಭದ್ರವಾಗಿರುವದೇ ಅಹುದಲ್ಲದೆ ಬೇರೆಯಲ್ಲವೆಂದು ನಿಃಸಂದೇಹವಾಗಿ ಹೇಳಬಹುದು. ಈ ಧರ್ಮವು

ಭಗವಂತನ ಅಧಿಷ್ಠಾನದ ಮೇಲೆ ನಿಂತಿರುವುದರಿಂದ ಅವಕ್ಕೆ ಯಾವ ಪ್ರಾಪಂಚಿಕ ಆಘಾತಗಳೂ ಕ್ಷೇಪವನ್ನುಂಟು ಮಾಡಲಾರವು.

ರಾಜಕೀಯ ಸೂತ್ರಗಳು ಬೌದ್ಧರ ಕಡೆಗಿರಲಿ, ಮುಸಲ್ಮಾನರ ಕಡೆಗೆ ಹೋಗಲಿ, ಅಥವಾ ಆಂಗ್ಲರ ಸ್ವಾಧೀನವಾಗಲಿ, ದೇಶದ ಧಾರ್ಮಿಕ ಮತ್ತು ಸಾಂಸ್ಕೃತಿಕ ಜೀವನದ ಸೂತ್ರಗಳು ಮಾತ್ರ ಇಲ್ಲಿಯ ಧರ್ಮಾಭಿಮಾನಿಗಳ ಕಡೆಗೇ ಉಳಿದವೆಂದು ಕಂತುಬರುತ್ತದೆ. ಬೌದ್ಧಯುಗವನ್ನು ಕೊನೆ ಗಾಣಿಸುವ ಕೆಲಸದಲ್ಲಿ ಶ್ರೀ ಕುಮಾರಿಲಭಟ್ಟರೂ, ಶ್ರೀ ಮಚ್ಛಂಕರಭಗವತ್ಪಾದರೂ ಮುಂದಾಳುಗಳಾದರೆ, ಮುಸಲ್ಮಾನರ ರಾಜಕೀಯ ಸತ್ತೆಯ ಕಾಲದಲ್ಲಿ ಈ ಕೆಲಸವನ್ನು ಜೀರೆ ಜೀರೆ ಪ್ರಾಂತಗಳಲ್ಲಿ ಜೀರೆ ಜೀರೆ ಸತ್ಪುರುಷರು ಮಾಡಿದರೆಂದು ಗೊತ್ತಾಗುತ್ತದೆ. ಮುಸಲ್ಮಾನರ ಕಾಲದಲ್ಲಿ ಉತ್ತರ ಹಿಂದು ಸ್ಥಾನದೊಳಗೆ ''ಬೈರಾಗೀ'' ಸಾಂಪ್ರದಾಯದ ಆದ್ಯಪ್ರವರ್ತಕರೆಂದೆನಿಸಿ ಕೊಂಡ ರಾಮಾನಂದರು, ಅವರ ಶಿಷ್ಯರಾದ ಕಬೀರದಾಸ ಮೊದಲಾದವರು, ತುಳಸೀದಾಸ, ಸೂರದಾಸ, ಮೀರಾಬಾಯಿ, ಮಹಾಪ್ರಭು ಗೌರಾಂಗದೇವ ಮೊದಲಾದವರೂ ಹಿಂದೂಧರ್ಮಕ್ಕೆ ಸಂಜೀವನಿ ಮಾತ್ರೆಯನ್ನು ಕೊಟ್ಟರು. ಪಂಜಾಬದಲ್ಲಿ ಶ್ರೀಗುರುನಾನಕದೇವರು ''ಶೀಖ'' ಪಂಥವನ್ನು ಸ್ಥಾಪಿಸಿದರು. ಗುಜರಾಥದಲ್ಲಿ ನರಸೀ ಮೆಂಹತಾರಂಥವರು ಹುಟ್ಟಿ ಧರ್ಮಜಾಗೃತಿಯ ಕೆಲಸವನ್ನು ಕೈಕೊಂಡರು ಮಹಾರಾಷ್ಟ್ರದಲ್ಲಿ ಜ್ಞಾನದೇವ, ನಾಮದೇವ, ಏಕನಾಥ, ತುಕಾರಾಮ, ರಾಮದಾಸ ಮೊದಲಾದ ಸಾಧು ಸತ್ಪುರುಷರು ದೇಶಭಾಷೆಯೊಳಗಿನ ತಮ್ಮ ಅಮೋಘವಾದ ಗ್ರಂಥಗಳಿಂದಲೂ ಉಪದೇಶಗಳಿಂದಲೂ ಹಿಂದೂಧರ್ಮದ ಧ್ವಜವನ್ನು ಏರಿಸಿದರು. ಶ್ರೀ ರಾಮದಾಸರ ಉಪದೇಶದಿಂದ ಹುರುಪುಗೊಂಡ ಮರಾಠರಂತೂ ಒಂದು ಕಾಲಕ್ಕೆ ಅಖಂಡ ಭಾರತದಲ್ಲಿ ''ಹಿಂದೂಪದ-ಪಾದಶಾಹಿ'' ಯನ್ನು ಕಟ್ಟಬೇಕೆಂಬ ಮಹತ್ತಾಕಾಂಕ್ಷೆಯಿಂದ ಕೂಡಿದವರಾಗಿ ಆ ಕೆಲಸದಲ್ಲಿ ಶಿಖರವನ್ನು ಕೂಡ ಸಮೀಪಿಸಿದರು. ''ಕರ್ನಾಟಕ ಸಿಂಹಾಸನಸ್ಥಾಪನಾಚಾರ್ಯ'' ರೆಂದು ಪೆಸರು ಗೊಂಡ ಶ್ರೀ ವಿದ್ಯಾರಣ್ಯರ ಹೆಸರು ಕರ್ನಾಟಕದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿರುವುದು. ಕರ್ನಾಟಕದೊಳಗಿನ ಶಿವಶರಣರೂ ದಾಸಕೂಟ

ದವರೂ ಧರ್ಮಜಾಗೃತಿ ಮತ್ತು ಹಿಂದೂಧರ್ಮರಕ್ಷಣೆಯ ಕೆಲಸವನ್ನು ಎಡೆ ಬಿಡದೆ ಸಾಗಿಸಿದ್ದನ್ನು ಯಾವ ಕರ್ನಾಟಕಸ್ಥನೂ ಮರೆಯಲಾರನು

ಕ್ರೈಸ್ತಮತಾನುಯಾಯಿಗಳಾದ ಆಂಗ್ಲರು ಈ ದೇಶದ ರಾಜಕೀಯ-ರಂಗದಲ್ಲಿ ಪ್ರಬಲವಾದಾಗಿನಿಂದಲೂ ಅನೇಕ ಸಾಧು ಸತ್ಪುರುಷರು ನಮ್ಮ ಧರ್ಮದ ನಂದಾದೀಪವನ್ನು ಕಾಯುತ್ತಲೇ ಬಂದಿದ್ದಾರೆ. ಹತ್ತೊಂಬತ್ತನೆಯ ಶತಮಾನದ ಮೊದಲಿನ ಅರ್ಧದಲ್ಲಿ ಇಲ್ಲಿ ಇಂಗ್ಲಿಷ ರಾಜ್ಯವು ದೃಢವಾಗಿ ಬೇರುಬಿಟ್ಟಿತೆಂದು ಹೇಳಬಹುದು. ಸನ್ ೧೮೫೫ ನೆಯ ಇಸ್ವಿಯಲ್ಲಿ ರಾಜ್ಯ ಕರ್ತರಾದ ಇಂಗ್ಲೀಷರು ಈ ದೇಶದಲ್ಲಿ ಯಾವ ತರದ ಶಿಕ್ಷಣವನ್ನು ರೂಢಿಗೊಳಿಸಬೇಕೆಂಬ ಬಗ್ಗೆ ವಿಚಾರಕ್ಕೊಳಗಾದರು. ಹಿಂದೂ ಜನರಿಗೆ ಪಾಶ್ಚಾತ್ಯ ದೇಶದ ಹೊಸ ಮಾದರಿಯ ಶಿಕ್ಷಣ ಕೊಡಬೇಕೋ, ಅಥವಾ ಪೌರ್ವಾತ್ಯದ ಹಳೆಯ ತರದ ಶಿಕ್ಷಣ ಕ್ರಮವನ್ನೇ ಮುಂದೆ ಸಾಗಿಸಬೇಕೋ, ಎಂಬುದು ಅತಿ ಮಹತ್ವದ ಮಾತಾಗಿ ಕುಳಿತಿತು. ಕೊನೆಗೆ ರಾಜ್ಯಕರ್ತರಿಗೆ ರಾಜ್ಯ ದಾಡಳಿತಕ್ಕೆ ಅನುಕೂಲವಾಗುವಂತೆ ಇಂಗ್ಲಿಷ ಶಿಕ್ಷಣವನ್ನೇ ಕೊಡಬೇಕೆಂದು ನಿರ್ಣಯವಾಗಿ, ಆ ತರದ ಶಿಕ್ಷಣ ಸಂಸ್ಥೆಗಳು ಅಸ್ತಿತ್ವದಲ್ಲಿ ಬಂದವು. ಇದರಿಂದ ಆಂಗ್ಲ ಸಂಸ್ಕೃತಿಯ ಪ್ರಭಾವವು ಸಹಜವಾಗಿಯೇ ಇಲ್ಲಿ ಬೀಡು ಬಿಡಲಿಕ್ಕೆ ಅನುಕೂಲವಾಯಿತು. ಇದರ ಜೊತೆಗೆ ಕ್ರಿಸ್ತ ಧರ್ಮೋಪದೇಶಕರು ಹಿಂದೂ ಧರ್ಮವನ್ನು ವಿಕೃತವಾಗಿ ಮಾಡಿ ತೋರಿಸಿ, ಕ್ರೈಸ್ತಧರ್ಮದ ಮಹತಿಯನ್ನು ಇಲ್ಲಿಯ ಜನರಿಗೆ ಬೋಧಿಸಹತ್ತಿದರು. ಮುಸಲ್ಮಾನ ರಾಜ್ಯಕರ್ತರಿಗೆ ಹೊಳೆಯದಿದ್ದ ಅತಿಸೂಕ್ಷ್ಮ ಉಪಾಯವನ್ನು ಚಾಣಾಕ್ಷರಾದ ಇಂಗ್ಲೀಷರು ಇಲ್ಲಿ ಕೈಕೊಂಡರು. ಶಿಕ್ಷಣವೆಂದರೆ ಮನಸ್ಸನ್ನು ವಿಶಿಷ್ಟ ರೀತಿಯಿಂದ ಸಂಸ್ಕಾರಗೊಳಿಸುವ ಮುಖ್ಯ ಸಾಧನವು. ಆಂಗ್ಲ ಶಿಕ್ಷಣದಿಂದ ಹಿಂದೀಯರಿಗೆ ತಮ್ಮ ಧರ್ಮ ಮತ್ತು ಸಂಸ್ಕೃತಿಗಳ ಬಗ್ಗೆ ಹೀನ ಭಾವವೂ, ಆಂಗ್ಲರ ಬಗ್ಗೆ ಗೌರವ ಭಾವವೂ ಉಂಟಾಗುವಂತೆ ಏರ್ಪಾಡಾಯಿತು. ಇಸ್ಲಾಮೀ ಆಘಾತಕ್ಕಿಂತಲೂ ಇದು ಹೆಚ್ಚು ಘಾತುಕವಾಗಿತ್ತು.

ಇದೇ ವೇಳೆಯಲ್ಲಿ ಪಾಶ್ಚಾತ್ಯರೊಳಗೆ ವಿಜ್ಞಾನ ಶಾಸ್ತ್ರದ ಪ್ರಗತಿಯು ಭರದಿಂದ ಆಗಹತ್ತಿತ್ತು. ಅದರ ಅತ್ಯದ್ಭುತವಾದ ಶೋಧಗಳಿಂದ ಜನರ

ಕಣ್ಣೆಲ್ಲ ಕುಕ್ಕಿ ಹೋಗಿದ್ದವು. ವಿಜ್ಞಾನದ ಪರಿಣಾಮವಾದ ''ಯಾಂತ್ರಿಕ ಯುಗ'' ದಿಂದ ಜನರ ಜೀವನವೆಲ್ಲ ಸಂಪೂರ್ಣವಾಗಿ ಪಲ್ಲಟವನ್ನು ಹೊಂದಿತ್ತು. ವಿಜ್ಞಾನದ ಕೊನೆಯ ಪರಿಣಾಮವೆಂದರೆ ಕೇವಲ ಭೌತಿಕ ವಾದವು. ಪಂಡಿತರೆಂದೆನಿಸಿಕೊಳ್ಳುವವರೆಲ್ಲ ಬರಿಯ ಭೌತಿಕ ಅಥವಾ ಜಡವಾದಿಗಳಾಗಿ ಬಿಟ್ಟಿದ್ದರು. ವಿಕಾಸವಾದಿಗಳೆಂದೆನಿಸಿಕೊಳ್ಳುವವರು ತೀರ ಸ್ಪಷ್ಟವಾಗಿಯೇ ನಾಸ್ತಿಕಮತದ ಪುರಸ್ಕಾರ ಮಾಡಹತ್ತಿದರು. ''ದೇವರ ಕಲ್ಪನೆ ಇಲ್ಲದೆ ಕೆಲಸ ಸಾಗಿಸಿರುವೆನೆಂ''ದು ಒಬ್ಬ ಪಂಡಿತನು ಹೇಳಿದರೆ, ಮತ್ತೊಬ್ಬನು ''ಇಲ್ಲಿಯ ವರೆಗೆ ದೇವರು ಮಾಡಿದ ಅಲ್ಪಸ್ವಲ್ಪ ಕೆಲಸಗಳಿಗಾಗಿ ಅವನ ಉಪಕಾರವನ್ನು ಸ್ಮರಿಸಿ, ಅವನನ್ನು ನಾವೀಗ ಜ್ಞಾನರಾಜ್ಯದ ಸರಹದ್ದಿನಾಚೆಗೆ ಹಿಮ್ಮೆಟ್ಟಿಸಿದ್ದೇವೆಂ''ದು ಬಾಯಿ ಬಿಚ್ಚಿಯೇ ಹೇಳಹತ್ತಿದನು. ಧರ್ಮದ ಸೇನಾಪತಿಯಾದ ದೇವರು ನಮಗಂಜುತ್ತ ಂಜುತ್ತ ಹಿಂದೆ ಸರಿಯಬೇಕಾಯಿತಲ್ಲದೆ, ಕೊನೆಗೆ ಅವನು ಯುದ್ಧ ಭೂಮಿಯನ್ನೇ ಬಿಟ್ಟು ಓಡಿ ಹೋದನೆಂದೂ, ನಾಮಶೇಷನಾದನೆಂದೂ, ಸತ್ತು ಹೋದನೆಂದೂ, ಎಷ್ಟೋ ಜನರು ನಿರ್ಲಜ್ಜೆಯಿಂದ ಜಂಭಕೊಚ್ಚಹತ್ತಿದರು. ಈ ತರದ ಜಡವಾದದಿಂದ ಧರ್ಮ ಮತ್ತು ನೀತಿ ಶಾಸ್ತ್ರಗಳಿಗೆ ಅರಿದಾಳ ಹತ್ತುವದೆಂಬುದು ಸ್ಪಷ್ಟವಾಗಿದೆ. ''ಜಗತ್ತು ಬಲಿಷ್ಠರಿಗಾಗಿ ಇದೆ'' ಎಂಬ ತತ್ವವನ್ನು ಮುಂದೆ ಮಾಡಿ, ಸಂಸ್ಕೃತಿಯಲ್ಲಿ ಹಿಂದುಳಿದ ಜನರ ಮೇಲೆ ಪಾಶ್ಚಾತ್ಯರು ಬೇಕಾದ ರೀತಿಯಿಂದ ಅನ್ಯಾಯ ಮಾಡಹತ್ತಿದರು. ದೇವರು ತಮಗೆ ಕೊಟ್ಟ ಬುದ್ಧಿ ಶಕ್ತಿಯನ್ನೆಲ್ಲ ಅವರು ಅನ್ಯಾಯದ ಸಾಧನೆಯಲ್ಲಿಯೇ ಕಳೆಯಹತ್ತಿದರು. ಈ ತರದ ಮನೋವೃತ್ತಿಯ ಕಟುಫಲಗಳನ್ನು ನಾವಿಂದು ಪ್ರತ್ಯಕ್ಷವಾಗಿಯೇ ಉಣ್ಣುತ್ತಿರುವೆವಾದ್ದರಿಂದ ಆ ಬಗ್ಗೆ ಹೆಚ್ಚಿಗೆ ಬರೆಯಬೇಕಾಗುದಿಲ್ಲ. ಆದರೆ ಈ ತರದ ವಿಚಾರಗಳಿಂದ ಪ್ರೇರಿತರಾದ ಆಂಗ್ಲ ಜನರು, ನಮ್ಮನ್ನು ಅದೇ ಅಡ್ಡದಾರಿಗೆ ಹಚ್ಚಬೇಕೆಂದು ಯತ್ನ ಮಾಡಹತ್ತಿದ್ದರೆ ಆಶ್ಚರ್ಯವಿಲ್ಲ. ಅದಕ್ಕೆ ಬಲಿಬಿದ್ದ ನಮ್ಮಲ್ಲಿಯ ಕೆಲ ಪಂಡಿತಂಮನ್ಯರು ಜನರಿಗೆ ನಾಸ್ತಿಕವಾದವನ್ನೇ ಉಸದೇಶ ಮಾಡಹತ್ತಿ, ನಮ್ಮ ದೇಶದೊಳಗಿನ ಧರ್ಮ ಸಂಸ್ಕೃತಿಗಳನ್ನೆಲ್ಲ ಹಾಳುಮಾಡಿ ಕೇವಲ ಪಾಶ್ಚಾತ್ಯರ ಅನುಕರಣವನ್ನೇ ದೇಶದಲ್ಲಿ ಹಬ್ಬಿಸಬೇಕೆಂದು ಟೊಂಕಕಟ್ಟಿ ನಿಂತರು.

ಆದರೆ ಪರಮೇಶ್ವರನ ಇಚ್ಛೆಯು ಬೇರೆಯೆ ಆಗಿದೆ. ''ಪಾಶ್ಚಾತ್ಯ ಶಕ್ತಿಗೆ ಬಲಿಬಿದ್ದ ಮಾನವರಿಗೆ ಶಾಂತಿಮಂತ್ರವನ್ನು ಉಪದೇಶಿಸುವ ಏಕ ಮಾತ್ರ ಅಧಿಕಾರವೂ ಯೋಗ್ಯತೆಯೂ ಭಾರತಕ್ಕೆ ಇರಬೇಕೆಂಬುದು ಅನನ ಇಚ್ಛೆಯಾಗಿರುವಂತೆ ತೋರುತ್ತದೆ'' ಉಳಿದೆಲ್ಲ ದೇಶಗಳಿಗಿಂತ ಇಲ್ಲಿ ಪರಮಾತ್ಮ ವಿಷಯಕವಾದ ಭಕ್ತಿಯ ಪ್ರಚಾರವು ಹೆಚ್ಚಾಗಿರುವದೇ ಇದಕ್ಕೆ ಕಾರಣವು. ದೇಶದಲ್ಲಿ ಸ್ವಾರ್ಥಿಗಳ ಸುಳಿದಾಟವು ಹೆಚ್ಚಾಗಿ, ಅಧರ್ಮ ಪ್ರವೃತ್ತಿಯು ಜೆಳೆಯಹತ್ತಿದಾಗೆಲ್ಲ, ಧರ್ಮದ ಕಟ್ಟನ್ನು ಬಲವಡಿಸಿ ಸಜ್ಜನರನ್ನು ರಕ್ಷಿಸುವ ಸಲುವಾಗಿ ಭಗವಂತನು ಕಾಲಕಾಲಕ್ಕೆ ಅವತಾರ ಮಾಡುವನೆಂದು ಗೀತೆಯು ಹೇಳುವದರ ಸತ್ಯತೆಯು ನಮ್ಮ ದೇಶದ ಇತಿಹಾಸವನ್ನು ನೋಡುವವರಿಗೆ ಸಹಜವಾಗಿ ಹೊಳೆಯುವಂತಿದೆ ಈ ಮಾತಿಗನುಗುಣವಾಗಿ ಹಿಂದೂ ಧರ್ಮದ ಕೊನೆಯ ಪ್ರಬಲ ಆಶ್ರಯವಾದ ವೇಶವಾಯಿಯ ಅಂಚ್ಯ ಭಾಗದಲ್ಲಿ ಶ್ರೀ ಶಂಕರನು ಚಿದಂಬರ ದೀಕ್ಷಿತರೆಂಬ ಹೆಸರಿನಿಂದ ಅವತಾರ ಮಾಡಿದನು. ದೀಕ್ಷಿತರು ದೇಹವಿಟ್ಟ ಎರಡೇ ವರುಷಗಳೊಳಗಾಗಿ ಜಗದ್ವಿಖ್ಯಾತರಾದ ಶ್ರೀಮನ್ಮಾಣಿಕ ಪ್ರಭುಗಳು ಅವತರಿಸಿ, ಹಿಂದೂ ಮುಸಲ್ಮಾನರಿಬ್ಬರಿಗೂ ಸಮಾನವಾಗಿಯೇ ಗುರುಗಳಾಗಿ ಶೋಭಿಸಿದರು. ಕ್ರಿ. ಶ. ೧೫೫೯ನೆಯ ಶತಮಾನದಲ್ಲಿಯೇ ಆವಿರ್ಭವಿಸಿ ನೃಸಿಂಹವಾಡಿ, ಗಾಣಗಾಪೂರ ಮೊದಲಾದ ಸ್ಥಾನಗಳಲ್ಲಿ ''ಶ್ರೀಮನ್ನೃಸಿಂಹ ಸರಸ್ವತೀ ಸ್ವಾಮಿಗಳೆಂ''ಬ ಹೆಸರಿನಿಂದ ಅದ್ಭುತವಾದ ಲೀಲೆಗಳನ್ನು ತೋರಿಸಿ, ಶ್ರೀಶೈಲದ ಕರ್ದಳೀವನದಲ್ಲಿ ಅದೃಶ್ಯನಾದ ಶ್ರೀಸದ್ಗುರು ದತ್ತಾತ್ರೇಯನು ಅಕ್ಕಲಕೋಟೆಯಲ್ಲಿ ಮತ್ತೆ ಪ್ರಕಟವಾಗಿ ''ಅಕ್ಕಲಕೋಟೆಯ ಸ್ವಾಮಿಗಳೆಂ''ಬ ಹೆಸರಿನಿಂದ ಜಗದುದ್ಧಾರ ಮಾಡಿದನು. ದಕ್ಷಿಣ ಹಿಂದುಸ್ಥಾನದೊಳಗೆ ಇಂತಹ ಮಹಾತ್ಮರಾದರೆ ಉತ್ತರ ಹಿಂದುಸ್ಥಾನದೊಳಗೆ ಬಂಗಾಲದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರಂತಹ ಅದ್ವೀತೀಯ ವ್ಯಕ್ತಿಗಳು ಹುಟ್ಟಿ. ಈ ಯುಗಕ್ಕೆ ತಕ್ಕದಾದ ''ಸರ್ವಧರ್ಮ ಸಮನ್ವಯವ'' ದಿವ್ಯಮಂತ್ರವನ್ನು ಉಪದೇಶ ಮಾಡಿದರು. ಇಷ್ಟೆಲ್ಲರ ಲೀಲೆಗಳನ್ನೋದಿದರೆ ಎಂತಹ ಬುದ್ಧಿವಂತನ ಮನಸ್ಸೂ ದಂಗುಬಡಿದು ಹೋಗುತ್ತದೆ. ಬೇಕಾದಂತಹ ನಾಸ್ತಿಕರನ್ನು ಕ್ಷಣಮಾತ್ರದಲ್ಲಿ ಆಸ್ತಿಕತೆಗೆ ಹೊರಳಿಸುವ ಸಾಮರ್ಥ್ಯವು ಇವರಲ್ಲಿತ್ತು. ಪಾಶ್ಚಾತ್ಯರ ವಿಜ್ಞಾನಶಾಸ್ತ್ರ, ಜಡವಾದ

ಮುಂತಾವುಗಳೆಲ್ಲ ಇವರ ಮುಂದೆ ಬರಲಿಕ್ಕೆ ಕೂಡ ನಾಚುತ್ತಿದ್ದವು. ಇವರಿಲ್ಲರಿಂದ ಆಗ ಧರ್ಮಕ್ಕೊದಗಿದ ಗ್ಲಾನಿಯು ಕಳೆದು ಹೋಗಿ ಹಿಂದೂ ಧರ್ಮವು ತನ್ನ ಸ್ವಾಭಾವಿಕವಾದ ಓಜಸ್ಸಿನಿಂದ ಮತ್ತೆ ಮೆರೆಯಹತ್ತಿತು. ಶ್ರೀರಾಮಕೃಷ್ಣರ ಶಿಷ್ಯ ಶಿಖಾಮಣಿಯಾದ ಶ್ರೀ ವಿವೇಕಾನಂದರು ಮಾಡಿದ ಕಾರ್ಯವಂತೂ ಜಗತ್ಪ್ರಸಿದ್ಧವಾಗಿದೆ. ಚಿಕ್ಕಾಗೊ ಪಟ್ಟಣದಲ್ಲಿ ನಡೆದ ವಿಶ್ವಧರ್ಮ ಸಮ್ಮೇಲನದಲ್ಲಿ ಇವರು ಹಿಂದೂ ಧರ್ಮದ ಶ್ರೇಷ್ಠತೆ ಮತ್ತು ವೈಶಾಲ್ಯಗಳನ್ನು ಎಲ್ಲರೂ ಒಪ್ಪುವಂತೆ ಸಿದ್ಧ ಮಾಡಿ ತೋರಿಸಿದರಲ್ಲದೆ, ಇಡೀ ಅಮೇರಿಕೆಯ ತುಂಬ ಹಿಂದೂ ಮತಗಳನ್ನು ಸ್ಥಾಪಿಸಿ ಹಿಂದೂ ಧರ್ಮದ ಡಂಗುರವನ್ನು ಹೊಡೆದು, ಕ್ರಿಸ್ತರಿಗೇ ಹಿಂದೂ ಧರ್ಮದ ದೀಕ್ಷೆಯನ್ನು ಕೊಟ್ಟು ಬಿಟ್ಟರು !

ಹೀಗೆ ಬ್ರಿಟಿಶ ಆಳಿಕೆಯಿಂದಲೂ, ವಿಜ್ಞಾನ ಶಾಸ್ತ್ರದಿಂದಲೂ ಸನಾತನ ವೈದಿಕ ಧರ್ಮಕ್ಕೆ ಒದಗಿದ ಬಹುದೊಡ್ಡ ಗಂಡಾಂತರದಿಂದ ಅದನ್ನು ಪಾರು ಮಾಡುವದಕ್ಕಾಗಿ ಈ ಮಹಾ ಪುರುಷರೆಲ್ಲ ಆವಿರ್ಭವಿಸಿದರೆಂದು ಎದೆತಟ್ಟಿ ಹೇಳಬಹುದು. ಇವರಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಿಂದ ಅಧರ್ಮವನ್ನೂ ನಾಸ್ತಿಕತೆಯನ್ನೂ ಹಿಮ್ಮೆಟ್ಟಿಸಿ ಧರ್ಮೋದ್ಧಾರದ ಕೆಲಸವನ್ನು ಬಲು ಚೆನ್ನಾಗಿ ಮಾಡಿದರು. ಅವರು ಕೈಕೊಂಡ ವಿಶಾಲವಾದ ಮಹತ್ಕಾರ್ಯವನ್ನೇ ಅಲ್ಲಲ್ಲಿ ಮುಂದುವರಿಸಲಿಕ್ಕೆಂದು ಬೇರೆ ಬೇರೆ ಸಜ್ಜರು ಹರೂ ಬೇರೆ ಬೇರೆ ಕಡೆಗೆ ಹುಟ್ಟಿಬಂದರು. ಈ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಶ್ರೀ ಗೊಂದವಲೇಕರ ಮಹಾರಾಜರೂ, ಶ್ರೀ ಟೇಂಬೆ ಮಹಾರಾಜರೂ, ಪ್ರಕಟವಾದಂತೆ ಕರ್ನಾಟಕ ಪ್ರಾಂತದಲ್ಲಿ ಶ್ರೀ ಸದ್ಗುರು ಶ್ರೀ ಕೈವಲ್ಯಾಶ್ರಮ ಸ್ವಾಮೀ ಮಹಾರಾಜರೂ, ಬೆಳಧಡಿಯ ಶ್ರೀ ಬ್ರಹ್ಮಾನಂದ ಸ್ವಾಮೀ ಮಹಾರಾಜರೂ, ಮತ್ತು ಆಗಡಿಯ ಶ್ರೀ ಶೇಷಾಚಲ ಸ್ವಾಮೀ ಮಹಾರಾಜರೂ ಪ್ರಕಟವಾದರೆಂದು ಹೇಳಬಹುದು. ಇವರೊಳಗೆ ಶ್ರೀ ಸದ್ಗುರು ಕೈವಲ್ಯಾಶ್ರಮ ಸ್ವಾಮೀ ಮಹಾರಾಜ ಅಥವಾ ಶ್ರೀ ಜೋರೇ ಸ್ವಾಮಿಗಳೆಂದು ಪ್ರಸಿದ್ಧರಾದವರೇ ನಮ್ಮ ಚರಿತ್ರನಾಯಕರು. ಅವರ ಜನ್ಮಕಾಲದ ಪರಿಸ್ಥಿತಿಯನ್ನು ಮುಂದಿನ ಪ್ರಕರಣದಲ್ಲಿ ನೋಡುವ.

———

೨ ಜನ್ಮಕಾಲೀನ ಪರಿಸ್ಥಿತಿ

ಮಹಾ ಪುರುಷರು ಸಾಮಾನ್ಯ ಕಾಲದಲ್ಲಿ ಉದಯವಾಗುವದು ಬಹಳ ವಿರಳ. ಸಾಮಾನ್ಯ ಕಾಲದಲ್ಲಿ ಹುಟ್ಟಿದರೆ ಅವರಿಗೆ ತಮ್ಮ ಮಹಾತ್ಮ್ಯವನ್ನು ಹೊರಪಡಿಸಲಿಕ್ಕೆ ಅವಕಾಶವು ಇಲ್ಲದಂತಾಗುತ್ತದೆ. ಎಂತೆಯೇ ಮಹಾತ್ಮರು ಪ್ರಕಟವಾಗುವ ಪೂರ್ವದಲ್ಲಿ ಆಯಾ ದೇಶ ಕಾಲಗಳ ಪರಿಸ್ಥಿತಿಯು ಅವರಿಗೆ ಅನುಕೂಲವಾಗಿರಬೇಕಾಗುವದೆಂದು ಪಂಡಿತನಾದ ಕಾರ್ಲಾಯೀಲನು ಸತ್ಯವಾಗಿಯೇ ಅಭಿಪ್ರಾಯ ಪಟ್ಟಿದ್ದಾನೆ. ಎಂದರೆ ಮಹಾತ್ಮರು ಯಾವ ದೇಶದಲ್ಲಿ ಮತ್ತು ಯಾವ ಕಾಲದಲ್ಲಿ ಹುಟ್ಟುವರೋ, ಆ ದೇಶ ಕಾಲಗಳ ಪರಿಸ್ಥಿತಿಯು ಒಂದು ವಿಶಿಷ್ಟ ಮಟ್ಟಕ್ಕೆ ಬಂದಿರಬೇಕು. ಮತ್ತು ಅವರು ಹುಟ್ಟಿದಿದ್ದರೆ, ಆ ಕಾಲದ ಮಾನವ ವರ್ಗಕ್ಕೆ ಸುಧಾರಣೆಯ ಬೇರೆ ಮಾರ್ಗವೇ ಉಳಿದಿರಬಾರದು. ಕೆಲಬಹುವಾ, ಆ ದೇಶದ, ಆ ಕಾಲದ ವಿಶಿಷ್ಟ ಮಾನವ ವರ್ಗವು ಅವರ ದಾರಿಯನ್ನೇ ಕಾಯುತ್ತ ಕುಳಿತಿರುವದೆಂದು ಹೇಳಿದರೂ ಅಡ್ಡಿಯಿಲ್ಲ. ಹೀಗಾಗುವದು ಈಶ್ವರೀ ನಿಯಮದ ತಿರುಳಾಗಿರುವದೆಂದು ತಿಳಿಯಬಹುದು. ದೇಶ ಕಾಲಗಳ ಸ್ಥಿತಿಗತಿಗಳು ತೀರ ಕೆಟ್ಟುಹೋದಾಗ ಅವುಗಳನ್ನು ಸರಿಪಡಿಸಲಿಕ್ಕೆಂದು ದೊಡ್ಡವರು ಹುಟ್ಟಿಬರಲೇಬೇಕಾಗುವದು. ಆದುದರಿಂದ ಆಯಾ ಮಹಾತ್ಮರು ಆವಿರ್ಭವಿಸಿದ ಸೂಕ್ಷ್ಮ ಪರಿಸ್ಥಿತಿಯನ್ನು ವಿಚಾರ ಮಾಡಿದರೆ ಅವರ ಜೀವನದ ರಹಸ್ಯವು ಹೆಚ್ಚು ಸ್ಫುಟವಾಗಿ ಗೊತ್ತಾಗುವದು.

ಲೋಕ ಕಲ್ಯಾಣಕ್ಕಾಗಿಯೇ ಹುಟ್ಟಿರುವ ಸತ್ಪುರುಷರಲ್ಲಿ ಕೂಡ ಎರಡು ವರ್ಗಗಳನ್ನು ಮಾಡಬಹುದು : (೧) ಜನ್ಮಸಿದ್ಧರಾದವರೊಂದು; ಮತ್ತು (೨) ಸಾಮಾನ್ಯಮನುಷ್ಯರಾಗಿಯೇ ಹುಟ್ಟಿ ತಮ್ಮ ಸ್ವಂತ ಪ್ರಯತ್ನದಿಂದಲೇ ಸಿದ್ಧಿಯನ್ನು ಪಡೆದವರದು ಇನ್ನೊಂದು. ಜನ್ಮಸಿದ್ಧರು ಬಹುಶಃ

ಭಗವಂತನ ಅವತಾರವೆಂದು ತಿಳಿಯಲ್ಪಡುವರು. ಅವರಿಗೆ ಸಿದ್ಧಿ ಪ್ರಾಪ್ತಿಗಾಗಿ ಯಾವುದೇ ತರದ ಸಾಧನಮಾಡಬೇಕಾಗಿರುವದಿಲ್ಲ. ಜನ್ಮಪಾರಭ್ಯದಿಂದಲೇ ಅವರ ಲೋಕೋತ್ತರ ಮಹಾತ್ಮ್ಯವು ಪ್ರಕಟವಾಗುತ್ತ ನಡೆಯುತ್ತದೆ. ಶ್ರೀಚಿದಂಬರ ದೀಕ್ಷಿತರು ಹುಟ್ಟುತ್ತಲೇ, ಅವರ ಒಂದು ಕಿವಿಯಲ್ಲಿ ಬಿಲ್ವದಲವೂ ಇನ್ನೊಂದರಲ್ಲಿ ತುಲಸೀ ಪತ್ರವೂ ಕಂಡುಬಂದವಂತೆ! ಗಾಣಗಾಪುರದ ಶ್ರೀಮನ್ನೃಸಿಂಹ ಸರಸ್ವತೀ ಸ್ವಾಮಿಗಳವರು ಜನ್ಮವಾದೊಡನೆ ಪ್ರಣವೋಚ್ಚಾರ ಮಾಡಹತ್ತಿದರು. ಶ್ರೀಮನ್ಮಾಣಿಕ ಪ್ರಭುಗಳ ಲೀಲೆಯೂ ಇದೇ ರೀತಿಯಾಗಿ ಅದ್ಭುತವಾಗಿದೆ. ಇವರೆಲ್ಲರೂ ಜನ್ಮಸಿದ್ಧರೆಂದು ನಿರ್ವಿವಾದವಾಗಿ ಒಪ್ಪಬೇಕಾಗುವದು. ಆದರೆ ಇಂಥವರ ಚರಿತ್ರವು ಸಾಮಾನ್ಯ ಸಾಧಕರಿಗೆ ವಿಶೇಷ ಉಪಯುಕ್ತವಾಗುವದಿಲ್ಲ. ಅವರ ಚರಿತ್ರೆಯಲ್ಲಿ ಅನುಕರಣೀಯ ಭಾಗವು ಕಡಿಮೆಯಾಗಿರುತ್ತದೆ. ಅವರು ಕೇವಲ ತಮ್ಮ ಅಗಾಧವಾದ ಸಾಮರ್ಥ್ಯದಿಂದ ಲೋಕಕಲ್ಯಾಣವನ್ನು ಮಾಡುವದರಿಂದ ಅವರ ಕ್ರಿಯಾಪದ್ಧತಿಯು ಸಾಮಾನ್ಯರಿಗೆ ಅಪ್ರಾಪ್ಯವಾಗಿ ಬಿಡುವದು.

ಇನ್ನೊಂದು ವರ್ಗದ ಸತ್ಪುರುಷರು ಮಾತ್ರ ಸಾಮಾನ್ಯ ಜನರಿಗೆಲ್ಲ ಮಾರ್ಗದರ್ಶಕರಾಗಿರುವರು. ಅವರ ಹುಟ್ಟು, ಅವರ ಬಾಲಲೀಲೆ, ಅವರ ಶಿಕ್ಷಣ, ಅವರ ಜೀವನ ಕ್ರಮ ಮುಂತಾದವುಗಳೆಲ್ಲೆಲ್ಲ ಅದ್ಭುತವಾದುದೇನೂ ಇರುವದಿಲ್ಲ. ಎಲ್ಲರ ಪಾಲಿಗೂ ಬರುವಂತಹ ಸ್ಥಿತಿಗತಿಗಳೊಳಗಿಂದಲೇ ಅವರು ತಮ್ಮ ದೊಡ್ಡಸ್ತಿಕೆಯ ಮಾರ್ಗವನ್ನು ಹುಡುಕುತ್ತ ನಡೆಯುವರೆಂದು ಕಂಡು ಬರುತ್ತದೆ. ಅವರ ಬುದ್ಧಿಯ ಪರಿಣತಿಯು ಕೂಡ ಆರಂಭದಿಂದಲೇ ಇರುವದು ಕ್ವಚಿತ್ತಾಗಿ. ಅವರು ಕೂಡ ಅನೇಕ ಸಾಧನಗಳಿಂದ ಮಾನಸಿಕ ಪ್ರಗತಿಯನ್ನು ಮಾಡಿಕೊಳ್ಳುತ್ತ ಮಾಡಿಕೊಳ್ಳುತ್ತ ಕೊನೆಗೆ ಉಚ್ಚ ಆಧ್ಯಾತ್ಮಿಕ ಅವಸ್ಥೆಯನ್ನು ಪಡೆದುಕೊಂಡಿರುತ್ತಾರೆ. ಆದುದರಿಂದ ಸಾಧುಸಂತರ ಕೊನೆಯ ಪರಿಣತಾವಸ್ಥೆಯ ಇತಿಹಾಸಕ್ಕಿಂತ, ಅವರು ಪೂರ್ವವಯಸ್ಸಿನಲ್ಲಿ ಈಶ್ವರ ಪ್ರಾಪ್ತಿಗಾಗಿ ಪ್ರಚಂಡ ಪ್ರಯತ್ನವನ್ನು ಮಾಡಿ ತಮ್ಮ ಸ್ವಂತ ಉನ್ನತಿಯನ್ನು ಹೇಗೆ ಮಾಡಿಕೊಂಡರು, ಅವರಿಗೆ ತಮ್ಮ ಆಶೆ-ನಿರಾಶೆಗಳೊಡನೆ ಹೇಗೆ ಹೋರಾಡಬೇಕಾಯಿತು, ಅವರು ತಮ್ಮ ದೋಷ ಮತ್ತು ಅಡಚಣಿಗಳನ್ನು ಹೇಗೆ ಜಯಿಸಿದರು, ಎಂಬಿವೇ ಮೊದಲಾದ ಸಂಗತಿಗಳ

ಇತಿಹಾಸವೇ ಅವರ ಭಕ್ತರಿಗೆ ಮತ್ತು ಅನುಯಾಯಿಗಳಿಗೆ ಹೆಚ್ಚು ಮಾರ್ಗದರ್ಶಕವಾಗುವದೆಂಬುದರಲ್ಲಿ ಏನೂ ಸಂದೇಹವಿಲ್ಲ.

ಪ್ರತಿಯೊಬ್ಬ ಮನುಷ್ಯನ ಬುದ್ಧಿಯ ವಿಕಾಸ, ಕಲ್ಪನೆ ಅಥವಾ ವಿಚಾರಗಳು ಅವನ ವಿಚಾರಶಕ್ತಿಯ ಸಾಮರ್ಥ್ಯದ ಮೇಲೆ ಎಷ್ಟು ಅವಲಂಬಿಸಿರುವವೋ, ಅಷ್ಟೇ ಅವನ ಸುತ್ತಲಿನ ಪರಿಸ್ಥಿತಿ, ಚಿಕ್ಕಂದಿನಲ್ಲಿ ಅವನ ಮೇಲಾದ ಸಂಸ್ಕಾರಗಳು, ಮತ್ತು ಅವನು ಯಾವ ಕಾಲಮಾನದಲ್ಲಿ ತನ್ನ ಜೀವಿತ ಕಾರ್ಯವನ್ನು ಮಾಡುವನೋ ಆ ಕಾಲ, ಇವೆಲ್ಲವುಗಳ ಮೇಲೆ ಅವಲಂಬಿಸಿರುತ್ತವೆ. ಮತ್ತು ದೊಡ್ಡ ಮನುಷ್ಯನು ತನ್ನ ಬುದ್ಧಿಶಕ್ತಿಯ ಬಲದ ಮೇಲಿಂದ ವಿಚಾರಮಾಡಿ ತನ್ನ ಸುತ್ತಲಿನ ಪರಿಸ್ಥಿತಿ ಮತ್ತು ಕಾಲಮಾನಕ್ಕೂ ಕೂಡ ಹೊಸ ರೂಪವನ್ನು ಕೊಡಬಲ್ಲ ಶಕ್ತಿಯುಳ್ಳವನಾಗಿರುತ್ತಾನೆ; ಮತ್ತು ಹಾಗೆ ಹೊಸ ರೂಪವನ್ನೂ ಕೊಡುತ್ತಾನೆ ಹೆಚ್ಚೇನು, ಹೀಗೆ ಮಾಡುವದರಲ್ಲಿಯೇ ಅವನ ಹೆಚ್ಚಳ ಅಥವಾ ವೈಶಿಷ್ಟ್ಯವಿರುವದೆಂದು ಹೇಳಬಹುದು. ಆದರೆ ಅವನಿಗೆ ಕೂಡ ಇವುಗಳ ಮರ್ಯಾದೆಯನ್ನು ಸಂಪೂರ್ಣವಾಗಿ ಅತಿಕ್ರಮಣ ಮಾಡಲಿಕ್ಕೆ ಬರಲಾರದು. ಅವುಗಳ ವರ್ಚಸ್ಸು ಅವನ ಬುದ್ಧಿ ಮತ್ತು ಕಾರ್ಯಗಳ ಮೇಲೆ ಬಿದ್ದೇ ಬೀಳುತ್ತದೆ. ಆದುದರಿಂದ ಅವನ ಬುದ್ಧಿಯ ಮತ್ತು ಜೀವಿತ ಕಾರ್ಯದ ವಿಚಾರ ಮಾಡುವಾಗ ಈ ಪರಿಸ್ಥಿತಿ ಮೊದಲಾದವುಗಳ ವಿಚಾರ ಮಾಡುವದು. ಆವಶ್ಯಕವಿರುತ್ತದೆ.

ಈ ದೃಷ್ಟಿಯಿಂದ ನಮ್ಮ ಚರಿತ್ರನಾಯಕರಾದ ಶ್ರೀ ಸದ್ಗುರು ಕೈವಲ್ಯಾಶ್ರಮ ಸ್ವಾಮೀ ಮಹಾರಾಜರು ಹುಟ್ಟಿಬಂದ ದೇಶ ಮತ್ತು ಕಾಲಮಾನಗಳ ಪರಿಸ್ಥಿತಿಯನ್ನು ವಿಚಾರಮಾಡಿ ನೋಡುವ

ಅವರ ಜನ್ಮದಿಂದ ಪಾವನವಾದ ದೇಶವು ಮುಂಬಯಿ ಕರ್ನಾಟಕವು. ಅವರು ತಮ್ಮ ದಿವ್ಯವಾದ ಲೀಲೆಗಳಿಂದ ಅಲಂಕರಿಸಿದ ದೇಶವಾದರೂ ಇದೇ. ಮುಂಬಯಿ ಕರ್ನಾಟಕಕ್ಕೆ ಹೊಂದಿರುವ ಸಂಸ್ಥಾನ ಪ್ರದೇಶಗಳನ್ನು ಸಹ ಅವರು ತಮ್ಮ ಸಂಚಾರದಿಂದ ಪವಿತ್ರಗೊಳಿಸಿದ್ದಾರೆ. ಆದರೆ ಅವರ ಜೀವನದ ಮುಖ್ಯ ಕೆಲಸವೆಲ್ಲ ನಡೆದುದು ಕರ್ನಾಟಕದಲ್ಲಿಯೇ. ಅವರು ಚಿದಂಬರ ಸೇವೆಯ

ನೆಪದಿಂದ ಸಾವಿರಾರು ಜನರಿಗೆ ಪರಮಾತ್ಮ ಪ್ರಾಪ್ತಿಯ ಮಾರ್ಗವನ್ನು ತೋರಿಸಿ, ಅವರನ್ನು ಆ ದಾರಿಯಿಂದ ನಡೆಯುವಂತೆ ಮಾಡಿದುದು ಇಲ್ಲಿಯೇ. ನಾಸ್ತಿಕರನ್ನು ಆಸ್ತಿಕರನ್ನಾಗಿ ಮಾಡಿ, ಆಸ್ತಿಕರನ್ನು ಪರಮಾರ್ಥಸಾಧಕರನ್ನಾಗಿ ಮಾಡಿ, ಸಾಧಕರನ್ನು ಮುಮುಕ್ಷುಗಳನ್ನಾಗಿ ಮಾಡಿ, ಮುಮುಕ್ಷುಗಳನ್ನು ಮುಕ್ತರನ್ನಾಗಿ ಮಾಡಿ ತೋರಿಸಿದ ಅವರ ಲೀಲಾಸುಗ್ರಹ ನಡೆದುದು ಇಲ್ಲಿಯೇ. ಕೊನೆಗೆ, ಅವರ ಆಧ್ಯಾತ್ಮಿಕ ಉನ್ನತಿಯ ಸಾಧನವಾದ ಅವರ ಪಾರ್ಥಿವ ಶರೀರವು ಭಕ್ತರ ಉದ್ಧಾರಕ್ಕಾಗಿ ಬಿದ್ದುದು ಈ ನಾಡಿನಲ್ಲಿಯೇ. ಅವರ ಯಶೋದುಂದುಭಿಯು ಇಂದಿಗೂ ಮುಖ್ಯವಾಗಿ ಸೊಳಗುತ್ತಿರುವದು ಈ ಸೀಮೆಯಲ್ಲಿಯೇ. ಅವರ ಶಿಷ್ಯರು ಇಂದಿಗಾದರೂ ಅವರ ಸೇವೆಯ ನಿಮಿತ್ತದಿಂದ ಜನರನ್ನು ಅವರ ಪಾದಾರವಿಂದಗಳ ಕಡೆಗೆ ಎಳೆಯುತ್ತಿರುವದು ಈ ಭೂಮಿಯಲ್ಲಿಯೇ

ಇನ್ನು ಅವರು ಹುಟ್ಟಿದ ಕಾಲವು ಯಾವುದೆಂಬುದನ್ನು ನೋಡುವ. ಶ್ರೀಸ್ವಾಮಿ ಮಹಾರಾಜರು ಲೋಕೋದ್ಧಾರಕ್ಕಾಗಿ ಈ ಲೋಕದಲ್ಲಿ ಪಾರ್ಥಿವ ಶರೀರವನ್ನು ಧಾರಣಮಾಡಿ ಜನ್ಮಪಡೆದದ್ದು ಇಸ್ವಿಸನ್ ೧೮೫೭ರಲ್ಲಿ! ಕ್ರಿಸ್ತಶಕೆ ೧೮೫೭ನೆಯ ವರುಷವೆಂದರೆ ಭಾರತೀಯರು ಎಂದಿಗೂ ಮರೆಯಲಾರದ ವರ್ಷ ! ಅನೇಕ ಕಾರಣಗಳಿಂದ ಈ ವರುಷವು ಭಾರತದ ಇತಿಹಾಸದಲ್ಲಿ ಬಹು ಮಹತ್ವದ ಸ್ಥಾನವನ್ನು ಪಡೆದಿದೆ. ಹಿಂದುಸ್ಥಾನದ ತುಂಬೆಲ್ಲ ಆಂಗ್ಲ ಸತ್ತೆಯ ವಿರುದ್ಧವಾಗಿ ದೊಡ್ಡ ಪ್ರಮಾಣದ ಮೇಲೆದ್ದ ''ಬಂಡಾಯವು'' ಇದೇ ವರ್ಷದಲ್ಲಿಯೇ ಸಂಭವಿಸಿತು. ಈಸ್ಟ ಇಂಡಿಯಾ ಕಂಪನಿಯ ಕಡೆಯಿಂದ ಬ್ರಿಟಿಶ ಸಾರ್ವಭೌಮರ ಕಡೆಗೆ ಹಿಂದುಸ್ಥಾನದ ರಾಜ್ಯಸೂತ್ರಗಳು ಹೋಗಬೇಕೆಂದು ನಿರ್ಣಯವಾದುದಾದರೂ ಇದೇ ವರ್ಷ ಮುಂದೆ ರಾಜಕಾರಣದಲ್ಲಿ ಪ್ರಖ್ಯಾತಿಯನ್ನು ಪಡೆದ ಅನೇಕ ಭಾರತೀಯ ವ್ಯಕ್ತಿಗಳು ಹುಟ್ಟಿಬಂದುದು ತುಸು ಹೆಚ್ಚು ಕಡಿಮೆ ಇದೇ ಸುಮಾರಿಕ್ಕೆ. ನಮ್ಮ ಚರಿತ್ರನಾಯಕರು ಗುರುಗಳೂ ದೇವರೂ ಆದ ಶ್ರೀ. ಅಕ್ಕಲಕೋಟೆ ಸ್ವಾಮಿ ಮಹಾರಾಜರು ಲೋಕಕಲ್ಯಾಣಕ್ಕಾಗಿ ಅಕ್ಕಲಕೋಟೆಯಲ್ಲಿ ಪ್ರಕಟವಾದುದೂ ಇದೇ ವರ್ಷ.

ಹೀಗೆ ನಮ್ಮ ಚರಿತ್ರನಾಯಕರು ಹುಟ್ಟಿಬಂದ ಕಾಲವು ಬಹು ವಿಲಕ್ಷಣವಾದುದೆಂದು ಗೊತ್ತಾಗುವಂತಿದೆ. ಆ ಕಾಲಮಾನಕ್ಕೆ ಕ್ರಾಂತಿಯುಗ

ವೆಂದೂ ಹೆಸರು ಕೊಡಬಹುದು. ಆ ಕಾಲಕ್ಕೆ ಭಾರತ ವರ್ಷದಲ್ಲಿ ರಾಜಕೀಯ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಮತ್ತು ಧಾರ್ಮಿಕ ಮೊದಲಾದ ಎಲ್ಲ ವಿಷಯಗಳಲ್ಲಿಯೂ ದೊಡ್ಡ ಸಂಕ್ರಮಣವು ನಡೆದಿತ್ತು. ದೇಶದಲ್ಲಿ ಸುವ್ಯವಸ್ಥಿತವಾಗಿ ಜೀರುಬಿಟ್ಟ ಬಲಿಷ್ಠವಾದ ರಾಜಕೀಯ ಏಕಸೂತ್ರತೆಯು ಇರಲಿಲ್ಲವಾದುದರಿಂದ, ಎಲ್ಲಿ ನೋಡಿದಲ್ಲೆಲ್ಲ ಅವ್ಯವಸ್ಥೆಯೇ ಕಂಡುಬರುತ್ತಿತ್ತು. ಸುವ್ಯವಸ್ಥೆ ಮತ್ತು ಶಾಂತಿಗಳೆಂದರೆ ಏನೆಂಬುದನ್ನು ಜನರು ಮರೆತು ಬಿಟ್ಟಿದ್ದರು. ಪುಂಡರ ಪುಂಡಾಟಿಕೆಯಿಂದ ಜನರು ತ್ರಸ್ತರಾಗಿದ್ದರು. ದರೋಡೆ, ಲೂಟಿ, ಬಡೆದಾಟ-ಹೊಡೆದಾಟಗಳು ಹೇರಳವಾಗಿ ಜರುಗುತ್ತಿದ್ದವು.

ಭಾರತದ ಭಾಗವಾದ ಕರ್ನಾಟಕದ ಸ್ಥಿತಿಯಾದರೂ ಇದಕ್ಕೆ ಅಪವಾದವಾಗಿರಲಿಲ್ಲ. ರಾಜಕೀಯ ಕಾರಣಗಳಿಂದ ಕರ್ನಾಟಕವು ತುಂಡುತುಂಡಾಗಿ ಹೋಗಿತ್ತು. ಬ್ರಿಟಿಶರ ಅಮಲು ಅದೇ ಇಲ್ಲಿ ರೂಢವಾಗುವಷ್ಟರೊಳಗಿತ್ತು. ಬ್ರಿಟಿಶರ ಪೂರ್ವದಲ್ಲಿದ್ದ ಪೇಶವಾಯಿಯು ನಷ್ಟವಾಗಿ ಹೋಗಿತ್ತು. ಎರಡನೆಯ ಬಾಜೀರಾಯನು ಬ್ರಹ್ಮಾವರ್ತದಲ್ಲಿ ಕಾಲವಾಗಿದ್ದನು. ಅವನ ದತ್ತಕ ಮಗನಾದ ನಾನಾಸಾಹೇಬನು, ಬಾಜೀರಾಯನಿಗೆ ಸಲ್ಲುತ್ತಿದ್ದ ವರ್ಷಾಶನವು ಸಿಕ್ಕದಂತಾದುದರಿಂದ, ದ್ವೇಷದಿಂದ ಬಂಡಾಯದ— ಅಥವಾ ಕೆಲ ಜನರು ಅಭಿಮಾನದಿಂದ ಕರೆಯುವಂತೆ ''ಸ್ವಾತಂತ್ರ್ಯ ಯುದ್ಧ''ದ— ನಾಯಕರನ್ನು ಕೂಡಿಕೊಂಡಿದ್ದನು. ಬ್ರಿಟಿಶರ ಹೊಸ ಆಡಳಿತೆಯ ಪರಿಚಯವು ಇಲ್ಲಿಯ ಜನರಿಗೆ ಅದೇ ಆಗಹತ್ತಿತ್ತು. ಆಂಗ್ಲರು ಗೆದ್ದವರಾದುದರಿಂದ ಅವರ ಆಚಾರ ವಿಚಾರಗಳು ಜನರಿಗೆ ಮೇಲ್ಪಂಕ್ತಿಯಾಗಿ ತೋರುತ್ತಿದ್ದವು. ಅವರ ದಾದುದೆಲ್ಲ ಶ್ರೇಷ್ಠವಾದುದೆಂದೂ, ಇಲ್ಲಿಯದೆಲ್ಲ ಕನಿಷ್ಠವಾದುದೆಂದೂ ಜನರ ತಿಳಿವಳಿಕೆಯಾಗಹತ್ತಿತ್ತು.

ಈ ಸಮಯದಲ್ಲಿ ಹಿಂದೂಧರ್ಮದ ಸ್ಥಿತಿಯು ತೀರ ಶೋಚನೀಯವಾಗಿತ್ತು. ಎಲ್ಲ ಚೈತನ್ಯವೂ ನಷ್ಟವಾದವರಂತೆ ಮೃತಪ್ರಾಯವಾಗಿ ಅದು ಅತ್ಯಂತ ಕಂಗಾಲ ಸ್ಥಿತಿಯನ್ನು ಹೊಂದಿತ್ತು. ಅವರ ರಕ್ಷಕರಾಗಬೇಕಾಗಿದ್ದ ಧರ್ಮಾಧಿಕಾರಿಗಳು ದುರ್ಬಲರೂ, ಕರ್ತವ್ಯದ ಅರಿವಿಲ್ಲದವರೂ, ಕರ್ತವ್ಯ-ಚ್ಯುತರೂ ಆಗಿದ್ದರು. ಆಂಗ್ಲ ವಿದ್ಯೆಯ ಪ್ರಸಾರವಾದುದರಿಂದ, ಸುಶಿಕ್ಷಿತ

ರೆಂದೆನಿಸಿಕೊಳ್ಳುವವರು ಪಾಶ್ಚಾತ್ಯ ತತ್ವಜ್ಞಾನದ ಅನುಯಾಯಿಗಳಾಗಿ, ಅದು ಹೇಳುವಂತೆ ಪ್ರತ್ಯಕ್ಷ ಮತ್ತು ಅನುಮಾನಗಳೆರಡೇ ಪ್ರಮಾಣವೆಂದು ನಂಬಿ, ಅವುಗಳಿಗನುಗುಣವಾಗಿ ತಮ್ಮ ಕರ್ತವ್ಯಾಕರ್ತವ್ಯದ ವಿಚಾರ ಮಾಡಹತ್ತಿದ್ದರಿಂದ, ಧರ್ಮದ ವಿಷಯಕ್ಕೆ ಅವರಲ್ಲಿ ಸಂಪೂರ್ಣ ಔದಾಸೀನ್ಯ ವುಂಟಾಗಿತ್ತು. ಇಷ್ಟೇ ಅಲ್ಲ, ಪಾಶ್ಚಾತ್ಯರ ಹೊಸ ವಿಚಾರಗಳ ಸಂಬಂಧದಿಂದ ಹಿಂದೂಧರ್ಮದ ಅನನತ ಸ್ವರೂಪದಲ್ಲಿ ಕಂಡುಬಂದ ಕೆಟ್ಟರೂಢಿ ಮತ್ತು ಪದ್ಧತಿಗಳ ಬಗ್ಗೆ ಸುಶಿಕ್ಷಿತ ಜನರ ಮನಸ್ಸಿನಲ್ಲಿ ತಿರಸ್ಕಾರವುಂಟಾಗಿತ್ತು. ಅಂತೆಯೇ ಅವರು ಹಿಂದೂಧರ್ಮದಲ್ಲಿ ಪಾಶ್ಚಾತ್ಯರ ಘೋರಣೆಗೆ ಅನುಸಾರವಾಗಿ ಸುಧಾರಣೆಗಳನ್ನು ಮಾಡಬೇಕೆಂದು ಪ್ರಯತ್ನ ಮಾಡಹತ್ತಿದರು. ಬಂಗಾಲದಲ್ಲಿ ಬ್ರಹ್ಮೋ ಸಮಾಜವೂ ಮುಂಬಯಿಯಲ್ಲಿ ಪ್ರಾರ್ಥನಾ ಸಮಾಜವೂ ಇದೇ ರೀತಿಯಿಂದ ಅಸ್ತಿತ್ವದಲ್ಲಿ ಬಂದವು. ಆದರೆ ಈ ಪ್ರಯತ್ನಗಳೆಲ್ಲ ಪಾಶ್ಚಾತ್ಯ ಸುಧಾರಣೆಯ ಅಂಧಾನುಕರಣ ಮಾಡುವಂತಹವೂ, ನುತ್ತು ಪೂರ್ವಪರಂಪರೆ, ಹಿಂದೂ ತತ್ವಜ್ಞಾನ ಮತ್ತು ಹಿಂದೂ ಸಂಸ್ಕೃತಿ ಇವುಗಳಿಗೆಲ್ಲ ತಿಲಾಂಜಲಿಯನ್ನು ಕೊಡುವಂತಹವೂ ಆಗಿದ್ದವು. ಇದರಿಂದ ನೊದಲೇ ಸಾಯುವ ಸ್ಥಿತಿಯಲ್ಲಿದ್ದ ಹಿಂದೂಧರ್ಮಕ್ಕೆ ಮತ್ತೊಂದು ಪ್ರಬಲವಾದ ಆಘಾತವನ್ನು ಕೊಟ್ಟಂತಾಯಿತು. ಆ ಕಾಲದ ಅಲ್ಪಶಿಕ್ಷಿತರ ಸ್ಥಿತಿಯನ್ನಂತೂ ವರ್ಣಿಸಲಾಸಲ್ಲ. ಅವರ ಸ್ಥಿತಿಯು ಎಲ್ಲ ಬಗೆಯಿಂದಲೂ ಅಸಮಾಧಾನಕರವಾಗಿತ್ತು. ಸ್ವಲ್ಪೀ ಶಿಕ್ಷಣವನ್ನು ಹೊಂದಿ ನೌಕರಿಗೆ ಸೇರುವ ಜನರಿಗೆ ಧರ್ಮಶಿಕ್ಷಣ ಸಿಕ್ಕುವ ಅವಕಾಶ ಅಥವಾ ಸಂಧಿಯೇ ಇರಲಿಲ್ಲ. ಹಿಂದೂಧರ್ಮದ ಹೆಸರೂ ಕೂಡ ಅವರ ಕಿವಿಯ ಮೇಲೆ ಬೀಳುವ ಸಂಭವವಿರಲಿಲ್ಲ. ಒಂದು ವೇಳೆ ಬಿದ್ದರೂ, ಅದು ಪರಧರ್ಮೀಯರಾದ ಕ್ರಿಸ್ತೀ ಧರ್ಮೋಪದೇಶಕರಿಂದ ವಿಕೃತ ರೂಪವನ್ನು ಹೊಂದಿರುತ್ತಿತ್ತು. ಭಾರತವನ್ನೆಲ್ಲ ಕ್ರಿಸ್ತೀಮಯವಾಗಿ ಮಾಡಬೇಕೆಂದು ಟೊಂಕಕಟ್ಟಿ ಈ ಪಾದ್ರಿಗಳು ಎಲ್ಲ ರೀತಿಯಿಂದಲೂ ಹಿಂದೂಧರ್ಮದ ಮೇಲೆ ಹಲ್ಲೆಮಾಡಹತ್ತಿದ್ದರು. ಇನ್ನು ಅಜ್ಞ ಜನರು ತಮ್ಮ ಧರ್ಮಪರಂಪರೆಯನ್ನು ಬಿಟ್ಟಿರದಿದ್ದರೂ, ಅವರಿಗೆ ತಾತ್ತ್ವಿಕ ಮತ್ತು ವಿವೇಚಕ ಬುದ್ಧಿ ಇರದ್ದರಿಂದ ಧರ್ಮದ ನಿಜವಾದ ರಹಸ್ಯನೇ ಅವರಿಗೆ ತಿಳಯುತ್ತಿರಲಿಲ್ಲ. ಆದುದರಿಂದ ಧರ್ಮದ

ಹೆಸರಿನಿಂದ ಒಳಿಕೆಯೊಳಗಿದ್ದ ಅನೇಕ ದುಷ್ಟವಾದ ಮತ್ತು ಘಾತುಕವಾದ ರೂಢಿಗಳೂ, ಆಚಾರಗಳೂ, ತಿಳಿವಳಿಕೆಗಳೂ ಅವರಲ್ಲಿ ಬೇರೂರಿದ್ದವು. ಹಳೆಯದೆಲ್ಲ ಸರಿಯಾದುದೆಂಬ ಕಲ್ಪನೆಯಿಂದ ಅವರು ಅವುಗಳನ್ನೆಲ್ಲ ಅಂಧಶ್ರದ್ಧೆಯಿಂದ ಅನುಸರಿಸುತ್ತಿದ್ದರು. ಅವರು ಯಾವುದೇ ತರದ ಧರ್ಮ ಸುಧಾರಣೆಯನ್ನು ಒಪ್ಪುವಂತಿರಲಿಲ್ಲ. ಧರ್ಮ ಸುಧಾರಣೆಯೆಂದರೆ ಧರ್ಮಕ್ಕೇ ಅಪಾಯ ಹಚ್ಚುವದೆಂದು ಅವರ ನಂಬಿಕೆಯಾಗಿತ್ತು. ಕಾರಣ ಅವರು ಧರ್ಮದ ಹೆಸರಿನಿಂದ ತಮ್ಮೊಳಗಿನ ತೀರ ದುಷ್ಟವಾದ ಮತ್ತು ಅತಿ ಹಾನಿಕರವಾದ ಆಚಾರ ವಿಚಾರಗಳನ್ನೂ ಬಿಡಲಿಕ್ಕೆ ಸಿದ್ಧರಾಗಿರಲಿಲ್ಲ. ಹೀಗೆ ಎಲ್ಲ ಕಡೆಯಿಂದಲೂ ಸನಾತನ ವೈದಿಕ ಧರ್ಮದ ಸ್ಥಿತಿಯು ಅನುಕಂಪ್ಯವೂ ಚಿಂತಾಜನಕವೂ ಆಗಿತ್ತು. ಆಗ್ಗೆ ಅದರ ಮೇಲೆ ಬಂದ ಸಂಕಟಗಳನ್ನು ನೋಡಿದರೆ ಹಿಂದೂಧರ್ಮವು ನಾಮಶೇಷವಾಗುವದೇನೋ ಎಂಬ ಭಯವುಂಟಾಗಿತ್ತು.

ಈ ಧಾರ್ಮಿಕ ಅವನತಿಯಿಂದ ಹಿಂದೂ ರಾಷ್ಟ್ರೀಯತೆಗೂ ಗಂಡಾಂತರವುಂಟಾಗುವದು ಸಹಜವಾಗಿತ್ತು. ಯಾಕಂದರೆ ರಾಷ್ಟ್ರೀಯತೆ ಮತ್ತು ಧರ್ಮಗಳಿಗೆ ಒಳ್ಳೇ ನಿಕಟವಾದ ಸಂಬಂಧವಿದೆ. ರಾಷ್ಟ್ರೀಯ ದೃಷ್ಟಿಯಿಂದ ಧರ್ಮಕ್ಕೆ ಬಹಳ ಮಹತ್ವವಿದೆ. ಒಂದೇ ಧರ್ಮದ ಅನುಯಾಯಿಗಳಿದ್ದಲ್ಲಿ ರಾಷ್ಟ್ರದ ಐಕ್ಯವು ಸುಲಭವಾಗಿ ಸಾಧಿಸುತ್ತದೆ. ಅದರ ಆಧಾರದಿಂದ ರಾಷ್ಟ್ರವನ್ನು ಒಳ್ಳೇ ಸ್ಥಿರವಾದ ರೀತಿಯಿಂದ ಸಂಘಟಿಸಬಹುದು. ರಾಷ್ಟ್ರದ ಹೆಚ್ಚಳಕ್ಕೂ, ಘನತೆ ಮತ್ತು ಪ್ರಾಸಗಳಿಗೂ ಧರ್ಮವು ಮೂಲವಾಗಿರುವದು ಧರ್ಮದ ನಿಜವಾದ ತತ್ವಗಳ ಮೇಲೆ ನಿಂತ ರಾಷ್ಟ್ರಗಳು ಮಾತ್ರ ಶಾಂತಿಯನ್ನೂ ರಾಷ್ಟ್ರೀಯ ಸುಖವನ್ನೂ ಕಾಪಾಡಿಕೊಂಡು ಹೋಗಬಲ್ಲವು. ಮತ್ತು ಬೇರೆ ರಾಷ್ಟ್ರಗಳೊಡನೆಯೂ ಸ್ನೇಹ ಸೌಹಾರ್ದಗಳಿಂದ ಇರಬಲ್ಲವು. ಧರ್ಮದ ಆಧಾರವಿಲ್ಲದ ರಾಷ್ಟ್ರೀಯತೆಯು ನಿಜವಾದ ರಾಷ್ಟ್ರೀಯತೆಯಲ್ಲ. ಧರ್ಮರಹಿತವಾದ ದೇಶಾಭಿಮಾನವು ನಿಜವಾದ ದೇಶಾಭಿಮಾನವಾಗಲಾರದು. ಕೆಲವು ಪಾಶ್ಚಾತ್ಯ ಪಂಡಿತರು ಹೇಳುವಂತೆ, ಧರ್ಮರಹಿತವಾದ ದೇಶಾಭಿಮಾನವು ''ಮಿತಿಮೀರಿದ ಸ್ವಾರ್ಥ'' ವೆಂದು ಕರಿಸಿಕೊಳ್ಳಲಿಕ್ಕೆ ಹೆಚ್ಚು ಯೋಗ್ಯವಾಗುವದು ಒಬ್ಬೊಬ್ಬರೇ ಬೇರೆ ಬೇರೆಯಾಗಿ ತಮ್ಮ ತಮ್ಮ

ಸ್ವಾರ್ಥದ ಬೆನ್ನು ಹತ್ತುವದರಿಂದ ವಿಶೇಷ ಪ್ರಯೋಜನವಾಗಲಾರದು. ಆದುದರಿಂದ ಯಾವುದೊಂದು ದೇಶದೊಳಗಿನ ಜನರೆಲ್ಲ ಗಂಪುಕಟ್ಟಿಕೊಂಡು ತಮ್ಮೆಲ್ಲರಿಗೆ ಹಿತವಾಗುವಂತೆ ದೇಶಾಭಿಮಾನವೆಂಬ ಹೆಸರಿನಿಂದ ಸಂಘಟಿತರಾಗಿ, ದುರ್ಬಲರಾದ ಎರಡನೆಯ ದೇಶದ ಜನರ ಮೇಲೆ ಸುವ್ಯವಸ್ಥಿತವಾಗಿ ಆಕ್ರಮಣದ ಪ್ರಯತ್ನಗಳನ್ನು ಮಾಡಬಹುದು. ಈ ಪ್ರಯತ್ನಗಳ ಸಮರ್ಥನೆಗಾಗಿ ಕೆಲದುರ್ಜನರು ಕಲ್ಪಿಸಿದ ಶಬ್ದವೇ ರಾಷ್ಟ್ರೀಯತೆಯೆಂದು ಹೇಳಬಹುದು.

ರಾಷ್ಟ್ರಕ್ಕೆ ಆವಶ್ಯಕವಾದಂತೆ ವ್ಯಕ್ತಿಯ ಉನ್ನತಿಗೂ ಧರ್ಮವು ಅಗತ್ಯದ ಸಾಧನವಾಗಿದೆ. ಅದು ವ್ಯಕ್ತಿಯನ್ನು ಅನೇಕ ತರದ ಕುಮಾರ್ಗಗಳಿಂದ ಮತ್ತು ಸ್ವೈರಾಚರಣೆಯ ವೃತ್ತಿಗಳಿಂದ ಹಿಂದಿರುಗಿಸಿ, ಅವನ ಮನಸ್ಸನ್ನು ಸನ್ಮಾರ್ಗಕ್ಕೆ ಹೊರಳಿಸುವದು. ಧರ್ಮ ಪರಿಪಾಲನೆಯಿಂದ ವ್ಯಕ್ತಿಯ ಆಧ್ಯಾತ್ಮಿಕ ಹಸಿವು ಹಿಂಗಿ, ಅವನಿಗೆ ಶಾಂತಿಯೂ, ಆನಂದವೂ, ಪುಷ್ಟಿತುಷ್ಟಿಗಳೂ ಸಿಕ್ಕುವವು. ನಿಜವಾದ ಧರ್ಮ ಕಲ್ಪನೆಯ ವಿಚಾರದಿಂದ ಚ್ಯುತನಾದ ಮಾನವನು ತನ್ನ ಅವನತಿಯ ದಾರಿಯನ್ನೇ ಹಿಡಿದನೆಂದು ಹೇಳಬಹುದು

ಆದರೆ ನಮ್ಮ ಚರಿತ್ರನಾಯಕರ ಜನ್ಮಕಾಲಕ್ಕೆ ಸುಶಿಕ್ಷಿತರೆಂದೆನಿಸಿಕೊಳ್ಳುವ ಜನರಿಗೆ ಧರ್ಮದ ಈ ತರದ ಮಹತ್ವವು ತಿಳಿಯದೇ ಹೋದುದರಿಂದ, ಅವರು ಕ್ರೈಸ್ತಾನುಕರಣವೇ ಸರಿಯಾದುದೆಂದು ತಿಳಿದು, ವ್ಯರ್ಥವಾಗಿ ಮನಬಂದಂತೆ ಬಡಬಡಿಸಹತ್ತಿದರು.

ಹೀಗೆ ಹಿಂದೂಧರ್ಮದ ಮೇಲೆ ಬಂದ ಗಂಡಾಂತರವನ್ನು ತಪ್ಪಿಸಿ, ನಿಜವಾದ ಧರ್ಮ ಮತ್ತು ಅಧ್ಯಾತ್ಮಗಳ ತತ್ವಗಳನ್ನು ಕರ್ನಾಟಕದ ಜನರಲ್ಲಿ ಪ್ರಸಾರಮಾಡುವದಕ್ಕಾಗಿ ನಮ್ಮ ಚರಿತ್ರನಾಯಕರು ಹುಟ್ಟಿಬಂದರೆಂಬುದು ತೀರ ಸ್ಪಷ್ಟವಿದೆ. ಅವರ ಗುರುಗಳೂ ಧರ್ಮೋದ್ಧಾರದ ಕೆಲಸಕ್ಕಾಗಿ ಅಕ್ಕಲಕೋಟೆಯಲ್ಲಿ ಅವೇ ವರುಷ (ಇಸ್ವಿ ಸನ್ ೧೮೫೭) ಪ್ರಕಟವಾದರು. ಹೀಗೆ ಅದ್ವಿತೀಯರಾದ ಗುರುಶಿಷ್ಯರು ಹಿಂದೂಧರ್ಮದ ಮೇಲೆ ಬಂದ ಸಂಕಟವನ್ನು ಪರಿಹರಿಸಿ, ಸಜ್ಜನರಿಗೆ ಸನ್ಮಾರ್ಗವನ್ನು ತೋರಿ ಅವರ ರಕ್ಷಣೆ ಮಾಡಿ, ಧರ್ಮರಕ್ಷಣೆಯ ಕಲಸದ ಸಲುವಾಗಿ ಅನೇಕ ಬಗೆಯಿಂದ ಪ್ರಯತ್ನಮಾಡಿ ಯಶಸ್ವಿಯಾದರೆಂದು ಅವರ ಚರಿತ್ರಗಳು ಹೇಳುತ್ತವೆ.

———

೩ ಜನನ ಮತ್ತು ಬಾಲ್ಯ

ಮುಂಬಯಿ ಕರ್ನಾಟಕದ ಬೆಳಗಾಂವ ಜಿಲ್ಲೆಯೊಳಗೆ ''ಗೋಕಾಕ'' ಎಂಬದು ತಾಲೂಕಿನ ಸ್ಥಳವಾಗಿದೆ. ಇದು ಮೊದಲಿನಿಂದಲೂ ಹೆಸರಾದ ಊರು. ಇಲ್ಲಿಯ ಸುಂದರವಾದ ಕಟ್ಟಿಗೆಯ ಬಣ್ಣದ ಒಡವೆಗಳು ಇಂದಿಗೂ ಒಳ್ಳೇ ಪ್ರಸಿದ್ಧವಾಗಿವೆ. ಸದರ್ನ ಮರಾಠಾ ರೇಲ್ವೆಯು ಈ ಊರ ಸಮೀಪದಲ್ಲಿಯೇ ಹಾಯ್ದಿರುವದು. ಅದರಿಂದ, ಮೊದಲೇ ವ್ಯಾಪಾರಕ್ಕಾಗಿ ಪ್ರಸಿದ್ಧವಾದ ಈ ಊರು ಇನ್ನೂ ಹೆಚ್ಚಿಚ್ಚು ವ್ಯಾಪಾರಕ್ಕೆ ತವರೂರಾಗಿ ಬಿಟ್ಟಿದೆ. ಗೋಕಾಕ ರೋಡ ಸ್ಟೇಶನ್ನು ಗೋಕಾವಿಯಿಂದ ೮ ಮೈಲು ದೂರು ಇರುವದು. ಘಟಪ್ರಭೆಯ ಹೆಸರಾದ ತಡಸಲು ಸಮೀಪದಲ್ಲಿಯೇ ಇದೆ. ಈ ಧಬಧಬೆಯನ್ನು ನೋಡಲಿಕ್ಕೆ ಪರಪ್ರಾಂತದ ಜನರೂ ಕೂಡ ದೂರುದೂರಿಂದ ಬರುತ್ತಾರೆ. ತಡಸಲಿನ ಲಾಭ ಪಡೆದು ಅದರಿಂದ ಹೊರಡುವ ವಿದ್ಯುತ್ತಿನ ಸಹಾಯದಿಂದ ಒಂದು ಅರಿವೆಯ ಗಿರಣಿಯು ಕೆಲಸಮಾಡುತ್ತಿದೆ. ಆ ಗಿರಣಿಯಿಂದ ಸಾವಿರಾರು ಜನರು ಹೊಟ್ಟಿ ಹೊರಕೊಳ್ಳುತ್ತಾರೆ. ಇವೆಲ್ಲ ಕಾರಣಗಳಿಂದ ಗೋಕಾಕದ ಮಹತ್ತ್ವ ಬಹಳವಾಗಿ ಬೆಳೆದಿದೆಯೆಂದು ಹೇಳಬಹುದು.

ಇಂದಿಗೆ ಸುಮಾರು ನೂರು ವರುಷಗಳ ಪೂರ್ವದಲ್ಲಿ ಗೋಕಾಕದೊಳಗೆ ''ಜೋಶಿ''ಯವರ ಮನೆತನವು ಒಳ್ಳೇ ಹೆಸರಾಗಿತ್ತು. ಗೋಕಾಕದಲ್ಲಿ ಇಂದಿಗೂ ಬ್ರಾಹ್ಮಣರ ವಸತಿಯು ಚನ್ನಾಗಿದೆ. ಆಗ್ಗೆ ಈಗಿನಕಿಂತಲೂ ಬ್ರಾಹ್ಮಣರು ಹೆಚ್ಚಾಗಿ ವಾಸಿಸುತ್ತಿದ್ದರು. ಜೋಶಿ ಮನೆತನದವರು ತಮ್ಮ ಪವಿತ್ರವಾದ ಜೀವನದಿಂದಲೂ, ಧರ್ಮಾಚರಣೆಯಿಂದಲೂ, ಸತ್ಯ ಮತ್ತು ತಪ್ಪೋನಿಷ್ಠೆಗಳಿಂದಲೂ ಅಲ್ಲಿಯ ಬ್ರಾಹ್ಮಣರಿಗೆಲ್ಲ ಆದರ್ಶರಾಗಿದ್ದರು. ಈ ಮನೆಯವರನ್ನು ಎಲ್ಲರೂ ಆದರದಿಂದ ಕಾಣುತ್ತಿದ್ದರು. ಇವರ ಮಾತನ್ನು ಕೇಳವವರು ಆ ಊರಲ್ಲಿಯೇ ಇರಲಿಲ್ಲವೆಂದು ಹೇಳಿದರೂ ಅಡ್ಡಿಯಿಲ್ಲ.

ಸಂಸಾರತಾಪತ್ರಯಗಳಿಂದ ತ್ರಸ್ತರಾದ ಸುತ್ತಮುತ್ತಲಿನ ಜನರೆಲ್ಲ ಸಮಾಧಾನಕ್ಕಾಗಿ ಇವರ ಮನೆಗೆ ಧಾವಿಸುತ್ತಿದ್ದರು. ಭಗವಂತನಲ್ಲಿ ಅಚಲವಾದ ಪ್ರೀತಿ, ಅವನ ನಾಮಸ್ಮರಣ, ಆರಾಧನೆ, ಪೂಜೆ ಮೊದಲಾದವುಗಳು ಅಖಂಡವಾಗಿ ನಡೆಯುವದರಿಂದ, ಅಲ್ಲಿಗೆ ಬಂದವರಿಗೆ ಆ ಪಾವನಕರವಾದ ವಾತಾವರಣವು ಅಮೃತೋಪಮವಾಗಿ ಪರಿಣಮಿಸುತ್ತಿತ್ತು.

ಓಂಕಾರಭಟ್ಟ ಜೋಶಿಯವರು ಆಶ್ವಲಾಯನ ಶಾಖೆಯ ಋಗ್ವೇದೀ ಬ್ರಾಹ್ಮಣರು. ಅವರು ಸ್ವತಃ ವೈದಿಕ ವಿದ್ಯೆಯಲ್ಲಿ ನಿಪುಣರಾಗಿದ್ದರಲ್ಲದೆ, ಎಂತಹ ಕಾಲಬಂದರೂ ಧರ್ಮವನ್ನು ಬಿಡಲಿಕ್ಕೆಲ್ಲವೆಂಬ ಹಟದಿಂದ ನಡೆಯುವವರಾಗಿದ್ದರು. ಅವರ ನಿರಭಿಮಾನವೃತ್ತಿ, ಸರಲಜೀವನ, ದಂಭರಾಹಿತ್ಯ, ಪ್ರಾಣಿಮಾತ್ರರಿಗೆಲ್ಲ ತೋರಿಸುತ್ತಿರುವ ಅಹಿಂಸೆ, ಶಾಂತಿ, ಕ್ಷಮೆ, ಸಮಾಧಾನ, ತೀವ್ರವಾದ ವೈರಾಗ್ಯ, ಪವಿತ್ರವಾದ ಆಚರಣೆ, ಅಪೂರ್ವವಾದ ವಾಸನಾತ್ಯಾಗ, ಕಠೋರವಾದ ಸತ್ಯನಿಷ್ಠೆ ಮೊದಲಾದ ಗುಣಗಳಿಂದ ಅವರು ತಮ್ಮ ವಂಶಕ್ಕೆ ಅಲಂಕಾರಪ್ರಾಯವಾಗಿದ್ದರು. ನಮ್ಮ ಚರಿತ್ರನಾಯಕರಂಥವರು ಹುಟ್ಟಿಬರಬೇಕಾದರೆ ಅವರ ಪೂರ್ವಜರು ಎಂತಹ ಗುಣಗಳುಳ್ಳವರಿರಬೇಕೆಂಬುದನ್ನು ವಾಚಕರೇ ಊಹಿಸಬೇಕು. ಇದೆಲ್ಲಕ್ಕೂ ಶಿಖರಪ್ರಾಯವಾಗಿ ಶ್ರೀ ಓಂಕಾರಭಟ್ಟರಲ್ಲಿ ಆಸ್ತಿಕ್ಯ ಬುದ್ಧಿಯು ಮನೆ ಮಾಡಿಕೊಂಡಿತ್ತು. ದೇವಬ್ರಾಹ್ಮಣ ಮತ್ತು ಶಾಸ್ತ್ರಗಳಲ್ಲಿ ಅವರದು ದೃಢವಾದ ವಿಶ್ವಾಸ. ಎಲ್ಲವನ್ನೂ ಮಾಡಿಸುವವನು ದೇವರು, ನಾನು ಅವನ ಕೈಯೊಳಗಿನ ಗೊಂಬೆ ಮಾತ್ರ ಎಂಬುದು ಅವರ ಭಾವನೆ. "ಅಹಂ ಯಂತ್ರಂ ಭವಾನ್ ಯಂತ್ರೀ" ಎಂದರೆ "ನಾನು ಯಂತ್ರವು. ಅದರ ಜಾಲಕನು ನೀನೇ" ಎಂದು ತಿಳಿದು ಅವರು ಎಲ್ಲ ಭಾರವನ್ನೂ ಈಶ್ವರನ ಮೇಲೆ ಹಾಕಿ ಸಂಸಾರ ಮಾಡುತ್ತಿದ್ದರು.

ಓಂಕಾರಭಟ್ಟರ ಮಕ್ಕಳೇ ಬಾಳಕೃಷ್ಣಭಟ್ಟರು. ಅವರು ವೈದಿಕ ವಿದ್ಯೆಯಲ್ಲಿ ಘನವಾದ ವಿದ್ವಾಂಸರಾಗಿದ್ದರು. ಘನ, ಜಟೆ, ಮತ್ತು ಕ್ರಮ ಮೊದಲಾದ ಎಲ್ಲ ರೀತಿಯಿಂದಲೂ ಅವರು ವೇದಾಧ್ಯಯನವನ್ನು ಸಂಪೂರ್ಣವಾಗಿ ಅಭ್ಯಾಸಮಾಡಿ ಮುಗಿಸಿದ್ದರು. ಎಂತೆಯೇ ಅವರು ದಶಗ್ರಂಥಿಗಳೆಂದು ಹೆಸರು ಪಡೆದಿದ್ದರು. ಆದರೆ ಇಷ್ಟೆಲ್ಲ ಅಭ್ಯಾಸ ಮಾಡಿದ್ದರೂ,

ಅವರು ''ವೇದಾಭ್ಯಾಸಜಡ''ರಾಗಿದ್ದಿಲ್ಲ. ಲೌಕಿಕ ವಿದ್ಯೆಯಲ್ಲಾದರೂ ಅವರು ಹಿಂದೆ ಬಿದ್ದಿದ್ದಿಲ್ಲ. ಚಿತ್ರಕಲೆಯಲ್ಲಂತೂ ಅವರು ಮೇಲ್ತರಗತಿಯಲ್ಲಿ ಎಣಿಸಲ್ಪಡುತ್ತಿದ್ದರು. ಸಂಸಾರವನ್ನು ಸುಸೂತ್ರವಾಗಿ ನಡೆಸಿಕೊಂಡು ಪರಮಾರ್ಥಸಾಧನೆಯಲ್ಲಿ ತತ್ಪರರಾದವರು. ಪರಮಾತ್ಮ ಪ್ರಾಪ್ತಿಯೇ ಮಾನವ ಜನ್ಮದ ಇತಿಕರ್ತವ್ಯವೆಂದೂ, ಆ ಧ್ಯೇಯವು ಸಾಧ್ಯವಾಗುವಂತೆಯೇ ಸಂಸಾರ ಮಾಡಬೇಕೆಂದೂ ಅವರು ಜನ್ಮಾಗಿ ಮನಗಂಡಿದ್ದರು. ಆದುದರಿಂದ ಅವರ ನೇತೃತ್ವದಲ್ಲಿ ಅವರ ಕುಟುಂಬವು ಭಕ್ತಿ-ಮುಕ್ತಿಗಳೆರಡನ್ನೂ ಸಂಪಾದಿಸಿಕೊಂಡಿತೆಂದು ಎದೆತಟ್ಟಿ ಹೇಳಬಹುದು.

ಅನ್ನಪೂರ್ಣಾಬಾಯಿಯವರು ಬಾಳಕೃಷ್ಣ ಭಟ್ಟರಿಗೆ ಎಲ್ಲ ಬಗೆಯಿಂದಲೂ ಅನುರೂಪವಾದ ಪತ್ನಿಯರಾಗಿದ್ದರು. ಈಗಿನ ಹೆಂಗಸರಂತೆ ಅನ್ನಪೂರ್ಣಾಬಾಯಿಯವರು ಪಾಶ್ಚಿಮಾತ್ಯ ಮಾದರಿಯ ಶಾಲೆಗಳಲ್ಲಿ ಕಲಿತವರಲ್ಲ. ಅವರಿಗೆ ಓದುಬರಹ ಸಹ ಬರುತ್ತಿರಲಿಲ್ಲ. ಆದರೆ ಆಗಿನ ಹಿಂದೂ ಕುಟುಂಬಗಳಲ್ಲಿ ಸಹಜವಾಗಿ ಸಿಕ್ಕುತ್ತಿರುವ ಶಿಸುಸಂಗೋಪನ, ಗೃಹವೈದ್ಯ, ಮನೆತನ ನಡೆಸಿಕೊಂಡು ಹೋಗುವ ಚಾಣಾಕ್ಷತನ ಮೊದಲಾದ ಸದ್ಗುಣಗಳೆಲ್ಲ ಅನ್ನಪೂರ್ಣಾಬಾಯಿಯವರಲ್ಲಿ ಜೆಕ್ಕಿಂದಿನಲ್ಲಿಯೇ ನೆಲೆಗೊಂಡಿದ್ದವು. ಈಶ್ವರನಲ್ಲಿ ಭಕ್ತಿ, ಪಾತಿವ್ರತ್ಯ, ಅತಿಥಿ ಅಭ್ಯಾಗತರಿಗೆ ಆದರಾತಿಥ್ಯ ಮಾಡುವದು ಇವೇ ಮೊದಲಾದ ಗುಣಗಳಿಗಂತೂ ಅವರು ತವರುಮನೆಯಾಗಿದ್ದರು. ಬಾಳಕೃಷ್ಣ ಭಟ್ಟರು ಸಾತ್ವಿಕರಾದುದರಿಂದ ವಿಶೇಷವಾಗಿ ವೇದಪಠಣ-ಶ್ರವಣ, ದೇವತಾರಾಧನೆಗಳಲ್ಲಿಯೇ ತಮ್ಮ ಕಾಲವನ್ನು ಕಳೆಯುತ್ತಿದ್ದರು. ಆದುದರಿಂದ ಸಂಸಾರದ-ಆಗುಹೋಗುಗಳನ್ನೆಲ್ಲ ಧೈರ್ಯದಿಂದಲೂ ಜಾಣತನದಿಂದಲೂ ನಡೆಸಿಕೊಂಡು ಹೋಗುವ ಭಾರವು ಅನ್ನಪೂರ್ಣಾಬಾಯಿಯವರ ಮೇಲೆಯೇ ಇತ್ತು. ಅವರೂ ಆ ಕೆಲಸಕ್ಕೆ ಹಿಂಜರಿಯಲಿಲ್ಲ. ಅವರು ಸಭ್ಯರೂ, ಸುಶೀಲರೂ, ಪತಿಸೇವಾತತ್ಪರರೂ ಆಗಿದ್ದರು. ಅತಿಥಿ ಅಭ್ಯಾಗತರಿಗೆ ಕಾಲಕಾಲಕ್ಕೆ ಯೋಗ್ಯಸತ್ಕಾರ ಮಾಡಿ ಅನ್ನದಾನಾದಿಗಳನ್ನು ಮಾಡುವದರಿಂದ, ಅವರ 'ಅನ್ನಪೂರ್ಣಾಬಾಯಿ' ಎಂಬ ನಾಮವು ಸಾರ್ಥವಾಗಿತ್ತು. ಹೀಗೆ ಅವರು ತಮ್ಮ ಪತ್ನೀಧರ್ಮವನ್ನೂ ಗೃಹಿಣೀಧರ್ಮವನ್ನೂ ಪೂರೈಸುವ

ದಲ್ಲದೆ, ಪರಮಾತ್ಮನಿಗೆ ಅನನ್ಯಗತಿಯಿಂದ ಶರಣುಹೋಗಿ, ಅವರ ಅಖಂಡ ಚಿಂತನೆಯಲ್ಲಿಯೇ ಕಾಲಕಳೆದು ತಮ್ಮ ಆಯುಷ್ಯವನ್ನೂ ಉಚ್ಚತರಗತಿಯ ದನ್ನಾಗಿ ಮಾಡಿಬಿಟ್ಟಿದ್ದರು.

ಆದರೆ ಅವರ ಮನಸ್ಸಿನಲ್ಲಿ ಒಂದು ವಿಚಾರವು ಮಾತ್ರ ಪುನಃ ಪುನಃ ಸುಳಿದಾಡುತ್ತಿತ್ತು. ಎಲ್ಲರಂತೆ ತಾನೂ ಸಾಮಾನ್ಯ ಸ್ತ್ರೀಯಾಗಿಯೇ ಸಾಯಬಾರದೆಂದೂ, ತನ್ನ ಹೊಟ್ಟೆಯಿಂದ ಲೋಕೋದ್ಧಾರಕನಾದ ಮಗನು ಹುಟ್ಟಬೇಕೆಂದೂ ಅವರ ಹೆಬ್ಬಯಕೆ. ಅದಕ್ಕಾಗಿ ಅವರು ಪರಮಾತ್ಮನಿಗೆ ಹಗಲಿರುಳೂ ಮೊರೆಯಿಡುತ್ತಿದ್ದರು. ಇಂತಹ ಸಾಧ್ವೀಮಣಿಯ ಮೊರೆಯನ್ನು ಕೇಳದಿರುವದು ಪರಮಾತ್ಮನಿಗಾದರೂ ಸಾಧ್ಯವೇ? ಒಂದು ದಿನ ಇಳಿಹೊತ್ತಿನ ಸಮಯದಲ್ಲಿ ಒಬ್ಬ ಅತ್ಯಂತ ತೇಜಸ್ವಿಯಾದ ಬ್ರಾಹ್ಮಣಶ್ರೇಷ್ಠರು ಬಾಳಕೃಷ್ಣಭಟ್ಟರ ಮನೆಗೆ ಆಕಸ್ಮಾತ್ತಾಗಿ ದಯಮಾಲಿಸಿದರು. ಅವರ ಭವ್ಯವಾದ ಆಕಾರವೂ, ದಿವ್ಯವಾದ ಕಾಂತಿಯೂ, ಮೊಗದ ಮೇಲೆ ಉಕ್ಕಿ ಬರುತ್ತಿರುವ ಅವರ ಪ್ರಖರವಾದ ತೇಜಸ್ಸೂ ಅನ್ನಪೂರ್ಣಾಬಾಯಿಯವರಲ್ಲಿ ಸಂಪೂರ್ಣವಾಗಿ ಭಯಭಕ್ತಿ ವಿನಯಾದಿಗಳನ್ನು ಹುಟ್ಟಿಸಿದವು. ಬಾಳಕೃಷ್ಣಭಟ್ಟರು ಮನೆಯಲ್ಲಿರಲಿಲ್ಲ. ಅನ್ನಪೂರ್ಣಾಬಾಯಿಯವರು ಒಬ್ಬರೇ ಇದ್ದರು. ಆದರೂ ಅವರು ಎದೆಗೆಡದೆ ಬಂದ ಅತಿಥಿಗಳಿಗೆ ಎಲ್ಲ ರೀತಿಯಿಂದಲೂ ಸ್ವಾಗತವಿತ್ತರು. ಸಾಧುವರ್ಯರು ಕೈಕಾಲು ಮೋರೆ ತೊಳಕೊಂಡು, ಉಪಹಾರ ಮಾಡಿ, ಶಾಂತಚಿತ್ತರಾದರು. ಅವರ ಮುಖಮುದ್ರೆಯ ಮೇಲೆ ಪ್ರಸನ್ನತೆಯು ಒಡಮೂಡಿತು. ಅವರು ಸಂತೋಷದಿಂದ ಅನ್ನಪೂರ್ಣಾಬಾಯಿಗೆ ಆಶೀರ್ವಾದವಿತ್ತರು:— "ಅಮ್ಮಾ, ಚಿಂತೆಮಾಡಬೇಡ. ನಿನ್ನ ಹೊಟ್ಟೆಯಿಂದ ಹುಟ್ಟುವ ಮೂರನೆಯ ಮಗನು ನಿನ್ನ ಇಚ್ಛೆಯನ್ನು ಪೂರ್ಣಮಾಡುವನು. ನೀನು ಸಾಮಾನ್ಯ ಸ್ತ್ರೀಯಾಗಿ ಸಾಯಬೇಕಾದುದಿಲ್ಲ. ನಿನ್ನ ಮೂರನೆಯ ಮಗನು ಲೋಕೋದ್ಧಾರಕನೂ ಪರಮಾತ್ಮನ ವಿಶೇಷಾನುಗ್ರಹಕ್ಕೆ ಪಾತ್ರನಾದವನೂ ಆಗುವನು. ಅವನು ಸಂನ್ಯಾಸವನ್ನು ಕೈಕೊಂಡು ಪರಮಾತ್ಮ ಪ್ರಾಪ್ತಿಯನ್ನು ಪಡೆದ ಸಿದ್ಧಪುರುಷನಾಗುವನು; ಜನರೊಳಗೆ ದೇವರಂತೆ ಪೂಜ್ಯನಾಗುವನು. ಅವನಿಂದ ನಿಮ್ಮ ವಂಶಕ್ಕೇ ಕೀರ್ತಿ ಬರುವದು. ನೀನಂತೂ ಅವನಿಂದ ಉದ್ಧಾರವಾಗುವಿಯೆಂಬುದರಲ್ಲಿ

ಸಂದೇಹವೇ ಇಲ್ಲ'' ಇಷ್ಟು ಹೇಳಿದವರೇ ಆ ಸತ್ಪುರುಷರು ಕೂಡಲೇ ಹೊರಬಿದ್ದು ಎಲ್ಲಿಯೋ ಮಾಯವಾಗಿ ಬಿಟ್ಟರು. ಅವರನ್ನು ತಿರುಗಿ ಗೊತ್ತು ಹಚ್ಚಬೇಕೆಂದು ಅನ್ನಪೂರ್ಣಾಬಾಯಿಯವರು ಎಷ್ಟು ಪ್ರಯತ್ನ ಬಟ್ಟರೂ ಸಾಧ್ಯವಾಗಲಿಲ್ಲ. ಆದರಿಂದ ಅವರಿಗೆ ತುಸು ಚಡಪಡಿಕೆಯಾದರೂ, ತಮ್ಮ ಮನಸ್ಸಿನ ಬಹು ದಿವಸಗಳ ಹಂಬಲವು ಪೂರ್ಣವಾಗುವದೆಂದು ಸಂತೋಷ ಭರಿತರಾದರು. ಬಾಳಕೃಷ್ಣ ಭಟ್ಟರೂ ಈ ಮಾತನ್ನು ಕೇಳಿ ಆನಂದ ಪಟ್ಟ ರೆಂಬುದು ಸಹಜವಿದೆ.

ಈ ದಂಪತಿಗಳ ಪವಿತ್ರೋದರದಿಂದ ಒಟ್ಟಿಗೆ ೫ ಜನ ಗಂಡು ಮಕ್ಕಳು ಹುಟ್ಟಿದರು. ಅವರಲ್ಲಿ ಗೋವಿಂದಭಟ್ಟರೆಂಬವರು ಹಿರಿಯವರು. ಗೋವಿಂದ ಭಟ್ಟರಾದರೂ ತಂದೆಯಂತೆ ವೈದಿಕವಿದ್ಯೆ ಮತ್ತು ಚಿತ್ರಕಲೆಗಳಲ್ಲಿ ನಿಪುಣ ರಾಗಿದ್ದರು. ನಾರಾಯಣಭಟ್ಟರು ಎರಡನೆಯವರು. ಇವರಾದರೂ ವೇದಾಧ್ಯಯನ ಮಾಡಿದ್ದರಲ್ಲದೆ ಕನ್ನಡಭಾಷೆಯನ್ನು ಜನ್ನಾಗಿ ಅಭ್ಯಾಸಮಾಡಿ ವಿದ್ಯಾಖಾತೆಯಲ್ಲಿ ಸೇರಿ, ಪ್ರಾಥಮಿಕ ಶಿಕ್ಷಣದಲ್ಲಿ ಭಾಗವಹಿಸಿ ಒಳ್ಳೇ ಶಿಕ್ಷಕ ರೆಂದು ಕೀರ್ತಿ ಸಂಪಾದಿಸಿದ್ದರು. ಮೂರನೆಯವರೇ ನಮ್ಮ ಚರಿತ್ರನಾಯ ಕರು. ನಾಲ್ಕನೆಯವರು ದತ್ತಂಭಟ್ಟರು. ಈ ನಾಲ್ಕು ಜನರೆಲ್ಲ ಓಂಕಾರ ಭಟ್ಟರಿದುವಾಗಲೇ ಹುಟ್ಟಿದರು. ಓಂಕಾರಭಟ್ಟರು ದೇಹವಿಟ್ಟಮೇಲೆ ಐದನೆಯ ಮಗನು ಹುಟ್ಟಲು, ಮೊಮ್ಮಗನಿಗೆ ಓಂಕಾರಭಟ್ಟನೆಂದು ಅಜ್ಜನ ಹೆಸರನ್ನೇ ಇಟ್ಟರು. ಈ ಓಂಕಾರಭಟ್ಟರಾದರೂ ಕನ್ನಡ ಶಿಕ್ಷಕರ ಕೆಲಸಮಾಡಿ ಸದ್ಯಕ್ಕೆ ಸೇವಾನಿವೃತ್ತರಾಗಿರುವರು. ಇವರು ಶಿಕ್ಷಣೋಪ ಯುಕ್ತವಾದ ಅನೇಕ ಪುಸ್ತಕಗಳನ್ನು ಬರೆದು ಲೋಕಪ್ರಿಯರಾಗಿರುವರು.

ತಮ್ಮ ಮಾತೃತ್ವವನ್ನು ಪೂರ್ಣಗೊಳಿಸುವ ಈಶ್ವರಾಂಶಸಂಭವರಾದ ಮಗನ ಮುಖವನ್ನು ಎಂದು ನೋಡುವೆನೋ— ಎಂಬ ಉತ್ಕಂಠೆಯು ಅನ್ನಪೂರ್ಣಾಬಾಯಿಯವರನ್ನು ಒಂದೇಸವನೆ ಪೀಡಿಸಹತ್ತಿತ್ತು. ಅವರು ಈ ಮಾತನ್ನು ಬಾಳಕೃಷ್ಣಭಟ್ಟರಿಗೂ ತಿಳಿಸಿದ್ದರು. ಆದುದರಿಂದ ಬಾಳಕೃಷ್ಣಭಟ್ಟರೂ ಒಳ್ಳೇ ಕುತೂಹಲದಿಂದ ಈ ಸಂಧಿಯನ್ನು ಕಾಯಹತ್ತಿದರು. ಸತ್ಪುರುಷನ ಬಾಯಿಂದ ಒಂದ ಭವಿಷ್ಯವು ಸತ್ಯ ವಾಗಲೆಂದು ದಂಪತಿಗಳು ಪರಮೇಶ್ವರನಿಗೆ ಪ್ರಾರ್ಥಿಸಿಕೊಳ್ಳಹತ್ತಿದರು.

ಪರಮಾತ್ಮ ಚಿಂತನೆಯಿಂದ ಅವರ ಇಚ್ಛೆಯು ಪೂರ್ಣವಾಗುವದೆಂಬುದನ್ನು ತೋರಿಸುವ ಅನೇಕ ಸುಖಸ್ವಪ್ನಗಳು ಆ ದಂಪತಿಗಳಿಗೆ ಬೀಳಹತ್ತಿದವು. ಹೀಗೆ ದಿವಸಗಳ ಮೇಲೆ ದಿವಸಗಳೂ, ಮಾಸಗಳ ಮೇಲೆ ಮಾಸಗಳೂ ಕಳೆದು ಹೋಗಹತ್ತಿದವು. ಅನ್ನಪೂರ್ಣಾಬಾಯಿಯವರು ಮೂರನೆಯ ಸಲ ಗರ್ಭಿಣಿಯಾದರು. ಈ ಸಲದ ಗರ್ಭವು ಮೂಡಿದೊಡನೆ ಅವರಿಗೆ ಹೊಸತರದ ಅನುಭವಗಳು ಬರಹತ್ತಿದವು. ಒಳಗಿದ್ದ ಮಹಾಪುರುಷನ ಬ್ರಹ್ಮತೇಜಸ್ಸು ಆ ತಾಯಿಯ ಮುಖಮಂಡಲದ ಮೇಲೆ ಸ್ಪಷ್ಟವಾಗಿ ಕಾಣ ಹತ್ತಿತು. ಅವರ ಮುಖಮಂಡಲವು ಶಾಂತವೂ ಗಂಭೀರವೂ ಸುಪ್ರಸನ್ನವೂ ಆಗಿ ತೋರಿತು. ತಾಯಿಗೆ ಶಾಂತಿ ಸುಖ-ಸಮಾಧಾನಗಳ ದಿವ್ಯಾನುಭವ ವಾಗಹತ್ತಿತು. ಅವರ ಈ ಸಲದ ಬಯಕೆಗಳಾದರೂ ಹೊಸತರದವಾಗಿದ್ದವು. ಸಾಂಸಾರಿಕ ವಿಷಯಗಳಲ್ಲಿ ಅವರಿಗೆ ಜುಗುಪ್ಸೆಯುಂಟಾಗಹತ್ತಿತು. ಪುರಾಣ ಪುಣ್ಯ ಕತೆಗಳನ್ನು ಕೇಳುವದರಲ್ಲಿ ಅವರಿಗೆ ಆಸಕ್ತಿ ಹೆಚ್ಚಾಯಿತು. ಹರಿ ಕೀರ್ತನೆಯಿಂದ ಅವರು ಪರಮಸಂತುಷ್ಟರಾಗಹತ್ತಿದರು. ನಾಮಸ್ಮರಣ, ಭಜನ, ಪೂಜನಗಳಲ್ಲಿ ಅವರ ಅಭಿರುಚಿಯು ಅತ್ಯಧಿಕವಾಗಿ ಬೆಳೆಯಿತು. ತಾಸುತಾಸುಗಳನ್ನು ಅವರು ಧ್ಯಾನದಲ್ಲಿ ಕಳೆಯಹತ್ತಿದರು. ಓದುಬರಹ ಕೂಡ ಬರದಿದ್ದ ಸಾಮಾನ್ಯ ಸ್ತ್ರೀಯು ವೇದಾಂತದ ಗಹನವಾದ ವಿಷಯಗಳ ಬಗ್ಗೆ ಸಹಜವಾಗಿ ಮಾತಾಡುವದನ್ನು ನೋಡಿ, ಜನರಿಗೆ ಆಶ್ಚರ್ಯ ವಾಯಿತು. ಇವೆಲ್ಲ ಲಕ್ಷಣಗಳ ಮೇಲಿಂದ ಮಹಾಪುರುಷನೇ ಅವತರಿಸಿ ಬರುವನೆಂದು ಬಾಳಕೃಷ್ಣಭಟ್ಟರಿಗೆ ಪೂರ್ಣ ನಂಬಿಕೆಯುಂಟಾಯಿತು.

ಕೊನೆಗೆ ಆ ಪುಣ್ಯಕಾಲವು ಪ್ರಾಪ್ತವಾಯಿತು. ಹೋದ ಪ್ರಕರಣದಲ್ಲಿ ವರ್ಣಿಸಿದಂತೆ ಯಾವ ಮಹಾಪುರುಷನ ಜನ್ಮಕ್ಕಾಗಿ ಕರ್ನಾಟಕವು ಕಾಯ್ದು ಕೊಂಡು ಕುಳಿತಿತ್ತೋ ಆ ಮಹಾಪುರುಷನು ಈ ಭೂಮಿಯ ಮೇಲೆ ಮಾನವ ದೇಹಧಾರಿಯಾಗಿ ಅವಿರ್ಭವಿಸಿದನು. ಶಾಲಿವಾಹನ ಶಕೆ ೧೭೭೮ ನೆಯ ನಲನಾಮ ಸಂವತ್ಸರದ ಪುಷ್ಯ ವದ್ಯ ಸರ್ವಸಿದ್ಧಿ ತ್ರಯೋದಶಿ ಶುಕ್ರ ವಾರ (ತಾ. ೨೩—೧—೧೮೫೭) ದಿವಸದ ಶುಭ ಮುಹೂರ್ತದಲ್ಲಿ ನಮ್ಮ ಚರಿತ್ರನಾಯಕರ ಜನ್ಮವಾಯಿತು. ಬಾಲಕನ ಮನೋಹರವಾದ ದಿವ್ಯ ರೂಪವನ್ನು ನೋಡಿ ತಂದೆತಾಯಿಗಳಿಗೆ ಪರಮಾನಂದವಾಯಿತು. ಕೂಸು

ಹುಟ್ಟಿದ ಕೂಡಲೇ ತಾಯಿಯ ಮುಖವನ್ನು ನೋಡಿ ನಕ್ಕಂತೆ ತಾಯಿಗೆ ಭಾಸವಾಯಿತು. ಬಹು ದಿನಗಳಿಂದ ಕಾಯ್ದುಕೊಂಡಿದ್ದ ಅನ್ನಪೂರ್ಣಾ ಬಾಯಿಯವರಿಗೆ ಮಗನ ಈ ಮುಗುಳು ನಗೆಯಿಂದ ಸ್ವರ್ಗವೇ ಸಿಕ್ಕಂತಾಯಿತೆಂದು ಬೇರೆ ಹೇಳಲಿಕ್ಕೆ ಬೇಕೆ.

ಮಾತಾಪಿತರರ ಆನಂದ ಸಾಗರವನ್ನು ಉಕ್ಕೇರಿಸುವ ಮುಖಚಂದ್ರವುಳ್ಳ ಆ ಸುಂದರ ಬಾಲಕನು ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ಬೆಳೆಯುತ್ತ ನಡೆದನು. ಹನ್ನೆರಡನೆಯ ದಿನ ಬಾಲಕನನ್ನು ತೊಟ್ಟಿಲಲ್ಲಿ ಹಾಕಿ ಲಲನೆಯರು ಆನಂದದಿಂದ ಜೋಗುಳ ಹಾಡಿದರು. ಮುಂದೆ ಇವನು ಸಚ್ಚಿದಾನಂದ ಸ್ವರೂಪದಲ್ಲಿ ರಮಮಾಣನಾಗುವನೆಂಬುದನ್ನು ಸೂಚಿಸುವದಕ್ಕಾಗಿಯೇನೋ ಎಂಬುವಂತೆ ಇವನಿಗೆ ''ರಾಮ''ನೆಂಬ ಸಾರ್ಥ ನಾಮಕರಣವನ್ನು ಮಾಡಿದರು.

ಮಹನೀಯರ ಬಾಲ್ಯವೂ ಕೂಡ ಅವರ ಮುಂದಿನ ಘನತೆಯ ಸೂಚಕವಾಗಿರುತ್ತದೆಂಬುದರಲ್ಲಿ ಸಂದೇಹವಿಲ್ಲ. ಗಾಣಗಾಪುರದ ಶ್ರೀಮನ್ನೃಸಿಂಹ ಸರಸ್ವತೀಸ್ವಾಮಿಗಳವರು ಹುಟ್ಟಿದ ಕೂಡಲೇ ಪ್ರಣವೋಚ್ಚಾರವನ್ನು ಮಾಡಹತ್ತಿದರಲ್ಲದೆ, ಉಪನಯನವಾಗುವವರೆಗೆ ಅದರ ಹೊರತು ಬೇರೆ ಯಾವ ಶಬ್ದವನ್ನೂ ಉಚ್ಚಾರ ಮಾಡುತ್ತಿದಿಲ್ಲ. ಶ್ರೀ ಗೊಂದವಲೇಕರ ಶ್ರೀ ಬ್ರಹ್ಮ ಚೈತನ್ಯ ಮಹಾರಾಜರು ೨—೩ ತಿಂಗಳದವರಿದ್ದಾಗ, ಅವರನ್ನು ತೊಟ್ಟಿಲಲ್ಲಿ ಮಲಗಿಸಿ, ಅವರ ತಾಯಿಯು ಬಾಗಿಲವನ್ನು ಮುಚ್ಚಿಕೊಂಡು ನೀರು ತರಲಿಕ್ಕೆ ಹೋಗಿದ್ದಳಂತೆ. ತಾಯಿಯು ತಿರುಗಿ ಮನೆಗೆ ಬರುತ್ತಿರುವಾಗ ಮನೆಯೊಳಗಿಂದ ''ಶ್ರೀರಾಮ ಜಯರಾಮ ಜಯಜಯರಾಮ'' ಎಂಬ ಸುಮಧುರ ಧ್ವನಿಯು ಸ್ಪಷ್ಟವಾಗಿ ಕೇಳಬರಹತ್ತಿತು. ತಾಯಿಯು ಉತ್ಸುಕತೆಯಿಂದ ಬಾಗಿಲು ತೆಗೆದು ನೋಡಲು ರಾಮನಾಮವು ತೊಟ್ಟಿಲದಿಂದ ಹೊಡುತಿರುವದೆಂದು ಮನಗಂಡಳು. ಆದರೆ ತೊಟ್ಟಿಲಲ್ಲಿ ಹೋಗಿ ನೋಡಲು ಬಾಲಕನು ಮಲಗಿಸಿದಾಗಿನಂತೆಯೇ ಮಲಗಿಬಿಟ್ಟಿದ್ದನು. ಕೂಸು ಪಿಳಿಪಿಳಿ ಕಣ್ಣು ಬಿಡುತ್ತ ತಾಯಿಯ ಮುಖದ ಕಡೆಗೆ ಮಾತ್ರ ನೋಡಿ ನಕ್ಕಿತಂತೆ. ಆಗ ತಾಯಿಯ ಆಶ್ಚರ್ಯಕ್ಕೆ ಪಾರಾವಾರವೇ ಉಳಿಯಲಿಲ್ಲೆಂಬುದು ಸ್ಪಷ್ಟವಿದೆ.

ಆದರೆ ನಮ್ಮ ಚರಿತ್ರನಾಯಕರ ಶೈಶವದ ಇತಿಹಾಸವು ನಮಗಿಂದು ಉಪಲಬ್ಧವಿಲ್ಲ. ಅದನ್ನು ತಿಳಿದುಕೊಳ್ಳಬೇಕೆಂದು ನಾವು ಎಷ್ಟು ಯತ್ನ ಮಾಡಿದರೂ, ಆ ಬಗ್ಗೆ ನಮಗೆ ಹೆಚ್ಚಿನ ಯಾವ ಸಂಗತಿಗಳೂ ಗೊತ್ತಾಗಿರುವದಿಲ್ಲ. ಮತ್ತು ಅದನ್ನು ತಿಳಿದುಕೊಳ್ಳುವ ಯಾವ ಸಾಧನಗಳೂ ಈಗ ಉಳಿದಿರುವದಿಲ್ಲ. ಅದಕ್ಕಾಗಿ ನಾವು ವಾಚಕರ ಕ್ಷಮೆ ಬೇಡುತ್ತೇವೆ. ಆದರೆ ಕೇವಲ ಶೈಶವದೊಳಗಿನ ಲೀಲೆಗಳು ಇರುವವಾದರೂ ಯಾವು? ಹತ್ತರ ಒಂದವರ ಕಡೆಗೆ ದಿಟ್ಟಿಸಿ ನೋಡುವದು, ಕುಲು ಕುಲು ನಗುವದು, ಸಾಗರಬಿದ್ದು ಅವರ ಕಡೆಗೆ ಹೋಗಲೆತ್ನಿಸುವದು, ಅಥವಾ ಅವರಿಂದ ದೂರ ಸರಿಯುವದು, ಮತ್ತು ಅಸ್ಪಷ್ಟಮಧುರವಾದ ಶಬ್ದಗಳಿಂದ ಜನರ ಮನಸ್ಸನ್ನು ಸೆಳೆಯುವದು ಇವಿಷ್ಟೇ ಶೈಶವದ ಲೀಲೆಗಳೆಂದು ಹೇಳಬಹುದು. ಬೇಕಾದ ಹುಡುಗರ ಶೈಶವ ಲೀಲೆಯನ್ನು ನೋಡಿದರೂ ಮನಸ್ಸಿಗೆ ಸಂತೋಷವಾಗುವದೆಂದ ಬಳಿಕ, ನಮ್ಮ ಚರಿತ್ರನಾಯಕರ ಲೀಲೆಗಳೂ ಮನ ಮೋಹಕವಾಗಿರಬೇಕೆಂಬ ಬಗ್ಗೆ ಸಂಶಯವೇ ಇಲ್ಲ ಅವುಗಳನ್ನು ಯಾರಿಗೆ ನೋಡಲಿಕ್ಕೆ ಸಿಕ್ಕಿತೋ ಅವರು ಧನ್ಯರೇ ಸರಿ; ಅವರ ಭಾಗ್ಯಕ್ಕೆ ಎಣೆಯೇ ಇಲ್ಲ. ಯಾಕೆಂದರೆ ಮಹಾರಾಜರ ಶೈಶವದಲ್ಲಿಯಾದರೂ ಏನಾದರೊಂದು ವೈಶಿಷ್ಟ್ಯವು ಇದ್ದಿರಲೇಬೇಕು. ಆದರೆ ಅದು ಇಂದು ಗೊತ್ತಾಗುವ ಬಗೆಯೇ ಇರದ್ದರಿಂದ ವಾಚಕರು ಇಷ್ಟರಿಂದಲೇ ತೃಪ್ತರಾಗಬೇಕೆಂದು ಬೇಡಿಕೊಳ್ಳುತ್ತೇವೆ.

———

೪ ಉಪನಯನ

ಜನ್ಮನಾ ಜಾಯತೆ ಶೂದ್ರಃ ಸಂಸ್ಕಾರಾದ್ದ್ವಿಜ ಉಚ್ಚತೆ ।
ವೇದಾಭ್ಯಾಸೀ ಚ ವಿಪ್ರಃಸ್ಯಾತ್ ಬ್ರಹ್ಮ ಜಾನಾತಿ ಬ್ರಾಹ್ಮಣಃ ॥

ಎಲ್ಲ ಮಾನವರೂ ಒಂದೇ ರೀತಿಯಿಂದ ಈ ಜಗತ್ತಿನಲ್ಲಿ ಹುಟ್ಟಿ ಬರುತ್ತಾರೆ. ಎಲ್ಲರೂ ತಾಯಿಯ ಹೊಟ್ಟೆಯೊಳಗಿಂದಲೇ ಹೊರಬೀಳುವರು. ಎಲ್ಲರಿಗೂ ಒಂದೇ ತರದ ಶರೀರ ರಚನೆಯೂ ಅವಯವಗಳೂ ಇರುತ್ತವೆ. ಎಲ್ಲರೂ ಇರುವದು ಒಂದೇ ಪೃಥ್ವಿಯ ಮೇಲೆ; ಕುಡಿಯುವ ನೀರೂ ಒಂದೇ, ಉಸುರಾಡಿಸುವ ಹವೆ, ಉಣ್ಣುವ ಅನ್ನ ಎಲ್ಲವೂ ಒಂದೇ. ಸಂಸಾರ ಮಾಡುವ ರೀತಿ, ಜೀವನದ ಕ್ರಮ ಮೊದಲಾದ ಎಲ್ಲ ಮುಖ್ಯ ವಿಷಯಗಳಲ್ಲಿಯೂ ಮನುಷ್ಯರೊಳಗೆ ಸಾಮ್ಯವಿದೆ. ಎಂದ ಮೇಲೆ ವಿಷಮತೆ ಬರುವದೆಲ್ಲಿಂದ ?

ಜಗತ್ತಿನೊಳಗೆ ರೂಢವಾಗಿರುವ ಎಲ್ಲ ಧಾರ್ಮಿಕ ಪಂಥಗಳೂ ಈ ಸಾಮ್ಯವನ್ನು ಒಪ್ಪುತ್ತವೆ. ಆದರೆ ಆಯಾ ಧರ್ಮದ ವಿಶಿಷ್ಟ ಆಚಾರ ವಿಧಿ ಮತ್ತು ಸಂಸ್ಕಾರಗಳಿಂದ ಜನರು ಬೇರೆ ಬೇರೆಯಾಗುತ್ತಾರೆಂದು ಅವು ತಿಳಿಯುತ್ತವೆ. ಈ ಬಗ್ಗೆ ಲೋಕಮಾನ್ಯ ತಿಲಕರು ಬರೆಯುವದೇನಂದರೆ ''ಸ್ವಲ್ಪದರೊಳಗೆ ಹೇಳುವದಾದಲ್ಲಿ ಹೀಗೆ ಹೇಳಬೇಕಾದೀತು. ಹಿಂದೂ, ಪಾರಸೀ, ಮುಸಲ್ಮಾನೀ, ಅಥವಾ ಕ್ರಿಸ್ತಿ ಧರ್ಮದ ಕೆಲವು ವಿಶಿಷ್ಟ ವಿಧಿ, ಆಚಾರ ಮತ್ತು ಸಂಸ್ಕಾರಗಳಿದ್ದು, ಆ ವಿಶಿಷ್ಟ ವಿಧಿ ಮತ್ತು ಸಂಸ್ಕಾರಗಳನ್ನು ಪಾಲಿಸಿದ ಹೊರತು ಯಾರೂ ಆಯಾ ವಿಶಿಷ್ಟಧರ್ಮದ ಅನುಯಾಯಿಗಳಾಗಲಾರರು. ಧರ್ಮಾನುಯಾಯಿತ್ವವು ಬರೇ ಬುದ್ಧಿಗಮ್ಯ ಜ್ಞಾನದ ಪರಿಣಾಮವಾಗಿರದೆ ಬಾಹ್ಯ ಸಂಸ್ಕಾರಗಳ ಅಪೇಕ್ಷೆಯು ಯಾವಾಗಲೂ ಇದ್ದೇ ಇರುತ್ತದೆ. ಬಾಹ್ಯ ಸಂಸ್ಕಾರಗಳ ಹೊರತಾಗಿ ಆಯಾ ಧರ್ಮದ ಅನುಯಾಯಿ

ತ್ವವು ಎಂದಿಗೂ ಪೂರ್ಣವಾಗುವದಿಲ್ಲೆಂದು ಇದರ ಮೇಲಿಂದ ಕಂಡು ಬರುತ್ತದೆ.''

ಯಾವುದೊಂದು ಧರ್ಮಕ್ಕೆ ಪ್ರವೇಶ ಬಯಸುವವನು ಕೆಲವು ವಿಶಿಷ್ಟ ಸಂಸ್ಕಾರಗಳನ್ನು ಹೊಂದಬೇಕಾಗುವದರಿಂದ ಪ್ರತಿಯೊಂದು ಧರ್ಮವು ಇಂತಹ ಸಂಸ್ಕಾರಗಳನ್ನು ವಿಧಿಸಿಯೇ ವಿಧಿಸುತ್ತದೆ. ''ಸಂಸ್ಕಾರ''ವೆಂದರೆ ಮನುಷ್ಯನೊಳಗೆ ಸ್ವಾಭಾವಿಕವಾಗಿರುವ, ಆದರೂ ಅವ್ಯಕ್ತ–ಅಸ್ಪಷ್ಟವಾಗಿರುವ ಶಕ್ತಿಗಳನ್ನು ಹೊರಪಡಿಸುವ ಅಥವಾ ಪ್ರಕಟಗೊಳಿಸುವ ಸಾಧನವು. ಸಂಸ್ಕಾರವೆಂದರೆ ತಿಕ್ಕಿ, ತೊಳೆದು, ಸುಟ್ಟು, ಕಟೆದು, ಅಥವಾ ಹೊಸ ವಸ್ತುಗಳನ್ನು ಬೆರೆಸಿ ಶುದ್ಧಮಾಡುವ ಕ್ರಿಯೆಯು. ಸಂಸ್ಕಾರದಿಂದಲೇ ಮನುಷ್ಯನ ಮನುಷ್ಯತ್ವವು ಪೂರ್ಣವಾಗುತ್ತದೆ. ಸಹಜಾವಸ್ಥೆಯಲ್ಲಿ ಕಲ್ಲು, ಮಣ್ಣು, ಕಟ್ಟಿಗೆ, ಧಾತುಗಳು, ವನಸ್ಪತಿಗಳು ಮೊದಲಾದವೂ ಕೂಡ ಅಷ್ಟು ಉಪಯುಕ್ತವಾಗಿರುವದಿಲ್ಲ. ಆದರೆ ಅವಕ್ಕೆ ಸರಿಯಾದ ಸಂಸ್ಕಾರಗಳನ್ನು ಕೊಟ್ಟರೆ ಅವೇ ಬೇಕಾದ ಕೆಲಸಕ್ಕೆ ಉಪಯೋಗವಾಗುತ್ತವೆ. ಮಂತ್ರ ಮೊದಲಾದವುಗಳಿಂದ ಶುದ್ಧವಾದರೆ ಅವೇ ದೇವತೆಗಳಾಗಿ ಪೂಜೆಗೂ ಸಹ ಅರ್ಹವಾಗುತ್ತವೆ.

ಉಪನಯನವು ವೈದಿಕಮತದ ಮುಖ್ಯ ಸಂಸ್ಕಾರವಾಗಿದೆ. ಇದನ್ನು ಹೊಂದದಿದ್ದ ಯಾವನೂ ವೈದಿಕ ಮತಾನುಯಾಯಿಯಾಗಲಾರನು. ಕ್ರಿಸ್ತರಿಗೆ ''ಬ್ಯಾಪ್ಟಿಜಂ''ವೆಂದರೆ ನೀರೊಳಗೆ ಮುಣುಗಿಸುವ ಅಥವಾ ಪವಿತ್ರಸ್ನಾನ ಮಾಡಿಸುವ ಕ್ರಿಯೆ ಇರುವಂತೆ, ಮುಸಲ್ಮಾನರಿಗೆ 'ಸುನ್ನತ'ವೆಂದರೆ ಗಂಡು ಹುಡುಗರ ಜನನೇಂದ್ರಿಯದ ಮೇಲಿನ ಚರ್ಮವನ್ನು ಕತ್ತರಿಸುವ ವಿಧಿಯಿರುವಂತೆ, ವೈದಿಕರಿಗೆ 'ಉಪನಯನ'ವೆಂಬ ವಿಧಿಯು ವಿಧಿಸಲ್ಪಟ್ಟಿದೆ. ಉಪನಯನವೆಂದರೆ ಬಾಲಕನನ್ನು ಕರೆದುಕೊಂಡು ಹೋಗಿ ವಿದ್ಯಾಭ್ಯಾಸ ಮಾಡಿಸಿರೆಂದು ಗುರುವಿಗೆ ಒಪ್ಪಿಸುವದು. ಶ್ರೀ ಸ್ವಾಮಿ ವಿವೇಕಾನಂದರು ಹೇಳುವಂತೆ ''ಮನುಷ್ಯನೊಳಗೆ ಅವ್ಯಕ್ತವಾಗಿರುವ ಪೂರ್ಣತೆಯನ್ನು ಪ್ರಕಟ ಮಾಡುವ ಸಾಧನವೇ ಶಿಕ್ಷಣವು.'' ಇಂತಹ ಶಿಕ್ಷಣ ಕೊಡಬೇಕೆಂದೇ ಬಾಲಕನನ್ನು ಗುರುವಿಗೆ ಒಪ್ಪಿಸಬೇಕಾಗುತ್ತದೆ. ಎಂತೆಯೇ ಉಪನಯನವೆಂದರೆ ಎರಡನೆಯ ಜನ್ಮವೆಂದು ನಮ್ಮ ಋಷಿಗಳು ಹೇಳಿದ್ದಾರೆ. ಉಪನಯನ

ದಿಂದಲೇ ಪ್ರತಿಯೊಬ್ಬನು 'ದ್ವಿಜ'ನಾಗುವನು. ನಯನವೆಂದರೆ ಕಣ್ಣು. ಉಪನಯನವೆಂದರೆ ಹೊಸದೃಷ್ಟಿ, ಹೊಸಕಣ್ಣು. ಉಪನಯನದಿಂದಲೇ ಮನುಷ್ಯನ ದಿವ್ಯದೃಷ್ಟಿ ಅಥವಾ ದಿವ್ಯಚಕ್ಷುವು ಜಾಗ್ರತವಾಗುವದು. ಅದರಿಂದಲೇ ಅವನು ಪರಮಾತ್ಮ ಸಾಕ್ಷಾತ್ಕಾರವನ್ನು ಪಡೆದು ಪೂರ್ಣನಾಗ ಬಹುದು. ಎಂತೆಯೇ ಉಪನಯನಕ್ಕೆ ನಮ್ಮ ಧರ್ಮದೊಳಗೆ ಇಷ್ಟು ಮಹತ್ವವಿಟ್ಟಿದ್ದಾರೆ.

ಗಾಣಗಾಪುರದ ಸುಪ್ರಸಿದ್ಧ ಶ್ರೀ ನರಸಿಂಹ ಸರಸ್ವತೀ ಸ್ವಾಮಿಗಳವರು ಉಪನಯನವಾಗುವ ವರೆಗೆ ಜಡಮೂಢರಂತೆ ಮೌನವಾಗಿದ್ದು, ಉಪನಯನವಾದ ಮೇಲೆ ತಮ್ಮ ದಿವ್ಯ. ಭಾವವನ್ನು ಒಮ್ಮೆಲೇ ಪ್ರಕಟಪಡಿಸಿದರು, ಅದರಂತೆಯೇ ನಮ್ಮ ಚರಿತ್ರನಾಯಕರಾದರೂ ಉಪನಯನವಾಗುವ ವರೆಗೆ ತಮ್ಮ ದೊಡ್ಡಿಸ್ತಿಕೆಯನ್ನು ಹೊರಗೆಡವಿರಲಿಲ್ಲ. ಎಲ್ಲ ಹುಡುಗರಂತೆ ಅವರೂ ಆಡುವರು, ಉಣ್ಣುವರು, ತಿನ್ನುವರು. ಆದರೂ ಉಳಿದವರಂತೆ ಅವರು ನಿರರ್ಥಕವಾದ ಆಟಪಾಟಗಳಲ್ಲಿ ಕಾಲಕಳೆಯದೆ, ಓರಿಗೆಯ ಹುಡುಗರನ್ನು ಕೂಡಿಕೊಂಡು ಕಲ್ಲುಮಣ್ಣಿನ ಸಣ್ಣ ಗುಡಿಮಾಡಿ, ದೇವರನ್ನು ಕೂಡಿಸಿ, ಪೂಜಾದಿಗಳನ್ನು ಮಾಡಿ, ಪಲ್ಲಕ್ಕಿಯನ್ನು ತಿರುಗಿಸಿ, ಪ್ರದಕ್ಷಿಣೆ ನಮಸ್ಕಾರಗಳನ್ನು ಹಾಕಿ, ಭಜನಮಾಡುತ್ತ ಕಾಲಕಳೆಯುವರು. ಇಂತಹ ಆಟಗಳ ಹೊರತಾಗಿ ಬೇರೆ ತರದ ಆಟಗಳಲ್ಲಿ ಅವರಿಗೆ ವಿಶೇಷವಾಗಿ ಪ್ರೀತಿಯೆನಿಸುತ್ತಿರಲಿಲ್ಲ.

ಹೀಗೆ ತಾಯಿ-ತಂದೆಗಳ ಪ್ರೀತಿಯ ಸಹವಾಸದಲ್ಲಿ ೬—೭ ವರುಷಗಳು ಕಳೆದು ಹೋಗಲು ಬಾಳಕೃಷ್ಣ ಭಟ್ಟರು ಬಾಲಕನಾದ ರಾಮನಿಗೆ ಉಪನಯನ ಮಾಡುವ ಆಲೋಚನೆ ನಡೆಸಿದರು. ಉಪನಯನ ವಿಚಾರದಿಂದ ರಾಮನಿಗೂ ಸಂತೋಷವಾಯಿತು. ಸಂಭ್ರಮದಿಂದ ಎಲ್ಲ ಸಿದ್ಧತೆಗಳೂ ನಡೆದವು. ಉಪನಯನವು ಗೋಕಾಕದಲ್ಲಿಯೇ ಆಗಬೇಕೆಂದು ಗೊತ್ತಾಗಿತ್ತು. ಮನೆಯ ಎದುರಿನಲ್ಲಿಯೇ ಒಂದು ಚಿಕ್ಕದಾದ ಆದರೂ ಸುಂದರವಾದ ಮಂಟಪವನ್ನು ಹಾಕಿದರು.

ಉಪನಯನವಾಗುವವರೆಗೆ ಹುಡುಗರು ಬೇಕಾದಲ್ಲಿ ಆಡ್ಡಾಡಬಹುದು,

ಬೇಕಾದಂತೆ ನಡೆಯಬಹುದು, ಬೇಕಾದ್ದನ್ನು ಮಾತಾಡಬಹುದು ಮತ್ತು ಬೇಕಾದ್ದನ್ನು ತಿನ್ನಬಹುದು. ಅವರಿಗೆ ಏನು ಬೇಕಾದ್ದು ಮಾಡಲಿಕ್ಕೂ ಸ್ವಾತಂತ್ರ್ಯವಿರುವದು. ಯಾಕಂದರೆ ಧರ್ಮದ ಕಠಿಣವಾದ ನಿರ್ಬಂಧಗಳಿಗೆ ಒಳಗಾಗಿ ನಡೆಯುವ ಶಕ್ತಿಯು ಅವರಿಗಿರುವದಿಲ್ಲ. ಆದರೆ ಈ ಮಾತು ಕೂಡ ನಿಜವಾಗಿ ಧರ್ಮಕ್ಕೆ ಸಮ್ಮತವಿರುವದಿಲ್ಲ. ಆದುದರಿಂದ ಈ ತರದ ಕಾಮಾಚಾರ, ಕಾಮವಾದ, ಕಾಮಭಕ್ಷಣಾದಿ ದೋಷಗಳ ಪರಿಹಾರಾರ್ಥವಾಗಿ ಉಪನಯನದ ಮೊದಲು ಕೆಲವು ಪ್ರಾಯಶ್ಚಿತ್ತಗಳನ್ನು ಮಾಡಬೇಕಾಗುತ್ತದೆ. ತಮ್ಮ ಬಾಲಕನ ದೋಷಗಳ ಸಲುವಾಗಿ ಬಾಳಕೃಷ್ಣ ಭಟ್ಟರು ಈ ಪ್ರಾಯಶ್ಚಿತ್ತಗಳನ್ನೆಲ್ಲ ಸಾವಧಾನದಿಂದ ಮಾಡಿದರು. ಮತ್ತು ತಮಗೆ ಉಪನಯನ ಮಾಡುವ ಯೋಗ್ಯತೆ ಬರಬೇಕೆಂದು ಮತ್ತೂ ಕೆಲವು ಪ್ರಾಯಶ್ಚಿತ್ತಗಳನ್ನು ಮುಗಿಸಿಕೊಂಡು ಉಪನಯನ ಮಾಡಲಿಕ್ಕೆ ಸಿದ್ಧರಾದರು.

ಮಾತೃಭೋಜನವು ವೈದಿಕವಿಧಿಯಾಗಿರದಿದ್ದರೂ ವ್ಯಾವಹಾರಿಕ ರೂಢಿಯಾಗಿದೆ. ಬಾಲಕನು ತಾಯಿಯ ಕೂಡ ಒಂದೇ ತಟ್ಟೆಯಲ್ಲಿ ಊಟ ಮಾಡುವದೆಂದರೆ ಇದೇ ಕೊನೆಯ ಸಲ. ಇನ್ನು ಮುಂದೆ ಬಾಲಕನಿಗೆ ಹಾಗೆ ಮಾಡುವ ಅಧಿಕಾರ ಉಳಿಯುವದಿಲ್ಲ. ಪ್ರೇಮಮಯಿಯಾದ ಅನ್ನಪೂರ್ಣಾ ಬಾಯಿಯವರು ತಮ್ಮ ದಿವ್ಯ ಬಾಲಕನನ್ನು ಕರಕೊಂಡು ಒಂದೇ ಕಡೆಗೆ ಊಟ ಮಾಡುವಾಗ ಸ್ವರ್ಗಸುಖವನ್ನು ಕೂಡ ಕಡೆಗಣಿಸಿದರು. ಮುದ್ದು ಕುವರನಾದ ಶ್ರೀ ರಾಮಚಂದ್ರನು ತಾಯಿಯ ಕೂಡ ಸವಿಸವಿಯಾದ ಪದಾರ್ಥಗಳನ್ನು ಒಳ್ಳೇ ಸಂಭ್ರಮದಿಂದ ಊಟ ಮಾಡಿದನು. ತಾಯಿಗೆ ಇದರಿಂದ ತೀರ ಸಂತೋಷವಾದರೂ ಇನ್ನು ಮುಂದೆ ಈ ಸುಖವು ಸಿಕ್ಕುವದಿಲ್ಲವಲ್ಲ ಎಂಬ ಚಿಂತೆಯೂ ಆ ಸಾಧ್ವಿಯ ತಲೆಯಲ್ಲಿ ಸುಳಿದಾಡದೆ ಹೋಗಲಿಲ್ಲ.

ಕ್ರಮೇಣ ಎಲ್ಲ ವಿಧಿಗಳೂ ಮುಗಿದವು. ಉಪನಯನದ ಮುಖ್ಯ ಭಾಗವಾದ ಗಾಯತ್ರೀ ಮಂತ್ರೋಪದೇಶ ಕಾಲವು ಬಂತು. ಭಾವಿಕರಾದ ಬಾಳಕೃಷ್ಣ ಭಟ್ಟರ ಎದೆಯು ಹಾರಹತ್ತಿತ್ತು. ತಮ್ಮನ್ನೂ ತಮ್ಮ ಕುಲವನ್ನೂ ಉದ್ಧಾರ ಮಾಡುವದಕ್ಕಾಗಿಯೇ ಹುಟ್ಟಿದ ಮಹನೀಯನಿಗೆ ನಾನೆಂತು ಉಪದೇಶ ಮಾಡಲಿ ಎಂಬ ಭಯವೂ ಚಿಂತೆಯೂ ಅವರಲ್ಲಿ ಒಮ್ಮೆಲೇ

ಆವಿರ್ಭವಿಸಿದವು. ಆದರೂ ಲೌಕಿಕದ ಕಡೆಗೆ ಲಕ್ಷಗೊಟ್ಟು ಅವರು ತಮ್ಮ ಅಂತರಂಗವನ್ನು ಎರಡನೆಯವರಿಗೆ ತೋರಗೊಡಲಿಲ್ಲ.

ಗಾಯತ್ರೀ ಮಂತ್ರವನ್ನು ವೇದಮಾತೆಯೆಂದು ಕರೆದಿರುತ್ತಾರೆ. ಗಾಯತ್ರಿಗಿಂತ ಹೆಚ್ಚಿನ ಮಂತ್ರವೇ ಇಲ್ಲೆಂದು ಬಲ್ಲವರ ಅಂಬೋಣ. ಅದರ ಜಪ ಅಥವಾ ಧ್ಯಾನಮಾಡುವದನ್ನು ಅದು ಎಲ್ಲ ರೀತಿಯಿಂದಲೂ ರಕ್ಷಿಸುವ ದೆಂಬ ಕಾರಣದಿಂದ ಅದಕ್ಕೆ ''ಗಾಯತ್ರೀ'' ಎಂಬ ಹೆಸರು ಬಂದಿದೆ. ವೈದಿಕ ವಾಙ್ಮಯದಲ್ಲಿ ಅದನ್ನು ''ಸಾವಿತ್ರಿ'' ಎಂಬ ಹೆಸರಿನಿಂದಲೂ ಕರೆದಿರುವರು. ''ಸವಿತೃ'' ಎಂದರೆ ಜಗತ್ತನ್ನು ಹುಟ್ಟಿಸಿದ ಪರಮಾತ್ಮನೆಂದು ಅರ್ಥವು. ಅವನ ವಿಷಯಕವಾದ ಮಂತ್ರವೆಂಬ ಕಾರಣದಿಂದ ಅದಕ್ಕೆ ''ಸಾವಿತ್ರೀ'' ಎಂಬ ಹೆಸರು ಬಂದಿರಲಿಕ್ಕೆ ಸಾಕು. ಕಣ್ಣಿಗೆ ಕಾಣುವ ಸೂರ್ಯನೇ ನಾವಿರುವ ಪೃಥ್ವಿಯ ಅಸ್ತಿತ್ವಕ್ಕೆ ಕಾರಣನಾಗಿರುವದರಿಂದಲೂ ಅವನು ಅತ್ಯಂತ ತೇಜೋಮಯನಾಗಿರುವದರಿಂದಲೂ, ಅವನೇ ಪರ ಮೇಶ್ವರನ ಉತ್ಕೃಷ್ಟವಾದ ಪ್ರತೀಕವೆಂದು ವೇದಗಳು ತಿಳಿಯುತ್ತವೆ. ಎಂತಯೇ ವೈದಿಕ ಧರ್ಮವು ಸೂರ್ಯೋಪಸ್ಥಾನಕ್ಕೆ ಅಷ್ಟು ಮಹತ್ವಕೊಟ್ಟಿದೆ. ಎಲ್ಲ ದೇವತೆಗಳಿಗೂ ಅಗ್ನಿಯ ಮುಖಾಂತರವಾಗಿಯೇ ಹವಿರ್ಭಾಗವನ್ನು ಕೊಡುವದರಿಂದ ಅಗ್ನಿಪೂಜೆಗೂ ಮಹತ್ವ ಬಂದಿದೆ. ಉಪನಯನವಾಗ ಬೇಕಾಗಿರುವ ಹುಡುಗನ ಕಡೆಯಿಂದ ಅಗ್ನಿಯ ಉಪಸ್ಥಾನ ಮಾಡಿಸಿ, ಅವನಿಗೆ ಗಾಯತ್ರೀ ಅಥವಾ ಸಾವಿತ್ರಿಯನ್ನು ಉಪದೇಶ ಮಾಡಬೇಕಾಗುವದು.

ಶಿಷ್ಯನು ಗುರುಸೇವೆ ಮಾಡಿದ ಹೊರತು ಯಾವ ಉಪದೇಶವನ್ನೂ ಮಾಡಬಾರದೆಂಬ ನಿಯಮವಿದೆ. ''ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ'' ಎಂದು ಗೀತೆಯು ಹೇಳುತ್ತದೆ. ಆದುದರಿಂದ ಬಟುವೂ ಗುರುಗಳ ಸೇವೆಮಾಡಬೇಕಾಗುತ್ತದೆ. ಮಂತ್ರೋಪದೇಶ ಮಾಡುವವರು ಅವನ ಸೇವೆಗೆ ಪ್ರಸನ್ನನಾಗಿ ''ತಮ್ಮಾ ಯಾಕೆ ಬಂದಿರುವಿ?'' ಎಂದು ಕೇಳುತ್ತಾನೆ. ಆದಕ್ಕೆ ಆ ಹುಡುಗನು ''ಸಾವಿತ್ರೀಂ ಭೋ ಅನುಬ್ರೂಹಿ'' ಎಂದು ಬೇಡಿಕೊಳ್ಳುವನು. ಆಗ ಗುರುವು ಬಟುವಿನ ಕೈಕಟ್ಟಿ ಬಲತೊಡೆಯ ಮೇಲಿರಿಸಿ ಅವನ ಬಲಗಿವಿಯಲ್ಲಿ ರಹಸ್ಯವಾಗಿ ಮಂತ್ರೋಪದೇಶ ಮಾಡುವನು. ಮತ್ತು ಹುಡುಗನ ಹೃದಯ ಪ್ರದೇಶವನ್ನು ಮುಟ್ಟಿ ''ನನ್ನಂತೆಯೇ

ನೀನಾಗು" ಎಂದು ಆಶೀರ್ವಾದ ಕೊಡುವನು. ಆ ಮೇಲೆ ಮೇಖಲಾ ಮತ್ತು ದಂಡಗಳನ್ನು ಧಾರಣಮಾಡಿಸಿ ಹೋಮ ಮುಗಿಸಿದರೆಂದರೆ ಉಪನಯನವು ಮುಗಿದಂತಾಗುವದು.

ಉಪದೇಶವೆಂದರೆ ಹತ್ತರ ಕೂಡಿಸಿಕೊಂಡು ತೋರಿಸುವದೆಂದರ್ಥ. ಗಾಯತ್ರೀ ಮಂತ್ರದೊಳಗೆ ವರ್ಣಿಸಲ್ಪಟ್ಟಿರುವ ಸೂರ್ಯ ಅಥವಾ ಪರಮಾತ್ಮ ತೇಜವು ಒಟ್ಟುವಿನಲ್ಲಿಯೇ ಇರುತ್ತದೆ. ಅದನ್ನು ಅವನಿಗೆ ತೋರಿಸಿಕೊಡುವ ದೆಂಬುದೇ ಗಾಯತ್ರ್ಯುಪದೇಶದ ಸರಲಾರ್ಥವು. ವಸ್ತುತಃ ಪರಮಾತ್ಮನ ಶುದ್ಧ ಚಿನ್ಮಯ ಸ್ವರೂಪವೇ ಎಲ್ಲರ ಹೃದಯದಲ್ಲಿರುವದರಿಂದ ಅದರ ಗುರ್ತು ಮಾಡಿಕೊಡುವದೇ ಈ ಉಪದೇಶದ ತಿರುಳಾಗಿದೆ. ಗಾಯತ್ರೀ ಧ್ಯಾನಮಾಡುವದೆಂದರೆ ನಿಜವಾಗಿ "ಆತ್ಮನಿವೇದನೆ"ಯೇ ಸರಿ. ಭಕ್ತಿ ಮಾರ್ಗದಲ್ಲಿ ಉಕ್ತವಾದ "ಸರ್ವಾರ್ಪಣ"ವೂ ಇದರಲ್ಲಿ ಅಡಕವಾಗಿದೆಯೆಂದು ಹೇಳಬಹುದು. ಸೃಷ್ಟಿಕರ್ತನಾದ ಚಿನ್ಮಯ ಪರಮಾತ್ಮನು ತನ್ನ ಬುದ್ಧಿಗೆ ಯಾವಾಗಲೂ ಸತ್ಕರ್ಮಗಳನ್ನೇ ಮಾಡುವಂತೆ ಪ್ರೇರಣೆ ಮಾಡಲಿ! ಸೃಷ್ಟಿ ಕರ್ತನಾದ ತೇಜೋಮಯ ಪರಮಾತ್ಮನು ಮಾನವ ಬುದ್ಧಿಯ ಉತ್ಪಾದಕನೂ, ಬೋಧಕನೂ, ಪ್ರೇರಕನೂ, ನಿಯಾಮಕನೂ, ಸಂಹಾರಕನೂ ಆಗಿರುವದರಿಂದ, ಅವನ ಇಚ್ಛೆಗೆ ಆಧೀನವಾಗಿಯೇ ನನ್ನ ಬುದ್ಧಿಯು ಯಾವಾಗಲೂ ಕೆಲಸ ಮಾಡಲಿ! ನಾನು ಅವನ ಕೈಯೊಳಗಿನ ಗೊಂಬೆ ಮಾತ್ರ. ಅವನು ಯಂತ್ರೀ, ನಾನು ಯಂತ್ರ, ಅವನು ನನ್ನನ್ನು ತನ್ನ ಕಾರ್ಯಕ್ಕಾಗಿ ಹೇಗೆ ಬೇಕೋ ಹಾಗೆ ಉಪಯೋಗ ಮಾಡಿಕೊಳ್ಳಲಿ! ನಮ್ಮ ದೇಹೇಂದ್ರಿಯಗಳಿಗೆಲ್ಲ ಪ್ರೇರಕ ಅಥವಾ ಚಾಲಕನಾಗಿರುವ ಚಿದ್ರೂಪ ಪರಮಾತ್ಮನನ್ನೇ ನಾನು ಸ್ಮರಿಸುತ್ತೇನೆ. ಶುದ್ಧ ಚಿದ್ರೂಪದಿಂದ ಬೆಳಗುತ್ತಿರುವ ಪರಮಾತ್ಮನೇ ನಮ್ಮಲ್ಲಿ ಚೈತನ್ಯರೂಪದಿಂದ ಪ್ರಕಟವಾಗುತ್ತಾನೆ. 'ನಾನೆಂ'ಬ ವಸ್ತುವು ಬೇರೆಯಾಗಿ ಇಲ್ಲವೆ ಇಲ್ಲ. ಅವನೇ ನಾನು!—ಎಂದು ಮೊದಲಾಗಿ ಸಾಧಕರು ತಮ್ಮ ತಮ್ಮ ಸಾಧನದ ಯೋಗ್ಯತೆಗನುಗುಣವಾಗಿ ಈ ಮಂತ್ರದ ಉಪಾಸನೆ ಮಾಡಬಹುದು. ಎಲ್ಲ ಭೂಮಿಕೆಯೊಳಗಿನ ಸಾಧಕರಿಗೂ ಇದು ಉಪಯುಕ್ತವಾಗುವಂತಿದೆ. "ದುಃಖರಹಿತನಾದ ಅದ್ವೀತಿಯ ಚಿನ್ಮಾತ್ರನೇ

ನಾನೆಂ''ಬ ಪರಮಾರ್ಥ ಸಾಧನೆಯ ಕೊನೆಯ ಸ್ಥಿತಿಯನ್ನೂ ಕೂಡ ಇದೇ ಮಂತ್ರವು ತೋರಿಸುವದೆಂಬುದು ವಾಚಕರ ಲಕ್ಷದಲ್ಲಿ ಬಂದಿರಲಿಕ್ಕೆ ಸಾಕು.

ಇಂತಹ ಅದ್ಭುತವಾದ ಮುಂಮ್ರೋಪದೇಶದಿಂದ ಬಾಲಕನಾದ ರಾಮನು ನಿಜವಾಗಿಯೂ ದ್ವಿಜನಾದನು. ಉಪದೇಶಮಾಡುವ ಬಾಳಕೃಷ್ಣ ಭಟ್ಟರು ರಾಮ ನಿಗೆ ತಂದೆಯೂ ಆಹುದು, ಉಪದೇಶಕರ್ತೃವೂ ಆಹುದು. ಉಪದೇಶ ಮಾಡುವವನಲ್ಲಿ ಮಂತ್ರಸಿದ್ಧಿಯಿರಬೇಕಾಗುತ್ತದೆ. ಎಂತೆಯೇ ಗಾಯತ್ರ್ಯುಪದೇಶ ಪೂರ್ವದಲ್ಲಿ ಗುರುವು ಕನಿಷ್ಠ ೧೦೦ ಗಾಯತ್ರೀ ಜಪವನ್ನು ಮಾಡಬೇಕೆಂಬ ನಿಯಮ ಮಾಡಿದ್ದಾರೆ ಆದರೆ ಬಾಳಕೃಷ್ಣ ಭಟ್ಟರು ವಿಧಿಯುಕ್ತವಾದ ಆಚಾರ ಮಾರ್ಗದಿಂದ ನಡೆದು ಗಾಯತ್ರೀ ಮಂತ್ರಸಿದ್ಧರಾದವರು. ಮಗನಿಗೆ ಆದು ಸಂಪೂರ್ಣ ಫಲಕಾರಿಯಾಗಿ ಪರಿಣಮಿಸಲೆಂಬ ಲವಲವಿಕೆಯುಳ್ಳವರು. ಶಿಷ್ಯನು ಅಂತಹ ಯೋಗ್ಯತೆ ಇದ್ದವನೇ ಎಂದ ಮೇಲೆ ಕೇಳುವದೇನು? ಶಿಷ್ಯನ ಸ್ವಾಭಾವಿಕವಾದ ಅಜ್ಞಾನವೆಲ್ಲ ಕ್ಷಣಾರ್ಧದಲ್ಲಿ ಓಡಿಹೋಗಿ, ರಾಮನು ಬ್ರಹ್ಮತೇಜದಿಂದ ಹೊಳೆಯುಹತ್ತಿದನು. ಮೊದಲೇ ಸುಂದರನಾದ ಆ ಬಾಲಕನು ಹೊಸದಾಗಿ ಧರಿಸಿದ ದಂಡ, ಮೇಖಲಾ, ಯಜ್ಞೋಪವಿತ ಮತ್ತು ಕೌಪೀನಗಳಿಂದ ಹೆಚ್ಚು ಮನೋಹರನಾಗಿ ತೋರಹತ್ತಿದನು. ತಲೆಯ ಮೇಲೆ ಶಿವೆಯಂತೂ ಬಲು ಚಂದವಾಗಿ ಕಾಣುತ್ತಿತ್ತು. ಹೀಗೆ ಓಜಸ್ವಿಯೂ ತೇಜಸ್ವಿಯೂ ಆದ ಬಾಲಕನು ಈ ಹೊಸ ಸಂಸ್ಕಾರದಿಂದ ಪರಿಬಿಟ್ಟ ಹಾವಿನಂತೆ ಕಾಣಹತ್ತಿದನು. ಅವನು ಉಪನಯನವಾದ ಮೇಲೆ ತನ್ನ ಸ್ವಾಭಾವಿಕವಾದ ಅತಿಮಧುರ ನಮ್ರತೆ ಮತ್ತು ವಿನಯಗಳಿಂದ ತಂದೆತಾಯಿಗಳಿಗೆ ನಮಸ್ಕಾರ ಮಾಡಿದಾಗ ಆ ಪಿತರರ ಅಂತಃಕರಣವು ಉಕ್ಕೇರಿಬಂದಿದ್ದರೆ ಆಶ್ಚರ್ಯವೇನು ? ಅಂತಹ ಮುದ್ದು ಮಗನ ಪಿತರಾಗುವ ಭಾಗ್ಯವು ತಮಗೆ ಬಂತೆಂದು ಅವರು ಹರ್ಷಾತಿರೇಕದಲ್ಲಿ ತೇಲಾಡಹತ್ತಿದರು.

———

ಶ್ರೀ ಶ್ರೀ ಚಿದಂಬರ ದೀಕ್ಷಿತ ಮಹಾರಾಜರು



ದೇಹಾವತರಣ:
ಶಕೆ ೧೬೮೦ ಕಾರ್ತಿಕ ವದ್ಯ ೬

ದೇಹಾವಸಾನ:
ಶಕೆ ೧೭೩೭ ಪೌಷ ಶುದ್ಧ ೪

೫ ಮುರಗೋಡ

ಪೂರ್ವಜನ್ಮ ಸಂಸ್ಕಾರಗಳಿಗನುಗುಣವಾದ ಪರಿಸ್ಥಿತಿಯು ಈ ಜನ್ಮದಲ್ಲಿ ಸಿಕ್ಕುವದೊಂದೇ ತಡ; ಜೀವಾತ್ಮನ ಪಾರಮಾರ್ಥಿಕ ಉನ್ನತಿಯು ಬಲು ಭರದಿಂದ ಆಗಹತ್ತುವದು. ನಮ್ಮ ಚರಿತ್ರನಾಯಕರು ಉಪನಯನದಿಂದ ಪರಿಬಿಟ್ಟ ಹಾವಿನಂತಾದರೆಂದು ಈ ಮೊದಲೇ ಹೇಳಿದ್ದೇವೆ. ಇನ್ನು ಅದಕ್ಕನುಕೂಲವಾದ ಎರಡನೆಯ ಹೆಜ್ಜೆಯನ್ನಿಡಬೇಕಾಗಿತ್ತು. ಅದು ಮುರಗೋಡ ಸಂಬಂಧದಿಂದ ಬಂತೆಂದು ಹೇಳಬಹುದು.

ಮುರಗೋಡವೆಂಬುದು ಬೆಳಗಾಂವ ಜಿಲ್ಲೆಯೊಳಗಿನ ಒಂದು ದೊಡ್ಡ ಹಳ್ಳಿಯಾಗಿದೆ. ಅದು ಬೆಳಗಾವ, ಕಲಾದಿಗಿ ರಸ್ತೆಗೆ ಸಮೀಪವಾಗಿದೆ. ಮೊದಲು ಅದು ಮುರಗೋಡ ಮಹಾಲಿನ ಮುಖ್ಯ ಸ್ಥಳವಾಗಿತ್ತು. ಆಗ ಅಲ್ಲಿ ವ್ಯಾವಾರವಾದರೂ ಚನ್ನಾಗಿ ಆಗುತ್ತಿತ್ತೆಂದು ಹೇಳಬಹುದು. ಈಗ ಮಹಲನ್ನು ರದ್ದುಗೊಳಿಸಿರುವದರಿಂದ ಅದರ ಮಹತ್ವವು ಸ್ವಾಭಾವಿಕವಾಗಿಯೇ ಕಡಿಮೆಯಾಗಿದೆ.

೩ ಊರು ದಿಕ್ಕಿಗೆ ಗುಡ್ಡಗಳಿದ್ದುದರಿಂದ ಮೂರು ಗುಡ್ಡ ಅಥವಾ ಮುರಗೋಡವೆಂಬ ಹೆಸರು ಈ ಊರಿಗೆ ಬಂದಿದೆಯೆಂದು ಹೇಳುತ್ತಾರೆ. ಅದಕ್ಕೆ 'ಅಮರಕಲ್ಯಾಣ'ವೆಂಬ ಸಂಸ್ಕೃತ ಹೆಸರು ಇತ್ತೆಂದು ತಿಳಿಯುತ್ತದೆ. ಮುರಗೋಡ ಸಮೀಪದಲ್ಲಿಯೇ, ವಾಯವ್ಯಕ್ಕೆ ಸುಮಾರು ಅರ್ಧ ಮೈಲಿನ ಮೇಲೆ ಗುಡ್ಡದ ಅಡಿಯಲ್ಲಿ ಒಂದು ರಮ್ಯವಾದ ಪ್ರದೇಶವಿದೆ. ಅಲ್ಲಿಯ ಭೂಮಿಯು ಕೆಂಪಾಗಿರುವದಲ್ಲದೆ ಅಲ್ಲಿಯ ಕೆರೆಯ ನೀರೂ ಕೆಂಪಾಗಿಯೇ ಇರುವದು. ಈ ಕಾರಣದಿಂದಲೇ ಆ ಪ್ರದೇಶಕ್ಕೆ 'ಕೆಂಗೇರಿ' ಎಂಬ ಹೆಸರುಂಟಾಗಿದೆ. ಇಂದಿಗೆ ಇದು ಚಿದಂಬರ ಭಕ್ತರಿಗೆ ಒಳ್ಳೇ ಪವಿತ್ರವಾದ ಕ್ಷೇತ್ರವೂ ಯಾತ್ರಾಸ್ಥಳವೂ ಆಗಿದೆ. ಪರಮಾರ್ಥ ಸಾಧಕರಿಗಂತೂ ಇದ

ಬಲು ಅನುಕೂಲವಾದ ಸ್ಥಾನವು. ಅಗಡಿಯ ಸುಪ್ರಸಿದ್ಧರಾದ ಶ್ರೀ ಶೇಷಾಚಲ ಸ್ವಾಮಿಗಳವರು ಸಿದ್ಧಿಯನ್ನು ಪಡೆದುದು ಇಲ್ಲಿಯೇ. ಪುರಾಣ ಪ್ರಸಿದ್ಧವಾದ ಸೊಗಲ ಕ್ಷೇತ್ರವು ಇಲ್ಲಿಂದ ಮೂರು ನಾಲ್ಕು ಮೈಲು ದೂರದಲ್ಲಿದೆ.

ಕೈಲಾಸನಾಥನಾದ ಶ್ರೀ ಶಂಕರನು 'ಚಿದಂಬರ' ನೆಂಬ ಹೆಸರಿನಿಂದ ಲೀಲಾಮನುಷ್ಯ ದೇಹಧಾರಿಯಾಗಿ ಶಾಲಿವಾಹನ ಶಕದ ೧೬೬೬ ರಲ್ಲಿ ಅವಿರ್ಭವಿಸಿದ್ದು ಈ ಮುರಗೋಡದಲ್ಲಿಯೇ. ಅವರ ಜನ್ಮದಿಂದ ಪಾವನವಾದ ಕೋಣೆಯು ಇನ್ನೂ ನೋಡಲಿಕ್ಕೆ ಸಿಕ್ಕುವಂತಿದೆ. ಅವರ ತಂದೆಯಾದ ಶ್ರೀ ಮಾರ್ತಂಡ ದೀಕ್ಷಿತರು ಈ ಕೆಂಗೇರಿಯಲ್ಲಿಯೇ ಬಲು ಕಠಿಣ ತರವಾದ ತಪಶ್ಚರ್ಯವನ್ನು ಮಾಡಿ ದೇವರಿಗೆ ಅವತಾರ ಮಾಡಿಸಿದರು! ಶ್ರೀ ಚಿದಂಬರ ಮಹಾಸ್ವಾಮಿಗಳವರು ಒಕ್ಕುಕಾಲ ವಾಸಮಾಡಿ ಆಸೇತು ಹಿಮಾಚಲದ ವರೆಗೆ ಪ್ರಸಿದ್ಧವಾದ ಆಶ್ಚರ್ಯಚಕಿತವಾದ ಅನಂತ ಲೀಲೆಗಳನ್ನು ಮಾಡಿ ತೋರಿಸಿದ್ದು ಈ ಪುಣ್ಯಭೂಮಿಯಲ್ಲಿಯೇ! ಸಾವಿರಾರು ಜನ ಭಕ್ತರು ದೂರುದೂರಿಂದ ಬಂದು ಮಹಾಸ್ವಾಮಿಗಳವರ ದರ್ಶನ ಪ್ರಸಾದಗಳಿಂದ ಉದ್ಧಾರವಾದುದು ಇಲ್ಲಿಯೇ! ಶ್ರೀಮಂತ ಬಾಜೀರಾವ ಪೇಶವೆ, ರಾಸ್ತೆ, ಕೆರ್ಲೋಸ್ಕರ, ಬಾವು ಗೋಖಲೆ ಮೊದಲಾದ ರಾಜಾಧಿರಾಜರೂ, ಸರದಾರರೂ, ಮುತ್ಸದ್ದಿಗಳೂ, ಸೇನಾನಿಗಳೂ ಮಹಾಸ್ವಾಮಿಗಳವರ ದರ್ಶನ ಲಾಭಕ್ಕಾಗಿ ಧಾವಿಸಿ ಬರುತ್ತಿದ್ದುದು ಇಲ್ಲಿಯೇ! ಲಕ್ಷಾವಧಿ ಭಕ್ತಜನರು ಶ್ರೀ ಚಿದಂಬರನ ನಾಮಗಾನ ಮಾಡುತ್ತ ಕುಣಿದಾಡಿದುದು ಇಲ್ಲಿಯೇ! ಹೆಚ್ಚೇನು? ಆ ಅವತಾರಿಕ ಮಹಾಪುರುಷನು ಇರುವ ವರೆಗೆ ಪ್ರತ್ಯಕ್ಷ ಭೂಕೈಲಾಸವೇ ಎಂದು ಪೆರೆದುದು ಇದೇ ಊರು!

ಶ್ರೀ ಚಿದಂಬರ ಮಹಾರಾಜರ ಹೆಸರನ್ನು ಕೇಳದ ಕನ್ನಡಿಗನೇ ಇರಲಿಕ್ಕಿಲ್ಲೆಂದರೂ ತಪ್ಪಾಗಲಿಕ್ಕಿಲ್ಲ. ಇವರಿಂದ ಒಂದಿಲ್ಲೊಂದು ರೀತಿಯಿಂದ ಉಪಕಾರ ಹೊಂದಿದ ಬ್ರಾಹ್ಮಣ ಕುಟುಂಬವೇ ಕರ್ನಾಟಕದಲ್ಲಿ ಇಲ್ಲೆಂದು ಎದೆತಟ್ಟಿ ಹೇಳಬಹುದು. ಬ್ರ. ಶ್ರೀ. ಶಿವಶಾಸ್ತ್ರಿ ಮೊದಲಾದ ಆಂಧ್ರರೂ ಕೂಡ ಮಹಾಸ್ವಾಮಿಗಳವರಿಂದ ಆಕರ್ಷಿತರಾಗಿದ್ದರು. ಭಕ್ತಶ್ರೇಷ್ಠನಾದ ರಾಜಾರಾಮನಿಗೆ ದೂರಿಂದಲೇ ದೃಷ್ಟಾಂತಕೊಟ್ಟು ಕರೆಸಿಕೊಂಡು ಉಪದೇಶ

ಮಾಡಿದರು. ಕಾಶಿ ಮೊದಲಾದ ಸ್ಥಾನಗಳಿಂದಲೂ ಬಂದ ಪಂಡಿತರು ಶ್ರೀ ಮಹಾಸ್ವಾಮಿಗಳವರಿಂದ ಕೃತಾರ್ಥರಾದರು. ಆದರೆ ಅವರ ಲೀಲಾನು ಗ್ರಹವನ್ನೆಲ್ಲ ವಿಸ್ತಾರವಾಗಿ ಇಲ್ಲಿ ಬರೆಯುತ್ತ ಕೂಡುವದು ಸಕ್ಯವಿಲ್ಲ. ಅದು ಯೋಗ್ಯವೂ ಆಗಲಾರದು. ಶ್ರೀ ಚಿದಂಬರ ಮಹಾರಾಜರ ಸ್ವತಂತ್ರವಾದ ಚರಿತ್ರೆಯೂ ಅಚ್ಚಾಗಿ ಪ್ರಕಟವಾಗಿದೆ. ಅವರ ಅಮಾನುಷ ಲೀಲೆಗಳನ್ನು ಸರಿಯಾಗಿ ವರ್ಣನೆ ಮಾಡುವದೂ ಶಕ್ಯವಿಲ್ಲ. ಮಣ್ಣಿನ ಆನೆಗೆ ಜೀವ ತುಂಬಿಸುವದು, ಸತ್ತ ವ್ಯಾಣಿಗಳನ್ನು ಬದುಕಿಸುವದು, ಅನೇಕ ವರ್ಷಗಳ ಹಿಂದೆಯೇ ಗಂಡನನ್ನು ಕಳೆದುಕೊಂಡು ವಿಧವೆಯಾದ ಸ್ತ್ರೀಗೆ ಮತ್ತೆ ಅದೇ ಗಂಡನನ್ನು ದಯವಾಲಿಸುವದು, ಕಲ್ಲು ಮಣ್ಣುಗಳನ್ನು ಹೊನ್ನಾಗಿ ಮಾಡಿ ತೋರಿಸುವದು, ದೂರುದೂರಿನ ಭಕ್ತರಿಗೆ ತಾವಿದ್ದಲ್ಲಿಂದಲೇ ದೃಷ್ಟಾಂತ ಕೊಟ್ಟು ಕರಿಸಿಕೊಂಡು ಉದ್ಧಾರ ಮಾಡುವದು, ಕಲಿಯುಗಕ್ಕೆ ದುರ್ಲಭವಾದ ಯಜ್ಞವನ್ನು ಯಥಾಸಾಂಗವಾಗಿ ಮಾಡಿ ತೋರಿಸುವದು — ಇವೇ ಮೊದಲಾದ ಅವರ ದೈವೀ ಚಮತ್ಕಾರಗಳೂ ಅಲೌಕಿಕ ಲೀಲೆಗಳೂ ಸುಪ್ರಸಿದ್ಧವಾಗಿವೆ. ಬೇಕಾದವರು ಅವುಗಳನ್ನೆಲ್ಲ ಅವರ ಚರಿತ್ರೆಯಲ್ಲಿಯೇ ಓದಿಕೊಳ್ಳಬೇಕು.

ತಪೋಮೂರ್ತಿಯಾದ ಶ್ರೀ ಮಾರ್ತಂಡ ದೀಕ್ಷಿತರು ದೇಹವಿಟ್ಟ ಮೇಲೆ ಅವರ ಅಂತ್ಯಸಂಸ್ಕಾರವನ್ನು ಕೆಂಗೇರಿಯಲ್ಲಿಯೇ ಮಾಡಲಾಯಿತು. ಮಾಡಿಕೆಯಂತೆ ಅವರ ಚಿತಾಭಸ್ಮವನ್ನು ಬದಿಗಿರಿಸುವಾಗ ನಳನಳಿಸುವ ಆರು ಔದುಂಬರ ವೃಕ್ಷಗಳು ಕಂಡು ಬಂದವು. ಶ್ರೀ ಚಿದಂಬರ ಮಹಾರಾಜರು ಅವುಗಳನ್ನು ಕೆತ್ತಿ ವ್ಯವಸ್ಥಿತವಾಗಿ ಬೇರೆಬೇರೆ ಕಡೆಗೆ ಹಚ್ಚಿ ಪೂಜೆಮಾಡಹತ್ತಿದರು. ಆ ಗಿಡಗಳ ಸುತ್ತೆಲ್ಲ ಒಂದು ಸುಂದರವಾದ ಕಟ್ಟೆಯು ಕಟ್ಟಲ್ಪಟ್ಟಿತು. ಅದು "ಔದುಂಬರ ಕಟ್ಟೆ"ಯೆಂದು ಇಂದಿಗೂ ಹೆಸರುವಾಸಿಯಾಗಿದೆ. ಈ ಕಟ್ಟೆಯ ಒಂದು ಪಾರ್ಶ್ವಕ್ಕೆ ಶ್ರೀ ಮಹಾಸ್ವಾಮಿಗಳವರ ತಾಯಿಯ ಸಮಾಧಿಯಿದೆ. ಕಟ್ಟೆಯ ಸಮೀಪದಲ್ಲಿಯೇ ಶ್ರೀ ಮಹಾಸ್ವಾಮಿಗಳವರಿಂದ ನಿರ್ಮಿತವಾದ ಶ್ರೀ ಮಾರ್ತಂಡೇಶ್ವರ ದೇವಾಲಯವು ಇರುತ್ತದೆ.

ಶಾಲಿವಾಹನ ಶಕದ ೧೭೩೮ರಲ್ಲಿ ಶ್ರೀ ಚಿದಂಬರ ಮಹಾರಾಜರು ತಮ್ಮ ಪಾರ್ಥಿವ ಶರೀರವನ್ನು ತ್ಯಾಗಮಾಡಿ ಸಚ್ಚಿದಾನಂದ ರೂಪದಲ್ಲಿ ಕೂಡಿ

ಹೋಗಬೇಕೆಂದು ಸಂಕಲ್ಪ ಮಾಡಿದರು. ಅನಂತಕೋಟಿ ಬ್ರಹ್ಮಾಂಡ ನಾಯಕನಾದ ಸದಾಶಿವನಿಗೆ ನಿಜವಾಗಿ ಮರಣವೆಲ್ಲಿ ? ಆದರೆ ಲೌಕಿಕದ ದೃಷ್ಟಿಯಿಂದ ಅವನೂ ದೇಹ ಧಾರಣೆಯನ್ನೂ ತ್ಯಾಗವನ್ನೂ ಮಾಡುವಂತೆ ತೋರಿಸುತ್ತಾನೆ. ಆದರೆ ಭಕ್ತರಿಗೆ ಸ್ವಾಮಿಯು ವಿಯೋಗವು ಎಂದಿಗೂ ಇಷ್ಟವಾಗಲಾರದು. ಶ್ರೀ ಚಿದಂಬರ ಮಹಾರಾಜರ ದೇಹತ್ಯಾಗದ ಆಶಯವು ಪ್ರಕಟವಾದೊಡನೆ ಅವರ ಹಿರಿಯ ಮಕ್ಕಳಾದ ಶ್ರೀ ದಿವಾಕರ ದೀಕ್ಷಿತರೂ, ಭಕ್ತರಾದ ಶಿವಶಾಸ್ತ್ರಿ ಮೊದಲಾದವರೂ ಈಗಲೇ ಅವತಾರ ಸಮಾಪ್ತಿಯನ್ನು ಮಾಡಬಾರದೆಂದು ಅಸಾಧ್ಯ ಹಟಹಿಡಿದರು. ಶ್ರೀ ಸ್ವಾಮಿಗಳವರು ಅವರಿಗೆ ಎಷ್ಟು ಪರಿಯಿಂದ ಹೇಳಿದರೂ ಕೇಳಲಿಲ್ಲ. ಕೊನೆಗೆ ಮಹಾರಾಜರು ತಮ್ಮ ಜಡಶರೀರವನ್ನು ಬಿಟ್ಟು ನಿಜಾನಂದೈಕ್ಯರಾಗಲು ದಿವಾಕರರೂ ಶಿವಶಾಸ್ತ್ರಿ ಮೊದಲಾದವರೂ ದುಃಖದಿಂದ ಎದೆ ಎದೆ ಬಡಕೊಂಡು ಅಳಹತ್ತಿದರಲ್ಲದೆ ಭೂಮ್ಯಾಕಾಶಗಳನ್ನು ಒಂದು ಮಾಡಹತ್ತಿದರು. ಅವರು ಆ ವಿಯೋಗ ದುಃಖವನ್ನು ಶಾಂತಪಡಿಸುವ ಸಲುವಾಗಿ ಶ್ರೀ ಮಹಾಸ್ವಾಮಿಗಳವರಿಗೆ ಮತ್ತೆ ಪ್ರಕಟವಾಗಬೇಕಾಯಿತು. ಅವರು ಯೋಗನಿದ್ರೆಯಿಂದ ಎಚ್ಚತ್ತವರಂತೆ ನಟಿಸಿ—"ತಮ್ಮಾ, ದಿವಾಕರಾ ಜ್ಞಾನಿಗಳಾದ ಶಾಸ್ತ್ರಿಗಳೇ ! ನಾನು ಎಂದಾದರೂ ಮರಣಕ್ಕೊಳಗಾಗತಕ್ಕವನೇ ? ಹೀಗೇಕೆ ಹುಚ್ಚರಂತೆ ಮಾಡುವಿರಿ ? ನಾನು ಎಲ್ಲಿಯೂ ಹೋಗಲ್ಲ. ಹೋಗುವದೂ ಇಲ್ಲ. ನಿಮ್ಮಂಥ ಭಕ್ತರಿಹಾರವನ್ನಗಲಿ ನಾನು ಹೋಗುವದುಂಟೆ ? ಅನಂತಕೋಟಿ ಬ್ರಹ್ಮಾಂಡಗಳು ನಾಶವಾಗಿ ಹೋದರೂ ನಾನು ಇಲ್ಲಿಯೇ ವಾಸವಾಗಿರುವೆನು ! ಕೆಂಗೇರಿ, ಗುರ್ಲಹೊಸೂರ ಇವೆರಡೂ ನನ್ನ ಪ್ರೀತಿಯ ಸ್ಥಾನಗಳು ಕೆಂಗೇರಿಯು ಕಾಶಿಗೆ ಸಮವಾದ ಕ್ಷೇತ್ರವು !" ಎಂದು ಹೇಳಿ ಭಕ್ತಜನರಲ್ಲಿ ಶ್ರದ್ಧಾಭಕ್ತಿಗಳನ್ನು ಹುಟ್ಟಿಸುವದಕ್ಕಾಗಿ ಏಳು ದಿವಸಗಳ ವರೆಗೆ ಔದುಂಬರ ವೃಕ್ಷದಿಂದ ಭಾಗೀರಥಿಯನ್ನು ಪ್ರಕಟಿಸಿದರಲ್ಲದೆ, ಅಲ್ಲಿಯ ಭಾವಿಯಲ್ಲಿ ಪಿಂಡಗಳನ್ನು ತೇಲಿಸಿ ಅದು ಪವಿತ್ರವಾದ ತೀರ್ಥವೆಂಬದನ್ನು ವ್ಯಕ್ತಗೊಳಿಸಿದರು.

ಪರಮಾತ್ಮನ ಮಾಯೆಯ ಅಗಾಧವಾಪದು ! ಅದು ಅವನ ಕೃಪೆಯಿಂದಲ್ಲದೆ ಬೇರೆ ಯಾವ ಉಪಾಯದಿಂದಲೂ ನಾಶವಾಗಲಾರದು.

ಶ್ರೀ ಏಕನಾಥ ಮಹಾರಾಜರಂಥ ಅಪರೋಕ್ಷಜ್ಞಾನಿಗೂ ಕೂಡ ಭಗವಂತನು "ಶ್ರೀಖಂಡ್ಯಾ" ಎಂಬ ಹೆಸರಿನಿಂದ ತಮ್ಮ ಮನೆಯೊಳಗೇ ಹನ್ನೆರಡು ವರ್ಷಗಳ ವರೆಗೆ ಸೇವೆ ಮಾಡುತ್ತಿರುವದು ತಿಳಿಯಬಾರದೆಂದ ಮೇಲೆ ಸಾಮಾನ್ಯರ ಪಾಡೇನು? ದಿವಾಕರ ದೀಕ್ಷಿತರೂ ಶಿವಶಾಸ್ತ್ರಿ ಮೊದಲಾದವರೂ ತಮ್ಮ ಸಮಕ್ಷನುದಲ್ಲಿಯೇ ತಮಗೆ ದೇಹವಿಡಗೊಡುವದಿಲ್ಲೆಂದು ಶ್ರೀ ಚಿದಂಬರ ಮಹಾಸ್ವಾಮಿಗಳು ಒಂದು ಹಂಚಿಕೆಯನ್ನು ಮಾಡಿದರು. ಅವರನ್ನು ಒಂದೊಂದು ಕೆಲಸದ ನಿಮಿತ್ತವಾಗಿ ಬೇರೆ ಬೇರೆ ಊರುಗಳಿಗೆ ಕಳಿಸಿ ಕೊಟ್ಟರು. ಶ್ರೀ ದಿವಾಕರ ಮೊದಲಾದವರು ಹಿಪ್ಪರಿಗೆ, ಪಂಢರಪೂರ ಮೊದಲಾದ ಊರುಗಳಿಗೆ ಹೋಗಿ ತಿರುಗಿ ಕೆಂಗೇರಿಗೆ ಬರುವಷ್ಟರಲ್ಲಿ ಮಹಾಸ್ವಾಮಿಗಳವರು ತಮ್ಮ ಅವತಾರ ಕಾರ್ಯ ಸಮಾಪ್ತಮಾಡಿ ಸೂರು ದಿನವಾಗಿ ಹೋಗಿತ್ತು. ಭಕ್ತರು ನಿರುಪಾಯರಾದರು. ದಿವಾಕರ ಮೊದಲಾದವರಿಗೆ ದುಃಖವು ಅಪರಿಮಿತವಾಯಿತು. ಆದರೂ ಕೆಲಸವೆಲ್ಲ ಮುಗಿದೇ ಹೋಗಿತ್ತು. ಯಾರೂ ಏನೂ ಮಾಡುವಂತಿರಲಿಲ್ಲ. ಮಹಾಸ್ವಾಮಿಗಳವರ ಜಡಶರೀರವೂ ಕೂಡ ದಹನವಾಗಿ ಹೋಗಿತ್ತು! ಆದರೆ ದಿವಾಕರರಾದರೂ ನಾನಾರ್ಥರಾಗಿದ್ದಿಲ್ಲ. ಅವರು ಪ್ರತ್ಯಕ್ಷ ಸೂರ್ಯನಾರಾಯಣನ ಅವತಾರವೇ ಆಗಿದ್ದರೆಂದು ಭಾವಿಕರ ತಿಳಿವಳಿಕೆಯಿದೆ. ಇಂಥ ಅನಿಷ್ಟ ಸಂಗತಿಯು ತಮ್ಮ ಪರೋಕ್ಷದಲ್ಲಿ ಹೇಗೆ ಸಂಭವಿಸಿತೆಂದು ಅವರು ಒಳ್ಳೇ ಹಟದಿಂದ ಅನ್ನ ನೀರುಗಳನ್ನು ಬಿಟ್ಟು ಆಕ್ರೋಹ ಮಾಡಹತ್ತಿದರು. ಮಹಾಸ್ವಾಮಿಗಳು ತಾತ್ಕಾಲಿಕವಾಗಿ ಪ್ರಕಟವಾಗಿ ಪ್ರಸನ್ನತೆಯಿಂದ — "ಪ್ರಿಯಪುತ್ರನೇ, ಲೌಕಿಕಾರ್ಥವಾಗಿ ನಾನೀಗ ದೇಹವಿಟ್ಟಿರುವೆನು. ಕಾಲಕ್ಕನುಗುಣವಾಗಿ ನಡೆಯಬೇಕಾಗುತ್ತದೆ. ನೀನು ವ್ಯರ್ಥವಾಗಿ ಹಟಮಾಡಬೇಡ. ದುಃಖವನಾದರೂ ಮಾಡಬೇಡ. ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಅಶ್ವತ್ಥವೃಕ್ಷದ ಬುಡದಲ್ಲಿ ಲಿಂಗರೂಪದಿಂದ ನಾನೇ ಪ್ರಕಟವಾಗಿರುವೆನು. ಅದನ್ನು ತಂದು ಇಲ್ಲಿ ಸ್ಥಾಪಿಸು. ಅಂದರೆ ಎಂದಿನಂತೆ ಭಕ್ತರ ಅಭಿಷ್ಟಗಳನ್ನು ಪೂರ್ಣಮಾಡುತ್ತ ಇಲ್ಲಿಯೇ ಸ್ಥಿರವಾಗಿ ಉಳಿಯುವೆನು" ಎಂದು ಹೇಳಿ ಅಂತರ್ಹಿತರಾದರು. ದಿವಾಕರರು ಅದೇ ಮೇರೆಗೆ ಭವ್ಯವಾದ ದೇವಾಲಯವನ್ನು ಕಟ್ಟಿಸಿ, ಸುಬ್ರಹ್ಮಣ್ಯದಿಂದ ತಂದ ಶ್ರೀ ಚಿದಂಬರ ಲಿಂಗವನ್ನು ಅದರೊಳಗೆ ಯಥಾವಿಧಿಯಾಗಿ ಸ್ಥಾಪನೆಮಾಡಿ

ದರು. ಅಂದಿನಿಂದ ಕೈಲಾಸದೊಡೆಯನಾದ ಶ್ರೀ ಶಿವಚಿದಂಬರನು ಇಲ್ಲಿ ಲಿಂಗರೂಪಧಾರಿಯಾಗಿ ನೆಲಿಸಿ ಭಕ್ತರ ಬಯಕೆಗಳನ್ನು ಪೂರ್ಣ ಮಾಡುತ್ತ ಇರುವನು.

ಈಗಾದರೂ ಅಲ್ಲಿ ನಿತ್ಯ ನೈಮಿತ್ತಿಕ ಮತ್ತು ವಾರ್ಷಿಕ ಉತ್ಸವಗಳು ವಿಜೃಂಭಣೆಯಿಂದ ನಡೆಯುತ್ತಿವೆ. ಮಾರ್ಗಶೀರ್ಷ ಮಾಸದಲ್ಲಿ ಶುಕ್ಲಪಕ್ಷ ದೊಳಗೆ ನಡೆಯುವ ಶೈವಾಗಮೋಕ್ತ ಉತ್ಸವಕ್ಕೆ ಸಾವಿರಾರು ಜನರು ಕೂಡಿ ಚಿದಂಬರನ ಮಹಿಮೆಯನ್ನು ಕೊಂಡಾಡುತ್ತಾರೆ. ಸ್ವಲ್ಪದರಲ್ಲಿ ಹೇಳುವ ದಾದರೆ, ಕೆಂಗೇರಿಯು ಚಿದಂಬರನ ವಾಸ್ತವದಿಂದ ಮೇರುಗಿರಿಯಾಗಿ ಕಂಗೊಳಿಸುತ್ತಿರುವದೆಂದು ನಿರ್ಭಯವಾಗಿ ಹೇಳಬಹುದು.

೬ ಪ್ರಾಥಮಿಕ ಶಿಕ್ಷಣವೂ ಭಾಗವತ ಸಪ್ತಾಹವೂ

ಮನೆಯಲ್ಲಿ ಸ್ತ್ರೀಯ ಸಂಸ್ಕೃತಿಯು ಸಂಗೋಪನವಾಗುತ್ತಿದ್ದು, ಮನೆಯೊಳಗಿನ ಹುಡುಗರಿಗೆ ಸರಿಯಾದ ಕಿತ್ತೆಯನ್ನು ಹಾಕಿಕೊಡುವ ದಕ್ಷತೆಯನ್ನು ತೆಗೆದುಕೊಂಡಿ, ಬುದ್ಧಿವಂತರಾದ ಹುಡುಗರ ಮನಸ್ಸನ್ನು ತಾನಾಗಿಯೇ ಯೋಗ್ಯವಾದ ರೀತಿಯಿಂದ ವಿಕಾಸವಾಗುತ್ತ ಹೋಗುತ್ತದೆ. ಈಗಿನ ಕಾಲದಲ್ಲಿ ನಿಧಾನ ಪಟ್ಟಣ ಮತ್ತು ಪಟ್ಟಣಗಳಲ್ಲಿರುವ ಹುಡುಗರಿಗಂತೂ ಸರಿಯಾದ ಕಿತ್ತೆಯು ಸಿಕ್ಕುವದೇ ಇಲ್ಲ. ಯಾಕೆಂದರೆ ಮನೆಯೊಳಗಿನ ಹಿರಿಯರು, ಶಾಲೆಯೊಳಗಿನ ಶಿಕ್ಷಕರು — ಈಗೆ ದ್ವಿಮುಖವಾದ ವ್ಯವಸ್ಥೆಯಿಂದ ಹುಡುಗರನ್ನು ಸರಿಯಾದ ಹಾದಿಗೆ ಹಚ್ಚುವ ಕರ್ತವ್ಯವು ಯಾರದು ಎಂಬ ಪ್ರಶ್ನೆಗೆ ಉತ್ತರವನ್ನೇ ಕೊಡುವವರು ದಿಕ್ಕಿಲ್ಲದಂತಾಗಿದೆ. ಮೇಲೆ ಸಿನೇಮಾ, ನಾಟಕ, ಚಹದ ಅಂಗಡಿ, ಸಂತೆ ಮೊದಲಾದವುಗಳ ಪರಿಣಾಮವು ಎಳೆಯ ಮನಸ್ಸಿನ ಬಾಲಕರ ಮೇಲೆ ನೈಸರ್ಗಿಕವಾಗಿ ಆಗಿ ಹುಡುಗರು ಅಡ್ಡಹಾದಿಯನ್ನೇ ಹಿಡಿಯುವ ಸಂಭವವು ಹೆಚ್ಚಾಗಿರುತ್ತದೆ.

ಆದರೆ ಈಗ ೭೦ ೮೦ ವರ್ಷಗಳ ಪೂರ್ವದಲ್ಲಿ ಈ ಪರಿಸ್ಥಿತಿಯಿರಲಿಲ್ಲ. ಬಾಳಕೃಷ್ಣಪಂತರು ಒಳ್ಳೇ ನಿಷ್ಠೆಯಿಂದ ವೈದಿಕ ಧರ್ಮಾಚರಣೆಯನ್ನು ಮಾಡುತ್ತಿದ್ದರು. ರಾತ್ರಿಯಲ್ಲಿ ಹುಡುಗರು ಮತ್ತು ಹೆಂಗಸರನ್ನು ಕೂಡಿಸಿಕೊಂಡು ಪುರಾಣ ಹೇಳುವರು. ಪ್ರತಿದಿವಸ ಸೂರ್ಯೋದಯದ ಪೂರ್ವದಲ್ಲಿ ಸ್ನಾನಮಾಡಿ, ಸಂಧ್ಯಾಪೂಜಾದಿ ನಿತ್ಯಕರ್ಮಗಳನ್ನು ಅವರು ತಪ್ಪದೇ ಮಾಡುವರು. ಶುಚಿರ್ಭೂತತನದ ಮೇಲೆ ಅವರದು ಒಳ್ಳೆಯ ಕಟಾಕ್ಷ. ಆಗಾಗ್ಗೆ ಬರುವ ವ್ರತ, ನಿಯಮ ಮೊದಲಾದವುಗಳನ್ನು ಒಳ್ಳೇ ಆಸ್ಥೆಯಿಂದ ಪಾಲಿಸುವರು. ಹೀಗಾಗಿ ಅವರ ಮನೆಯಲ್ಲಿ ಒಂದು ಉದಾತ್ತ ವಾತಾವರಣವು ಉಂಟಾಗಿತ್ತೆಂದು ಹೇಳಬಹುದು.

ನಮ್ಮ ಚರಿತ್ರನಾಯಕರ ಸ್ಮರಣಶಕ್ತಿಯು ಅತ್ಯದ್ಭುತವಾಗಿದ್ದುದರಿಂದ ಅವರು ೪—೫ ದಿವಸಗಳಲ್ಲಿಯೇ ಸಂಧ್ಯಾವಂದನೆಯನ್ನು ಸಾಂಗಮಾಡಿ ಬಿಟ್ಟರು. ಮನೆಯೊಳಗೆ ಸಹಜವಾಗಿಯೇ ಅವರ ಕಿವಿಯ ಮೇಲೆ ಬೀಳ ತೊಡಗಿದ ರಾಮರಕ್ಷಾದಿ ಸ್ತೋತ್ರ ಮೊದಲಾದವುಗಳು ಅವರಿಗೆ ಸುಲಭವಾಗಿಯೇ ಮುಖೋದ್ಗತವಾಗಿ ಬಿಟ್ಟವು. ಮೂತ್ರವಿಸರ್ಜನೆಗೆ ಹೋದಾಗ ನೀರು ಒಯ್ಯುವುದು ಇವೇ ಮೊದಲಾದ ಶೌಚಾಚಾರಗಳನ್ನು ಅವರು ಅಲ್ಪಕಾಲದಲ್ಲಿಯೇ ಆಚರಣೆಯೊಳಗೆ ತಂದರು. ಬಾಲಕರಲ್ಲಿ ಅನುಕರಣ ಶಕ್ತಿಯು ಹೆಚ್ಚಾಗಿರುತ್ತದೆಂದು ಮಾನಸಶಾಸ್ತ್ರಜ್ಞರು ಹೇಳುತ್ತಾರೆ. ಎಂತೆಯೇ ಅನುಕರಣವು ಶಿಕ್ಷಣದ ಸಾಧನವಾಗುವಂತೆ ಪಾಶ್ಚಾತ್ಯ ದೇಶಗಳಲ್ಲಿ ಏರ್ಪಾಟು ಮಾಡಿರುತ್ತಾರೆ ಮನೆಯೊಳಗಿನ ಹಿರಿಯ ಜನರನ್ನು ನೋಡಿ ನಮ್ಮ ಚರಿತ್ರನಾಯಕರು ಇದರ ಲಾಭವನ್ನು ಪೂರ್ತಿಯಾಗಿ ಹೊಂದಿದರು.

ಈ ಕಾಲದಲ್ಲಿ ಬಾಳಕೃಷ್ಣಭಟ್ಟರ ಎರಡನೆಯ ಮಕ್ಕಳಾದ ನಾರಾಯಣ ಭಟ್ಟರು ಮುರಗೋಡದಲ್ಲಿ ಪ್ರಾಥಮಿಕ ಶಿಕ್ಷಕರಾಗಿದ್ದರು. ಗೋಕಾಕದಲ್ಲಿ ಕನ್ನಡ ಶಾಲೆಗಳು ಇದ್ದಿಲ್ಲವೆಂತಲ್ಲ. ಆದರೂ ತಮ್ಮನ ಶಿಕ್ಷಣವು ತಮ್ಮ ಮೇಲ್ವಿಚಾರಣೆಯ ಕೆಳಗೇ ಆಗಬೇಕೆಂದು ನಾರಾಯಣಭಟ್ಟರ ಮನಸ್ಸಿನಲ್ಲಿ ಇದ್ದುದರಿಂದ ನಮ್ಮ ಚರಿತ್ರನಾಯಕರು ಪ್ರಾಥಮಿಕ ಶಿಕ್ಷಣ ಪಡೆಯುವ ದಕ್ಕಾಗಿ ಶಕೆ ೧೭೮೫ರಲ್ಲಿ ಮುರಗೋಡಿಗೆ ಕರೆದೊಯ್ಯಲ್ಪಟ್ಟರು. ಈ ಮುರಗೋಡ ವಾಸವೇ ಅವರ ಜೀವನಕ್ಕೆ ಹೊಸ ರೂಪವನ್ನು ಕೊಟ್ಟಿತೆಂದು ಈ ಮೊದಲೇ ಹೇಳಿದ್ದೇವೆ.

ನಮ್ಮ ಚರಿತ್ರನಾಯಕರ ಬುದ್ಧಿಯು ಒಳ್ಳೇ ಚುರುಕಾದುದೂ ತೀಕ್ಷ್ಣವಾದುದೂ ಆಗಿತ್ತು. ಆದರೆ ಅವರೂ ಯಾವಾಗಲೂ ಪುಸ್ತಕಕ್ಕೆ ಅಂಟಿಕೊಂಡಿರುವ ''ಪುಸ್ತಕಕೀಟ''ವಾಗಿದ್ದಿಲ್ಲ ತಿರುಗಿ ಕೇಳಿದರೆ ಆಟದ ಕಡೆಗೇ ಅವರ ಪ್ರವೃತ್ತಿಯು ಹೆಚ್ಚಾಗಿತ್ತು. ಶಾಲೆಯೊಳಗಾದಷ್ಟೇ ಅವರ ಅಭ್ಯಾಸವು. ಮನೆಯೊಳಗೆ ಅವರು ಎಂದೂ ಓದುತ್ತಿರಲಿಲ್ಲ. ಆದರೂ ತಮ್ಮ ವರ್ಗದೊಳಗೆ ಅವರೂ ಯಾವಾಗಲೂ ಒಂದನೇ ನಂಬರವನ್ನೇ ಪಡೆಯುತ್ತಿದ್ದರು. ಆದನ್ನು ಅವರು ಎಂದೂ ಕಳೆದುಕೊಳ್ಳುತ್ತಿದ್ದಿಲ್ಲ. ಸರ್ವಾಂಗೀಣವಾದ

ಜಾಣತನವನ್ನು ತೋರಿಸುವದಂತೂ ಅವರ ವೈಶಿಷ್ಟ್ಯವೇ ಆಗಿತ್ತು. ಅವರು ಬರೀ ಪುಸ್ತಕದೊಳಗಿನ ಜ್ಞಾನದ ಕಡೆಗೆ ವಿಶೇಷ ಗಮನ ಕೊಡದೆ, ಜೀವನವನ್ನು ಎಲ್ಲ ವಿಧದಿಂದಲೂ ಅಭ್ಯಾಸ ಮಾಡುತ್ತಿದ್ದರು. ಅವರ ಮೇಲ್ಬುದ್ಧಿಯ ಕೌತುಕವನ್ನು ಮಾಡುವಂಥ ಪ್ರಸಂಗಗಳು ಅವರ ಶಿಕ್ಷಕರಿಗೂ ಸಹಪಾಠಿಗಳಿಗೂ ಅನೇಕಸಲ ಬರುತ್ತಿದ್ದವು. ಅವರ ನಿರೀಕ್ಷಣ ಶಕ್ತಿಯಂತೂ ಅನುಪಮವಾಗಿತ್ತು. ವರ್ಗದೊಳಗೆ ಕಲಿಸುವ ಭಾಷೆ, ಗಣಿತ, ಇತಿಹಾಸ, ಭೂಗೋಲ, ಸೃಷ್ಟಿವಿಜ್ಞಾನ ಇವೇ ಮೊದಲಾದ ವಿಷಯಗಳನ್ನು ಅವರು ಲೀಲಾಜಾಲವಾಗಿ ತಿಳಿದುಕೊಂಡು ನೆನಪಿಡುತ್ತಿದ್ದರು. ಹೀಗಾಗಿ ಮುರಗೋಡಿಗೆ ಬಂದ ೩—೪ ವರ್ಷಗಳಲ್ಲಿ ಕನ್ನಡ ಮತ್ತು ಮರಾಠಿ, ಭಾಷೆಗಳನ್ನು ಚನ್ನಾಗಿ ಕಲಿತುಬಿಟ್ಟರು. ಮತ್ತು ತಮ್ಮ ವಯಸ್ಸಿನ ೧೦ ನೆಯ ವರುಷವು ದಾಟುವದರೊಳಗಾಗಿಯೇ ಅವರು ನಾಲ್ಕನೆಯ ಇಯತ್ತೆಯನ್ನು ದಾಟಿದ್ದರು

ಮಹಾರಾಜರ ಲೌಕಿಕ ಶಿಕ್ಷಣವು ಈ ಪರಿಯಾಗಿ ವೃದ್ಧಿಂಗತವಾಗುತ್ತಿರುವಾಗಲೇ ಅವರ ಅಂತಃಕರಣವನ್ನು ಮಾರ್ಪಡಿಸುವ ಧಾರ್ಮಿಕ ಶಿಕ್ಷಣವೂ ಅನಾಯಾಸವಾಗಿಯೇ ಸಿಕ್ಕುವ ಅವಕಾಶವೊದಗಿಬಂತು. ಸಂಕೇಶ್ವರದ ಸುಪ್ರಸಿದ್ಧರಾದ ವೇ ಮೂ. ನರಸಿಂಹ ಶಾಸ್ತ್ರಿಗಳೆಂಬವರು ಮುರಗೋಡಿಗೆ ಬಂದರು. ಮತ್ತು ಅಲ್ಲಿಯ ಭಾವಿಕ ಜನರನ್ನೆಲ್ಲ ಕೂಡಿಸಿ ತಾವು ಮಾಡಜೇಕೆಂದಿರುವ ಭಾಗವತ ಸಪ್ತಾಹದ ವಿಚಾರವನ್ನು ಅವರ ಮುಂದಿಟ್ಟರು. ಭಾಗವತನ ಸಪ್ತಾಹದ ಮಹಿಮೆಯು ಅಷ್ಟಿಷ್ಟಲ್ಲ. ಅದರ ಶ್ರವಣವೊಂದರಿಂದಲೇ ಪರೀಕ್ಷಿತರಾಜನು ಮುಕ್ತನಾದನು! ಭಗವಾನ್ ಶ್ರೀ ಕೃಷ್ಣ ಪರಮಾತ್ಮನು ಈ ಜಗತ್ತನ್ನು ಬಿಟ್ಟು ಹೋಗುವ ಮೊದಲು ತನ್ನ ಸ್ವಂತ ತೇಜಸ್ಸನ್ನೇ ಭಾಗವತರಲ್ಲಿಟ್ಟು ಹೋದನೆಂದು ಭಾಗವತ ಮಹಾತ್ಮ್ಯದಲ್ಲಿ ಒರೆದಿದೆ. ಭಾಗವತ ಸಪ್ತಾಹದಿಂದ ಎಲ್ಲ ಮಂತ್ರ, ತಂತ್ರ, ತೀರ್ಥ, ಯಾತ್ರೆ, ಕ್ಷೇತ್ರ, ಪುರಾಣಪಾಚನ ಮತ್ತು ಅನುಷ್ಠಾನುಗಳ ಫಲವೂ ಅನಾಯಾಸವಾಗಿ ಸಿಕ್ಕುತ್ತದೆಂದು ಅಲ್ಲಿ ವರ್ಣಿಸಿರುತ್ತಾರೆ. ಭಾಗವತವನ್ನು ಬೇಕಾದಾಗ ಓದಬಹುದಾದರೂ ಜೇಷ್ಠದಿಂದ ಮಾರ್ಗಶೀರ್ಷದ ವರೆಗಿನ ತಿಂಗಳುಗಳು ಪ್ರಶಸ್ತವಾಗಿವೆ. ಅದರೊಳಗೂ ಭಾದ್ರಪದ ಮಾಸದಲ್ಲಿ ಶುಕ್ಲ ಅಷ್ಟಮಿಯಿಂದ

ಪೌರ್ಣಮೆಯ ವರೆಗಿನ ಸಪ್ತಾಹವು ಒಳ್ಳೇ ಪ್ರಸಿದ್ಧವೂ ಪುಣ್ಯಕಾರಕವೂ ಆಗಿರುತ್ತದೆ. ಭಾವಿಕರಲ್ಲಿ ಇಂದಿಗೂ ಈ ಕಾಲದಲ್ಲಿ ಭಾಗವತ ಸಪ್ತಾಹವನ್ನು ಏರ್ಪಡಿಸುವ ಸಾಂಪ್ರದಾಯವಿದೆ.

ತಾನಾಗಿಯೇ ನಡೆದು ಬಂದಿರುವ ಈ ಸುಪ್ರಸಂಗವನ್ನು ಮುರಗೋಡದ ಜನರು ಕಳೆದುಕೊಳ್ಳುವರೇ ? ಕೂಡಲೇ ವಿಠ್ಠಲ ಮಂದಿರದಲ್ಲಿ ಸಪ್ತಾಹದ ಏರ್ಪಾಟಾಯಿತು. ಗುಡಿಯ ಮುಂದೆ ಮಂಟಪವನ್ನು ಹಾಕಿ ಶ್ರೋತೃಗಳಿಗೆ ಕೂಡಲಿಕ್ಕೆ ಅವಕಾಶವನ್ನು ಕಲ್ಪಿಸಿದರು. ವಾಡಿಕೆಯಂತೆ ಸುತ್ತುಮುತ್ತಲಿನ ಹಳ್ಳಿಗಳ ಭಾವಿಕ ಜನರಿಗೆಲ್ಲ ಈ ಸಪ್ತಾಹದ ವೃತ್ತಾಂತವನ್ನು ಹೇಳಿಕಳಿಸಲಾಯಿತು. ಜನರು ತಂಡತಂಡವಾಗಿ ಬಂದು ಕೂಡಿದರು. ಯಥಾವಿಧಿಯಾಗಿ ಭಾಗವತ ಸಪ್ತಾಹ ಪಾರಾಯಣವು ಸುರುವಾಯಿತು. ವ್ರಾತಃಕಾಲದಲ್ಲಿ ಸ್ನಾನಸಂಧ್ಯಾ, ಕೃಷ್ಣಪೂಜೆ ಮೊದಲಾದವುಗಳ ಮೇಲೆ ಸೂರ್ಯೋದಯದಿಂದ ಒಂಬತ್ತು ತಾಸಿನ ವರೆಗೆ ಪಾರಾಯಣವು. ನಡುವೆ ಮಧ್ಯಾಹ್ನದಲ್ಲಿ ಎರಡು ಗಳಿಗೆ ವಿರಾಮ. ಪಾರಾಯಣ ಮುಗಿದ ಮೇಲೆ ಉಪಹಾರ. ಆ ಮೇಲೆ ತುಸು ವಿಶ್ರಾಂತಿ. ಆದಾದ ಮೇಲೆ ಆ ದಿವಸ ಪಾರಾಯಣ ಮಾಡಿದ ಕಥೆಯನ್ನು ಜನರಿಗೆ ತಿಳಿಸಿ ಹೇಳುವದು. ಸಾಯಂಕಾಲಕ್ಕೆ ಭಜನ ಕೀರ್ತನ ಮೊದಲಾದವುಗಳು. ಈ ಪ್ರಕಾರ ಕಾರ್ಯಕ್ರಮವು ಒಳ್ಳೇ ವಿಜೃಂಭಣೆಯಿಂದ ಸಾಗಿ ಎಂಟನೆಯ ದಿನ ಉದ್ಯಾಪನವಾಗಿ ಬ್ರಾಹ್ಮಣ ಭೋಜನವಾದ ಮೇಲೆ ಸಪ್ತಾಹ ಸಮಾರಂಭವು ಕೊನೆಗಂಡಿತು.

ನಮ್ಮ ಚರಿತ್ರನಾಯಕರು ಆ ಕಾಲಕ್ಕೆ ತೀರ ಚಿಕ್ಕವರಾಗಿದ್ದರು. ಅವರ ವಯಸ್ಸು ಆಗ ೧೦ ಮಾತ್ರ. ಆದರೂ ಅವರು ಒಳ್ಳೇ ಆಸ್ಥೆಯಿಂದ ಆದರಲ್ಲಿ ಭಾಗವಹಿಸಿದರು. ಭಾಗವತದೊಳಗಿನ ಭಕ್ತಿ ರಸಯುಕ್ತವಾದ ಕಥೆಗಳನ್ನು ಅವರು ಒಳ್ಳೇ ಏಕಾಗ್ರತೆಯಿಂದ ಕೇಳಿದರು. ಕೀರ್ತನ ಭಜನಗಳಲ್ಲಿ ಅವರು ಪ್ರೇಮದಿಂದ ಭಗವದ್ಗುಣ ಗಾಯನವನ್ನು ಮಾಡುತ್ತ ಕುಣಿದಾಡಿದರು. ಬ್ರ. ಶ್ರೀ. ನರಸಿಂಹಶಾಸ್ತ್ರಿಗಳವರು ಒಳ್ಳೇ ಪಂಡಿತರೂ ವಾಗ್ಮಿಗಳೂ ಆಗಿದ್ದರು. ಅವರ ಸುಮಧುರವಾದ ಕಂಠವು ಕೋಗಿಲೆಯನ್ನು ಕೂಡ ನಾಚಿಸುವಂತಿತ್ತು. ಅವರು ಸರಾಗವಾಗಿ ಹಾಡುವದರಲ್ಲಿಯೂ

ನಿಪುಣರಾಗಿದ್ದರು. ತಂಬೂರಿಯ ಮನೋಹರವಾದ ನಾದದೊಡನೆ ಅವರು ತಮ್ಮ ಸಂಗೀತದ ಸ್ವರದಿಂದ ಪ್ರವಚನ ಮಾಡಹತ್ತಿದರೆಂದರೆ ಶ್ರೋತೃಗಳು ತಲೆದೂಗಹತ್ತುತ್ತಿದ್ದರು ರಸಿಕರ ಮನಸ್ಸನ್ನು ಅವರು ಕ್ಷಣಾರ್ಧದಲ್ಲಿ ಸೆಳೆದುಕೊಂಡು ಒಡುತ್ತಿದ್ದರು. ಅವರು ಬರೇ ಪುಸ್ತಕ ಪಂಡಿತರಾಗಿರದೆ ಸ್ವತಃ ಭಕ್ತಿರಸದಲ್ಲಿ ತೇಲಾಡುವವರೂ ಆಗಿದ್ದರು. ಆದುದರಿಂದ ಅವರ ಪುರಾಣವೆಂದರೆ ಅದೊಂದು ಅಮೃತದ ಝರಿಯೇ ಆಗಿಬಿಡುತ್ತಿತ್ತು. ಅವರ ಏಳು ದಿವಸಗಳ ಪುರಾಣದ ಪರಿಣಾಮವು ಎಲ್ಲರ ಮೇಲೂ ಚೆನ್ನಾಗಿಯೇ ಆಯಿತು. ಅದರಲ್ಲಿಯೂ ಬಾಲವಯಸ್ಸಿನ ನಮ್ಮ ಚರಿತ್ರನಾಯಕರ ಮನಸ್ಸಿನ ಮೇಲಂತೂ ಅದು ಸ್ಥಿರವಾದ ಆಕ್ರಮಣವನ್ನೇ ಮಾಡಿಬಿಟ್ಟಿತೆಂದು ಹೇಳಬಹುದು. ಭಾಗವತದೊಳಗೆ ಜ್ಞಾನಿಗಳಾದ ಅನೇಕ ಭಗವದ್ಭಕ್ತರ ಚರಿತ್ರೆಗಳು ಬಂದಿದ್ದರೂ, ಪಂಚಮಸ್ಕಂಧದೊಳಗಿನ ಜಡಭರತನ ಕಥೆಯು ಮಹಾರಾಜರ ಮನಸ್ಸನ್ನು ಸಂಪೂರ್ಣವಾಗಿ ಸೆಳಕೊಂಡುಬಿಟ್ಟಿತು. ನಿಜವಾಗಿಯೂ ಜಡಭರತನ ಕಥೆಯು ಅಲೌಕಿಕವೂ ಒಂದು ವಿಶಿಷ್ಟ ವಾದರಿಯದೂ ಆಗಿದೆ. ಅವನ ಜೀವನವು ಅನೇಕ ರೀತಿಯಿಂದ ಅಭ್ಯಾಸ ಮಾಡಲಿಕ್ಕೂ ಅನುಕರಣ ಮಾಡಲಿಕ್ಕೂ ತಕ್ಕದ್ದಾಗಿದೆ. ಅವನು ಭಾರತದ ಸಮ್ರಾಟನಾಗಿದ್ದರೂ, ಕೊನೆಯ ವರೆಗೆ ವಿಷಯ ಸುಖಕ್ಕೆ ಮರುಳಾಗಿ ಕೂಡ್ರದೆ, ಸಾಮ್ರಾಜ್ಯ ಲಕ್ಷ್ಮಿಯನ್ನು ತಾನಾಗಿಯೇ ಕಾಲಿನಿಂದೊದ್ದು ಅತ್ಯುತ್ಕಟ ವೈರಾಗ್ಯದಿಂದ ಮನೆಬಿಟ್ಟು ತಪೋವನವನ್ನು ಸೇರಿದ ಮಹಾ ತ್ಯಾಗಿಯು. ಮೋಕ್ಷಾಪೇಕ್ಷೆಯಾಗಿ ತಪೋಧ್ಯಾನಾದಿಗಳಲ್ಲಿ ನಿರತನಾಗಿದ್ದರೂ ಕೇವಲ ಪರೋಪಕಾರ ಬುದ್ಧಿಯನ್ನಿಟ್ಟುಕೊಂಡ ಪರಮ ಕರುಣಾನಿಧಿಯು. ಆದರೆ ಪರೋಪಕಾರವೂ ಕೂಡ ಮೇರೆದಪ್ಪಿದರೆ ಅಪಾಯಕರವಾಗುವದೆಂಬ ದನ್ನು ಅವನು ಮರೆತುಬಿಟ್ಟನು. ಅನಾಥವಾದ ಜಿಂಕೆಯ ಘರಿಯನ್ನು ಕೇವಲ ಪರೋಪಕಾರ ಬುದ್ಧಿಯಿಂದಲೇ ಅವನು ಸಂರಕ್ಷಣ ಮಾಡ ಹತ್ತಿದನು. ಆದರೆ ಅದರ ಜೋಪಾಸನೆಯಲ್ಲಿಯೇ ಮಿತಿಮೀರಿ ಆಸಕ್ತನಾಗಿ ಪರಮಾರ್ಥಕ್ಕಾಗಿ ಹೆಂಡಿರು-ಮಕ್ಕಳನ್ನು ಕೂಡ ತೊರೆದ ಆ ತ್ಯಾಗಿಯು ಜಿಂಕೆಯ ಮರಿಯ ಸಲುವಾಗಿಯೇ ಪರಮಾರ್ಥವನ್ನು ಕಳೆದುಕೊಂಡನು. ಅದರ ಸೇವೆಯಲ್ಲಿಯೇ ಕಾಲಕಳೆಯುತ್ತ ಕೊನೆಗೆ ಸಾಯುವ ಕಾಲದಲ್ಲಿ

ಕೂಡ ಆದರ ಬಗ್ಗೆಯೇ ವಿಚಾರಮಾಡುತ್ತ ಮರಣಪಟ್ಟದ್ದರಿಂದ, ಅವನು ಮುಂದಿನ ಜನ್ಮದಲ್ಲಿ ಜಿಂಕೆಯಾಗಿಯೇ ಹುಟ್ಟುವ ದುರ್ಧರ ಆಪತ್ತಿಗೆ ಒಳಗಾದನು. ಆದರೆ ಪೂರ್ವಪುಣ್ಯವಶದಿಂದ ಪೂರ್ವಜನ್ಮ ಸಂಸ್ಕೃತಿಯು ಮಾತ್ರ ಅವನಿಗಿದ್ದುದರಿಂದ, ಆ ಹೀನಯೋನಿಯಲ್ಲಿಯೂ ಅವನು ಧೈರ್ಯದಿಂದ ಪ್ರಾರಬ್ಧವನ್ನು ಸುಖದಿಂದ ಅನುಭೋಗಿಸಿದನು ಆ ಮೇಲೆ ಕೊನೆಯ ಜನ್ಮದಲ್ಲಿ ಅವನು ಬ್ರಾಹ್ಮಣನಾಗಿ ಹುಟ್ಟಿದನು. ಆದರೆ ಪೂರ್ವ ಸ್ಮೃತಿಯು ಜಾಗೃತವಿದ್ದುದರಿಂದ ಅವನು ಎಲ್ಲ ವ್ಯವಹಾರಕ್ಕೂ ಭಯ ಪಟ್ಟನು. ಪ್ರಪಂಚದಲ್ಲಿ ಕಾಲಿಟ್ಟರೆ ಮತ್ತೆಲ್ಲಿ ಆ ಶಕ್ತಿಯು ಗಂಟು ಬೀಳುವದೋ ಎಂದು ಹೆದರಿ, ಜ್ಞಾನಿಯಾದರೂ ಹೊರಗೆ ತೋರಗೊಡದೆ ಎಲ್ಲ ವ್ಯವಹಾರವನ್ನು ಹೇಸಿಕೆಯಿಂದ ತೊರೆದುಬಿಟ್ಟು, ಕೇವಲ ಜಡಮೂಢನಂತೆ ಕಾಲ ಕಳೆಯುತ್ತಿದ್ದನು. ಈ ವೃತ್ತಿಯಿಂದ ಅವನಿಗೆ ಅಪರಿಮಿತವಾದ ದುಃಖಗಳನ್ನು ಅನುಭವಿಸುವ ಪ್ರಸಂಗಬಂತು. ಆದರೂ ಅವನು ಎಲ್ಲವನ್ನು ಸಹನ ಮಾಡಿಕೊಂಡನು ಅವನ ತಿತಿಕ್ಷೆಯು ಎಲ್ಲ ಎಲ್ಲೆಯನ್ನೂ ಮೀರಿತ್ತು. ಕಟುಕರು ಕರೆದೊಯ್ದು ಅವನನ್ನು ಬಲಿಕೊಡಬೇಕೆಂದು ದೇವಿಯ ಮುಂದೆ ನಿಲ್ಲಿಸಿದಾಗ, ಅವನ ಶಾಂತವೃತ್ತಿಯನ್ನು ನೋಡಿ ದೇವಿಯೇ ಹೆದರಿದಳಂತೆ ಅವನ ಚಿತ್ತವು ಎಷ್ಟೂ ಕದಲಲಿಲ್ಲ. ಕೊನೆಗೆ ಅವನ ವಧವನ್ನು ನೋಡುವದು ದೇವಿಗೇ ಅಶಕ್ಯವಾಗಿ ಕಟುಕರ ವಧವನ್ನು ಅವಳೇ ಮಾಡಿ ಅವರ ಮರಣವನ್ನು ತಪ್ಪಿಸಬೇಕಾಯಿತು. ಅವನು ನಿಶ್ಚಿಂತನಾಗಿದ್ದುದರಿಂದ ನೋಡಲಿಕ್ಕೆ ಒಳ್ಳೇ ದಷ್ಟಪುಷ್ಟನಾಗಿದ್ದನು. ಈ ಕಾರಣದಿಂದ ರಹೂಗಣನೆಂಬ ಅರಸನು ಅವನನ್ನು ತನ್ನ ಶಿಬಿಕೆಯನ್ನು ಹೊರುವ ಕೆಲಸದಲ್ಲಿ ನಿಯೋಜಿಸಿದನು. ಆಗಾದರೂ ಅವನು ತೋರಿಸಿದ ಸ್ಥೈರ್ಯ, ಧೈರ್ಯ ಮತ್ತು ಜಾಣತನಗಳಿಗೆ ತಲೆದೂಗಿದ ಅರಸನು ಕೊನೆಗೆ ಅವನಿಗೇ ಶಿಷ್ಯಭಾವದಿಂದ ಶರಣು ಹೋಗಬೇಕಾಯಿತು. ಹೀಗೆ ಜಡಭರತನ ಕಥೆಯಲ್ಲಿ ಕಂಡುಬರುವ ಶಮ, ದಮ, ತಿತಿಕ್ಷೆ, ಸಮಾಧಾನ, ಉಪರತಿ ಮತ್ತು ಶ್ರದ್ಧೆಗಳು ನಮ್ಮ ಚರಿತ್ರನಾಯಕರ ಅಂತಃಕರಣವನ್ನು ಆಕರ್ಷಿಸಿ ಬಿಟ್ಟವು. ಜಡಭರತನ ವೈರಾಗ್ಯವೂ, ಮುಮುಕ್ಷುವೂ, ವಿವೇಕವೂ, ಇಂದ್ರಿಯ ಜಯವೂ ಅವರನ್ನು ಮುಗ್ಧರನ್ನಾಗಿ ಮಾಡಿದವು. ಆವನ ಕಥೆಯನ್ನು ಕೇಳಿದಾಗಿನಿಂದ ಅವರು ಭರತನ

ಆದರ್ಶವನ್ನೇ ತಮ್ಮ ಕಣ್ಣ ಮುಂದೆ ಇಟ್ಟುಕೊಂಡು ಬಿಟ್ಟರು. ತಾವೂ ಅವನಂತಾಗಬೇಕೆಂಬ ಹಿರಿಯಾಸೆಯು ಅವರಲ್ಲುಂಟಾಯಿತು. ಅಂದಿನಿಂದ ಅವರು ಭರತನ ಗುಣಗಳನ್ನು ತಮ್ಮ ಆಚರಣೆಯಲ್ಲಿ ತರುವ ಯತ್ನ ಮಾಡ ಹತ್ತಿದರು. ಅವನೇ ಅವರ ಆದರ್ಶಪುರುಷನಾದನು.

ಭಕ್ತರಾಜನಾದ ಪ್ರಲ್ಹಾದನ ಚರಿತ್ರೆಯೂ ಭಾಗವತದ ಏಳನೆಯ ಸ್ಕಂಧದಲ್ಲಿ ಬಂದಿದೆ. ಅವನ ಉಪದೇಶವೇನೆಂದರೆ—

ಕೌಮಾರ ಆಚಾರೇತ್ಪ್ರಾಜ್ಞಃ । ಧರ್ಮಾನ್ ಭಾಗವತಾನಿಹ ॥

ಎಂದರೆ ಮನುಷ್ಯನು ಇನ್ನೂ ಕೌಮಾರಾವಸ್ಥೆಯಲ್ಲಿರುವಾಗಲೇ ಭಾಗವತದ ಧರ್ಮದ ಅನುಷ್ಠಾನ ಮಾಡಬೇಕೆಂದು ಪ್ರಲ್ಹಾದನು ತನ್ನ ಗೆಳೆಯರಿಗೆ ಉಪದೇಶ ಮಾಡಿದ್ದಾನೆ. ಇದೂ ನಮ್ಮ ಚರಿತ್ರನಾಯಕರ ಮನಸ್ಸಿಗೆ ಚನ್ನಾಗಿ ಹಿಡಿಯಿತು. ಅವರು ಕೂಡಲೇ ಆ ಉದ್ಯೋಗಕ್ಕೆ ಹತ್ತಿದರು. ತಾವು ಸ್ವತಃ ಅದರಂತೆ ಆಚರಣೆ ಮಾಡಿಯೇ ಪರರಿಗೆ ಉಪದೇಶ ಮಾಡುತ್ತಿದ್ದುದರಿಂದ ಅವರ ಉಪದೇಶ ಪರಿಣಾಮವು ಅವರ ಗೆಳೆಯರ ಮೇಲೂ ಚನ್ನಾಗಿ ಆಗುತ್ತಿತ್ತು. ತಮ್ಮ ಗೆಳೆಯರಿಗೆಲ್ಲ ಇವರೇ ಮುಂದಾಳಾದರು. ಮಾನವಜನ್ಮದ ಗುರಿಯೇನು ? ಅದನ್ನು ಹೇಗೆ ಸಾಧಿಸಬೇಕು ? ಎಂಬಿವೇ ಮೊದಲಾದ ಅತಿಗೂಢ ಪ್ರಶ್ನೆಗಳನ್ನು ಕುರಿತು ನಮ್ಮ ಚರಿತ್ರನಾಯಕರು ಇನ್ನೂ ಬಾಲ್ಯಾವಸ್ಥೆಯಲ್ಲಿರುವಾಗಲೇ ತಮ್ಮ ಗೆಳೆಯರಿಗೆ ಸಜವಾಗಿ ಉಪದೇಶ ಮಾಡಿದ್ದನ್ನು ನೋಡಿದರೆ, ಅವರ ಅಲೌಕಿಕತೆಯ ಬಗ್ಗೆ ಗೌರವಬುದ್ಧಿಯುಂಟಾಗದಿರದು. ಅವರ ಅಕೃತ್ರಿಮವಾದ ಮತ್ತು ಮನಸ್ಸು ಕರಗಿಸುವಂತಹ ಉಪದೇಶ ಶೈಲಿಯು ಅವರ ಗೆಳೆಯರನ್ನೆಲ್ಲ ಅವರ ದಾಸಾನುದಾಸರನ್ನಾಗಿ ಮಾಡಿದವು. ಓರಿಗೆಯವರೆಲ್ಲ ಅವರ ಮೇಲೆ ಒಳ್ಳೇ ಪ್ರೀತಿ ಮಾಡುತ್ತಿದ್ದರಲ್ಲದೆ, ಅವರು ಹೇಳುವದನ್ನೆಲ್ಲ ಭಕ್ತಿಶ್ರದ್ಧೆಗಳಿಂದ ನಂಬುತ್ತಿದ್ದನು.

ಇದೇ ಕಾಲಕ್ಕೆ ಮಹಾಜನರ ಸತ್ಕೀರ್ತಿಗೆ ಪೋಷಕವಾದ ಇನ್ನೊಂದು ಸಂಗತಿಯು ಜರುಗಿತು. ಮುರಗೋಡದಲ್ಲಿ ನಾನಾ ನಾಯಕರೆಂಬ ಹೆಸರಿನ ಶ್ರೀಮಂತ ಗೃಹಸ್ಥರೊಬ್ಬರು ಇದ್ದರು. ಅವರು ಒಂದು

ಬಾವಿಯನ್ನು ಕಡಿಸಹತ್ತಿದರು. ಬಾವಿಯನ್ನು ಬಹು ಆಳವಾಗಿ ಕಡಿಸಿದ್ದರು. ಆದರೂ ಇನ್ನೂ ನೀರು ಬಿದ್ದಿರಲಿಲ್ಲ. ನಾಯಕರು ತಮಗೆ ಶಕ್ಯವಿದ್ದ ಎಲ್ಲ ಪ್ರಯತ್ನಗಳನ್ನು ಮಾಡಿ ತೀರ ನಿರಾಶರಾಗಿ ಕುಳಿತಿದ್ದರು. ಆ ವೇಳೆಯಲ್ಲಿ ನಮ್ಮ ಚರಿತ್ರನಾಯಕರು ಆಕಸ್ಮಾತ್ತಾಗಿ ಆ ಬಾವಿಯ ಬದಿಯಿಂದ ಹಾಯ್ದು ಹೋಗುತ್ತಿದ್ದರು. ಪೋರೆಯ ಮೇಲೆ ಉಕ್ಕುತ್ತಿರುವ ಅವರ ಆಧ್ಯಾತ್ಮಿಕ ತೇಜಸ್ಸನ್ನು ನೋಡಿ ನಿರಾಶರಾದ ನಾಯಕರೊಳಗೆ ಆಶೆಯ ಹೊಸ ಅಂಕುರವು ಚಿಗುರಿತು. ಮಹಾರಾಜರನ್ನು ನೋಡಿ ಅವರಲ್ಲಿ ಪೂಜ್ಯಭಾವವುಂಟಾಗಿ ಅವರು ಮಹಾರಾಜರಿಗೆ ಪ್ರಶ್ನೆಮಾಡಿದರು:— ''ಸ್ವಾಮೀ, ನಮ್ಮ ಬಾವಿಗೆ ಎಂದಾದರೂ ನೀರು ಬೀಳುವವೋ ಇಲ್ಲವೋ ? ಬಿದ್ದರೆ ಎಷ್ಟು ದಿವಸಗಳಲ್ಲಿ ಹೇಳಿಬಿಡಿರಿ.'' ಅದಕ್ಕೆ ಮಹಾರಾಜರು ಮುಗುಳು ನಗೆ ನಗುತ್ತ ಆಶೀರ್ವದಿಸಿದರು:— ''ನಾಯಕರೇ ಚಿಂತೆ ಮಾಡಬೇಡಿರಿ. ಇನ್ನು ನಾಲ್ಕು ದಿನಗಳಲ್ಲಿ ದೊಡ್ಡ ಸೆಲೆಗಳು ಹತ್ತಿ ನಿಮಗೆ ನೀರಿನ ಸಮೃದ್ಧಿಯಾಗುವದು'' ಇದರಿಂದ ನಾಯಕರು ಉತ್ತೇಜಿತರಾಗಿ ಮಹಾರಾಜರ ಪಾದಕಮಲಗಳ ಮೇಲೆ ತಮ್ಮ ತಲೆಯಿಟ್ಟು ನಮಸ್ಕಾರ ಮಾಡಿದರು. ಅವರ ಕಣ್ಣಿಂದ ಕೃತಜ್ಞತೆಯ ನೀರು ಹೊರಸೂಸಹತ್ತಿದವು. ಮುಂದೆ ನಾಲ್ಕು ದಿನಗಳಲ್ಲಿ ನಿಜವಾಗಿಯೇ ನಾಲ್ಕು ಸೆಲೆಗಳು ಹತ್ತಿ ಮಹಾ ಪ್ರವಾಹ ಬರಹತ್ತಿತು. ನಾಯಕರ ಆನಂದಕ್ಕಂತ ಪಾರಾವಾರವೇ ಉಳಿಯಲಿಲ್ಲ, ಭಕ್ತಿಶ್ರದ್ಧೆಗಳಿಂದ ಕೂಡಿದ ನಾಯಕರು ಮಹಾರಾಜರ ಕೀರ್ತಿಯ ಸುಗಂಧವನ್ನು ಊರಲ್ಲೆಲ್ಲ ಬೀರಹತ್ತಿದರು. ಊರೊಳಗಿನ ಜನರೆಲ್ಲ ಈ ಮಾತನ್ನು ಕೇಳಿ ಆಶ್ಚರ್ಯಪಟ್ಟರಲ್ಲದೆ, ಮಹಾರಾಜರ ವಿಷಯಕ್ಕೆ ಅವರಲ್ಲಿ ಗೌರವ ಮತ್ತು ಪೂಜ್ಯಭಾವಗಳು ಸ್ಥಿರವಾಗಿ ಹುಟ್ಟಿದವು. ನಾಯಕರಂತೂ ಅಂದಿನಿಂದ ಮಹಾರಾಜರೊಡನೆ ಅತ್ಯಂತ ಭಯಭಕ್ತಿಗಳಿಂದ ನಡೆಯಹತ್ತಿದರಲ್ಲದೆ, ಅನೇಕ ಪ್ರಸಂಗಗಳಲ್ಲಿ ಅವರಿಗೆ ಸಹಾಯವನ್ನು ಮಾಡಹತ್ತಿದರು.

———

೭ ಕೆಂಗೇರಿಯ ದರುಶನ

ವೈದಿಕ ಧರ್ಮದ ರಹಸ್ಯವೆಲ್ಲ ಸಂಸ್ಕೃತ ಭಾಷೆಯಲ್ಲಿದೆ. ವೈದಿಕ ಧರ್ಮದ ತಿರುಳನ್ನು ಸವಿಯಬೇಕೆನ್ನುವವರು ಸಂಸ್ಕೃತವನ್ನು ಕಲಿತ ಹೊರತು ಗತಿಯಿಲ್ಲ. ವೈದಿಕ ಧರ್ಮದ ಬಗ್ಗೆ ಈಗ ಜನರಲ್ಲಿ ಕಂಡುಬರುವ ಉದಾಸೀನತೆಗೆ ಆ ಧರ್ಮದ ಗ್ರಂಥಗಳೆಲ್ಲ ಸಂಸ್ಕೃತದಲ್ಲಿರುವದೂ ಒಂದು ಪ್ರಮುಖ ಕಾರಣವೆಂದು ಹೇಳಬಹುದು. ತಾವು ಉಚ್ಚರಿಸಿ ಆಚರಿಸ ಬೇಕಾದ ಮಂತ್ರ, ವಿಧಿ, ಸಂಸ್ಕಾರ ಮತ್ತು ಧರ್ಮದ ಅರ್ಥವು ತಿಳಿಯದೇ ಹೋದರೆ, ಯಾರಿಗೂ ಅವುಗಳ ವಿಷಯವಾಗಿ ಹೆಚ್ಚು ಪ್ರೀತಿ ಹುಟ್ಟುವದು ಸಾಧ್ಯವಿಲ್ಲ. ಎಂತೆಯೇ ನಿರುಕ್ತಕಾರರಾದ ಯಾಸ್ಕಾಚಾರರು—

ಸ್ಥಾಣುರ್ಯಂ ಮಾರಹಾರಃ ಕಿಲಾಭೂದಧೀತ್ಯ ।
ವೇದಾನ್ನವಿಜಾನಾತಿ ಯೋಽರ್ಥಂ ॥

ಎಂದು ಬರೆದಿದ್ದಾರೆ. ಎಂದರೆ ವೈದಿಕ ಮಂತ್ರಗಳ ಸರಿಯಾದ ಅರ್ಥವನ್ನು ತಿಳಿದುಕೊಳ್ಳದೆ ಯಾರು ಬರೇ ಗಿಳಿಗಳಂತೆ ಪಾಠಮಾಡುವರೋ, ಅವರು ಮನೆಯ ಒಜ್ಜೆಯನ್ನು ಹೊತ್ತುಕೊಂಡು ನಿಂತಿರುವ ಕಂಬಗಳಂತೆಯೇ ಸರಿಯೆಂದು ಅವರ ಆಶಯವು. ಆದರೆ ಸಂಸ್ಕೃತಭಾಷೆಯ ಜ್ಞಾನವು ಬರಬರುತ್ತ ಕಡಿಮೆಯಾಗುತ್ತ ನಡೆದಿರುವದು ನಮ್ಮ ದುರ್ದೈವವೇ ಸರಿ.

ಆದರೆ ನಮ್ಮ ಚರಿತ್ರನಾಯಕರ ಬಾಲ್ಯದ ಕಾಲಕ್ಕೆ ಈ ಸ್ಥಿತಿ ಇರಲಿಲ್ಲ. ಸಂಸ್ಕೃತಭಾಷೆಯ ಬಗ್ಗೆ ಇನ್ನೂ ಅಭಿಮಾನವು ಜಾಗೃತವಾಗಿತ್ತು. ಈಗಿನಷ್ಟು ಅದು ಕಡಿಮೆಯಾಗಿರಲಿಲ್ಲ. ವೈದಿಕ ಧರ್ಮಾಚರಣೆ ಮಾಡಬಯಸುವ ಆಸ್ತಿಕನು ಅಂದು ಸಂಸ್ಕೃತವನ್ನು ಕಲಿಯಬೇಕಾಗುತ್ತಿತ್ತು. ನಮ್ಮ ಚರಿತ್ರ ನಾಯಕರ ಕುಟುಂಬವಾದರೂ ಆಸ್ತಿಕ ವೈದಿಕರದಾದುದರಿಂದ, ಅವರಿಗೂ ಸಂಸ್ಕೃತ ಕಲಿಸಬೇಕೆಂದು ಅವರ ಅಣ್ಣಂದಿರು ಸ್ವಾಭಾವಿಕವಾಗಿಯೇ ಇಚ್ಛಿ

ಸಿದರು. ಸುದೈವದಿಂದ ಆಗ ಮುರಗೋಡದಲ್ಲಿಯೇ ಸಂಸ್ಕೃತ ಕಲಿಯಲಿಕ್ಕೆ ಅನುಕೂಲತೆಯೂ ಚನ್ನಾಗಿತ್ತು. ಈ ಮೊದಲೇ ತಿಳಿಸಿದಂತೆ ಮುರಗೋಡಕ್ಕೆ ತೀರ ಸಮೀಪವಾಗಿಯೇ ಇರುವ ಕೆಂಗೇರಿಯಲ್ಲಿ ವೇ. ಶಾ. ಸ. ಶಂಕರಭಟ್ಟ ಪೇಡ ಎಂಬ ಘನ ವಿದ್ವಾಂಸರಿದ್ದರು. ಅವರು ಚತುರರೂ ಸಂಸ್ಕೃತ ವಿದ್ಯಾಭ್ಯಾಸ ಮಾಡಬಯಸುವ ವಿದ್ಯಾರ್ಥಿಗಳಿಗೆ ಪ್ರೇಮದಿಂದ ಪಾಠ ಹೇಳಿಕೊಡುವ ಉತ್ಸುಕತೆಯುಳ್ಳವರೂ ಆಗಿದ್ದರು. ನಾರಾಯಣಭಟ್ಟರು ಈ ಪೇಡ ಶಾಸ್ತ್ರಿಗಳಿಗೆ ಬಿನ್ನಹ ಮಾಡಿಕೊಂಡಂತೆ, ಅವರು ನಮ್ಮ ಚರಿತ್ರ ನಾಯಕರಿಗೆ ಸಂಸ್ಕೃತ ಕಲಿಸಲು ಸಂತೋಷದಿಂದ ಒಪ್ಪಿಕೊಂಡರು.

ನಮ್ಮ ಚರಿತ್ರನಾಯಕನಾದ ಶ್ರೀ ರಾಮುಚಂದ್ರನಿಗೆ ಈ ರೀತಿಯಿಂದ ಕೆಂಗೇರಿಗೆ ಕಾಲಿಡುವ ಸುಸ್ಸಂಗಬಂತು. ಮುರಗೋಡಿಗೆ ಬಂದ ಕೆಲವು ವರ್ಷ ಗಳಲ್ಲಿ ಇನ್ನೂ ಕನ್ನಡ, ಮರಾಠಿ ಭಾಷೆಗಳ ಅಭ್ಯಾಸ ನಡೆದಿರುವಾಗಲೇ, ಶ್ರೀ ರಾಮನು ಕೆಂಗೇರಿಗೆ ಸಂಸ್ಕೃತಾಭ್ಯಾಸಕ್ಕಾಗಿ ಹೋಗಹತ್ತಿದನು. ಕೆಂಗೇರಿಯ ಶಾಂತವಾದ ಮತ್ತು ಪುಣ್ಯತಮವಾದ ಸ್ಥಾನವನ್ನು ನೋಡಿ ರಾಮನ ಮನಸ್ಸು ಪ್ರಫುಲ್ಲಿತವಾಯಿತು. ಕೆಂಗೇರಿಯೊಳಗೆ ಶ್ರೀ ಚಿದಂಬ ರೇಶ್ವರನ ಗುಡಿಯೊಳಗೆ ಹೋಗಿ ಅವರು ಚಿದಂಬರನ ಮುಂದೆ ಸಾಷ್ಟಾಂಗ ವೆರಗಿದಾಗ ಅವರಲ್ಲಿ ಅನನುಭೂತವಾದ ಆನಂದಲಹರಿಗಳು ಏಳಹತ್ತಿ ದವು. ತಮಗಿದು ಚಿರಪರಿಚಿತವಾದ ಸ್ಥಳವೆಂದೂ ಸ್ವಸ್ಥಾನವೆಂದೂ ಅವರಿಗೆ ಏಕೋ ಅನಿಸಹತ್ತಿತು. ಹೀಗೇಕಾಗಬೇಕೆಂಬ ಬಗ್ಗೆ ಅವರಿಗೆ ಯಾವ ಕಾರಣಗಳೂ ಹೊಳೆಯಲೊಲ್ಲವು. ಅಲ್ಲಿಯ ಪವಿತ್ರಮಯವಾದ ಮತ್ತು ಪಾವನಕರವಾದ ವಾತಾವರಣದಲ್ಲಿ ಅಡ್ಡಾಡಹತ್ತಿದೊಡನೆ ಅವರಿಗೆ ಅನ್ಯಾ ದೃಶವಾದ ಸುಖವಾಗಹತ್ತಿತು. ಒಮ್ಮೆಲೇ ಅವರ ಅಂತಃಕರಣದೊಳಗಿನ ಸುಪ್ತ ಭಾವನೆಗಳೂ ಕಲ್ಪನೆಗಳೂ ಜಾಗೃತವಾಗಹತ್ತಿದವು. ಹೀಗಾಗುವದು ಸ್ವಾಭಾವಿಕವೇ ಸರಿ. ಕವಿವರ್ಯನಾದ ಕಾಲಿದಾಸನು ಹೇಳುವಂತೆ ರಮ್ಯ ವಾದ ಸ್ಥಳಗಳನ್ನು ನೋಡಿಯೂ, ಮಧುರವಾದ ಶಬ್ದಗಳನ್ನು ಕೇಳಿಯೂ, ಸುಖಿಯಾಗಿದ್ದ ಮನುಷ್ಯನಲ್ಲಿ ಕೂಡ ಒಂದು ತರದ ಅಭೂತಪೂರ್ವವಾದ ಉತ್ಕಂಠೆಯು ಒಮ್ಮೊಮ್ಮೆ ಹುಟ್ಟುತ್ತದೆ. ಇದಕ್ಕೆ ಹಿಂದಿನ ಜನ್ಮದೊಳಗಿನ ಅನುಭವಗಳೇ ಕಾರಣವು. ಯಾಕಂದರೆ—

ಭಾವಸ್ಥಿರಾಣಿ ಜನಸಾಂತರ ಸೌಹೃದಾಣಿ ।

ಎಂದರೆ ಗತಿಸಿಹೋದ ಜನ್ಮದೊಳಗಿನ ಪ್ರೇಮಪೂರಿತವಾದ ಭಾವಗಳು ಈ ಜನ್ಮದಲ್ಲಿ ಕೂಡ ಅಂತಃಕರಣದೊಳಗೆ ಸ್ಥಿರವಾಗಿ ಒಡಮೂಡಿರುತ್ತವೆ.

ಇದರಿಂದ ಸ್ವಾಭಾವಿಕವಾಗಿಯೇ ನಮ್ಮ ಚರಿತ್ರನಾಯಕರ ಮನೋವೃತ್ತಿಯು ಕೆಂಗೇರಿಯಲ್ಲಿ ಅದ್ಭುತವಾದ ಲೀಲಾವತಾರವನ್ನು ಮಾಡಿಹೋದ ಚಿದಂಬರನ ಚರಿತ್ರದ ಕಡೆಗೆ ಹೊರಳಿತು. ಶ್ರೀ ಚಿದಂಬರ ಮಹಾರಾಜರ ಚರಿತ್ರೆಯನ್ನು ಅವರು ಏಕಾಗ್ರತೆಯಿಂದಲೂ ಭಕ್ತಿಯಿಂದಲೂ ಕೇಳಹತ್ತಿದರು. ಅವರ ಚರಿತ್ರೆಯನ್ನು ಎರಡನೆಯವರ ಬಾಯಿಂದ ಕೇಳಿದ ಮಾತ್ರಕ್ಕೆ ನಮ್ಮ ಚರಿತ್ರನಾಯಕರ ಉತ್ಸುಕತೆಯು ತೃಪ್ತವಾಗದಂತಾಯಿತು. ಆಗ ಅವರು ತಾವೇ ಸ್ವತಃ ಚಿದಂಬರನ ಚರಿತ್ರೆಯನ್ನು ಧಾರ್ಮಿಕ ಬುದ್ಧಿಯಿಂದ ಪಾರಾಯಣ ಮಾಡಹತ್ತಿದರು. ಚಿದಂಬರ ಚರಿತ್ರೆಯ ಪಾರಾಯಣ ಅನೇಕ ಸಲ ಕೊನೆಗಂಡಿತು. ಅದರಿಂದ ಅವರಿಗೆ ಅಲ್ಪಕಾಲದಲ್ಲಿಯೇ ಚಿದಂಬರನೆಂದರೆ ಸಾಕ್ಷಾತ್ ಕೈಲಾಸನಾಥನ ಅವತಾರವೇ ಆಹುದೆಂದು ದೃಢನಿಶ್ಚಯವಾಯಿತು. ಇದರಿಂದ ಅವರ ಭಕ್ತಿಶ್ರದ್ಧೆಗಳು ಇನ್ನೂ ಹೆಚ್ಚಿದವು. ಚಿದಂಬರನ ನಾಶವಂತವಾದ ಪಾರ್ಥಿವ ದೇಹವು ಲೌಕಿಕಧರ್ಮಕ್ಕನುಸಾರವಾಗಿ ಕಣ್ಮರೆಯಾದರೂ, ಅವನು ತತ್ವತಃ ಸರ್ವವ್ಯಾಪಕನಾದ ಚೈತನ್ಯರೂಪದಿಂದ ನಿತ್ಯನಾಗಿರುವನೆಂದೂ, ಅವನೇ ಎಲ್ಲರ ಹೃದಯದಲ್ಲಿಯೂ ಚೈತನ್ಯರೂಪದಿಂದ ಬೆಳಗುತ್ತಿರುವನೆಂದೂ, ಕೆಂಗೇರಿಯಲ್ಲಿ ಅವನನ್ನು ಕರಿತು ಮಾಡಿದ ತಪಶ್ಚರ್ಯೆಗೂ ಸೇವೆಗೂ ಅವನು ತೀವ್ರ ಪ್ರಸನ್ನನಾಗುವನೆಂದೂ ಅವರ ಮನೋದೇವತೆಯು ಅವರಿಗೆ ಹೇಳಿಬಿಟ್ಟಿತು. ಇದರಿಂದ ಅವರಲ್ಲಿ ಕೆಂಗೇರಿಯ ಮೇಲಿನ ಪ್ರೇಮ ವಿಶ್ವಾಸಗಳು ಅತ್ಯಧಿಕವಾಗಿ ಬೆಳೆದವು. ಅವರಿಗೆ ಕೆಂಗೇರಿಯೆಂದರೆ ಜೀವಪ್ರಾಣವಾಗಿ ಬಿಟ್ಟಿತು. ಎರಡ್ಮೂರೆ ಊಟಕ್ಕೆ ಮಾತ್ರ ಅವರಿಗೆ ಮನೆಯು ನೆನಪಾಗಹತ್ತಿತು. ಉಳಿದ ವೇಳೆಯಲ್ಲಿ ಅವರು ಮನೆಯ ನೆನಪನ್ನೇ ತೆಗೆಯುತ್ತಿರಲಿಲ್ಲ. ತಪ್ಪದೇ ಶಾಲೆಗೆ ಹೋಗುವದು, ಸ್ನಾನ-ಸಂಧ್ಯಾದಿ ಕರ್ಮಗಳನ್ನು ಯಥೋಚಿತವಾಗಿ ಆಚರಿಸುವದು, ಮತ್ತು ಉಳಿದ ವೇಳೆಯನ್ನೆಲ್ಲ ಕೆಂಗೇರಿಯಲ್ಲಿ ಕಳೆಯುವದು ಇದು ಅವರ ದೈನಂದಿನ ಕಾರ್ಯಕ್ರಮವಾಯಿತು. ಕೆಂಗೇರಿಯಲ್ಲಿದ್ದಾಗ

ತಮ್ಮ ಸಂಸ್ಕೃತ ಗುರುಗಳಾದ ಜೇಡ ಶಾಸ್ತ್ರಿಗಳವರ ಸೇವೆಯಲ್ಲಿಯೂ ಅವರು ಕೆಲ ಕಾಲಕಳೆಯಲಿಕ್ಕೆ ಮರೆಯುತ್ತಿರಲಿಲ್ಲ. ಸಂಸ್ಕೃತದ ಅಭ್ಯಾಸಕ್ಕೂ ಅವರು ಕೆಲವು ವೇಳೆ ಕೊಡುತ್ತಿದ್ದರು. ಆದರೆ ಇವರ ಮುಖ್ಯ ಜೀವನಧಾರೆಯೆಲ್ಲ ಚಿದಂಬರನ ಪಾದಪದ್ಮಗಳ ಕಡೆಗೇ ಹರಿಯುತ್ತಿತ್ತೆಂದು ಎದೆತಟ್ಟಿ ಹೇಳಬಹುದು. ಲೌಕಿಕ ಸಂಬಂಧದ ಬೇರುಗಳು ಆಳವಾಗಿ ಬೀರು ಬಿಟ್ಟಿರುವದರಿಂದ ಅವುಗಳನ್ನು ಯಾರಿಗೂ ಒಮ್ಮೆಲೇ ಹರೆದೊಗೆಯಲಿಕ್ಕೆ ಆಗುವದಿಲ್ಲ. ಆದುದರಿಂದ ಮಹಾರಾಜರು ಲೌಕಿಕವನ್ನು ಆದಷ್ಟು ಉತ್ತಮ ರೀತಿಯಿಂದ ಪೂರೈಸಿಕೊಂಡು ತಮ್ಮ ಚಿತ್ತವನ್ನೆಲ್ಲ ಚಿದಂಬರನ ಸಾಕ್ಷಾತ್ಕಾರದ ಕಡೆಗೇ ಹಚ್ಚಿಬಿಟ್ಟರು. ಧನ್ಯ ! ಧನ್ಯ !! ಅವರನ್ನು ಹೆತ್ತ ತಾಯಿ ತಂದೆಗಳು ನಿಜವಾಗಿಯೂ ಧನ್ಯರು !!!

ಕೆಂಗೇರಿಯ ಸಂಬಂಧ ಬಂದಾಗಿನಿಂದ ನಮ್ಮ ಚರಿತ್ರನಾಯಕರು ಒಂದು ನಿಯಮವನ್ನು ಹಾಕಿಕೊಂಡು ಬಿಟ್ಟರು. ಪ್ರತಿ ದಿವಸ ಚಿದಂಬರನಿಗೆ ಮೂರು ಪ್ರದಕ್ಷಿಣೆ, ಐವತ್ತು ಸಾಷ್ಟಾಂಗ ನಮಸ್ಕಾರಗಳು, ಮತ್ತು ಸವಡು ಸಿಕ್ಕಾಗೆಲ್ಲ ಬಾಯಿಂದ ''ಶಿವಚಿದಂಬರ'' ನೆಂದು ನಾಮಸ್ಮರಣೆ ಮಾಡುವದು. ಹಾಕಿಕೊಂಡ ನಿಯಮಗಳನ್ನು ತಪ್ಪದೇ ಪಾಲಿಸುವದು ಎಷ್ಟು ಕಠಿಣವಿರುವದೆಂಬದು ಎಲ್ಲರಿಗೂ ಗೊತ್ತಿದ್ದ ಮಾತು. ಆದರೆ ನಮ್ಮ ಚರಿತ್ರನಾಯಕರು ತಮ್ಮ ಪ್ರತಿಜ್ಞೆಯನ್ನು ಭೀಷ್ಮಾಚಾರ್ಯರಂತೆ ಕೊನೆಯ ವರೆಗೂ ನಡೆಸಿಯೇ ಬಿಟ್ಟರು. ಮಾಡಬೇಕಾದ ಪರಮಾರ್ಥಸಾಧನವೆಲ್ಲ ನಿಜವಾಗಿ ಕೌಮಾರಾವಸ್ಥೆಯಲ್ಲಿಯೇ ಆಗಬೇಕು. ಯಾಕಂದರೆ ಆಗ ಮನಸ್ಸನ್ನು ಎಲ್ಲ ಬಗೆಯಿಂದಲೂ ಉಡ್ಡ ತಿಡ್ಡವಾಗಿ ಜಗ್ಗುತ್ತಿರುವ ಹೆಂಡರು ಮಕ್ಕಳ ಕಾಟವಿರುವದಿಲ್ಲ. ಮತ್ತು ಮಾನ-ಮರ್ಯಾದೆ ಹಾಗೂ ರೊಕ್ಕಗಳಿಸಬೇಕೆಂಬ ಇಚ್ಛೆ ಇವೇ ಮೊದಲಾದ ಸಾವಿರಾರು ಸಾಂಸಾರಿಕ ವಾಸನೆಗಳೂ ಆಗ ಮನಸ್ಸಿನ ಮೇಲೆ ತಮ್ಮ ಒಡೆತನವನ್ನು ಸ್ಥಾಪಿಸಿರುವದಿಲ್ಲ. ಸಾಧನ ಮಾಡುವ ಶಕ್ತಿಯೂ ಸಾಮರ್ಥ್ಯವೂ ದೇಹಕ್ಕೆ ಬೇಕಾದಷ್ಟಿರುತ್ತವೆ. ಹೇಲಾಗಿ ಆ ವಯಸ್ಸಿನಲ್ಲಿ ಆ ಶ್ರದ್ಧೆಯ ಲೇಶವೂ ಇರುವದಿಲ್ಲ. ಮನುಷ್ಯನು ದೊಡ್ಡವನಾದಂತೆ ಅವನ ಅಪನಂಬಿಕೆಯೂ ಬೆಳೆಯುತ್ತ ಹೋಗುತ್ತದೆ.

ಇವೆಲ್ಲ ಕಾರಣಗಳ ಮೂಲಕ ಪರಮಾರ್ಥ ಸಾಧನೆಗೆ ತ್ಯಾಗವೇ ಸರಿಯಾದ ಕಾಲವೆಂದು ಭಕ್ತರಾಜನಾವ ಪ್ರಲ್ಹಾದನು ಉಪದೇಶಿಸಿರುವ ಸಂಗತಿಯನ್ನು ಈ ನೊದಲೆ ಹೇಳಿದ್ದೀವೆ. ಈ ಉಪದೇಶವನ್ನು ನಮ್ಮ ಚರಿತ್ರನಾಯಕರು ಹೇಗೆ ಅಕ್ಷರಶಃ ಆಚರಿಸಿ ತೋರಿಸಿದರೆಂಬದನ್ನು ನಾವೀಗ ನೋಡುತ್ತಿದ್ದೀವೆ

ಆದರೆ ಇಷ್ಟು ಚಿಕ್ಕವಯಸ್ಸಿನಲ್ಲಿ ಹುಡುಗರ ಮನಸ್ಸಿನ ಒಲವು ಪರಮಾರ್ಥದ ಕಡೆಗೆ ಹೊರಳುವದು ಮನೆಯೊಳಗಿನ ಹಿರಿಯರಿಗೆ ಇಷ್ಟವಿರುವದಿಲ್ಲ. ಇದೆಂತಹ ಆಶ್ಚರ್ಯವು! ಆದರೆ ಈ ಬಗ್ಗೆ ಆಶ್ಚರ್ಯ ಪಡುವ ಕಾರಣವಿಲ್ಲ. ಮನೆಯೊಳಗಿನ ಹಿರಿಯರೆಲ್ಲ ಸಾಂಸಾರಿಕ ಸುಖದಕಡೆಗೇ ಲಕ್ಷ್ಯಕೊಟ್ಟವರು. ಪ್ರಲ್ಹಾದನ ಭಾಷೆಯಿಲ್ಲಿ ಅವರು "ದ್ವಂದ್ವಾರಾಮ"ರಾಗಿರುತ್ತಾರೆ. ಈ ಜನರು ಮನುಷ್ಯನ ಯೋಗ್ಯತೆಯನ್ನು ಅವನ ರೊಕ್ಕಗಳಿಸುವ ಶಕ್ತಿಯ ಮೇಲಿಂದಲೇ ಅಳೆಯುತ್ತಾರೆ. ಇದು ನಿಜವಾಗಿಯೂ ಅನ್ಯಾಯವಲ್ಲವೇ? ಆದರೆ ಪಾಪ, ಅವರಾದರೂ ಏನು ಮಾಡುವರು? ಮನುಷ್ಯನ ಜನ್ಮದ ಇತಿ ಕರ್ತವ್ಯತೆಯು ಹೆಚ್ಚೆಚ್ಚು ರೊಕ್ಕಗಳಿಸುವದರ ಮೇಲೆಯೇ ಅವಲಂಬಿಸಿರುವದೆಂದು ಅವರ ಪ್ರಾಮಾಣಿಕ ತಿಳುವಳಿಕೆಯಾಗಿರುತ್ತದೆ. ಆದುದರಿಂದ ಹಗಲನ್ನು ರೊಕ್ಕಗಳಿಸಿ ಕುಟುಂಬ ಪೋಷಣೆಮಾಡುವದರಲ್ಲಿಯೂ ರಾತ್ರಿಯನ್ನು ನಿದ್ದೆ ಮತ್ತು ಗ್ರಾಮ್ಯವೃತ್ತಿಗಳಲ್ಲಿಯೂ ಕಳೆಯುವ ಸಾಂಸಾರಿಕರಿಗೆ ತಮ್ಮ ಹುಡುಗರಿಗೆ ಲೌಕಿಕೋಪಯೋಗಿಯಾದ ಶಿಕ್ಷಣ ಕ್ರಮವನ್ನು ಬಿಟ್ಟು ಪರಮಾರ್ಥದ ಕಡೆಗೆ ಹೊರಳುವದು ಹೇಗೆ ರುಚಿಸೀತು? ಎಂತೆಯೇ ಅವರು ಪುರಾಣ-ಪುಣ್ಯಕತೆಗಳೂ ಕೀರ್ತನೆಗಳೂ ಮುದುಕರ ಸಲುವಾಗಿಯೂ ವಿಧವೆಯರ ಸಲುವಾಗಿಯೂ ಮೀಸಲಾಗಿರುವವೆಂದೂ, ಸಣ್ಣ ಹುಡುಗರು ಅತ್ತ ವಿಶೇಷ ಗಮನ ಕೊಡಬಾರದೆಂದೂ ಕಡುತರವಾದ ನಿಯಮವನ್ನು ಮಾಡಿಬಿಡುತ್ತಾರೆ.

ನಮ್ಮ ಚರಿತ್ರನಾಯಕರ ಮನೆಯವರೂ ಅವರಿಗೆ ಈ ಬಗ್ಗೆ ಮೇಲಿಂದ ಮೇಲೆ ಸಿಟ್ಟು ಮಾಡಹತ್ತಿದರು. "ಮೊದಲು ಕಲಿತು ಜಾಣನಾಗಿ ರೊಕ್ಕಗಳಿಸಿ ಸಂಸಾರ ಮಾಡು. ಆ ಮೇಲೆ ಪರಮಾರ್ಥದ ವಿಚಾರ" ಎಂಬದು ಅವರ ಜೀವನ ಸೂತ್ರವಾಗಿತ್ತು. ಸಿಕ್ಕ ಸಿಕ್ಕ ವೇಳೆಯಲ್ಲೆ ಕೆಂಗೇರಿಗೆ ಹೋಗ ಕೂಡದೆಂದೂ, ಅಲ್ಲಿ ಹೆಚ್ಚು ವೇಳೆ ನಿಲ್ಲತಕ್ಕದ್ದಲ್ಲವೆಂದೂ, ಗುಡಿಯೊಳಗೆ

ಹೋಗಬಾರದೆಂದೂ, ಹೋದರೂ ಕೂಡಲೇ ಹೊರಬೀಳಬೇಕೆಂದೂ ಅವರು ಕಟ್ಟಪ್ಪಣೆ ಮಾಡಿದರು. ಆದರೂ ನಮ್ಮ ಚರಿತ್ರನಾಯಕರು ತಮ್ಮ ನಿಯಮವನ್ನು ಎಂದೂ ಮುರಿಯಲಿಲ್ಲ. ಬಂದ ಅಡಚಣೆಗಳನ್ನೆಲ್ಲ ಅವರು ಶಾಂತರೀತಿಯಿಂದ ಎದುರಿಸಹತ್ತಿದರು. ಅಡಚಣೆಗಳು ಬಂದಬಂದಂತೆ ತಮ್ಮ ಪ್ರತಿಜ್ಞೆಯನ್ನು ಪೂರೈಸಿಯೇ ಬಿಡಬೇಕೆಂದು ಹಟಹಿಡಿಯುವದೂ ಉತ್ತಮರಾದವರ ವ್ರತವೇ ಅಲ್ಲವೇ ? ಪ್ರಸಂಗ ವಿಶೇಷದಲ್ಲಿ ನಮ್ಮ ಚರಿತ್ರ ನಾಯಕರಿಗೆ ಬೆತ್ತದ ಪ್ರಸಾದವೂ ಸಿಕ್ಕಹತ್ತಿತು. ಆದರೆ ದೃಢಸಂಕಲ್ಪರಾದ ಆ ಮಹಾತ್ಮರು ಯಾವುದಕ್ಕೂ ಹಿಂದೆಗೆಯಲಿಲ್ಲ. ಉದ್ದಿಷ್ಟವಾದ ಪರಮಾರ್ಥ ಸಾಧನೆಯಲ್ಲಿ ಅಪೇಕ್ಷಿತರಿಂದಾಗಬಹುದಾದ ತೊಂದರೆಗಳನ್ನೆಲ್ಲ ಹೇಗೆ ಸಹನ ಮಾಡಬೇಕೆಂಬ ಬಗ್ಗೆ ಪ್ರಲ್ಹಾದನ ಆದರ್ಶವು ಅವರ ಕಣ್ಣು ಮುಂದಿತ್ತು. ಪ್ರಲ್ಹಾದನು ಎದುರಿಸಬೇಕಾದ ಅಡಚಣೆಗಳನ್ನು ನೋಡಿದರೆ, ತಮ್ಮ ಅಡಚಣೆಗಳು ಏನೂ ಅಲ್ಲವೆಂದು ಅವರು ತಿಳಿದುಕೊಂಡರು ಹೀಗೆ ಅವರು ಎಲ್ಲವನ್ನೂ ಒಳ್ಳೇ ಶಾಂತರೀತಿಯಿಂದಲೂ ಸಮಾಧಾನದಿಂದಲೂ ಸಹಿಸಿ ಕೊಂಡರು. ಆದರೆ ತಮ್ಮ ಕಾರ್ಯಕ್ರಮದಲ್ಲಿ ಮಾತ್ರ ಅವರು ಎಂದೂ ತಪ್ಪಲಿಲ್ಲ. ಅವರಾದರೂ ಏನು ಮಾಡುವರು ? ಕೆಂಗೇರಿಗೆ ಹೋದ ಹೊರತು ಅವರಿಗೆ ಸಮಾಧಾನವೇ ಆಗುತ್ತಿರಲಿಲ್ಲ.

ಮಹಾರಾಜರ ಈ ಕಾರ್ಯಕ್ರಮವು ಎರಡು ಮೂರು ವರುಷಗಳ ವರೆಗೆ ಅಖಂಡವಾಗಿ ನಡೆಯಿತು. ಅವರಲ್ಲಿರುವ ಚಿದಂಬರನ ಭಕ್ತಿಯು ಅಂಕುರಿತವಾಗಿ ಭರದಿಂದ ಬೆಳೆಯಹತ್ತಿತು. ಪರಮಾರ್ಥ ಸಾಧನೆಯ ಮಾರ್ಗದೊಳಗೆ ಬರುತ್ತಿರುವ ಲೌಕಿಕ ಅಡಚಣೆಗಳನ್ನೆಲ್ಲ ಅವರು ಸೀಲೆ ಹೇಳಿದ ರೀತಿಯಲ್ಲಿ ಎದುರಿಸಿದರು. ಇನ್ನು ಚಿದಂಬರನಿಂದಲೇ ಅವರ ಪರೀಕ್ಷೆಯಾಗುವ ವೇಳೆ ಬಂದಿತು. ಅದರಲ್ಲಿಯೂ ಅವರು ಹೇಗೆ ತೇರ್ಗಡೆ ಹೊಂದಿದರೆಂಬದನ್ನು ಮುಂದಿನ ಪ್ರಕರಣದಲ್ಲಿ ನೋಡುವ. ಮಹಾರಾಜರ ವಯಸ್ಸು ಆಗ ತಾನೇ ಹದಿನಾಲ್ಕು ವರುಷದ್ದಾಗಿತ್ತು.

———

೮ ಚಿದಂಬರ ಸಂಪ್ರದಾಯದ ದೀಕ್ಷೆ

ಪರಮಾರ್ಥ ಸಾಧನವನ್ನು ಮನುಷ್ಯನು ತನ್ನಷ್ಟಕ್ಕೆ ತಾನೇ ಸ್ವಂತವಾಗಿ ಮಾಡುವದು ತತ್ತ್ವತಃ ಶಕ್ಯವಿದೆ. ಅದಕ್ಕಾಗಿ ಅವನು ರೂಢವಾದ ಯಾವುದೊಂದು ಸಂಪ್ರದಾಯವನ್ನು ಸೇರಲೇಬೇಕೆಂಬ ನಿಯಮವೇನೂ ಇಲ್ಲ. ಆದರೆ ಈ ಮಾತು ತಾತ್ವಿಕ ರೀತಿಯಿಂದ ನಿಜವಾಗಿದ್ದರೂ, ಅನುಭವತಃ ಹಾಗೆ ಮಾಡುವದು ಮಾತ್ರ ಬಲು ಕಠಿಣವೇ ಸರಿ. ಸಂಪ್ರದಾಯಕ್ಕೆ ಹೊಂದಿಕೊಂಡಿರುವದರಿಂದ ಆಗುವ ಲಾಭವು ಅಪರಿಮಿತವಾಗಿದೆ. ಸಂಪ್ರದಾಯವೆಂದರೆ ಸಾಕ್ಷಾತ್ಕಾರವನ್ನು ಪಡೆದುಕೊಂಡವರಾದ ಗುರುಶಿಷ್ಯರ ಪರಂಪರೆಯು. ಉಪನಿಷತ್ತುಗಳಲ್ಲಿ ಕೂಡ ಇಂತಹ ಪರಂಪರೆಯನ್ನು ಬೇಕೆಂತಲೇ ಉಲ್ಲೇಖ ಮಾಡಿರುತ್ತಾರೆ. ಪ್ರತಿಯೊಬ್ಬ ಪ್ರಸಿದ್ಧ ಸಾಧು ಸತ್ಪುರುಷನೂ ತನ್ನ ಪರಂಪರೆಯನ್ನು ಹೇಳಿಕೊಟ್ಟಿರುತ್ತಾನೆಂದು ಕಂಡು ಬರುತ್ತದೆ. ಈ ಪರಿಪಾಠವನ್ನು ಈಗಿನ B. A (Oxon) ಮತ್ತು B. A. (Cantab ಎಂದು ನೊದಲಾಗಿ ತಮ್ಮ ವಿಶ್ವವಿದ್ಯಾಲಯದ ಹೆಸರನ್ನು ಬರೆಯುವ ರೂಢಿಗೆ ಹೋಲಿಸಬಹುದು. ಇರಲಿ, ಯಾರ ಸಹಾಯವೂ ಇಲ್ಲದೆ ತಾನೇ ತನ್ನ ಸ್ವಂತ ಪ್ರಯೋಗಗಳಿಂದ ಯಾವುದೊಂದು ವಿಷಯದ ಬಗ್ಗೆ ಜ್ಞಾನಸಂಪಾದನೆ ಮಾಡುವದು ಶಕ್ಯವಿದ್ದರೂ ಕಠಿಣವಾಗಿದೆ. ಸ್ವಂತ ಪ್ರಯತ್ನ ಮಾಡುವವನು ಒಮ್ಮೊಮ್ಮೆ ತಪ್ಪುದಾರಿ ಹಿಡಿದರಂತೂ ತೀರಿಯೇ ಹೋಯಿತು. ಅವನ ಪ್ರಯತ್ನಗಳೆಲ್ಲ ವ್ಯರ್ಥವಾಗಿ ನಿರಾಶೆಯು ಗಂಟುಬೀಳುವದು. ಆದರೆ ಅದೇ ಆ ವಿಷಯದ ಜ್ಞಾನವನ್ನು ಪಡಕೊಂಡವನ ಕೈಕೆಳಗೆ ಅವನ ಹೇಳಿಕೆಯಂತೆ ಪ್ರಯತ್ನ ಮಾಡಿದರೆ ಜ್ಞಾನಾರ್ಜನೆಯು ಸುಲಭವಾಗುವದು. ಇದೇ ಮಾತು ಪರಮಾರ್ಥಕ್ಕಾದರೂ ಹತ್ತುವದು. ಜ್ಞಾನಿಯಾದ ಗುರುವಿಗೆ ಶರಣುಹೋಗಿ ಸಾಕ್ಷಾತ್ಕಾರ ಪಡೆಯುವದು ಸುಕರವೂ ಸುಲಭವೂ ಆಗಿದೆ. ಅಲ್ಲಿ ನಾವು ತಪ್ಪು ಹಾದೀ ಹಿಡಿಯುವ

ಸಂಭವವಿಲ್ಲ. ತಪ್ಪಿದರೂ ನಮ್ಮನ್ನು ತಿದ್ದಲಿಕ್ಕೆ ಗುರುವಿನವನು ಆದುದ ರಿಂದ ಸಾಂಪ್ರದಾಯಕ್ಕೆ ಸೇರುವದು ಒಳಿತೆಂದು ಹೇಳಬಹುದು ಆದರೆ ಸಿಕ್ಕಸಿಕ್ಕ ಸಂಪ್ರದಾಯಕ್ಕೆ ಸೇರಿಯೂ ಉಪಯೋಗವಿಲ್ಲ. ನಮ್ಮ ಜ್ಞಾನವು ಉಪನಿಷನ್ಮೂಲಕವಾದ ಸತ್‌ಸಂಪ್ರದಾಯ ಪೂರ್ವಕವಾಗಿಯೇ ಆಗಲಿಕ್ಕೆ ಬೇಕು. ಇಲ್ಲದಿದ್ದರೆ ಪ್ರಯೋಜನವಿಲ್ಲ ಆದುದರಿಂದ ಉಪನಿಷತ್ತುಗಳಿಗೆ ಸಮ್ಮತವಾದ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುತ್ತ ಬಂದಿರುವ ಗುರುಶಿಷ್ಯ ಪರಂಪರೆಗೇ ನಾವು ಸೇರಬೇಕು. ಎಂತೆಯೇ ಶ್ರೀ ಮಚ್ಛಂಕರ ಭಗವತ್ ಪಾದರವರು –

ತಸ್ಮಾದಸಂಪ್ರದಾಯವಿತ್ ಸರ್ವಶಸ್ತ್ರವಿದಪಿ ಮೂರ್ಖವದೇವೋಪೇಕ್ಷಣೀಯಃ॥

ಎಂದು ಹೇಳಿದ್ದಾರೆ. ಎಂದರೆ ಬರೇ ಎಲ್ಲ ಶಾಸ್ತ್ರಗಳನ್ನು ಬಲ್ಲ ಪಂಡಿತನಿದ್ದರೂ, ಸತ್‌ಸಂಪ್ರದಾಯಕ್ಕೆ ಸೇರಿ ಸಾಕ್ಷಾತ್ಕಾರವನ್ನು ಪಡೆದುಕೊಂಡಿರದಿದ್ದರೆ, ಅವನು ಮೂರ್ಖನಂತೆ ಉಪೇಕ್ಷಣೀಯನೇ ಸರಿಯೆಂದು ಆವರ ಯಥಾರ್ಥವಾದ ಅಂಬೋಣವು.

ಎಂತೆಯೇ ಚಿದಂಬರನ ಮನಸ್ಸಿನಲ್ಲಿ ನಮ್ಮ ಚರಿತ್ರನಾಯಕರನ್ನು ತನ್ನ ಸಂಪ್ರದಾಯಕ್ಕೆ ಸೇರಿಸಿಕೊಳ್ಳಬೇಕೆಂಬ ಇಚ್ಛೆಯುಂಟಾಯಿತು. ಪರಮಾತ್ಮನ ಮನಸ್ಸಿಗೆ ಬಂದ ಮೇಲೆ ಕೇಳುವದೇನು? ತುಸು ದಿವಸಗಳಲ್ಲಿಯೇ ಆದಕ್ಕನುಕೂಲವಾದ ಘಟನೆಯೂ ಒದಗಿ ಬಂತು

ಒಂದು ದಿನ ಬೆಳಗು ಮುಂಜಾನೆ ನಮ್ಮ ಚರಿತ್ರನಾಯಕರು ಒಂದು ವಿಚಿತ್ರವಾದ ಕನಸುಕಂಡರು. ಕನಸುಗಳೆಲ್ಲ ಸುಳ್ಳಾದರೂ, ಕೆಲವು ಕನಸುಗಳು ಸೂಚಕಗಳಾಗಿರುವವೆಂಬ ಮಾತನ್ನು ಬ್ರಹ್ಮಸೂತ್ರಗಳೂ ಒಪ್ಪುತ್ತವೆ. ದೈಹಿಕ ಕಾರಣಗಳ ಮೂಲಕ ಬೀಳುವ ಕನಸುಗಳೆಲ್ಲ ನಿರರ್ಥಕವೇ ಸರಿ ಆದರೆ ಪರಮಾರ್ಥಸಾಧಕರಿಗೆ ಬೀಳುವ ಸೂಚಕ ಸ್ವಪ್ನಗಳಿಗೆ ದೃಷ್ಟಾಂತಗಳೆಂದು ಹೆಸರುಕೊಡುವ ವಾಡಿಕೆಯಿದೆ. ಅವು ಅರ್ಥಗರ್ಭಿತವೂ ಆಗಿರುತ್ತವೆ. ಅವುಗಳನ್ನು ಸರಿಯಾಗಿ ತಿಳಿದುಕೊಂಡು ನಡೆದರೆ ಸಾಧಕರಿಗೆ ಕಲ್ಯಾಣವಾಗದಿರದು.

ಮಹಾರಾಜರು ವಾಡಿಕೆಯಂತೆ ಕೆಂಗೇರಿಯಲ್ಲಿ ಚಿದಂಬರನ ಗುಡಿಗೆ ೧೧ ಪ್ರದಕ್ಷಿಣೆ ನಮಸ್ಕಾರಗಳನ್ನು ಹಾಕುತ್ತಿದ್ದಾರೆ. ಗುಡಿಯೆಲ್ಲ ಭಕ್ತ

ಜನರಿಂದ ಕಿಕ್ಕಿರಿದು ಹೋಗಿದೆ. ಇಷ್ಟರಲ್ಲಿ ಶಿವಲಿಂಗದೊಳಗಿಂದ ತೇಜಸ್ಸಿ ಗಳಾದ ಭವ್ಯಯತಿಗಳೊಬ್ಬರು ಹೊರಬಿದ್ದರು. ಜನರೆಲ್ಲ ಅವರನ್ನು ನೋಡಿ ವಿನಯ-ಭಯ-ಭಕ್ತಿಗಳಿಂದ ನಮಸ್ಕಾರ ಮಾಡಹತ್ತಿದರು. ಅವರು ಗಂಭೀರವಾಣಿಯಿಂದ ಕೂಡಿದ ಜನರಿಗೆ ಹೇಳಿದರು:— "ನಮಸ್ಕಾರ ಮಾಡುತ್ತಿರುವ ಈ ಹುಡುಗನು ಮಹಾಪಾಪಿಯಾಗಿದ್ದಾನೆ. ಇವನನ್ನು ಈಗಿಂದೀಗಲೇ ಹೊರಗೆ ಹಾಕಿರಿ. ಮತ್ತು ಇನ್ನೊಮ್ಮೆ ಇವನನ್ನು ಗುಡಿಯೊಳಗೆ ಬರಗೊಡಬೇಡಿರಿ." ಆದರೆ ಆಶ್ಚರ್ಯದ ಮಾತೆಂದರೆ ಆ ಯತಿಗಳ ಮಾತನ್ನು ಯಾರೂ ಮನ್ನಿಸಲೊಲ್ಲರು. ನಮ್ಮ ಚರಿತ್ರನಾಯಕರ ನಮಸ್ಕಾರಗಳಂತೂ ಹಾಗೇ ಸಾಗಿದ್ದವು. ಆಷ್ಟರಲ್ಲಿ ಗರ್ಭಾಲಯದೊಳಗಿಂದ ಪೂಜಾರಿಯು ಹೊರಗೆ ಬಂದು ಇವರಿಗೆ ಹೊರಗೆ ಹೋಗಿರೆಂದು ಒತ್ತಾಯ ಮಾಡಹತ್ತಿದನು ಮಹಾರಾಜರು ಅವನ ಕಡೆಗೂ ಲಕ್ಷ್ಯಗೊಡದೆ ತಮ್ಮ ನಮಸ್ಕಾರಗಳ ಕಾರ್ಯಕ್ರಮವನ್ನು ನಿರ್ಭಯವಾಗಿ ಸಾಗಿಸಿಯೇ ಬಿಟ್ಟರು ಆಷ್ಟರಲ್ಲಿ ಪೂಜಾರಿಗಳ ಗರ್ಜನೆಯಿಂದಲೂ ಯತಿಗಳ ಅಪ್ಪಣೆಯಿಂದಲೂ ಮಹಾರಾಜರಿಗೆ ಆಕಸ್ಮಾತ್ತಾಗಿ ಎಚ್ಚರವಾಯಿತು. ಎದ್ದು ನೋಡುತ್ತಾರೆ. ಬೆಳ್ಳಗೆ ಬೆಳಕಾಗಿತ್ತು.

ಈ ಕನಸಿನಿಂದ ಮಹಾರಾಜರಿಗೆ ಸಿಡಿಲು ಬಡಿದಂತಾಯಿತು. ಅವರಿಗೆ ಆ ಕನಸಿನ ಅರ್ಥವೇ ತಿಳಿಯಲೊಲ್ಲದು. ನಾನು ನಿಜವಾಗಿಯೂ ಇಷ್ಟು ಘೋರವಾದ ಪಾತಕಿಯಾಗಿರುವೆನೇ ? ದೇವರಿಗೂ ಕೂಡ ನಾನು ಭಾರವಾದೆನೆ ?—ಎಂಬ ವಿಚಾರದಿಂದ ಅವರ ಅಂತಃಕರಣವು ದುಃಖದಿಂದ ತಳಮಳಗೊಂಡಿತು, ಏನು ಮಾಡಿದರೂ ಮನಸ್ಸಿನ ಸಮಾಧಾನವಾಗಲೊಲ್ಲದು. ತಮ್ಮ ಅಂತಃಕರಣವನ್ನು ಬಿಚ್ಚಿ ಇಡುವದಾದರೂ ಯಾರ ಮುಂದೆ ?—ಎಂದು ಅವರು ತಮ್ಮ ಸಂಕಟವನ್ನು ಒಳಗೇ ನುಂಗಿಕೊಳ್ಳುವ ಯತ್ನ ನಡೆಸಿದರು ಆಷ್ಟರಲ್ಲಿ ಚಿದಂಬರನ ಪೂಜಾರಿಯಾದ ವಾಸುದೇವ ಭಟ್ಟರಿಗೂ ಇದೇ ತರದ ಸ್ವಪ್ನವಾದ ಸಂಗತಿಯು ತಿಳಿಯಿತು. ನಮ್ಮ ಚರಿತ್ರನಾಯಕರನ್ನು ಗುಡಿಯಿಂದ ಹೊರಗೆ ಹಾಕಬೇಕೆಂದೂ, ಅವರನ್ನು ತಿರುಗಿ ಗುಡಿಯೊಳಗೆ ಬರಗೊಡಬಾರದೆಂದೂ ಅವರಿಗೆ ಆಜ್ಞೆಯಾಗಿತ್ತು.

ವಾಸುದೇವಭಟ್ಟರು ಮಹಾರಾಜರ ಕಡೆಗೆ ಬಂದು ದುಃಖದಿಂದಲೇ ತಮ್ಮ ಈ ಸ್ವಪ್ನದ ವಿವರವನ್ನೆಲ್ಲ ತಿಳಿಸಿದರು ಮತ್ತು "ತಮ್ಮಾ, ನೀನು ಎರಡು ವರುಷಗಳಿಂದಲೂ ಚಿದಂಬರನ ಸೇವೆಯನ್ನು ಏಕನಿಷ್ಠೆಯಿಂದ ಮಾಡುತ್ತಿರುವಿ. ಆದರೂ ಈ ತರದ ಸ್ವಪ್ನ ಬೀಳುವ ಕಾರಣವೇನು? ಇದರ ಅರ್ಥವನ್ನು ಚಿದಂಬರನೇ ಬಲ್ಲನು!" ಎಂದು ತಮ್ಮ ಆಶ್ಚರ್ಯವನ್ನು ತೋರ್ಪಡಿಸಿದರು ಇದನ್ನು ಕೇಳಿಯಂತೂ ಮಹಾರಾಜರಿಗೆ ದಿಗ್ಭ್ರಮೆಯಾದಂತಾಯಿತು ತಾವು ನಿಜವಾಗಿಯೂ ಘೋರ ಪಾಪಿಷ್ಠರಾಗಿರುವದರಿಂದಲೇ ಈ ರೀತಿಯಾಗಿ ಚಿದಂಬರನು ಆಜ್ಞೆ ಮಾಡಿರುವನೆಂದು ಅವರ ತಿಳಿವಳಿಕೆಯಾಯಿತು. ಅವರಿಗೆ ಅನ್ನ ನೀರುಗಳೂ ರುಚಿಸದಂತಾದವು. ರಾತ್ರಿ ಕಣ್ಣಿಗೆ ನಿದ್ದೆಯೂ ಬರದಂತಾಯಿತು. ಜಭ್ಯಾಸದಲ್ಲಿ ಕೂಡ ಮನಸ್ಸು ರಮಿಸದಂತಾಯಿತು. ಇಪ್ಪತ್ತು ನಾಲ್ಕು ತಾಸೂ ಒಂದೇ ಒಂದು ಚಿಂತೆ— ದೇವರ ಕೃಪೆಗೆ ನಾನು ಹೇಗೆ ಪಾತ್ರನಾದೇನು! ಬರಬರುತ್ತ ದುಃಖವು ಅಸಹನೀಯವಾಯಿತು. ಕೊನೆಗೆ ಒಂದುದಿನ ಕೆಂಗೇರಿಯ ಗುಡಿಯೊಳಗೆ ಯಾರೂ ಇಲ್ಲದ ಸಂಧಿಯನ್ನು ಸಾಧಿಸಿ ಮಹಾರಾಜರು ತಮ್ಮ ಹೃದಯವನ್ನು ಚಿದಂಬರನ ಮುಂದೆ ಬಿಚ್ಚಿಟ್ಟು ಬೇಡಿಕೊಳ್ಳಹತ್ತಿದರು. ಕಣ್ಣಿನಿಂದ ನೀರು ಧಾರೆಯಾಗಿ ಹರಿಯಹತ್ತಿದವು. "ದೇವಾ, ನಾನು ಏನೂ ಅರಿಯದ ಬಾಲಕನು. ನನಗೆ ಗೊತ್ತಿದ್ದವುಟ್ಟಗಂತೂ ನಾನು ಏನೂ ಪಾಪಮಾಡಿಲ್ಲ. ಜನ್ಮಾಂತರದಲ್ಲಿ ನಾನು ಪಾಪಮಾಡಿದ್ದರೂ ಈಗ ನಿನಗೆ ಶರಣು ಬಂದಿದ್ದೇನೆ. ಪತಿತಪಾವನನೆಂದು ಹೆಸರಾದ ನೀನು ನನ್ನನ್ನು ಉದ್ಧರಿಸಲಾರೆಯಾ? ನೀನೇ ನನ್ನ ಕೈ ಬಿಟ್ಟರೆ ಮುಂದೇನು ಗತಿ? 'ಎಂತಹ ಪಾಪಿಯಾದರೂ ನನಗೊಮ್ಮೆ ಶರಣುಬಂದರೆ ಸಾಕು; ನಾನು ಅವನನ್ನು ಉದ್ಧರಿಸುವೆನೆಂ'ದು ಆಶ್ವಾಸನವಿತ್ತಿಲ್ಲವೆ? ಆ ನಿಯಮಕ್ಕೆ ನಾನು ಅಪವಾದವೆ? ವಾಲ್ಮೀಕಿಯಂತಹ ಬೇಡನೂ, ಅಜಾಮಿಳನಂತಹ ಪತಿತನೂ ನಿನ್ನ ನಾಮಸ್ಮರಣೆ ಮಾಡಿಯೇ ಕೃತಾರ್ಥರಾದರಲ್ಲ? ನಿನ್ನ ನಾಮದಿಂದ ಸುಟ್ಟುಹೋಗದ ಪಾಪಗಳಾದರೂ ಜಗತ್ತಿನಲ್ಲಿ ಇರುವವೇ? ಜಗದೊಡೆಯನೇ, ಪರಮ ಕಾರುಣಿಕನೇ ಕರುಣಿಸು. ನಾನು ನಿನ್ನೀ ಉಪೇಕ್ಷೆಯನ್ನು ಸಹಿಸಲಾರೆನು. ಆದರೆ ದೇವಾಧಿದೇವಾ, ನಾನೂ ನಿನ್ನ ಭಕ್ತನೇ ಇರುತ್ತೇನೆ. ನಿನಗೆ ಹಲವಾರು ಭಕ್ತ ಜನರಿದ್ದರೂ

ನನಗೆ ಮಾತ್ರ ನೀನೊಬ್ಬನೇ ಸ್ವಾಮಿಯು ನೀನು ನನ್ನನ್ನು ಉದ್ಧರಿಸು; ಅಥವಾ ಬಿಡು. ನಾನು ಮಾತ್ರ ನಿನ್ನನ್ನು ಬಿಡಲಾರೆನು ನೀನು ನನ್ನನ್ನು ಗುಡಿಯೊಳಗೆ ಬರಗೊಡದಿದ್ದರೆ, ನಿನ್ನ ಬಾಗಿಲಪ ಹೊರಗಿನ ನಾಯಿಯಾಗಿ ಯಾದರೂ ನಾನು ನಿನ್ನ ಸೇವೆ ಮಾಡುವೆನು. ನನಗೆ ನೀನೇ ಗತಿ. ನೀನು ನನ್ನನ್ನು ಒದ್ದರೂ, ಹೋಗೆ ಹಾಕಿದರೂ, ನಿನ್ನ ಚರಣಾರವಿಂದ ಗಳನ್ನು ನಾನು ಬಿಡಲಾರೆನು. ಇದೇ ನನ್ನ ನಿಶ್ಚಯವು! ಇದೇ ನನ ನಿರ್ಧಾರವು!"

ಇಂತಹ ಕರುಣಾಪೂರಿತವಾದ ನಿವೇದನವನ್ನು ಕೇಳದಿರುವದು ದಯಾ ಸಾಗರನಾದ ಪರಮೇಶ್ವರನಿಗೆ ಸಾಧ್ಯವೇ ? ಚಿದಂಬರನು ಮಹಾರಾಜರ ಭಕ್ತಿಗೆ ಮೆಚ್ಚಿದನು. ಮರುದಿನವೇ ಅವರಿಗೆ ಚಿದಂಬರನ ಸಂಪ್ರದಾಯಕ್ಕೆ ಸೇರಿದ ಜೀವಬಾ ಅಣ್ಣಾ ಅವರ ದರುಶನವಾಯಿತು ಜೀವಬಾ ಅಣ್ಣಾ ಅವರು ಚಿದಂಬರ ಮಹಾರಾಜರ ಪ್ರಶಿಷ್ಯರೂ, ರಾಜಾರಾಮ ಮಹಾರಾಜರ ಸಾಕ್ಷಾಚ್ಛಿಷ್ಯರೂ ಆಗಿದ್ದರು. "ವಿಠ್ಠಲನಿಗೆ ತುಕಾರಾಮನಿದ್ದಂತೆ ಚಿದಂಬರ ನಿಗೆ ರಾಜಾರಾಮನು" ಎಂಬ ಸಂಗತಿಯು ಚಿದಂಬರ ಭಕ್ತರಲ್ಲಿ ಸುಪ್ರಸಿದ್ಧ ವಾಗಿದೆ. ರಾಜಾರಾಮನು ಚಿದಂಬರನ ಸಂಪೂರ್ಣ ಕೃಪೆಗೆ ಪಾತ್ರನಾದ ವನು. ಅವನಿಗೆ ಚಿದಂಬರ ಮಹಾರಾಜರು ವಿಧಿವತ್ತಾಗಿ ಉಪದೇಶಮಾಡಿ ಸಾಂಪ್ರದಾಯಿಕ ದೀಕ್ಷೆಯನ್ನು ಕೊಟ್ಟಿದ್ದರು ಜೀವಬಾ ಅಣ್ಣಾ ಅವರಿಗೆ ರಾಜಾರಾಮನು ತನಗೆ ಉಪದಿಷ್ಟವಾದ ಚಿದಂಬರ ಮಹಾಮಂತ್ರವನ್ನು ವಿಧಿಪೂರ್ವಕವಾಗಿ ಉಪದೇಶಿಸಿದ್ದನಲ್ಲದೆ, ತನಗೆ ಚಿದಂಬರ ಮಹಾರಾಜರಿಂದ ಬಂದ ಸಂಪ್ರದಾಯ ನಡೆಸುವ ಅಧಿಕಾರವನ್ನು ಕೊಟ್ಟಿದ್ದನು ಜೀವಬಾ ಅಣ್ಣಾ ಅವರಾದರೂ ಚಿದಂಬರ ಭಕ್ತಿಯನ್ನು ನಿಸ್ಸೀಮವಾಗಿ ಮಾಡಿ ಸಾಕ್ಷಾತ್ಕಾರ ಮಾಡಿಕೊಂಡ ಜ್ಞಾನಿಗಳಾಗಿದ್ದರು. ಅವರಿಗೆ ಈಗ ಸುಮಾರು ೮೦—೯೦ ವರುಷಗಳಾಗಿದ್ದವು. ಜ್ಞಾನಸಂತತಿಯನ್ನೊಂದು ನೆಡಬೇಕೆಂದು ಅವರ ಮನಸ್ಸಿನಲ್ಲಿಯೂ ಬಹು ದಿನಗಳಿಂದ ಇತ್ತು. ಆದರೆ ಅವರಿಗೆ ಅಲ್ಲಿಯತನಕ ಯೋಗ್ಯರಾದ ಅಧಿಕಾರಿಗಳಾರೂ ಸಿಗದ್ದರಿಂದ ಅವರು ಚಿಂತೆಗೊಳಗಾಗಿದ್ದರು.

ನಮ್ಮ ಚರಿತ್ರನಾಯಕರು ಜೀವಬಾನವರಿಗೆ ನಮಸ್ಕಾರಮಾಡಿ ತಮಗಾದ ದೃಷ್ಟಾಂತಗಳನ್ನು ಅವರಿಗೆ ತಿಳಿಸಿ, ಅವುಗಳ ಸರಿಯಾದ ಅರ್ಥವನ್ನು ದಯವಿಟ್ಟು ತಿಳಿಸಿಕೊಡಬೇಕೆಂದು ಬಿನ್ನವಿಸಿಕೊಂಡರು. ಆ ಕಾಲಕ್ಕೆ ಜೀವಬಾನವರು ರಾಜಾರಾಮಕೃತ ಪಂಚಪದೀ ಅಭಂಗಗಳನ್ನು ರಸವತ್ತಾಗಿ ಹಾಡುತ್ತ ಕುಳಿತಿದ್ದರು. ನಮ್ಮ ಚರಿತ್ರನಾಯಕರನ್ನು ನೋಡಿದ ಕೂಡಲೇ ಅವರಿಗೆ ಪರಮಾನಂದವಾಯಿತು. ನಾನು ಬಹು ದಿನಗಳಿಂದ ಹುಡುಕುತ್ತಿದ್ದ ಅಧಿಕಾರೀ ಶಿಷ್ಯನು ಇವನೇ— ಎಂದು ಅವರಿಗೆ ಕೂಡಲೇ ಹೊಳೆಯಿತು. ಅವರು ವಾತ್ಸಲ್ಯ ಪ್ರೇಮದಿಂದ ಮಹಾರಾಜರ ಬೆನ್ನು ಚಪ್ಪರಿಸಿ ಮುಗುಳು ನಗೆಯನ್ನು ಸುಸೂತ್ರ ಮಾಡಾಡಹತ್ತಿದರು:— "ತಮ್ಮಾ, ಅಜ್ಞಾನವೇ ಎಲ್ಲ ಅನರ್ಥದ ಮೂಲವು. ನಿನಗಾದ ದೃಷ್ಟಾಂತದ ಸರಿಯಾದ ಅರ್ಥವನ್ನು ಮಾಡಿಕೊಳ್ಳದೆ ನಿಷ್ಕಾರಣವಾಗಿ ದುಃಖಕ್ಕೊಳಗಾಗಿರುವೆ. ನಿಜವಾಗಿಯೂ ವಿಚಾರ ಮಾಡಿದರೆ ನೀನು ಶೋಕ ಪಡುವದನ್ನು ಬಿಟ್ಟು, ಆನಂದದಿಂದ ಕುಣಿದಾಡಬೇಕು. ನಿನ್ನ ದೃಷ್ಟಾಂತವು ಬಲು ಚೆನ್ನಾಗಿದೆ. ಅದು ನಿನ್ನ ಭಾಗ್ಯೋದಯವನ್ನು ಸೂಚಿಸುವ ಶುಭಶಕುನವಾಗಿದೆ. ನಿನ್ನ ಮೇಲೆ ಚಿದಂಬರನು ಪೂರ್ಣಕೃಪೆ ಮಾಡಿದ್ದಾನೆ. ನಿನ್ನ ಪಾಪವೆಲ್ಲ ಸುಟ್ಟು ಹೋಗಿದೆ. ನೀನು ಸೇವೆ ನಿಲ್ಲಿಸಬೇಡ. ಅಂಜಿಕೆಯಿಂದ ನೀನು ಸೇವೆಯನ್ನು ನಿಲ್ಲಿಸುವಿಯೇನೋ ನೋಡಬೇಕೆಂದು ಚಿದಂಬರನು ಹಾಗೆ ದೃಷ್ಟಾಂತವನ್ನು ತೋರಿಸಿದ್ದಾನೆ. ಹಾಗೇ ಸೇವೆ ಮಾಡದೆ ಸಾಂಪ್ರದಾಯಕ ದೀಕ್ಷೆ ಪಡೆದು ಸೇವೆ ಮಾಡಬೇಕೆಂಬುದು ದೃಷ್ಟಾಂತದ ಅರ್ಥವು. ದೀಕ್ಷೆ ಪಡೆಯುವ ಯೋಗ್ಯತೆಯು ನಿನ್ನಲ್ಲಿ ಸಂಪೂರ್ಣವಾಗಿದೆ. ಹೇಗೂ ನಾಳೆಯೇ ಗುರುವಾರ ವಿರುವದು. ನೀನು ಮುಂಜಾನೆ ಸ್ನಾನಮಾಡಿ ಪೂಜೆಯ ಸಾಮಾನುಗಳನ್ನೂ ಒಂದು ರೂಪಾಯಿ ದಕ್ಷಿಣೆಯನ್ನೂ ತೆಗೆದುಕೊಂಡು ಓದುಂಬರ ಕಟ್ಟೆಗೆ ಬಾ. ನಿನಗೆ ಚಿದಂಬರ ಸಂಪ್ರದಾಯದ ದೀಕ್ಷೆಯನ್ನು ಕೊಟ್ಟು, ಚಿದಂಬರ ಮಹಾಮಂತ್ರವನ್ನು ಪದೇಶಿಸಿ, ಸಾಂಪ್ರದಾಯದ ಅಧಿಕಾರವನ್ನು ಕೊಡುವೆನು."

ಅಮೃತ ಸುರಿಸುತ್ತಿರುವ ಈ ಮಾತುಗಳನ್ನು ಕೇಳಿ ಮಹಾರಾಜರು ಆನಂದ ಸಾಗರದಲ್ಲಿ ತೇಲಾಡಹತ್ತಿದರು. ಅವರ ಅಂತರಾತ್ಮನ ದುಗುಡವೆಲ್ಲ

ಕ್ಷಣಾರ್ಧದಲ್ಲಿ ಓಡಿಹೋಯಿತು. ಅವರು ಜೀವಬಾನವರಿಗೆ ಪುನಃ ಪುನಃ ನಮಸ್ಕಾರ ಮಾಡಿದರು. ಮತ್ತು ತಮ್ಮ ಅಪ್ಪಣೆಯಂತೆ ನಾಳೆ ಬರುವೆ ನೆಂದು ಹೇಳಿ ಮಹಾರಾಜರು ಮನೆಗೆ ಹೋದರು

ಮರುದಿನವೇ ಮುಂಜಾನೆ ಗಂಧ, ಪುಷ್ಪ, ಧೂಪದೀಪಾದಿ ಪೂಜಾಸಾಹಿತ್ಯ ಗಳನ್ನೆಲ್ಲ ಅಣಿಮಾಡಿಕೊಂಡು ಮಹಾರಾಜರು ಸೂರ್ಯೋದಯದ ಪೂರ್ವ ದಲ್ಲಿಯೇ ಔದುಂಬರ ಕಟ್ಟೆಗೆ ಬಂದು ಕುಳಿತು ತಮ್ಮ ಗುರುಗಳ ದಾರೀ ಕಾಯು ತ್ತಿದ್ದರು ಜೀವಬಾನವರೂ ಸ್ನಾನ ಮೊದಲಾದವುಗಳನ್ನು ಮುಗಿಸಿಕೊಂಡು ಯಥಾಕಾಲದಲ್ಲಿ ಕೆಂಗೇರಿಗೆ ಬಂದರು. ಔದುಂಬರ ಕಟ್ಟೆಯು ಮೇಲೆ ಆ ಗುರು-ಶಿಷ್ಯರ ಅಪೂರ್ವ ಸಂಯೋಗವಾಯಿತು. ಇಬ್ಬರ ಹೃದಯಗಳು ಆನಂದದಿಂದ ತುಂಬಿ ತುಳುಕುತ್ತಿದ್ದವು. ಇಬ್ಬರೂ ದೀಕ್ಷಾ ವಿಧಿಯ ಬಗ್ಗೆ ಉತ್ಸುಕರಾಗಿದ್ದರು.

ಜೀವಬಾನವರ ಇಚ್ಛೆಯಂತೆ ಮಹಾರಾಜರು ಮೊದಲು ಚಿದಂಬರನ ಪಾದುಕೆಗಳನ್ನು ಯಥಾಸಾಂಗವಾಗಿ ಪೂಜೆ ಮಾಡಿದರು ಆ ಮೇಲೆ ಗುರುಪೂಜೆಯೂ ಯಥಾವಿಧಿಯಾಗಿ ನಡೆಯಿತು. ಗುರುಗಳು ಶಿಷ್ಯನಿಗೆ ಚರಣತೀರ್ಥಕೊಟ್ಟು ಪಾವನ ಮಾಡಿದರು. ಮತ್ತು ಕಿವಿಯಲ್ಲಿ ''ಶಿವ ಚಿದಂಬರ'' ಎಂಬ ಮಹಾಮಂತ್ರವನ್ನು ಪದೇಶಿಸಿ ಶಿಷ್ಯನ ಬಾಯಿಯಲ್ಲಿ ವಿಭೂತಿಯನ್ನು ಹಾಕಿದರು. ಮತ್ತು ತಲೆಯು ಮೇಲೆ ತಮ್ಮ ವರದ ಹಸ್ತ ವನ್ನಿಟ್ಟು ಆಶೀರ್ವಾದ ಮಾಡಿದರು. ಗುರುಗಳ ಹಸ್ತಸ್ಪರ್ಶದಿಂದ ಮಹಾ ರಾಜರು ಕ್ಷಣಕಾಲ ಸಮಾಧಿಸುಖವನ್ನನುಭವಿಸಿ ''ನಾನು ಕೃತಾರ್ಥ ನಾದೆನು ! ಧನ್ಯನಾದೆನು !! ನನ್ನ ಜನ್ಮವು ಸಾರ್ಥಕವಾಯಿತು !!!" ಎಂಬ ಉದ್ಗಾರಗಳನ್ನು ತೆಗೆದರು. ಪ್ರತಿದಿವಸ ಮುಂಜಾನೆಯಿಂದ ಸಂಜೆಯ ವರೆಗೆ ಕನಿಷ್ಟಪಕ್ಷಕ್ಕೆ ೧೧ ಸಾವಿರಗಳಷ್ಟಾದರೂ ಜಪ ಮಾಡಬೇಕೆಂದು ಜೀವಬಾನವರು ಶಿಷ್ಯನಿಗೆ ಅಪ್ಪಣೆ ಮಾಡಿದರು. ಮಹಾರಾಜರು ಅವರ ಆಜ್ಞೆಯನ್ನು ಶಿರಸಾವಹಿಸಿದರು. ಆ ದೀಕ್ಷಾವಿಧಿಯಿಂದಲೂ, ಸಾಂಪ್ರ ದಾಯಿಕ ಅಧಿಕಾರ ಪ್ರದಾನದಿಂದಲೂ, ಗುರುಗಳ ಕೃಪೆಯಿಂದಲೂ ಅವರ ಮೋರೆಯ ಮೇಲೆ ಅಪೂರ್ವವಾವ ಕಾಂತಿಯು ಹೊಳೆಯಹತ್ತಿತು. ಜೀವಬಾ ನವರು ಸಾಂಪ್ರದಾಯಿಕ ರಹಸ್ಯವನ್ನೆಲ್ಲ ತಿಳಿಸಿಕೊಟ್ಟು, ಪಂಚಪದೀ

ಅಭಂಗಗಳನ್ನು ಅನ್ನುವ ಕ್ರಮವನ್ನೂ ತೋರಿಸಿಕೊಟ್ಟರು. ಮತ್ತು ಪಂಚ ಪದೀ ಅಭಂಗದ ಕೈಬರಹದ ಒಂದು ಪುಸ್ತಕವನ್ನು ಪ್ರಸಾದವೆಂದು ಕೊಟ್ಟು ಅನುಗ್ರಹಿಸಿದರು. (ಶಕೆ ೧೭೯೨— ಸನ್ ೧೮೭೦)

ಜೀವಬಾನವರಿಂದ ಹೀಗೆ ಕೃಪೆಯಾಗಿದ್ದರೂ ದೃಷ್ಟಾಂತ ರೂಪದಿಂದ ಚಿದಂಬರನ ಕೃಪೆಯಾಗಬೇಕೆಂದು ಮಹಾರಾಜರು ಇಚ್ಛಿಸುತ್ತಿದ್ದರು. ಅದಕ್ಕಾಗಿ ಅವರು ಪ್ರತಿದಿವಸ ಮುಲಗುವ ಮುಂದೆ ಚಿದಂಬರನಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದರು. ಈ ಕ್ರಮವು ಒಂದು ಕಿಂಗಳ ವರೆಗೆ ನಡೆದರೂ ದೃಷ್ಟಾಂತಗಳೇನೂ ಆಗಲಿಲ್ಲ. ಮಹಾರಾಜರು ನಿರಾಶರಾಗದೆ ತಮ್ಮ ಪ್ರಾರ್ಥನೆಯನ್ನು ನಡೆಸಿಯೇ ಇದ್ದರು. ಕೊನೆಗೆ ತುಸು ದಿವಸಗಳಲ್ಲಿಯೇ ಚಿದಂಬರ ಮಹಾರಾಜರ ಪ್ರಪೌತ್ರರಾದ ಶ್ರೀ ಪ್ರಭಾಕರ ದೀಕ್ಷಿತರಿಗೆ ಒಂದು ಸ್ವಪ್ನ ದೃಷ್ಟಾಂತವಾಯಿತು. ಭಸ್ಮ ರುದ್ರಾಕ್ಷಾದಿಗಳಿಂದ ಶೋಭಿತರಾದ ಒಬ್ಬ ಬ್ರಾಹ್ಮಣ ಶ್ರೇಷ್ಠರು ಅವರಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡರು. ಮತ್ತು "ತಮ್ಮಾ, ಪ್ರಭಾಕರಾ, ನೀನು ದಿನಾಲೂ ಪೂಜಿಸುತ್ತಿರುವ ಬೆಳ್ಳಿಯ ಪಾದುಕೆಗಳನ್ನು ಶಿಕ್ಷಕರ ತಮ್ಮನಾದ ರಾಮನಿಗೆ ಕೊಡು ಅವನಿಗೆ ಚಿದಂಬರನ ಮೇಲೆ ಒಳ್ಳೇ ಭಕ್ತಿಯುಂಟಾಗಿದೆ." ಎಂದು ಆಜ್ಞೆ ಮಾಡಿದರು. ಮರುದಿವಸ ಮುಂಜಾನೆ ಶ್ರೀ ಪ್ರಭಾಕರ ದೀಕ್ಷಿತರು ಮಹಾರಾಜರನ್ನು ತಮ್ಮ ಮನೆಗೆ ಕರೆಸಿಕೊಂಡು, ಸ್ವಪ್ನದ ಸಂಗತಿಯನ್ನೆಲ್ಲ ಅವರಿಗೆ ತಿಳಿಸಿ ಬೆಳ್ಳಿಯ ಪಾದುಕೆಗಳನ್ನೂ ಕೊಟ್ಟುಬಿಟ್ಟರು. ಮಹಾರಾಜರು ಆತ್ಯಾನಂದದಿಂದ ಅವುಗಳನ್ನು ತಲೆಯ ಮೇಲಿಟ್ಟುಕೊಂಡು ಕುಣಿದಾಡಿದರು. ಮತ್ತು ಪ್ರಭಾಕರ ದೀಕ್ಷಿತರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಅವರ ಆಶೀರ್ವಾದ ಪಡಕೊಂಡು ಮನೆಗೆ ಬಂದು ಪಾದುಕೆಗಳ ನಿತ್ಯ ಪೂಜೆಯನ್ನು ಸುರುವು ಮಾಡಿದರು.

———

೯ ಸಗುಣ ಸಾಕ್ಷಾತ್ಕಾರದ ಹಂಬಲ

ಸಾಧಕನು ತನ್ನ ಪ್ರಯತ್ನದಿಂದ ಮೇಲಕ್ಕೇರಬೇಕು. ಪರಮಾತ್ಮನು ಕೃಪೆಮಾಡಿ ಕೆಳಕ್ಕಿಳಿಯಬೇಕು. ಹೀಗೆ ಮಾನವಪ್ರಯತ್ನ ಮತ್ತು ಪರಮಾತ್ಮ ಕೃಪೆಗಳ ಸಂಗಮವು ಎಲ್ಲಿ ಆಗುವದೋ ಅದೇ ಸಾಕ್ಷಾತ್ಕಾರವು— ಎಂದು ಯೋಗಿ ಅರವಿಂದರು ಹೇಳುತ್ತಾರೆ. ಆದರೆ ಸಾಧಕನ ಪ್ರಯತ್ನವು ಆಡ್ಡದಾರೀ ಹಿಡಿಯಬಾರದು. ಅದು ಸರಿಯಾದ, ನೇರವಾದ ಮಾರ್ಗವನ್ನೇ ಹಿಡಿಯಬೇಕು ಇಲ್ಲವಾದರೆ ಪ್ರಯತ್ನ ಮಾಡಿಯೂ ಫಲಸಿಕ್ಕದೇ ಹೋಗುವದು; ಸಾಧನವೆಲ್ಲ ಪುಕ್ಕಟೆಯಾಗುವ ಪ್ರಸಂಗ ಬರುವದು. ಅದಕ್ಕಾಗಿಯೇ ಗುರುಗಳೂ ಸಂಪ್ರದಾಯಗಳೂ ಅಸ್ತಿತ್ವದಲ್ಲಿ ಬಂದಿವೆ. ನಮ್ಮ ಚರಿತ್ರನಾಯಕರಿಗೆ ಸತ್‌ಸಂಪ್ರದಾಯವೂ ಸಿಕ್ಕಿತು. ಸದ್ಗುರುವೂ ಸಿಕ್ಕನು. ಗುರುವು ತೋರಿಸಿಕೊಟ್ಟ ಮಾರ್ಗದಿಂದ ಅವರು ಭರದಿಂದ ಪ್ರಯತ್ನ ಮಾಡಹತ್ತಿದರು. ಹಗಲಿರುಳೆನ್ನದೆ ಅವರು ಚಿದಂಬರನ ಜಪ ಮಾಡಹತ್ತಿದರು. ಚಿದಂಬರನ ಅನುಸಂಧಾನವು ಅಖಂಡವಾಗಿ ಇಪ್ಪತ್ತುನಾಲ್ಕು ತಾಸೂ ನಡೆಯಹತ್ತಿತು. ಅವರ ಮನಸ್ಸು ಪೂರ್ವಜನ್ಮಗಳಲ್ಲಾದ ಸಾಧನಗಳಿಂದ ಪರಿಪಕ್ವವೇ ಆಗಿತ್ತು. ಅವರ ಸಾಧನಗಳ ಪೂರ್ಣಫಲವೀಗ ಸಿಕ್ಕಬೇಕಾಗಿತ್ತು. ಅದಕ್ಕಾಗಿ ಅವರ ಮನಸ್ಸೂ ಒಂದೇ ಸಮನೆ ಚಡಪಡಿಸಹತ್ತಿತು. ಚಿದಂಬರನ ಸಗುಣಮೂರ್ತಿಯನ್ನು ನೋಡಬೇಕೆಂಬ ಹಂಬಲವು ಅವರನ್ನು ಬಲವಾಗಿ ಬಾಧಿಸಹತ್ತಿತು. ಅದು ಅವರ ಮನಸ್ಸನ್ನು ಎಡೆಬಿಡದೆ ಕಟೆಯಹತ್ತಿತು. ಎದ್ದಾಗ, ನಿಂತಾಗ, ಕುಳಿತಾಗ, ಊಣ್ಣುವಾಗ, ಆಡ್ಡಾಡುವಾಗ, ಕೆಲಸ ಮಾಡುವಾಗ— ಎಲ್ಲ ಕಾಲದಲ್ಲಿಯೂ ಒಂದೇ ಚಿಂತೆ ಚಿದಂಬರನು ನನ್ನ ಮೇಲೆ ಎಂದು ಕೃಪೆಮಾಡಿ ಸಗುಣ ರೂಪವನ್ನು ತೋರಿಸಿ ಅನುಗ್ರಹ ಮಾಡುವನು ?— ಎಂದು ಅವರು ಸದಾ ತಳಮಳಿಸಹತ್ತಿದರು. ದೇವರು ನಿರ್ಗುಣ, ನಿರಾಕಾರ, ಅಖಂಡ, ವ್ಯಾಪಕ ಮತ್ತು ಇಂದ್ರಿಯಗಳಿಗೆ

ಅಗೋಚರನಾಗಿರುವನೆಂಬುದೇನೋ ಸರಿಯೇ. ಆದರೆ ಶ್ರೀ ಮಚ್ಛಂಕರ ಭಗವತ್‌ಪಾದರವರು ಹೇಳುವಂತೆ ''ಸಾಧಕರಿಗೆ ಅನುಗ್ರಹ ಮಾಡುವ ಸಲುವಾಗಿ ನಿರಾಕಾರನಾದ ಪರಮಾತ್ಮನು ಮಾಯೆಯಿಂದ ಸಾಕಾರ ರೂಪವನ್ನು ಸ್ವೇಚ್ಛೆಯಿಂದ ತಳೆಯಬಹುದು" ಎಂದರೆ ಪರಮಾತ್ಮನ ಸಾಕಾರ ರೂಪದ ದರ್ಶನವು ಮಾಯಿಕವಾದರೂ ಭ್ರಮೆಯಲ್ಲ. ಅದು ಅವನ ನಿಜವಾದ ಸ್ವರೂಪವಾಗದಿದ್ದರೂ ಅದು ಬರಿಯ ಭ್ರಾಂತಿಯೆಂದು ಮಾತ್ರ ಯಾರೂ ತಿಳಿಯಬಾರದು. ಇಷ್ಟೇ ಅಲ್ಲ; ನಿಜವಾದ ಸಾಧಕನು ಮೊದಲು ಸಾಕಾರರೂಪ ದರ್ಶನಕ್ಕಾಗಿಯೇ ಯತ್ನ ಮಾಡಬೇಕೆಂದೂ ಆ ಮೇಲೆ ನಿರಾಕಾರವೆಂದೂ ಶ್ರೀ ಮಸ್ಮಾರ್ಣಕ ಪ್ರಭುಗಳು ಸ್ಪಷ್ಟವಾಗಿಯೇ ಎಚ್ಚರಿಕೆ ಕೊಟ್ಟಿದ್ದಾರೆ. ಸಾಕಾರ ಸಾಧನವೇ ಸುಲಭವಾದುದೆಂದು ಶ್ರೀ ಕೃಷ್ಣ ಭಗವಂತನೂ ಗೀತೆಯಲ್ಲಿ ಹೇಳಿದ್ದಾನೆ.

ಚಿದಂಬರನ ಸಗುಣ ದರ್ಶನದ ಲಾಲಸೆಯು ಮಹಾರಾಜರಲ್ಲಿ ಮಿತಿ ಮೀರಿತು. ಅವರಿಗೆ ಎತ್ತರಲ್ಲಿಯೂ ಸೊಗಸಿಲ್ಲದಂತಾಯಿತು ಅವರ ದೈನಂದಿನ ವ್ಯವಹಾರವೆಲ್ಲ ಕೇವಲ ಯಂತ್ರದಂತೆ ನಡೆಯಹತ್ತಿತು. ಅವರಿಗೆ ವ್ಯವಹಾರದ ಸರಿಯಾದ ಎಚ್ಚರಿಕೆಯೇ ಉಳಿಯದಂತಾಯಿತು. ರಾತ್ರಿ ನಿದ್ದೆ ಬರದಂತಾಯಿತು. ಕಣ್ಣೀರಿನಿಂದ ತಲೆದಿಂಬುಗಳು ತೊಯ್ಯುಹತ್ತಿದವು. ಏಕಾಂತದಲ್ಲಿ ಕುಳಿತು ಅವರು ಪರಮಾತ್ಮನಿಗೆ ಅನನ್ಯಗತಿಯಿಂದ ಪ್ರಾರ್ಥನೆ ಮಾಡಿಕೊಳ್ಳಹತ್ತಿದರು. ಅವರು ಒಂದೇಸವನೆ ಪರಮೇಶ್ವರನ ಕರುಣೆಯನ್ನು ಯಾಚಿಸಹತ್ತಿದರು. ಪರಮಾತ್ಮನನ್ನು ನೋಡಿ ಧನ್ಯನಾಗದೆ ಜೀವದಿಂದಿರುವ ದೆಂದರೆ ಜೀವನ್ಮೃತಿಯೆಂದು ಅವರು ತಿಳಿಯಹತ್ತಿದರು. ಸ್ವಲ್ಪದರಲ್ಲಿ ಹೇಳಬೇಕಾದರೆ ಅವರ ಉದ್ವಿಗ್ನತೆಯು ಎಲ್ಲ ಎಲ್ಲೆಯನ್ನು ಮೀರಿತು. ಪರಮಾತ್ಮ ಪ್ರಾಪ್ತಿಗಾಗಿ ಅವರು ಏನು ಬೇಕಾದ್ದು ಮಾಡಲಿಕ್ಕೂ ಸಿದ್ಧರಾದರು. ಶ್ರೀ ಏಕನಾಥ ಮಹಾರಾಜರ ಶಬ್ದಗಳಲ್ಲಿ ಹೇಳಬೇಕಾದರೆ ಅವರಿಗೆ ''ಭಗವತ್ ಪ್ರಾಪ್ತಿಯ ತೀವ್ರವ್ಯಥೆ"ಯಾಗಹತ್ತಿತು. ಇದಕ್ಕೆ 'ರುದ್ಧ ಜಿಜ್ಞಾಸೆ'ಯೆಂದೂ ಅವರು ಹೆಸರು ಕೊಟ್ಟಿದ್ದಾರೆ. ಪರಮಾತ್ಮ ಪ್ರಾಪ್ತಿಗಾಗಿ ಬೇಕಾಗುವ ಮುಖ್ಯ ಗುಣವೆಂದರೆ ಇದೇ.

ನವು ಚರಿತ್ರ ನಾಯಕರಿಗೆ ಏನು ಮಾಡಬೇಕೆಂಬುದು ತಿಳಿಯದಂತೆ

ಆಯಿತು. ಯಾರಿಂದ ನನಗೆ ಚಿದಂಬರನ ದರುಶನವಾದೀತೆಂದು ಅವರು ವಿಚಾರ ಮಾಡಹತ್ತಿದರು. ಆದರೆ ಅಂತಹ ಯಾವ ಜನರೂ ಅವರಿಗೆ ಕಾಣಿಸಲಿಲ್ಲ. ಆದರೆ ಏನು ಬೇಕಾದ್ದಾದರೂ ಸರಿ, ಪರಮಾತ್ಮನ ದರುಶನ ಮಾಡಿಕೊಂಡೇ ಬಿಟ್ಟೇನೆಂದು ಅವರು ಹಟತೊಟ್ಟರು. ಪರಮಾತ್ಮ ಪ್ರಾಪ್ತಿಗಾಗಿ ಪ್ರೀತಿಯ ಆಪ್ತೇಷ್ಟರನ್ನೆಲ್ಲ ತೊರೆಯಬೇಕಾಗುವದಲ್ಲದೆ ಪ್ರಾಣಾರ್ಪಣಕ್ಕೂ ಸಿದ್ಧನಾಗಬೇಕೆಂದು ಶ್ರೀ ರಾಮದಾಸ ಸ್ವಾಮಿಗಳು ಹೇಳಿದ್ದಾರೆ. ನಮ್ಮ ಚರಿತ್ರನಾಯಕರು ಅದೆಲ್ಲಕ್ಕೂ ಸಿದ್ಧರಾದರು. ಪ್ರಸಂಗಬಂದಲ್ಲಿ, ಪರಮಾತ್ಮ ಪ್ರಾಪ್ತಿಗಾಗಿ ತಂದೆ-ತಾಯಿ, ಅಣ್ಣ-ತಮ್ಮಂದಿರು, ಬಂದು ಬಳಗದವರನ್ನೆಲ್ಲ ಬಿಡಲಿಕ್ಕೂ ಅವರು ನಿಶ್ಚಯಮಾಡಿದರು ಬೇಕಾದ ಕಷ್ಟನಷ್ಟಗಳನ್ನು ಸಹಿಸಿಕೊಂಡು, ಬೇಕಾದ ವ್ರತ, ನಿಯಮ, ತಪಶ್ಚರ್ಯಗಳನ್ನು ಮಾಡಲಿಕ್ಕೆ ಅವರು ಸಜ್ಜಾಗಿ ನಿಂತರು ಇಷ್ಟಾದ ಮೇಲೆ ಕೇಳುವದೇನು ? ಮಾನವ ಪ್ರಯತ್ನದ ಪರಾಕಾಷ್ಠೆಯೇ ಪರಮಾತ್ಮ ಕೃಪೆಯ ಪ್ರಾರಂಭವು. ಮಾಡತಕ್ಕ ಪ್ರಯತ್ನವನ್ನೆಲ್ಲ ಮಾನವನು ಪ್ರಾಮಾಣಿಕತನದಿಂದ ಮಾಡಿ ನಿರಾಶೆಯಾಗುವ ಹೊತ್ತು ಬಂತೆಂದರೆ ಪರಮಾತ್ಮನು ಕರುಣೆ ತೋರುವನು. ಮಹಾರಾಜರಿಗೆ ಹೀಗೆ ನಿರಾಶೆಯಾಗುವ ಸ್ಥಿತಿಯು ಬರುವಷ್ಟರಲ್ಲಿಯೇ ಅವರ ಜನ್ಮಸಾರ್ಥಕತೆಯ ಕಾಲವು ಒದಗಿಬಂತು

ಸತ್ಪುರುಷರ ಮಹಿಮೆಯು ಅಗಾಧವಾದುದೆಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಯಾವುದೇ ಕಾರಣದಿಂದ ಸತ್‌ಸಂಗತಿಯು ಒದಗಿ ಬಂದರೆ ಸಾಕು, ಮಾನವನ ಹಿತವಾಗುತ್ತದೆಂದು ಹೇಳಬಹುದು. ಮಹಾ ಪುರುಷರ ಆಶ್ರಯವು ಸಿಕ್ಕುವುದೇ ದುರ್ಲಭವು. ದೊಡ್ಡವರ ಸಂಗತಿಯು ಅಲ್ಪಕಾಲೀನವಾದರೂ ಕಲ್ಯಾಣದಾಯಕವೆಂದು ಎಲ್ಲ ಧರ್ಮಶಾಸ್ತ್ರಗಳು ಹೇಳುತ್ತವೆ. ''ಮಹತ್‌ಸಂಗವು ದುರ್ಲಭವೂ, ಅಗಮ್ಯವೂ, ಅಮೋಘವೂ ಆಗಿರುವದೆಂ''ದು ನಾರದಭಕ್ತಿ ಸೂತ್ರಗಳು ಹೇಳುತ್ತವೆ. ಸಂತಸಂಗದ ಹಿರಿಮೆಯನ್ನು ಸಂತರು ಬಹುವಿಧವಾಗಿ ಹಾಡಿದ್ದಾರೆ. ಶ್ರೀ ಮದ್ಭಾಗವತವಂತೂ ಈ ವಿಷಯವನ್ನು ಮತ್ತೆ ಮತ್ತೆ ಪ್ರತಿಪಾದಿಸಿದೆ ಎಂತೆಯೇ ಶ್ರೀ ಮುಚ್ಛಂಕರ ಭಗವತ್ಪಾದರವರೂ ಕೂಡ ''ಮನಃಪ್ರತ್ಯಗ್ಗತಿ, ಮಮ ಮುಕ್ತಿಪ್ರತ್ಯಗ್ಗತಿ.

ಮತ್ತು ಮಹಾಪುರುಷರ ಆಶ್ರಯಗಳೆಂಬ ಮೂರು ಪದಾರ್ಥಗಳು ಬಲು ದುರ್ಲಭವಾಗಿವೆ. ಸುದೈವವಿದ್ದರೇ ಅವು ಸಿಕ್ಕುವವು." ಎಂದು ಆಸ್ಪಣೆ ಕೊಡಿಸಿದ್ದಾರೆ ನಮ್ಮ ಚರಿತ್ರನಾಯಕರಿಗಾದರೂ ಈ ಮಾತು ಗೊತ್ತಿತ್ತು. ಸತ್ಪುರುಷ ಸಹಾಯವಿಲ್ಲದೆ ಭಗವದ್ದರ್ಶನವಾಗದೆಂದು ಅವರಿಗೆ ಪೂರ್ಣವಾಗಿ ನಿಶ್ಚಯವಾಗಿತ್ತು. ಆದರೆ ಇಂತಹ ಸತ್ಪುರುಷರನ್ನು ಎಲ್ಲಿ ಮತ್ತು ಹೇಗೆ ಹುಡುಕಬೇಕೆಂಬದು ಅವರಿಗೆ ತಿಳಿಯುವಂತಾಗಿತ್ತು. ಅವರು ಯಾವಾಗಲೂ ಅದೇ ಶೋಧದಲ್ಲಿಯೇ ಇದ್ದರು.

ನಮ್ಮ ಚರಿತ್ರನಾಯಕರ ತಂದೆಯವರಾದ ಶ್ರೀ ಬಾಳಕೃಷ್ಣಭಟ್ಟರು ನಿತ್ಯ ಸಾಯಂಕಾಲ ಮನೆಯವರನ್ನೆಲ್ಲ ಕೂಡಿಸಿಕೊಂಡು ಪುರಾಣ ಪುಣ್ಯಕಥೆಗಳನ್ನು ಹೇಳುತ್ತಿದ್ದರೆಂದು ಈಮೊದಲೇ ಹೇಳಿದ್ದೇವೆ. ಎಂದಿನಂತೆ ಅವರೊಂದು ದಿನ ಪುರಾಣವನ್ನು ಹೇಳುತ್ತಿದ್ದರು. ವಿಷಯ ಪ್ರತಿಪಾದನೆಯ ಭರದಲ್ಲಿ ದತ್ತಾತ್ರೇಯಾವತಾರದ ವಿಷಯ ಹೊರಬೆತು. ''ದೇವರು ಮಾಯೆಯನ್ನು ನಿರ್ಮಾಣಮಾಡಿ ಜೀವಜಂತುಗಳನ್ನು ಮೋಹಗೊಳಿಸಿದಮೇಲೆ, ಅವುಗಳನ್ನು ಅವರಿಂದ ಪಾರುಗಾಣಿಸುವದಕ್ಕಾಗಿ ತಾನೇ ಗುರುರೂಪನಾಗಿ ಅವತರಿಸಿ ಬೋಧಮಾಡಿದನು. ಆ ಅವತಾರವೇ ಶ್ರೀಗುರುದೇವದತ್ತನ ಅವತಾರವು ರಾಮಕೃಷ್ಣಾದಿ ಅವತಾರಗಳು ಕೆಲವೊಂದು ವಿಶಿಷ್ಟ ಕೆಲಸಕ್ಕಾಗಿ ಆದವುಗಳು. ಆಯಾ ಕೆಲಸವಾದ ಮೇಲೆ ರಾಮಕೃಷ್ಣಾದಿಗಳು ಶರೀರವಿಟ್ಟು ಸ್ವಸ್ವರೂಪದಲ್ಲಿ ಐಕ್ಯರಾದರು. ಅದರೆ ದತ್ತನ ಅವತಾರವು ಅವಿನಾಶಿಯಾದುದು. ಅವನು ಗುರುವೂ ಆಹುದು. ದೇವರೂ ಆಹುದು. ಸೃಷ್ಟಿಯಿರುವವರೆಗೆ ಅವನು ಗುರುರೂಪದಿಂದ ಮಾಡಬೇಕಾಗಿದ್ದ ಕೆಲಸವು ಇದ್ದೇ ಇದೆ. ಕಲಿಯುಗದಲ್ಲಂತೂ ದತ್ತಗುರುವಿನ ಹೊರತು ಗತಿಯೇ ಇಲ್ಲ. 'ಕಲೌ ಶ್ರೀಪಾದವಲ್ಲಭಃ' ಎಂಬದು ಪ್ರಸಿದ್ಧವೇ ಇದೆ. ದತ್ತನು ಯಾವಾಗಲೂ ಉಪದೇಶಕನ ಕೆಲಸವನ್ನು ಮಾಡುತ್ತಲೇ ಇದ್ದಾನೆ. ಆ ದತ್ತಗುರುವು ಸದ್ಯಕ್ಕೆ ಅಕ್ಕಲಕೋಟೆಯಲ್ಲಿ ಮಾನವ ರೂಪವನ್ನು ಧಾರಣಮಾಡಿ ಲೀಲೆಯಾಡುತ್ತಿದ್ದಾನೆ. ಅವನ ಚರಿತ್ರೆಯು ಅದ್ಭುತವಾದುದು. ಬೇಕಾದವರು ಅಲ್ಲಿ ಹೋಗಿ ನೋಡಬಹುದು ಶ್ರೀ ಸದ್ಗುರು ದತ್ತಾತ್ರೇಯನು ಸಾಮಾನ್ಯ ಜನರಿಗೂ ಈಗ ದೃಶ್ಯವಾಗಿ ಕ್ರೀಡಿಸುತ್ತಿದ್ದಾನೆ. ಅವನ ಲೀಲೆಗಳನ್ನು

ಸರಿಯಾಗಿ ವರ್ಣಿಸುವದು ಅಶಕ್ಯವೇ ಸರಿ" ಎಂದು ಹೇಳಿಬಿಟ್ಟರು. ಸಾಧಕಾವಸ್ಥೆಯ ಕೊನೆಯ ಮೆಟ್ಟಿಲಲ್ಲಿ ನಿಂತು ಉಸುರ್ಗವೆಯುತ್ತಿದ್ದ ನಮ್ಮ ಚರಿತ್ರನಾಯಕರಿಗೆ ಇದರಿಂದ ಸಂಜೀವನಿ ಮಾತ್ರೆ ಸಿಕ್ಕಂತಾಯಿತು. ಅವರ ಕಿವಿಗಳು ನಿಗರಿದವು. ಕೂದಲು ನೆಟ್ಟಗಾದವು. ಆ ಹೆಸರು ಕೇಳಿದೊಡನೆ ಅವರ ಮೈ ಜುಮ್ಮೆಂದಿತು. ಕಣ್ಣಿನಿಂದ ಪ್ರೇಮಾಶ್ರುಗಳು ಉದುರಹತ್ತಿದವು. ವಾಚಕರೇ "ಭಾವಸ್ಥಿರಾಣಿ ಜನನಾಂತರ ಸೌಹೃದಾನಿ", ಅಲ್ಲವೇ?

ಆ ದಿನ ಹೇಗೋ ಕಳೆಯಿತು. ಮರುದಿವಸದಿಂದ ನಮ್ಮ ಚರಿತ್ರನಾಯಕರು ತಮ್ಮ ಹಿರಿಯರಿಗೆ ಗಂಟೇಬಿದ್ದು ಒಟ್ಟರು. ಪುನಃ ಪುನಃ ಶ್ರೀ ದತ್ತಾತ್ರೇಯ ಸ್ವಾಮಿಸಮರ್ಥ ಶ್ರೀ ಅಕ್ಕಲಕೋಟಿಸ್ವಾಮಿ ಮಹಾರಾಜರ ವಿಷಯವಾಗಿ ಪ್ರಶ್ನೆ ಮಾಡಹತ್ತಿದರು. ಬಾಳಕೃಷ್ಣಭಟ್ಟರು ತಮಗೆ ಆ ದಿವ್ಯ ವಿಭೂತಿಯ ವಿಷಯವಾಗಿ ಗೊತ್ತಿದ್ದ ಎಲ್ಲ ಸಂಗತಿಗಳನ್ನೂ ನಮ್ಮ ಚರಿತ್ರನಾಯಕರಿಗೆ ಹೇಳಿದರು ಆದರೂ ಅದರಿಂದ ನಮ್ಮ ಚರಿತ್ರನಾಯಕರಿಗ ತೃಪ್ತಿಯಾಗಲಿಲ್ಲ. ಆ ಮಹಾಮಹಿಮರ ಲೀಲಾನುಗ್ರಹವನ್ನು ಕೇಳಿದಂತೆಲ್ಲ ಅವರ ಜಿಜ್ಞಾಸೆಯು ಬೆಳೆಯುತ್ತಲೇ ನಡೆಯಿತು ಕೊನೆಕೊನೆಗಂತೂ ಅವರನ್ನು ನಾನೇ ಎಂದು ನೋಡುವೆನೋ ಎಂಬ ಉತ್ಕಂಠೆಯು ನಮ್ಮ ಚರಿತ್ರನಾಯಕರಲ್ಲಿ ಅತ್ಯಧಿಕವಾಗಿ ಬೆಳೆಯಿತು.

ಆದರೆ ಅವರನ್ನು ನೋಡುವ ಬಗೆಯೇನು?— ಎಂಬ ಚಿಂತೆಯು ನಮ್ಮ ಚರಿತ್ರನಾಯಕರನ್ನು ಬಾಧಿಸಹತ್ತಿತು ಅವರು ಅನೇಕ ರೀತಿಯಿಂದ ವಿಚಾರಮಾಡಿ ನೋಡಿದರು. ಮುರಗೋಡನೆಲ್ಲಿ? ಅಕ್ಕಲಕೋಟೆಯೆಲ್ಲಿ? ಈಗಿನಂತೆ ಆಗ ಮೋಟಾರು ಮೊದಲಾದ ವಾಹನಗಳ ಸೌಕರ್ಯವಿದ್ದಿಲ್ಲ ಪ್ರವಾಸವು ದೀರ್ಘಕಾಲೀನವೂ, ಅನೇಕ ತೊಂದರೆಗಳಿಂದ ಕೂಡಿಕೊಂಡದ್ದೂ ಆಗಿತ್ತು. ಇಷ್ಟು ದೂರಿನ ಪ್ರವಾಸ ಮಾಡಲಿಕ್ಕೆ ಹಣವೂ ಬೇಕು ಆದರೆ ಇನ್ನೂ ವಿದ್ಯಾರ್ಥಿಯಾಗಿರುವ ನಮ್ಮ ಚರಿತ್ರನಾಯಕರಲ್ಲಿ ಹಣವೆಲ್ಲಿಂದ ಬರಬೇಕು? ದಾರಿಯಲ್ಲಿ ಸಂಗಡಿಗರು ಯಾರು, ಊಟ ನೀರುಗಳ ವ್ಯವಸ್ಥೆ ಏನು, ಎಂಬಿನೇ ಮೊದಲಾದ ಸಂಗತಿಗಳೂ ವಿಚಾರಣೀಯವೇ. ಇನ್ನೂ ಚಿಕ್ಕ ವಯಸ್ಸು; ಪ್ರವಾಸದ ಅನುಭವವಿಲ್ಲ; ಇಂತಹ ಸ್ಥಿತಿಯಲ್ಲಿ ಏನು

ಮಾಡಬೇಕೆಂಬದು ಅವರಿಗೆ ತೋಚದಾಯಿತು. ತಂದೆಯವರಾಗಲಿ ಅಣ್ಣಂದಿರಾಗಲಿ ಅವರನ್ನು ಕರೆದುಕೊಂಡು ಹೋಗಿದ್ದರೆ ಸುಲಭವಾಗುತ್ತಿತ್ತು. ಆದರೆ ಆ ಮಾತಿಗೆ ಹಿರಿಯರು ಒಪ್ಪುವರೆಂಬ ಆಸೆ ಎಷ್ಟೂ ಇರಲಿಲ್ಲ ವಿಶ್ವಾಸಕ್ಕೆ ಪಾತ್ರರಾದ ಉಳಿದ ವ್ಯಕ್ತಿಗಳೂ ಯಾರೂ ಕಾಣಿಸಲಿಲ್ಲ. ಗೆಳೆಯರಂತೂ ಎಲ್ಲರೂ ಚಿಕ್ಕವರೇ ಆದುದರಿಂದ ಏನು ಮಾಡಬೇಕೆಂಬ ಚಿಂತೆಯಿಂದ ಅವರು ಕೊರಗುತ್ತಿದ್ದರು

ಹೀಗೆ ಪರಿಸ್ಥಿತಿಯು ಎಲ್ಲ ರೀತಿಯಿಂದಲೂ ಪ್ರತಿಕೂಲವಾಗಿತ್ತು. ಆದರೆ ಇಂತಹ ವಿರುದ್ಧ ವಾದ ವಾತಾವರಣದಲ್ಲಿಯೂ ತಮ್ಮ ದಾರಿಯನ್ನು ಕಂಡುಕೊಂಡು ಉದ್ದಿಷ್ಟ ಧ್ಯೇಯವನ್ನು ಸಾಧಿಸುವದೇ ದೊಡ್ಡವರ ಲಕ್ಷಣವಲ್ಲವೇ? ನಮ್ಮ ಚರಿತ್ರನಾಯಕರೇನು ಸಾಮಾನ್ಯ ಪುರುಷರಾಗಿದ್ದಿಲ್ಲವೆಂಬದು ವಾಚಕರಿಗೆ ಈಗ ಮನವರಿಕೆಯಾಗಿರಲಿಕ್ಕೆ ಸಾಕು. ಅವರು ನಿರಾಶೆಯಿಂದ ಎದೆಗುಂದಿ ಕೈ ಮುಚ್ಚಿಕೊಂಡು ಕುಳಿತುಕೊಳ್ಳುವ ಹೇಡಿಗಳಾಗಿದ್ದಿಲ್ಲ. ಭಗವತ್ ಪ್ರಾಪ್ತಿಗಾಗಿ ಎಲ್ಲವನ್ನೂ ತೊರೆಯುವದಲ್ಲದೆ ಪ್ರಾಣಾರ್ಪಣೆಗೂ ಕೂಡ ಸಿದ್ಧರಾದ ಧೀರಬಂಟರಾಗಿದ್ದರು. ಸಾಧನಗಳ ಅಭಾವಕ್ಕೆ ಹೆದರಿ ಸಾಧ್ಯವನ್ನೇ ಬಿಟ್ಟುಕೊಡುವ ಪುಕ್ಕತನವು ಅವರಲ್ಲಿ ಇದ್ದಿಲ್ಲ. ಸಂಕಟಗಳು ಬಂದಷ್ಟೂ ಅವರ ಧೈರ್ಯವು ಹೆಚ್ಚುತ್ತಿತ್ತು. ಸುಲಭವಾಗಿ ದೊರೆಯುವ ವಸ್ತುಗಳ ಬೆಲೆಯಾದರೂ ಅಲ್ಪವೇ ಇರುವದಿಲ್ಲವೇ? ಅದಕ್ಕಾಗಿ ಸರಿಯಾದ ಬೆಲೆ ಕೊಡಲು ಸಿದ್ಧರಾಗಬೇಡವೇ? ಕಷ್ಟಪಟ್ಟ ಹೊರತು ಯಾವ ಮಾತು ತಾನೇ ಸಾಧ್ಯ? ಆದುದರಿಂದ ಈ ಪ್ರಸಂಗದಲ್ಲಿ ಸಹ ನಮ್ಮ ಚರಿತ್ರನಾಯಕರು ಕೈಕಾಲು ಕಳೆದುಕೊಳ್ಳಲಿಲ್ಲ. ತಮ್ಮ ಪರಮಾತ್ಮ ಪ್ರಾಪ್ತಿಯ ಇಚ್ಛೆಯ ತೀವ್ರತೆಯನ್ನು ಪರೀಕ್ಷಿಸುವದಕ್ಕಾಗಿಯೇ ಈ ಸಮಯ ಬಂದಿದೆಯೆಂದು ಅವರು ತಿಳಿದುಕೊಂಡರು. ಕಾರಣ ಯಾರಿಗೂ ತಿಳಿಸದೆ, ತಾವೊಬ್ಬರೇ ಹೋಗಿ ಶ್ರೀ ಸಮರ್ಥ ಅಕ್ಕಲಕೋಟ ಸ್ವಾಮೀ ಮಹಾರಾಜರ ದರುಶನ ತಕ್ಕೊಳ್ಳಬೇಕೆಂದು ಅವರು ದೃಢನಿರ್ಧಾರ ಮಾಡಿದರು. (ಶಾಲಿವಾಹನ ಶಕೆ ೧೭೯೩ ಪೌಷ ಶುದ್ಧ ಅಷ್ಟಮಿ ಸನ್ ೧೮೭೧ ಇಸ್ವಿ).

ಹಿರಿಯರಿಗೆ ಕೇಳಿದರೆ ಅಪ್ಪಣೆ ಸಿಕ್ಕಲಾರದೆಂಬದು ಅವರಿಗೆ ಗೊತ್ತಿದ್ದ

ರಿಂದ ಅವರು ಆ ಗೋಜಿಗೇ ಹೋಗಲಿಲ್ಲ. ಪರಮಾತ್ಮ ಪ್ರಾಪ್ತಿಗಾಗಿ ಭಕ್ತ ಪ್ರಲ್ಹಾದನಿಗೆ ತಂದೆಯನ್ನೇ ಮೀರಿ ನಡೆಯುವ ಪ್ರಸಂಗಬಂತು; ತಂದೆಯ ದ್ವೇಷವನ್ನು ಕೂಡ ಸಹಿಸಬೇಕಾಯಿತು. ಕೊನೆಗೆ ತಂದೆಯ ವಧೆಕ್ಕೂ ಕೂಡ ಅವನೇ ಕಾರಣನಾಗಬೇಕಾಯಿತು. ಹೀಗೆ ಭಗವತ್‌ಪ್ರಾಪ್ತಿಗಾಗಿ ಏನು ಮಾಡಬೇಕಾದೀತೆಂಬ ನಿಯಮವಿಲ್ಲ. ಲೌಕಿಕ ಬಂಧನಗಳನ್ನೆಲ್ಲ ಸರಿಯಾಗಿಯೇ ಪಾಲಿಸಬೇಕೆಂದರೆ ಪರಮಾತ್ಮನು ಸಿಕ್ಕುವದೆಂತು? ಎಲ್ಲವನ್ನೂ ತೊರೆದವನಿಗಲ್ಲದೆ ಪರಮಾತ್ಮನು ಸಿಕ್ಕವದು ? ಆದುದರಿಂದ ಲೌಕಿಕರ ದೃಷ್ಟಿಯಿಂದ ನಮ್ಮ ಚರಿತ್ರನಾಯಕರು ಹಿರಿಯರಿಗೆ ತಿಳಿಸದೆ ಮನೆಬಿಟ್ಟು ಹೋದದ್ದು ಒಂದು ದೋಷವಾಗಿ ಕಂಡರೂ, ಅದು ನಿಜವಾಗಿ ದೋಷವಲ್ಲ. ತಮಗಿಂತ ಚಿಕ್ಕವರಾದ ಓಂಕಾರಭಟ್ಟರ ಕಡೆಗೆ ತಂದೆಯವರಿಗೆ ಕೊಡಲಿಕ್ಕೆ ಒಂದು ಪತ್ರವನ್ನು ಬರಕೊಟ್ಟರಲ್ಲದೆ, ಅದನ್ನು ಎರಡು ದಿವಸಗಳ ನಂತರ ತಂದೆಯವರಿಗೆ ಕೊಡಬೇಕೆಂದು ತಿಳಿಸಿದ್ದರು. ದುರ್ದೈವದಿಂದ ಇಂದು ಆ ಪತ್ರವು ಉಸಲಬ್ಧವಿಲ್ಲ. ಆದರೆ ಅದರಲ್ಲಿ ಅವರು ಏನು ಬರೆದಿರಬಹುದೆಂಬದನ್ನು ಊಹಿಸಬಹುದಾಗಿದೆ. ತಾವು ಅಕ್ಕಲಕೋಟೆಗೆ ಹೋಗುವೆನೆಂದೂ, ದತ್ತಗುರುವಿನ ದರುಶನವಾದ ಮೇಲೆ ತಿರುಗಿ ಬರುವೆನೆಂದೂ, ಚಿಂತೆಮಾಡುವ ಕಾರಣವಿಲ್ಲೆಂದೂ, ಹೇಳದೇ ಹೋದುದಕ್ಕಾಗಿ ಕ್ಷಮಿಸಬೇಕೆಂದೂ ಬರೆದಿದ್ದರೆಂಬುದು ಸಹಜವಿದೆ.

ಮುರಗೋಡದಿಂದ ಅಕ್ಕಲಕೋಟೆಗೆ ಹೋಗಬೇಕಾದರೆ ಧಾರವಾಡಕ್ಕೆ ಹೋಗಿ ರೇಲಮಾರ್ಗವನ್ನು ಹಿಡಿಯಬಹುದು. ಅಥವಾ ಯರಗಟ್ಟಿ, ಕಲಾದಿಗಿ, ಬಾಗಲಕೋಟೆ, ವಿಜಾಪುರಗಳ ಮಾರ್ಗವಾಗಿ ಲೈನದಾರಿಯಿಂದ ಹೋಗಬಹುದು. ರೇಲಮಾರ್ಗಕ್ಕೆ ಹಣ ಬೇಕು. ಲೈನಮಾರ್ಗದಿಂದ ಹೋದರೆ ಸುತ್ತಾಗುವದು. ಆದುದರಿಂದ ಅವರು ಎರಡನ್ನೂ ಬಿಟ್ಟು ನಡುವಿನ ಕಾಲುದಾರಿಯಿಂದಲೇ ಹೊರಡುವ ನಿಶ್ಚಯ ಮಾಡಿದರು. ಅವರ ಆಯುಷ್ಯದಲ್ಲಿ ಇದೇ ಮೊದಲನೆಯ ಪ್ರವಾಸವಾಗಿತ್ತು. ನಡೆಯುತ್ತ ಹೋಗುವದೆಂದ ಮೇಲೆ ಸಂಗಡ ಹೆಚ್ಚಿನ ಸಾಹಿತ್ಯಗಳನ್ನು ತಕ್ಕೊಳ್ಳುವ ಅವಕಾಶವಿರಲಿಲ್ಲ. ಮೈಮೇಲಿನ ಅರಿವೆಗಳು, ತಂಬಿಗೆ, ಪಂಚಪದೀ ಅಭಂಗದ ಕೈಬರೆಹದ ಪುಸ್ತಕ, ಒಂದು ರೂಪಾಯಿ ಇವಿಷ್ಟೇ ಅವರ

ಬಳಿಯಲ್ಲಿದ್ದ ಸಾಮಾನುಗಳು ಆದವೆ. ಎಲ್ಲ ಭಾರವನ್ನು ಚಿದಂಬರನ ಮೇಲೆ ಹಾಕಿ, ಯಾವುದಕ್ಕೂ ಹೆದರದೆ ಅವರೊಂದು ದಿನ ಇನ್ನೂ ರಾತ್ರಿ ಇರುವಾಗಲೇ ಎದ್ದು ಅಕ್ಕಲಕೋಟೆಯ ದಾರಿಯನ್ನು ಹಿಡಿದರು. ಅವರು ಹೊರಟದ್ದಾಗ ಮನೆಯೊಳಗಿನ ಜನರೆಲ್ಲ ಇನ್ನೂ ನಿದ್ರೆಯಲ್ಲಿಯೇ ಮಲಗಿ ಕೊಂಡಿದ್ದರು. ಕಾರಣ ಅವರು ಹೊರಬಿದ್ದ ಸಂಗತಿಯು ಆ ಕಾಲಕ್ಕೆ ಯಾರಿಗೂ ತಿಳಿಯಲಿಲ್ಲ.

ನಮ್ಮ ಚರಿತ್ರನಾಯಕರ ವಯಸ್ಸು ಆಗ ೧೫ ವರುಷ ಮಾತ್ರ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಕೇವಲ ಪರಮಾತ್ಮ ಪ್ರಾಪ್ತಿಗಾಗಿ ಮನೆಬಿಟ್ಟು ಹೊರಬಿದ್ದವರ ಉದಾಹರಣೆಗಳು ತೀರ ವಿರಳ. ಗಾಣಗಾಪುರದ ಶ್ರೀಮನ್ನೃಸಿಂಹ ಸರಸ್ವತೀ ಸ್ವಾಮಿಗಳವರು ತಮ್ಮ ೮ ನೆಯ ವರುಷದಲ್ಲಿಯೇ ಸಂಸಾರವನ್ನು ತೊರೆದು ಯತ್ಯಾಶ್ರಮವನ್ನು ಸ್ವೀಕರಿಸಿದರು. ಮಹಾರಾಷ್ಟ್ರದ ಶ್ರೀ ಏಕನಾಥ ಮಹಾರಾಜರು ತಮ್ಮ ವಯಸ್ಸಿನ ೧೨ ನೆಯ ವರುಷವೇ ಭಗವತ್‌ಪ್ರಾಪ್ತಿಗೆಂದು ಮನೆಬಿಟ್ಟು ಹೊರಟರು. ಸುಪ್ರಸಿದ್ಧರಾದ ಶ್ರೀ ರಾಮದಾಸ ಸ್ವಾಮಿಗಳು ೧೨ ನೆಯ ವರುಷದಲ್ಲಿಯೇ ಲಗ್ನ ಮಂಟಪದೊಳಗಿಂದ ಕಾಲ್ತೆಗೆದರು. ಇದರ ಮೇಲಿಂದ ನಮ್ಮ ಚರಿತ್ರನಾಯಕರ ಹೆಸರು ಎಂಥವರ ಮಾಲಿಕೆಯೊಳಗೆ ಬರುತ್ತದೆಂಬದು ತಿಳಿಯುವಂತಿದೆ. ೧೫ ವರುಷದ ಬಾಲಕರ ಆಯುಷ್ಯವು ಹೇಗೆ ಹೋಗುತ್ತಿರುತ್ತದೆಂಬುದರ ವಿಚಾರಮಾಡಿ ನೋಡಿದರೆ ಈ ಮಾತಿನ ಮಹತ್ತ್ವವು ಹೊಳೆಯುವಂತಿದೆ. ನಮ್ಮ ಚರಿತ್ರನಾಯಕರ ದೃಢನಿಶ್ಚಯವೂ, ವೈರಾಗ್ಯವೂ, ಭಗವತ್ ಪ್ರಾಪ್ತಿಯ ಹಂಬಲವೂ ಅವರ್ಣನೀಯವೇ ಸರಿ.

ವಾಚಕರೇ, ಬನ್ನಿ, ಬನ್ನಿ. ದೇವರ ದರುಶನಕ್ಕಾಗಿ ಇಷ್ಟು ತವಕ ದಿಂದ ಎಲ್ಲವನ್ನೂ ಒದ್ದೊಗೆದು ಹೊರಟಿರುವ ಈ ಮಹಾಪುರುಷನನ್ನು ಅವನ ಪ್ರವಾಸದಲ್ಲಿ ನಾವೂ ಹಿಂಬಾಲಿಸೋಣ, ಬನ್ನಿ. ಅದರಿಂದ ನಮಗೆ ದೇವರ ದರುಶನವೇ ಸಾಕ್ಷಾತ್ತಾಗಿ ಆಗದಿದ್ದರೂ, ದೇವದರ್ಶನದ ಮಾರ್ಗವಾದರೂ ತಿಳಿದೀತು.

ಪಂಚ ಪಂಚ ಉಷಃಕಾಲದಲ್ಲಿ ಎದ್ದಮೇಲೆ ಕೈಕಾಲು ಮೋರೆ ತೊಳೆದುಕೊಂಡು, ಪ್ರಾತಃಸ್ಮರಣೆ ಮಾಡುವರು. ಆ ಮೇಲೆ ಕಕ್ಕಡಾರತಿಯ

ಬಾಹ್ಯ ಸಾಮಾನುಗಳು ಯಾವೂ ಇರದ್ದರಿಂದ ಆರತಿಯನ್ನು ಮಾತ್ರ ಬಾಯಿಂದ ಅಂದು ಮನಸಾ ದೇವರಿಗೆ ಆರತಿಯಾಗುವದು. ಆ ಮೇಲೆ ಪ್ರವಾಸಕ್ಕೆ ಹೊರಡುವರು. ಪ್ರವಾಸ ಕಾಲದಲ್ಲಿ ಮನಸ್ಸು ನಮ್ಮೆಲ್ಲರಂತೆ ಇಲ್ಲದ ಮನೋರಾಜ್ಯಗಳನ್ನು ಮಾಡುವದೇ? ಛೀ, ಎಂದೂ ಇಲ್ಲ. ದಾರಿಗುಂಟ ಅಭಂಗಗಳನ್ನು ಉಚ್ಚಸ್ವರದಿಂದ ಅನ್ನುತ್ತ ಸಾಗುವರು. ನಡು ನಡುವೆ ಚಿದಂಬರನ ನಾಮಘೋಷವು ನಡೆಯುವದು. ಅವರ ಅಭಂಗ ಪಠಣ ದಿಂದಲೂ, ನಾಮಘೊಷಣದಿಂದಲೂ, ಸುತ್ತಲಿನ ವಾತಾವರಣವೆಲ್ಲ ದುಮು ದುಮಿಸಹತ್ತವದು. ಅದರಿಂದ ಸೈಮುರೆತು ಮುಲಗಿರುವ ಜೀವಿಗಳನ್ನೆಲ್ಲ ಎಚ್ಚರಿಸುವ ಸಲುವಾಗಿಯೇ ಅವರು ಈ ವ್ರತವನ್ನು ಕೈಕೊಂಡಿರುವರೇನೋ ಎಂಬಂತೆ ಭಾಸವಾಗುವದು. ಹೀಗೆ ಪ್ರವಾಸವು ಭಗವದ್‌ಗುಣ ಗಾನದಲ್ಲೆ ಒಂದು ಪ್ರಹರದ ವರೆಗೆ ಸಾಗುವದು. ಅಷ್ಟರಲ್ಲಿ ೮—೯ ಮೈಲು ಮಾರ್ಗ ಕ್ರಮಣವಾಗುವದು. ಆ ಮೇಲೆ ದಾರಿಯ ಮೇಲೆ ಹತ್ತುವ ಯಾವುದೊಂದು ಊರನ್ನು ಸೇರಿ, ದೇವರ ಗುಡಿಯೊಳಗೆ ಬಿಡಾರ ಮಾಡುವರು; ಸ್ನಾನ, ಸಂಧ್ಯಾವಂದನೆ, ಮಾನಸಿಕ ಪೂಜೆ, ಸ್ತೊತ್ರಾದಿಗಳನ್ನು ಮುಗಿಸಿಕೊಳ್ಳುವರು. ಊರಲ್ಲಿ ಬ್ರಾಹ್ಮಣರ ಮನೆಯಿದ್ದರೆ ಮಾಧುಕರೀ ಬೇಡುವರು. ಇಲ್ಲವಾದರೆ ಎಲ್ಲಿಯಾದರೂ ಅಕ್ಕಿ ಬೇಳೆಗಳನ್ನು ಸಂಪಾದಿಸಿ ಅಡಿಗೆಮಾಡಿಕೊಂಡು ದೇವರಿಗೆ ನೈವೇದ್ಯ ತೋರಿಸಿ ಊಟ ಮಾಡುವರು. ಆದೂ ದೊರೆಯದೇ ಹೋದರೆ ದೈವವಶಾತ್ ದೊರೆತ ಫಲಾಹಾರದ ಮೇಲೆಯೇ ಸಂತುಷ್ಟರಾಗು ವರು. ಸಂಜೆಯ ೪ ಗಂಟೆಯ ವರೆಗೆ ಜಪ ಮತ್ತು ವಿಶ್ರಾಂತಿ. ಆ ಮೇಲೆ ಮತ್ತೆ ಪ್ರವಾಸ. ದಾರಿಯಲ್ಲಿ ಮತ್ತೆ ಅಭಂಗಗಳ ಪಾಠಗಳೂ ಚಿದಂಬರ ನಾಮಗರ್ಜನೆಯೂ ಬೆಳಗಿನಿಂದಲೇ ಸಾಗುವವು. ಸಂಜೆಗೆ ಮತ್ತೆ ಗುಡಿಯೇ ಆಶ್ರಯ ಸ್ಥಾನವು. ಸಾಯಂಸಂಧ್ಯಾವಂದನಾದಿಗಳನ್ನು ತೀರಿಸಿ ಕೊಂಡು ಊಟ ಆಥವಾ ಫಲಾಹಾರದ ಉದ್ಯೋಗ. ಏನೂ ಸಿಕ್ಕದಿದ್ದರೆ ಚಿದಂಬರನ ನಾಮಾಮೃತದ ಪಾನವೇ ಸರಿ. ಈ ರೀತಿಯಾಗಿ ಮಹಾರಾಜರ ಪ್ರವಾಸವು ನಿರ್ವಿಘ್ನವಾಗಿ ಮುಂದುವರೆಯಿತು. ಅಖಂಡ ನಾಮಸ್ಮರಣೆ ಯಂತೂ ಎಡೆಬಿಡದೆ ನಡೆದಿತ್ತು. ಒಂದು ಕ್ಷಣವನ್ನಾದರೂ ಅವರು ಪುಕ್ಕಟೆ ಕಳೆಯುತ್ತಿರಲಿಲ್ಲ. ಹೀಗೆ ಪ್ರವಾಸ ಮಾಡುತ್ತ ಮಾಡುತ್ತ ಮಹಾರಾಜರು

ಯರಗಟ್ಟಿ, ಯಾದವಾಡ, ಮುಧೋಳ, ಜಮಖಂಡಿ, ಮೊದಲಾದವುಗಳ ಮುಖಾಂತರವಾಗಿ ವಿಜಾಪುರಕ್ಕೆ ಬಂದು ಮುಟ್ಟಿದರು.

ವಿಜಾಪುರದಲ್ಲಿ ಮಹಾರಾಜರಿಗೆ ಶ್ರೀ ಕ್ಷೇತ್ರ ಗಾಣಗಾಪುರಕ್ಕೆ ಹೊರಟಿರುವ ಬ್ರಹ್ಮಚಾರಿಗಳೊಬ್ಬರ ಪರಿಚಯವಾಯಿತು. ಬ್ರಹ್ಮಚಾರಿಗಳು ಮಹಾರಾಜರನ್ನು ತಮ್ಮ ಸಂಗಡ ಗಾಣಗಾಪುರಕ್ಕೆ ಕರಕೊಂಡು ಹೋಗಲು ಆನಂದದಿಂದ ಒಪ್ಪಿಕೊಂಡರು. ಬ್ರಹ್ಮಚಾರಿಗಳ ಸಂಗತಿಯಲ್ಲಿ ಗಾಣಗಾಪುರದ ದಾರಿಯು ಸುಖಕರವಾಗಿ ಸಾಗಿತು. ದಾರಿಯಲ್ಲಿ ಬ್ರಹ್ಮಚಾರಿಗಳು ಶ್ರೀ ದತ್ತನ ಮಹಿಮೆಯನ್ನೂ, ಚರಿತ್ರವನ್ನೂ, ಗಾಣಗಾಪುರದ ಮಹಾತ್ಮ್ಯವನ್ನೂ ಚನ್ನಾಗಿ ವರ್ಣಿಸಿ ಹೇಳಿದರು. ಅದರಿಂದ ಮಹಾರಾಜರ ಹೃದಯದಲ್ಲಿ ದತ್ತನ ವಿಷಯಕವಾದ ಭಕ್ತಿಪ್ರವಾಹವು ಇಮ್ಮಡಿಯಾಗಿ ಹರಿಯಹತ್ತಿತು.

ವಿಜಾಪುರದಿಂದ ಹೊರಟವರು ಮೊದಲು ಹಿಪ್ಪರಿಗೆ ಎಂಬ ಗ್ರಾಮಕ್ಕೆ ಹೋದರು. ಅಲ್ಲಿ ಮ್ಹಾಳಸಾಕಾಂತನಾದ ಮಾರ್ತಂಡಭೈರವನು ಇರುವನು. ಈವನು ಶ್ರೀ ಚಿದಂಬರ ದೀಕ್ಷಿತರ ಕುಲಸ್ವಾಮಿಯು. ಅದುದರಿಂದ ದೀಕ್ಷಿತ ಪರ್ಯಾದರೂ ಅಲ್ಲಿಗೆ ಅನೇಕ ಸಲ ದಯಮಾಡಿಸಿ, ನಾನಾತರದ ಲೀಲೆಗಳನ್ನು ಮಾಡಿ ತೋರಿಸಿದ್ದರು. ನಮ್ಮ ಚರಿತ್ರನಾಯಕರಿಗಾದರೂ ಈ ಸಂಗತಿಯು ಗೊತ್ತಿತ್ತು. ಅದಕ್ಕಾಗಿ ಈ ಸ್ಥಳವನ್ನು ನೋಡಬೇಕೆಂದು ಮಹಾರಾಜರು ಸ್ವಾಭಾವಿಕವಾಗಿಯೇ ಇಚ್ಛಿಸುತ್ತಿದ್ದರು. ಅಲ್ಲಿ ಮಾರ್ತಂಡ ಭೈರವನ ದರುಶನ ಪಡಕೊಂಡು ಅವರು ಸಂದಗಿಯ ಮೇಲಿಂದ ಗಾಣಗಾಪುರವನ್ನು ಮುಟ್ಟಿದರು.

ಗಾಣಗಾಪುರವು ಸುಪ್ರಸಿದ್ಧವಾದ ಯಾತ್ರಾಸ್ಥಳವಾಗಿದೆ. ಗಂಧರ್ವಪುರವೆಂಬದು ಇದರ ಸಂಸ್ಕೃತ ಹೆಸರು. ಈದು ಸದ್ಯಕ್ಕೆ ಒಂದು ಚಿಕ್ಕ ಹಳ್ಳಿಯಾಗಿದೆ. ಆದರೆ ಹಿಂದೆ ಅದೊಂದು ಮಹತ್ತ್ವದ ಸ್ಥಳವಾಗಿತ್ತೆಂದು ಕಾಣುತ್ತದೆ. ಆ ಊರಿಗೆ ಕೋಟೆಯಿತ್ತೆಂಬೂ, ಊರಿಗೆ ಒಬ್ಬ ಚಿಕ್ಕ ರಾಜನಿದ್ದನೆಂದೂ ಶ್ರೀಗುರುಚರಿತ್ರ ಗ್ರಂಥದಿಂದ ತಿಳಿದು ಬರುತ್ತದೆ. ಊರಿಂದ ೨ ಮೈಲುಗಳ ಮೇಲೆ ಭೀಮಾ ಮತ್ತು ಅಮರಜಾ ನದಿಗಳ ಸಂಗಮದ ಸಮೀಪದಲ್ಲಿ ಪ್ರಾಚೀನ ಕಾಲದೊಳಗೆ ಒಂದು ದೊಡ್ಡ ಯಜ್ಞವಾಗಿರ

ಬೇಕೆಂಬದು ಇಂದಿಗೂ ತಿಳಿಯುವಂತಿದೆ. ಯಜ್ಞವಾಗಿ ಸಾವಿರಾರು ವರ್ಷಗಳಿಗಾಗಿ ಹೋದವು. ಇಲ್ಲಿಯ ನರಿಗೆ ಅದು ಮಳೆಗಾಳಿಗಳಿಗೆ ತುತ್ತಾಗಿ ನಿಂತಿದೆ. ಹಾಗೂ ನೂರಾರು ಭಕ್ತರು ಅದನ್ನು ಸವಿಸುತ್ತಲೇ ಇದ್ದಾರೆ. ಆದರೂ ಆ ಕಾಲದ ಭಸ್ಮದ ಗುಡ್ಡವು ಇನ್ನೂ ಗುಡ್ಡವಾಗಿಯೇ ಉಳಿದಿದೆ. ಸಂಗಮದ ಮೇಲಿರುವದರಿಂದ ಸಂಗಮೇಶ್ವರನೆಂದು ಕರೆಯಲ್ಪಡುವ ಈಶ್ವರನ ಚಿಕ್ಕ ದೇವಾಲಯವೊಂದಿದೆ. ದತ್ತಾತ್ರೇಯನ ಅವತಾರವೆಂದು ಪ್ರಸಿದ್ಧರಾದ ಶ್ರೀಮನ್ನೃಸಿಂಹ ಸರಸ್ವತೀ ಸ್ವಾಮಿಗಳವರು ಅಲ್ಲಿ ಅನೇಕ ವರ್ಷ ವಾಸಮಾಡಿ ಆ ಊರನ್ನು ಪಾವನಗೊಳಿಸಿದ್ದಾರೆ. ಅದು ತೀರ್ಥವೆಂದು ಪ್ರಸಿದ್ಧವಾದುದು ಇದರಿಂದಲೇ ಊರಲ್ಲಿ ಅವರ ಮಠವಿದೆ. ಸಂಗಮದಲ್ಲಿ ಅವರ ಶಿಲಾಪಾದುಕೆಗಳನ್ನು ಸ್ಥಾಪನೆ ಮಾಡಿದ್ದಾರೆ. ಮಠದಲ್ಲಿ ಅವರ ನಿರ್ಗುಣ ಪಾದುಕೆಗಳಿವೆ. ಅವರು ಶ್ರೀಶೈಲಕ್ಕೆ ಹೋಗುವ ಮುಂಚೆ ತಮ್ಮ ಪಾದುಕೆಗಳನ್ನು ಭಕ್ತರಿಗಾಗಿ ಬಿಟ್ಟು ಹೋದರು. ಅವೇ ಈ ನಿರ್ಗುಣ ಪಾದುಕೆಗಳು. ಅವು ಈಗ ಬೆಳ್ಳಿಯ ಕರಡಿಗೆಯಲ್ಲಿ ಇರುತ್ತವೆ. ಅವುಗಳ ಯಥಾರ್ಥ ರೂಪವು ತಿಳಿಯಲಿಕ್ಕೆ ಮಾರ್ಗವಿಲ್ಲ. ಅವಕ್ಕೆ ನೀರಿನ ಸ್ಪರ್ಶವಿಲ್ಲ. ತುಳಸೀಪತ್ರ, ಬಿಲ್ವ, ಗಂಧಪುಷ್ಪ, ಕೇಶರ ಕಸ್ತೂರಿ ಮೊದಲಾದವುಗಳಿಂದ ಅವುಗಳನ್ನು ಪೂಜೆಮಾಡುವ ಪದ್ಧತಿಯಿದೆ. ಅವುಗಳನ್ನು ಪರೀಕ್ಷೆ ಮಾಡಬೇಕೆಂದು ಒಬ್ಬನು ಉಗುರುಗಳಿಂದ ಕೆದರಿದನೆಂದೂ, ಕೂಡಲೇ ರಕ್ತವು ಚಿಮ್ಮುಹತ್ತಿತೆಂದೂ ಹೇಳುತ್ತಾರೆ. ಆ ಪಾದುಕೆಗಳಲ್ಲಿ ನಾನು ಎಂದೆಂದಿಗೂ ಇದ್ದು ಭಕ್ತರ ಬಯಕೆಗಳನ್ನು ಪೂರ್ಣಮಾಡುವೆನೆಂದು ಶ್ರೀ ನೃಸಿಂಹ ಸರಸ್ವತೀ ಸ್ವಾಮಿಗಳವರು ಹೇಳಿ ಹೋಗಿರುವದರಿಂದ ಭಕ್ತರು ಇಂದಿಗೂ ಅಲ್ಲಿ ನಡಕೊಳ್ಳುತ್ತಾರೆ. ಔದುಂಬರ ಮತ್ತು ನೃಸಿಂಹವಾಡಿಗಳು ಸಹ ಇವರ ವಾಸದಿಂದಲೇ ಪವಿತ್ರವಾದ ಕ್ಷೇತ್ರಗಳು. ನಾಸ್ತಿಕರಾದವರೂ ಕೂಡ ಇಂದು ಅಲ್ಲಿಗೆ ಹೋಗಿ ದೇವರ ಅಸ್ತಿತ್ವವನ್ನು ಮನಗಾಣಬಹುದು.

ಇಂತಹ ಗಾಣಗಾಪುರವನ್ನು ಪ್ರವೇಶಿಸಿದೊಡನೆ ನಮ್ಮ ಚರಿತ್ರನಾಯಕರಿಗೆ ವಿಚಿತ್ರವಾದ ಆನಂದದ ಅನುಭವವಾಗಹತ್ತಿತು. ಅಲ್ಲಿಯ ಪವಿತ್ರ ಧೂಲಿಯನ್ನು ತಕ್ಕೊಂಡು ಅವರು ತಮ್ಮ ತಲೆಯ ಮೇಲೆ ಎರಚಿ

ಕೊಂಡರು. ಧೂಲಿದರುಶನವಾದ ಮೇಲೆ ಅವರು ಸಂಗಮಕ್ಕೆ ಹೋದರು. ಸಂಗಮ ಸ್ನಾನದಿಂದ ಅವರಲ್ಲಿ ಉಳಿದಿರಬಹುದಾದ ಅಲ್ಪಸ್ವಲ್ಪ ದುರಿತವೂ ಸುಟ್ಟು ಹೋಯಿತು. ದತ್ತಪಾದುಕೆಗಳಿಗೂ ಸಂಗಮೇಶ್ವರನಿಗೂ ಅಭಿಷೇಕವಾಯಿತು. ಆ ಮೇಲೆ ಊರಿಗೆ ಹೋಗಿ ಮಾಧುಕರೀ ಬೇಡಿದರು. ಬಂದ ಅನ್ನವನ್ನು ಶ್ರೀ ದತ್ತಾತ್ರೇಯನಿಗೆ ಅರ್ಪಣಮಾಡಿ ಪ್ರಸಾದವೆಂದು ಅದನ್ನೇ ತಾವು ಊಟಮಾಡಿದರು. ಉಳಿದ ವೇಳೆಯಲ್ಲೆಲ್ಲ ಅಭಂಗಗಳು ಪಠಣ ಮತ್ತು ಚಿದಂಬರನ ಸಾಮಾನ್ಯ ಸ್ಮರಣೆಗಳು ನಡೆಯುತ್ತಿದ್ದವು. ಹೀಗೆ ಮಹಾರಾಜರು ಗಾಣಗಾಪುರದಲ್ಲಿ ಮೂರು ದಿನಗಳ ವರೆಗೆ ಒಳ್ಳೇ ಆನಂದದಿಂದ ಇದ್ದರು.

ಅಲ್ಲಿರುವಾಗ ಮಹಾರಾಜರಿಗೆ ನಿರ್ಗುಣ ಪಾದುಕೆಗಳ ದರುಶನ ತೆಗೆದು ಕೊಳ್ಳಬೇಕೆಂಬ ಇಚ್ಛೆಯಾಯಿತು. ಆ ಬಗ್ಗೆ ಅವರು ವಿಚಾರಣೆ ನಡೆಸಿದರು. ಆಗ ಪೂಜಾರಿಗಳಲ್ಲೊಬ್ಬರು ಇವರ ಸಂಗತಿಗಳನ್ನೆಲ್ಲ ಕೇಳಿಕೊಂಡರು. ಮತ್ತು "ಇಲ್ಲಿ ಬರುವವರೆಲ್ಲರೂ ದತ್ತನ ನಿಜ ಪಾದುಕೆಗಳ ದರ್ಶನ ತಕ್ಕೊಂಡು ದೇವರಿಗೆ ನೈವೇದ್ಯ ಮಾಡಿಸುವ ಸಂಪ್ರದಾಯವಿದೆ ಬೇಕಾದವರು ಸೇವೆ ಮಾಡುತ್ತಿರುವ ಜನರಿಗೆ ತಮ್ಮ ಯೋಗ್ಯತೆಯಂತೆ ಊಟದ ಅಥವಾ ಮಾಧುಕರಿಯ ವ್ಯವಸ್ಥೆಯನ್ನು ಮಾಡುವರು. ನಿಮ್ಮ ಇಷ್ಟವಿದ್ದಂತೆ ಮಾಡಬಹುದು" ಎಂದು ಹೇಳಿದರು. ಆಗ ಮಹಾರಾಜರು ವಿನಯದಿಂದ ಕೈಜೋಡಿಸಿ "ಸ್ವಾಮಿ, ನಾನು ಬಡವನು. ನನ್ನ ಬಳಿಯಲ್ಲಿ ಹೆಚ್ಚಿನ ಹಣವಿಲ್ಲ. ಒಂದು ರೂಪಾಯಿ ಮಾತ್ರ ಇದೆ. ಅಷ್ಟರಲ್ಲಿ ಏನು ಶಕ್ಯವಿದೆಯೇ ಅದನ್ನು ಮಾಡಿಸಿ ಪುಣ್ಯಪಡಕೊಳ್ಳಿರಿ" ಎಂದು ಬೇಡಿಕೊಂಡರು ಪೂಜಾರಿಗೆ ಕರುಣೆ ಹುಟ್ಟಿತು. ಅವನು ಅವರನ್ನು ಮನೆಗೆ ಕರಕೊಂಡು ಹೋಗಿ ಒಂದು ರೂಪಾಯಿಯಲ್ಲಿಯೇ ಪಾದುಕೆಗಳ ದರುಶನವನ್ನು ಮಾಡಿಸಿದನು. ಅದರಿಂದ ಮಹಾರಾಜರಿಗೆ ತುಂಬಾ ಸಂತೋಷವಾಯಿತು. ಹೀಗೆ ಅಲ್ಲಿ ಮೂರು ದಿನಗಳನ್ನು ಕಳೆದು ನಾಲ್ಕನೆಯ ದಿನ ಬೆಳಿಗ್ಗೆ ಅಲ್ಲಿಂದ ನಮ್ಮ ಚರಿತ್ರನಾಯಕರು ಅಕ್ಕಲಕೋಟೆಗಾಗಿ ಹೊರಟರು. ಅವರ ಸಂಗಡಿಗರಾಗಿದ್ದ ಬ್ರಹ್ಮಚಾರಿಗಳು ಗಾಣಗಾಪುರದಲ್ಲಿಯೇ ಉಳಿದರು.

ಗಾಣಗಾಪುರದಿಂದ ಅಕ್ಕಲಕೋಟೆಯು ಸುಮಾರು ಎರಡು ದಿನಗಳ

ಹಾದಿಯಾಗಿದೆ. ಮಹಾರಾಜರು ತಮ್ಮ ನಿತ್ಯಕರ್ಮದಂತೆ ರಾತ್ರಿಯಲ್ಲಿ ಒಂದು ಹಳ್ಳಿಯ ಗುಡಿಯಲ್ಲಿ ಮಲಗಿದ್ದರು. ಬೆಳಗು ಮುಂಜಾನೆ ಅವರಿಗೊಂದು ದೃಷ್ಟಾಂತವಾಯಿತು. ಕನಸಿನಲ್ಲಿ ಅವರು ಅಕ್ಕಲಕೋಟೆಯನ್ನು ಮುಟ್ಟಿದಂತಾಗಿತ್ತು. ಅಲ್ಲಿ ಅವರು ಶ್ರೀ ಸ್ವಾಮೀ ಮಹಾರಾಜರು ಎಲ್ಲಿರುವರೆಂಬುದನ್ನು ವಿಚಾರಿಸುತ್ತ ಅಲ್ಲಿಗೆ ಹೋಗಿ ನೋಡಿದರು. ಮಂದಹಾಸ್ಯದಿಂದ ಶೋಭಿಸುತ್ತಿರುವ ಅಜಾನುಬಾಹುವಾದ ಒಬ್ಬ ದಿಗಂಬರ ಯತಿಗಳು ಕುಳಿತುಕೊಂಡಿದ್ದರು. ಅವರ ದಿವ್ಯ ಮೂರುತಿಯನ್ನು ನೋಡಿದೊಡನೆ ನಮ್ಮ ಚರಿತ್ರನಾಯಕರಿಗೆ ಆನಂದೋದ್ರೇಕವಾಗಿ ಅವರು ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರ ಮಾಡಿದರು. ಮತ್ತು ತಲೆಯೆತ್ತಿ ಆ ಮೂರ್ತಿಯನ್ನು ಕಣ್ತುಂಬ ನೋಡಬೇಕೆನ್ನುವಷ್ಟರಲ್ಲಿ ಯತಿಗಳ ಮೂರುತಿಯು ಮಾಯವಾಗಿ ಆ ಸ್ಥಳದಲ್ಲಿ ಬಾಲ ಚಿದಂಬರನ ಶ್ಯಾಮಸುಂದರ ರೂಪವು ಕಂಗೊಳಿಸುತ್ತಿತ್ತು. ನಮ್ಮ ಚರಿತ್ರನಾಯಕರಿಗೆ ಅತ್ಯಂತ ಆಶ್ಚರ್ಯವಾಯಿತು. ಅವರು ಇದೇನೆಂಬ ವಿಚಾರಕ್ಕೊಳಗಾದರು. ಅವರು ಸಂದೇಹವನ್ನು ತೆಗೆದು ಹಾಕುವದಕ್ಕಾಗಿ ಬಾಲಚಿದಂಬರನು ಮಾತಾಡಹತ್ತಿದನು:— "ತಮ್ಮಾ, ನಾವೀರ್ವರೂ ಒಂದೇ. ನಮ್ಮಲ್ಲಿ ಭೇದವಿಲ್ಲ" ಮತ್ತು ಮಹಾರಾಜರನ್ನು ಹತ್ತಿರಕ್ಕೆ ಕರೆದು ಅವರ ಬಾಯಲ್ಲಿ ತನ್ನ ನಾಲಿಗೆಯನ್ನಿಟ್ಟು ಆಲಿಂಗನಮಾಡಿ ಅದೃಶ್ಯನಾದನು. ಮಹಾರಾಜರು ಈ ಸುಖಾಸ್ವಾದದಿಂದ ಮೈಮೆರೆತು ಎಚ್ಚರಾದರು. ಎದ್ದು ನೋಡುವಷ್ಟರಲ್ಲಿ ರಸಿಮೆಯೊಡೆಯುತ್ತಿತ್ತು. ಮಹಾರಾಜರಿಗೆ ಕನಸಿನ ಸ್ಮೃತಿಯಿಂದ ಸ್ವರ್ಗ ಸಿಕ್ಕಂತಾಯಿತು. ಮತ್ತು ಅನೇಕ ದಿವಸಗಳಿಂದ ಅತ್ಯುತ್ಕಟತೆಯಿಂದ ಕಾಯುತ್ತಿದ್ದ ಸಗುಣ ಸಾಕ್ಷಾತ್ಕಾರವು ತೀವ್ರವೇ ಆಗುವದೆಂಬ ಭರವಸೆಯಿಂದ ಅವರಿಗೆ ಆನಂದವು ಹಿಡಿಸಲಾರದಂತಾಯಿತು. ಸಗುಣ ಸಾಕ್ಷಾತ್ಕಾರದ ಶಕುನವೆಂದೇ ಈ ಕನಸು ಬಿದ್ದಿತೆಂದೂ, ಚಿದಂಬರ ಮತ್ತು ದತ್ತ ಗುರುಗಳಲ್ಲಿ ಭೇದವಿಲ್ಲೆಂದೂ ಅವರಿಗೆ ಪೂರ್ಣಮನವರಿಕೆಯಾಯಿತು. ಭಕ್ತವತ್ಸಲನೂ, ಕೃಪಾಸಾಗರನೂ ಆದ ಚಿದಂಬರನೇ ಈ ದೃಶ್ಯವನ್ನು ತನಗೆ ತೋರಿಸಿದನೆಂದೂ ತಿಳಿದುಕೊಂಡು, ಅವನ ಮಹಿಮೆಯನ್ನು ಕೊಂಡಾಡುತ್ತ ಅದೇ ಆನಂದದ ಭರದಲ್ಲಿ ಅಕ್ಕಲಕೋಟೆಯ ದಾರಿಯನ್ನು ಹಿಡಿದರು.

ಮುರಗೋಡದಿಂದ ವಿಜಾಪುರದ ಮೇಲೆ ಗಾಣಗಾಪುರವು ಸುಮಾರು ೧೫೦ ಮೈಲಾಗಬಹುದು. ದಿನಾಲು ೧೫ ಮೈಲುಗಳಂತೆ ಹಿಡಿದರೂ ಅವರಿಗೆ ಗಾಣಗಾಪುರ ಮುಟ್ಟಲಿಕ್ಕೆ ೧೦ ದಿನಗಳು ಹಿಡಿದಿರಲಿಕ್ಕೆ ಸಾಕು. ಅಲ್ಲಿದ್ದ ಮೂರು ದಿನಗಳನ್ನು ಹಿಡಿದರೆ, ಅವರು ಮುರಗೋಡದಿಂದ ಹೊರಟು ಮೇಲೆ ಅಕ್ಕಲಕೋಟೆಗೆ ಮುಟ್ಟಲಿಕ್ಕೆ ೧೫ ದಿನಗಳಾದರೂ ಹತ್ತಿರಬೇಕೆಂದು ಊಹಿಸಬಹುದು.

— — — —



ಶ್ರೀ ಶ್ರೀ ಸದ್ಗುರು ದತ್ತಾತ್ರೇಯ ಸ್ವಾಮಿ ಸಮರ್ಥ
ಅಕ್ಕಲಕೋಟ ಮಹಾರಾಜರು
(ಸಮಾಧಿ ಶಕೆ ೧೮೦೦ ಚೈತ್ರ ವದ್ಯ ೧೩.)

೧೦ ಸಗುಣ ಸಾಕ್ಷಾತ್ಕಾರ ಮತ್ತು ಪ್ರಸಾದ

ಆ ಕಾಲಕ್ಕೆ ಶ್ರೀಗುರು ದೇವದತ್ತ ಸ್ವಾಮೀ ಸಮರ್ಥರಾದ ಶ್ರೀ ಅಕ್ಕಲ ಕೋಟ ಮಹಾರಾಜರ ಹೆಸರು ಭಾರತವರ್ಷದಲ್ಲೆಲ್ಲ ಸುಪ್ರಸಿದ್ಧವಾಗಿತ್ತು. ಅವರ ಕೀರ್ತಿಯು ಶಂತ್ಸಾಲದ ಪೂರ್ಣಚಂದ್ರಮನ ಬೆಳದಿಂಗಳಂತ ಎಲ್ಲೆಲ್ಲಿಯೂ ಅತ್ಯಂತ ಮನೋಹರವಾಗಿ ವಸರಿಸಿತ್ತು. ಸಿಂಧೆ ಹೋಳಕರ ರಂಥ ರಾಜರೂ ಕೂಡ ಮಹಾರಾಜರ ಚರಣ ದರ್ಶನಕ್ಕಾಗಿ ಕಾಯ್ದು ಕೊಂಡು ಕೂಡ್ರುತ್ತಿದ್ದರು. ಬಡೋದೆಯ ಮಹಾರಾಣಿಯಾದ ಜಮುನಾಬಾಯಿಯು ಕೇವಲ ಅವರ ಕೃಪೆಯಿಂದಲೇ ಆ ಪದವಿಗೆ ಏರಿದ್ದಳು. ದಿನಾಲು ಸಾವಿರಾರು ಜನರು ಹಿಂದುಸ್ಥಾನದ ಮೂಲೆ ಮೂಲೆಗಳಿಂದಲೂ ಅವರ ಭೆಟ್ಟಿಗಾಗಿ ಬರುತ್ತಿದ್ದರು. ಹಿಂದೂ, ಕ್ರಿಶ್ಚನ್, ಮುಸಲ್ಮಾನ, ಪಾರಸಿ, ಜೈನ ಮೊದಲಾದ ಎಲ್ಲ ಜಾತಿ-ಮತ ಪಂಥಗಳ ಜನರೂ ಅವರಿಗೆ ನಡಕೊಳ್ಳುತ್ತಿದ್ದರು ವಿಷ್ಣುಬುವಾ ಬ್ರಹ್ಮಚಾರಿಯಂಥ ಘನವಿದ್ವಾಂಸರು ಕೂಡ ಮಹಾರಾಜರ ಮುಂದೆ ವಿನೀತರಾಗಿ ತಲೆಬಾಗಿದ್ದರು. ಯಶವಂತರಾವ ದೇವ ಪಾಮುಲೇ ಪಾರಂಥವರು ಮಹಾರಾಜರಿಂದ ಅನುಗ್ರಹಿತರಾಗಿ ಅವರ ಶಿಷ್ಯಕೋಟಿಯಲ್ಲಿ ಪೆರೆಯುತ್ತಿದ್ದರು. ಸುಪ್ರಸಿದ್ಧ ಯೋಗಿಗಳಾದ ಆಳಂದಿಯ ಶ್ರೀ ನೃಸಿಂಹ ಸರಸ್ವತೀಯಂಥವರು ಮಹಾರಾಜರ ಕೃಪೆಯಿಂದ ಸಂಪೂರ್ಣ ಯೋಗಸಿದ್ಧಿಯನ್ನು ಪಡೆದು ಕೃತಾರ್ಥರಾಗಿದ್ದರು. ವ್ಯಾಪಾರಿಗಳು, ವೈದ್ಯರು, ಬ್ಯಾರಿಸ್ಟರರು, ಸರಕಾರೀ ನೌಕರರು, ವಕೀಲರು, ಶ್ರೀಮಂತರು, ಬಡವರು ಮೊದಲಾದ ಎಲ್ಲತರದ ಉದ್ಯೋಗ ವ್ಯವಹಾರಸ್ಥರೂ ಶ್ರೇಷ್ಠ ಕನಿಷ್ಠ ತರಗತಿಯವರೂ ಮಹಾರಾಜರ ಕೃಪೆಗಾಗಿ ಯತ್ನ ಮಾಡುತ್ತಿದ್ದರು.

ಶೋಧಕ ಬುದ್ಧಿಯ ಜನರು ಬೇಕಾದಷ್ಟು ಯತ್ನಮಾಡಿದರೂ. ಶ್ರೀ ಅಕ್ಕಲಕೋಟ ಸ್ವಾಮೀ ಮಹಾರಾಜರು ಯಾರು, ಎಲ್ಲಿಯವರು,

ಎಲ್ಲೀದ ಬಂದರು—ಎಂಬವೇ ಮೊದಲಾದ ಸಂಗತಿಗಳು ರವಷ್ಟಾದರೂ ಯಾರಿಗೂ ತಿಳಿದಿರುವದಿಲ್ಲ. ಅವರು ಯಾವ ಊರಲ್ಲಿ, ಎಂದು, ಯಾವ ತಾಯಿ-ತಂದೆಗಳ ಹೊಟ್ಟೆಯಿಂದ ಹುಟ್ಟಿದರು, ತೊಟ್ಟಿಲೊಳಗಿಟ್ಟ ಅವರ ಹೆಸರೇನು, ಅವರು ಎಲ್ಲಿ ಹೇಗೆ ಬೆಳೆದರು—ಎಂಬಿನೇ ಮೊದಲಾದ ಪ್ರಶ್ನೆಗಳಿಗೆ ಯಾರೂ ಉತ್ತರ ಕೊಡಲಾರರು. ಅವರ ಜಾತಿ, ಗೋತ್ರ ಮೊದಲಾದವುಗಳ ಮಾತು ಹಾಗೆಯೇ. ಅವರು ಬಹುಶಃ ಬ್ರಾಹ್ಮಣರಾಗಿದ್ದರೆಂದೂ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ್ದರೆಂದೂ ಅನುಮಾನದಿಂದ ಹೇಳಬಹುದಾಗಿತ್ತು. ಅವರು ಬಹುಶಃ ದಿಗಂಬರರಾಗಿಯೇ ಇರುತ್ತಿದ್ದರು ಒಮ್ಮೊಮ್ಮೆ ಲಂಗೋಟಿಯನ್ನು ಹಾಕುವರು; ಅವರು ಸ್ವತಃ ಹಾಕುತ್ತಿದ್ದರೆಂದು ಹೇಳುವದಕ್ಕಿಂತ, ಅವರಿಗೆ ಲಂಗೋಟಿಯನ್ನು ಎರಡನೆಯವರು ಹಾಕುತ್ತಿದ್ದರೆಂದು ಹೇಳುವದು ಹೆಚ್ಚು ಸಯುಕ್ತಿಕವು. ಮನಸ್ಸಿಗೆ ಬಂದಾಗ ಬಹುಮೂಲ್ಯದ ಕರವತ್ತಕಾಟಿಯ ಹಾಗೂ ಜರದಂಚಿನ ಕಾಷಾಯ ವಸ್ತ್ರಗಳನ್ನು ಧಾರಣ ಮಾಡುವರು. ಇಲ್ಲವೆ ಜರದ ಶಾಲುಗಳನ್ನು ಹೊರುವರು. ಈ ಕಾರಣದಿಂದಲೇ ಅವರಿಗೆ ''ಸ್ವಾಮೀ'' ಎಂದು ಕರೆಯುತ್ತಿದ್ದರು. ಅವರ ಭಕ್ತನಾದ ಜೋಳಪ್ಪನು ಅವರಿಗೆ ಪ್ರತಿನಿತ್ಯ ಪ್ರಾತಃಕಾಲದಲ್ಲಿ ಸ್ನಾನಮಾಡಿಸಿ ಹಣೆಗೆ ಕೇಶರ ಕಸ್ತೂರಿಯ ಗಂಧವನ್ನು ಹಚ್ಚುತ್ತಿದ್ದನು. ಮಹಾರಾಜರು ಒಂದೆರಡು ಆಚಮನ ಮಾಡುತ್ತಿದ್ದರು. ಅವರು ಸ್ವಂತ ತಮ್ಮ ಕೈಯಿಂದಲೇ ಉಣ್ಣುವದು ಕ್ವಚಿತ್ತಾಗಿಯೇ. ಅವರಿಗೆ ಹುಡುಗರಂತೆ ಎರಡನೆಯವರು ಊಟ ಮಾಡಿಸಬೇಕಾಗುತ್ತಿತ್ತು. ಒಂದೊಂದು ಸಲ ಅವರು ಲಂಗೋಟಿಯನ್ನು ಕೂಡ ಕಿತ್ತು ಹಾಕಿ ದಿಗಂಬರರಾಗಿಯೇ ಆಡ್ಡಾಡುತ್ತಿದ್ದರು. ಇಚ್ಛೆಯಾಯಿತೆಂದರೆ ಜಾತಿಗೋತ್ರಗಳ ವಿಚಾರವನ್ನು ಎಷ್ಟೂ ಮಾಡದೆ ಬೇಕಾದಾಗ ಬೇಕಾದಲ್ಲಿ ಅನ್ನೋದಕ ವ್ಯವಹಾರಗಳನ್ನು ಮಾಡುತ್ತಿದ್ದರು. ಪ್ರಸಂಗ ಬಂದಾಗ ಆಕಾಶ ಮಾರ್ಗದಿಂದ ಉಡ್ಡಾಣಮಾಡಿ ಬ್ರಹ್ಮ ಸಮುದಾಯದಲ್ಲಿಳಿದು ವೇದಘೋಷವನ್ನು ಸುರುವುಮಾಡಿ ಕೊಬ್ಬೇರಿದ ಬ್ರಾಹ್ಮಣರ ಸೊಕ್ಕನ್ನು ಕ್ಷಣಾರ್ಧದಲ್ಲಿ ಇಳಿಸಿ ಬಿಡುತ್ತಿದ್ದರು. ಇವೆಲ್ಲ ಕಾರಣಗಳಿಂದ ಅವರಿಗೆ ''ಸ್ವಾಮೀ ಮಹಾರಾಜ'' ಎಂದು ಹೆಸರುಬಿತ್ತು. ಬೇಕಾದ್ದನ್ನು ಮಾಡಬಲ್ಲವರಾಮದರಿಂದ ಅವರನ್ನು ''ಶ್ರೀ ಸ್ವಾಮೀ

ಸಮರ್ಥ"ರೆಂದು ಕರೆಯುತ್ತಿದ್ದರು. ಅಕ್ಕಲಕೋಟೆಯಲ್ಲಿಯೇ ಪ್ರಕಟವಾದುದರಿಂದ ಅವರನ್ನು ಅಕ್ಕಲಕೋಟೆಯ ಸ್ವಾಮೀ ಅಥವಾ ಮಹಾರಾಜರೆಂದು ಕರೆಯುತ್ತಿದ್ದರು.

''ಸ್ವಾಮೀ, ತಾವು ಯಾರು?'' ಎಂದು ಯಾರಾದರೂ ಭಕ್ತಜನರು ವಿನಯದಿಂದ ಕೇಳಿದಾಗ ''ಮೂಲ ಮೂಲದತ್ತನಗರ, ವಟವೃಕ್ಷ, ಮೂಲ ಪುರುಷ'' ಎಂದು ಅವರು ಉತ್ತರ ಕೊಡುತ್ತಿದ್ದರು. ಮನಸ್ಸಿಲ್ಲದಾಗ ಇಂತಹ ಪ್ರಶ್ನೆ ಕೇಳಿದರೆ ಏನು ಬೇಕಾದ್ದು ಹೇಳುವರು. ಆದರೆ ಆ ಕಾಲದ ಜನರೆಲ್ಲ ಅವರನ್ನು ಸಾಕ್ಷಾತ್ ದತ್ತಾತ್ರೇಯನ ಅವತಾರವೇ ಎಂದು ಭಜಿಸುತ್ತಿದ್ದರು. ನಾನಾತರದ ಉಪಾಸಕರು ಮಹಾರಾಜರ ದರುಶನಕ್ಕೆ ಬಂದಾಗ, ಅವರಿಗೆಲ್ಲ ಅವರು ಒಂದೇ ಕಾಲಕ್ಕೆ ಅವರವರ ಉಪಾಸ್ಯಮೂರ್ತಿಯ ರೂಪದಿಂದ ದರುಶನ ಕೊಡುತ್ತಿದ್ದರು. ದೇವಿಯ ಭಕ್ತನಿಗೆ ದೇವಿಯಾಗಿ, ವಿಠ್ಠಲ ಭಕ್ತನಿಗೆ ವಿಠ್ಠಲನಾಗಿ, ರಾಮನ ಭಕ್ತನಿಗೆ ರಾಮನಾಗಿ, ಕೃಷ್ಣ ಭಕ್ತನಿಗೆ ಕೃಷ್ಣನಾಗಿ, ದತ್ತಭಕ್ತನಿಗೆ ದತ್ತನಾಗಿ, ಶಿವಭಕ್ತನಿಗೆ ಶಿವನಾಗಿ, ಗಣೇಶ ಭಕ್ತನಿಗೆ ಗಣಪತಿಯಾಗಿ, ಷಣ್ಮುಖ ಭಕ್ತನಿಗೆ ಷಣ್ಮುಖನಾಗಿ ಅವರು ತೋರುತ್ತಿದ್ದರು. ಸಾರಾಂಶವೇನಂದರೆ—ಅನಂತಕೋಟಿ ಬ್ರಹ್ಮಾಂಡ ನಾಯಕನಾದ ಪರಮಾತ್ಮನೇ ಮಾನವ ರೂಪದಿಂದ ಪ್ರಕಟವಾಗಿ ಅಕ್ಕಲಕೋಟೆಯ ಸ್ವಾಮಿಗಳ ರೂಪದಿಂದ ಜಗದುದ್ಧಾರ ಮಾಡಿದನೆಂದು ಹೇಳಬಹುದು.

ಅವರ ಅನೇಕ ಭಕ್ತರಿಗೆ ಆದ ದೃಷ್ಟಾಂತಗಳ ಮೇಲಿಂದ ಅವರು ಸಾಕ್ಷಾತ್ ದತ್ತನ ಅವತಾರವೇ – ಎಂದು ಜನರು ತಿಳಿಯುತ್ತಿದ್ದರೆಂದು ಮೇಲೆ ಹೇಳಿದೆ. ವರ್ಹಾಡ ಪ್ರಾಂತದಲ್ಲಿ ''ಲಾಡ ಕರಂಜಾ'' ಎಂಬ ಊರಲ್ಲಿ ಅಂಬಾಮಾಧವರೆಂಬ ಯಜುರ್ವೇದೀ ಬ್ರಾಹ್ಮಣ ದಂಪತಿಗಳ ಹೊಟ್ಟೆಯೊಳಗೆ ಹುಟ್ಟಿ, ಬಾಲ್ಯದಲ್ಲಿಯೇ ಸನ್ಯಾಸ ತೆಗೆದುಕೊಂಡು, ಶ್ರೀಮನ್ನೃಸಿಂಹ ಸರಸ್ವತೀ ಸ್ವಾಮಿಗಳೆಂಬ ಹೆಸರಿನಿಂದ ಪ್ರಸಿದ್ಧನಾಗಿ, ಔದುಂಬರ, ವಾಡೀ, ಗಾಣಗಾಪುರಗಳಲ್ಲಿ ಲೀಲೆಮಾಡಿ ತೋರಿಸಿದ ದತ್ತಾತ್ರೇಯನು ಕೊನೆಗೆ ಶ್ರೀಶೈಲದ ಕರ್ದಳೀವನಕ್ಕೆ ಹೋದನೆಂದು ಗುರುಚರಿತ್ರೆಯು

ಹೇಳುತ್ತಾರೆ. ಶ್ರೀ ನೃಸಿಂಹ ಸರಸ್ವತೀ ಸ್ವಾಮಿಗಳವರು ಆಗ ದೇಹವಿಟ್ಟ ದ್ದನ್ನು ಯಾರೂ ನೋಡಿಲ್ಲ. ಅವರು ಕದಳೀವನದಲ್ಲಿ ಸಮಾಧಿ ಮಗ್ನರಾಗಿ ಕುಳಿತಿದ್ದರೆಂದೂ ಸಮಾರು ೩೦೦—೩೫೦ ವರುಷಗಳ ಮೇಲೆ ಪುನಃ ಅದೇ ದೇಹದಿಂದಲೇ ಪ್ರಕಟನಾಗಿ ಅಕ್ಕಲಕೋಟೆಯ ಸ್ವಾಮಿಗಳೆಂದು ಪ್ರಸಿದ್ಧ ರಾದರೆಂದೂ, ಅನೇಕ ಭಕ್ತರು ತಮ್ಮ ದೃಷ್ಟಾಂತಗಳ ಆಧಾರದಿಂದ ಬರೆದಿರು ತ್ತಾರೆ. ''ನಾವು ಮೊತ್ತಮೊದಲು ಕದಳೀವನದಿಂದ ಹೊರಟೆನೆಂ''ದು ಮಹಾರಾಜರು ಹೇಳುತ್ತಿದ್ದರು. ಅವರ ಚರಿತ್ರೆಯನ್ನೂ ಅವರ ಬಾಯಿಂದ ಆಗಾಗ್ಗೆ ಹೊರಟ ಉದ್ಗಾರಗಳನ್ನು ನೋಡಿದರೆ ಗಾಣಗಾಪುರದ ಶ್ರೀ ನೃಸಿಂಹ ಸರಸ್ವತೀ ಸ್ವಾಮಿಗಳೇ ಅಕ್ಕಲಕೋಟೆಯ ಸ್ವಾಮಿಗಳೆಂದು ಪ್ರಕಟನಾದರೆಂದು ನಮ್ಮ ನಿಶ್ಚಯವಾಗಿದೆ. ಇದನ್ನು ವಾಚಕರು ಬೇಕಾದರೆ ಒಪ್ಪಬಹುದು. ಬೇಕಾದರೆ ಬಿಡಬಹುದು. ಆ ಬಗ್ಗೆ ನಮ್ಮ ಆಗ್ರಹವಿಲ್ಲ.

ಶ್ರೀ ಸ್ವಾಮೀ ಸಮರ್ಥರ ಲೀಲೆಗಳು ಅದ್ಭುತವಾಗಿದ್ದವು ಅಷ್ಟ ಸಿದ್ಧಿಗಳೂ ನವನಿಧಿಗಳೂ ಅವರ ದಾಸಾನುದಾಸವಾಗಿದ್ದವು. ಸೃಷ್ಟಿ ನಿಯಮಗಳು ಅವರ ಮುಂದೆ ಕೈ ಜೋಡಿಸಿ ನಿಂತುಕೊಂಡು ಅವರು ಆಜ್ಞೆ ಮಾಡಿದಂತೆ ಕೇಳುತ್ತಿದ್ದವು. ದೇವ-ದೇವತೆಗಳಿಗೂ ಅವರ ಅಪ್ಪಣೆಯು ಶಿರಸಾವಂದ್ಯವಾಗಿತ್ತು. ಒಮ್ಮೆ ಜಾಧವನೆಂಬ ಹೆಸರಿನ ಭಕ್ತನೊಡನೆ ಮಹಾರಾಜರು ಕುಳಿತುಕೊಂಡಿದ್ದರು. ಮಧ್ಯಾಹ್ನದ ವೇಳೆಗೆ ಅಕಸ್ಮಾತ್ತಾಗಿ ಮಹಾರಾಜರು ಜಾಧವನನ್ನು ಕರೆದು ನಗುತ್ತ ಹೇಳಿದರು — ''ಎಲೋ, ನಿನ್ನ ಹೆಸರಿನ ಚೀಟಿ ಬಂದಿದೆ. ಹೊರಡಲು ಸಿದ್ಧನಾಗು.'' ಜಾಧವನು ಗಾಬರಿಯಾಗಿ ನೋಡುತ್ತಾನೆ. ಅವನಿಗೆ ದಷ್ಟಪುಷ್ಟವಾದ ಕರೇಬಣ್ಣದ ನಾಲ್ವರು ಯಮದೂತರು ಕಾಣಿಸಹತ್ತಿದರು. ತಮ್ಮ ಕೈಯೊಳಗಿರುವ ಹಗ್ಗದಿಂದ ಇವನನ್ನು ಹಿಡಿದೊಯ್ಯಬೇಕೆಂಬ ಯತ್ನದಲ್ಲಿ ಅವರಿದ್ದಂತೆ ಕಂಡಿತು. ಕೂಡಲೇ ಜಾಧವನು ಗಡಿಬಿಡಿಯಿಂದ ಮಹಾರಾಜರ ಚರಣ ಗಳನ್ನು ಗಟ್ಟಿಯಾಗಿ ಅಪ್ಪಿಕೊಂಡು ಕಣ್ಣೀರಿಡಹತ್ತಿದನು ಮತ್ತು ''ಮಹಾರಾಜ, ನನಗೀಗಲೇ ಹೋಗುವ ಮನಸ್ಸಿಲ್ಲ. ಭಯವಾಗುತ್ತಿದೆ ಈಗಲೇ ನನಗೆ ದಯವಿಟ್ಟು ಅಪ್ಪಣೆಕೊಡಬೇಡಿರಿ ಇನ್ನೂ ತಮ್ಮ ಚರಣಸೇವೆ ಮಾಡಬೇಕೆನ್ನುತ್ತೇನೆ,'' ಎಂದು ಬೇಡಿಕೊಳ್ಳಹತ್ತಿದನು ಮಹಾರಾಜರಿಗೆ

ಕರುಣೆಬಂತು. ಅವರು ಯಮದೂತರಿಗೆ ಅಪ್ಪಣೆ ಮಾಡಿದರು— ''ಎಲೋ, ಜಾಧವನನ್ನು ಈಗ ಒಯ್ಯಬೇಡಿರಿ. ಅವನ ಬದಲಾಗಿ ಅಲ್ಲಿರುವ ಎತ್ತನ್ನು ಒಯ್ಯಿರಿ. ಹೀಗೆ ನನ್ನಾಜ್ಞೆಯಾಗಿರುವದೆಂದು ಯಮನಿಗೆ ತಿಳಿಸಿರಿ.' ಅವರು ಹೀಗೆ ಹೇಳುವದೊಂದೇ ತಡ. ಎತ್ತಿಗೆ ಪಶುಜನ್ಮದಿಂದ ಮುಕ್ತಿ ದೊರೆತು ಜಾಧವನಿಗೆ ಜೀವದಾನ ಸಿಕ್ಕಿತು. ಮತ್ತೊಮ್ಮೆ ಮಹಾರಾಜರು ಒಬ್ಬ ದೇವೀ ಉಪಾಸಕನಿಗೆ ''ಎಲೋ, ನಿನ್ನ ಲಕ್ಷ್ಮೀದೇವಿಯು ನನ್ನ ಕುಂಡಿಗೆ ನೀರು ಹಾಕುತ್ತಿದ್ದಳು, ಕಣೋ'' ಎಂದು ಉದ್ಗಾರ ತೆಗೆದರು. ತಾತ್ಪರ್ಯವೇನೆಂದರೆ — ಅವರ ಅತ್ಯದ್ಭುತವಾದ ಚರಿತ್ರೆಯನ್ನು ಓದಹತ್ತಿದರೆ ಬುದ್ಧಿಯು ಮಂಕಾಗಿ ಹೋಗುತ್ತದೆ. ಅವರ ಶಕ್ತಿಯೇನು ? ಸ್ವರೂಪವೇನು ? ಲೀಲೆಯೇನು ? ಭಕ್ತಕೃಪೆಯೆಷ್ಟು ? ಕಾರುಣ್ಯವೆಷ್ಟು ? ಎಲ್ಲವೂ ಅದ್ಭುತರಮ್ಯವೇ !

ಅವರ ದರ್ಶನದ ಲಾಭ ಸಿಕ್ಕ ಮಾನವರು ನಿಜವಾಗಿಯೂ ಧನ್ಯರು ! ಅವರ ಕೃಪೆಗೊಳಗಾದವರಂತೂ ಸಿದ್ಧರೇ ಸರಿ !! ಅವರ ಅನುಗ್ರಹವನ್ನೂ ಉಪದೇಶವನ್ನೂ ಪಡೆದವರಂತೂ ಪರಮಾತ್ಮ ಸ್ವರೂಪವನ್ನೇ ಹೊಂದಿದರು !!! ಅವರ ಮಠಗಳ ಸಂಖ್ಯೆಯು ಇಂದಿಗೆ ೩೦೦—೪೦೦ ದಷ್ಟಾದರೂ ಇವೆ. ಅವರ ಶಿಷ್ಯರಾದವರಂತೂ ಅಸಂಖ್ಯವಾಗಿ ಹೋದರು ಅವರಿಂದ ಅನುಗ್ರಹಿತರಾದ ೨೦—೩೦ ಜನ ಸತ್ಪುರುಷರು ಸುಪ್ರಸಿದ್ಧರಾಗಿದ್ದಾರೆ. ಅವರೆಲ್ಲರೂ ಸ್ವತಃ ಮಹಾರಾಜರ ಕೃಪೆಯಿಂದ ಪೂರ್ಣಾವಸ್ಥೆಯನ್ನು ಮುಟ್ಟಿದರಲ್ಲದೆ, ಬೇರೆ ಅನೇಕ ಜನರನ್ನೂ ತಾನೇ ಉದ್ಧಾರ ಮಾಡುವ ಶಕ್ತಿಯನ್ನೂ ಸಂಪಾದನೆ ಮಾಡಿದರು. ಪುಣೆಯ ಕಾಳಬುವಾ ಮತ್ತು ರಾಮಾನಂದ ಬೀಡಕರ ಮಹಾರಾಜರು, ಬಡೋದೆಯ ಅಲವಣೀಬುವಾ ಮತ್ತು ವಾಮನಬುವಾ ಬ್ರಹ್ಮಚಾರಿಗಳು, ಸಾಟಾಣೆಯ ಯಶವಂತರಾವ ದೇವ ಮಾಮಲೇದಾರ, ಮುಂಬಯಿಯ ಸ್ವಾಮಿಸುತ ಮತ್ತು ವಿಷ್ಣುಬುವಾ ಬ್ರಹ್ಮಚಾರಿಗಳು, ನಾಷ್ಕಿಯ ಅನಂತನಾಥ ಮಹಾರಾಜರು, ಮತ್ತು ನಮ್ಮ ಚರಿತ್ರನಾಯಕರು ಇವರೇ ಮೊದಲಾದವರ ಹೆಸರುಗಳನ್ನು ಈ ಪ್ರಸಂಗದಲ್ಲಿ ವ್ಯಾಮುಖ್ಯದಿಂದ ಕಾಣಿಸಬಹುದು ಮೈಂದರ್ಗಿಯ ಮುಸಲ್ಮಾನ ಜಮಾದಾರನೂ ಮಹಾರಾಜರ ಚರ್ಮ ಪಾದುಕೆಗಳನ್ನು ದೇವರಲ್ಲಿಟ್ಟು ಪೂಜೆಮಾಡಿ, ಅದರ ಬಲದಿಂದ ಅನೇಕ ಚಮತ್ಕಾರಗಳನ್ನು ಮಾಡಿ

ತೋರಿಸಿದನು. ಮತ್ತೊಬ್ಬ ಮುಸಲ್ಮಾನ ಫಕೀರನು ಮಹಾರಾಜರ ಕೃಪೆಯಿಂದ ಪೂರ್ಣಾವಸ್ಥೆ ಪಡೆದನು ಆಳಂದಿಯ ನೃಸಿಂಹ ಸ್ವಾಮಿಗಳ ಹೆಸರನ್ನೂ ಮೇಲೆ ಹೇಳಿದ್ದೇವೆ. ಇದು ನಮಗೆ ಗೊತ್ತಿದ್ದವರ ಲೆಕ್ಕಾಚಾಯಿತು. ಯಾರಿಗೂ ಗೊತ್ತಾಗದಿದ್ದ ಅನೇಕ ಜನರಿಗೆ ಅಕ್ಕಲಕೋಟೆಯೊಳಗಿಂದಲೇ ಮಹಾರಾಜರು ದೃಷ್ಟಾಂತ ರೂಪದಿಂದಲೂ ಪ್ರತ್ಯಕ್ಷವಾಗಿಯೂ ಅನುಗ್ರಹ ಕೊಟ್ಟು ಉದ್ಧಾರ ಮಾಡಿದರು. ಅವರೆಲ್ಲರ ಹೆಸರುಗಳು ಎಂದೂ ಯಾರಿಗೂ ತಿಳಿಯಲಾರವು.

ನಮ್ಮ ಚರಿತ್ರನಾಯಕರಿಗೆ ಇಂತಹ ಸತ್ಪುರುಷರ ದರುಶನವೂ ಕೃಪೆಯೂ ಬಾಲ್ಯಾವಸ್ಥೆಯಲ್ಲಿಯೇ ಸಿಕ್ಕುವ ಯೋಗ ಬಂತೆಂದ ಮೇಲೆ ಅವರ ಪೂರ್ವಪುಣ್ಯದ ಮಹತಿಯನ್ನು ಎಷ್ಟೆಂದು ಬಣ್ಣಿಸಬೇಕು! ''ಬಹೂನಾಂ ಜನ್ಮನಾಂ ಅಂತೇ ಜ್ಞಾನವಾನ್ ಮಾಂ ಪ್ರಪದ್ಯತೇ'' ಎಂದು ಗೀತೆಯು ಹೇಳುತ್ತದೆ. ''ಅನೇಕ ಜನ್ಮ ಸಂಸಿದ್ಧಸ್ತತೋ ಯಾತಿ ಪರಾಂ ಗತಿಂ'' ಎಂದೂ ಅದರಲ್ಲಿಯೇ ಬರೆದಿದೆ. ಎಂದರೆ ಪರಮಾರ್ಥ ಸಾಧಕನು ತನ್ನ ಸಾಧನೆ ಮಾಡುತ್ತ ಅನೇಕ ಜನ್ಮಗಳನ್ನು ಕಳೆದ ಮೇಲೆ ''ಪೂರ್ಣ ಸಾಕ್ಷಾತ್ಕಾರ ಯೋಗ''ವು ಬರುವದೆಂದು ಇದರ ಅರ್ಥವು. ಧನ್ಯ! ಧನ್ಯ!! ಅವರ ತಾಯಿ-ತಂದೆಗಳ ಪುಣ್ಯವಾದರೂ ಅಪಾರವೇ! ಅವರ ಉಪಕಾರವನ್ನು ನಾವೆಷ್ಟು ಸ್ಮರಿಸಿದರೂ ಕಡಿಮೆಯೇ. ಅವರನ್ನು ಹಡೆದರೆಂದಲ್ಲವೇ ನಮಗೆ ನಮ್ಮ ಚರಿತ್ರನಾಯಕರ ಚರಣಗಳು ಸಿಕ್ಕಿದ್ದು? ನಮ್ಮ ಚರಿತ್ರನಾಯಕರು ಇಂದಿಗೆ ದೇಹವಿಟ್ಟು ಮೂವತ್ತೈದು ವರುಷಗಳಾದರೂ, ಅವರಿಂದ ಇದಿಗೂ ಅನೇಕ ಭಕ್ತಜನರು ಉದ್ಧಾರವಾಗುತ್ತಿದ್ದಾರೆ! ಮತ್ತು ಪರಮಾರ್ಥ ಲಾಭವನ್ನು ಪಡೆಯುತ್ತಿದ್ದಾರೆ! ಅವರನ್ನು ಕಣ್ಣಿನಿಂದ ನೋಡುವ ಭಾಗ್ಯ ಸಿಕ್ಕದಿದ್ದವರಿಗೂ ಅವರ ಕೃಪೆಯು ದೊರಕುತ್ತಿರುತ್ತದೆ! ಈ ಮಾತಿಗೆ ನಮ್ಮ ಸ್ವಂತದ್ದೇ ಸಾಕ್ಷಿ!

ನಮ್ಮ ಚರಿತ್ರನಾಯಕರು ಅಕ್ಕಲಕೋಟೆಗೆ ಬಂದು ಮುಟ್ಟುವದರೊಳಗಾಗಿಯೇ, ಅವರ ತಂದೆಯವರಾದ ಬಾಳಕೃಷ್ಣಭಟ್ಟರು ಅಲ್ಲಿಗೆ ಬಂದು ನಾಲ್ಕೈದು ದಿನಗಳಾಗಿದ್ದವು ಅವರು ಅಲ್ಲಿಗೆ ಹೇಗೆ ಬಂದರೆಂಬದರ ಕಡೆಗೆ ನಾವೀಗ ದೃಷ್ಟಿಯನ್ನು ಹೊರಳಿಸುವ.

ನಮ್ಮ ಚರಿತ್ರನಾಯಕರು ಮುರಗೋಡವನ್ನು ಬಿಟ್ಟು ಹೋದ ಮೇಲೆ ಸ್ವಾಭಾವಿಕವಾಗಿಯೇ ಮನೆಯಲ್ಲಿ ಕಳವಳವುಂಟಾಯಿತು. ಅವರು ಹೊರಟು ಹೋದ ದಿನ ಮಧ್ಯಾಹ್ನದ ವರೆಗೆ ಯಾರಿಗೂ ಆ ಬಗ್ಗೆ ಸಂಶವು ಬರಲಿಲ್ಲ. ನಿತ್ಯಕ್ರಮದಲ್ಲಿ ತೊಡಗಿರಬಹುದೆಂದೇ ಎಲ್ಲರ ತರ್ಕ. ಮಧ್ಯಾಹ್ನದಲ್ಲಿ ಊಟದ ವೇಳೆಯಾದರೂ ಅವರು ಬರದ್ದರಿಂದ ವಿಚಾರಕ್ಕೆ ಎಡೆಯಾಯಿತು. ಎಲ್ಲಿಗೆ ಹೋಗಿರಬಹುದೆಂಬ ಬಗ್ಗೆ ಎಲ್ಲರೂ ಅನುಮಾನ ಮಾಡಹತ್ತಿದರು. ವಿಶೇಷವಾಗಿ ಅವರ ತಾಯಿ-ತಂದೆಗಳಿಗೆ ಚಿಂತೆಯುಂಟಾಯಿತು. ತಾಯಿಯವರಾದ ಅನ್ನಪೂರ್ಣಾಬಾಯಿಯವರಂತೂ ಅಂದು ಸಂಜೆಯ ವರೆಗೆ ಅನ್ನಗ್ರಹಣವನ್ನೇ ಮಾಡಲಿಲ್ಲ. ಪಾಪ, ಅವರದು ತಾಯಿಯ ಕರುಳು ! ಚಿ॥ ರಾಮನು ಎಲ್ಲಿಯಾದರೂ ಕಂಗೇರಿ ಮೊದಲಾದ ಕಡೆಯಲ್ಲಿ ಹೋಗಿರಬಹುದೆಂದೂ, ಸಂಜೆಗೆ ಅವನು ಬಂದೇ ಬರುವನೆಂದೂ, ಅವನು ಬಂದ ಮೇಲೆ ಅವನಿಗೆ ಊಟ ಮಾಡಿಸಿಯೇ ತಾವು ಉಣ್ಣಬೇಕೆಂದೂ ಆ ಸಾಧ್ವಿಮಣಿಗಳು ಉಪವಾಸ ಮಾಡಿದರು. ಮಧ್ಯಾಹ್ನದ ಮೇಲೆ ತಂದೆಯವರೂ ಅಣ್ಣಂದಿರೂ ಅಲ್ಲಲ್ಲಿ ಹುಡುಕಾಡಿ ಬೇಸತ್ತರು. ಸಂಜೆಯ ವರೆಗೆ ಶೋಧ ಮಾಡಿದರೂ ಏನೂ ಗೊತ್ತಾಗಲಿಲ್ಲ. ಆಗ ಮಾತ್ರ ಬಾಳಕೃಷ್ಣಭಟ್ಟರು ನಿಜವಾಗಿಯೂ ಗಾಬರಿಗೊಳಗಾದರು. ಅನ್ನಪೂರ್ಣಾಬಾಯಿಯವರ ದುಃಖಕ್ಕಂತೂ ಎಣೆಯಿಲ್ಲದಂತಾಯಿತು. ಅವರು ವಾತ್ಸಲ್ಯ ಪ್ರೇಮದಿಂದ ಹುಚ್ಚರಾದರು. ಅದರಲ್ಲಿಯೂ ಅವರಿಗೆ ನಮ್ಮ ಚರಿತ್ರನಾಯಕರ ಮೇಲೆ ವಿಶೇಷ ಸ್ನೇಹವಿತ್ತು. ಅವನ್ನು ಅವರು ಆದಾರದಿಂದಲೂ ಭಕ್ತಿಯಿಂದಲೂ ಕಾಣುತ್ತಿದ್ದರೆಂಬದು ವಾಚಕರಿಗೆ ಗೊತ್ತೇ ಇದೆ. ತಮ್ಮ ಕುಲವನ್ನೇ ಉದ್ಧಾರ ಮಾಡಲಿಕ್ಕೆಂದು ರಾಮನು ಹುಟ್ಟಿ ಬಂದಿರುವನೆಂದೂ, ಅವನು ಮುಂದೆ ಮಹಾಪುರುಷನಾಗುವನೆಂದೂ ಅವರು ದೃಢವಾಗಿ ನಂಬಿದ್ದರು. ಸಂಜೆಯ ವರೆಗೆ ಮಗನು ಸಿಕ್ಕಲಿಲ್ಲವೆಂದ ಮೇಲೆ ಅವರ ತಲೆಯಲ್ಲಿ ಇಲ್ಲದ ವಿಚಾರಗಳು ಸುಳಿದಾಡಹತ್ತಿದವು. ರಾಮನು ವೈರಾಗ್ಯದಿಂದ ಮನೆಯನ್ನೇ ಬಿಟ್ಟು ಹೋಗಿರಬಹುದೇ ? ಸೆಟಗೊಂಡು ಎಲ್ಲಿಯಾದರೂ ಮಾಯವಾಗಿರಬಹುದೇ ? ಆದರೆ ಅಂತಹ ಪ್ರಸಂಗವೇ ಬಂದಿಲ್ಲವಲ್ಲ ! ಅವನು ಎಲ್ಲಿ ಹೋಗಿರಬಹುದು? ಏನು ಮಾಡುತ್ತಿರಬಹುದು? ತಮ್ಮಂತೆ ಅವನ ಹೊಟ್ಟೆಯ

ನೆತ್ತಿಯ ವ್ಯವಸ್ಥೆಯನ್ನು ಯಾರು ಮಾಡುವರು ? ಅವನ ಮೇಲೆ ಏನಾದರೂ ಆಪತ್ತು ಬಂದಿರಬಹುದೇ ? ಆದರೆ ಅಂತಹ ಸಂದರ್ಭವೂ ಏನೂ ಕಾಣುವ ಹಾಗಿಲ್ಲವಲ್ಲ ! ಎಂದು ನೊದಲಾಗಿ ಆ ಸ್ನೇಹಮಯಿಯಾದ ತಾಯಿಯು ಕೊರಗ ಹತ್ತಿದಳು. ಬಾಳಕೃಷ್ಣಭಟ್ಟರಿಗೂ ಏನೂ ತಿಳಿಯದಂತಾಯಿತು. ರಾತ್ರಿಯೆಲ್ಲ ಚಿಂತೆಯಲ್ಲಿಯೇ ಕಳೆಯಿತು.

ಮರುದಿವಸವೂ ಚಿಂತೆಯಲ್ಲಿಯೂ ಶೋಧದಲ್ಲಿಯೂ ಹೋಯಿತು. ನಮ್ಮ ಚರಿತ್ರನಾಯಕರ ಸ್ನೇಹಿತರನ್ನೆಲ್ಲ ಕರೆದು ವಿಚಾರಿಸಿದ್ದಾಯಿತು. ಸುತ್ತುಮುತ್ತಲಿನ ಹಳ್ಳಿಗಳಿಗೂ ಹೇಳಿ ಕಳಿಸಿದ್ದಾಯಿತು. ಆದರೆ ಏನು ಮಾಡಿದರೂ ನಿಜವಾದ ಸುದ್ದಿಯು ಯಾರಿಗೂ ತಿಳಿಯಲೇ ಇಲ್ಲ. ಮೂರನೆಯ ದಿವಸ ಮುಂಜಾನೆ ಓಂಕಾರಭಟ್ಟರು ಅಣ್ಣನ ಆಪ್ಪಣೆಯ ಮೇರೆಗೆ, ತಮ್ಮಲ್ಲಿದ್ದ ಪತ್ರವನ್ನು ಬಾಳಕೃಷ್ಣಭಟ್ಟರ ಕೈಯಲ್ಲಿ ಕೊಟ್ಟರು. ಆದರಿಂದ ನಮ್ಮ ಚರಿತ್ರನಾಯಕರು ಎಲ್ಲಿಗೆ ಹೋಗಿರುವರೆಂಬ ಮಾತಿನ ಸ್ಪಷ್ಟೀಕರಣವಾಯಿತು. ಹೀಗೆ ಈ ರೀತಿಯಿಂದ ಅವರ ಶೋಧವಾಯಿತೂ, ಅವರ ಆವಸ್ಥೆ ಏನಾಗಿರಬಹುದೆಂಬ ಬಗ್ಗೆ ಎಲ್ಲರೂ ದುಃಖಿಸಹತ್ತಿದರು. ತಂದೆಯವರು ಓಂಕಾರಭಟ್ಟರಿಗೆ ಬಹಳ ಸಿಟ್ಟು ಮಾಡಿದರು. ಪತ್ರವನ್ನು ಎರಡು ದಿನಗಳವರೆಗೆ ಮುಚ್ಚಿಟ್ಟದ್ದಕ್ಕಾಗಿ ಅವರು ಓಂಕಾರಭಟ್ಟರ ಸಮಾಚಾರವನ್ನು ಪುಟ್ಟಪೂರ ತಕ್ಕೊಂಡರು. ಕೂಡಲೇ ಆ ಪತ್ರವು ತಮ್ಮ ಕೈಗೆ ಸಿಕ್ಕಿದ್ದರೆ ಒಳಿತಾಗುತ್ತಿತ್ತೆಂದೂ, ಓಂಕಾರಭಟ್ಟರು ಬಹಳ ಮೂರ್ಖತನವನ್ನು ಮಾಡಿದರೆಂದೂ ಎಲ್ಲರೂ ಖಂಡಿಸಿದರು. ಪಾಪ, ಓಂಕಾರಭಟ್ಟರಾದರೂ ಏನು ಮಾಡುವರು ? ಅಣ್ಣನ ಆಜ್ಞೆಯಂತೆ ಅವರು ವರ್ತಿಸಿದ್ದರು. ಆದರೆ ದೂರಿದ್ದವನ ಮೇಲಿನ ಸಿಟ್ಟನ್ನು ಸಮೀಪದಲ್ಲಿದ್ದವನ ಮೇಲೆ ತೆಗೆಯುವದು ಮನುಷ್ಯ ಸ್ವಭಾವವಲ್ಲವೇ ? ಆದುದರಿಂದ ಎಲ್ಲರ ಸಿಟ್ಟನ್ನೂ ಅವರೊಬ್ಬರೇ ಸಹಿಸಬೇಕಾಯಿತು.

ಇನ್ನೂ ಚಿಕ್ಕ ವಯಸ್ಸು. ಪ್ರವಾಸದ ಅನುಭವವಿಲ್ಲ. ಬಳಿಯಲ್ಲಿ ಹಣವಿಲ್ಲ. ದೂರಿನ ಹಾದಿ. ಇಂತ ಸ್ಥಿತಿಯಲ್ಲಿ ರಾಮನು ಎಷ್ಟು ಕಷ್ಟ ಪಡುತ್ತಿರಬಹುದು ? ಅವನು ಯಾವ ಯಾವ ಆಪತ್ತುಗಳಿಗೆ ಒಳಗಾಗಿ

ಇರುವನೋ ? ಅವನು ಸುರಕ್ಷಿತವಾಗಿಯೂ ಕ್ಷೇಮವಾಗಿಯೂ ಇರುವನೋ ಇಲ್ಲವೋ ? - ಎಂದು ಮೊದಲಾಗಿ ಮನೆಯವರೆಲ್ಲ ಚಡಪಡಿಸಹತ್ತಿದರು. ಆದರೆ ಆ ಬಗ್ಗೆ ಚಿಂತೆ ಮಾಡುತ್ತ ಕುಳಿತರೆ ಫಲವೇನು ? ಯಾರಾದರೂ ಮೊಡ್ಡವರು ಹೋಗಿ ಅವರನ್ನು ಶೋಧಮಾಡಿಕೊಂಡು ತಿರುಗಿ ಕರಕೊಂಡು ಬರುವದು ಅವಶ್ಯಕವಾಗಿತ್ತು. ಕೊನೆಗೆ ಆ ವಿಚಾರ ಈ ವಿಚಾರವಾಗಿ, ಬಾಳಕೃಷ್ಣ ಭಟ್ಟರೇ ಹೋಗಬೇಕೆಂದು ನಿಶ್ಚಯವಾಯಿತು

ಮರುದಿವಸ ಮುಂಜಾನೆ ಬಾಳಕೃಷ್ಣ ಭಟ್ಟರು ಮಗನ ಶೋಧಕ್ಕಾಗಿ ಪುರಗೋಡದಿಂದ ಹೊರಟರು. ಅವರು ಪಯಣದ ಮೇಲೆ ಪಯಣ ಬೆಳೆಸುತ್ತ ವಿಜಾಪುರಕ್ಕೆ ಬಂದು ಮುಟ್ಟಿದರು. ಅವರು ಎಷ್ಟು ವಿಚಾರಿಸಿದರೂ ಅಲ್ಲಿ ಯಾವ ಸುದ್ದಿಯು ಗೊತ್ತಾಗಲಿಲ್ಲ. ಆಲ್ಲಲ್ಲಿ ವಿಚಾರಮಾಡಿ ಪ್ರಯೋಜನ ವಿಲ್ಲೆಂದು ತಿಳಿದು, ಅವರು ಅಲ್ಲಿಂದ ಹೊರಟು ನೆಟ್ಟಗೆ ಅಕ್ಕಲಕೋಟೆಗೆ ಬಂದು ಮುಟ್ಟಿದರು. ಅಲ್ಲಿ ಅವರಿಗೆ ಶ್ರೀ ಸ್ವಾಮೀಸಮರ್ಥರ ದಿವ್ಯದರ್ಶನವು ಆಯಿತು. ಆದರೆ ಅಲ್ಲಿ ಕೂಡ ಎಲ್ಲಿ ಹುಡುಕಿದರೂ ಮಗನ ಶೋಧವು ಮಾತ್ರ ಆಗಲಿಲ್ಲ. ನಾಲ್ಕೈದು ದಿನಗಳ ವರೆಗೆ ಅವರು ಅಕ್ಕಲಕೋಟೆಯಲ್ಲಿದ್ದು, ಅಲ್ಲಿಯ ಸಂದಿಗೊಂದಿಗಳನ್ನೆಲ್ಲ ಶೋಧಿಸಿ ನೋಡಿದರು. ಆದರೂ ತಮ್ಮ ಮಗನ ಸುಳಿವೇ ಅವರಿಗೆ ಹತ್ತಲಿಲ್ಲ. ಬಾಳಕೃಷ್ಣ ಭಟ್ಟರಿಗೆ ಏನು ಮಾಡಬೇಕೆಂಬದು ತಿಳಿಯದಂತಾಯಿತು. ಅವರು ನಿರಾಶೆಯಿಂದ ಉಸುರ್ಗರೆಯಹತ್ತಿದರು. ಮೋರೆಯ ಮೇಲೆ ಹುಚ್ಚರ ಲಕ್ಷಣ ಬಂತು. ತಮ್ಮ ಪ್ರೀತಿಯ ಮುದ್ದು ಮಗನು ತಿರುಗಿ ತಮ್ಮ ಕಣ್ಣಿಗೆ ಎಂದಾದರೂ ಬೀಳಬಹುದೇ ? ಅಥವಾ ಇನ್ನು ಅವನ ಭೆಟ್ಟಿಯ ಆಸೆಯೇ ಮುಗಿಯಿತೇ? ಹಾಯ್ ! ಹಾಯ್ !! ನಮ್ಮ ವಂಶೋದ್ಧಾರಕ ಮಗನು ನನ್ನ ಕೈಬಿಟ್ಟು ಹೋದನೇ ? ದೇವಾ, ಏನು ಮಾಡಲಿ ಅವನನ್ನು ಎಲ್ಲಿ ಹುಡುಕಲಿ ? ಅಕ್ಕಲಕೋಟೆಯಲ್ಲಿ ಲೀಲಾಮಾನುಷವೇಷನಾಗಿ ನಲಿದಾಡುತ್ತಿರುವ ದತ್ತಪ್ರಭುವೇ. ನನ್ನ ಮಗನು ನನಗೆ ತಿರುಗಿ ಬೆಟ್ಟಿಯಾಗುವಂತೆ ಮಾಡಪ್ಪಾ ! ನಿನ್ನ ಕೃಪೆಯಿಂದ ನನ್ನ ಮಗನು ನನಗಿಂದು ಸಿಕ್ಕರೆ ನಿನಗೆ ಎಂಟಾಣೆಯ ಸಕ್ಕರೆಯನ್ನು ಹಂಚುವೆನು, ಸ್ವಾಮಿ ! ಎಂದು ಮೊದಲಾಗಿ ಅವರು ಕಾತರರಾಗಿ ದೇವರಿಗೆ ಮೊರೆಯಿಟ್ಟರು.

ಬಾಳಕೃಷ್ಣಭಟ್ಟರು ಇಂದು ಊರಲ್ಲೆಲ್ಲ ಹುಡುಕಾಡಿ, ಬೇಸತ್ತು, ಪತಾರವಾಗಿ, ಊರ ಹೊರಗಿರುವ ಗುಡಿಗಳಲ್ಲಿ ಮಗನನ್ನು ಹುಡುಕೋಣ ಎಂದು ಹೊರಟಿದ್ದರು. ಆಗ ಐದಾರು ತಾಸು ಹೊತ್ತೇರಿತ್ತು. ಬಿಸಿಲು ಏಲಿಯಹತ್ತಿತ್ತು. ಅಷ್ಟರಲ್ಲಿ ಮುರಲೀಧರನ ಗುಡಿಯ ಕಡೆಯಿಂದ ಶ್ರೀ ವೀರಚಿದಂಬರನ ನಾಮಘೋಷಮಾಡುತ್ತ ಬರುತ್ತಿರುವ ರಾಮಚಂದ್ರನು ಬಾಳಕೃಷ್ಣಭಟ್ಟರ ದೃಷ್ಟಿಗೆ ಅಕಸ್ಮಾತ್ತಾಗಿ ಬಿದ್ದನು. ಆಯಿತು. ಕೇಳುವ ದೇನು ? ಕುರುಡನಿಗೆ ಕಣ್ಣು ಸಿಕ್ಕಂತಾಯಿತು. ನಮ್ಮ ಚರಿತ್ರನಾಯಕರು ಲಗುಬಗೆಯಿಂದ ಬಂದು ತಂದೆಯ ಪಾದಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಭಟ್ಟರು ಮಗನನ್ನು ಬಾಹುಗಳಿಂದ ಹಿಡಿದೆತ್ತಿ ಗಟ್ಟಿಯಾಗಿ ಅಪ್ಪಿಕೊಂಡರು. ಇಬ್ಬರ ಕಣ್ಣುಗಳಿಂದಲೂ ಆನಂದಾಶ್ರುಗಳು ಹೊರಗ ಹತ್ತಿದವು. ಕುತ್ತಿಗೆಯ ನರಗಳು ಉಬ್ಬಿದವು. ಇಬ್ಬರಿಗೂ ಕೆಲಹೊತ್ತು ಮಾತಾಡಲಿಕ್ಕೆ ಸಹ ಬರಲಿಲ್ಲ. ಭಟ್ಟರು ಕಣ್ಣು ಮುಚ್ಚಿ ಮಗನ ಹೋರೆಯ ಮೆಲುಕು. ಸೆತ್ತಿರುವೆನೋ, ಹುಬ್ಬದ ನೋಲೂ ಕೈಯಾಡಿಸುತ್ತ ಊರಾಪ್ತಾ ತಾಪ್ತಾ'' ಎಂದು ಉದ್ಗಾರ ಮಾಡಿದರು. ತನಂತರ ಹಗಲಿರುಳೆಂಬ ಭೇಧವನ್ನು ಕಂಡೆಂಬಂತೆ ನೋಲೆ ನೋಡುತ್ತಾರೆ. ಮಗನು ದಣಿದು ಹಣ್ಣಾಗಿದ್ದಾನೆ. ಹಸಿದೆ ನೀರಡಿಕೆಗಳಿಂದ ಅವನ ಮುಖವು ಬಾಡಿಹೋಗಿದೆ. ಕೂಡಲೆ ಅವರು ನಮ್ಮ ಚರಿತ್ರನಾಯಕರನ್ನು ಕರಕೊಂಡು ತಪ್ಪ ಬಳಿಯುಕೊಂಡ ಬಿಡಾರಕ್ಕೆ ಹೋದರು. ಅಲ್ಲಿ ಸ್ನಾನ, ಊಟ ಮೊದಲಾದವುಗಳೂ ಆದವು.

ಮಧ್ಯಾಹ್ನದ ಎರಡು ಗಂಟೆಯ ಸೇತಿ. ಸೂರ್ಯನ ಪ್ರಖರವಾದ ಬಿಸಿಲು ಎಲ್ಲರನ್ನೂ ದಮಿಸುತ್ತಿದೆ. ಆಗ ಯಾರೂ ಮನೆಯ ಹೊರಗೆ ಬರುವ ವೇಳೆಯಲ್ಲ. ಆದರೆ ನಮ್ಮ ಚರಿತ್ರನಾಯಕರು ಶ್ರೀ ಸ್ವಾಮೀ ದರ್ಶನಕ್ಕಾಗಿ ಹೊರಟೇ ಬಿಟ್ಟರು. ಬಾಳಕೃಷ್ಣಭಟ್ಟರು ಇನ್ನೂ ಎರಡೆರಡು ದಿವಸ ಹೋಗೋಣವೆಂದು ಬೇಕಾದಷ್ಟು ಹೇಳಿ ನೋಡಿದರು. ಏನೂ ಫಲವಾಗಲಿಲ್ಲ. ಯಾಕೆಂದರೆ ನಮ್ಮ ಚರಿತ್ರನಾಯಕರ ಮನಸ್ಸು ಬಾಲ್ಯದಿಂದಲೇ ಧೈರ್ಯಶಾಲಿಯಾಗಿತ್ತು. ಅವರಿಗೆ ಎರಡನೆಯ ಯಾವ ಚಿಂತೆಯೂ ಇರಲಿಲ್ಲ. ಯಾವಾಗ ಹೋಗಿ ಆ ಸಗುಣ ಮೂರ್ತಿಯನ್ನು ಕಣ್ತುಂಬ ನೋಡುವೆನೋ ಎಂಬುದೊಂದೇ ತವಕ, ಒಂದೇ ಕುತೂಹಲ. ತಪ್ಪರು

ಉಳಿದಾವ ಔಪಚಾರಿಕ ಮಾತುಗಳಿಗೆ ಗಮನ ಕೊಡಲಿಲ್ಲ "ಶಿಕ್ಷಾಣಿರ್ ಪಶ್ಯೇತ್ತು ರಾಜಾನಂ ದೇವತಾಂ ಗುರುಂ" ಎಂದು ಲೌಕಿಕ ಜನರ ಔಪಚಾರಿಕ ವಿಧಿ. ನಿಜವಾದ ಭಕ್ತರಿಗೆ ಇವೆಲ್ಲ ಗೌಣಪ್ರಶ್ನೆಗಳು. ಆದುದರಿಂದ ನಮ್ಮ ಚರಿತ್ರನಾಯಕರು ತೆಂಗಿನಕಾಯಿ, ಬಾಳೆಹಣ್ಣು ಮೊದಲಾದವುಗಳನ್ನು ಒಯ್ಯಲೇಬೇಕೆಂಬ ಆಗ್ರಹಕ್ಕೆ ಬೀಳಲಿಲ್ಲ ಅವರು ಆ ಬಗ್ಗೆ ವಿಚಾರವನ್ನೇ ಮಾಡಲಿಲ್ಲೆಂದರೂ ಅಡ್ಡಿಯಿಲ್ಲ ಆದರೆ ಗುರುದೇವದತ್ತನಿಗೆ ಸಮರ್ಪಣೆ ಮಾಡಲಿಕ್ಕೆ ಅವರು ಬೇರೊಂದು ಅಪರೂಪವಾದ ಪದಾರ್ಥವನ್ನು ಅಣಿಮಾಡಿಕೊಂಡಿದ್ದರು. ಆತ್ಮಾರ್ಪಣ ಅಥವಾ ಸರ್ವಾರ್ಪಣವೇ ಆ ವಸ್ತುವು. ಅವರು ತಮ್ಮ ತನು-ಮನ-ಧನಗಳನ್ನೆಲ್ಲ ಪ್ರಥಮ ದರುಶನದಲ್ಲಿಯೇ ದೇವರಿಗೆ ಅರ್ಪಿಸಿಬಿಟ್ಟರು. ದೇವರ ಸೇವೆಗಾಗಿ ಅವರ ಜನ್ಮವು ಅಂದಿನಿಂದ ಮೀಸಲಾಯಿತು. ಅವುಗಳ ಮೇಲೆ ಆಗಿನಿಂದ ನಮ್ಮ ಚರಿತ್ರನಾಯಕರಿಗಾಗಲೀ, ಉಳಿದವರಿಗಾಗಲಿ ಸ್ವತಂತ್ರವಾದ ಹಕ್ಕು ಅಥವಾ ಅಧಿಕಾರವೇ ಉಳಿಯಲಿಲ್ಲ. ವಾಚಕರೇ, ಇದೆಂತಹ ತ್ಯಾಗ! ಎಂತಹ ಅರ್ಪಣ! ಇದರಿಂದ ಪರಮಾತ್ಮನು ಕೂಡಲೇ ಪ್ರಸನ್ನನಾಗುವನೆಂಬದರಲ್ಲಿ ಸಂದೇಹವೇನು ?

ನಮ್ಮ ಚರಿತ್ರನಾಯಕರು ಒಳ್ಳೇ ಸಂಭ್ರಮದಿಂದ ಹೆಜ್ಜೆಯಿಡುತ್ತಿದ್ದರು. ಅವರ ಅನೇಕ ಜನ್ಮಗಳ ಅನೇಕ ಪುಣ್ಯಾತಿಶಯಗಳ ಸರಿವಾಕದ ಫಲವು ಸಿಕ್ಕುವ ಭಾಗ್ಯಕಾಲವೀಗ ಒದಗಿಬಂತು. ಮುಂದೆ ಮುಂದೆ ಸಾಗಿದಂತೆ ಅವರ ಬಲಗಣ್ಣೂ ಬಲಭುಜವೂ ಹಾರಹತ್ತಿದವು. ಎದೆಯು ಡವಡವ ಬಡಿದುಕೊಳ್ಳಹತ್ತಿತು. ಹೃದಯವು ಆನಂದದಿಂದ ತುಂಬಿ ಬಂತು. ಪ್ರೇಮಾಶ್ರುಗಳು ಉದುರಹತ್ತಿದವು.

ಶ್ರೀ ಸ್ವಾಮೀ ಸಮರ್ಥರು ಒಂದು ದೊಡ್ಡ ವಟವೃಕ್ಷದ ಕೆಳಗೆ ವಿರಾಜಮಾನರಾಗಿದ್ದರು. ಅವರು ಪಲಂಗದ ಮೇಲೆ ಪೂರ್ವಾಭಿಮುಖವಾಗಿ ಕುಳಿತು ಕಾಲುಗಳನ್ನು ಕೆಳಕ್ಕಿಳಿಬಿಟ್ಟಿದ್ದರು. ಅವರು ಪ್ರಸನ್ನ ಮುದ್ರೆಯಿಂದ ಎಲ್ಲರನ್ನೂ ನೋಡುತ್ತ ಕುಳಿತುಕೊಂಡಿದ್ದರು. ಅವರ ಮುಖದ ಮೇಲೆ ಮಂದಹಾಸ್ಯವು ಸುಳಿದಾಡುತ್ತಿತ್ತಲ್ಲದೆ, ಅವರ ಕಣ್ಣುಗಳಲ್ಲಿ ಕಾರುಣ್ಯವೂ, ದಯೆಯೂ ಕೃಪೆಯೂ ಮೂರ್ತಿಮಂತಾಗಿ ಮೂಡಿದ್ದವು. ನಮ್ಮ

ಚರಿತ್ರನಾಯಕರು ದೂರಿಂದಲೇ ಅವರನ್ನು ನೋಡಿದರು. ತಲೆಯಿಂದ ಕಾಲುಗಳ ವರೆಗೆ ಮತ್ತು ಕಾಲುಗಳಿಂದ ತಲೆಯ ವರೆಗೆ ಆ ಸಗುಣ ಮೂರುತಿಯನ್ನು ಮತ್ತೆ ಮತ್ತೆ ನೋಡಿದರು ಅಲ್ಲಿ ನೆಟ್ಟ ಅವರ ದೃಷ್ಟಿಯು ಬೇರೆ ಕಡೆಗೆ ಹೊರಳಲೇ ಇಲ್ಲ. ಅವರು ಅನಿಮೇಷ ದೃಷ್ಟಿಯಿಂದ ಆ ಮೂರ್ತಿಯನ್ನು ನೋಡುತ್ತಿದ್ದರು. ಎಷ್ಟು ನೋಡಿದರೂ ಅವರಿಗೆ ತೃಪ್ತಿಯಾಗಲೊಲ್ಲದು. ಅನೇಕ ಜನ್ಮಗಳಿಂದ ಯಾವ ಮೂರ್ತಿಯ ದರುಶನಕ್ಕಾಗಿ ಅವರ ಕಣ್ಣುಗಳು ಉಪವಾಸ ಮಾಡಿದ್ದವೋ, ಆ ಉಪವಾಸದ ಪಾರಣೆ ಮಾಡುವ ಕಾಲವೀಗ ಬಂದಿತ್ತು. ಪರಮಾತ್ಮನ ಆ ಸಾಕಾರ ರೂಪವನ್ನು ನೋಡಿ ಅವರ ಹಸಿವೆ ನೀರಡಿಕೆಗಳು ಹಿಂಗಿದವು ಅವರಿಗೆ ಆಗ ಕಾಣಿಸಿದ ದಿವ್ಯಮೂರುತಿಯನ್ನು ಮಾಧವ ಶಾಸ್ತ್ರಿಗಳಿಂಬವರ ಶಬ್ದಗಳಲ್ಲಿ ಕೆಳಗಿನಂತೆ ವರ್ಣಿಸಬಹು. —

ಜನ್ಮಶೂನ್ಯೋ, ದಿವ್ಯರೂಪೋ, ರವಿಭಾಃ ಸುರವಂದಿತಃ ।
ಅದರ್ಶವತ್-ದೃಶ್ಯ-ಸೂಕ್ಷ್ಮ-ಗಂಡಯುಗ್ಮ ಸುಮಂಡಿತಃ ॥ ೧ ॥
ಸುನಾಸೋಽ ನಿಮಿಷಃ, ಸುಭ್ರುಃ, ಕರುಣಾಪೂರ್ಣಲೋಚನಃ ।
ಶರತ್ಪೂರ್ಣೇಂದುವದನಃ, ಸ್ಫಾಟಿಕ್ಯಮಣಿಭೂಷಿತಃ ॥ ೨ ॥
ಸುಂದರಾಂಗೋ, ದಿವ್ಯಬಾಹುಃ ಕಟಮೇಖಲಶೋಭಿತಃ ।
ಕೌಪೀನಧಾರೀ, ರಂಭೋರುಃ, ಕಂಜಕೋಮ್ಯಪಾದಕಃ ॥ ೩ ॥

ಮಹಾರಾಜರ ಮೂಗು ಉದ್ದವಾಗಿತ್ತು. ಕಿವಿಗಳು ದೊಡ್ಡವು. ಎದೆಯು ಹರವಾಗಿತ್ತು. ಅವರು ಜನ್ಮಶೂನ್ಯರಾಗಿದ್ದು ಸೂರ್ಯನಂತೆ ಅವರ ರೂಪವು ಪ್ರಕಾಶಮಾನವಾಗಿತ್ತು. ದೇವದೇವತೆಗಳೂ ಕೂಡ ಮಹಾರಾಜರನ್ನು ನೋಡಿ ಅವರಿಗೆ ನಮಸ್ಕಾರ ಮಾಡುತ್ತಿದ್ದರು. ಅವರ ಕಾಂತಿಯೇ ಅಷ್ಟು ಅಪೂರ್ವವಾದದ್ದು. ಎರಡೂ ಗಂಡಸ್ಥಲಗಳು ಕನ್ನಡಿಯಂತೆ ಶೋಭಿಸುತ್ತಿದ್ದವು. ಮೂಗು ಸರಳವಾಗಿತ್ತು. ಹುಬ್ಬುಗಳು ಚೆನ್ನಾಗಿ ಇದ್ದವು. ನೇತ್ರಕಮಲಗಳು ಕೃಪೆಯನ್ನು ಸುರಿಸುತ್ತಿದ್ದವು. ಶರತ್ಕಾಲದ ಪೂರ್ಣಚಂದ್ರನಂತೆ ಅವರ ಮುಖವು ಆಹ್ಲಾದಕರವಾಗಿತ್ತು. ಎದೆಯ ಮೇಲೆ ಸ್ಫಟಿಕಮಣಿಯ ಮಾಲೆಯು ತೂಗಾಡುತ್ತಿತ್ತು. ಅವರ ಶರೀರವೆಲ್ಲ ಸುಂದರವಾದುದು. ಬಾಹುಗಳು ಮೊಣಕಾಲುಗಳನ್ನು ಕೂಡ ದಾಟಿ

ಹೋಗುವಷ್ಟು ಉದ್ದವಾಗಿದ್ದವು. ನಡದಲ್ಲಿ ಉಡದಾರವು ಶೋಭಿಸುತ್ತಿತ್ತು. ಅವರ ತೊಡೆಗಳು ಬಾಳೆಯ ಕಂಬಗಳಂತೆ ಮನೋಹರವಾಗಿದ್ದವು ಅವರ ಚರಣಗಳು ಕಮಲದಂತೆ ರಮ್ಯವೂ ಕೋಮಲವೂ ಆಗಿದ್ದವು.

ಈ ದರುಶನದಿಂದ ನಮ್ಮ ಚರಿತ್ರನಾಯಕರ ಆನಂದಕ್ಕೆ ಪಾರಾವಾರವೇ ಉಳಿಯಲಿಲ್ಲ. ಅವರ ಮೈಮೇಲಿನ ಕೂದಲುಗಳು ನೆಟ್ಟಗಾದವು. ಕಂಠವು ಸದ್ಗದಿತವಾಯಿತು. ಕಣ್ಣೀರು ಧಾರೆಯಾಗಿ ಬೀಳಹತ್ತಿದವು. ಮೈ ಜುಮ್ಮೆಂದಿತು ಶರೀರದಲ್ಲಿ ಕಂಪು ಉತ್ಪನ್ನವಾಯಿತು. ಅವರಿಗೆ ಏನೂ ತಿಳಿಯದಂತಾಗಿ ಕಂಬದಂತೆ ನಿಂತುಬಿಟ್ಟರು. ಮುಖವರ್ಣವೂ ಕೂಡ ಬದಲಾಯಿತು ಇನೆಲ್ಲ ಸಾತ್ತ್ವಿಕ ಭಾವಗಳನ್ನು ಅವರು ಕ್ಷಣಾರ್ಧದಲ್ಲಿ ಅನುಭವಿಸಿದರು. ಒಂದರೆಕ್ಷಣ ಅವರಿಗೆ ನಿರ್ವಿಕಲ್ಪ ಸಮಾಧಿಯ ಅನುಭವವೂ ಆಯಿತು. ಕಣ್ತೆರೆದ ಮೇಲೆ ಅವರು ಕೃತಜ್ಞತೆಯಿಂದ ಪ್ರಾರ್ಥನೆ ಮಾಡಿಕೊಂಡರು, ಆದರೆ ಆನಂದಪರವಶತೆಯಿಂದ ಶಬ್ದಗಳು ಮಾತ್ರ ಮುಖದಿಂದ ಹೊರಬೀಳಲಿಲ್ಲ. ಅವರು ಮನಸ್ಸಿನಲ್ಲಿಯೇ ಬೇಡಿಕೊಂಡರು:— "ಪ್ರಭುನೇ! ನಿನಗಾಗಿ ಎಲ್ಲವನ್ನೂ ನಾನು ತೊರೆದುಬಂದುದು ಸಾರ್ಥಕವಾಯಿತು. ದೇವಾಧಿದೇವಾ, ನಿನ್ನ ಪರಮಕಾರುಣ್ಯವನ್ನು ನಾನು ಏನೆಂದು ಬಣ್ಣಿಸಲಿ ? ಶ್ರುತಿಸ್ಮೃತಿಗಳಿಗೂ ಕೂಡ ಅತೀತನಾದ ನೀನು ನನ್ನಂತಹ ಬಾಲಕನ ಮೇಲೆ ಎಷ್ಟು ಕರುಣೆಹೋರಿದೆಯೆಲ್ಲ ! ಪರಮಾತ್ಮಾ, ನಿನ್ನ ಚರಿತ್ರೆಯೂ ಲೀಲೆಯೂ ಅಗಮ್ಯವಾದವು, ಅಪಾರವಾದವು. ನನ್ನ ಜನ್ಮವು ಇಂದು ಸಾರ್ಥಕವಾಯಿತು ! ಅನೇಕ ಜನ್ಮಗಳ ನನ್ನ ಬಯಕೆಯು ಈಗ ಪೂರ್ಣವಾಯಿತು ! ದೊರೆಯೇ, ಇಂದಿನಿಂದ ನನ್ನ ತನುಮನಧನಗಳೆಲ್ಲ ನಿನ್ನವು. ಈ ಜನ್ಮವು ನಿನಗಾಗಿ ಮೀಸಲು ನೀನು ಮಾಡಿದ ಅನಂತಾನಂತ ಉಪಕಾರವನ್ನು ನಾನೆಂತು ತೀರಿಸಲಿ ? ಅದು ಎಂದಾದರೂ ಸಾಧ್ಯವೇ ? ನಿನಗೆ ನನ್ನ ಅನಂತ ಪ್ರಣಾಮಗಳು ಇದರ ಹೊರತಾಗಿ ನಾನು ಬೇರೆ ಏನನ್ನು ಮಾಡಬಲ್ಲೆನು ? ನನ್ನ ಕೃತಜ್ಞತೆಯನ್ನು ಬೇರೆ ರೀತಿಯಿಂದ ತೋರ್ಪಡಿಸಲಿಕ್ಕೆ ಮಾರ್ಗವೇ ಇಲ್ಲ." ಹೀಗೆ ನಮ್ಮ ಚರಿತ್ರನಾಯಕರು ಮನೋಮಯ ನಿವೇದನ ಮಾಡಿಕೊಂಡರು. ಆದರೆ ಅವರ ಮನಸ್ಸಿನಲ್ಲಿ ಶ್ರೀ ಸ್ವಾಮೀಸಮರ್ಥರ ಚರಣಗಳ ಪ್ರತ್ಯಕ್ಷಸೇವೆ ಮಾಡಬೇಕೆಂದೂ, ಅವರ

ಚರಣಗಳ ಮೇಲೆ ತಲೆಯಿಟ್ಟು ನಮಸ್ಕರಿಸಬೇಕೆಂದೂ ಇಚ್ಛೆಯುಂಟಾಯಿತು. ಆದರೆ ಇವರನ್ನು ಯಾರು ಕೇಳಬೇಕು? ಆ ಭವ್ಯಮೂರುತಿಯನ್ನು ನೋಡಿ ಅವಗಲ್ಲಿ ಭಯವೂ ಭಕ್ತಿಯೂ ಹುಟ್ಟಿದವು. ಶ್ರೀ ಸ್ವಾಮೀಸಮರ್ಥರ ಸಮೀಪಕ್ಕೆ ಹೋಗುವ ಧೈರ್ಯವೂ ಕೂಡ ನಮ್ಮ ಚರಿತ್ರನಾಯಕರಿಗಾಗಲಿಲ್ಲ. ಅವರು ಸುಮ್ಮನೇ ಕೈಜೋಡಿಸಿಕೊಂಡು ನಿಂತು ಸ್ವಾಮಿಗಳಿಗೆ ಪ್ರಾರ್ಥಿಸುತ್ತಿದರು. ಸರ್ವಜ್ಞರೂ ಭಕ್ತವತ್ಸಲರೂ ಆದ ಸ್ವಾಮಿಗಳವರು "ಆವ, ಬೇಟಾ ಇಧರ ಆವ" (ತಮ್ಮಾ, ಇಲ್ಲಿ ಬಾ) ಎಂದು ಕೈಸನ್ನೆ ಮಾಡಿ ನಮ್ಮ ಚರಿತ್ರನಾಯಕರನ್ನು ಕರೆದು, ಅವರಿಗೆ ತಮ್ಮ ಚರಣ ಕಮಲಗಳನ್ನು ದಯಪಾಲಿಸಿದರು. ನಮ್ಮ ಚರಿತ್ರನಾಯಕರಿಗೆ ಅವರ ಈ ಭಕ್ತವಾತ್ಸಲ್ಯದಿಂದ ಅಪಾರವಾದ ಹರುಷವಾಯಿತು. ಅವರು ಅತ್ಯಾನಂದದಿಂದಲೂ, ಪರಮಸಂಭ್ರಮ ಮತ್ತು ಆದರಗಳಿಂದಲೂ ಸಮರ್ಥರ ಚರಣ ಸೇವೆಯನ್ನು ಮಾಡಿದ್ದಲ್ಲದೆ, ಪುನಃ ಪುನಃ ಅವುಗಳ ಮೇಲೆ ತಮ್ಮ ತಲೆಯಿಟ್ಟು ಕೃತಾರ್ಥರಾದರು. ಮಗನ ಹಿಂದಿನಿಂದ ಬಾಳಕೃಷ್ಣಭಟ್ಟರೂ ಪರಮಾತ್ಮನ ಆ ಪೂಜ್ಯಚರಣ ಕಮಲಗಳ ಮೇಲೆ ತಮ್ಮ ತಲೆಯಿಟ್ಟು ಧನ್ಯರಾದರು. ದತ್ತರಾಜನು ನಮ್ಮ ಚರಿತ್ರನಾಯಕರ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದನು. ಶ್ರೀ ಸ್ವಾಮೀಸಮರ್ಥರು ಬಾಯಿಂದ ಏನೂ ಮಾತಾಡದೆ ನಮ್ಮ ಚರಿತ್ರನಾಯಕರ ಎಲ್ಲ ಬಯಕೆಗಳನ್ನೂ ಪೂರ್ಣಮಾಡಿದರು. ವಾಚಕರೇ, ಗುರೋಸ್ತು ಮೌನಂ ವ್ಯಾಖ್ಯಾನಂ, ಶಿಷ್ಯಾಸ್ತು ಛಿನ್ನ ಸಂಶಯಾಃ" ಅಲ್ಲವೇ?

ಅಲ್ಲಿ ಆ ಕಾಲಕ್ಕೆ ಪುರಾಣಿಕರೊಬ್ಬರು ಪುರಾಣ ಹೇಳುತ್ತಿದ್ದರು. ಪಿತಾಪುತ್ರರೀರ್ವರೂ ಆ ಪುರಾಣಶ್ರವಣಕ್ಕೆಂದು ಕುಳಿತುಕೊಂಡರು.

ಶ್ರೀ ಸ್ವಾಮೀಸಮರ್ಥರ ಅದ್ಭುತವಾದ ಲೀಲೆಯು ಸುರುವಾಯಿತು. ಅವರು ಸಕೃದ್ದರ್ಶನಕ್ಕೆ ವಿಚಿತ್ರವಾಗಿಯೂ ವಿಕ್ಷಿಪ್ತರಾಗಿಯೂ ತೋರುತ್ತಿದ್ದರೆಂಬುದು, ಮೇಲೆ ಬರೆದ ಅವರ ವರ್ಣನೆಯಿಂದ ತಿಳಿಯುವಂತಿದೆ. ಅವರು ವಿಶೇಷವಾಗಿ ಮಾತಾಡುತ್ತಿದ್ದಿಲ್ಲ. ತಮಗೆ ಹೇಳತಕ್ಕದ್ದನ್ನು ಅವರು ಕೃತಿಯಿಂದಲೇ ಮಾಡಿ ತೋರಿಸುತ್ತಿದ್ದರು. ಅವರು ಕ್ವಚಿತ್ತಾಗಿ ಮಾತಾಡಿದರೂ, ಅವರ ಮಾತುಗಳು ತೀರ ಅಸಂಬದ್ಧವಾಗಿ ಕಾಣುತ್ತಿದ್ದವು

ಸಹಸಾ ಅವುಗಳ ಅರ್ಥವೇ ಆಗುತ್ತಿರಲಿಲ್ಲ. ಆದರೆ ಅವರ ಮುಖಕಮಲ ದಿಂದ ಹೊರಟ ಪ್ರತಿಯೊಂದು ಶಬ್ದವು ಮುತ್ತಿನಂತೆ ಅಮೌಲ್ಯವಾದುದೂ, ಅತ್ಯಂತ ರಹಸ್ಯಮಯವೂ ಆಗಿರುತ್ತಿತ್ತು. ಅವರ ಮಾತು ಸೂತ್ರಪ್ರಾಯ ವಾಗಿರುತ್ತಿತ್ತು. ಅವರ ಅರ್ಥವು ತೀರ ಸ್ವಲ್ಪೇ ಜನರಿಗೆ ಆಗುತ್ತಿತ್ತು. ನಮ್ಮ ಚರಿತ್ರನಾಯಕರು ಅಲ್ಲಿ ಕುಳಿತಾಗಲೇ ಅವರಿಗೆ ಈ ಮಾತಿನ ಅನುಭವವು ಬಂತು. ಪುರಾಣವು ನಡೆದಿರುವಾಗಲೇ ಶ್ರೀ ಸ್ವಾಮೀ ಸಮರ್ಥರು ಪುರಾಣದ ಒಂದು ಓಲೆಯನ್ನು ತಕ್ಕೊಂಡು ಅದನ್ನು ಊದು ಗೊಳವೆಯಂತೆ ಸುರುಳಿ ಮಾಡಿ, ಒಂದು ಕಡೆಯಿಂದ ಊದಹತ್ತಿದರು ಮಹಾಸ್ವಾಮಿಗಳವರ ಈ ಕೃತಿಯು ಪುರಾಣವನ್ನು ಕೇಳಲಿಕ್ಕೆ ಕುಳಿತ ಜನರ ವಿಷಯವಾಗಿಯೇ ಇರುವದೆಂಬದು ಎಲ್ಲರಿಗೂ ತಿಳಿಯುವಂತೆ ಇತ್ತು. "ಒಂದು ಕಿವಿಯಿಂದ ಪುರಾಣವನ್ನು ಕೇಳಿ, ಮತ್ತೊಂದು ಕಿವಿಯಿಂದ ಅದನ್ನು ಅಲ್ಲಿಯೇ ಬಿಟ್ಟು ಬಿಡುವವರೇ ಬಹಳ ಮಂದಿ. ಅದನ್ನು ಸರಿಯಾಗಿ ತಿಳಿದುಕೊಂಡು ಅವರಂತೆ ನಡೆಯುವವರು ಮಾತ್ರ ಬಹು ವಿರಳ." ಎಂಬದು ಶ್ರೀ ಸ್ವಾಮೀ ಮಹಾರಾಜರ ಆಶಯವಾಗಿತ್ತು. ಈ ಮಾತನ್ನೇ ಅವರು ಅಲ್ಲಿ ಕುಳಿತವರಿಗೆ ತಿಳಿಸಿಕೊಟ್ಟರು

ಪುರಾಣವು ಮುಗಿದೊಡನೆ ತಂದೆಮಕ್ಕಳೀರ್ವರು ಶ್ರೀ ಸಮರ್ಥರಿಗೆ ನಮಸ್ಕಾರ ಮಾಡಿ ತಮ್ಮ ಬಿಡಾರಕ್ಕೆ ಹೊರಟರು. ಬಾಳಕೃಷ್ಣ ಭಟ್ಟರು ನಮಸ್ಕಾರ ಮಾಡಿ ತಿರುಗುವಷ್ಟರಲ್ಲಿ ಶ್ರೀ ಸ್ವಾಮೀ ಮಹಾರಾಜರು "ನಮ್ಮ ಸಕ್ಕರಿಯು ಎಲ್ಲಿರುವದು?" ಎಂದು ಮಹಾರಾಷ್ಟ್ರಭಾಷೆಯಲ್ಲಿ ಕೇಳಿದರು. ಅಲ್ಲಿ ಕುಳಿತವರಾರಿಗೂ ಅವರ ಅರ್ಥವಾಗಲಿಲ್ಲ. ಭಟ್ಟರಿಗೆ ಮಾತ್ರ ಕಣ್ತೆರೆ ದಂತಾಯಿತು ತಾವು ಮಗನ ಜೆಶಿಯಿಂದ ಮಾಡಿದ ಸಂಕಲ್ಪವನ್ನು ಮರೆತು ಬಿಟ್ಟದ್ದಕ್ಕಾಗಿ ಅವರಿಗೆ ಪಶ್ಚಾತ್ತಾಪವಾಯಿತು. ಅವರು ಅಲ್ಲಿ ಕೂಡಿದ ಜನರಿಗೆ ತಾವು ಮಹಾರಾಜರಿಗೆ ಹರಕೆ ಹೊತ್ತ ಸಂಗತಿಯನ್ನು ತಿಳಿಸಿದರು. ಮತ್ತು ಅವರು ಕೂಡಲೆ ಪೇಟೆಗೆ ಹೋಗಿ ಎಂಟಾಣೆಯ ಸಕ್ಕರಿಯನ್ನು ತಂದು ಮಹಾರಾಜರ ಮುಂದೆ ಇಟ್ಟರು. ಮಹಾರಾಜರು ಅದರೊಳಗಿಂದ ಒಂದು ಚಿಮುಟೆಯಷ್ಟು ತಕ್ಕೊಂಡು ತಮ್ಮ ಬಾಯಿಯೊಳಗೆ ಹಾಕಿಕೊಂಡರು. ಉಳಿದ ಸಕ್ಕರೆಯನ್ನು ಮಹಾರಾಜರ ಅಪ್ಪಣೆಯಂತೆ ಅಲ್ಲಿ ಹಂಚಲಾಯಿತು.

ಈ ಸಂಗತಿಯನ್ನು ಪ್ರತ್ಯಕ್ಷವಾಗಿ ಕಂಡ ನಮ್ಮ ಚರಿತ್ರನಾಯಕರಲ್ಲಿ ಮಹಾರಾಜರ ವಿಷಯಕವಾಗಿ ಹುಟ್ಟಿದ ಭಾವನಿಷ್ಠೆಯು ಇನ್ನಷ್ಟು ದೃಢವಾಯಿತು. ಮಹಾರಾಜರ ಅಂತಃಸಾಕ್ಷಿತ್ವದ ಅನುಭವವು ಅವರಿಗೆ ಎರಡನೆಯ ಸಲ ಬಂದಂತಾಯಿತು.

ತಂದೆ ಮಕ್ಕಳು ಮಹಾರಾಜರ ಸನ್ನಿಧಿಯಲ್ಲಿ ಮತ್ತೆ ಮೂರು ನಾಲ್ಕು ದಿನಗಳನ್ನು ಆನಂದದಿಂದ ಕಳೆದರು. ಅಕ್ಕಲಕೋಟೆಯ ವಾಸವು ಅವರಿಗೆ ಸ್ವರ್ಗಕ್ಕಿಂತಲೂ ಮಿಗಿಲಾಗಿ ತೋರಿತು. ಶ್ರೀ ಸ್ವಾಮೀಸಮರ್ಥರ ಲೀಲೆಗಳನ್ನು ಅವರು ಅವಿಶ್ರಾಂತವಾಗಿ ಶ್ರವಣ ಮಾಡುತ್ತಿದ್ದರು. ಭೆಟ್ಟಿಯಾದವರಿಗೆಲ್ಲ ಅವರು ಶ್ರೀ ಸಮರ್ಥರ ಲೀಲಾವಿಹಾರವನ್ನೇ ಹೇಳಿರೆಂದು ಗಂಟು ಬೀಳುತ್ತಿದ್ದರು. ಮಹಾರಾಜರ ಚರಿತ್ರೆಯನ್ನು ಎಷ್ಟು ಕೇಳಿದರೂ ಅವರಿಗೆ ತೃಪ್ತಿಯಾಗಲೊಲ್ಲದು. ಪುನಃ ಪುನಃ ಮಹಾರಾಜರಿದ್ದಲ್ಲಿಗೆ ಹೋಗಿ ಅವರ ವರುಶನಾನಂದವನ್ನು ಪಡೆಯುವಮೊಂದೇ ಕೆಲಸವು ನಮ್ಮ ಚರಿತ್ರನಾಯಕರಿಗೆ ಆಗ ಗಂಟುಬಿದ್ದಿತು.

ಕೊನೆಗೆ ಅಕ್ಕಲಕೋಟೆಯಿಂದ ಮುರಗೋಡಕ್ಕೆ ತಿರುಗಿ ಹೊರಡುವ ಸಮಯವು ಬಂತು. ನಮ್ಮ ಚರಿತ್ರನಾಯಕರಿಗೆ ಇದರಿಂದ ಖೇದವಾಯಿತೆಂದು ಬೇರೆ ಹೇಳಲಿಕ್ಕೆ ಬೇಡ. ಆದರೆ ಆ ಮಾತು ನಿರುಪಾಯವಾಗಿತ್ತು. ತಂದೆಮಕ್ಕಳು ಶ್ರೀ ಸ್ವಾಮೀ ಸಮರ್ಥರಿಗೆ ನಮಸ್ಕಾರ ಮಾಡಿ ಅವರ ಆಜ್ಞೆ ಪಡಕೊಂಡು ಊರಿಗೆ ಹೋಗಬೇಕೆಂದು ನಿಂತರು. ನಮ್ಮ ಚರಿತ್ರನಾಯಕರು ಮನಸ್ಸಿನಲ್ಲಿಯೇ ದತ್ತರಾಜನಿಗೆ ಪ್ರಾರ್ಥನೆ ಮಾಡಿಕೊಳ್ಳಹತ್ತಿದರು:— "ದೇವಾಧಿದೇವಾ, ನನ್ನ ಪರಬ್ರಹ್ಮನು ನೀನೇ. ನನ್ನ ಪಾಲಿಗೆ ಬ್ರಹ್ಮ, ಮಹೇಶ್ವರರೆಂದರೆ ನೀನೊಬ್ಬನೇ. ನಿನ್ನ ಹೊರತು ಇನ್ನೊಬ್ಬರಿಗೆ ಶರಣೆಂದರೆ ಆಣೆ. ಚಿದಂಬರಾ, ದತ್ತರಾಜಾ, ನೀನೊಬ್ಬನಾದರೂ ಹಲವು ನಾಮಗಳಿಂದ ಕರೆಯಲ್ಪಡುವಿ. ಭಕ್ತರಿಗಾಗಿ ನೀನು ಅನಂತ ನಾಮಗಳಿಂದ ಕರೆಯಲ್ಪಡುವಿ. ಭಕ್ತರಿಗಾಗಿ ನೀನು ಅನಂತ ನಾಮಗಳನ್ನೂ ಅನಂತ ರೂಪಗಳನ್ನು ಧಾರಣ ಮಾಡಿರುವಿ. ಸರ್ವಭಾವದಿಂದಲೂ ನಾನು ನಿನಗೆ ಶರಣುಬಂದಿದ್ದೇನೆ. ನನಗಿನ್ನು ನೀನೇ ಗತಿ. ನಿನ್ನ ಶ್ರೀ ಚರಣಗಳೇ

ನನಗಿನ್ನು ಆಧಾರವು. ನಾನು ದೀನನು, ಪಾಪಿಯು, ಅಜ್ಞಾನಿಯು, ಅವಿವೇಕಿಯು. ಎಂತೆಯೇ ನಾನು ನಿನ್ನ ಚರಣಗಳ ಆಶ್ರಯವನ್ನು ಅಪೇಕ್ಷಿಸುತ್ತಿದ್ದೇನೆ. ಈ ದೀನನನ್ನು ನಿನ್ನ ಚರಣಗಳಿಂದ ದೂರವಿಡಬಾರದೆಂದು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ದಯಾನಿಧೇ, ನಿನ್ನ ಅನುಗ್ರಹವು ನನ್ನ ಮೇಲೆ ಸರ್ವ ಕಾಲವಲ್ಲಿಯೂ ಇರಬೇಕು. ಮೇಲಿಂದ ಮೇಲೆ ನಿನ್ನ ದರುಶನವನ್ನು ದಯಪಾಲಿಸಬೇಕು. ಒಟ್ಟಿನ ಮೇಲೆ ಚರಣಸೇವಕನಾದ ನನ್ನನ್ನು ಮರೆಯದೆ ಉದ್ಧಾರ ಮಾಡಬೇಕು. ನಾನು ನಿನ್ನಲ್ಲಿ ಮತ್ತೆ ಮತ್ತ ಅರಿಕೆಮಾಡಿಕೊಳ್ಳುವ ಮಾತು ಇದೇ. ನಾನು ಹೋಗಿ ಬರುವೆ. ಆಜ್ಞೆಯಾಗಬೇಕು." ಹೀಗೆಂದು ನಮ್ಮ ಚರಿತ್ರನಾಯಕರು ಸಾಷ್ಟಾಂಗವೆರಗಿ ಕೈಜೋಡಿಸಿಕೊಂಡು ನಿಂತರು. ಎಲ್ಲರ ಅಂತಃಕರಣಕ್ಕೆ ಸಾಕ್ಷಿಯಾಗಿ ಸರ್ವಜ್ಞರಾಗಿರುವ ಶ್ರೀ ಸ್ವಾಮೀಜಿಯವರು ಆ ಪ್ರಾರ್ಥನೆಯನ್ನು ಕೇಳಿ ಸುಪ್ರಸನ್ನರಾದರು. ಮತ್ತು ಅದಕ್ಕೆ ಉತ್ತರವೆಂದು ತಮ್ಮ ಕೈಯನ್ನು ಮುಂದೆ ಚಾಚಿ.

"ನೀರು ಬಹಳ ಆಳವಾಗಿದೆ. ಅಂಜಬೇಡಿರಿ
ಲಕ್ಷ, ಲಕ್ಷ, ಲಕ್ಷ ಬ್ರಾಹ್ಮಣ ಭೋಜನ."
(ಎದೆಯಮೇಲೆ ಕೈಯಿಟ್ಟುಕೊಂಡು)
"ನಾವು ನಿಮ್ಮ ಕೂಡ ಬರುತ್ತೇವೆ ನಡೆಯಿರಿ"

ಎಂದು ಮಹಾರಾಷ್ಟ್ರ ಭಾಷೆಯಲ್ಲಿ ಉಚ್ಚರಿಸಿದರು ಶ್ರೀ ಮುಖದಿಂದ ಹೊರಟ ಈ ಅಮೃತ ಸದೃಶ ವಾಕ್ಯಗಳಿಂದ ನಮ್ಮ ಚರಿತ್ರನಾಯಕರು ಆನಂದಸಾಗರದಲ್ಲಿ ತೇಲಾಡಹತ್ತಿದರು. ಅವರಿಗೆ ಕಣ್ತುಂಬ ನೀರುಬಂದವು. ಶ್ರೀಸ್ವಾಮೀಜಿ ಸಮರ್ಥರಿಂದ ಅವರಿಗೆ ಅಭಯವೂ ಪ್ರಸಾದವೂ ದೊರೆತದ್ದರಿಂದ ತಮ್ಮ ಜನ್ಮದ ಇತಿಕರ್ತವ್ಯವು ಮುಗಿದಂತಾಯಿತೆಂದು ಅವರು ಭಾವಿಸಿದರು ಅವರು ಪುನಃ ಪುನಃ ಮಹಾರಾಜರ ಚರಣಕಮಲಗಳಿಗೆರಗಿ, ದುಃಖದಿಂದಲೇ ಅವರ ಆಜ್ಞೆ ಪಡಕೊಂಡು, ತಂದೆಯೊಡನೆ ಊರ ಹಾದೀ ಹಿಡಿದರು. ಮತ್ತು ಯಥಾವಕಾಶದಲ್ಲಿ ಮುರಗೋಡಕ್ಕೆ ಸುಖರೂಪವಾಗಿ ಬಂದು ಮುಟ್ಟಿದರು ಅವರ ಆಗಮನದಿಂದ ಮನೆಯವರಿಗೆಲ್ಲ ಬಹಳ ಸಂತೋಷವಾಯಿತು.

———

೧೧ ಅಣ್ಣಂದಿರಿಗೆ ಉಪದೇಶ ಮತ್ತು ಶ್ರೀ ಸ್ವಾಮೀಜಿಯವರ ಕೃಪೆ

ಪರಮಾರ್ಥಸಾಧನಕ್ಕೆ ಬಾಲ್ಯವೇ ಅತ್ಯುತ್ತಮವಾದ ಕಾಲವೆಂಬದು ಎಲ್ಲರೂ ಒಪ್ಪಬೇಕಾದ ಮಾತು. ಆದರೆ ಎಂತೆಂತಹ ಪಂಡಿತರ ಮನಸ್ಸೂ ಕೂಡ ಪರಮಾರ್ಥದ ಕಡೆಗೆ ಹೊರಳದಿರುವಾಗ ಬಾಲಕರ ಮನಸ್ಸು ಪರಮಾರ್ಥದ ಕಡೆಗೆ ಎಂತು ಹೊರಳಬೇಕು? ಶ್ರೀಮಚ್ಛಂಕರ ಭಗವತ್ಪಾದರವರು ಹೇಳುವಂತೆ "ಬಾಲಸ್ತಾವತ್ ಕ್ರೀಡಾಸಕ್ತಃ" ಎಂದರೆ ಬಾಲ್ಯದಲ್ಲಿ ಮನಸ್ಸೆಲ್ಲ ಆಟನೋಟಗಳಲ್ಲಿಯೇ ಆಸಕ್ತವಾಗಿರುವದು. ಎಂತೆಯೇ ಸುಭಾಷಿತಕಾರರು—

ಲಾಲಯೇತ್ ಪಂಚವರ್ಷಾಣಿ ದಶವರ್ಷಾಣಿ ತಾಡಯೇತ್ ।
ಪ್ರಾಪ್ತೇ ತು ಷೋಡಶೇವರ್ಷೇ ಪುತ್ರೇ ಮಿತ್ರವದಾಚರೇತ್ ॥

ಎಂದು ಹೇಳಿದ್ದಾರೆ. ಮೊದಲಿನ ಐದು ವರುಷ ಹುಡುಗರಿಗೆ ಮನಬಂದಂತೆ ನಡೆಯಗೊಡಬೇಕು, ಆ ಮೇಲೆ ೧೫ ವರುಷದವರಾಗುವವರೆಗೆ ಅವರಿಗೆ ಕಠೋರತನದಿಂದ ಹೊಡೆದು ಬಡೆದಾದರೂ ಶಿಕ್ಷಣ ಕೊಡಬೇಕು, ೧೬ ವರ್ಷದವರಾದ ಮೇಲೆ ಮಕ್ಕಳೊಡನೆ ಗೆಳೆಯರಂತೆ ನಡೆಯಬೇಕು—ಎಂದು ಇದರ ಅರ್ಥವು. ೫ ರಿಂದ ೧೫ ವರುಷಗಳ ವರೆಗಿನ ಕಾಲವು ಆಟನೋಟಗಳ ಕಾಲವು. ಆದರೆ ತಂದೆತಾಯಿಗಳಿಗೆ ತಮ್ಮ ಮಕ್ಕಳು ಲೌಕಿಕ ಶಿಕ್ಷಣವನ್ನು ಪಡೆದು ಮುಂದೆ ಬರಬೇಕಾಗಿರುವದರಿಂದ, ಅವರು ಈ ಬಗ್ಗೆ ಬಹಳ ಎಚ್ಚರ ಪಡುತ್ತಾರೆ. ಹುಡುಗರು ಈ ಕಾಲದಲ್ಲಿ ಆಟಕ್ಕೆ ಹತ್ತಿದರೂ ಕಷ್ಟ. ಎರಡೂ ಮಾರ್ಗಗಳು ಪ್ರಾಪಂಚಿಕರಾದ ತಂದೆತಾಯಿಗಳಿಗೆ ಅನಿಷ್ಟ. ತಮ್ಮ ಮಕ್ಕಳು ಆದಷ್ಟು ಕೀನ್ಯ ದ್ರವ್ಯಗಳಿಸುವ ಶಿಕ್ಷಣವನ್ನು ಪಡೆದು, ಪ್ರಪಂಚದ ಭಾರವನ್ನು ಹೊರಜೇಕೆಂದು ಅವರು ಬಯಸುತ್ತಾರೆ.

ಆದರೆ ಮೇಲೆ ಹೇಳಿದ ಮೂರು ಮಾರ್ಗಗಳಲ್ಲಿ ನಮ್ಮ ಚರಿತ್ರ ನಾಯಕರು ತಮ್ಮ ಆಯುಷ್ಯದ ಈ ಭಾಗದಲ್ಲಿ ಪರಮಾರ್ಥಸಾಧನೆಯ ಮಾರ್ಗವನ್ನೇ ಹಿಡಿದುಬಿಟ್ಟಿದ್ದರಿಂದ ತಂದೆತಾಯಿಗಳು ಸ್ವಾಭಾವಿಕವಾಗಿಯೇ ಗಾಬರಿಯಾದರು. ಅವರು ಮನೆಯಿಂದ ಅಷ್ಟೊಂದು ಸಿರಿವಂತರಾಗಿದ್ದಿಲ್ಲ ಮನೆತನದ ಸ್ಥಾವರ ಆಸ್ತಿಯು ಅಷ್ಟಕ್ಕಷ್ಟೇ. ಬಾಳಕೃಷ್ಣಭಟ್ಟ ಮತ್ತು ಗೋವಿಂದಭಟ್ಟರಿಂತೂ ಅಯಾಚಿತವೃತ್ತಿಯವರು. ರೊಕ್ಕಗಳಿಸುವ ವಿಷಯಕ್ಕೆ ಅವರು ಉದಾಸೀನರಾಗಿದ್ದರು. ಆದುದರಿಂದ ಮನೆತನವನ್ನು ನಡೆಸುವ ಭಾರವೆಲ್ಲ ನಾರಾಯಣಭಟ್ಟರ ಮೇಲೆಯೇ ಇತ್ತು. ಅವರ ವೇತನವಾದರೂ ತೀರ ಸಣ್ಣದು. ಆಗಿನ ಕಾಲದ ಪ್ರಾಥಮಿಕ ಶಿಕ್ಷಕರಿಗೆ ಬಹಳವಾದರೆ ೧೫—೨೦ ರೂಪಾಯಿ ಸಂಬಳ ದೊರೆಯುತ್ತಿತ್ತು. ಹೀಗಾಗಿ ತಮ್ಮ ದೊಡ್ಡ ಕುಟುಂಬವನ್ನು ಸಾಗಿಸುವದು ನಾರಾಯಣಭಟ್ಟರಿಗೆ ಜಡವೆನಿಸಿತು. ಅದರಲ್ಲಿ ''ಗಾಯದ ಮೇಲೆ ಬರೆ'' ಎಂಬಂತೆ ನಮ್ಮ ಚರಿತ್ರನಾಯಕರ ಈ ಪರಮಾರ್ಥ ಪ್ರವೃತ್ತಿಯಿಂದಲೂ ಅವರಿಗೆ ಬಹಳೇ ಯೋಚನೆಯುಂಟಾಯಿತು. ಮಹಾರಾಜರು ಒಳ್ಳೇ ಕುಶಾಗ್ರ ಬುದ್ಧಿಯುಳ್ಳವರೂ ಚತುರರೂ ಆಗಿರುವದರಿಂದ ಅವರು ಆದಷ್ಟು ತೀವ್ರ ವಿದ್ಯೆಕಲಿತು ರೊಕ್ಕಗಳಿಸಿ ತಮ್ಮ ಭಾರವನ್ನು ಕಡಿಮೆ ಮಾಡುವರೆಂದು ಅವರು ನಂಬಿದ್ದರು. ಆದರೆ ಮಹಾರಾಜರ ಸಹಜ ಪ್ರವೃತ್ತಿಯನ್ನು ನೋಡಿ ಅವರು ಚಿಂತೆಗೊಳಗಾದರು ಆದುದರಿಂದ ಅವರು ಮಹಾರಾಜರ ಸಂಸ್ಕೃತಾಭ್ಯಾಸವನ್ನು ಅಲ್ಲಿಗೇ ಮುಗಿಸಿ ಅವರನ್ನು ಯಾವುದೊಂದು ಉದ್ಯೋಗದಲ್ಲಿ ಸೇರಿಸಿಬಿಟ್ಟರೆ ನೆಟ್ಟಗಾಗುವದೆಂದು ನಿಶ್ಚಯಿಸಿದರು. ಅದರಿಂದ ಮಹಾರಾಜರ ಮನಸ್ಸೂ ಉದ್ಯೋಗದಲ್ಲಿ ತೊಡಗಿ ಸ್ಥಿರವಾಗುವದು, ಮತ್ತು ತಮ್ಮ ಮೇಲಿನ ಪ್ರಪಂಚ ಭಾರವೂ ಕೆಲ ಮಟ್ಟಿಗೆ ಕಡಿಮೆಯಾಗುವದು, ಇಲ್ಲದಿದ್ದರೆ ಮಹಾರಾಜರು, ಬರೀ ದೇವರು ದೇವರೆಂದು ಕುಳಿತು ನಿರುದ್ಯೋಗಿಯಾಗಿ ಕೆಟ್ಟುಹೋಗುವರು, ಇದು ಅವರ ವಯಸ್ಸಿನವರಿಗೆ ಸರಿಯಲ್ಲ ಎಂದು ಮೊದಲಾಗಿ ನಾರಾಯಣಭಟ್ಟರು ವಿಚಾರಮಾಡಿದರು.

ಕೂಡಲೇ ನಾರಾಯಣಭಟ್ಟರು ಮಹಾರಾಜರನ್ನು ತಮ್ಮ ಶಾಲೆಯಲ್ಲಿಯೇ ಶಿಕ್ಷಕನ ಕೆಲಸಕ್ಕೆ ನೇಮಿಸಿಕೊಂಡು ಮೇಲಾಧಿಕಾರಿಗಳಿಗೆ

ಆದಕ್ಕೆ ಮಂಜೂರಿ ಕೊಡಬೇಕೆಂದು ರಿಪೋರ್ಟು ಮಾಡಿಕೊಂಡರು. ಮೇಲಿನವರಿಂದ ಆದಕ್ಕೆ ಸನ್ಮತಿಯೂ ದೊರೆಯಿತು. ಮಹಾರಾಜರ ಕಡೆಗೆ ಮೂರನೆಯ ಇಯತ್ತೆಯು ಬಂತು. ವರ್ಗದಲ್ಲಿ ೬೫ ಹುಡುಗರಿದ್ದರು. ಲೋಕಕ್ಕೆ ಶಿಕ್ಷಣ ಕೊಡುವ ಸಲುವಾಗಿ ಅವತರಿಸಿ ಬಂದ ನಮ್ಮ ಚರಿತ್ರ ನಾಯಕರಿಗೆ ಹುಡುಗರಿಗೆ ಪಾಠ ಹೇಳುವದೆಂದರೆ ಆದೊಂದು ಲೀಲಾಜಾಲ ವಾಗಿತ್ತು. ಅವರು ಹುಡುಗರೊಡನೆ ಹುಡುಗರಾಗಿ ವಿದ್ಯಾರ್ಥಿಗಳಿಗೆ ಬಲು ಅಕ್ಕರತೆಯಿಂದಲೂ ಪ್ರೇಮದಿಂದಲೂ ಕಲಿಸುತ್ತಿದ್ದರು. ಹುಡುಗರಾದರೂ ಅವರನ್ನು ಬಲು ಪ್ರೀತಿಸುತ್ತಿದ್ದರು. ಅವರೂ ಒಳ್ಳೇ ಶ್ರಮಬಟ್ಟು ವಿದ್ಯಾರ್ಥಿ ಗಳಿಗೆ ಪಾಠ ಹೇಳಿಕೊಡುವದು. ಶಿಕ್ಷಕರೆಂಬ ಅವರ ಕೆಲಸವು ಬಲು ಜೆನ್ನಾಗಿ ನಾಗಿತು. ಮಾಡತಕ್ಕ ಕೆಲಸವನ್ನು ಮನಮುಟ್ಟಿ ಮಾಡಬೇಕೆಂಬುದು ಮಹಾರಾಜರ ಜೀವನ ಸೂತ್ರವು. ಎಂದ ಮೇಲೆ ತಮ್ಮ ಕರ್ತವ್ಯದಲ್ಲಿ ಅವರು ಎಂದಾದರೂ ಹಿಂದೆ ಬೀಳುವರೇ ?

ಆದರೆ ಮನೆಯವರ ಅಸೇಕ್ಷೆಯಂತೆ ಮಹಾರಾಜರ ಪುರುಷಾರ್ಥದ ಒಲವು ಮಾತ್ರ ಕಡಿಮೆಯಾಗಲಿಲ್ಲ. ಅದು ಎಂದಿನಕಿಂತಲೂ ಬಲವಾಗಿಯೇ ಬೆಳೆಯಹತ್ತಿತ್ತು. ಪ್ರತಿನಿತ್ಯ ಮುಂಜಾನೆ ಮತ್ತು ಮಧ್ಯಾಹ್ನದಲ್ಲಿ ಎರಡೂ ಹೊತ್ತು ಶಿಕ್ಷಕನ ಕೆಲಸವನ್ನು ಸರಿಯಾಗಿ ಮಾಡಿ, ಶಾಲೆಬಿಟ್ಟೊಡನೆ ಅವರು ಕೆಂಗೇರಿಗೆ ಹೋಗುವರು. ಮತ್ತು ಅಲ್ಲಿ ಕನಿಷ್ಠ ಒಂದೆರಡು ತಾಸುಗಳ ನ್ನಾದರೂ ದೇವತಾಸೇವೆಯಲ್ಲಿ ಕಳೆಯುವರು. ಚಳಿ-ಮಳಿ-ಕತ್ತಲೆ ಇವಾವುಗಳನ್ನು ಲಕ್ಷಿಸದೆ ಮಹಾರಾಜರು ಈ ಕ್ರಮವನ್ನು ಅವ್ಯಾಹತವಾಗಿ ಸಾಗಿಸಿದರು.

ಅವರ ಅಣ್ಣಂದಿರಾದ ನಾರಾಯಣಭಟ್ಟರು ಒಂದು ದಿವಸ ಅವರನ್ನು ಏಕಾಂತದಲ್ಲಿ ಕೂಡಿಸಿಕೊಂಡು ಬುದ್ಧೀ ಹೇಳಿದರು: — "ತಮ್ಮಾ, ನಮ್ಮ ಮನೆತನದ ಸ್ಥಿತಿಗಳು ನಿನಗೆ ಗೊತ್ತೇ ಇವೆ. ಹಿರಿಯರು ಪ್ರಪಂಚದ ಕಡೆಗೆ ಮನಸ್ಸು ಹಾಕುವವರಲ್ಲ. ನಾವೆಲ್ಲರೂ ದುಡಿದು ಪ್ರಪಂಚದ ಸುಂಕವು ಅವರಿಗೆ ಹತ್ತಗೊಡದಂತೆ ಮಾಡುವದು ನಮ್ಮ ಕರ್ತವ್ಯವು. ನಮ್ಮ ಮನೆತನದ ಸ್ಥಿತಿಯು ತೀರ ಬಡತನದ್ದಾಗಿರುವದು. ಮೇಲಾಗಿ ಪರಸ್ಥಳವು. ಕಾರಣ ನೀನು ಇನ್ನು ಮುಂದೆ ಯಾವ ಕಡೆಗೂ ಮನಸ್ಸು

ಹಾಕದೆ, ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯ ಅಭ್ಯಾಸವನ್ನು ಮಾಡು. ಅದರಲ್ಲಿ ತೇರ್ಗಡೆಯಾಗಿ ಕಾಲೇಜ ಶಿಕ್ಷಣವನ್ನು ಪಡೆದು ಶಿಕ್ಷಕನಾಗಿ ಬಂದೆಯೆಂದರೆ ಪ್ರಪಂಚವು ಸುಸೂತ್ರವಾಗಿ ಸಾಗುವದು ನೀನು ಬುದ್ಧಿವಂತನೂ ಜಾಣನೂ ಇರುವಿ. ಮನಸ್ಸು ಮಾಡಿದರೆ ನಿನಗೆ ಇದೇನು ದೊಡ್ಡ ಕೆಲಸವಲ್ಲ. ನೀನೀಗ ತರುಣನು. ತಾರುಣ್ಯದಲ್ಲಿ ಆದಷ್ಟು ಹೆಚ್ಚು ಹಣವನ್ನು ಗಳಿಸಿ ಸುಖವಾಗಿ ಸಂಸಾರಮಾಡಿ ಮನೆಯವರನ್ನೆಲ್ಲ ಸಂತೋಷಪಡಿಸಬೇಕು. ಮತ್ತು ಇಂದ್ರಿಯಗಳನ್ನು ತೃಪ್ತಿಗೊಳಿಸಬೇಕು ಆಮೇಲೆ ಮುಪ್ಪಿನಲ್ಲಿ ಹರಿ, ಹರಿ ಎನ್ನುತ್ತ ಕಾಲಕಳೆಯುವ ದಿವಸಗಳು ಬಂದೇ ಬರುತ್ತವೆ. ಅದಕ್ಕಾಗಿ ಯತ್ನಮಾಡುವ ಕಾರಣವಿಲ್ಲ. ಈಗ ದೇವದೇವ ಎಂದು ಕುಳಿತರೆ ಆಯುಷ್ಯದ ಹಾನಿಯಾಗುವದು. ದೇವರಿಗಾಗಿ ದುಡಿಯುವ ಕಾಲವಿದಲ್ಲ."

ನಾರಾಯಣಭಟ್ಟರು ಒಳ್ಳೇ ಪ್ರಾಮಾಣಿಕತನದಿಂದಲೂ ಕಳಕಳಿಯಿಂದಲೂ ಮಾತಾಡಿದರು. ಅವರ ವ್ಯಾವಹಾರಿಕ ದೃಷ್ಟಿಯಂತೆ ಅವರಾಡಿದ ಮಾತೂ ಸುಳ್ಳಾಗಿರಲಿಲ್ಲ. ಅವರ ಉಪದೇಶದಿಂದ ಮಹಾರಾಜರ ಮನಸ್ಸೂ ಕರಗಿತು. ಮಹಾರಾಜರಾದರೂ ಒಳ್ಳೇ ವಿನಯದಿಂದಲೂ ಸಾವಧಾನತೆಯಿಂದಲೂ ಉತ್ತರ ಕೊಟ್ಟರು:— "ಕಣ್ಣಾ, ತಮ್ಮ ಮುಂದೆ ನನಗೆ ಮಾತಾಡುವ ಯೋಗ್ಯತೆಯಿಲ್ಲ. ತಮಗೆ ಉಪದೇಶ ಮಾಡುವ ಅಧಿಕಾರವೂ ನನ್ನದಲ್ಲ. ಆದರೂ ನಾನು ತಮಗೆ ಒಂದೆರಡು ಮಾತು ಅರಿಕೆಮಾಡಿಕೊಳ್ಳಬೇಕೆನ್ನುತ್ತೇನೆ. ದಯವಿಟ್ಟು ಕ್ಷಮಿಸಬೇಕು. ನನ್ನ ಉದ್ದೇಶವನ್ನು ತಾವು ಸರ್ವಥಾ ತಪ್ಪಾಗಿ ತಿಳಿದುಕೊಳ್ಳಬಾರದೆಂದು ಬೇಡಿಕೊಳ್ಳುತ್ತೇನೆ

"ಮನುಷ್ಯನು ಯಾವ ದೇಶ-ಕಾಲ–ಕುಟುಂಬಗಳಲ್ಲಿ ಹುಟ್ಟಿ ಬಂದಿರುವನೋ ಅದಕ್ಕನುಗುಣವಾಗಿ ತನ್ನ ಕರ್ತವ್ಯವನ್ನು ಅವಶ್ಯವಾಗಿ ಮಾಡಲೇಬೇಕು. ಆದಕ್ಕೆ ತಪ್ಪಿ ನಡೆಯಬಾರದು. ಹಾಗೆ ನಡೆಯುವದೇ ಸ್ವಧರ್ಮವೆಂದು ನಾನು ತಿಳಿಯುತ್ತೇನೆ. ಆದುದರಿಂದ ನಾನು ಏನಾದರೊಂದು ಉದ್ಯೋಗಮಾಡಿ ನಿಮ್ಮ ಭಾರವನ್ನು ಕಡಿಮೆ ಮಾಡುವದು ನನ್ನ ಕರ್ತವ್ಯವೆಂದು ನಾನು ಒಪ್ಪುತ್ತೇನೆ. ತಮ್ಮ ಆಜ್ಞೆಯಂತೆ ನಾನು ಈ ಹೊತ್ತಿನಿಂದ ಪ್ರವೇಶ ಪರೀಕ್ಷೆಯ ಅಭ್ಯಾಸವನ್ನು ಮನಸ್ಸುಗೊಟ್ಟು ಮಾಡುವೆನು.

ಆದರೆ ದಿನಾಲು ಕೆಂಗೇರಿಗೆ ಮಾತ್ರ ಹೋಗಿಬರಲಿಕ್ಕೆ ಅಪ್ಪಣೆಯನ್ನು ಮಾತ್ರ ದಯಪಾಲಿಸಬೇಕು. ಯಾಕಂದರೆ ಮಾನವ ಜನ್ಮವು ದುರ್ಲಭವು. ನೀಲಾಗಿ ಕ್ಷಣಭಂಗುರವು. ಯಾವಾಗ ಅದು ಬಿದ್ದು ಹೋದೀತೆಂಬ ನಿಯಮವಿಲ್ಲ ಮುದುಕರಾಗುವವರೆಗೆ ನಾವು ಬದುಕಿಯೇ ಬದುಕುವೆನೆಂಬ ಭರವಸೆಯನ್ನು ಯಾರು ಕೊಡಬಲ್ಲರು ? ಬದುಕಿದರೂ ಆಗ ಪರಮಾರ್ಥ ಸಾಧನೆ ಮಾಡುವದು ಬಲು ಕಠಿಣವು. ಮುಪ್ಪು, ಚಿಂತೆ, ರೋಗ, ಮರಣ ಮೊದಲಾದ ಅನೇಕ ತರದ ಭಯಗಳು ಮನುಷ್ಯನನ್ನು ಎಲ್ಲ ಕಡೆಯಿಂದಲೂ ಸುತ್ತುಗಟ್ಟಿವೆ. ಆದುದರಿಂದ ಜಾಣನಾದವನು ಇಂದು ನಾಳೆನ್ನದೆ ಕೂಡಲೇ ಪರಮಾರ್ಥಸಾಧನೆ ಮಾಡಬೇಕು. ಮುಪ್ಪಿನಲ್ಲಿ ಸಾಧ್ಯವಾಗಲಿಕ್ಕೆ ಪರಮಾರ್ಥವೇನೂ ಸಾಧ್ಯವಾಗಿಲ್ಲ. ದೇಹವೂ ಇಂದ್ರಿಯಗಳೂ ಇನ್ನೂ ಗಟ್ಟಿಮುಟ್ಟಾಗಿ ಇರುವಾಗಲೇ ದೇವರ ಸೇವೆಮಾಡಿ ಅವನ ಕೃಪೆ ಸಂಪಾದನೆ ಮಾಡಬೇಕು. ಪ್ರಲ್ಹಾದ ಮತ್ತು ಧ್ರುವರ ಚರಿತ್ರೆಗಳನ್ನು ತಾವು ಕೇಳಿಯೇ ಇರುವಿರಿ. ಭಕ್ತರಾಜನಾದ ಪ್ರಲ್ಹಾದನಂತೂ—

ತತೋ ಯತೇತ ಕುಶಲಃ ಕ್ಷೇಮಾಯ ಭಯಮಾಶ್ರಿತಃ ।
ಶರೀರಂ ಪೌರುಷಂ ಯಾವನ್ನ ವಿಪದ್ಯೇತ ಪುಷ್ಕಲಂ ॥*

ಎಂದು ನಿಶ್ಚಿತವಾಗಿ ಹೇಳಿದ್ದಾನೆ. ಪರಮಾತ್ಮನ ಸೇವೆಗೆ ಬಾಲ್ಯ ತಾರುಣ್ಯಗಳೇ ಸರಿಯಾದ ಕಾಲವು. ಸಾರಾಂಶವೇನಂದರೆ : ಈಶಸೇವೆಯು ಮನುಷ್ಯನ ಉಳಿದೆಲ್ಲ ಕರ್ತವ್ಯಗಳಿಗಿಂತಲೂ ಹೆಚ್ಚು ಮಹತ್ತ್ವದ್ದು. ಆದುದರಿಂದ ಅದನ್ನು ಮೊದಲು ಸಾಧಿಸಿಕೊಂಡು ಅದಕ್ಕನುಗುಣವಾಗಿ ಉಳಿದೆಲ್ಲ ಕರ್ತವ್ಯಗಳನ್ನು ಆದಷ್ಟು ಸರಿಯಾಗಿ ಮಾಡಬೇಕು. ಬರೀ ಲೌಕಿಕ ಕರ್ತವ್ಯಗಳೇ ಶ್ರೇಷ್ಠವೆಂದು ತಿಳಿದು ಪರಮಾತ್ಮನನ್ನು ಮರೆಯಬಾರದು. ಹೀಗೆಂದು ನನಗೆ ತೋರುತ್ತದೆ. ಅದು ತಮ್ಮ ಮನಸ್ಸಿಗೂ ಒಪ್ಪಾಗುವದೆಂದು ನಂಬಿದ್ದೇನೆ. ದಯಮಾಡಿ ಅಪ್ಪಣೆ ಕೊಡಿಸಬೇಕು.”

---

* ಮುಪ್ಪು, ಚಿಂತೆ, ರೋಗ, ಮರಣ ಮೊದಲಾದ ಅನೇಕ ತರದ ಅಂಜಿಕೆಗಳಿಗೆ ಮನುಷ್ಯನು ಒಳಗಾಗಿರುತ್ತಾನೆ. ಆದುದರಿಂದ ಚತುರನಾದವನು ಶರೀರವು ಹಣ್ಣಾಗುವದರೊಳಗಾಗಿ ಆತ್ಮಕಲ್ಯಾಣಕ್ಕಾಗಿ ಯತ್ನಮಾಡಬೇಕು.

ಮಹಾರಾಜರ ಈ ಬುದ್ಧಿವಾದ, ಶಾಸ್ತ್ರಸಮ್ಮತವಾದ ಮಾತು, ಅನುಭವಪೂರ್ಣವಾದ ಯುಕ್ತಿ, ಮತ್ತು ತಮ್ಮ ಆಶಯವನ್ನು ಮಂಡಿಸುವ ಚತುರತೆ ಇವೆಲ್ಲವುಗಳಿಂದ ಅವರ ಅಭಿಪ್ರಾಯವು ಎಲ್ಲ ರೀತಿಯಿಂದಲೂ ಸಮರ್ಪಕವಾದುದೆಂದು ನಾರಾಯಣಭಟ್ಟರು ಒಪ್ಪಬೇಕಾಯಿತು. ಅವರೂ ಅದನ್ನು ನಿರಭಿಮಾನದಿಂದ ಒಪ್ಪಿಕೊಂಡರು. ತಮ್ಮನ ಜಾಣತನಕ್ಕೆ ಅವರು ಬಹಳೇ ಮೆಚ್ಚಿದರು. ಅವರ ಮನಮೋಹಕವಾದ ಶಬ್ದಗಳಿಂದಲೂ ವಿನಯ ಸೌಜನ್ಯಗಳಿಂದಲೂ ಅವರು ತೀರ ಮುಗ್ಧರಾದರು. ಅವರಿಗೆ ನಮ್ಮ ಚರಿತ್ರ ನಾಯಕರ ಉಪದೇಶದಿಂದ ನಿಜವಾಗಿಯೂ ಆನಂದವೆನಿಸಿತು. ಇಂತಹ ತಮ್ಮನ ಅಣ್ಣನಾದುದಕ್ಕಾಗಿ ಅವರು ತಾವೂ ಧನ್ಯತೆಯನ್ನು ತಳೆದರು. ಅವರು ಹರ್ಷಾತಿರೇಕದಿಂದ— "ತಮ್ಮಾ, ನೀನು ಧನ್ಯನು ನಿನ್ನ ಮನಸಿಗೆ ಬಂದಂತೆ ಮಾಡು. ನಿನಗೆ ಆಜ್ಞೆಮಾಡುವ ಅಧಿಕಾರವೇ ನನಗಿಲ್ಲ." ಎಂದು ನುಡಿದರು ಅಂದಿನಿಂದ ಮಹಾರಾಜರಿಗೆ ಕೆಂಗೇರಿಗೆ ಹೋಗಿ ಬರುವದಕ್ಕೆ ಎಂದೂ ಅಡಚಣೆಯುಂಟಾಗಲಿಲ್ಲ ಅವರು ತಮ್ಮ ಪರಮಾತ್ಮ ಸೇವೆಯನ್ನು ಯಥಾಸಾಂಗವಾಗಿ ಪೂರ್ಣಗೊಳಿಸಲಿಕ್ಕೆ ಸ್ವತಂತ್ರರಾದರು.

ಮಹಾರಾಜರು ವಚನಕೊಟ್ಟಂತೆ ಪ್ರವೇಶ ಪರೀಕ್ಷೆಯ ಅಭ್ಯಾಸವನ್ನು ಒಳ್ಳೇ ಭರದಿಂದ ಸಾಗಿಸಿದರು. ಪರೀಕ್ಷೆಗೆ ಸ್ವಲ್ಪೇ ಅವಕಾಶವುಳಿದಿದ್ದರೂ ಅದರಲ್ಲಿ ಅವರು ಚೆನ್ನಾಗಿ ತೇರ್ಗಡೆ ಹೊಂದಿದರು. ಆದರೆ ಅವರು ಇನ್ನೂ ಮುಲ್ಕೀ ಪರೀಕ್ಷೆಯನ್ನು ಪಾಸಾಗಿರಲಿಲ್ಲವಾದುದರಿಂದ ಅವರಿಗೆ ಟ್ರೇನಿಂಗ ಕಾಲೇಜದಲ್ಲಿ ಪ್ರವೇಶ ದೊರೆಯಲಿಲ್ಲ. ಹೀಗಾಗಿ ಪುನಃ ಮುರಗೋಡ ಶಾಲೆಯಲ್ಲಿಯೇ ಅವರು ಶಿಕ್ಷಕರಾಗಿ ನಿಂತುಕೊಳ್ಳಬೇಕಾಯಿತು. ಶಿಕ್ಷಕತನ ಕೆಲಸವನ್ನು ಮಾಡುತ್ತ ಅದರ ಜೊತೆಯಲ್ಲಿ ಅವರು ಮುಲ್ಕೀ ಪರೀಕ್ಷೆಯ ಅಭ್ಯಾಸವನ್ನೂ ನಡಿಸಿದರು. (ಶಕೆ ೧೭೯೪).

ಕೆಂಗೇರಿಯಲ್ಲಿ ಶ್ರೀ ಚಿದಂಬರನ ಶೈವಾಗಸೋಕ್ತ ಮಹೋತ್ಸವವು ಪ್ರತಿವರ್ಷ ಮಾರ್ಗಶೀರ್ಷ ಶುದ್ಧ ಪ್ರತಿಪದೆಯಿಂದ ಅಷ್ಟಮಿಯವರೆಗೆ ಬಲು ವಿಜೃಂಭಣೆಯಿಂದ ನಡೆಯುವದು. ಈ ಉತ್ಸವದೊಳಗೆ ಮಹಾರಾಜರು ಒಳ್ಳೇ ಆನಂದದಿಂದ ಮುಂದಾಳಾಗಿ ಕೆಲಸ ಮಾಡುತ್ತಿದ್ದರು. ಮೊದಲಿ

ನಿಂದ ಕೊನೆಯನರೆಗೆ ಅವರು ಪ್ರತಿಯೊಂದು ಕಾರ್ಯಕ್ರಮದಲ್ಲಿಯೂ ಇರತಕ್ಕವರೇ. ಮುಂಜಾನೆಯಲ್ಲಿ ಗುಡಿಯನ್ನು ಉಡುಗಿ ಸಾರಿಸುವದರಿಂದ ಹಿಡಿದು ಮಧ್ಯರಾತ್ರಿಯ ಭಜನ-ಕೀರ್ತನ-ವಾಹನಗಳವರೆಗಿನ ಯಾವತ್ತೂ ಕೆಲಸಗಳಲ್ಲಿ ಅವರು ಮುಂದಾಗಿ ದುಡಿಯುವರು. ಇಂಥ ಕಾರ್ಯಗಳಲ್ಲಿ ಶರೀರವು ಸವೆದಷ್ಟೂ ಸಾರ್ಥಕವೆಂದು ಅವರು ಅನ್ನುತ್ತಿದ್ದರು.

ಶಕೆ ೧೭೯೪ನೆಯ ಚಿವಂಬರೋತ್ಸವದಲ್ಲಿ ಒಂದು ವಿಶೇಷ ಸಂಗತಿಯು ನಡೆಯಿತು. ಷಷ್ಠಿಯ ದಿವಸ ಅಗಡಿಯ ವೆಂಕಣಭಟ್ಟ ಸಿದ್ಧಾಂತಿ ಎಂಬವರು ಕೆಂಗೇರಿಗೆ ಬಂದು ''ರಾಮೂ ಶಿಕ್ಷಕರೆಲ್ಲಿ ?'' ಎಂದು ಗುಡಿಯೊಳಗೆಲ್ಲ ಹುಡುಕಾಡಹತ್ತಿದರು ಮಹಾರಾಜರು ಆಗ ಸ್ನಾನಕ್ಕಾಗಿ ಬಾವಿಗೆ ಹೋಗಿದ್ದರು. ಸಿದ್ಧಾಂತಿಯವರು ಅಲ್ಲಿಗೆ ಹೋದರು. ಅವರ ಕೈಯಲ್ಲಿ ಒಂದು ಟೆಂಗಿನಕಾಯಿಯಿತ್ತು. ಅಲ್ಲಿ ಕೂಡಿದ ಜನರು 'ಇನರೇ ರಾಮೂ ಶಿಕ್ಷಕರೆಂ"ದು ನಿರ್ದೇಶಮಾಡಿ ತೋರಿಸಿದರು ವೆಂಕಣಭಟ್ಟರು ಕೂಡಲೇ ಸಂಭ್ರಮದಿಂದ ಮಹಾರಾಜರ ಮುಂದೆ ಕಾಯಿ ಇಟ್ಟು ಸಾಷ್ಟಾಂಗ ನಮಸ್ಕಾರಮಾಡಿ ಕೈಜೋಡಿಸಿಕೊಂಡು ನಿಂತರು. ಅವರು ನಮ್ಮ ಮಹಾರಾಜರನ್ನು ಕಾಲಿನಿಂದ ನೆತ್ತಿಯ ವರೆಗೆ ಪುನಃ ಪುನಃ ನೋಡಹತ್ತಿದರು. ಕೂಡಿದ ಜನರಿಗೆಲ್ಲ ಒಳ್ಳೇ ಆಶ್ಚರ್ಯವಾಯಿತು. ಸಿದ್ಧಾಂತಿಯವರೇನು ಸಾಮಾನ್ಯರಾಗಿದ್ದಿಲ್ಲ. ಅವರು ಒಳ್ಳೇ ಸುಪ್ರಸಿದ್ಧರಾದ ವೈದಿಕ ಬ್ರಾಹ್ಮಣರಾಗಿದ್ದರು. ಅವರು ವಯಸ್ಸಿನಿಂದಲೂ ಮಹಾರಾಜರಿಗಿಂತ ಹಿರಿಯರು. ಮಹಾರಾಜರಾದರೋ ಇನ್ನೂ ''ರಾಮೂ ಶಿಕ್ಷಕರೆಂ''ದು ಕರೆಸಿಕೊಳ್ಳತಕ್ಕ ವಯಸ್ಸಿನವರು. ಆದುದರಿಂದ ಕೂಡಿದ ಜನರಿಗೆಲ್ಲ ದಿಗಿಲುಬಿದ್ದಿತು:— ''ಇಂಥ ದೊಡ್ಡ ಮನುಷ್ಯರು ತೀರ ಚಿಕ್ಕವರಾದ ರಾಮೂ ಶಿಕ್ಷಕರಿಗೆ ಈ ಬಗೆಯ ಸನ್ಮಾನವನ್ನು ಏಕೆ ತೋರಿಸುತ್ತಿರಬಹುದು ? ರಾಮೂ ಶಿಕ್ಷಕರ ವಿಷಯದಲ್ಲಿ ಇಂಥವರಿಗೆ ಇಷ್ಟೇಕೆ ಪೂಜ್ಯಬುದ್ಧಿಯುಂಟಾಗಿರಬಹುದು ?'' ಸಿದ್ಧಾಂತಿಯವರಿಗೆ ಜನರ ಈ ಸಂದೇಹವು ಗೊತ್ತಾಗಿ ಎಲ್ಲರಿಗೂ ಹೇಳಿದರೂ— ''ನಾನು ಸ್ವಲ್ಪ ದಿವಸಗಳ ಕೆಳಗೆ ಅಕ್ಕಲಕೋಟೆಯಲ್ಲಿ ಶ್ರೀ ದತ್ತಾತ್ರೇಯ ಸ್ವಾಮಿಗಳವರ ಬೆಟ್ಟಿಗೆ ಹೋಗಿದ್ದೆನು. ಆಗ ನಾನು ಅವರಿಗೆ ತಮ್ಮ ದರುಶನದ

ಲಾಭವನ್ನು ಮೇಲಿಂವ ಮೇಲೆ ಕರುಣಿಸಬೇಕೆಂದು ಬೇಡಿಕೊಂಡೆನು. ಅದಕ್ಕೆ ಶ್ರೀ ಸ್ವಾಮೀಮಹಾರಾಜರು ನನಗೆ ಹೇಳಿದ್ದೀನೆಂದರೆ— ''ಅಕ್ಕಲ ಕೋಟಿಯು ನಿಮಗೆ ದೂರಾಗುವದು. ನೀವು ಮೇಲಿಂವ ಮೇಲೆ ಇಲ್ಲಿ ಬರಬೇಕಾದುದಿಲ್ಲ. ಮುರಗೋಡದಲ್ಲಿ ರಾಮೂ ಶಿಕ್ಷಕನೆಂಬ ನನ್ನ ಪ್ರಿಯ ಶಿಷ್ಯನಿದ್ದಾನೆ. ನೀವು ಅವನ ದರುಶನ ತಕ್ಕೊಂಡರೆ ನನ್ನ ದರುಶನದ ಫಲವು ನಿಮಗೆ ಸಿಕ್ಕಂತಾಗುವದು. ನಿಮ್ಮ ಊರಿಗೆ ಮುರಗೋಡವು ಸಮೀಪವಾಗಿದೆ.' ಅವರ ಆಜ್ಞೆಯಂತೆ ನಾನು ಈಗ ಇಲ್ಲಿಗೆ ಬಂದೆನು. ಮತ್ತು ಇವರ ದರುಶನದಿಂದ ನನಗೆ ಶ್ರೀ ಸ್ವಾಮೀ ಮಹಾರಾಜರ ದರುಶನವೇ ಆದಂತಾಯಿತು." ಇದರಿಂದ ಅಲ್ಲಿರುವ ಜನರ ಕಣ್ಣುಗಳು ಒಮ್ಮೆಲೇ ತೆರೆದವು. ನಮ್ಮ ಸಮೀಪದಲ್ಲಿಯೇ ಇದ್ದ ವಸ್ತುವಿನ ಮಹತ್ತ್ವವು ನಮಗೆ ಗೊತ್ತಾಗಬೇಕಾದ್ದು ಎರಡನೆಯವರಿಂದ! ಅತಿ ಪರಿಚಯದಿಂದ ನಮಗೆ ಅವರ ಯೋಗ್ಯತೆಯೇ ತಿಳಿಯದಂತಾಗಿರುತ್ತದೆ. ಮಾನವರ ಸ್ವಭಾವವೇ ಹಾಗಿದೆ. ಇರಲಿ. ಸಿದ್ಧಾಂತಿಯವರ ಮಾತಿನಿಂದ ನಮ್ಮ ಚರಿತ್ರನಾಯಕರ ಯೋಗ್ಯತೆಯು ಬಹಳವಾಗಿರುವದೆಂದೂ, ಅವರ ಮೇಲೆ ಅಕ್ಕಲಕೋಟಿಯ ಸ್ವಾಮಿಗಳವರ ಪೂರ್ಣ ಕೃಪೆಯಾಗಿರುವದೆಂದೂ ಜನರಿಗೆಲ್ಲ ಗೊತ್ತಾಯಿತು. ಅಲ್ಲಿ ನಿಂತಿರುವ ಜನರು ಕೂಡ ಆಗ ಮಹಾರಾಜರಿಗೆ ನಮಸ್ಕರಿಸಿದರು ಆಗ ಮಹಾರಾಜರು ಎಲ್ಲರಿಗೂ ತಿರುಗಿ ಸಾಷ್ಟಾಂಗ ನಮಸ್ಕಾರಮಾಡಿ ಕೈಜೋಡಿಸಿ ಹೇಳಿಕೊಂಡದ್ದೇನಂದರೆ:— ''ಬಾಂಧವರೇ ನನ್ನಲ್ಲಿ ಯಾವ ಯೋಗ್ಯತೆಯೂ ಇಲ್ಲ. ನಾನು ತಮ್ಮೆಲ್ಲರಂತೆಯೇ ಒಬ್ಬ ಸಾಮಾನ್ಯ ಮನುಷ್ಯನಾಗಿದ್ದೇನೆ. ನಾನು ದೊಡ್ಡವನೆನ್ನಲಿಕ್ಕೆ ನನ್ನ ಕಡೆಯಿಂದ ಯಾವ ಕೆಲಸಗಳೂ ಆಗಿಲ್ಲ. ನಾನು ಶ್ರೀಅಕ್ಕಲಕೋಟಿಸ್ವಾಮೀ ಮಹಾರಾಜರ ದಾಸಾನುದಾಸನಾಗಿದ್ದೇನೆ. ಶ್ರೀಗಳವರ ಮಹಿಮೆಯು ಅಗಮ್ಯವೂ ಅವರ್ಣನೀಯವೂ ಆಗಿದೆ. ಅವರು ನನ್ನನ್ನು ತಮ್ಮ ಶಿಷ್ಯನೆಂದು ಕರೆದದ್ದಕ್ಕೇ ನಾನು ಧನ್ಯತೆಯನ್ನು ತಾಳಿರುವೆನು.''

ನಮ್ಮ ಚರಿತ್ರನಾಯಕರು ಇಷ್ಟರೊಳಗಾಗಿಯೇ, ಸಾಧಿಸಲಿಕ್ಕೆ ಬಲು ಕಠಿಣವಾದ ''ಸಮತ್ವಬುದ್ಧಿ''ಯನ್ನು ಸಾಧಿಸಿಬಿಟ್ಟಿದ್ದರು. ''ಸಮತ್ವಬುದ್ಧಿ''

ಎಂದರೆ ಮಾನಾಪಮಾನ, ಲಾಭಹಾನಿ, ಹರ್ಷಶೋಕ, ಸುಖದುಃಖ, ಮತ್ತು ಶುಭಾಶುಭ ಮೊದಲಾದ ದ್ವಂದ್ವಗಳಿಂದ ಚಲಿಸದಿರುವದು. ಶ್ರೀ ಮದ್ಭಗವದ್ಗೀತೆಯು ಇದನ್ನು ''ಸ್ಥಿತಪ್ರಜ್ಞಾವಸ್ಥೆ''ಯೆಂದು ವರ್ಣಿಸಿ, ಅದೇ ಮನುಷ್ಯನ ಆದರ್ಶವೆಂದು ಹೊಗಳಿದೆ. ಮಹಾರಾಜರ ವಯಸ್ಸು ಆಗ ತಾನೇ ೧೬ – ೧೭ ವರ್ಷದ್ದಾಗಿತ್ತು ! ಇಷ್ಟು ಚಿಕ್ಕ ವಯಸ್ಸಿನಲ್ಲಿ ಕರ್ಮ ಯೋಗದ ಈ ಮರ್ಮವನ್ನು ನಮ್ಮ ಚರಿತ್ರನಾಯಕರು ಆಚರಣೆಯಲ್ಲಿ ತಂದದ್ದು ಅಪೂರ್ವವೇ ಸರಿ. ಮೊದಲನೇ ಸಾರಿ ಅವರು ಪ್ರವೇಶ ಪರೀಕ್ಷೆ ಯಲ್ಲಿ ತೇರ್ಗಡೆಯಾಗಿದ್ದರೂ, ಮುಲ್ಕೀ ಪರೀಕ್ಷೆಯಾಗದ್ದರಿಂದ ಕಾಲೇಜದಲ್ಲಿ ಪ್ರವೇಶ ದೊರೆಯಲಿಲ್ಲ. ಆದರೂ ಅವರು ಆ ವಿಷಯಕ್ಕೆ ಎಳ್ಳಷ್ಟೂ ಚಿಂತೆ ಮಾಡಲಿಲ್ಲ. ಮುಂದೆ ಶಕೆ ೧೮೯೫ರಲ್ಲಿ ಮುಲ್ಕೀ ಪರೀಕ್ಷೆ ಪಾಸಾಗಿ, ಬೆಳಗಾವಿಯ ಆಗಿನ ಮಾಮಲೇದಾರರಾದ ಶ್ರೀ ರಾಮರಾವ ಕೊಣ್ಣೂರ ಅವರ ಪ್ರಯತ್ನದಿಂದ ಕಾಲೇಜದಲ್ಲಿ ಪ್ರವೇಶ ಸಿಕ್ಕಾಗಲೂ ಅವರು ಆನಂದ ವನ್ನು ಹೊಂದಲಿಲ್ಲ.

ಆಗ ಕನ್ನಡ ಟ್ರೇನಿಂಗ ಕಾಲೇಜವು ಬೆಳಗಾವಿಯಲ್ಲಿತ್ತು. ಮಹಾರಾಜರು ಆ ನಿಮಿತ್ತವಾಗಿ ಬೆಳಗಾವಿಯಲ್ಲಿದ್ದಾಗ ''ಸಮಾನ ಶೀಲವ್ಯಸನೇಷು ಸಖ್ಯಂ'' ಎಂಬ ನಾಣ್ನುಡಿಯಂತೆ ಅವರಿಗೆ ಪೀರಾಜೀಬುವಾ ಎಂಬ ಚಿದಂಬರ ಭಕ್ತ ರೊಡನೆ ಗೆಳೆತನವಾಯಿತು. ಪೀರಾಜೀಬುವಾ ಅವರ ವೃತ್ತಾಂತವೂ ಮನೋರಂಜಕವಾಗಿದೆ. ಅವರು ಸಾಂಗಲೀ ಸಂಸ್ಥಾನದ ಶಹಪುರದಲ್ಲಿ ಹುಟ್ಟಿದರು. ಜಾತಿಯಿಂದ ಮರಾಠರು. ಅವರಿಗೆ ಪೋಲೀಸ ಖಾತೆಯಲ್ಲಿ ಕೆಲಸವಿತ್ತು. ಆದರೆ ಅವರಿಗೆ ಮೊದಲಿನಿಂದಲೂ ಚಿದಂಬರನ ಮೇಲೆ ಒಳ್ಳೇ ಪ್ರೇಮನಿಷ್ಠೆಯುಂಟಾಗಿತ್ತು. ಅವರು ತಮ್ಮ ದಿನದ ಕೆಲಸಬೊಗಸೆಗಳನ್ನು ತೀರಿಸಿಕೊಂಡು ಉಳಿದ ವೇಳೆಯಲ್ಲಿ ಚಿದಂಬರನ ಭಜನ ಧ್ಯಾನಗಳನ್ನು ಮಾಡುವರು. ಬರಬರುತ್ತ ಅವರ ದೃಷ್ಟಿಯು ಅಂತರ್ಮುಖವಾಗಿಹತ್ತಿ, ಅವರ ಎಲ್ಲ ಲಕ್ಷವು ಪರಮಾರ್ಥದ ಕಡೆಗೇ ಹತ್ತಿತ್ತು. ಒಂದು ದಿನ ವಾರಕರೀ ಜನರ ಭಜನೀಯ ಗುಂಪು ಹೊರಟಿರಲು ರಾತ್ರಿ ಒಂಬತ್ತು ಗಂಟೆಗೆ ಪೀರಾಜಿಯವರು ಆ ಸಮಾಜದಲ್ಲಿ ಸೇರಿದರು. ಮತ್ತು ಅವರ

ಭಜನ ಕೀರ್ತನಗಳಲ್ಲಿ ತಲ್ಲೀನರಾಗಿ ತಮ್ಮ ಸರಕಾರೀ ಕೆಲಸವನ್ನು ಮರೆತು ಬಿಟ್ಟರು. ಅವರಿಗೆ ಅಂದು ರಾತ್ರಿ ಪಹರೆ ಮಾಡತಕ್ಕದ್ದಿತ್ತು. ಆದರೆ ಭಗವನ್ನಾಮ ಸಂಕೀರ್ತನೆಯ ಸಂಭ್ರಮದಲ್ಲಿ ಅವರು ಮೈಮರೆತುಬಿಟ್ಟರು. ಮರುದಿವಸ ಆ ಉತ್ಸವವು ಮುಗಿದ ಬಳಿಕ ಅವರಿಗೆ ತಮ್ಮ ಕೆಲಸದ ಎಚ್ಚರ ವಾಯಿತು. ಆಗ ಅವರು ಒಳ್ಳೆ ಗಾಬರಿಯಾದರು. ಪೋಲೀಸ ಖಾತೆಯ ಅಮಲು ಎಲ್ಲರಿಗೂ ಗೊತ್ತಿದ್ದ ಮಾತು. ತಮಗಿನ್ನು ಯಾವ ದಂಡನೆ ಯಾಗುವದೋ, ಕೆಲಸವನ್ನೇ ಎಲ್ಲಿ ಕಳೆದುಕೊಳ್ಳಬೇಕಾಗುವದೋ ಎಂಬ ವಿಚಾರದಿಂದ ಅವರು ಅಂಜುತ್ತಂಜುತ್ತ ಆಫೀಸಿಗೆ ಹೋದರು. ಆದರೆ ಏನಾಶ್ಚರ್ಯ! ಮುನ್ನಾದಿವಸ ರಾತ್ರಿಯಲ್ಲಿ ಅವರು ಕೆಲಸ ಮಾಡಿದಂತೆ ಹಜರೀ ಹಾಕಿತ್ತು. ವಿಚಾರಾಂತ್ಯದಲ್ಲಿ ಶ್ರೀ ಚಿದಂಬರನೇ ಈ ಲೀಲೆ ಮಾಡಿದ ನೆಂದು ಮನಗಂಡು, ಅವರು ಉಪರತಿಯಿಂದ ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು, ತಮ್ಮ ಶೇಷಾಯುಷ್ಯವನ್ನೆಲ್ಲ ಚಿದಂಬರನ ಸೇವೆಯಲ್ಲಿಯೇ ಕಳೆಯುವ ಸಂಕಲ್ಪ ಮಾಡಿದರು. ಅಂದಿಂದ ಅವರು ಭಿಕ್ಷಾವೃತ್ತಿಯಿಂದ ತಮ್ಮ ಜೀವನವನ್ನು ಸಾಗಿಸುತ್ತ ಭಗವದಾರಾಧನೆಯಲ್ಲಿ ತಮ್ಮ ವೇಳೆಯನ್ನು ಕಳೆಯಹತ್ತಿದರು.

ಮಹಾರಾಜರ ಗುರುಗಳಾದ ಜೀವಬಾ ಅಣ್ಣಾ ಅವರ ಹತ್ತರ ಪಂಚ ಧಾತುವಿನದೊಂದು ಚಿದಂಬರನ ಮೂರ್ತಿಯಿತ್ತು. ಜೀವಬಾನವರು ತೀರ ಮುಪ್ಪಿನ ಮುದುಕರಾದುದರಿಂದ ಅವರ ಕೈಯಿಂದ ಆ ಮೂರ್ತಿಯ ಪೂಜಾದಿಗಳು ಸರಿಯಾಗಿ ಸಾಗದಂತಾಗಿತ್ತು. ಆದಕ್ಕಾಗಿ ಅವರು ಆ ಮೂರ್ತಿ ಯನ್ನು ಯಾರಿಗೆ ಒಪ್ಪಿಸಬೇಕೆಂಬ ವಿವಂಚನೆಯಲ್ಲಿದ್ದರು. ಒಂದು ದಿವಸ ಅವರ ಸ್ವಪ್ನಪಲ್ಲಿ ಒಬ್ಬ ಬ್ರಾಹ್ಮಣನು ಬಂದು— "ನಿನ್ನ ಕಡೆಗಿರುವ ಮೂರ್ತಿಯನ್ನು ಬೆಳಗಾವಿಯಲ್ಲಿರುವ ಪೀರಾಜಿಬುವಾ ಎಂಬವರಿಗೆ ಒಪ್ಪಿಸು" ಎಂದು ಆಜ್ಞೆಮಾಡಿದನು. ಅದರಂತೆ ಆ ಮೂರ್ತಿಯು ಪೀರಾಜಿ ಯವರ ವಶಕ್ಕೆ ಬಂತು. ಪೀರಾಜಿಯವರಿಗೆ ಇದೊಂದು ಚಿದಂಬರನ

ಕೃಪೆಯೆಂದೇ ಭಾವನೆಯಾಯಿತು. ಅವರು ಅದನ್ನು ಒಳ್ಳೇ ಆನಂದದಿಂದ ಸ್ವೀಕರಿಸಿದರು. ಮತ್ತು ಅದನ್ನು ಬೆಳಗಾವಿಯೊಳಗೆ ಗೋಂಧಳೀಗಲ್ಲಿಯಲ್ಲಿ ಒಂದು ಗುಡಿ ಕಟ್ಟಿಸಿ ಅಲ್ಲಿ ಸ್ಥಾಪನೆಮಾಡಿದರು. ಮತ್ತು ತಮ್ಮ ವೇಳೆಯನ್ನು ಅದರ ಪೂಜಾ–ಅರ್ಚಾ–ಭಜನ–ಧ್ಯಾನಗಳಲ್ಲಿ ಕಳೆಯ ಹತ್ತಿದರು. ನಮ್ಮ ಚರಿತ್ರನಾಯಕರು ಪ್ರತಿದಿವಸ ಅದೇ ಗುಡಿಗೆ ಹೋಗುವರು. ಮತ್ತೂ ಅಲ್ಲಿ ಪೀರಾಜಿಯವರ ಸಂಗಡ ಅಧ್ಯಾತ್ಮದ ಚರ್ಚೆ ಮಾಡುವರು. ನೇಳೆಸಿಕ್ಕಾಗ ಅವರು ಅಲ್ಲಿ ಭಜನೆಯನ್ನೂ ಮಾಡುವರು. ಈ ರೀತಿಯಾಗಿ ಮಹಾರಾಜರು ತಮ್ಮ ಕಾಲೇಜದ ಅಭ್ಯಾಸದ ಕೂಡ ಅಧ್ಯಾತ್ಮಿಕ ಮಾರ್ಗವನ್ನೂ ತುಳಿಯುಹತ್ತಿದರು.

— — — —

೧೨ ಲೋಕಸಂಗ್ರಹವೇ ನನ್ನ ಆಯುಷ್ಯದ ಮುಖ್ಯ ಕರ್ತವ್ಯವು !

ನಮ್ಮ ಚರಿತ್ರನಾಯಕರ ಆಯುಷ್ಯದಲ್ಲಿ ಮುರಗೋಡ ವಾಸವು ಒಳ್ಳೇ ಮಹತ್ತ್ವದ್ದಾಗಿ ಪರಿಣಮಿಸಿತು. ಅವರು ಅಲ್ಲಿ ಸುಮಾರು ೧೦ ವರುಷ ವಾಸಮಾಡಿದರು. ಇಷ್ಟರಲ್ಲಿ ಅವರಿಗೆ ಮಾನವ ಜೀವನದ ಸಾರ್ಥಕತೆಯು ಏತರಲ್ಲಿರುವದೆಂಬದು ಗೊತ್ತಾದದ್ದಲ್ಲದೆ, ಅದಕ್ಕೆ ಬೇಕಾದ ಸರಳ ಸಾಧನವನ್ನು ತೋರಿಸುವ ಸದ್ಗುರುವೂ ಸಿಕ್ಕನು. ಸಾಧನಗಳೂ ಸಿದ್ಧಾತಂಕವಾಗಿ ಸಾಗಿದವು. ಕೊನೆಗೆ ಅವೆಲ್ಲವುಗಳ ಪರ್ಯವಸಾನವು ಶ್ರೀ ಅಕ್ಕಲಕೋಟೆಸ್ವಾಮೀ ಮಹಾರಾಜರ ದರುಶನದಲ್ಲಿಯೂ ಅವರ ಕೃಪಾಪ್ರಾಪ್ತಿಯೊಳಗೂ ಆಯಿತು. ಶ್ರೀ ಸ್ವಾಮೀಸಮರ್ಥರನ್ನು ನೋಡಿದ ಕೂಡಲೇ ನಮ್ಮ ಚರಿತ್ರನಾಯಕರ ಪರಮಾರ್ಥದ ಹಸಿವು ಹಿಂಗಿತು. ಅವರಿಗೆ ಸಿಕ್ಕಬೇಕಾದ್ದೆಲ್ಲ ಸಿಕ್ಕಂತಾಯಿತು. ಅವರ ಎಲ್ಲ ಆಶೆ ಆಕಾಂಕ್ಷೆಗಳೂ ಇದರಿಂದ ಪೂರ್ಣವಾಗಿಬಿಟ್ಟವು. ವೇದಾಂತಿಗಳು ವರ್ಣಿಸುವ ಉಚ್ಚ ಸ್ಥಿತಿಯು ಅವರ ಕೈವಶವಾಯಿತು. ಅವರ ಹೃದಯದೊಳಗಿನ ಅಜ್ಞಾನದ ಗಂಟೆಲ್ಲ ಬಿಚ್ಚಿಹೋಯಿತು. ಅವರ ಸಂಶಯಗಳೆಲ್ಲ ಕರಗಿ ಹೋದವು. ಕರ್ಮಪಾಶವೆಲ್ಲ ಹರಿದು ಹೋಯಿತು. ಸ್ವಲ್ಪದರಲ್ಲಿಯೇ ಹೇಳಬೇಕಾದರೆ ಅವರ ಮೋರೆಯು ಬ್ರಹ್ಮಜ್ಞಾನದಿಂದ ಉಕ್ಕಹತ್ತಿತು.

ಶ್ರೀ ಸ್ವಾಮೀಸಮರ್ಥರ ದರುಶನವಾದಂದಿನಿಂದ ನಮ್ಮ ಚರಿತ್ರ ನಾಯಕರ ಪಾಲಿಗೆ ಸಗುಣನಿರ್ಗುಣ ಬ್ರಹ್ಮನೆಂದರೆ ಅವರೇ ಆಗಿಬಿಟ್ಟರು. ತಮ್ಮ ಆರಾಧ್ಯ ದೇವತೆಯಾದ ಶ್ರೀ ಚಿದಂಬರನೇ ಶ್ರೀ ಸಮರ್ಥರ ರೂಪದಿಂದ ತಮಗೆ ಪ್ರಸನ್ನನಾದನೆಂದು ಅವರ ದೃಢವಾದ ತಿಳವಳಿಕೆಯಾಯಿತು. ''ಭಾವದಂತೆ ಫಲ''ವೆಂಬ ನಿಯಮಕ್ಕನುಗುಣವಾಗಿ ನಮ್ಮ ಚರಿತ್ರ

ನಾಯಕರ ಈ ಅನುಸಂಧಾನ ಪ್ರೇಮಭಕ್ತಿಗಾಗಿ ಶ್ರೀ ಸಮರ್ಥರೂ ಅವರ ಮೇಲೆ ಪೂರ್ಣ ಕೃಪೆಮಾಡಿ ಬಿಟ್ಟರು. ಇಷ್ಟೇ ಅಲ್ಲ; "ಅಂಜಬೇಡ. ನಾವೂ ನಿನ್ನ ಸಂಗಡ ಬರುತ್ತೀವೆ" ಎಂದು ಅವರು ನಮ್ಮ ಚರಿತ್ರನಾಯಕರಿಗೆ ಆಶ್ವಾಸನವನ್ನೂ ಕೊಟ್ಟರು. ಎಂಥ ಮೇಲೆ ಕೇಳುವದೇನು! ನಮ್ಮ ಚರಿತ್ರನಾಯಕರಿಗೆ ಅಂದಿನಿಂದ ಅವರ ಧ್ಯಾನವೇ ಧ್ಯಾನವು. ಸರ್ವಕಾಲದಲ್ಲಿಯೂ ಅವರ ವಿಚಾರವೇ ವಿಚಾರವು. ಸಮರ್ಥರ ಸುಂದರವಾದ ಚಿತ್ರವೊಂದು ಯಾವಾಗಲೂ ಅವರ ಬಳಿಯಲ್ಲಿ ಇರುತ್ತಿತ್ತು. ಅವರು ತಾಸುಗಟ್ಟಲೇ ಸಮರ್ಥರ ಕಡೆಗೆ ನೋಡುತ್ತ, ಅವರನ್ನು ನೆನೆಸುತ್ತ ಕೂಡ್ರುವರು. ತಮ್ಮ ಶಿಷ್ಯರಿಗೂ ಉಳಿದವರಿಗೂ ಶ್ರೀ ಸಮರ್ಥರ ಅದ್ಭುತವಾದ ಲೀಲೆಗಳನ್ನು ಸರಾಗವಾಗಿ ವರ್ಣಿಸಿ ಹೇಳುವರು. ಒಬ್ಬಿಬ್ಬರ ಕಡೆಯಿಂದಲೂ ಅವರ ಪುಣ್ಯತಿಥಿಯನ್ನು ಒಳ್ಳೇ ವಿಜೃಂಭಣೆಯಿಂದ ಮಾಡಹಚ್ಚಿದರಲ್ಲದೆ ಶಕ್ಯನಿದ್ದ ಮಟ್ಟಿಗೆ ತಾವೂ ಆ ಕಾಲಕ್ಕೆ ಉಪಸ್ಥಿತರಾಗಿದ್ದು, ಆ ಉತ್ಸವಕ್ಕೆ ಕಳೆ ತರುತ್ತಿದ್ದರು. ಸಾರಾಂಶವೇನಂದರೆ— ನಮ್ಮ ಚರಿತ್ರನಾಯಕರು ತನ್ಮಯತೆ, ತಲ್ಲೀನತೆ, ತನ್ನಿಷ್ಠತೆಯಿಂದ ಶ್ರೀ ಸ್ವಾಮೀಸಮರ್ಥರೊಡನೆ ಒಂದಾಗಿ ಹೋದರು.

ಇಷ್ಟೊತ್ತಿಗೆ ನಮ್ಮ ಚರಿತ್ರನಾಯಕರಿಗೆ ತಾವು ಏತಕ್ಕಾಗಿ ಹುಟ್ಟಿ ಬಂದಿರುವೆವೆಂಬುದರ ಅರಿವು ಚನ್ನಾಗಿ ಆಗಿತ್ತು. ಅದನ್ನು ಅವರು ತಮ್ಮ ಅಣ್ಣಂದಿರಿಗೆ ಹೇಳಿದ ಮಾತುಗಳಲ್ಲಿ ಸ್ಪಷ್ಟವಾಗಿ ತೋರಿಸಿದ್ದಾರೆ. ಸ್ವಂತವಾಗಿ ಬ್ರಹ್ಮಜ್ಞಾನವನ್ನು ಪಡೆಯುವದು ಮೊದಲನೆಯ ಮಾತು. ಅವರು ಇಷ್ಟರಲ್ಲಿ ಈ ಮಾತನ್ನು ದೊರಕಿಸಿಬಿಟ್ಟಿದ್ದರು. ಆದರೆ ಆ ಸುಖವನ್ನು ತನ್ನಷ್ಟಕ್ಕೆ ಅನುಭವಿಸುತ್ತ ನಿಲ್ಲದೆ, ಸಂಸಾರ ದುಃಖದಲ್ಲಿ ಹೊರಳಾಡುತ್ತಿರುವ ಅಜ್ಞ ಬಂಧುಗಳನ್ನು ಎಚ್ಚರಿಸಿ ಪರಮಾರ್ಥದ ಮಾರ್ಗಕ್ಕೆ ಹಚ್ಚುವದು ಎರಡನೆಯ ಮಾತು. ಈ ಸಂದೇಶವನ್ನೇ ಶ್ರೀ ಅಕ್ಕಲಕೋಟೆಸ್ವಾಮೀ ಮಹಾರಾಜರು ಶ್ರೀ ಸಿದ್ಧಾಂತಿಯವರ ಮುಖಾಂತರ ಸೂಚಿಸಿದ್ದರು. "ನೀನು ಪರಮಾರ್ಥಜ್ಞಾನವನ್ನು ಪಡೆದು ಸಿದ್ಧನಾದೆ. ಎಂದರೆ ನೀನು ನನ್ನ ಸ್ವರೂಪವನ್ನರಿತು ಅದರಲ್ಲಿಯೇ ಕೂಡಿ ಹೋಗಿರುವೆ. ಈಗ ನನ್ನ ನಿನ್ನಲ್ಲಿ ಭೇದವಿಲ್ಲ. ಇನ್ನು ಮುಂದೆ ನೀನು ನನ್ನಂತೆ ಲೋಕೋದ್ಧಾರದ ಕೆಲಸವನ್ನೇ ಮಾಡಬೇಕು."

ಎಂಬದು ಶ್ರೀ ಸ್ವಾಮೀಸಮರ್ಥರ ಸೂಕ್ಷ್ಮ ಆದೇಶವಾಗಿತ್ತು. ಅವರ ಅಪ್ಪಣೆಯಂತೆ ಲೋಕ ಶಿಕ್ಷಣವನ್ನು ಕೊಟ್ಟು, ಜನರನ್ನು ಉದ್ಧಾರಮಾಡುವ ಕೆಲಸವನ್ನೂ ತಮಗೆ ಮಾಡತಕ್ಕದ್ದಿರುವದೆಂಬದು ನಮ್ಮ ಚರಿತ್ರನಾಯಕರಿಗೆ ಈಗ ಹೊಳೆಯಿತು. ಒಬ್ಬರೇ ಉದ್ಧಾರವಾದರೆ ತೀರಲಿಲ್ಲೆಂದೂ, ಭಗವಂತನು ತಮ್ಮಿಂದ ಲೋಕಸೇವೆಯನ್ನು ಮಾಡಬಯಸುವನೆಂದೂ ಅವರಿಗೆ ನಿಶ್ಚಯವಾಯಿತು. ಅನೇಕ ಜೀವಿಗಳು ಪರಮಾರ್ಥಸಾಧನೆಗಾಗಿ ತಮ್ಮ ದಾರೀ ಕಾಯುತ್ತಿರುವರೆಂದೂ, ಆ ಕೆಲಸವನ್ನು ಪೂರೈಸುವದಕ್ಕಾಗಿ ತಾವು ಹುಟ್ಟಿ ಬಂದಿರುವೆನೆಂದೂ ಅವರಿಗೆ ಇಷ್ಟರಲ್ಲಿಯೇ ಸ್ಪಷ್ಟವಾಗಿತ್ತು. ಅವರು ಅದಕ್ಕಾಗಿಯೂ ಯೋಗ್ಯತೆಯನ್ನು ಸಂಪಾದಿಸಬೇಕೆಂದು ಸಿದ್ಧತೆ ನಡಿಸಿದರು.

ಮಹಾರಾಜರು ಟ್ರೇನಿಂಗ ಕಾಲೇಜನ್ನು ಸೇರಿದಾಗ, ಅದು ಬೆಳಗಾವಿಯಲ್ಲಿತ್ತೆಂದು ಈ ಮೊದಲೇ ಹೇಳಿದ್ದೇವೆ. ಅದರೆ ಅಲ್ಲಿ ೩—೪ ತಿಂಗಳುಗಳನ್ನು ಕಳೆಯುವದರೊಳಗಾಗಿ ಬೇಸಿಗೆಯ ಸೂಟಿ ಬಂತು. ಬೇಸಿಗೆಯ ಸೂಟಿ ಮುಗಿದ ಮೇಲೆ ಧಾರವಾಡದಲ್ಲಿ ಹೊಸದಾಗಿ ಕಟ್ಟಲ್ಪಟ್ಟ ಕಾಲೇಜಕ್ಕೆ ಬರಬೇಕೆಂದು ಪ್ರಿನ್ಸಿಪಾಲರು ಅಪ್ಪಣೆವಿಧಿಸಿದರು. ಸೂಟಿಯ ದಿವಸಗಳಲ್ಲಿ ಮುರಗೋಡದಲ್ಲಿ ಶ್ರೀ ಚಿದಂಬರನ ಸೇವೆಯಲ್ಲಿಯೇ ಹೋದವು. ಆ ಮೇಲೆ ಮಹಾರಾಜರು ಮುರಗೋಡದಿಂದ ಧಾರವಾಡಕ್ಕೆ ಹೊರಟರು. ಪ್ರವಾಸದೊಳಗೆ ಗೆಳೆಯರಾದ ಶ್ರೀ ಗೋವಿಂದರಾವ ಘಾಟಕ ಎಂಬವರು ಮಹಾರಾಜರ ಸಂಗಡಿಗರಾಗಿದ್ದರು ಪ್ರವಾಸದಲ್ಲಿ ಗೆಳೆಯರು ಅನೇಕ ವಿಷಯಗಳ ಬಗ್ಗೆ ಮಾತಾಡಿದರು. ಆದರೆ ಆ ವಿಷಯಗಳಲ್ಲಿ ಲಗ್ನವೇ ಮುಖ್ಯವಾಗಿತ್ತು. ಅದಕ್ಕೊಂದು ಕಾರಣವೂ ಇತ್ತು.

ಮಹಾರಾಜರ ಪ್ರಬಲವಾದ ಪರಮಾರ್ಥ ಪ್ರವೃತ್ತಿಯನ್ನು ನೋಡಿ ಅವರ ಮನೆಯವರು ಅವರ ಲಗ್ನವನ್ನು ಆದಷ್ಟು ತೀವ್ರ ಮಾಡಿಬಿಡಬೇಕೆಂದು ಹವಣಿಸುತ್ತಿದ್ದರು. ಮಹಾರಾಜರು ಧಾರವಾಡಕ್ಕೆ ಹೋಗುವದರೊಳಗಾಗಿ ಲಗ್ನದ ಪ್ರಸ್ತಾಪವೂ ಹೊರಟಿತ್ತು. ಮಹಾರಾಜರು ಸುಮ್ಮನೇ ಕುಳಿತುಕೊಳ್ಳುವಂತಿರಲಿಲ್ಲ. ಇಂದಿಲ್ಲ ನಾಳೆಯಾದರೂ ಈ ಮಾತು ಹೊರಟೇ ಹೊರಡುವದೆಂಬುದು ಸ್ಪಷ್ಟವಿತ್ತು. ಲಗ್ನದ ಬಗ್ಗೆ ಅವರು ವಿಚಾರ ಮಾಡಿ ನಿರ್ಣಯಿಸಬೇಕಾಗಿತ್ತು.

ಮದುವೆಯೆಂದರೆ ಸಣ್ಣ ಪುಟ್ಟ ವಿಷಯವಲ್ಲ. ಮದುವೆಯನ್ನು ಮಾಡಿ ಕೊಂಡರೂ ಕಷ್ಟ, ಬಿಟ್ಟರೂ ಕಷ್ಟ. ಮದುವೆಯಿಂದ ಕೆಲವು ಅನುಕೂಲತೆ ಗಳೂ ಸುಖಗಳೂ ಸಿಗುತ್ತವೆ. ಆದರೆ ಅದರೊಂದಿಗೆ ಕೆಲವು ಅಡಚಣಿಗಳೂ ದುಃಖಗಳೂ ಸಹ ಗಂಟು ಬೀಳುತ್ತವೆ. ಎರಡನ್ನು ವಿಚಾರ ಮಾಡಿದರೆ ಸುಖಕ್ಕಿಂತ ದುಃಖವೇ ಹೆಚ್ಚೆಂದು ಕಂಡುಬರುತ್ತದೆ. ಆದರೆ ಈ ಮಾತು ಅವಿವಾಹಿತನಾದ ತರುಣನ ಮನಸ್ಸಿಗೆ ಬರುವದಿಲ್ಲ. ವಿವಾಹಪಾಶದಿಂದ ಬದ್ಧರಾಗಿ, ಮಕ್ಕಳನ್ನು ಹಡೆದು ವಿಸ್ತಾರವಾದ ಸಂಸಾರಕ್ಕೊಳಗಾಗಿ ಜರ್ಜರಿತರಾದವರ ಅನುಭವವು ಮಾತ್ರ ಹಾಗಿರುತ್ತದೆ. ಆದರೆ ಅನುಭವ ದಿಂದ ಈ ಮಾತನ್ನು ಮನಗಂಡವರೂ ಕೂಡ ಮುಪ್ಪಿನ ಕಾಲದಲ್ಲಿ ಹೊಸ ದಾಗಿ ಲಗ್ನಮಾಡಿಕೊಳ್ಳಲಿಕ್ಕೆ ಸಿದ್ಧರಾಗುವದನ್ನು ನೋಡಿದರೆ ಮನಸ್ಸು ತಲ್ಲಣಗೊಳ್ಳುತ್ತದೆ. ಈ ಮೋಹಪಾಶದ ಸೆಳೆತವೇ ಇಷ್ಟು ದೊಡ್ಡದು! ಮನುಷ್ಯನ ಜೀವಿತದಲ್ಲಿ ಎರಡೇ ಸಹಜ ಪ್ರವೃತ್ತಿಗಳಿರುವವೆಂದು ಆಧುನಿಕ ಮಾನಸಶಾಸ್ತ್ರಜ್ಞರು ಹೇಳುತ್ತಾರೆ. ದೇಹಪೋಷಣೆಯ ತರುವಾಯ ಕಾಮ ಪ್ರವೃತ್ತಿಯೇ ಬಲು ಮುಖ್ಯವಾದುದೆಂದು ಅವರ ಅಂಬೋಣ. ಅದರಿಂದಲೇ ಹೆಣ್ಣು ಗಂಡು ಒಂದಕ್ಕೊಂದು ಅಷ್ಟು ಮೋಹಿಸುತ್ತವೆ. ಎಂತೆಯೇ ಅದನ್ನು ಗೆಲ್ಲುವದು ವಿದ್ವಾಂಸರಿಗೂ ಕೂಡ ಸಾಧ್ಯವಿಲ್ಲ. ಬಲಿಷ್ಠವಾದ ಇಂದ್ರಿಯಗಳು ದೊಡ್ಡ ದೊಡ್ಡ ಪಂಡಿತರನ್ನೂ, ಯೋಗಿಗಳನ್ನೂ, ತಪಸ್ವಿಗಳನ್ನೂ ಕ್ಷಣಾರ್ಧ ದಲ್ಲಿ ಮಣ್ಣುಮುಕ್ಕಿಸಿ ಬಿಡುತ್ತವೆ. ಸ್ವಾಭಾವಿಕವಾಗಿ ಇಷ್ಟು ಬಲಿಷ್ಠ ವಾಗಿರುವ ಕಾಮ ಪ್ರವೃತ್ತಿಯನ್ನು ಸಂಪೂರ್ಣವಾಗಿ ಚಿವುಟಿ ಹಾಕುವದು ಶಕ್ಯವಿಲ್ಲದ್ದರಿಂದ, ಅದಕ್ಕೆ ಮರ್ಯಾದಿತವೂ ಆದ ರೂಪವನ್ನು ಕೊಡುವ ದಕ್ಕಾಗಿ ವಿವಾಹ ಸಂಸ್ಥೆಯು ಹುಟ್ಟಿದೆ. ಮನುಷ್ಯನು ಸ್ವೈರಚಾರಿಯಾದ ನೆಂದರೆ ಸಮಾಜಕ್ಕೆ ಅಹಿತವಾಗುವನು. ಅದಕ್ಕಾಗಿ ಅವನ ಇಂದ್ರಿಯ ಗಳನ್ನು ತೃಪ್ತಿಗೊಳಿಸಲಿಕ್ಕೆ ಅವಕಾಶಕೊಟ್ಟು ಸಮಾಜದ ಧಾರಣೆ-ಪೋಷಣೆ ಸರಿಯಾಗಿ ಆಗುವ ಸಲುವಾಗಿ ಮದುವೆಯ ಕಲ್ಪನೆ ಬಂದಿದೆಯೆಂಬುದು ಸಹಜವಿದೆ.

ಆದರೆ ವಿವಾಹ ಸಂಸ್ಥೆಯ ಫಲವಾದ ಕುಟುಂಬವು ಸ್ವಾರ್ಥದ ಅಡಿ ಗಲ್ಲಾಗಿದೆ. ಗೃಹಸ್ಥರಾದವರು ಎಷ್ಟೇ ಪರೋಪಕಾರಿ ಅಥವಾ ಉದಾರರು

ಆಗಬೇಕೆಂದು ಬಯಸಿದರೂ, ಅದು ಅವರಿಗೆ ಸಾಧಿಸುವದು ಕಠಿಣವು. ಎಂತೆಯೇ ಶ್ರೀಮಚ್ಛಂಕರ ಭಗವತ್‌ಪಾದರವರು "ಕಾಮಪ್ರಯುಕ್ತತ್ವಾತ್ ಗಾರ್ಹಸ್ಥ್ಯಸ್ಯ" ಎಂದು ಇದೇ ಮಾತನ್ನೇ ಅಪ್ಪಣೆ ಕೊಡಿಸಿದ್ದಾರೆ. ಆದುದರಿಂದ ಲೋಕೋದ್ಧಾರ, ಲೋಕಸಂಗ್ರಹಗಳ ಆದರ್ಶವನ್ನಿಟ್ಟುಕೊಂಡ ಮಹಾಪುರುಷರು ಬಹುಶಃ ಗಾರ್ಹಸ್ಥ್ಯದ ಬಂಧನವನ್ನು ತಾವಾಗಿ ಸ್ವೀಕರಿಸುವದಿಲ್ಲ. ಸ್ವೀಕರಿಸಿದರೂ ಆದಷ್ಟು ತೀವ್ರ ಅದನ್ನು ಹರಿದೊಗೆಯುತ್ತಾರೆ. ಆದ್ಯ ಶಂಕರಾಚಾರ್ಯರು ತಮ್ಮ ಅವತಾರಿಕ ಕೆಲಸದ ಸಲುವಾಗಿ ಮೊಸಳೆಯ ನೆವಮಾಡಿ ತಮ್ಮ ತಾಯಿಯ ಕಡೆಯಿಂದ ಬಾಲ-ಸಂನ್ಯಾಸಕ್ಕೆ ಅಪ್ಪಣೆ ಪಡಕೊಂಡರು. ಶ್ರೀಸಮರ್ಥ ರಾಮದಾಸರು "ಸುಮುಹೂರ್ತೇ ಸಾವಧಾನ" ಎಂದೊಡನೆ ಲಗ್ನಮಂಟಪದಿಂದ ಕಾಲ್ತೆಗೆದರು.

ನಮ್ಮ ಚರಿತ್ರನಾಯಕರಿಗೂ ಲೋಕೋದ್ಧಾರ, ಲೋಕಸಂಗ್ರಹಗಳನ್ನು ಮಾಡಬೇಕಾಗಿತ್ತು. ಆದುದರಿಂದ ಅವರಿಗೆ ಅವಿವಾಹಿತರಾಗಿಯೇ ಉಳಿಯಬೇಕೆಂದೆನಿಸುತ್ತಿತ್ತು. ದೇವರ ಕೃಪೆಯಿಂದ ಅವರಲ್ಲಿ ವೈರಾಗ್ಯವೂ ಇಷ್ಟರೊಳಗೆ ಮನೆಮಾಡಿಕೊಂಡಿತ್ತು. "ಇಂದ್ರಿಯಗಳನ್ನು ಹೇಗೆ ಜಯಿಸೇನು?" ಎಂಬ ಚಿಂತೆಯೂ ಅವರಿಗಿರಲಿಲ್ಲ. ಆದರೆ ಲಗ್ನಮಾಡಿಕೊಳ್ಳದೇ ಹಾಗೆಯೇ ಇರುವೆನೆಂದು ಮನೆಯವರ ಮುಂದೆ ಖಂಡಿತವಾಗಿ ಹೇಳುವದು ಅವರಿಗೆ ಜೀವದ ಸುತ್ತು ಬಂದಿತ್ತು. ಈ ಮಾತಿನಿಂದ ವೃದ್ಧರಾದ ತಾಯಿ-ತಂದೆಗಳಿಗೆ ವಜ್ರಾಘಾತವಾಗುವಂತಿತ್ತು. ಬೆಳೆಯುತ್ತ ನಡೆದಿರುವ ಸಂಸಾರ ಭಾರವನ್ನು ಹೊರಲಾರದೆ ಸಹಾಯಕ್ಕಾಗಿ ಇವರ ನೋರೆಯ ಕಡೆಗೆ ನೋಡುತ್ತಿರುವ ಇವರ ಅಣ್ಣಂದಿರಿಗಂತೂ ಈ ಮಾತಿನಿಂದ ಹುಣ್ಣಿನ ಮೇಲೆ ಬರೆ ಕೊಟ್ಟಂತೆ ಆಗುವ ಹಾಗಿತ್ತು. ಆದುದರಿಂದ ಮಹಾರಾಜರು ಚಿಂತೆಗೊಳಗಾಗಿದ್ದರು. ಆದರೆ ಏನಾದರೊಂದು ನಿಶ್ಚಯವನ್ನಂತೂ ಮಾಡಲೇ ಬೇಕಲ್ಲವೆ?

ಗೋವಿಂದರಾಯರು ಲಗ್ನದ ಪಕ್ಷಪಾತಿಗಳು. ಅವರಿಗೆ ಪರಮಾರ್ಥ–ಗಿರಮಾರ್ಥದ ವಿಚಾರವು ಸಮ್ಮತವಿರಲಿಲ್ಲ. ಅವರು ಮಹಾರಾಜರೊಡನೆ ವಾದಿಸಿ, ಲಗ್ನಮಾಡಿಕೊಳ್ಳುವದೇ ವಿಹಿತವೆಂದೂ, ಆದಷ್ಟು ತೀವ್ರ

ಲಗ್ನಮಾಡಿಕೊಂಡು ತಾಯಿ-ತಂದೆ ಅಣ್ಣ-ತಮ್ಮಂದಿರನ್ನು ಸಂತೋಷಪಡಿಸ ಬೇಕೆಂದೂ ವಾದಿಸಿದರು. ಅದಕ್ಕೆ ಮಹಾರಾಜರು ಬಲು ಚತುರತೆಯಿಂದ ಉತ್ತರ ಕೊಟ್ಟರು:— ''ಅಯ್ಯಾ, ಮನುಷ್ಯನು ಲಗ್ನವಾಗಬೇಕೆನ್ನುವದು ಯಾತಕ್ಕಾಗಿ ? ಅದರಿಂದ ತನಗೆ ಸುಖವಾಗಬೇಕೆಂದೇ ಅಲ್ಲವೆ ? ಆದರೆ ಲಗ್ನವಾಗುವದರಿಂದ ಆ ಆಸೆಯು ಕೈಗೂಡುವದೇ ? ಹಿಂದಿನವರ ಅನುಭವವನ್ನೂ ಇಂದಿನವರ ಪ್ರತ್ಯಕ್ಷ ಉದಾಹರಣೆಯನ್ನೂ ನೋಡಿ ಈ ಮಾತಿನ ನಿರ್ಣಯ ಮಾಡುವದು ಸರಿಯಲ್ಲವೇ?

''ಮನುಷ್ಯನು ವಿಷಯಗಳಿಂದ ಸುಖಪಡೆಯುವದಕ್ಕಾಗಿ ಲಗ್ನವಾದರೂ, ತಾನೇ ಆ ವಿಷಯಗಳೊಳಗೆ ಸಿಕ್ಕು ಬೀಳುತ್ತಾನೆ ! ವಿಷಯಗಳನ್ನು ತನ್ನ ದಾಸರನ್ನಾಗಿ ಮಾಡಿಕೊಳ್ಳುವದೊತ್ತಟ್ಟಿಗುಳಿದು, ತಾನೇ ಆ ವಿಷಯಗಳ ದಾಸನಾಗುತ್ತಾನೆ ! ಹೆಂಡಿರು-ಮಕ್ಕಳಿಂದ ತನಗೆ ಸುಖವಾಗಬೇಕೆಂದು ಬಯಕೆ ಇರುತ್ತದೆ. ಆದರೆ ಆ ಹೆಂಡಿರು-ಮಕ್ಕಳ ಸುಖಕ್ಕಾಗಿ ತಾನು ಆಹುತಿಯಾಗಬೇಕಾಗುತ್ತದೆ ! ಇದು ಬಲು ಆಶ್ಚರ್ಯದ ಮಾತಲ್ಲವೇ ? ಗೃಹಸ್ಥನು ದುಡಿದುಡಿದು ಸಣ್ಣಾಗುತ್ತಾನೆ. ಅವನಿಗೆ ಶಾಂತಿ, ಸುಖ, ಸಮಾಧಾನಗಳೆಂಬವು ಇಲ್ಲದಂತಾಗಿ ಹೋಗುತ್ತವೆ. ಹೆಂಡಿರು-ಮಕ್ಕಳಿಂದ ಸುಖವು ಸಿಕ್ಕುವದೆಂದೇನೋ ಕೆಲಹೊತ್ತು ಭಾಸವಾಗಬಹುದು. ಆದರೆ ಆ ಸುಖವು ತೀರ ಕ್ಷಣಿಕವು, ಕಿರುಕುಳವು, ತುಚ್ಛವು. ಮೊದಮೊದಲು ಅದು ಅಮೃತದಂತೆ ಸವಿಯಾಗಿ ಕಂಡರೂ, ಕೊನೆಯಲ್ಲಿ ಅದು ವಿಷದಂತೆ ದುಃಖದಾಯಕವೂ ಹಾನಿಕರವೂ ಆಗಿದೆ. ಸಂಸಾರದಲ್ಲಿ ಸಿಕ್ಕುವ ಸುಖದುಃಖಗಳನ್ನು ತುಲನೆಮಾಡಿ ನೋಡಿದರೆ ದುಃಖವೇ ಹೆಚ್ಚಾಗಿ ತೋರುವದು. ದುಃಖವು ಪರ್ವತದಷ್ಟಾದರೆ ಸುಖವು ಎಳ್ಳುಕಾಳಷ್ಟು ಮಾತ್ರ ! ಎಂತೆಯೇ ಶ್ರೀ ರಾಮದಾಸರು 'ಜಗತ್ತಿನೊಳಗೆ ಎಲ್ಲ ರೀತಿಯಿಂದ ಸುಖಿಯಾಗಿರುವವನು ಯಾವನು ? ಆದುದರಿಂದ, ಮನಸ್ಸೇ, ನೀನೇ ವಿಚಾರಮಾಡಿ ಸಾಂಸಾರಿಕ ಸುಖದ ಆಸೆಯನ್ನು ಬಿಟ್ಟು ದೇವರ ಬೆನ್ನು ಹತ್ತು' ಎಂದು ಮನಸ್ಸಿಗೆ ಬುದ್ಧಿ ಹೇಳಿದ್ದಾರೆ. ರಾಮದಾಸರ ಉಪದೇಶವು ಸಾರ್ಥವಾಗಿದೆ. ಮೃಗಜಲದಂತಿರುವ ಇಂದ್ರಿಯ ಸುಖದ ಬೆನ್ನು ಹತ್ತಿ ಅವಿನಾಶಿಯಾದ ಆತ್ಮಸುಖವನ್ನು ಮರೆಯುವದೆಂದರೆ

ಆತ್ಮಘಾತವನ್ನು ಮಾಡಿಕೊಂಡಂತೆಯೇ ಸರಿ. ಪುರುಷನಿಗೆ ಸ್ತ್ರೀ ರೂಪದಿಂದಲೂ ಸ್ತ್ರೀಯರಿಗೆ ವುರುಷ ರೂಪದಿಂದಲೂ ಮಾಯೆಯು ಗಂಟು ಬಿದ್ದಿರುವದೆಂದು ಹೇಳಬಹುದು. ಎಂತೆಯೇ ಪುರುಷರ ದೃಷ್ಟಿಯಿಂದ ಸ್ತ್ರೀಯು ಪ್ರತ್ಯಕ್ಷ ಮಾಯಾವಿ ರಾಕ್ಷಸಿಯೆಂದು ಒಬ್ಬ ಸಂಸ್ಕೃತ ಕವಿಯು ಬರೆದಿದ್ದಾನೆ. ಸ್ತ್ರೀ ಸುಖದ ಬೆನ್ನು ಹತ್ತಿ ನೀತಿ, ಧರ್ಮ ಮತ್ತು ಕರ್ತವ್ಯಗಳಿಂದ ಭ್ರಷ್ಟರಾದವರ ಅನೇಕ ಉದಾಹರಣೆಗಳನ್ನು ನಾವು ದಿನಾಲು ನೋಡುತ್ತೇವೆ. ಎಷ್ಟೋ ಜನರು ತಮ್ಮ ಹೆಂಡತಿಯ ಸಲುವಾಗಿ ತಮ್ಮ ಹೆತ್ತ ತಾಯಿ-ತಂದೆಗಳಿಗೇ ಪೀಡೆಕೊಟ್ಟು ಅವಮಾನ ಮಾಡುವದಕ್ಕೂ ಹಿಂದೆ ಮುಂದೆ ನೋಡುವದಿಲ್ಲ.

''ಸಾಂಸಾರಿಕ ಜನರಿಗೆ ಎಷ್ಟೂ ವಿರಾಮವಿರುವದಿಲ್ಲ. ಅವರು ನಾನಾ ತರದ ಕಷ್ಟಗಳಿಗೆ ಒಳಗಾಗುತ್ತಾರೆ. ಎಷ್ಟು ದುಡಿದರೂ ಅವರ ಮನೆತನದ ಚಿಂತೆಯು ದೂರಾಗುದಿವಲ್ಲ. ಅನ್ನವಸ್ತ್ರ, ಅಲಂಕಾರ, ಹೊಲಮನೆ, ಎತ್ತು ಚಕ್ಕಡಿ ಮೊದಲಾದವುಗಳೇ ನಿಜವಾದ ಸಂಪತ್ತೆಂದು ತಿಳಿದ ಮನುಷ್ಯನು ತಿರುಗಣಿ ಮಡದೊಳಗೆ ಸಿಕ್ಕಂತೆ ಪುನಃ ಪುನಃ ಸಂಸಾರದಲ್ಲಿ ಹೊರಳಾಡ ಬೇಕಾಗುತ್ತದೆ. ಅವನಿಗೆ ದೇವರ ಅಥವಾ ಪರಮಾರ್ಥದ ಕಡೆಗೆ ಲಕ್ಷಕೂಡ ಕೊಡಲಿಕ್ಕೆ ಅವಕಾಶವೇ ಇರುವದಿಲ್ಲ. ಅವಕಾಶವಿದ್ದರೂ ಅವನ ಮನಸ್ಸು ಅತ್ತ ಎಂದೂ ಹೊರಳುವದಿಲ್ಲ. ಹೀಗೆ ಅವರು ಅವಿನಾಶಿಯಾದ ಆತ್ಮ ಸುಖಕ್ಕೆ ಎರವಾಗುತ್ತಾರೆ. ಮೇಲಾಗಿ ದೇಹವೆಂದರೆ ರಕ್ತ, ಮಾಂಸ, ಕಫ, ಎಲವು ಮೊದಲಾದ ಅಮಂಗಲ ಪದಾರ್ಥಗಳ ಮುದ್ದೆಯಾಗಿದ್ದು ಹೇಸಿಕೆಯ ತವರು ಮನೆಯಾಗಿದೆ. ಇಂತಹ ದೇಹದ ಮೇಲೆ ಜನರು ಹೇಗೆ ಪ್ರೇಮ ಮಾಡುತ್ತಾರೋ ತಿಳಿಯದು. ಮತ್ತು ಆ ದೇಹದ ಸುಖಕ್ಕಾಗಿಯೇ ಜನರು ಮರುಳಾಗುವದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ!''

ಗೋವಿಂದರಾಯರು ಈ ಮಾತುಗಳನ್ನು ಕೇಳಿ ಗೊಂದಲದಲ್ಲಿ ಬಿದ್ದರು ಆದರೆ ತಮ್ಮ ಗೆಳೆಯನನ್ನು ಏನಾದರೂ ಮಾಡಿ ಹಾದಿಗೆ ತರಬೇಕೆಂಬ ಸಂಕಲ್ಪದಿಂದ ಅವರು ಮಾತಾಡಹತ್ತಿದರು:— ''ಅಬ್ಬಬ್ಬ! ಇಂದಿನ ನಿಮ್ಮ ಬಣ್ಣವೇ ಹೊಸತರದ್ದಾಗಿದೆ, ಬಿಡಿರಿ. ಇಂದು ನೀವು ಬ್ರಹ್ಮ ಜ್ಞಾನದ ಸೋಗನ್ನು ಚೆನ್ನಾಗಿ ಹಾಕಿದಂತೆ ಕಾಣುತ್ತದೆ! ಆದರೆ ನನ್ನ

ಮುಂದೆ ಇಂತಹ ಬ್ರಹ್ಮಜ್ಞಾನದ ಆಟ ಸಾಗುವಂತಿಲ್ಲ, ಕಂಡಿರಾ! ನೀವು ಲಗ್ನದ ವಿಷಯಕ್ಕೆ ಒಳ್ಳೇ ವಿಚಾರ ಮಾಡಿದವರಂತೆ ದೊಡ್ಡ ದೊಡ್ಡ ಮಾತು ಗಳನ್ನು ಆಡುತ್ತಿರುವಿರಿ. ಆದರೆ ನಿಮ್ಮ ವಿಚಾರಸರಣಿಯು ಸಂಕುಚಿತವೂ ಏಕದೇಶಿಯವೂ ಆಗಿದೆ. ನಿಮ್ಮ ಅಭಿಪ್ರಾಯವು ಶಾಸ್ತ್ರಕ್ಕೂ ಶಿಷ್ಟಾ ಚಾರಕ್ಕೂ ಸಮ್ಮತವಾದುದಲ್ಲ. 'ಧನ್ಯೋ ಗೃಹಸ್ಥಾಶ್ರಮಃ' ಎಂದು ಗೃಹಸ್ಥಾಶ್ರಮದ ವರ್ಣನೆಯನ್ನು ಹಿಂದಿನವರು ಜೇಕಾದಷ್ಟು ಮಾಡಿದ್ದಾರೆ. ಗೃಹಸ್ಥಾಶ್ರಮದ ದೊಡ್ಡಸ್ತಿಕೆಯು ಬಹಳವಾಗಿದೆ. ಎಲ್ಲರೂ ನಿಮ್ಮ ವಿಚಾರ ದವರೇ ಆಗಿಬಿಟ್ಟಿದ್ದರೆ ಜಗತ್ತು ನಾಶವಾಗಿ ಹಳ್ಳೀ ಮಾತಾಗುತ್ತಿತ್ತು! ಮದುವೆಯಾಗದೆ ಎಲ್ಲರೂ ಸನ್ಯಾಸಿಗಳೇ ಆಗಿಬಿಟ್ಟರೆ ಜಗತ್ತು ನಡೆಯುವ ದೆಂತು? ಆದರೆ ನಿಮ್ಮ ವಿಚಾರದ ಜನರು ಕಡಿಮೆಯೆಂದೇ ಇನ್ನೂ ಜಗತ್ತು ಸುಸೂತ್ರವಾಗಿ ನಡೆದಿದೆ. ವಿವಾಹದ ಮಹತ್ತ್ವವನ್ನು ಎಲ್ಲ ಧರ್ಮ-ಮತ ಪಂಥದವರೂ ಒಪ್ಪಿಕೊಂಡಿದ್ದಾರೆ. ಎಂತೆಯೇ ಎಲ್ಲ ಸಮಾಜಗಳೊಳಗೂ ಅದಕ್ಕೆ ಮಾನ್ಯವಾದ ಸ್ಥಾನವಿದೆ. ನಿಮ್ಮ ರಾಮದಾಸರೂ ಕೂಡ ಮೊದಲು ನೆಟ್ಟಗೆ ಸಂಸಾರವನ್ನು ಮಾಡಬೇಕು. ಆ ಮೇಲೆ ಪರಮಾರ್ಥದ ಬೆನ್ನು ಹತ್ತಬೇಕು ಎಂದೇ ಹೇಳಿದ್ದಾರೆ. ಸಂಸಾರವನ್ನು ತೊರೆಯುವದಕ್ಕಿಂತ ಸಂಸಾರದಲ್ಲಿಯೇ ಇದ್ದು, ಸಂಸಾರ ಪರಮಾರ್ಥಗಳೆರಡನ್ನು ಸಾಧಿಸುವದೇ ಶ್ರೇಯಸ್ಕರವಾದುದೆಂದು ಎಲ್ಲ ಸಾಧು-ಸತ್ಪುರುಷರೂ ಏಕಕಂಠದಿಂದ ಹೇಳಿದ್ದಾರೆ. ಮೇಲಾಗಿ ಗೃಹಸ್ಥನಾದವನಿಗೆ ಮಾತ್ರ ಪರಮಾರ್ಥವು ಹೆಚ್ಚು ಸುಲಭವಾಗಿ ಸಾಧಿಸುವದು. ಯಾಕಂದರೆ ಸ್ತ್ರೀಯು ಗೃಹಸ್ಥನಿಗೆ ಕೋಟೆಯಿದ್ದಂತೆ. ಅವನನ್ನು ಅವಳು ಅನೇಕ ರೀತಿಯಿಂದ ಸಂರಕ್ಷಿಸುತ್ತಾಳೆ. ಹೊರಗಿನ ಬೈಲಲ್ಲಿ ನಿಂತು ಯುದ್ಧ ಮಾಡುವದಕ್ಕಿಂತ ತಾನು ಭದ್ರವಾದ ಕೋಟೆಯಲ್ಲಿ ನಿಂತು ಹೊರಗಿನ ಶತ್ರುವಿನೊಡನೆ ಯುದ್ಧ ಮಾಡುವದು ಹೆಚ್ಚು ಸುಲಭವಲ್ಲವೇ? ಹಾಗೆ ಗೃಹಸ್ಥನು ಹೆಂಡತಿಯ ಸಹಾಯದಿಂದ ಸಹಜವಾಗಿ ಜಿತೇಂದ್ರಿಯನಾಗಬಹುದು. ಮತ್ತು ಹೆಂಗಸು ಇಲ್ಲದ ಮನೆಯೆಂದರೆ ಅರಣ್ಯವೇ ಸರಿ. ಸುಶೀಲಳಾದ ಹೆಂಡತಿಯ ಸಹವಾಸದಲ್ಲಿ ಪ್ರಪಂಚ ಮಾಡುವವನು, ಚಿಕ್ಕಮಕ್ಕಳ ತೊದಲ್ನುಡಿಗಳನ್ನು ಕೇಳಿ ಎಲ್ಲ ಶ್ರಮವನ್ನೂ ಸಹಜವಾಗಿ ಮರೆತುಬಿಡಬಹುದು. ಅವನು

ಹೆಂಡಿರು ಮಕ್ಕಳ ಸರಸವಾದ ಸಂಗತಿಯಲ್ಲಿ ಸ್ವರ್ಗಸುಖವನ್ನೇ ಇಲ್ಲಿ ಅನು ಭವಿಸುವನೆಂದೂ ಹೇಳಬಹುದು. ಹಾಗೂ ಆಮರಣ ಏಕಾಕಿಯಾಗಿರುವ ದಕ್ಕಿಂತ ಮದುವೆಯಾದವನಿಗೆ ಸಮಾಜಸೇವೆ ಮಾಡಲಿಕ್ಕೆ ಹೆಚ್ಚು ಅವಕಾಶ ದೊರೆಯುತ್ತಿದೆ. ಗೃಹಸ್ಥಾಶ್ರಮವೇ ಉಳಿದೆಲ್ಲ ಆಶ್ರಮಗಳಿಗೆ ಆಧಾರ ವಾಗಿದೆ. ಅತಿಥಿ ಅಭ್ಯಾಗತರನ್ನು ಸ್ವಾಗತಮಾಡಿ ಸಂತೋಷಪಡಿಸುವದು ಗೃಹಸ್ಥಾಶ್ರಮಿಗೆ ಮಾತ್ರ ಸಾಧ್ಯ. ಆದುದರಿಂದ ನೀವು ಇಲ್ಲದ ಹಟಕ್ಕೆ ಬೀಳದೆ ಲಗ್ನ ಮಾಡಿಕೊಳ್ಳುವದೇ ವಿಹಿತವು."

ಗೋವಿಂದರಾಯರ ಮಾತುಗಳನ್ನು ಕೇಳಿ ಮಹಾರಾಜರು ಮುಗುಳು ನಗೆ ನಗಹತ್ತಿದರು. ಅವರು ತಮ್ಮ ಸಂತೋಷವನ್ನು ಸೂಸುತ್ತ ಗೋವಿಂದ ರಾಯರಿಗೆ ಉತ್ತರ ಕೊಟ್ಟರು: – "ಗೋವಿಂದರಾವ, ನೀವು ಹೇಳುವ ಮಾತುಗಳು ಸರಿಯಾಗಿವೆ. ನೀವು ಸೂಚಿಸುವ ಮಾರ್ಗವಾದರೂ ಯೋಗ್ಯ ವಾದದ್ದೇ! ಆದರೆ ಆ ಮಾತು ಸಾಮಾನ್ಯರಿಗಾಗಿ, ಎರಡನೆಯ ತರಗತಿಯ ಜನರಿಗಾಗಿ ಹೇಳಿದ್ದೆಂಬದನ್ನು ನೀವು ಮರೆತಂತೆ ಕಾಣುತ್ತದೆ. ಯಾರಿಗೆ ಆಜನ್ಮ ಬ್ರಹ್ಮಚರ್ಯ ವ್ರತವನ್ನು ಖಂಡಿತವಾಗಿ ಪಾಲಿಸಲಿಕ್ಕೆ ಆಗುವ ದಿಲ್ಲವೋ ಅವರು ನಿಮ್ಮ ಮಾರ್ಗವನ್ನೇ ಅನುಸರಿಸಬೇಕು. ಇದರಲ್ಲಿ ಎಷ್ಟೂ ಸಂದೇಹವಿಲ್ಲ. ಸಾಮಾನ್ಯ ಜನರಿಗೆ ಇಂದ್ರಿಯ ನಿಗ್ರಹವು ಕಠಿಣವೆಂಬದು ನಿಜವೇ. ಅವರು ಲಗ್ನಮಾಡಿಕೊಂಡು, ಗೃಹಸ್ಥರಾಗಿ, ಗಾರ್ಹಸ್ಥ್ಯ ಧರ್ಮವನ್ನು ಪಾಲಿಸಿ ಶ್ರೇಯಸ್ಸು ಪಡೆಯಬೇಕು. ಆದರೆ ಯಾರು ಹೆಚ್ಚಿನ ಆದರ್ಶವನ್ನು ತಮ್ಮ ಮುಂದೆ ಇಟ್ಟುಕೊಂಡಿರುತ್ತಾರೋ, ಅವರು ಸಾಮಾನ್ಯ ಜನಸಮ್ಮತವಾದ ದಾರಿಯನ್ನು ತುಳಿಯಲಾರರು. ಕಾಮ-ಕ್ರೋಧ ಮೊದಲಾದ ಷಡ್ರಿಪುಗಳನ್ನು ಕೊಲ್ಲಬೇಕೆನ್ನುವವರು ಆದಷ್ಟು ಚಿಕ್ಕ ವಯಸ್ಸಿನಲ್ಲಿಯೇ ಮನೋನಿಗ್ರಹವನ್ನು ಪ್ರಾರಂಭಿಸಬೇಕು. ಅದಕ್ಕಾಗಿ ದಿನಾವಧಿಮಾಡುವದು ವಿಹಿತವಲ್ಲ. ಯಾಕಂದರೆ ಒಮ್ಮೆ ವಾಸನೆಗಳು ಬಲಿತು ಪ್ರಬಲವಾದವೆಂದರೆ, ಇಡೀ ಜನ್ಮದೊಳಗೆಲ್ಲ ಯತ್ನಮಾಡಿ ಜಿತೇಂದ್ರಿಯತ್ವವನ್ನು ಸಾಧಿಸಬೇಕೆಂದರೂ ಸಾಧ್ಯವಾಗಲಿಕ್ಕಿಲ್ಲ. ತಾರುಣ್ಯದ ಆರಂಭದಲ್ಲಿಯೇ ಮನುಷ್ಯನು ಜಿತೇಂದ್ರಿಯನಾಗದಿದ್ದರೆ, ಮುಂದೆ ಎಂದೂ ಆ ಕಾರ್ಯವಾಗುವದು ಸಾಧ್ಯವಿಲ್ಲ.

"ಏಕಾಕಿಯಾಗಿರುವ ಬ್ರಹ್ಮಚಾರಿಗಳೂ ಸಂನ್ಯಾಸಿಗಳ ಮಾತ್ರ ನಿಜವಾಗಿ ಸಮಾಜಸೇವೆ ಮಾಡಬಲ್ಲರು. ಅವರಿಂದ ಸಾಧಿಸುವ ಸಮಾಜಸೇವೆಯೂ ಮೇಲ್ತರಗತಿಯ ದಾಗಬಲ್ಲದು. ಆದರೆ ಮನಸ್ಸಿನೊಳಗೆ ಸಲ್ಲದ ವಿಷಯವಾಸನೆಗಳನ್ನಿಟ್ಟುಕೊಂಡು ಮೇಲೆ ಕೆಂಪು ವಸ್ತ್ರವನ್ನು ಹೊದ್ದುಕೊಂಡರೆ ಸಾಲದು. ಹಾಗೆ ಮಾಡುವದು ನಿಜವಾದ ಸಂನ್ಯಾಸವಲ್ಲ. ಲೋಕಸಂಗ್ರಹಕ್ಕಾಗಿ ನಿಷ್ಕಾಮ ಕರ್ಮಮಾಡುವದೇ ನಿಜವಾದ ಸಂನ್ಯಾಸವು. ನನಗೆ ಈ ಮಾತಿನ ಅನುಭವ ಇನ್ನೂ ಬಂದಿಲ್ಲವೆಂಬದನ್ನು ನಾನು ಒಪ್ಪುತ್ತೇನೆ ಆದರೆ ಲೋಕ ಸಂಗ್ರಹಕ್ಕಾಗಿ ನಿಷ್ಕಾಮಕರ್ಮ ಮಾಡುವದೇ ನನ್ನ ಆಯುಷ್ಯದೊಳಗಿನ ಮುಖ್ಯ ಕರ್ತವ್ಯವೆಂದು ನಾನು ತಿಳಿಯುತ್ತೇನೆ. ಈ ಇಚ್ಛೆಯನ್ನು ಪೂರ್ಣ ಗೊಳಿಸುವದು ಮಾತ್ರ ಶ್ರೀ ಚಿದಂಬರೇಶ್ವರನ ಕೈಯಲ್ಲಿದೆ!"

ಹೀಗೆ ಮನೋರಂಜಕವೂ ಗಹನವೂ ಆದ ಸಂಭಾಷಣೆಯಲ್ಲಿ ಗೆಳೆಯರು ಧಾರವಾಡವನ್ನು ಮುಟ್ಟಿದರು. ಈ ವಿಷಯದ ಬಗ್ಗೆ ಮಹಾರಾಜರ ಮನೋದಾರ್ಢ್ಯವನ್ನು ಪರೀಕ್ಷಿಸುವ ಕಾಲವು ಮುಂದೆ ಸ್ವಲ್ಪ ದಿವಸಗಳಲ್ಲಿಯೇ ಬಂತು. ಆಗ ಮಹಾರಾಜರು ಯಾವ ರೀತಿಯಿಂದ ತಮ್ಮ ಸತ್ತ್ವವನ್ನು ತೋರಿಸಿದರೆಂಬದು ವಾಚಕರಿಗೆ ಯಥಾವಕಾಶದಲ್ಲಿ ತಿಳಿಯುವದು.

೧೩ ಲೋಕಸಂಗ್ರಹವೆಂದರೇನು ?

ಲೋಕೋದ್ಧಾರ ಅಥವಾ ಲೋಕಸಂಗ್ರಹವೆಂದರೇನೆಂಬದನ್ನು ನಿರ್ಣಯಿಸುವದು ಕಠಿಣವಿದೆ. ಆಧುನಿಕ ನೀತಿಶಾಸ್ತ್ರಜ್ಞರು ಬರೇ ಭೌತಿಕ ವಿಚಾರಗಳ ಆಧಾರದ ಮೇಲಿಂದ, ಪರೋಪಕಾರ, ಮಾನವಸೇವೆ, ಸಮಾಜ ಸೇವೆ, ರಾಷ್ಟ್ರಸೇವೆ ಮೊದಲಾದವುಗಳಿಗಾಗಿ ದುಡಿಯುವದೇ ಲೋಕಸಂಗ್ರಹ ವೆಂದು ಹೇಳುತ್ತಾರೆ. ಪುಕ್ಕಟೆ ಔಷಧಾಲಯಗಳನ್ನು ತೆರೆಯುವದು, ಅಶಿಕ್ಷಿತ ಜನರಲ್ಲಿ ಸಾಕ್ಷರತೆಯನ್ನು ಬೆಳೆಸುವದು, ಬಡಬಗ್ಗರಿಗಾಗಿ ಅನ್ನಛತ್ರ ಹೊರಡಿಸುವದು, ಕೆರೆ ಬಾವಿಗಳನ್ನು ತೋಡಿಸುವದು, ಧರ್ಮಶಾಲೆಗಳನ್ನೂ ಅನಾಥಾಲಯಗಳನ್ನೂ ಕಟ್ಟಿಸುವದು, ವಾಚನಾಲಯಗಳನ್ನು ನಡೆಸುವದು, ದೊಡ್ಡ ದೊಡ್ಡ ವಿದ್ಯಾಲಯಗಳನ್ನು ತೆರೆಯುವದು, ಜನರ ಆರ್ಥಿಕ ಪರಿ ಸ್ಥಿತಿಯ ಸುಧಾರಣೆಗಾಗಿ ಯತ್ನಿಸುವದು, ಅಥವಾ ಸ್ವಲ್ಪದರಲ್ಲಿ ಹೇಳುವ ದಾದರೆ ಜನರ ಐಹಿಕ ಜೀವನವು ಹೆಚ್ಚು ಸುಖಮಯವಾಗುವಂತೆ ಮಾಡು ವದೇ ಲೋಕಸಂಗ್ರಹವೆಂದು ಅವರು ವಾದಿಸುತ್ತಾರೆ. ಮೇಲೆ ಹೇಳಿದ ಉದ್ದೇಶಗಳು ಉದಾತ್ತ ಅಥವಾ ಉದಾರವಾದವುಗಳೆಂಬ ಬಗ್ಗೆ ಸಂದೇಹವೇ ಇಲ್ಲ ಮತ್ತು ಅವುಗಳಿಗಾಗಿ ಪ್ರತಿಯೊಬ್ಬನು ಹೆಣಗಬೇಕೆಂಬ ಬಗ್ಗೆಯೂ ವಾದವಿಲ್ಲ. ಆದರೆ ಇಷ್ಟೇ ಲೋಕಸಂಗ್ರಹವೆಂದು ವಾದಿಸುವದು ಮಾತ್ರ ತಪ್ಪಾಗುವದು. ಈ ಕೆಲಸವನ್ನು ಮಾಡುವದು ನಿಜವಾದ ಲೋಕ ಸಂಗ್ರಹವಾಗಲಾರದು. ನಿಜವಾದ ಲೋಕಸಂಗ್ರಹದ ಸ್ವರೂಪವು ಬೇರೆ ಯಾಗಿದೆ. ಗೀತಾಭಾಷ್ಯದಲ್ಲಿ (೩—೨೦) ಶ್ರೀ ಶಂಕರಾಚಾರ್ಯರು ಲೋಕ ಸಂಗ್ರಹವೆಂದರೆ ''ಲೋಕದ ಉನ್ಮಾರ್ಗಪ್ರವೃತ್ತಿ ನಿವಾರಣ''ವೆಂದು ಬರೆ ದಿದ್ದಾರೆ. ಎಂದರೆ ತಮ್ಮ ಸ್ವಂತದ ವಿಚಾರವನ್ನೇ ಮರೆತು, ಪರಮಾತ್ಮನಿಗೆ ವಿಮುಖರಾಗಿ, ಅಜ್ಞಾನದಿಂದ ಸಂಸಾರದಲ್ಲಿ ಬಿದ್ದು ಸುಖವನ್ನೇ ಕಾಣದೆ

ಹೊರಳಾಡುತ್ತಿರುವ ಜನರಿಗೆ ಪರಮಾರ್ಥದ ಉಪದೇಶ ಮಾಡಿ, ಅವರನ್ನು ಪರಮಾರ್ಥ ಜೀವಿಗಳನ್ನಾಗಿ ಮಾಡುವದೇ ಲೋಕಸಂಗ್ರಹವೆಂದು ಇದರ ಅರ್ಥವು.

ನಮ್ಮ ಚರಿತ್ರನಾಯಕರು ಆತ್ಮೋದ್ಧಾರವನ್ನು ಸಾಧಿಸಿದ ಮೇಲೆ ಲೋಕೋದ್ಧಾರ ಅಥವಾ ಲೋಕಸಂಗ್ರಹಕ್ಕಾಗಿ ತಮ್ಮ ಜೀವಿತವನ್ನು ಮೀಸಲಾಗಿಟ್ಟರೆಂದು ಈ ಮೊದಲೇ ಹೇಳಿದ್ದೇವೆ. ಆದರೆ ಲೋಕಸಂಗ್ರಹವನ್ನು ಹೇಗೆ ಸಾಧಿಸಬೇಕೆಂಬದೊಂದು ಪ್ರಶ್ನವೇ ಇದೆ. ಅದೇ ಅವರನ್ನು ಈಗ ಬಾಧಿಸ ಹತ್ತಿತು. ಲೋಕಸಂಗ್ರಹವೇನು ಸಾಮಾನ್ಯ ಮಾತಲ್ಲ. ಲೋಕಸಂಗ್ರಹ ಮಾಡಬೇಕೆನ್ನುವವನಿಗೆ ಅನೇಕತರದ ಅಡಚಣಿಗಳು ಬರುತ್ತವೆ. ನಾನಾ ತರದ ಜನರು, ಅವರ ಸ್ವಭಾವ ವೈಚಿತ್ರ್ಯ, ಸ್ವಾರ್ಥ, ವಿಷಯಾಸಕ್ತಿ, ಆಲಸ್ಯ, ತಪ್ಪು ತಿಳುವಳಿಕೆಗಳು, ದುರಾಗ್ರಹಗಳು, ಮತಪಂಥದ ಅಭಿಮಾನಗಳು, ಇಲ್ಲದ ದೊಡ್ಡಿಸ್ತಿಕೆಯ ಕಲ್ಪನೆಗಳು — ಇವೇ ಮೊದಲಾದವುಗಳು ಲೋಕಸಂಗ್ರಹಕ್ಕೆ ಅಡ್ಡಬರುತ್ತವೆ. ಲೋಕಸಂಗ್ರಾಹಕನಿಗೆ ಜನರ ಸ್ವಭಾವ ಪರೀಕ್ಷೆ ಬೇಕು. ಪರಸ್ಪರ ವಿರೋಧಕ ಜನರನ್ನೂ ಕೂಡ ಒಂದೆಡೆಗೆ ತಂದು ತನ್ನ ಕೆಲಸಕ್ಕಾಗಿ ಅವರನ್ನು ದುಡಿಸಿಕೊಳ್ಳುವ ಕೌಶಲ್ಯಬೇಕು. ಅತ್ಯಂತ ವಿಷಯಾಸಕ್ತರಾದ ಜನರನ್ನೂ ಕೂಡ ತನ್ನೆಡೆಗೆ ಆಕರ್ಷಿಸಿಕೊಳ್ಳುವ ಆಧ್ಯಾತ್ಮಿಕಶಕ್ತಿ ಬೇಕು. ಎಲ್ಲಕ್ಕೂ ಮೊದಲು ನಿಃಸ್ವಾರ್ಥಬುದ್ಧಿ ಬೇಕು. ನಿರ್ದಿಷ್ಟವಾದ ಪವಿತ್ರ ಆಚರಣೆ ಬೇಕು. ಪರೋಪಕಾರ, ದಯೆ, ಶಾಂತಿ, ಕ್ಷಮೆಗಳು ಬೇಕು. ಶಾಸ್ತ್ರಾಭ್ಯಾಸಬೇಕು. ಜನರಿಗೆ ಬೋಧಿಸುವ ಶಕ್ತಿ ಬೇಕು. ಅಚ್ಚುಕಟ್ಟುತನ, ಓರಣ, ವ್ಯವಸ್ಥೆ, ಶಿಸ್ತು ಇವೆಲ್ಲವೂ ಬೇಕು. ಎಂದರೆ ಮಾತ್ರ ಲೋಕಸಂಗ್ರಹದ ಆಸೆ. ಆದುದರಿಂದ ಲೋಕಸಂಗ್ರಹಕ್ಕೆ ಬೇಕಾಗುವ ಯೋಗ್ಯತೆಯು ತಮ್ಮಲ್ಲಿ ಹೇಗೆ ಬಂದೀತೆಂದು ಮಹಾರಾಜರು ವಿಚಾರಕ್ಕೊಳಗಾದರು. ಆದಾದರೂ ತಮ್ಮ ಸ್ವಾಧೀನವಲ್ಲವೆಂದೂ, ಅಂತರ್ಯಾಮಿಯಾದ ಚಿದಂಬರನೇ ತಮಗೆ ಮಾರ್ಗ ತೋರಿಸಬೇಕೆಂದೂ ಅವರು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದರು. ಅವರ ಪ್ರಾರ್ಥನೆಗೆ ದೇವರು ಹನ್ನೆರಡು ದಿವಸಗಳಲ್ಲಿಯೇ ಉತ್ತರಕೊಟ್ಟನು.

ಧಾರವಾಡವನ್ನು ಮುಟ್ಟಿದ ಮೇಲೆ ಮಹಾರಾಜರು ತಮ್ಮ ಸ್ನೇಹಿತರಾದ ಗೋವಿಂದರಾಯರೊಡನೆ ಒಂದು ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡು ಇರಹತ್ತಿದರು. ಭೋಜನಗೃಹ ಅಥವಾ ಖಾನಾವಳಿಯಲ್ಲಿ ಊಟ ಮಾಡುವರು. ಪ್ರಾತಃಕಾಲದಲ್ಲಿ ೫ ಗಂಟೆಗೆ ಎದ್ದು, ಕಕ್ಕಡಾರತಿ ಪ್ರಾತಃಸ್ಮರಣ ಮೊದಲಾದವುಗಳನ್ನು ತೀರಿಸಿಕೊಂಡು ತುಸುಹೊತ್ತು ಓದುವರು ಆ ಮೇಲೆ ನಾಮಸ್ಮರಣ, ಅಭಂಗಪಠಣ, ಮತ್ತು ಭಕ್ತಿಪರವಾದ ಗ್ರಂಥಗಳ ವಾಚನಗಳಲ್ಲಿ ಕಾಲಕಳೆಯುವರು ಊಟವಾದ ಮೇಲೆ ನೇಳೆಗೆ ಸರಿಯಾಗಿ ಕಾಲೇಜಕ್ಕೆ ಹೋಗುವರು. ಮನೆಯಿಂದ ಕಾಲೇಜಕ್ಕೆ ಹೋಗುವದರೊಳಗಾಗಿ ದಾರಿಯೊಳಗೆ ತಪ್ಪದೆ ೬ ಸಾವಿರ ಜಪ ಮಾಡುವರು. ಸಂಜೆಯ ೫ ಗಂಟೆಗೆ ಕಾಲೇಜು ಬಂದಾಗುವದು ತಿರುಗಿ ಬರುವಾಗ ಮತ್ತೆ ದಾರಿಯೊಳಗೆ ೬ ಸಾವಿರ ಜಪಗಳಾಗುವವು. ಕಾಲೇಜ ಬಿಟ್ಟೊಡನೆ ಮಹಾರಾಜರು ಬೇರೆ ಎಲ್ಲಿಯೂ ಹೋಗದೆ, ಧಾರವಾಡದಲ್ಲಿ ಸಂಸ್ಕೃತ ಪಾಠಶಾಲೆಯ ಹತ್ತರ ಕೆರಯ ಮೇಲಿರುವ ಶ್ರೀ ದತ್ತಮಂದಿರಕ್ಕೆ ಹೋಗುವರು. ಅಲ್ಲಿ ಸುಮಾರು ೨—೩ ತಾಸುಗಳ ವರೆಗೆ ಕಾಲ ಕಳೆಯುವರು. ಪ್ರದಕ್ಷಿಣೆ, ನಮಸ್ಕಾರ, ಜಪ ಮತ್ತು ಅಭಂಗ ಪಠಣಗಳಲ್ಲಿ ಈ ವೇಳೆಯು ಹೋಗುತ್ತಿತ್ತು. ಸಂಜೆಯ ೮ ಗಂಟೆಗೆ ಕೋಣೆಗೆ ಹೋಗುವರು. ಊಟವಾದ ಮೇಲ ಮತ್ತೆ ಪ್ರಾತಃಕಾಲದಂತೆ ನಾಮಸ್ಮರಣ ನೊದಲಾದವುಗಳು ನಡೆಯುವವು ಈ ರೀತಿಯಾಗಿ ಕಾಲೇಜದಲ್ಲಾದಷ್ಟೇ ಅಭ್ಯಾಸವು. ಮನೆಯಲ್ಲಿ ಅತ್ತ ಕಡೆಗೆ ವಿಶೇಷ ಕಾಲವನ್ನು ಕಳೆಯುತ್ತಿರಲಿಲ್ಲ. ಆದರೂ ಕುಶಾಗ್ರ ಬುದ್ಧಿಯವರೂ, ಪರಮಾತ್ಮನ ಕೃಪೆಗೆ ಒಳಗಾದವರೂ ಆದ ನಮ್ಮ ಚರಿತ್ರನಾಯಕರು ಕಾಲೇಜದ ಪರೀಕ್ಷೆಗಳಲ್ಲಿ ನಿರಾಯಾಸವಾಗಿ ತೇರ್ಗಡೆಯಾಗುತ್ತಿದ್ದರಲ್ಲದೆ ಹೆಚ್ಚಿಗೆ ಗುಣಗಳನ್ನು ದೊರಕಿಸಿ ಗೌರವ ಸ್ಥಾನವನ್ನೇ ಪಡೆಯುತ್ತಿದ್ದರು.

ಸ್ವಚ್ಛತೆ ಹಾಗೂ ಪಾವಿತ್ರ್ಯಗಳ ಮೂರ್ತಿಯಾದ ಮಹಾರಾಜರಿಗೆ ಖಾನಾವಳಿಯ ಊಟ ಉಪಚಾರಗಳು ಸ್ವಲ್ಪೇ ದಿವಸಗಳಲ್ಲಿ ಬೇಸರಾದವು. ಅನ್ನವನ್ನು ಮಾರುವದೇ ಪಾಪವೆಂದು ಶಾಸ್ತ್ರಗಳು ಹೇಳುತ್ತವೆ. ''ಅಟ್ಟ ಶೂಲಾ ಜನಪದಾಃ'' ಎಂದರೆ ''ಜನರು ಅನ್ನವನ್ನು ಮಾರುವವರಾಗುವರು. ಕಲಿಯುಗದ ಅನೇಕ ವೈಶಿಷ್ಟ್ಯಗಳಲ್ಲಿ ಇದೊಂದು'' ಎಂದು ಭಾಗವತವು

ಹೇಳುತ್ತದೆ. ಖಾನಾವಳಿಗಳಲ್ಲಿ ಸ್ವಚ್ಛತೆ ಹಾಗೂ ಪಾವಿತ್ರ್ಯಗಳನ್ನು ಕಾಯ್ದುಕೊಳ್ಳುವದು ಅಶಕ್ಯವೆಂದರೂ ಅಡ್ಡಿಯಿಲ್ಲ. ಖಾನಾವಳಿಯ ಒಡೆಯನಿಗೆ ಮಹಾರಾಜರು ಒಂದೆರಡು ಸಲ ಹೇಳಿ ನೋಡಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಆಗ ಮಹಾರಾಜರು ಖಾನಾವಳಿಯ ಊಟ ವನ್ನೇ ಬಿಟ್ಟು ಬಿಡಬೇಕೆಂದು ಯೋಚಿಸಿದರು. ಅವರ ವಿಚಾರವು ಗೆಳೆಯರಿಗೂ ಸಮ್ಮತವಾಯಿತು. ಆದುದರಿಂದ ಗೋವಿಂದರಾವ ಘಾಟಕ ಮತ್ತು ಬಂಬುಳ ನಾಡ ಇವರೊಡನೆ ಮಹಾರಾಜರು ಮದೀಹಾಳದಲ್ಲಿ ಒಂದು ಕೋಣೆ ಹಿಡಿದು, ಕೈಯಿಂದ ಅಡಿಗೆ ಮಾಡಿಕೊಂಡು ಇರಹತ್ತಿದರು. ವೇ. ಭಾವೂ ಭಟ್ಟ ಗೋಡಖಿಂಡಿ ಎಂಬ ಸುಶೀಲರಾದ ವೈದಿಕ ಬ್ರಾಹ್ಮಣರ ಮನೆಯಲ್ಲಿ ಇವರಿಗೆ ಕೋಣೆ ಸಿಕ್ಕಿತ್ತು. ಅದರಿಂದ ಮಹಾರಾಜರ ಸ್ನಾನ, ಊಟ, ಜಪ, ತಪ, ಪಾರಾಯಣ ಮೊದಲಾದವುಗಳಿಗೆಲ್ಲ ಒಳ್ಳೇ ಅನುಕೂಲ ವಾಯಿತು. ಅಲ್ಲಿದ್ದಾಗ ಮಹಾರಾಜರು ತಮ್ಮ ನಿತ್ಯಕ್ರಮದಂತೆ ಪ್ರದಕ್ಷಿಣೆ ನಮಸ್ಕಾರ ಮೊದಲಾದವುಗಳಿಗಾಗಿ ಮದೀಹಾಳದ ಶ್ರೀ ನರಸಿಂಹ ದೇವಾ ಲಯಕ್ಕಾಗಲಿ, ದತ್ತಮಂದಿರಕ್ಕಾಗಲಿ, ಹೋಗುತ್ತಿದ್ದರು.

ಮಹಾರಾಜರು ತಮ್ಮ ಪರಮಾರ್ಥಸಾಧನೆಯ ಸಂಗಡ ಲೋಕ ಸಂಗ್ರಹದ ಬಗ್ಗೆಯೂ ವಿಚಾರ ಮಾಡುತ್ತಿದ್ದರೆಂದು ಮೇಲೆ ಹೇಳಿದ್ದೇವೆ. ಪರಮಾತ್ಮನಿಗಾದರೂ ಅವರ ಕಡೆಯಿಂದ ಲೋಕಸಂಗ್ರಹದ ಕೆಲಸವನ್ನು ಮಾಡಿಕೊಳ್ಳಬೇಕಾಗಿತ್ತು. ಶ್ರೀ ಚಿದಂಬರನು ಅದಕ್ಕಾಗಿ ತಾನೇ ನಮ್ಮ ಚರಿತ್ರನಾಯಕರಿಗೆ ಲೋಕಸಂಗ್ರಹದ ಶಿಕ್ಷಣವನ್ನು ಕೊಡಲನುವಾದನು. ಈ ದೃಷ್ಟಿಯಿಂದ ನೋಡಿದರೆ ಮಹಾರಾಜರ ಪೂರ್ವಾಯುಷ್ಯವೆಲ್ಲ ಅವರ ಉತ್ತರಾಯುಷ್ಯದ ಲೋಕಸಂಗ್ರಹದ ಕೆಲಸಕ್ಕೆ ಪೀಠಿಕೆಯಂತಿರುವದೆಂದು ಹೇಳಬಹುದು. ಅವರ ಜೀವನದ ಪೂರ್ವಭಾಗವೆಲ್ಲ ಉತ್ತರಭಾಗದಲ್ಲಿ ಮಾಡಬೇಕಾದ ಕರ್ತವ್ಯದ ಸಿದ್ಧತೆಯಲ್ಲಿ ಹೋಯಿತೆನ್ನಬಹುದು ಅವರ ಪೂರ್ವಾಶ್ರಮದಲ್ಲಿ ಬಿತ್ತಿದ ಬೀಜಗಳೇ ಮುಂದೆ ಸಂನ್ಯಾಸವಾದ ಮೇಲೆ ಹುಟ್ಟಿ, ಬೆಳೆದು, ಫಲಕೊಟ್ಟವೆಂದು ಹೇಳಬಹುದು. ಆದುದರಿಂದ, ಲೋಕ ಸಂಗ್ರಹವನ್ನು ಹೇಗೆ ಮಾಡಬೇಕು—ಎಂಬ ಅವರ ಚಿಂತೆಯನ್ನು

ಚಿದಂಬರನು ಶೀಘ್ರದಲ್ಲಿಯೇ ದೂರು ಮಾಡಿದನು. ಲೋಕಸಂಗ್ರಹದ ವಿಚಾರದಲ್ಲಿಯೇ ಅವರು ಮುಳಗಿಕೊಂಡರು. ಒಂದು ದಿನ ಬೆಳಗು ಮುಂಜಾನೆ ಅವರಿಗೊಂದು ದೃಷ್ಟಾಂತವಾಯಿತು. ಕನಸಿನಲ್ಲಿ ಒಬ್ಬ ತೇಜಸ್ವಿಯಾದ ಜಟಾಧಾರಿ ಬ್ರಾಹ್ಮಣನು ಬಂದು— ''ತಮ್ಮಾ, ಚಿಂತೆ ಮಾಡಬೇಡ. ಪ್ರತಿದಿವಸ ದಾಸಬೋಧವನ್ನು ಓದುತ್ತ ಹೋಗು. ಅದರಿಂದ ನಿನಗೆ ಎಲ್ಲವೂ ತಿಳಿಯುವದು'' ಎಂದು ಆಜ್ಞೆ ಮಾಡಿದನು. ಮಹಾರಾಜರಿಗೆ ಆನಂದವಾಗಿ, ಅವರು ಆ ಮಹಾಮಹಿಮನ ಪಾದಗಳಿಗೆ ನಮಸ್ಕಾರ ಮಾಡಬೇಕೆನ್ನುವಷ್ಟರಲ್ಲಿ ಪಕ್ಕನೆ ಎಚ್ಚರಾಯಿತು.

ಭಾವಿಕರಾದ ಮಹಾರಾಜರಿಗೆ ಇದು ಚಿದಂಬರನ ಆದೇಶವೇ ಎಂಬ ನಿರ್ಧಾರವಾಯಿತು. ಅವರು ಎದ್ದ ಕೂಡಲೇ ಲಗುಬಗೆಯಿಂದ ಹೋಗಿ ಧಾರವಾಡದ ಪುಸ್ತಕಾಲಯಗಳಲ್ಲೆಲ್ಲ ದಾಸಬೋಧದ ಬಗ್ಗೆ ವಿಚಾರ ಮಾಡಿದರು. ಎಲ್ಲಿಯೂ ದೊರಕಲಿಲ್ಲ. ಮಹಾರಾಜರು ನಿರಾಶರಾಗುವ ಹೊತ್ತಿಗೆ ಒಂದು ಸಣ್ಣ ಅಂಗಡಿಯಲ್ಲಿ ಒಂದೇ ಪ್ರತಿಯು ಅವರ ಕಣ್ಣಿಗೆ ಬಿತ್ತು. ಅವರು ಒಳ್ಳೇ ಸಂಭ್ರಮದಿಂದ ಅದನ್ನು ಕೊಳ್ಳಹೋದರು. ಆದರೆ ಲೋಭಿಯಾದ ಅಂಗಡಿಕಾರನು ಅದರ ಬೆಲೆಯೆಂದು ೫ ರೂಪಾಯಿ ಬೇಡಿದನು. ಮಹಾರಾಜರ ಬಳಿಯಲ್ಲಿ ಅಷ್ಟು ಹಣವಿರಲಿಲ್ಲ. ಅವರ ಕಡೆಗೆ ೨ ರೂಪಾಯಿ ಮಾತ್ರ ಇದ್ದವು. ಆದರೂ ಅವರು ಎಗಡನೆಯವರ ಕಡೆಯಿಂದ ೩ ರೂಪಾಯಿ ಕೈಗಡ ಇಸಕೊಂಡು ಅದನ್ನು ಕೊಂಡುಕೊಂಡರು. ಮತ್ತು ದೇವರ ಆಜ್ಞೆಯಂತೆ ಪ್ರತಿನಿತ್ಯ ದಾಸಬೋಧದ ಪಾರಾಯಣ ನಡೆಸಿದರು.

ದಾಸಬೋಧವೆಂದರೆ ಶ್ರೀ ಸಮರ್ಥ ರಾಮದಾಸರ ಹೃದಯವೇ ಸರಿ ಮುಸಲ್ಮಾನೀ ಧರ್ಮದ ಆಘಾತದಿಂದ ಹಿಂದೂ ಧರ್ಮವು ಚಡಪಡಿಸುತ್ತಿರುವಾಗ ಲೋಕಸಂಗ್ರಹ ಮಾಡಿ ತೋರಿಸಿದ ರಾಮದಾಸರು ತಮ್ಮ ಅನುಭವಗಳನ್ನೆಲ್ಲ ದಾಸಬೋಧದಲ್ಲಿ ಸಂಗ್ರಹಮಾಡಿದ್ದಾರೆ. ಲೋಕಸಂಗ್ರಹ ಮಾಡಬೇಕೆನ್ನುವವರಿಗೆ ಅದು ಕೈ ದೀವಟಿಗೆಯಂತೆ ಇದೆ. ಯಾಕಂದರೆ ಲೋಕಸಂಗ್ರಹದ ರಾಜ್ಯಮಾರ್ಗವನ್ನು ಶ್ರೀ ಸಮರ್ಥರು ಅದರಲ್ಲಿ ಸರಿಯಾಗಿ ತೋರಿಸಿಕೊಟ್ಟಿದ್ದಾರೆ. ಮೊದಲು ತಾವು ಮಾಡಿ ನೋಡಿ, ಆ ಮೇಲೆ ಅವರು

ಸಾರಾಂಶವೇನಂದರೆ—ಸಾಮಾನ್ಯ ಜನರಿಗೆ ಒಳ್ಳೇ ಉಪಯುಕ್ತವಾದ ಭಕ್ತಿ ಮಾರ್ಗದ ಆಧಾರದಿಂದ, ದೇವರ ಉತ್ಸವಾದಿ ಕಾರ್ಯಕ್ರಮಗಳನ್ನು ಏರ್ಪಡಿಸಿ, ಅವುಗಳ ಮುಖಾಂತರ ಜನರ ಸಂಘಟನೆ ಮಾಡಿ, ಅವರು ಪ್ರಪಂಚವನ್ನೂ ಸರಿಯಾಗಿ ಮಾಡಿ ಪರಮಾರ್ಥದ ಕಡೆಗೆ ಹೊರಳುವಂತೆ ಮಾಡುವದೇ ಲೋಕಸಂಗ್ರಹದ ತಿರುಳಾಗಿದೆಯೆಂದು ಹೇಳಬಹುದು. ನಮ್ಮ ಚರಿತ್ರನಾಯಕರು ಈ ಕಾರ್ಯಕ್ರಮವನ್ನು ಮುಂದೆ ಎಷ್ಟು ಯಶಸ್ವಿಯಾಗಿ ಮಾಡಿ ತೋರಿಸಿದರೆಂಬುದು ಅವರ ಚರಿತ್ರದ ಉತ್ತರಾರ್ಧದಲ್ಲಿ ವಾಚಕರಿಗೆ ಗೊತ್ತಾಗುವದು.

ದಾಸಬೋಧ ವಾಚನದಿಂದ ಮಹಾರಾಜರಿಗೆ ಬಲು ಆನಂದವಾಯಿತು. ಅವರಿಗೆ ಬೇಕಾದ ಲೋಕಸಂಗ್ರಹದ ಮರ್ಮವೆಲ್ಲ ಅಲ್ಲಿ ಅವರಿಗೆ ಗೋಚರವಾಗಹತ್ತಿತು. ಅವರು ಅದರ ಪಾರಾಯಣವನ್ನು ಮತ್ತೆ ಮತ್ತೆ ಮಾಡಹತ್ತಿದರು. ತಮಗೆ ಈ ಮಾರ್ಗವನ್ನು ತೋರಿಸಿಕೊಟ್ಟಿದ್ದಕ್ಕಾಗಿ ಅವರು ದೇವರನ್ನು ಶತಶಃ ಕೊಂಡಾಡಿದರು. ಅವರಿಗೆ ಈ ಸಂದರ್ಭದಲ್ಲಿ ಸ್ವಾಭಾವಿಕವಾಗಿಯೇ ಅಕ್ಕಲಕೋಟೆಯ ಶ್ರೀ ಸ್ವಾಮೀಸಮರ್ಥರ ನೆನಪಾಯಿತು ಅವರ ಅಪಾರವಾದ ಕಾರುಣ್ಯವನ್ನು ಅನೇಕ ಸಲ ನೆನಸಿದರು. ಇಷ್ಟೊತ್ತಿಗೆ ಅವರ ದರುಶನವಾಗಿ ಎರಡು ವರುಷಗಳಾಗಿ ಹೋಗಿದ್ದವು. ಅವರಿಗೆ ಇನ್ನೊಮ್ಮೆ ಬೆಟ್ಟಿಯಾಗಿ ತಮ್ಮ ಕೃತಜ್ಞತೆಯನ್ನು ತೋರಿಸಬೇಕೆಂಬ ಲವಲವಿಕೆಯುಂಟಾಯಿತು. ಆದರೆ ಆದು ಅಶಕ್ಯವಾಗಿತ್ತು. ಆದುದರಿಂದ ಪತ್ರದ್ವಾರದಿಂದಾದರೂ ತಮ್ಮ ಕೃತಜ್ಞತೆಯನ್ನು ತೋರ್ಪಡಿಸಬೇಕೆಂದು ನಮ್ಮ ಚರಿತ್ರನಾಯಕರು ಪತ್ರಬರೆಯಲಿಕ್ಕೆ ಕುಳಿತುಕೊಂಡರು. ಸಮರ್ಥರ ನೆನಪಾದೊಡನೆ ಕಣ್ಣಿನಿಂದ ನೀರು ಹೋಗಹತ್ತಿದವು. ಕಂಠವು ಸದ್ಗದಿತವಾಯಿತು. ಕೈಮುಂದೆ ಸಾಗದಂತಾಯಿತು. ಕೆಲಹೊತ್ತಿನ ಮೇಲೆ ಸಾವರಿಸಿಕೊಂಡು ಕೆಳಗಿನಂತೆ ಪತ್ರಬರೆದರು. ಪತ್ರವು ಮರಾಠಿಯಲ್ಲಿ ಇತ್ತು. ಅದರ ಕನ್ನಡ ಅನುವಾದವನ್ನು ಇಲ್ಲಿ ಕೊಟ್ಟಿದ್ದೇವೆ.

ಶ್ರೀ ಚಿದಂಬರ ಪ್ರಸನ್ನ

"ಶ್ರೀ ಸಚ್ಚಿದಾನಂದರೂಪಾ, ಅನಂತಕೋಟಿ ಬ್ರಹ್ಮಾಂಡ ನಾಯಕಾ, ಮಾಯಾತೀತಾ, ಸ್ವಯಂಪ್ರಕಾಶಾ, ಸರ್ವವ್ಯಾಪಕಾ, ಆಜಾನುಬಾಹೋ, ಸುಹಾಸ್ಯವದನಾ, ಆಕರ್ಣನಯನಾ, ಶ್ರೀ ಚಿದಂಬರ ಸ್ವರೂಪಾ, ಸ್ವಾಮಿನ್!

ತಮ್ಮ ಕೋಮಲ ಚರಣಾರವಿಂದಗಳಲ್ಲಿ ಭ್ರಮರನಂತೆ ಆಸಕ್ತನಾಗಿರುವ ತಮ್ಮ ದಾಸಾನುದಾಸನಾದ ಬೋಶೆ ರಾಮನು ಅನೇಕ ಸಾಷ್ಟಾಂಗ ನಮಸ್ಕಾರ ಪೂರ್ವಕ ಮಾಡಿಕೊಳ್ಳುವ ವಿಜ್ಞಾಪ್ತಿಯೇನೆಂದರೆ—ಶ್ರೀ ಚರಣ ಕೃಪೆಯಿಂದ ನಾನು ಧಾರವಾಡದಲ್ಲಿ ಕ್ಷೇಮವಾಗಿದ್ದೇನೆ. ಆದರೆ ಶ್ರೀಗಳ ದರುಶನವಾಗಿ ಎರಡು ವರುಷಗಳಾಗಿ ಹೋದ್ದರಿಂದ ಪುನರ್ದರ್ಶನದ ಉತ್ಸಂಕೆಯು ಬಹಳವಾಗಿದೆ. ಇಚ್ಛೆಯಾದೊಡನೆ ತಮ್ಮ ಸಗುಣರೂಪದ ದರುಶನ ಲಾಭವನ್ನು ಪಡೆಯುವ ಪುಣ್ಯವು ಈ ಪಾಮರನಿಗೆ ಇಲ್ಲ ! ನಾನು ತೀರ ಸಾಮಾನ್ಯನು. ನನ್ನಲ್ಲಿ ಅನೇಕ ದೋಷಗಳಿವೆ. ಆದರೂ ನನ್ನ ದೋಷಗಳನ್ನು ಲಕ್ಷಿಸದೆ ಮಾತೆಯಂತೆ ದಯಾಪೂರ್ಣರಾಗಿ ಶ್ರೀಗಳು ದರ್ಶನವನ್ನು ಕೊಟ್ಟು ಈ ದಾಸನನ್ನು ಪವಿತ್ರನನ್ನಾಗಿ ಮಾಡಬೇಕು.

ಶ್ರೀ ಚಿದಂಬರ ಜೀವಿಚ್ಯಾ ಜೀವನಾ ।
ಪುರವೀ ಮನಾಚೀ ವಾಸನಾ ॥ ಪ ॥

ಐಸೆ ವಾಟೆ ಮಾಝ್ಯಾ ಚಿತ್ತಾ ಕಧೀ ಭೆಟಸೀ ಅನಂತಾ ।
ಮಾತಾಜಾಯ ಕಾರ್ಯಾಸಾಠಿ ಬಾಳ ಊದಾಸ ತೇ ಪೋಟಿ ॥ ೧ ॥

ಗಾಯ ಚರೆ ಅರಣ್ಯಾಂತ ವತ್ಸಝುರತೆ ಮನಾತ ।
ಪಾಉಸ ಚುಕಲೀ ಹರಿಣೀ ಧುಂಡಳಿತೀ ರಾನೋರಾನಿ ॥ ೨ ॥

ಕೃಪಣಜಾಯ ದೂರದೇಶಿ ತ್ಯಾಚಾ ಜೀವ ದ್ರವ್ಯಾಪಾಶೀ ।
ದಾಸ ಮ್ಹಣೆ ಐಸೆ ಆಹೆ ಯಾಸೀ ಸಾಕ್ಷ ತುಝಿ ಪಾಯ ॥ ೩ ॥ *

---

* ದಾಸ ರಾಜಾರಾಮರು ಶ್ರೀ ಚಿದಂಬರನನ್ನು ಕುರಿತು ಮಾಡಿದ ಅಭಂಗಗಳಿವು. ಇವುಗಳ ಸಾರಾಂಶವೇನಂದರೆ— ಚಿದಂಬರಾ, ನೀನು ನನ್ನ ಜೀವನದ ಜೀವನವಾಗಿರುವಿ. ನೀನೇ ನನ್ನ ಇಚ್ಛೆಯನ್ನು ಪೂರ್ಣಮಾಡಬೇಕು. ನೀನೆಂದು ದರುಶನ ಲಾಭವನ್ನು ಕೊಡುವಿಯೋ ಎಂದು ನನ್ನ ಮನಸ್ಸು ಚಡಪಡಿಸುತ್ತದೆ. ತನ್ನ ಕೆಲಸದ ಸಲುವಾಗಿ ತಾಯಿ ಹೋದೊಡನೆ ಕೂಸಿಗೆ ದುಃಖವಾಗುವಂತೆ ಅಥವಾ ಆಕಳು ಮೇಯಲಿಕ್ಕೆ ಅರಣ್ಯಕ್ಕೆ ಹೋದಾಗ ಕರುವು ಮನಸ್ಸಿನಲ್ಲಿ ಕಳವಳಿಸುವಂತೆ, ಅಥವಾ ತಾಯಿಯನ್ನು ಕಳಕೊಂಡ ಚಿಗರೀಮರಿಯು ವನವನಗಳಲ್ಲಿ ಅಲೆದಾಡುತ್ತಿರುವಂತೆ, ಅಥವಾ ಜೀನನು ದೂರ ದೇಶಕ್ಕೆ ಹೋದಾಗ ಅವನ ಮನಸ್ಸು ಅವನ ಮನೆಯಲ್ಲಿದ್ದ ದ್ರವ್ಯವನ್ನೇ ಚಿಂತಿಸುವಂತೆ, ನಾನು ನಿನ್ನನ್ನು ನೆನಸುತ್ತಿರುತ್ತೇನೆ. ಇದಕ್ಕೆ ನಿನ್ನ ಪಾದಗಳೇ ಸಾಕ್ಷಿ.

ಮೇಲಿನ ಅಭಂಗಗಳಲ್ಲಿ ವರ್ಣಿಸಿದಂತೆ ಶ್ರೀ ಚರಣಗಳಲ್ಲಿ ದಾಸನ ಮನಸ್ಸು ಅಖಂಡವಾಗಿ ನಿಂತಿದೆ. ತಮಗೆ ಈ ಪತ್ರಬರೆಯುವ ಅಧಿಕಾರವು ನನಗಿಲ್ಲ. ಆದರೂ ಹೀಗೆ ಪತ್ರಮುಖದಿಂದ ಪ್ರಾರ್ಥನೆ ಮಾಡಿಕೊಳ್ಳುವ ದಿಟ್ಟತನ ತೋರಿಸಿದ್ದಕ್ಕಾಗಿ ನನ್ನನ್ನು ಕ್ಷಮಿಸಬೇಕು. ತಮ್ಮ ಹೊರತಾಗಿ ನನಗೆ ಯಾರ ಆಧಾರವೂ ಇಲ್ಲ. ಶ್ರೀಗಳವರು ಕೃಪಾವಂತರಾಗಿ ಆಜ್ಞಾ ಪ್ರಸಾದವನ್ನು ದಯಪಾಲಿಸಬೇಕೆಂದು ಬೇಡಿಕೊಳ್ಳುವೆನು."

ಈ ಪತ್ರಕ್ಕೆ ತಿಕೀಟು ಹಚ್ಚಿ ಮಹಾರಾಜರು ಪೋಸ್ಟಿನ ಪೆಟ್ಟಿಗೆಯಲ್ಲಿ ಹಾಕಿದರು. ಈ ಕೃತ್ಯಕ್ಕೆ ಹುಚ್ಚತನವೆಂದು ಕೆಲವರು ನಗಬಹುದು. ಆದರೆ ಪರಮಾತ್ಮನ ಕೃಪೆಯನ್ನು ಸಂಪಾದಿಸಿದವರೆಲ್ಲ ಒಮ್ಮಿಲ್ಲ ಒಮ್ಮೆ ಇಂತಹ ಹುಚ್ಚುತನ ಅಥವಾ ನಿರ್ಲಜ್ಜತನವನ್ನು ತೋರಿಸಿಯೇ ತೋರಿಸಿರುವರೆಂದು ಕಂಡು ಬರುತ್ತದೆ ಸಾಮಾನ್ಯರು ಯಾವುದಕ್ಕೆ ಜಾಣತನವೆಂದು ಕರೆಯುವರೋ, ಅದೆಲ್ಲ ಕೆಳಗಿನ ತರಗತಿಯೊಳಗಿನದೇ ಎಂಬದನ್ನು ಮರೆಯಬಾರದು. ಎಲ್ಲ ಲೌಕಿಕ ಧರ್ಮಗಳನ್ನೂ ತೊರೆದ ಮೇಲೆಯೇ ಪರಮಾತ್ಮನು ಸಿಕ್ಕುವನು ಆದುದರಿಂದ ನಮ್ಮ ಚರಿತ್ರನಾಯಕರು ಭಾವಾವೇಶದ ವೇಗದೊಳಗೆ ಬರೆದ ಈ ಪತ್ರಕ್ಕೆ ಯಾರೂ ನಗುವ ಕಾರಣವಿಲ್ಲ. ತಿರುಗಿ ಕೇಳಿದರೆ, ಇದರಿಂದ ಅವರ ಅಂತಃಕರಣವು ಬಹಳ ಕೋಮಲವೂ, ಶ್ರದ್ಧಾಯುಕ್ತವೂ, ಪವಿತ್ರವೂ, ಪ್ರೇಮಪೂರ್ಣವೂ ಆಗಿತ್ತೆಂದು ನಿರಾತಂಕವಾಗಿ ಹೇಳಬಹುದು. ಶ್ರೀ ಸ್ವಾಮೀಸಮರ್ಥರೂ ಆಗ ಪ್ರತ್ಯಕ್ಷವಾಗಿಯೇ ಅಕ್ಕಲಕೋಟೆಯಲ್ಲಿ ಇದ್ದರು. ಎಂದ ಮೇಲೆ ಅವರ ಹೆಸರಿನಿಂದ ಪತ್ರ ಬರೆದು ಪೆಟ್ಟಿಗೆಯಲ್ಲಿ ಹಾಕಿದರೆ, ಅಪರಾಧವಾದರೂ ಏನು ?

ಯಥಾಕಾಲದಲ್ಲಿ ಪತ್ರವು ಶ್ರೀ ಸ್ವಾಮೀಸಮರ್ಥರ ಕೈಸೇರಲಿಕ್ಕೆ ಸಾಕು. ಶಿಷ್ಯರು ಅದನ್ನು ಅವರಿಗೆ ಓದಿಯೂ ತೋರಿಸಿರಬೇಕು. ಒಂದು ವೇಳೆ ಅದನ್ನು ಅವರಿಗೆ ಯಾರೂ ಓದಿ ತೋರಿಸದಿದ್ದರೂ "ಸರ್ವಜ್ಞ"ರೂ "ಸರ್ವಧಿಸಾಕ್ಷಿ"ಸ್ವರೂಪರೂ ಆದ ಸಮರ್ಥರಿಗೆ ನಮ್ಮ ಚರಿತ್ರನಾಯಕರ ಪ್ರಾರ್ಥನೆಯು ತಿಳಿದಿರಲಿಕ್ಕೆ ಸಾಕು. ಆದರೆ ಸಮರ್ಥರು ಇಂತಹ ಯಾವ ಉಪಾಧಿಗಳನ್ನೂ ಹಚ್ಚಿಕೊಳ್ಳುವವರಾಗಿರಲಿಲ್ಲ. ಆದುದರಿಂದ ಅವರ

ಕಡೆಯಿಂದ ಪತ್ರದ ಉತ್ತರ ಬರುವ ಸಂಭವವೇ ಇರಲಿಲ್ಲ. ಮತ್ತು ಮನ್ನಣೆ ಯೆಲಿನ ಪತ್ರಕ್ಕೆ ಉತ್ತರವೂ ಬರಲಿಲ್ಲ. ಆದರೆ ಶ್ರೀಗಳು ಅನ್ಯರೀತಿಯಿಂದ ತಮ್ಮ ಪ್ರಸಾದವು ದೊರೆಯುವಂತ ಮಾಡಿದರು. ಅಕ್ಕಲಕೋಟೆಗೆ ಹೋಗಿ ಶ್ರೀಗಳವರ ದರುಶನ ಲಾಭವನ್ನು ಹೊಂದಿದ ಒಬ್ಬ ಬಾಹ್ಮಣನು, ಶ್ರೀ ಸಮರ್ಥರ ಭಾವಚಿತ್ರವನ್ನೂ ಪ್ರಸಾದವನ್ನೂ ತಂದುಕೊಟ್ಟನು. ನಮ್ಮ ಚರಿತ್ರನಾಯಕಂಗೆ ಅಷ್ಟರಿಂದಲೇ ಸಂತೋಷವಾಯಿತು ಶ್ರೀಗಳವರೇ ಈ ರೀತಿಯಾಗಿ ತಮ್ಮ ಮೇಲೆ ಕರುಣೆದೋರಿದರೆಂದೂ, ತಮ್ಮ ಪ್ರಾರ್ಥನೆಗೆ ಉತ್ತರಕೊಟ್ಟರೆಂದೂ ಅವರು ದೃಢವಾಗಿ ಭಾವಿಸಿದರು. ಅವರ ಭಾವ ಚಿತ್ರವು ದೊರೆತದ್ದರಿಂದ ಬೇಕಾದಾಗ ಅವರ ದರುಶನ ಪಡೆಯಬಹುದೆಂದೂ ಶ್ರೀ ಸಮರ್ಥರೇ ತಮ್ಮ ಪತ್ತರ ಆಗಮನ ಮಾಡಿದಂತಾಯಿತೆಂದೂ, ನಮ್ಮ ಚರಿತ್ರನಾಯಕರು ತಿಳಿದುಕೊಂಡರು. ಇದರಿಂದ ಅವರ ಮನಸ್ಸಿನ ದುಗುಡ ನೆಲ್ಲ ದೂರಾಗಿ ಸಮಾಧಾನವಾಯಿತು. ಮತ್ತು ಅಂದಿನಿಂದ ಅವರು ಹೆಚ್ಚು ಉತ್ಸಾಹದಿಂದ ತಮ್ಮ ಸಾಧನಗಳನ್ನು ಮುಂದುವರಿಸಿದರು.

೧೪ ಬಂಗಾರದ ಪರೀಕ್ಷೆಯು ಒಂಕಿಯಲ್ಲಿಯೇ!

ವೇದಾಂತವು ಅನುಭವ ಶಾಸ್ತ್ರವು. ಅದರೊಳಗಿನ ವಿಷಯಗಳನ್ನು ಅನುಭವದಿಂದ ತಿಳಿದುಕೊಳ್ಳಬೇಕು. ವೇದಾಂತದ ವಿಷಯವಾಗಿ ಹರಟೆ ಹೊಡೆಯಲಿಕ್ಕೆ ಬಂದರೆ ವೇದಾಂತವು ತಿಳಿದಂತಾಗಲಿಲ್ಲ ಪಕ್ವಾನ್ನಗಳನ್ನು ಹಾಗೆ ಮಾಡಬೇಕು, ಹೀಗೆ ಮಾಡಬೇಕು—ಎಂದು ಹರಟೆ ಹೊಡೆದ ಮಾತ್ರಕ್ಕೆ ಹೇಗೆ ಆ ಪಕ್ವಾನ್ನಗಳನ್ನು ತಿಂದಂತಾಗುವದಿಲ್ಲವೋ ಅಥವಾ ಹೊಟ್ಟೆತುಂಬುವದಿಲ್ಲವೋ, ಹಾಗೆಯೇ ಆತ್ಮ ಅಥವಾ ಬ್ರಹ್ಮನ ಒಗ್ಗೆ ಮಾತಾಡಿದ ಮಾತ್ರಕ್ಕೆ ಪರಮಾತ್ಮ ಸುಖವು ಸಿಕ್ಕಲಾರದು. ಆದರೆ ಈಗಿನ ಪರಿಸ್ಥಿತಿಯನ್ನು ನೋಡಿದರೆ ಎಲ್ಲವೂ ವಿಪರೀತನೇ. 'ಕಲೌ ವೇದಾಂತಿನೋ ಭಾಂತಿ ಫಾಲ್ಗುಣೇ ಬಾಲಕಾ ಇವ' ಎಂಬದು ಸುಪ್ರಸಿದ್ಧವಾಗಿದೆ. ಪಂಚದಶೀ ಮೊದಲಾದ ಹಲಕೆಲವು ಗ್ರಂಥಗಳನ್ನೋದಿಕೊಂಡು, ವೇದಾಂತ ವಿಷಯವಾಗಿ ಮಾತಾಡಲಿಕ್ಕೆ ಕಲಿತರೆಂದರೆ, ತಾವು ಕೃತಾರ್ಥರಾದೆವೆಂದು ತಿಳಿದುಕೊಳ್ಳುವವರೇ ಬಹಳ ಜನ. ಕ್ರಿಯೆಯಿಲ್ಲದ ಮಾತು ವ್ಯರ್ಥನೆಂಬದನ್ನು ಅವರು ಮರೆತು ಬಿಟ್ಟಿರುತ್ತಾರೆ. ಪ್ರತ್ಯಕ್ಷ ಕೃತಿಯ ಮಾತು ಒಂತೆಂದರೆ ಇಂತಹ ಜನರ ಹೂರಣವು ಹೊರಬೀಳುತ್ತದೆ.

ನಮ್ಮ ಚರಿತ್ರನಾಯಕರು ಸಿಜವಾದ ವೇದಾಂತಿಗಳ ಗುಂಪಿಗೆ ಸೇರಿದವರು. ಅವರು ಜನ್ಮತಃ ವಿರಕ್ತರು. ಹೊರಗೆ ಕರ್ಮೇಂದ್ರಿಯಗಳನ್ನು ಮಾತ್ರ ನಿರೋಧಮಾಡಿ ಮನಸ್ಸಿನಲ್ಲಿ ವಿಷಯ ಸುಖವನ್ನು ಬಯಸುವ ಮಿಥ್ಯಾಚಾರ ಅಥವಾ ದುರುಳ ವೇದಾಂತವು ಅವರಲ್ಲಿರಲಿಲ್ಲ. ಅಥವಾ ತಿಳಿಗೇಡಿತನದಿಂದ ಇಲ್ಲದ್ದನ್ನು ನಂಬಿ ಜೇಕುದೇಕಾದಂತೆ ನಡೆಯುವ ಮರುಳ ವೇದಾಂತವೂ ಅವರಲ್ಲಿರಲಿಲ್ಲ. ಆದರೆ ಮನಸ್ಸಿನಿಂದಲೇ ವಿರಕ್ತರಾಗಿ ಇಂದ್ರಿಯಗಳನ್ನು ನಿರೋಧಮಾಡಿ ನಡೆಯುವ ಸರಳ ವೇದಾಂತವು ಅವರ

ಸ್ವಭಾವವಾಗಿತ್ತು. ಅವರ ಈ ಸತ್ವವನ್ನು ಪರೀಕ್ಷಿಸುವ ಕಾಲವು ಧಾರವಾಡದಲ್ಲಿರುವಾಗಲೇ ಒಂದು ಸಲ ಉಪಸ್ಥಿತವಾಯಿತು.

ಟ್ರೇನಿಂಗ ಕಾಲೇಜದ ಮೊದಲನೆಯ ವರುಷದ ಪರೀಕ್ಷೆಯು ಮುಗಿದು ಹೋಗಿತ್ತು. ಸೂಟಿಯು ಮುಗಿದ ಮೇಲೆ ಮಹಾರಾಜರು ಎರಡನೆಯ ವರುಷದ ಮೊದಲನೆಯ ಸಣ್ಣಾಸಕ್ಕೆಂದು ಧಾರವಾಡಕ್ಕೆ ಬಂದಿದ್ದರು. ಮೊದಲಿನಂತೆ ಗೆಳೆಯರಾದ ಶ್ರೀ ಗೋವಿಂದರಾವ ಘಾಟಕ ಮತ್ತು ಬಂಬುಳವಾಡ ಇವರೊಡನೆ ಮಹಾರಾಜರು ಮದೀಹಾಳದಲ್ಲಿಯೇ ಇರಹತ್ತಿದರು. ಶ್ರೀ ಬಂಬುಳವಾಡ ಅವರ ಅಕ್ಕನು ಸಂಗಡ ಇದ್ದುದರಿಂದ ಅವರಿಗೆ ಅಡಿಗೆಯ ಚಿಂತೆಯು ಇರಲಿಲ್ಲ ಈ ಸಲವಾದರೂ ಅವರು ವೇ ಗೋಡ ಮಂಡಿ ಭಾವೂಭಟ್ಟರ ಮನೆಯ ಭಾಗದಲ್ಲಿಯೇ ಇರಹತ್ತಿದರು

ಭಾವೂಭಟ್ಟರ ಆಪ್ತರೊಳಗೆ ೧೬—೧೭ ವರುಷದ ಒಬ್ಬ ಕನ್ನಿಕೆಯಿದ್ದಳು. ಅವಳು ನೋಡಲಿಕ್ಕೆ ಸುಂದರಳಾಗಿದ್ದಂತೆ ಆಚಾರ-ವಿಚಾರದಿಂದಲೂ ಸುಶೀಲೆಯಾಗಿದ್ದಳು. ಅವಳ ತಾಯಿ-ತಂದೆಗಳು ಅವಳಿಗಾಗಿ ಯೋಗ್ಯನಾದ ವರನನ್ನು ಹುಡುಕಾಡಲಾರಂಭಿಸಿದ್ದರು. ಒಂದು ದಿನ ಭಾವೂಭಟ್ಟರ ಮನಸ್ಸಿನ ಮುಂದೆ ಮಹಾರಾಜರ ಮೂರ್ತಿಯು ಅಕಸ್ಮಾತ್ತಾಗಿ ಬಂತು ಮಹಾರಾಜರ ಸೌಜನ್ಯ-ಶೀಲ-ಸ್ವಭಾವಗಳಿಗೆ ಭಾವೂಭಟ್ಟರು ಮುಗ್ಧರಾಗಿದ್ದರು. ತಮ್ಮ ಪರಿಚಯದ ಕನ್ನಿಕೆಗೆ ಮಹಾರಾಜರು ಎಲ್ಲ ರೀತಿಯಿಂದಲೂ ಸರಿಯಾದ ಜೋಡಿಯಾಗುವರೆಂದು ಅವರಿಗೆ ತೋಚಿತು ಅವರು ಕೂಡಲೇ ಕನ್ನಿಕೆಯ ತಾಯಿ-ತಂದೆಗಳಿಗೆ ಈ ವಿಚಾರವನ್ನು ತಿಳಿಸಿದರು. ಹುಡುಗಿಯು ಉಪವರಳಾಗಿದ್ದು ಅವಳಿಗೆ ಅನುರೂಪನಾದ ವರನು ಸಿಕ್ಕಲೊಲ್ಲನೆಂದು ಚಿಂತೆಗೆ ಒಳಗಾದ ತಾಯಿ-ತಂದೆಗಳು ಈ ಮಾತಿಗೆ ಕೂಡಲೇ ಒಪ್ಪಿಕೊಂಡರು. ಭಾವೂಭಟ್ಟರು ಮಹಾರಾಜರ ಸ್ನೇಹಿತರ ಕಡೆಯಿಂದ ಅವರ ಗೋತ್ರ, ನಕ್ಷತ್ರ, ಪ್ರವರ ಮೊದಲಾದವುಗಳನ್ನು ತಿಳಿದುಕೊಂಡರು. ಎಲ್ಲ ಸಂಗತಿಗಳೂ ಕೂಡಿ ಬಂದವು ಆಗ ಭಾವೂಭಟ್ಟರು ಮಹಾರಾಜರ ಗೆಳೆಯರ ಮುಂದೆ ಈ ವಿಚಾರವನ್ನು ಮಂಡಿಸಿದರು. ಅವರಿಗೂ ಈ ಮಾತು ಸಮ್ಮತವಾಯಿತು. ಮಹಾರಾಜರ ಮನೆಯವರಿಗಾದರೂ ಮಹಾರಾಜರ ಲಗ್ನವನ್ನು ಆದಷ್ಟು ತೀವ್ರ ಮಾಡಬೇಕಾಗಿರುವ

ದೆಂದೂ; ಇಂತಹ ಕನ್ಯೆಯು ಸಿಕ್ಕರೆ ಅವರು ಲಗ್ನಕ್ಕೆ ತಮ್ಮ ಸಮ್ಮತಿಯನ್ನು ಕೊಟ್ಟೇ ಕೊಡುವರೆಂದೂ ಅವರು ಅಭಿಪ್ರಾಯಪಟ್ಟರು. ಮಹಾರಾಜರಿಗೆ ವಧುವನ್ನೊಮ್ಮೆ ತೋರಿಸಬೇಕೆಂದೂ, ಅವರಿಗೆ ಸಮ್ಮತವಾದರೆ ಮನೆಯವರಿಗೆ ಪತ್ರ ಬರೆದು ಲಗ್ನವನ್ನು ನಿಶ್ಚಯಿಸಬೇಕೆಂದೂ ನಿರ್ಣಯವಾಯಿತು. ವಧೂಪರೀಕ್ಷೆಗೆ ಮಹಾರಾಜರನ್ನು ಕರಕೊಂಡು ಬರುವ ಕೆಲಸವು ಸ್ವಾಭಾವಿಕವಾಗಿಯೇ ಅವರ ಗೆಳೆಯರ ವಾಲಿಗೆ ಬಂತು. ಗೆಳೆಯರೂ ಆ ಕೆಲಸವನ್ನು ಮಾಡುವೆವೆಂದು ಸಂತೋಷದಿಂದಲೇ ಒಪ್ಪಿಕೊಂಡರು.

ಅನುಕೂಲ ಸಂಧಿಯನ್ನು ಸಾಧಿಸಿ ಗೋವಿಂದರಾಯರು ಬಂಬುಳ ನಾಡ ಅವರೊಡನೆ ಈ ಮಾತನ್ನು ಮಹಾರಾಜರ ಮುಂದೆ ತೆಗೆದರು:— "ರಾಮಭಟ್ಟರೇ, ನಿಮ್ಮ ದೈವವು ಚೆನ್ನಾಗಿದೆ. ಕುಲೀನರಾದ ವೈದಿಕ ಬ್ರಾಹ್ಮಣರೊಬ್ಬರು ತಮ್ಮ ಉಪವರ್ಧಾದ ಸುಂದರ ಕನ್ನಿಕೆಯನ್ನು ನಿಮಗೆ ಕೊಡಬೇಕೆಂದು ವಿಚಾರ ಮಾಡಿದ್ದಾರೆ. ನಿಮ್ಮ ವಯಸ್ಸಾದರೂ ಲಗ್ನಕ್ಕೆ ಯೋಗ್ಯವಾಗಿದೆ. ಕನ್ಯೆಯು ನಿಮಗೆ ಎಲ್ಲ ರೀತಿಯಿಂದಲೂ ತಕ್ಕವಳಾಗಿದ್ದಾಳೆ. ಯೋಗಾಯೋಗವೂ ತಾನಾಗಿ ಕೂಡಿ ಬಂದಿದೆ ಇಲ್ಲವೆ ಆಕ್ಷೇಪಗಳನ್ನೆತ್ತದೆ ಕನ್ನೆಯನ್ನು ನೋಡಿರಿ. ಹುಡುಗೆಯು ನಿಮ್ಮ ಮನಸ್ಸಿಗೆ ಬಂದಳೆಂದರೆ ಮುಂದಿನ ಕೆಲಸವೆಲ್ಲ ನಮ್ಮದು. ನಾಳಿನ ದಿವಸವೇ ನಕ್ಷತ್ರವು ಚೆನ್ನಾಗಿದೆ. ನಾಳೆಯೇ ಅವಳನ್ನು ನಿಮ್ಮ ಕಣ್ಣಿಗೆ ಹಾಕಬೇಕೆಂದು ಮಾಡಿದ್ದೇವೆ. ನಿಮ್ಮ ಒಪ್ಪಿಗೆ ಸಿಕ್ಕ ಮೇಲೆ ನಿಮ್ಮ ಮನೆಯವರಿಗೂ ಪತ್ರ ಬರೆದು ತಿಳಿಸಿ, ಮುಂದಿನ ಉದ್ಯೋಗಕ್ಕೆ ಹತ್ತುವೆವು. ಹುಡುಗೆಯು ದೊಡ್ಡವಳಾಗಿರುವಳು. ಅವಳ ತಾಯಿ-ತಂದೆಗಳಿಗೆ ಅವಳ ಲಗ್ನವನ್ನು ಮುಂದೆ ಹಾಕುವದು ಶಕ್ಯವಿಲ್ಲ. ಈಗ ಚೈತ್ರವಾಸವಿದೆ. ಮುಂದಿನ ತಿಂಗಳಲ್ಲಿ ವಿವಾಹವನ್ನು ನಿಶ್ಚಯಿಸಬಹುದು. ಆದರೆ ನೀವು ಮಾತ್ರ ಮೊದಲು ವಧುವನ್ನು ನೋಡಿ ಸಮ್ಮತಿಯನ್ನು ಕೊಡಬೇಕು."

ಮಹಾರಾಜರು ಗೆಳೆಯರ ಮಾತುಗಳನ್ನು ಶಾಂತರೀತಿಯಿಂದ ಕೇಳಿಕೊಂಡರು. ಅವರ ಪ್ರೇಮಪೂರ್ಣವಾದ ಸದಿಚ್ಛೆಯನ್ನು ಒಮ್ಮೆಲೇ ನಿರಾಕರಿಸುವುದು ಮಹಾರಾಜರಿಗೆ ಕಠಿಣವಾಯಿತು. ಮಹಾರಾಜರ

ಕೋಮಲವಾದ ಹೃದಯಕ್ಕೆ ಇಂತಹ ನಿರ್ದಯತನವನ್ನೂ ಕಠೋರತೆಯನ್ನೂ ತೋರಿಸುವುದು ಅಶಕ್ಯವಾಗಿತ್ತು. 'ಅರುಭಸ್ಯ ಕಾಲಹರಣಂ' ಎಂಬಂತೆ ಅವರು ಹೇಗಾದರೂ ಇಂದಿನ ಪ್ರಸಂಗವನ್ನು ಮುಂದೆ ಹಾಕಬೇಕೆಂದು ಯೋಚಿಸಿದರು. ಆದುದರಿಂದ ಅವರು ಸ್ನೇಹಿತರಿಗೆ:— 'ಒಳ್ಳೇದು. ನಿಮ್ಮ ಸೂಚನೆಯಂತೆ ನಾಳಿನ ದಿವಸ ಕನ್ನೆಯನ್ನು ನೋಡೋಣ. ಆ ಮೇಲೆ ಅಭಿಪ್ರಾಯವನ್ನು ನಿಮಗೆ ತಿಳಿಸುವೆನು' ಎಂದು ಹೇಳಿದರು. ಮಿತ್ರರಿಗೆ ಈ ಮಾತಿನಿಂದ ಸಂತೋಷವಾಯಿತು. ಹಿಂದಿನ ಪರುಷ ಧಾರವಾಡಕ್ಕೆ ಬರುವಾಗ ಮಹಾರಾಜರು ಮಾಡಿದ ನಿಶ್ಚಯವು ಈಗ ಉಳಿದಿಲ್ಲವೆಂದು ಅವರಿಗೆ ಆನಂದವಾಯಿತು. ಮತ್ತು ಅವರ ಆಗಿನ ವಿಚಾರಗಳೆಲ್ಲ ಇಂದು ಸುದೈವದಿಂದ ಬದಲಾಗಿರುವವೆಂದೂ, ಆದುದರಿಂದ ಅವರ ಲಗ್ನವನ್ನು ಸುಲಭವಾಗಿ ನಿಶ್ಚಯಿಸಿ ನಿರ್ವಿಘ್ನವಾಗಿ ಕೊನೆಗಾಣಿಸಬಹುದೆಂದೂ ಅವರು ಆಸೆ ತಳೆದರು. ಪಾಪ! ಅವರಿಗೇನು ಗೊತ್ತು ದೈವದ ವಿಚಿತ್ರವಾದ ಆಟವು.

ಮರುದಿನವು ನಿಶ್ಚಿತವಾದಂತೆ ವಧೂಪರೀಕ್ಷೆಯು ನಡೆಯಿತು. ಭಾವೂ ಭಟ್ಟರು ಕನ್ನೆಯನ್ನು ಕರೆತಂದು ಮಹಾರಾಜರಿಗೆ ತೋರಿಸಿದರು. ಮನಸ್ಸಿಲ್ಲದಿದ್ದರೂ ಮಹಾರಾಜರು ಒಳ್ಳೇ ಆಸ್ಥೆಯಿದ್ದವರಂತೆ ಆ 'ಫಾರ್ಸಿ'ನಲ್ಲಿ ಭಾಗತೆಗೆದುಕೊಂಡರು. ಲಜ್ಜಾಶೀಲಳಾದ ಕನ್ನೆಯು ಅಂಜುತ್ತಂಜುತ್ತ ಬಂದು ಎಲ್ಲರಿಗೂ ನಮಸ್ಕಾರಮಾಡಿ ಕುಳಿತಳು. ಮಹಾರಾಜರ ಗೆಳೆಯರು ಅವಳಿಗೆ ಒಂದೆರಡು ಪ್ರಶ್ನೆಮಾಡಿ ಮಾತಾಡಿಸಿ ನೋಡಿದರು. ಮಹಾರಾಜರಂತೂ ಒಂದೇ ಸವನೆ ಕುಲುಕುಲು ನಗುತ್ತಿದ್ದರು. ವಧೂಪರೀಕ್ಷೆಯು ಮುಗಿಯಿತು. ವಧುವು ಮತ್ತೊಮ್ಮೆ ನಮಸ್ಕಾರಮಾಡಿ ಒಳಕ್ಕೆ ಹೊರಟು ಹೋದಳು. ಆ ಮೇಲೆ ಉಪಹಾರದ ವ್ಯವಸ್ಥೆಯಾಯಿತು. ಮಹಾರಾಜರು ಎಲ್ಲವನ್ನೂ ಸುಮ್ಮನೇ ಸಹನೆ ಮಾಡಿದರು. ಅವರು ಆಗ ತೋರಿಸುತ್ತಿದ್ದ ಆಸ್ಥೆಯು ಕೃತಕವಾದುದೆಂಬದು ಯಾರಿಗೂ ಹೊಳೆಯಲಿಲ್ಲ. ಅವರ ಅಂದಿನ ಆಚರಣೆಯನ್ನು ನೋಡಿ ಎಲ್ಲರೂ ಮೋಸ ಹೋದರು. ಅವರ ಮಿತ್ರರಂತೂ – 'ಇವರ ಹಿಂದಿನ ವಿಚಾರಗಳೆಲ್ಲ ಓಡಿಹೋಗಿರುವವು. ಇವರ ಮುಖಮುದ್ರೆಯನ್ನು ನೋಡಿದರೆ ವಧುವು ಮನಸ್ಸಿಗೆ ಬಂದಿರುವಳೆಂಬದು

ಬೇಕಾದವರಿಗೂ ತಿಳಿಯುವಂತಿದೆ. ಇನ್ನೇನು ಮದುವೆಗೆ ತಡವಿಲ್ಲ' ಎಂದು ಉದ್ಗಾರ ತೆಗೆದರು. ಮತ್ತು ಆ ತರದ ಅಭಿಪ್ರಾಯವನ್ನು ಭಾವ-ಭಟ್ಟರಿಗೂ ಕನ್ನೆಯ ತಾಯಿ-ತಂದೆಗಳಿಗೂ ತಿಳಿಸಿದರು. ಮರುದಿನವೇ ನಿಶ್ಚಯ ಮಾಡಬೇಕೆಂದೂ ನಿರ್ಣಯವಾಯಿತು. ಹೀಗೆ ಅನಿರೀಕ್ಷಿತವಾಗಿ ಪರೀಕ್ಷೆಯ ಪ್ರಸಂಗವೇ ಬಂದು ಕುಳಿತಿತು. ಆದರೂ ಆಗ ಮಹಾರಾಜರು ಪಿಟ್ಟೆಂದು ಮಾತಾಡಲಿಲ್ಲ.

ಕನ್ಯಾಪರೀಕ್ಷೆಯ ಪ್ರಸಂಗವು ಮುಗಿದು ಹೋಗಿ ಎಲ್ಲವೂ ಶಾಂತವಾದ ಮೇಲೆ ಮಹಾರಾಜರು ರಾತ್ರಿ ಹೊತ್ತಿನಲ್ಲಿ ವಿಚಾರ ಮಾಡಹತ್ತಿದರು: — 'ಎಲ ! ಇದೇನು ? ಒಳ್ಳೆಯದು, ಆಗುವದೆಲ್ಲ ನಮ್ಮ ಹಿತಕ್ಕಾಗಿಯೇ ಆಗುತ್ತದೆ. ಎಲ್ಲವೂ ಚಿದಂಬರನ ಇಚ್ಛೆ ! ಆದರೆ ನಾನು ಮಾತ್ರ ನನ್ನ ಮೊದಲಿನ ನಿಶ್ಚಯವನ್ನು ಬಿಡಬಾರದು. ಈಗ ನಾನು ಧೈರ್ಯವನ್ನು ತೋರಿಸದೆ ಕಾಲ್ತೆಗೆದರೆ, ಕೊನೆಯ ವರೆಗೂ ಸಂಸಾರದಲ್ಲಿ ಸಿಕ್ಕಿ ಬೀಳ ಬೇಕಾಗುವದು. 'ಉದ್ಧರೇದಾತ್ಮನಾತ್ಮಾನಂ' ಎಂದು ಗೀತೆಯು ಹೇಳುತ್ತದೆ. ನಮ್ಮ ನಮ್ಮ ಏರಿಳಿತಗಳಿಗೆ ನಾವೇ ಹೊಣೆಗಾರರು. ಜನರ ಆಗ್ರಹಕ್ಕೆ ಒಳಗಾಗುವದು ಒಳಿತಲ್ಲ. ನಾನು ಎರಡನೆಯವರ ಸಲುವಾಗಿ ನನ್ನ ಜೀವನದ ಧ್ಯೇಯವನ್ನು ಬಿಟ್ಟುಕೊಡುವದು ಸರಿಯಲ್ಲ. ಆತ್ಮೋದ್ಧಾರ ಮತ್ತು ಲೋಕಸಂಗ್ರಹಗಳೇ ನನ್ನ ಜೀವನದ ಸಾಧ್ಯವಾಗಿವೆ ಸಂಸಾರದಲ್ಲಿ ಕಾಲಿಟ್ಟರೆ ಇವೆರಡಕ್ಕೂ ತಿಲಾಂಜಲಿ ಕೊಡಬೇಕಾಗುತ್ತದೆ. ಮತ್ತು ಒಮ್ಮೆ ಅಲ್ಲಿ ಸಿಕ್ಕಿಬಿದ್ದರೆ, ಅದರೊಳಗಿಂದ ಹೊರಬೀಳುವದೂ ಕಠಿಣವೇ ಸರಿ. ಆದುದರಿಂದ ನನ್ನ ಮೊದಲಿನ ನಿಶ್ಚಯದಂತೆ ಲಗ್ನದ ಪಾಶದಲ್ಲಿ ಬೀಳದೆ ಆಮರಣ ಬ್ರಹ್ಮಚರ್ಯ ವ್ರತವನ್ನು ಪಾಲಿಸುವದೇ ಒಳ್ಳೆಯದು. ಇನ್ನು ಲಗ್ನಕ್ಕೆ ಒಲ್ಲೆನೆಂದರೆ ಎಲ್ಲರಿಗೂ ದುಃಖವಾಗುವದೆಂಬುದೇನೋ ಸರಿ. ಕನ್ನೆಯ ತಾಯಿ-ತಂದೆಗಳಿಗೆ ಕೆಡಕೆನಿಸಬಹುದು. ಮಿತ್ರರೂ ಮನೆಯವರೂ ಕೋಪಿಸಿಕೊಂಡು ಒಳ್ಳೇ ಆಗ್ರಹವನ್ನೂ ಮಾಡಬಹುದು. ಆದರೆ ಏನು ಬೇಕಾದ್ದಾದರೂ ಸರಿ, ನಾನು ಮಾತ್ರ ನನ್ನ ಜೀವನದ ಧ್ಯೇಯದಿಂದ ಚ್ಯುತನಾಗಬಾರದು. ಆದುದರಿಂದ ಯಾರಿಗೂ ತಿಳಿಯದಂತೆ ತೀರ್ಥಯಾತ್ರೆಗೆ ಹೊರಟು ಹೋಗಿ ಬಿಟ್ಟರೆ, ಲೌಕಿಕದ ಉಪಾಧಿಗಳೂ ತಪ್ಪುವವು.

ಆಯಿತು. ಇದೇ ನನ್ನ ಪರಮ ನಿರ್ಣಯವು ! ಜಯ ಚಿದಂಬರ ! ಜಯ ಶ್ರೀ ಸ್ವಾಮೀಸಮರ್ಥ ! ನೀನೇ ನನಗೆ ಧೈರ್ಯಕೊಟ್ಟು ಇದರೊಳಗಿಂದ ಪಾರುಮಾಡಬೇಕೆಂದು ಬೇಡಿಕೊಳ್ಳುವೆನು.'

ಈ ನಿಶ್ಚಯಕ್ಕನುಸಾರವಾಗಿ ಮಹಾರಾಜರು ಯಾರಿಗೂ ತಿಳಿಯಗೊಡದಂತೆ ಒಂದು ಕಿವಿಟೊಪ್ಪಿಗೆಯನ್ನೂ ಒಂದು ಕಪನಿಯನ್ನೂ ಹೊಲಿಸಿ ತಂದರು. ಮತ್ತು ಬೆಳಗು ಮುಂಜಾನೆ ಇನ್ನೂ ಎರಡು ತಾಸು ರಾತ್ರಿ ಇರುವಾಗಲೇ ಎದ್ದು, ಮೈತುಂಬ ಭಸ್ಮ ಬಳಕೊಂಡರು. ಕಂಠದಲ್ಲಿ ರುದ್ರಾಕ್ಷಿಯ ಮಾಲೆಗಳನ್ನು ಧಾರಣೆ ಮಾಡಿದರು. ಮತ್ತು ಕಪನಿಯನ್ನೂ ಟೊಪ್ಪಿಗೆಯನ್ನೂ ಹಾಕಕೊಂಡು ತಮ್ಮ ವೇಷವನ್ನು ಬದಲಿಸಿ 'ಶಿವ ಚಿದಂಬರ' ಎಂದು ನಾಮಗರ್ಜನೆ ಮಾಡುತ್ತ ಕುಳಿತುಬಿಟ್ಟರು. ಮರುದಿವಸ ಮುಂಜಾನೆ ಧಾವೂಭಟ್ಟ ಮೊದಲಾದವರು ಲಗ್ನದ ನಿಶ್ಚಯಕ್ಕೆಂದು ಬಂದುಬಿಟ್ಟರು. ಅವರಿಗೆಲ್ಲ ಮಹಾರಾಜರ ಈ ವೇಷಾಂತರವನ್ನು ನೋಡಿ ಆಶ್ಚರ್ಯ ಕೋಪಗಳುಂಟಾದವು. 'ಇದೇನು ಇಲ್ಲದ ಗೊಂದಲವನ್ನು ಹೂಡಿರುವಿರಿ ?' ಎಂದು ಇವರಿಗೆ ಎಲ್ಲರೂ ಪ್ರಶ್ನೆಗಳ ಸುರಿಮಳೆ ಮಾಡಹತ್ತಿದರು. ಅದಕ್ಕೆ ಮಹಾರಾಜರು ಏನೂ ಉತ್ತರಕೊಡಲಿಲ್ಲ. 'ಶಿವಚಿದಂಬರ, ಶಿವಚಿದಂಬರ' ಎಂಬಿಷ್ಟೇ ಶಬ್ದಗಳು ಮಾತ್ರ ಮಹಾರಾಜರ ಮುಖದಿಂದ ಹೊರಡುತ್ತಿದ್ದವು. ಕೂಡಿದ ಜನರಲ್ಲಿ ತಲೆಗೊಬ್ಬರು ಮನಸ್ಸಿಗೆ ಬಂದಂತೆ ಮಾತಾಡಹತ್ತಿದರು. ಆದರೂ ಮಹಾರಾಜರು 'ಶಿವಚಿದಂಬರ'ದಿಂದ ಕದಲಲಿಲ್ಲ. ಎಷ್ಟು ಹೊತ್ತಾದರೂ ಮಹಾರಾಜರ ವೃತ್ತಿಯಲ್ಲಿ ಎಷ್ಟೂ ಹೆಚ್ಚು ಕಡಿಮೆಯಾಗಲಿಲ್ಲ. ಜನರೆಲ್ಲ ಆದರಿಂದ ಬೇಸತ್ತು ತಮ್ಮ ತಮ್ಮ ಮನೆಯ ದಾರಿ ಹಿಡಿದರು. ಅವರು ಹೊರಟು ಹೋದ ಮೇಲೆ ಮಹಾರಾಜರು ತಮ್ಮ ಹತ್ತರಿದ್ದ ಅರಿವೆ ಅಂಚಡಿ ಮೊದಲಾದ ಎಲ್ಲ ಸಾಮಾನುಗಳನ್ನು ಬಡ ವಿದ್ಯಾರ್ಥಿಗಳಿಗೆ ಹಂಚಿಕೊಟ್ಟರು. ಮತ್ತು ಲಗ್ನದ ಸಂಕಟ ದೂರಾದುದಕ್ಕಾಗಿ ಆನಂದದಿಂದ ಚಿದಂಬರನ ನಾಮಸ್ಮರಣೆಯನ್ನು ಉಚ್ಚಸ್ವರದಿಂದ ಮಾಡಹತ್ತಿದರು. ಮಧ್ಯಾಹ್ನವಾಯೊಡನೆ ಎದ್ದು ಸ್ನಾನಮಾಡಿ ಮಾಧುಕರೀ ಬೇಡಿಕೊಂಡು ಬಂದು ಊಟಮಾಡಿದರು ಊಟವಾದ ಮೇಲೆ ಮತ್ತೆ ಮುಂಜಾವಿನಂತೆ ಧ್ಯಾನಸ್ಥರಾಗಿ ಕುಳಿತು 'ಶಿವಚಿದಂಬರ, ಶಿವಚಿದಂಬರ'

ಎಂದು ಗರ್ಜನೆ ಮಾಡಹತ್ತಿದರು. ಜನರು ಅವರ ವಿಚಿತ್ರವಾದ ಆಚರಣೆಯ ಸಂಗತಿಯನ್ನು ಕರ್ಣೋಪಕರ್ಣವಾಗಿ ಕೇಳಿ ಗುಂಪುಕಟ್ಟಿಕೊಂಡು ಅಲ್ಲಿಗೆ ಬರಹತ್ತಿದರು. ಜನರ ಸಂಖ್ಯೆಯು ಮಿತಿಮೀರಿತು. ಕೂಡಿದ ಜನರೊಳಗೆ ಕೆಲವರು ವಯೋವೃದ್ಧರೂ ಅನುಭವಿಗಳೂ ಇದ್ದರು. ಅವರು ಮಹಾರಾಜರಿಗೆ ಒತ್ತಿ ಒತ್ತಿ ಉಪದೇಶ ಮಾಡಹತ್ತಿದರು:— 'ನೀವು ಲಗ್ನ ಮಾಡಿಕೊಳ್ಳದಿದ್ದರೆ ಬಿಡಿರಿ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ನೀವು ಅಭ್ಯಾಸಬಿಟ್ಟು ಸಂನ್ಯಾಸ ತಕ್ಕೊಳ್ಳುವದು ಸರಿಯಲ್ಲ ಈ ಸಂಗತಿಯು ನಿಮ್ಮ ವೃದ್ಧ ತಾಯಿ-ತಂದೆಗಳಿಗೆ ತಿಳಿದರೆ ಅವರಿಗೆ ಎಷ್ಟು ದುಃಖವಾದೀತೆಂಬದರ ಕಲ್ಪನೆ ಮಾಡಿರಿ. ವ್ಯರ್ಥವಾಗಿ ಹಟವಾಡುವದು ತರವಲ್ಲ. ಇಲ್ಲದ ಈ ಸೋಗು ಬಿಟ್ಟು ಮುಂದಿನ ನಿಮ್ಮ ಆಯುಷ್ಯವೆಲ್ಲ ಸುಖಮಯವಾಗುವಂತೆ ನಡೆಯಿರಿ. ಸದ್ಯಕ್ಕೆ ಸುಮ್ಮನೇ ನಿಮ್ಮ ನಿತ್ಯಕ್ರಮವನ್ನನುಸರಿಸಿ ಕಾಲೇಜಕ್ಕೆ ಹೋಗಿರಿ.'

ಆದರೆ ಈ ಉಪದೇಶದ ಪರಿಣಾಮವು ಮಹಾರಾಜರ ಮನಸ್ಸಿನ ಮೇಲೆ ಎಳ್ಳಷ್ಟೂ ಆಗಲಿಲ್ಲ. ಅವರು ಎಲ್ಲಕ್ಕೂ 'ಶಿವಚಿದಂಬರ, ಶಿವಚಿದಂಬರ'ವೆಂಬ ಒಂದೇ ಉತ್ತರವನ್ನು ಕೊಡುತ್ತಿದ್ದರು. ಸಾಯಂಕಾಲದೊಳಗಾಗಿ ಈ ವೇಷಾಂತರದ ಸುದ್ದಿಯು ಊರೊಳಗೆಲ್ಲ ಹಬ್ಬಿತು. ಅವರ ಮಿತ್ರರು, ಕಾಲೇಜದೊಳಗಿನ ಸಹಾಧ್ಯಾಯಿಗಳು ಮತ್ತು ಉಳಿದ ಭಾವಿಕ ಜನರು ತಂಡತಂಡವಾಗಿ ಅವರ ದರುಶನಕ್ಕೆಂದು ಧಾವಿಸಿ ಬರಹತ್ತಿದರು. ಆದರೆ ಏನೇ ಆದರೂ ಮಹಾರಾಜರು ತಮ್ಮ ತುಟಿ ಎರಡು ಮಾಡಲಿಲ್ಲ.

ಶ್ರೀ ಚಿದಂಬರನು ಮಹಾರಾಜರ ಈ ದೃಢನಿಶ್ಚಯದಿಂದ ಸಂತುಷ್ಟನಾದನು. ತನ್ನ ಭಕ್ತನ ಮಹಾತ್ಮ್ಯವನ್ನು ಪ್ರಕಟಮಾಡಬೇಕೆಂದು ಅವನು ಬಯಸಿದನು. ತನ್ನ ಭಕ್ತನಿಗಾಗುವ ತೊಂದರೆಗಳನ್ನು ಅವನು ಸುಮ್ಮನೇ ನೋಡುವದಾದರೂ ಎಷ್ಟೊತ್ತು ? ಇಪ್ಪರಲ್ಲಿ ೩-೪ ದಿನಗಳು ಕಳೆದು ಹೋದವು. ಟ್ರೇನಿಂಗ ಕಾಲೇಜದೊಳಗಿನ ಶಿಕ್ಷಕರಿಗೂ ಮಹಾರಾಜರ ಸಂಗತಿಯು ಗೊತ್ತಾಯಿತು. ಅವರೊಳಗೆ ವೇ. ರಾಮಚಂದ್ರಶಾಸ್ತ್ರಿ ನರೀಗಲ್ಲ ಎಂಬವರೂ ಒಬ್ಬರು. ಅವರದು ಮಹಾರಾಜರ ಮೇಲೆ ವಿಶೇಷ

ಪ್ರೇಮವಿತ್ತು. ಮಹಾರಾಜರ ಸಂನ್ಯಾಸದ ಸುದ್ದಿಯನ್ನು ಕೇಳಿ ಅವರು ಗಡಿಬಿಡಿಯಿಂದ ಬಂದರು ಪುದೀಹಾಳಕ್ಕೆ ಬಂದು ವಿಚಾರಿಸಿದ ಮೇಲೆ ೩–೪ ದಿನಗಳಿಂದ ಮಹಾರಾಜರು ತಾವು ಕುಳಿತ ಸ್ಥಳಬಿಟ್ಟು ಕದಲಿಲ್ಲೆಂದು ಅವರಿಗೆ ಗೊತ್ತಾಯಿತು. ಈ ಮಾತನ್ನು ಕೇಳಿ ಅವರು ಆಶ್ಚರ್ಯದಿಂದ ಬಟ್ಟು ಕಚ್ಚಿದರು. ಇಷ್ಟು ದಿನಗಳ ವರೆಗೆ ಮಹಾರಾಜರು ಕಾಲೇಜಕ್ಕೆ ಹೋಗಿರಲಿಲ್ಲೆಂಬದು ಸ್ಪಷ್ಟವಿತ್ತು. ಆದರೆ ತಾವು ಕಲಿಸುತ್ತಿರುವಾಗ ಮಹಾರಾಜರು ಯಥಾಪ್ರಕಾರ ತಮ್ಮ ವರ್ಗದಲ್ಲಿ ಮೂರ್ತಿಮಂತಾಗಿ ಕುಳಿತದ್ದನ್ನು ಅವರು ನೋಡಿದ್ದರು ! ತಮ್ಮ ಹಾಜರಿ ಪುಸ್ತಕದಲ್ಲಿ ಮಹಾರಾಜರು ಹಾಜರ ಇರುವರೆಂದು ಗುರುತು ಮಾಡಿದ್ದರು. ಈ ಮಾತನ್ನು ಅವರು ಕೂಡಿದ ಜನರಿಗೆಲ್ಲ ಹೇಳಿಕೊಟ್ಟರು. ಅದರಿಂದಂತೂ ಜನರಿಗೆಲ್ಲ ಇನ್ನೂ ಹೆಚ್ಚೆಚ್ಚು ಆಶ್ಚರ್ಯವಾಗಹತ್ತಿತು. ಅದರಿಂದ ಮಹಾರಾಜರು ಸಾಮಾನ್ಯರಲ್ಲೆಂಬದನ್ನು ಎಲ್ಲರೂ ಮನಗಂಡಂತಾಯಿತು.

ಮರುದಿವಸ ಕಾಲೇಜದ ವ್ಯಾಯಿಸ ಪ್ರಿನ್ಸಿಪಾಲರಾದ ಶ್ರೀ ಅಣ್ಣಾರಾವ ಸವದೀ, ಶ್ರೀ ಭುಜಂಗರಾವ ಹುಯಿಲಗೋಳ ಮತ್ತು ಶ್ರೀ ಗೋವಿಂದರಾವ ವಕೀಲರು ಮಹಾರಾಜರ ಭೆಟ್ಟಿಗೆ ಬಂದರು. ಅವರೆಲ್ಲರು ವ್ಯವಹಾರ ಕುಶಲರೂ, ಅನುಭವಿಕರೂ ಆದವರು ಅವರು ಮಹಾರಾಜರ ಸಮಾಚಾರವನ್ನು ಚೆನ್ನಾಗಿ ತಕ್ಕೊಳ್ಳಬೇಕೆಂಬ ಸಂಕಲ್ಪದಿಂದಲೇ ಬಂದವರು. ಅವರು ನಿಷ್ಠುರತೆಯಿಂದಲೂ ಕಠೋರತನದಿಂದಲೂ ಉಪದೇಶ ಮಾಡಿದರು:— 'ತಮ್ಮಾ, ನೀನು ಬುದ್ಧಿವಂತನಾದ ಹುಡುಗನಾಗಿರುವಿ; ಟ್ರೇನಿಂಗ ಕಾಲೇಜ ಶಿಕ್ಷಣವನ್ನು ಮುಗಿಸಿಕೊಂಡು, ಸರ್ಟಿಫಿಕೇಟು ಪಡೆದು, ಉದ್ಯೋಗ ಮಾಡಿ ಸುಖಿಯಾಗುವ ರಾಜಮಾರ್ಗವನ್ನು ಬಿಟ್ಟು ಸಂನ್ಯಾಸದ ಕೆಟ್ಟದಾರಿಯನ್ನೇಕೆ ಹಿಡಿಯಬೇಕೆನ್ನುವೆ ? ನೀನು ಇನ್ನೂ ಚಿಕ್ಕವನಾಗಿರುವಿ ಸಂಸಾರ ಸುಖದ ರುಚಿಯನ್ನು ನೀನಿನ್ನೂ ಕಂಡಿರುವದಿಲ್ಲ. ಎಂತೆಯೇ ಪೂರ್ಣ ವಿಚಾರ ಮಾಡದೆ ಜೋಳಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಕುಳಿತಿರುವಿ. ತಿರುಕತನದ ಈ ಬಯಕೆಯು ನಿನಗೆಲ್ಲಿಂದ ಬಂತೋ ಏನೋ ? ಕೊನೆಯ ವರೆಗೆ ಜೋಳಿಗೆಯನ್ನು ಹಿಡಿಯುವದೆಂದರೆ ಎಷ್ಟು ದುಃಖವಾಗ ಬಹುದೆಂಬುದರ ಕಲ್ಪನೆಯೂ ಕೂಡ ನಿನಗಿದ್ದಂತೆ ಕಾಣುವದಿಲ್ಲ. ಹೊಟ್ಟೆಯ

ಕೂಳಿಗಾಗಿ ಮನೆಮನೆ ತಿರುಗುವದು ನಾಚಿಕೆಗೇಡಾದ ಮಾತು. ಅದು ನಿನ್ನಂತಹ ಸ್ವಾಭಿಮಾನಿಗೆ ಒಪ್ಪುವ ಸಂಗತಿಯಲ್ಲ. ಅದರಿಂದ ನಿನಗೆ ಸ್ವಲ್ಪೇ ದಿನಗಳಲ್ಲಿ ಬೇಸರುಂಟಾಗುವದು. ಆ ಮೇಲೆ ನಿನ್ನ ದುರ್ದೆಶೆಯನ್ನು ವರ್ಣಿಸಲಾಸಲ್ಲ. ಇಷ್ಟಾಗಿ ಭಿಕ್ಷಾವೃತ್ತಿಯು ನಿಂದ್ಯವಾದುದು. ಭಿಕ್ಷೆ ಬೇಡುವದೆಂದರೆ ನಿಷ್ಕಾರಣವಾಗಿ ಸಮಾಜದ ಮೇಲೆ ಭಾರ ಹೇರಿದಂತೆ- ನಿನ್ನಂತಹ ತರುಣರೂ ಕೂಡ ಹೊಟ್ಟೆಯ ಪಾಡಿಗಾಗಿ ಪರಾವಲಂಬಿಗಳಾಗ-ಹತ್ತಿದರೆ, ಸಮಾಜದ ಹೀನಾವಸ್ಥೆಗೆ ಎಣೆಯೇ ಇಲ್ಲದಂತಾಗುವದು. ಆದುದರಿಂದ ಪ್ರತಿಯೊಬ್ಬನೂ ತನ್ನ ಅನ್ನವನ್ನು ತಾನೇ ಗಳಿಸಿ ತಿನ್ನುವದು ಹೆಚ್ಚು ಶ್ರೇಯಸ್ಕರವು. ನಾವು ಈ ಮಾತುಗಳನ್ನು ನಮ್ಮ ಸಲುವಾಗಿ ಹೇಳುತ್ತಿರುವದಿಲ್ಲ. ನಿನಗೆ ಹಿತವಾಗಬೇಕೆಂಬ ಪ್ರಾಮಾಣಿಕ ಬುದ್ಧಿಯಿಂದ ಹೇಳುತ್ತಿದ್ದೇವೆ. ಇದನ್ನು ಲಕ್ಷದಲ್ಲಿ ತಂದು ಬೈರಾಗಿಯ ಈ ವೇಷವನ್ನು ಸುಮ್ಮನೇ ಬಿಟ್ಟುಕೊಟ್ಟು, ದಾರಿಗೆ ಬರಬೇಕೆಂದು ಆಗ್ರಹಮಾಡುತ್ತೇವೆ.' ಆದರೆ ಮಹಾರಾಜರು ಕೇವಲ ನಿಶ್ಚಲತೆಯ ಮೂರ್ತಿಗಳಾಗಿದ್ದರು. ಅವರ ಮೇಲೆ ಈ ಮಾತುಗಳ ಪರಿಣಾಮವು ಎಳ್ಳಷ್ಟೂ ಆಗಲಿಲ್ಲ. ಆದುದರಿಂದ ಗೋವಿಂದರಾವ ವಕೀಲರು ತಮ್ಮ ವೃತ್ತಿಗನುಸಾರವಾಗಿ ಮಹಾರಾಜರನ್ನು ತಾಳದ ಮೇಲೆ ತರಬೇಕೆಂದು ಬೇರೊಂದು ಉಪಾಯವನ್ನು ಕೈಕೊಂಡರು. ಅವರು ಒಳ್ಳೇ ಸಿಟ್ಟಿಗೆದ್ದವರಂತೆ ನಟಿಸಿ 'ಮೂರ್ಖಾ! ನೀನು ಕೂಡಲೇ ಈ ವೇಷವನ್ನು ಬಿಟ್ಟುಕೊಟ್ಟರೆ ನೆಟ್ಟಗಾಯಿತು. ಇಲ್ಲವಾದರೆ ಪರಿಣಾಮ ನೆಟ್ಟಗಾಗುವದಿಲ್ಲ, ನೋಡು! ನಾನು ಈಗಲೇ ಪೋಲೀಸರಿಗೆ ಸುದ್ದೀ ಮೇಳಿ ನಿನ್ನ ಪಾರುಪತ್ಯ ಮಾಡುವೆನು. ಜನರನ್ನು ಮೋಸಗೊಳಿಸುವದಕ್ಕಾಗಿ ನೀನು ಈ ವೇಷ ಹಾಕಿರುವಿಯೆಂಬದು ಸ್ಪಷ್ಟವಿದೆ. ಪೋಲೀಸರ ಸ್ವಾಧೀನ ಮಾಡಿದ ಮೇಲೆ ನಿನ್ನ ಗತಿಯೇನಾದೀತೆಂಬದರ ವಿಚಾರ ಮಾಡು. ನೀನು ಸಾಮೋಪಚಾರಕ್ಕೆ ಹಣಿಯದಿದ್ದರೆ, ನಿನ್ನ ಮೇಲೆ ಉಗ್ರೋಪಾಯಗಳನ್ನು ಕೈಕೊಂಡ ಹೊರತು ಬೇರೆ ಮಾರ್ಗವಿಲ್ಲ.' ಆದರೆ ಅಂಜಿಕೆಯ ಕೊನೆಯ ಗುಂಡಿಗೂ ಮಹಾರಾಜರು ಮಣಿಯಲಿಲ್ಲ. ಎಲ್ಲರೂ ನಿರಾಶರಾಗಿ ತಮ್ಮ ಮನೆಯ ಹಾದೀ ಹಿಡಿದರು.

ಮರುದಿವಸ ಅವರು ಮತ್ತೊಮ್ಮೆ ಪ್ರಯತ್ನ ಮಾಡಬೇಕೆಂದು ಬಂದರು. ಈ ಸಲ ಅವರು ಸೌಮ್ಯವೃತ್ತಿಯನ್ನು ಧಾರಣ ಮಾಡಿದರು. ಹೇಗಾದರೂ ಮಾಡಿ ಕಾರ್ಯ ಸಾಧಿಸಬೇಕೆಂಬದು ಅವರ ಉದ್ದೇಶವಾಗಿತ್ತು. ಬುದ್ಧಿವಂತನಾದ ಒಬ್ಬ ಹುಡುಗನು ನಿಷ್ಕಾರಣವಾಗಿ ಕೆಟ್ಟು ಹೋಗುವನಲ್ಲ, ಎಂದು ಅವರಿಗೆ ಚಡಪಡಿಕೆಯಾಗಿತ್ತು. ಅವರು ಈ ಸಲ ಬೇರೆ ಸ್ವರದಲ್ಲಿ ಮಾತಾಡಹತ್ತಿದರು:— ''ಸ್ವಾಮೀ ಚಿಕ್ಕವಯಸ್ಸಿನಲ್ಲಿ ಇಂತಹ ವೈರಾಗ್ಯವು ಹುಟ್ಟುವದೆಂದರೆ ಪೂರ್ವ ಪುಣ್ಯವೇ ಸರಿ. ನಾವು ನಿನ್ನೆ ಮಾತಾಡಿದ್ದು ನಿಮ್ಮ ಪರೀಕ್ಷೆ ಮಾಡುವದಕ್ಕಾಗಿ ಮಾತ್ರ. ನಿಮ್ಮ ವೈರಾಗ್ಯವು ಎಂತಹದೆಂಬುದನ್ನು ನೋಡುವದಕ್ಕಾಗಿ ನಾವು ಸಿಟ್ಟಿಗೆದ್ದು ಹೆದರಿಕೆ ಹಾಕಿ ನೋಡಿದೆವು. ಅದರೆ ನೀವು ಯಾವುದಕ್ಕೂ ಹಣೆಯಲಿಲ್ಲ. ನಿಮ್ಮ ಧೀರ ವೃತ್ತಿಯಿಂದ ನಾವು ಸಂತುಷ್ಟರಾದೆವು. ಸಂಸಾರದಲ್ಲಿ ಸಿಕ್ಕಿಬಿದ್ದು ಹೊರಳಾಡುತ್ತಿರುವ ನಮ್ಮಂಥವರಿಗೆ ನಿಮ್ಮಂಥವರ ಸಂಗತಿಯು ದುರ್ಲಭವೇ ಸರಿ. ಆದುದರಿಂದ ನಿನ್ನೆ ಮಾತಾಡಿದ್ದನ್ನು ಲಕ್ಷಕ್ಕೆ ತರಬೆ, ದಯಮಾಡಿ ನಮ್ಮ ಮನೆಗೆ ಒಂದೆರಡು ದಿನ ದಯಮಾಡಿಸಬೇಕು. ತಮ್ಮ ಚರಣಧೂಲಿಯಿಂದ ನಮ್ಮ ಮನೆಯನ್ನು ಪವಿತ್ರಗೊಳಿಸಬೇಕು. ಮತ್ತು ನಮಗೆ ತಮ್ಮ ಪಂಕ್ತಿ ಲಾಭವು ದೊರೆಯುವಂತೆ ಮಾಡಬೇಕು ಎಂದು ಪ್ರಾರ್ಥಿಸುತ್ತೇವೆ''

ಈ ಮಾತಿಗೆ ಮಾತ್ರ ಮಹಾರಾಜರು ಮನಸೋತರು! ಹೋದ ನಾಲ್ಕಾರು ದಿನಗಳ ಗೊಂದಲವು ಅವರಿಗೂ ಸಾಕಾಗಿತ್ತು. ಅವರ ಮನಸ್ಸೂ ಈಗ ಶಾಂತವಾಗಿತ್ತು. ಆದುದರಿಂದ ಅವರು ಶ್ರೀ ಗೋವಿಂದರಾವ ವಕೀಲರ ಮನೆಗೆ ಹೋಗಲಿಕ್ಕೆ ಸಂತೋಷದಿಂದ ಒಪ್ಪಿಕೊಂಡರು. ಕೂಡಲೇ ಗೋವಿಂದರಾಯರು ಒಂದು ಗಾಡಿಯನ್ನು ತಂದು ಬಾಗಿಲಲ್ಲಿ ನಿಲ್ಲಿಸಿದರು. ಗೋವಿಂದರಾಯರ ಮನೆಗೆ ಹೋದ ಮೇಲೆ ಮಹಾರಾಜರು ಸಮಾಧಾನದಿಂದ ತಮ್ಮ ಸ್ನಾನ ಜಪ ಮೊದಲಾದವುಗಳನ್ನು ತೀರಿಸಿಕೊಂಡರು. ಮಧ್ಯಾಹ್ನದ ಊಟವೂ ಆಯಿತು. ಗೋವಿಂದರಾಯರ ಮನೆಯಲ್ಲಿ ಮಹಾರಾಜರಿಗಾಗಿ ಒಂದು ಸ್ವತಂತ್ರವಾದ ಕೋಣೆಯನ್ನು ಕೊಟ್ಟಿದ್ದರು. ಅಲ್ಲಿ ಮಹಾರಾಜರು ವಿಶ್ರಮಿಸಿಕೊಂಡರು. ಆ ಕೋಣೆಯಲ್ಲಿ ಮೇಜಿನ ಮೇಲೆ ಶೃಂಗಾರಿಕ ಕಾದಂಬರಿಗಳೂ, ವರ್ತಮಾನ ಪತ್ರಗಳೂ,

ರಸಿಕ ಪುರುಷರ ಚರಿತ್ರೆಗಳೂ ಇಡಲ್ಪಟ್ಟಿದ್ದವು. ಗೋಡೆಯ ಮೇಲೆ ಸುಂದರವಾದ ಸ್ತ್ರೀಯರ ಚಿತ್ರಗಳು ಜೋತಾಡುತ್ತಿದ್ದವು. ಮನೋವೇಧಕವಾದ ಉಳಿದ ವಿಲಾಸವಸ್ತುಗಳೂ ಅಲ್ಲಿ ವ್ಯವಸ್ಥಿತವಾಗಿ ಇಡಲ್ಪಟ್ಟಿದ್ದವು. ಅವೆಲ್ಲವುಗಳ ಉದ್ದೇಶವು ಮಹಾರಾಜರ ಮನಸ್ಸನ್ನು ಸಂಸಾರದ ಕಡೆಗೆ ಹೊರಳಿಸಬೇಕೆಂಬುದೇ ಆಗಿತ್ತು. ಆದರೆ ಮಹಾರಾಜರು ಅವುಗಳಲ್ಲಿ ಯಾವುದರ ಕಡೆಗೂ ಲಕ್ಷಗೊಡದೆ ಕೇವಲ ಚಿದಂಬರನ ನಾಮಸ್ಮರಣೆಯಲ್ಲಿಯೇ ಕಾಲಕಳೆಯಹತ್ತಿದರು.

ಗೋವಿಂದರಾಯರ ಮನೆಯಲ್ಲಿ ಒಂದೆರಡು ದಿನಗಳು ಶಾಂತರೀತಿಯಿಂದ ಹೋದವು. ಮಹಾರಾಜರ ಅಸ್ವಸ್ಥವಾದ ಮನಸ್ಸು ಮತ್ತೆ ಮೊದಲಿನ ಸ್ಥಿತಿಗೆ ಬಂತು. ಆಗ ತಾವು ನಿಷ್ಕಾರಣವಾಗಿ ಇಲ್ಲದ ಗೊಂದಲಲ್ಲಿ ಬಿದ್ದುಕೊಂಡೆವೆಂದು ಅವರಿಗೆ ಎನಿಸಹತ್ತಿತು. ಸುಮ್ಮನೇ ಲಗ್ನವಾಗುವದಿಲ್ಲೆಂದು ಹೇಳಿ ಅದರೊಳಗಿಂದ ಪಾರಾಗಲಿಕ್ಕೆ ಬರುತ್ತಿತ್ತು. ಕಡ್ಡಿಯು ನಿಷ್ಕಾರಣವಾಗಿ ಗುಡ್ಡಾಗಿ ಕುಳಿತಿತು. ತಾವು ಇನ್ನೂ ವಿಧಿವತ್ತಾಗಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿರುವದಿಲ್ಲ. ಮದುವೆಯ ಬೇಡಿಗೆ ಅಂಜಿಯೇ ಕಪಸನಿಯನ್ನು ಹಾಕಿಕೊಂಡದ್ದಾಗಿತ್ತು. ಶಾಸ್ತ್ರ ವಿಧಿಯನ್ನು ಬಿಟ್ಟು ಮಾಡಿದ ಯಾವ ಕೆಲಸಕ್ಕೂ ಫಲವಿಲ್ಲ. ತಮ್ಮ ಮೇಲೆ ಬಂದ ವಿವಾಹದ ಅರಿಷ್ಟವೂ ಸದ್ಯಕ್ಕೆ ದೂರಾದಂತಾಗಿತ್ತು. ಆದುದರಿಂದ ಇನ್ನು ಮುಂದೆ ಸಂನ್ಯಾಸದ ನಾಟಕವನ್ನು ಬೆಳೆಸುವದರಲ್ಲಿ ಅರ್ಥವಿಲ್ಲ. ಬೈರಾಗಿಯ ಕಪನಿ ಮತ್ತು ಟೊಪ್ಪಿಗೆಗಳನ್ನು ಬಿಟ್ಟುಕೊಟ್ಟು ಮೊದಲಿನಂತೆ ಕಾಲೇಜಕ್ಕೆ ಹೋಗುವದೇ ಸದ್ಯಕ್ಕಿನ ಪರಿಸ್ಥಿತಿಯಲ್ಲಿ ವಿಹಿತವು. ನಾನು ಕಾಲೇಜಕ್ಕೆ ಹೋಗದಿದ್ದರೂ ಸ್ವತಃ ಚಿದಂಬರನೇ ವರ್ಗದಲ್ಲಿ ಉಪಸ್ಥಿತನಾಗಿದ್ದನೆಂಬ ಸಂಗತಿಯನ್ನು ನೋಡಿದರೆ, ಅವನ ಇಚ್ಛೆಯಾದರೂ ನಾನು ಕಾಲೇಜದ ಶಿಕ್ಷಣವನ್ನು ಮುಂದುವರಿಸಬೇಕೆಂದೇ ಇರುವಂತೆ ಕಾಣುತ್ತದೆ. ಆದುದರಿಂದ ಸುಮ್ಮನೇ ಹೀಗೆ ಎರಡನೆಯವರ ಮನೆಯಲ್ಲಿ ಊಟಮಾಡುತ್ತ ಕಾಲ ಕಳೆಯುವದು ಸರಿಯಲ್ಲ. ಮೊದಲಿನ ಕ್ರಮದಂತೆ ಕಾಲೇಜದ ಅಭ್ಯಾಸವನ್ನು ಸಾಗಿಸಿಕೊಂಡು, ಮನೆಯೊಳಗಿನ ವೇಳೆಯನ್ನೆಲ್ಲ ಚಿದಂಬರನ ಭಜನ

ಮತ್ತು ಪೂಜೆಗಳಲ್ಲಿ ಕಳೆಯಬಹುದು – ಎಂದು ಮೊದಲಾದ ವಿಚಾರಗಳು ಮಹಾರಾಜರ ಮನಸ್ಸಿನಲ್ಲಿ ಸುಳಿಯಹತ್ತಿದವು. ಇದೇ ವೇಳೆಗೆ ಮಹಾರಾಜರ ಶಿಕ್ಷಕರಾದ ಸವದೀ ಅಣ್ಣಾರಾಯರು ಬಂದು ತಮ್ಮ ಮನೆಗೂ ಒಂದೆರಡು ದಿನ ದಯಮಾಡಿಸಬೇಕೆಂದು ಕೇಳಿಕೊಂಡರು. ಅವರ ಮನೆಗೆ ಹೋದ ಮೇಲೆ ಮಹಾರಾಜರು ಕೆಂಪು ವಸ್ತ್ರಗಳನ್ನು ತ್ಯಾಗ ಮಾಡಿ ತಮ್ಮ ಮೊದಲಿನ ವಸ್ತ್ರಗಳನ್ನು ಹಾಕಿಕೊಳ್ಳಲಾರಂಭಿಸಿದರು. ಮತ್ತು ಕಾಲೇಜ ದೊಳಗಿನ ತಮ್ಮ ವರ್ಗಗಳಿಗೂ ಹೋಗಹತ್ತಿದರು. ಹೀಗೆ ಎಲ್ಲವೂ ಮೊದಲಿನ ಸ್ಥಿತಿಗೆ ಬಂದ ಮೇಲೆ, ಮಹಾರಾಜರು ಶ್ರೀ ಅಣ್ಣಾರಾಯರ ಅಪ್ಪಣೆ ಪಡಕೊಂಡು ತಿರುಗಿ ಮದೀಹಾಳಕ್ಕೆ ಬಂದರು. ಮತ್ತು ತಮ್ಮ ಪೂರ್ವದ ನಿತ್ಯ ಕ್ರಮದಂತೆ ಇರಹತ್ತಿದರು. ಇದರಿಂದ ಎಲ್ಲರಿಗೂ ಸಂತೋಷವಾಯಿತು. ಈ ಪ್ರಸಂಗವೆಲ್ಲ ಕೊನೆಗಂಡ ಮೇಲೆ ಮಹಾರಾಜರ ಗೆಳೆಯರೂ ಶಿಕ್ಷಕರೂ ಅವರನ್ನು ಕುರಿತು ''ನೀವು ಚೊಕ್ಕ ಚಿನ್ನವಾಗಿದ್ದೀರಿ'' ಎಂದು ಕೊಂಡಾಡಿದರು. ಬಂಗಾರದ ಪರೀಕ್ಷೆಯು ಬೆಂಕಿಯಲ್ಲಿಯೇ ಆಗುವದು. ಬೆಂಕಿಯ ಕಾವಿನೊಳಗಿಂದ ಪಾರಾದದ್ದೇ ದಿವ್ಯ ಸುವರ್ಣವೆಂದೆನಿಸಿಕೊಳ್ಳುವದು.

೧೫ ಬೈರಾಗಿಯ ಭವಿಷ್ಯ

ಭಗವದ್ಭಕ್ತರ ಚರಿತ್ರೆಗಳಲ್ಲಿ ಅದ್ಭುತ ಚಮತ್ಕಾರ ಅಥವಾ ಪವಾಡಗಳ ಉಲ್ಲೇಖವು ಬಹುಶಃ ಬಂದೇ ಬರುತ್ತದೆ. ಆದರೆ ಸತ್ಪುರುಷರ ಮಹಾತ್ಮ್ಯವು ನಿಜವಾಗಿ ಪವಾಡಗಳ ಮೇಲೆ ಅವಲಂಬಿಸಿರುವದಿಲ್ಲ. ಸತ್ಪುರುಷನಾಗದವನೂ ಚಮತ್ಕಾರಗಳನ್ನು ಮಾಡಿ ತೋರಿಸಬಹುದು. ಮತ್ತು ಸತ್ಪುರುಷನಾದವನ ಕಡೆಯಿಂದ ಏನೂ ಚಮತ್ಕಾರಗಳಾಗದಿರಬಹುದು. ಸಿದ್ಧಿಗಳಿಗೂ ಸಾಧುತ್ವಕ್ಕೂ ಏನೂ ಸಂಬಂಧವಿಲ್ಲ.

ಚಮತ್ಕಾರಗಳೆಂಬವೇ ಆಗುವದಿಲ್ಲೆಂದು ಕೆಲವರು ವಾದಿಸುತ್ತಾರೆ. ಅವರ ಅಭಿಪ್ರಾಯದಂತೆ ಚಮತ್ಕಾರವೆಂದರೆ ''ಒಂದು ಅಥವಾ ಕೆಲವು ವ್ಯಕ್ತಿಗಳ ಹಿತಕ್ಕಾಗಿ ಸಾಮಾನ್ಯ ಸೃಷ್ಟಿ ನಿಯಮಗಳು ತಮ್ಮ ಕೆಲಸವನ್ನು ಬಿಟ್ಟು ಬಿಡುವದೇ ಸರಿ.'' ಭೌತಿಕ ಶಾಸ್ತ್ರ ಅಥವಾ ವಿಜ್ಞಾನ ಶಾಸ್ತ್ರದ ನಿಯಮಗಳಿಗೆ ವಿರುದ್ಧವಾಗಿ ಆಗುವ ಸಂಗತಿಯು ಪವಾಡವೆಂದು ಕರೆಯಲ್ಪತ್ತದೆ. ಇಂತಹ ಸಂಗತಿಗಳು ಸಂಭವಿಸುವದೇ ಶಕ್ಯವಿಲ್ಲೆಂದು ಶಾಸ್ತ್ರೀಯ ಶಿಕ್ಷಣ ಪಡೆದವರ ಅಂಬೋಣ. ಆದರೆ ಇದರಲ್ಲಿ ಅಶಕ್ಯವಾದುದೇನೂ ಇರುವದಿಲ್ಲ. 'ನಮಗೆ' ಗೊತ್ತಿರುವ ಸೃಷ್ಟಿ ನಿಯಮಗಳಿಗೆ ವಿರುದ್ಧವಾಗಿ ತೋರುವದೆಂಬ ಒಂದೇ ಕಾರಣದಿಂದ ಚಮತ್ಕಾರಗಳೇ ಆಗಲಾರವೆನ್ನುವದು ತಪ್ಪು. ನಮ್ಮ ನಮ್ಮ ಜ್ಞಾನವು ಮರ್ಯಾದಿತವಾಗಿರುತ್ತದೆ. ಯಾವನೊಬ್ಬನಿಗೆ ಯಾವುದೊಂದು ಸಂಗತಿಯ ಕಾರ್ಯ-ಕಾರಣ ಉಪಪತ್ತಿಯು ಗೊತ್ತಾಗದಿದ್ದರೆ, ಅದು ಅವನಿಗೆ ಚಮತ್ಕಾರವಾಗಿ ತೋರುತ್ತದೆ. ಓದುಬರಹದ ಗಂಧವೂ ಕೂಡ ಇಲ್ಲದ ಕಾಡು ಮನುಷ್ಯನಿಗೆ ''ಮಾತಾಡುವ ಚಕ್ಕೆಯೇ'' ಒಂದು ಪವಾಡವಾಗಿ ಬಿಡುತ್ತದೆ. ವಿಜ್ಞಾನ ಶಾಸ್ತ್ರದ ಪರಿಚಯವಿಲ್ಲದವನಿಗೆ ವಿಜ್ಞಾನದ ಸಂಗತಿಗಳೇ ಚಮತ್ಕಾರವಾಗಿ

ತೋರುತ್ತವೆ. ರೇಡಿಯೋ, ವಿಮಾನ ಮೊದಲಾದವುಗಳೂ ಸಾಮಾನ್ಯ ಜನರಿಗೆ ಅದ್ಭುತವಾಗಿಯೇ ತೋರುತ್ತವೆ. ಆದರೆ ಅವು ಸುಳ್ಳೆಂದು ಸಾಧಿಸಬಹುದೇ ? ಅದರಂತೆಯೇ ಎಲ್ಲ ತರದ ಸಾಮರ್ಥ್ಯದ ಮೂಲವಾದ ಸರಮಾತ್ಮಶಕ್ತಿಯು ನಿಯಮಗಳನ್ನರಿತ ಭಗವದ್ಭಕ್ತರು ಸಹಜವಾಗಿ ಮಾಡಿ ತೋರಿಸುವ ಸಂಗತಿಗಳೇ ಲೌಕಿಕರಿಗೆ ಚಮತ್ಕಾರವಾಗಿ ಕಾಣುವವೆಂದು ಹೇಳಬಹುದು ಭಕ್ತರು ಸೃಷ್ಟಿಯ ಬುಡಕ್ಕಿರುವ ದಿವ್ಯವಾದ ಗೂಢವಾದ ಶಕ್ತಿಯೊಡನೆ ಒಂದಾಗಿ ಹೋಗಿರುವದರಿಂದ, ಆ ಶಕ್ತಿಯ ಬಲದಿಂದಲೇ ಅದರ ನಿಯಮಗಳಿಗೆ ಅವಿರೋಧವಾಗಿಯೇ, ಸಂತರ ಚಮತ್ಕಾರಗಳು ಆಗುತ್ತಿರುತ್ತವೆ. ಆದುದರಿಂದ ಚಮತ್ಕಾರಗಳಲ್ಲಿ [ಅಶಕ್ಯ ಅಥವಾ ಅಸಂಭಾವ್ಯವಾದುದೇನೂ ಇಲ್ಲವೇ ದು ಎದೆತಟ್ಟಿ ಹೇಳಬಹುದು.

ಆದರೆ, ಮೇಲೆ ಹೇಳಿದಂತೆ, ಚಮತ್ಕಾರಗಳನ್ನು ಮಾಡಿ ಜಗತ್ತನ್ನು ಉದ್ಧರಿಸುವ ಕೆಲಸವು ಸಂತರದಲ್ಲ. ತಿರುಗಿ ಕೇಳಿದರೆ ಸಂತರು ಸಿದ್ಧಿ ಮೊದಲಾದವುಗಳ ಉಸಾಬರಿಗೆ ಎಂದೂ ಹೋಗುವದಿಲ್ಲ. ಅವುಗಳಿಗೆ ಅವರು ಯಾವಾಗಲೂ ವಿರೋಧಕರೇ. ಚಮತ್ಕಾರಗಳಿಂದ ತಮ್ಮ ಪ್ರಸಿದ್ಧಿಯಾಗಬೇಕೆಂದು ಅವರು ಎಂದೂ ಬಯಸುವದಿಲ್ಲ. ಅವರಿಗೆ ದೊಡ್ಡವರೆಂದೆನಿಸಿಕೊಳ್ಳಬೇಕೆಂಬ ಹಂಬಲವೇ ಇರುವದಿಲ್ಲ. ಆದರೆ ಅವರು ಪುಣ್ಯಮಾರ್ಗದಿಂದ ನಡೆಯುತ್ತಿರುವದರಿಂದ, ಅವರ ಮಹಾತ್ಮ್ಯವನ್ನು ಪ್ರಕಟಗೊಳಿಸುವ ಸಲುವಾಗಿ, ದೇವರೇ ಅವರಿಗಾಗಿ ಚಮತ್ಕಾರ ಮಾಡುವನೆಂದು ಶ್ರೀ ಸಮರ್ಥ ರಾಮದಾಸರು ಅಭಿಪ್ರಾಯಪಟ್ಟಿದ್ದಾರೆ. ಸಂತರ ನಿಜವಾದ ಕೆಲಸವು ಬೇರೆಯಾಗಿರುತ್ತದೆ. ಸದಾಚಾರ, ಸದ್ವರ್ತನೆ ಮತ್ತು ಈಶ್ವರ ಭಕ್ತಿಗಳಿಂದ ಜನರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟು, ಜಗತ್ತಿನೊಳಗೆಲ್ಲ ಈಶ್ವರ ಪ್ರೇಮದ ಮಹಿಮೆಯನ್ನು ಬೆಳೆಸುವದೇ ಸಾಧುಪುರುಷರ ನಿಜವಾದ ಕರ್ತವ್ಯವು.

ನಮ್ಮ ಚರಿತ್ರನಾಯಕರ ಜೀವನದೊಳಗೆ ಸಂಭವಿಸಿದ ಇಂತಹ ಒಂದೆರಡು ಸಂಗತಿಗಳನ್ನು ವಾಚಕರು ಈಗಾಗಲೇ ಓದಿರುವರು. ಅವರು ಇನ್ನೂ ಚಿಕ್ಕವರಿರುವಾಗಲೇ ಮುರಗೋಡದ ನಾಯಕರಿಗೆ ಬಾವಿಯೊಳಗೆ

ನೀರು ಬೀಳುವ ಭವಿಷ್ಯವನ್ನು ಹೇಳಿದ್ದರು. ಅದರಂತೆ ಮುಂಜೆ ನೀರು ಬಿದ್ದವು. ಹೋದ ಪ್ರಕರಣದಲ್ಲಿ ಹೇಳಿದಂತೆ ಮಹಾರಾಜರು ನಿಜವಾಗಿ ಕಾಲೇಜಕ್ಕೆ ಹೋಗಿರದಿದ್ದರೂ, ವೇ. ರಾಮಚಂದ್ರಶಾಸ್ತ್ರಿ ನರೇಗಲ್ಲರವರ ಪಾಠ ನಡೆದಿರುವಾಗ ಶಾಸ್ತ್ರಿಗಳವರಿಗೆ ಮಹಾರಾಜರು ನಿತ್ಯದಂತೆ ಪೂರ್ತಿ ಮುಂತಾಗಿ ಕಣ್ಣಿಗೆ ಕಂಡರು. ಆದರೆ ಚಿದಂಬರನಿಗೆ ನಮ್ಮ ಚರಿತ್ರನಾಯಕರ ಮಹಾತ್ಮೈವನ್ನು ಇನ್ನೂ ಹೆಚ್ಚೆಚ್ಚಾಗಿ ಬೆಳಿಸಬೇಕಾಗಿತ್ತು. ಆದಕ್ಕನು ಸಾರವಾಗಿ ಅವರಿನ್ನೂ ಮದಿಹಾಳದಲ್ಲಿರುವಾಗಲೇ ಮತ್ತೊಂದು ಚಮತ್ಕಾರವನ್ನು ಚಿದಂಬರನು ತೋರಿಸಿದನು.

ಹೋದ ಪ್ರಕರಣದಲ್ಲಿ ವರ್ಣಿಸಿದ ಮದುವೆಯು ಗೊಂದಲವು ನಡೆದು ಹೋಗಿ ೧೦—೧೫ ದಿನಗಳಾಗಿದ್ದವು ಮಧ್ಯಾಹ್ನದ ೧೧—೧೨ ಗಂಟೆಯ ಸಮಯವಾಗಿದೆ. ಮಹಾರಾಜರು ಆಮಂತ್ರಿತರಾದಂತೆ ಬೇರೆ ಕಡೆಗೆ ಊಟಕ್ಕೆ ಹೋಗಿದ್ದಾರೆ. ವೇ. ಭಾವೂಭಟ್ಟರು ಊಟಕ್ಕೆ ಆಣಿಯಾಗಿದ್ದಾರೆ. ಇಂತಹ ಸಮಯದಲ್ಲಿ ತೇಜಸ್ವಿಯಾದ ಬೈರಾಗಿಯೊಬ್ಬನು ಅಲ್ಲಿಗೆ ಬಂದನು. ತಲೆಯ ಮೇಲೆ ಜಡೆಗಟ್ಟಿದ ಜಟಾಭಾರವು ಕಂಗೊಳಿಸುತ್ತಿತ್ತು. ಮೈ ಮೇಲೆ ಕೌಪೀನದ ಹೊರತಾಗಿ ಬೇರೆ ವಸ್ತುಗಳಿರಲಿಲ್ಲ. ಭಸ್ಮದಿಂದ ಅಂಕಿತವಾದ ಶರೀರವು ಮನೋಹರವಾಗಿ ಕಾಣುತ್ತಿತ್ತು. ಮುಖವು ತೇಜಃಪುಂಜವಾಗಿತ್ತು. ಕೈಯೊಳಗೆ ತ್ರಿಶೂಲವೊಂದು ಶೋಭಿಸುತ್ತಿತ್ತು. ನೋದಿದವರ ಮನಸ್ಸಿನಲ್ಲಿ ಆ ವ್ಯಕ್ತಿಯ ವಿಷಯವಾಗಿ ವಿನಯಭಯಭಕ್ತ್ಯಾದಿಗಳು ಸಹಜವಾಗಿ ಹುಟ್ಟುವಂತಿದ್ದುವು. ಅವನು 'ಅಲ್ಲಖ್' 'ಅಲ್ಲಖ್' ಎಂದು ಶಬ್ದಮಾಡುತ್ತ ಬಂದನು. ವೇ. ಭಾವೂಭಟ್ಟ ಮೊದಲಾದವರು ಅವನನ್ನು ಕುತೂಹಲ ದೃಷ್ಟಿಯಿಂದ ನೋಡಹತ್ತಿದರು. ಅವನು ಇವರನ್ನುದ್ದೇಶಿಸಿ ಹಿಂದೀ ಭಾಷೆಯಲ್ಲಿ ಪ್ರಶ್ನೆ ಮಾಡಿದನು:— ''ಇಲ್ಲಿ ಒಬ್ಬ ಚಿಕ್ಕ ಸಾಧುವಿರುವನು. ಅವನ ಭೆಟ್ಟಿಗೆಂತಲೇ ನಾನು ಬಂದಿದ್ದೇನೆ. ಅವನು ಎಲ್ಲಿರುವನೆಂಬದನ್ನು ನನಗೆ ದಯಮಾಡಿ ಹೇಳುವಿರಾ ? ನನಗೆ ಅವನ ಭೆಟ್ಟಿಮಾಡಿಸಿದರೆ ಉಪಕಾರವಾಗುವದು.' ನಮ್ಮ ಚರಿತ್ರನಾಯಕರ ವಿಷಯಕವಾಗಿಯೇ ಅವನು ಈ ಪ್ರಶ್ನೆ ಕೇಳುತ್ತಿರುವನೆಂಬದು ಭಾವೂಭಟ್ಟ ಮೊದಲಾದವರಿಗೆ ಕೂಡಲೇ ಹೊಳೆಯಿತು. ಅವರು

ವಿನಯದಿಂದ ಹೇಳಿದ್ದೇನೆಂದರೆ:— ''ಹೌದು. ನೀವು ಕೇಳುವ ಚಿಕ್ಕ ವಯಸ್ಸಿನ ಸಾಧುವು ನಮ್ಮಲ್ಲಿಯೇ ಇರುವನು ಅವನೀಗ ಊಟಕ್ಕೆ ಹೋಗಿರುವನು ತುಸು ಹೊತ್ತಿನಲ್ಲಿ ತಿರುಗಿ ಬರುವನು. ಅಲ್ಲಿಯ ವರೆಗೆ ನೀವು ಇಲ್ಲಿಯೇ ವಿಶ್ರಮಿಸಿಕೊಳ್ಳಬಹುದು.'' ಬೈರಾಗಿಯು ಈ ಮಾತಿಗೆ ಸಮ್ಮತಿಸಿದನು. ಅವನಿಗೆ ಕುಳಿತುಕೊಳ್ಳಲಿಕ್ಕೆ ಭಾವೂಭಟ್ಟರು ಒಂದು ಕೃಷ್ಣಾಜಿನವನ್ನು ಕೊಟ್ಟರು. ಬೈರಾಗಿಯು ಅದರ ಮೇಲೆ ಸುಖಾಸೀನನಾದನು. ಅಷ್ಟರಲ್ಲಿ ಅವನನ್ನು ನೋಡಲಿಕ್ಕೆಂದು ಅನೇಕ ಜನರು ಕೂಡಿದರು ಅವರನ್ನೆಲ್ಲ ಕುರಿತು ಅವನು ಮಾತಾಡಹತ್ತಿದನು:— ''ಅಪ್ಪಗಳಿರಾ ! ಆಹಾರ, ನಿದ್ರೆ, ಭಯ ಮತ್ತು ಮೈಥುನಗಳೆಂಬವು ಪ್ರಾಣಿಮಾತ್ರಕ್ಕೆಲ್ಲ ಸಾಮಾನ್ಯವಾಗಿವೆ ಉಚ್ಚನೀಚ ಪ್ರಾಣಿಗಳೊಳಗೆಲ್ಲ ಈ ಗುಣಧರ್ಮಗಳು ಸಹಜವಾಗಿರುವವೆಂದು ಕಂಡುಬರುತ್ತದೆ. ಮನುಷ್ಯನೂ ಒಬ್ಬ ಪ್ರಾಣಿಯೇ ಆಗಿರುವದರಿಂದ ಅವನಲ್ಲಿಯೂ ಈ ಗುಣಧರ್ಮಗಳು ಕಂಡುಬರುತ್ತವೆ. ಆದರೆ ಉಳಿದ ಪ್ರಾಣಿಗಳಲ್ಲಿ ಇಲ್ಲದ ಒಂದು ವೈಶೇಷ್ಯವು ಮಾತ್ರ ಮನುಷ್ಯನಲ್ಲಿ ಇರುತ್ತದೆ. ವಿಚಾರ ಅಥವಾ ಬುದ್ಧಿಶಕ್ತಿಯೇ ಅವನ ವಿಶಿಷ್ಟ ಧರ್ಮವು. ಅದರ ಬಲದಿಂದಲೇ ಅವನು ಉಳಿದೆಲ್ಲ ಪ್ರಾಣಿಗಳನ್ನು ತನ್ನ ವಶದೊಳಗಿಟ್ಟುಕೊಂಡು ಸುಖವಾಗಿ ಬಾಳ್ವೆಮಾಡುತ್ತಿದ್ದಾನೆ. ಪಂಚಮಹಾಭೂತಗಳೂ ಕೂಡ ಅವನ ಬುದ್ಧಿಶಕ್ತಿಯ ಮುಂದೆ ತಲೆಬಗ್ಗಿಸುತ್ತವೆ. ಆದುದರಿಂದ ಮನುಷ್ಯತ್ವದ ಮುಖ್ಯ ಗುರುತಾದ ಈ ಬುದ್ಧಿಶಕ್ತಿಯನ್ನು ಉಪಯೋಗಿಸಿಕೊಳ್ಳದಿದ್ದವನು ಮನುಷ್ಯನೇ ಅಲ್ಲ ಮನುಷ್ಯನಾಗಿ ಹುಟ್ಟಿದವನು, ತಾನು ಯಾರು, ಇಲ್ಲಿಗೇಕೆ ಬಂದಿದ್ದೇನೆ, ಮುಂದೆ ಎಲ್ಲಿಗೆ ಹೋಗಬೇಕಾಗಿದೆ, ಅದಕ್ಕೇನು ಮಾಡಬೇಕು— ಎಂಬವೇ ಮೊದಲಾದ ಪ್ರಶ್ನೆಗಳನ್ನು ತನ್ನ ಜ್ಞಾನದೃಷ್ಟಿಯಿಂದ ವಿಚಾರಿಸಿ ಅರಿತು, ಅದರಂತೆ ನಡೆಯಬೇಕು. ದೇವರು ನಮಗೆ ಕೊಟ್ಟಿರುವ ಜ್ಞಾನಶಕ್ತಿಯಿಂದ ದೇವರನ್ನು ಸಾಕ್ಷಾತ್ಕಾರಿಸಿಕೊಳ್ಳುವದೇ ನಮ್ಮೆಲ್ಲರ ಕರ್ತವ್ಯವು. ಸಾಕ್ಷಾತ್ಕಾರಕ್ಕಾಗಿ ಯಾವ ಮನುಷ್ಯನು ದುಡಿಯುವದಿಲ್ಲವೋ ಅವನ ಜನ್ಮವು ವ್ಯರ್ಥವಾಯಿತೆಂದು ತಿಳಿಯಬೇಕು. ಆದರೆ ಇಲ್ಲಿರುವ ಚಿಕ್ಕ ಸಾಧುವು ಚಿಕ್ಕಂದಿನಿಂದಲೇ ದೇವರ ಬೆನ್ನು ಹತ್ತಿದ್ದಾನೆ. ಅವನ ಜನ್ಮಾಂತರದ ಸಂಸ್ಕಾರಗಳು

ಶ್ರೀಷ್ಮವಾಗಿವೆ. ಎಂತೆಯೇ ಅವನ ಮನಸ್ಸು ಇತ್ತ ಕಡೆಗೆ ಹೊರಳಿದೆ. ಅವನು ಸಾಮಾನ್ಯ ಮನುಷ್ಯನಲ್ಲ ಕಂಡಿರಾ ! ಅವನು ವಿಭೂತಿ ಪುರುಷನಾಗಿದ್ದಾನೆ ಅವನಲ್ಲಿ ವೈರಾಗ್ಯವು ಪೂರ್ಣವಾಗಿ ಮನೆಮಾಡಿಕೊಂಡಿದೆ. ದೇವರು ಅವನಿಗೆ ಪ್ರಸನ್ನನಾಗಿದ್ದಾನೆ. ಅವನಿಂದ ಅನೇಕ ಭಕ್ತರೂ ಸೇವಕರೂ ಉದ್ಧಾರ ವಾಗಬೇಕಾಗಿದೆ. ಚಿದಂಬರ ಭಕ್ತನೆಂದು ಅವನು ಮುಂದೆ ಪ್ರಖ್ಯಾತ ನಾಗುವನು. ದೊಡ್ಡ ದೊಡ್ಡವರೂ ಅವನ ದರುಶನಕ್ಕಾಗಿ ಧಾವಿಸಿ ಬರುವರು. ಇವನಿಂದ ಲೋಕಸಂಗ್ರಹದ ಕಾರ್ಯವು ದೊಡ್ಡ ಪ್ರಮಾಣದ ಮೇಲೆ ಜಗತ್ಪಕ್ಕಾಗಿದೆ.”

ಕೂಡಿದ ಜನರು ಬೈರಾಗಿಯ ಮಾತುಗಳನ್ನು ಒಳ್ಳೆ ಆಸ್ಥೆಯಿಂದ ಕೇಳುತ್ತಿದ್ದರು. ಅವನ ಮನೋವೇಧಕವೂ ಗಂಭೀರವೂ ಆದ ನಾಗ್ಧುರಿ ಯಿಂದ ಅವರ ಮನುಸ್ಸುಗಳು ತಲ್ಲೀನವಾದವು. ಇಷ್ಟರಲ್ಲಿ ಬೈರಾಗಿಯು ಚಟ್ಟನೇ ಎದ್ದು ಹೋಗಿಬಿಟ್ಟನು. ಅವನ ತೇಜಃಪುಂಜವಾದ ಮುಖ ಮುದ್ರೆಯಿಂದಲೂ ಅಮೃತತುಲ್ಯವಾದ ಮಾತುಗಳಿಂದಲೂ ಮುಗ್ಧರಾದ ಹಲಕೆಲವರು ಅವನ ಜೆನ್ನು ಹತ್ತಿ ಹೊರಟರು. ಇಷ್ಟು ಜನರು ಅವನ ಜೆನ್ನು ಹತ್ತಿ ಹೊರಟಿದ್ದರೂ, ನೋಡುನೋಡುತ್ತಿರುವಂತೆ ಅವನು ಅದೃಶ್ಯ ನಾಗಿ ಬಿಟ್ಟನು ! ಜನರು ಮತ್ತಿಷ್ಟು ಅಚ್ಚರಿಗೊಂಡರು ಬೇರೆ ಬೇರೆ ಗುಂಪುಕಟ್ಟಿಕೊಂಡು ಅವರು ಊರೊಳಗೆಲ್ಲ ಅಡ್ಡಾಡಿ ನೋಡಿದರು. ಆದರೆ ಯಾರು ಎಷ್ಟು ಹುಡುಕಿದರೂ ಅವನ ಪತ್ತೆವಾಗಲಿಲ್ಲ. ಪ್ರತ್ಯಕ್ಷ ಚಿದಂಬರನೇ ತನ್ನ ಭಕ್ತನ ಮಹಾತ್ಮ್ಯವನ್ನು ಹೊರಪಡಿಸುವದಕ್ಕಾಗಿ ಈ ವೇಷದಿಂದ ಬಂದಿದ್ದನೆಂದು ಜನರೆಲ್ಲ ಮಾತಾಡ ಹತ್ತಿದರು ಮಹಾರಾಜರ ನಿಮಿತ್ತದಿಂದ ತಮಗೆ ಈಶ್ವರನ ಸಗುಣರೂಪದ ದರುಶನವಾಯಿತೆಂದು ಅವರಿಗೆ ಸಮಾಧಾನವಾಯಿತು. ಆದರೆ ಆಗಲೇ ಅವನ ಗುರುತು ಹತ್ತ-ಲಿಲ್ಲೆಂದು ಅವರು ಹಳಹಳಿಸಿದರು. ಮಹಾರಾಜರು ಊಟ ತೀರಿಸಿ ಕೊಂಡು ತಿರುಗಿ ಬಂದ ಮೇಲೆ ಅವರಿಗೆ ಈ ಸಂಗತಿಯೆಲ್ಲ ಗೊತ್ತಾಯಿತು. ದೇವರು ತಮ್ಮ ಸಲುವಾಗಿ ಉಳಿದವರಿಗೆ ದರುಶನವನ್ನು ಅನುಗ್ರಹಿಸಿದರೂ ತಮಗೆ ಮಾತ್ರ ಆ ದರುಶನ ಲಾಭವಾಗಲಿಲ್ಲೆಂದು ಅವರು ಬಹಳ ಚಡಪಡಿಸಿದರು.

ಮಹಾರಾಜರ ಮಡಿಲಾದ ನಾಸದಲ್ಲಿ ಈ ಪಣ್ಯಾಸವಲ್ಲಿ ಇನ್ನೊಂದು ಸಂಗತಿಯು ಜರುಗಿತು. ಅಲ್ಲಿ ದತ್ತ ದತ್ತಮಂದಿರವೆಂದು ಪ್ರಸಿದ್ಧವಾಗಿರುವ ದೇವಸ್ಥಾನದ ಉತ್ಪಾದಕಳಾದ ಸೌ. ನಾಗೂಬಾಯಿಯ ಪರಿಚಯವು ಅವರಿಗಾಯಿತು. ನಾಗೂಬಾಯಿಯೊಡನೆ ಮಹಾರಾಜರು ಮಾತೃಭಾವದಿಂದ ನಡೆದುಕೊಳ್ಳುತ್ತಿದ್ದರು. ಎಂತೆಯೇ ಮಹಾರಾಜರು ಮುಂದೆ ಸಂನ್ಯಾಸವಾದ ಮೇಲೆ ತಮ್ಮ ಪ್ರಯತಶಿಷ್ಯರಾದ ಶ್ರೀ ವಾಜೀಂದ್ರರನ್ನು ನಾಗೂಬಾಯಿಯ ಸೇವೆಗಾಗಿ ನಿಯಮಿಸಿದರು. ಶ್ರೀ ವಾಜೀಂದ್ರರವರೂ ಪರಮಾರ್ಥಕ್ಕಾಗಿ ತಮ್ಮ ಮನನೂರುಗಳನ್ನು ಬಿಟ್ಟು ಹೊರಬಿದ್ದಿದ್ದರು. ಗುರ್ವಾಜ್ಞೆಯೇ ಪ್ರಮಾಣವೆಂದು ಅವಳ ಸೇವೆಯನ್ನು ತಾವು ದೇಹವಿಡುವವರೆಗೆ ನಿರಂತರವಾಗಿ ಮಾಡಿದರು. ಈ ದೃಷ್ಟಿಯಿಂದ ಅವಳು ಪುಣ್ಯವಂತಳೇ ಸರಿ. ಮಹಾರಾಜರಂಥವರ ಕೃಪೆಗೆ ಪಾತ್ರರಾಗುವದಕ್ಕೆ ಜನ್ಮಾಂತರದ ಸೌಭಾಗ್ಯವೇ ಬೇಕು

ಸೌ. ನಾಗೂಬಾಯಿಯು ಮರಾಠಾ ಶಾಖೆಗೆ ಸೇರಿದ ಸಂಪಿಗಳು. ಅವಳು ಸುಶೀಲಳೂ ಪತಿಸೇವಾತತ್ಪರಳೂ ಆಗಿದ್ದಳು. ಮನೆಯ ಕೆಲಸ ಮೊಗನಗಳನ್ನು ತೀರಿಸಿಕೊಂಡು ಅವಳು ತೊಲಿಗೆಯ ಕೆಲಸವನ್ನೂ ಮಾಡುವಳು. ಈ ರೀತಿಯಿಂದ ಪ್ರಪಂಚ ನಿರ್ವಹಣದ ಕೆಲಸದಲ್ಲಿ ಅವಳು ಗಂಡನಿಗೆ ಸಹಾಯಕಳಾಗಿದ್ದಳು. ಅವಳಿಗೆ ಮೊದಲಿನಿಂದಲೂ ಶ್ರೀಗುರುದೇವದತ್ತನ ಮೇಲೆ ಪ್ರೇಮವುಂಟಾಗಿತ್ತು. ದೇವರ ಭಜನ, ಪೂಜನ ಮತ್ತು ನಾಮಸ್ಮರಣೆಗಳಲ್ಲಿ ಅವಳು ವಿಶೇಷ ನೇಮವನ್ನು ಇಟ್ಟುಕೊಂಡಿದ್ದಳು. ಹೀಗಿರಲು ಒಂದು ದಿನ ರಾತ್ರಿ ಅವಳಿಗೊಂದು ಕನಸು ಬಿತ್ತು. ಒಬ್ಬ ತೇಜಸ್ವಿಯಾದ ಬ್ರಾಹ್ಮಣನು ಅವಳಿಗೆ ಕಾಣಿಸಿಕೊಂಡು, ಅಪ್ಪಣೆ ಮಾಡಿದನು:— "ನಿಮ್ಮ ಮನೆಯ ಪೂರ್ವದ ಗೋಡೆಯ ಹತ್ತಿರ ಇರುವ ಅಶ್ವತ್ಥವೃಕ್ಷದ ಮೇಲೆ ಗುರುದೇವದತ್ತನ ವಾಸವಿದೆ ಅದರ ಕೆಳಗೆ ಒಂದು ಗುಡಿಯನ್ನು ಕಟ್ಟಿಸಿ ಶ್ರೀ ದತ್ತಪಾದುಕೆಗಳನ್ನು ಸ್ಥಾಪನೆ ಮಾಡು. ಎಂದರೆ ನಿನಗ ಕಲ್ಯಾಣವಾಗುವದು." ನಾಗೂಬಾಯಿಗೆ ಈ ದೃಷ್ಟಾಂತದಿಂದ ಆನಂದವಾಯಿತು. ಈ ದೃಷ್ಟಾಂತದ ಅರ್ಥವೇನೆಂಬ ಬಗ್ಗೆ ಅವಳು ಅನೇಕ ಜನ ವಿದ್ವಾಂಸರಾದ ಬ್ರಾಹ್ಮಣರನ್ನು ಕೇಳಿದಳು. ಸ್ವಪ್ನವು ಶುಭಕರ

ವಾದುದೆಂದೂ, ಆ ಪ್ರಕಾರ ಗುಡಿಯನ್ನು ಕಟ್ಟಿಸಿ ಪಾದುಕೆಗಳನ್ನು ಸ್ಥಾಪಿಸುವದು ಅವಶ್ಯವೆಂದೂ ಅವರು ಸಲಹೆ ಕೊಟ್ಟರು. ಅದರಂತೆ ಅವಳು ಗಂಡನ ಅಪ್ಪಣೆಯಿಂದ ಒಂದು ಚಿಕ್ಕ ಗುಡಿಯನ್ನು ಕಟ್ಟಿಸಿ ಪಾದುಕಾಸ್ಥಾಪನ ಮಾಡಿಸಿದಳು. ಮತ್ತು ಅವ್ವಗಳ ಪೂಜೆ-ಅರ್ಚೆಗಳಲ್ಲಿ ತನ್ನ ಕಾಲಕಳೆಯುತ್ತಿದಳು. ಅವಳು ತನ್ನ ಮನೆಯನ್ನೂ ಬಿಟ್ಟು ಗುಡಿಯಲ್ಲಿಯೇ ಇರಹತ್ತಿದಳು. ಮಹಾರಾಜರು ಆ ಗುಡಿಯನ್ನು ನೋಡಿದೊಡನೆ ಸಂತುಷ್ಟರಾದರು ಅವರು ತಮ್ಮ ಭಜನ ಮೊದಲಾದವುಗಳಿಗಾಗಿ ಇದೇ ಗುಡಿಗೆ ಹೋಗುತ್ತಿದ್ದರೆಂದು ಈ ಮೊದಲೇ ಹೇಳಿದೆ ನಿತ್ಯದ ಭಜನ ಪೂಜನ ಮೊದಲಾದವುಗಳು ಮುಗಿದೊಡನೆ ಅಲ್ಲಿ ಕುಳಿತುಕೊಂಡು ಬಹಳ ಹೊತ್ತಿನ ವರೆಗೆ ಭಗವಂತನ ಗುಣಗಾಯನವನ್ನು ಮಾಡುವರು ಈಶ್ವರ ಲೀಲೆಗಳನ್ನೂ ಸಾಧುಸಂತರ ಚರಿತ್ರಗಳನ್ನೂ ಅವರು ಸುಂದರವಾಗಿ ವರ್ಣಿಸಿ ಹೇಳುವರು. ಅವರ ಉಪದೇಶದಿಂದ ನಾರೂಬಾಯಿಯ ಚಿತ್ತವು ಕ್ರಮೇಣ ಪರಮಾರ್ಥ ಸಾಗರದಲ್ಲಿ ತೇಲಾಡಹತ್ತಿತು ಮತ್ತು ಮಹಾರಾಜರ ಕೃಪೆಯಿಂದ ಅವಳು ಪರಮಾರ್ಥದ ಮಾರ್ಗವನ್ನು ಛರದಿಂದ ತುಳಿಯಹತ್ತಿದಳು.

ಹೀಗೆ ಎರಡನೆಯ ವರುಷದ ಮೊದಲನೆಯ ಷಣ್ಮಾಸವು ಮುಗಿದು ಮಹಾರಾಜರು ಮುರಗೋಡಕ್ಕೆ ಹೋದರು. ಅಲ್ಲಿ ಜೇಸಿಗೆಯ ಸೂಟಿಯು ಶ್ರೀ ಚಿದಂಬರನ ಸೇವೆಯಲ್ಲಿಯೇ ಕಳೆಯಿತು. ಅವರು ಎರಡನೆಯ ಷಣ್ಮಾಸಕ್ಕೆಂದು ತಿರುಗಿ ಧಾರವಾಡಕ್ಕೆ ಬಂದ ಮೇಲೆ ಶ್ರೀ. ಸ್ವಭಾಕರಪಂತ ಜೋಗಳೇಕರ ಎಂಬವರ ಮನೆಯಲ್ಲಿ ಇರಹತ್ತಿದರು.

ಸ್ವಭಾಕರಪಂತರಿಗೆ ಒಬ್ಬನೇ ಮಗನಿದ್ದನು. ಅವನು ತೀರ ಚಿಕ್ಕವನು. ಎಂದರೆ ಎರಡೇ ವರುಷದವನಾಗಿದ್ದನು ಸ್ವಭಾಕರಪಂತರು ಮನೆಯಿಂದ ಸಿರಿವಂತರು ಸ್ವಾಭಾವಿಕವಾಗಿಯೇ ತಂದೆ-ತಾಯಿಗಳು ಮಗನ ಮೇಲೆ ಜೀವ-ಪ್ರಾಣ ಮಾಡುತ್ತಿದ್ದರು. ಒಂದು ದಿವಸ ಆ ಹುಡುಗನು ಒಮ್ಮಿಂದೊಮ್ಮೆ ಎಚ್ಚರದಪ್ಪಿ ಬಿದ್ದನು. ಮನೆಯೊಳಗೆಲ್ಲ ಹಾಹಾಕಾರ ವುಂಟಾಯಿತು. ತಂದೆ-ತಾಯಿಗಳು ಹೊಯಿಕೊಳ್ಳ-ಬಡಕೊಳ್ಳ ಹತ್ತಿದರು. ನಾಮಾಂಕಿತರಾದ ಡಾಕ್ಟರ ಜನರನೇಕರು ಬಂದು ಪರೀಕ್ಷೆ ಮಾಡಿದರು.

ಯಾರಿಗೂ ಏನೂ ತಿಳಿಯಲಿಲ್ಲ. ''ರೋಗದ ಪರೀಕ್ಷೆಯೇ ನಮಗಾಗಲೊಲ್ಲದೆ''ಂದು ಅವರು ಕೈಯೂರಿದರು ಸ್ವಭಾಕರಪಂತರು ನಿರಾಶೆಯ ಬಿಸಿರುಸಿರನ್ನು ಬಿಡುತ್ತ ದುಃಖಾಕ್ರಾಂತರಾಗಿ ಕುಳಿತರು. ಅವರ ದುಃಖಕ್ಕೆ ಪಾರಾವಾರವೇ ಉಳಿಯಲಿಲ್ಲ. ಕರುಣಾಳುಗಳಾದ ಮಹಾರಾಜರಿಗೆ ಆ ದೃಶ್ಯವನ್ನು ನೋಡುವದು ಅಶಕ್ಯವಾಯಿತು ಹೆಂಗಸರ ಕರುಣಾಪೂರ್ಣವಾದ ಆಕ್ರೋಶದಿಂದ ಅವರ ಎದೆಯು ಕರಿಗಿ ನೀರಾಯಿತು ಅವರು ಕೂಡಲೇ ಕೈಚಾಲು ಮೋರೆ ತೊಳೆದುಕೊಂಡು ಕೈಯಲ್ಲಿ ತುಸು ಭಸ್ಮವನ್ನು ಹಿಡಿದುಕೊಂಡು ಧ್ಯಾನಸ್ಥರಾಗಿ ಕುಳಿತರು. ಅವರು ಆ ಹುಡುಗನಿಗೆ ನೆಟ್ಟಗಾಗಲೆಂದು ಶ್ರೀ ಚಿದಂಬರನಿಗೆ ಅನನ್ಯಭಾವದಿಂದ ಪ್ರಾರ್ಥನೆ ಮಾಡಿಕೊಂಡರು. ಮತ್ತು ಚಿದಂಬರ ನಾಮದಿಂದ ಅಭಿಮಂತ್ರಿಸಿದ ಅಂಗಾರವನ್ನು ಸಾಪಿನ ದವಡೆಯೊಳಗ ಸಿಕ್ಕಿರುವ ಆ ಹುಡುಗನಿಗೆ ಹಚ್ಚಿದರು. ಕೇಳುವದೇನು ? ಕ್ಷಣಾರ್ಧದಲ್ಲಿ ಆ ಹುಡುಗನು ಕಣ್ಣು ತೆಗೆದನು. ಆಧ್ಯಾತ್ಮಿಕ ಶಕ್ತಿಯ ತೇಜಸ್ಸು ಕ್ಷಣಾರ್ಧದಲ್ಲಿ ತನ್ನ ಪ್ರಭಾವವನ್ನು ವಿದ್ಯುದ್ವೇಗದಿಂದ ತೋರಿಸಿಬಿಟ್ಟಿತು ಪುತ್ರ ಮರಣವೆಂಬ ವಜ್ರಾಘಾತವನ್ನು ಸಹಿಸಿ ಮಾಡಬೇಕೆಂದು ಕಳೆತಿದ್ದ ಮಾತಾಪಿತರರು ಕೃತಜ್ಞತೆಯಿಂದ ಮಹಾರಾಜರ ಚರಣಕಮಲಗಳಿಗೆ ಶತಶಃ ನಮಸ್ಕಾರ ಮಾಡಿದರು. ಎಲ್ಲಿ ನೋಡಿದರೂ ಆನಂದದ ಕಳೆಯು ಹೊರಸೂಸಹತ್ತಿತು. ಮುಂದೆ ಒಂದೆರಡು ದಿನಗಳಲ್ಲಿ ಆ ಬಾಲಕನಿಗೆ ಸಂಪೂರ್ಣವಾಗಿ ಗುಣವಾಯಿತು. ಕ್ರಮೇಣ ಆ ಹುಡುಗನು ದೃಢಕಾಯನೂ ಸಶಕ್ತನೂ ಆದನಲ್ಲದೆ ವಿದ್ಯೆಕಲಿತು ಸರಕಾರೀ ನೌಕರಿಯೊಳಗೆ ದೊಡ್ಡ ಪದವಿಗೇರಿದನು. ಇದೆಲ್ಲವೂ ಮಹಾರಾಜರು ಚಿಕ್ಕಂದಿನಲ್ಲಿ ಅವನ ಮೇಲೆ ಮಾಡಿದ ಕೃಪೆಯ ಫಲವೇ ಸರಿಯೆಂದು ಆ ಕುಟುಂಬದವರಿಗೆ ಎನಿಸುತ್ತಿದ್ದರೆ ಆಶ್ಚರ್ಯವಿಲ್ಲ.

ಇದೇ ಷಣ್ಮಾಸದಲ್ಲಿ ಮಹಾರಾಜರು ಇನ್ನೊಂದು ದೊಡ್ಡ ಕೆಲಸ ಮಾಡಿದರು. ಮಹಾರಾಜರ ಪರಮ ಗುರುಗಳಾದ ಶ್ರೀ ರಾಜಾರಾಮ ಮಹಾರಾಜರು ಗೋದಾವರೀ ನದಿಯ ದಂಡೆಯ ಮೇಲಿರುವ ಬಾಬುಳವೆಂಬ ಗ್ರಾಮದ ಪಾಟೀಲರು. ಅವರು ಜಾತಿಯಿಂದ ರಜಪೂತರು. ಶ್ರೀ ಚಿದಂಬರನು ಅವರಿಗೆ ಇಲ್ಲಿಂದಲೇ ದೃಷ್ಟಾಂತಕೊಟ್ಟು ಕರಿಸಿಕೊಂಡು ಉದ್ಧಾರಮಾಡಿದನು. ಅವರು ಚಿದಂಬರನಿಗಾಗಿ ತಮ್ಮ ಮನೆಮಾರುಗಳನ್ನೆಲ್ಲ ಬಿಟ್ಟುಕೊಟ್ಟು

ಇಲ್ಲಿಯೇ ವಾಸಮಾಡಿಕೊಂಡಿದ್ದರು. ಅವರ ಸಮಾಧಿಯೂ ಸಹ ಬೆಳಗಾಂವಿಯ ಹತ್ತರ ಶಹಾಪೂರದಲ್ಲಿಯೇ ಆಗಿರುವದೆಂಬದು ಚಿದಂಬರ ಭಕ್ತರಿಗೆ ಗೊತ್ತಿದೆ. ಅವರು ಅತ್ಯಂತ ವಿರಕ್ತರೂ ಅಪರೋಕ್ಷ ಜ್ಞಾನಿಗಳೂ ಆಗಿದ್ದರು. ಅವರ ಮೇಲೆ ಚಿದಂಬರನು ಪೂರ್ಣಕೃಪೆ ಮಾಡಿದ್ದನು. ಅವರು ಕೊನೆಯ ವರೆಗೆ ಚಿದಂಬರ ಸೇವೆಯಲ್ಲಿಯೇ ಕಾಲಕಳೆದರು. ಕಾಲಕಾಲಕ್ಕೆ ಅವರು ಚಿದಂಬರನ ವಿಷಯಕವಾಗಿ ಅಭಂಗಗಳನ್ನು ರಚಿಸಿ ಹಾಡುವರು. ಚಿದಂಬರನ ಕೀರ್ತಿಯನ್ನು ಪ್ರಕಟಮಾಡುವ ಅವರ ಅಭಂಗಳು ಹೇರಳವಾಗಿವೆ. ಅವರ ಅಭಂಗಗಳ ಸಂಖ್ಯೆಯು ಒಂದೂವರೆ ಲಕ್ಷಕ್ಕೆ ಮಿಕ್ಕಿದೆ. ರಾಜಾರಾಮರು ನಿತ್ಯಸ್ಮರಣೆಗೆ ಉಪಯುಕ್ತವಾಗುವಂತೆ ಆ ಅಭಂಗಗಳೊಳಗಿಂದ ಕೆಲವನ್ನು ಆರಿಸಿ ತೆಗೆದು 'ಶ್ರೀ ಚಿದಂಬರ ಪಂಚಪದೀ' ಎಂಬ ಹೆಸರಿನಿಂದ ಪ್ರಕಟ ಮಾಡಿದರು. ಆದರೆ ಅದಾವ ಕಾರಣದಿಂದಲೋ ಅವುಗಳ ಪ್ರಸಿದ್ಧೀಕರಣವು ಮಾತ್ರ ಆಗಿದ್ದಿಲ್ಲ. ಕೈಬರಹದ ಪ್ರತಿಗಳೇ ಅಲ್ಲೊಂದು ಇಲ್ಲೊಂದು ಸಿಕ್ಕುತ್ತಿದ್ದವು. ಇದರಿಂದ ಶ್ರೀ ಚಿದಂಬರ ಸಾಂಪ್ರದಾಯಕರಿಗೆ ಒಳ್ಳೇ ತೊಂದರೆಯಾಗಿತ್ತು. ನಮ್ಮ ಚರಿತ್ರನಾಯಕರಿಗೆ ಈ ಪುಸ್ತಕದ ಕೈ ಬರಹದ ಪ್ರತಿಯೊಂದು ಜೀವಬಾ ಅಣ್ಣಾ ಅವರ ಕಡೆಯಿಂದ ಪ್ರಸಾದ ರೂಪವಾಗಿ ಸಿಕ್ಕಿತ್ತು. ಅದನ್ನು ಅಚ್ಚುಹಾಕಿಸಿ ಪ್ರಕಟ ಮಾಡುವದು ತಮ್ಮ ಕರ್ತವ್ಯವೆಂದು ಮಹಾರಾಜರು ಎಷ್ಟೋ ದಿನಗಳಿಂದ ಈ ಯೋಚನೆಯಲ್ಲಿದ್ದರು. ಆ ಕೆಲಸವು ಈ ಷಣ್ಮಾಸದಲ್ಲಿ ಕೂಡಿಗಂಡಿತು. ಆ ಕಾಲಕ್ಕೆ ಸುಪ್ರಸಿದ್ಧರಾದ ಶ್ರೀ ವೆಂಕಟೇಶ ರಂಗೋ ಕಟ್ಟಿಯವರು ಆ ಪುಸ್ತಕದ ಮೊದಲನೆಯ ಆವೃತ್ತಿಯನ್ನು ತಮ್ಮ ಮುದ್ರಣಾಲಯದಲ್ಲಿ ಮುದ್ರಿಸಿಕೊಟ್ಟರು. ಅದರಿಂದ ಮಹಾರಾಜರಿಗೆ ಪರಮಾನಂದವಾಯಿತು. ಈ ಪುಸ್ತಕದ ಸಹಾಯದಿಂದ ಮಹಾರಾಜರು ಕರ್ನಾಟಕದಲ್ಲಿ ಶ್ರೀ ಚಿದಂಬರ ಭಕ್ತಿಯನ್ನು ಬಹುಮುಖವಾಗಿ ಹಬ್ಬಿಸಿದರೆಂದು ಹೇಳಬಹುದು. ಮುಂದೆ ಅದರ ಎರಡನೆಯ ಆವೃತ್ತಿಯು ಬೆಳಗಾಂವಿಯ ಶ್ರೀರಾಮತತ್ವ ಪ್ರೆಸ್ಸಿನಲ್ಲಿ ಅಚ್ಚಾಗಿ ಪ್ರಸಿದ್ಧವಾಯಿತು. ಅಲ್ಲಿ ಅಚ್ಚುಹಾಕಿದ ಪ್ರತಿಗಳು ಇಂದಿಗೂ ಬೇಕಾದವರಿಗೆ ಸಿಕ್ಕುವಂತಿವೆ. ಇರಲಿ, ಈ ಪುಸ್ತಕದ ಪ್ರಕಾಶನದಿಂದ ನಮ್ಮ ಚರಿತ್ರನಾಯಕರು ತಮ್ಮ ಪರಮಗುರುಗಳ ಋಣವನ್ನು ಕೆಲವಂಶದಿಂದಾದರೂ ತೀರಿಸಿದರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

೧೬ ಪುನರ್ಮಿಲನ

ಪರಮಾರ್ಥಸಾಧಕರ ಚರಿತ್ರವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಇವರು ತಮ್ಮ ಸಾಧನಪಥದಲ್ಲಿ ತಪ್ಪದೇ ವಿರಹಾವಸ್ಥೆಗೆ ಒಳಗಾಗುತ್ತಾರೆಂದು ಕಂಡು ಬರುತ್ತದೆ. ಕ್ರೈಸ್ತಸಾಧಕರು ಈ ಅವಸ್ಥೆಯನ್ನು ಡಾರ್ಕ ನಾಯಿಟ್ (dark night) ಎಂದರೆ 'ಕಾಳರಾತ್ರಿ' ಯೆಂದು ಕರೆಯುತ್ತಾರೆ. ದಾರಿ ಕಾಣದು ಹೇಗೆ ಕಾಳರಾತ್ರಿಯಲ್ಲಿ ದಾರಿಯನು ಕಾಣದೆ ಕೊರಗಿ ಒರಲುವರೋ ಹಾಗೆಯೇ ಪರಮಾರ್ಥಸಾಧಕರಿಗೂ ಈ ಅವಸ್ಥೆಯಲ್ಲಿ ಏನೂ ತಿಳಿಯುವಂತಾಗುತ್ತದೆ ಕಗ್ಗತ್ತಲೆಯಲ್ಲಿ ತಾವು ತುಳಿಯುತ್ತಿರುವ ದಾರಿಯು ಸರಿಯಾದುದು ಅಹುದೋ ಅಲ್ಲವೋ ಎಂಬ ಬಗ್ಗೆಯೂ ದಾರಿಹೋಕರಿಗೆ ಸಂದೇಹವುಂಟಾಗುವದು ಸಹಜವಿದೆ. ಹಾಗೆಯೇ ಸಾಧಕನು ಈ ಅವಸ್ಥೆಯಲ್ಲಿ ದುಃಖಕ್ಕೆ ಒಳಗಾಗುವನು. ಅವನಿಗೆ ಏನು ಮಾಡಬೇಕೆಂಬುದು ತಿಳಿಯದಂತಾಗುತ್ತದೆ. ಅವನಾಗ ತನ್ನ ಹೃದಯದೊಡೆಯನ ವಿರಹವನ್ನು ತಾಳಲಾರದೆ ಬಳಲಿ ಬೆಂಡಾಗುವನು. ಹೃದಯದೊಡೆಯನ್ನು ಅವನು ಅನೇಕ ಬಗೆಯಿಂದ ಕರೆಯುವನು; ಅವನಿಗೆ ನಾನಾವಿಧವಾಗಿ ಬೇಡಿಕೊಳ್ಳುವನು; ಹಲವಾರು ತೆರದಿಂದ ಪ್ರಾರ್ಥಿಸಿಕೊಳ್ಳುವನು. ಹೃದಯೇಶ್ವರನಿಗೆ ತನ್ನ ಆರ್ತಸ್ವರದ ಕೂಗಾದರೂ ಕೇಳುತಿರುವದೋ ಇಲ್ಲವೋ ಎಂದು ಅವನು ಕಾತರನಾಗುವನು. ಹೃದಯೇಶ್ವರನ ಭೆಟ್ಟಿಯು ಕೊನೆಯವರೆಗೆ ಒಮ್ಮೆಯಾದರೂ ಆಗುವದೋ ಇಲ್ಲವೋ ಎಂದು ಅವನು ಆತುರನಾಗುವನು, ಅಧೀರನಾಗುವನು. ಈ ಅವಸ್ಥೆಯಲ್ಲಿ ಸಾಧಕರಿಗಾಗುವ ಮಾನಸಿಕ ವೇದನೆಗಳನ್ನು ಸರಿಯಾಗಿ ವರ್ಣಿಸಿ ಹೇಳುವದು ಅಸಾಧ್ಯವೇ ಸರಿ.

ವಿರಹಾವಸ್ಥೆಯು ಎರಡು ಸಾರೆ ಬರುವದೆಂದು ಮೇಲೆ ಹೇಳಿದ್ದೇವೆ. ಮೊದಲನೆಯ ವಿರಹವು ಮನೋರಮಣನ ಭೆಟ್ಟಿಯಾಗುವ ಮೊದಲು ಉಂಟಾಗುವದು. ಆಗ ಸಾಧಕನು ತನ್ನ ಪ್ರಾಣಪ್ರಿಯನನ್ನು ಇನ್ನೂ ನೋಡಿರುವದಿಲ್ಲ. ಅವನು ಎಲ್ಲಿಯೋ ಇರುವನೆಂದೂ, ಅವನು ತನಗೆ ಭೆಟ್ಟಿಯನ್ನು ದಯಪಾಲಿಸಬೇಕೆಂದೂ ಸಾಧಕನು ಕೋರಗುತ್ತಿರುವನು. ಎರಡನೆಯ ವಿರಹವು ಒಮ್ಮೆ ಭೆಟ್ಟಿಯಾದ ಮೇಲೆ ಉಂಟಾಗುವದು. ಮನೋವಲ್ಲಭನ ದರುಶನವೊಮ್ಮೆ ಆಗಿ, ಅವನು ತಿರುಗಿ ಕಾಣದಂತಾದ ಮೇಲೆ ಈ ವಿರಹಾವಸ್ಥೆಯು ಸುರುವಾಗುವದು ಮೊದಲನೆಯ ವಿರಹಾವಸ್ಥೆಗಿಂತಲೂ ಎರಡನೆಯ ಅವಸ್ಥೆಯು ತೀವ್ರವಾಗಿರುವದು. ಮೊದಲನೆಯ ಅವಸ್ಥೆಯಲ್ಲಿ ಹೃದಯೇಶ್ವರನ ದರುಶನ ಅಥವಾ ಸ್ಪರ್ಶಸುಖವು ಗೊತ್ತಾಗಿರುವದಿಲ್ಲ. ಪ್ರಿಯ ವಸ್ತುವಿನ ಪ್ರಾಪ್ತಿಯ ಮೊದಲು ಆಗುವ ದುಃಖವೇ ಈ ಅವಸ್ಥೆಯಲ್ಲಿ ಆಗುತ್ತಿರುವದು. ಆದರೆ ಒಮ್ಮೆ ಆ ವಸ್ತುವು ಪ್ರಾಪ್ತವಾಗಿ ಅಲ್ಪಕಾಲದ ವರೆಗಾದರೂ ಆ ವಸ್ತುವಿನ ಸಂಗತಿಯ ಆನಂದವು ಗೊತ್ತಾದ ಮೇಲೆ, ಅಕಸ್ಮಾತ್ತಾಗಿ ಆ ವಸ್ತುವು ಕಳೆದು ಹೋದರೆ, ಆ ಅವಸ್ಥೆಯಲ್ಲಿ ದುಃಖವು ಎಷ್ಟು ತೀವ್ರವಾಗಬಹುದೆಂಬದನ್ನು ವಾಚಕರು ಸಹಜವಾಗಿ ಊಹಿಸಬಹುದು. ಅನೇಕ ವರ್ಷಗಳ ವರೆಗೆ ಬಂಜೆಯೆನಿಸಿಕೊಂಡವಳಿಗೆ ಅಕಸ್ಮಾತ್ತಾಗಿ ಮಗನು ಹುಟ್ಟಿ ಸತ್ತುಹೋದರೆ, ಅಥವಾ ಜಿಪುಣನಿಗೆ ಅಕಸ್ಮಾತ್ತಾಗಿ ಸಿಕ್ಕಧನವು ಕಳೆದು ಹೋದರೆ ಎಷ್ಟು ಯಾತನೆಗಳಾಗಬಹುದೋ, ಅದೇ ಮಾದರಿಯ, ಆದರೆ ಅದಕ್ಕೂ ತೀವ್ರವಾದ ದುಃಖವು ಪರಮಾರ್ಥಸಾಧಕರಿಗೆ ಎರಡನೆಯ ಕಾಳರಾತ್ರಿಯಲ್ಲಿ ಆಗುವದು ಕಾಳರಾತ್ರಿಯೆಂದರೆ ಕಾಳರಾತ್ರಿಯೇ ಅದು. ಅದರ ಪೀಡೆಯನ್ನು ಬಲ್ಲವರೇ ಬಲ್ಲರು.

ಈ ಮಾತಿನ ಪ್ರಸಿದ್ಧವಾದ ಉದಾಹರಣೆಯೆಂದರೆ ಭಾಗವತದೊಳಗೆ ಹನ್ನೊಂದನೆಯ ಸ್ಕಂಧದಲ್ಲಿ ವರ್ಣಿಸಿದ ಗೋಪೀ ಜನರದು. ಗೋಪಿಕಾಸ್ತ್ರೀಯರಿಗೆ ಕೃಷ್ಣಪ್ರಾಪ್ತಿಯ ಬಗ್ಗೆ ಮೊದಲು ದುಃಖವಾಗುತ್ತಿತ್ತು. ಅವರ ಮನಸ್ಸಿನ ಒಲವಿಗನುಸರಿಸಿ ಶರತ್ಕಾಲದ ಬೆಳದಿಂಗಳಲ್ಲಿ ಅವರನ್ನೊಮ್ಮೆ. ಶ್ರೀಕೃಷ್ಣನು ಮುರಲೀ ವಾದನದಿಂದ ಆಮಂತ್ರಿಸಿದನು ಗೋಪೀ ಜನರೆಲ್ಲ ತವಕದಿಂದ ಧಾವಿಸಿ ಬಂದರು. ಯಮುನೆಯ ಮನೋಹರವಾದ

ಉಸುಬಿನ ಜೈಲಿನಲ್ಲಿ ಸುಮಧುರವಾದ ಬೆಳದಿಂಗಳೊಳಗೆ ಅವರೆಲ್ಲ ಕೃಷ್ಣನೊಡನೆ ಸ್ವಚ್ಛಂದದಿಂದ ಕ್ರೀಡೆಯಾಡಹತ್ತಿದರು. ದೇವತೆಗಳಿಗೂ ದುರ್ಲಭವಾದ ಶ್ರೀ ಕೃಷ್ಣನು ನಮಗೆ ವಶನಾಗಿ ನಾವು ಹೇಳಿದಂತೆ ಕೇಳುತ್ತಿರುವನಲ್ಲ, ಎಂದು ಅವರಿಗೆ ತುಸು ಹೊತ್ತಿನಲ್ಲಿ ಸೊಕ್ಕು ಬಂತು. ಅವರಿಗೆ ಸೊಕ್ಕು ಬರುವದೊಂದೇ ತಡ, ಪರಮಾತ್ಮನು ಅದೃಶ್ಯನಾದನು. ಆಗ ಅವರಿಗಾದ ವಿರಹದ ವರ್ಣನೆಯನ್ನು ಓದಹತ್ತಿದರೆ ಹೃದಯವು ತಲ್ಲಣಗೊಳ್ಳುತ್ತದೆ. ಅವರಿಗಾಗ ಶ್ರೀ ಕೃಷ್ಣನ ಹುಚ್ಚೇ ಹಿಡಿಯಿತೆಂದರೂ ಅಡ್ಡಿಯಿಲ್ಲ. ಅವರಿಗೆ ಶ್ರೀ ಕೃಷ್ಣನ ಸ್ಮರಣೆಯೇ ಸ್ಮರಣೆ, ಧ್ಯಾನವೇ ಧ್ಯಾನ. ಅವನೊಡನೆ ರಮಿಸಿದ ವಸ್ತುಗಳು, ಸ್ಥಳಗಳು, ರೀತಿಗಳು— ಇವೆಲ್ಲವೂ ಕಣ್ಣು ಮುಂದೆ ಕಟ್ಟಿವೆ ಅವರಿಗಾಗ ಆ ಸುಖದ ಹಂಬಲವೇ ಹಂಬಲ ಆ ಸ್ಥಲದ ಪ್ರತಿಯೊಂದು ವಸ್ತುವಿನಲ್ಲಿಯೂ ಶ್ರೀ ಕೃಷ್ಣನು ಕಾಣಿಸಿದಂತಾಗುತ್ತದೆ. ಗಿಡ, ಬಳ್ಳಿ, ಕಲ್ಲು, ಮುಳ್ಳು ಮೊದಲಾದವುಗಳಿಗೆಲ್ಲ ಅವರು ತಮ್ಮ ಕೃಷ್ಣನ ಬಗ್ಗೆ ಪ್ರಶ್ನೆ ಮಾಡಹತ್ತುವರು. ಈ ದುಃಖಾತಿರೇಕದ ಫಲವೆಂದೇ ಅವರಿಗೆ ಮತ್ತೊಮ್ಮೆ ಕೃಷ್ಣನ ಭೆಟ್ಟಿಯಾಗುವದು. ಆ ಪುನರ್ಮಿಲನದ ಆನಂದಾತಿಶಯವನ್ನು ಎಷ್ಟೆಂದು ವರ್ಣಿಸಿ ಹೇಳಬೇಕು? ಅದನ್ನ ಅನುಭವಿಸಿದವರಿಗೇ ಅದರ ಮಹತಿಯು ಗೊತ್ತು !

ಆಧುನಿಕ ಧರ್ಮಪ್ರವರ್ತಕರಾದ ಶ್ರೀ ರಾಮಕೃಷ್ಣ ಪರಮಹಂಸರ ಜೀವನದಲ್ಲಿಯೂ ಇದೇ ಸಂಗತಿಯು ಕಂಡು ಬರುತ್ತದೆ. ಅವರು ಕಾಲೀಮಾತೆಯ ದರುಶನಕ್ಕಾಗಿ ಅತ್ತು, ಕರೆದು, ಹಂಬಲಿಸಿ, ಎದೆಬಡೆದುಕೊಂಡು, ಕೊರಲಿ, ಬಳಲಿ, ಬೆಂಡಾಗಿ ನಿರಾಶೆಯಿಂದ ಆತ್ಮಹತ್ಯೆಗೆ ಉದ್ಯುಕ್ತರಾದರು. ಕೂಡಲೇ ಅವರಿಗೆ ಮಾತೆಯ ದರುಶನವಾಯಿತು. ಅವರಿಗಾಗ ಸ್ವರ್ಗಸುಖ ಸಿಕ್ಕಂತಾಯಿತು ಇವರಾಗ ತಮಗೆ ಅಲ್ಲಿಯವರೆಗೆ ಆದ ಎಲ್ಲ ದುಃಖಗಳನ್ನೂ ಮರೆತು ಬಿಟ್ಟರು. ಆದರೆ ಇಷ್ಟರಲ್ಲಿಯೇ ತಾಯಿಯು ಮತ್ತೆ ಕಾಣದಂತಾದಳು. ಅದರಿಂದ ಅವರು ಮತ್ತೆ ದುಃಖಕ್ಕೀಡಾದರು. ಆ ವಿರಹಾವಸ್ಥೆಯನ್ನು ದಾಟಿದ ಮೇಲೆ, ಅವರಿಗೆ ದೇವಿಯ ನಿತ್ಯದರುಶನವಾಗಹತ್ತಿತು. ದೇವರು ನಿತ್ಯನೂ, ಶಾಶ್ವತನೂ, ಸರ್ವವ್ಯಾಪಕನೂ ಆಗಿರುವನು

ಆದರಿಂದ ಅವನ ದರುಶನವೊಮ್ಮೆ ಆದ ಮೇಲೆ ತೀರಿಯೇ ಹೋಯಿತು ಅವನಿಂದ ತಿರುಗಿ ಆಗಲುವಿಕೆಯೆಂಬದೇ ಆಗಲಾರದೆಂಬದು ಸ್ಪಷ್ಟವಿದೆ.

ನಮ್ಮ ಚರಿತ್ರನಾಯಕರು ಮೊದಲನೆಯ ವಿರಹಾವಸ್ಥೆಯೊಳಗಿಂದ ಈ ಮೊದಲೇ ದಾಟಿದ್ದರೆಂಬದು ವಾಚಕರಿಗೆ ಗೊತ್ತಿದೆ. ಅವರ ಪ್ರಥಮ ವಿರಹಾವಸ್ಥೆಯ ವರ್ಣನೆಯನ್ನು ಹಿಂದಿನ ಪ್ರಕರಣವೊಂದರಲ್ಲಿ ಯಥಾಮತಿಯಾಗಿ ಮಾಡಿದ್ದೇವೆ. ಈಗ ಅವರಿಗೆ ಎರಡನೆಯ ಅವಸ್ಥೆಯು ಪ್ರಾಪ್ತವಾಯಿತು ಅವರಿಗೆ ಶ್ರೀ ಸ್ವಾಮೀಸಮರ್ಥರ ಪ್ರಥಮ ದರುಶನವಾಗಿ ಈಗ ೪—೫ ವರುಷಗಳಾಗಿ ಹೋಗಿದ್ದವು ಟ್ರೇನಿಂಗ ಕಾಲೇಜಿನ ಎರಡು ವರುಷದ ಅಭ್ಯಾಸ ಕ್ರಮವೂ ಮುಗಿದು ಹೋಗಿತ್ತು. ಪರೀಕ್ಷೆಯೂ ಆಗಿತ್ತು. ಅದರಲ್ಲಿ ಪಾಸಾಗುವ ಬಗ್ಗೆ ಸಂಶಯವೇ ಇರಲಿಲ್ಲ. ಎರಡನೆಯ ವರುಷದ ಸರ್ಟಿಫಿಕೀಟು ಸಿಕ್ಕರೆ ಸಾಕೆಂದು ಮನೆಯವರ ಅಭಿಪ್ರಾಯವಾಗಿತ್ತು. ಅದು ಸಿಕ್ಕೇಸಿಕ್ಕುವದೆಂಬ ಮಾತು ನಿಶ್ಚಯವಿತ್ತು. ಆದರೆ ಪರೀಕ್ಷೆಯ ಪರಿಣಾಮ ತಿಳಿದು, ಸರ್ಟಿಫಿಕೀಟು ದೊರೆತು, ನೌಕರಿಗೆ ಹೋಗುವದಕ್ಕೆ ಇನ್ನೂ ಅವಕಾಶವಿತ್ತು. ಆ ಮಾತಿಗೆ ಒಂದೆರಡು ತಿಂಗಳಾದರೂ ಬೇಕಾಗುವಂತಿತ್ತು.

ಹೀಗೆ ನಮ್ಮ ಚರಿತ್ರನಾಯಕರು ಲೌಕಿಕದ ಉಪಾಧಿಯೊಳಗಿಂದ ಪಾರಾಗಿದ್ದರು. ಇದರಿಂದ ಅವರು ಲೌಕಿಕದ ಸದ್ಯಕ್ಕಿನ ಕರ್ತವ್ಯವನ್ನಂತೂ ಚನ್ನಾಗಿ ಪೂರ್ತಿಗೊಳಿಸಿದ್ದರು. ಅವರ ಅಣ್ಣಂದಿರೂ ಮಹಾರಾಜರ ಈ ಕೃತಿಯಿಂದ ತೃಪ್ತರಾಗಿದ್ದರು. ನೌಕರಿಯ ಹುಕುಮು ಬರುವ ವರೆಗೆ ಮಹಾರಾಜರು ತಮ್ಮ ಹತ್ತಿರವೇ ಇರಬೇಕೆಂದು ಅವರ ಅಣ್ಣಂದಿರ ಇಚ್ಛೆಯಾಗಿತ್ತು. ಆದರೆ ಲೌಕಿಕದ ಉಪಾಧಿಗಳಿಂದ ಮನಸ್ಸಿನ ಮೇಲಿದ್ದ ಸಿಬ್ಬಂಧವೆಲ್ಲ ದೂರಾದೊಡನೆ ನಮ್ಮ ಚರಿತ್ರನಾಯಕರ ಸ್ವಾಭಾವಿಕವಾದ ಪರಮಾರ್ಥ ಪ್ರವೃತ್ತಿಯು ಮತ್ತೆ ಕಸುವಿನಿಂದ ಹೊರಬಿದ್ದಿತು. ಇಷ್ಟು ದಿನಗಳ ವರೆಗೆ ಸಾಂಸಾರಿಕ ಕರ್ತವ್ಯದ ಭಾವನೆಯಿಂದ ಅದನ್ನು ಹತ್ತಿಕ್ಕಿಟ್ಟದ್ದಾಗಿತ್ತು. ಈಗ ಅದು ಮತ್ತೆ ಮೊದಲಿನಕಿಂತ ಹೆಚ್ಚು ವೇಗದಿಂದ ಪುಟಿದೆದ್ದಿತು. ಇನ್ನದು ಸುಪ್ತವಾಗಿ ಉಳಿಯುವದು ಶಕ್ಯವಿರಲಿಲ್ಲ.

ಮಹಾರಾಜರ ಮನಸ್ಸು ತನ್ನ ಹೃದಯ ದೇವತೆಯ ಕಡೆಗೆ ಒಂದೇ ಸವನೆ ಎಳೆಯಹತ್ತಿತು. ಅವರ ಮನೋವಲ್ಲಭನು—ಹೃದಯರಮಣನು – ಅವರ ಅಂತಃಕರಣವನ್ನೆಲ್ಲ ಸೆಳಕೊಂಡುಬಿಟ್ಟನು. ಶ್ರೀ ಸಮರ್ಥರ ಸುಂದರವಾದ ಮೂರ್ತಿಯು ಅವರ ಕಣ್ಣು ಮುಂದ ಕಟ್ಟತ್ತು. ಅವರಿಗೆ ಅದನ್ನು ಮರೆತು ಬಿಡುವದು ಅಶಕ್ಯವಾಗಹತ್ತಿತು. ತಾವು ಮೊದಲನೆಯ ಸಲ ಅವರ ಭೆಟ್ಟಿಗೆ ಹೋದಾಗಿನ ಸಂಗತಿಗಳೆಲ್ಲ ಒಂದೊಂದಾಗಿ ಅವರ ಮನಶ್ಚಕ್ಷುವಿನ ಮುಂದೆ ಸುಳಿಯಹತ್ತಿದವು. ದೊಡ್ಡ ಅರಳಿಯ ಗಿಡ, ಅದರ ಕೆಳಗಿನ ಮಂಚ, ಮಂಚದ ಮೇಲೆ ಕಾಲುಗಳನ್ನು ಕೆಳಗಿಳಿಬಿಟ್ಟು ಪೂರ್ವಕ್ಕೆ ಮೋರೆ ಮಾಡಿ ಕುಳಿತ ಶ್ರೀ ಸ್ವಾಮೀಸಮರ್ಥರ ಸುಂದರವಾದ ಮೂರ್ತಿ, ಆ ಮೂರ್ತಿಯ ಮುಖದ ಮೇಲಿನ ಮಂದಹಾಸ್ಯ, ಕಣ್ಣೊಳಗಿಂದ ವ್ಯಕ್ತವಾಗುವ ಅಪಾರವಾದ ಕಾರುಣ್ಯ—ಇವೇ ಮೊದಲಾದವುಗಳು ಅವರ ಮನಸ್ಸಿನಲ್ಲಿ ಮತ್ತೆ ಮತ್ತೆ ಬರಹತ್ತಿದವು. ಶ್ರೀ ಸ್ವಾಮೀಸಮರ್ಥರು ಕೈಸನ್ನೆಮಾಡಿ ತಮ್ಮನ್ನು ಕರೆದದ್ದು, ತಾವು ಅವರ ದಿವ್ಯವಾದ ಚರಣಾರವಿಂದಗಳ ಮೇಲೆ ತಲೆಯಿಟ್ಟು ಧನ್ಯರಾದದ್ದು, ಅವರ ಕೃಪೆಯಿಂದಲೇ ಅವರ ಸುಕೋಮಲವಾದ ಚರಣಗಳ ಸೇವೆ ಮಾಡಿದ್ದು, ರೇಶಿಮೆಗಿಂತಲೂ ಮೃದುವಾದ ಅವರ ಅಂಗಸ್ಪರ್ಶನದ ಸುಖವನ್ನನುಭವಿಸಿದ್ದು, ಅಭಯಪೂರ್ವಕವಾಗಿ ಅವರು ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದ್ದು, ಪುರಾಣ ನಡೆದಾಗ ಅವರು ಪುರಾಣದ ಓಲೆಯನ್ನು ಊದುಗೊಳವೆಯಂತೆ ಊದಿದ್ದು, ಹರಿಕೆಯ ಸಕ್ಕರಿಯನ್ನು ಕೇಳಿದ್ದು, ಅಲ್ಲಿಂದ ಹೊರಡುವಾಗ ಅವರ ಬಾಯಿಂದ ಬಂದ ಉದ್ಗಾರಗಳನ್ನು ಕೇಳಿದ್ದು—ಇವೆಲ್ಲ ನಮ್ಮ ಚರಿತ್ರನಾಯಕರ ಮನಸ್ಸಿನಲ್ಲಿ ಭರದಿಂದ ಓಡಾಡಿ, ಅವರಿಗೆ ಹುಚ್ಚು ಹಿಡಿಸಿಬಿಟ್ಟವು.

ಸಂಸಾರದ ಕೊಳೆಯಲ್ಲಿ ಆಸಕ್ತರಾಗಿ ಸಿಕ್ಕಿಬಿಟ್ಟಿರುವ ನಮಗೆ ಪರಮಾರ್ಥಸಾಧಕರ ಈ ವಿರಹಾವಸ್ಥೆಯ ಕಲ್ಪನೆಯು ಸರಿಯಾಗಿ ಬರುವದು ಕಠಿಣವೇ ಸರಿ. ವ್ಯಭಿಚಾರಿಣಿಯು ತನ್ನ ಮನೆಯ ಕೆಲಸಗಳಲ್ಲಿ ತೊಡಗಿದಂತೆ ಕಂಡರೂ ಮನಸ್ಸಿನಲ್ಲಿ ಹಗಲಿರುಳು ''ಪರಸಂಗ ರಸಾಯನ'' ವನ್ನೇ ನೆನಿಸುತ್ತಿರುವಳಷ್ಟೇ ? ಅವರಂತೆಯೇ ಪರಮಾರ್ಥಸಾಧಕನು ತನ್ನ

ಹೃದಯವಲ್ಲಭನ ಸುಖವನ್ನು ನೆನೆಯುತ್ತಿರುತ್ತಾನೆ. ಆ ಸ್ಪರ್ಶಸುಖವು ಸ್ಮರಣೆಗೆ ಬಂತೆಂದರೆ ಅವನಿಗಾಗುವ ಹೃದಯವೇದನೆಯ ತೀವ್ರತೆಯು ಅವರ್ಣನೀಯವೇ ಸರಿ. ಹಗಲಿರುಳೂ ಅವನಿಗೆ ಒಂದೇ ಒಂದು ಚಿಂತೆ : "ಹೃದಯೇಶ್ವರನೊಡನೆ ನನ್ನ ಪುನರ್ಮಿಲನವೆಂದಾದೀತು ?" ಭೂತಾವಿಷ್ಟನಂತೆ ಅವನು ತನ್ನ ನಿತ್ಯದ ವ್ಯವಹಾರವನ್ನು ಸರಿಯಾಗಿಯೋ ತಪ್ಪಾಗಿಯೋ— ಹೇಗೇಗೋ— ಮಾಡುತ್ತಿರುವನು. ಆದರೆ ಅವನ ಮನಸ್ಸೆಲ್ಲ ಅವನ ಇಷ್ಟದೇವತೆಯ ಕಡೆಗೇ ಇರುವದು.

ಬರಬರುತ್ತ ನಮ್ಮ ಚರಿತ್ರನಾಯಕರಿಗೆ ಶ್ರೀ ಸ್ವಾಮೀಸಮರ್ಥರ ಹುಚ್ಚೇ ಹಿಡಿದುಬಿಟ್ಟಿತು ! ಹೊರಗಿನ ಕಣ್ಣಿಗೆ ಕಾಣದಿದ್ದರೂ ಒಳಗಿನ ಯಾವುದೋ ಒಂದು ಕಾರಣದಿಂದ ಮನುಷ್ಯನ ಹೃದಯವು ಎಳೆಯಲ್ಪಡುತ್ತದೆಂಬದು ಸುಳ್ಳಲ್ಲ. ಮಾನವ ಲೀಲಾಧಾರಿಗಳಾದ ಶ್ರೀ ಸ್ವಾಮೀಸಮರ್ಥರು ತಮ್ಮ ಅವತಾರ ಕಾರ್ಯವನ್ನು ಇನ್ನು ಒಂದೆರಡು ವರುಷಗಳಲ್ಲಿಯೇ ಮುಗಿಸಬೇಕೆಂದು ಸಂಕಲ್ಪ ಮಾಡಿದ್ದರು. ಆದುದರಿಂದ ತಾವು ಲೀಲಾದೇಹವನ್ನು ಉಪಸಂಹಾರ ಮಾಡುವ ಮೊದಲು ಇನ್ನೊಮ್ಮೆ ನಮ್ಮ ಚರಿತ್ರನಾಯಕರಿಗೆ ದರುಶನವನ್ನಿತ್ತು ಪೂರ್ಣ ಕೃಪೆಮಾಡಬೇಕೆಂದು ಅವರು ಯೋಚಿಸಿದರು. ಶ್ರೀ ಸಮರ್ಥರ ಸತ್ಯಸಂಕಲ್ಪವು ಉದಯವಾದೊಡನೆ ಕೇಳುವದೇನು ? ಕೂಡಲೇ ಆ ಸಂಕಲ್ಪದ ರಜ್ಜುವು ನಮ್ಮ ಚರಿತ್ರನಾಯಕರ ಹೃದಯವನ್ನು ಬಲವಾಗಿ ಎಳೆಯಹತ್ತಿತು. ಮೊದಲೇ ಅವರ ಮನಸ್ಸು ಜನ್ಮಜನ್ಮಾಂತರದ ಸಂಸ್ಕಾರದಿಂದ ಪರಮಾತ್ಮನ ಸಗುಣ ದರುಶನಕ್ಕಾಗಿ ಹಾತೊರೆಯುತ್ತಿತ್ತು. ಅದಕ್ಕೆ ಭಕ್ತವತ್ಸಲನಾದ ಪರಮಾತ್ಮನ ಸಂಕಲ್ಪದ ಆಕರ್ಷಣವು ಪುಟಕೊಟ್ಟಿತು. ಹೀಗಾಗಿ ನಮ್ಮ ಚರಿತ್ರನಾಯಕರ ಮನಸ್ಸು ಎರಡುಬಗೆಯ ಸೆಳೆತದಿಂದ ಶ್ರೀ ಸಮರ್ಥರ ಕಡೆಗೆ ಓಡಹತ್ತಿತು.

ಹೃದಯದ ಕರುಳನ್ನು ಒಮ್ಮೆಲೇ ಹಿಂಡಿದರೆ, ಅಥವಾ ಸಾವಿರ ಚೇಳುಗಳು ಒಮ್ಮೆಲೇ ಕಡಿದರೆ ಹೇಗೆ ಆಗಬೇಕೋ ಹಾಗೆ ನಮ್ಮ ಚರಿತ್ರನಾಯಕರ ಸ್ಥಿತಿಯಾಯಿತು. ಅವರಿಗೆ ಒಂದೊಂದು ಕ್ಷಣವು ಯುಗವಾಗಿ

ಸರಿಣಮಿಸಹತ್ತಿತು. ಅವರಿಗೆ ಆ ಸ್ಥಿತಿಯ ಆವೇಗವನ್ನು ತಡೆಯುವದು ಅಶಕ್ಯವಾಯಿತು ಸಾರಾಂಶವೇನಂದರೆ— ಅವರ ಪರಿಸ್ಥಿತಿಯೆಲ್ಲ ಅಸಹನೀಯವಾಯಿತು. ಜನರು ಹುಚ್ಚನೆನ್ನಬಹುದು, ಮನೆಯವರು ಗಾಬರಿಯಾಗಬಹುದು– ಎಂಬವೇ ಮೊದಲಾದ ವಿಚಾರಗಳಿಂದ ನಿರ್ಬಂಧಕ್ಕೆ ಒಳಗಾಗಿ ನಡೆಯುತ್ತಿದ್ದ ಅವರ ಬುದ್ಧಿಯು ಬಂಡುಮಾಡಿ ಆ ವಿಚಾರಗಳ ಬಂಧನವನ್ನು ಹರಿದೊಗೆದುಬಿಟ್ಟಿತು. ಯಾರು ಬೇಕಾದ್ದೆನ್ನಲಿ, ಏನು ಬೇಕಾದ್ದಾಗಲಿ, ಶ್ರೀ ಸಮರ್ಥರ ಶೀತಲವಾದ ದರುಶನದ ಹೊರತಾಗಿ ಉಳಿದ ಯಾವುದರಿಂದಲೂ ಅವರ ಮನಸ್ತಾಪವು ಶಾಂತವಾಗಲಾರದೆಂಬದು ಸ್ಪಷ್ಟವಾಯಿತು ಕೊನೆಗೊಮ್ಮೆ ನಮ್ಮ ಚರಿತ್ರನಾಯಕರು ಅಕ್ಕಲಕೋಟೆಗೆ ಹೋಗಿ ತಮ್ಮ ಮನಶ್ಚೋರನೊಡನೆ ಪುನರ್ಮಿಲನವನ್ನು ಪಡೆಯಲೇ ಬೇಕೆಂದು ನಿಶ್ಚಯಿಸಿಬಿಟ್ಟರು. ಆಗ ಅವರ ಮನಸ್ಸಿಗೆ ತುಸು ಹಗುರೆನಿಸಿತು.

ಅಕ್ಕಲಕೋಟೆಗೆ ಹೋಗುವ ಸಂಕಲ್ಪವನ್ನೇನೋ ಮಾಡಿದ್ದಾಯಿತು. ಆದರೆ ಅದನ್ನು ಪೂರ್ತಿಗೊಳಿಸುವದು ಮಾತ್ರ ಸುಲಭವಿರಲಿಲ್ಲ. ಅಕ್ಕಲಕೋಟೆಯೆಂದರೆ ಬಹು ದೂರದ ಪ್ರವಾಸವೆಂಬುದಂತೂ ಸರಿಯೇ. ಮೇಲಾಗಿ ಈಗಿನಂತೆ ಪೀಳ್ಗವಾಹನಗಳೂ ಆಗಿರಲಿಲ್ಲ. ಹೋಗಿಬರಲಿಕ್ಕೆ ಅನೇಕ ದಿವಸಗಳು ಬೇಕು. ಇದೆಲ್ಲಕ್ಕೂ ಕಳಸವೆಂದರೆ ಭಯಂಕರವಾದ ಬರಗಾಲ! ''ಡವಗೀಬರ''ವೆಂಬ ಪ್ರಸಿದ್ಧವಾದ ಬರಗಾಲವು ಎಲ್ಲಿ ನೋಡಿದಲ್ಲೆಲ್ಲ ಆಗ ತಾಂಡವವಾಡುತ್ತಿತ್ತು. ರೊಕ್ಕದ ಹಮ್ಮಿಣಿಯನ್ನು ಟೊಂಕಕ್ಕೆ ಕಟ್ಟಿಕೊಂಡು ಹೊಟ್ಟಿಗೆ ತುತ್ತು ಕೂಳಿಲ್ಲದೆ ಸತ್ತು ಬಿದ್ದವರನೇಕರ ಶವಗಳನ್ನು ಬೀದಿಬೀದಿಗೆ ಹಾದಿಹಾದಿಗೆ ಕಾಣಬಹುದಾಗಿತ್ತಂತೆ! ಕೃತ್ರಿಮವಾದ ಈಗಿನ ಬರಗಾಲದಲ್ಲಿ ಕೂಡ ಅನೇಕರು ಸಾಯಬೇಕಾದ ಪ್ರಸಂಗಬಂದಿದೆ. ಬಂಗಾಲ-ಬಿಹಾರ ಪ್ರಾಂತಗಳಲ್ಲಿ ಲಕ್ಷಗಟ್ಟಲೆ ಜನರು ಬರಗಾಲದ ಭವಣಿಯಿಂದ ಸತ್ತರೆಂದು ಓದುತ್ತೇವೆ. ಒಟ್ಟಿನ ಮೇಲೆ ಬರಗಾಲದ ದೃಶ್ಯವು ಬಹಳ ಭಯಂಕರವಾದದ್ದು! ಒಮ್ಮೆಲೇ ಸಾಯುವದು ಲೇಸು. ಆದರೆ ಅನೇಕ ದಿನಗಳಿಂದ ಹೊಟ್ಟಿಗೆ ಕೂಳಿಲ್ಲದೆ ''ಅನ್ನ, ಅನ್ನ''ವೆಂದು ಬಾಯ್ಬಿಡುತ್ತಿರುವದನ್ನು ಮಾತ್ರ ನೋಡಲಾಸಲ್ಲ. ಮನುಷ್ಯನು ಅಂತಹ ಪ್ರಸಂಗದಲ್ಲಿ

ತುತ್ತು ಕೂಳಿಗಾಗಿ ಬೇಕಾದ್ದನ್ನು ಮಾಡಲಿಕ್ಕೆ ಸಿದ್ಧನಾಗುವನು. ಮತ್ತು ಬೇಕಾದವರನ್ನು ಕೊಲ್ಲಲಿಕ್ಕೂ ಒಂಟಿಗಾಲ ಮೇಲೆ ನಿಲ್ಲುವನು.

ಸನ್ ೧೮೭೭ನೆಯ ಇಸ್ವಿಯ ಬರಗಾಲವು ಇತಿಹಾಸ ಪ್ರಸಿದ್ಧವಾಗಿದೆ. ಅದರ ಭೀಕರವಾದ ಸ್ವರೂಪವನ್ನು ನಾವು ಇತಿಹಾಸದಲ್ಲಿ ಓದಿದ್ದೇವೆ: ಒಂದೇ ಸವನೆ ಎರಡು ಮೂರು ವರ್ಷ ಮಳೆಯಾಗದ್ದರಿಂದ ದಕ್ಷಿಣದಲ್ಲಿ ದೊಡ್ಡ ಬರಗಾಲಬಿದ್ದಿತು ಜನರಲ್ಲಿ ಹಣವಿದ್ದರೂ ಕಾಳುಗಳು ಸಿಗದ್ದರಿಂದ ೫೦ ಲಕ್ಷದ ವರೆಗೆ ಜನರು ಅನ್ನವಿಲ್ಲದೆ ಮಡಿದರು. ಬೀದಿ ಬೀದಿಗಳಲ್ಲಿ ಹೆಣದ ರಾಶಿಗಳು ಬಿದ್ದವು. ಸಿರಿವಂತರು ಬೇಕಾದಷ್ಟು ದಾನ ಧರ್ಮ ಮಾಡಿದರು. ಸರಕಾರದವರೂ ಐದು ಕೋಟಿ ರೂಪಾಯಿ ವೆಚ್ಚ ಮಾಡಿದರು. ವ್ಹಾಯಿಸರಾಯನಾದ ಲಾರ್ಡ ರಿಪನ್ನನು ಮುಂದೆ ಇಂತಹ ಬರಗಾಲ ಬರಬಾರದೆಂಬದಕ್ಕಾಗಿ ಅನೇಕ ಮುಂಜಾಗ್ರತೆಯ ಯೋಜನೆಗಳನ್ನು ಕೈಕೊಳ್ಳಲೆಳಸಿದ್ದು ಈ ಬರಗಾಲದ ಭೀಕರತೆಯ ದೃಶ್ಯದಿಂದಲೇ.

ಇಂತಹ ದಾರುಣವಾದ ಕಾಲದಲ್ಲಿ ಒಬ್ಬಂಟಿಗನಾಗಿ ದೂರಿನ ಪ್ರವಾಸವನ್ನು ಕಾಲು ನಡಿಗೆಯಿಂದ ಕೈಕೊಳ್ಳುವದು ಎಂತಹ ಸಾಹಸದ ಮಾತೆಂಬದನ್ನು ವಾಚಕರೇ ಊಹಿಸಲಿ. ಅದರಲ್ಲೆನ್ನೂ ಮಹಾರಾಜರು ಚಿಕ್ಕವರು. ಆದುದರಿಂದ ಮನೆಯವರು ಅವರಿಗೆ ಈ ಪ್ರವಾಸವನ್ನು ಕೈಕೊಳ್ಳಲಿಕ್ಕೆ ಎಂದೂ ಅಪ್ಪಣೆಯನ್ನು ಕೊಡುವಂತಿರಲಿಲ್ಲ. ಆದರೂ ಕೃತಸಂಕಲ್ಪರಾದ ಮಹಾರಾಜರು ತಮ್ಮ ಅಣ್ಣಂದಿರ ಮುಂದೆ ಈ ಮಾತನ್ನೆತ್ತಿ, ದಯವಿಟ್ಟು ಅಕ್ಕಲಕೋಟೆಗೆ ಹೋಗಿ ಬರಲಿಕ್ಕೆ ಪರವಾನಿಗೆ ಕೊಡಬೇಕೆಂದು ಬೇಡಿಕೊಂಡರು ನಾರಾಯಣಭಟ್ಟರಿಗೆ ತಮ್ಮನ ಸ್ವಭಾವದ ಪರಿಚಯವು ಚನ್ನಾಗಿತ್ತು ಮಹಾರಾಜರು ಒಮ್ಮೆ ಸಂಕಲ್ಪ ಮಾಡಿದರೆಂದರೆ, ಅದರಿಂದ ಅವರ ಮನಸ್ಸನ್ನು ಹಿಂತಿರುಗಿಸುವದು ಅಶಕ್ಯವೆಂಬದನ್ನು ಅವರು ಅರಿತಿದ್ದರು. ಆದರೂ ಭ್ರಾತೃಸ್ನೇಹದಿಂದ ಅವರು ಒಂದೆರಡು ಮಾತುಗಳನ್ನು ಹೇಳಲನುವಾದರು:— "ತಮ್ಮಾ, ನಿನ್ನ ಇಚ್ಛೆಯು ಉತ್ತಮವಾದುದು. ಟ್ರೇನಿಂಗ ಕಾಲೇಜದ ಶಿಕ್ಷಣವೂ ಮುಗಿದು ಹೋಗಿದೆ ನೌಕರಿಯನ್ನು ಕೈಕೊಳ್ಳುವ ಮೊದಲು ಶ್ರೀದತ್ತ ಗುರುಗಳ ದರುಶನವನ್ನು ತಕ್ಕೊಳ್ಳುವದು

ಎಲ್ಲ ರೀತಿಯಿಂದಲೂ ಸ್ತುತ್ಯವಾದದ್ದು. ಅದಕ್ಕೆ ನನ್ನದಾದರೂ ಏನೂ ಆಡ್ಡಿಯಿಲ್ಲ. ಆದರೆ ಸದ್ಯದ ಕಾಲವು ವಿಪರೀತವಾಗಿದೆ. ದೇಶದಲ್ಲಿ ಕರಾಲವಾದ ದುರ್ಭಿಕ್ಷವು ಹಬ್ಬಿಕೊಂಡಿದೆ. ಊರು ಮನೆಯೊಳಗಿದ್ದು ಕೊಂಡರೂ ಹೊಟ್ಟೆಗೆ ಎರಡುಹೊತ್ತು ಅನ್ನ ಸಿಕ್ಕುವದು ಕಠಿಣವಾಗಿದೆ. ಪ್ರವಾಸದಲ್ಲಂತೂ ವೇಳೆ ವೇಳೆಗೆ ಅನ್ನ ಸಿಕ್ಕುವದು ಅಶಕ್ಯವೇ ಸರಿ. ಕಳ್ಳ-ಕಾಕರರ ಉಪದ್ರವವು ಎಲ್ಲೆಲ್ಲಿಯೂ ಕೇಳಬರುತ್ತದೆ. ಒಳ್ಳೆಯವರೆಂದೆನಿಸಿ ಕೊಳ್ಳುವವರೂ ಕೂಡ ಅನಿವಾರ್ಯವೆಂದು ಕೇವಲ ಹೊಟ್ಟೆಯ ಪಾಡಿಗಾಗಿ ಕಳ್ಳತನಕ್ಕೆ ಮನಸೋತಿದ್ದಾರೆ. ಒಂದು ತುಣುಕು ರೊಟ್ಟಿಗಾಗಿ ಕೂಡ ಪ್ರವಾಸಿಕರು ಜೀವವನ್ನು ಕಳಕೊಳ್ಳುವ ಪ್ರಸಂಗ ಬಂದಿದೆ. ಅನ್ನ ನೀರುಗಳ ಕೊರತೆಯಿಂದ ಪ್ರವಾಸ ಮಾಡುವವರ ಸಂಖ್ಯೆಯು ತೀರ ಕಡಿಮೆಯಾಗಿದೆ. ಇಂಥ ಪ್ರಸಂಗದಲ್ಲಿ ನೀನು ಆಪ್ತೇಷ್ಟರನ್ನೆಲ್ಲ ಬಿಟ್ಟುಕೊಟ್ಟು, ಒಬ್ಬೊಂಟಿಗ ನಾಗಿ ದೂರದ ಪ್ರವಾಸವನ್ನು ಮಾಡಿ ಬರಬೇಕೆನ್ನುವಿಯಲ್ಲ! ನಿನಗೆ ಏನೆನ್ನಬೇಕೆಂಬದು ನನಗೆ ತಿಳಿಯದಾಗಿದೆ. ನೀನು ಈ ಪ್ರವಾಸಕ್ಕೆ ಹೋಗು-ವದು ನನ್ನ ಮನಸ್ಸಿಗಂತೂ ಬರುವದಿಲ್ಲ. ವಿಚಾರ ಮಾಡಿ ನೋಡಿದರೆ ನಿನಗಾದರೂ ನನ್ನ ಅಭಿಪ್ರಾಯವು ಯೋಗ್ಯವಾದುದೆಂದು ಹೊಳೆಯ-ದಿರಲಿಕ್ಕಿಲ್ಲ.''

ಇದಕ್ಕೆ ಮಹಾರಾಜರು ವಿನಯದಿಂದ ಉತ್ತರ ಕೊಟ್ಟರು:—

''ಅಣ್ಣಾ, ತಾವು ನನ್ನ ಮೇಲಿನ ಪ್ರೇಮಕ್ಕಾಗಿ ಹೀಗೆ ಹೇಳುತ್ತಿರುವಿರಿ. ಪ್ರವಾಸಕ್ಕೆ ಈಗಿನ ಕಾಲವು ವಿಪರೀತವಾಗಿರುವದೆಂಬ ಮಾತು ಸರಿಯೇ. ಆದರೆ ಯಾವಾಗಲೂ ಪ್ರತಿಯೊಂದು ಕಾರ್ಯದಲ್ಲಿ ಏನಾದರೊಂದು ತೊಂದರೆಯು ಇದ್ದೇ ಇರುವದು. ಕಿಂಬಹುನಾ, ಅಡಚಣಿಗಳಲ್ಲಿದ ಮಹತ್ಕಾರ್ಯಗಳೇ ಇರುವದಿಲ್ಲ. ಎಲ್ಲ ಭಾರವನ್ನು ದೇವರ ಮೇಲೆ ಹಾಕಿ ತನ್ನ ಕರ್ತವ್ಯವನ್ನು ಮಾಡುತ್ತಿರುವವನು ಯಾವುದಕ್ಕೂ ಹೆದರುವ ಕಾರಣ-ವಿಲ್ಲ. ಎಲ್ಲ ಚಲೋ-ಕೆಟ್ಟ ಪ್ರಸಂಗಗಳಲ್ಲಿ ಪಾರು ಮಾಡಲಿಕ್ಕೆ ಶ್ರೀ ಚಿದಂಬರನು ಸಮರ್ಥನಿದ್ದಾನೆ. ಅವನ ಕೃಪೆಯಿಂದ ನಾನು ಸುರಕ್ಷಿತವಾಗಿ ಅಕ್ಕಲಕೋಟೆಗೆ ಹೋಗಿಬರುವೆನೆಂಬ ಭರವಸೆಯುಂಟು.

ತಾವು ಮನಸ್ಸಿನಲ್ಲಿ ನನ್ನ ವಿಷಯಕ್ಕೆ ಚಿಂತೆ ಮಾಡದೆ, ನನಗೆ ಹೋಗಿ ಬರಲಿಕ್ಕೆ ಅಪ್ಪಣೆ ಕೊಡಬೇಕೆಂದು ಬಿನ್ನಹವಿದೆ.'' ಮಹಾರಾಜರ ಈ ದೃಢನಿಶ್ಚಯವನ್ನೂ, ದೇವರ ಮೇಲಿನ ಅವರ ವಿಶ್ವಾಸವನ್ನೂ ನೋಡಿ, ನಾರಾಯಣಭಟ್ಟರು ಅವರಿಗೆ ಅಕ್ಕಲಕೋಟೆಗೆ ಹೋಗಿಬರಲಿಕ್ಕೆ ಅಪ್ಪಣೆ ಕೊಟ್ಟರು. ಹಾಗೂ ಆ ಕಾಲಕ್ಕೆ ಮುರಗೋಡದಲ್ಲಿ ಮಹಾಲಕರಿಯಾಗಿದ್ದ ಶ್ರೀ ಗೋಪಾಳರಾವ ಶಿರಹಟ್ಟಿ ಅವರ ಕಡೆಯಿಂದ ವಿಜಾಪುರದ ವರೆಗೆ ಪ್ರವಾಸದ ಅನುಕೂಲತೆಯನ್ನು ಮಾಡಿಕೊಟ್ಟರು. ಇಷ್ಟೇ ಅಲ್ಲದೆ, ವಿಜಾಪುರದ ಮಾಮಲೇದಾರರ ಹೆಸರಿನಿಂದ ಒಂದು ಪತ್ರವನ್ನು ಕೊಡಿಸಿ, ವಿಜಾಪುರದಿಂದ ಮುಂದಿನ ಪ್ರವಾಸದ ವ್ಯವಸ್ಥೆಯನ್ನು ಮಾಡಿಕೊಟ್ಟರು

ಶ್ರೀ ಕೃಪೆಯಿಂದ ಇಂಥ ಕಠಿಣ ಕಾಲದಲ್ಲಿಯೂ ಮಹಾರಾಜರು ಸುರಕ್ಷಿತವಾಗಿ ಪ್ರವಾಸಮಾಡಿ ಅಕ್ಕಲಕೋಟೆಗೆ ಬಂದು ಮುಟ್ಟಿದರು. ದಾರಿಯಲ್ಲಿ ಯಾವತರದ ತೊಂದರೆಯೂ ಉಂಟಾಗಲಿಲ್ಲ. ಎಲ್ಲವೂ ಸುಖರೂಪವಾಗಿ ಸಾಗಿತು ಆದರೆ ಅಕ್ಕಲಕೋಟೆಯ ಊರೊಳಗೆಲ್ಲ ಶೋಧಿಸಿ ನೋಡಿದರೂ ಶ್ರೀ ಸ್ವಾಮೀಸಮರ್ಥರ ದರುಶನವಾಗಲಿಲ್ಲ. ಮಹಾಸ್ವಾಮಿಗಳವರು ಅವಧೂತವೃತ್ತಿಯವರಾಗಿದ್ದರೆಂಬದು ವಾಚಕರಿಗೆ ಗೊತ್ತಿದೆ. ಅವರು ಯಾವ ಕಾಲದಲ್ಲಿ ಯಾವ ರೀತಿಯಿಂದ ಹೇಗೆ ಇರುತ್ತಿದ್ದರೆಂಬದು ಯಾರಿಗೂ ತಿಳಿಯುತ್ತಿರಲಿಲ್ಲ. ಬೇಕಾದವರು ಬೇಕಾದಷ್ಟು ಯತ್ನಮಾಡಿದರೂ, ಶ್ರೀ ಮಹಾಸ್ವಾಮಿಗಳವರ ಇಚ್ಛೆ ಇರದಿದ್ದರೆ, ಯಾರಿಗೂ ಅವರ ದರುಶನವಾಗುತ್ತಿರಲಿಲ್ಲ. ಅನೇಕ ಸಲ ಯಾತ್ರಿಕರು ತಿಂಗಳು ತಿಂಗಳಗಟ್ಟಲೆ ಅವರ ದರುಶನಕ್ಕಾಗಿ ಕಾಯ್ದುಕೊಂಡು ಕುಳಿತಿರಬೇಕಾಗುತ್ತಿತ್ತು. ಆದುದರಿಂದ ಮಹಾರಾಜರಿಗೆ ಚಿಂತೆಯುಂಟಾಯಿತು. ಊರಲ್ಲಿ ಅನೇಕ ಕಡೆಗೆ ವಿಚಾರಿಸಿ ನೋಡಿದ್ದಾಯಿತು. ಆದರೆ ಮಹಾಸ್ವಾಮಿಗಳವರು ಇಂಥಲ್ಲಿಯೇ ಇರುವರೆಂಬದನ್ನು ನಿಶ್ಚಯಪೂರ್ವಕವಾಗಿ ಯಾರೂ ಹೇಳಲಿಲ್ಲ ಮಹಾರಾಜರು ಅತ್ತಿತ್ತ ಅಡ್ಡಾಡಿ ಬೇಸತ್ತು ನಿರಾಶೆಯಿಂದ ಚಿಂತಾಕ್ರಾಂತರಾಗಿ ಒತ್ತಟ್ಟಿಗೆ ಕುಳಿತುಕೊಂಡರು. ಮನಸ್ಸಿನ ದುಗುಡವು ಎಲ್ಲ ಎಲ್ಲೆಯನ್ನೂ ಮೀರಿತು. ತಾವಿಷ್ಟುದೂರ ಪ್ರವಾಸಮಾಡಿ ಬಂದದ್ದರ ದುಃಖವು ಅವರಿಗೆ ಎನಿಸಲಿಲ್ಲ. ತಿರುಗಿ ಕೇಳಿದರೆ, ಅವರು ಆ ಪ್ರವಾಸವನ್ನು ಆನಂದದಿಂದಲೇ

ಮಾಡಿದ್ದರು. ಆದರೆ ತಮ್ಮ ಹೃದಯವಲ್ಲಭನ ಭೆಟ್ಟಿಯಾಗುವದೋ ಇಲ್ಲವೋ ಎಂಬ ಸಂದೇಹ ಬಂದೊಡನೆ ಮಾತ್ರ ಅವರ ಹೃದಯವು ಸಹಸ್ರಧಾ ವಿದೀರ್ಣವಾದಂತಾಯಿತು. "ತಾವಿಷ್ಟು ದೂರ ಪ್ರವಾಸಮಾಡಿ ಬಂದಿದ್ದರೂ ತಮಗೆ ಶ್ರೀಗುರುದೇವದತ್ತನ ದರುಶನವೇ ಆಗದಿದ್ದರೆ ಮುಂದೇನು ಗತಿ ?" ಎಂದು ಅವರು ಶೋಕಿಸಹತ್ತಿದರು. ಏನು ಮಾಡಿದರೂ ಅವರ ಮನಸ್ಸಿಗೆ ಸಮಾಧಾನವಾಗಲೊಲ್ಲದು. ಕಣ್ಣಿನಿಂದ ನೀರುಗಳು ಪಟಪಟನೆ ಉದುರಹತ್ತಿದವು. ಅವರಿಗೆ ಉಣ್ಣುವದು, ತಿನ್ನುವದು ಯಾವದೂ ಬೇಡಾಯಿತು. "ನಾನು ಗುರುದೇವದತ್ತನ ದರುಶನಕ್ಕೆ ಅಯೋಗ್ಯನಾಗಿರಬಹುದೇ ? ಎಂತೆಯೇ ಅವನ ವಸತಿಯ ಸುಳುವೂ ಸಹ ನನಗೆ ಹತ್ತಲೊಲ್ಲದು. ಅವನ ಮನಸ್ಸಿಗೆ ಬಂದರೆ, ನನಗವನ ದರುಶನವಾಗುವದೆಷ್ಟೊತ್ತು ? ದೇವಾಧಿದೇವಾ, ಕರುಣಾಕರಾ, ನಿನ್ನ ದಾಸಾನುದಾಸನಾದ ನನ್ನ ಮೇಲೆ ಇಷ್ಟೇಕೆ ಕೋಪ ? ನಾನು ಮಾಡಿದ ಅಪರಾಧಗಳೆಲ್ಲವನ್ನೂ ಕ್ಷಮಿಸಿ, ನಿನ್ನ ಮೋರೆದೋರು. ನಿನ್ನ ದರುಶನವಾಗದೆ ನಾನು ಜೀವಿಸಲಾರೆ. ನಾನು ನಿನ್ನ ಭಕ್ತನೆಂಬದು ನಿಜವಿದ್ದರೆ, ನಿನ್ನ ಚರಣಾರವಿಂದಗಳನ್ನು ತೋರು." ಎಂದು ಮೊದಲಾಗಿ ಮೊರೆಯಿಡಹತ್ತಿದರು.

ಇಷ್ಟರಲ್ಲಿ ಮಹಾರಾಜರ ಸುದೈವದಿಂದ ಒಬ್ಬ ಗೃಹಸ್ಥನು ಅಲ್ಲಿಗೆ ಬಂದನು. ಮಹಾರಾಜರನ್ನು ನೋಡಿ ಅವನಿಗೆ ಪ್ರೇಮವಾತ್ಸಲ್ಯಗಳುಂಟಾದವು:— "ಅಪ್ಪಾ, ನೀನು ಏನೋ ಚಿಂತೆಗೊಳಗಾಗಿರುವಂತೆ ಕಾಣುತ್ತಿ. ನಿನ್ನ ಮೋರೆ ನೋಡಿದರೆ ನೀನು ಈ ಊರಿಗೆ ಹೊಸಬನಾಗಿ ತೋರುವಿ. ನಿನ್ನ ದುಃಖದ ಕಾರಣವನ್ನು ಹೇಳಿದರೆ, ನನ್ನಿಂದ ಶಕ್ಯವಿದ್ದ ಸಹಾಯವನ್ನು ಮಾಡುತ್ತೇನೆ ಸುಮ್ಮನೇ ಶೋಕಿಸುತ್ತ ಕುಳಿತರೆ ಯಾರು ಕೇಳಬೇಕು ?" ಎಂದು ಅವನು ಮಹಾರಾಜರಿಗೆ ಕೇಳಿದನು. ಕೂಡಲೇ ಮಹಾರಾಜರು ಅವನ ಮುಂದೆ ತಮ್ಮ ಸಂಗತಿಯನ್ನೆಲ್ಲ ಹೇಳಿದರು. ಅವನು ಆನಂದದಿಂದ— "ತಮ್ಮಾ, ಇದಕ್ಕೆ ಇಷ್ಟೇಕೆ ಚಿಂತೆ ಮಾಡುವಿ ? ಶ್ರೀ ಮಹಾಸ್ವಾಮಿಗಳವರು ಸಮೀಪದಲ್ಲಿಯೇ ಇರುವರು. ಅವರು ಇಲ್ಲಿಂದ ಮೂರೇ ಮೈಲು ದೂರದಲ್ಲಿ ಅಡವಿಯೊಳಗೆ ವ್ಯಾಘ್ರಾಸನದ ಮೇಲೆ ಸುಖಾಸೀನರಾಗಿ ಕುಳಿತಿರುವರು ನಾನು ಈಗ ಅಲ್ಲಿಂದಲೇ ಬಂದೆನು. ನಾನು ಅವರನ್ನು ನೋಡಿಯೇ

ಬಂದಿರುವೆನಾದ್ದರಿಂದ ನೀನು ಯಾವ ಸಂಶಯಕ್ಕೂ ಒಳಗಾಗುವ ಕಾರಣ-ನಿಲ್ಲ ಇಕೋ ನೋಡು, ಎದುರಿಗೆ ಕಾಣುವ ದಾರಿಯಿಂದ ಹೊರಟಿ-ಯೆಂದರೆ ನೆಟ್ಟಗೆ ಅವರು ಇರುವಲ್ಲಿಗೆ ಹೋಗಿ ಮುಟ್ಟುವೆ'' ಎಂದು ಹೇಳಿದರು.

ಹುಟ್ಟುಗುರುಡನಿಗೆ ಅಕಸ್ಮಾತ್ತಾಗಿ ಕಂಣು ಬಂದಂತಾಯಿತು. ನಮ್ಮ ಚರಿತ್ರನಾಯಕರಿಗೆ ಆಗ ಆದ ಆನಂದವನ್ನು ಬಣ್ಣಿಸಲಾಸಲ್ಲ. ಅವರು ಆ ಗೃಹಸ್ಥನ ಉಪಕಾರವನ್ನು ಅನೇಕ ಸಲ ನೆನಿಸಿ, ಅವನ ಅಪ್ಪಣೆ ಪಡ-ಕೊಂಡು ತಮ್ಮ ದಾರೀ ಹಿಡಿದು ಹೊರಟರು ಸುಮಾರು ಒಂದು ಗಂಟೆಯ ವರೆಗೆ ದಾರೀ ಹಿಡಿದ ಮೇಲೆ ಅವರು ಶ್ರೀ ಮಹಾಸ್ವಾಮಿಗಳವರು ಕುಳಿತಿದ್ದ ಸ್ಥಳಕ್ಕೆ ಬಂದು ಮುಟ್ಟಿದರು. ಶ್ರೀ ಸಮರ್ಥರು ಆಗ ಒಂದು ಔದುಂಬರ ವೃಕ್ಷದ ಕೆಳಗೆ ಉಚ್ಚಾಸನದ ಮೇಲೆ ಸುಖವಾಗಿ ವಿರಾಜಮಾನ-ವಾಗಿದ್ದರು. ಎಡಗೈಯನ್ನು ಕೆಳಕ್ಕೂರಿ, ಎಡದೊಡೆಯ ಮೇಲೆ ಬಲಗಾಲು ಹಾಕಿಕೊಂಡು ಅವರು ಸ್ವಸ್ಥವಾಗಿ ಕುಳಿತುಕೊಂಡಿದ್ದರು. ಕಂಠದಲ್ಲಿ ದೊಡ್ಡ ರುದ್ರಾಕ್ಷೀ ಮಾಲೆಯೊಂದು ಶೋಭಿಸುತ್ತಿತ್ತು. ಮೈಮೇಲೆ ಕೌಪೀನದ ಹೊರತಾಗಿ ಬೇರೆ ವಸ್ತ್ರಗಳಿರಲಿಲ್ಲ ಹಣೆಯ ಮೇಲಿನ ಕಸ್ತೂರೀ ತಿಲಕವು ಎದ್ದು ಕಾಣಿಸುತ್ತಿತ್ತು. ಕೇತಕೀ ಬಣ್ಣದಿಂದ ಹೊಳೆಯುತ್ತಿರುವ ಅವರ ಸುಂದರವಾದ ದೇಹದ ಮೇಲೆ ಕಸ್ತೂರಿಯಿಂದ ಕೂಡಿದ ಕೆಂಪು ಗಂಧದ ರೇಖೆಗಳು ಅಲ್ಲಲ್ಲಿ ಬಹು ಚನ್ನಾಗಿ ಕಾಣುತ್ತಿದ್ದವು. ಕಿವಿಯಲ್ಲಿ ಕುಂಡಲಗಳು ಕಂಗೊಳಿಸುತ್ತಿದ್ದವು. ಬಲಗೈ ಬೆರಳೊಳಗೆ ಕೆಂಪು ರತ್ನದಿಂದ ಕೆಚ್ಚಿದ ಉಂಗುರವು ಸುಮನೋಹರವಾಗಿ ಹೊಳೆಯುತ್ತಿತ್ತು. ಒಟ್ಟಿನ ಮೇಲೆ ಕೋಟಿ ಕಂದರ್ಪರನ್ನು ಕರಗಿಸಿ ಮಾಡಿದ ಮೂರುತಿಯಂತೆ ಶ್ರೀ ಗುರುದೇವದತ್ತನು ಭಕ್ತಜನರನ್ನೆಲ್ಲ ಆಕರ್ಷಿಸುತ್ತ ಕುಳಿತಿದ್ದನು. ಅವರ ಆಸನದ ಸುತ್ತಮುತ್ತು ನೂರಾರುಜನ ಭಕ್ತರು ಆನಂದದಿಂದ ಕುಳಿತುಕೊಂಡಿದ್ದರು. ಅವರ ಪ್ರಿಯಶಿಷ್ಯ ಜೋಳಪ್ಪ ಮೊದಲಾದವರು ಅಲ್ಲಿಯೇ ಕೈಕಟ್ಟಿಕೊಂಡು ಅವರ ಆಜ್ಞೆಯ ಪ್ರತೀಕ್ಷೆ ಮಾಡುತ್ತ ನಿಂತಿದ್ದರು.

ಮಹಾರಾಜರು ತಮ್ಮ ಉಪನ್ಯಾಸ ಮೂರ್ತಿಯನ್ನು ಕಂಡೊಡನೆ ಅವರು ಆನಂದಸಾಗರದಲ್ಲಿ ತೇಲಾಡಹತ್ತಿದರು. ಮಗುವು ತಾಯಿಯನ್ನು

ನೋಡಿ, ಸತಿಯು ಪತಿಯನ್ನು ನೋಡಿ, ದಾಸನು ಸ್ವಾಮಿಯನ್ನು ನೋಡಿ ಧಾವಿಸುವಂತೆ, ಅವರು ಶ್ರೀ ಗುರುದೇವದತ್ತನ ಸನ್ನಿಧಿಗೆ ಓಡಿಬಂದರು. ಶ್ರೀ ಸಮರ್ಥರು ಮಹಾರಾಜರನ್ನು ನೋಡಿ ಮಂದಹಾಸ್ಯವನ್ನು ಬೀರಿದರು. ಮೊದಲೇ ಸುಪ್ರಸನ್ನವಾದ ಅವರ ಮುಖವು ಮಹಾರಾಜರ ಆಗಮನದಿಂದ ಇನ್ನೂ ಹೆಚ್ಚು ಪ್ರಸನ್ನವಾಯಿತು. ತಾಯಿಯು ಮಗುವನ್ನು ಕಂಡು, ಪತಿಯು ಸತಿಯನ್ನು ಕಂಡು, ಸ್ವಾಮಿಯು ದಾಸನನ್ನು ಕಂಡು ಸ್ವಾಗತಿಸುವಂತ ಶ್ರೀ ಸಮರ್ಥರು ಮಹಾರಾಜರನ್ನು ಸ್ವಾಗತಮಾಡಿದರು ದೇವಭಕ್ತರ ಹೃದಯಗಳು ಒಂದಾದವು. ಆ ಅಪೂರ್ವವಾದ ಸಂಗಮದಿಂದ ಮಹಾರಾಜರ ದಣಿವೆಲ್ಲ ಕ್ಷಣಾರ್ಧದಲ್ಲಿ ನಾಮಶೇಷವಾಯಿತು. ಅವರಿಗೆ ಹೊಸ ಹುರುಪುಬಂತು. ವಾಚಕರೇ, ಕ್ಲೇಶ. ಫಲೇನ ಹಿ ಪುನರ್ನವತಾಂ ವಿಧತ್ತೇ'' ಎಂಬುದು ನಿಜವಲ್ಲನೇ ?

ಮಹಾರಾಜರು ಸಮರ್ಥರ ಮುಂದೆ ಹಣ್ಣು, ಕಾಯಿ ಮತ್ತು ಐದು ರೂಪಾಯಿಗಳನ್ನಿಟ್ಟು ಸಾಷ್ಟಾಂಗ ನಮಸ್ಕಾರ ಮಾಡಿ ಕೈಜೋಡಿಸಿಕೊಂಡು ಮನೋಭಾವದಿಂದ ಪ್ರಾರ್ಥನೆ ಮಾಡಿದರು:— ''ಭಗವಾನ್ ಶ್ರೀ ಕೃಷ್ಣನು ಗೀತೆಯಲ್ಲಿ ಹೇಳಿದಂತೆ ಪರಮಾತ್ಮನು ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಸಂರಕ್ಷಿಸುವದಕ್ಕಾಗಿಯೂ, ಅಧರ್ಮವನ್ನು ಹೋಗಲಾಡಿಸಿ ಧರ್ಮವನ್ನು ಸ್ಥಾಪಿಸುವದಕ್ಕಾಗಿಯೂ ಮೇಲಿಂದ ಮೇಲೆ ಅವತಾರ ಮಾಡುತ್ತಾನೆ. ಈ ಯುಗದಲ್ಲಿ ಅಂತಹ ಅವತಾರಿಕ ಪುರುಷರೆಂದರೆ ತಾವೇ. ತಮ್ಮ ದರುಶನದಿಂದ ನನ್ನ ಅನೇಕ ಜನ್ಮಗಳ ಪಾಪಗಳೆಲ್ಲ ನಷ್ಟವಾಗಿ ಹೋಗಿವೆ. ನನ್ನನ್ನು ಈ ಕಠಿಣವಾದ ಬಂಧನದೊಳಗಿಂದ ಬಿಡಿಸಿ, ಸನ್ಮಾರ್ಗವನ್ನು ತೋರಿಸಿ ಉದ್ಧಾರ ಮಾಡಲಿಕ್ಕೆ ತಾವೇ ಸಮರ್ಥರು. ತಾವು ಭೂತ, ಭವಿಷ್ಯ, ವರ್ತಮಾನಗಳೆಲ್ಲವನ್ನೂ ಅರಿಯಬಲ್ಲ ಸರ್ವಜ್ಞರಾಗಿರುವಿರಿ. ದಯ ವಿಟ್ಟು ಈ ದೀನ ದಾಸನ ಮನೋಭಾವವನ್ನು ತಿಳಿದು ತಮ್ಮ ಚರಣ ಕಮಲಗಳನ್ನು ಮುಂದೆ ಮಾಡಬೇಕು. ಅವುಗಳ ಮೇಲೆ ನನ್ನ ತಲೆಯಿಟ್ಟು ಕೃತಾರ್ಥನಾಗುವೆನು.''

ಸಮರ್ಥರೆಂದರೆ ಸಮರ್ಥರೇ ಅವರು! ಸರ್ವಜ್ಞರಾದ ಅವರಿಗೆ ಅದಾವ ವಿಷಯವು ತಿಳಿಯದಿರಬಲ್ಲದು? ಅವರು ಕೂಡಲೇ ಮಹಾರಾಜರ ಪ್ರಾರ್ಥನೆಗೆ ಉತ್ತರರೂಪವಾಗಿ ಅವರ ಕಡೆಗೆ ಕೃಪಾದೃಷ್ಟಿಯನ್ನು ಹೊರಳಿಸಿ, ತಮ್ಮ ಬಲಗಾಲನ್ನು ಮುಂದೆ ಮಾಡಿದರು. ಅದನ್ನು ನೋಡಿ ಮಹಾರಾಜರು ಹರ್ಷಾತಿರೇಕದಿಂದ ಧಾವಿಸಿ ಆ ಕಾಲನ್ನು ಗಟ್ಟಿಯಾಗಿ ಅಪ್ಪಿಕೊಂಡು, ಅದರ ಮೇಲೆ ತಮ್ಮ ತಲೆಯನ್ನಿಟ್ಟರು. ಆನಂದಬಾಷ್ಪಗಳಿಂದ ಆ ಚರಣವು ತೊಯ್ದು ಹೋಯಿತು. ಸಮರ್ಥರು ಬೇಕಾಗಲೇ ಮಹಾರಾಜರನ್ನು ತಮ್ಮ ಕಡೆಗೆ ಕರಿಸಿಕೊಂಡಿದ್ದರು. ಎಂದ ಮೇಲೆ ಕೇಳುವದೇನು? ಮಹಾರಾಜರ ತಲೆಯ ಮೇಲೆ ಅವರು ತಮ್ಮ ವರದ ಹಸ್ತವನ್ನಿಟ್ಟು ಸ್ಪರ್ಶಮಾಡಿ, ಸಂಪೂರ್ಣ ಕೃಪೆ ಮಾಡಿದರು. ಕೇವಲ ದರುಶನ, ಅಥವಾ ಸ್ಪರ್ಶ, ಅಥವಾ ಶಬ್ದಗಳಿಂದಲೇ ಗುರುಗಳು ಶಿಷ್ಯನ ಮೇಲೆ ಕೃಪೆಮಾಡಿ, ಅವರಿಗೆ ಬ್ರಹ್ಮಾನುಭವವನ್ನು ತಂದುಕೊಡಬಲ್ಲರೆಂಬದು ಸುಳ್ಳಲ್ಲ. ಶ್ರೀ ಸಮರ್ಥರ ಸ್ಪರ್ಶವಾಗುವದೊಂದೇ ತಡ; ಮಹಾರಾಜರ ಪಾಲಿಗೆ ಜಗತ್ತೆಲ್ಲ ಮಾಯವಾಗಿ ಹೋಯಿತು. ಅಡವಿ, ಗಿಡ, ಸಮರ್ಥರು, ತಾವು, ಜೋಳಪ್ಪ ಮೊದಲಾದ ಭಕ್ತರು—ಇವೆಲ್ಲ ಎಲ್ಲಿಯೋ ಕರಗಿ ಹೋಗಿಬಿಟ್ಟವು. ದ್ವೈತದ ಜಂಜಾಟವೆಲ್ಲ ನಿಃಶೇಷವಾಗಿ ಅಳಿಸಿಹೋಯಿತು. ಎಲ್ಲವೂ ಒಂದೇ ಒಂದು ಚೈತನ್ಯರೂಪವಾಗಿ ಬಿಟ್ಟಿತು. ಎಲ್ಲಿ ನೋಡಿದಲ್ಲೆಲ್ಲ ಬೆಳಕೇ ಬೆಳಕು. ಸುತ್ತೂ ಕಡೆಯಿಂದ ಅಪಾರವಾದ ಚೈತನ್ಯದ ತೆರೆಗಳು ಎಡೆಬಿಡದೆ ಧಾವಿಸಿ ಬರಹತ್ತಿದವು. "ಸರ್ವ ದುಃಖ ವಿನಿರ್ಮುಕ್ತವಾದ ಅದ್ವಿತೀಯ ಚಿನ್ಮಾತ್ರನೇ ನಾನು." ಎಂಬ ಆತ್ಮ ಸಾಕ್ಷಾತ್ಕಾರವನ್ನು ಮಹಾರಾಜರು ಅನುಭವಿಸಹತ್ತಿದರು. ಅವರಿಗಾಗ ಮಿಥ್ಯಾಪ್ರಪಂಚದ ಮೂಲವು ಗೊತ್ತಾಗಿಬಿಟ್ಟಿತು. ಕರ್ಮಗಳನ್ನು ಮಾಡಿಯೂ ಅಕರ್ತೃ, ವಿಷಯಗಳನ್ನು ಭೋಗಿಸಿಯೂ ಅಭೋಕ್ತೃವಾಗುವ ರಹಸ್ಯವನ್ನು ಅವರೀಗ ಕಂಡು ಹಿಡಿದರು. ಹೀಗೆ ಅವರು ಸಹಜ ಸಮಾಧಿಯ ಸುಖವನ್ನು ಕೆಲಕಾಲ ಅನುಭವಿಸಿ ಕಣ್ತೆರೆದಾಗ, ಸಮರ್ಥರು ಮುಗುಳುನಗೆ ನಗುತ್ತಿದ್ದರು. "ನಿನಗೆ ಬೇಕಾದುದೆಲ್ಲವೂ ಸಿಕ್ಕಿತಷ್ಟೇ?" ಎಂದು ಅವರು

ಕಣ್ಣಿಂಪಲೇ ಮಹಾರಾಜರಿಗೆ ಪ್ರಶ್ನೆ ಮಾಡಿದರು. ಮಹಾರಾಜರು ಅಪಾರವಾದ ಕೃತಜ್ಞತೆಯಿಂದ "ಹೌದು" ಎಂದು ತಲೆಯಲ್ಲಾಡಿಸಿ ಮನೋಭಾವದಿಂದಲೇ ಉತ್ತರಕೊಟ್ಟರು. ಮಹಾರಾಜರು ತಮ್ಮ ಮುಂದೆ ತಂದಿಟ್ಟಿದ್ದ ಐದು ರೂಪಾಯಿಗಳನ್ನು ಸಮರ್ಥರು ತಮ್ಮ ಕೈಯಲ್ಲಿ ತಕ್ಕೊಂಡು, ಆ ಕೈಯಿಂದ ಈ ಕೈಗೆ, ಈ ಕೈಯಿಂದ ಆ ಕೈಗೆ, ಹೀಗೆ ಒಂದೆರಡು ಬಾರಿ ಹಾಕಿಕೊಂಡು ಆಟವಾಡಿದಂತೆ ತೋರಿಸಿ, ಪುನಃ ಅವುಗಳನ್ನು ಪ್ರಸಾದವೆಂದು ಮಹಾರಾಜರಿಗೆ ಕೊಟ್ಟುಬಿಟ್ಟರು. ಹಣ್ಣು ಕಾಯಿಗಳ ಪ್ರಸಾದವನ್ನು ಕೂಡಿದವರೆಲ್ಲರಿಗೂ ಕೊಡಲಾಯಿತು.

ಸಮರ್ಥರ ಸನ್ನಿಧಿಯಲ್ಲಿ ಒಂದೆರಡು ದಿನಗಳನ್ನು ಕಳೆದು, ಮಹಾರಾಜರು ತಿರುಗಿ ಊರಿಗೆ ಹೊರಟರು. ಮುರಗೋಡದಲ್ಲಿ ಶ್ರೀ ಚಿದಂಬರನ ಉತ್ಸವವು ಸಮೀಪಿಸಿದ್ದರಿಂದ, ಅವರಿಗೆ ಹೆಚ್ಚು ದಿವಸ ನಿಲ್ಲಲಿಕ್ಕೆ ಅವಕಾಶವಿರಲಿಲ್ಲ. ಶ್ರೀ ಸಮರ್ಥರೂ ಅವರನ್ನು ಹೆಚ್ಚು ದಿವಸ ನಿಲ್ಲಗೊಡಲಿಲ್ಲ. ಇದ್ದಲ್ಲಿಯೇ ಇದ್ದು ಕರ್ತವ್ಯಕರ್ಮಗಳನ್ನು ಈಶ್ವರಾರ್ಪಣ ಪೂರ್ವಕವಾಗಿ ಮಾಡುತ್ತಿದ್ದರೆ, ದೇವರು ಅಲ್ಲಿಯೇ ಇರುವನೆಂದು ಶಾಸ್ತ್ರಗಳು ಹೇಳುವವಲ್ಲವೇ? ಆದುದರಿಂದ ಮಹಾರಾಜರು ಉತ್ಸವ ಕಾಲಕ್ಕೆ ಮುರಗೋಡಿಗೆ ಬಂದು, ಅಲ್ಲಿ ಎಂದಿನಕಿಂತಲೂ ಹೆಚ್ಚು ಶ್ರಮವಹಿಸಿ ದೇವರ ಸೇವೆ ಮಾಡಿದರು.

೧೭ ನಮ್ಮ ಮರಣವನ್ನು ನಾವೇ ನೋಡುವ ಬಗೆ

ದೇಹಾತ್ಮಬುದ್ಧಿಯೇ ಎಲ್ಲ ಸ್ವಾರ್ಥದ ಮೂಲವು. ಅದೇ ಅಹಂಕಾರದ ಬೀಜವು. ಎಲ್ಲ ವಾಸನೆ ಅಥವಾ ಇಚ್ಛೆಗಳಿಗೆ ಆಧಾರವು. ಈ ಅಭಿಮಾನ ವಿರುವ ವರೆಗೆ ಸಾಧಕನು ಪರಮಾರ್ಥದಲ್ಲಿ ಮುಂದುವರಿಯಲಾರನು. ಕಿಂಬಹುನಾ, ಅಹಂಕಾರದ ಸಂಪೂರ್ಣನಾಶವೇ ಪರಮಾರ್ಥದ ಗುರಿಯೆಂದು ಹೇಳಬಹುದು. ಮನುಷ್ಯನು ನಿರಿಚ್ಛ ಅಥವಾ ವಾಸನಾರಹಿತನಾಗುತ್ತ ಹೋದಂತೆ ದೇವರ ಸಮೀಪಕ್ಕೆ ಹೋಗಹತ್ತುವನು ಶ್ರೀ ತುಕಾರಾಮ ಮಹಾರಾಜರು ''ನನ್ನ ಮರಣವನ್ನು ನನ್ನ ಕಣ್ಣಿಂದಲೇ ನೋಡಿದೆನು'' ಎಂದು ಹೇಳುವಾಗ ಅಹಂಕಾರದ ನಾಶವೇ ಅಭಿಪ್ರೇತವಾಗಿರುವದೆಂಬದು ಸ್ಪಷ್ಟವಿದೆ. ಶ್ರೀ ರಾಮಾನುಜಾಚಾರ್ಯರ ಬಗ್ಗೆಯೂ ಒಂದು ಆಖ್ಯಾಯಿಕೆಯನ್ನು ಕೇಳಿದಂತೆ ನೆನಪಿದೆ. ಅವರು ಮೊದಲು ತಮ್ಮ ಗುರುಗಳ ಕಡೆಗೆ ಹೋದಾಗ ಗುರುಗಳ ಮನೆಯ ಮುಂಚಿಯ ಬಾಗಿಲು ಮುಚ್ಚಿತ್ತು. ಅವರು ಬಾಗಿಲವನ್ನು ತಟ್ಟಲು, ಗುರುಗಳು ಒಳಗಿಂದ ''ಯಾರವರು ?'' ಎಂದು ಕೇಳಿದರು. ಅದಕ್ಕೆ ರಾಮಾನುಜರು 'ನಾನು!' ಎಂದು ಉತ್ತರಕೊಟ್ಟರು. ಗುರುಗಳು ಮತ್ತೆ ''ಯಾರವರು ?'' ಎಂದೇ ಪ್ರಶ್ನೆ ಮಾಡಿದರು. ರಾಮಾನುಜರು ಮತ್ತೆ 'ನಾನು !' ಎಂದೇ ಉತ್ತರ ಕೊಟ್ಟರು. ಅದಕ್ಕೆ ಗುರುಗಳು ಶಾಂತರೀತಿಯಿಂದ ಹೇಳಿದರು:— ''ನೀನು ಸತ್ತ ಮೇಲೆ ಬಾ. ಸದ್ಯಕ್ಕೆ ಬಾಗಿಲು ತೆರೆಯುವದಿಲ್ಲ.'' ರಾಮಾನುಜರಿಗೆ ಇದರಿಂದ ದಿಗಿಲು ಬಿದ್ದಿತು. ''ಎಲ, ಇದೇನು ? ಕರುಣಾಳುಗಳೆಂದು ಹೆಸರಾದ ಗುರುಗಳು ಹೀಗೆ ಹೇಳುವರಲ್ಲ !'' ಎಂದು ಅವರು ಚಿಂತೆಗೊಳಗಾದರು. ಆದರೆ ರಾಮಾನುಜರೂ ಸಾಮಾನ್ಯರಾಗಿದ್ದಿಲ್ಲ. ವಿಚಾರಾಂತ್ಯದಲ್ಲಿ ಅವರಿಗೆ ಗುರುಗಳ ಮಾತಿನ ರಹಸ್ಯವೂ ಯಥಾರ್ಥತೆಯೂ

ಹೊಳೆಯುದಿರಲಿಲ್ಲ ''ಅಹಂಕಾರವಿರುವವರೆಗೆ ಪರಮಾರ್ಥದ ಬಾಗಿಲು ತೆರೆಯಲಾರದು ದೇಹಾಭಿಮಾನವು ನಾಶವಾದ ಮೇಲೆ ಗುರುಗಳು ನನ್ನ ಮೇಲೆ ಕೃಪೆಮಾಡುವರು ನಿರಭಿಮಾನಿಯಾದ ಮೇಲೆ ಮಾತ್ರ ನಾನು ಗುರುಗಳ ಅನುಗ್ರಹಕ್ಕೆ ಪಾತ್ರನಾಗುವೆನು. ಆಲ್ಲಿಯವರೆಗಿಲ್ಲ ಎಂಬದು ಗುರುಗಳ ಮಾತಿನ ಇಂಗಿತವಾಗಿದೆ.'' ಆದುದರಿಂದ ಪರಮಾರ್ಥಸಾಧಕರು ಪ್ರಯತ್ನ ಪೂರ್ವಕವಾಗಿ ಆಚರಣೆಯಲ್ಲಿ ತರಬೇಕಾದ ಸಾಧನವು ಒಂದೇ: ದೇಹಾಭಿಮಾನವನ್ನು ಬಿಟ್ಟು, ನಾನು ನಿತ್ಯ, ನಿರ್ಗುಣ, ನಿರಾಕಾರ ಚೈತನ್ಯ-ರೂಪಿಯಾಗಿರುವೆನು ಎಲ್ಲ ಪ್ರಾಣಿಗಳು ನನ್ನಲ್ಲಿ ಮತ್ತು ನಾನೇ ಎಲ್ಲ ಪ್ರಾಣಿಗಳಲ್ಲಿ, ಇರುವೆನೆಂಬ ವಿಚಾರವನ್ನು ಅಖಂಡವಾಗಿ ಜಾಗೃತವಾಗಿಟ್ಟು ಆಪರಂತೆ ನಡೆಯುವದು. ಇದೇ ಮುಖ್ಯ ಸಾಧನವು. ಇದರ ಹೊರತಾಗಿ ಉಳಿದೆಲ್ಲ ಸಾಧನಗಳು ನಿರರ್ಥಕವಾಗಿ ಆಯಾಸಪಡಿಸತಕ್ಕಂಥವೇ—ಎಂದು ನಮ್ಮ ಚರಿತ್ರನಾಯಕರ ಗುರುಗಳಾದ ಶ್ರೀ ಅಕ್ಕಲಕೋಟೆ ಸ್ವಾಮೀ ಮಹಾ-ರಾಜರು ಹೇಳುತ್ತಿದ್ದರಂತೆ.

ಅಹಂಕಾರ ನಾಶಕ್ಕಾಗಿ ಬೇರೆ ಬೇರೆ ಸಾಧಕರು ಬೇರೆ ಬೇರೆ ಉಪಾಯಗಳನ್ನು ಕೈಕೊಳ್ಳುವರು. ಯಾರು ಯಾವ ಸಾಧನ ಕೈಕೊಳ್ಳ ಬೇಕೆಂಬದು ಆಯಾ ಸಾಧಕರ ಮೇಲೆ ಅವಲಂಬಿಸಿರುತ್ತದೆ. ಶ್ರೀ ತುಕಾರಾಮ ಮಹಾರಾಜರು ಸಾಧನಾವಸ್ಥೆಯಲ್ಲಿ ತಮ್ಮ ಊರೊಳಗಿನ ಜನರು ತಮಗೆ ಹೇಳಿದ ಮಾತುಗಳನ್ನು ಕೇಳತಕ್ಕದ್ದೆಂದು ನಿಶ್ಚಯಿಸಿ ಅದರಂತೆ ನಡಕೊಂಡರು. ಸಣ್ಣವರಿರಲಿ, ದೊಡ್ಡವರಿರಲಿ, ಅವರೆಲ್ಲ ಪರಮಾತ್ಮ ಸ್ವರೂಪರೇ—ಎಂಬ ಭಾವನೆಯಿಂದ, ವರರು ತಮಗೆ ಯಾವ ಕೆಲಸ ಮಾಡಲಿಕ್ಕೆ ಹೇಳುವರೋ, ಆ ಕೆಲಸವನ್ನು ಶಾಂತರೀತಿಯಿಂದಲೂ ನಿರ್ವಿಕಾರ ಬುದ್ಧಿಯಿಂದಲೂ ತುಕಾರಾಮರು ಮಾಡಿದರು. ಅದರಂತೆ ಶ್ರೀ ಏಕನಾಥ ಮಹಾರಾಜರ ಕೃಪೆಗೆ ಒಳಗಾದ ಒಬ್ಬ ಪರಮಹಂಸರ ಚರಿತ್ರೆಯೂ ಪ್ರಸಿದ್ಧವಾಗಿದೆ. ಅವರು ಆತ್ಮ ಸಾಕ್ಷಾತ್ಕಾರಕ್ಕಾಗಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಬೇಕಾದ ಸಾಧನೆಗಳನ್ನು ಬೇಕಾದಷ್ಟು ಮಾಡಿದರೂ ಏನೂ ಫಲವಾಗಲಿಲ್ಲ. ಅವರು ನಿರಾಶೆಯಿಂದ ಏಕನಾಥ ಮಹಾರಾಜರ ಕಡೆಗೆ ಬಂದರು. ಏಕನಾಥರು ಅವರಿಗೊಂದು ಉಪಾಯವನ್ನು ಸೂಚಿಸಿದರು: ಕತ್ತೆ, ಕುದುರೆ, ನಾಯಿ,

ಹಂದಿ, ಮನುಷ್ಯ, ಮೊದಲಾದ ಎಲ್ಲ ಪ್ರಾಣಿಗಳಲ್ಲಿಯೂ ಪರಮಾತ್ಮನೇ ಇರುವನೆಂಬ ನಿಶ್ಚಯದಿಂದ ಬೆಟ್ಟಿಯಾದ ಪ್ರಾಣಿಗಳಿಗೆಲ್ಲ ಸಾಷ್ಟಾಂಗ ನಮಸ್ಕಾರ ಹಾಕಬೇಕು. ಆದರೆ ''ನಾನು ಪರಮಹಂಸ ಯತಿ ! ನಾನು ಹೇಗೆ ನೀಚ ಪ್ರಾಣಿಗಳಿಗೆ ನಮಸ್ಕಾರ ಮಾಡಲಿ ?'' ಎಂಬ ಶಂಕೆಯು ಅವರಿಗೆ ಬಂತು. ಕೂಡಲೇ ಏಕನಾಥರು ಅವರಿಗೆ ಹೇಳಿದರು:— 'ಅದಕ್ಕೇ ನಿಮಗಿನ್ನೂ ಜ್ಞಾನವಾಗಲೊಲ್ಲದು. 'ನಾನು ಯತಿ, ಪರಮಹಂಸ, ಶ್ರೇಷ್ಠ' ಎಂದು ಮೊದಲಾಗಿ ನಿಮ್ಮ ದೇಹಾತ್ಮಬುದ್ಧಿಯು ಜಾಗ್ರತವಾಗಿದೆ. ಅದರ ನಾಶವಾದ ಹೊರತು ಗತಿಯಿಲ್ಲ. ಅದು ಹೋಗಬೇಕಾದರೆ ನಾನು ಹೇಳಿದಂತೆ ಮಾಡಬೇಕು.'' ಪರಮಹಂಸರ ಕಣ್ಣಲ್ಲಿ ನೀರು ಬಂದವು. ಆದರೆ ಅನೇಕ ಸಾಧನೆಗಳನ್ನು ಮಾಡಿ ಪರಿಪಕ್ವರಾದ ಅವರಿಗೆ ಏಕನಾಥರ ಮಾತಿನ ಸತ್ಯತೆಯಾದರೂ ಹೊಳೆಯದಿರಲಿಲ್ಲ. ಮುಂದೆ ಅವರು ಎಲ್ಲ ಪ್ರಾಣಿಗಳು ಪರಮಾತ್ಮನೆಂಬ ಬುದ್ಧಿಯಿಂದ ದಂಡವತ್ ನಮಸ್ಕಾರ ಮಾಡಹತ್ತಿದರು. ಎಂತೆಯೇ ಮುಂದೆ ಅವರಿಗೆ ''ದಂಡವತ್ ಸ್ವಾಮಿ''ಗಳೆಂಬ ಹೆಸರು ರೂಢವಾಯಿತು. ಹೀಗೆ ಅವರ ವಂದನ ಭಕ್ತಿಯು ಪರಿಣತಾವಸ್ಥೆಯನ್ನು ಹೊಂದಿದಾಗ ಅವರೊಮ್ಮೆ ತಪ್ಪಿ ಸತ್ತ ಕತ್ತೆಗೆ ನಮಸ್ಕಾರ ಮಾಡಿದರು. ಕೂಡಲೇ ಅವರ ಭಾವನೆಯ ಬಲದಿಂದ ಸತ್ತ ಕತ್ತೆಯು ಎದ್ದು ನಿಂತಿತಂತೆ !

ಅಹಂಕಾರ ನಾಶಕ್ಕಾಗಿ ನಮ್ಮ ಚರಿತ್ರನಾಯಕರು ಮೊದಲಿನಿಂದ ಸಾಧನ ಮಾಡುತ್ತಿದ್ದರು. ಅವರು ಸಣ್ಣವರಿದ್ದಾಗ ಅವರ ತಾಯಿಯವರು ಉಳಿದ ಹುಡುಗರಿಗೆ ಕೊಟ್ಟಂತೆ ಇವರಿಗಾದರೂ ಜೋಳದ ಬಕ್ಕರಿ, ಚಟ್ಣಿ, ಮೊಸರು ಮೊದಲಾದವುಗಳನ್ನು ಕೊಡುತ್ತಿದ್ದರು ಆದರೆ ಮಹಾರಾಜರಿಗೆ ಚಟ್ಣಿ, ಮೊಸರು ಸೇರುತ್ತಿರಲಿಲ್ಲ. ಅವರಿಗೆ ಬೆಲ್ಲ-ತುಪ್ಪಗಳ ಮೇಲೆ ಬಲು ಪ್ರೀತಿ. ತಮಗೆ ಬೆಲ್ಲ ತುಪ್ಪಗಳನ್ನು ಹಾಕಿದರೇ ತಾವು ಬಕ್ಕರಿಯನ್ನು ತಿನ್ನತಕ್ಕವರೆಂದು ಅವರು ಹಟಹಿಡಿಯುತ್ತಿದ್ದರು. ಆದರೆ ಉಳಿದ ಹುಡುಗರನ್ನು ಬಿಟ್ಟು ಇವರೊಬ್ಬರಿಗೇ ಬೆಲ್ಲ-ತುಪ್ಪಗಳನ್ನು ಕೊಡುವದು ಹೇಗೆ ? ಇವರಿಗೊಬ್ಬರಿಗೇ ಕೊಟ್ಟರೆ ಉಳಿದವರು ತಂಟೆ ತಗೆಯುವರು. ಎಲ್ಲರಿಗೂ ಕೊಡಬೇಕೆಂದರೆ ಸಾಧ್ಯವಿರಲಿಲ್ಲ. ಕುಟುಂಬದ ಸಾಂಪತ್ತಿಕ ಸ್ಥಿತಿಯು

ನೆಟ್ಟಗಿಲ್ಲದ್ದರಿಂದ ದಿನಾಲು ಎಲ್ಲರಿಗೂ ಬೆಲ್ಲ ತುಪ್ಪ ಕೊಡುವದು ಶಕ್ಯವಿರಲಿಲ್ಲ. ಸೌ ಅನ್ನಪೂರ್ಣಾಬಾಯಿಯವರಿಗಾದರೋ ಮಹಾರಾಜರ ಮೇಲೆ ಜೀವವ್ಯಾಣ. ಹೀಗಾಗಿ ಆ ಸಾಧ್ವಿಮಣಿಗಳು ಬಹಳ ತೊಂದರೆಗೆ ಒಳಗಾಗುತ್ತಿದ್ದರು

ಇದಾಯಿತು ಮಹಾರಾಜರು ತೀರ ಚಿಕ್ಕವರಿದ್ದಾಗಿನ ಮಾತು. ಅವರಿಗೆ ತುಸು ತಿಳಿಯಹತ್ತಿದೊಡನೆ, ತಮ್ಮ ಕುಟುಂಬದ ಸ್ಥಿತಿಗತಿಗಳು ನೆಟ್ಟಗಿಲ್ಲೆಂದೂ, ತಾವು ಹಟ ಮಾಡುವದು ತಪ್ಪೆಂದೂ ಅವರಿಗೆ ಕೂಡಲೇ ಹೊಳೆಯಿತು. ಅಂದಿನಿಂದ ಅವರು ಪ್ರತಿಜ್ಞೆಮಾಡಿ ಬಿಟ್ಟರು—ಎಲೆಯಲ್ಲಿ ತಾನಾಗಿಯೇ ಬಂದು ಬಿದ್ದುದನ್ನು ತಿನ್ನತಕ್ಕದ್ದೇ ಹೊರತು, ಎಂದೂ ಬಾಯಿಬಿಚ್ಚಿ ಇಂತಹ ಪದಾರ್ಥಗಳೇ ಬೇಕೆಂದು ನಿರ್ಧಾರವಾಗಿ ಹೇಳಲಾಗದೆಂದು. ಆ ಪ್ರತಿಜ್ಞೆಯನ್ನು ಅವರು ಕೊನೆಯವರೆಗೂ ಅಕ್ಷರಶಃ ಪಾಲಿಸಿದರೆಂದು ಬೇರೆ ಹೇಳಬೇಕಾಗಿಲ್ಲ. ಅಂದಿನಿಂದ ಅವರ ಎಲೆಯಲ್ಲಿ ಬಿದ್ದ ಪದಾರ್ಥಗಳು ಸಿಹಿಯಿರಲಿ, ಸಪ್ಪಗಿರಲಿ, ಖಾರವಿರಲಿ, ಹುಳಿಯಿರಲಿ, ಉಪ್ಪು ಜಾಕಿದ್ದಿರಲಿ, ಹಾಕದೇ ಇದ್ದುದಿರಲಿ—ಯಾವುದಕ್ಕೂ ಮಹಾರಾಜರು ಗಮನ ಕೊಡುತ್ತಿರಲಿಲ್ಲ. ಜೀವನಕ್ಕಾಗಿ ಹೊಟ್ಟೆಯಲ್ಲಿ ಒಂದಿಷ್ಟು ಅನ್ನವನ್ನು ಹಾಕತಕ್ಕದೆಂದೂ, ಅದು ಏನೇ ಇದ್ದರೂ ಗಂಟಲೊಳಗೆ ಇಳಿಯುವಂತಿದ್ದರೆ ತೀರಿತೆಂದೂ ಮಹಾರಾಜರ ಅಂಬೋಣವಾಗಿತ್ತು. ಅನ್ನದ ರುಚಿಗಾಗಿ ಅನ್ನವನ್ನುಣ್ಣದೆ, ಬದುಕಿ ಉಳಿಯುವದಕ್ಕಾಗಿ ಅವರು ಊಟ ಮಾಡುತ್ತಿದ್ದರು. ದೇಹಕ್ಕೆ ಹಸಿವೆಯೆಂಬದು ಒಂದು ರೋಗವೆಂದೂ, ಅದಕ್ಕಾಗಿ ಅನ್ನವೆಂಬ ಔಷಧವನ್ನು ಸೇವಿಸಬೇಕೆಂದೂ, ಔಷಧವೆಂದ ಮೇಲೆ ಅದು ನಾಲಿಗೆಯ ರುಚಿಗನುಸಾರವಾಗಿ ಇರಬೇಕಾದ ನಿಯಮವಿಲ್ಲೆಂದೂ ಅವರು ಹೇಳುತ್ತಿದ್ದರು. ವಾಚಕರೇ, ನಾಲಿಗೆಯನ್ನು ಗೆದೆಯುವದು ಎಷ್ಟು ಕಠಿಣವಾಗಿರುವದೆಂಬದು ನಿಮಗೆ ಗೊತ್ತಿದೆ. ''ಎಲ್ಲಿಯ ವರೆಗೆ ನಾಲಿಗೆಯನ್ನು ಗೆದ್ದಿಲ್ಲವೋ, ಅಲ್ಲಿಯ ವರೆಗೆ ಉಳಿದೆಲ್ಲ ಇಂದ್ರಿಯಗಳನ್ನು ಗೆದ್ದರೂ ಗೆದಿಯದಿದ್ದಂತೆಯೇ ಸರಿ. ನಾಲಿಗೆಯೊಂದನ್ನು ಗೆದ್ದರೆ ಉಳಿದೆಲ್ಲ ಇಂದ್ರಿಯಗಳನ್ನು ಗೆದ್ದಂತೆಯೇ'' ಎಂದು ಭಾಗವತವು ಹೇಳುತ್ತದೆ. ಆ ಮಾತು ಎಷ್ಟು ಸತ್ಯವಾಗಿರುವದೆಂಬ ಮಾತನ್ನು ಇಲ್ಲಿ ಹೆಚ್ಚಿಗೆ ವಿವರಿಸಿ ಹೇಳುವ

ಕಾರಣವಿಲ್ಲ. ಇರಲಿ. ಅಂದಿನಿಂದ (ಆಗ ಮಹಾರಾಜರ ವಯಸ್ಸು ಬಹಳವಾದರೆ ೧೦ ವರುಷಗಳಿದಿತ್ತು.) ಮಹಾರಾಜರಿಗೆ ಊಟಬಡಿಸುವವರೇ ಬಹಳ ಎಚ್ಚರಿಕೆಯಿಂದ ಬಡಿಸಬೇಕಾಗುತ್ತಿತ್ತು. ಯಾಕೆಂದರೆ ಅವರ ಎಲೆಯೊಳಗಿನ ಪದಾರ್ಥಗಳು ತೀರಿದ್ದರೂ, ಅವರು ತಾವಾಗಿ ಬಡಿಸಿರಿ ಎಂದು ಎಂದೂ ಹೇಳುತ್ತಿದ್ದಿಲ್ಲ ಬಡಿಸುವವರು ಬಂದು ಕೇಳಿದರೆ ಮಾತ್ರ ಹಾಕಿಸಿಕೊಳ್ಳುತ್ತಿದ್ದರು, ಇಲ್ಲವಾದರೆ ಇಲ್ಲ.

ಮಹಾರಾಜರು ನಾಲಿಗೆಯನ್ನು ಹಿಡಿತದಲ್ಲಿ ತಕ್ಕೊಳ್ಳುವದಕ್ಕಾಗಿ ಇನ್ನೂ ಒಂದು ತರದ ಸಾಧನವನ್ನು ಮಾಡುತ್ತಿದ್ದರು ಅವರು ತಾವಾಗಿ ಯಾವ ಪದಾರ್ಥವನ್ನೂ ಬೇಡಿ ಹಾಕಿಸಿಕೊಳ್ಳುತ್ತಿದ್ದಿಲ್ಲವೆಂದು ಮೇಲೆ ಹೇಳಿದ್ದಾಯಿತು. ಆದರೆ ಇಷ್ಟೇ ಅಲ್ಲ, ಅನೇಕ ಸಲ ಎಲೆ ತುಂಬ ಪದಾರ್ಥಗಳನ್ನು ಬಡಿಸಿದ್ದರೂ, ಅವುಗಳೊಳಗಿಂದ ಒಂದೇ ಪದಾರ್ಥವನ್ನು ಆರಿಸಿಕೊಂಡು ಮಹಾರಾಜರು ಊಟಮಾಡುವರು. ಈ ಕ್ರಮವು ೩—೪ ದಿನಗಳವರೆಗಾದರೂ ನಡೆಯುತ್ತಿತ್ತು. ಎಂದರೆ ಒಂದೇ ಸವನೆ ೩- ೪ ದಿನಗಳವರೆಗೆ ಬರೇ ಅನ್ನ, ರೊಟ್ಟಿ, ಅಥವಾ ಸುಚ್ಚು ಮೊದಲಾದವುಗಳಲ್ಲಿ ಯಾವುದಾದರೊಂದು ಪದಾರ್ಥವನ್ನು ಆರಿಸಿ ಅದನ್ನಷ್ಟೇ ಉಣ್ಣುವರು. ಅದರ ಸಂಗಡ ಉಪ್ಪು, ಖಾರ, ಹುಳಿ, ಹಾಲು, ಮೊಸರು ಇತ್ಯಾದಿ ಯಾವ ಪದಾರ್ಥವನ್ನೂ ಸೇವಿಸುತ್ತಿರಲಿಲ್ಲ ಇನ್ನೂ ಒಂದು ವಿಶೇಷವೇನಂದರೆ : ಮಹಾರಾಜರು ಈ ಕ್ರಮವನ್ನು ಬಹುಶಃ ಯಾರಿಗೂ ತಿಳಿಯಗೊಡುತ್ತಿರಲಿಲ್ಲ. ಯಾರಿಗಾದರೂ ಈ ಮಾತು ಹೇಗೋ ಗೊತ್ತಾಗಿ 'ಹೀಗೇಕೆ ಮಾಡುವಿರಿ ?' ಎಂದು ಅವರು ಕೇಳಿದರೆ, 'ಮನಸ್ಸಿನ ಮೇಲೆ ಏನು ಪರಿಣಾಮವಾಗುವದೋ ನೋಡೋಣವೆಂದು ಹೀಗೆ ಮಾಡಿದೆ, ಇಷ್ಟೇ ಅದರಲ್ಲೇನು ವಿಶೇಷವಿದೆ ?' ಎಂದು ಮಹಾರಾಜರು ಹಾರಿಕೆಯ ಉತ್ತರ ಕೊಟ್ಟುಬಿಡುತ್ತಿದ್ದರು. ಚಾತುರ್ಮಾಸ್ಯದೊಳಗೆ ನಮ್ಮಲ್ಲಿ ನಿಯಮಿತ ಅವಧಿಯ ವರೆಗೆ ಉಪ್ಪು ಬಿಡುವದು, ಹಾಲು ಬಿಡುವದು, ಹುಳಿ ಬಿಡುವದು- ಇವೇ ಮೊದಲಾದ ನಿಯಮಗಳು ಇರುವವಷ್ಟೇ ? ಅವುಗಳ ಉದ್ದೇಶವಾದರೂ, ನಾಲಿಗೆಯನ್ನು ಹಿಡಿತದಲ್ಲಿ ಇಟ್ಟುಕೊಳ್ಳುವದೇ ಇರುವದೆಂಬದು ವಾಚಕರಿಗೆ ಗೊತ್ತಿರಲಿಕ್ಕೆ ಸಾಕು. ಇದೇ ತತ್ತ್ವವನ್ನೇ ನೆನಿಸಿ ಮಹಾರಾಜರು ಈ ತೆರನಾಗಿ ನಡೆದು

ಕೊಳ್ಳುತ್ತಿದ್ದರು. ಈ ರೀತಿಯಿಂದ ನೋಡಿದರೆ ಮಹಾರಾಜರು ಮೊದಲಿನಿಂದಲೇ ಸಂನ್ಯಾಸದ ಸಿದ್ಧತೆ ನಡೆಸಿದ್ದರೆಂದು ತಿಳಿದರೂ ತಪ್ಪಿಯಿಲ್ಲ.

ನಾಲಿಗೆಯನ್ನು ಸ್ವಾಧೀನದಲ್ಲಿಟ್ಟುಕೊಳ್ಳುವದಕ್ಕಾಗಿ ಅವರು ಯಾವಾಗಲೂ ಎಷ್ಟು ದಕ್ಷರಾಗಿದ್ದಾರೆಂಬ ಬಗ್ಗೆ ಇಲ್ಲಿಯೇ ಇನ್ನೊಂದು ಸಂಗತಿಯನ್ನು ಹೇಳುವದು ಉಚಿತವೆನಿಸುತ್ತದೆ. ಮಹಾರಾಜರು ಚತುರ್ಥಾಶ್ರಮವನ್ನು ಸ್ವೀಕರಿಸಿದ ಮೇಲೆ ಸಂಚಾರದಲ್ಲೊಮ್ಮೆ ವಂಟಮುರಿಗೆ ಹೋಗಿದ್ದರು. ವಂಟಮುರಿಯ ಕಾರಭಾರಿಗಳು ಬ್ರಾಹ್ಮಣರಾಗಿದ್ದರು ಅವರು ಪ್ರೇಮದಿಂದ ಮಹಾರಾಜರನ್ನು ಭಿಕ್ಷೆಗೆಂದು ಮನೆಗೆ ಕರೆದುಕೊಂಡು ಹೋದರು. ಮಹಾರಾಜರು ತಮ್ಮ ಮನೆಗೆ ದಯಮಾಡಿಸಿರುವರೆಂಬ ಸಂತೋಷದಿಂದ ಅವರು ಮನೆಯಲ್ಲಿ ಸೇವಿಗೆಯ ಖೀರನ್ನು ಮಾಡಿಸಿದ್ದರು. ಹಾಲು, ಸಕ್ಕರೆ, ಯಾಲಕ್ಕಿ, ಕಲ್ಲುಸಕ್ಕರೆ, ಬದಾಮು ಮತ್ತು ಬೇದಾಣೆಗಳನ್ನು ಹಾಕಿದ ಉತ್ತಮ ಪಾಯಸವು ಸಿದ್ಧವಾಗಿತ್ತು. ಮಹಾರಾಜರ ಊಟವು ತೀರ ಅಲ್ಪ. ಅವರು ಯಜಮಾನರ ಆಗ್ರಹಕ್ಕಾಗಿ ಒಂದೇ ಬಟ್ಟಲ ಪಾಯಸವನ್ನು ಹಾಕಿಸಿಕೊಂಡರು. ಏನು ಬೇಕಾದ್ದು ಮಾಡಿದರೂ ಹೆಚ್ಚಿಗೆ ಹಾಕಿಸಿಕೊಳ್ಳಲಿಲ್ಲ. ಆದರೆ ಆ ಒಂದು ಬಟ್ಟಲ ಪಾಯಸವನ್ನು ಸಹ ಇದ್ದಕ್ಕಿದ್ದಂತೆ ತಿನ್ನದೇ, ಅದರಲ್ಲಿ ಒಂದು ಚಿಮಟೆ ಉಪ್ಪು ಹಾಕಿ ತಿಂದರಂತೆ! ವಾಚಕರೇ, ನೋಡಿದಿರಾ ಮಹಾರಾಜರ ಅಹಂಕಾರ ನಾಶದ ಉಗ್ರೋಪಾಯವನ್ನು! ಓಮ್ಮೆ ನಾಲಿಗೆಗೆ ರುಚಿಸಿಕ್ಕರೆ ಅದು ನಮ್ಮನ್ನು ತಿಳಿಯಗೊಡದಂತೆ ಬಲೆಯಲ್ಲಿ ಸಿಕ್ಕಿಸುವದೆಂಬ ಮಾತು ಸುಳ್ಳಲ್ಲ. ಆದುದರಿಂದ ಸಾಧಕರು ಯಾವಾಗಲೂ ಈ ಬಗ್ಗೆ ಒಳ್ಳೇ ಎಚ್ಚರಾಗಿರಬೇಕು.

ನಮ್ಮಲ್ಲಿ ಅಹಂಕಾರವು ಎಷ್ಟರ ಮಟ್ಟಿಗೆ ಜಾಗೃತ ಅಥವಾ ನಾಶವಾಗಿದೆ, ಮತ್ತು ಎಲ್ಲ ಪ್ರಾಣಿಗಳೂ ಭಗವತ್‌ಸ್ವರೂಪವೇ ಎಂಬ ತಿಳಿವಳಿಕೆಯು ನಮ್ಮಲ್ಲಿ ಎಷ್ಟರ ಮಟ್ಟಿಗೆ ಉಂಟಾಗಿದೆ- ಎಂಬ ಮಾತನ್ನು ನಾವು ಉಳಿದವರ ಸಂಗಡ ಯಾವ ರೀತಿಯಿಂದ ವರ್ತಿಸುತ್ತೇವೆಂಬುದರ ಮೇಲಿಂದ ನಿರ್ಣಯಿಸಬಹುದು. ಹೀಗೆ ಮನುಷ್ಯರು ಉಳಿದವರೊಡನೆ ಯಾವ ರೀತಿಯಿಂದ ನಡೆದುಕೊಳ್ಳುತ್ತಾರೆಂಬದನ್ನು ವಿಚಾರಿಸಿ ನೋಡಿದರೆ, ಅವರಲ್ಲಿ ನಾಲ್ಕು ವರ್ಗಗಳನ್ನು ಮಾಡಬಹುದೆಂದು ಸುಭಾಷಿತಕಾರರು ಹೇಳುತ್ತಾರೆ: (೧) ಪರಹಿತಕ್ಕಾಗಿ ತಮ್ಮ ಸ್ವಾರ್ಥವನ್ನೂ ಕೂಡ ಬಿಟ್ಟುಕೊಡುವವರು

ಮೊದಲನೆಯ ವರ್ಗದವರು. ತಮಗೆ ಬೇಕಾದಷ್ಟು ಹಾನಿಯಾಗಲಿ, ದುಃಖವಾಗಲಿ, ಅಥವಾ ತಮ್ಮ ಮೇಲೆ ಬೇಕಾದಂಥ ಪ್ರಸಂಗ ಬರಲಿ, ಈ ಜನರು ಕೇವಲ ಪರೋಪಕಾರಕ್ಕಾಗಿಯೇ ತಮ್ಮ ಜೀವನವನ್ನು ಮೀಸಲಾಗಿಟ್ಟಿರುವರು. ಇವರಿಗೆ ''ಉತ್ತಮರು'' ಅಥವಾ ''ಸತ್ಪುರುಷರು'' ಎಂದು ಹೆಸರು. (೨) ಬೇರೆ ಕೆಲವರು ತಮ್ಮ ಸ್ವಾರ್ಥವನ್ನು ಮೊದಲು ಸಾಧಿಸಿಕೊಂಡು, ಆ ಮೇಲೆ ತಮ್ಮ ಕೈಯಿಂದಾದಷ್ಟು ಪರಹಿತವನ್ನು ಸಾಧಿಸಲಿಕ್ಕೆ ಯತ್ನಿಸುವರು. ಎಂದರೆ ಇವರು ಸ್ವಾರ್ಥ-ಪರಾರ್ಥಗಳೆರಡಕ್ಕೂ ಪ್ರಯತ್ನ ಮಾಡುವರು. ಆದರೆ ಇವರಿಗೆ ಸ್ವಾರ್ಥ ಮುಖ್ಯ, ಪರಾರ್ಥ ಗೌಣ. ತಮ್ಮ ಸ್ವಾರ್ಥಕ್ಕೆ ವಿರೋಧ ಬರದಂತೆ ಇವರು ಪರೋಪಕಾರ ಮಾಡತಕ್ಕವರು ಪರೋಪಕಾರದಿಂದ ಸ್ವಾರ್ಥಕ್ಕೆ ಘಾತುಕವಾಗುವಂತಿದ್ದರೆ ಇವರು ಪರೋಪಕಾರದ ಉಸಾಬರಿಗೇ ಹೋಗಲಾರರೆಂಬದು ಸ್ಪಷ್ಟವಿದೆ. ಇವರನ್ನು 'ಮಧ್ಯಮರು' ಅಥವಾ 'ಸಾಮಾನ್ಯರು' ಎಂದು ಕರೆಯಬಹುದು. (೩) ಮೂರನೆಯ ವರ್ಗದ ಜನರು ಯಾವಾಗಲೂ ತಮ್ಮ ಸ್ವಾರ್ಥಕ್ಕಾಗಿಯೇ ಯತ್ನಿಸುವವರು. ಅವರಲ್ಲಿ ಪರಹಿತದ ವಿಚಾರವೇ ಇರುವದಿಲ್ಲ. ಇಷ್ಟೇ ಅಲ್ಲ. ಅವರು ತಮ್ಮ ಸ್ವಾರ್ಥಕ್ಕಾಗಿ ಪರರ ಹಿತಕ್ಕೆ ಕಲ್ಲು ಕೂಡ ಹಾಕುತ್ತಾರೆ. ಎಂದರೆ ಎರಡನೆಯವರಿಗೆ ಅಹಿತ ಮಾಡಿಯೂ ಇವರು ತಮ್ಮ ಸ್ವಾರ್ಥವನ್ನು ಸಾಧಿಸುವರು. ಇವರನ್ನು 'ಅಧಮರು' ಅಥವಾ 'ಮಾನವ ರಾಕ್ಷಸರೆ'ಂದು ಕರೆಯಬಹುದು. (೪) ಆದರೆ ಕೊನೆಯ ವರ್ಗದ ಜನರು ಇದಕ್ಕೂ ಮುಂದೆ ಹೋಗುತ್ತಾರೆ. ತಮ್ಮ ಸಾರ್ಥ ಸಾಧಿಸದಂತಿದ್ದರೂ ಕೂಡ, ಎರಡನೆಯವರಿಗೆ ಮಾತ್ರ ಎಂದೂ ಹಿತವಾಗಬಾರದೆಂದು ಈ ಜನರು ಬಯಸುತ್ತಾರೆ. ಎಂದರೆ ತಮಗೆ ಲಾಭವಾಗದಂತಿದ್ದರೂ, ಎರಡನೆಯವರಿಗೆ ಕೆಡಕಾಗಲೆಂದು ಇವರ ಇಚ್ಛೆಯಿರುತ್ತದೆ. ನಿಷ್ಕಾರಣವಾಗಿ ಪರರಿಗೆ ಕೇಡು ಮಾಡುವ ಈ ವರ್ಗದ ಜನರಿಗೆ ಯಾವ ಹೆಸರನ್ನು ಕೊಡಬೇಕೋ ತಿಳಿಯದೆಂದು ಸುಭಾಷಿತಕಾರರು ನಿಟ್ಟುಸುರು ಬಿಡುತ್ತಾರೆ.

ಮಹಾರಾಜರು ಮೊದಲನೆಯ ವರ್ಗದ ಸತ್ಪುರುಷರಿಗೆ ಸೇರಿದವರೆಂಬದು, ಅವರು ಮೂರನೆಯ ವರುಷದ ಶಿಕ್ಷಣಕ್ಕಾಗಿ ಟ್ರೇನಿಂಗ ಕಾಲೇಜದಲ್ಲಿದ್ದಾಗ ಪ್ರಕಟವಾಯಿತು. ನಿಜವಾಗಿ ನೋಡಿದರೆ ಎರಡನೆಯ

ನರ್ಸದ ಶಿಕ್ಷಣ ಮುಗಿದ ಕೂಡಲೇ ಅವರು ಮುಂದಿನ ಶಿಕ್ಷಣ ಪಡೆಯುವೆ, ನೌಕರಿಗೆ ಸೇರಬೇಕೆಂದು ಗೊತ್ತಾಗಿತ್ತು. ಆದರೆ ಎರಡನೆಯ ವರುಷದ ಪರೀಕ್ಷೆಯಲ್ಲಿ ಅವರು ಒಂದನೆಯ ನಂಬರು ಬಂದದ್ದರಿಂದ ಅವರ ಗೆಳೆಯರೂ ಶಿಕ್ಷಕರೂ ಇನ್ನೊಂದು ವರುಷ ಶಿಕ್ಷಣ ಪಡೆಯಲೇಬೇಕೆಂದು ಅವರಿಗೆ ಆಗ್ರಹ ಮಾಡಿದರು. ಅವರ ಆಗ್ರಹಕ್ಕೆ ಒಳಪಟ್ಟು ಮಹಾರಾಜರು ಮೂರನೆಯ ವರುಷದ ಶಿಕ್ಷಣಕ್ಕೆಂದು ಧಾರವಾಡಕ್ಕೆ ಬಂದರು. ಅಲ್ಲಿ ಅವರು ಬೇರೆ ಕಡೆಗೆ ಬಿಡಾರ ಮಾಡದೆ ಮುದೀಹಾಳದ ದತ್ತಮಂದಿರದಲ್ಲಿಯೇ ವಾಸಮಾಡಹತ್ತಿದರು. ಮತ್ತು ತಮ್ಮ ಎಲ್ಲ ವೇಳೆಯನ್ನು ಶ್ರೀ ದತ್ತನ ಭಜನ ಪೂಜನಗಳಲ್ಲಿಯೇ ಕಳೆಯಹತ್ತಿದರು. ಮೂರನೆಯ ವರುಷದ ಅಭ್ಯಾಸವೂ ಗಡಚಾದದ್ದೇ. ಹೀಗಾಗಿ ಮಹಾರಾಜರಿಗೆ ತಮ್ಮ ಕೈಯಿಂದ ಅಡಿಗೆ ಮಾಡಿಕೊಳ್ಳುವದು ಅಶಕ್ಯವೆಂದೆನಿಸಹತ್ತಿತು. ಆದುದರಿಂದ ಅವರು ತಮ್ಮ ತಾಯಿಯವರಾದ ಸೌ. ಅನ್ನಪೂರ್ಣಾಬಾಯಿಯವರನ್ನೇ ಧಾರವಾಡಕ್ಕೆ ಕರಿಸಿಕೊಂಡರು. ಮತ್ತು ತಾಯಿ ಮಕ್ಕಳು ದತ್ತಮಂದಿರದಲ್ಲಿಯೇ ಇರಲಾರಂಭಿಸಿದರು. ಅನ್ನಪೂರ್ಣಾಬಾಯಿಯವರು ಮಗನ ಹೊಟ್ಟೆನೆತ್ತಿಗಳನ್ನು ಚನ್ನಾಗಿ ನೋಡಿಕೊಳ್ಳಹತ್ತಿದರೆಂದು ಬೇರೆ ಹೇಳಬೇಕಾಗಿಲ್ಲ.

ಆದರೆ ಆ ಕಾಲಕ್ಕೆ ದಕ್ಷಿಣ ಹಿಂದುಸ್ಥಾನದಲ್ಲಿ ಮಹೋಗ್ರವಾದ 'ಡವಗೀ ಬರವು' ಬಿದ್ದಿತ್ತೆಂಬದು ವಾಚಕರಿಗೆ ಗೊತ್ತಿದೆ. ಕಾಳಿನ ಧಾರಣೆಗಳು ಮೂರು ಸೇರಿಗೆ ಬಂದು ನಿಂತಿದ್ದವು. ಬೇಕಾದಷ್ಟು ರೊಕ್ಕ ಕೊಟ್ಟೇವೆಂದರೂ, ವೇಳೆಗೆ ಕಾಳು ಸಿಕ್ಕುವದು ಶಕ್ಯವಿದ್ದಿಲ್ಲ. ಮಹಾರಾಜರಾದರೋ ತಮ್ಮ ಸಲುವಾಗಿ ಎರಡನೆಯವರಿಗೆ ಎಂದೂ ಬಾಯಿ ತೆರೆಯುವವರಲ್ಲ. ದೇವರು ತಮಗೆ ಕೊಟ್ಟಷ್ಟರಲ್ಲಿ ಸಂತೋಷದಿಂದಿರಬೇಕೆಂದು ಅವರು ಭೀಷ್ಮ ಪ್ರತಿಜ್ಞೆಮಾಡಿ ನಡೆಯುತಕ್ಕವರು. ಎಂದ ಮೇಲೆ ಈ ಕಾಲದಲ್ಲಿ ಎಷ್ಟು ಕಷ್ಟವಾಗಿರಬಹುದೆಂಬದನ್ನು ವಾಚಕರೇ ತರ್ಕಿಸಬೇಕು. ಅವರು ತಾವಾಗಿಯೇ ಕೈಗಡ ಕೊಡಿರೆಂದು ಎರಡನೆಯವರಿಗೆ ಎಂದೂ ಕೇಳುತ್ತಿರಲಿಲ್ಲವಾದುದರಿಂದ, ಅವರ ಈ ಸ್ವಭಾವವನ್ನರಿತ ಅವರ ಗೆಳೆಯರೂ, ಸೌ. ನಾಗಮ್ಮನವರೂ, ಮಹಾರಾಜರಿಗೆ ತಾವೇ ಸಹಾಯ ಮಾಡಲು ಮುಂದೆ ಬರುತ್ತಿದ್ದರು. ಆದರೆ ಅದೂ ಮಹಾರಾಜರ ಮನಸ್ಸಿಗೆ ಬರುತ್ತಿದ್ದಿಲ್ಲ.

ಅವರು ಸಹಾಯ ಮಾಡಬೇಕೆಂದು ಬಯಸಿದಾಗ, ಮನೆಯವರಿಂದ ತಮಗೆ ಸಾಕಷ್ಟು ಹಣವು ಬಂದಿರುವದೆಂದೂ, ತಮಗೆ ಯಾವುದರ ಕೊರತೆಯೂ ಇಲ್ಲವೆಂದೂ ಅವರು ಹೇಳಿಬಿಡುತ್ತಿದ್ದರು. ಮನೆಯವರು ಪತ್ರ ಬರೆದಾಗ, ಧಾರವಾಡದ ಗೆಳೆಯರಿಂದ ತಮಗೆ ಸಹಾಯವಾಗುತ್ತಿರುವದೆಂದೂ, ಮನೆಯವರು ಯಾವುದೇ ರೀತಿಯಿಂದ ಚಿಂತೆ ಮಾಡುವ ಕಾರಣವಿಲ್ಲೆಂದೂ ಉತ್ತರ ಬರೆಯುವರು. ಯಾಕೆಂದರೆ ಮನೆತನದ ಸ್ಥಿತಿಯು ನೆಟ್ಟಗಿಲ್ಲವಾದುದರಿಂದ, ಅಣ್ಣಂದಿರು ತಮ್ಮ ಮನೆತನವನ್ನೇ ಸಾಗಿಸಿಕೊಂಡು ಹೋಗುವದು ಕಠಿಣವಿದ್ದು, ಅವರಿಗೆ ಹೆಚ್ಚಿನ ತೊಂದರೆಯನ್ನು ಕೊಡುವದು ಸರಿಯಲ್ಲವೆಂದು ಅವರು ಬಗೆಯುತ್ತಿದ್ದರು ಹೀಗಾಗಿ ಮಹಾರಾಜರು ಆಗ ಒಳ್ಳೇ ಕಷ್ಟದಿಂದ ಕಾಲಕಳೆಯಬೇಕಾಯಿತು. ಆದರೆ ಅವರು ಅದೆಲ್ಲವನ್ನು ಧೈರ್ಯದಿಂದ ಸಹಿಸಿ ತಮ್ಮ ಸತ್ತ್ವವನ್ನೂ ಚೆನ್ನಾಗಿ ಕಾಯ್ದುಕೊಂಡರು.

ಪ್ರವಾಸದಲ್ಲಿ ನಾಲ್ಕುಜನ ಬ್ರಾಹ್ಮಣರೊಮ್ಮೆ ಇಳಿದುಕೊಳ್ಳಲಿಕ್ಕೆ ಮದಿಹಾಳದ ದತ್ತಮಂದಿರಕ್ಕೆ ಬಂದಿರು. ಮಹಾರಾಜರು ಅವರ ಕೈಕಾಲಿಗೆ ನೀರುಕೊಟ್ಟು ಮಧುರವಾದ ವಚನಗಳಿಂದ ಸ್ವಾಗತವಿತ್ತರು. ಬ್ರಾಹ್ಮಣರಿಗೆ ಮೂರು ನಾಲ್ಕು ದಿನಗಳಿಂದ ಹೊಟ್ಟಿತುಂಬ ಅನ್ನಸಿಕ್ಕಿರಲಿಲ್ಲ. ಅವರು ಹಸಿದು ಕಕ್ರಾಂತರಾಗಿದ್ದರು. ಅವರ ದೀನಮುಖವನ್ನು ನೋಡಿ ಮಹಾರಾಜರಿಗೆ ಕಳವಳವಾಯಿತು. ವಿಚಾರಾಂತ್ಯದಲ್ಲಿ ಅವರು ಉಪವಾಸವಿರುವ ಸಂಗತಿಯು ಹೊರಬಿತ್ತು. ಮಹಾರಾಜರ ಕೋಮಲವಾದ ಮನಸ್ಸಿಗೆ ಅದನ್ನು ಸಹಿಸುವದಾಗಲಿಲ್ಲ. ಆದರೆ ಮಾಡುವದೇನು? ಮನೆಯಲ್ಲಂತೂ ಅಕ್ಕಿ-ಬೇಳೆ ಎನೂ ಇರಲಿಲ್ಲ. ಎಲ್ಲವನ್ನೂ ಹೇಟೆಯಿಂದ ತಂದಾಗಲೇ ಅಡಿಗೆಯ ಆಸೆ. ಕಿಸೆಯಲ್ಲಿ ನೋಡಿದರೆ ಒಂದು ಪೈ ಕೂಡ ಇಲ್ಲ. ಇಂತಹ ವೇಳೆಯಲ್ಲಿ ಏನು ಮಾಡಬೇಕು? ಇದು ಪರೀಕ್ಷೆಯ ವೇಳೆಯಾಗಿದ್ದು, ಹೇಗಾದರೂ ಮಾಡಿ ತಮ್ಮ ಸತ್ತ್ವವನ್ನು ಕಾಯ್ದುಕೊಳ್ಳಬೇಕೆಂದು ಮಹಾರಾಜರು ನಿಶ್ಚಯಿಸಿದರು. ಮನೆಗೆ ಹಸಿದು ಬಂದ ಅತಿಥಿ-ಅಭ್ಯಾಗತರಿಗೆ ಊಟಕ್ಕೆ ಹಾಕಲೇಬೇಕು—

ನ ಕಂಚನ ವಸತೌ ಪ್ರತ್ಯಾಚಕ್ಷೀತ ।....
ತಸ್ಮಾದ್ಯಯಾ ಕಯಾಚ ವಿಧಯಾ ಬಹ್ವಶ್ನಂ ಪ್ರಾಪ್ನುಯಾತ್॥

ಎಂದರೆ 'ಮನೆಗೆ ಬಂದವರನ್ನು ಹಿಂದಕ್ಕೆ ಕಳಿಸಬೇಡಿರಿ.... ...ಅದಕ್ಕಾಗಿ ಏನು ಬೇಕಾದ್ದು ಮಾಡಿ ಮನೆಯಲ್ಲಿ ಬಹಳಷ್ಟು ಅನ್ನಸಂಗ್ರಹ ಮಾಡಿರಿ' ಎಂದು ಉಪನಿಷತ್ತು ಹೇಳುತ್ತದೆ. ಹಸಿದು ಬಂದ ಸಾಧುಸಂತರಿಗೆ ಅನ್ನ ಕೊಡುವದಕ್ಕಾಗಿ ಕಬೀರ ಕಮಾಲರು ಕಳ್ಳತನ ಕೂಡ ಮಾಡಿದರಂತೆ! ಅತಿಥಿ ಸೇವೆಯು ಅಹಂಕಾರ ನಾಶಕ್ಕೆ ಒಂದು ಉತ್ತಮವಾದ ಉಪಾಯವು. ಆದುದರಿಂದ ಮಹಾರಾಜರು ತಮ್ಮ ಜರದ ಹೊಸ ರುಮಾಲವನ್ನು ತಕ್ಕೊಂಡು ಹೊರಬಿದ್ದರು. ಮತ್ತು ಅದನ್ನು ಒಬ್ಬ ಅಂಗಡಿಕಾರನಲ್ಲಿ ಅಡವು ಇಟ್ಟು, ಬ್ರಾಹ್ಮಣರಿಗೆ ಬೇಕಾಗುವಷ್ಟು ಆಹಾರ ಪದಾರ್ಥಗಳನ್ನು ತಕ್ಕೊಂಡು ಬಂದರು ತಾಯಿಯವರಾದ ಅನ್ನಪೂರ್ಣಾಬಾಯಿಯವರು ಸಂತೋಷದಿಂದ ಅಡಿಗೆ ಮಾಡಿದರು. ಬ್ರಾಹ್ಮಣರಿಗೆ ಎಲೆಬಡಿಸಿದ್ದಾಯಿತು ಆಪೋಶನ ತೆಗೆದುಕೊಳ್ಳುವ ಮೊದಲು ಮಹಾರಾಜರು ಏಕೋವಿಷ್ಣುರ್ಮಹದ್ಭೂತಂ....' ಎಂಬ ಶ್ಲೋಕವನ್ನು ಹೇಳಹತ್ತಿದರು. ಅವರ ಕಂಠವು ಬಿಗಿದುಬಂತು. ಅವರಿಗಾಗ ಬ್ರಾಹ್ಮಣರು ನಿಜವಾಗಿಯೂ ಪರಮಾತ್ಮನಂತೆ ಕಂಡರು. ಮಹಾರಾಜರ ಈ ಸೇವೆಯು ನಿಜವಾಗಿಯೂ ಕೃಷ್ಣಾರ್ಪಣವಾಯಿತು. ಬ್ರಾಹ್ಮಣರ ಹೊಟ್ಟೆತುಂಬ ಊಟಮಾಡಿ ಸಂತುಷ್ಟರಾದರು. ಅವರು ಹೋಗುವಾಗ ತಾಯಿ-ಮಕ್ಕಳನ್ನು ಮನಃಪೂರ್ವಕವಾಗಿ ಆಶೀರ್ವದಿಸಿದರು.

ಮಹಾರಾಜರು ಹೊಸ ಜರದ ರುಮಾಲನ್ನು ಹಾಕಿಕೊಳ್ಳದೆ, ಹಳೆಯ ಮುಂಡಾಸವನ್ನು ಸುತ್ತಿಕೊಂಡು ಅಡ್ಡಾಡುವದನ್ನು ನಾಗಮ್ಮನವರು ನೋಡಿದರು. ಅವರಿಗೆ ಮಹಾರಾಜರ ಮೇಲೆ ವಾತ್ಸಲ್ಯಪ್ರೇಮ ಅವರ ಸ್ವಂತ ಹೊಟ್ಟೆಯಲ್ಲಿ ಮಕ್ಕಳಾಗಿರಲಿಲ್ಲ. ತಮ್ಮ ಅಪತ್ಯವೆಂದರೆ ಮಹಾರಾಜರೇ ಎಂದು ಅವರು ತಿಳಿಯುತ್ತಿದ್ದರು. ಮಹಾರಾಜರ ತಲೆಯ ಮೇಲೆ ಹೊಸ ರುಮಾಲವು ಏಕೆ ಕಾಣಿಸಲೊಲ್ಲದೆಂಬದು ಅವಳಿಗೆ ತಿಳಿಯದಂತಾಯಿತು. ಅವಳು ಪ್ರೇಮದಿಂದ ಮಹಾರಾಜರನ್ನು ಕರೆದು 'ಅಪ್ಪಾ! ಈ ಹಳೆಯ ಮುಂಡಾಸವನ್ನೇಕೆ ಸುತ್ತಿರುವೆ? ನಾನು ಕೊಟ್ಟ ಹೊಸ ರುಮಾಲವೆಲ್ಲಿ ಹೋಯಿತು?' ಎಂದು ಕೇಳಿದಳು. ಮಹಾರಾಜರಿಗೆ ಸುಳ್ಳಾಡಿ ಗೊತ್ತಿರಲಿಲ್ಲ. ಅವಳಿಂದ ನಿಜವಾದ ಸಂಗತಿಯನ್ನು ಮುಚ್ಚಿಟ್ಟುಕೊಳ್ಳುವದೂ ಶಕ್ಯವಿರಲಿಲ್ಲ. ಅವರು ವಸ್ತುಸ್ಥಿತಿಯನ್ನೆಲ್ಲ ಅವಳಿಗೆ ತಿಳಿಸಿಬಿಟ್ಟರು. ನಾಗೂಬಾಯಿಯ

ಕಣ್ತುಂಬ ನೀರುಬಂದವು. 'ಅಪ್ಪಾ, ನಿನಗೇನೆನ್ನಬೇಕೋ ತಿಳಿಯದು. ನಿನ್ನ ಉದ್ದೇಶವು ಸ್ತುತ್ಯವಾದುದೆಂಬ ಮಾತು ಸರಿ. ಆದರೆ ಔದಾರ್ಯಕ್ಕಾದರೂ ಮಿತಿಯಿರಬೇಕಪ್ಪೇ ? ಹೀಗೆ ಹುಚ್ಚನಂತೆ ಮಾಡಹತ್ತಿದರೆ ಇಲ್ಲದ ಸಂಕಟದಲ್ಲಿ ಬೀಳಬೇಕಾದೀತು ಬರಗಾಲದಲ್ಲಿ ಬಂದವರಿಗೆಲ್ಲ ಊಟ ಹಾಕುವದೆಂದರೆ ಅಶಕ್ಯವಾದ ಮಾತು. ನೀನು ಬಂದವರಿಗೆ ಊಟ ಹಾಕುವಿಯೆಂದು ತಿಳಿದರೆ ನಿನ್ನ ಬಾಗಿಲದಲ್ಲಿ ದಿನಾಲೂ ನೂರಾರು ಜನರು ಮುಗಿಬೀಳಬಹುದು' ಎಂದು ನಾಗಮ್ಮನವರು ಸಿಟ್ಟುಮಾಡಿ, ಅಂಗಡಿ ಕಾರನ ರೊಕ್ಕಕೊಟ್ಟು ರುಮಾಲನ್ನು ಬಿಡಿಸಿ ತರಿಸಿ ಮಹಾರಾಜರಿಗೆ ಕೊಟ್ಟರು.

ಮತ್ತೊಂದು ಸಲ ಇದಕ್ಕೂ ಕಠಿಣವಾದ ಪ್ರಸಂಗ ಬಂತು ಮನೆಯಲ್ಲಿ ಕಾಳುಕಡಿಗಳೇನೂ ಇರಲಿಲ್ಲ. ಕೊಳ್ಳಲಿಕ್ಕೆ ಹಣವೂ ಇರಲಿಲ್ಲ. ಹಾಗೂ ಹೀಗೂ ಮಾಡಿ ಒಬ್ಬರ ಪೂರ್ತಿ ಅಡಿಗೆ ಮಾಡಬಹುದಾಗಿತ್ತು. ಆದರೆ ಮನೆಯಲ್ಲಿ ತಾಯಿ-ಮಕ್ಕಳಿಬ್ಬರು. ಅವರಲ್ಲಿ ಯಾರು ಉಣ್ಣಬೇಕು ? ಯಾರು ಉಪವಾಸವಿರಬೇಕು ? ಮಗನನ್ನು ಉಪವಾಸ ಕೆಡವಿ ತಾಯಿಯು ಉಣ್ಣಲಿಕ್ಕೊಪ್ಪುವದು ಶಕ್ಯವಿರಲಿಲ್ಲ. ತಾಯಿಯನ್ನು ಉಪವಾಸ ಕೆಡವಿ ಮಗನೂ ಉಣ್ಣಲಿಕ್ಕೆ ಸಿದ್ಧವಾಗುವದು ಶಕ್ಯವಿರಲಿಲ್ಲ. ಆಗ ಮಹಾರಾಜರು ಒಂದು ಯುಕ್ತಿಯನ್ನು ಮಾಡಿದರು. ಹಾಗೆಯೇ ತಾಯಿಗೆ 'ನೀನು ಉಣ್ಣು. ನಾನು ಉಪವಾಸವಿರುವೆನು.' ಎಂದು ಹೇಳಿದರೆ ಆ ಪುತ್ರವತ್ಸಲೆಯು ಒಪ್ಪುವದಿಲ್ಲೆಂದು ತಿಳಿದು ಅವರು ಜೇರೊಂದು ಹಂಚಿಕೆ ಹೂಡಿದರು. ತಮಗೆ ಗೆಳೆಯರೊಬ್ಬರ ಮನೆಯಲ್ಲಿ ಆಮಂತ್ರಣವಿರುವದೆಂದೂ, ತಾವು ಮಧ್ಯಾಹ್ನದ ಊಟಕ್ಕೆ ಅಲ್ಲಿಗೆ ಹೋಗುವೆವೆಂದೂ, ಅವರು ತಮ್ಮ ತಾಯಿಗೆ ಹೇಳಿದರು. ಏನೂ ಕಪಟವರಿಯದ ತಾಯಿಯು ಆ ಮಾತು ಸತ್ಯವೆಂದು ನಂಬಿದಳು. ಮಹಾರಾಜರು ಊಟದ ವೇಳೆಯಾದೊಡನೆ ಊರಹೊರಗೆ ಹೋಗಿ ಒಂದು ಬೇವಿನ ಗಿಡದ ಕೆಳಗೆ ಕುಳಿತುಕೊಂಡರು. ಮತ್ತು ಅಲ್ಲಿ ತಮ್ಮ ಹೃದಯಸ್ಪರ್ಶಿಯಾದ ಭಜನವನ್ನು ಸುರುವು ಮಾಡಿದರು. ಎರಡು-ಮೂರು ಗಂಟೆಯಾಗುವ ವರೆಗೆ ಅವರ ಭಜನವು ನಡೆಯಿತು. ಸುತ್ತಲಿನ ಪಶುಪಕ್ಷಿಗಳೂ ಸಹ ಇವರ ಭಜನಾನಂದ ಸುಖವನ್ನು ಅನುಭವಿಸಹತ್ತಿದವು.

ಆದರೆ ಹಸಿವೆಯೆಂಬದು ದೈಹಿಕ ರೋಗವು. ಅದು ಬರೇ ಭಜನೆಯಿಂದ ಹೇಗೆ ದೂರಾಗಬೇಕು? ಏನು ಮಾಡಿದರೂ ಹೊಟ್ಟೆಯು ಕೇಳದಂತಾಯಿತು. ಅಂತ್ಯಕಾಲಕ್ಕಿಂತ ಮಧ್ಯಾಹ್ನಕಾಲವು ಕಠಿಣವೆಂದು ಹಿರಿಯರು ಹೇಳುವದು ಸುಳ್ಳಲ್ಲ. ಮಹಾರಾಜರ ಹೊಟ್ಟೆಯಲ್ಲಿ ಕಾಗೆಗಳು ಓಡಾಡಹತ್ತಿದವು. ಆಗ ಮಹಾರಾಜರು ಬೇವಿನ ಎಲೆಗಳನ್ನೇ ಅರೆದು ರಸತೆಗೆದು ಎರಡು ದೊನ್ನೆಯಷ್ಟು ಕುಡಿದರು. ಈ ರೀತಿಯಾಗಿ ಹಾಗೂ ಹೀಗೂ ಮಾಡಿ ಸಂಜೆಯ ವರೆಗೆ ವೇಳೆಗಳೆದು ಸಾಯುಂಕಾಲವಾಗುತ್ತಲೇ ಮನೆಗೆ ಬಂದರು. ಮತ್ತು ನಿತ್ಯಕ್ರಮದಂತೆ ಕೈಕಾಲುನೋರೆ ತೊಳಕೊಂಡು ಸಾಯುಂಸಂಧ್ಯೆ ಮುಗಿಸಿಕೊಂಡು ಭಜನ ಮಾಡಹತ್ತಿದರು. ಭಜನೆಯು ಮುಗಿದೊಡನೆ ಅವರು ಕೈಯೊಳಗೆ ಆರತಿಯ ತಟ್ಟೆಯನ್ನು ಹಿಡಿಮಕೊಂಡು, ದೇವರ ಮುಂದೆ ಎದ್ದು ನಿಂತರು. ದೇವರಿಗೆ ಒಂದು ಆರತಿಯೂ ಆಯಿತು ಆದರೆ ಹೊಸ ತಾರುಣ್ಯದಲ್ಲಿ ದೃಢಕಾಯರಾಗಿದ್ದ ಮಹಾರಾಜರಿಗೆ ಹಸಿವೆಯು ಎಷ್ಟೊತ್ತು ತಡೆಯಬೇಕು? ಅವರು ಮತ್ತೊಂದು ಪದವನ್ನು ಅನ್ನುತ್ತ ಆರತೀ ಮಾಡುಮಾಡುತ್ತಿದ್ದಂತೆ ಒಮ್ಮೆಲೇ ಧೊಪ್ಪನೇ ನೆಲಕ್ಕೆ ಬಿದ್ದು ಬಿಟ್ಟರು. ಕೈಯೊಳಗಿನ ಆರತಿಯ ತಟ್ಟೆಯು ಅಸ್ತಾವ್ಯಸ್ತವಾಗಿ ಬಿದ್ದಿತು. ಅವರಿಗೆ ಮೈಮೇಲೆ ಎಚ್ಚರಿಕೆಯೇ ಇರಲಿಲ್ಲ. ಕೂಡಿದ ಜನರೆಲ್ಲ ಗಾಬರಿಯಾದರು. ನಾಗೂಬಾಯಿ ಮತ್ತು ಅನ್ನಪೂರ್ಣಾಬಾಯಿಯವರಂತೂ ಹೌಹಾರಿ ನಿಂತರು. ಪಾಪ, ಅವರಿಗೇನು ಗೊತ್ತು, ಮಹಾರಾಜರು ಹಸಿವೆಯಿಂದ ಮೂರ್ಛಿತರಾಗಿರುವರೆಂದು? ಅವರಿಗೆ ಏನು ಮಾಡಬೇಕೆಂಬದು ತಿಳಿಯದಂತಾಯಿತು. ಕೂಡಿದವರಲ್ಲೊಬ್ಬರು ಮಹಾರಾಜರ ನೆತ್ತಿಗೆ ನೀರು ಬಡಿದರು. ಮತ್ತು ಬಾಯಲ್ಲಿ ಸ್ವಲ್ಪ ಹಾಲನ್ನು ಹಾಕಿದರು. ಆದರಿಂದ ಮಹಾರಾಜರಿಗೆ ಎಚ್ಚರಿಕೆ ಬಂತು. ಜನರು ಮೂರ್ಛೆಯ ಕಾರಣವನ್ನು ಕೇಳಲು ಮಹಾರಾಜರು ನಿಜವಾದ ಸಂಗತಿಯನ್ನೆಲ್ಲ ತಿಳಿಸಿದರು. ಜನರಿಗೆಲ್ಲ ಆಶ್ಚರ್ಯವಾಯಿತು. ಸೌ. ನಾಗಮ್ಮ ಮತ್ತು ಅನ್ನಪೂರ್ಣಾಬಾಯಿಯವರು ಮಾತ್ರ ಇನ್ನೊಮ್ಮೆ ಹೀಗೆಮಾಡಬಾರದೆಂದು ಸಿಟ್ಟುಮಾಡಿ ಹೇಳಿದರು: ''ಎಂದಾದರೂ ಹೀಗೆ ಮಾಡುವದುಂಟೇ? ಹಸಿವೆಯನ್ನು ಕಟ್ಟುವದು ಎಂದಾದರೂ ಸಾಧ್ಯವೇ? ಅಪ್ಪಾ, ಹೀಗೇಕೆ ತಿಳಿಯದವರಂತೆ ಮಾಡುವಿ? ಹೀಗೆ

ಉಪವಾಸ ಕೂಡುವ ಪ್ರಸಂಗವಾದರೂ ಏನಿದೆ? ಇದು ಸರ್ವಥಾ ತರವಲ್ಲ.''

ಹೀಗೆ ಮಹಾರಾಜರು ತಮ್ಮಿಂದ ಎರಡನೆಯವರಿಗೆ ಎಳ್ಳಷ್ಟಾದರೂ ತೊಂದರೆಯಾಗದಂತೆ ನಡೆದು, ಮತ್ತು ತಾವೇ ಪ್ರಸಂಗ ಬಿದ್ದಾಗ ಎರಡನೆಯವರಿಗೆ ಕೈಯಿಂದಾದಷ್ಟು ಸಹಾಯ ಮಾಡುತ್ತ, ತಮ್ಮ ಟ್ರೇನಿಂಗ ಕಾಲೇಜದ ಶಿಕ್ಷಣವನ್ನು ಪೂರೈಸಿದರು. ಮೂರು ವರುಷದ ಶಿಕ್ಷಣವೆಲ್ಲ ಯಥಾಕ್ರಮವಾಗಿ ಮುಗಿಯಿತು. ಮಹಾರಾಜರು ಆ ಶಿಕ್ಷಣದ ಕಡೆಗೆ ವಿಶೇಷ ಗಮನಕೊಡದಿದ್ದರೂ, ಅದನ್ನು ಉಪೇಕ್ಷಿಸಲಿಲ್ಲ. ಆದರೆ ಅವರ ಬುದ್ಧಿಯು ತರಲವಾದುದೂ ತೀಕ್ಷ್ಣವಾದುದೂ ಆದುದರಿಂದ, ಅವರಿಗೆ ಕಾಲೇಜದ ಶಿಕ್ಷಣವು ಎಂದೂ ಭಾರವಾಗಲಿಲ್ಲ. ಎಂದ ಮೇಲೆ ಕೇಳುವದೇನು? ಅವರು ಈ ಮೂರು ವರುಷಗಳನ್ನು ಲೀಲಾಜಾಲವಾಗಿ ಕಳೆದು ಲೌಕಿಕ ಶಿಕ್ಷಣವನ್ನು ಮುಗಿಸಿದರು. ಭಗವಂತನ ದಯೆಯಿಂದ ಅವರು ಮೂರನೆಯ ವರುಷದ ಪರೀಕ್ಷೆಯಲ್ಲಿ ಎಲ್ಲರಿಗಿಂತಲೂ ಹೆಚ್ಚಿನ ಗುಣಗಳನ್ನು ದೊರಕಿಸಿ ಒಂದನೆಯ ನಂಬರು ಬಂದರು. ಆಗ ಟ್ರೇನಿಂಗ ಕಾಲೇಜಕ್ಕೆ ಬೆಳಗಾಂವ, ಧಾರವಾಡ, ಕಾರವಾರ, ಮತ್ತು ವಿಜಾಪುರ ಈ ನಾಲ್ಕು ಜಿಲ್ಲೆಗಳಿಂದ ವಿದ್ಯಾರ್ಥಿಗಳು ಬರುತಿದ್ದರು. ಆದುದರಿಂದ ಮಹಾರಾಜರು ನಾಲ್ಕೂ ಜಿಲ್ಲೆಗಳಿಗೆ ಮೊದಲನೆಯ ನಂಬರು ಬಂದರೆಂದು ಅವರ ಸ್ನೇಹಿತರೂ ಶಿಕ್ಷಕರೂ ಅವರಿಗೆ ಬಹುಮಾನ ಮಾಡಿದರು. ಅವರಿಗೆ ಎಲ್ಲಕ್ಕೂ ಹೆಚ್ಚು ತರಗತಿಯ ಅಂದರೆ ೨೫ ರೂಪಾಯಿಯ ಸರ್ಟಿಫಿಕೇಟು ಸಿಕ್ಕಿತು. ಈ ರೀತಿಯಾಗಿ ಮಹಾರಾಜರು ಶ್ರೇಷ್ಠವಾದ ಯಶಸ್ಸನ್ನು ಸಂಪಾದಿಸಿ ಮನೆಗೆ ಬಂದರು. ಅವರ ಮನೆಯವರಿಗೆ ಈ ಪರಿಪೂರ್ಣವಾದ ಯಶಸ್ಸಿನಿಂದ ಒಳ್ಳೇ ಸಂತೋಷವಾಯಿತೆಂದು ಬೇರೆ ಹೇಳುವ ಕಾರಣವಿಲ್ಲ.

— — —

೧೮ ಆದರ್ಶ ಶಿಕ್ಷಕರು

ವಿದ್ಯೆಯೆಂದರೆ ಜ್ಞಾನ ಅಥವಾ ಸರಿಯಾದ ತಿಳಿವಳಿಕೆ. ''ಜ್ಞಾನವೇ ಬಲ''ವೆಂದು (Knowledge is Power) ಪಾಶ್ಚಿಮಾತ್ಯರು ತಿಳಿಯುತ್ತಾರೆ. ಆ ತಿಳಿವಳಿಕೆಯು ಯಥಾರ್ಥವಾಗಿರುವದೆಂಬದರಲ್ಲಿ ಸಂದೇಹವೂ ಇಲ್ಲ. ಎಂತೆಯೇ ಶ್ರೀ ಮಚ್ಛಂಕರ ಭಗವತ್ಪಾದರವರು ಕೂಡ ಅಜ್ಞಾನ ಅಥವಾ ತಿಳಿಗೇಡಿತನವೇ ಎಲ್ಲ ದುಃಖದ ಮೂಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಜ್ಞಾನವಿದ್ದಲ್ಲಿ ಸುಖ, ಶಾಂತಿ, ಯಶಸ್ಸು, ಉನ್ನತಿ, ದೊಡ್ಡಿಸ್ತಿಕೆ, ಧೈರ್ಯ ಮೊದಲಾದವುಗಳು ಇರುವವು. ಜ್ಞಾನದಿಂದ ಆಗದ ಕೆಲಸವಿಲ್ಲ ಸಿಕ್ಕದಿರುವ ವಸ್ತುವಿಲ್ಲ. ನಾಶವಾಗದಿರುವ ದುಃಖವಿಲ್ಲ. ಸಾಧಿಸದ ಪುರುಷಾರ್ಥವಿಲ್ಲ. ಇದಕ್ಕೆ ವಿರುಗ್ಧವಾಗಿ ಅಜ್ಞಾನವಿದ್ದಲ್ಲಿ ಅಶಾಂತಿ, ದುಃಖ, ಹೇಡಿತನ, ದೈನ್ಯ, ಭಯ, ನಿರಾಶೆ ಮೊದಲಾದ ಅನರ್ಥಗಳೆಲ್ಲವೂ ಇರುವವೆಂದು ಕಂಡು ಬರುತ್ತದೆ. ತಿಳಿಗೇಡಿತನದಿಂದ ಯಾವ ಕೆಲಸವೂ ಸಾಧಿಸಲಾರದು. ಯಾವ ವಸ್ತುವೂ ದೊರೆಯಲಾರದು. ಯಾವ ದುಃಖವೂ ನಾಶವಾಗುವದಿಲ್ಲ ಯಾವ ಪುರುಷಾರ್ಥವೂ ಸಾಧಿಸುವದಿಲ್ಲ.

ವಿದ್ಯೆಯು ಪರಾ ಮತ್ತು ಅಪರಾ ಎಂದು ಎರಡು ತರದ್ದಾಗಿರುತ್ತದೆ. ಪರಾವಿದ್ಯೆಯೆಂದರೆ ಶ್ರೇಷ್ಠವಾದ, ಉಚ್ಚವಾದ, ಉತ್ತಮವಾದ ಜ್ಞಾನವು. ಅಪರಾವಿದ್ಯೆಯೆಂದರೆ ಕಡಿಮೆ ತರಗತಿಯ ಜ್ಞಾನವು. ಅಧ್ಯಾತ್ಮ ಜ್ಞಾನವೇ ಪರಾವಿದ್ಯೆಯು. ಎಲ್ಲ ಬಗೆಯ ವ್ಯಾವಹಾರಿಕ ಅಥವಾ ಲೌಕಿಕ ಜ್ಞಾನವೇ ಅಪರಾವಿದ್ಯೆಯು ಅಪರಾವಿದ್ಯೆಯು ವಿಶ್ವದೊಳಗಿನ ದೃಶ್ಯ ಪದಾರ್ಥಗಳನ್ನು ಬಿಡಿಬಿಡಿಯಾಗಿ ತಿಳಿದುಕೊಂಡು, ಅವುಗಳ ಮೇಲೆ ಪ್ರಭುತ್ವವನ್ನು ದೊರಕಿಸುವ ಯತ್ನಮಾಡುತ್ತದೆ. ಅಧ್ಯಾತ್ಮವಿದ್ಯೆಯು

ಜಗತ್ತಿನೊಳಗಿನ ಬಿಡಿಬಿಡಿ ಪದಾರ್ಥಗಳನ್ನು ತಿಳಿದುಕೊಳ್ಳುವ ಗೋಜಿಗೆ ಹೋಗುವದಿಲ್ಲ. ಯಾವ ಒಂದು ಪದಾರ್ಥವನ್ನು ತಿಳಿದುಕೊಳ್ಳುವದರಿಂದ ಬ್ರಹ್ಮಾಂಡದೊಳಗಿನ ಉಳಿದೆಲ್ಲ ಪದಾರ್ಥಗಳನ್ನು ತಿಳಿದುಕೊಂಡಂತಾಗುತ್ತ-ದೆಂದು ಉಪನಿಷತ್ತುಗಳು ವರ್ಣಿಸುತ್ತವೋ, ಆ ವಿಶ್ವದ ಮೂಲ ತತ್ತ್ವ, ಕಾರಣ, ಅಥವಾ ಪರಮಾತ್ಮನನ್ನು ಅದು ವಿಷಯೀಕರಿಸುತ್ತಿದೆ. ಅಪರಾ-ವಿದ್ಯೆಯ ಕ್ಷೇತ್ರವು ಮರ್ಯಾದಿತ, ಸಂಕುಚಿತ. ಪರಾವಿದ್ಯೆಯ ಕ್ಷೇತ್ರವು ಅನಂತ, ಅಪಾರ. ಪರಾವಿದ್ಯೆಯನ್ನು ಸಂಪಾದಿಸಿದ ಮೇಲೆ ಗಳಿಸುವ ಹಂಬಲವೇ ಹಿಂಗುತ್ತದೆ ಅಪರಾವಿದ್ಯೆಯನ್ನು ಸಂಪಾದಿಸಿದಂತೆ ಗಳಿಕೆಯ ಹಂಬಲವು ಬೆಳೆಯುತ್ತ ಹೋಗುತ್ತದೆ. ಅಪರಾವಿದ್ಯೆಯಿಂದ ಸೊಕ್ಕು, ಅಥವಾ ಅಹಂಕಾರವು ಬೆಳೆಯುತ್ತದೆ. ಪರಾವಿದ್ಯೆಯಿಂದ ಅಹಂ ನಾಶ-ಹೊಂದುತ್ತದೆ. ಅಪರಾವಿದ್ಯೆಯಿಂದ ಅಶಾಂತಿ, ದುಃಖ ಮೊದಲಾದವುಗಳು ಹೆಚ್ಚುತ್ತವೆ. ಪರಾವಿದ್ಯೆಯಿಂದ ಅವು ಪೂರ್ಣವಾಗಿ ನಾಶವಾಗುತ್ತವೆ.

''ಜ್ಞಾನವೇ ಬಲ''ವೆಂಬ ಸೂತ್ರವನ್ನು ಮುಂದಿಟ್ಟುಕೊಂಡು, ಪಾಶ್ಚಾತ್ಯರು ಕಳೆದ ೩—೪ ನೂರು ವರುಷಗಳಿಂದ ಅಪರಾವಿದ್ಯೆಯನ್ನು ಸೇವಿಸುತ್ತ ಬಂದಿದ್ದಾರೆ. ಅದರ ಫಲವನ್ನು ಅವರೀಗ ಉಣ್ಣುತ್ತಿರುವರು. ಲೌಕಿಕ ಸಾಮರ್ಥ್ಯ, ಪ್ರಭುತ್ವ, ಸುಖ, ಜ್ಞಾನ, ಸಂಪತ್ತು ಮೊದಲಾದವು-ಗಳು ಅವರಿಗಧೀನವಾಗಿವೆ. ಆದರೆ ಅದರಿಂದ ಮಾನವ ವರ್ಗಕ್ಕೆ ಶಾಂತಿ ಸಮಾಧಾನಗಳು ಮಾತ್ರ ದೊರೆತಿಲ್ಲ. ತಿರುಗಿ ಕೇಳಿದರೆ ಮಾನವ ವರ್ಗದ ನಾಶಕ್ಕೆ ಅವು ಕಾರಣವಾಗಿ ನಿಂತಿವೆ. ಮೊನ್ನೆ ಮೊನ್ನೆ ನಡೆದು ಹೋದ ವಿಶ್ವಮೇಧವನ್ನು ನೋಡಿದರೆ ಯಾರ ಮನಸ್ಸೂ ತಲ್ಲಣಗೊಳ್ಳದಿರದು. ಅಪರಾವಿದ್ಯೆಯು ಪರಾವಿದ್ಯೆಯನ್ನು ಕಡೆಗಣಿಸಿ ಸ್ವತಂತ್ರವಾಗಿ ಬೆಳೆದು ನಿಂತದ್ದೇ ಇದಕ್ಕೆ ಕಾರಣವು. ಲೌಕಿಕ ಜ್ಞಾನವು ಬೇಕಾದಷ್ಟು ಬೆಳೆಯಲಿ; ಆದರೆ ಅದು ಆಧ್ಯಾತ್ಮದ ತಳಹದಿಯ ಮೇಲೆ ನಿಂತಿರಬೇಕು. ಇಲ್ಲವಾದರೆ ದುರ್ಗತಿಗೇ ಒಯ್ಯುವದು. ಇನ್ನು ಲೌಕಿಕ ಜ್ಞಾನವನ್ನು ಸಂಪೂರ್ಣವಾಗಿ ಅಲ್ಲಗಳೆದರೆ ಇಹಲೋಕದ ಬಾಳ್ವೆಯು ಕಷ್ಟಮಯವಾಗುವದು. ಆದುದರಿಂದ ಅಧ್ಯಾತ್ಮ ಜ್ಞಾನಕ್ಕೆ ಪ್ರಾಧಾನ್ಯಕೊಟ್ಟು, ಅದಕ್ಕೆ ಅಧೀನವಾಗಿರುವಂತೆ

ಲೌಕಿಕ ಜ್ಞಾನವನ್ನು ಸಂಪಾದಿಸಬೇಕು. ಹೀಗೆ ಎರಡೂ ತರದ ಜ್ಞಾನಕ್ಕೆ ಮೇಳಹಾಕಿ ವಿದ್ಯೆಕಲಿಸುವದೇ ನಿಜವಾದ ಶಿಕ್ಷಕರ ಕೆಲಸವು.

ನಮ್ಮಲ್ಲಿ ಸನ್ ೧೮೫೫ ನೆಯ ಇಸ್ವಿಯಿಂದ ಸರಕಾರೀ ಶಾಲೆಗಳಲ್ಲಿ ಕೇವಲ ಲೌಕಿಕ ಜ್ಞಾನವು ರೂಢವಾಗುತ್ತ ಬಂದಿದೆ. ನಮ್ಮ ಚರಿತ್ರ ನಾಯಕರು ಟ್ರೇನಿಂಗ ಕಾಲೇಜದಲ್ಲಿಯ ಶಿಕ್ಷಣವನ್ನು ಮುಗಿಸಿ ಹುಡುಗರಿಗೆ ಪ್ರಾಥಮಿಕ ಶಿಕ್ಷಣ ಕೊಡುವ ಕೆಲಸವನ್ನು ಕೈಕೊಳ್ಳುವ ಸಮಯ ಬಂದಾಗ ಈ ಸ್ಥಿತಿಯನ್ನು ಕಂಡುಹಿಡಿದರು. ಶಿಕ್ಷಣದ ರೀತಿ-ನೀತಿಗಳೇ ಅಮೂಲವಾಗಿ ಬದಲಾದ ಹೊರತು ಒಬ್ಬಿಬ್ಬರ ಕಡೆಯಿಂದ - ಅದನ್ನು ಸುಧಾರಿಸುವದು ಶಕ್ಯವಿಲ್ಲೆಂದು ಅವರಿಗೆ ಗೊತ್ತಿತ್ತು. ಆದರೂ ತಮ್ಮ ಕರ್ತವ್ಯವನ್ನು ತಾವು ಸರಿಯಾಗಿ ನೆರವೇರಿಸಿ ಉಳಿದ ಶಿಕ್ಷಕರಿಗೆ ಮಾದರಿಯ ಪಾಠವನ್ನು ಹಾಕಿಕೊಡಬೇಕೆಂದು ಅವರು ಬಯಸಿದರು. ಮಹಾರಾಜರ ಸ್ವಂತದ ಲೌಕಿಕ ಶಿಕ್ಷಣವು ಭಗವಂತನ ಅಧಿಷ್ಠಾನದ ಮೇಲೆಯೇ ನಿಂತಿತ್ತು. ಅದೇ ತರದ ಲೌಕಿಕ ಶಿಕ್ಷಣವನ್ನು ಹುಡುಗರಿಗೂ ಕೊಡಬೇಕೆಂದು ಅವರೀಗ ಸಜ್ಜಾಗಿ ನಿಂತರು.

ಮಹಾರಾಜರು ಬರೀ ಪ್ರಾಥಮಿಕ ಶಿಕ್ಷಕರಾಗಿದ್ದಿಲ್ಲ. ಅವರು ಉಚ್ಚ-ಪ್ರತಿಯ ಲೋಕಶಿಕ್ಷಕರೂ ಹೌದು. ಅದಕ್ಕಾಗಿ ಅವರು ಧಾರವಾಡವನ್ನು ಬಿಟ್ಟು ಪ್ರಾಥಮಿಕ ಶಿಕ್ಷಕರ ಕೆಲಸಕ್ಕೆ ಹೋಗುವಾಗ ಧಾರವಾಡ ಜನರಿಗೆ ಬಹಳ ದುಃಖವಾಯಿತು. ಇಂಥ ಅಲೌಕಿಕ ಲೋಕ ಶಿಕ್ಷಕನಿಂದ ತಮಗಿನ್ನು ಅಗಲಿ ಇರಬೇಕಾಯಿತಲ್ಲ, ಎಂದು ನಾಗಮ್ಮನವರಿಗೂ, ಮಹಾರಾಜರ ಸ್ನೇಹಿತರಿಗೂ ಅತೀವ ಕಳವಳವಾಯಿತು. ಅವರು ತಮ್ಮ ದುಃಖವನ್ನು ತಡೆದುಕೊಳ್ಳಲಾರದೆ ಅಳಹತ್ತಿದರು. ಮಹಾರಾಜರು ಅವರಿಗೆಲ್ಲ ಒಳ್ಳೇ ಶಾಂತರೀತಿಯಿಂದಲೂ ಕೌಶಲ್ಯದಿಂದಲೂ ಸಮಾಧಾನ ಹೇಳಿದರು:— ‘‘ಕಟ್ಟಿಗೆಯ ತುಂಡುಗಳು ನೀರಿನ ಪ್ರವಾಹದೊಳಗೆ ಒಮ್ಮೊಮ್ಮೆ ತಾವಾಗಿ ಕೂಡುತ್ತವೆ; ಮತ್ತೆ ಬೇರೆಯಾಗುತ್ತವೆ. ಅವುಗಳ ಅಗಲುವಿಕೆ ಅಥವಾ ಕೂಡುವಿಕೆಯು ಅವುಗಳ ಇಚ್ಛೆಯ ಮೇಲೆ ಅವಲಂಬಿಸಿರುವದಿಲ್ಲ. ಹಾಗೆಯೇ ಸಾಂಸಾರಿಕ ಜನರ ಅವಸ್ಥೆಯು. ಕೂಡುವಿಕೆ ಅಗಲುವಿಕೆಗಳು

ನಮ್ಮ ಸ್ವಾಧೀನವಿಲ್ಲ. ಜಾಣರಾದವರು ಅವುಗಳ ಮೇಲೆ ಅವಲಂಬಿಸಿ ತಮ್ಮ ಮನಸ್ಸಿನ ಸ್ಥಿತಿಯನ್ನು ಕೆಡಿಸಿಕೊಳ್ಳಬಾರದು. ನಮ್ಮ ದೇಹಗಳೂ ವಿನಾಶಿ, ಸಾಂಸಾರಿಕ ಪದಾರ್ಥಗಳೂ ವಿನಾಶಿ. ಅವುಗಳ ನಡುನೆ ನಿತ್ಯ ಸಂಬಂಧವುಂಟಾಗುವದೇ ಶಕ್ಯವಿಲ್ಲ ನಿತ್ಯವಸ್ತುವಿನ ಬೆನ್ನು ಹತ್ತಿದರೆ ಮಾತ್ರ ನಿತ್ಯಸಮಾಗಮ ಸುಖವು ಸಿಕ್ಕುವದು ಅಂಥ ವಸ್ತುವೆಂದರೆ ಪರಮಾತ್ಮನೊಬ್ಬನೇ. ಅವನನ್ನು ಹುಡುಕಲಿಕ್ಕೆ ಬೇರೆ ಕಡೆಗೆಲ್ಲಿಯೂ ಹೋಗುವ ಕಾರಣವಿಲ್ಲ. ಅವನು ಸರ್ವವ್ಯಾಪಿ, ಅಖಂಡ, ಅವ್ಯಯ. ನಮ್ಮೆಲ್ಲರ ಹೃದಯದಲ್ಲಿ ಅವನು ನಿತ್ಯವೂ ವಾಸಿಸುತ್ತಾನೆ. ಪ್ರಯತ್ನಮಾಡಿ ಅವನನ್ನೊಮ್ಮೆ ಅರಿತುಕೊಂಡರೆ ಅವನ ಶಾಶ್ವತ ಸಮಾಗಮವು ನಮಗಾಗುವದು. ಅದರಂಥ ಆನಂದವು ಬೇರೊಂದಿಲ್ಲ. ಆದ.ದರಿಂದ ನೀವು ನನಗೆ ಮಹತ್ತ್ವಕೊಡದೆ ಆ ಭಗವಂತನನ್ನೇ ನೆನಿಸುತ್ತ ಹೋಗಿರಿ. ನನ್ನ ದೇಹವು ನಿಮ್ಮನ್ನಗಲಿ ಹೋದರೂ ನನ್ನ ಮನಸ್ಸು ನಿಮ್ಮ ಹತ್ತರವೇ ಇರುವದೆಂಬುದನ್ನು ಮರೆಯಬೇಡಿರಿ. ಪ್ರೇಮವಿದ್ದಲ್ಲಿ ಮತ್ತೆ ಮತ್ತೆ ಭೆಟ್ಟಿಯ ಯೋಗಗಳು ಬಂದೇ ಬರುತ್ತವೆ ”

ಮಹಾರಾಜರು ಎಲ್ಲಕ್ಕೂ ಮೊದಲು ಗೋಕಾಕ ತಾಲೂಕಿನೊಳಗಿನ ಕೊಣ್ಣೂರ ಶಾಲೆಗೆ ನಿಯಮಿಸಲ್ಪಟ್ಟರು. ಅಲ್ಲಿ ನಾಲ್ಕಾರು ತಿಂಗಳು ಕೆಲಸ ಮಾಡುವಷ್ಟರೊಳಗೆ ಮೇಲಿನ ಅಧಿಕಾರಿಗಳು ಅವರ ಕೆಲಸಕ್ಕೆ ಮೆಚ್ಚಿ, ಅವರಿಗೆ ಹೆಚ್ಚಿನ ಸಂಬಳನ್ನು ಕೊಟ್ಟು ಸವದತ್ತಿಯ ಶಾಲೆಗೆ ವರ್ಗಮಾಡಿದರು. ಸವದತ್ತಿಯಲ್ಲಿ ಅವರು ಮೂರೇ ತಿಂಗಳು ಕೆಲಸ ಮಾಡಿದ ಮೇಲೆ ಅವರಿಗೆ ಗೋಕಾಕ ಶಾಲೆಗೆ ವರ್ಗವಾಯಿತು. ಗೋಕಾಕದಲ್ಲಿ ತಮ್ಮ ತಾಯಿ-ತಂದೆಗಳ ಸೇವೆ ಮಾಡಲಿಕ್ಕೆ ಅನುಕೂಲವಾಗುವದೆಂದು ಮಹಾರಾಜರು ಬೇಕೆಂತಲೇ ಈ ಬದಲಾವಣೆಗೆ ಒಪ್ಪಿಗೆ ಕೊಟ್ಟರು. ಗೋಕಾಕದಲ್ಲಿ ಮೂರು ವರ್ಷ ಕೆಲಸ ಮಾಡಿದ ಮೇಲೆ ಇವರ ನಿಜವಾದ ಯೋಗ್ಯತೆಯು ಶಾಲಾಧಿಕಾರಿಗಳಿಗೆ ಗೊತ್ತಾಯಿತು ಮಹಾರಾಜರಂಥ ಜಾಣ ಶಿಕ್ಷಕರು ಜಿಲ್ಲೆಯ ಮುಖ್ಯ ಸ್ಥಳದಲ್ಲಿರುವದು ಎಲ್ಲ ಬಗೆಯಿಂದಲೂ ಯೋಗ್ಯವೆಂದು ಭಾವಿಸಿ, ಮೇಲಾಧಿಕಾರಿಗಳು ಇವರನ್ನು ಬೆಳಗಾಂವಿಯ ೧ನೇ ನಂಬರ ಕನ್ನಡ ಶಾಲೆಯ ಮುಖ್ಯ

ಶಿಕ್ಷಕರೆಂದು ನಿಯಮಿಸಿದರು. ಅಲ್ಲಿಂದ ಮಹಾರಾಜರು ಸಂನ್ಯಾಸ ತೆಗೆದು-ಕೊಳ್ಳುವ ವರೆಗೆ ಬೆಳಗಾಂವಿಯಲ್ಲಿಯೇ ಕೆಲಸ ಮಾಡಿದರು.

ಮಹಾರಾಜರು ಬೆಳಗಾಂವಿಗೆ ವರ್ಗವಾಗಿ ಬಂದದ್ದು ಶಾಲಿವಾಹನ ಶಕದ ೧೮೦೩ ಅಥವಾ ಇಸ್ವಿ ಸನ್ ೧೮೮೧ ರಲ್ಲಿ. ಅವರು ಅಲ್ಲಿಗೆ ಬಂದಾಗ ಆ ಶಾಲೆಯ ಸ್ಥಿತಿಯು ಸಮಾಧಾನಕರವಿದ್ದಿಲ್ಲ. ಅಲ್ಲಿ ಮಹಾರಾಜರಿಗೆ ತಮ್ಮ ಅಧ್ಯಾಪನ ಕೌಶಲ್ಯವನ್ನೂ, ಕಾರ್ಯಕ್ಷಮತೆಯನ್ನೂ ತೋರಿಸಲಿಕ್ಕೆ ಬೇಕಾದಷ್ಟು ಅವಕಾಶವಿತ್ತು. ಮಹಾರಾಜರು ಆ ಕೆಲಸವನ್ನು ಉತ್ತಮ ರೀತಿಯಿಂದ ಮಾಡಿ ತೋರಿಸಬೇಕೆಂದು ಟೊಂಕ ಕಟ್ಟಿದರು. ಅವರು ಶಾಲೆಯ ಆಡಳಿತೆಯಲ್ಲಿ ಅನೇಕ ಬಗೆಯ ಸುಧಾರಣೆಗಳನ್ನು ಮಾಡಿದರು. ಅವರ ನೇತೃತ್ವದಲ್ಲಿ ಆ ಶಾಲೆಯು ಕ್ರಮಕ್ರಮವಾಗಿ ಎಲ್ಲ ರೀತಿಯಿಂದಲೂ ಮುಂದುವರಿಯಿತು. ಅಧಿಕಾರಿಗಳ ಅಪೇಕ್ಷೆಯಂತೆ ಮಹಾರಾಜರು ಅಲ್ಲಿಗೆ ಬಂದ ಒಂದೆರಡು ವರ್ಷಗಳಲ್ಲಿ ಬೆಳಗಾಂವಿಯ ೧ನೇ ನಂಬರ ಶಾಲೆಯು ನಿಜವಾಗಿಯೂ ಜಿಲ್ಲೆಗೆ ೧ನೇ ನಂಬರ ಶಾಲೆಯಾಯಿತು. ಮತ್ತು ಉಳಿದೆಲ್ಲ ಶಾಲೆಗಳಿಗೆ ಮಾದರಿಯ ಶಿಕ್ಷಣ ಸಂಸ್ಥೆಯಾಯಿತು.

ಮಹಾರಾಜರ ಕೆಳಗೆ ೭ ಜನ ಉಪಶಿಕ್ಷಕರಿದ್ದರು. ಶಾಲೆಯಲ್ಲಿ ಒಟ್ಟಿಗೆ ೨೮೦—೩೫೦ ಜನ ಹುಡುಗರು. ಇವರೆಲ್ಲರನ್ನೂ ಮಹಾರಾಜರೂ ತಮ್ಮ ಸಹಜ ಪ್ರೇಮದಿಂದ ವೈವಶ ಮಾಡಿಕೊಂಡರು. ಹುಡುಗರು ವಾತ್ಸಲ್ಯ ಪ್ರೇಮದಿಂದ, ಶಿಕ್ಷಕರು ಬಂಧುಪ್ರೇಮದಿಂದ ಇವರ ನ್ಯಾಧೀನವಾದರು. ಅವರೆಲ್ಲರೂ ಮಹಾರಾಜರು ಹಾಕಿಕೊಟ್ಟ ನಿಯಮಗಳನ್ನು ಸಂತೋಷ-ದಿಂದಲೇ ಪಾಲಿಸಹತ್ತಿದರು. ಮಹಾರಾಜರು ಪಕ್ಷಪಾತವಿಲ್ಲದೆ ನ್ಯಾಯ-ನಿಷ್ಠುರತೆ ತೋರಿಸುವರು. ಆದರೆ ಅವರು ಎಂದೂ ಕಠಿಣಹೃದಯರಾಗಲಿಲ್ಲ. ಅಪರಾಧಿಗಳನ್ನು ಅವರು ತಪ್ಪದೆ ದಂಡಿಸುವರು. ಆದರೆ ಅವರು ಕೊಡುವ ಶಿಕ್ಷೆಯಲ್ಲಿಯೂ ಅವರ ಕಾರುಣ್ಯವು ವ್ಯಕ್ತವಾಗುತ್ತಿತ್ತು. ಸಾಮಾನ್ಯವಾಗಿ ದಂಡನವು ಅಪರಾಧಿಯನ್ನು ಬಲಾತ್ಕಾರದಿಂದ ಶಿಕ್ಷಿಸುತ್ತದೆ. ಆದರೆ ಮಹಾರಾಜರ ಶಿಕ್ಷೆಯು ಸೌಮ್ಯೋಪಾಯಗಳಿಂದ ಅಪರಾಧಿಗಳ ಹೃದಯ-ನ್ನೇ ಬದಲಿಸುವಂತಹದಾಗಿರುತ್ತಿತ್ತು.

ಬೆಳಗಾಂವಿಯ ಶಾಲೆಯನ್ನು ಮಾದರಿಯ ಶಾಲೆಯನ್ನಾಗಿ ಮಾಡಲಿಕ್ಕೆ ಮಹಾರಾಜರು ಅನೇಕ ಹಂಚಿಕೆಗಳನ್ನು ಯೋಚಿಸಿದರು. ಅವುಗಳಿಂದ ಆ ಶಾಲೆಯು ಅಚ್ಚುಕಟ್ಟುತನ, ಓರಣ, ಶಿಸ್ತು, ನಿಯಮಿತತನ, ವೇಳೆಯ ಮಹತ್ತ್ವವನ್ನರಿತು ನಡಿಯೋಣ, ಸ್ವಾವಲಂಬನ, ಸದಾಚಾರ, ವಿದ್ಯಾಭ್ಯಾಸ, ಭಗವದ್‌ಭಜನ ಮೊದಲಾದ ಗುಣಗಳಿಗೆ ತವರುಮನೆಯಾಯಿತು. 'ಪರೋಪದೇಶೇ ಪಾಂಡಿತ್ಯ'ವೆಂಬದು ಪ್ರಸಿದ್ಧವಾಗಿದೆ. ಹುಡುಗರಿಗೆ ಶಿಕ್ಷಕರು ಸದ್ಗುಣಿಗಳಾಗಿರೆಂದು ಹೇಳಿದ ಮಾತ್ರಕ್ಕೆ ಯಾರೂ ಸದ್ಗುಣಿಗಳಾಗುವದಿಲ್ಲ. ಶಿಕ್ಷಕರು ತಾವೇ ಸದ್ಗುಣಗಳ ಮೂರ್ತಿಯಾಗಿರಬೇಕಾಗುವದು. ನಿಜವಾಗಿ ನೋಡಿದರೆ ಗುರುಶಿಷ್ಯ ಸಂಬಂಧವು ಬಹಳ ಪವಿತ್ರವಾದುದು, ಉದಾತ್ತವಾದುದು. ಆದರೆ ಈಗಿನ ಕಾಲದ ಶಿಕ್ಷಣ ಸಂಸ್ಥೆಗಳನ್ನು ನೋಡಿದರೆ ಎಲ್ಲವೂ ವಿಪರೀತವಾಗಿದೆ. ವಿದ್ಯಾರ್ಥಿಗಳಿಗೆ ತಮ್ಮ ಗುರುಗಳ ವಿಷಯಕ್ಕೆ ಆದರಭಾವವುಳಿದಿಲ್ಲ. ಗುರುಗಳಿಗೆ ತಮ್ಮ ಶಿಷ್ಯರ ವಿಷಯಕ್ಕೆ ಪ್ರೇಮ ಉಳಿದಿಲ್ಲ. ಸಂಬಳ ಕೊಡುವರೆಂದು ಶಿಕ್ಷಕರು ಕಲಿಸುವವರು. ನಿರ್ವಾಹವಿಲ್ಲೆಂದು ಹುಡುಗರು ಶಾಲೆಗೆ ಹೋಗುವರು. ಆದರೆ ಮಹಾರಾಜರ ಶಾಲೆಯ ಸ್ಥಿತಿಯು ಬೇರೆಯಾಗಿತ್ತು. ಗುರು-ಶಿಷ್ಯರು ಕೂಡಿಯೇ ಸದ್ಗುಣಗಳನ್ನು ಆಚರಿಸಿ ತೋರಿಸುತ್ತಿದ್ದರು.

ಮಹಾರಾಜರು ಶಾಲೆಯ ಸುಸ್ಥಿತಿಗಾಗಿ ಹೂಡಿದ ಎಲ್ಲ ಉಪಾಯಗಳನ್ನು ಇಲ್ಲಿ ವಿವರಿಸುವ ಕಾರಣವಿಲ್ಲ. ಅವುಗಳಲ್ಲಿ ಮಹತ್ತ್ವದವಾದ ಕೆಲವು ಸಂಗತಿಗಳನ್ನು ಮಾತ್ರ ವಾಚಕರ ಗಮನಕ್ಕೆ ತರುವದು ಯೋಗ್ಯವೆನಿಸುತ್ತದೆ.

೧. ಶಿಕ್ಷಕರು ನಿಯಮಿತ ವೇಳೆಗೆ ಸರಿಯಾಗಿ ಶಾಲೆಗೆ ಬರುವದು ಶಾಲೆಯ ಹಿತದ ದೃಷ್ಟಿಯಿಂದ ಒಳ್ಳೇ ಮಹತ್ತ್ವದ ಮಾತಾಗಿದೆ. ಗೊತ್ತು ಪಡಿಸಿದ ವೇಳೆಗೆ ಶಿಕ್ಷಕರು ಶಾಲೆಗೆ ಬರಹತ್ತಿದರೆ ಹುಡುಗರೂ ಬರುವರು. ಇಲ್ಲವಾದರೆ ಹುಡುಗರೂ ತಪ್ಪಿಸುವರು. ಅದರಿಂದ ಅಭ್ಯಾಸವೂ ತೊಂದರೆಯಿಲ್ಲದೆ ಸಾಗುವದು ಅದಕ್ಕಾಗಿ ಮಹಾರಾಜರು ತಡಮಾಡಿ ಬಂದ ಶಿಕ್ಷಕರಿಗೆ ಪ್ರತಿಯೊಂದು ಸಲ ಒಂದು ಪೈ ದಂಡವನ್ನು ಗೊತ್ತು ಮಾಡಿದ್ದರು.

ಮಹಾರಾಜರು ಸ್ವತಃ ತಡಮಾಡಿ ಹೋದರೆ ಅವರೂ ಈ ನಿಯಮದಂತೆ ದಂಡವನ್ನು ಕೊಡುತ್ತಿದ್ದರು ದಂಡದ ಹಣವು ಧರ್ಮಾರ್ಥ ಕಾರ್ಯಗಳಿಗಾಗಿ ವೆಚ್ಚವಾಗುತ್ತಿತ್ತು. ಹುಡುಗರು ಅಪರಾಧಮಾಡಿದರೆ ಅವರಿಗೆ ''ಕುಳಿತೇಳುವ'' ಅಥವಾ ದೇವರ ನಾಮಸ್ಮರಣೆಯ ಶಿಕ್ಷೆಯನ್ನು ವಿಧಿಸುವರು.

೨. ಶಾಲೆಗೆ ಬಂದೊಡನೆ ಹುಡುಗರೂ ಶಿಕ್ಷಕರೂ ಕೂಡಿಯೇ ದೇವರ ಸ್ಮರಣೆ-ಪ್ರಾರ್ಥನೆಗಳನ್ನು ಮಾಡುವರು. ಪ್ರತಿಯೊಬ್ಬನೂ ಒಂದೇ ಉಪಾಸ್ಯನನ್ನು ನೆನಿಸಬೇಕೆಂಬ ನಿಯಮವಿರಲಿಲ್ಲ. ತಮ್ಮ ತಮ್ಮ ಇಷ್ಟದಂತೆ ಕುಲದೇವರನ್ನಾಗಲಿ, ಇಷ್ಟದೇವರನ್ನಾಗಲಿ ಸ್ಮರಿಸಿದರೆ ತೀರಿತು.

೩. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಮನದಟ್ಟಾಗುವಂತೆ ಸೂತ್ರ ರೂಪದ ನೀತಿಯ ವಾಕ್ಯಗಳನ್ನು ಹೊಡ್ಡ ದೊಡ್ಡ ಅಕ್ಷರಗಳಿಂದ ಬರೆದು, ಹಲಿಗೆಗಳಿಗೆ ಅಂಟಿಸಿ, ಎಲ್ಲರ ಕಣ್ಣಿಗೂ ಕಾಣುವಂತೆ ಮುಖ್ಯ ಸ್ಥಳಗಳಲ್ಲಿ ತೂಗ ಹಾಕುವರು.

೪. ದಿನಾಲು ಮುಂಜಾವಿನಲ್ಲಿ ಹುಡುಗರಿಗೆ ಸೂರ್ಯ-ನಮಸ್ಕಾರ ಹಾಕಿಸುವರು. ಸಂಜೆಯ ಮುಂದೆ ಆಟಗಳನ್ನಾಡಿಸುವರು. ಇದರಿಂದ ವಿದ್ಯಾರ್ಥಿಗಳ ಶಾರೀರಿಕ ಶಕ್ತಿಯು ಸಹಜವಾಗಿ ಬೆಳೆಯುತ್ತಿತ್ತು.

೫. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಉತ್ತೇಜನವಾಗಬೇಕೆಂದು ಮೇಲಾಟವನ್ನು ಏರ್ಪಡಿಸುತ್ತಿದ್ದರು. ತಕ್ಕ ಹುಡುಗರಿಗೆ ಮೇಲು ನಂಬರನ್ನೂ ಪಾರಿತೋಷಕಗಳನ್ನೂ ಕೊಟ್ಟು ಗೌರವಿಸುವರು. ಇದರಿಂದ ವಿದ್ಯಾರ್ಥಿಗಳು ನಾಮುಂದೆ ನೀಮುಂದೆ ಎಂದು ಸ್ಪರ್ಧೆಯಿಂದ ಅಭ್ಯಾಸ ಮಾಡುವರು. ಅದರಂತೆ ಶಿಕ್ಷಕರಿಗೂ ಉಪಯೋಗವಾಗುವಂತೆ, ಪ್ರತಿತಿಂಗಳ ಕೊನೆಗೆ ಬೇರೆ ಬೇರೆ ವರ್ಗಗಳ ಪರೀಕ್ಷೆಯನ್ನು ಎರಡನೆಯ ವರ್ಗಗಳ ಶಿಕ್ಷಕರಿಂದ ಮಾಡಿಸುವರು. ಇದರಿಂದ ಶಿಕ್ಷಕರಲ್ಲಿ ಸಹ ಒಂದು ತರದ ಸಾತ್ತ್ವಿಕ ಸ್ಪರ್ಧೆಯು ಹುಟ್ಟುತ್ತಿತ್ತು.

೬. ವಿದ್ಯಾರ್ಥಿಗಳಿಗೆ ನಾಲ್ಕು ಜನರೊಳಗೆ ಮಾತಾಡಲಿಕ್ಕೆ ಬರಬೇಕೆಂದು ''ಬಾಲಾನಂದ''ವೆಂಬ ಹೆಸರಿನ ವಾಕ್‌ಸ್ಪರ್ಧೆಯ ಸಭೆಯನ್ನು

ಸ್ಥಾಪಿಸಿದರು- ಪ್ರತಿಯೊಂದು ಬುಧವಾರ ದಿವಸ ಈ ಸಭೆ ಕೂಡುತ್ತಿತ್ತು. ವಿದ್ಯಾರ್ಥಿಗಳು ಈ ಸಭೆಯಲ್ಲಿ ತಮಗೆ ನಿಯಮಿಸಿಕೊಟ್ಟ ಐತಿಹಾಸಿಕ, ಪೌರಾಣಿಕ ಮತ್ತು ನೈತಿಕ ಸಂಗತಿಗಳ ಮೇಲೆ ಮಾತಾಡುವರು.

೭ ಕ್ರಮಿಕ ಪುಸ್ತಕಗಳ ಅಭ್ಯಾಸವಷ್ಟೇ ಸಾಕಾಗುವದಿಲ್ಲೆಂದು ತಿಳಿದು ಮಹಾರಾಜರು ಅನೇಕ ಸುಭಾಷಿತಗಳನ್ನು ಆರಿಸಿ ತೆಗೆದು ಹುಡುಗರಿಗೆ ಪಾಠ ಮಾಡಲಿಕ್ಕೆ ಕೊಡುವರು. ಮತ್ತು ಆ ಪಾಠಗಳನ್ನು ತಪ್ಪದೇ ಒಪ್ಪಿಸಿಕೊಳ್ಳುವರು. ಇದರಿಂದ ವಿದ್ಯಾರ್ಥಿಗಳ ಪಾಠಶಕ್ತಿಯು ಜಾಗೃತವಾಗುತ್ತಿತ್ತಲ್ಲದೆ, ಅವರ ಜ್ಞಾನವೂ ಬೆಳೆಯುತ್ತಿತ್ತು.

೮. ''ಬಾಲಾನಂದ'' ಸಭೆಗೆ ಜೋಡಿಸಿ ಒಂದು ಸಣ್ಣ ಬ್ಯಾಂಕನ್ನು ಸ್ಥಾಪಿಸಿದರು ಸಭೆಯ ಸಭಾಸದರು ಅದರಲ್ಲಿ ಪ್ರತಿಯೊಂದು ತಿಂಗಳಿಗೆ ಒಂದೊಂದು ರೂಪಾಯಿಯಂತೆ ಇಡುವರು. ಈ ಬ್ಯಾಂಕಿನಿಂದ ಒಳ್ಳೇ ಅಡಚಣಿಯ ವೇಳೆಯಲ್ಲಿ ಸ್ವಲ್ಪ ಬಡ್ಡಿಯಂತೆ ಯಾರಿಗಾದರೂ ಸಾಲ ದೊರೆಯುತ್ತಿತ್ತು.

೯. ನನ್ನ ಶಾಲೆಗಳಲ್ಲಿ ಈಗೀಗ ಪ್ರಚಾರದಲ್ಲಿ ಬರುತ್ತಿರುವ ಬಾಲಕರ ಕೋಆಪರೇಟಿವ್ವ ಸಂಸ್ಥೆಯನ್ನು ಮಹಾರಾಜರು ೬೦ ವರುಷಗಳ ಹಿಂದೆ ತಮ್ಮ ಶಾಲೆಯಲ್ಲಿ ಮೊದಲಿಗೇ ಸ್ಥಾಪಿಸಿದ್ದರು. ಇದರಿಂದ ವಿದ್ಯಾರ್ಥಿಗಳಿಗೆ ಬೇಕಾದ ಪಾಟಿ, ಪುಸ್ತಕ, ಕಾಗದ ಮಸಿ, ಪೆನಸೀಲು, ದೌತಿ, ಟಾಕು, ಅರಿವೆ ಮೊದಲಾದವುಗಳು ಶಾಲೆಯಲ್ಲಿಯೇ ಯೋಗ್ಯ ಬೆಲೆಗೆ ದೊರೆಯುತ್ತಿದ್ದವು.

೧೦. ವೇಳಾಪತ್ರಿಕೆಯಂತೆ ಪ್ರತಿದಿವಸ ಶಾಲೆಯ ಕೆಲಸವಾದ ಬಳಿಕ ಸಂಜೆಯ ಮುಂದೆ ಮಹಾರಾಜರು ವಿದ್ಯಾರ್ಥಿಗಳಿಗೆ ನೈತಿಕ ಮತ್ತು ಧಾರ್ಮಿಕ ಉಪದೇಶ ಮಾಡುತ್ತಿದ್ದರು. ಮತ್ತು ಸಪ್ಪುರುಷರ ಕಥೆಗಳನ್ನು ಹೇಳುತ್ತಿದ್ದರು. ಇದರಿಂದ ವಿದ್ಯಾರ್ಥಿಗಳಲ್ಲಿ ಧರ್ಮವಿಷಯಕವಾದ ಶ್ರದ್ಧೆಯೂ ಪ್ರೀತಿಯೂ ಉಂಟಾಗಿ ಅವರು ಭಾವಿಕರೂ ಸಾತ್ವಿಕ ವೃತ್ತಿಯವರೂ ಆಗಲಿಕ್ಕೆ ಒಳ್ಳೇ ಸಹಾಯವಾಗುತ್ತಿತ್ತು.

ಈ ಮೇರೆಗೆ ಮಹಾರಾಜರು ತಮ್ಮ ವಿದ್ಯಾರ್ಥಿಗಳಿಗೆ ಸರ್ವಾಂಗೀಣವಾದ ಶಿಕ್ಷಣವನ್ನು ಕೊಡುತ್ತಿದ್ದರು. ಅವರ ಶಿಕ್ಷಣ ಪದ್ಧತಿಯಿಂದ ಹುಡುಗರಿಗೆ ಧಾರ್ಮಿಕ, ನೈತಿಕ ಮತ್ತು ವ್ಯಾವಹಾರಿಕ ಮೊದಲಾದ ಎಲ್ಲ ಬಗೆಯ ಶಿಕ್ಷಣವು ದೊರೆಯುತ್ತಿತ್ತು. ಪ್ರತಿವರ್ಷ ಅವರ ಶಾಲೆಯ ವಾರ್ಷಿಕ ಪರೀಕ್ಷೆಯಂತೂ ಪರೀಕ್ಷಕರನ್ನು ಬೆರಗುಗೊಳಿಸುವಂತಾಗುತ್ತಿತ್ತು. ಮುಲ್ಕೀಪರೀಕ್ಷೆಯ ವರ್ಗವು ಬಹುತರವಾಗಿ ಮಹಾರಾಜರ ಕಡೆಗೇ ಇರುತ್ತಿತ್ತು. ಮುಲ್ಕೀ ಪರೀಕ್ಷೆಗೆ ಹೋದ ವಿದ್ಯಾರ್ಥಿಗಳಲ್ಲಿ ಮುಕ್ಕಾಲು ಗಳಿಗಿಂತ ಹೆಚ್ಚಿಗೆ ವಿದ್ಯಾರ್ಥಿಗಳು ಪಾಸಾಗತಕ್ಕವರೇ. ಶಾಲೆಯು ಅಂತರ್ಯವಸ್ಥೆಯು ಬಲು ಜೆನ್ನಾಗಿತ್ತು. ಹೀಗಾಗಿ ಈ ಶಾಲೆಯು ಮಹಾರಾಜರ ಕಾಲಕ್ಕೆ ಸುಸ್ಥಿತಿಯ ಶಿಖರವನ್ನು ಮುಟ್ಟಿತ್ತು. ಈ ಮಾತಿಗೆ ಆಗಿನ ಕಾಲದಲ್ಲಿ ಆ ಶಾಲೆಗೆ ಭೆಟ್ಟಿಕೊಟ್ಟು ತಮ್ಮ ಅಭಿಪ್ರಾಯಗಳನ್ನು ಬರೆದಿಟ್ಟ ಮಹನೀಯರೇ ಸಾಕ್ಷಿ ಮಹಾರಾಜರು ಆಶ್ರಮವನ್ನು ಸ್ವೀಕರಿಸಿದ ನಾಲ್ಕು ವರ್ಷಗಳ ಮೇಲೆ ಆ ಕಾಲದ ಡಿಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರು ಎಲ್ಲ ಶಾಲೆಗಳಿಗೂ ಒಂದು ಸೂಚನಾ ಪತ್ರಿಕೆಯನ್ನು ಕಳಿಸಿ, "ಪ್ರತಿಯೊಬ್ಬ ಶಿಕ್ಷಕನೂ ಜೋಶೆ ಮಾಸ್ತರರಂತೆ ಶಿಕ್ಷಣ ಕೊಡತಕ್ಕದ್ದು. ಹಾಗೂ ಶಾಲೆಯ ವ್ಯವಸ್ಥೆಯನ್ನು ಕಾಯ್ದುಕೊಳ್ಳತಕ್ಕದ್ದು." ಎಂಬ ಶಬ್ದಗಳಿಂದ ಮಹಾರಾಜರು ಆದರ್ಶ ಶಿಕ್ಷಕರಾಗಿದ್ದರೆಂಬ ಸಂಗತಿಯನ್ನು ಪೂರ್ಣವಾಗಿ ಒಪ್ಪಿಕೊಂಡಿದ್ದಾರೆ.

ಮಹಾರಾಜರ ಶಿಕ್ಷಣ ಪದ್ಧತಿಯು ಸರಸವಾಗಿತ್ತು. ಅವರು ಕಲಿಸಲಿಕ್ಕೆ ಪ್ರಾರಂಭಿಸುವ ಮೊದಲು ವಿದ್ಯಾರ್ಥಿಗಳ ಮನಸ್ಸನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವರು. ಅವರ ಪ್ರೇಮಮಯವಾದ ನಗೆ ಮೋರೆಯಿಂದ ಹುಡುಗರು ಸಹಜವಾಗಿ ಆಕರ್ಷಿತವಾಗುತ್ತಿದ್ದರು. ಅವರ ಆನಂದಮಯವಾದ ಮುಖವನ್ನು ನೋಡಿದೊಡನೆ ವಿದ್ಯಾರ್ಥಿಗಳು ಮುಗ್ಧರಾಗುತ್ತಿದ್ದರು. ಅವರು ಹುಡುಗರ ಮನೋವೃತ್ತಿಯನ್ನರಿತು ತಕ್ಕಕಾಲಕ್ಕೆ ತಕ್ಕಪ್ಪೇ ವಿಷಯವನ್ನು ತಿಳಿಸಿಕೊಡುತ್ತಿದ್ದುದರಿಂದ, ವಿದ್ಯಾರ್ಥಿಗಳಿಗೆ ವಿಷಯಗಳು ಎಂದೂ ಗಡುಚಾಗಿ ತೋರುತ್ತಿದ್ದಿಲ್ಲ. ಗಣಿತ ಮತ್ತು ವ್ಯಾಕರಣಗಳಂಥ ನೀರಸ

ವಿಷಯಗಳೂ ಕೂಡ ಅವರ ಕೈಯಲ್ಲಿ ರಸಪೂರ್ಣವಾಗುತ್ತಿದ್ದವು. ಅವರು ಯಾವುದೇ ವಿಷಯವನ್ನು ಕಲಿಸುತ್ತಿರಲಿ, ಹುಡುಗರೂ ಎಂದೂ ಬೇಸರಿಯುತ್ತಿದ್ದಿಲ್ಲ.

ವಿದ್ಯಾರ್ಥಿಗಳ ಸಲುವಾಗಿಯೇ ಮಹಾರಾಜರು ಕೆಲವು ಪುಸ್ತಕಗಳನ್ನು ಬರೆದು ಪ್ರಕಟಪಡಿಸಿದರು. ಅವುಗಳಲ್ಲಿ 'ಬಿಡಿಸಿದ ಅಂಕಗಣಿತ'ವು ಒಹು ಮುಖ್ಯವಾದುದು. ಅದು ಒಳ್ಳೇ ಉಪಯುಕ್ತವಾದುದರಿಂದ 'ಜೋಡೇ ಗಣಿತ'ವೆಂಬ ಹೆಸರಿನಿಂದಲೇ ಪ್ರಸಿದ್ಧವಾಯಿತು. ಆ ಕಾಲದ ಡೆಪ್ಯೂಟಿಯವರಾದ ಚನಬಸಪ್ಪನವರು ವಿದ್ಯಾರ್ಥಿಗಳಿಗಾಗಿ ಒಂದು ಗಣಿತ ಪುಸ್ತಕವನ್ನು ಬರೆದಿದ್ದರು. ಎಲ್ಲ ಪ್ರಾಥಮಿಕ ಶಾಲೆಗಳಲ್ಲಿಯೂ ಅದೇ ಬಳಿಕೆಯಲ್ಲಿತ್ತು. ಮಹಾರಾಜರಾದರೂ ತಮ್ಮ ವಿದ್ಯಾರ್ಥಿಗಳಿಗೆ ಗಣಿತವನ್ನು ಕಲಿಸುವಾಗ ಇದನ್ನೇ ಉಪಯೋಗಿಸುತ್ತಿದ್ದರು. ಮಹಾರಾಜರಿಗೆ ಮೇಲಿಂದ ಮೇಲೆ ಒನೇ ಈಯತ್ತೆಯನ್ನು ಕಲಿಸುವ ಪ್ರಸಂಗ ಬರುತ್ತಿತ್ತು. ಆದಕ್ಕಾಗಿ ಅವರು ಚನಬಸಪ್ಪನವರ ಗಣಿತವನ್ನು ಸೋಪ ಪತ್ತಿಕವಾಗಿ ಬಿಡಿಸಿ ಪ್ರಸಿದ್ಧ ಮಾಡಬೇಕಾಯಿತು. ಇದರಿಂದ ಮಹಾರಾಜರ ವೇಳೆಯುಳಿದು ವಿದ್ಯಾರ್ಥಿಗಳಿಗೂ ಒಳ್ಳೇ ಸಹಾಯವಾಗುತ್ತಿತ್ತು.

ವ್ಯಾಕರಣ ವಿಷಯದಲ್ಲಿ ಹುಡುಗರಿಗಾಗುವ ತೊಂದರೆಯನ್ನು ಕಂಡು ಮಹಾರಾಜರು ''ವ್ಯಾಕರಣ ವೃಕ್ಷ''ವೆಂಬ ಚಿಕ್ಕ ಪುಸ್ತಕವನ್ನು ಮುದ್ರಿಸಿ, ಪ್ರಸಿದ್ಧಮಾಡಿದರು ಇದರ ಹೆಸರು ಅನ್ವರ್ಥಕವಾಗಿತ್ತು. ಇದನ್ನು ಕೈಯಲ್ಲಿ ಹಿಡಿದರೆ ವ್ಯಾಕರಣದ ಮೂಲವು ಯಾವುದು, ಅದರ ಮುಖ್ಯ ಶಾಖೆಗಳೂ ಉಪಶಾಖೆಗಳೂ ಯಾವು, ಆ ಉಪಶಾಖೆಗಳಿಗೆ ಪ್ರತಿಶಾಖೆಗಳು ಹೇಗೆ ಒಡೆದಿರುವವು, ಈ ಎಲ್ಲ ಸಂಗತಿಗಳು ತಿಳಿದು ಬಂದು, ವ್ಯಾಕರಣದ ಮುಖ್ಯ ಮುಖ್ಯ ಸಂಗತಿಗಳನ್ನು ನೆನಪಿನಲ್ಲಿಡಲಿಕ್ಕೆ ಸುಲಭವಾಗುತ್ತಿತ್ತು.

ಇದೇ ಕಾಲದಲ್ಲಿ ಮಹಾರಾಜರು ಧಾರ್ಮಿಕ ವಿಷಯಗಳ ಮೇಲೂ ಎರಡು ಪುಸ್ತಕಗಳನ್ನು ಪ್ರಕಟಮಾಡಿದರು. ಅವುಗಳಲ್ಲಿ ''ಲಘು ಚಿದಂಬರ ಚರಿತ್ರೆಯೆಂ''ಬದು ಚಿದಂಬರ ಭಕ್ತರಿಗೆ ಒಳ್ಳೇ ಉಪಯುಕ್ತವಾಗಿದೆ. ಚಿದಂಬರ ಮಹಾರಾಜರ ವಿಸ್ತಾರವಾದ ಚರಿತ್ರೆಯೊಳಗಿಂದ ಕೆಲವು ಮುಖ್ಯ

ಸಂಗತಿಗಳನ್ನಷ್ಟೇ ಆರಿಸಿ ತೆಗೆದು ವ್ಯವಸ್ಥೆಯಿಂದ ಜೋಡಿಸಿ ಈ ಪುಸ್ತಕವನ್ನು ತಯಾರಿಸಿದ್ದಾಗಿದೆ. ಚಿದಂಬರ ಮಹಾರಾಜರ ಬಗ್ಗೆ ಮುಖ್ಯ ಮುಖ್ಯ ಸಂಗತಿಗಳನ್ನು ನೆನಪಿನಲ್ಲಿಡಲಿಕ್ಕೂ, ದಿನಾಲು ಪಾರಾಯಣ ಮಾಡಲಿಕ್ಕೂ ಇದರಿಂದ ಒಳ್ಳೇ ಅನುಕೂಲವಾಯಿತು.

ವೈದಿಕರಿಗೆ ಸಂಧ್ಯಾವಂದನೆಯು ಅವಶ್ಯಕವಾದ ಕರ್ಮವಾಗಿದೆ. ಸಂಧ್ಯೋಪಾಸನೆಯು ನಿತ್ಯಕರ್ಮಗಳಲ್ಲಿ ಅಗ್ರಸ್ಥಾನವನ್ನು ವಹಿಸಿದೆ. ಒಂದೇ ಸವನೆ ಮೂರು ದಿವಸ ಸಂಧ್ಯೋಪಾಸನೆ ಮಾಡದಿದ್ದರೆ, ಪುನಃ ಉಪನಯನ ಮಾಡಬೇಕೆಂದು ಶಾಸ್ತ್ರವು ಹೇಳುತ್ತದೆ. ಆದರೆ ವೈದಿಕ ವಾಙ್ಮಯವೆಲ್ಲ ಸಂಸ್ಕೃತ ಭಾಷೆಯಲ್ಲಿದ್ದುದರಿಂದ, ಸಾಮಾನ್ಯ ಜನರಿಗೆ ಸಂಧ್ಯಾವಂದನೆಯ ಕ್ರಮವನ್ನು ತಿಳಿದುಕೊಳ್ಳುವದು ಕಠಿಣವಾಗಿದೆ. ಈ ಪರಿಸ್ಥಿತಿಯನ್ನರಿತು ಮಹಾರಾಜರು "ಋಗ್ವೇದೀಯ ಸಂಧ್ಯಾ" ಎಂಬ ಪುಸ್ತಕವನ್ನು ಸಿದ್ಧಗೊಳಿಸಿ ಪ್ರಕಟ ಮಾಡಿದರು. ಇದರಿಂದ ಋಕ್-ಶಾಖೆಯ ಸಾಮಾನ್ಯ ಬ್ರಾಹ್ಮಣರೂ ಕೂಡ ಸ್ವತಂತ್ರವಾಗಿ ಸಂಧ್ಯೋಪಾಸನೆ ಮಾಡಲಿಕ್ಕೆ ಅನುಕೂಲವಾಯಿತು. ಕಾರ್ಯ ಬಾಹುಲ್ಯದ ಮೂಲಕ ಸಂಧ್ಯಾವಂದನೆ ಮಾಡಲಿಕ್ಕೆ ವೇಳೆಯೇ ದೊರೆಯುವದಿಲ್ಲೆಂದು ಹೇಳುವವರೂ ಕೂಡ ತೀರ ಸ್ವಲ್ಪ ಕಾಲದಲ್ಲಿ ಸಹ ಸಂಧ್ಯಾವಂದನೆ ಮಾಡಬಹುದೆಂಬದನ್ನು ಮಹಾರಾಜರು ಇದರಿಂದ ತೋರಿಸಿಕೊಟ್ಟರು. ಇದು ಮೂರು ಸಾರೆ ಶುದ್ರಿತವಾಗಿ ಪ್ರಕಟನೆ ಪಡೆಯಿತೆಂದು ಹೇಳಿಬಿಟ್ಟರೆ ಇದರ ಉಪಯುಕ್ತತೆಯು ಜನರಿಗೆ ಎಷ್ಟಿತ್ತೆಂಬದು ಸಹಜವಾಗಿ ತಿಳಿಯುವಂತಿದೆ.

ಮಹಾರಾಜರು ಹುಡುಗರ ನೈತಿಕ ಶಿಕ್ಷಣದ ಕಡೆಗೆ ಯಾವ ತರದ ಲಕ್ಷ್ಯ ಪೂರಯಿಸುತ್ತಿದ್ದರೆಂಬ ಬಗ್ಗೆ ಒಂದು ಸಂಗತಿಯು ಇಲ್ಲಿ ಪ್ರತ್ಯೇಕವಾಗಿ ಹೇಳುವಂತಿದೆ. ಬೆಳಗಾಂವಿಯ ಸುಪ್ರಸಿದ್ಧರಾದ ಶ್ರೀ ಹಣಮಂತರಾವ ಸವಣೂರ ಡಾಕ್ಟರರು ಈ ಮಾತನ್ನು ನಮಗೆ ಬೇಕೆಂತಲೇ ಹೇಳಿದ್ದಾರೆ. ಹಣಮಂತರಾಯರು ಮಹಾರಾಜರ ಕೈಕೆಳಗೆ ಕಲಿತವರು. ಅವರು ಮಹಾರಾಜರನ್ನು ಇಂದಿಗೂ ಪ್ರೇಮಾದರಗಳಿಂದ ನೆನಿಸುತ್ತಾರೆ. ಅವರಿಗೆ ತಮ್ಮ ಪ್ರಾಥಮಿಕ ಶಿಕ್ಷಣದ ನೆನಪಾದೊಡನೆ, ಮಹಾರಾಜರ ನೆನಪಾಗುತ್ತದಂತೆ! ಅವರು ಕನ್ನಡ ೩ನೆಯ ಅಥವಾ ೪ನೆಯ ಇಯತ್ತೆಯಲ್ಲಿದ್ದಾಗಿನ

ಸಂಗತಿಯದು. ಹುಡುಗರಿಗೆ ನಡುವೆ ಕೆಲಹೊತ್ತು ''ವಿರಾಮ''ವನ್ನು ಕೊಡುವ ರೂಢಿಯಿರುವದಷ್ಟೇ ? ಆ ಕಾಲದಲ್ಲಿ ರಾಯರು ಮನೆಯಿಂದ ತಂದ ತಿಂಡಿಯ ಪದಾರ್ಥಗಳನ್ನು ಒಬ್ಬರೇ ರಹಸ್ಯವಾಗಿ ಕುಳಿತು ತಿನ್ನುತ್ತಿದ್ದರು. ತಮ್ಮ ಸಂಗಡಿಗರಾರನ್ನೂ ಅವರು ಆ ಕಾಲಕ್ಕೆ ಕರೆಯುತ್ತಿರಲಿಲ್ಲ. ಈ ಕ್ರಮವು ಅನೇಕ ದಿನಗಳಿಂದ ನಡೆದಿತ್ತು. ಒಂದು ದಿನ ರಾಯರು ಹೀಗೆ ರಹಸ್ಯವಾಗಿ ತಿನ್ನುತ್ತಿದ್ದುದನ್ನು ಮಹಾರಾಜರು ಅಕಸ್ಮಾತ್ತಾಗಿ ನೋಡಿದರು. ಅವರು ಕೂಡಲೇ ರಾಯರ ಕಡೆಕೆ ಹೋಗಿ ಪ್ರೇಮದಿಂದ ತಿಳಿವಳಿಕೆ ಹೇಳಿದರು. ''ತಮ್ಮಾ, ಹೀಗೆ ಮಾಡುವದು ಸರಿಯಲ್ಲವಪ್ಪ ! ಸಂಗಡಿಗರನ್ನು ಬಿಟ್ಟು ಹೀಗೆ ತಿಂದರೆ, ಅದೇನು ನಿನ್ನ ಹೊಟ್ಟೆಯಲ್ಲಿ ಬಂಗಾರವಾಗುವದೇ ? ನಿನ್ನ ತಿನಸಿನಲ್ಲಿ ನಿನ್ನ ಗೆಳೆಯರೂ ಪಾಲುಗಾರರಾದರೆ, ನಿನ್ನ ಆನಂದವೂ ಹೆಚ್ಚುವದು; ನೀನೂ ದೇವರಿಗೆ ಪ್ರಿಯನಾಗುವಿ.'' ಬುದ್ಧಿವಂತರಾದ ರಾಯರಿಗೆ ಈ ಮಾತು ಕೂಡಲೇ ಸಮ್ಮತವಾಯಿತು. ಅವರು ಕಣ್ತುಂಬ ನೀರು ತಂದರು. ''ಇಲ್ಲ. ಗುರುಗಳೇ, ನಾನು ಇನ್ನೊಮ್ಮೆ ಹೀಗೆಂದೂ ಮಾಡುವದಿಲ್ಲ. ಇದೊಂದು ತಪ್ಪಾಯಿತು. ದಯವಿಟ್ಟು ಕ್ಷಮಿಸಿರಿ.'' ಮಹಾರಾಜರು ಮುಗುಳು ನಗೆಯಿಂದ ರಾಯರ ಬೆನ್ನು ತಟ್ಟಿ ತಮ್ಮ ಸಂತೋಷವನ್ನು ವ್ಯಕ್ತಮಾಡಿದರು. ರಾಯರಿಗೆ ಈ ಮಾತನ್ನು ಹೇಳುವಾಗ ಇಂದಿಗೂ ಕುತ್ತಿಗೆಯ ಶಿರಗಳು ಉಬ್ಬಿ ಬರುತ್ತವೆ. ತಿನ್ನುವ ಪದಾರ್ಥವನ್ನು ನೋಡಿದೊಡನೆ ರಾಯರಿಗೆ ಮಹಾರಾಜರ ಉಪದೇಶವು ನೆನಪಾಗುತ್ತದೆ. ರಾಯರು ಅಂದಿನಿಂದ ಒಬ್ಬೊಂಟಿಗರಾಗಿ ಎಂದೂ ಯಾವ ಪದಾರ್ಥವನ್ನೂ ತಿನ್ನಲಾರದ ಸ್ವಭಾವದವರಾಗಿ ಬಿಟ್ಟಿರುತ್ತಾರೆ. ಮಹಾರಾಜರ ಉಪದೇಶದ ಪ್ರಭಾವವೇ ಅಂತಹದು !

———

೧೯ ದೇವನೊಬ್ಬ, ನಾಮಹಲವು

ಜಗತ್ತಿನೊಳಗೆ ರೂಢವಾದ ಅನೇಕ ಧರ್ಮ, ಮತ, ಪಂಥ, ಮತ್ತು ಸಾಂಪ್ರದಾಯಗಳು ತಮ್ಮ ತಮ್ಮ ಅನುಯಾಯಿಗಳಿಗೆ ತಮತಮಗೆ ವಿಶಿಷ್ಟವಾದ ಒಂದೇ ಸಾಧನ ಪದ್ಧತಿಯನ್ನು ಹೇಳಿ ಕೊಡುತ್ತವೆ. ಆವರೆ ಹಿಂದೂ ಧರ್ಮವು ಸರ್ವಸಂಗ್ರಾಹಕವಿದೆ. ಅದು ಬರೀ ಮತಪಂಥನಿರದೆ, ಮಾನವೀ ಸಂಸ್ಕೃತಿಯ ಉಚ್ಚತಮ ಸ್ಥಿತಿಯ ಆದರ್ಶವಾಗಿದೆ. ಉಳಿದ ಧರ್ಮಗಳಂತೆ ಅದು ಒಬ್ಬೊಬ್ಬ ಮತಸ್ಥಾಪಕರ ವಿಚಾರಗಳ ಮೇಲೆ ಅದು ನಿಂತಿರುವದಿಲ್ಲ. ಹಿಂದೂ-ಧರ್ಮವು ಹಟನಾದರಹಿತವಾಗಿದೆ. ಅದು ಪೂರ್ಣವಾಗಿ ಸ್ವಾಗತಿಕ ಸ್ವರೂಪದ್ದಾಗಿದೆ. ತಾತ್ವಿಕ ವಿಚಾರ ವಿಕಾಸದೊಳಗೆ ಅದು ಉಳಿದೆಲ್ಲ ಧರ್ಮಗಳಿಗೆ ಅಜಿಂಕ್ಯವಾಗಿದೆ. ಸಾಧನ ಪದ್ಧತಿಯ ದೃಷ್ಟಿಯಿಂದ ನೋಡಿದರೆ ಅದು ಭಿನ್ನ ಭಿನ್ನ ಅಧಿಕಾರದ ಎಲ್ಲ ಜನರಿಗೆ ಐಹಿಕ ಮತ್ತು ಪಾರಲೌಕಿಕ ಸೌಖ್ಯದ ದಾರಿಯನ್ನು ತೋರಿಸುವದು. ಈ ರೀತಿಯಿಂದ ಹಿಂದೂ-ಧರ್ಮವು ಜಗತ್ತಿನೊಳಗೆ ಪರದ್ವೇಷ ರಹಿತ ಸರ್ವ ಸಂಗ್ರಾಹಕ ವೃತ್ತಿಯನ್ನು ಬೆಳೆಸಿ, ವಿಶ್ವಧರ್ಮದ ಸ್ಥಾನವನ್ನು ಹೊಂದುವ ಯೋಗ್ಯತೆಯುಳ್ಳದ್ದಾಗಿದೆ.

ಹಿಂದೂ-ಧರ್ಮದ ಈ ವೈಶಿಷ್ಟ್ಯವು ಇದರ ಉದಾರತೆಯಲ್ಲಿದೆ. ಅದು ಎಲ್ಲರಿಗೂ ಆಶ್ರಯಕೊಡುವಂತಹದ್ದಾಗಿರುತ್ತದೆ. ಅದರಲ್ಲಿ ಎಲ್ಲರಿಗೂ ಮುಕ್ತದ್ವಾರವಿದೆ. ಪರಮತೀಯರನ್ನು ಕೂಡ ಅದು ದ್ವೇಷಿಸದೆ ಬಂಧುಭಾವದಿಂದ ನೋಡುತ್ತಿದೆ. ತನ್ನ ಶತ್ರುಗಳನ್ನು ಸಹ ಅದು ಪ್ರೇಮದಿಂದ ಸ್ವಾಗತಿಸುತ್ತದೆ. ಜಗತ್ತಿನೊಳಗಿನ ಜನರ ರುಚಿಗಳು ಅನೇಕವಾಗಿವೆ. ಅವರ ಸ್ವಭಾವ, ವಿಚಾರ, ಸಂಸ್ಕೃತಿ, ಅನುಭವ, ಯೋಗ್ಯತೆ, ಸಂಸ್ಕಾರ,

ಶಿಕ್ಷಣ, ಪರಿಸ್ಥಿತಿ, ಆಚಾರ, ಮೊದಲಾದ ಎಲ್ಲ ವಿಷಯಗಳೂ ಬೇರೆಬೇರೆಯಾಗಿವೆ. ಅವರೆಲ್ಲರಿಗೂ ಅನ್ವಯಿಸುವಂತೆ ಒಂದೇ ಸಾಧನವನ್ನು ಹೇಳಿಕೊಡುವದು ಎಂದೂ ಸಾಧ್ಯವಿಲ್ಲ. ಆದುದರಿಂದ ಹಿಂದೂ-ಧರ್ಮವು ಅಧಿಕಾರ ವಾದವನ್ನು ಸ್ವೀಕರಿಸುತ್ತದೆ. ಯಾರ ಯೋಗ್ಯತೆ ಎಂತಹದೋ ಅದಕ್ಕನುಸಾರವಾಗಿ ಅದು ಸಾಧನ ಪದ್ಧತಿಯನ್ನು ಹೇಳಿಕೊಡುತ್ತದೆ. ತೀರ ಪಶು-ಬುದ್ಧಿಯ ಮಾನವನನ್ನು ಹಿಡಿದು ಸುಧಾರಣೆಯ ಶಿಖರವನ್ನು ಮುಟ್ಟಿದ ಸಾಧುಶ್ರೇಷ್ಠರ ವರೆಗೆ ಎಲ್ಲರಿಗೂ ಅನುಕೂಲವಾಗುವಂತೆ ಅದರ ಸಾಧನ ಮಾರ್ಗಗಳಿವೆ. ಕರ್ಮ, ಜ್ಞಾನ, ಭಕ್ತಿ, ಧ್ಯಾನ, ಯೋಗ, ತಂತ್ರ ಮೊದಲಾದ ಅನೇಕಾನೇಕ ಸಾಧನಗಳನ್ನೂ, ಅವುಗಳೊಳಗಿನ ಒಳಭೇದಗಳನ್ನೂ ಅದು ಹೇಳಿಕೊಡುತ್ತದೆ ಬೇಕಾದವನು ಬೇಕಾದ ಸಾಧನ ಮಾರ್ಗವನ್ನು ಅನುಸರಿಸಬಹುದು ಆದರೆ ಎಲ್ಲ ಸಾಧನಗಳ ಪರ್ಯವಸಾನವು ಮಾತ್ರ ಪರಮಾತ್ಮ ಪ್ರಾಪ್ತಿಯೆಂಬದೊಂದೇ. ಈ ಮಾತನ್ನು ಆಧುನಿಕ ಯುಗಪುರುಷರಾದ ಶ್ರೀ ರಾಮಕೃಷ್ಣ ಪರಮಹಂಸರು ಸ್ವಂತ ಆಚರಿಸಿ ನೋಡಿ ಹೇಳಿಕೊಟ್ಟಿದ್ದಾರೆ. ಸರ್ವಧರ್ಮ ಸಮನ್ವಯದ ಅವರ ಬೀಜ ಮಂತ್ರವು ಹಿಂದೂ-ಧರ್ಮದ ಜೀವಾಳವಾಗಿದೆ.

ಲೋಕಮಾನ್ಯ ಟಿಳಕರು ಮಾಡಿದ ಹಿಂದೂ-ಧರ್ಮ ವ್ಯಾಖ್ಯೆಯಲ್ಲಿ ಈ ಎಲ್ಲ ಮಾತುಗಳೂ ಚನ್ನಾಗಿ ಅಡಕವಾಗಿವೆ: —

ಪ್ರಾಮಾಣ್ಯ ಬುದ್ಧಿರ್ವೇದೇಷು ಸಾಧನಾನಾ ಮನೇಕತಾ ।
ಉಪಾಸ್ಯಾನಾಮನಿಯ ಮುಶ್ಚೈತದ್ಧರ್ಮಸ್ಯ ಲಕ್ಷಣಮ್ ॥

ಎಂದರೆ ೧. ವೇದಪ್ರಾಮಾಣ್ಯವನ್ನೊಪ್ಪುವದು, ೨ ಅನೇಕ ಸಾಧನೆಗಳನ್ನು ಒಪ್ಪುವದು, ಮತ್ತು ೩ ಸಗುಣೋಪಾಸನೆಯಲ್ಲಿ ವಿವಿಧತೆಯನ್ನೊಪ್ಪುವದು—ಇವು ಮೂರು ಹಿಂದೂ-ಧರ್ಮದ ಲಕ್ಷಣಗಳೆಂದು ಹೇಳಬಹುದು. ಆದರೆ ಯಾವದೇ ಸಾಧನ ಮಾಡಿ ಯಾವುದೇ ಉಪಾಸ್ಯನ ಉಪಾಸನೆ ಮಾಡಿದರೂ, ಅವುಗಳಲ್ಲಿ ವಿರೋಧವಿಲ್ಲವೆಂದು ಹಿಂದೂ-ಧರ್ಮವು ಸ್ಪಷ್ಟವಾಗಿ ಸಾರುತ್ತದೆ. ಒಬ್ಬ ದೇವರನ್ನೇ ಹಲವು ಬಗೆಯಿಂದ ಉಪಾಸನೆ ಮಾಡಿದರೆ, ಅಲ್ಲಿ ಭೇದವೇಕೆ ಹುಟ್ಟಬೇಕು ? "ಏಕಂ ಸದ್ವಿಪ್ರಾ ಬಹುಧಾ ವದಂತಿ"— ದೇವನೊಬ್ಬ ನಾಮಹಲವು—ಎಂದು ವೇದವು ಹೇಳುತ್ತಿದೆ.

ಒಂದೇ ಪದಾರ್ಥವನ್ನು ಬೇರೆ ಬೇರೆ ಹೆಸರುಗಳಿಂದ ಕರೆದ ಮಾತ್ರಕ್ಕೆ ಆ ಪದಾರ್ಥದಲ್ಲಿ ಭೇದವಾಗಬಹುದೇ ? ದೇವರಿಗೆ ಆತ್ಮ, ಬ್ರಹ್ಮ, ರಾಮ, ಈಶ್ವರ, ಕೃಷ್ಣ, ದೇವಿ, ದತ್ತ, ಚಿದಂಬರ, ಗಾಡ್, ಅಲ್ಲಾ — ಎಂದು ಮೊದಲಾಗಿ ಹೆಸರುಕೊಟ್ಟ ಮಾತ್ರಕ್ಕೆ ದೇವರಲ್ಲಿ ಭೇದವುಂಟಾಗಬಹುದೇ?

ಆದುದರಿಂದ ಉಪಾಸನಾಪದ್ಧತಿಯನ್ನು ಹೇಳಿಕೊಡುವ ಗುರುಗಳು ಈ ಮಾತನ್ನು ಲಕ್ಷದಲ್ಲಿಟ್ಟು, ಉಪದೇಶ ಮಾಡಬೇಕಾಗುವದು. ಇಲ್ಲವಾದರೆ ನಿಷ್ಕಾರಣವಾಗಿ ದ್ವೇಷಾಸೂಯೆಗಳು ಹುಟ್ಟಿ, ಉಪಾಸನೆಯಿಂದ ಸಿಗಬೇಕಾದ ಸುಖಶಾಂತಿಗಳು ಸಿಕ್ಕದಂತಾಗುತ್ತವೆ. ನಮ್ಮ ಚರಿತ್ರನಾಯಕರು ಇಲ್ಲಿಯ ವರೆಗೆ ತಮ್ಮ ಸ್ವಂತ ಸಾಧನೆಯಲ್ಲಿಯೇ ನಿರತರಾಗಿದ್ದರು. ಅವರೀಗ ಲೌಕಿಕ ಶಿಕ್ಷಣ ಪಡೆದು ಲೌಕಿಕ ಶಿಕ್ಷಕರಾಗಲಿಕ್ಕೆ ಸಿದ್ಧರಾದಂತೆ, ಆಧ್ಯಾತ್ಮಿಕ ಸಾಧನೆಯನ್ನು ಮುಗಿಸಿ. ಆಧ್ಯಾತ್ಮಿಕ ಗುರುಗಳಾಗಲಿಕ್ಕೂ ಅಧಿಕಾರವುಳ್ಳವರಾಗಿದ್ದರು. ಚಿದಂಬರ ಸಾಂಪ್ರದಾಯವನ್ನು ನಡಿಸುವ ಅಧಿಕಾರವಂತೂ ಅವರಿಗೆ ಈ ಮೊದಲೇ ಸಿಕ್ಕುಬಿಟ್ಟಿತ್ತು. ಅದಕ್ಕನುಸರಿಸಿ ಅವರು ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಹತ್ತಿದೊಡನೆ, ಜನರಿಗೆ ಪರಮಾರ್ಥ ಮಾರ್ಗವನ್ನು ತೋರಿಸಿ ಅಧ್ಯಾತ್ಮ ಶಿಕ್ಷಣವನ್ನೂ ಕೊಡುವ ಕೆಲಸವನ್ನು ಕೈಕೊಳ್ಳಬೇಕಾಯಿತು.

ಆತ್ಮೋದ್ಧಾರವನ್ನು ಮಾಡಿಕೊಂಡು ತಮ್ಮ ಮಾನವ ಜನ್ಮವನ್ನು ಸಫಲಗೊಳಿಸುವದಕ್ಕಾಗಿ ಮಹಾರಾಜರನ್ನು ಆಶ್ರಯಿಸಿದವರಲ್ಲಿ ಕೃಷ್ಣಾಜಿ ಶಂಕರ ಕುಲಕರ್ಣಿ ಎಂಬವರು ಮೊದಲನೆಯವರು. ಅವರು ಪರಸಗಡ ತಾಲೂಕಿನ ಎಡಿಹಳ್ಳಿ ಗ್ರಾಮದವರು. ಅವರು ದೈವೀ ಪ್ರೇರಣೆಯಿಂದ ಮಹಾರಾಜರ ಕಡೆಗೆ ಹೋದರು. ಮಹಾರಾಜರು ಆಗ ಗೋಕಾಕ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಕೃಷ್ಣಾಜಿಯವರು ದಿನಾಲು ಮಾಧುಕರೀ ಬೇಡಿ ತಮ್ಮ ಉಪಜೀವನ ಸಾಗಿಸುವರು. ತಮ್ಮ ಹೊಟ್ಟೆಯ ಭಾರವನ್ನು ಗುರುಗಳ ಮೇಲೆ ಹಾಕದೆ, ಅವರ ಸೇವೆ ಮಾಡಬೇಕೆಂದು ಅವರ ನಿಶ್ಚಯವಾಗಿತ್ತು. ಈ ನಿಶ್ಚಯವೆಂದರೆ ಎಲ್ಲ ಶಿಷ್ಯರೂ ಅನುಸರಿಸಬೇಕಾದ ನಿಯಮವೇ ಸರಿ. ಕೃಷ್ಣಾಜಿಯವರು ಮಹಾರಾಜರ ಮನೆಯಲ್ಲಿದ್ದು ಎಲ್ಲ ಬಗೆಯಿಂದ ಅವರ

ಸೇವೆ ಮಾಡುತ್ತಿದ್ದರು. ಶಾಸ್ತ್ರಕಾರರು "ನಿರ್ಲಜ್ಜೋ ಗುರುಸನ್ನಿಧೌ" ಎಂದು ಹೇಳುತ್ತಾರೆ. ಎಂದರೆ ಗುರುಸೇವೆ ಮಾಡುವಾಗ ಸಾಧಕನು ನಿರ್ಲಜ್ಜನಾಗಬೇಕಾಗುತ್ತದೆ. ತನ್ನ ಅಹಂಕಾರವನ್ನು ನಾಶಮಾಡಿ ಅವನು ಉಚ್ಚ-ನೀಚ ಭೇದವನ್ನೆಣಿಸದೆ ಎಲ್ಲ ತರದ ಸೇವೆಯ ಕೆಲಸಗಳನ್ನು ಮಾಡ ಬೇಕಾಗುತ್ತದೆ ಸೇವಾಧರ್ಮವೇ ಕಠಿಣವಾಗಿದೆ. ಆದರಲ್ಲಿಯೂ ಗುರುಗಳು ಪರೀಕ್ಷೆಗಾಗಿ ಏನೇನು ಸೇವೆ ಮಾಡಲಿಕ್ಕೆ ಹಚ್ಚುವರೆಂಬ ನಿಯಮವಿಲ್ಲ ಇದರೊಳಗಿಂದ ಪಾರಾದ ಮೇಲೆ ಗುರುಗಳು ಅನುಗ್ರಹ ಮಾಡುವರು. ನಿಜವೇ ಇದೆ. ಆಧ್ಯಾತ್ಮ ವಿದ್ಯೆಯೇನು ದಾರಿಯ ಮೇಲೆ ಬಿದ್ದಿಲ್ಲ. ಆದಕ್ಕಾಗಿ ಗುರುಗಳ ಸೇವೆ ಶುಶ್ರೂಷೆ ಮಾಡಿ, ಶರೀರವನ್ನು ನಮಿಸಿ, ಶರಣು ಹೋದರೆ ಮಾತ್ರ ಗುರುಗಳು ಜ್ಞಾನೋಪದೇಶಮಾಡುವರೆಂದು ಭಗವದ್ಗೀತೆಯು ಹೇಳುತ್ತದೆ. ಅದರಂತೆ ಕೃಷ್ಣಾಜಿಪಂತರು ಏಕನಿಷ್ಠೆಯಿಂದ ಮಾಹಾರಾಜರಿಗೆ ಶರಣು ಹೋದರು. ಅವರ ಭಕ್ತಿಭಾವವನ್ನು ಪರೀಕ್ಷಿಸಿದ ಮೇಲೆ ಮಹಾರಾಜರು ಅವರಿಗೆ ಚಿದಂಬರೋಪಾಸನೆಯನ್ನು ಹೇಳಿಕೊಟ್ಟು ಅನುಗ್ರಹ ಮಾಡಿದರು. ಮಹಾರಾಜರ ಮೊದಲನೆಯ ಶಿಷ್ಯರಾಗುವ ಸೌಭಾಗ್ಯ ದೊರೆತುದಕ್ಕಾಗಿ ಅವರಿಗೆ ಪರಮಾನಂದವಾಯಿತು. ಅವರು ಕೊನೆಯ ವರೆಗೆ ಅನನ್ಯಗತಿಕರಾಗಿ ನಡೆದು ಮಹಾರಾಜರು ಹೇಳಿಕೊಟ್ಟ ದಾರಿಯಿಂದ ಹೋಗಿ ಕೃತಾರ್ಥರಾದರು.


ಕೃಷ್ಣಾಜಿಪಂತರು ಮೂಲತಃ ದತ್ತೋಪಾಸಕರು. ಅವರಿಗೆ ಮೊದಲಿನಿಂದಲೂ ದತ್ತನ ಮೇಲೆ ವಿಶೇಷ ಪ್ರೇಮ. ದತ್ತನು ಅವರ ಕುಲದೇವರೂ ಹೌದು. ಪರಮಾತ್ಮನು ಅನಂತರೂಪ—ಅನಂತ ನಾಮನಾದರೂ ಒಬ್ಬನೇ ಆಗಿರುವನೆಂಬ ಮಾತನ್ನು ಅವರು ಗುರುಗಳ ಮುಖದಿಂದ ಕೇಳಿದ್ದರೂ, ಅದರ ಅನುಭವವು ಅವರಿಗಿನ್ನೂ ಆಗಿದ್ದಿಲ್ಲ. ಮಹಾರಾಜರು ಹೇಳಿಕೊಟ್ಟಂತೆ ಚಿದಂಬರ ಜಪವನ್ನೇನೋ ಅವರು ಮಾಡುತ್ತಿದ್ದರು. ಆದರೆ ಅವರ ಅಂತಃಕರಣದೊಳಗಿನ ಸಂಶಯವು ಮಾತ್ರ ದೂರಾಗಿದ್ದಿಲ್ಲ. ಪ್ರತಿ ವರ್ಷ ಗುರುದ್ವಾದಶಿಗೆ ದತ್ತನ ಜಾಗ್ರತ ಸ್ಥಾನವೆಂದು ಪ್ರಸಿದ್ಧವಾದ ನೃಸಿಂಹವಾಡಿಗೆ ಹೋಗಿ ಬರುವದು ಅವರ ಪರಿಪಾಠವಾಗಿತ್ತು ಅಲ್ಲಿ ಕೆಲವು

ದಿನವಿದ್ದು, ಗುರುಚರಿತ್ರ ಸಪ್ತಾಹಮಾಡಿ, ದೇವರಿಗೆ ಅಭಿಷೇಕ ನೈವೇದ್ಯ-ಗಳನ್ನು ಮಾಡಿಕೊಂಡು ಅವರು ಊರಿಗೆ ತಿರುಗಿ ಬರುತ್ತಿದ್ದರು. ಗೋಕಾ-ಕಕ್ಕೆ ಬಂದು ಚಿದಂಬರ ಮಂತ್ರವನ್ನು ಸ್ವೀಕರಿಸಿದ ಮೇಲೆ ಸಹ ಅವರು ವ ಹಾರಾಜರ ಅಪ್ಪಣೆಯಿಂದ ವಾಡಿಗೆ ಹೋದರು. ಆದರೆ ಅಲ್ಲಿ ಅವರ ಮನಸ್ಸಿಗೆ ಎಂದಿನಂತೆ ಸಮಾಧಾನವಾಗದಂತಾಯಿತು. ಅವರ ಮನಸ್ಸಿನಲ್ಲಿ ನಾನಾತರದ ವಿಕಲ್ಪಗಳು ಬರಹತ್ತಿದವು. ''ದತ್ತನು ನಿಜವಾಗಿಯೂ ಪರಬ್ರಹ್ಮಸ್ವರೂಪನೆಂದು ಪುರಾಣಾದಿಗಳಲ್ಲಿ ವರ್ಣನೆಯಿದೆ. ಆದಕ್ಕನು-ಸರಿಸಿ ಅವನ ಪ್ರಸಿದ್ಧಿಯಾದರೂ ಹೆಚ್ಚಾಗಿದೆ. ಚಿದಂಬರನು ದೇವರ ಅವತಾರವೆಂದು ಯಾವ ಪುರಾಣದಲ್ಲಿಯೂ ಉಲ್ಲೇಖವಿಲ್ಲ. ಚಿದಂಬರನ ಪ್ರಸಿದ್ಧಿಯೂ ಅಷ್ಟು ವಿಶೇಷವಾಗಿಲ್ಲ. ಮೊದಲಿನಿಂದ ನನಗೆ ದತ್ತನ ಮೇಲೆ ಪ್ರೇಮವೂ ವಿಶೇಷವಾಗಿದೆ. ಆದರೆ ಗುರುಗಳಾದರೋ ಚಿದಂಬರನ ಮಂತ್ರವನ್ನು ಅನುಗ್ರಹಿಸಿದ್ದಾರೆ. ಎಂದ ಮೇಲೆ ನಾನಿಲ್ಲಿ ಯಾವ ನಾಮದ ಜಪ ಮಾಡಲಿ ? ಯಾವುದನ್ನು ಅನುಸರಿಸಿದರೆ ನನ್ನ ಉದ್ಧಾರವಾದೀತು ? ಈ ನನ್ನ ಸಂಶಯವು ಹೇಗೆ ದೂರಾಗಬೇಕು ?'' ಈ ವಿಚಾರಗಳ ಗೊಂದಲದಿಂದ ಅವರಿಗೆ ಪರಮಾವಧಿ ದುಃಖವಾಯಿತು. ಕೊನೆಗೆ ಅವರು ನಿಟ್ಟುಸಿರುಬಿಟ್ಟು, ಪರಮಾತ್ಮನೇ ಗತಿಯೆಂದು ತಿಳಿದು ದತ್ತನ ಮುಂದೆ ನಿಂತು ಪ್ರಾರ್ಥನೆ ಮಾಡಿಕೊಂಡು ತನ್ನ ಮನಸ್ಸಿನ ಸಂದೇಹವನ್ನು ದೂರ ಮಾಡಬೇಕೆಂದು ಬೇಡಿಕೊಂಡರು.

ಅವರು ಅಂದು ಮಲಗಿಕೊಳ್ಳುವಾಗ ಸಹ ಇದೇ ತರದ ಪ್ರಾರ್ಥನೆ ಮಾಡಿಕೊಂಡರು. ದೇವರು ಕರುಣಾಮಯನು. ಕೃಷ್ಣಾಜಿಪಂತರ ಗುರು-ಗಳೂ ಸಾಮಾನ್ಯರಲ್ಲ. ವಿಧಿವತ್ತಾಗಿ ಸಾಧನೆ ಮಾಡಿ ಸಿದ್ಧರಾದ ಸದ್ಗುರು ಗಳವರು. ಅಂತಹ ಗುರುಗಳ ಕೃಪೆಗೆ ಪಾತ್ರನಾದ ಕೃಷ್ಣಾಜಿಪಂತನೂ ಪುಣ್ಯವಂತನೇ ಸರಿ. ಅವನಿಗೆಬಂದ ಸಂಶಯವೂ ಪ್ರಾಮಾಣಿಕತನದ್ದಾಗಿತ್ತು. ಎಂದ ಮೇಲೆ ಅವನ ವಿಕಲ್ಪವನ್ನು ದೂರ ಮಾಡುವ ಹೊರೆಯು ದೇವರ ಮೇಲೆ ಬೀಳದಿರುವದೇ ? ಯಾರು ಯಾವ ಉಪಾಸನೆಯನ್ನು ಮಾಡು-ವರೋ, ಅದರಲ್ಲಿಯೇ ಅವರಿಗೆ ನಿಶ್ಚಲವಾದ ವಿಶ್ವಾಸವುಂಟಾಗುವಂತೆ ಮಾಡುವೆನೆಂದು ಶ್ರೀ ಕೃಷ್ಣನು ಗೀತೆಯಲ್ಲಿ ಅಭಿವಚನವನ್ನು ಕೊಟ್ಟಿಲ್ಲವೇ?

ಅದಕ್ಕಾಗಿ ಪರಮಾತ್ಮನು ಒಬ್ಬ ದಿವ್ಯಯತಿಗಳ ರೂಪದಿಂದ ಕೃಷ್ಣಾಜಿಪಂತರ ಬೆಳಗು ಮುಂಜಾನೆಯ ಕನಸಿನೊಳಗೆ ಕಾಣಿಸಿಕೊಂಡನು ಕೃಷ್ಣಾಜಿಪಂತರು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಕೈಜೋಡಿಸಿಕೊಂಡು ನಿಂತು, ತಮ್ಮ ಸಂದೇಹವನ್ನು ಅವರ ಮುಂದೆ ಇಟ್ಟರು ಯತಿಗಳು ಮುಗುಳುನಗೆ ನಗುತ್ತ:— ''ತಮ್ಮಾ, ನೀನೆಂತಹ ಹುಚ್ಚನಪ್ಪಾ ! ನಿನ್ನ ಗುರುಗಳು ನಿನಗೆ ಹೇಳಿಕೊಟ್ಟಿಲ್ಲವೇ ? ದೇವರು ಅನಂತರೂಪ -- ಅನಂತನಾಮನಾಗಿ ತೋರಿಕೊಂಡರೂ, ಅವನಿಗೆ ನಾಮವೂ ಇಲ್ಲ. ರೂಪವೂ ಇಲ್ಲ. ಬೇಕಾದವರು ಅವನನ್ನು ಬೇಕಾದ ಹೆಸರಿನಿಂದ, ರೂಪದಿಂದ ಪೂಜೆಮಾಡಬಹುದು. ನಾಮರೂಪಗಳು ಬೇರೆ ಬೇರೆಯಾದರೂ ಮೂಲವಸ್ತುವು ಬೇರೆಯಾಗಲಾರದು. ಒಬ್ಬನೇ ಪರಮಾತ್ಮನು ಬೇರೆ ಬೇರೆ ದೇಶಗಳಲ್ಲಿ, ಬೇರೆ ಬೇರೆ ಕಾಲಗಳಲ್ಲಿ, ಬೇರೆ ಬೇರೆ ಹೆಸರಿನಿಂದ ಅವತಾರ ಮಾಡುತ್ತಾನೆ. ಯಾವನು ರಾಮಕೃಷ್ಣಾದಿ ಅವತಾರಗಳನ್ನು ಧಾರಣಮಾಡಿ ಲೀಲೆದೋರಿದನೋ ಅವನೇ ದತ್ತನು. ಅವನೇ ಚಿದಂಬರನು. ದತ್ತ ಮತ್ತು ಚಿದಂಬರರಲ್ಲಿ ಯಾವ ಭೇದವೂ ಇಲ್ಲ, ಕಂಡೆಯಾ ! ನೀನು ನಿನ್ನ ಗುರುಗಳು ಹೇಳಿದಂತೆ ಚಿದಂಬರ ಜಪವನ್ನೇ ಮಾಡುತ್ತ ಹೋಗು. ಆದೇ ದತ್ತನಿಗೆ ಮುಟ್ಟುತ್ತದೆ ಕಾರಣ ಯಾವ ವಿಕಲ್ಪವನ್ನೂ ಮನಸ್ಸಿನಲ್ಲಿ ತಾರದೆ ಚಿದಂಬರೋಪಾಸನೆ ಮಾಡುತ್ತ ಹೋಗು'' ಎಂದು ಹೇಳಿದರು. ಅದರಿಂದ ಕೃಷ್ಣಾಜಿಪಂತರಿಗಾದ ಸಂಭ್ರಮವನ್ನು ಹೇಳಲಾಸಲ್ಲ. ಆ ಕಾಲದಲ್ಲಿ ಅವರ ಕಣ್ಣೊಳಗಿಂದ ಆನಂದಾಶ್ರುಗಳು ಉದುರಿದವೆಂದು ಬೇರೆ ಹೇಳಬೇಕಾಗಿಲ್ಲ.

ಮಹಾರಾಜರ ಕೈಕೆಳಗೆ ಕಲಿಯುವ ಸದ್ಭಾಗ್ಯವು ಅನೇಕ ಜನ ವಿದ್ಯಾರ್ಥಿಗಳಿಗೆ ಲಭಿಸಿತು. ಅವರಲ್ಲಿ ಮಹಾರಾಜರ ಕೃಪೆಗೆ ಪಾತ್ರರಾದವರನೇಕರು ಮುಂದೆ ತಮ್ಮ ತಮ್ಮ ಉದ್ಯೋಗ-ವ್ಯವಸಾಯಗಳಲ್ಲಿ ಪ್ರಸಿದ್ಧಿಗೆ ಬಂದರು. ಅವರೆಲ್ಲರ ಚರಿತ್ರಗಳನ್ನು ಇಲ್ಲಿ ಸಂಗ್ರಹಿಸುವದು ಶಕ್ಯವೂ ಇಲ್ಲ. ಇಷ್ಟವೂ ಇಲ್ಲ. ಯಾರು ಎಲ್ಲ ಭಾರವನ್ನು ಮಹಾರಾಜರ ಮೇಲೆಯೇ ಹಾಕಿ, ಅವರ ಉಪದೇಶ ಪಡೆದು ಧನ್ಯರಾದರೋ, ಮತ್ತು ಯಾರು ಚಿದಂಬರನ ಭಕ್ತಿಯನ್ನು ಮಹಾರಾಜರು ತೋರಿಸಿದ ದಾರಿಯಿಂದ ಮಾಡಿ



ಶ್ರೀ ಸ್ವಾಮಿ ಮಹಾರಾಜರ ಪಟ್ಟಶಿಷ್ಯರಾದ

ಶ್ರೀ ವಾಜೀಂದ್ರ ಶ್ರೀನಿವಾಸ ಕೆರವೀರ

ಕೃತಾರ್ಥರಾದರೋ, ಮತ್ತು ಯಾರು ಮಹಾರಾಜರ ಸೇವೆಯನ್ನು ಕೊನೆಯ ವರೆಗೆ ಅನನ್ಯಭಾವದಿಂದ ಮಾಡಿದರೋ, ಯಾರು ದೀರ್ಘ ಕಾಲದವರೆಗೆ ಮಹಾರಾಜರ ಸಂಗತಿಯಲ್ಲಿದ್ದು ಪರಮಾರ್ಥವನ್ನು ಗಳಿಸಿದರೋ ಅಂಥ ಮಹನೀಯರಲ್ಲಿ ಕೆಲವರ ವಿಷಯವಾಗಿ ಒಂದೆರಡು ಮಾತುಗಳನ್ನು ಮಾತ್ರ ಇಲ್ಲಿ ಉಲ್ಲೇಖ ಮಾಡುತ್ತೇವೆ.

ಇಂಥವರಲ್ಲಿ ವಾಜೀಂದ್ರ ಶ್ರೀನಿವಾಸ ಕರವೀರ ಎಂಬವರು ಮುಖ್ಯರು. ಇವರು ಬೆಳಗಾಂವ ಜಿಲ್ಲೆಯೊಳಗಿನ ಹುಕ್ಕೇರಿ ಗ್ರಾಮದಲ್ಲಿ ಹುಟ್ಟಿದರು. ಚಿಕ್ಕಂದಿನಲ್ಲಿಯೇ ಇವರ ತಂದೆಯು ತೀರಿಕೊಂಡದ್ದರಿಂದ ಇವರು ಬೆಳಗಾಂವಿಯಲ್ಲಿದ್ದುಕೊಂಡು ಅಭ್ಯಾಸವನ್ನು ಮಾಡಹತ್ತಿದರು. ಇವರು ಮಹಾರಾಜರ ಕೈಕೆಳಗೇ ಕಲಿತು ಮುಲ್ಕೀಪರೀಕ್ಷೆ ಪಾಸಾದರು. ಜನ್ಮತಃ ಇವರು ಮಾಧ್ವಸಾಂಪ್ರದಯದ ವೈಷ್ಣವರು. ಆದರೆ ಅವರು ಮಹಾರಾಜರ ದೊಡ್ಡಿಸ್ತಿಕೆಗೆ ಮುಗ್ಧರಾಗಿ, ಅವರ ಶಿಷ್ಯತ್ವವನ್ನು ವಹಿಸಿ, ಅನುಗ್ರಹ ಪಡೆದು, ಚಿದಂಬರನ ಶ್ರೇಷ್ಠಭಕ್ತರಾದರು ಇವರು ಮಹಾರಾಜರ ವಿಷಯದಲ್ಲಿ ಬಹಳ ಪ್ರೇಮಾದರವುಳ್ಳವರಾಗಿದ್ದರು. ಆದುದರಿಂದ ಪರೀಕ್ಷೆ ಪಾಸಾದ ಬಳಿಕಾದರೂ ಸೇವೆಗಾಗಿ ಅವರು ಮಹಾರಾಜರ ಬಳಿಯಲ್ಲಿಯೇ ನಿಂತರು. ಅವರು ಗುರುಸೇವೆಗಾಗಿ ತಮ್ಮ ಜೀವನವನ್ನೇ ಮೀಸಲಾಗಿಟ್ಟಿದ್ದರಿಂದ, ಕೊನೆಯ ವರೆಗೆ ಅವಿವಾಹಿತರಾಗಿ ಉಳಿದರು. ಗುರುಗಳನ್ನು ಬಿಟ್ಟಿರುವದೆಂದರೆ ಅವರಿಗೆ ಜೀವದ ಮೇಲೆ ಬರುತ್ತಿತ್ತು. ಆದರೆ ಮಹಾರಾಜರು ಮದಿಹಾಳವನ್ನು ಬಿಟ್ಟು ಬಂದಾಗಿನಿಂದ ಅಲ್ಲಿಯ ದತ್ತಮಂದಿರದ ವ್ಯವಸ್ಥೆಯು ಸರಿಯಾಗಿ ನಡೆಯುತ್ತಿರುವದಿಲ್ಲೆಂದು ನಾಗೂಬಾಯಿಯ ಮುಖದಿಂದ ಕೇಳಿ ಮಹಾರಾಜರು ವಾಜೀಂದ್ರರನ್ನು ಆ ಕೆಲಸಕ್ಕೆ ನಿಯಮಿಸಿದರು. ವಾಜೀಂದ್ರರು ಗುರ್ವಾಜ್ಞೆಯೇ ಪ್ರಮಾಣವೆಂದು ತಿಳಿದು ಆ ಕೆಲಸವನ್ನು ಆನಂದದಿಂದಲೇ ಸ್ವೀಕರಿಸಿ, ನಾಗೂಬಾಯಿಯ ಸೇವೆ ಮಾಡುತ್ತ ಆ ಗುಡಿಯನ್ನು ಎಲ್ಲ ರೀತಿಯಿಂದ ಮುಂದಕ್ಕೆ ತಂದರು. ಮಹಾರಾಜರು ದೇಹವಿಟ್ಟ ಮೇಲೆ ಇವರೇ ಮೊದಲಿಗೆ ಶ್ರೀ ಕೈವಲ್ಯಾಶ್ರಮಸ್ವಾಮೀ ಸಂಸ್ಥೆಯ ಬೀಜವನ್ನು ಬಿತ್ತಿದವರು. ಅವರು ನಟ್ಟ ಬೀಜವೇ ಇಂದು ಬಲಿತು ಬೆಳೆದು ಫಲಗಳನ್ನು ಕೊಡಹತ್ತಿದೆ.

ಮಹಾರಾಜರ ಎರಡನೇ ಶಿಷ್ಯರು ಲಕ್ಷ್ಮಣ ಗೋಪಾಳ ಕುಬೇರರೆಂಬವರು. ಇವರೂ ಮಹಾರಾಜರ ಬಳಿಯಲ್ಲಿಯೇ ಕಲಿತು ಮುಲ್ಕೀ ಪರೀಕ್ಷೆ ಪಾಸಾದರು. ಇವರು ಒಳ್ಳೇ ಆಜ್ಞಾಧಾರಕರೂ ಶಾಂತಸ್ವಭಾವದವರೂ ಆಗಿದ್ದರು. ಇವರಿಗೆ ಯಾವ ಆಧಾರವೂ ಇಲ್ಲದ್ದರಿಂದ ಮಹಾರಾಜರು ಇವರನ್ನು ಚಿಕ್ಕಂದಿನಿಂದಲೇ ಮನೆಯೊಳಗಿಟ್ಟುಕೊಂಡು ಕಲಿಸಿದರು. ಆಶ್ರಮವನ್ನು ಸ್ವೀಕರಿಸಿದ ಮೇಲಾದರೂ, ಕುಬೇರರು ಮಹಾರಾಜರ ಬಳಿಯಲ್ಲಿಯೇ ಉಳಿದರು ಆದರೆ ಇವರ ಮನೋವೃತ್ತಿಯು ವಾಜೀಂದ್ರರಂತೆ ಕೊನೆಯ ವರೆಗೆ ಅಚಲವಾಗಿ ಉಳಿಯಲಿಲ್ಲ. ಆದುದರಿಂದ ಅವರು ಲಗ್ನಮಾಡಿಕೊಂಡು ಸಂಸಾರ ಮಾಡಹತ್ತಿದರು. ಆದರೆ ಅವರಿಗೆ ಮುಪ್ಪಿನ ಕಾಲಕ್ಕೆ ಆ ಬಗ್ಗೆ ಬಹಳೇ ದುಃಖವಾಯಿತು.

ಮಹಾರಾಜರು ಬೆಳಗಾಂವಿ ಶಾಲೆಯೊಳಗಿದ್ದಾಗ ಅವರಿಗೆ ಇನ್ನೊಂದು ತರದ ಶಿಷ್ಯನೊಬ್ಬನು ಗಂಟುಬಿದ್ದನು. ನರಸೋ ಭಗವಂತ ಕುಲಕರ್ಣಿ ಎಂಬದು ಅವನ ಹೆಸರು. ಅವನು ಸವದತ್ತಿ ತಾಲೂಕಿನ ಬುದನೂರ ಎಂಬ ಗ್ರಾಮದವನು. ಅವನು ತೀರ ಮಂದಮತಿಯಾದುದರಿಂದ ಅವನು ಮುಲ್ಕೀ ಪರೀಕ್ಷೆ ಪಾಸಾಗುವದು ಶಕ್ಯವೇ ಇಲ್ಲೆಂದು ಅವನ ಆಪ್ತೇಷ್ಟರೆಲ್ಲ ನಿಶ್ಚಯಿಸಿದ್ದರು. ಆದಕ್ಕಾಗಿ ಅವನು ಬೆಳಗಾಂವ ಶಾಲೆಯ ಪ್ರಸಿದ್ಧಿಯನ್ನು ಕೇಳಿ, ಅಲ್ಲಿಗೆ ಬಂದು ಹೆಸರು ಹಚ್ಚಿದನು. ಹೀಗೆ ಅವನ ಸುದೈವದಿಂದ ಅವನಿಗೆ ಮಹಾರಾಜರ ಶಿಷ್ಯನಾಗುವ ಯೋಗಬಂತು. ಆದರೆ ಪರೀಕ್ಷೆಯ ದಿನಗಳು ಸಮೀಪವಾಗಿದ್ದುದರಿಂದ, ಮುಂದಿನ ವರುಷ ಪರೀಕ್ಷೆಗೆ ಕೂಡ ಬೇಕೆಂದು ಮಹಾರಾಜರು ಅವನಿಗೆ ಆಜ್ಞೆಮಾಡಿದರು. ಆದರೆ ಅವನಿಗೆ ಮಹಾರಾಜರ ಮೇಲೆ ಬಲು ಭಕ್ತಿ. ಅವನು ಕೂಡಲೇ ಮಹಾರಾಜರ ಚರಣಗಳನ್ನು ಗಟ್ಟಿಯಾಗಿ ಹಿಡಿದುಕೊಂಡು "ಗುರುಗಳೇ, ತಾವು ದೊಡ್ಡವರೆಂದು ಕೇಳಿ ತಮ್ಮ ಚರಣಗಳನ್ನು ಹುಡುಕುತ್ತ ಇಲ್ಲಿಗೆ ಬಂದಿರುವೆನು. ನಾನು ಮಂದಮತಿಯಾದರೂ ತಾವು ದೊಡ್ಡವರೆಂಬದು ಸುಳ್ಳಲ್ಲ. ದಿನಗಳು ಸ್ವಲ್ಪವಿದ್ದರೂ ತಾವು ಅಧ್ಯಾಪನಕುಶಲರು. ನಾನು ಈ ಪರೀಕ್ಷೆಗೆ ಕೂಡದಿರುವದೆಂದರೆ ತಮಗೇ ಕುಂದು. ಆದುದರಿಂದ ತಮ್ಮ ಉಳಿದ ಶಿಷ್ಯರಂತೆ ನಾನೂ ಈ ವರ್ಷ ಅಭ್ಯಾಸ ಮಾಡಿ ಪರೀಕ್ಷೆಗೆ ಕೂಡಬೇಕೆನ್ನುತ್ತೇನೆ.

ದಯವಿಟ್ಟು ಅನುಗ್ರಹಿಸಬೇಕು. ತಮ್ಮ ಕೃಪೆಯಾದರೆ ನಾನು ಪರೀಕ್ಷೆಯಲ್ಲಿ ಸಹಜವಾಗಿ ಪಾಸಾಗಬಲ್ಲೆನು'' ಎಂದು ಹೇಳಿ ಸಣ್ಣಮೋರೆ ಮಾಡಿ ಅಳಹತ್ತಿದನು. ಮಹಾರಾಜರು ಅವನ ಮುಗ್ಧಭಾವಕ್ಕೆ ಮೆಚ್ಚಿ ಅವನ ತಲೆಯ ಮೇಲೆ ಕೈಯಿಟ್ಟು— ''ಒಳ್ಳೆಯದು. ಭಾವದಂತೆ ಫಲಸಿಕ್ಕುವದು. ನಿನ್ನ ಮನಸ್ಸಿನಲ್ಲಿ ಪರೀಕ್ಷೆಗೆ ಕುಳಿತೇ ತೀರಬೇಕೆಂದಿದ್ದರೆ ನನ್ನದೇನೂ ಅಡ್ಡಿಯಿಲ್ಲ. ಚಿದಂಬರನ ಇಚ್ಛೆಯಿದ್ದಂತೆ ಆಗಲಿ. ಆದರೆ—

यत्र योगेश्वरः कृष्णो यत्र पार्थो धनुर्धरः ।
तत्र श्रीर्विजयो भूतिर्ध्रुवा नीतिर्मतिर्मम ॥

ಎಂಬ ಶ್ಲೋಕವನ್ನು ನೀನು ಮಂತ್ರದಂತೆ ಭಾವಿಸಿ ಜಪಿಸುತ್ತ ಹೋಗು. ಅದರಿಂದ ನಿನ್ನ ಮನೋರಥವು ಸಫಲವಾಗುವದು'' ಎಂದು ಆಶೀರ್ವದಿಸಿದರು. ಅವನು ಅದಕ್ಕನುಸಾರವಾಗಿ ಅದೇ ತನ್ನ ಅಭ್ಯಾಸವೆಂದು ದೃಢವಾಗಿ ನಂಬಿ ಅದರ ಜಪಮಾಡಹತ್ತಿದನು. ಪರೀಕ್ಷೆಯು ಸಮೀಪಿಸಿದಂತೆ ಅವನ ಜಪವೂ ಬೆಳೆಯುತ್ತ ಹೋಯಿತು ಮುಂದೆ ಮಹಾರಾಜರ ಅನುಗ್ರಹದಿಂದ, ಪರೀಕ್ಷೆಯ ಮೊದಲನೆಯ ದಿನ ಗುರುಗಳು ಹೇಳಿಕೊಟ್ಟ ಪ್ರಶ್ನೆಗಳೇ ಪರೀಕ್ಷೆಯ ಕಾಗದದಲ್ಲಿ ಕಂಡುಬಂದದರಿಂದ, ಅವನು ಪರೀಕ್ಷೆಯಲ್ಲಿ ಸಹಜವಾಗಿ ಪಾಸಾದನು ಹೀಗೆ ಪರೀಕ್ಷೆ ಪಾಸಾದುದು ಕೇವಲ ಮಹಾರಾಜರ ಅನುಗ್ರಹದ ಫಲವೇ ಎಂದು ಅವನು ನಂಬಿದ್ದರೆ ಆಶ್ಚರ್ಯವಿಲ್ಲ. ಮುಂದೆ ಅವನು ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕನಾದ ಮೇಲೆ ಅವನನ್ನು ಮಹಾರಾಜರು ವಿನೋದದಿಂದ 'ಯತ್ರ ಯೋಗೇಶ್ವರ ಮಾಸ್ತರ' ಎಂದು ಕರೆಯಹತ್ತಿದರು.

ಕೈಕೆಳಗಿನ ವಿದ್ಯಾರ್ಥಿಗಳು ಮಹಾರಾಜರ ಅನುಗ್ರಹ ಪಡೆದು ಶಿಷ್ಯರಾದಂತೆ, ಕೆಲವು ಜನ ಗೃಹಸ್ಥರೂ ಕೂಡ ಮಹಾರಾಜರ ಶಿಷ್ಯರಾದರು. ಅವರಲ್ಲಿ ಒಬ್ಬಿಬ್ಬರ ಹೆಸರನ್ನು ಉಲ್ಲೇಖ ಮಾಡುವಂತಿದೆ. ಮಹಾರಾಜರು ಬೆಳಗಾಂವಿಯಲ್ಲಿದ್ದಾಗ ಶ್ರೀ ಮಹಾದೇವರಾವ ಆತ್ಮಾರಾಮ ಪಾರಸೇಕರ ಎಂಬ ವೆಂಗುರ್ಲೆಯ ನಿವಾಸಿಗಳು ವ್ಯಾಪಾರಕ್ಕಾಗಿ ಬೆಳಗಾಂವಿಗೆ ಬಂದರು.

ಅವರು ಜನ್ಮತಃ ಸತ್ತ್ವಶೀಲರೂ ಭಾವಿಕರೂ ಆಗಿದ್ದುದರಿಂದ, ಸಹಜವಾಗಿಯೇ ಮಹಾರಾಜರ ಪರಿವಾರವನ್ನು ಸೇರಿದರು. ಅವರು ತಮ್ಮ ಉದ್ಯೋಗವನ್ನು ಪೂರೈಸಿಕೊಂಡು ಆದಷ್ಟು ಹೆಚ್ಚು ವೇಳೆ ಮಹಾರಾಜರ ಸಂಗತಿಯಲ್ಲಿ ಕಳೆಯುವರು. ಆದರೆ ಅವರು ಎಷ್ಟು ಯತ್ನಮಾಡಿದರೂ ಅವರ ವ್ಯವಸಾಯವು ಬೆಳಗಾಂವಿಯಲ್ಲಿ ಚನ್ನಾಗಿ ಸಾಗಲಿಲ್ಲ. ಆದರಿಂದ ಅವರು ಬಲು ಚಿಂತೆಗೊಳಗಾದರು. ಒಂದು ದಿನ ಅವರು ಮಹಾರಾಜರ ಬಳಿಯಲ್ಲಿದ್ದಾಗ ಈ ಮಾತು ಹೊರಟಿತು. ಅವರು ಭಕ್ತಿಭಾವದಿಂದ ಕೈ ಜೋಡಿಸಿಕೊಂಡು ವಿನಯದಿಂದ ''ಸ್ವಾಮೀ, ಈಗ ಮಾಡುತ್ತಿರುವ ಉದ್ಯೋಗವು ಚನ್ನಾಗಿ ಸಾಗದಂತಾಗಿದೆ. ಆದರಿಂದ ಕುಟುಂಬ ಪೋಷಣೆಯೂ ಕೂಡ ಸರಿಯಾಗಿ ಆಗಲೊಲ್ಲದು. ಏನು ಮಾಡಬೇಕೆಂದು ತಿಳಿಯದಂತಾಗಿದೆ. ದಯವಿಟ್ಟು ತಾವು ಆಜ್ಞೆಮಾಡಬೇಕು. ತಮ್ಮ ಆಪ್ಪಣೆಯಂತೆ ನಡೆಯಲು ಈ ದಾಸನು ಸಿದ್ಧನಿದ್ದಾನೆ'' ಎಂದು ಬೇಡಿಕೊಂಡರು. ಆಗ ಮಹಾರಾಜರು ವಾತ್ಸಲ್ಯದಿಂದ ''ಮಹಾದೇವರಾವ, ಚಿಂತೆ ಮಾಡಬೇಡಿರಿ. ನೀವು ಈ ಊರನ್ನು ಬಿಟ್ಟು ಮುಂಬಯಿಗೆ ಹೋಗಿ, ಅಲ್ಲಿ ಅಡತಿಯ ಅಂಗಡಿಯನ್ನು ತೆಗೆಯಿರಿ. ಆದರಿಂದ ನಿಮಗೆ ಕಲ್ಯಾಣವಾಗುವದು. ತಡಮಾಡದೆ ಆದಷ್ಟು ತೀವ್ರ ಹೊರಡುವದೊಳಿತು.'' ಎಂದು ಆಪ್ಪಣೆ ಕೊಡಿಸಿದರು. ಪಾರಸೇಕರರು ಅದರಂತೆ ಮರುದಿನವೇ ಸಿದ್ಧತೆ ಮಾಡಿಕೊಂಡು ಮಹಾರಾಜರ ಆಪ್ಪಣೆ ಪಡಕೊಳ್ಳಲಿಕ್ಕೆಂದು ಬಂದರು. ಆಗ ಮಹಾರಾಜರು ಅನ್ನಸಂತರ್ಪಣೆಯ ಕೆಲಸದಲ್ಲಿ ಬಡಿಸುತ್ತ ನಿಂತಿದ್ದರು. ಪಾರಸೇಕರರು ಬಂದು ಸಾಷ್ಟಾಂಗ ನಮಸ್ಕಾರ ಮಾಡಿ ಮುಂಬಯಿಗೆ ಹೊರಟ ಸಂಗತಿಯನ್ನು ಹೇಳಿಕೊಂಡರು. ಮಹಾರಾಜರು ನಗೆಮೋರೆಯಿಂದ ತಾವು ಬಡಿಸುತ್ತಿರುವ ಅನ್ನದೊಳಗಿಂದ ಒಂದು ಹಿಡಿ ಅನ್ನವನ್ನು ಅವರ ಉಡಿಯಲ್ಲಿ ಹಾಕಿ ಚಿದಂಬರನು ಕಲ್ಯಾಣ ಮಾಡುವನೆಂದು ಆಶೀರ್ವಾದ ಮಾಡಿದರು. ಪಾರಸೇಕರರು ಆ ಪ್ರಸಾದವನ್ನು ಸಂತೋಷದಿಂದಲೂ ಕೃತಜ್ಞತೆಯಿಂದಲೂ ಸ್ವೀಕರಿಸಿ, ಮುಂಬಯಿಗೆ ಹೋಗಿ ವ್ಯಾಪಾರ ಮಾಡಹತ್ತಿದರು. ಮಹಾರಾಜರ ಕೃಪೆಯಿಂದ ಅವರು ಮುಂದೆ ಒಂದೆರಡು ವರ್ಷಗಳಲ್ಲಿಯೇ ಲಕ್ಷಾಧೀಶರಾದರು. ತಮ್ಮ ಘನತೆಗೆಲ್ಲ ಮಹಾರಾಜರೇ ಕಾರಣರೆಂದು ಅವರು

ಕೊನೆಯ ವರೆಗೆ ಮಹಾರಾಜರ ಸೇವೆ ಮಾಡುತ್ತಿದ್ದರು. ಮಹಾರಾಜರು ದೇಹವಿಟ್ಟ ಮೇಲೆ ಅವರು ತಮ್ಮ ಆಸ್ತಿಯೆಲ್ಲ ಮಹಾರಾಜರ ಒಡೆತನದ್ದೇ, ಎಂಬ ಭಾವನೆಯಿಂದ ತಮ್ಮ ಸಂಪತ್ತನ್ನೆಲ್ಲ ಶ್ರೀಕೈವಲ್ಯಾಶ್ರಮ ಸ್ವಾಮೀ ಟ್ರಸ್ಟ ಎಂಬ ಹೆಸರಿನಿಂದ ನಡೆಸಿಕೊಂಡು ಹೋಗುತ್ತಿದ್ದರು. ತಮ್ಮ ಕುಟುಂಬದವರೂ ಕೂಡ ಆ ಆಸ್ತಿಯ ವ್ಯವಸ್ಥೆ ಮಾಡಿ, ಕೇವಲ ಪ್ರತಿಫಲ-ವೆಂದು ಉತ್ಪನ್ನದ ಕೆಲವು ಭಾಗವನ್ನು ತೆಗೆದುಕೊಳ್ಳಬಹುದೆಂದೂ, ಅವರ ಹೊರತಾಗಿ ಅವರಿಗೆ ಬೇರೆತರಹ ಅಧಿಕಾರವು ಇಲ್ಲವೆಂದೂ ಅವರು ನಿರ್ದಿಷ್ಟ-ಗೊಳಿಸಿದರು. ಆ ಟ್ರಸ್ಟು ಇಂದಿಗೂ ಅಸ್ತಿತ್ವದಲ್ಲಿದೆ. ಅದರಂತೆ ಅವರು ''ಶ್ರೀ ಕೈವಲ್ಯಾಶ್ರಮ''ವೆಂಬ ಹೆಸರಿನ ಗುಡಿಯನ್ನು ಕಟ್ಟಿಸಿ, ಅಲ್ಲಿ ಶ್ರೀ ಸದ್ಗುರು ದತ್ತಾತ್ರೇಯನ ಪಾದುಕೆಗಳನ್ನು ಸ್ಥಾಪಿಸಿ, ದಿನಾಲೂ ಅವುಗಳ ಪೂಜಾ ಅರ್ಚಾದಿಗಳ ಸರಿಯಾಗಿ ನಡೆಯುವಂತೆ ಏರ್ಪಾಡುಮಾಡಿರುತ್ತಾರೆ. ಅಲ್ಲಿ ನಿತ್ಯನೈಮಿತ್ತಿಕ ಪೂಜಾ-ಉತ್ಸವಾದಿಗಳು ಇಂದಿಗೂ ಯಥಾಸಾಂಗವಾಗಿ ನಡೆಯುತ್ತವೆ.

ಮಹಾರಾಜರು ಬೆಳಗಾಂವಿಗೆ ಬಂದ ಕೆಲ ದಿನಗಳಲ್ಲಿಯೇ ಇನ್ನೊಂದು ಚಮತ್ಕಾರ ನಡೆಯಿತು. ಖಾನಾಪುರದಲ್ಲಿ ಶ್ರೀ. ಯಶವಂತರಾವ ದೇಶಪಾಂಡೆ ಎಂಬ ಗೃಹಸ್ಥರಿದ್ದರು. ಕಾಶಿಯ ಕಡೆಯ ಸತ್ಪುರುಷನೊಬ್ಬನು ಒಮ್ಮೆ ಅವರ ಮನೆಗೆ ಬಂದನು. ಯಶವಂತರಾಯರು ಅವನ ಆದರಾತಿಥ್ಯವನ್ನು ಬಲು ಚೆನ್ನಾಗಿ ಮಾಡಿದ್ದರಿಂದ ಅವನು ಸಂತುಷ್ಟನಾಗಿ, ಊರಿಗೆ ಹೋಗು-ವಾಗ ಅವರಿಗೊಂದು ಪಾರಜದ ಈಶ್ವರಲಿಂಗವನ್ನು ಕೊಟ್ಟು ಹೋದನು. ಪಾರಜದ ಶಿವಲಿಂಗವೆಂದರೆ ಒಳ್ಳೇ ದುರ್ಲಭವಾದ ವಸ್ತುವು. ಪಾರಜವನ್ನು ಗಟ್ಟಿ ಮಾಡುವದು ಸುಲಭ ಕೆಲಸವಲ್ಲ. ಪಾರಜದ ಲಿಂಗಪೂಜೆಯಿಂದ ಅಪಾರವಾದ ಪುಣ್ಯಬರುವದೆಂದು ಶಾಸ್ತ್ರಗಳು ಹೇಳುತ್ತವೆ. ಆದುದರಿಂದ ಯಶವಂತರಾಯರಿಗೆ ಬಲು ಸಂತೋಷವಾಯಿತು. ಲಿಂಗವು ನೆಲ್ಲಿಯ ಕಾಯಿಯಷ್ಟು ದೊಡ್ಡದಿದ್ದು, ಒಳ್ಳೇ ಸುಂದರವೂ ಮೋಹಕವೂ ಆಗಿತ್ತು. ಒಂದು ಶುಭ ಮುಹೂರ್ತವನ್ನು ನೋಡಿ ಅದರ ಪೂಜೆಯನ್ನು ಪ್ರಾರಂಭಿಸ-ಬೇಕೆಂದು ಯಶವಂತರಾಯರು ಅದನ್ನು ಭದ್ರವಾದ ಪೆಟ್ಟಿಗೆಯಲ್ಲಿಟ್ಟರು.

ಮುಂದೆ ಕೆಲ ದಿನಗಳು ಹೋಗುವಷ್ಟರಲ್ಲಿ, ಒಂದು ದಿನ ಅವರಿಗೆ ಬೆಳಗು ಮುಂಜಾನೆ ಒಂದು ದೃಷ್ಟಾಂತವಾಯಿತು. ಅವರ ಕನಸಿನಲ್ಲಿ ಒಬ್ಬ ಸತ್ಪುರುಷನು ಬಂದು ''ನಿಮಗೆ ಕಾಶಿಯ ಸಾಧುವು ಕೊಟ್ಟ ಪಾರಜದ ಲಿಂಗವನ್ನು ಬೆಳಗಾಂವಿಯ ಕನ್ನಡ ಶಾಲೆಯ ಹೆಡ್ ಮಾಸ್ತರರಾದ ರಾಮ ಭಟ್ಟ ಜೋಶಿಯವರಿಗೆ ಕೊಟ್ಟುಬಿಡಿರಿ'' ಎಂದು ಆಜ್ಞೆಮಾಡಿದನು. ದೇಶಪಾಂಡೆ ಯಶವಂತರಾಯರು ಸೋಜಿಗಗೊಂಡು ಮಹಾರಾಜರನ್ನು ಹುಡುಕಿಕೊಂಡು ಬಂದು, ಅವರ ಮುಂದೆ ಆ ಲಿಂಗವನ್ನಿಟ್ಟು ನಮಸ್ಕರಿಸಿ ಎಲ್ಲ ಸಂಗತಿಯನ್ನೂ ಅರಿಕೆ ಮಾಡಿಕೊಂಡರು. ಚಿದಂಬರನೇ ಕೃಪೆಮಾಡಿ ತಮ್ಮ ಕಡೆಗೆ ಸಾಗಿಬಂದನೆಂದು ತಿಳಿದು ಮಹಾರಾಜರು ಆನಂದಪಟ್ಟರು. ಅಂದಿನಿಂದ ಅವರು ಅದಕ್ಕೆ ''ಚಿದಂಬರ''ನೆಂದು ಹೆಸರಿಟ್ಟು ಪೂಜೆ ಮಾಡ-ಹತ್ತಿದರು. ಚಿದಂಬರನ ಪೂಜೆ ನೈವೇದ್ಯಗಳಾಗದ ಹೊರತು ಅವರು ಎಂದೂ ಅನ್ನಗ್ರಹಣ ಮಾಡುತ್ತಿರಲಿಲ್ಲ. ಅವರ ಈ ಕ್ರಮವು ದೇಹಾವಸಾನ ವಾಗುವ ವರೆಗೂ ಅವ್ಯಾಹತವಾಗಿ ನಡೆಯಿತು.

ಮಹಾರಾಜರು ವ್ಯಕ್ತಿಶಃ ಉಪದೇಶಮಾಡಿ ಅನೇಕ ಜನರನ್ನು ಉದ್ಧಾರ ಮಾಡಿದರಲ್ಲದೆ, ಎಲ್ಲರಿಗೂ ಉಪಯೋಗವಾಗಬೇಕೆಂದು ಒಂದು ಆಶ್ರಮವನ್ನೂ ಸ್ಥಾಪಿಸಿದರು. ವರ್ಣಾಶ್ರಮೋಚಿತವಾದ ಧರ್ಮಗಳನ್ನು ಎಲ್ಲರೂ ತಪ್ಪದೆ ಮಾಡುತ್ತಿರಬೇಕೆಂದು ಮಹಾರಾಜರ ಉತ್ಕಟೇಚ್ಛೆ. ಆದರೆ ಉಚ್ಚವರ್ಣದವರಾದ ಬ್ರಾಹ್ಮಣರಲ್ಲಿ ಕೂಡ ನಿತ್ಯಕರ್ಮಗಳ ಬಗ್ಗೆ ಆಸ್ಥೆಯಿಲ್ಲದಂತಾಗಿ ಕರ್ಮಲೋಪವಾಗುತ್ತಿರುವದನ್ನು ಕಂಡು ಅವರ ಮನಸ್ಸು ತಳಮಳಗೊಳ್ಳುವದು. ಬ್ರಾಹ್ಮಣ್ಯಕ್ಕೆ ಅತ್ಯಾವಶ್ಯವೂ ಆಧಾರ-ಭೂತವೂ ಆದ ಸಂಧ್ಯಾವಂದನೆಯನ್ನಾದರೂ ಎಲ್ಲರೂ ತಪ್ಪದೇ ಮಾಡುತ್ತಿರ-ಬೇಕೆಂತಲೂ, ಬರೇ ಉಪದೇಶದಿಂದ ತಕ್ಕಫಲವು ಸಿಕ್ಕುವದಿಲ್ಲೆಂತಲೂ ತಿಳಿದು, ಮಹಾರಾಜರು ಒಂದು ಸ್ಥಳವನ್ನು ಗೊತ್ತುಮಾಡಿ ಅದಕ್ಕೆ ''ಸಂಧ್ಯಾಶ್ರಮ''ವೆಂದು ಹೆಸರು ಕೊಟ್ಟರು. ಆ ಸ್ಥಳದಲ್ಲಿ ನೀರು, ಭಸ್ಮ, ಆಸನಗಳು, ಮತ್ತು ಪಾತ್ರೆಗಳು ಇಡಲ್ಪಟ್ಟಿದ್ದವು. ಅಲ್ಲಿ ಎಲ್ಲ ತರಗತಿಯ ನೌಕರರೂ, ವಿದ್ಯಾರ್ಥಿಗಳೂ ವ್ಯಾಪಾರಿಗಳೂ ಬಂದು ಸಂಧ್ಯಾವಂದನೆಯನ್ನು ಮಾಡಬಹುದಾಗಿತ್ತು. ಸುಲಭ ಸಂಧ್ಯಾವಂದನೆಯನ್ನು ಕಲಿಸುವ

ನಿರ್ಮಾಡು ಆಲ್ಲಿತ್ತು. ಬೇಕಾದವರು ಅಲ್ಲಿ ಬೇಕಾದಷ್ಟು ಹೇಳಿ ಕುಳಿತು ನಾಮಸ್ಮರಣ, ಜಪ, ಪಾರಾಯಣ, ಪುರಶ್ಚರಣ, ಧ್ಯಾನ ಮೊದಲಾದವುಗಳನ್ನು ಮಾಡಬಹುದಾಗಿತ್ತು. ಸ್ವಲ್ಪದರಲ್ಲಿ ಹೇಳಬೇಕೆಂದರೆ ಪ್ರಾಮಾಣಿಕರಾದ ಸಾಧಕರಿಗೆ ಇಲ್ಲಿ ಎಲ್ಲ ತರದ ಸಹಾಯವೂ ಸಿಕ್ಕುತ್ತಿತ್ತು. ಮಹಾರಾಜರು ಸ್ವತಃ ಅಲ್ಲಿ ಕೆಲಕಾಲವಿರುತಿದ್ದು ಸಾಧಕರಿಗೆ ಅನೇಕ ಬಗೆಯಿಂದ ಸಹಾಯ ಮಾಡುತ್ತಿದ್ದರು. ಇದರಿಂದಾದ ಧರ್ಮಜಾಗೃತಿಯ ಕಾರ್ಯವು ಒಳ್ಳೇ ಪರಿಣಾಮಕಾರಿಯಾಯಿತೆಂಬದನ್ನು ಬೇರೆ ಹೇಳಬೇಕಾಗಿಲ್ಲ.

ಹೀಗೆ ಮಹಾರಾಜರು ಶಾಲೆಯ ಕೆಲಸವನ್ನು ನಿಯಮಿತತನದಿಂದ ಮಾಡಿ ಮನೆಗೆ ಬಂದ ಮೇಲೆ ಸ್ವಧರ್ಮಾಚರಣೆಯಲ್ಲಿ ತೊಡಗುತ್ತಿದ್ದರು. ಅವರು ಒಂದರೆಕ್ಷಣವನ್ನಾದರೂ ವ್ಯರ್ಥ ಕಳೆಯುತ್ತಿದ್ದಿಲ್ಲ. ಇಷ್ಟೇ ಅಲ್ಲದೆ ಮೈಮರೆತು ಮಲಗಿರುವ ತಮ್ಮ ಬಾಂಧವರನ್ನು ಎಚ್ಚರಗೊಳಿಸಿ ಅವರನ್ನು ಪರಮಾರ್ಥೋನ್ಮುಖರನ್ನಾಗಿ ಮಾಡುವ ಕೆಲಸದಲ್ಲಿ ಅವರು ಯಾವಾಗಲೂ ತತ್ಪರರಾಗಿದ್ದರು.

೨೦ ಮಹಾರಾಜರ ಗೃಹಸ್ಥಾಶ್ರಮ

ಗೃಹಸ್ಥಾಶ್ರಮವೆಂಬುದೊಂದು ಎಂದಿಗೂ ಒಡೆಯಲಾರದ ಒಗಟಾಗಿದೆ. ಗಾರ್ಹಸ್ಥ್ಯ ಜೀವನವು ಸುಖಮಯವೋ ದುಃಖಮಯವೋ ಎಂಬುದನ್ನು ಕೂಡ ಹೇಳುವದು ಕಠಿಣವೇ. ಅದು ದುಃಖರೂಪವಾದುದೆನ್ನಬೇಕೆ? ನಾವಿರಕ್ಕೆ ೯೯ ಜನರು ಗಾರ್ಹಸ್ಥ್ಯವನ್ನು ಆಪೇಕ್ಷಿಸುವರು. ಉಳಿದವರಲ್ಲಿ ಕೂಡ ತಾವಾಗಿಯೇ ಅವಿವಾಹಿತರಾಗಿ ಉಳಿಯುವವರು ಕಡಿಮೆಯೇ. ನಿರ್ವಾಹವಿಲ್ಲದೆ ''ತುರಗ ಬ್ರಹ್ಮಚಾರಿ''ಗಳಾಗಿರುವವರೇ ಹೆಚ್ಚು. ಎಲ್ಲ ಅನುಕೂಲತೆಗಳಿದ್ದೂ ಬೇಕೆಂತಲೇ ವೈರಾಗ್ಯದಿಂದ ಅವಿವಾಹಿತರಾಗಿ ಜೀವನವನ್ನು ಕಳೆಯುವವರು ಲಕ್ಷಕ್ಕೊಬ್ಬರಾದರೂ ಸಿಕ್ಕುವರೋ ಇಲ್ಲವೋ! ಅದು ಸುಖರೂಪವಾದುದೆನ್ನಬೇಕೇ? ಹೆಂಡಿರು ಮಕ್ಕಳ ಮೂಲಕವೇ ನಾವು ದುಃಖಿತರಾಗುತ್ತೇವೆಂದು ಕಂಡುಬರುತ್ತದೆ. ಕಿಂಬಹುನಾ, ಗೃಹಸ್ಥಾಶ್ರಮವೇ ಎಲ್ಲ ದುಃಖದ ಮೂಲವೆಂದು ಹೇಳಬಹುದು. ಹೀಗೆ ಗಾರ್ಹಸ್ಥ್ಯವು ಸುಖ-ದುಃಖಗಳ ಮಿಶ್ರಣವೇ ಆಗಿರುವಂತೆ ತೋರುತ್ತದೆ. ಎಂತೆಯೇ ಕವಿಯು ಸಂಸಾರವು ವಿಷಮಯವೋ ಅಮೃತಮಯವೋ ಹೇಳಲಾರೆನು'' ಎಂದು ಉಸಿರ್ಗರೆಯುತ್ತಾನೆ.

ಗೃಹಸ್ಥಾಶ್ರಮಿಗಳೇ ಹೆಚ್ಚಾಗಿರುವದರಿಂದ, ಲೋಕಶಿಕ್ಷಕರಾಗಬೇಕೆನ್ನುವವರಿಗೆ ಗಾರ್ಹಸ್ಥ್ಯ ಜೀವನದ ಅನುಭವವು ಅವಶ್ಯವಾಗಿ ಇರಬೇಕಾಗುತ್ತದೆ. ಗೃಹಸ್ಥರ ಸುಖ-ದುಃಖ, ಅನುಕೂಲತೆ ಆಡಚಣೆಗಳನ್ನು ಅರಿಯದಿದ್ದವನು ಗೃಹಸ್ಥರಿಗೆ ಬೋಧಿಸಲಿಕ್ಕೆ ಅಸಮರ್ಥನಾಗುವನು. ಎಂತೆಯೇ ಬಾಲ್ಯದಿಂದಲೇ ಸಂನ್ಯಾಸವನ್ನು ಸ್ವೀಕರಿಸಿದ ಶ್ರೀ ಮಚ್ಛಂಕರ ಭಗವತ್‌ಪಾದರೂ ಕೂಡ ಉಭಯ ಭಾರತೀ ದೇವಿಯು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುವ ಮೊದಲು, ಮೃತ ಅಮರುಕರಾಜನ ಶರೀರದೊಳಗೆ

ನೇರಿ ಗೃಹಸ್ಥಾಶ್ರಮದ ಅನುಭವವನ್ನು ತೆಗೆದುಕೊಂಡು ಬರಬೇಕಾಯಿತು. ಆದುದರಿಂದ ಶ್ರೀ ಚಿದಂಬರನು ನಮ್ಮ ಚರಿತ್ರನಾಯಕರಿಗೆ ಗೃಹಸ್ಥಾಶ್ರಮದ ಅನುಭವವನ್ನು ಕೊಡಬೇಕೆಂದು ಬಯಸಿದನು. ಯಾಕೆಂದರೆ ಚಿದಂಬರನ ಮನಸ್ಸಿನಲ್ಲಿ ನಮ್ಮ ಚರಿತ್ರನಾಯಕರು ಲೋಕಶಿಕ್ಷಕರಾಗಬೇಕೆಂದಿತ್ತೆಂಬುದನ್ನು ಈ ಮೊದಲೇ ಹೇಳಿದ್ದೇವೆ.

ನಿಜವಾಗಿ ನೋಡಿದರೆ ಸಾಧಕನು ಗೃಹಸ್ಥಾಶ್ರಮಿಯಾಗಿಯೂ ಪರಮಾರ್ಥವನ್ನು ಸಾಧಿಸುವದು ಶಕ್ಯವಿದೆ. ಸಾಮಾನ್ಯವಾಗಿ ಪರಮಾರ್ಥ ಸಾಧಕರು ಸಂನ್ಯಾಸವನ್ನು ತೆಗೆದುಕೊಳ್ಳಬೇಕೆಂದು ಶ್ರೀ ಶಂಕರಾಚಾರ್ಯರು ಹೇಳುತ್ತಾರೆ. ಆದರೆ ಗೃಹಸ್ಥಾಶ್ರಮಿಗೆ ಮೋಕ್ಷ ಅಥವಾ ಪರಮಾರ್ಥವು ಎಂದೆಂದಿಗೂ ಸಿಕ್ಕಲಾರದೆಂದು ಯಾರೂ ಹೇಳಲಾರರು. ಸಂನ್ಯಾಸದಿಂದ ಪರಮಾರ್ಥ ಸಾಧನೆಗೆ ಒಳ್ಳೇ ಅನುಕೂಲತೆಯುಂಟಾಗುವದರಿಂದ, ಸುನ್ಯಾಸವನ್ನು ತೆಗೆದುಕೊಳ್ಳಬೇಕೆಂದು ಸಾಮಾನ್ಯ ನಿಯಮವನ್ನು ಹಾಕಿದ್ದಾರೆ, ಇಷ್ಟೇ. ವಸ್ತುತಃ ಕುಟುಂಬಿಯಾಗಿರಲಿ, ಬ್ರಹ್ಮಚಾರಿಯಾಗಿರಲಿ, ಅಥವಾ ಸಂನ್ಯಾಸಿಯಾಗಿರಲಿ, ಪರಮಾರ್ಥವನ್ನು ಸಾಧಿಸುವದು ಸಾಧಕನ ಮೇಲೆಯೇ ಹೆಚ್ಚಾಗಿ ಅವಲಂಬಿಸಿರುತ್ತದೆ. ಯಾಜ್ಞವಲ್ಕ್ಯರು ತಮ್ಮ ಸ್ಮೃತಿಯಲ್ಲಿ (೩. ೪. ೩೩೫) ಹೇಳುವದೇನೆಂದರೆ:—

ನ್ಯಾಯಾಗತಧನಸ್ತತ್ತ್ವಜ್ಞಾನನಿಷ್ಠೋಽತಿಥಿ ಪ್ರಿಯಃ ।
ಶ್ರಾದ್ಧಕೃತ್ ಸತ್ಯವಾದೀ ಚ ಗೃಹಸ್ಥೋಽಪಿ ಹಿ ಮುಚ್ಯತೇ ॥

ಇದರ ಅರ್ಥವೇನೆಂದರೆ— "ನ್ಯಾಯವಾದ ಮಾರ್ಗದಿಂದ ಹಣಗಳಿಸಬೇಕು. ತತ್ತ್ವಜ್ಞಾನನಿಷ್ಠನಾಗಿರಬೇಕು. ಅತಿಥಿ ಅಭ್ಯಾಗತರನ್ನು ಆನಂದದಿಂದ ಸ್ವಾಗತಿಸಬೇಕು ಶ್ರಾದ್ಧಾದಿ ಕರ್ಮಗಳನ್ನು ಕಾಲಕಾಲಕ್ಕೆ ತಪ್ಪದೇ ಮಾಡುತ್ತಿರಬೇಕು ಮತ್ತು ಯಾವಾಗಲೂ ಸತ್ಯವನ್ನೇ ನುಡಿಯುತ್ತಿರಬೇಕು. ಹೀಗೆ ನಡೆಯುವ ಸಾಧಕನು ಗೃಹಸ್ಥಾಶ್ರಮಿಯಾಗಿದ್ದರೂ ಮುಕ್ತನಾಗುತ್ತಾನೆ." ಮಹಾರಾಷ್ಟ್ರದ ಸಾಧುಶಿರೋಮಣಿಗಳಾದ ಶ್ರೀ ಏಕನಾಥರೂ ಕೂಡ ಇದೇ ತೆರನಾಗಿ ಅಭಿಪ್ರಾಯ ಪಡುತ್ತಾರೆ:—

ಗೃಹಾಶ್ರಮೂನ ಸಾಂಡಿತಾ । ಕರ್ಮರೇಖಾ ನೋಲಾಂಡಿತಾ ।
ನಿಜನ್ಯಾಪಾರೀ ವರ್ತತಾ । ಬೋಧೂ ಸರ್ವಧಾ ನಮ್ಯೆಳೇ ॥

[ಏಕನಾಥೀ ಭಾಗವತ. ೯. ೧೦ ೪೬೫]

ಇದರ ಭಾವವೇನೆಂದರೆ - ಗೃಹಸ್ಥಾಶ್ರಮಿಯಾಗಿ ಹೆಂಡಿರು ಮಕ್ಕಳೊಡನೆ ಸಂಸಾರ ಮಾಡುತ್ತ, ಪ್ರಾರಬ್ಧಕ್ಕನುಸಾರವಾಗಿ ಜೀವಿಸಿ, ತನ್ನ ಪರಿಸ್ಥಿತಿಗನುಗುಣವಾದ ಕರ್ತವ್ಯ ಕರ್ಮಗಳನ್ನು ಮಾಡುತ್ತಿದ್ದರೂ ಜ್ಞಾನಕ್ಕೆ ಬಾಧೆ ಇಲ್ಲ. ತಾತ್ಪರ್ಯವೇನಂದರೆ:— ವೇದಾಂತ-ವ್ಯವಹಾರ, ಕರ್ಮ-ಜ್ಞಾನ, ಗಾರ್ಹಸ್ಥ್ಯ-ಪರಮಾರ್ಥಗಳು ವಿರುದ್ಧವಾಗಿಲ್ಲ. ಇಷ್ಟೇ ಅಲ್ಲ; ಅವುಗಳಿಗೆ ಸರಿಯಾಗಿ ಮೇಳಹಾಕಿ ನಡೆಯುವದೇ ಸರಿಯಾದ ಜೀವನವು. ಅದಕ್ಕೆ ಪೂರ್ಣ ಜೀವನವೆಂದೂ ದಿವ್ಯ ಜೀವನವೆಂದೂ ಹೆಸರುಗಳಿವೆ. ಆದರೆ ಹೀಗೆ ಮೇಳಹಾಕಿ ನಡೆಯುವದು ಮಾತ್ರ ತುಸು ಕಠಿಣವಿದೆ. ಆದುದರಿಂದ ಈ ತರದ ಪಾಠವನ್ನು ಹಾಕಿಕೊಡುವದಕ್ಕಾಗಿ ದೇವರು ಕಾಲಕಾಲಕ್ಕೆ ಆದರ್ಶ ಗೃಹಸ್ಥರನ್ನೂ ಹುಟ್ಟಿಸುತ್ತಾನೆ. ಶ್ರೀ ಏಕನಾಥರು ಕೊನೆಯವರೆಗೆ ಗೃಹಸ್ಥರಾಗಿಯೇ ಉಳಿದರು. ಸ್ವತಃ ಶ್ರೀ ಚಿದಂಬರ ಮಹಾರಾಜರು ಗೃಹಸ್ಥಾಶ್ರಮಿಗಳಾಗಿಯೇ ದೇಹವಿಟ್ಟರು. ಆದುದರಿಂದ ನಮ್ಮ ಚರಿತ್ರನಾಯಕರ ಮುಖಾಂತರ ಸಾಮಾನ್ಯ ಜನರಿಗೆ ಗಾರ್ಹಸ್ಥ್ಯದ ಆದರ್ಶವನ್ನು ತೋರಿಸಬೇಕೆಂದು ಚಿದಂಬರನು ಯೋಚಿಸಿದ್ದರೆ ಆಶ್ಚರ್ಯವಿಲ್ಲ-

ಚಿದಂಬರನ ಮನಸ್ಸಿಗೆ ಬಂದ ಮೇಲೆ ಕೇಳುವವೇನು ? ಅವನು ಸತ್ಯಕಾಮನಲ್ಲವೇ ? ಸತ್ಯಸಂಕಲ್ಪನಲ್ಲವೇ ? ಪರಮಾತ್ಮನ ಮನೋರಥಗಳು ಎಂದಾದರೂ ವಿಫಲವಾಗುವದುಂಟೇ ? ಅವನ ಇಚ್ಛೆಗಳಾದರೂ ಪ್ರಾಣಿಗಳ ಕರ್ಮಕ್ಕನುಸಾರವಾಗಿಯೂ, ಎಲ್ಲರಿಗೂ ಕಲ್ಯಾಣಕರವಾಗಿಯೂ ಇರುವವಲ್ಲವೇ ? ಆದುದರಿಂದ ನಮ್ಮ ಚರಿತ್ರನಾಯಕರ ಪ್ರಾರಬ್ಧ ಕರ್ಮಗಳನ್ನರಿತ ಪರಮಾತ್ಮನು ಅವಕ್ಕನುಗುಣವಾಗಿ ಅವರ ಲಗ್ನದ ಪ್ರಸಂಗವನ್ನು ಒದಗಿಸಿ ತಂದನು. ಪಾರಬ್ಧವು ದೇವರಿಗಿಂತ ಹೆಚ್ಚಿನದಾಗದಿದ್ದರೂ, ಪ್ರಾರಬ್ಧವನ್ನು ಮೀರುವದು ಮಾತ್ರ ತೀರ ಕಠಿಣವೆಂದೇ ಹೇಳಬಹುದು. ಎಂತೆಯೇ ಪರಮಾತ್ಮ ಸಾಕ್ಷಾತ್ಕಾರವನ್ನು ಪಡೆದ ಜ್ಞಾನಿಗಳಿಗೂ ಕೂಡ ಪ್ರಾರಬ್ಧವು

ಬೆನ್ನು ಬಿಡಲಾರದೆಂದು ವೇದಾಂತ ಶಾಸ್ತ್ರವು ಹೇಳುತ್ತದೆ. ವಿದ್ಯಾರಣ್ಯರು ತಮ್ಮ ಪಂಚದಶಿಯಲ್ಲಿ (೭. ೧೫೬) ಹೇಳುವದೇನಂದರೆ: "ಪ್ರಾರಬ್ಧ ಕರ್ಮಗಳಿಗನುಸಾರವಾಗಿ ಅವಶ್ಯವಾಗಿಯೇ ಉಂಡು ತೀರಿಸಬೇಕಾದ ಸಂಗತಿಗಳಿಗೆ ಪ್ರತೀಕಾರವಿಲ್ಲ. ಅವುಗಳಿಗೆ ಒಂದಿಲ್ಲೊಂದು ತರದ ಪ್ರತೀಕಾರ ವಿದ್ದಿದ್ದರೆ, ನಲ, ರಾಮ, ಯುಧಿಷ್ಠಿರರಂಥವರು ದುಃಖಕ್ಕೊಳಗಾಗುವ ಕಾರಣವಿದ್ದಿಲ್ಲ."

ಲಗ್ನದ ವಿಷಯಕ್ಕೆ ನಮ್ಮ ಚರಿತ್ರನಾಯಕರ ವಿಚಾರಗಳು ಯಾವ ತರದ್ದವಿದ್ದವೆಂಬದು ವಾಚಕರಿಗೆ ಗೊತ್ತಿದೆ. ಅವರು ಲೋಕಕಲ್ಯಾಣದ ಕೆಲಸಕ್ಕೆ ಟೊಂಕಕಟ್ಟಿ ನಿಂತವರಾದುದರಿಂದ, ಕೊನೆಯ ವರೆಗೆ ಅವಿವಾಹಿತ-ರಾಗಿಯೇ ಉಳಿಯಬೇಕೆಂದು ನಿರ್ಧಾರ ಮಾಡಿದ್ದರು. ಧಾರವಾಡದಲ್ಲಿ ಅವರ ಲಗ್ನಮಾಡಬೇಕೆಂದು ಗೆಳೆಯರು ಯತ್ನಮಾಡಿದಾಗ, ಎಂತಹ ರಣಕತ್ತರವಾಯಿತೆಂಬದನ್ನು ಯಾರೂ ಮರೆಯುವಂತಿರಲಿಲ್ಲ. ಅಂದಿನಿಂದ ಮಹಾರಾಜರ ಎದುರಿಗೆ ಲಗ್ನದ ಪ್ರಸ್ತಾಪವನ್ನು ತೆಗೆಯುವ ಧೈರ್ಯವೇ ಯಾರಿಗೂ ಆಗಲಿಲ್ಲ. ತಂದೆಯವರಾದ ಬಾಳಕೃಷ್ಣ ಭಟ್ಟರೂ, ಅಣ್ಣಂದಿರಾದ ನಾರಾಯಣಭಟ್ಟರೂ ಕೂಡ ಈ ಮಾತಿಗೆ ಹೆದರುತ್ತಿದ್ದರೆಂದ ಮೇಲೆ ಉಳಿದವರ ಮಾಡೇನು? ಈ ರೀತಿಯಾಗಿ ಮಹಾರಾಜರ ವಿವಾಹದ ವಿಚಾರವು ಇಲ್ಲಿಯ ವರೆಗೆ ನೆನೆಗುದಿಗೆ ಬಿದ್ದಿತ್ತು. ಆದರೆ ಚಿದಂಬರನೇ ಆದನ್ನೀಗ ಮನಸ್ಸಿನ ಮೇಲೆ ತಕ್ಕೊಂಡದ್ದರಿಂದ ಅದು ಇನ್ನು ಹಿಂದುಳಿ-ಯುವದು ಶಕ್ಯವೇ ಇರಲಿಲ್ಲ.

ಮಹಾರಾಜರು ಗೋಕಾಕ ಶಾಲೆಗೆ ವರ್ಗವಾಗಿ ಬಂದಿದ್ದರು. ಗೋಕಾಕಕ್ಕೆ ಹೋದರೆ ವೃದ್ಧರಾದ ತಾಯಿ-ತಂದೆಗಳ ಸೇವೆಮಾಡಲಿಕ್ಕೆ ಅನುಕೂಲವಾಗುವದೆಂಬ ಕಾರಣದಿಂದ ಮಹಾರಾಜರು ಬೇಕೆಂತಲೇ ಅಲ್ಲಿಗೆ ವರ್ಗಮಾಡಿಸಿಕೊಂಡಿದ್ದರು. ತಾಯಿ-ತಂದೆಗಳ ಋಣವು ಸಾಮಾನ್ಯ-ವಾದುದಲ್ಲ. ಅದರಲ್ಲಿಯೂ ತಾಯಿಯ ಉಪಕಾರವನ್ನು ತೀರಿಸುವದು ಶಕ್ಯವಿಲ್ಲೆಂದು ಶಾಸ್ತ್ರಗಳು ಹೇಳುತ್ತಿವೆ. "ಮಾತೃದೇವೋ ಭವ, ಪಿತೃ ದೇವೋ ಭವ" ಎಂದು ಉಪನಿಷತ್ತು ಹೇಳುತ್ತದೆ. ಅದಕ್ಕನುಸಾರವಾಗಿ

ಮಹಾರಾಜರು ತಮ್ಮ ತಾಯಿ-ತಂದೆಗಳ ಸೇವೆಯನ್ನು ಬಲು ಚೆನ್ನಾಗಿ ಮಾಡಹತ್ತಿದರು. ಅವರ ಸೇವೆಯೊಳಗಿನ ಚಿಕ್ಕಪುಟ್ಟ ಮಾತುಗಳಿಗೆ ಸಹ ಮಹಾರಾಜರು ಸ್ವತಃ ಗಮನ ಕೊಡುತ್ತಿದ್ದರು. ತಾಯಿ-ತಂದೆಗಳ ಬಾಯಿಂದ ಅವರು ಎಂದೂ ಯಾವ ಕೆಲಸವನ್ನು ಹೇಳಿಸಿಕೊಳ್ಳಲಿಲ್ಲ. ಕಾಲಕಾಲಕ್ಕೆ ಅವರ ಮನಸ್ಸಿನ ಒಲವನ್ನರಿತು ಎಲ್ಲ ಸಿದ್ಧತೆಯನ್ನೂ ಮಾಡಿಟ್ಟಿರುವರು. ಅವರಿಗೆ ಯಾವ ಕಾಲಕ್ಕೆ ಏನು ಬೇಕಾಗುವದೆಂಬದನ್ನು ತಮ್ಮ ಕುಶಾಗ್ರಬುದ್ಧಿಯಿಂದ ಮೊದಲೇ ಊಹಿಸಿ ಆದಕ್ಕಾಗಿ ಅಣಿಮಾಡುತ್ತಿದ್ದರು. ಹೀಗೆ ಎಲ್ಲ ಬಗೆಯಿಂದ ಅನುಕೂಲಾಚರಣೆ ಮಾಡುವದೇ ನಿಜವಾದ ಸೇವೆಯಲ್ಲವೇ? ಮಹಾರಾಜರ ಈ ಬಗೆಯ ಸೇವೆಯಿಂದ ತಂದೆ-ತಾಯಿಗಳಿಗೆ ಅಪಾರವಾದ ಸಂತೋಷವಾಗಹತ್ತಿತು. ಇಂಥ ಮಗನ ಸಹವಾಸದಲ್ಲಿ ಅವರಿಗೆ ಯಾವುದರ ಚಿಂತೆಯೂ ಎನಿಸುತ್ತಿರಲಿಲ್ಲ.

ಆದರೆ ಆ ವೃದ್ಧ ದಂಪತಿಗಳಿಗೆ ಮಹಾರಾಜರ ಲಗ್ನದ ಯೋಚನೆಯು ಮಾತ್ರ ಒಂದೇ ಸವನೆ ಬಾಧೆಕೊಡಲಾರಂಭಿಸಿತು. ಇಷ್ಟೊತ್ತಿಗೆ ಮಹಾರಾಜರ ವಯಸ್ಸು ೨೧—೨೨ ವರ್ಷದ್ದಾಗಿತ್ತು. ಅವರ ಮೋರೆಯ ಮೇಲೆ ತಾರುಣ್ಯದ ಸಾತ್ವಿಕ ಕಳೆಯು ಉಕ್ಕುತ್ತಿತ್ತು. ಸದ್ಗುಣಗಳ ಮೂರುತಿಯಾದ ಮಹಾರಾಜರ ಮುಖಮಂಡಲವು ನೋಡುವವರನ್ನು ಸಹಜವಾಗಿ ಮುಗ್ಧರನ್ನಾಗಿ ಮಾಡುತ್ತಿತ್ತು. ದುಶ್ಚಟಗಳ ಗಂಧವೂ ಇಲ್ಲದ ಬಿಸಿಬಿಸಿಯ ತಾರುಣ್ಯಕ್ಕೆ ಪರಮಾರ್ಥದ ಜೋಡು ಸಿಕ್ಕದ್ದರಿಂದ ಅವರ ಮುಖವು ಅಪೂರ್ವವಾದ ಕಾಂತಿಯಿಂದ ಹೊಳೆಯುತ್ತಿತ್ತು; ವೃಷಭವಾಗಿ, ಅಳತೆಗೆ ಸರಿಯಾಗಿ ಬೆಳೆದ ಅಂಗಾಂಗಳಿಂದ ಅವರ ದೇಹಯಷ್ಟಿಯು ಬಲು ಸುಂದರವಾಗಿಯೂ ಮನೋಹರವಾಗಿಯೂ ತೋರುತ್ತಿತ್ತು ಅವರ ಬಣ್ಣವು ಸಾದಗಪ್ಪು. ಹರವಾದ ಹಣೆಯು ಅವರ ದಿವ್ಯವಾದ ಜೀವನಕ್ಕೆ ಸಾಕ್ಷಿಯಾಗಿ ನಿಂತಿತ್ತು. ಅಕರ್ಣ ನಯನಗಳು ಒಳಗಿನ ಆಧ್ಯಾತ್ಮಿಕ ತೇಜಸ್ಸಿಗೆ ಗುರುತಾಗಿದ್ದವು. ಎದ್ದು ಕಾಣುತ್ತಿರುವ ಮೂಗು ಅವರ ಪಾವಿತ್ರ್ಯದ ಡಂಗುರವನ್ನು ಹೊಡೆಯುವಂತಿತ್ತು. ಚನ್ನಾಗಿ ತುಂಬಿಕೊಂಡು ಜೆಳೆದ ಗಲ್ಲಗಳು, ಅವರ ಜೀವನವಾದರೂ ಅದೇ ರೀತಿಯಾಗಿ ಸರ್ವಾಂಗೀಣವಾಗಿ ಬೆಳೆದು ನಿಲ್ಲುವದೆಂಬದನ್ನು ಸೂಚಿಸುವಂತಿದ್ದವು. ಅವರ ಸುಂದರವಾದ

ತುಟಿಗಳು ಪರಮಾರ್ಥದ ಉಪದೇಶವನ್ನು ಸೂರೆಗೊಳ್ಳುವದಕ್ಕಾಗಿ ಹಾತು-ರೆಯುತ್ತಿದ್ದವು. ವಿಶೇಷ ಚೂವಾಗಿರದಿದ್ದ ಅವರ ಗದ್ದವು ಎಲ್ಲರನ್ನೂ ಮರುಳುಗೊಳಿಸುವಂತಿತ್ತು.

ಮಹಾರಾಜರು ಸುಂದರವಾಗಿ ತೋರುತ್ತಿದ್ದರೂ, ಅವರನ್ನು ನೋಡು-ವವರಲ್ಲಿ ವೈಷಯಿಕ ವಿಚಾರಗಳು ಹುಟ್ಟುವಂತಿರಲಿಲ್ಲ. ಅವರನ್ನು ನೋಡಿ-ದವರು ಅವರ ಮೇಲೆ ಸಹಜವಾಗಿ, ಸುಲಭವಾಗಿ ಪ್ರೇಮವಾಡುವರು. ಆದರೆ ಆ ಪ್ರೇಮದಲ್ಲಿ ವಿಷಯದ ವಾಸನೆ ಇರುತ್ತಿರಲಿಲ್ಲ. ಅವರ ಸೌಂದರ್ಯವು ಸೌಮ್ಯವಾದರೂ, ಅವರ ವಿಷಯಕ್ಕೆ ಭಯ-ಭಕ್ತಿ-ಪ್ರೇಮಾದರಗಳನ್ನು ಹುಟ್ಟಿಸುವಂತಹದು ಆಗಿತ್ತು. ಅವರು ತಮ್ಮ ಲೌಕಿಕ ಶಿಕ್ಷಣವನ್ನು ಮುಗಿಸಿಕೊಂಡು ಧನಾರ್ಜನೆಯ ಕೆಲಸದಲ್ಲಿ ತೊಡಗಿದವ-ರಾಗಿದ್ದುದರಿಂದ ಆ ಬಗ್ಗೆಯೂ ಯಾರೂ ವಿಚಾರ ಮಾಡುವ ಕಾರಣ-ವಿರಲಿಲ್ಲ. ಆಗಿನ ಕಾಲಕ್ಕೆ ತಿಂಗಳಿಗೆ ೨೫ ರೂಪಾಯಿ ಸಂಬಳವೆಂದರೆ ಸೌಖ್ಯ ಜೀವನವೇ ಎಂದೆನಿಸಿಕೊಳ್ಳುವಷ್ಟು ಅಗ್ಗಳತೆಯಿತ್ತು. ಹೀಗೆ ರೂಪ, ಕುಲ, ಶೀಲ, ಆಚಾರ, ವಯಸ್ಸು, ಶಿಕ್ಷಣ, ಸಂಪತ್ತುಗಳಿಂದ ಕೂಡಿದ ದಿವ್ಯ ವರನನ್ನು ನೋಡಿ, ತಮ್ಮ ಕನ್ನೆಯರನ್ನು ಕೊಡಲಿಕ್ಕೆ ಮುಂದು ಬರದಿರುವ ತಾಯಿ-ತಂದೆಗಳಾರು? ಮಹಾರಾಜರು ತಮ್ಮ ಅಳಿಯಂದಿ-ರಾಗಬೇಕೆಂಬ ಬಗ್ಗೆ ಅನೇಕರು ದೇವರಿಗೆ ಮುಡುಪು-ಕಾಣಿಕೆಗಳನ್ನು ಕೂಡ ಸಮರ್ಪಿಸಬೇಕೆಂದು ಸಂಕಲ್ಪ ಮಾಡಿರಬಹುದು. ಆದರೆ ವಿವಾಹಕ್ಕೆ ಮಹಾರಾಜರ ಸಮ್ಮತಿಯನ್ನು ಹೇಗೆ ದೊರಕಿಸಬೇಕೆಂಬ ವಿಚಾರವು ಮಾತ್ರ ಯಾರಿಗೂ ಬಗೆ ಹರಿಯಲೊಲ್ಲದು.

ಸೌ. ಅನ್ನಪೂರ್ಣಾಬಾಯಿಯವರಿಗಂತೂ ತಮ್ಮ ಮಗನು ಚತುರ್ಭುಜ ನಾದುದನ್ನು ಎಂದು ನೋಡುವೆನೋ – ಎಂಬ ಚಡಪಡಿಕೆಯಾಗಿ ಬಿಟ್ಟಿತು. ತಂದೆಯಕಿಂತಲೂ ತಾಯಿಗೆ ಈ ಮಾತಿನ ಮಹತ್ವವು ಹೆಚ್ಚಾಗಿರುತ್ತದೆ. ಹೆಣ್ಣು ಮಕ್ಕಳಿಗೆ ಇಂಥ ಮಾತುಗಳ ಸಂಭ್ರಮ ಬಹಳ. ಅವರು ಸ್ವಭಾವತಃ ಉತ್ಸವ ಪ್ರಿಯರು. ಅದರಲ್ಲಿಯೂ ತಮ್ಮ ಗಂಡಸು ಮಕ್ಕಳ ವಿವಾಹಾದಿಗಳ ಬಗ್ಗೆಯಂತೂ ಅವರು ಒಳ್ಳೇ ಉತ್ಸಾಹಿಗಳಾಗುತ್ತಾರೆ.

ಅನ್ನಪೂರ್ಣಾಬಾಯಿಯವರು ಮೇಲಿಂದ ಮೇಲೆ ಬಾಳಕೃಷ್ಣಭಟ್ಟರ ಮುಂದೆ ಈ ಮಾತನ್ನೆತ್ತಹತ್ತಿದರು:— ''ರಾಮನು ದೊಡ್ಡವನಾದನು. ಇನ್ನೂ ವರೆಗೆ ಅವನ ಲಗ್ನವಾಗಲಿಲ್ಲ. ಹೇಗಾದರೂ ಮಾಡಿ ಅವನ ಲಗ್ನವನ್ನೊ ಮ್ಮೆ ಮಾಡಿಬಿಡಿರಿ. ನಾವಿಬ್ಬರೂ ಮುಪ್ಪಿನವರಾದೆವು. ಅವನ ಲಗ್ನವಾದುದನ್ನು ನೋಡಿದರೆ ನನ್ನ ಮನಸ್ಸಿಗೆ ಸಮಾಧಾನವಾಗುವದು. ಈ ಕಾರ್ಯವನ್ನು ಆದಷ್ಟು ತೀವ್ರ ಮುಗಿಸಿ ಬಿಡುವದು ನೆಟ್ಟಗೆ''

ಬಾಳಕೃಷ್ಣಭಟ್ಟರಿಗೂ ಈ ಮಾತು ಜೇಕೇ ಆಗಿತ್ತು. ಆದರೆ ಮಗನಿಗೆ ವಿವಾಹದ ವಿಚಾರವು ಸಮ್ಮತವಾಗದಿದ್ದರೆ ಏನು ಮಾಡಬೇಕೆಂದು ಅವರು ಸುಮ್ಮನಿರುತ್ತಿದ್ದರು. ಮಗನ ಮೊದಲಿನ ವರ್ತನವು ಅವರ ಕಣ್ಣು ಮುಂದೆ ಇದ್ದುದರಿಂದ, ಒಂದು ಹೋಗಿ ಒಂದಾಗಬಾರದೆಂದು ಅವರಿಗೆ ಆ ಮಾತನ್ನೆತ್ತುವ ಧೈರ್ಯವಾಗುತ್ತಿದ್ದಿಲ್ಲ. ಹೆಂಡತಿಯು ಮೇಲಿಂದ ಮೇಲೆ ಆಗ್ರಹ ಮಾಡಹತ್ತಿದ್ದರಿಂದ ಅವರೊಂದು ದಿನ ಅನ್ನಪೂರ್ಣಾಬಾಯಿಯವರಿಗೆ ಸ್ಪಷ್ಟವಾಗಿ ಹೇಳಿಬಿಟ್ಟರು:— ''ರಾಮನ ಲಗ್ನವನ್ನು ಆದಷ್ಟು ತೀವ್ರಮಾಡಬೇಕೆಂದು ನಾನೂ ತವಕ ಪಡುತ್ತಿದ್ದೇನೆ. ಅವನಿಗೆ ಹೆಣ್ಣುಗಳು ಬೇಕಾದಷ್ಟು ಬಂದಿವೆ. ಆದರೆ ವಿವಾಹಕ್ಕೆ ರಾಮನ ಸಮ್ಮತಿಯನ್ನು ಹೇಗೆ ದೊರಕಿಸಬೇಕೆಂಬದು ಮಾತ್ರ ನನಗೆ ತಿಳಿಯದಾಗಿದೆ. ಆ ಪ್ರಸ್ತಾಪವನ್ನೆತ್ತಿದರೆ ಅವನೆಲ್ಲಿ ನಮ್ಮ ಕೈಬಿಡುವನೋ— ಎಂಬ ಹೆದರಿಕೆ ನನಗೆ. ಆದುದರಿಂದ ನೀನು ಹೇಗಾದರೂ ಮಾಡಿ ಅವನ ಮನವೊಲಿಸು. ಆ ಮೇಲೆ ನೋಡು, ಅವನ ಲಗ್ನವನ್ನು ಹಾ ಹಾ ಎನ್ನುವದರೊಳಗೆ ಮಾಡಿ ಮುಗಿಸುವೆನು. ಹೇಗೂ ನಿನ್ನ ಮೇಲೆ ಅವನ ಪ್ರೀತಿಯೂ ಬಹಳಿದೆ. ನಿನ್ನ ಮಾತನ್ನು ಅವನು ಸಹಸಾ ಮೀರಲಿಕ್ಕಿಲ್ಲ. ಆದುದರಿಂದ ಏನಾದರೂ ಯುಕ್ತಿ ಮಾಡಿ ವಿವಾಹಕ್ಕೆ ಅವನ ಒಪ್ಪಿಗೆಯನ್ನು ಸಂಪಾದಿಸು.'' ಈ ಮಾತಿಗೆ ಅನ್ನಪೂರ್ಣಾಬಾಯಿಯವರು ಕೂಡಲೇ ಸಮ್ಮತಿಯನ್ನಿತ್ತರು. ಅವರು, ಅಜ್ಞಾಧಾರಕನಾದ ತಮ್ಮ ಮಗನ ಕಡೆಯಿಂದ ಸಹಜವಾಗಿ ಈ ಬಗ್ಗೆ ವಚನ ತೆಗೆದುಕೊಳ್ಳುವೆನೆಂದು ಪಣತೊಟ್ಟುಬಿಟ್ಟರು! ಅವರ ಪ್ರತಿಜ್ಞೆಗೆ ಚಿದಂಬರನ ಆಶೀರ್ವಾದ ಅಥವಾ ಪ್ರೇರಣೆಯಿದ್ದುದರಿಂದ ಅದು ಕೂಡಲೇ ಸಫಲವೂ ಆಯಿತು!

ಒಂದು ದಿನ ರಾತ್ರಿ, ಎಲ್ಲ ಕೆಲಸವಾದ ಮೇಲೆ ಅನ್ನಪೂರ್ಣಾಬಾಯಿಯವರು ಮಗನನ್ನು ಕರೆದು ಹತ್ತರ ಕುಳ್ಳಿರಿಸಿಕೊಂಡರು. ಮಹಾರಾಜರು ಪ್ರೇಮದಿಂದ ತಾಯಿಯ ಕಾಲು ಒತ್ತುತ್ತ ಕುಳಿತುಕೊಂಡು, ಅನೇಕ ಪುರಾಣ ಪುಣ್ಯ ಕಥೆಗಳನ್ನು ಹೇಳುತ್ತಿದ್ದರು. ತಾಯಿಗೆ ಮಗನ ಉಪದೇಶದಿಂದ ಆನಂದವಾಗಹತ್ತಿತು. ಬರಬರುತ್ತ ತಾಯಿ-ಮಕ್ಕಳ ಸಂಭಾಷಣವು ಒಳ್ಳೇ ರಹಸ್ಯಕ್ಕೆ ಬಂತು. ತಾಯಿಯು ಎಂದೂ ಇಲ್ಲದ ಆವೇಶದಿಂದ ಮಗನ ಬೆನ್ನ ಮೇಲೆ ಕೈಯಾಡಿಸುತ್ತ ಮಗನಿಗೆ ಒಂದು ಪ್ರಶ್ನೆ ಮಾಡಿದಳು:— ''ಅಪ್ಪಾ, ರಾಮೂ ! ನನ್ನ ಒಂದು ಮಾತನ್ನು ನಡೆಸುತ್ತೀಯಾ ? ನೋಡು. ನಿನ್ನ ಈ ಮುದುಕ ತಾಯಿಯು ಕೊನೆಯಾಸೆಯೊಂದುಂಟು. ಅವನ್ನು ಪೂರ್ಣ ಮಾಡಲಿಕ್ಕೆ ಹಿಂದೆ-ಮುಂದೆ ನೋಡುವಿಯಾ ? ಹೇಳು, ಏನೆನ್ನುವಿ ?''

ಮಹಾರಾಜರು ತಾಯಿಯ ಆ ಸ್ನೇಹಮಯವೂ, ಉತ್ಸಾಹ ಪೂರ್ಣವೂ ಆದ ಪ್ರಶ್ನೆಯಿಂದ ಸಿಕ್ಕಿಬಿದ್ದರು. ಅವರಿಗೆ ''ಹೂ, ಹೇಳು ಬೇಕಾದ್ದು ಹೇಳು. ನಿನ್ನ ಅಜ್ಞೆಯನ್ನು ನಾನೆಂದಾದರೂ ಮೀರಿ ನಡೆಯುವೆನೇ ?'' ಎಂದು ಹೇಳಿದ ಹೊರತು ಗತ್ಯಂತರವೇ ಇರಲಿಲ್ಲ. ಅವರ ಪ್ರಾರಬ್ಧವು ಅವರನ್ನು ಈ ಕೆಲಸಕ್ಕೆ ಜೋದನೆ ಮಾಡಿತು. ಚಿದಂಬರನ ಪ್ರೇರಣೆಯು ಅದಕ್ಕೆ ಪುಟಗೊಟ್ಟಿತು. ಮಹಾರಾಜರು ಅದೆಲ್ಲಕ್ಕೆ ಒಳಗಾಗಿ ಹೇಳಿಬಿಟ್ಟರು:— ''ಅಮ್ಮಾ, ಇದೇನು ಹೀಗೆ ಮಾತಾಡುವಿ ? ನಿನ್ನ ಆಪ್ಪಣೆಯನ್ನು ನಾನು ಪಾಲಿಸಲಿಕ್ಕಿಲ್ಲವೆಂಬ ಸಂಶಯವಾದರೂ ನಿನ್ನಲ್ಲೇಕೆ ಬಂತು ? ಹೇಳು ! ಏನು ಬೇಕಾದ್ದನ್ನು ಹೇಳು ! ನಿನ್ನ ಆಜ್ಞಾಧಾರಕನಾದ ಈ ರಾಮನು ನಿನ್ನ ಬೇಕಾದ ಆಪ್ಪಣೆಯನ್ನು ಪಾಲಿಸಲಿಕ್ಕೆ ಬದ್ಧಕಂಕಣನಾಗಿ ನಿಂತಿದ್ದಾನೆ. ಕಾಲತ್ರಯದಲ್ಲಿಯೂ ನಾನು ನನ್ನ ವಚನದಿಂದ ಹಿಂದಿರುಗುವವನಲ್ಲ !''

ಅನ್ನಪೂರ್ಣಾಬಾಯಿಯವರಿಗೆ ಹರ್ಷಾತಿರೇಕವಾಯಿತು. ಅವರು ಉತ್ಸಾಹದ ಭರದಲ್ಲಿ ಮಗನ ಬೆನ್ನು ಚಪ್ಪರಿಸಿ ''ವಾಹವ್ವಾ ! ರಾಮೂ ! ನಿನ್ನ ಬಗ್ಗೆ ನನಗೆ ಸಂದೇಹವೇ ಇರಲಿಲ್ಲ. ನಿನ್ನನ್ನು ಹಡೆದವರು ಮಾತ್ರ

ಸುಮ್ಮಸುಮ್ಮನೇ ಸಂಶಯಬಟ್ಟರು. ಇರಲಿ. ನೀನು ಇನ್ನು ನೀಲೆ ಲಗ್ನಕ್ಕೆ ಒಲ್ಲೆನೆನ್ನಬೇಡ! ನಿನ್ನ ಚಿಂತೆಯು ನನಗೆ ಬಹಳವಾಗಿದೆ. ಆದಕ್ಕಾಗಿ ನೀನಿನ್ನು ಲಗ್ನಮಾಡಿಕೊಳ್ಳುವೆನೆಂದು ನನ್ನ ಪಾದಗಳನ್ನು ಹಿಡಿದು ಆಣೆ ಮಾಡು.'' ಎಂದು ಹೇಳಿ ತಮ್ಮ ಚರಣಗಳನ್ನು ಮುಂದೆ ಮಾಡಿದರು.

ಮಹಾರಾಜರು ಅಕಸ್ಮಾತ್ತಾಗಿ ಬಲೆಯಲ್ಲಿ ಸಿಕ್ಕಿಬಿದ್ದರು. ಅವರ ಸ್ಥಳದಲ್ಲಿ ಮತ್ತೆ ಯಾರಾದರೂ ಇದ್ದಿದ್ದರೆ, ಈ ವಜ್ರಾಘಾತದಿಂದ ಕೈಕಾಲು ಕಳೆದುಕೊಳ್ಳಬಹುದಾಗಿತ್ತು. ತಾಯಿಯ ಸಂಗಡ ಬಡಿದಾಡಿ ಕೊಟ್ಟ ವಚನವನ್ನು ತಿರುಗಿಸಿಕೊಳ್ಳಬಹುದಾಗಿತ್ತು. ಆದರೆ ನಮ್ಮ ಚರಿತ್ರನಾಯಕರು ಅಸಾಮಾನ್ಯ ಪುರುಷರು. ಅವರು ಬಂದ ಪ್ರಸಂಗಕ್ಕೆ ಅಂಜಲಿಲ್ಲ, ಅಳುಕಲಿಲ್ಲ. ಅವರು ತಾಯಿಯ ಮಾತಿನಿಂದ ಎದೆಗುಂದಲಿಲ್ಲ. ಅಥವಾ ನಾನೇಕೆ ವಚನ ಕೊಟ್ಟೆನೆಂದು ಹಳಹಳಿಸಲೂ ಇಲ್ಲ. ತಮ್ಮ ತಾಯಿಯು ತನ್ನನ್ನು ಮೋಸಗೊಳಿಸಿದಳೆಂಬ ಕ್ಷುಲ್ಲಕ ಕಲ್ಪನೆಯೂ ಅವರಲ್ಲಿ ಒರಲಿಲ್ಲ. ಪ್ರಾರಬ್ಧದ ಪ್ರಾಬಲ್ಯವನ್ನು ಮಾತ್ರ ಕಂಡು ಅವರು ಗಹಗಹಿಸಿ ನಗಹತ್ತಿದರು. ''ಅಮ್ಮಾ! ದೈವದಲ್ಲಿದ್ದದ್ದು ಬ್ರಹ್ಮಾದಿಗಳಿಗೂ ತಪ್ಪುವದಿಲ್ಲ ನೋಡು. ನಾನು ಲಗ್ನವಾಗಬೇಕೆಂದೇ ಶ್ರೀ ಚಿದಂಬರನ ಇಚ್ಛೆಯಿದ್ದಂತೆ ಕಾಣುತ್ತದೆ. ಆಗಲಿ. ಅವನ ಇಚ್ಛೆಯ ಮುಂದೆ ಓಡುವರಾರು? ಅವನ ಇಚ್ಛೆಯೇ ಹಾಗಿದ್ದರೆ ನಾನೇಕೆ ಇದಕ್ಕೆ ಹೆದರಲಿ! ಇಕೋ ನೋಡು! ನಿನ್ನ ಪಾದಗಳ ಸಾಕ್ಷಿಯಾಗಿಯೂ ನಾನು ಲಗ್ನಮಾಡಿಕೊಳ್ಳುತ್ತೇನೆ. ಇನ್ನಾದರೂ ಆಯಿತೋ, ಇಲ್ಲವೋ?'' ಎಂದು ಮಹಾರಾಜರು ತಾಯಿಯ ಪಾದಗಳನ್ನು ಮುಟ್ಟಿ ವಂದನೆ ಮಾಡಿದರು. ಛಲೆ, ಛಲೆ, ಇದಕ್ಕೆನ್ನಬೇಕು ಮಾತೃಭಕ್ತಿಯೆಂದು! ಕೂಡಲೇ ತಾಯಿಯು ಮಗನನ್ನು ಗಟ್ಟಿಯಾಗಿ ಅಪ್ಪಿಕೊಂಡು, ನೆತ್ತಿಯನ್ನು ಮೂಸಿನೋಡಿ ಧನ್ಯತೆಯನ್ನು ಪಡೆದಳು.

ಮಹಾರಾಜರು ಲಗ್ನಕ್ಕೆ ಸಮ್ಮತಿಸಿದರೆಂಬ ಸಂಗತಿಯು ಮಿಂಚಿನಂತೆ ಎಲ್ಲ ಕಡೆಗೂ ಹಬ್ಬಿತು. ಅದರಿಂದ ಎಲ್ಲರೂ ಸಂತೋಷಬಟ್ಟರು. ಬಾಳಕೃಷ್ಣಭಟ್ಟರ ಮನೆಗೆ ಕನ್ನೆಯರ ತಾಯಿ-ತಂದೆಗಳು ಎಡತಾಕ ಹತ್ತಿದರು.

ಕನ್ನೆಯನ್ನು ಪರೀಕ್ಷೆ ಮಾಡಿ ನಿಶ್ಚಯಿಸುವ ಕೆಲಸವನ್ನೂ ಮಹಾರಾಜರು ತಮ್ಮ ತಾಯಿ-ತಂದೆಗಳಿಗೇ ಬಿಟ್ಟುಕೊಟ್ಟಿದ್ದರು. ತಾಯಿ-ತಂದೆಗಳೂ, ಅಣ್ಣಂದಿರೂ ಅನೇಕ ಕನ್ನೆಯರನ್ನು ನೋಡಿ ಪರೀಕ್ಷೆ ಮಾಡಿದರು. ಅವರಲ್ಲಿ ಒಬ್ಬ ಕನ್ಯಾಮಣಿಯ ಜಾತಕವು ಮಹಾರಾಜರ ಜಾತಕಕ್ಕೆ ಸರಿಹೋದದ್ದಲ್ಲದೆ ಅವಳು ಮಹಾರಾಜರಿಗೆ ಎಲ್ಲ ಬಗೆಯಿಂದಲೂ ಅನುರೂಪವಾದ ಪತ್ನಿಯಾಗುವಳೆಂದು ಕಂಡುಬಂತು. ಯಥಾಕಾಲದಲ್ಲಿ ಅವಳ ತಾಯಿ-ತಂದೆಗಳು ಮಹಾರಾಜರಿಗೆ ಅವಳನ್ನು ಕನ್ಯಾದಾನ ಮಾಡಿಕೊಟ್ಟರು. ಇಂಥ ವರನ ಅತ್ತೆ-ಮಾವಂದಿರಾದುದಕ್ಕೆ ಅವರೂ, ಹೆಂಡತಿಯಾದುದಕ್ಕೆ ಕನ್ನೆಯೂ ಆನಂದಭರಿತರಾಗಿದ್ದರೆ ಆಶ್ಚರ್ಯವಿಲ್ಲ. ಗೃಹಪ್ರವೇಶದ ಉತ್ಸವವೂ ಯಥಾಸಾಂಗವಾಗಿ ನಡೆದು, ನೂತನ ವಧುವಿಗೆ ''ಸೀತಾಬಾಯಿ''ಯೆಂಬ ಹೆಸರಿಟ್ಟುದಾಯಿತು.

ಹೀಗೆ ಮಹಾರಾಜರ ಇಚ್ಛೆ ಇಲ್ಲದಿದ್ದರೂ ಗಾರ್ಹಸ್ಥ್ಯವು ಅವರಿಗೆ ಗಂಟುಬಿತ್ತು. ಆದರೆ ತಮ್ಮ ತಾಯಿ-ತಂದೆಗಳು ತಮ್ಮ ಕೊರಳಲ್ಲಿ ನಿಷ್ಕಾರಣವಾಗಿ ಈ ಗುದ್ದಿಯನ್ನು ತೊಡಕಿಸಿದರೆಂದು ಅವರು ಎಂದೂ ಬಗೆಯಲಿಲ್ಲ. ಅಥವಾ ಇಲ್ಲದ ಪೀಡೆಯೊಂದು ತಮ್ಮ ಪಾಲಿಗೆ ಬಂತೆಂದು ಅವರು ತಮ್ಮ ಹೆಂಡತಿಯನ್ನೂ ಕಡೆಗಣಿಸಲಿಲ್ಲ. ನಮ್ಮ ನಮ್ಮ ಪಾಲಿಗೆ ಬರುವ ಭೋಗಗಳು ನಮ್ಮ ನಮ್ಮ ಕರ್ಮಗಳಿಗನುಸಾರವಾಗಿಯೇ ಇರುವದರಿಂದ ಅವಕ್ಕಾಗಿ ಎರಡನೆಯವರ ಮೇಲೆ ಹರಿಹಾಯುವದು, ಅಥವಾ ಸಿಟ್ಟಿಗೇಳುವದು ಹುಚ್ಚುತನವೇ ಎಂದು ಮಹಾರಾಜರ ತಿಳಿವಳಿಕೆಯಾಗಿತ್ತು. ಆದುದರಿಂದ ಅವರು ''ಆಲಿಯಾ ಭೋಗಾಸಿ ಅಸಾವೇ ಸಾದರ'' ಎಂಬ ಭಾವದಿಂದ, ಪಾಲಿಗೆ ಬಂದುದನ್ನೆಲ್ಲ ಪಂಚಾಮೃತವೆಂದು ತಿಳಿದು ಸ್ವಾಗತಿಸುತ್ತಿದ್ದರು.

ಕುಟುಂಬದ ಯಜಮಾನನ ಮೈಮೇಲಿನ ಭಾರವು ಬಲು ದೊಡ್ಡದಾಗಿರುತ್ತದೆ. ಕುಟುಂಬದ ಸತ್ಕೀರ್ತಿ-ದುಷ್ಕೀರ್ತಿಗಳು ಮುಖ್ಯವಾಗಿ ಅವನ ಮೇಲೆಯೇ ಅವಲಂಬಿಸಿರುತ್ತವೆ. ಕುಟುಂಬದ ಸ್ವಾಸ್ಥ್ಯ-ಸುಖಗಳಿಗೂ ಅವನೇ ಕಾರಣನಾಗಿರುವನು. ಅವನೇ ಕುಟುಂಬದ ಎಲ್ಲ ಜನರನ್ನೂ

ತನ್ನ ಹಿಡಿತದೊಳಗಿಟ್ಟುಕೊಳ್ಳಬೇಕಲ್ಲದೆ, ಎಲ್ಲರೂ ಸಂತುಷ್ಟರಾಗಿರುವಂತೆ ನೋಡಿಕೊಂಡು ಹೋಗಬೇಕಾಗುವದು. ಪರಂಪರೆಯಿಂದ ನಡೆದುಕೊಂಡು ಬಂದಿರುವ ಕುಲಧರ್ಮ-ಕುಲಾಚಾರಗಳನ್ನು ಸರಿಯಾಗಿ ನಡೆಸಬೇಕಲ್ಲದೆ, ಅವನೇ ಕುಟುಂಬದ ಆಯವ್ಯಯಗಳನ್ನೂ ಮೇಳುಗೂಡಿಸಬೇಕಾಗುವದು. ಮನೆಯೊಳಗಿನ ಹಿರಿಯರ ಸೇವೆಯನ್ನು ಸರಿಯಾಗಿ ಮಾಡಬೇಕಲ್ಲದೆ ಸಣ್ಣವರ ಪಾಲನೆ-ಪೋಷಣೆಗಳಿಗೂ ಅವನು ಗಮನ ಕೊಡಬೇಕಾಗುವದು ತನ್ನ ಸಾಮಾಜಿಕ ಮತ್ತು ಕೌಟುಂಬಿಕ ದರ್ಜೆಗನುಗುಣವಾಗಿ ಖರ್ಚು ಮಾಡಬೇಕಲ್ಲದೆ, ಆಪತ್ಕಾಲಕ್ಕಾಗಿ ಹಣವನ್ನೂ ಅವನು ಸಂಗ್ರಹಿಸಬೇಕಾಗುತ್ತದೆ.

ಮನೆಯ ಯಜಮಾನನು ಜಾಣನಾಗಿದ್ದರೆ ಪ್ರತಿಯೊಂದು ಕುಟುಂಬವೂ ನಂದನವನವಾಗಬಹುದು. ಅವನು ಸರಿಯಾದ ತಿಳಿವಳಿಕೆಯವನಾಗಿದ್ದರೆ, ಉಳಿದವರಿಗೂ ಸರಿಯಾದ ಮಾರ್ಗವನ್ನು ತೋರಿಸಬಲ್ಲನು. ಕುಟುಂಬದೊಳಗಿನ ಜನರು ಬೇರೆ ಬೇರೆ ಸ್ವಭಾವದವರಿರುವದು ಸಹಜವಾಗಿದೆ. ಅವರಲ್ಲಿ ಸರಿಯಾದ ತಿಳಿವಳಿಕೆಯನ್ನು ಹುಟ್ಟಿಸುವ ಜವಾಬದಾರಿಯು ಕುಟುಂಬದ ಮುಖ್ಯಸ್ಥನ ಮೇಲೆಯೇ ಇದೆ. ಕೆಲವೊಂದು ಕಾಲದ ವರೆಗೆ ಮಾತ್ರ ನಾವಿಲ್ಲಿ ಕೂಡಿ ಇರತಕ್ಕವರಿರುವೆವೆಂದೂ, ಒಂದಿಲ್ಲೊಂದು ದಿನ ಇಲ್ಲಿಂದ ನಾವೆಲ್ಲರೂ ಹೊರಡಬೇಕಾಗುವದೆಂದೂ, ನಾವು ಬೇರೆ ಬೇರೆಯಾಗಿಯೇ ಹೋಗಬೇಕಾಗಿರುವದರಿಂದ ನಮ್ಮ ನಮ್ಮ ಪಾರಲೌಕಿಕ ಸಿದ್ಧತೆಯನ್ನು ನಾವೇ ಮಾಡಿಕೊಳ್ಳಬೇಕೆಂದೂ ಎಲ್ಲ ಜನರಿಗೆ ಮನವರಿಕೆ ಮಾಡಿಕೊಟ್ಟರೆ, ಎಲ್ಲರೂ ಎಚ್ಚರದಿಂದ ನಡೆಯಹತ್ತುವರು. ಅವರಿಂದ ಎಲ್ಲರಿಗೂ ಸುಖವಾಗುವದು. ಇಲ್ಲವಾದರೆ ಕಿರುಕಳ ಮಾತುಗಳಿಗಾಗಿ ಒಬ್ಬರೊಡನೊಬ್ಬರು ಬಡೆದಾಡಹತ್ತಿದರೆ ಕುಟುಂಬದ ಐಕ್ಯವೇ ಕೆಟ್ಟು ಹೋಗುವದು. ದೇವರ ದಯೆಯಿಂದ ವ್ಯಾವಹಾರಿಕವಾದ ಎಲ್ಲ ಅನುಕೂಲತೆಗಳಿದ್ದರೂ, ಕೇವಲ ತಮ್ಮ ಅವಿಚಾರ ಅಥವಾ ಹಟದಿಂದಲೇ ಕುಟುಂಬದ ಸೌಖ್ಯವನ್ನು ಕೆಡಿಸಿಕೊಂಡವರನೇಕರ ಉದಾಹರಣೆಗಳನ್ನು ನಾವು ಪ್ರತ್ಯಕ್ಷ ನೋಡುತ್ತೇವೆ.

ಪ್ರತಿಯೊಂದು ಕುಟುಂಬವೆಂದರೆ ಪರಮಾರ್ಥಸಾಧಕರ ಸುವ್ಯವಸ್ಥಿತವಾದ ಕ್ಯಾಂಪಿನಂತಿರಬೇಕು. ಕೌಟುಂಬಿಕ ಜೀವನವೂ ಕೂಡ ವ್ಯಕ್ತಿಗಳ ಸಾಕ್ಷಾತ್ಕಾರಕ್ಕೆ ಸಾಧನವಾಗುವಂತಿರಬೇಕು. ಕುಟುಂಬದೊಳಗಿನ ಜನರಿಗೆಲ್ಲ ತಮ್ಮ ತಮ್ಮ ಶೀಲ-ಸ್ವಭಾವಗಳಿಗನುಸರಿಸಿ ಪರಮಾರ್ಥಸಾಧನೆ ಮಾಡಲಿಕ್ಕೆ ಅನುಕೂಲತೆಯಿರಬೇಕು. ಒಬ್ಬರಿಗೊಬ್ಬರು ಸಾಕ್ಷಾತ್ಕಾರಕ್ಕೆ ಅನುಕೂಲವಾಗುವಂತೆ ನಡೆಯುತ್ತಿರಬೇಕು. ಕುಟುಂಬದೊಳಗಿನ ಪ್ರತಿಯೊಂದು ವ್ಯಕ್ತಿಯು ಬೇರೆ ಬೇರೆ ಸಾಧನಗಳನ್ನು ಮಾಡುತ್ತಿದ್ದರೂ, ಎಲ್ಲರಿಗೂ ಸಾಮಾನ್ಯವಾದ ಕೆಲವು ಕಾರ್ಯಕ್ರಮಗಳನ್ನಿಟ್ಟುಕೊಂಡರೆ ವಿಹಿತವಾಗುವದು. ಕುಟುಂಬದಲ್ಲಿ ಪ್ರತಿದಿವಸ ನಿಯಮಿತ ವೇಳೆಗೆ ಸಾಮೂಹಿಕ ಪ್ರಾರ್ಥನೆ-ಭಜನೆ ಮೊದಲಾದವುಗಳು ನಡೆಯುತ್ತಿರಬೇಕು. ದೇಹಕ್ಕೆ ಅನ್ನವು ಬೇಕಾಗುವಂತೆ ಮನಸ್ಸಿಗೂ ಪ್ರತಿನಿತ್ಯ ಅನ್ನವು ಬೇಕು. ಅಧ್ಯಾತ್ಮ ನಿರೂಪಣದಿಂದ, ಮನಸ್ಸಿಗೆ ಬೇಕಾದ ವಿಚಾರ ರೂಪ ಅನ್ನವು ಸಹಜವಾಗಿ ಎಲ್ಲರಿಗೂ ಸಿಕ್ಕುವಂತಿದೆ. ಆದುದರಿಂದ ನಿತ್ಯವೂ ಮನೆಯಲ್ಲಿ ಆಧ್ಯಾತ್ಮ ವಿಚಾರವು ನಡೆಯುತ್ತಿರಬೇಕು. ಕಾಲಕಾಲಕ್ಕೆ ಎಲ್ಲರೂ ಕೂಡಿ ಜಪ, ವ್ರತ, ತಪ, ಉಪವಾಸಾದಿಗಳನ್ನು ನಾಡಬಹುದು. ತಾತ್ಪರ್ಯವೇನೆಂದರೆ– ಪ್ರತಿಯೊಂದು ಕುಟುಂಬವು, ಆ ಕುಟುಂಬದೊಳಗಿನ ಜನರಿಗೆ ಪರಮಾರ್ಥ ಸಾಧನೆಗಳನ್ನು ಕಲಿಸುತ್ತಿರುವ ಪಾಠಶಾಲೆಯಾಗಿ ಪರಿಣಮಿಸಬೇಕು. ಇದೇ ನಮ್ಮ ಹಿಂದೂ ಕುಟುಂಬದ ಆದರ್ಶವಾಗಿದೆ.

ನಮ್ಮ ಚರಿತ್ರನಾಯಕರು ಇದೆಲ್ಲ ವ್ಯವಸ್ಥೆಯನ್ನು ತಮ್ಮ ಕುಟುಂಬದೊಳಗೆ ಸಹಜವಾಗಿ ರೂಢಿಗಿಳಿಸಿದರು. ಅವರ ಕುಟುಂಬದೊಳಗೆ ಕಂಡು ಬರುತ್ತಿದ್ದ ದೈನಂದಿನ ಪದ್ಧತಿಯು ಅಪೂರ್ವವಾಗಿತ್ತು. ವೃದ್ಧರಾದ ತಮ್ಮ ತಾಯಿ-ತಂದೆಗಳ ಬಾಹ್ಯಸೇವೆಯನ್ನಂತೂ ಅವರು ಬಲು ಚೆನ್ನಾಗಿ ಮಾಡುತ್ತಿದ್ದರು. ತಾಯಿ-ತಂದೆಗಳ ಬಟ್ಟೆ ಬರೆಗಳನ್ನು ಒಗೆಯುವದು, ಮಲ-ಮೂತ್ರಗಳನ್ನು ತೆಗೆಯುವದು, ಅವರಿಗೆ ಸ್ನಾನಮಾಡಿಸಿ ಊಟಕ್ಕೆ ಹಾಕುವದು, ಹಾಸಿಗೆಗಳನ್ನು ಹಾಸಿಕೊಡುವದು, ವೇಳೆ ವೇಳೆಗೆ ಔಷಧವನ್ನು ಕೊಡುವದು ಮತ್ತು ಇನ್ನಿತರ ಸೇವೆ ಶುಶ್ರೂಷೆ ಮಾಡುವದು, ಅವರ

ನಿತ್ಯದ ಕೆಲಸವಾಗಿತ್ತು. ಈ ಕೆಲಸಗಳನ್ನು ಅವರು ತಾವೇ ಸ್ವತಃ ಮಾಡುತ್ತಿದ್ದರು. ಇಷ್ಟೇ ಅಲ್ಲ; ಪತಿವ್ರತೆಯಾದ ಸೀತಾಬಾಯಿಯವರು ಮುಂದಾಗಿ ಈ ಕೆಲಸವನ್ನು ಮಾಡುತ್ತೇವೆಂದರೂ ಮಹಾರಾಜರು ಮಾಡಗೊಡುತ್ತಿದ್ದಿಲ್ಲ. ''ಅದು ನನ್ನ ಕರ್ತವ್ಯವು. ಅದನ್ನು ನಾನೇ ಮಾಡುತ್ತೇನೆ. ನೀನು ಬೇರೆ ಕೆಲಸವನ್ನು ಮಾಡು'' ಎಂದು ಅವರು ಹೆಂಡತಿಗೆ ಹೇಳಿಬಿಡುತ್ತಿದ್ದರು.

ತಮ್ಮ ಹೆಂಡತಿಯನ್ನಾದರೂ ಮಹಾರಾಜರು ಬಹು ಪ್ರೇಮದಿಂದಲೂ ಆಕ್ಕರತೆಯಿಂದಲೂ ನಡಿಸಿಕೊಳ್ಳುತ್ತಿದ್ದರು. ಪಾಪ! ಎಲ್ಲವನ್ನೂ ಬಿಟ್ಟು ಗಂಡನ ಮನೆಗೆ ಬಂದಿರುವ ಹೆಣ್ಣು ಮಕ್ಕಳನ್ನು ಗಂಡನೂ, ಅತ್ತೆಯ ಮನೆಯವರೂ ಪ್ರೇಮ ಮತ್ತು ದಯೆಗಳಿಂದ ನಡಿಸಿಕೊಳ್ಳದಿದ್ದರೆ ಅವರಿಗೇನೆನಿಸೀತು? ವಿವಾಹ ಕಾಲದಲ್ಲಿ ಗಂಡನು ಹೆಂಡತಿಗೆ ''ಧರ್ಮೇ ಚಾರ್ಥೇ ಚ ಕಾಮೇಚ ನಾತಿಚರಾಮಿ'' ಎಂದು ವಚನ ಕೊಟ್ಟಗುತ್ತಾನೆಂದ ಮೇಲೆ, ಅದನ್ನು ಪೂರೈಸುವದು ಪ್ರತಿಯೊಬ್ಬ ಗಂಡಸಿನ ಕರ್ತವ್ಯವಲ್ಲವೇ? ಮನೆತನದ ಎಲ್ಲ ವ್ಯವಹಾರಗಳಲ್ಲಿ ಮಹಾರಾಜರು ಸೀತಾಬಾಯಿಯವರ ಅನುಮತಿಯನ್ನು ಪಡೆಯುತ್ತಿದ್ದರು. ಆದರೆ ಅದರಿಂದ ಮಹಾರಾಜರು ಸ್ತ್ರೈಣರಾಗಿದ್ದರೆಂದು ಯಾರಾದರೂ ತಿಳಿದರೆ ಅದು ತಪ್ಪು. ಮಹಾರಾಜರಲ್ಲಿ ವೈಷಯಿಕ ವಿಚಾರವೇ ಇರಲಿಲ್ಲ. ಕರ್ತವ್ಯಕರ್ಮವೆಂದು ಅವರು ಹೆಂಡತಿಯ ಕೂಡ ಗಂಡಂದಿರಾಗಿ ನಡೆದುಕೊಳ್ಳುತ್ತಿದ್ದರು, ಅಷ್ಟೇ. ಮಹಾರಾಜರಿಗೆ ಹೆಚ್ಚು ಸಂತಾನಗಳು ಆಗಲೇ ಇಲ್ಲ. ಒಂದೇ ಒಂದು ಕೂಸು ಹುಟ್ಟಿತ್ತು. ಆದರೆ ಅದು ಬಹಳ ದಿವಸ ಬಾಳಲಿಲ್ಲ.

ಮಹಾರಾಜರ ಅಣ್ಣ-ತಮ್ಮಂದಿರು ಸ್ವತಂತ್ರವಾಗಿ ತಮ್ಮ ತಮ್ಮ ಉದ್ಯೋಗಗಳಲ್ಲಿ ತೊಡಗಿ ಬೇರೆ ಕಡೆಗಿರುತ್ತಿದ್ದರು. ಆದರೆ ಮಹಾರಾಜರು ಅವರೊಡನೆಯೂ, ಉಳಿದ ಆಪ್ತೇಷ್ಟರೊಡನೆಯೂ ಬಲು ಪ್ರೇಮಾದರಗಳಿಂದ ನಡೆದುಕೊಳ್ಳುತ್ತಿದ್ದರೆಂದು ಬೇರೆ ಹೇಳಲಿಕ್ಕೆ ಬೇಡ. ನೆರೆ ಹೊರೆಯವರನ್ನು ಕೂಡ ಮಹಾರಾಜರು ಬಹಳ ಪ್ರೀತಿಯಿಂದ ಕಾಣುತ್ತಿದ್ದರು. ಆದಕ್ಕಾಗಿ ಮಹಾರಾಜರು ತಮ್ಮ ಸಮೀಪದಲ್ಲಿಯೇ ಇರಬೇಕೆಂದು ಎಲ್ಲರೂ ಬಯಸುತ್ತಿದ್ದರು.

ಮಹಾರಾಜರು ದಿನಾಲೂ ಬ್ರಾಹ್ಮ ಮುಹೂರ್ತದಲ್ಲೆದ್ದು ಹೊರಗೆ ಹೋಗಿ ಕೈಕಾಲು ಮೋರೆಗಳನ್ನು ತೊಳೆದುಕೊಳ್ಳುವರು. ಆ ಮೇಲೆ ಪ್ರಾತಃಸ್ಮರಣವಾಗಿ ಕಾಕಡಾರತಿಯಾಗುವದು. ಅನಂತರದಲ್ಲಿ ಪಂಚಪದೀ ಅಭಂಗಗಳ ಪಾಠವೂ, ಶ್ರೀ ಮಚ್ಛಂಕರ ಭಗವತ್‌ಪಾದರವರ ಆಧ್ಯಾತ್ಮಿಕ ಸ್ತೋತ್ರಗಳ ಪಠಣವೂ ನಡೆಯುವವು. ಆದಾದ ಮೇಲೆ ಕೆಲಹೊತ್ತು ಚಿದಂಬರನ ಜಪವಾಗುವದು. ಅಷ್ಟರಲ್ಲಿ ಸ್ನಾನದ ಸಿದ್ಧತೆಯಾಗುವದು. ಸ್ನಾನವಾದೊಡನೆ ಸಂಧ್ಯೋಪಾಸನೆ ನಡೆಯುವದು. ಆದರಲ್ಲಿ ಅರ್ಥ ಸಹಿತವಾಗಿ ಗಾಯತ್ರೀಮಂತ್ರದಿಂದ ಭಗವಂತನ ಧ್ಯಾನವಾದ ಮೇಲೆ ದೇವರ ಪೂಜೆಯೂ ವೇದ-ಮಂತ್ರಗಳ ಪಠಣವೂ ಸಾಗುವವು. ಹೀಗೆ ತಮ್ಮ ಪ್ರಾತಃಕರ್ಮಗಳನ್ನು ಮುಗಿಸಿ, ತಾಯಿ-ತಂದೆಗಳಿಗೆ ಪ್ರಾತರ್ವಿಧಿಯಲ್ಲಿ ನೆರವಾಗಿ, ಶಾಲೆಗೆ ಹೋಗುವರು. ಶಾಲೆಯಿಂದ ಬಂದ ಮೇಲೆ ಮತ್ತೆ ಚಿದಂಬರನ ಜಪವು ಸುರುವಾಗುವದು. ಅಡಿಗೆಯಾಗುವ ಹೊತ್ತಿಗೆ ತಾಯಿ-ತಂದೆಗಳ ಸ್ನಾನ ಮಾಡಿಸುವರು. ದೇವ-ಋಷಿ-ಪಿತೃತರ್ಪಣ, ವೈಶ್ವದೇವ ಹಾಗೂ ಬಲಿಹರಣಗಳನ್ನು ಮುಗಿಸಿಕೊಂಡು, ತಾಯಿ-ತಂದೆಗಳಿಗೆ ಊಟ ಮಾಡಿಸುವರು. ಆ ಮೇಲೆ ಬಂದ ಅತಿಥಿ ಅಭ್ಯಾಗತರೊಡನೆ ತಮ್ಮ ಊಟ ತೀರಿಸಿಕೊಂಡು, ತುಸು ವಿಶ್ರಾಂತಿ ತೆಗೆದುಕೊಳ್ಳುವರು. ಆ ಮೇಲೆ ಮಧ್ಯಾಹ್ನದ ಶಾಲೆಯು ವೇಳೆಯಾಗುವವರೆಗೆ ದಾಸಬೋಧ ಮೊದಲಾದ ಆಧ್ಯಾತ್ಮಿಕ ಗ್ರಂಥಗಳನ್ನು ತಾಯಿ-ತಂದೆಗಳಿಗೆ ಓದಿ ತೋರಿಸಿ, ಅವುಗಳ ಆಧಾರದಿಂದ ಪರಮಾರ್ಥದ ನಿರೂಪಣ ಮಾಡುವರು.

ಸಂಜೆಯ ಕಡೆಗೆ ಶಾಲೆಬಿಟ್ಟು ಬಂದ ಮೇಲೆ ಅಭಂಗಪಠಣ ನಡೆಯುವದು. ಒಂದೊಂದು ದಿನ ಶಾಲೆಬಿಟ್ಟೊಡನೆ ಮಹಾರಾಜರು ಶಿಷ್ಯರನ್ನು ಊರಹೊರಗೆ ಬೈಲಿಗೆ ಕರಕೊಂಡು ಹೋಗಿ, ಅವರಿಗೆ ನಿರಾಕಾರ ಪರಮಾತ್ಮನ ಸ್ವರೂಪವನ್ನು ಬೋಧಿಸುವರು. ಅನಂತರ ಸಂಧ್ಯಾಶ್ರಮದ ಕಾರ್ಯಕ್ರಮಗಳು ಸುರುವಾಗುವವು. ಅಲ್ಲಿ ಬಂದ ಆಸ್ತಿಕರಿಗೆ ಸಂಧ್ಯಾ ಕಲಿಸುವದು, ಆಸನಗಳನ್ನು ಹಾಕಿ ಅನುಕೂಲ ಮಾಡಿಕೊಡುವದು, ಪರಮಾರ್ಥದ ಸಾಧನಗಳನ್ನು ತಿಳಿಸಿ ಕೊಡುವದು—ಇವೆಲ್ಲ ಕೆಲಸಗಳು ಆಗುವವು. ಆ ಮೇಲೆ ದೀಪಹಚ್ಚುವ ಹೊತ್ತಿಗೆ ಸಾಯಂಸಂಧ್ಯೋಪಾಸನೆಯನ್ನು

ಮುಗಿಸಿಕೊಂಡು, ತುಸು ಭೂಜನೆ ಮಾಡಿ, ದೇವರಿಗೆ ಆರತಿ ಮೊದಲಾದವುಗಳನ್ನು ಮಾಡುವರು. ಆ ಮೇಲೆ ಸಾಯಂಕಾಲದ ಊಟವಾಗುವದು. ಅದಾದ ನಂತರ ತಾಯಿ-ತಂದೆಗಳ ಸೇವೆ ಮಾಡಿ ಅವರನ್ನು ಮಲಗಿಸಿ ತಾವೂ ಮಲಗಿಕೊಳ್ಳುವರು. ಹೀಗಿದು ಮಹಾರಾಜರ ದೈನಂದಿನ ಕ್ರಮವು ಅವ್ಯಾಹತವಾಗಿ ಸಾಗುತ್ತಿತ್ತು. ಮಹಾರಾಜರ ದಿನದ ಕಾರ್ಯಕ್ರಮವು ಗಡಿಯಾರಕ್ಕೆ ಸರಿಯಾಗಿ ನಡೆಯುತ್ತಿತ್ತು. ಅಖಂಡ ನಾಮಸ್ಮರಣೆಯಂತೂ ಅವರ ಸ್ವಭಾವವೇ ಆಗಿಬಿಟ್ಟಿತ್ತು. ಅವರು ತಮ್ಮ ಈ ನಿತ್ಯದ ಕಾರ್ಯಕ್ರಮದ ವಿಷಯಕ್ಕೆ ಎಂದೂ ಔದಾಸೀನ್ಯವನ್ನಾಗಲಿ, ಉಪೇಕ್ಷೆಯನ್ನಾಗಲಿ ತೋರಿಸುತ್ತಿರಲಿಲ್ಲ. ಒಂದರಕ್ಷಣವನ್ನೂ ಅವರು ಪುಕ್ಕಟೆ ಕಳೆಯುತ್ತಿರಲಿಲ್ಲವೆಂದು ಈ ಮೊದಲೇ ಹೇಳಿದ್ದೇವೆ. ಮೊದಲೇ ಮಾನವನ ಆಯುಷ್ಯವು ಕಡಿಮೆ ಪ್ರಮಾಣದ್ದು; ಮೇಲಾಗಿ ಕ್ಷಣಭಂಗುರವು. ಆದುದರಿಂದ ಆಯುಷ್ಯವನ್ನು ವ್ಯರ್ಥವಾಗಿ ಕಳೆಯುವದು ಮಹಾಪಾಪವೆಂದು ಮಹಾರಾಜರ ಅಭಿಪ್ರಾಯವಾಗಿತ್ತು.

ವೈದಿಕ ಧರ್ಮಾನುಯಾಯಿಗಳಾದ ಗೃಹಸ್ಥರು ದಿನಾಲೂ ಪಂಚಮಹಾಯಜ್ಞಗಳನ್ನು ಮಾಡಬೇಕೆಂದು ಧರ್ಮಶಾಸ್ತ್ರಕಾರರು ಹೇಳುತ್ತಾರೆ: ೧. ಸ್ವಶಾಖೆಯ ವೇದ ಮಂತ್ರಗಳನ್ನು ಯಥಾಶಕ್ತಿಯಾಗಿ ಸ್ವತಃ ಪಠಣ ಮಾಡುವದು ಮತ್ತು ಎರಡನೆಯವರಿಗೆ ಕಲಿಸಿ ಪಠಣ ಮಾಡಿಸುವದು "ಬ್ರಹ್ಮಯಜ್ಞ"ವೆನಿಸಿಕೊಳ್ಳುವದು. ಇದನ್ನು ಮಹಾರಾಜರು ತಮ್ಮ ಪರಿಸ್ಥಿತಿಗನುಗುಣವಾಗಿ ಪಾಲಿಸಿದರೆಂದು ಹೇಳಲಡ್ಡಿಯಿಲ್ಲ. ೨. ಪಿತೃಗಳಿಗೆ ನೀರಿನಿಂದ ತರ್ಪಣ ಮಾಡುವದೂ, ಕಾಲಕಾಲಕ್ಕೆ ವಿಹಿತವಾದ ಶ್ರಾದ್ಧಗಳನ್ನು ಮಾಡುವದೂ "ಪಿತೃಯಜ್ಞ"ವೆಂದೆನಿಸಿಕೊಳ್ಳುವದು. ಇದನ್ನಾದರೂ ಮಹಾರಾಜರು ತಪ್ಪದೇ ಮಾಡುತ್ತಿದ್ದರು. ೩. ಪ್ರತಿನಿತ್ಯ ಮುಂಜಾನೆ ಮತ್ತು ಸಂಜೆಗೆ ಅಗ್ನಿಯಲ್ಲಿ ದೇವತೆಗಳ ಉದ್ದಿಶ್ಯವಾಗಿ ಆಹುತಿ ಕೊಡುವದು "ದೈವಯಜ್ಞ"ವೆಂದು ಕರೆಯಲ್ಪಡುವದು. ಅಗ್ನಿಹೋತ್ರವೆಂಬದೂ ಈ ದೈವಯಜ್ಞದೊಳಗೆ ಬರುತ್ತದೆ. ಇದು ಮಾತ್ರ ಮಹಾರಾಜರಿಗೆ ಸಾಧ್ಯವಾಗಲಿಲ್ಲ. ಈಗಿನ ಕಾಲದಲ್ಲಿ ಅಗ್ನಿಹೋತ್ರವನ್ನು ನಡೆಸಿಕೊಂಡು ಹೋಗುವದು ಬಲು ಕಠಿಣವಾಗಿದೆ. ಎಂತೆಯೇ "ಕಲಿಯುಗದಲ್ಲಿ ಯಾರೂ

ಅಗ್ನಿ ಹೋತ್ರವನ್ನಿಡಬಾರದು'' ಎಂದೂ ಒಂದೆಡೆಗೆ ಹೇಳಿದ್ದಾರೆ. ಆವರೆ ದೈವ-ಯಜ್ಞವನ್ನು ಪ್ರತ್ಯೇಕವಾಗಿ ಮಾಡಲೇಬೇಕೆಂಬ ನಿಯಮವಿಲ್ಲ. ಪ್ರತಿನಿತ್ಯ ಮಾಡುವ ವೈಶ್ವದೇವದಿಂದ ದೈವಯಜ್ಞದ ಪೂರ್ತತೆಯಾಗುವದೆಂದು ಶಾಸ್ತ್ರಕಾರರು ಕಲ್ಪಿಸಿದ್ದಾರೆ ದಿನಾಲು ಐದೂ ಯಜ್ಞಗಳನ್ನು ಮಾಡಲಿಕ್ಕಾಗದವರು, ವೈಶ್ವದೇವ, ಬ್ರಹ್ಮಯಜ್ಞಗಳನ್ನಾದರೂ ಮಾಡಿದರೆ ಸಾಕೆಂದು ನಿಯಮವಿದೆ. ಆದುದರಿಂದ ಇದನ್ನು ಮಾಡದಿರುವ ದೋಷವು ಮಹಾರಾಜರಿಗೆ ಹತ್ತಲಾರದು. ಳ. ಬೆಕ್ಕು, ನಾಯಿ, ಕಾಗೆ ಮೊದಲಾದ ಪ್ರಾಣಿಗಳಿಗೆ ಅನ್ನವನ್ನು ನೀಡುವದು ''ಭೂತಯಜ್ಞ''ವೆಂದು ಹೆಸರು ಗೊಂಡಿದೆ. ಮಹಾರಾಜರು ಇದನ್ನಾದರೂ ಪಾಲಿಸುತ್ತಿದ್ದರು. ೫. ಮಧ್ಯಾಹ್ನ ಕಾಲಕ್ಕೆ ಅಕಸ್ಮಾತ್ತಾಗಿ ಹಸಿದು ಬಂದವರಿಗೆ ಅನ್ನ ಹಾಕುವದೇ ''ಮನುಷ್ಯಯಜ್ಞ''ವು ಅತಿಥಿ-ಅಭ್ಯಾಗತರಿಗಂತೂ ಮಹಾರಾಜರ ಮನೆಯಲ್ಲಿ ಮುಕ್ತದ್ವಾರವಿತ್ತು. ಹೀಗೆ ಮಹಾರಾಜರು ವೈದಿಕ ಕರ್ಮಗಳನ್ನೂ ಯಥಾಶಕ್ತಿಯಾಗಿ ನಡಿಸಿಕೊಂಡು ಹೋಗುತ್ತಿದ್ದರೆಂದು ಹೇಳಬಹುದು. ನಿಜವಾಗಿ ನೋಡಿದರೆ ಅವರು ಪರಮಾತ್ಮ ಸಾಕ್ಷಾತ್ಕಾರ ಪಡೆದು, ಕರ್ಮಗಳ ಬಂಧನವನ್ನು ದಾಟಿದವರಾಗಿದ್ದರು. ಆದರೂ ಲೋಕಕ್ಕೆ ಪಾಠಹಾಕಿ ಕೊಡಬೇಕೆಂದು ಅವರು ಈ ರೀತಿಯಾಗಿ ಆಚರಣೆ ಮಾಡಿ ತೋರಿಸುತ್ತಿದ್ದರು.

ಮಹಾರಾಜರು ತಮ್ಮ ಕುಟುಂಬದೊಳಗಿನ ಜನರೊಡನೆ ಲೌಕಿಕ ವ್ಯವಹಾರದಲ್ಲಿಯಂತೂ ಬಹು ಕೌಶಲ್ಯದಿಂದ ನಡೆದುಕೊಳ್ಳುತ್ತಿದ್ದರೆಂಬದನ್ನು ಮೇಲೆ ಹೇಳಿದ್ದೇವೆ. ಆದರೆ ಅದಕ್ಕಿಂತಲೂ ಹೆಚ್ಚಾಗಿ, ಅವರು ತಮ್ಮ ವೃದ್ಧ ತಾಯಿ-ತಂದೆಗಳಿಗೂ, ಹೆಂಡತಿಗೂ, ಉಳಿದ ಆಪ್ತೇಷ್ಟರಿಗೂ ಪರಮಾರ್ಥವನ್ನು ಬೋಧಿಸಿ, ಅವರನ್ನೂ ಪರಮಾರ್ಥಜೀವಿಗಳನ್ನಾಗಿ ಮಾಡಿದುದು ಅವರ ಜೀವನದ ವೈಶಿಷ್ಟ್ಯವು- ಮಹಾರಾಜರು ಅವರವರಿಗೆ ತಕ್ಕಂತೆ ಸುಲಭವಾದ, ಸರಳವಾದ, ಶೀಘ್ರ ಪರಿಣಾಮಕಾರಿಯಾದ ಸಾಧನಗಳನ್ನು ಹೇಳಿಕೊಟ್ಟು ಅವರ ಕಡೆಯಿಂದ ಅವುಗಳನ್ನು ಮಾಡಿಸಿ ಕೊಳ್ಳುತ್ತಿದ್ದರು. ಕುಟುಂಬದೊಳಗಿನ ಜನರನ್ನು ಲೌಕಿಕ ರೀತಿಯಿಂದ ಸಂತುಷ್ಟಪಡಿಸುವ ಯಜಮಾನರನೇಕರು ಸಿಕ್ಕಬಹುದು. ಆದರೆ ಕುಟುಂಬದ

ಲೌಕಿಕವನ್ನೂ ಸರಿಯಾಗಿ ಪೂರೈಸಿಕೊಂಡು, ಸ್ವತಃ ಪರಮಾರ್ಥವನ್ನು ಗಳಿಸಿ, ಮನೆಯೊಳಗಿನ ಜನರಿಗೂ ಪರಮಾರ್ಥ ಮಾರ್ಗವನ್ನು ತೋರಿಸಿ, ಅವರನ್ನೂ ಉದ್ಧರಿಸುವ ಕೆಲಸವನ್ನು ಮಾಡುವ ಗೃಹಸ್ಥರು ಮಾತ್ರ ತೀರ ವಿರಳ. ಮಹಾರಾಜರ ಪರಮಾರ್ಥ ಶಿಕ್ಷಣದಿಂದ ಮನೆಯವರ ವಿವೇಕ ಬುದ್ಧಿಯು ಜಾಗೃತವಾಯಿತು. ಅವರ ಭವರೋಗವು ದೂರಾಯಿತು ಶಾಂತಿ-ಸುಖ-ಸಮಾಧಾನಗಳು ಅವರಿಗೆ ವಿಪುಲವಾಗಿ ಸಿಕ್ಕವು. ಇವೆಲ್ಲಕ್ಕೂ ಕಳಸವೆಂದು ಅವರು ನಿರ್ಭಯಾವಸ್ಥೆಯನ್ನು ಹೊಂದಿಬಿಟ್ಟರು.

ಹೀಗೆ ಮಹಾರಾಜರ ಗೃಹಸ್ಥಾಶ್ರಮವು ೧೦—೧೬ ವರುಷಗಳ ವರೆಗೆ ಸುಸೂತ್ರವಾಗಿ ಸಾಗಿತು. ಆಷ್ಟೊತ್ತಿಗೆ ಬಾಳಕೃಷ್ಣ ಭಟ್ಟರಿಗೆ ೮೦ ವರುಷಗಳಾಗಿದ್ದವು. ಮುಪ್ಪಿನ ಅಶಕ್ತತೆಯಿಂದ ಅವರ ಪೂರಾ ಹಾಸಿಗೆ ಹಿಡಿದು ಬಿಟ್ಟರು. ಮಹಾರಾಜರು ಅವರ ಸೇವೆಯನ್ನು ಎಷ್ಟು ಬಗೆಯಿಂದ ಮಾಡಿದರೂ, ಅವರ ಜಡ್ಡು ಕಡಿಮೆಯಾಗಲಿಲ್ಲ. ಬಾಳಕೃಷ್ಣ ಭಟ್ಟರ ಅಸ್ವಸ್ಥತೆಯು ಕ್ರಮೇಣ ಬೆಳೆಯುತ್ತ ಹೋಗಿ, ೩—೪ ತಿಂಗಳುಗಳಲ್ಲಿ ಅವರು ಕೈಲಾಸವಾಸಿಗಳಾದರು. ಸಾಯುವ ಮೊದಲು ಅವರು ಮಹಾರಾಜರ ತೊಡೆಯ ಮೇಲೆ ತಲೆಯಿಟ್ಟು ತಮ್ಮ ಧನ್ಯತೆಯನ್ನು ಪ್ರಕಟಗೊಳಿಸಿದರು:— ''ಅಪ್ಪಾ, ರಾಮೂ ! ನಿನ್ನಿಂದ ನಾವು ಉದ್ಧಾರವಾದೆವಪ್ಪಾ ! ಮುಪ್ಪಿನ ಕಾಲದೊಳಗೆ ನೀನು ಮಾಡಿದ ಸೇವೆಯಿಂದ ಸಂತುಷ್ಟನಾಗಿದ್ದೇನೆ. ದೇವರು ನಿನಗೆ ಕಲ್ಯಾಣ ಮಾಡಲಿ.'' ಮಹಾರಾಜರು ಅವರಿಗೆ ಪರಮಾತ್ಮ ಚಿಂತನೆ ಮಾಡಬೇಕೆಂದು ಹೇಳಿದರು ಬಾಳಕೃಷ್ಣ ಭಟ್ಟರು ದೇವರ ನಾಮವನ್ನು ಚ್ಚರಿಸುತ್ತ, ಕೃತಾರ್ಥರಾಗಿ ತಮ್ಮ ಜಡದೇಹವನ್ನು ತ್ಯಾಗಮಾಡಿದರು.

ಪಿತೃವಿಯೋಗದಿಂದ ಮಹಾರಾಜರಿಗೆ ಅತೀವ ದುಃಖವಾಯಿತು. ಅವರು ಧಾರೆಯಾಗಿ ಕಣ್ಣೀರನ್ನೂ ಸುರಿಸಿದರು. ಆದರೆ ಆಧ್ಯಾತ್ಮ ದೃಷ್ಟಿಯವರಾದ ಮಹಾರಾಜರು ಕೂಡಲೇ ಆ ದುಃಖವನ್ನು ನುಂಗಿಕೊಂಡು ಮುಂದಿನ ಕೆಲಸಕ್ಕೆ ಹತ್ತಿದರು. ಮಹಾರಾಜರ ಹೊರತು ಅವರ ಅಣ್ಣ ತಮ್ಮಂದಿರಾರೂ ಅಲ್ಲಿ ಇರದ್ದರಿಂದ, ಅವರೊಬ್ಬರೇ ಎಲ್ಲ ಕಾರ್ಯಗಳನ್ನು

ಮುಗಿಸಬೇಕಾಯಿತು. ಪತಿಯ ನಿಧನದಿಂದ ಶೋಕಸಾಗರದಲ್ಲಿ ಮುಳುಗಿದ ಅನ್ನಪೂರ್ಣಾಬಾಯಿಯವರು ಅನ್ನ ನೀರುಗಳನ್ನು ಕೂಡ ಬಿಟ್ಟುಬಿಟ್ಟರು. ಅವರನ್ನು ಸಮಾಧಾನಗೊಳಿಸಬೇಕಾದರೆ ಮಹಾರಾಜರಿಗೆ ಸಾಕುಸಾಕಾಗಿ ಹೋಯಿತು. ಮಹಾರಾಜರು ತಾಯಿಗೆ ಕೌಸಲ್ಯಾ ಮೊದಲಾದವರ ಉದಾಹರಣೆಗಳನ್ನು ಹೇಳಿ, ಪ್ರಾರಬ್ಧ ಕರ್ಮಕ್ಕನುಸಾರವಾಗಿ ಬಂದುದೆಲ್ಲ ವನ್ನೂ ಶಾಂತರೀತಿಯಿಂದ ಸಹಿಸಬೇಕೆಂದು ತಿಳಿಸಿ ಹೇಳಿದರು. ಮಗನ ಉಪದೇಶದಿಂದ ಅವರ ಮನಸ್ಸು ತುಸು ಶಾಂತವಾಗುವದರೊಳಗಾಗಿ, ಪಾಪ!, ಅವರ ಮೇಲೆ ಇನ್ನೂ ಒಂದು ಆಪತ್ತು ಬಂತು !

ದುಃಖಗಳು ಬರಹತ್ತಿದವೆಂದರೆ ಸಾಲುಸಾಲಾಗಿ ಬರುತ್ತವೆಂದು ಹಿರಿಯರು ಹೇಳುವದು ಸುಳ್ಳಲ್ಲ. ಬಾಳಕೃಷ್ಣ ಭಟ್ಟರು ತೀರಿಕೊಂಡು ಇನ್ನೂ ಒಂದು ವರ್ಷ ಕೂಡ ಆಗಿದ್ದಿಲ್ಲ. ಅಷ್ಟರಲ್ಲಿ ಮಹಾರಾಜರ ಪತ್ನಿಯವರಾದ ಸೀತಾಬಾಯಿಯವರು ಹಡೆದ ಬೇನೆಯಿಂದ ಹಾಸಿಗೆ ಹಿಡಿದರು. ಹಡೆದ ಹತ್ತು ದಿನಗಳೊಳಗಾಗಿಯೇ ಗಂಟುಬಿದ್ದ ಈ ರೋಗವು ಅವರನ್ನು ತೀರ ನಿರ್ವಿಣ್ಣರನ್ನಾಗಿ ಮಾಡಿಬಿಟ್ಟಿತು. ಸೊಸೆಯ ಈ ಅವಸ್ಥೆಯನ್ನು ನೋಡಿ ಮುದುಕೆಯು ತೀರ ಗಾಬರಿಯಾದಳು. ಆದರೆ ಚಿದಂಬರನ ಮನಸ್ಸಿಗೆ ಬಂದ ಮೇಲೆ ಯಾರೇನು ಮಾಡುವದು ? ಸೀತಾಬಾಯಿಯವರ ಬೇನೆಯು ದಿನದಿನಕ್ಕೆ ಬೆಳೆಯುತ್ತ ನಡೆಯಿತು. ರೋಗವು ಅಸಾಧ್ಯವೆಂದು ಗೊತ್ತಾ-ದೊಡನೆ ಆ ಸಾಧ್ವೀಮಣಿಯು ಲೌಕಿಕದ ಎಲ್ಲ ಆಸೆಗಳನ್ನೂ ತೊರೆದು ತನ್ನ ಪತಿದೇವನು ತನಗೆ ತೋರಿಸಿಕೊಟ್ಟ ನಿಜಸುಖದ ಧ್ಯಾನವನ್ನು ಮಾಡ-ಹತ್ತಿದಳು !

ಆ ಪತಿವ್ರತೆಯು ನಿಜವಾಗಿಯೂ ಪುಣ್ಯವಂತಳು ! ಧನ್ಯಳು ! ಎಂತೆಯೇ ಅವಳಿಗೆ ಮಹಾರಾಜರಂಥವರ ಹೆಂಡತಿಯಾಗುವ ಯೋಗ ಒದಗಿತು. ಅವಳು ಅನೇಕ ಜನ್ಮಗಳಿಂದ ಪರಮಾರ್ಥ ಸಾಧನೆಗಳನ್ನು ಮಾಡುತ್ತ ಬಂದಿರುವ ಭಾಗ್ಯವತಿಯಾಗಿದ್ದಳೆಂದೇ, ಅವಳಿಗೆ ಈ ಜನ್ಮದಲ್ಲಿ ಇಂಥ ಸಹವಾಸವು ದೊರಕಿತು. ಮಹಾರಾಜರ ಬಾಯಿಂದ ಅಧ್ಯಾತ್ಮವನ್ನು ಕೇಳಿದಾಗಿನಿಂದ ಅವಳ ಪರಮಾರ್ಥ ಸಾಧನೆಯು ನಡೆದೇ ಇತ್ತು. ಈಗ

ಅವಳು ಉಳಿದುದೆಲ್ಲವನ್ನೂ ಬಿಟ್ಟು, ಮಹಾರಾಜರಿಂದ ಉಪದಿಷ್ಟವಾದ 'ಶಿವಚಿದಂಬರ, ಶಿವಚಿದಂಬರ'ನೆಂಬ ನಾಮಸ್ಮರಣೆಯನ್ನು ಅಖಂಡವಾಗಿ ಜಪಿಸಹತ್ತಿದಳು. ಅವಳಿನ್ನು ಬದುಕುವದಿಲ್ಲೆಂದು ಮಹಾರಾಜರಿಗೂ ಗೊತ್ತಾಯಿತು. ಆಗ ಮಹಾರಾಜರು ಅವಳ ಸಮೀಪದಲ್ಲಿ ಕುಳಿತುಕೊಂಡು ಅವಳ ತಲೆಯನ್ನು ತಮ್ಮ ತೊಡೆಯ ಮೇಲಿಟ್ಟುಕೊಂಡು ಕೊನೆಯ ಉಪದೇಶ ಮಾಡಿದರು: — ''ಸಂಸಾರದ ಸಂಬಂಧಗಳು ನಿಜವಾದುವಲ್ಲ. ಅವುಗಳನ್ನು ಮರೆಯಲಿಕ್ಕೆ ಕಲಿಯಬೇಕು. ಎಲ್ಲವನ್ನೂ ಬಿಟ್ಟು ಚಿದಂಬರ ನಿಗೇ ಶರಣು ಹೋದರೆ ಯಾವ ಭಯವೂ ಇಲ್ಲ.'' ಈ ಮಾತುಗಳನ್ನು ಕೇಳಿ ಆ ಸಾಧ್ವಿಯ ಕಣ್ಣೊಳಗಿಂದ ನೀರು ಹರಿಯಹತ್ತಿದವು. ಅವಳು ಚಟ್ಟನೇ ಎದ್ದು ಕುಳಿತು ''ಸ್ವಾಮಿನ್ ! ತಮ್ಮ ಪಾದದಲ್ಲಿ ಕಾಲ್ತೊಡಕಾಗಿ ಬಿದ್ದ ಈ ದಾಸಿಯನ್ನು ಪ್ರೀತಿಯಿಂದ ಉದ್ಧಾರ ಮಾಡಿದಿರಿ ! ತಿಳಿದೂ ತಿಳಿಯದೆಯೂ ಮಾಡಿದ ಎಲ್ಲ ಅಪರಾಧಗಳನ್ನು ಕ್ಷಮಿಸಿರಿ. ನನ್ನ ಚಿದಂಬರನೆಂದರೆ ತಾವೇ ! ತಮ್ಮ ಹೊರತು ಬೇರೆ ಚಿದಂಬರನನ್ನು ಇನ್ನೆಲ್ಲಿ ಹುಡುಕಲಿ ! ಜನ್ಮಜನ್ಮಾಂತರಗಳಲ್ಲೂ ಇವೇ ಪಾದಗಳು ಸಿಗಲೆಂದು ಬೇಡಿಕೊಳ್ಳುತ್ತೇನೆ'' ಎಂದು ಮಹಾರಾಜರ ಚರಣಗಳ ಮೇಲೆ ತಲೆಯಿಟ್ಟಳು.

''ಶರಣರ ಮಹತಿಯು ಮರಣದಲ್ಲಿ'' ಎಂಬದು ಸುಳ್ಳಲ್ಲ. ಅಂದು ಮಹಾಶಿವರಾತ್ರಿಯಾಗಿತ್ತು. ಪತಿ-ಪತ್ನಿಯರು ಕೊನೆಯ ಕ್ಷಣಗಳನ್ನು ಪರಮಾತ್ಮನ ಧ್ಯಾನದಲ್ಲಿ ಕಳೆಯುತ್ತಿದ್ದರು. ಮನೆಯಲ್ಲಿ ಚಿದಂಬರನ ಯಾಮಪೂಜೆಯು ನಡೆದಿತ್ತು. ಬ್ರಾಹ್ಮಣರು ಬಾಯಿಂದ ಮಹಾರುದ್ರವನ್ನು ಪಠಣ ಮಾಡುತ್ತ ಚಿದಂಬರನಿಗೆ ಅಭಿಷೇಕ ಮಾಡುತ್ತಿದ್ದರು. ಇಂತಹ ಸುಮಂಗಲವಾದ ಕಾಲದಲ್ಲಿ, ಆ ದೇವಿಯು ಮಹಾರಾಜರ ತೊಡೆಯ ಮೇಲೆ ತಲೆಯಿಟ್ಟು, ಕಣ್ಣುಗಳಿಂದ ಮಹಾರಾಜರ ಮೂರ್ತಿಯನ್ನು ನೋಡುತ್ತ, ಬಾಯಿಂದ ಶಿವಚಿದಂಬರವೆಂಬ ನಾಮವನ್ನುಚ್ಚರಿಸುತ್ತ ಹಣೆತುಂಬ ಕುಂಕುಮವನ್ನು ಹಚ್ಚಿಕೊಂಡು, ನಗುನಗುತ್ತ ತನ್ನ ಪಾರ್ಥಿವ ಶರೀರವನ್ನು ಬಿಟ್ಟು ಚಿದಂಬರನಲ್ಲಿ ಲೀನವಾದಳು ! ಅಹಹಾ ! ಎಂತಹ ಪುಣ್ಯ ! ಎಂತಹ ಸೌಭಾಗ್ಯ !!

ಸೀತಾಬಾಯಿಯವರ ಮರಣದಿಂದ ಅನ್ನಪೂರ್ಣಾಬಾಯಿಯವರ ಕೈಕಾಲೇ ಹೋದವು. ಅವರು ಅಂದಿನಿಂದ ಅನ್ನವನ್ನೇ ಗ್ರಹಣ ಮಾಡಲಿಲ್ಲ. ಮಹಾರಾಜರು ಅವರಿಗೆ ಎಷ್ಟು ಪರಿ ತಿಳಿಸಿಹೇಳಿದರೂ, ಏನೂ ಉಪಯೋಗವಾಗಲಿಲ್ಲ. ಮೊದಲೇ ಮುದುಕರು. ಅದರಲ್ಲಿ ಪತಿವಿಯೋಗದಿಂದಾದ ವೈಧವ್ಯದ ದುಃಖ! ಅದಕ್ಕೇ ಸೊಸೆಯ ಅಕಾಲ ಮರಣವು ಕಳಸವಾಗಿ ಬಿಟ್ಟಿತು. ಸೀತಾಬಾಯಿಯವರು ಮರಣ ಹೊಂದಿದ ಹತ್ತನೆಯ ದಿನವೇ ಅನ್ನಪೂರ್ಣಾಬಾಯಿಯವರು ಯಾವುದೇ ತರದ ಬೇನೆಯಿರವಿದ್ದರೂ, ಆಕಸ್ಮಾತ್ತಾಗಿ ದೇಹಬಿಟ್ಟರು. ಮರಣ ಕಾಲಕ್ಕೆ ಅವರಿಗೂ ದೇವರ ನೆನಪಾಗದೆ ಹೋಗಲಿಲ್ಲ!

ಈ ಪ್ರಕಾರ ಒಂದು ವರುಷದ ಅವಧಿಯೊಳಗೇ ಜನನೀ-ಜನಕರೂ, ಪತ್ನಿಯೂ ಪರಲೋಕದ ಹಾದಿಯನ್ನು ಹಿಡಿದರು. ಮಹಾರಾಜರ ಸ್ಥಳದಲ್ಲಿ ಬೇರೆಯವರಿದ್ದರೆ ಏನು ಅಕಾಂಡತಾಂಡವ ಮಾಡುತ್ತಿದ್ದರೋ ಏನೋ! ಯೌವನದಲ್ಲಿ ಪತ್ನಿಯ ವಿಯೋಗವು ಅಸಹ್ಯವಾದುದೆಂದು ಸುಭಾಷಿತಕಾರರು ಹೇಳುತ್ತಾರೆ. ಆದರೆ ಮಹಾರಾಜರು ಯಾವುದೇ ತರದ ದುಃಖಕ್ಕೀಡಾಗದೆ ಸಂಚಿತದ ಆಟವನ್ನು ಶಾಂತರೀತಿಯಿಂದ ನಿರೀಕ್ಷಿಸುತ್ತಿದ್ದರು. ತಂದೆಯು ತೀರಿಕೊಂಡ ಮೇಲೆ ಮಹಾರಾಜರು ಎರಡನೆಯವರಿಗೆ ಬರೆದ ಪತ್ರದಲ್ಲಿ ಅವರ ಈ ಭಾವವು ಚನ್ನಾಗಿ ಪ್ರಕಟವಾಗುತ್ತಿದೆ. ಆ ಪತ್ರದಲ್ಲಿ ಅವರು ಒಬ್ಬ ಮನುಷ್ಯನ ಚಿತ್ರವನ್ನು ತೆಗೆದಿದ್ದಾರೆ. ಆ ಮನುಷ್ಯನ ಸುತ್ತುಮುತ್ತು ಹೆಂಡತಿ, ತಾಯಿ-ತಂದೆಗಳು, ಆಪ್ತೇಷ್ಟರು— ಎಂಬವರನ್ನು ಚಿತ್ರಿಸಿ, ಅವರಲ್ಲಿ ಪ್ರತಿಯೊಬ್ಬರೂ ಒಂದೊಂದು ಹಗ್ಗದಿಂದ ಆ ಮನುಷ್ಯನ ಕುತ್ತಿಗೆಯನ್ನು ಹಿಡಿದೆಳೆಯುವಂತೆ ತೋರಿಸಿದ್ದಾರೆ. ಎಂದರೆ ಆ ಮನುಷ್ಯನ ಸಂಬಂಧಿಕರೆಂದರೆ ಅವನನ್ನು ಒಂದೊಂದು ಪಾಶದಿಂದ ಎಳೆಯುವವರೆಂಬ ಭಾವವು ಅಲ್ಲಿ ಪ್ರಕಟವಾಗಿದೆ. ತಂದೆ ಸತ್ತದ್ದರಿಂದ ಅವುಗಳೊಳಗಿನ ಒಂದು ಪಾಶವು ಹರಿದಂತಾಯಿತೆಂದೂ ಅದರಲ್ಲಿ ತೋರಿಸಿದ್ದಾಗಿದೆ. ಇದರ ಮೇಲಿಂದ ಮ.ಹಾರಾಜರು ಈ ಸಂಗತಿಗಳನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದರೆಂಬದು ಸಹಜವಾಗಿ ಗೊತ್ತಾಗುವಂತಿದೆ.

ಚಿದಂಬರನೇ ತಮ್ಮನ್ನು ಸಂಸಾರದಲ್ಲಿ ಸೇರಿಸಿದ್ದು, ಆವನೇ ಈಗ ಆದರೊಳಗಿಂದ ತಮ್ಮನ್ನು ಮುಕ್ತಗೊಳಿಸಿದನೆಂದು ಮಹಾರಾಜರು ಯಥಾರ್ಥವಾಗಿ ತಿಳಿದುಕೊಂಡರು. ತಾವೀಗ ಸಂಸಾರದೊಳಗಿಂದ ಹೊರಬೀಳುವ ವೇಳೆಯು ಬಂತೆಂದು ಅವರ ನಿಶ್ಚಯವಾಯಿತು. ಅವರ ಮೊದಲಿನ ವಿಚಾರಗಳೆಲ್ಲ ಮತ್ತೆ ಜಾಗೃತವಾದವು. ಸಂಸಾರದ ಬಂಧನದಿಂದ ಬಿಡುಗಡೆಯಾಗಿ ಯಾವಾಗ ಕೃತಕಾರ್ಯನಾದೇನೆಂಬ ಚಿಂತೆಯು ಅವರನ್ನೀಗ ಆವರಿಸಿತು. ಅವರು ತಮ್ಮ ಶಿಷ್ಯರನ್ನು ಕುರಿತು ಸ್ಪಷ್ಟವಾಗಿಯೇ ಈ ಅಭಿಪ್ರಾಯವನ್ನು ವ್ಯಕ್ತಮಾಡಿದರು:— "ಪರಮೇಶ್ವರನು ಈ ಎಲ್ಲ ಆವತ್ತುಗಳನ್ನು ನನ್ನ ಕಲ್ಯಾಣಕ್ಕಾಗಿಯೇ ಉಂಟು ಮಾಡಿರುವನು. ಮನಸ್ಸಿನಲ್ಲಿ ಸಂಪೂರ್ಣ ವೈರಾಗ್ಯವು ತುಂಬಿದ್ದರೂ, ಸಂನ್ಯಾಸವನ್ನು ಸ್ವೀಕರಿಸಲಿಕ್ಕೆ ಇದು ವರೆಗೆ ಯಾವ ಪ್ರತಿಬಂಧಗಳು ಅಡ್ಡಾಗಿ ನಿಂತಿದ್ದವೋ, ಅವೀಗ ಈತ ಕೃಪೆಯಿಂದ ದೂರಾಗಿರುವವು. ಆದುದರಿಂದ ನಾನಿನ್ನು ಸಂನ್ಯಾಸವನ್ನು ಸ್ವೀಕರಿಸುವ ಸಿದ್ಧತೆಗೆ ಹತ್ತತಕ್ಕದ್ದು."

———

ಉತ್ತರಾರ್ಧ

೧ ಸಂನ್ಯಾಸ ಧರ್ಮದ ಶ್ರೇಷ್ಠತೆ

ಹಿಂದೂ ಧರ್ಮದ ಅನೇಕ ವೈಶಿಷ್ಟ್ಯಗಳಲ್ಲಿ ಸಂನ್ಯಾಸ ಸಂಸ್ಥೆಯೂ ಒಂದಾಗಿದೆ. ಸಂನ್ಯಾಸವೆಂದರೆ ಸರ್ವಸ್ವದ ತ್ಯಾಗವು. ''ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಃ''— ಎಂದು ಗೀತೆಯು ಹೇಳುತ್ತದೆ. ಅದರ ಅರ್ಥವೇನಂದರೆ:— ಸಂನ್ಯಾಸಿಯು ಎಲ್ಲ ಬಯಕೆಗಳನ್ನೂ, ಅವುಗಳಿಗಾಗಿ ಮಾಡಬೇಕಾಗುವ ಕರ್ಮಗಳನ್ನೂ ತೊರೆಯಬೇಕು. ಎಂದರೆ ತನ್ನ ಸ್ವಾರ್ಥವನ್ನೆಲ್ಲ ಸಂಪೂರ್ಣವಾಗಿ ಬಿಟ್ಟುಕೊಡಬೇಕು. ಹೆಂಡಿರು ಮಕ್ಕಳು, ಮನೆ-ಮಾಡು, ಆಪ್ತೇಷ್ಟರು ಮೊದಲಾದವರಿಗೆಲ್ಲರಿಗೂ ಅವನು ಸಂನ್ಯಾಸ ಕಾಲದಿಂದ ಮೃತನಾದಂತೆ ಸರಿ. ಸಂನ್ಯಾಸಿಯಾಗತಕ್ಕವನು ಸಂನ್ಯಾಸದ ಮೊದಲು ಪಿತೃಗಳ ಶ್ರಾದ್ಧ ಮಾಡಬೇಕಾಗುವದಲ್ಲದೆ, ತನ್ನ ಸ್ವಂತದ ಶ್ರಾದ್ಧವನ್ನೂ ಕೂಡ ಮಾಡಿಕೊಳ್ಳಬೇಕಾಗುವದು- ಸಂನ್ಯಾಸ ದೀಕ್ಷೆಯ ವೇಳೆಯಿಂದ ಸಾಧಕನು ಎಲ್ಲ ಲೋಕಗಳ ಆಸೆಯನ್ನೂ, ಅಧಿಕಾರವನ್ನೂ ಬಿಟ್ಟು ಕೊಡಬೇಕಾಗುತ್ತದೆ. ಈಶ್ವರ ಪ್ರಾಪ್ತಿಯ ಸಲುವಾಗಿ ಈ ಮಹಾ ತ್ಯಾಗರೂಪ ವ್ರತವನ್ನು ಕೈಕೊಳ್ಳುವ ವ್ಯವಸ್ಥಿತವಾದ ಪದ್ಧತಿಯು, ನಮ್ಮ ಭಾರತ ವರ್ಷದಲ್ಲಿ ಅನಾದಿ ಕಾಲದಿಂದ ಗುರು-ಶಿಷ್ಯ ಪರಂಪರೆಯ ರೂಪದಿಂದ ನಡೆಯುತ್ತ ಬಂದಿದೆ. ಮತ್ತು ಅದರಿಂದಲೇ ನಮ್ಮ ದೇಶಕ್ಕೆ ಇಂದಿಗೂ ಬ್ರಹ್ಮಜ್ಞಾನದ ಪದವಿಯು ಸಿಕ್ಕುತ್ತಿರುತ್ತದೆ. ಶ್ರೀ ಸ್ವಾಮೀ ವಿವೇಕಾನಂದರಂಥವರು ಈ ತ್ಯಾಗ ವ್ರತದಿಂದಲೇ ಅಮೇರಿಕೆಯಲ್ಲಿ ಕೂಡ ಹಿಂದೂ-ಧರ್ಮದ ಡಂಗುರವನ್ನು ಹೊಡೆದರು

ಸಂನ್ಯಾಸವೆಂದರೆ ಅಗ್ನಿಮಯ ಜೀವನವೆಂದು ಹೇಳಬಹುದು. ಎಲ್ಲ ಮಾತುಗಳನ್ನು ಜ್ಞಾನಾಗ್ನಿಯೊಳಗೆ ಸ್ವಾಹಾಕಾರ ಮಾಡಿ, ಸ್ವತಃ ಅಗ್ನಿ-ಮಯನಾಗುವದೇ ಈ ಮಹಾವ್ರತದ ಆದರ್ಶವಾಗಿದೆ. ಸಂಸಾರದ ಆತ್ಯಂತಿಕ ಉಪೇಕ್ಷೆ, ಪ್ರಾಣಿ ಮಾತ್ರರಿಗೆಲ್ಲ ಅಭಯದಾನ, ಅವರ ಬಗ್ಗೆ ಮಿತ್ರತ್ವ ವಹಿಸುವದು, ಎಲ್ಲ ಪ್ರಾಪಂಚಿಕ ಸಂಬಂಧ ಮತ್ತು ಪರಿಗ್ರಹಗಳ ತ್ಯಾಗ, ಇವು ಸಂನ್ಯಾಸದಲ್ಲಿ ಅಡಕವಾಗಿವೆ. ಹೀಗೆ ಸಂನ್ಯಾಸ ಸಂಸ್ಥೆಯ ಉಪದೇಶವೇನಂದರೆ : ಪ್ರಾಪಂಚಿಕವಾದ ಎಲ್ಲ ಸಂಗತಿಗಳನ್ನೂ ಹೃದಯದೊಳಗಿಂದ ಬಿಸುಟಿ ಹಾಕಿರಿ. ಸತ್ತ್ವ, ರಜ ಹಾಗೂ ತಮೋಗುಣಗಳ ಮೇಲೆ ಹೋಗಿ, ತ್ರಿಗುಣಾತೀತರಾಗಿ ಪರಮೇಶ್ವರನಲ್ಲಿ ಸ್ಥಿರವಾಗಿರಿ.'' ಎಂತೆಯೇ ಸಂನ್ಯಾಸದ ವಸ್ತ್ರಗಳು ಬೆಂಕಿಯ ಬಣ್ಣದವಿರುತ್ತವೆ. ಯಾಕೆಂದರೆ, ಜೀವಂತನಾಗಿದ್ದರೂ, ಸಂನ್ಯಾಸಿಯು ತನ್ನ ಶರೀರವನ್ನು ಬೆಂಕಿಗೆ ಒಪ್ಪಿಸಿ ಬಿಟ್ಟಿರುತ್ತಾನೆ. ಅವನು 'ನಾರಾಯಣ'ನ ಹೊರತಾಗಿ ಬೇರೆ ಏನನ್ನೂ ನೋಡಲಾರನು. ಆದುದರಿಂದ ಸಂನ್ಯಾಸ ಕಾಲದಲ್ಲಿ ಪೂರ್ವಾಶ್ರಮದ ಹೆಸರನ್ನೂ ಕೂಡ ತ್ಯಜಿಸಿ, ಗುರುದತ್ತ ಮಹಾಪ್ರಕಾಶರೂಪವಾದ ಹೊಸ ಹೆಸರಿನಿಂದ ಆ ಶರೀರದ ಸಂಕೇತವು ಮಾಡಲ್ಪಡುವದು. ನಿಜವಾಗಿ ಸಂನ್ಯಾಸಿಯು ನಾಮರೂಪಾತೀತನೇ ಆಗಿರಲಿಕ್ಕೆ ಬೇಕು.

ಸಂನ್ಯಾಸವನ್ನು ಯಾವ ಉದ್ದೇಶಗಳಿಂದ ತೆಗೆದುಕೊಳ್ಳಬೇಕಾಗುವದೋ, ಆ ಎರಡೂ ಉದ್ದೇಶಗಳು ಸಂನ್ಯಾಸದ ಸಂಕಲ್ಪದಲ್ಲಿಯೇ ಅಡಕವಾಗಿವೆ : ೧. ಆತ್ಮನೋ ಮೋಕ್ಷಾರ್ಥಂ, ೨. ಜಗದ್ಧಿತಾಯ ಚ. ಎಂದರೆ ಈಶ್ವರ ಸಾಕ್ಷಾತ್ಕಾರದಿಂದ ಸ್ವತಃ ಮೋಕ್ಷ ಪಡೆಯುವದು ಸಂನ್ಯಾಸದ ಮುಖ್ಯ ಹೇತುವು. ಆದರೆ ಸಾಕ್ಷಾತ್ಕಾರ ಸುಖವನ್ನು ತನ್ನಷ್ಟಕ್ಕೆ ಅನುಭವಿಸುತ್ತ ನಿಲ್ಲದೆ, ಜಗತ್ಕಲ್ಯಾಣಕ್ಕಾಗಿ ಅದರ ಪ್ರಸಾರ ಮಾಡುವದು, ಸಂನ್ಯಾಸಿಗಳ ಎರಡನೆಯದಾದರೂ, ಬಹು ಮಹತ್ತ್ವದ ಕರ್ತವ್ಯವಾಗಿದೆ. ಹೀಗೆ ಸ್ವಾರ್ಥವಿರಹಿತರಾದ, ಪರಮಾತ್ಮನ ಚರಣಾರವಿಂದಗಳಲ್ಲಿ ರತರಾದ, ಮತ್ತು ಪರೋಪಕಾರ ಬುದ್ಧಿಯಿಂದ ಪ್ರೇರಿತರಾದ ಸಂನ್ಯಾಸಿಗಳ ಗುಂಪಿನಿಂದ ನಿಜವಾದ ಜಗತ್ಕಲ್ಯಾಣವು ಎಷ್ಟಾಗುವದು ಶಕ್ಯವಿದೆಯೋ, ಅಷ್ಟು ಉಳಿದಾವ ಜನರಿಂದಲೂ ಆಗುವದು ಶಕ್ಯವಿಲ್ಲ.

ವೈರಾಗ್ಯದಿಂದಲೇ ಸಂನ್ಯಾಸವನ್ನು ತೆಗೆದುಕೊಳ್ಳುವದು ಶ್ರೇಯಸ್ಕರವಾದರೂ, ಬೇರೆ ಬೇರೆ ಜನರು ಬೇರೆ ಬೇರೆ ಕಾರಣಗಳಿಂದ ಸಂನ್ಯಾಸವನ್ನು ಆಶ್ರಯಿಸುವದು ಕಂಡುಬರುತ್ತದೆ. ಈ ದೃಷ್ಟಿಯಿಂದ ಶಾಸ್ತ್ರವು ಸಂನ್ಯಾಸವನ್ನು ನಾಲ್ಕು ತೆರನಾಗಿ ವಿಂಗಡಿಸುತ್ತದೆ: ೧. ವಿದ್ವತ್, ೨. ವಿವಿದಿಷಾ, ೩. ಮರ್ಕಟ, ೪. ಆತುರ. ತತ್ತ್ವಜ್ಞಾನನಿಷ್ಠನಾದವನು ವೈರಾಗ್ಯದಿಂದ ತೆಗೆದುಕೊಳ್ಳುವ ಸಂನ್ಯಾಸವು ''ವಿದ್ವತ್ ಸಂನ್ಯಾಸ''ವೆನಿಸುವದು. ಜನ್ಮಾಂತರಗಳ ಸಂಸ್ಕಾರವಿಲ್ಲದೆ ಈ ತರದ ನಿಜವಾದ ವೈರಾಗ್ಯವೂ ಜ್ಞಾನವೂ ಹುಟ್ಟುವದು ಶಕ್ಯವಿಲ್ಲ. ಇದೇ ಎಲ್ಲಕ್ಕೂ ಶ್ರೇಷ್ಠವಾದ ಸಂನ್ಯಾಸವು. ''ವಿವಿದಿಷಾ'' ಎಂದರೆ ''ವೇತ್ತುಂ ಇಚ್ಛಾ'', ಅಥವಾ ''ಪರಮಾತ್ಮನನ್ನು ತಿಳಿದುಕೊಳ್ಳುವ ಇಚ್ಛೆಯು.'' ಇನ್ನೂ ಪರಮಾತ್ಮ ಜ್ಞಾನವಾಗದಿರುವ ಸಾಧಕನು, ಪರಮಾತ್ಮನ ಜ್ಞಾನವಾಗಬೇಕೆಂಬ ಇಚ್ಛೆಯಿಂದ, ಜ್ಞಾನಿಗಳಾದ ಗುರುಗಳ ಕಡೆಗೆ ಹೋಗಿ, ವೇದಾಂತಗಳ ಅಭ್ಯಾಸದಿಂದಲೂ, ಅವುಗಳಲ್ಲಿ ಹೇಳಿದ ಸಾಧನ ಕ್ರಮಗಳಿಂದಲೂ, ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು ಕೃತಾರ್ಥರಾಗಬೇಕೆಂದು ಬಯಸಿ ತೆಗೆದುಕೊಳ್ಳುವ ಸಂನ್ಯಾಸಕ್ಕೆ ''ವಿವಿದಿಷಾ ಸಂನ್ಯಾಸ''ವೆಂದು ಹೆಸರು. ಮರ್ಕಟವೆಂದರೆ ಮಂಗ. ಪ್ರಾಪಂಚಿಕ ಅಡಚಣಿಗಳಿಗಾಗಲಿ, ಆಪತ್ತುಗಳಿಗಾಗಲಿ ಬೇಸತ್ತು ತೆಗೆದುಕೊಳ್ಳುವ ಸಂನ್ಯಾಸಕ್ಕೆ ''ಮರ್ಕಟ ಸಂನ್ಯಾಸ'' ವೆಂದು ಹೆಸರು. ಸಾಲಗಳ ಹೊರೆಯನ್ನು ತಾಳಲಾರದೆ, ಹೆಂಡಿರು ಮಕ್ಕಳೊಡನೆ ಬಡಿದಾಡಿ, ಆಸ್ತೇಷ್ಟರ ಮರಣದಿಂದುಂಟಾದ ಶೋಕದ ಭರದಲ್ಲಿ. ಅಥವಾ ಇದೇ ತರದ ಬೇರೆ ಪ್ರಸಂಗಗಳಲ್ಲಿ ತೆಗೆದುಕೊಳ್ಳುವ ಸಂನ್ಯಾಸವು ''ಮರ್ಕಟ ಸಂನ್ಯಾಸ''ವೆಂದು ಕರಿಸಿಕೊಳ್ಳುತ್ತದೆ. ಚಂಚಲತೆಯು ಮಂಗನ ಸ್ವಭಾವವಲ್ಲವೇ ? ಅದರಂತೆಯೇ ಈ ಸಂನ್ಯಾಸವಾದರೂ ತೀರ ಚಂಚಲವಾದುದೆಂಬದನ್ನು ತೋರಿಸಲಿಕ್ಕೆ ಇದನ್ನು ಮರ್ಕಟ ಸಂನ್ಯಾಸವೆಂದು ಕರೆಯುತ್ತಾರೆ. ಇಲ್ಲಿ ವೈರಾಗ್ಯವೆಂಬದು ಇರುವದೇ ಇಲ್ಲ. ಈ ತರದ ಸಂನ್ಯಾಸಿಗಳು ಆ ಆಶ್ರಮದಲ್ಲಿ ಬಹುದಿವಸ ನಿಲ್ಲಲಾರರು. ಆವರು ನಿಶ್ಚಯವಾಗಿಯೂ ಪತಿತರಾಗುವರು. ''ಆತುರ ಸಂನ್ಯಾಸ''ವೆಂದರೆ

ರೋಗಿಯು ಸಾಯುವ ಕಾಲದಲ್ಲಿ ತೆಗೆದುಕೊಳ್ಳುವ ಸಂನ್ಯಾಸವು. 'ಆತುರ' ನೆಂದರೆ 'ರೋಗಿ'ಯೆಂದು ಅರ್ಥವು. ಬದುಕುವ ಆಸೆಯಿಲ್ಲದ ಮನುಷ್ಯನು ಸಾಯುವ ಪೂರ್ವದಲ್ಲಿ ಸಂನ್ಯಾಸಿಯಾಗಿ ಸಾಯಬೇಕೆಂಬ ಇಚ್ಛೆಯಿಂದ ಈ ಸಂನ್ಯಾಸವನ್ನು ತೆಗೆದುಕೊಳ್ಳುವನು. ಜಡ್ಡಿನಿಂದ ಅವನು ಸತ್ತೇ ಹೋದರೆ, ಸಂನ್ಯಾಸದ ಸಂಸ್ಕಾರದ ಬಲದಿಂದ ಅವನಿಗೆ ಪುಣ್ಯಸಿಕ್ಕು, ಜನ್ಮಾಂತರದಲ್ಲಿ ಅವನಿಗೆ ಅದರ ಲಾಭ ಸಿಕ್ಕುವದು. ಅವನು ಆ ಜಡ್ಡಿನಿಂದ ನೆಟ್ಟಗಾದರೆ, ತಿರುಗಿ ಮನೆಗೆ ಹೋಗದೇ, ಸನ್ಯಾಸಧರ್ಮದ ನಿಯಮಗಳನ್ನು ಪರಿಪಾಲಿಸುತ್ತ ಬ್ರಹ್ಮಜ್ಞಾನಕ್ಕಾಗಿ ದುಡಿಯಬೇಕಾಗುವದು.

ವೈರಾಗ್ಯದೊಳಗೆ ಎಷ್ಟು ಸುಖವಿರುವದೆಂಬದು, ಪರಮಾತ್ಮನ ಪಾದ ಪದ್ಮಗಳ ಬಗ್ಗೆ ಯಾರ ಹೃದಯದಲ್ಲಿ ನಿಜವಾದ ಪ್ರೀತಿಯುಂಟಾಗಿರುವದೋ ಅವರಿಗೆ ಮಾತ್ರ ತಿಳಿಯಬಹುದಾದ ವಿಷಯವಾಗಿದೆ. ಯಾರ ಇಂದ್ರಿಯ-ಗಳು ಸುದೈವ ವಿಷಯ ಭೋಗಗಳನ್ನೇ ಅಪೇಕ್ಷಿಸುವವೋ, ಯಾರ ಮನಸು ಯಾವಾಗಲೂ ಸಂಸಾರೀ ಪದಾರ್ಥಗಳ ಚಿಂತನೆಯನ್ನೇ ಮಾಡುತ್ತಿರುವದೋ ಅವರಿಗೆ ವೈರಾಗ್ಯದ ಸುಖವು ಹೇಗೆ ಗೊತ್ತಾದೀತು ? ಯಾವನ ಮನಸು ಸಂಸಾರ ಭೋಗಗಳಿಂದ ವಿರಕ್ತವಾಗಿ ಮಹಾತ್ಯಾಗದ ಸಲುವಾಗಿ ಒಂದೇ ಸವನೆ ಚಡಪಡಿಸುತ್ತಿರುವದೋ, ಯಾರ ವೈರಾಗ್ಯವು ನೀರಿನ ಗುಳ್ಳೆಯಂತೆ ಕ್ಷಣಿಕವಾಗಿರದೆ ಸ್ಥಿರವಾಗಿರುವದೋ, ಅವನೇ ತ್ಯಾಗದ ಸುಖವನ್ನನುಭವಿಸಲಿಕ್ಕೆ ಉತ್ತಮನಾದ ಅಧಿಕಾರಿಯು. ಏನಾದರೊಂದು ಆವೇಶದಿಂದ ಯಾರು ವೈರಾಗ್ಯದ ದಾರಿಯನ್ನು ಹಿಡಿಯುವರೋ ಅವರಿಗೆ ಕೊನೆಗೆ ಪತನವು ಕಟ್ಟಿಟ್ಟದ್ದೇ. ಎಂತೆಯೇ ತ್ಯಾಗವು ವೈರಾಗ್ಯವಿಲ್ಲದೆ ಕೊನೆಯ ವರೆಗೆ ಬಾಳಲಾರದಂದು ಹೇಳುತ್ತಾರೆ.

ನಮ್ಮ ಚರಿತ್ರನಾಯಕರು ಜನ್ಮಸಿದ್ಧ ವಿರಕ್ತರು. ಅವರಿನ್ನೂ ತಾರುಣ್ಯದಲ್ಲಿರುವಾಗಲೇ ಪರಮಾತ್ಮನ ಕೃಪೆಯನ್ನು ಸಂಪಾದಿಸಿ ಕೃತಾರ್ಥರಾದವರು. ಎಂದಿಗೂ ವಿವಾಹದ ಗೊಂದಲಕ್ಕೇ ಬೀಳಬಾರದೆಂದು ನಿಶ್ಚಯಿಸಿದವರು. ಆದರೆ ಇಚ್ಛೆಯಿಲ್ಲದಿದ್ದರೂ ಪ್ರಾರಬ್ಧವೇಗದಿಂದ ಗೃಹಸ್ಥಾಶ್ರಮಿಗಳಾದವರು. ಸುದೈವದಿಂದ ಆ ಎಲ್ಲ ಅಡಚಣೆಗಳೂ ಈಗ ದೂರಾಗಿದ್ದವು.

ಅವರನ್ನಿನ್ನು ಸಂನ್ಯಾಸದಿಂದ ತಡೆಯುವವರಾರು ? ಅವರು ವಿದ್ಯುತ್ ಸಂನ್ಯಾಸಕ್ಕಾಗಿ ಒಂದೇ ಸವನೆ ಚಡಪಡಿಸುತ್ತಿದ್ದರು.

ಮಹಾರಾಜರು ಸಂನ್ಯಾಸದ ವಿಚಾರವನ್ನು ಎಲ್ಲಕ್ಕೂ ಮೊದಲು ತಮ್ಮ ಸ್ನೇಹಿತರಾದ ಶ್ರೀ ಬಳವಂತರಾವ ಖೇಡಬಾಳ ಎಂಬವರ ಮುಂದೆ ತೆಗೆದರು. ಬಳವಂತರಾಯರು ಇಂಗ್ಲಿಷ ಶಿಕ್ಷಣವನ್ನು ಕಲಿತು ದೊಡ್ಡ ಸದವಿಗೆ ಏರಿದವರು. ಅವರ ಆ ಕಾಲಕ್ಕೆ ಬೆಳಗಾಂವಿಯ ಕಲೆಕ್ಟರರಿಗೆ ಚಿಟಣೀಸರಾಗಿದ್ದರು. ಅವರು ಇಂಗ್ಲೀಷ ಕಲಿತವರಾಗಿದ್ದರೂ ವೈದಿಕ ಧರ್ಮದಲ್ಲಿ ವಿಶೇಷ ಆಸಕ್ತಿಯುಳ್ಳವರೂ ಭಗವದ್‌ಭಕ್ತರೂ ಆಗಿದ್ದರು. ವೇಳೆ ಸಿಕ್ಕಾಗೆಲ್ಲ ಅವರು ದೇವರ ಪೂಜೆ, ಧ್ಯಾನ, ಭಜನ, ಜಪ ಮೊದಲಾದವುಗಳಲ್ಲಿ ತೊಡಗುತ್ತಿದ್ದರು. ಮಹಾರಾಜರದೂ ಅವರದೂ ಪರಸ್ಪರ ವಿಶ್ವಾಸವೂ ಅತ್ಯಧಿಕವಾಗಿತ್ತು. ಅವರು ಮೊದಮೊದಲು ಮಹಾರಾಜರ ಮಾತಿಗೆ ಒಪ್ಪಿಗೆಯನ್ನು ಕೊಡಲಿಲ್ಲ. ಮಹಾರಾಜರು ಇಷ್ಟರಲ್ಲಿ ಸಂನ್ಯಾಸವನ್ನು ತಕ್ಕೊಳ್ಳುವದು ಯೋಗ್ಯವಾಗಲಾರದೆಂದು ಅವರ ಅಭಿಪ್ರಾಯವಾಗಿತ್ತು. ಆವರು ತಮ್ಮ ಆಂಬೋಣವನ್ನು ಸ್ಪಷ್ಟವಾಗಿಯೇ ಹೇಳಿಬಿಟ್ಟರು:— ''ನೀವೀಗ ೩೦—೩೨ ವರುಷದವರಾಗಿರುವಿರಿ. ನೀವಿನ್ನು ಜಗತ್ತಿನಲ್ಲಿ ಬಹಳ ದಿವಸ ಬಾಳಬೇಕಾಗಿದೆ. ಸಂನ್ಯಾಸವೆಂದರೆ ಸಾಮಾನ್ಯ ಮಾತಲ್ಲ. ಎಂಥೆಂಥವರೂ ಅಕಾಲದಲ್ಲಿ ಸಂನ್ಯಾಸ ಸ್ವೀಕರಿಸಿ ಪಶ್ಚಾತ್ತಾಪ ಪಡುವದನ್ನು ನಾವು ನೋಡುತ್ತೇವೆ. ಒಮ್ಮೆ ಸಂನ್ಯಾಸ ಕೈಕೊಂಡ ಮೇಲೆ ಹೆಜ್ಜೆಯನ್ನು ತಿರುಗಿಸಲಿಕ್ಕೆ ಬರುವಂತಿಲ್ಲ. ಸಂಸಾರದ ಮೋಹವು ಸುಲಭವಾಗಿ ಹೋಗತಕ್ಕುದಲ್ಲ. ನಿಮ್ಮಲ್ಲೀಗ ಹುಟ್ಟಿದ ವೈರಾಗ್ಯವು ಕೊನೆಯ ವರೆಗೆ ನಿಂತೀತೆಂಬ ನಿಯಮವಿಲ್ಲ. ಆದುದರಿಂದ ನೀವೀಗಲೇ ಸಂನ್ಯಾಸ ತಕ್ಕೊಂಡರೆ ಮುಂದೆ ಪಶ್ಚಾತ್ತಾಪ ಪಡಬೇಕಾದೀತು. ಯತಿಧರ್ಮದ ಆಚರಣೆಯು ಬಹಳ ಕಠಿಣವಾಗಿದೆ. ಅದು ನಿಮ್ಮಿಂದ ಸರಿಯಾಗಿ ಪಾಲಿಸಲ್ಪಡಬಹುದೆಂದು ಹೇಳುವದು ದುಸ್ತರವಾಗಿದೆ. ಕಾರಣ ಸದ್ಯದ ಮಟ್ಟಿಗಾದರೂ ನೀವು ಈ ವಿಚಾರವನ್ನು ಬಿಟ್ಟು ಬಿಡುವದು ಒಳಿತು ''

ಆದರೆ ಮಹಾರಾಜರು ದೃಢಸಂಕಲ್ಪರಾಗಿದ್ದರು. ''ನಾನದನ್ನೆಲ್ಲ ಸರಿಯಾಗಿಯೇ ವಿಚಾರಮಾಡಿದ್ದೇನೆ. ಏನು ಬೇಕಾದ್ದಾದರೂ ಸಂನ್ಯಾಸವನ್ನು

ತೆಗೆದುಕೊಳ್ಳುವದೇ ಯೋಗ್ಯವೆಂದು ನಾನು ನಿರ್ಣಯಿಸಿದ್ದೇನೆ ಎಲ್ಲ ರೀತಿಯಿಂದಲೂ ಈ ವಿಷಯವಲ್ಲಿ ನನ್ನ ದೃಢನಿಶ್ಚಯವಾಗಿದೆ'' ಎಂದು ಮಹಾರಾಜರು ಬಳವಂತರಾಯರಿಗೆ ಖಂಡಿತವಾಗಿ ಹೇಳಿದರು. ಬಳವಂತರಾಯರಿಗೆ ಮಹಾರಾಜರ ಮನೋದಾರ್ಢ್ಯವನ್ನು ನೋಡಿ ಸಂತೋಷವಾಯಿತು. ಸಂನ್ಯಾಸವನ್ನು ಕೈಕೊಳ್ಳುವದೇ ಶ್ರೇಷ್ಠವಾದ ಮಾತೆಂಬದು ಅವರಿಗೂ ಸಮ್ಮತವಿತ್ತು. ಆದರೆ ಮಹಾರಾಜರದು ಇನ್ನೂ ಚಿಕ್ಕ ವಯಸ್ಸೆಂದು ಅವರು ಹಿಂದೆ ಮುಂದೆ ನೋಡುತ್ತಿದ್ದರು. ಆದಕ್ಕಾಗಿ ಅವರು ಈ ಮಾತಿನ ಕೊನೆಯ ನಿರ್ಣಯಕ್ಕಾಗಿ ಬೇರೊಂದು ಹಂಚಿಕೆಯನ್ನು ಸೂಚಿಸಿದರು:— ''ನೀವೀಗ ಇಡಬೇಕೆಂಬ ಹೆಜ್ಜೆಯು ಬಹಳ ಮಹತ್ತ್ವದ್ದಾಗಿದೆ. ಆದರ ನಿರ್ಣಯವನ್ನು ನಾವೇ ನಮ್ಮ ಸಂಕುಚಿತ ಬುದ್ಧಿಯ ಬಲದಿಂದ ಮಾಡುವದಕ್ಕಿಂತ ಅದರ ಹೊರೆಯನ್ನು ಸಂಪೂರ್ಣವಾಗಿ ದೇವರ ಮೇಲೆಯೇ ಹಾಕುವದೊಳಿತು ನಿಮ್ಮ ಸಂನ್ಯಾಸಕ್ಕೆ ಪರಮಾತ್ಮನ ಅಪ್ಪಣೆ ದೊರೆತುಬಿಟ್ಟರೆ, ಮುಂದೆ ಯಾವ ಸಂಕೋಚವನ್ನೂ ಹಿಡಿಯುವ ಕಾರಣವಿಲ್ಲ. ಆದುದರಿಂದ ನೀವು ದಿನಾಲೂ ಮಲಗುವ ಮೊದಲು ಈ ವಿಷಯವಾಗಿ ಭಗವಂತನನ್ನು ಪ್ರಾರ್ಥಿಸಿರಿ. ಅವನು ನಿಮ್ಮ ಹೊರೆಯನ್ನು ಕೇಳಿ ಕೂಡಲೇ ಆಜ್ಞೆ ಮಾಡಬಹುದು. ಅವನ ಆಜ್ಞೆಯಂತೆ ನಡೆದರಾಯಿತು. ಇದೇ ಸರಿಯಾದ ಮಾರ್ಗವೆಂದು ನನಗೆ ತೋರುತ್ತದೆ.''

ಬಳವಂತರಾಯರ ಈ ಸೂಚನೆಯು ಮಹಾರಾಜರ ಮನಸ್ಸಿಗೂ ಬಂತು. ಆ ಪ್ರಕಾರ ಮಹಾರಾಜರು ಶ್ರೀ ಚಿದಂಬರನಿಗೆ ದಿನಾಲೂ ಸ್ವಾರ್ಥನೆ ಮಾಡಿ ಮಲಗಿಕೊಳ್ಳಹತ್ತಿದರು. ತುಸು ದಿವಸಗಳಲ್ಲಿಯೇ ಅವರಿಗೆ ಸ್ವಪ್ನ ದೃಷ್ಟಾಂತವೂ ಆಯಿತು. ಅವರ ಕನಸಿನಲ್ಲಿ ಒಬ್ಬ ಭವ್ಯ ಯತಿಗಳು ಉಚ್ಚಾಸನದ ಮೇಲೆ ಕುಳಿತಿದ್ದರು. ಅವರ ಎದುರಿಗೆ ಸ್ವಲ್ಪ ಅಂತರದ ಮೇಲೆ ಅವೇ ಸಂನ್ಯಾಸವನ್ನು ಸ್ವೀಕರಿಸಿದ ಮತ್ತೊಬ್ಬ ಯತಿಗಳು ಅವರ ಸೇವೆಗಾಗಿ ಕೈಜೋಡಿಸಿಕೊಂಡು ನಿಂತಿದ್ದರು. ಈ ಸ್ವಪ್ನದಿಂದ ತಮ್ಮ ಸಂನ್ಯಾಸಕ್ಕೆ ಆಪ್ಪಣೆಯು ಸಿಕ್ಕಂತಾಯಿತೆಂದು ಮಹಾರಾಜರು ಭಾವಿಸಿದರು ಮತ್ತೂ ಒಮ್ಮೆ ಮಹಾರಾಜರಿಗೆ ಇದೇ ತರದ ದೃಷ್ಟಾಂತವಾಯಿತು. ಆದರಿಂದ ಮಹಾರಾಜರ ಎಲ್ಲ ಸಂಶಯವೂ ದೂರಾಯಿತು. ದೃಷ್ಟಾಂತಗಳ ಸಂಗತಿಯನ್ನು ಕೇಳಿ ಬಳವಂತರಾಯರಿಗೂ

ಆನಂದವಾಯಿತು. ಮಹಾರಾಜರು ಸಂನ್ಯಾಸ ಗ್ರಹಣ ಮಾಡಬಹುದೆಂದು ಅವರೂ ಒಪ್ಪಿಗೆ ಕೊಟ್ಟರು.

ಹೀಗೆ ದೈವವು ಅನುಕೂಲವಾಗುತ್ತ ನಡೆದರೂ, ಬಂಧುಗಳೆಂದೆನಿಸಿ ಕೊಳ್ಳುವವರು ಮಾತ್ರ ಮಹಾರಾಜರಿಗೆ ಮತ್ತೆ ಕಾಲ್ತೊಡಕಾಗಿ ನಿಂತರು. ಪಾಪ! ಅವರದಾದರೂ ಏನು ತಪ್ಪು? ಅವರಿಗೆ ಪ್ರಾಮಾಣಿಕವಾಗಿಯೇ ಯಾಗೆನಿಸುತ್ತಿತ್ತು! ತಾರುಣ್ಯದಲ್ಲಿ ಮಹಾರಾಜರ ಮೇಲೆ ಪತ್ನೀವಿಯೋಗ ದಂಥ ಕಠಿಣ ಪ್ರಸಂಗ ಬಂದುದಕ್ಕಾಗಿ ಅವರಿಗೆ ನಿಜವಾಗಿಯೂ ದುಃಖವಾಗಿತ್ತು. ಅವರು ಆದಷ್ಟು ತೀವ್ರ ಮಹಾರಾಜರ ಈ ದುಃಖವನ್ನು ಕಡಿಮೆ ಮಾಡಬೇಕೆಂದು ಹಂಬಲಿಸುತ್ತಿದ್ದರು. ಮಹಾರಾಜರ ಮೇಲಿನ ಅವರ ಪ್ರೇಮವೂ ಅಕೃತ್ರಿಮವಾಗಿತ್ತು. ಆದುದರಿಂದ ನಾರಾಯಣಭಟ್ಟ ಮೊದಲಾದವರು "ರಾಮನಿಗೆ ಮತ್ತೆ ಬೇಗನೇ ಲಗ್ನಮಾಡಬೇಕು. ಇಲ್ಲವಾದರೆ ಅವನು ದೇವರು ದೇವರೆಂದು ವ್ಯರ್ಥವಾಗಿ ಕಾಲಹರಣ ಮಾಡುವನು. ನೌಕರಿಯ ಕಡೆಗೂ ಅವನು ಮನಸ್ಸು ಹಾಕಲಿಲ್ಲ" ಎಂದು ನಿಶ್ಚಯಿಸಿ ಕನ್ನೆಯನ್ನು ಶೋಧಿಸಹತ್ತಿದರು. ಇದೇ ಕಾಲಕ್ಕೆ ಕರ್ಮಧರ್ಮ ಸಂಯೋಗದಿಂದ ನೇಸರಿಗಿಯ ವೇ. ನರಹರಿಭಟ್ಟರೆಂಬವರು ಉಪವರಳಾದ ತಮ್ಮ ಮಗಳ ಸಲುವಾಗಿ ವರನನ್ನು ಶೋಧಿಸಬೇಕೆಂದು ಬೆಳಗಾಂವಿಗೇ ಬಂದು ಬಿಟ್ಟರು. ಅವರಿಗೆ ಅಲ್ಲಿ ಮಹಾರಾಜರ ಹೆಂಡತಿಯು ಮರಣ ಹೊಂದಿದ ಸುದ್ದಿಯು ತಿಳಿಯಿತು. ಅವರು ಕೂಡಲೇ ನಾರಾಯಣಭಟ್ಟರಿಗೆ ಭೆಟ್ಟಿಯಾಗಿ, ತಮ್ಮ ಮಗಳನ್ನು ಮಹಾರಾಜರಿಗೆ ಲಗ್ನ ಮಾಡಿಕೊಳ್ಳಬೇಕಂದು ಬೇಡಿಕೊಂಡರು. ಇದೇ ಮಾತನ್ನೇ ನಿರೀಕ್ಷಿಸುತ್ತಿದ್ದ ನಾರಾಯಣ ಭಟ್ಟರು ಈ ಮಾತಿಗೆ ಕೂಡಲೇ ಸಮ್ಮತಿಸಿದರು.

ಬಂಧುಗಳಿಗೆ ಮಹಾರಾಜರು ಅನೇಕ ಪರಿಯಿಂದ ತಿಳಿಸಿ ಹೇಳಿದರು. ಆದರೆ ಇವರು ಏನು ಮಾಡಿದರೂ ಕೇಳಲೊಲ್ಲರು. ತಮ್ಮ ಹಿರಿಯತನದ ಮೇಲೂ ಅವರು ಭಾರ ಹಾಕಿ, ಮಹಾರಾಜರು ಲಗ್ನ ಮಾಡಿಕೊಳ್ಳಲೇ ಬೇಕೆಂದು ಹಟಹಿಡಿದರು. ಸಾಮೋಪಚಾರದ ರೀತಿನೀತಿಗಳೆಲ್ಲ ಮುಗಿದು ಹೋದವು. ಅವುಗಳಿಂದ ಮಹಾರಾಜರ ಬಂಧುಗಳ ಮೇಲೆ ಏನೂ ಪರಿಣಾಮ ವಾಗಲಿಲ್ಲ. ಮಹಾರಾಜರ ಅಂತಃಕರಣವಾದರೂ ಕೋಮಲವಾದುದು.

ಹಿರಿಯರಿಗೆ ನಿಷ್ಠುರವಾಗಿ ಮಾತಾಡುವದು ಅವರಿಗೆ ಗೊತ್ತೇ ಇರಲಿಲ್ಲ. ಕಾರಣ ಮಹಾರಾಜರೇ ಕೊನೆಗೆ ಸೋಲಬೇಕಾಯಿತು. ''ಇನ್ನು ಇವರ ಸಂಗಡ ಮಾತಾಡಿ ಪ್ರಯೋಜನವಿಲ್ಲ. ಪೋರೆಯನ್ನು ಹರಿದುಕೊಳ್ಳುವದಕ್ಕಿಂತ, ಇವರ ಮಾತಿಗೀಗ ಒಪ್ಪಿಗೆ ಕೊಟ್ಟಂತೆ ಮಾಡಿ, ನನ್ನ ದಾರಿಯನ್ನು ನಾನು ನೋಡಿಕೊಳ್ಳಬೇಕು. ಏನಾದರೂ ಹಂಚಿಕೆ ಮಾಡಿ ಇವರ ಕೈಯೊಳಗಿಂದ ಪಾರಾಗಬೇಕಲ್ಲದೆ, ಇವರೊಡನೆ ಈಗ ಖಂಡತುಂಡವಾಗಿ ಮಾತಾಡುವದರಲ್ಲಿ ಅರ್ಥವಿಲ್ಲ'' ಎಂದು ಮಹಾರಾಜರು ಮನಸ್ಸಿನಲ್ಲಿ ಆಲೋಚಿಸಿದರು. ಅದರಂತೆ ಅವರು ಅಣ್ಣಂದಿರ ಆಗ್ರಹಕ್ಕೆ ಸಮ್ಮತಿಸಿದವರಂತೆ ಮಾಡಿ ''ಒಳ್ಳೆಯದು. ನಿಮ್ಮೆಲ್ಲರ ಇಚ್ಛೆಯಿದ್ದರೆ ಹಾಗೇ ಆಗಲಿ. ನಾನು ಮತ್ತೆ ಲಗ್ನ ಮಾಡಿಕೊಂಡು ಸಂಸಾರ ಮಾಡುವೆನು. ಆಯಿತೋ ಇಲ್ಲವೋ ?'' ಎಂದು ಹೇಳಿದರು. ಇದರಿಂದ ನಾರಾಯಣಭಟ್ಟ ಮೊದಲಾದವರಿಗೆ ಅಪಾರವಾದ ಆನಂದವಾಯಿತು. ಅವರು ಆ ಪ್ರಕರಣವನ್ನು ಅಷ್ಟಕ್ಕೆ ಮುಗಿಸದೆ ಕನ್ನೆಯನ್ನು ನೋಡಲಿಕ್ಕೆ ಕೂಡಲೇ ನೇಸರಿಗಿಗೆ ಹೋಗಬೇಕೆಂದು ಆಗ್ರಹ ಮಾಡಹತ್ತಿದರು. ಮಹಾರಾಜರು ನಿರುಪಾಯದಿಂದ ಅದಕ್ಕೂ ಒಪ್ಪಿಕೊಂಡರು. ನೇಸರಿಗೆಯ ವರೆಗೆ ಹೋಗಿ ಕನ್ಯಾ ಪರೀಕ್ಷೆಯ ಫಾರ್ಸಿನಲ್ಲಿ ಸಹ ಮಹಾರಾಜರು ಭಾಗ ತೆಗೆದುಕೊಂಡರು. ಕೇವಲ ತಮ್ಮ ಅಣ್ಣಂದಿರ ಸಲುವಾಗಿ ಮಹಾರಾಜರು ಇದೆಲ್ಲವನ್ನೂ ಸಹನೆ ಮಾಡಬೇಕಾಯಿತು. ಕನ್ನೆಯನ್ನು ನೋಡುವ ಕೆಲಸ ಮುಗಿದ ಮೇಲೆ ''ಏನೆನ್ನುವಿರಿ, ಹೇಳಿರಿ. ಹುಡುಗೆಯು ದೊಡ್ಡವಳಾದುದರಿಂದ ಲಗ್ನವನ್ನು ಕೂಡಲೇ ಮಾಡಬೇಕಾಗಿದೆ''ಯೆಂದು ನರಹರಿಭಟ್ಟರು ಬೇಡಿಕೊಳ್ಳಹತ್ತಿದರು. ಮಹಾರಾಜರ ಮೇಲೆ ದೊಡ್ಡ ಆಪತ್ತೇ ಬಂತು. ಎಂದೂ ಕಪಟವನ್ನರಿಯದ ಅವರು ಮತ್ತಿಷ್ಟೂ ಕಪಟವನ್ನು ಆಚರಿಸಬೇಕಾಗಿ ಬಂತು. ಅವರು ಯಾವುದಕ್ಕೂ ಹೆದರದೆ ''ಕನ್ನೆಯು ಮನಸ್ಸಿಗೆ ಬಂದಳು. ಬೆಳಗಾಂವಿಗೆ ಹೋಗಿ ಮುಂದಿನ ಸಂಗತಿಗಳ ಬಗ್ಗೆ ನಿಮಗೆ ಪತ್ರ ಬರೆಯುವೆನು'' ಎಂದು ಹೇಳಿ, ಆ ಸಂಕಟದೊಳಗಿಂದ ಒಮ್ಮೆ ಪಾರಾಗಿ ಹೋಗಬೇಕಾದರೆ ಸಾಕಾಗಿ ಹೋಯಿತು.

ಮಹಾರಾಜರು ನೇಸರಿಗೆಯಿಂದ ಬೆಳಗಾಂವಿಗೆ ಬಂದ ಮರುದಿನವೇ ನೆರೆಮನೆಯಲ್ಲಿ ಸಾಧುವೊಬ್ಬನು ಬಂದಿಳಿದನು. ಮಹಾರಾಜರೂ ಅವರ ಅಣ್ಣಂದಿರೂ ಆ ಸಾಧುವಿನ ದರುಶನಕ್ಕೆಂದು ಹೋದರು. ಆಗ ಮಾತಿಗೆ ಮಾತು ಹೊರಟು, ಮಹಾರಾಜರು ತಮ್ಮ ಸಂಗತಿಗಳನ್ನೆಲ್ಲ ಅವರ ಮುಂದಿಟ್ಟು— ''ಸ್ವಾಮೀ, ನನ್ನ ಹೆಂಡತಿಯು ಸತ್ತು ತುಸು ದಿವಸಗಳಾದವು. ನನ್ನ ಮನಸ್ಸಿನಲ್ಲಿ ಲಗ್ನ ಮಾಡಿಕೊಳ್ಳದೇ ಸಂನ್ಯಾಸ ತೆಗೆದುಕೊಳ್ಳಬೇಕೆಂದಿದೆ. ಆದರೆ ನನ್ನ ಅಣ್ಣಂದಿರು ಮತ್ತೆ ನನ್ನನ್ನು ಸಂಸಾರದಲ್ಲಿ ಸೇರಿಸಬೇಕೆಂದು ಆಗ್ರಹಪಡುತ್ತಾರೆ. ಇಷ್ಟರೊಳಗಾಗಿ ಒಂದು ಕನ್ನೆಯನ್ನೂ ಕೂಡ ನೋಡಿ ಬಂದದ್ದಾಗಿದೆ. ಈ ಪ್ರಸಂಗದಲ್ಲಿ ಏನು ಮಾಡಬೇಕೆಂಬದು ತಿಳಿಯದಂತಾಗಿದೆ. ಈ ವಿಷಯದಲ್ಲಿ ತಮ್ಮ ಅಂಬೋಣವೇನೆಂಬದನ್ನು ತಿಳಿಸಿದರೆ ಕೃತಜ್ಞನಾಗುತ್ತೇನೆ.'' ಸಾಧುವು ನಿಜವಾದ ಸಾಧುವಾಗಿದ್ದನು. ಮಹಾರಾಜರ ಆಪತ್ತನ್ನು ದೂರ ಮಾಡುವದಕ್ಕಾಗಿಯೇ ಅವನಲ್ಲಿಗೆ ಬಂದಿದ್ದನೇನೋ ! ಅವನು ಮಹಾರಾಜರ ಮೋರೆಯ ಮೇಲೆ ಉಕ್ಕುತ್ತಿರುವ ವೈರಾಗ್ಯವನ್ನೂ, ಭಕ್ತಿಯನ್ನೂ, ಧಾರ್ಮಿಕ ತೇಜಸ್ಸನ್ನೂ ನೋಡಿದ ಕೂಡಲೇ ಉತ್ತರ ಕೊಟ್ಟನು:— ''ನೀವು ಗೃಹಸ್ಥಾಶ್ರಮವನ್ನು ಸ್ವೀಕರಿಸಿದರೆ ನಿಮ್ಮ ಜನನೀ ಜನಕರು ಮಾತ್ರ ಉದ್ಧಾರವಾಗುವರು. ಆದರೆ ಸಂನ್ಯಾಸ ಗ್ರಹಣದಿಂದ ನಿಮ್ಮ ನಾಲ್ವತ್ತೆರಡು ಕುಲಗಳೂ ಉದ್ಧಾರವಾಗುವವು.'' ಮುಂದೆ ಆ ಸಾಧುವು ನಾರಾಯಣ ಭಟ್ಟ ಮೊದಲಾದವರಿಗೆ ಬೋಧಿಸಿ, ನೀವು ಮಹಾರಾಜರ ಸಂನ್ಯಾಸಕ್ಕೆ ಅಡ್ಡ ಬರಲಾಗದೆಂದು ಆಜ್ಞೆ ಮಾಡಿದನು. ಆ ಮಾತು ನಾರಾಯಣಭಟ್ಟರ ಮನಸ್ಸಿಗೆ ಬರಲಿಲ್ಲೆಂಬದು ನಿಜ. ಆದರೆ ಆ ವೇಳೆಯ ಮಟ್ಟಿಗಾದರೂ ಅವರು ನಿರುಪಾಯರಾಗಿ ಸುಮ್ಮನಿರಬೇಕಾಯಿತು. ಸಾಧುವಿನ ಮಾತಿನಿಂದ ಮಹಾರಾಜರಿಗೆ ಮಾತ್ರ ಉತ್ತೇಜನ ಸಿಕ್ಕಂತಾಯಿತು.

ಮಹಾರಾಜರ ಸಂನ್ಯಾಸದ ಸಂಕಲ್ಪವನ್ನು ಕೇಳಿ ಅವರ ಶಿಷ್ಯಪರಿವಾರಕ್ಕೆಲ್ಲ ಆನಂದವಾಯಿತು. ವಾಜೀಂದ್ರ, ಕಬೇರ ಮತ್ತು ನಾಗೂಬಾಯಿ

ಮೊದಲಾದವರು ಈ ಸುದ್ದಿಯಿಂದ ಪುಲಕಿತರಾದರು. ಮಹಾರಾಜರು ಲಗ್ನವಾದರೆ, ಅವರು ಯಾವ ಊರೊಳಗಿರುವರೋ ಅವರಿಗೆ ಮಾತ್ರ ಅವರ ಸಮಾಗಮದ ಲಾಭ ಸಿಕ್ಕುವದೆಂದೂ, ಸಂನ್ಯಾಸ ತೆಗೆದುಕೊಂಡರೆ ಎಲ್ಲ ಜನರಿಗೂ ಅವರ ಸಮಾಗಮವು ದೊರೆಯುವದೆಂದೂ ಅವರು ಯಥಾರ್ಥವಾಗಿ ನಂಬಿದ್ದರು. ಮಹಾರಾಜರಂಥವರು ಗಾರ್ಹಸ್ಥ್ಯದ ಬಂಧನದೊಳಗೆ ಸಿಕ್ಕಿಬಿದ್ದರೆ ಜಗತ್ತಿಗೆ ಅಪಾರವಾದ ಹಾನಿಯಾಗುವದೆಂದು ಶ್ರೀ ವಾಜೀಂದ್ರರ ಅಭಿಪ್ರಾಯವಾಗಿತ್ತು. ಈ ಮಾತು ಸುಳ್ಳಲ್ಲವೆಂಬದು ವಾಚಕರಿಗೂ ಹೊಳೆಯುವಂತಿದೆ.

———

೨ ಸಂನ್ಯಾಸದ ಪರೀಕ್ಷೆ

ಬೌದ್ಧಧರ್ಮದ ಅತಿಪ್ರಬಲವಾದ ಆಘಾತಗಳಿಂದ ಶಿಥಿಲಗೊಂಡ ವೈದಿಕ ಧರ್ಮವನ್ನು ಪುನರುಜ್ಜೀವನಗೊಳಿಸಿ, ಅದಕ್ಕೆ ಸುವ್ಯವಸ್ಥಿತ ರೂಪವನ್ನು ಕೊಟ್ಟವರಲ್ಲಿ ಶ್ರೀ ಮಚ್ಛಂಕರ ಭಗವತ್ಪಾದರವರು ಪ್ರಮುಖರು. ಅವರು ವೈದಿಕ ಧರ್ಮದ ಅನೇಕ ಅಂಗಗಳನ್ನು ಸಂಸ್ಕಾರಗೊಳಿಸಿದಂತೆ, ಸಂನ್ಯಾಸಾಶ್ರಮವನ್ನಾದರೂ ಶಾಸ್ತ್ರಶುದ್ಧವಾದ ತಳಹದಿಯ ಮೇಲಿರಿಸಿ ಪೂರ್ಣಗೊಳಿಸಿದರು ಇಷ್ಟೇ ಅಲ್ಲದೆ, ವೈದಿಕ ಧರ್ಮವೂ, ಅದರ ಅಂಗವಾದ ಸಂನ್ಯಾಸ ಸಂಸ್ಥೆಯೂ ಚಿರಕಾಲ ಬದುಕಿ ಬೆಳೆಯಬೇಕೆಂಬ ಇಚ್ಛೆಯಿಂದ ಹಿಂದುಸ್ಥಾನದ ನಾಲ್ಕೂ ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು ಉತ್ತರದಲ್ಲಿ ಬದರಿಕಾಶ್ರಮದೊಳಗೆ ಜ್ಯೋತಿರ್ಮಠವನ್ನು ಕಟ್ಟಿಸಿ, ಧರ್ಮಪರಂಪರೆಯನ್ನು ನಡಿಸಿಕೊಂಡು ಹೋಗುವದಕ್ಕಾಗಿ ಅಲ್ಲಿ ಶ್ರೀ ತೋಂಟಕಾಚಾರ್ಯರನ್ನು ನಿಯಮಿಸಿದರು. ಆದರಂತೆಯೇ ಪೂರ್ವ ದಿಕ್ಕಿನೊಳಗೆ ಜಗನ್ನಾಥಪುರಿಯಲ್ಲಿ ಗೋವರ್ಧನ ಪೀಠವನ್ನು ರಚಿಸಿ, ಧರ್ಮರಕ್ಷಣೆಯ ಭಾರವನ್ನು ಶ್ರೀ ಹಸ್ತಾಮಲಕರಿಗೆ ಒಪ್ಪಿಸಿದರು. ಹಾಗೆಯೇ ಪಶ್ಚಿಮ ದಿಕ್ಕಿನಲ್ಲಿ ದ್ವಾರಕಾಪಟ್ಟಣದೊಳಗೆ ಶಾರದಾಮಠವನ್ನು ಏರ್ಪಡಿಸಿ, ಅಲ್ಲಿ ಶ್ರೀ ಪದ್ಮಪಾದರಿಗೆ ಧರ್ಮಾಧಿಕಾರವನ್ನು ವಹಿಸಿಕೊಟ್ಟರು. ನಾಲ್ಕನೆಯದಾದ ದಕ್ಷಿಣ ದಿಕ್ಕಿನಲ್ಲಿ ಶೃಂಗಗಿರಿಯೊಳಗೆ ಶ್ರೀ ಶಾರದಾಂಬೆಯ ಮಠವನ್ನು ಪ್ರಸ್ಥಾಪಿಸಿ, ಅಲ್ಲಿ ವೈದಿಕ ಧರ್ಮಸಾಮ್ರಾಜ್ಯವನ್ನು ನೆರವೇರಿಸಿಕೊಂಡು ಹೋಗುವದಕ್ಕಾಗಿ ಶ್ರೀ ಸುರೇಶ್ವರಾಚಾರ್ಯರನ್ನು ಪಟ್ಟಕ್ಕೆ ಕೂಡಿಸಿದರು.

ಸದ್ಯಕ್ಕೆ ಭಾರತದಲ್ಲಿ ರೂಢವಾಗಿರುವ ದಶವಿಧ ಸಂನ್ಯಾಸಿಗಳೆಲ್ಲ, ಆಚಾರ್ಯರಿಂದ ಏರ್ಪಟ್ಟಿರುವ ಈ ನಾಲ್ಕು ಮಠಗಳೇ ಮೂಲವು.

ವಿಧಿಪೂರ್ವಕವಾಗಿ ಆಶ್ರಮವನ್ನು ಸ್ವೀಕರಿಸಿದ ಪ್ರತಿಯೊಬ್ಬ ಸಂನ್ಯಾಸಿಯೂ ತನ್ನ ''ಯೋಗಪಟ್ಟ''ವನ್ನು ಹೇಳಬೇಕಾಗುತ್ತದೆ. ಎಂದರೆ ತನ್ನ ಸಂಪ್ರದಾಯವು ಯಾವ ಮಠದ ಪರಂಪರೆಗೆ ಹೊಂದಿಕೊಂಡಿರುವದು—ಎಂಬದನ್ನು ಅವನು ಅರಿತುಕೊಳ್ಳಬೇಕಾಗುತ್ತದೆ. ಈ ನಾಲ್ಕೂ ಮಠಗಳಲ್ಲಿ ಪ್ರತಿಯೊಂದಕ್ಕೂ ಬೇರೆ ಬೇರೆ ದೇವ ದೇವತೆಗಳನ್ನೂ, ಬೇರೆ ಬೇರೆ ಆಶ್ರಮ ನಾಮ ಮೊದಲಾದವುಗಳನ್ನೂ ಕಲ್ಪಿಸಿ ಕೊಡಲಾಗಿದೆ. ಆಶ್ರಮ ಸ್ವೀಕಾರದ ಕಾಲಕ್ಕೆ ತತ್ತ್ವೋಪದೇಶ ರೂಪವಾದ ಮಹಾ ವಾಕ್ಯವನ್ನೂ ಹೇಳಿ ಕೊಡಬೇಕಾಗುತ್ತದಷ್ಟೇ ? ನಾಲ್ಕೂ ಮಠಗಳಿಗೆ ಈ ಮಹಾ ವಾಕ್ಯಗಳೂ ಬೇರೆ ಬೇರೆಯಾಗಿವೆ. ಒಂದೊಂದು ಮಠಕ್ಕೆ ಒಂದೊಂದು ವೇದದ ಮಹಾ ವಾಕ್ಯವು ಗ್ರಾಹ್ಯವಾಗಿದೆ. ಈ ಎಲ್ಲ ಸಂಗತಿಗಳನ್ನು ಸೂಚಿಸಲಿಕ್ಕೆಂದು ಬೇರೆ ಬೇರೆ ಯತಿಗಳ ಹೆಸರಿನ ಕೊನೆಗೆ ಬೇರೆ ಬೇರೆ ಉಪಪದಗಳನ್ನು ಜೋಡಿಸುವ ವಾಡಿಕೆಯಿದೆ. ದಶವಿಧ ಸಂನ್ಯಾಸಿಗಳ ಸಲುವಾಗಿ ಹತ್ತು ನಾಮಗಳು ಪ್ರಸಿದ್ಧವಾಗಿವೆ. ಅವುಗಳನ್ನು ಕೆಳಗಿನ ಸಾಂಪ್ರದಾಯಿಕ ಶ್ಲೋಕದಿಂದ ತಿಳಿದುಕೊಳ್ಳಬಹುದು:—

ತೀರ್ಥಾಶ್ರಮ ವನಾರಣ್ಯ ಗಿರಿಪರ್ವತ ಸಾಗರಾಃ ।
ಸರಸ್ವತೀ ಭಾರತೀ ಚ ಪುರೀ ನಾಮಾನಿ ವೈ ದಶ ॥

೧. ತೀರ್ಥ, ೨ ಆಶ್ರಮ, ೩. ವನ, ೪. ಅರಣ್ಯ, ೫. ಗಿರಿ, ೬. ಪರ್ವತ, ೭. ಸಾಗರ, ೮. ಸರಸ್ವತೀ, ೯. ಭಾರತೀ ಮತ್ತು ೧೦. ಪುರೀ ಎಂಬವುಗಳೇ ಹತ್ತು ಉಪಪದಗಳು. ಇವುಗಳಲ್ಲಿ ತೀರ್ಥ ಮತ್ತು ಆಶ್ರಮಗಳೆಂಬ ಉಪಪದಗಳು ದ್ವಾರಕಾಪೀಠದವು. ವನ ಮತ್ತು ಅರಣ್ಯವೆಂಬ ನಾಮಗಳು ಗೋವರ್ಧನ ಪೀಠದವು. ಗಿರೀ, ಪರ್ವತ, ಮತ್ತು ಸಾಗರಗಳೆಂಬವು ಜ್ಯೋತಿರ್ಮಠದವು. ಸರಸ್ವತೀ, ಭಾರತೀ ಮತ್ತು ಪುರೀ ಎಂಬ ಹೆಸರುಗಳು ಶೃಂಗೇರೀ ಮಠದವು.

ನಮ್ಮ ಚರಿತ್ರನಾಯಕರು ಇವುಗಳಲ್ಲಿ ಯಾವ ಮಠ ಅಥವಾ ಸಂಪ್ರದಾಯಕ್ಕೆ ಸೇರಬೇಕೆಂಬ ಬಗ್ಗೆ ವಿಚಾರ ಮಾಡಿರಲಿಲ್ಲ. ಆ ಬಗ್ಗೆ ವಿಚಾರ ಮಾಡುವ ಕಾರಣವೂ ಇರಲಿಲ್ಲ. ಯಾವ ಮಠದ ಪರಂಪರೆಗೆ ಸೇರಿದರೂ

ಅಷ್ಟೇ. ಸಂನ್ಯಾಸ ಧರ್ಮದ ಆದರ್ಶವೂ ಆಚಾರ ಪದ್ಧತಿಗಳೂ — ಎಲ್ಲ ಕಡೆಗೂ ಒಂದೇ. ಮುಖ್ಯವಾಗಿ ಸಂನ್ಯಾಸ ತೆಗೆದುಕೊಳ್ಳುವವನಲ್ಲಿ ಧೈರ್ಯ ಬೇಕು; ನಿಷ್ಠೆ ಬೇಕು; ವೈರಾಗ್ಯ ಬೇಕು. ಇವಿಷ್ಟಿದ್ದರೆ ಸಾಕು. ಉಳಿದ ಮಾತುಗಳೆಲ್ಲವೂ ಗೌಣ.

ಮಹಾರಾಜರು ಆಶ್ರಮ ಸ್ವೀಕಾರಕ್ಕಾಗಿ ಒಂದೇ ಸವನೆ ಹಾತೊರೆಯುತ್ತಿದ್ದರೆಂದು ಮೇಲೆ ಹೇಳಿದೆವು. ಮನೆಯಲ್ಲಿ ಅವರನ್ನು ವಿಚಾರಕ್ಕೀಡು ಮಾಡುವಂತಹ ಒಂದೇ ಒಂದು ವಸ್ತು ವಿತ್ತು. ಅದು ಯಾವುದೆಂದರೆ ಅವರ ಒಂದೇ ಒಂದು ಮಗುವಾದ ಹೆಣ್ಣು ಕೂಸು. ಪಾಪ! ಮಹಾರಾಜರಂಥವರ ಕನ್ನೆಯಾಗಿ ಹುಟ್ಟುವ ಸಾಭ್ಗೌಗ್ಯವು ಆ ಕೂಸಿಗೆ ಸಿಕ್ಕಿದ್ದರೂ ಅದರ ದುಃಖಗಳಿಗೆ ಪಾರಾವಾರವಿರಲಿಲ್ಲ. ಹುಟ್ಟಿದ ಸ್ವಲ್ಪೇ ದಿನಗಳಲ್ಲಿ ಅದು ತನ್ನ ಹೆತ್ತ ತಾಯಿಯನ್ನು ಕಳೆದುಕೊಂಡು ಪರದೇಶಿಯಾಯಿತು. ಈಗ ಮಹಾರಾಜರ ಸಂಗ ಸುಖವನ್ನೂ ಕಳೆದುಕೊಳ್ಳುವ ದುಃಖಕ್ಕೆ ಈಡಾಗ ಬೇಕಾಯಿತು. ಎಂತೆಯೇ ಆ ಕೂಸಾದರೂ ಮುಂದೆ ಬಹು ದಿವಸ ಬಾಳಲಿಲ್ಲ. ಮಹಾರಾಜರು ಮನೆಬಿಟ್ಟು ಹೊರಡುವಾಗ ಆ ದುರ್ದೈವಿಯಾದ ಪ್ರಾಣಿಯ ಕಡೆಗೆ ಒಂದೆರಡು ನಿಮಿಷ ಕಾರುಣ್ಯದಿಂದ ನೋಡಿದರು. ಅದರ ಅಸಹಾಯ ಸ್ಥಿತಿಯನ್ನು ನೋಡಿ ಅವರ ಕಣ್ಣುಗಳು ಹಸಿಯಾಗಿದ್ದರೆ ಆಶ್ಚರ್ಯವಿಲ್ಲ. ಆದರೇನು? ಇಂತಹ ಇಲ್ಲದ ಮಾಯಾಪಾಶಕ್ಕೆ ಅವರು ಒಳಗಾಗತಕ್ಕವರೇ? ಅವರು ಆ ಕೂಸಿನ ವ್ಯವಸ್ಥೆಯನ್ನು ತಮ್ಮ ಆಪ್ತರೊಳಗಿನ ಒಬ್ಬ ಹೆಣ್ಣು ಮಗಳಿಗೆ ಒಪ್ಪಿಸಿಕೊಟ್ಟು ಧೀರತನದಿಂದ ಮನೆಬಿಟ್ಟು ಹೊರಬಿದ್ದರು.

ಮನೆಬಿಡುವಾಗ ಕೂಡ ಮಹಾರಾಜರು ಒಳ್ಳೇ ದಕ್ಷತೆಯನ್ನು ವಹಿಸಿದರು. ಯಾರಿಗೂ ಹೇಳದೇ ಕೇಳದೇ ಅವರು ಮನೆಗೆ ಬೀಗವನ್ನು ಹಾಕಿಕೊಂಡು ಒಮ್ಮೆಲೇ ಹೊರಟು ಹೋಗಲಿಲ್ಲ- ಹಾಗೆ ಮಾಡಿದರೆ ಮನೆಯೊಳಗಿನ ವಸ್ತುಗಳೆಲ್ಲ ಅವ್ಯವಸ್ಥಿತವಾಗಿ ಯಾರ ಯಾರ ಪಾಲಿಗೋ ಆಗಿಬಿಡಬಹುದಾಗಿತ್ತು. ಆದುದರಿಂದ ಮಹಾರಾಜರು ಮನೆಬಿಡುವಾಗ ತಮ್ಮ ಎಲ್ಲ ವಸ್ತು ಒಡವೆಗಳ ಪಟ್ಟಿಯನ್ನು ಬರೆದು ಸಿದ್ಧ ಮಾಡಿದರು- ಮತ್ತು ತಮ್ಮ ಮುಖ್ಯ ಉಪಶಿಕ್ಷಕರಾದ ರಾಮಕೃಷ್ಣ ಪಂತರನ್ನು ಕರೆದು

ಅವುಗಳನ್ನೆಲ್ಲ ಅವರಿಗೆ ಒಪ್ಪಿಸಿಕೊಟ್ಟರು: ''ನಾವು ಶ್ರೀ ನರಸಿಂಹವಾಡೀ ಮೊದಲಾದ ಕ್ಷೇತ್ರಗಳಿಗೆ ಹೋಗಿಬರುತ್ತೇವೆ. ನಮಗೆ ತಿರುಗಿ ಬರಲಿಕ್ಕೆ ಬಹಳ ದಿವಸಗಳು ಹಿಡಿಯಬಹುದು. ಮನೆಯೊಳಗೆ ಯಾರೂ ಇಲ್ಲ. ಆದುದರಿಂದ ನಾವು ತಿರುಗಿ ಬರುವವರೆಗೆ ಈ ಸಾಮಾನುಗಳೆಲ್ಲ ನಿಮ್ಮ ಬಳಿಯಲ್ಲಿರಲಿ.'' ರಾಮಕೃಷ್ಣಪಂತರೂ ಈ ಮಾತಿಗೆ ಸಂತೋಷದಿಂದಲೇ ಒಪ್ಪಿಕೊಂಡರು. ಪಾಪ ! ಅವರಿಗೇನು ಗೊತ್ತು, ಮಹಾರಾಜರ ಸಂನ್ಯಾಸವ ನಿಶ್ಚಯವವ ?

ಮನೆಬಿಡುವಾಗ ಮಹಾರಾಜರು ಎರಡು ತಿಂಗಳ ರಜೆ ತಕ್ಕೊಂಡಿದ್ದರು. ಅವರ ಬಳಿಯಲ್ಲಿ ಆಗ ರೋಖ ೩೦೦ ರೂಪಾಯಿಗಳಿದ್ದವು. ಅವುಗಳಲ್ಲಿ ೨೪೦ ರೂಪಾಯಿಗಳನ್ನು ಶ್ರೀ ಮಹಾದೇವಪ್ಪ ಮುರಕುಂಬಿಯವರ ಕಡೆಗೆ ಠೇವಾಗಿ ಇಟ್ಟರು. ತಮ್ಮ ಸಂಗಡ ಖರ್ಚಿಗೆಂದು ಉಳಿದ ೬೦ ರೂಪಾಯಿಗಳನ್ನು ಮಾತ್ರ ತಕ್ಕೊಂಡು ಮಹಾರಾಜರು ಹೊರಹೊರಟರು. ಹೀಗೆ ಎಲ್ಲ ವ್ಯವಸ್ಥೆಯನ್ನು ಮುಗಿಸಿಕೊಂಡು, ಸಂಗಡ ತಮ್ಮ ಶಿಷ್ಯನಾದ ಕೃಷ್ಣಪ್ಪ ಎಡಿಹಳ್ಳಿ ಎಂಬುವ ಭಾಗ್ಯವಂತನನ್ನು ಮಾತ್ರ ಕರೆದುಕೊಂಡು ಮಹಾರಾಜರು ಸಂನ್ಯಾಸ ದೀಕ್ಷೆಗಾಗಿ ಹೊರಬಿದ್ದರು.

ಆ ಕಾಲಕ್ಕೆ ವಾಡಿಯಲ್ಲಿ ಪರಮಹಂಸರಾದ ಶ್ರೀ ಗೋವಿಂದ ಯತಿಗಳೆಂಬವರು ಒಳ್ಳೇ ನಿಷ್ಠಾವಂತರಾದ ಸಂನ್ಯಾಸಿಗಳೆಂದು ಹೆಸರುವಾಸಿಯಾಗಿದ್ದರು ಮಹಾರಾಜರು ಅವರ ಉಜ್ವಲವಾದ ಆಚರಣೆಗೂ ನಿಷ್ಠೆಗೂ ಮನಸೋತು ಅವರ ಕಡೆಯಿಂದಲೇ ಸಂನ್ಯಾಸ ದೀಕ್ಷೆ ಪಡೆಯಬೇಕೆಂದು ನಿಶ್ಚಯಿಸಿದ್ದರು. ಆದರಂತೆ ಮಹಾರಾಜರು ವಾಡಿಗೆ ಹೋಗಿ, ಶ್ರೀ ಸದ್ಗುರುದತ್ತ ಪರಮಾತ್ಮನ ಪಾದುಕೆಗಳ ಸಂದರ್ಶನ ಪಡಕೊಂಡು, ಆ ಪರಮಹಂಸರ ಶೋಧ ನಡೆಯಿಸಿದರು ಆದರೆ ಆ ಯತಿಗಳು ಆದೇ ಪರಲೋಕವಾಸಿಗಳಾಗಿದ್ದರೆಂದೂ, ಅವರು ದೇಹಬಿಟ್ಟು ನಾಲ್ಕೇ ದಿನಗಳಾದವೆಂದೂ ತಿಳಿದು ಬಂತು. ಆದರಿಂದ ಮಹಾರಾಜರ ಮನಸ್ಸಿಗೆ ತುಸು ಹಳಹಳಿಯಾಯಿತು. ಸಿಕ್ಕುಸಿಕ್ಕವರ ಕಡೆಯಿಂದ ದೀಕ್ಷೆ ಪಡೆಯುವದು ಸರಿಯಲ್ಲವಾದುದರಿಂದ, ಮುಂದೆ ಏನು ಮಾಡಬೇಕೆಂದು ಮಹಾರಾಜರು ಯೋಚನೆಗೆ

ಒಳಗಾದರು. ಅತ್ತಿತ್ತ ವಿಚಾರಣೆ ನಡೆಸುತ್ತಿರುವಲ್ಲಿ ಮಿರಜಿಯ ಘಾಟಿನ ಮೇಲೆ ಒಬ್ಬ ವಯಸ್ಕರಾದ ಶ್ರೇಷ್ಠ ಯತಿಗಳು ಇರುವರೆಂದು ಗೊತ್ತಾಯಿತು. ಕೂಡಲೇ ಮಹಾರಾಜರು ಮಿರಜಿಯ ದಾರಿಯನ್ನು ಹಿಡಿದರು.

ಮಿರಜಿಯ ಘಾಟಿನ ಮೇಲಿದ್ದ ಯತಿವರ್ಯರು ಶ್ರೀ ನಾರಾಯಣ ತೀರ್ಥರೆಂಬ ಹೆಸರಿನ ಪರಮಹಂಸರಾಗಿದ್ದರು. ಅವರು ಎಲ್ಲಿ ಹುಟ್ಟಿದರು, ಎಲ್ಲಿ ಬೆಳೆದರು – ಎಂಬಿವೇ ಮೊದಲಾದ ಸಂಗತಿಗಳು ನಮಗೆ ಸಿಕ್ಕಿರುವದಿಲ್ಲ. ಆದರೆ ಅವರು ಯತ್ಯಾಶ್ರಮವನ್ನು ಸ್ವೀಚ್ಛೆಯಿಂದಲೇ ಸ್ವೀಕರಿಸಿ, ಶಾಸ್ತ್ರಕ್ಕನುಸಾರವಾದ ಮಾರ್ಗದಿಂದ ನಡೆದುಕೊಂಡು ಬಂದಿದ್ದರೆಂಬದು ಮಾತ್ರ ನಿಜ. ಅವರ ವಯಸ್ಸೀಗ ೮೦–೮೫ ವರುಷದ ಮುಟ್ಟಕ್ಕೆ ಬಂದಿತ್ತು. ಅವರು ಅತ್ಯಂತ ತೇಜಸ್ವಿಗಳೂ ಬ್ರಹ್ಮನಿಷ್ಠರೂ ಆಗಿದ್ದರು. ಇಷ್ಟು ವರುಷಗಳಾದರೂ ಯತ್ಯಾಶ್ರಮದ ಕಠೋರವಾದ ಆಚರಣೆಯಿನ್ನು ಅವರು ಎಷ್ಟೂ ಸಡಿಲಿಸಿರಲಿಲ್ಲ. ಅಲ್ಲಿಯ ಜನರು ಅವರ ಪವಿತ್ರವಾದ ಜೀವನಕ್ಕೆ ಮರುಳಾಗಿ ಶಿಷ್ಯಭಾವದಿಂದ ನಡೆದುಕೊಳ್ಳುತ್ತಿದ್ದರು. ವಯಸ್ಸು ಬಹಳವಾದುದರಿಂದ ಅವರು ಪ್ರವಾಸ ಮಾಡದೆ ಒಂದೇ ಕಡೆಗೆ ಇದ್ದು ಕೊಂಡಿರುತ್ತಿದ್ದರು. ಅವರ ಶಿಷ್ಯರು ಘಾಟಿನ ಮೇಲೆಯೇ ಅವರ ಭಿಕ್ಷೆಯ ವ್ಯವಸ್ಥೆ ಮಾಡುತ್ತಿದ್ದರು.

ಮಹಾರಾಜರು ಅವರಲ್ಲಿಗೆ ಹೋಗಿ ವಿನಯ ಭಕ್ತಿಗಳಿಂದ ಸಾಷ್ಟಾಂಗ ನಮಸ್ಕಾರಹಾಕಿ ಮನೋಮಯ ಪ್ರಾರ್ಥನೆ ಮಾಡಿಕೊಂಡರು. ಕ್ಷಣಮಾತ್ರದಲ್ಲಿ ಗುರುಶಿಷ್ಯರ ಹೃದಯಗಳೆರಡೂ ಒಂದಾಗಿ ಹೋದವು. ಮಹಾರಾಜರ ಮೋರೆಯ ಮೇಲೆ ಉಕ್ಕುತ್ತಿರುವ ವೈರಾಗ್ಯವೂ, ಮೋಕ್ಷದ ಹಂಬಲವೂ, ಸಂನ್ಯಾಸದ ಉತ್ಸುಕತೆಯೂ, ಬ್ರಹ್ಮಜ್ಞಾನದ ತೇಜಸ್ಸೂ, ಭಕ್ತಿಯ ಆಧಿಕ್ಯವೂ ನಾರಾಯಣತೀರ್ಥರನ್ನು ಒಮ್ಮೆಲೆ ಬೆರಗುಗೊಳಿಸಿದವು. ಅವರ ದೀರ್ಘವಾದ ಆಯುಷ್ಯದಲ್ಲಿ ಇಂಥವರು ಶಿಷ್ಯಭಾವದಿಂದ ವಿನೀತರಾಗಿ ಬಂದುದು ಇದೇ ಮೊದಲನೆಯ ಸಲವಾಗಿತ್ತು. ಅವರು ಆನಂದೋದ್ರೇಕದಿಂದ ಮಹಾರಾಜರನ್ನು ಕಣ್ತುಂಬ ನೋಡುತ್ತ ''ನಾರಾಯಣ, ನಾರಾಯಣ'' ಎಂದು ಕುಣಿದಾಡಿದರು. ಮಹಾರಾಜರಾದರೂ ಅವರಲ್ಲಿ ಕಂಡು

ಬರುತ್ತಿರುವ ಗಾಢವಾದ ಪಾಂಡಿತ್ಯಕ್ಕೂ, ಆಳವಾಗಿ ಗಂಭೀರವಾಗಿ ಹರಿಯುತ್ತಿರುವ ಬ್ರಹ್ಮಾನುಭವಕ್ಕೂ, ಒಡೆದು ಕಾಣುವ ಗುರುತ್ವದ ಯೋಗ್ಯತೆಗೂ ಕೂಡಲೇ ತಲೆಬಾಗಿಸಿದರು. ಮತ್ತು ತಮ್ಮ ಒಹುದಿವಸಗಳ ಆಸೆಯು ಇಲ್ಲಿ ಪೂರ್ಣವಾಗುವದೆಂದು ಭರವಸೆ ಹೊಂದಿದರು.

ಶಿಷ್ಯನಲ್ಲಿರುವ ಸಂನ್ಯಾಸದ ಯೋಗ್ಯತೆಯು ಒಮ್ಮೆಲೇ ಗೊತ್ತಾದರೂ ಶಿಷ್ಯನನ್ನು ಇನ್ನೂ ಹೆಚ್ಚಾಗಿ ಪರೀಕ್ಷಿಸಬೇಕೆಂದು ಅವರು ನಿಶ್ಚಯಿಸಿದರು ಒಬ್ಬರೊಬ್ಬರ ಆಸೆ-ಆಕಾಂಕ್ಷೆಗಳು ಒಬ್ಬರೊಬ್ಬರಿಗೆ ತಿಳಿದಿದ್ದರೂ, ಯಾರೂ ಆ ಬಗ್ಗೆ ಪಿಟ್ಟೆಂದು ಮಾತಾಡಲಿಲ್ಲ. ಶಿಷ್ಯನನ್ನು ಇನ್ನೊಮ್ಮೆ ಸ್ಪಷ್ಟವಾಗಿ ಪರಿಕಿಸಿದ ಮೇಲೆಯೇ ಮುಂದಿನ ವಿಚಾರವೆಂದು ನಾರಾಯಣತೀರ್ಥರು ಗೊತ್ತು ಮಾಡಿಕೊಂಡಂತೆ ಕಂಡಿತು. ಅನುಕೂಲ ಕಾಲವನ್ನು ನೋಡಿ-ಕೊಂಡೇ ಗುರುಗಳ ಮುಂದೆ ತಮ್ಮ ಸಂನ್ಯಾಸದ ಮಾತನ್ನೆತ್ತಬೇಕೆಂದು ನಮ್ಮ ಚರಿತ್ರನಾಯಕರು ಆಲೋಚಿಸಿದರು. ಹೀಗೆ ಮೌನದಲ್ಲಿಯೇ ಒಂದೆರಡು ದಿನಗಳು ಕಳೆದವು. ಅಷ್ಟರಲ್ಲಿ ಮಹಾರಾಜರು ತಮ್ಮ ಉತ್ಕೃಷ್ಟವಾದ ಸೇವೆಯಿಂದ ನಾರಾಯಣತೀರ್ಥರನ್ನು ಪ್ರಸನ್ನಗೊಳಿಸಿದರು. ನಾರಾಯಣತೀರ್ಥರು ಮಹಾರಾಜರೊಡನೆ ಆನಂದದಿಂದ ಮನಬಿಚ್ಚಿ ಮಾತಾಡಹತ್ತಿದರು. ಈ ಸಂಧಿಯನ್ನೇ ಕಾಯುತ್ತ ಕುಳಿತಿದ್ದ ಮಹಾ-ರಾಜರು ಮೆಲ್ಲಗೆ ತಮ್ಮ ಸಂಗತಿಗಳನ್ನೆಲ್ಲ ಅವರ ಮುಂದಿಟ್ಟು, ತಮ್ಮ ಆಶ್ರಮದ ಮಾತನ್ನೆತ್ತಿದರು. ಮತ್ತು "ದಯಮಾಡಿ ಆಶ್ರಮವನ್ನು ಕೊಟ್ಟು ಉದ್ಧರಿಸಬೇಕೆ"ಂದು ಬೇಡಿಕೊಂಡರು. ಯತೀಶ್ವರರು ಮುಗುಳುನಗೆ ನಗುತ್ತ ಉತ್ತರಕೊಟ್ಟರು:— "ವತ್ಸಾ, ನಿನ್ನ ಇಚ್ಛೆಯನ್ನು ನೋಡಿ ನನಗೆ ಪರಮಾನಂದವಾಗಿದೆ. ಆದರೆ ಶಿಷ್ಯನನ್ನು ಸರಿಯಾಗಿ ಪರಿಕಿಸದೆ ಅನುಗ್ರಹವನ್ನು ಕೊಡಬಾರದೆಂಬ ನಿಯಮವಿದೆ. ಆದುದರಿಂದ ನೀನು ಮೊದಲು ನನ್ನ ಪರೀಕ್ಷೆಯೊಳಗೆ ಇಳಿಯಬೇಕಾಗುವದು." ಯತಿಗಳ ಮಾತಿನಿಂದ ಮಹಾರಾಜರು ತುಸು ಅಧೀರರಾದರು. ಆದರೂ ಅವರು ಎದೆಗುಂದದೆ "ಗುರುಗಳೇ, ತಮ್ಮ ಪರೀಕ್ಷೆಗೆ ಕುಳಿತು ಪಾಸಾಗಿಯೇ ಬಿಡುವೆನೆಂಬ ಹೆಮ್ಮೆಯು ನನ್ನಲ್ಲಿಲ್ಲ. ಆದರೆ ನನ್ನ ಇಚ್ಛೆಯು ಪ್ರಾಮಾಣಿಕ

ಆಗಿದ್ದರೆ ಮತ್ತು ಚಿದಂಬರನು ಅನುಗ್ರಹ ಮಾಡಿದರೆ, ತಮ್ಮ ಪರೀಕ್ಷೆ-ಯಲ್ಲಿಯೂ ನಾನು ಸಹಜವಾಗಿ ಉತ್ತೀರ್ಣನಾಗುವೆನೆಂದು ನನ್ನಲ್ಲಿ ನಂಬಿಗೆ ಯಿದೆ. ಸಂನ್ಯಾಸಕ್ಕಾಗಿ ನಾನು ಕಾತರನಾಗಿರುವೆನು. ಕೂಡಲೇ ನನ್ನ ಪರೀಕ್ಷೆ ತೆಗೆದುಕೊಂಡು ಅನುಗ್ರಹಿಸಬೇಕು'' ಎಂದು ಕೈ ಜೋಡಿಸಿ ಬೇಡಿಕೊಂಡರು.

ಮಹಾರಾಜರ ಈ ಮೋಹಕವಾದ ಮಾತುಗಳಿಂದ ಯತೀಶ್ವರರು ಸೋತು ಹೋದರು. ಕೂಡಲೇ ಇವರಿಗೆ ಆಶ್ರಮ ಕೊಟ್ಟು ಬಿಡಬೇಕೆಂಬ ವಿಚಾರವೂ ಒಮ್ಮೆ ಅವರ ತಲೆಯಲ್ಲಿ ಸುಳಿದಾಡಿ ಹೋಯಿತು. ಆದರೂ ಇನ್ನೊಮ್ಮೆ ನೋಡಿಯೇ ಬಿಡೋಣವೆಂದು ಅವರು ನಿಶ್ಚಯಿಸಿ ''ತಮ್ಮಾ, ನಿನ್ನ ವರ್ತನೆಯಿಂದ ನಾನು ಮನಸೋತವನಾಗಿದ್ದೇನೆ. ನಿನಗೆ ಸಂನ್ಯಾಸ ಕೊಡಲಿಕ್ಕೆ ಅಡ್ಡಿಯಿಲ್ಲ. ಆದರೆ ನೀನು ನಮ್ಮ ಶಿಷ್ಯನಾಗಬೇಕೆಂದು ಬಯ-ಸುವಿ. ಎಂದ ಮೇಲೆ ಗುರುಗಳ ಆಜ್ಞಾಪಾಲನೆ ಮಾಡುವದು ಶಿಷ್ಯನ ಕರ್ತವ್ಯವಷ್ಟೇ ! ನಮ್ಮ ಮಾತು ಕೇಳಬೇಕೆಂದು ನಿನ್ನ ಇಚ್ಛೆಯಿದ್ದರೆ ನೀನು ಕೂಡಲೇ ಬೆಳಗಾಂವಿಗೆ ಹೊರಡು. ಅಲ್ಲಿ ಕೆಲವು ದಿನಗಳನ್ನು ಕಳೆದು ಆ ಮೇಲೆ ತಿರುಗಿ ಇಲ್ಲಿಗೆ ಬರಬಹುದು. ಅಲ್ಲಿಯ ವರೆಗೆ ನಿನ್ನ ಸಂನ್ಯಾಸದ ಅಪೇಕ್ಷೆಯು ಸ್ಥಿರವಾಗಿ ಉಳಿದಲ್ಲಿ ನಾವು ಅವಶ್ಯವಾಗಿಯೂ ದೀಕ್ಷೆ ಕೊಡುವೆವು. ಹೂ, ಏನೆನ್ನುವಿ ಹೇಳು !'' ಎಂದು ಆಜ್ಞೆ ಮಾಡಿಬಿಟ್ಟರು.

ಮಹಾರಾಜರ ಎರಡೂ ಕಣ್ಣುಗಳಿಂದ ನೀರು ಧಾರೆಯಾಗಿ ಬೀಳ ಹತ್ತಿದವು. ಅವರು ಗುರುಗಳ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡರು. ಕುತ್ತಿಗೆಯ ಶಿರಗಳು ಉಬ್ಬಿದುದರಿಂದ ಅವರಿಗೆ ಸರಿಯಾಗಿ ಮಾತಾಡಲಿಕ್ಕೆ ಬರದಂತಾಯಿತು. ಅವರು ನಡುಗುವ ದನಿಯಲ್ಲಿಯೇ ಬಿನ್ನವಿಸಿಕೊಂಡರು:— ''ಗುರುದೇವಾ, ಶಿಷ್ಯನನ್ನು ಬೇಕಾದಂತೆ ಪರಿಕಿಸುವ ಅಧಿಕಾರವು ತಮಗಿದೆ. ಆದರೆ ನಾನು ಆವೇಶದ ಭರದಲ್ಲಿ ಸಂನ್ಯಾಸಕ್ಕೆ ಬಂದಿರುವದಿಲ್ಲೆಂದು ಎದೆ ತಟ್ಟಿ ಅರಿಕೆ ಮಾಡಿಕೊಳ್ಳಬಯಸುತ್ತೇನೆ. ಏನೇ ಆಗಲಿ; ತಮ್ಮ ಆಜ್ಞೆಯು ನನಗೆ ಶಿರಸಾ ಮಾನ್ಯವು. ಗುರುಗಳ ಆಜ್ಞೆಯು ಯೋಗ್ಯವಾದುದೋ ಅಯೋಗ್ಯವಾದುದೋ-ಎಂಬದನ್ನು ಅಳೆದು ನೋಡುವದು ಶಿಷ್ಯನ ಕೆಲಸವಲ್ಲ.

ಅದು ಅವನ ಅಧಿಕಾರದೊಳಗಿನ ಮಾತೂ ಅಲ್ಲ.'' ನಾರಾಯಣ ತೀರ್ಥರು ಮಹಾರಾಜರ ಬೆನ್ನು ಚಪ್ಪರಿಸಿ ಬೀಳ್ಕೊಟ್ಟರು.

ಮಹಾರಾಜರು ಹೀಗೆ ಅಕಸ್ಮಾತ್ತಾಗಿ ತಿರುಗಿ ಬಂದುದು ಬೆಳಗಾಂವಿಯಲ್ಲಿ ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿತು. ಆದರೆ ಮಹಾರಾಜರು ತಮ್ಮ ಮನಸಿನೊಳಗಿನ ಮಾತನ್ನು ಯಾರ ಮುಂದೆಯೂ ಬಿಚ್ಚಿಡಲಿಲ್ಲ. ಅವರು ಗುರುಗಳ ಆಪ್ಪಣೆಯನ್ನು ಮನ್ನಿಸುವದಕ್ಕಾಗಿ ಮಾತ್ರ ಒಂದೇ ದಿವಸ ಬೆಳಗಾಂವಿಯಲ್ಲಿ ನಿಂತರು. ಉಳಿದಾವ ವಿಚಾರವೂ ಅವರ ಮನಸ್ಸಿನಲ್ಲಿ ಬರಲಿಲ್ಲ ಅವರು. ಮತ್ತೆ ಕೂಡಲೇ ತಿರುಗಿ ಮಿರಜಿಗೆ ಹೊರಟುಬಿಟ್ಟರು. ಆದರೆ ಈ ಸಲ ಎಡಿಹಳ್ಳಿಯ ಕೃಷ್ಣಾಜಿಪಂತರಿಗೆ ಮಾತ್ರ ಅವರನ್ನು ಹಿಂಬಾಲಿಸಲಿಕ್ಕಾಗಲಿಲ್ಲ. ಅವರ ಬದಲಾಗಿ ಲಕ್ಷ್ಮಣ ಕುಬೇರರೆಂಬವರು ಮಹಾರಾಜರ ಅನುಚರರಾಗಿ ಹೊರಟರು

ಮಹಾರಾಜರು ಇಷ್ಟು ತೀವ್ರ ತಿರುಗಿ ಬಂದಾರೆಂದು ನಾರಾಯಣ ತೀರ್ಥರು ಅಪೇಕ್ಷಿಸಿರಲಿಲ್ಲ. ಮಹಾರಾಜರು ಗುರುಗಳ ಮುಂದೆ ದೀರ್ಘದಂಡ ನಮಸ್ಕಾರ ಮಾಡಿ ಕೈಜೋಡಿಸಿ ನಿಂತುಕೊಂಡುದು ಅವರಲ್ಲಿ ಆಶ್ಚರ್ಯವನ್ನೂ ಪ್ರೀತಿಯನ್ನೂ ಒಮ್ಮೆಲೇ ಹುಟ್ಟಿಸಿದವು. ಅವರು ಗಡಿಬಿಡಿಯಿಂದ ಕೇಳಿದ್ದೇನೆಂದರೆ:— ''ಎಲ! ಇದೇನು ? ಬೆಳಗಾಂವಿಗೆ ಹೋಗಿ ಅಲ್ಲಿ ಕೆಲವು ದಿನಗಳನ್ನು ಕಳೆದು, ತಿರುಗಿ ಬರಬೇಕೆಂದು ನಮ್ಮ ಆಜ್ಞೆಯಾಗಿತ್ತು. ನೀನು ಇಷ್ಟು ಬೇಗ ಏಕೆ ತಿರುಗಿ ಬಂದೆ ? ಬೆಳಗಾಂವಿಯ ವರೆಗಾದರೂ ನೀನು ಹೋಗಿದ್ದಿಯೋ ಇಲ್ಲವೋ ?''

ಮಹಾರಾಜರು ವಿನಯ ಪೂರ್ವಕವಾಗಿ ಅರಿಕೆ ಮಾಡಿಕೊಂಡರು:— ''ಗುರುದೇವ, ನಾನು ಎಂದೂ ಸುಳ್ಳು ಮಾತಾಡುವವನಲ್ಲ. ತಮ್ಮ ಆಪ್ಪಣೆಯಂತೆ ನಾನು ನಿಜವಾಗಿಯೂ ಬೆಳಗಾಂವಿಯ ವರೆಗೆ ಹೋಗಿ ಬಂದೆನು. ಆದರೆ ಸಂನ್ಯಾಸಕ್ಕೆ ನಾನು ತೀರ ಉತ್ಸುಕನಾಗಿರುವದರಿಂದ ಅಲ್ಲಿ ಹೆಚ್ಚು ಕಾಲವಿರಬೇಕೆಂದು ನನಗೆನಿಸಲಿಲ್ಲ. ಸಂಸಾರದ ಕೊಳಚೆಯಲ್ಲಿ ನಿಲ್ಲಲಾರದೆ ಇಲ್ಲಿಗೆ ಬೇಗನೇ ತಿರುಗಿ ಬಂದಿದ್ದೇನೆ. ದಯವಿಟ್ಟು ಕ್ಷಮಿಸಬೇಕು. ಯಾವ ದಿನ ಮನಸ್ಸಿನಲ್ಲಿ ವಿರಕ್ತಿಯು ಹುಟ್ಟುವದೋ ಅಂದೇ

ಸಂನ್ಯಾಸ ತೆಗೆದುಕೊಳ್ಳಬೇಕೆಂದು ಶ್ರುತಿಯು ಹೇಳುವದರಿಂದ ನಾನು ಸಂನ್ಯಾಸಕ್ಕಾಗಿ ಧಾವಿಸಿ ಬಂದಿದ್ದೇನೆ. ತಾವು ದಯವಿಟ್ಟು ಅನ್ಯಥಾ ಭಾವಿಸದೆ, ಆಶ್ರಯ ಕೊಡಬೇಕು ''

ಮಹಾರಾಜರ ಮಾತುಗಳಿಂದ ಯತೀಶ್ವರರು ಇನ್ನೂ ಪುಲಕಿತರಾದರು. ಅವರು ಈ ಮೊದಲೇ ಮಹಾರಾಜರ ಎಲ್ಲ ಸಂಗತಿಗಳನ್ನು ಕೇಳಿಕೊಂಡಿದ್ದರು. ಮಹಾರಾಜರ ಆಶ್ರಮ ಸ್ವೀಕಾರದಿಂದ ಯಾರಿಗೂ ದುಃಖವಾಗುವಂತಿರಲಿಲ್ಲ ವೆಂಬದು ಅವರಿಗೂ ತಿಳಿದ ವಿಷಯವೇ ಆಗಿತ್ತು. ಆದರೆ ಮಹಾರಾಜರ ಚಿಕ್ಕವಯಸ್ಸು ಮಾತ್ರ ಅವರಲ್ಲಿ ಮತ್ತೆ ಮತ್ತೆ ಯೋಚನೆಯನ್ನುಂಟು ಮಾಡಹತ್ತಿತು. ೩೩ ವರುಷಗಳ ವಯಸ್ಸೆಂದರೆ ಒಳ್ಳೇ ಮಂಗ ಹರೆಯದ ಕಾಲ! ಹಣಗಳಿಸುವ ಆಸೆ, ಕೀರ್ತಿಯ ಆಸೆ, ಹೆಂಡತಿಯ ಆಸೆ, ಮಕ್ಕಳ ಆಸೆ, ಇವೆಲ್ಲವೂ ಆಗ ಮಾನವನಲ್ಲಿ ಘನೀಭವಿಸಿ ಒಂದೇ ಹುರಿಯಾಗಿ ಬೆಳೆದುಕೊಂಡು ನಿಂತಿರುವವು. ಈ ಸ್ನೇಹ ಪಾಶಗಳ ಬಿಗಿತವನ್ನು ಸಡಿಲಿ ಸುವದು ಕೂಡ ಸಾಮಾನ್ಯ ಮನುಷ್ಯನಿಗೆ ಸಾಧ್ಯವಿಲ್ಲ ಅವುಗಳನ್ನು ಪೂರಾ ಹರಿದೊಗೆದು ಬಿಡುವ ಮಾತಂತೂ ದೂರೇ ಉಳಿಯಿತು. ಈ ವಯಸ್ಸಿನಲ್ಲಿ ಸಾಮಾನ್ಯ ಮಾನವನಿಗೆ ದೇವರ ವಿಷಯಕ್ಕೆ ವಿಚಾರ ಮಾಡಲಿಕ್ಕೆ ವೇಳೆಯೇ ಸಿಕ್ಕುವಂತಿರುವದಿಲ್ಲ. ಸುಮ್ಮನೆ ವದಿಂದ ಸಿಕ್ಕೆರೂ, ''ಎಲ್ಲಿಯ ದೇವರು?'' ಎಂದೆನ್ನುವ ಕಾಲವದು. ಅದುದರಿಂದ ನಾರಾಯಣ ತೀರ್ಥರು ಮತ್ತೆ ಚಿಂತಾತುರರಾದರು. ಅವರು ಮಹಾರಾಜರಿಗೆ ಜೋರೊಂದು ತರದಿಂದ ಬೋಧಿಸಹತ್ತಿದರು: — ''ತಮ್ಮಾ, ಸಿನ್ನಲ್ಲಿ ಇಷ್ಟು ವೈರಾಗ್ಯವಿದ್ದ ಮೇಲೆ ನೀನು ಪರಮಹಂಸ ಸಂನ್ಯಾಸಿಯಾಗಿಯೇ ಇರುವಿಯೆಂದು ಹೇಳಬೇಕು. ಸಂನ್ಯಾಸವು ಕೊಡತಕ್ಕೊಳ್ಳುವ ವಿಷಯವಲ್ಲ. ಅದನ್ನು ಯಾರೂ ಯಾರಿಗೂ ಕೊಡಬೇಕಾದುದಿಲ್ಲ. ಪೂರ್ಣ ವೈರಾಗ್ಯ ಬಂದಿದ್ದರೆ ನೀನು ಪ್ರಪಂಚದಲ್ಲಿದ್ದುಕೊಂಡರೂ ಅಂಜಬೇಕಾಗಿಲ್ಲ. ಪೂರ್ಣ ವೈರಾಗ್ಯವು ಬರದೇ ಇದ್ದರೆ ಸಂನ್ಯಾಸ ತಕ್ಕೊಂಡರೂ ಪ್ರಯೋಜನವಿಲ್ಲ. ಸಾರಾಂಶ-ವೇನಂದರೆ—ನೀನು ಈಗಿದ್ದ ಸ್ಥಿತಿಯಲ್ಲಿರುವದೇ ಒಳತೆಂದು ಕಾಣುತ್ತದೆ. ಪೂರ್ಣ ವೈರಾಗ್ಯವು ಅಶಕ್ಯವೆಂದೆನಿಸಿದೊಡನೆ ನಿನಗೆ ತಿರುಗಿ ಸಂಸಾರ ಮಾಡಲಿಕ್ಕೆ ಅವಕಾಶವಿದೆ. ಪೂರ್ಣ ವೈರಾಗ್ಯವು ಬಂದದ್ದೇ ನಿಜವಾದರೆ

ಕ್ಯಾವೀ ಆದಿವೆಗಳನ್ನೇ ಧರಿಸಬೇಕೆಂಬ ಹಟವೂ ಕಾರಣವಿಲ್ಲ. ''ನೈವ ಕಾಷಾಯ ವಾಸಸಾ'' ಎಂದು ಶ್ರೀ ಮಚ್ಛಂಕರ ಭಗವತ್ಪಾದರವರೇ ಅಪ್ಪಣೆ ಕೊಡಿಸಿದ್ದಾರೆ ''

ಈ ವಾಕ್ಪ್ರಹಾರದಿಂದ ಮಹಾರಾಜರು ದುಃಖಿತರಾದರು. ಆದರೆ ಅವರು ಎದೆಗುಂದದೆ ತಮ್ಮ ವಿಚಾರ ಸರಣಿಯನ್ನೇ ಮುಂದುವರಿಸಿದರು:— ''ಸ್ವಾಮೀ, ತಮ್ಮ ಮಾತು ನಿಜವೇ. ಆದರೆ ವೈರಾಗ್ಯವಿದ್ದವನು ಪ್ರಪಂಚ-ಕ್ಕಂಜುವ ಕಾರಣವಿಲ್ಲೆಂದು, ಮತ್ತೆ ಬೇಕಂತಲೇ ಪ್ರಪಂಚದೊಳಗೆ ಧುಮುಕುವದು ಜಾಣತನವಾದೀತೇ? ಅಕಸ್ಮಾತ್ತಾಗಿ ಬಂದ ಸಿಂಹದ ಮುಖದಲ್ಲಿ ಪೆಟ್ಟುಕೊಟ್ಟು ಪಾರಾಗಿ ಬಂದ ವೀರಾಗ್ರೇಸರನು ಬೇಕೆಂತಲೇ ಸಿಂಹಗಳನ್ನು ಹುಡುಕುತ್ತ ಹೋಗಬಹುದೇ? ದೇವರ ದಯದಿಂದ ಬಂದೊದಗಿದ ಅನುಕೂಲ್ಯವನ್ನೆಲ್ಲ ಬಿಟ್ಟುಕೊಟ್ಟು ಮತ್ತೆ ಪ್ರಪಂಚದ ಗುಂಡಿಯಲ್ಲಿ ಬೀಳಬಹುದೇ? ಸಂನ್ಯಾಸಾಶ್ರಮ ಸ್ವೀಕಾರವೇ ಒಳ್ಳೆಯ-ದೆಂದು ಉಪನಿಷತ್ತುಗಳೂ ಆಚಾರ್ಯರೂ ಸ್ಪಷ್ಟವಾಗಿಯೇ ಹೇಳುವರಲ್ಲ! ಎಂದ ಮೇಲೆ ತಾವು ಮತ್ತೇಕೆ ನನ್ನನ್ನು ಸಂಸಾರದಲ್ಲಿ ನೂಕಬೇಕೆನ್ನುವಿರಿ? ತಮಗೆ ನನ್ನ ಮೇಲೆ ಕರುಣೆ ಬರುವದಿಲ್ಲವೇ?''

ಇದರಿಂದ ನಾರಾಯಣತೀರ್ಥರು ನಿರುತ್ತರರಾದರು. ''ಒಳ್ಳೆಯದು. ನಮ್ಮ ಹತ್ತಿರವೇ ಇನ್ನೂ ಕೆಲವು ದಿನ ನಿಲ್ಲು. ಆ ಮೇಲೆ ದೀಕ್ಷೆ ಕೊಡು-ವೆವು. ಅಷ್ಟರಲ್ಲಿ ನಿನ್ನ ಮನಸ್ಸು ಬದಲಾದರೆ ತಿರುಗಿ ಹೋಗಬಹುದು. ಇಲ್ಲವಾದರೆ ನಮ್ಮ ಶಿಷ್ಯನಾಗಬಹುದು.'' ಎಂದು ಹೇಳಿ ಅವರು ಮಾತು ಮುಗಿಸಿದರು.

ಮೇಲಿನ ಸಂಗತಿಯು ಜರುಗಿ ಸುಮಾರು ಎರಡು ತಿಂಗಳ ಕಾಲವು ಹೋಯಿತು. ಆ ಅವಧಿಯಲ್ಲಿ ಮಿರಜಿಯ ಊರೊಳಗಿನ ಅನೇಕ ಜನ ಸದ್ಗೃಹಸ್ಥರು ಮಹಾರಾಜರನ್ನು ಸಂನ್ಯಾಸದಿಂದ ತಿರುಗಿಸುವದಕ್ಕಾಗಿ ಅನೇಕ ಬಗೆಯಿಂದ ಯತ್ನಮಾಡಿದರು. ಆದರೆ ಮಹಾರಾಜರು ಯಾವು ದಕ್ಕೂ ಹಣಿಯಲಿಲ್ಲ. ಕೊನೆಗೆ ನಾರಾಯಣತೀರ್ಥರು ಮಹಾರಾಜರಿಗೆ ಸಂನ್ಯಾಸ ಕೊಡುವದು ಸರ್ವಥೈವ ಯೋಗ್ಯವಾದುದೆಂಬ ನಿರ್ಣಯಕ್ಕೆ

ಬಂದರು. ಅವರೊಂದು ದಿನ ಮಹಾರಾಜರನ್ನು ಕರೆದು, ಬಳಿಯಲ್ಲಿ ಕೂಡಿಸಿಕೊಂಡು ''ವತ್ಸಾ, ನೀನು ಧನ್ಯನು. ನಿನ್ನ ತಂದೆತಾಯಿಗಳೂ ಧನ್ಯರು. ಇಂಥ ತಾರುಣ್ಯದ ಕಾಲದಲ್ಲಿ ನಿನ್ನಲ್ಲಿ ಈ ತರದ ವೈರಾಗ್ಯವು ಹುಟ್ಟಿದ್ದು ತೀರ ವಿಚಿತ್ರವೇ ಸರಿ. ಅನೇಕ ಜನ್ಮಗಳಿಂದ ನೀನು ಸಂಸಿದ್ಧನಾಗಿ ಬಂದಿರುವದರಿಂದಲೇ ನಿನ್ನಲ್ಲಿ ಈ ತರದ ವಿಚಾರಗಳು ಹುಟ್ಟಿವೆ. ನಿನ್ನ ಮೇಲೆ ಭಗವಂತನ ಕೃಪೆಯೂ ಪೂರ್ಣವಾಗಿದೆ. ನಿನ್ನಂಥ ಶಿಷ್ಯನಿಗೆ ದೀಕ್ಷೆ ಕೊಡುವ ಪುಣ್ಯ ಸಿಕ್ಕದ್ದಕ್ಕಾಗಿ ನಾನೂ ಧನ್ಯನೆಂದೇ ತಿಳಿಯುತ್ತೇನೆ. ಆದಷ್ಟು ಬೇಗನೇ ದಿನ ಶುದ್ಧಿಯನ್ನು ನೋಡಿಕೊಂಡು ನಿನಗೆ ದೀಕ್ಷೆ ಕೊಡುತ್ತೇನೆ. ಚಿಂತೆ ಮಾಡಬೇಡ.'' ಎಂದು ಹೇಳಿ ಮಹಾರಾಜರ ಬೆನ್ನ ಮೇಲೆ ಕೈಯಾಡಿಸಿದರು. ಇದರಿಂದ ಮಹಾರಾಜರು ಆನಂದಾಶ್ರುಗಳನ್ನು ಸುರಿಸುತ್ತ, ತಾವು ಕೃತಕೃತ್ಯರಾದೆವೆಂದು ಭಾವಿಸಿದರು.

———

೩ ದೀಕ್ಷೆ

೫೦ದು ಶ್ರೀಮನ್ನೃಪಶಾಲಿವಾಹನ ಶಕದ ೧೮೦೨ನೆಯ ವರುಷದ ಚೈತ್ರ ವದ್ಯ (೩೦) ಅಮಾವಾಸ್ಯೆಯ ಸುದಿನವು. ಭಗವಾನ್ ಶ್ರೀ ಸೂರ್ಯ ನಾರಾಯಣನು ನಮ್ಮ ಚರಿತ್ರನಾಯಕರ ಆಶ್ರಮ ಸ್ವೀಕಾರದ ಮಹೋತ್ಸವವನ್ನು ನೋಡುವದಕ್ಕಾಗಿ ಕುತೂಹಲದಿಂದ ಅವೇ ಪೂರ್ವ ದಿಕ್ಕಿನಲ್ಲಿ ಕಾಣಿಸಿಕೊಳ್ಳಹತ್ತಿದ್ದಾನೆ. ಅವನ ಕೆಂಬಣ್ಣದ ಕಿರಣಗಳಿಂದ ಪೃಥ್ವೀದೇವಿಯು ಅಲಂಕಾರಗಳನ್ನಿಟ್ಟುಕೊಂಡ ತರುಣ ವೈಯಾರಿಯಂತೆ ಮಿರಿಮಿರಿ ಮಿಂಚುತ್ತಿದ್ದಾಳೆ. ಮಿರಜಿಯ ಸಮೀಪದಲ್ಲಿ ಹರಿದಿರುವ ಪರಮಪಾವನೆಯಾದ ಕೃಷ್ಣೆಯು ಚೈತ್ರಮಾಸದ ಬಿಸಿಲಿನ ತಾಪದಿಂದ ತೀರ ಕೃಶಳಾಗಿದ್ದರೂ, ಮಹಾರಾಜರ ಅಭಿಷೇಕಕ್ಕೆ ನೀರನ್ನೊದಗಿಸಿಕೊಟ್ಟು ಕೃತಾರ್ಥಳಾಗಬೇಕೆಂದು ತವಕ ಪಡುತ್ತಿರುವವಳಂತೆ ಮಂದಮಂದರವದಿಂದ ದುಡು ದುಡು ಪ್ರವಹಿಸುತ್ತಿದ್ದಾಳೆ. ಘಾಟಿನ ಸುತ್ತು ಮುತ್ತಲಿನ ವಾತಾವರಣವೆಲ್ಲ ನಿಃಶಬ್ದವಾಗಿ ಗಂಭೀರವಾಗಿದೆ. ಆದರೆ ವಸಂತ ಮಾಸದ ಮಾಧುರ್ಯದಿಂದ ಉನ್ಮತ್ತವಾದ ಕೋಕಿಲ ಮೊದಲಾದ ಪಕ್ಷಿಗಳು ಆನಂದದಿಂದ ಹಾಡಿ, ಆ ಶಾಂತತೆಗೆ ಭಂಗ ತರುತ್ತಿವೆ. ಮೊದಲೇ ಆನಂದೋದ್ರೇಕದಲ್ಲಿರುವ ಆ ಪಕ್ಷಿಗಳಿಗೆ ಇಂದು ಹೊಸತರದ ಸುಮಧುರ ರಸವೊಂದರ ಅನುಭವವಾಗಹತ್ತಿದೆ. ಇಂದು ಅಲ್ಲಿ ನಡೆಯಬೇಕಾಗಿರುವ ಅಪೂರ್ವವಾದ ಕಾರ್ಯಕ್ರಮದ ದ್ಯೋತಕವೆಂದೇ ಈ ತರದ ನವ್ಯವಾದ ಅವರ್ಣನೀಯ ಸುಖವು ಅವುಗಳಿಗೆ ಆಗುತ್ತಿರಬಹುದಲ್ಲವೇ ? ಆದರೆ, ಪಾಪ ! ಅವುಗಳಿಗೆ ಬಾಯಿ ಇಲ್ಲ. ಅಷ್ಟು ವಿಚಾರ ಶಕ್ತಿಯೂ ಇಲ್ಲ. ಇವೆರಡೂ ಇದ್ದಿದ್ದರೆ ಅವುಗಳಿಗೆ ಸ್ಪಷ್ಟವಾಗಿ ಈ ಪ್ರಶ್ನೆಯನ್ನು ಕೇಳಿ 'ಹೌದೆ'ಂದು ಉತ್ತರದೊರಕಿಸಿ ಈ ಮಾತನ್ನು ಮನಗಾಣಿಸಿ ಕೊಡಬಹುದಾಗಿತ್ತು !



ಶ್ರೀಮತ್ಪರಮಹಂಸ ಶ್ರೀ ಕೈವಲ್ಯಾಶ್ರಮ ಸ್ವಾಮಿ
ಮಹಾರಾಜರು (ಸಂನ್ಯಾಸವಾದೊಡನೆ)

ಮಹಾರಾಜರು ಅಂದು ಬಹು ಬೇಗನೇ ಎದ್ದು ತಮ್ಮ ಪ್ರಾತರ್ವಿಧಿಗಳನ್ನೆಲ್ಲ ತೀರಿಸಿಕೊಂಡು, ಕೃಷ್ಣೆಯ ಪವಿತ್ರವಾದ ಜಲದಲ್ಲಿ ಮಿಂದು ಭಗವಂತನ ಸ್ತೋತ್ರ ಮೊದಲಾದವುಗಳನ್ನು ಹೇಳುತ್ತ ನದಿಯ ಮೇಲೆ ತತ್ತಿಂದಿತ್ತ ಇತ್ತಿಂದತ್ತ ಅಡ್ಡಾಡುತ್ತಿದ್ದರು. ಅವರು ಈ ದಿನ ಪೂರ್ವನಲ್ಲಿಯೇ ಮಾಡಬೇಕಾದ ಕೃಚ್ಛ್ರಗಳನ್ನು ಮುಗಿಸಿಕೊಂಡಿದ್ದರು ಅನಾಶ್ರಮಿಗಳಾದವರು (ಎಂದರೆ ಯಾವದೊಂದು ವಿಶಿಷ್ಟ ಆಶ್ರಮದ ವ್ಯಾಖ್ಯೆಯೊಳಗೆ ಬರದಿದ್ದವರು, ಉದಾ: ವಿಧುರರು.) ಸಂನ್ಯಾಸದ ಮೊದಲು ಪ್ರಾಜಾಪತ್ಯ ಕೃಚ್ಛ್ರವನ್ನು ಮಾಡಬೇಕಾಗುತ್ತದೆ. ಮಹಾರಾಜರು ತಮ್ಮ ಪತ್ನಿಯನ್ನು ಕಳೆದುಕೊಂಡವರಾದುದರಿಂದ, ಅವರು ಶಾಸ್ತ್ರದ ದೃಷ್ಟಿಯಿಂದ ಅನಾಶ್ರಮಿಗಳೇ ಆಗಿದ್ದರು ಪಾಪಗಳ ನಾಶಕ್ಕಾಗಿ ಹೇಳಿದ ಕೆಲವು ಕ್ರಿಯೆಗಳಿಗೆ ಕೃಚ್ಛ್ರಗಳೆಂದು ಹೆಸರು. ನೊದಲನೆಯ ದಿನ ಮಧ್ಯಾಹ್ನ ಊಟವೊಂದರ ಮೇಲೆ, ಎರಡನೆಯ ದಿನ ಸಂಜೆಯ ಊಟದ ಮೇಲೆ, ಮೂರನೆಯ ದಿನ ಯಾವುದನ್ನೂ ಕೇಳದೆ ತಾನಾಗಿ ಅಕಸ್ಮಾತ್ತಾಗಿ ಸಿಕ್ಕಿದ್ದರ ಮೇಲಿಂದ ಇದ್ದು (ಅಯಾಚಿತವೆಂಬು ಇದಕ್ಕೆ ಹೆಸರು.) ನಾಲ್ಕನೆಯ ದಿನ ಸಂಪೂರ್ಣ ನಿರಾಹಾರ ಮಾಡಿದರೆ ಒಂದು ಕೃಚ್ಛ್ರವಾಗುವದೆಂದು ಹೇಳುತ್ತಾರೆ. ಹೀಗೆ ಮೂರು ಸಲ ಮಾಡಿದರೆ ಒಂದು ಪ್ರಾಜಾಪತ್ಯವಾಗುವದಂತೆ. ಈ ಹನ್ನೆರಡೂ ದಿವಸ ಅದಷ್ಟು ಮೌನದಿಂದಿದ್ದು, ಜಪ, ನಾರಾಯಣ, ಭಗವನ್ನಾಮಸ್ಮರಣೆ ಮೊದಲಾದವುಗಳಲ್ಲಿ ಕಾಲಕಳೆಯಬೇಕೆಂಬ ನಿಯಮವಿದೆ. ಇದನ್ನು ಮಾಡಲಿಕ್ಕೆ ಸಾಧ್ಯವಿಲ್ಲದವರು ಗೋದಾನ, ಬ್ರಾಹ್ಮಣಭೋಜನ ಮೊದಲಾದವುಗಳನ್ನು ಮಾಡಿಸಬಹುದು. ಅದಷ್ಟು ಜಪೋಪವಾಸಗಳಿಂದ ಶರೀರವನ್ನೂ ಮನಸ್ಸನ್ನೂ ಶುದ್ಧಗೊಳಿಸಬೇಕೆಂಬದು ಇವೆಲ್ಲವುಗಳ ಉದ್ದೇಶವಿರಲು ಸಾಕು. ಮಹಾರಾಜರಿಗೆ ಇವೆಲ್ಲವುಗಳ ಆವಶ್ಯಕತೆ ನಿಜವಾಗಿ ಇಲ್ಲದಿದ್ದರೂ, ಅವರು ಅವುಗಳನ್ನೆಲ್ಲ ಯಥಾವತ್ತಾಗಿ ಆಚರಿಸಿಯೇ ಬಿಟ್ಟರು.

ಅಂದು ಮಿರಜಿಯ ಊರಿಂದ ಅನೇಕ ಜನ ವೈದಿಕ ಬ್ರಾಹ್ಮಣರೂ ಸದ್ಗೃಹಸ್ಥರೂ ಆಮಂತ್ರಿತರಾಗಿ ಬಂದಿದ್ದರು. ಅಂದಿನ ಕಾರ್ಯಕ್ರಮಕ್ಕೆ

ಬೇಕಾಗುವ ಎಲ್ಲ ಸಾಮಾನುಗಳನ್ನೂ ಕೂಡಿದವರು ಅಣಿಮಾಡಿಟ್ಟಿದ್ದರು. ಆಮಂತ್ರಣವಿಲ್ಲದಿದ್ದರೂ ಆಶ್ರಮು ಸ್ವೀಕಾರದ ಪದ್ಧತಿಯನ್ನು ನೋಡಲಿಕ್ಕೆಂದೂ, ಅಲ್ಲಿ ಅಂದು ಸಿಕ್ಕಬಹುದಾದ ಊಟ, ದಕ್ಷಿಣೆ, ದಾನ ಮೊದಲಾದವುಗಳ ಆಸೆಗಾಗಿಯೂ ಅನೇಕ ಜನರು ಬಂದಿದ್ದರು. ಒಟ್ಟಿಗೆ ಸುಮಾರು ೧೦೦—೨೦೦ ಜನರು ಕೂಡಿದ್ದರು.

ವೃದ್ಧರಾದ ನಾರಾಯಣತೀರ್ಥರೂ ಆ ದಿನ ಆದಷ್ಟು ಬೇಗನೇ ಎದ್ದು ತಮ್ಮ ಆಹ್ನಿಕವನ್ನೆಲ್ಲ ತೀರಿಸಿಕೊಂಡು ದೀಕ್ಷಾವಿಧಿಗೆ ಸಜ್ಜಾಗಿ ಕುಳಿತರು. ಮಹಾರಾಜರು ಗುರುಗಳ ಆಜ್ಞೆಯಂತೆ ಕೃಷ್ಣೆಯಲ್ಲಿ ಮತ್ತೆ ಸ್ನಾನ ಮಾಡಿ ಬಂದರು. ಎಲ್ಲಕ್ಕೂ ಮೊದಲು ಅಷ್ಟಶ್ರಾದ್ಧಗಳು ಸುರುವಾದವು. ಯಾರ ಶ್ರಾದ್ಧ ಮಾಡಬೇಕಾಗಿರುವದೋ ಅವರನ್ನುದ್ದೇಶಿಸಿ ಊಟದ ಸಾಮಾನುಗಳನ್ನಾಗಲಿ ಅಥವಾ ಬೇರೆ ಪದಾರ್ಥಗಳನ್ನಾಗಲಿ ಶ್ರದ್ಧೆ ಅಥವಾ ವಿಶ್ವಾಸ ಪ್ರೀತಿಗಳಿಂದ ತ್ಯಾಗ ಮಾಡುವದೇ ಶ್ರಾದ್ಧವೆಂದು ಕರೆಯಲ್ಪಡುತ್ತದೆ. ಸಂನ್ಯಾಸಿಯಾಗತಕ್ಕವನು ಎಂಟು ತರದ ಶ್ರಾದ್ಧ ಮಾಡಬೇಕಾಗುತ್ತದೆ. ಎಂದರೆ ಎಂಟು ತರದ ಪ್ರಾಣಿಗಳನ್ನು ಅವನು ಸಂತೋಷಪಡಿಸಬೇಕಾಗುತ್ತದೆ. ಎಲ್ಲರನ್ನೂ ಸಂತುಷ್ಟಪಡಿಸಿ, ಅವರೆಲ್ಲರೂ ತನ್ನ ಸಂನ್ಯಾಸಕ್ಕೆ ಅನುಕೂಲವಾಗಲೆಂದೂ, ಹರಸಲೆಂದೂ ಈ ಶ್ರಾದ್ಧಗಳನ್ನು ವಿಧಿಸಿರಬೇಕೆಂಬದು ಸ್ಪಷ್ಟವಿದೆ. ೧. ಅಷ್ಟವಸುಗಳು, ದ್ವಾದಶಾದಿತ್ಯರು ಅಥವಾ ಏಕಾದಶ ರುದ್ರ ಮೊದಲಾದ ದೇವತೆಗಳನ್ನು ಕುರಿತು ಮಾಡುವ ಶ್ರಾದ್ಧವು ದೈವಶ್ರಾದ್ಧವು. ೨. ಋಷಿಗಳನ್ನು ಕುರಿತು ಮಾಡುವದಕ್ಕೆ ಆರ್ಷಶ್ರಾದ್ಧವೆಂದು ಹೆಸರು. ೩. ಹಿರಣ್ಯಗರ್ಭ ಮೊದಲಾದವರನ್ನು ಕುರಿತು ಮಾಡುವ ಶ್ರಾದ್ಧವು ದಿವ್ಯವೆಂದು ಕರಿಸಿಕೊಳ್ಳುವದು. ೪. ಸನಕ, ಸನಂದನ ಮೊದಲಾದವರನ್ನು ಕುರಿತು ಮಾಡುವದು ಮಾನುಷ ಶ್ರಾದ್ಧವು. ೫. ಪಂಚ ಭೂತಗಳನ್ನು (ಎಂದರೆ ಆಯಾ ಭೂತಗಳ ಅಧಿಷ್ಠಾತೃ ದೇವತೆಗಳನ್ನು) ಕುರಿತು ಮಾಡುವದು ಭೂತ ಶ್ರಾದ್ಧವು. ೬. ಪಿತೃಗಳ ಉದ್ದೇಶದಿಂದ ಮಾಡುವದು ಪಿತೃಶ್ರಾದ್ಧವು. ೭. ಗೌರೀ ಮೊದಲಾದ ದೇವತೆಗಳನ್ನು ಕುರಿತು ಮಾಡುವದು ಮಾತೃ ಶ್ರಾದ್ಧವು. ೮. ಇಷ್ಟಾದ ಮೇಲೆ ತನ್ನನ್ನೇ ಕುರಿತು ಶ್ರಾದ್ಧ ಮಾಡಿಕೊಳ್ಳುವದು ಆತ್ಮಶ್ರಾದ್ಧವು.

ಹೀಗೆ ಈ ಪೂರ್ವ ಕೃತ್ಯವೆಲ್ಲ ಮುಗಿದ ಮೇಲೆ ಹೋಮಾಗ್ನಿಯು ಪ್ರಜ್ವಲಿತವಾಯಿತು ಗುರುಗಳ ಅಪ್ಪಣೆಗನುಸಾರವಾಗಿ ವೈದಿಕರು ಮಂತ್ರ-ಗಳನ್ನು ಹೇಳಹತ್ತಿದರು ಅವರ ಗಂಭೀರವಾದ ಮಂತ್ರೋಚ್ಚಾರಣೆಯಿಂದ ಕೃಷ್ಣಾನದಿಯ ವಡನೆಲ್ಲ ತುಂಬಿ ಹೋಯಿತು. ವೈದಿಕರು ಮಂತ್ರ ಹೇಳಿ ಹೇಳಿದಂತೆ ಮಹಾರಾಜರು ಅವುಗಳ ಪುನರುಚ್ಚಾರ ಮಾಡುತ್ತಿದ್ದರು. ಮತ್ತು ಅವುಗಳ ಕೊನೆಗೆ ಅಗ್ನಿ ನಾರಾಯಣನೊಳಗೆ ಆಹುತಿಗಳನ್ನು ಸಮರ್ಪಣೆ ಮಾಡುತ್ತಿದ್ದರು ಮೊದಲು ಪ್ರಾರ್ಥನಾ ಮಂತ್ರವಾಯಿತು. ಅದಕ್ಕೆ ತ್ರಿಸುಪರ್ಣವೆಂದೂ ಹೆಸರು. ಇಂದಿಗೂ ತ್ರಿಸುಪರ್ಣ ಹೇಳುವವರು ಬೇಕಾ-ದಷ್ಟು ಜನ ಸಿಕ್ಕಬಹುದು ಆದರೆ ಅದರ ಗಂಭೀರವಾದ, ಉದಾತ್ತವಾದ, ಉಚ್ಚವಾದ ಅರ್ಥದ ಅನುಸಂಧಾನ ಮಾಡುವವರು ಮಾತ್ರ ಇಲ್ಲವೇ ಇಲ್ಲೆಂದರೂ ಅಡ್ಡಿಯಿಲ್ಲ ರಹಸ್ಯಮಯವಾದ ವೇದ ಮಂತ್ರಗಳನ್ನು ಬಾಯಿಂದ ಅನ್ನುತ್ತಿದ್ದರೂ ಅವುಗಳ ಅರ್ಥವನ್ನರಿಯದೆ ಪೇಚಾಡುವ ಜನರೇ ಹೆಚ್ಚು. ಅವುಗಳ ಅರ್ಥವನ್ನು ತಿಳಿದುಕೊಂಡರೆ ಮಾತ್ರ ಮನಸ್ಸು ಏಕಾಗ್ರವಾಗುವದು ಶಕ್ಯವಿದೆ. ಸುದೈವದಿಂದ ಮಹಾರಾಜರು ಸಂಸ್ಕೃತ ಭಾಷೆಯನ್ನು ಅರಿತವರಾಗಿದ್ದರು. ಆದುದರಿಂದ, ಮಂತ್ರಗಳ ಉಚ್ಚಾರ-ದೊಡನೆ ಮಹಾರಾಜರ ಮನಸ್ಸಿನಲ್ಲಿ ಅವುಗಳ ಅರ್ಥಾನುಸಂಧಾನವೂ ನಡೆಯಿತು. ತ್ರಿಸುಪರ್ಣವನ್ನು ಹೇಳಹೇಳುತ್ತಿದ್ದಂತೆ ಅವರ ಮನಸ್ಸು ಅರ್ಥದೊಡನೆ ಒಂದಾಗಿ ಪರಮಾತ್ಮನಿಗೆ ಮೊರೆಹೊಕ್ಕಿತು: – ''ಪರಬ್ರಹ್ಮ ತತ್ತ್ವವು ನನಗೆ ಸಿಗಲಿ. ಪರಮಾನಂದವೆಂಬ ಲಕ್ಷಣದಿಂದ ಕೂಡಿದ ವಸ್ತುವು ನನಗೆ ದೊರಕಲಿ. ಅಖಂಡೈಕರಸ ಮಧುಮಯವಾದ ಬ್ರಹ್ಮ ವಸ್ತುವು ನನ್ನೊಳಗೆ ಬೆಳಗಲಿ ಬ್ರಹ್ಮವಿದ್ಯೆಯಿಂದೊಡಗೂಡಿ ನಿತ್ಯವಾಗಿರುವ ಏ, ಪರಮಾತ್ಮನೇ, ದೇವ-ಮನುಷ್ಯ ಮೊದಲಾದ ನಿನ್ನ ಎಲ್ಲ ಸಂತತಿ-ಗಳೊಳಗೆ ನಾನೇ ನಿನ್ನ ಕರುಣೆಗೆ ಯೋಗ್ಯನಾದ ಬಾಲಕನಾಗಿದ್ದೇನೆ. ಸಂಸಾರವೆಂಬದೊಂದು ಸುಃಸ್ವಪ್ನವಾಗಿದೆ. ಅದನ್ನು ನೀನೊಬ್ಬನೇ ನಾಶ-ಮಾಡಬಲ್ಲೆ. ಆದುದರಿಂದ ಪರಮೇಶ್ವರನೇ, ದ್ವೈತ ಪ್ರತಿಭಾಸರೂಪದ ಎಲ್ಲ ದುಃಸ್ವಪ್ನಗಳನ್ನು ಕೊಂದು ಹಾಕು. ಎಲೈ ಪರಮಾತ್ಮಾ, ನಾನು ನನ್ನ ಎಲ್ಲ ಪ್ರಾಣ ವೃತ್ತಿಗಳನ್ನು ನಿನ್ನೊಳಗೆ ಆಹುತಿಕೊಟ್ಟು, ಎಲ್ಲ

ಇಂದ್ರಿಯಗಳ ನಿಯೋಧ ಮಾಡಿ, ನಿನ್ನನ್ನೇ ಕುರಿತು ಏಕಚಿತ್ತವುಳ್ಳವನಾಗಿದ್ದೇನೆ. ದೇವಾಧಿದೇವಾ, ನೀನು ಸರ್ವಾಂತರ್ಯಾಮಿಯಾಗಿದ್ದು ಸರ್ವಪ್ರೇರಕನಾಗಿರುವೆ. ಆದುದರಿಂದ ಜ್ಞಾನ ಪ್ರತಿಬಂಧಕವಾದ ಎಲ್ಲ ತರದ ಹೊಲಸನ್ನು ನನ್ನೊಳಗಿಂದ ತೆಗೆದು ಹಾಕು. ಅಸಂಭಾವನೆ ವಿಪರೀತ ಭಾವನೆಗಳನ್ನು ಕಿತ್ತಿಹಾಕಿ ನನಗೆ ನಿಜವಾದ ತತ್ತ್ವಜ್ಞಾನವು ದೊರಕುವಂತೆ ಅನುಗ್ರಹಿಸು. ಸೂರ್ಯ, ವಾಯು, ಎಲ್ಲ ನದಿಗಳ ಪವಿತ್ರವಾದ ನೀರು, ಭತ್ತ, ಗೋದಿ ಮೊದಲಾದ ಸಸ್ಯಗಳು, ಎಲ್ಲ ತರದ ಔಷಧಿ ವನಸ್ಪತಿಗಳು, ಕಿಂಬಹುನಾ ಜಗತ್ತಿನೊಳಗಿರುವ ಎಲ್ಲ ಪದಾರ್ಥಗಳೂ ನಿನ್ನ ಅಪ್ಪಣೆಯಿಂದ ನನಗೆ ಅನುಕೂಲವಾಗಿ, ನನಗೆ ತತ್ತ್ವಜ್ಞಾನ ಮಾಡಿ ಕೊಡುವ ಕೆಲಸದಲ್ಲಿ ಸಹಾಯ ಮಾಡಲಿ. ಎಲೈ ಬ್ರಹ್ಮನೇ, ನೀನೊಬ್ಬನೇ ಈ ಜಗತ್ತಿನೊಳಗೆ ನಾನಾತರದ ರೂಪಗಳಿಂದ ಪ್ರಕಾಶಿತನಾಗಿರುವಿ. ಶರೀರ ಮತ್ತು ಮನಸ್ಸು ಶುದ್ಧವಾಗಿ, ತತ್ತ್ವಜ್ಞಾನ ಧಾರಣೆಯ ಯೋಗ್ಯತೆಯು ನನಗೆ ಬರಲೆಂದು, ಅಗ್ನಿರೂಪನಾದ ನಿನ್ನಲ್ಲಿ ನಾನು ಆಹುತಿಗಳನ್ನು ಕೊಡುತ್ತಿರುವೆನು. ಪ್ರಸನ್ನನಾಗು!''

ಆ ಮೇಲೆ ವಿರಜಾಹೋಮವು ಸುರುವಾಯಿತು ರಜಸ್ಸೆಂದರೆ ಹೊಲಸು ಅಥವಾ ಮಲಿನತೆ. ಸಾಧಕನು ತನ್ನ ಮನಸ್ಸು ಮತ್ತು ಶರೀರಗಳೊಳಗಿನ ಹೊಲಸನ್ನೆಲ್ಲ ತೆಗೆದುಹಾಕಬೇಕೆಂಬ ಉದ್ದೇಶದಿಂದ ಮಾಡುವ ಹೋಮವೇ ವಿರಜಾ ಹೋಮವು. ''ನನ್ನ ದೇಹವು ಪಂಚಮಹಾಭೂತಗಳ ಅಂಶದಿಂದ ರಚಿತವಾಗಿದೆ. ಆದುದರಿಂದ ನನ್ನೊಳಗಿರುವ ಪೃಥ್ವೀ, ನೀರು, ತೇಜ, ವಾಯು ಮತ್ತು ಆಕಾಶಗಳೆಂಬ ಪಂಚಭೂತಗಳ ಅಂಶಗಳು ಶುದ್ಧವಾಗಲಿ. ರಜೋಗುಣ ಪ್ರಾಬಲ್ಯದಿಂದ ಮಲಿನತೆಯು ಹುಟ್ಟುತ್ತಿರುತ್ತದೆ. ನಾನು ಈಗ ಕೊಡುತ್ತಿರುವ ಆಹುತಿಗಳ ಬಲದಿಂದ ನನ್ನ ಮಲಿನತೆಯೆಲ್ಲ ತೊಲಗಿ ಹೋಗಲಿ. ಮತ್ತು ನಾನು ಕೇವಲ ಚಿನ್ಮಾತ್ರಜ್ಯೋತಿ ಸ್ವರೂಪನಾಗುವಂತೆ ಆಗಲಿ!'' ''ನನ್ನೊಳಗಿನ ಪ್ರಾಣಪಂಚಕ ಮತ್ತು ಕೋಷ ಪಂಚಕಗಳು ಪರಿಶುದ್ಧವಾಗಲಿ; ನಿರ್ಮಲವಾಗಲಿ.'' ''ನನ್ನೊಳಗಿನ ಶಬ್ದ-ಸ್ಪರ್ಶ-ರೂಪ-ರಸ-ಗಂಧ-ಪ್ರಸೂತವಾದ ಎಲ್ಲ ವಿಷಯ ಸಂಸ್ಕಾರಗಳೂ

ಶುದ್ಧವಾಗಲಿ. ನನ್ನ ಮನಸ್ಸು, ವಾಣಿ, ಕಾರ್ಯ ಮತ್ತು ಕರ್ಮ-ಗಳೆಲ್ಲವೂ ತಿಳಿಯಾಗಿ ಪುಣ್ಯಕರವಾಗಲಿ.'' ''ಎಲೈ, ಅಗ್ನಿ ಶರೀರದೊಳಗೆ ಮಲಗಿರುವ, ಜ್ಞಾನಪ್ರತಿಬಂಧ ಹರಣ ಕುಶಲನಾದ ಲೋಹಿತಾಕ್ಷ ಪುರುಷನೇ! ಜಾಗೃತನಾಗು. ಎಲೈ, ಅಭಿಷ್ಟ ಪೂರಕನೇ, ಜ್ಞಾನ ಪ್ರತಿಬಂಧಕವಾದ ಎಲ್ಲ ಸಂಗತಿಗಳನ್ನೂ ನಾಶಮಾಡಿ, ಗುರುಮುಖದಿಂದ ಕೇಳಿ ತಿಳಿದುಕೊಂಡ ಜ್ಞಾನದ ಧಾರಣೆಯು ನನ್ನ ಅಂತಕರಣದಲ್ಲಿ ಚನ್ನಾಗಿ ಆಗುವಂತೆ ಮಾಡು. ನನ್ನೊಳಗೆ ಏನೇನು ಇರುವದೋ ಅದೆಲ್ಲವೂ ಪರಿಶುದ್ಧವಾಗಲಿ.''

ಸಂನ್ಯಾಸಾಪೇಕ್ಷಿಯು ಏಷಣಾ ತ್ರಯಗಳನ್ನು ಬಿಸುಟ ಹಾಕಬೇಕಾಗು-ತ್ತದೆ. ೧. ಲೋಕೈಷಣಾ, ೨. ವಿತ್ತೈಷಣಾ ಮತ್ತು ೩. ಪುತ್ರೈಷಣೆಗಳೆಂಬವೇ ಮೂರು ಹಿರಿಬಯಕೆಗಳು. ಮಾನವನ ಅಪೇಕ್ಷೆಗಳಿಲ್ಲವೂ ಈ ಮೂರರಲ್ಲಿ ಅಡಕವಾಗುತ್ತವೆ. ಆದುದರಿಂದ ಯತಿಯಾಗಬೇಕೆನ್ನು-ವವನು ಈ ಮೂರಕ್ಕೂ ತಿಲಾಂಜಲಿ ಕೊಡಬೇಕಾಗುತ್ತದೆ. ''ನಾನು ಚಿದಾಭಾಸ ಸ್ವರೂಪನು. ಸಚ್ಚಿದಾನಂದ ರೂಪದ ಪರಬ್ರಹ್ಮವೇ ನನ್ನಲ್ಲಿ 'ನಾನು' 'ನಾನೆ'ಂದು ಸ್ಫುರಣವಾಗುತ್ತಿದೆ. ನಾನು ನಿಜವಾಗಿ ಸಚ್ಚಿ-ದಾನಂದ ಸ್ವರೂಪನೇ. ಜಗತ್ತೂ ಅದರೊಳಗಿನ ವಿಷಯಗಳೂ ನನಗೆ ಎಷ್ಟೂ ಸಂಬಂಧವಿಲ್ಲ. ನನಗೆ ಅವುಗಳ ಆವಶ್ಯಕತೆಯೇ ಇರುವದಿಲ್ಲ. ಆದುದರಿಂದ ನಾನು ಹೆಂಡಿರು ಮಕ್ಕಳು, ಸಂಪತ್ತು, ಲೋಕಮಾನ್ಯತೆ, ಸುಂದರ ಶರೀರ ಮೊದಲಾದವುಗಳ ಲಾಭವಾಗಬೇಕೆಂದಿರುವ ಎಲ್ಲ ವಾಸನೆ-ಗಳನ್ನೂ ಅಗ್ನಿಯೊಳಗೆ ಆಹುತಿ ಕೊಡುತ್ತೇನೆ!''

ಈ ರೀತಿಯಾಗಿ ಅನೇಕ ಆಹುತಿಗಳನ್ನ ಕೊಟ್ಟ ಮೇಲೆ ''ಭೂರಾದಿ ಸರ್ವ ಲೋಕಲಾಭದ ಸರ್ವ ಆಸೆಯನ್ನೂ ನಾನು ಈ ಕ್ಷಣದಿಂದ ಬಿಟ್ಟು ಕೊಟ್ಟಿರುತ್ತೇನೆ ಮತ್ತು ಈ ಕ್ಷಣದಿಂದ ವಿಶ್ವದೊಳಗಿರುವ ಎಲ್ಲ ಪ್ರಾಣಿ-ಮಾತ್ರರಿಗೂ ನಾನು ಅಭಯದಾನ ಕೊಟ್ಟಿರುತ್ತೇನೆ! ಯಾವ ಪ್ರಾಣಿಯು ಇನ್ನು ನನ್ನಿಂದ ಹಿಂಸೆಯನ್ನು ಹೊಂದಲಿಕ್ಕಿಲ್ಲ! ಯಾರಿಗೂ ನನ್ನಿಂದ ಭಯವಿಲ್ಲ!'' ಎಂದು ಪ್ರತಿಜ್ಞಾಪೂರ್ವಕವಾಗಿ ಶಪಥವನ್ನು ವಹಿಸಿಕೊಳ್ಳುವ ಕೆಲಸವಾಯಿತು. ಇಲ್ಲಿಗೆ ಹೋಮವು ಸಮಾಪ್ತವಾದಂತಾಯಿತು.

ಆ ಮೇಲೆ ಗಾರ್ಹಸ್ಥ್ಯ ಧರ್ಮದ ಹೆಗ್ಗುರುತುಗಳಾದ ಶಿಖಾಸೂತ್ರ ಗಳನ್ನೂ ಯಥಾವಿಧಿಯಾಗಿ ತ್ಯಾಗ ಮಾಡಲಾಯಿತು. ಮಹಾರಾಜರು ದಿಗಂಬರ ವೇಷದಿಂದ ಗುರುಗಳನ್ನು ಸಮೀಪಿಸಿದರು. ಮತ್ತು ಪುರಾತನ ಕಾಲದಿಂದ ನಡೆದು ಬಂದ ಪರಂಪರೆಯಂತೆ, ಶ್ರೀ ನಾರಾಯಣತೀರ್ಥರು ಅನುಗ್ರಹಿಸಿದ ಕೌಪೀನ, ಕಾಷಾಯ ವಸ್ತ್ರಗಳನ್ನು ಮಹಾರಾಜರು ಆನಂದ-ದಿಂದ ಸ್ವೀಕಾರ ಮಾಡಿದರು. ಗುರುಪೂಜೆಯಾದ ಮೇಲೆ ಶ್ರೀ ನಾರಾಯಣ ತೀರ್ಥರು ಮಹಾರಾಜರಿಗೆ ಹೊಸ ನಾಮವನ್ನೂ ದಯಪಾಲಿಸಿದರು. ನಾರಾಯಣತೀರ್ಥರು ಶ್ರೀ ದ್ವಾರಕಾಮಠದ ಪರಂಪರೆಗೆ ಹೊಂದಿಕೊಂಡವ ರಾದುದರಿಂದ, ಮಹಾರಾಜರಿಗೆ ''ಶ್ರೀಕೃಷ್ಣತೀರ್ಥ''ರೆಂಬ ಅಭಿಧಾನವು ಕೊಡಲ್ಪಟ್ಟಿತು. ಮತಾಮ್ನಾಯದಲ್ಲಿ ''ತೀರ್ಥ''ವೆಂಬ ಹೆಸರಿಗೆ ಕೆಳಗಿನಂತೆ ಅರ್ಥವನ್ನು ಕೊಡಲಾಗಿದೆ—

ತ್ರಿವೇಣೀ ಸಂಗಮೇ ತೀರ್ಥೇ ತತ್ತ್ವಮಸ್ಯಾದಿ ಲಕ್ಷಣೇ ।
ಸ್ನಾಯಾತ್ತತ್ತ್ವಾರ್ಥ ಭಾವೇನ ತೀರ್ಥನಾಮಾ ಸ ಉಚ್ಯತೇ ॥

ಇದರ ಅರ್ಥವೇನಂದರೆ— ತತ್, ತ್ವಮ್, ಅಸಿ ಎಂಬ ಮೂರೂ ಪದಗಳು ಒಟ್ಟಿಗೆ ಕೂಡಿ ಅದ್ವಿತೀಯ ಬ್ರಹ್ಮಾನುಭವವನ್ನು ತಂದುಕೊಡುವ ಸಾಧನ ವಾಗಿವೆ. ಇದೇ ತ್ರಿವೇಣೀ ಸಂಗಮವೆಂದು ಹೇಳಬಹುದು. ಇದೇ ನಿಜವಾದ ತೀರ್ಥವು. ಇದರಲ್ಲಿ ಯಾವನು ತಾತ್ವಿಕ ದೃಷ್ಟಿಯಿಂದ ಸ್ನಾನ ಮಾಡು-ವನೋ, ಅವನೇ ''ತೀರ್ಥ''ವೆಂಬ ಹೆಸರನ್ನು ಧಾರಣ ಮಾಡಲಿಕ್ಕೆ ಅಧಿಕಾರಿಯು. ಎಂದರೆ ಅದ್ವಿತೀಯ ಬ್ರಹ್ಮಾತ್ಮೈಕ್ಯ ಜ್ಞಾನವನ್ನು ಪಡೆದು ಕೊಳ್ಳುವವನೇ ''ತೀರ್ಥ''ವೆಂಬ ಹೆಸರಿನಿಂದ ಕರೆಸಿಕೊಳ್ಳಲಿಕ್ಕೆ ಯೋಗ್ಯ-ನಾಗುವನೆಂದು ಅರ್ಥವು.

ಇಲ್ಲಿಯ ವರೆಗಾದ ವಿಧಿಗಳೆಲ್ಲ ಸಂನ್ಯಾಸದ ಪೂರ್ವಸಿದ್ಧತೆ ಮಾತ್ರ ವೆಂದು ಹೇಳಬಹುದು. ಸನ್ಯಾಸ ದೀಕ್ಷೆಯ ನಿಜವಾದ ಭಾಗವು ಇನ್ನೂ ಮುಂದೆಯೇ ಉಳಿದಿತ್ತು. ಮಹಾರಾಜರು ಮನೋವಾಕ್ಕಾಯ ಕರ್ಮ-ಗಳನ್ನು ನಿರ್ಮಲವಾಗಿ, ಪವಿತ್ರವಾಗಿ, ತಿಳಿಯಾಗಿ ಮಾಡಿಕೊಂಡು, ಪೂರ್ವಾ-ಶ್ರಮದ ಎಲ್ಲ ಸಂಬಂಧಗಳನ್ನು ಹರಿದುಹಾಕಿ, ಬಯಕೆಗಳನ್ನು ಚಿವುಟಿಹಾಕಿ,

ಗುರುದೇವ ದತ್ತವಾದ ಶಾಟಿ ಕೌಪೀನಗಳನ್ನು ಧಾರಣ ಮಾಡಿಕೊಂಡು, ಹೊಸ ನಾಮದಿಂದ ವಿಭೂಷಿತರಾಗಿ ಗುರುಗಳ ಹತ್ತಿರಕ್ಕೆ ಬಂದು ಕುಳಿತರು. ಗುರುಗಳೂ ಉಪದೇಶವನ್ನು ಕೊಡಲಿಕ್ಕೆ ಸಿದ್ಧರಾಗಿಯೇ ಇದ್ದರು. ಮಹಾರಾಜರು ಸಮಾಹಿತಚಿತ್ತರಾಗಿ ಏಕಾಗ್ರತೆಯಿಂದ ಉಪದೇಶದ ದಾರೀ ಕಾಯಹತ್ತಿದರು.

ಮಹಾ ವಾಕ್ಯದ ಶ್ರವಣ-ಮನನ-ನಿಧಿಧ್ಯಾಸಗಳಿಂದಲೇ ಜ್ಞಾನವಾಗುವ ದೆಂದು ಶ್ರೀ ಮಚ್ಛಂಕರ ಭಗವತ್‌ಪಾದರವರ ಸಿದ್ಧಾಂತವಿದೆ. ಗುರುವು ಶಿಷ್ಯನಿಗೆ ಬೋಧಿಸಬೇಕಾದ ನಿಜವಾದ ರಹಸ್ಯವೆಂದರೆ ಬ್ರಹ್ಮಾತ್ಮೈಕ್ಯ ಜ್ಞಾನವೇ ಸರಿ. ನಾಲ್ಕೂ ವೇದಗಳ ನಾಲ್ಕು ಮಹಾ ವಾಕ್ಯಗಳೂ ಈ ಒಂದೇ ಮಾತನ್ನೇ ಬೇರೆ ಬೇರೆ ರೀತಿಯಿಂದ ತಿಳಿಸಿಕೊಡುತ್ತಿವೆ. ಒಂದೊಂದು ಮಠದವರಿಗೆ ಒಂದೊಂದು ಮಹಾ ವಾಕ್ಯವು ಮೀಸಲಾಗಿದೆ. ನಾರಾಯಣ ತೀರ್ಥರು ದ್ವಾರಕಾಪೀಠದ ಸಾಂಪ್ರದಾಯದವರು. ದ್ವಾರಕಾಪೀಠದಲ್ಲಿ ಸಾಮವೇದದ ಪರಂಪರೆಯು ನಡೆಯುತ್ತ ಬಂದಿದೆ. ಸಾಮವೇದದ ಉಪನಿಷತ್ತುಗಳೆಂದರೆ ಛಾಂದೋಗ್ಯ ಮತ್ತು ಕೇನೋಪನಿಷತ್ತುಗಳು. ಛಾಂದೋಗ್ಯದ ೬ ನೆಯ ಅಧ್ಯಾಯದಲ್ಲಿ ಸಾಮವೇದದ ಮಹಾ ವಾಕ್ಯವು ಬಂದಿದೆ. ಆರುಣಿಯು ತನ್ನ ಮಗನಾದ ಶ್ವೇತುಕೇತುವಿಗೆ ಅದನ್ನು ಹೇಳಿಕೊಡುತ್ತಾನೆ. ಮೊದಲು ಅದ್ವಿತೀಯವಾದ ಚಿನ್ಮಾತ್ರ ಸ್ವರೂಪದ ಬ್ರಹ್ಮವೊಂದೇ ಇತ್ತೆಂದೂ, ಅದೇ ಮಹಾಭೂತಗಳ ಮುಖಾಂತರ ಪ್ರಾಣಿ ಶರೀರಗಳನ್ನು ಹುಟ್ಟಿಸಿ, ಜೀವರೂಪದಿಂದ ಅವುಗಳಲ್ಲಿ ಪ್ರವೇಶಿಸಿ ಕ್ರೀಡಿಸುತ್ತಿರುವದೆಂದೂ ಅಲ್ಲಿ ಹೇಳಿದೆ. ಜೀವವೆಂಬ ಸ್ವತಂತ್ರವಾದ ವಸ್ತುವೊಂದು ಇಲ್ಲವೇ ಇಲ್ಲ. ನಿತ್ಯ, ಶುದ್ಧ, ಬುದ್ಧ ಮತ್ತು ಮುಕ್ತವಾದ ಪರಮಾತ್ಮ ವಸ್ತುವೇ ತಿಳಿಗೇಡಿಗಳಿಗೆ ಜೀವರೂಪದಿಂದ ತೋರಿಸಿಕೊಳ್ಳುವದು. ನಾವೆಲ್ಲರೂ ನಮ್ಮ ಸ್ವರೂಪವನ್ನು ಮರೆತು, ಸ್ವದೇಶವನ್ನು ಬಿಟ್ಟು ಬಹುದೂರ ಬಂದು ಪರದೇಶಿಗಳಾಗಿ, ಅನಾಥರಾಗಿ, ಇಲ್ಲದ ದುಃಖಗಳನ್ನು ಕಲ್ಪಿಸಿಕೊಂಡು ಗೋಳಾಡುತ್ತಿದ್ದೇವೆ. ಇದನ್ನು ಹೋಗಲಾಡಿಸಲಿಕ್ಕೆ ಗುರು ಒಬ್ಬನೇ ಸಮರ್ಥನು. ಅವನು ''ತತ್ತ್ವಮಸಿ'' ಎಂಬ ಮಹಾ ವಾಕ್ಯವನ್ನು ಉಪದೇಶಮಾಡಿ ''ವಸ್ತುತಃ ಮೂಲದಲ್ಲಿ ಚಿನ್ಮಾತ್ರ ಸ್ವರೂಪದಿಂದಿದ್ದ ವಸ್ತುವೊಂದೇ ಚರಾಚರ ರೂಪದಿಂದ ಕಾಣಿಸಿಕೊಳ್ಳುತ್ತಿದೆ.

ಇಂದಿಗಾದರೂ ವಿಶ್ವದ ನಿಜವಾದ ಸ್ವರೂಪವೆಂದರೆ ಆ ಚಿನ್ಮಾತ್ರ ವಸ್ತುವೇ ಎಲ್ಲವೂ ಆದೇ ಆಗಿದೆ. ಅದೇ ನೀನು. ನೀನೇ ಆದು.'' ಎಂದು ಬೋಧಿಸುವನು. ಈ ಮಾತನ್ನು ಗುರುಮುಖದಿಂದ ಕೇಳಿಕೊಂಡ ಮೇಲೆ ಅವರ ಅರ್ಥವನ್ನೇ ಮನನ ಮಾಡುತ್ತ, ಆ ತರದ ಅನುಭವವನ್ನು ಸಾಕ್ಷಾತ್ಕರಿಸಿಕೊಳ್ಳುವದೇ ಪರಮ ಪುರುಷಾರ್ಥವೆಂದು ವೇದಾಂತವು ಹೇಳುತ್ತದೆ. ಇದಕ್ಕಾಗಿಯೇ ಸಂನ್ಯಾಸ ವಿಧಿಯು ಅಸ್ತಿತ್ವದಲ್ಲಿ ಬಂದಿದೆ

ಆಯಿತು. ಶ್ರೀ ನಾರಾಯಣತೀರ್ಥರು ಮಹಾರಾಜರನ್ನು ತೀರ ಸಮೀಪದಲ್ಲಿ ಕುಳ್ಳಿರಿಸಿಕೊಂಡು ಅವರಿಗೆ ಮಹಾಮಂತ್ರೋಪದೇಶವನ್ನು ಮಾಡಿ, ತಲೆಯ ಮೇಲೆ ವರದ ಹಸ್ತವನ್ನಿಟ್ಟು ಕೃಪಾದೃಷ್ಟಿಯಿಂದ ನೋಡಿದರು. ಮಹಾರಾಜರ ಮೈಯಲ್ಲಿ ವಿದ್ಯುತ್‌ಸಂಚಾರವಾಯಿತು. ಕ್ಷಣಾರ್ಧದಲ್ಲಿ ಜಗತ್ತೂ, ಗುರುಗಳೂ, ತಾವೂ ಮಾಯವಾಗಿ ಹೋಗಿ ಅಖಂಡ ಚಿತ್ಸಾಗರದ ಗಾಢವಾದ ಸಮೂಹದಲ್ಲಿ ತೇಲಾಡುತ್ತಿರುವೆವೆಂದು ಮಹಾರಾಜರಿಗೆ ಎನಿಸಿತು. ಪಂಚಜ್ಞಾನೇಂದ್ರಿಯಗಳು, ಮನಸ್ಸು ಮತ್ತು ಬುದ್ಧಿಗಳು ತಮ್ಮ ಕೆಲಸವನ್ನು ನಿಲ್ಲಿಸಿಬಿಟ್ಟವು. ಕಠೋಪನಿಷತ್ತಿನಲ್ಲಿ ಹೇಳಿದಂತೆ—

ಯದಾ ಪಂಚಾವತಿಷ್ಠಂತೇ ಜ್ಞಾನಾನಿ ಮನಸಾ ಸಹ ।
ಬುದ್ಧಿಶ್ಚ ನವಿಚೇಷ್ಟತೇ ತಾಮಾಹುಃ ಪರಮಾಂ ಗತಿಮ್ ॥

ಮಹಾರಾಜರು ಕೆಲಹೊತ್ತು ಪರಮಾವಸ್ಥೆಯ ಸವಿಯನ್ನೇ ಪಡೆದು ಕೃತಕೃತ್ಯರಾದರು.

ಕೆಲಹೊತ್ತಿನ ಮೇಲೆ ಮಹಾರಾಜರು ಕಣ್ತೆರೆದು ತಮ್ಮ ಗುರುಗಳನ್ನು ಕೃತಜ್ಞತೆಯಿಂದ ವಂದಿಸಿದರು. ನಾರಾಯಣತೀರ್ಥರು ತುಂಬಾ ಸಂತೋಷಪಟ್ಟು, ''ಮಗೂ, ನಿನಗೆ ಕೊಡತಕ್ಕದ್ದನ್ನೆಲ್ಲ ಕೊಟ್ಟಿದ್ದೇನೆ. ಇನ್ನೊಂದು ಕೆಲಸ ಮಾತ್ರ ಉಳಿದಿದೆ. ಸಂನ್ಯಾಸಿಗಳು ದಂಡವನ್ನು ಧಾರಣ ಮಾಡಬೇಕೆಂದು ನಿಯಮವಿದೆ. ಆದರೆ ನಾವು ದಂಡವನ್ನು ಬಿಟ್ಟು ಬಹಳ ದಿನಗಳಾದವು. ಶಾಸ್ತ್ರವಿಧಿಗೆ ಅನುಸಾರವಾಗಿಯೇ ನಾವದನ್ನು ಬಿಟ್ಟಿರುತ್ತೇವೆ. ಆದುದರಿಂದ ನಾನು ನಿನಗೆ ದಂಡ ಕೊಟ್ಟಿರುವದಿಲ್ಲ. ಇನ್ನೊಬ್ಬ

ಮಹಾ ಪುರುಷನು ನಿನಗೆ ದಂಡಕೊಟ್ಟು ನಿನ್ನನ್ನು ಪೂರ್ಣವಾಗಿ ಅನುಗ್ರಹಿಸುವನು. ಚಿಂತೆಮಾಡಬೇಡ. ಇಲ್ಲಿಯ ನಿನ್ನ ಕೆಲಸವೆಲ್ಲವೂ ಮುಗಿದಂತಾಯಿತು,'' ಎಂದು ಹೇಳಿ ಮಹಾರಾಜರ ಮೈಮೇಲೆ ಕೈಯಾಡಿಸಿ ಹರಿಸಿದರು. ಅಂದಿನಿಂದ ಮಹಾರಾಜರು ಪರೆಬಟ್ಟ ಹಾವಿನಂತೆ ಹೊಸ ತೇಜದಿಂದ ಬೆಳಗಹತ್ತಿದರೆಂದು ಬೇರೆ ಹೇಳಲಿಕ್ಕೆ ಬೇಡ.

ಮಹಾರಾಜರ ಶಿಷ್ಯರಾದ ಕುಬೇರರು ತಮ್ಮ ಸಂಗಡ ತಂದಿದ್ದ ರೂಪಾಯಿಗಳನ್ನು ವೆಚ್ಚಮಾಡಿ ಬಂದವರಿಗೆಲ್ಲ ಸುಗ್ಯಾಸಭೋಜನವನ್ನು ಹಾಕಿ, ದಾನಧರ್ಮಗಳನ್ನು ಮಾಡಿದರು. ಅಲ್ಲಿ ಕೂಡಿದ ಅನೇಕ ಸದ್ಗೃಹಸ್ಥರೂ ಕೂಡ ಈ ದಾನಧರ್ಮಗಳಿಗೆ ತಾವೂ ಸಹಾಯಮಾಡಿ ಪುಣ್ಯ ಪಡಕೊಂಡರು. ಆ ದಿನ ಅಲ್ಲಿ ಕೂಡಿದವರೆಲ್ಲ ಸಂತುಷ್ಟರಾಗಿ ತಮ್ಮ ತಮ್ಮ ಮನೆಗೆ ಹೋದರು.

ಗುರುಗಳ ಅಪ್ಪಣೆಯಂತೆ ಕುಬೇರರು ಈ ಮೊದಲೇ ನೇಸರಿಗೆಯ ನರಹರಿಭಟ್ಟರಿಗೆ ಒಂದು ಪತ್ರವನ್ನು ಬರೆದಿದ್ದರು. ಪತ್ರದ ಆಶಯವು ಏನಿತ್ತೆಂಬದು ಸ್ಪಷ್ಟವಿದೆ. ''ಗುರುಮಹಾರಾಜರು (ಶ್ರೀ ಬೋಠೆ ಮಾಸ್ತರರು) ಸುಂದರಳೂ ತರುಣಳೂ ಆದ ವೈರಾಗ್ಯ ಸ್ತ್ರೀಯನ್ನು ಮಿರಜಿಯ ಘಾಟಿನ ಮೇಲೆ ಸಮಾರಂಭದಿಂದ ಲಗ್ನವಾದರು. ಕಾರಣ ನೀವು ನಿಮ್ಮ ಕನ್ನೆಗೆ ಬೇರೆ ವರನನ್ನು ಶೋಧಿಸಬೇಕು.'' ಅದರಂತೆಯೇ ಬೆಳಗಾಂವಿಯ ರಾಮಕೃಷ್ಣಪಂತರಿಗೂ ಒಂದು ಪತ್ರ ಹೋಯಿತು. ''ಗುರುಮಹಾರಾಜರು ಆಶ್ರಮವನ್ನು ಸ್ವೀಕರಿಸಿ ನಾರಾಯಣ ಸ್ವರೂಪರಾದರು. ಅದರಿಂದ ಅವರು ತಮ್ಮ ಕಡೆಗೆ ಕೊಟ್ಟ ಎಲ್ಲ ಸಾಮಾನುಗಳನ್ನೂ ಅವರ ಅಣ್ಣಂದಿರಾದ ಗೋವಿಂದಭಟ್ಟರಿಗೆ ಒಪ್ಪಿಸಬೇಕು.'' ಇದೇ ರೀತಿಯಿಂದ ಗೋಕಾಕ ಧಾರವಾಡಗಳಲ್ಲಿರುವ ಇಷ್ಟ ಮಿತ್ರರಿಗೂ ಆಪ್ತೇಷ್ಟರಿಗೂ ಮಹಾರಾಜರ ಆಶ್ರಮ ಸ್ವೀಕಾರದ ಸಂಗತಿಯನ್ನು ಪತ್ರ ಮುಖದಿಂದ ತಿಳಿಸಲಾಯಿತು.


———

೪ ಶ್ರೀ ಶಾಂತಾಶ್ರಮ ಸ್ವಾಮಿಗಳವರ ಅನುಗ್ರಹ

ಎಲ, ಇದೇನು ? ಹರಿಪುರದ ಶ್ರೀ ಸಂಗಮೇಶ್ವರನ ದೇವಾಲಯದಲ್ಲಿ ಇಂದು ಇಷ್ಟೇಕೆ ಜನರ ದಟ್ಟಣೆಯಾಗಿರಬಹುದು ?

ಹರಿಪುರವು ಬುಧಗಾಂವ ಸಂಸ್ಥಾನಕ್ಕೆ ಸೇರಿದ ಒಂದು ಸಣ್ಣ ಗ್ರಾಮವು. ಭಗವತಿಯರಾದ ಕೃಷ್ಣಾ ಮತ್ತು ವಾರಣಾ ನದಿಗಳು ಇಲ್ಲಿ ಅಕ್ಕ-ತಂಗಿಯರಂತೆ ಒಬ್ಬರನ್ನೊಬ್ಬರು ತಬ್ಬಿಕೊಂಡು ಮುಂದುವರೆಯುತ್ತಿದ್ದಾರೆ. ಬ್ರಾಹ್ಮಣರ ವಸತಿಯೂ ತಕ್ಕಮಟ್ಟಿಗೆ ಇದೆ. ಜಪ, ವ್ರತ, ಅನುಷ್ಠಾನ ಹೋಮ ಹವನಾದಿಗಳನ್ನು ಮಾಡಲಿಕ್ಕೆ ಹರಿಪುರವು ಒಳ್ಳೇ ಅನುಕೂಲವಾದ ಸ್ಥಳವು ಎಂತೆಯೇ ಈ ಊರಲ್ಲಿ ಎಂದಾದರೂ ನೈಷ್ಠಿಕ ಬ್ರಹ್ಮಚಾರಿಗಳು, ಯತಿಗಳು, ಬಾವಾ-ಬೈರಾಗಿಗಳು, ತಪಸ್ವಿಗಳು—ಇವರೇ ಮೊದಲಾದವರು ಎಡೆಬಿಡದೆ ಕಾಣುತ್ತಿರುತ್ತಾರೆ. ಇವರಿಗೆಲ್ಲ ಆಶ್ರಯವೆಂದರೆ ಭವ್ಯವಾದ, ಪ್ರಶಸ್ತವಾದ, ಎಲ್ಲ ಅನುಕೂಲತೆಗಳಿಂದ ಸಜ್ಜಾದ ಶ್ರೀ ಸಂಗಮೇಶ್ವರನ ದೇವಾಲಯವೇ ಸರಿ.

ಇಂದು ಶ್ರೀ ಮನ್ನೃಪಶಾಲಿವಾಹನ ಶಕದ ೧೮೦೨ ನೆಯ ವರುಷದ ವೈಶಾಖ ಶುದ್ಧ ತೃತೀಯೆಯು. ಇದಕ್ಕೆ "ಅಕ್ಷಯ್ಯ ತೃತೀಯಾ" ಎಂದು ಹೆಸರು. 'ಅಕ್ಷಯ'ವೆಂದರೆ 'ಎಂದೆಂದಿಗೂ ನಾಶವಾಗದ್ದು' ಎಂದರ್ಥ. ಸೈನ್ಯದ ಸಹಾಯದಿಂದ ಮೇರೆದಪ್ಪಿ ನಡೆಯುತ್ತ, ಜನರಿಗೆಲ್ಲ ಕಂಟಕಪ್ರಾಯರಾಗಿ ಪರಿಣಮಿಸಿದ ಉನ್ಮತ್ತ ಕ್ಷತ್ರಿಯರ ಸೊಕ್ಕನ್ನು ಅಡಗಿಸಲೆಂದು ಸಾಕ್ಷಾತ್ ಭಗವಂತನೇ ಶ್ರೀ ಪರಶುರಾಮ ದೇವರ ರೂಪದಿಂದ ಅವತಾರ ಮಾಡಿದುದು ಈ ಶುಭತಿಥಿಯ ದಿವಸವೇ. ಸುಮಂಗಲೆಯರು ಇಂದು ಗೌರೀದೇವಿಯನ್ನು ಪ್ರತಿಷ್ಠಾಪಿಸಿ, ಪೂಜೆ ಮಾಡುವ ಮಂಗಲ ದಿನವೂ ಇದೆ.



ಶ್ರೀಮತ್ಪರಮಹಂಸ ಶ್ರೀ ಶಾಂತಾಶ್ರಮ ಸ್ವಾಮಿ
ಮಹಾರಾಜರು

ಜನ್ಮ ಶಕೆ ೧೭೭೬ ಸಂನ್ಯಾಸ ಶಕೆ ೧೭೦೧ ಸಮಾಧಿ ಶಕೆ ೧೭೪೬.

ಜನರಿಂದು ಸಂಗಮದಲ್ಲಿ ಸ್ನಾನ ಮಾಡಿಕೊಂಡು ತಂಡತಂಡವಾಗಿ ಶ್ರೀ ಸಂಗಮೇಶ್ವರನ ದೇವಾಲಯಕ್ಕೆ ನುಗ್ಗುತ್ತಿದ್ದಾರೆ. ಬನ್ನಿ, ವಾಚಕರೇ, ನಾವೂ ಅವರ ಸಂಗಡ ಅಲ್ಲಿಗೆ ಧಾವಿಸಿ, ಅಲ್ಲಿ ಇಂತಹ ಮಹತ್ತ್ವವಾದುದು ಏನು ನಡೆದಿದೆಯೆಂಬದನ್ನು ನೋಡುವ.

ಸಂಗಮೇಶ್ವರನ ಮುಂದಿನ ಭವ್ಯವಾದ ಸಭಾಮಂಟಪದಲ್ಲಿ ಯತಿ ಸಮ್ರಾಟರೊಬ್ಬರು ಉಚ್ಚವಾದ ವ್ಯಾಘ್ರಾಜಿನದ ಆಸನದ ಮೇಲೆ ವಿರಾಜಮಾನರಾಗಿದ್ದಾರೆ. ಅವರ ಮೈಮೇಲೆ ಕೌಪೀನವೊಂದರ ಹೊರತಾಗಿ ಬೇರೆ ಯಾವ ವಸ್ತ್ರ ಪ್ರಾವರಣಗಳೂ ಇರುವದಿಲ್ಲ. ಬಲಭಾಗದಲ್ಲಿ ಪವಿತ್ರೋದಕದಿಂದ ತುಂಬಿದ ಒಂದು ಕಮಂಡಲು, ಎಡಭಾಗದಲ್ಲಿ ಉನ್ನತವಾದುದೊಂದು ದಂಡವು ಶೋಭಿಸುತ್ತಿವೆ. ಯತಿಗಳು ಅರ್ಧೋನ್ಮೀಲಿತ ಕಣ್ಣುಗಳಿಂದ ಸುತ್ತಲಿನ ಸಂಗತಿಗಳನ್ನು ನಿರೀಕ್ಷಿಸುತ್ತಿದ್ದವರಂತೆ ಕಂಡರೂ ಅವರ ಲಕ್ಷ್ಯವು ಎಷ್ಟು ಮಾತ್ರವೂ ಅತ್ತ ಕಡೆಗಿದ್ದಂತೆ ಕಾಣುವದಿಲ್ಲ. ಭಾವಸಮಾಧಿಯು ಸುಖನನ್ನು ಬಿಟ್ಟು ಎಚ್ಚರಿಕೆಯು ಜಂಜಾಟಕ್ಕೆ ಬರಲಿಕ್ಕೆ ಅವರ ಮನಸ್ಸು ಒಲ್ಲೆಂದೆನ್ನುವಂತೆ ತೋರುತ್ತದೆ. ಅವರು ನಿಜವಾಗಿಯೂ ಭಾವಮುಖದಲ್ಲಿದ್ದಾರೆ. ಭಾವಮುಖವೆಂದರೆ ಆದ್ವೈತದ ಸಮಾಧಿ ಮತ್ತು ಜಾಗ್ರದವಸ್ಥೆಗಳ ನಡುವಿನ ಅವಸ್ಥೆಯು. ಇದು ಪರಮಾರ್ಥ ಸಾಧಕರು ಅನುಭವಿಸಬಹುದಾದ ಶ್ರೇಷ್ಠ ತರಗತಿಯ ಸ್ಥಿತಿಯು. ಈ ಸ್ಥಿತಿಯಲ್ಲಿರುವವನು ಬ್ರಹ್ಮಾನಂದದ ಸುಖವನ್ನೂ ಪ್ರತ್ಯಕ್ಷವಾಗಿ ಅನುಭವಿಸುತ್ತಿರುತ್ತಾನೆ. ಮತ್ತು ವ್ಯಾವಹಾರಿಕ ಪ್ರಪಂಚದ ಸಂಗತಿಗಳನ್ನೂ ಕಾಣುತ್ತಿರುತ್ತಾನೆ. ಇಂತಹ ಅದ್ವಿತೀಯವಾದ ಅವಸ್ಥೆಯಲ್ಲಿ ಯತೀಶ್ವರರು ಮಗ್ನರಾಗಿದ್ದಾರೆ.

ಅವರ ಮುಖವು ಧೀರ-ಗಂಭೀರವೂ ಪ್ರಶಾಂತವೂ ಆಗಿತ್ತು. ಅತಿ ಘೋರವಾದ ತಪಸ್ಸಿನಿಂದ ಅವರ ದೇಹವು ಒಣಗಿದುದೂ ಕೃಶವೂ ಆಗಿಬಿಟ್ಟಿತ್ತು. ವೈಷಯಿಕ ವಿಚಾರವು ಆ ಮಹಾಮಹಿಮರ ಸಮೀಪಕ್ಕೂ ಕೂಡ ಸುಳಿಯುತ್ತಿರುವಂತೆ ಕಾಣಲಿಲ್ಲ. ಅವರು ಮೂರ್ತಿಮಂತ ವೈರಾಗ್ಯ ಸ್ವರೂಪರಾಗಿದ್ದರು. ಅವರನ್ನು ಯಾವ ಕಾಮವಾಸನೆ ಅಥವಾ ಬಯಕೆಗಳು ಕದಲಿಸುವಂತೆ ಕಾಣಲಿಲ್ಲ. ಅನೇಕ ಮುಖವಾಗಿ ಅತಿಪ್ರಬಲವಾಗಿರುವ

ಮಾಯಾಪಾಶವನ್ನು ಹರಿದೊಗೆದ ಬಂಟರವರೆಂಬದು, ಅವರನ್ನು ನೋಡಿದವರಿಗೆ ಸಹಜವಾಗಿ ಹೊಳೆಯುವಂತಿತ್ತು. ಅವರ ಸುತ್ತುಮುತ್ತೆಲ್ಲ ಬ್ರಹ್ಮಾನುಭವದ ಶಾಂತಿ-ಸುಖ-ಸಮಾಧಾನಗಳು ಒಡಮೂಡಿದ್ದವು. ಬ್ರಹ್ಮತೇಜವು ಅವರ ಮೋರೆಯ ಮೇಲೆ ಉಕ್ಕುತ್ತಿತ್ತು! ಸ್ವಲ್ಪದರಲ್ಲಿ ಹೇಳಬೇಕೆಂದರೆ, ಅವರು ನಮ್ಮ ಪೂರ್ವಕಾಲೀನ ಶ್ರೇಷ್ಠ ಋಷಿಗಳ ನೆನಪನ್ನು ತಂದುಕೊಡುವಂಥರಾಗಿದ್ದರು.

ಅವರ ಸುತ್ತುಮುತ್ತು ಅನತಿ ದೂರದಲ್ಲಿ, ನಾಲ್ಕುಜನ ಯತಿಗಳು ಕೃಷ್ಣಾಜಿನಗಳ ಆಸನಗಳ ಮೇಲೆ ಕುಳಿತುಕೊಂಡಿದ್ದರು. ಅಲ್ಲಿಯ ವಾತಾವರಣವನ್ನು ನೋಡಿದರೆ, ಉಚ್ಚಾಸನದಲ್ಲಿ ಕುಳಿತವರು ಗುರುಗಳಾಗಲಿ, ಗುರುಸ್ಥಾನದಲ್ಲಿ ಇರುವವರಾಗಲಿ ಇರಬೇಕೆಂದೂ, ಉಳಿದವರು ಅವರ ಶಿಷ್ಯರಾಗಲಿ, ಶಿಷ್ಯಭಾವದಿಂದ ನಡೆದುಕೊಳ್ಳುವವರಾಗಲಿ ಇರಬೇಕೆಂದೂ ಸ್ಪಷ್ಟವಾಗಿ ತಿಳಿಯುವಂತಿತ್ತು. ಆ ದೃಶ್ಯವನ್ನು ನೋಡಿದ ಅನೇಕ ಮಹನೀಯರು, ಇಂದು ಶ್ರೀ ಮಚ್ಛಂಕರ ಭಗವತ್‌ಪಾದರವರೇ ತಮ್ಮ ನಾಲ್ಕು ಜನ ಶಿಷ್ಯರೊಡನೆ ಇಲ್ಲಿ ವಿಶ್ರಮಿಸಿಕೊಂಡಂತೆ ಕಾಣುತ್ತದೆ. ಎಂದು ಹೇಳುತ್ತಿದ್ದರು. ಅದು ಸುಳ್ಳಲ್ಲವೆಂಬದನ್ನು ಸಹೃದಯರಾದವರೆಲ್ಲರೂ ಒಪ್ಪಲೇಬೇಕಾದ ಮಾತು.

ಈ ಪುಣ್ಯಕರವಾದ ದಿನ ಕೃಷ್ಣಾ-ವಾರಣಾ ನದಿಗಳ ಪಾವನಕರವಾದ ಸಂಗಮದಲ್ಲಿ ಮಿಂದು, ಭಗವಾನ್ ಶ್ರೀ ಸಂಗಮೇಶ್ವರನಿಗೆ ಪ್ರಣಾಮ ಮಾಡಿ ಯತಿಸಮ್ರಾಟರ ದರುಶನ ಪಡಕೊಂಡು ಕೃತಕೃತ್ಯರಾಗಬೇಕೆಂಬ ಹಿರಿಯಾಸೆಯಿಂದ ಆ ಜನ ಸಮೂಹವು ಅಲ್ಲಿಗೆ ಇರುವೆಗಳ ಸಾಲಿನಂತೆ ಹೋಗುತ್ತಿತ್ತೆಂಬದು ಸ್ಪಷ್ಟವಾಗಿತ್ತು. ಬರಬರುತ್ತ ಯತೀಶ್ವರರು ತಮ್ಮ ಕಣ್ಣುಗಳನ್ನು ಪೂರ್ಣವಾಗಿ ತೆರೆದರು. ಮತ್ತು ತಮಗೆ ಸಹಜವಾದ ಪ್ರಸನ್ನವಾದ ಮುಖ-ಮುದ್ರೆಯಿಂದ ಎಲ್ಲರನ್ನೂ ನೋಡಿ ಹರಿಸಿದರು. ಮೋರೆಯ ಮೇಲೆ ಮುಗುಳು ನಗೆಯು ಮಿನುಗುತ್ತಿತ್ತು. ಅವರು ಕಣ್ಣು ತೆರೆದೊಡನೆ ಕೂಡಿದ ಜನಸಂದೋಹವು "ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಮಹಾರಾಜಕೀ ಜಯ" ಎಂಬೊಂದೇ ಉಸಿರಿನಿಂದ ಗರ್ಜನೆಯನ್ನು ಮಾಡಿ

ಯತೀಶ್ವರರನ್ನು ಸ್ವಾಗತಿಸಿತು. ಪ್ರತಿಯೊಬ್ಬರು ಯತೀಶ್ವರರ ಮುಂದೆ ಹಣ್ಣು, ತೆಂಗಿನಕಾಯಿ, ಕಲ್ಲುಸಕ್ಕರೆ, ಉತ್ತತ್ತಿ, ಕರ್ಪೂರ, ಊದಿನಕಡ್ಡಿ ಮೊದಲಾದವುಗಳನ್ನು ಆದರದಿಂದ ಇಟ್ಟು, ದೀರ್ಘದಂಡ ನಮಸ್ಕಾರವನ್ನು ಮಾಡಿ ಧನ್ಯತೆಯನ್ನು ಪಡೆದರು.

ಇಂತಹ ಈ ಯತಿ ಸಮ್ರಾಟರು ಯಾರು, ಎಂದು ವಾಚಕರು ಉತ್ಸುಕರಾಗಿರಬಹುದು. ಅವರ ಆ ಜಿಜ್ಞಾಸೆಯನ್ನು ತೃಪ್ತಿಪಡಿಸು ದೀಗ ನಮ್ಮ ಕರ್ತವ್ಯವಾಗಿದೆ.

ಈ ಶ್ರೇಷ್ಠ ಪುರುಷರ ಚತುರ್ಥಾಶ್ರಮದ ಹೆಸರು ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಶಾಂತಾಶ್ರಮಸ್ವಾಮೀ ಮಹಾರಾಜ ಎಂದಿತ್ತು. ಅವರ ಚರಿತ್ರೆಯು ಅತ್ಯಂತ ಉದ್ಬೋಧಕವಾದುದು. ಅವರ ಜನ್ಮಸ್ಥಾನವು ಸಾಂಗಲೀ ಸಂಸ್ಥಾನದೊಳಗಿನ ''ಕವತೇ ಪಿರಾನ'' ಎಂಬ ಸಣ್ಣಹಳ್ಳಿಯು-ಅವರು ಬ್ರಹ್ಮಚರ್ಯಾಶ್ರಮದಿಂದಲೇ ಸಂನ್ಯಾಸವನ್ನು ಸ್ವೀಕರಿಸಿದವರು. ಜನ್ಮಾಂತರಗಳ ಪ್ರಬಲವಾದ ಸಂಸ್ಕಾರ ಬಲದಿಂದ ಅವರಿನ್ನೂ ಬಾಲಕರಿರುವಾಗಲೇ ಅವರಲ್ಲಿ ತೀವ್ರ ವೈರಾಗ್ಯವೂ, ಮೋಕ್ಷದ ಹಂಬಲವೂ ಕಾಣಿಸಿಕೊಂಡವು. ಮೊದಲಿನಿಂದಲೂ ಶ್ರೀಮದ್ಭಾಗವತದ ಮೇಲೆ ಅವರಿಗೆ ಪ್ರೀತಿ. ಅದರೊಳಗೂ ಶ್ರೀಮದ್ ಭಾಗವತದೊಳಗೆ ೧೧ನೆಯ ಸ್ಕಂಧದ ೧೭ನೆಯ ಅಧ್ಯಾಯದ ೪೨ನೆಯ ಶ್ಲೋಕವು ಅವರ ಮನಸ್ಸನ್ನು ಸಂಪೂರ್ಣವಾಗಿ ಸೆಳೆದುಕೊಂಡು ಬಿಟ್ಟಿತು. ಆ ಶ್ಲೋಕವು ಹೀಗಿದೆ—

ಬ್ರಾಹ್ಮಣಸ್ಯ ಹಿ ದೇಹೋಽಯಂ ಕ್ಷುದ್ರಕಾಮಾಯ ನೇಷ್ಯತೇ ।
ಕೃಚ್ಛ್ರಾಯ ತಪಸೇ ಚೇಹ ಪ್ರೇತ್ಯಾನಂತಸುಖಾಯ ಚ ॥

ಇದರ ತಾತ್ಪರ್ಯವೇನೆಂದರೆ — ಬ್ರಾಹ್ಮಣರಾಗಿ ಹುಟ್ಟಿರುವದು ಪಶುಗಳಂತೆ ಕಿರುಕುಳ ಸುಖವನ್ನು ಭೋಗಿಸಿ, ಆಯುಷ್ಯವನ್ನು ಹಾಳು ಮಾಡಿಕೊಳ್ಳುವದಕ್ಕಲ್ಲ. ಬ್ರಾಹ್ಮಣನಾದವನು ತನ್ನ ದೇಹವನ್ನು ಬೇರೆ ಉಚ್ಚ ಕೆಲಸಗಳಿಗಾಗಿ ಉಪಯೋಗಿಸಬೇಕು. ದೇಹವಿರುವ ವರೆಗೂ ಬ್ರಾಹ್ಮಣನು ಅತ್ಯುಗ್ರವಾದ ತಪಸ್ಸನ್ನಾಚರಿಸಬೇಕು. ಮತ್ತು ದೇಹಾವಸಾನವಾದ ಮೇಲೆ ಶಾಶ್ವತವಾದ ಸುಖವನ್ನು ಸೂರೆಗೊಳ್ಳಬೇಕು.

ಈ ಉದ್ದೇಶದಿಂದ ಉದ್ರಿಕ್ತರಾದ ಅವರು ಕೂಡಲೇ ಯತ್ನಾಶ್ರಮವನ್ನು ಸ್ವೀಕರಿಸಿದರು. ಮತ್ತು ಅವರು ಹರಿಪುರದ ಕೃಷ್ಣೆಯ ಪವಿತ್ರವಾದ ನೀರಲ್ಲಿ ನಿಂತು ಹನ್ನೆರಡು ವರುಷಗಳ ವರೆಗೆ ಅಖಂಡವಾಗಿ ರಾಮನಾಮ ಜಪಮಾಡಬೇಕೆಂಬ ಸಂಕಲ್ಪೋದಕವನ್ನು ಬಿಟ್ಟು, ಮೌನವನ್ನು ಹಿಡಿದರು. ಅಂದಿನಿಂದ ಅವರ ಬಾಯಿಗೆ ಬೀಗ. ಅವರು ಬೆಳಗು ಮುಂಜಾನೆ ಮೂರು ಗಂಟೆಗೆ ಎದ್ದು ಗಂಗೆಯಲ್ಲಿ ಸ್ನಾನಮಾಡಿಕೊಂಡು ಜಪಕ್ಕೆ ಕುಳಿತರೆಂದರೆ, ಮುಂಜಾನೆ ಹತ್ತು ಗಂಟೆಯ ವರೆಗೂ ಆಸನಬಿಟ್ಟು ಏಳುತ್ತಿರಲಿಲ್ಲ! ಆ ಮೇಲೆ ಮತ್ತೊಮ್ಮೆ ಸ್ನಾನಮಾಡಿ ಯತ್ಯಾಶ್ರಮಕ್ಕುಚಿತವಾದ ಬೇರೆ ಅನುಷ್ಠಾನ ಮುಗಿಸಿಕೊಂಡು, ಮಾಧುಕರೀ ಬೇಡಲಿಕ್ಕೆ ಹೋಗುವರು. ಭಿಕ್ಷೆಯಾದ ಮೇಲೆ ಬಹಳವಾದರೆ ಒಂದು ತಾಸು ಮಾತ್ರ ವಿಶ್ರಾಂತಿ. ಅನಂತರದಲ್ಲಿ ಮಧ್ಯಾಹ್ನ ೨ ಗಂಟೆಗೆ ಜಪಕ್ಕೆ ಕುಳಿತರೆಂದರೆ ರಾತ್ರಿ ೯ ಗಂಟೆಗೆ ಆಸನ ಬಿಡುವರು! ಆ ಮೇಲೆ ಗಂಗೆಯ ಕಡೆಗೆ ಹೋಗಿ ಬಂದು ತುಸು ಜಲಪಾನ ಮಾಡಿ ಮಲಗಿಕೊಳ್ಳುವರು. ಅವರು ಒಂದು ಸಲ ಭಿಕ್ಷೆಯ ಹೊರತಾಗಿ ಬೇರೆ ಏನನ್ನೂ ಬಾಯಲ್ಲಿ ಹಾಕಿಕೊಳ್ಳುತ್ತಿರಲಿಲ್ಲ. ಅವರು ಯಾರ ಸಂಗಡಲೂ ಮಾತಾಡುತ್ತಿರಲಿಲ್ಲ! ಈ ಕ್ರಮವು ಒಂದಲ್ಲ, ಎರಡಲ್ಲ, ಅವ್ಯಾಹತವಾಗಿ ೧೨ ವರುಷಗಳಷ್ಟು ದೀರ್ಘಕಾಲ ನಡೆದಿತ್ತು. ವಾಚಕರೇ, ಏನಿದು, ಎಂತಹ ಅದ್ಭುತವಾದ ತಪಶ್ಚರ್ಯೆಯು! ಈ ಅತ್ಯುಗ್ರವಾದ ಸಾಧನದ ಪರಿಣಾಮವೇನಾಯಿತೆಂದರೆ, ಅವರ ಸಂಕಲ್ಪಿತವಾದ ರಾಮನಾಮ ಜಪಾನುಷ್ಠಾನವು ಮುಗಿದ ಮೇಲೆ ಸಹ ಆರು ತಿಂಗಳ ವರೆಗೆ 'ರಾಮ' ಎಂಬ ಅಕ್ಷರಗಳ ಹೊರತಾಗಿ ಅವರಿಗೆ ಬೇರೆ ಯಾವ ಶಬ್ದವನ್ನೂ ಉಚ್ಚರಿಸಲಿಕ್ಕೆ ಸಹ ಬರುತ್ತಿದ್ದಿಲ್ಲವಂತೆ! ಅವರು ಶ್ರೀಮದ್ಭಾಗವತದ ಸಪ್ತಾಹ ಪಾರಾಯಣವನ್ನು ಒಂದು ಸಾವಿರ ಸಲ ಮಾಡಿ ಮುಗಿಸಿದರಂತೆ! ಕೊನೆಕೊನೆಗೆ ಅವರು ಶ್ರೀ ಮದ್ಭಾಗವತದ ಸಂಪೂರ್ಣ ಪಾರಾಯಣವನ್ನು ಒಂದೇ ದಿವಸದಲ್ಲಿ ಮುಗಿಸಹತ್ತಿದರಂತೆ! ಇಷ್ಟೇ ಅಲ್ಲ, ಹೀಗೆ ಅವರು ಎಡೆಬಿಡದೆ ಶ್ರೀಮದ್ಭಾಗವತದ ದೈನಂದಿನ ಪಾರಾಯಣಗಳನ್ನು ಒಂದುನೂರಾಎಂಟು

ಸಾರೆ ಮಾಡಿದರಂತೆ !* ವಾಚಕರೇ, ಇದರ ಮೇಲಿಂದ ಪರಮಾತ್ಮನು ನಮ್ಮೀ ಭಾರತದಲ್ಲಿ ಎಂತೆಂತಹ ರತ್ನಗಳನ್ನು ಹುಟ್ಟಿಸುತ್ತ ಬಂದಿರುವನೆಂಬದು ಗೊತ್ತಾಗುವಂತಿಲ್ಲವೇ ?

ಸಂಗನೇಶ್ವರನ ದೇವಾಲಯದಲ್ಲಿ ಈ ಸಂಭ್ರಮವು ನಡೆದಿರುವಾಗ, ನಮ್ಮ ಚರಿತ್ರನಾಯಕರು ತಮ್ಮಿಬ್ಬರು ಶಿಷ್ಯರೊಡನೆ ಅಕಸ್ಮಾತ್ತಾಗಿ ಅಲ್ಲಿಗೇ ಬಂದು ಬಿಟ್ಟರು. ಅವರು ಮಿರಜಿಯ ಘಾಟಿನ ಮೇಲೆ, ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ಮೇಲೆ, ಎರಡು ದಿನ ಅಲ್ಲಿಯೇ ನಿಂತು, ಗುರುಗಳಾದ ಶ್ರೀ ನಾರಾಯಣತೀರ್ಥರಿಂದ ವೇದಾಂತ ಶ್ರವಣವನ್ನು ಮಾಡಿದರು. ಆದರೆ, ಇಷ್ಟರಲ್ಲಿ, ತಮ್ಮ ಆಶ್ರಮ ಸ್ವೀಕಾರದ ಸುದ್ದಿಯು ಮನೆಯವರಿಗೆ ಹತ್ತುವದರಿಂದ ಅವರು ಅಲ್ಲಿಗೆ ಬಂದು, ಅತ್ತು ಕರೆದು, ಆಕ್ರೋಶ ಮಾಡಿ, ಇಲ್ಲದ ರಂಬಾಟವನ್ನೆಬ್ಬಿಸಿ ಗುರುಗಳಿಗೆ ವಿಷಾದವನ್ನುಂಟು ಮಾಡಬಹುದೆಂದು ತಿಳಿದು ಮಹಾರಾಜರು ಮಿರಜಿಯನ್ನು ಬಿಡಬೇಕೆಂದು ನಿಶ್ಚಯಿಸಿದರು. ಈ ವೇಳೆಗೆ ವಾಜೀಂದ್ರರೂ ಧಾರವಾಡದಿಂದ ಅಲ್ಲಿ ಬಂದು ಮಹಾರಾಜರನ್ನು ಕೂಡಿಕೊಂಡರು.

ಮಹಾರಾಜರು ನೆಟ್ಟಗೆ ಸಂಗನೇಶ್ವರನ ಗುಡಿಗೆ ಬಂದು ಶ್ರೀ ಶಾಂತಾಶ್ರಮ ಸ್ವಾಮಿಗಳವರ ಪೂಜ್ಯಪಾದಗಳಿಗೆ ವಿಧಿವತ್ತಾಗಿ ನಮಸ್ಕಾರ ಮಾಡಿ ಕೃಜೋಡಿಸಿಕೊಂಡು ನಿಂತರು. ಈ ಆಕಸ್ಮಿಕವಾದ ಪ್ರಸಂಗದಿಂದ ಶ್ರೀ ಶಾಂತಾಶ್ರಮಸ್ವಾಮೀ ಮಹಾರಾಜರ ಹೃದಯದಲ್ಲಿ ಒಮ್ಮೆಲೇ ಧಡಲ್ಲೆಂದು ಸಪ್ಪಳವಾದಂತಾಗಿ, ಅಲ್ಲಿಯ ಪರದೆಯು ಒಮ್ಮೆಲೇ ದೂರು ಸರಿದಂತೆ ಭಾಸವಾಯಿತು. ನಿಜವಾದ ಗುರುಶಿಷ್ಯ ಯೋಗವು ಅದ್ಭುತ ರಮ್ಯವಾಗಿರುವದೆಂದು ಬಲ್ಲವರು ಹೇಳುವದು ಸುಳ್ಳಲ್ಲ. ತಮ್ಮ ಅಧ್ಯಾತ್ಮ ಜ್ಞಾನಭಾಂಡಾರದ ಬೀಗದ ಕೈಯನ್ನು ತಕ್ಕೊಳ್ಳುವದಕ್ಕಾಗಿಯೇ ಹುಟ್ಟಿಬಂದ

---

* ಡಾಕ್ಟರ ಶ್ರೀ. ಮು. ವೈದ್ಯ, ಸಾಂಗಲಿಯ ಹತ್ತರವಿರುವ ಅಷ್ಟೇ ಊರು ಇಸಲಾಮಪುರ, ಇವರು ಬರೆದ "ಶ್ರೀ ದತ್ತ ಮಹಾರಾಜ ಯಾಂಚೇ ಚರಿತ್ರ" ಎಂಬ ಮರಾಠೀ ಪುಸ್ತಕದೊಳಗೆ ಅನೆಯ ಪ್ರಕರಣದಲ್ಲಿ ೧೦೩ ನೆಯ ಪುಟವನ್ನು ನೋಡಿರಿ.

ಪುಣ್ಯವಂತನೀಗ ತಮ್ಮ ಮುಂದೆ ನಿಂತಿರುವನೆಂಬದು ಶ್ರೀ ಶಾಂತಾಶ್ರಮ ಸ್ವಾಮಿಗಳವರ ಮನಸ್ಸಿನಲ್ಲಿ ಒಮ್ಮೆಲೇ ಹೊಳೆದು ಬಿಟ್ಟಿತು. ಮುಂದೆ ನಿಂತು ಭಗವೀ ವಸ್ತ್ರಗಳಿಂದ ಹೊಳೆಯುತ್ತಿರುವ ವ್ಯಕ್ತಿಯೇ ತಮ್ಮ ಏಕಮಾತ್ರವಾದ ಶಿಷ್ಯರತ್ನವೆಂಬದನ್ನು ಗುರುತಿಸಲಿಕ್ಕೆ ಅವರಿಗೆ ಬಹಳ ನೇಳೆ ಹಿಡಿಯಲಿಲ್ಲ. ತಮ್ಮ ಜ್ಞಾನಸಂತತಿಯು ಮೂರ್ತಿಮಂತವಾಗಿ ಬಂದು ನಿಂತುದನ್ನು ನೋಡಿ ಶ್ರೀ ಶಾಂತಾಶ್ರಮ ಸ್ವಾಮಿಗಳವರಲ್ಲಿ ವಾತ್ಸಲ್ಯ ಪ್ರೇಮವು ಹೊರಸೂಸಿ ಹರಿಯಹತ್ತಿತು. ಆಂಧವರಿಗೆ ಕೂಡ ಅದನ್ನು ನುಂಗಿಕೊಳ್ಳುವದು ಕಠಿಣವಾಯಿತು. ಅವರು ಆನಂದ ಪರವಶತೆಯಿಂದ ತಮ್ಮ ಆಸನವನ್ನು ಬಿಟ್ಟು ಇಳಿದು ಬಂದು, ನಮ್ಮ ಚರಿತ್ರನಾಯಕರನ್ನು ಗಟ್ಟಿಯಾಗಿ ತಬ್ಬಿಕೊಂಡು, ''ನಾರಾಯಣ, ನಾರಾಯಣ'' ಎಂದು ಕುಣಿದಾಡಿದರು. ಮತ್ತು ''ಬಾ, ಮಗೂ, ಬಾ'' ಎಂದು ಕೈಹಿಡಿದುಕೊಂಡು ಮಹಾರಾಜರನ್ನು ಕರಕೊಂಡು ಹೋಗಿ ತಮ್ಮ ಆಸನದ ಮೇಲೆಯೇ ಕುಳ್ಳಿರಿಸಿಕೊಂಡರು. ಕೂಡಿದ ಜನರು ಈ ದೃಶ್ಯವನ್ನು ನೋಡಿ ಸ್ತಂಭಿತರಾದರು. ಶ್ರೀ ಶಾಂತಾಶ್ರಮ ಸ್ವಾಮಿಗಳಂಥ ವಿರಕ್ತರು ಹೀಗೆ ವಿಕಾರವಶರಾದುದನ್ನು ಅವರು ಈ ಮೊದಲು ಎಂದೂ ನೋಡಿದ್ದಿಲ್ಲ. ಆದರೆ ''ವ್ಯತಿಷಜತಿ ಪದಾರ್ಥಾನಾಂತರಃ ಕೋಽಪಿ ಹೇತುಃ'' ಎಂಬದು ಅವರಿಗೇನು ಗೊತ್ತು ! ಯಥಾಕಾಲದಲ್ಲಿ ಜನಸಂದೋಹವು ಚದುರಿ ಹೋದ ಮೇಲೆ ಶ್ರೀ ಶಾಂತಾಶ್ರಮ ಸ್ವಾಮಿಗಳವರು ಎಲ್ಲವನ್ನೂ ಬಲ್ಲವರಂತೆ ನಮ್ಮ ಚರಿತ್ರನಾಯಕರಿಗೆ ಪ್ರಶ್ನೆ ಮಾಡಿದರು:— ''ಮಗೂ, ನೀನು ಆಶ್ರಮವನ್ನು ಸ್ವೀಕರಿಸಿದ್ದು, ದಂಡವನ್ನೇಕೆ ಗ್ರಹಣಮಾಡಿರುವದಿಲ್ಲ ? ಯತಿಗಳಾದವರು ದಂಡವಿಲ್ಲದೆ ಇರಬಾರದು.''

ನಮ್ಮ ಚರಿತ್ರನಾಯಕರ ಮೈ ಜುಮ್ಮೆಂದಿತು. ಶ್ರೀ ನಾರಾಯಣ ತೀರ್ಥರು ಮಿರಜಿಯ ಘಾಟಿನ ಮೇಲೆ ''ಇನ್ನೊಬ್ಬ ಮಹಾ ಪುರುಷನು ನಿನಗೆ ದಂಡಕೊಟ್ಟು ಅನುಗ್ರಹಿಸುವನು ಚಿಂತೆ ಮಾಡಬೇಡ'' ಎಂದು ಹೇಳಿದ ಶಬ್ದಗಳು ಅವರ ಕಿವಿಯಲ್ಲಿ ಇನ್ನೂ ಗುಣುಗುಟ್ಟುತ್ತಿದ್ದವು. ಆ ಭವಿಷ್ಯವು ಹೀಗೆ ಅಕಸ್ಮಾತ್ತಾಗಿ ಸತ್ಯವಾಗುವ ಯೋಗ ಬಂದದ್ದನ್ನು ನೋಡಿ ಮಹಾರಾಜರು ಆನಂದ ಪುಲಕಿತರಾದರು. ಅವರು ಕೂಡಲೇ

ವಿನಯದಿಂದ ಕೈಜೋಡಿಸಿ: ''ಭಗವನ್, ನಾನು ಅಜ್ಞಾನಿಯು. ತಮ್ಮ ಪಾದಕಮಲಗಳಲ್ಲಿ ಸೇವೆ ಮಾಡಿಕೊಂಡಿರುವ ಯೋಗ್ಯತೆಯಾದರೂ ನನ್ನಲ್ಲಿರುವದೋ ಇಲ್ಲವೋ ಹೇಳಲಾರೆ. ನಾನು ಹೊಸದಾಗಿಯೇ ಈ ಆಶ್ರಮವನ್ನು ಸ್ವೀಕರಿಸಿದ್ದೇನೆ. ನನಗಿನ್ನೂ ದಂಡಧಾರಣೆಯಾಗಬೇಕಾಗಿದೆ. ಅದಕ್ಕಾಗಿಯೇ ನಾನು ತಮ್ಮೆಡೆಗೆ ಧಾವಿಸಿ ಬಂದಿದ್ದೇನೆ. ಯತಿಧರ್ಮಗಳೂ ಸಹ ನನಗೆ ಸರಿಯಾಗಿ ತಿಳಿದಿರುವದಿಲ್ಲ. ತಾವು ಕೃಪೆಮಾಡಿ ದಯವಿಟ್ಟು ನನಗೆ ದಂಡಕೊಟ್ಟು ಅನುಗ್ರಹಿಸಬೇಕು ತಾವು ಹೇಳಿಕೊಡುವ ಯತಿ ಧರ್ಮಗಳಂತೆ ನಡೆಯಲು ಈ ದಾಸನು ಸದಾ ಸಿದ್ಧನೇ ಇದ್ದಾನೆ'' ಎಂದು ಪ್ರಾರ್ಥಿಸಿಕೊಂಡರು. ಈ ಮಾತುಗಳಿಂದ ಶ್ರೀ ಶಾಂತಾಶ್ರಮ ಸ್ವಾಮಿಗಳವರು ಬಹು ಪ್ರಸನ್ನರಾದರು. ಅವರು ಈ ವರೆಗೆ ಯಾರಿಗೂ ತಮ್ಮ ಕೈಯಿಂದಲೇ ದಂಡಧಾರಣೆ ಮಾಡಿಸಿರಲಿಲ್ಲ. ಆ ಮೇಲೂ ಅವರು ಯಾರಿಗೂ ದಂಡವನ್ನು ಅನುಗ್ರಹಿಸಲಿಲ್ಲ. ಆದರೆ ಅವರು ನಮ್ಮ ಚರಿತ್ರನಾಯಕರ ಆಂತರಿಕ ಯೋಗ್ಯತೆಗೆ ಮೆಚ್ಚಿ, ತಾವೇ ತಮ್ಮ ಕೈಯಿಂದಲೇ ಅವರಿಗೆ ದಂಡವನ್ನು ಕೊಟ್ಟು ಅನುಗ್ರಹಿಸಲಿಕ್ಕೆ ಸಂತೋಷದಿಂದ ಒಪ್ಪಿಕೊಂಡರು. ವೈಶಾಖ ಶುದ್ಧ ಪಂಚಮಿಯ ಶುಭ ದಿವಸದಲ್ಲಿ ಶ್ರೀ ಶಾಂತಾಶ್ರಮ ಸ್ವಾಮಿಗಳವರು ನಮ್ಮ ಚರಿತ್ರನಾಯಕರನ್ನು ಶಿಷ್ಯಭಾವದಿಂದ ಪರಿಗ್ರಹಿಸಿ ಅವರ ಮೇಲೆ ಸಂಪೂರ್ಣ ಕೃಪೆ ಮಾಡಿ ಅವರಿಗೆ ''ಶ್ರೀ ಕೈವಲ್ಯಾಶ್ರಮ'' ವೆಂಬ ನೂತನ ಅಭಿಧಾನವನ್ನು ಅನುಗ್ರಹಿಸಿದರು. ಗುರುಪ್ರಸಾದ ರೂಪವಾದ ಈ ಹೆಸರನ್ನೇ ಮಹಾರಾಜರು ಕೊನೆಯ ವರೆಗೆ ಉಪಯೋಗಿಸುತ್ತ ಹೋದರು. ನಾವಾದರೂ ಅವರನ್ನು ಇನ್ನು ಮುಂದೆ ಆ ಹೆಸರಿನಿಂದಲೇ ಕರೆಯುತ್ತ ಹೋಗೋಣ.

ಆಶ್ರಮವೆಂಬ ಉಪನಾಮವು ದ್ವಾರಕಾಮಠದ ಪರಂಪರೆಗೆ ಸೇರಿದೆ ಎಂಬದು ವಾಚಕರಿಗೆ ಈ ಮೊದಲೇ ಗೊತ್ತಾಗಿದೆ. ಶ್ರೀ ಶಾಂತಾಶ್ರಮ ಸ್ವಾಮಿಗಳಾದರೂ ಅದೇ ಪರಂಪರೆಗೆ ಸೇರಿದವರು. ಎಂತೆಯೇ ಅವರು ನಮ್ಮ ಚರಿತ್ರನಾಯಕರಿಗೆ ''ಶ್ರೀ ಕೈವಲ್ಯಾಶ್ರಮ''ವೆಂಬ ದ್ವಾರಕಾಪೀಠದ ಪರಂಪರೆಯನ್ನು ಸೂಚಿಸುವ ಹೆಸರನ್ನೇ ಅನುಗ್ರಹ ಮಾಡಿದರು. ಮಹಾಮ್ನಾಯದಲ್ಲಿ ಆಶ್ರಮವೆಂಬ ಹೆಸರಿಗೆ ಹೀಗೆ ಅರ್ಥ ಮಾಡಿದ್ದಾರೆ—

ಆಶ್ರಮಗ್ರಹಣೇ ಪ್ರೌಢ ಆಶಾಪಾಶವಿವರ್ಜಿತಃ ।
ಯಾತಾಯಾತ ವಿನಿರ್ಮುಕ್ತ ಏಷ ಆಶ್ರಮ ಉಚ್ಯತೇ ॥

ಇದರ ಆಶಯವಿಷ್ಟು:---ಸಂನ್ಯಾಸ ಸ್ವೀಕಾರಕ್ಕೆ ಯಾವನು ತೀರ ಪ್ರೌಢನಾದ ಅಧಿಕಾರಿಯಾಗಿರುವನೋ, ಯಾವನು ಆಶಾಪಾಶಗಳಿಂದ ಮುಕ್ತನಾಗಿರುವನೋ, ಯಾವನು ಜನ್ಮಮರಣಗಳೆಂಬ ಸಂಕೋಲೆಗಳಿಂದ ಬಿಡುಗಡೆ ಹೊಂದಿದವನಾಗಿರುವನೋ ಅವನಿಗೆ ಮಾತ್ರ ಆಶ್ರಮವೆಂಬ ಹೆಸರು ಸಲ್ಲುವದು. ಈ ನಾಮದ ಯಥಾರ್ಥತೆಯನ್ನು ತಿಳಿದೂ ತಿಳಿದೂ, ಅದು ಈ ವ್ಯಕ್ತಿಯಲ್ಲಿ ಸಾರ್ಥವಾಗುವದೆಂಬದನ್ನು ದಿವ್ಯದೃಷ್ಟಿಯಿಂದ ನಿಶ್ಚಯಿಸಿಯೇ, ಶ್ರೀ ಶಾಂತಾಶ್ರಮ ಸ್ವಾಮಿಗಳವರು ನಮ್ಮ ಚರಿತ್ರನಾಯಕರಿಗೆ ಈ ಹೆಸರನ್ನು ಕೊಟ್ಟರು. ಇದರ ರಹಸ್ಯವು ವಾಚಕರಿಗೆ ಮುಂದೆ ಮುಂದೆ ಹೆಚ್ಚಿಚ್ಚಾಗಿ ತಿಳಿಯುತ್ತ ಹೋಗುವದರಲ್ಲಿ ಸಂಶಯವಿಲ್ಲ.

ಹೀಗೆ ಸಂನ್ಯಾಸ ವಿಧಿಯು ಪೂರ್ಣವಾಯಿತೆಂದು ಅವರೂ ಅವರ ಶಿಷ್ಯರೂ ಸಂತೋಷ ಪಡುವಷ್ಟರಲ್ಲಿ ಇನ್ನೊಂದು ಕಠಿಣ ಪ್ರಸಂಗವು ಒದಗಿ ಬಂತು. ಹರಿಪುರದೊಳಗೆ ಮಹಾರಾಜರ ದಂಡಧಾರಣವಾಗುವಷ್ಟರಲ್ಲಿ, ಅವರ ಅಣ್ಣತಮ್ಮಂದಿರು ಆಪ್ತೇಷ್ಟರನ್ನೆಲ್ಲ ಕೂಡಿಕೊಂಡು ಹರಿಪುರಕ್ಕೆ ಬಂದು ಬಿಟ್ಟರು. ಮಹಾರಾಜರ ಮೈಮೇಲಿನ ಕೆಂಬಣ್ಣದ ವಸ್ತ್ರಗಳನ್ನು ನೋಡಿ ಅವರು ದುಃಖಾಕ್ರಾಂತರಾದರು. ಅವರಿಗೆ ಏನುಮಾಡಬೇಕೆಂಬದು ತಿಳಿಯದಂತಾಯಿತು. ಅವರು ತಮಗುಂಟಾದ ದುಃಖದ ಆವೇಗವನ್ನು ಮಹಾರಾಜರ ಶಿಷ್ಯರ ಮೇಲೆ ಹರಿಬಿಟ್ಟರು. ವಾಜೀಂದ್ರ ಮತ್ತು ಕುಬೇರರೆಂಬ ಮಹಾರಾಜರ ಇಬ್ಬರು ಶಿಷ್ಯರನ್ನು ಹುಡುಕಿಕೊಂಡು ಅವರು ಶಪಿಸಹತ್ತಿದರು:— "ಇವರೇ ಮಹಾರಾಜರಿಗೆ ಉತ್ತೇಜನ ಕೊಟ್ಟು ನಮ್ಮ ಮನೆಯನ್ನು ಮುಣುಗಿಸಿದವರು. ಇವರೇ ಇದೆಲ್ಲ ಅನರ್ಥಕ್ಕೆ ಕಾರಣರು." ಇನ್ನು ಇಲ್ಲಿ ನಿಂತರೆ ತಮ್ಮ ಪರಿಣಾಮ ನೆಟ್ಟಗಾಗುವದಿಲ್ಲೆಂದು ತಿಳಿದು, ಶಿಷ್ಯರಿಬ್ಬರೂ ನದಿಗೆ ಸ್ನಾನಕ್ಕೆಂದು ಹೋದವರು, ಅತ್ತಿಂದತ್ತೇ ಸಾಂಗಲಿಯ ಮೇಲಿಂದ ಬ್ರಹ್ಮನಾಳಕ್ಕೆ ಹೋಗಿ ಬಿಟ್ಟರು.

ಶಿಷ್ಯರು ಹೀಗೆ ಫರಾರಿಯಾದ ಮೇಲೆ ಜನರೆಲ್ಲ ಮಹಾರಾಜರ ಕಡೆಗೆ ಹೊರಳಿದರು. ಮಹಾರಾಜರಿಗೆ ಅವರು ಸಿಟ್ಟಿನ ಭರದಲ್ಲಿ ಬೇಕುಬೇಕಾದಂತೆ ಮಾತಾಡಿದರು. ಅಳುವದಾಯಿತು, ಕರೆಯುವದಾಯಿತು, ತಮಗಾದರೂ ಸಂಸಾರವೇಕೆ ಬೇಕೆಂದು ಹೇಳುವದಾಯಿತು. ಆದರೆ ಏನೇ ಆದರೂ ಮಹಾರಾಜರು ಪಿಟ್ಟೆಂದು ಮಾತಾಡಲಿಲ್ಲ. ಈ ಆಕ್ರೋಶವು ಕೃತಕವಾದುದೆಂದೂ ಒಂದೆರಡು ದಿನಗಳಲ್ಲಿ ತಾನೇ ಇಳಿಯುವದೆಂದೂ ಮಹಾರಾಜರು ಯಥಾರ್ಥವಾಗಿ ಭಾವಿಸಿದರು. ಅಣ್ಣ-ತಮ್ಮಂದಿರಾಗಲಿ, ಆಪ್ತೇಷ್ಟರಾಗಲಿ, ಅಲ್ಲಿ ಎಷ್ಟು ದಿನ ನಿಲ್ಲತಕ್ಕವರು? ಅವರಲ್ಲಿ ಒಬ್ಬೊಬ್ಬರೇ ತಮ್ಮ ತಮ್ಮ ಕೆಲಸದ ಬಾಹುಲ್ಯವನ್ನು ಮುಂದೆ ಮಾಡುತ್ತ ಹರಿಪುರವನ್ನು ಬಿಡಹತ್ತಿದರು. ಕೊನೆಗೆ ಮಹಾರಾಜರೇ ಅವರನ್ನು ಕರೆದು ಸಮಾಧಾನ ಹೇಳಿದರು. ಸಂಸಾರವು ಜೊಳ್ಳಾದುದು, ಮನುಷ್ಯನು ಅದರಲ್ಲಿ ಸಿಕ್ಕಿಬೀಳದೆ ತನ್ನ ನಿಜವಾದ ಕಲ್ಯಾಣ ಮಾಡಿಕೊಳ್ಳಬೇಕು. ಚಿದಂಬರನ ಇಚ್ಛೆಗನುಸಾರವಾಗಿ ಎಲ್ಲರೂ ಕೆಲಸ ಮಾಡಬೇಕಾಗುವದು, ಅದಕ್ಕನುಗುಣವಾಗಿಯೇ ನಾವು ಸಂನ್ಯಾಸವನ್ನು ತಕ್ಕೊಂಡಿರುವೆವು. ಅದಕ್ಕಾಗಿ ಯಾರೂ ದುಃಖಪಡುವ ಕಾರಣವಿಲ್ಲ—ಎಂದು ಮೊದಲಾಗಿ ಮಹಾರಾಜರು ಬೋಧಮಾಡಿದರು. ಅಣ್ಣ ತಮ್ಮಂದಿರಿಗೆ ಇದರಿಂದ ಪೂರ್ಣ ಸಮಾಧಾನವಾಗದಿದ್ದರೂ, ಅನಿರ್ವಾಹವೆಂದು ಅವರು ತಣ್ಣಗಾಗಬೇಕಾಯಿತು. ಅವರು ಊರಿಗೆ ಹೊರಟು ಹೋದ ಮೇಲೆ ಮಹಾರಾಜರಿಗೆ ತಮ್ಮ ಶಿಷ್ಯರ ಬಗ್ಗೆ ಚಿಂತೆಯುಂಟಾಯಿತು. ಆದರೆ ಆ ಚಾಣಾಕ್ಷ ಶಿಷ್ಯರು ಈ ಸಂಗತಿಯನ್ನರಿತು ಕೂಡಲೇ ತಿರುಗಿ ಬಂದು ಗುರುಗಳಿಗೆ ನಮಸ್ಕಾರ ಮಾಡಿದರು. ಇದರಿಂದ ಎಲ್ಲರಿಗೂ ಸಂತೋಷವಾಯಿತು. ವಾಜೀಂದ್ರರು ೮ ದಿನಗಳ ವರೆಗೆ ಗುರುಗಳ ಸಹವಾಸದಲ್ಲಿಯೇ ಇದ್ದು ಆ ಮೇಲೆ ಅವರ ಅಪ್ಪಣೆಯಿಂದ ಧಾರವಾಡಕ್ಕೆ ಹೊರಟು ಹೋದರು. ಕುಬೇರರು ಮಾತ್ರ ಗುರುಸೇವೆ ಮಾಡುತ್ತ ಅಲ್ಲಿಯೇ ನಿಂತುಕೊಂಡರು.

———

೫ "ಸಂನ್ಯಾಸ ತಕ್ಕೊಂಡದ್ದು ಚಿದಂಬರನ ಸೇವೆಗಾಗಿಯೇ"

ಯತ್ಯಾಚರಣೆಯ ನಿಯಮಗಳು ಬಲು ಕಠಿಣವಾಗಿವೆ, ಕಠೋರವಾಗಿವೆ. ಸದಾಚಾರವನ್ನು ಪಾಲಿಸಬೇಕೆನ್ನುವ ಯತಿಗಳು ಯತಿಧರ್ಮಗಳನ್ನು ವೃದ್ಧರಿಂದ ಸರಿಯಾಗಿ ತಿಳಿದುಕೊಳ್ಳಬೇಕಾಗುವದು. ಇಷ್ಟೇ ಅಲ್ಲ, ಯತಿಗಳ ಸಂಗಡ ಹೇಗೆ ನಡೆಯ ಬೇಕೆಂಬದನ್ನು ಗೃಹಸ್ಥಾಶ್ರಮಿಗಳಾದರೂ ಕೂಡ ಕೇಳಿ ತಿಳಿದುಕೊಂಡಿರಬೇಕಾಗುವದು. ಯಾಕೆಂದರೆ ಯತಿಗಳ ಕೂಡ ಬಳಿಕೆ ಮಾಡಬಯಸುವ ಗೃಹಸ್ಥರು ತಮಗೆ ತಿಳಿಯದೆ ಏನಾದರೂ ತಪ್ಪು ಮಾಡಿದರೆ, ಅದರ ಕಟುಫಲವನ್ನು ಯತಿಗಳೇ ಅನುಭವಿಸಬೇಕಾಗುತ್ತದೆ. ಉದಾಹರಣೆಯೆಂದು ಒಂದೆರಡು ಸಂಗತಿಗಳನ್ನಿಲ್ಲಿ ಹೇಳಬಹುದು. ಯತಿಗಳಿಗೆ ಯಾರಾದರೂ ಭಿಕ್ಷೆಯ ಆಮಂತ್ರಣ ಕೊಡಬೇಕಾಗಿದ್ದರೆ, ಆ ಮೊದಲೇ ಅವರಿಗೆ ಬೇರೆ ಆಮಂತ್ರಣ ಬಂದಿದೆಯೋ ಹೇಗೆಂಬದನ್ನು ವಿಚಾರಿಸಿ ತಿಳಿದುಕೊಳ್ಳಬೇಕು. ಹಾಗೆ ಮಾಡದೆ ಒಮ್ಮೆಲೇ ಯತಿಗಳಿಗೆ ಆಮಂತ್ರಣ ಕೊಟ್ಟರೆ, ಆ ಮೊದಲೇ ಅವರು ಆಮಂತ್ರಿತರಾಗಿದ್ದಾರೆ, ಆ ದಿನ ಆ ಯತಿಗಳು ಎಲ್ಲಿಯೂ ಭಿಕ್ಷೆಗೆ ಹೋಗದೆ ಉಪವಾಸ ಮಾಡಬೇಕಾಗುವದು. ಅದರಂತೆ, ಯತಿಗಳು ಮಧ್ಯಾಹ್ನದಲ್ಲಿ ಭಿಕ್ಷೆಗೆಂದು ಮನೆಗೆ ಬಂದೊಡನೆ ಯಾರೂ ಅವರಿಗೆ ಆ ಕಾಲಕ್ಕೆ ನಮಸ್ಕಾರ ಮಾಡಬಾರದು. ಹಾಗೆ ನಮಸ್ಕಾರ ಮಾಡಿದ್ದಾದರೆ ಅವರು ಕೂಡಲೇ ಮನೆಬಿಟ್ಟು ಹೋಗಬೇಕಾಗುವದಲ್ಲದೆ, ಅಂದು ನಿರಾಹಾರದಿಂದಿರಬೇಕಾಗುವದು. ಇದರ ನೆಲೆಯಿಂದ ಯತಿಧರ್ಮ ಪರಿವಾಲನವು ಎಷ್ಟು ಗಡುಚಾದುದೂ ಸೂಕ್ಷ್ಮವೂ ಆಗಿರುವದೆಂಬದು ತಿಳಿದು ಬರುವಂತಿದೆ.

ಯತಿಗಳು ಪಾಲಿಸಬೇಕಾದ ನಿಯಮಗಳನ್ನೆಲ್ಲ ಇಲ್ಲಿ ಸಂಗ್ರಹಿಸುವದು ಶಕ್ಯವಿಲ್ಲ. ಅದರ ಆವಶ್ಯಕತೆಯೂ ಇರುವದಿಲ್ಲ. ಅವುಗಳನ್ನೆಲ್ಲ ಸರಿಯಾಗಿ ತಿಳಿಮಕೊಳ್ಳಬಯಸುವವರು ಶ್ರೀ ವಿಶ್ವೇಶ್ವರ ಸರಸ್ವತೀ ಸ್ವಾಮಿಗಳೆಂಬವರು ರಚಿಸಿದ ''ಯತಿಧರ್ಮ ಸಂಗ್ರಹ''ವೆಂಬ ಸ್ವತಂತ್ರವಾದ ಪುಸ್ತಕವನ್ನೇ ನೋಡಬಹುದು. ಇಲ್ಲಿ ದಿಗ್ದರ್ಶನ ಮಾಡುವದಕ್ಕಾಗಿ ಕೆಲವು ಮಾತು-ಗಳನ್ನು ಹೇಳಿದ್ದೇವೆ.

ಯತಿಗಳಿಗೆ ತ್ರಿಕಾಲಸ್ನಾನವು ವಿಹಿತವಾಗಿದೆ. ಭಿಕ್ಷಾಟನ, ವ್ರಣವಜನ, ಧ್ಯಾನ, ದೇವತಾರ್ಚನೆ ಮೊದಲಾದವುಗಳನ್ನು ಯತಿಗಳು ದಿನಾಲೂ ತಪ್ಪದೆ ಮಾಡಬೇಕು. ಅವರು ಏಕಾಂತವಾಸಿಗಳಾಗಿರಬೇಕಲ್ಲದೆ ಶೌಚವನ್ನು ಕಾಯ್ದುಕೊಳ್ಳಬೇಕಾಗುವದು. ಬ್ರಹ್ಮಚರ್ಯ, ಅಹಿಂಸೆ, ಸತ್ಯ, ಅಸ್ತೇಯ ಮತ್ತು ಸರಲತನ ಮೊದಲಾದವುಗಳನ್ನು ಅವರು ಪಾಲಿಸಬೇಕು. ಬಂದು-ದೆಲ್ಲವನ್ನೂ ಸಹನೆ ಮಾಡಬೇಕು. ಯಾವುದಕ್ಕೂ ಸಿಟ್ಟಿಗೇಳಬಾರದು. ಶಮ, ದಮ, ತಪ, ಉಪರತಿ ಮತ್ತು ವೈರಾಗ್ಯಗಳಿಂದ ಕೂಡಿದವರಾಗಿರ-ಬೇಕು. ಮಳೆಗಾಲದಲ್ಲಿ ಮಾತ್ರ ಒಂದೇ ಊರಲ್ಲಿರಬೇಕಲ್ಲದೆ, ಉಳಿದ ವೇಳೆಯಲ್ಲಿ ಯತಿಗಳು ಒಂದೇ ಸವನೆ ಪರ್ಯಟನ ಮಾಡುತ್ತಿರಬೇಕು. ಅವರು ಗುರುಸೇವೆಯಲ್ಲಿ ಯಾವಾಗಲೂ ತತ್ಪರರಾಗಿರಬೇಕು. ಮಧು-ಕರಿಯೇ ಅವರಿಗೆ ಮುಖ್ಯವಾದ ಆಹಾರವು. ಹಸಿವೆಯೆಂಬ ರೋಗಕ್ಕೆ ಅನ್ನವೊಂದೇ ಔಷಧ ಮಾತ್ರವೆಂದು ಅವರು ಊಟ ಮಾಡಬೇಕು. ಜೀವ ಉಳಿಯಬೇಕೆಂದು ಅವರು ಊಟ ಮಾಡಬೇಕೇ ಹೊರತು, ತಿಂಡಿ ತಿನಸು-ಗಳಿಗಾಗಿ ಅವರು ಜೀವಿಸಿರಬಾರದು. ಆದುದರಿಂದ ದಿನದಲ್ಲಿ ಒಂದು ಊಟದ ಹೊರತಾಗಿ ಅವರು ಬೇರೆ ಏನನ್ನೂ ತಿನ್ನಕೂಡದು. ತಮ್ಮ ಅನ್ನ ವಸ್ತ್ರಗಳಿಗಾಗಿ ಅವರು ಎಂದೂ ಚಿಂತಾಪರರಾಗಬಾರದು. ಎಲ್ಲ ಭಾರವನ್ನೂ ದೇವರ ಮೇಲೆ ಹಾಕಿ, ಅವರು ಅಧ್ಯಾತ್ಮಶಾಸ್ತ್ರದ ಶ್ರವಣ-ಮನನ ನಿಧಿಧ್ಯಾಸಗಳೆಂಬ ನಿತ್ಯದ ಕರ್ತವ್ಯದಲ್ಲಿಯೇ ತೊಡಗಿದವರಾಗ-ಬೇಕು. ಮಹಾವಾಕ್ಯಾರ್ಥ ವಿಚಾರಣೆಯೇ ಯತಿಗಳ ಮುಖ್ಯ ಧರ್ಮವು. ಅವರು ಯಾರ ಸಂಗಡಲೂ ವಿಷಯ ಚಿಂತನೆಯನ್ನು ಬೆಳಸುವಂಥ ವಿಷಯ-ಗಳ ಬಗ್ಗೆ ಮಾತಾಡಬಾರದು. ಅವರು ಎಂದೂ ಶ್ರಾದ್ಧಾದಿಗಳ

ಆಮಂತ್ರಣವನ್ನು ಸ್ವೀಕರಿಸಬಾರದು. ಅವರು ವಿಶಿಷ್ಟ ಪಾತ್ರೆಗಳನ್ನೇ ಉಪಯೋಗಿಸಬೇಕು; ವಿಶಿಷ್ಟ ಕಾಲದಲ್ಲಿ ವಿಶಿಷ್ಟ ರೀತಿಯಿಂದಲೇ ಕ್ಷೌರ ಮೊದಲಾದವುಗಳನ್ನು ಮಾಡಿಸಿಕೊಳ್ಳಬೇಕು. ದಂಡ ಕಮಂಡಲುಗಳನ್ನು ಸಹ ವಿಹಿತವಾದ ರೀತಿಯಲ್ಲಿಯೇ ಉಪಯೋಗಿಸಬೇಕು.

ಈ ಕಾರಣದಿಂದಲೇ ನಮ್ಮ ಚರಿತ್ರನಾಯಕರು ಹರಿಪುರದಲ್ಲಿ ಏಳೆಂಟು ತಿಂಗಳುಗಳ ವರೆಗೆ ನಿಂತರು. ಆ ಕಾಲದಲ್ಲಿ ಅವರು ಗುರುಗಳ ಸೇವೆಯನ್ನು ನಿಷ್ಠಾಪೂರ್ವಕವಾಗಿ ಮಾಡಿ, ಅವರ ಮುಖದಿಂದ ಯತಿ ಧರ್ಮಗಳನ್ನೆಲ್ಲ ಸರಿಯಾಗಿ ತಿಳಿದುಕೊಂಡರು. ಅವರ ಮೊದಲನೆಯ ಚಾತುರ್ಮಾಸ್ಯವೂ ಅಲ್ಲಿಯೇ ಆಯಿತು. ವೈಶಾಖ ಶುದ್ಧ ತೃತೀಯೆಯ ದಿನ ಮಹಾರಾಜರು ಹರಿಪುರಕ್ಕೆ ಬಂದವರು ಮುಂದೆ ಕಾರ್ತಿಕದ ನರಕೋ ಅಲ್ಲಿಯೇ ಉಳಿದರು. ಈ ಅವಧಿಯಲ್ಲಿ ಅವರು ವೇದಾಂತ ಸಾಂಪ್ರದಾಯದ ರಹಸ್ಯವನ್ನೆಲ್ಲ ಗುರುಮುಖದಿಂದ ಕೇಳಿಕೊಂಡರು. ಇಷ್ಟೇ ಅಲ್ಲದೆ ಅದಕ್ಕೆ ಅವಶ್ಯವಾಗಿ ಬೇಕಾಗುವ ಅಭ್ಯಾಸವನ್ನೂ ಗುರುಗಳ ಸಮ್ಮುಖದಲ್ಲಿಯೇ ಮಾಡಿ ಅದನ್ನು ಚನ್ನಾಗಿ ಸ್ವಾಧೀನ ಪಡಿಸಿಕೊಂಡರು. ವೇದಾಂತದ ಮೇಲೆ ಪ್ರಮುಖ ಗ್ರಂಥಗಳಾದ ಯೋಗವಾಸಿಷ್ಠ, ಪಂಚದಶೀ, ಆತ್ಮ-ಪುರಾಣ ಮೊದಲಾದ ಗ್ರಂಥಗಳನ್ನು ಅಲ್ಲಿ ಶ್ರವಣ ಮಾಡಿದರಲ್ಲದೆ, ಉಪ-ನಿಷತ್ತುಗಳು ಮತ್ತು ಗೀತೆ ಮೊದಲಾದ ಗ್ರಂಥಗಳನ್ನೂ ಅಭ್ಯಾಸಮಾಡಿದರು. ಯತಿಗಳ ಅಧ್ಯಾತ್ಮ ಸಾಧನೆಗೆ ಅವಶ್ಯಕವಿರುವ ಮಟ್ಟಿಗೆ ಅವರು ಅಲ್ಲಿಯೇ ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣಾ ಮೊದಲಾದವುಗಳ ರಹಸ್ಯವನ್ನೂ ಕೇಳಿ ತಿಳಿದುಕೊಂಡು ಅಭ್ಯಾಸ ಮಾಡಿದರು. ಇಲ್ಲಿಗೆ ಮಹಾರಾಜರ ಸಾಂಪ್ರದಾಯಿಕ ಸಾಧನವು ಮುಗಿದಂತಾಯಿತು.

ಹರಿಪುರದಲ್ಲಿ ತಾವಿರುವ ಹೇತುವು ಹೀಗೆ ಪೂರ್ಣವಾದೊಡನೆ, ಮಹಾ-ರಾಜರು ಆ ಊರನ್ನು ಬಿಡಬೇಕೆಂದು ಸ್ವಾಭಾವಿಕವಾಗಿಯೇ ಯೋಚನೆ ಮಾಡಿದರು. ಆವರು ಶಾ. ಶ. ೧೮೧೨ನೆಯ ವರುಷದ ಕಾರ್ತಿಕ ಶುಕ್ಲ ಪಕ್ಷದಲ್ಲಿ ಒಂದು ದಿವಸ ಶ್ರೀ ಶಾಂತಾಶ್ರಮ ಸ್ವಾಮಿಗಳವರು ಪ್ರಸನ್ನ ಮುಖರಾಗಿ ಕುಳಿತಾಗ, ಗುರುಗಳ ಮುಂದೆ ಹೋಗಿ ವಿನಯದಿಂದ

ಕೈಜೋಡಿಸಿ ನಿಂತುಕೊಂಡರು. ಮತ್ತು "ಇನ್ನು ಇಲ್ಲಿಂದ ಹೊರಡಲಿಕ್ಕೆ ದಯಮಾಡಿ ಆಜ್ಞೆ ದಯಪಾಲಿಸಬೇಕು." ಎಂದು ಬೇಡಿಕೊಂಡರು.

ಶ್ರೀ ಶಾಂತಾಶ್ರಮ ಸ್ವಾಮಿಗಳವರು ಚಕಿತರಾಗಿ ಕೇಳಿದರು:— ಇದೇನು ಸಮಾಚಾರ? ನಮ್ಮನ್ನು ಬಿಟ್ಟು ಎಲ್ಲಿಗೆ ಹೋಗಬೇಕೆಂದು ಮಾಡಿರುವೆ?

ಮಹಾರಾಜರು: — ಯತಿಗಳು ಆವಶ್ಯಕತೆಯಿದ್ದ ಹೊರತಾಗಿ ಒತ್ತಟ್ಟಿಗೇ ಕೂಡಿರಬಾರದೆಂದು ನಿಯಮವುಂಟು. ಇಷ್ಟು ದಿನಗಳ ವರೆಗೆ ತಮ್ಮ ಪಾದಸೇವೆಯ ಪುಣ್ಯವು ದೊರೆಯಿತು. ತಮ್ಮ ಅನುಗ್ರಹದಿಂದ ಯತಿ ಧರ್ಮಗಳನ್ನೆಲ್ಲ ಕೇಳಿ; ತಿಳಿದುಕೊಂಡಿರುವೆನು. ವೇದಾಂತ ಶ್ರವಣವೂ ಆಯಿತಾಯಿತು. ಇನ್ನು ಇಲ್ಲಿ ಇರಬೇಕಾದ ಪ್ರಯೋಜನವಿಲ್ಲ. ಯತಿ ಧರ್ಮಕ್ಕನುಸಾರವಾಗಿ ದೇಶಪರ್ಯಟನ ಮಾಡುತ್ತ ಶೇಷಾಯುಷ್ಯವನ್ನು ಕಳೆಯಬೇಕೆಂದು ಮಾಡಿರುವೆನು. ಆದಕ್ಕೆ ದಯವಿಟ್ಟು ತಮ್ಮ ಆಜ್ಞೆ ದೊರೆಯಬೇಕು.

ಶ್ರೀ ಶಾಂತಾಶ್ರಮ ಸ್ವಾಮಿಗಳವರ ಮುಖದ ಮೇಲೆ ಸುಳಿದಾಡುತಿರುವ ಮುಂದಹಾಸ್ಯವು ಮಾಯವಾಗಿ ಅವರ ಮುಖವು ಗಂಭೀರವಾಯಿತು. ಅವರು ನಮ್ಮ ಚರಿತ್ರನಾಯಕರಿಗೆ ಒಮ್ಮೆಲೇ ಉತ್ತರ ಕೊಡಲಿಲ್ಲ. ಮಹಾರಾಜರ ಮಾತುಗಳಿಂದ ಅವರು ವಿಚಾರಮಗ್ನರಾದಂತೆ ಕಾಣಿಸಿತು. ಮಹಾರಾಜರು ಅವರ ಮೋರೆಯನ್ನೇ ಮಿಕಿಮಿಕಿ ನೋಡುತ್ತ ನಿಂತುಕೊಂಡರು. ಗುರುಗಳು ಕೆಲಹೊತ್ತು ಕಣ್ಣುಮುಚ್ಚಿಕೊಂಡು ಕುಳಿತರು. ಆ ಮೇಲೆ ಅವರು ಫಕ್ಕನೇ ಕಣ್ಣುತೆರೆದು:— "ಒಳ್ಳೆಯದು. ನಿನ್ನ ವಿಚಾರವು ಸರಿಯಾಗಿದೆ. ಆದರೆ ನಿನಗೆ ಏನು ಹೇಳಬೇಕೆಂಬದನ್ನು ಒಂದೆರಡು ದಿನಗಳಲ್ಲಿ ಖಚಿತವಾಗಿ ಹೇಳುವೆವು. ಅಲ್ಲಿಯ ವರೆಗೆ ಸುಮ್ಮನಿರು." ಎಂದು ಹೇಳಿ ಆ ದಿನದ ಮಾತು ಮುಗಿಸಿದರು.

ಈ ಮಾತಿಗೆ ಒಂದೆರಡು ದಿನಗಳು ಕಳೆದು ಹೋದವು. ಮಹಾರಾಜರು ಮತ್ತೆ ವಿನಯದಿಂದ ಕೈಜೋಡಿಸಿಕೊಂಡು ಗುರುಗಳ ಮುಂದೆ

ನಿಂತುಕೊಂಡರು. ''ದಯವಾಡಿ ಅಪ್ಪಣೆ ಅನುಗ್ರಹಿಸೋಣಾಗಬೇಕು'' ಎಂಬ ಮಾತುಗಳು ಅವರ ಬಾಯಿಂದ ಹೊರಬಿದ್ದವು.

ಗುರುಗಳ ಮುಖದ ಮೇಲೆ ನಿಶ್ಚಯದ ಕಳೆಯು ತೋರುತ್ತಿತ್ತು. ಅವರು ಮುಗುಳು ನಗೆಯಿಂದ ಕೇಳಿದರು:— ಮಗೂ, ಇಲ್ಲಿಂದ ಎಲ್ಲಿಗೆ ಹೋಗಬೇಕೆಂದು ಮಾಡಿರುವಿ ?

ಮಹಾರಾಜರು:— ನಾನು ಇಲ್ಲಿಂದ ಇಂಥಲ್ಲಿಗೇ ಹೋಗಬೇಕೆಂಬ ನಿಶ್ಚಯವನ್ನೇನೂ ಮಾಡಿರುವದಿಲ್ಲ. ಆದರೆ ಯತಿಧರ್ಮಕ್ಕನುಗುಣವಾಗಿ ಉತ್ತರ ಹಿಂದುಸ್ಥಾನದ ಕಡೆಗೆ ಪರ್ಯಟನ ಮಾಡುವದಕ್ಕಾಗಿ ಹೋಗಬೇಕೆಂದು ಮಾಡಿರುವೆನು. ಈ ಮಾತಿಗೆ ತಮ್ಮ ಚರಣಗಳೇ ಸಾಕ್ಷಿ.

ಗುರುಗಳು:— ದೇಶಪರ್ಯಟನವನ್ನೇ ಮಾಡಬೇಕೆಂದು ಏಕೆ ಬಯಸುವಿ?

ಮ:— ಯತಿಗಳು ಒಂದೆಡೆಗೆ ಇರಬಾರದೆಂದು ಶಾಸ್ತ್ರವು ಹೇಳುತ್ತದೆ. ಆ ನಿಯಮಕ್ಕನುಸಾರವಾಗಿ ನಾನು ದೇಶವನ್ನು ಸುತ್ತಾಡಿಕೊಂಡು ಬರಬೇಕೆಂದು ಮಾಡಿದ್ದೇನೆ, ಅಷ್ಟೇ.

ಗು:— ಇದರ ಹೊರತಾಗಿ ಬೇರೆ ಏನೂ ಕಾರಣವಿಲ್ಲವಷ್ಟೇ ?

ಮ:— ಇಲ್ಲ. ಇದರ ಹೊರತಾಗಿ ಬೇರೆ ಯಾವ ಕಾರಣವೂ ಇರುವದಿಲ್ಲ.

ಗು:— ಯತಿಗಳು ಒಂದೇ ಕಡೆಗೆ ನಿಲ್ಲಬಾರದೆಂದೂ, ದೇಶಪರ್ಯಟನದಲ್ಲಿಯೇ ಕಾಲಕಳೆಯಬೇಕೆಂದೂ ಶಾಸ್ತ್ರವು ಏಕೆ ಹೇಳುತ್ತಿದೆಯೆಂಬದನ್ನು ನೀನು ಬಲ್ಲೆಯಾ ?

ಮ:— ಅದು ನನಗೆ ಸರಿಯಾಗಿ ಗೊತ್ತಿಲ್ಲ. ಆದರೆ ಮನುಷ್ಯನು ಒಂದೇ ಕಡೆಗೆ ಬಹು ದಿವಸ ಇರಹತ್ತಿದನೆಂದರೆ, ಅವನಲ್ಲಿ ಆಸಕ್ತಿಯುಂಟಾಗುವ ಸಂಭವವಿರುವದರಿಂದ ಶಾಸ್ತ್ರಕಾರರು ಈ ನಿಯಮವನ್ನು ಹಾಕಿಕೊಟ್ಟಂತೆ ಕಾಣುತ್ತದೆ.

ಗು:— ಶಾಬಾಸ್ ! ನೀನು ಹೇಳುವ ಮಾತು ಸರಿಯಾದುದು. ಆದರೆ

ವೈಯಕ್ತಿಕವಾಗಿ ಹೇಳಬೇಕೆಂದರೆ, ನೀನು ಒಂದೆಡೆಗೇ ಇದ್ದುಕೊಂಡರೆ ಆಸಕ್ತಿಗೆ ಒಳಗಾಗಬಹುದೆಂದು ಹೆದರುವಿಯಾ ?

ಮು:— ತಮ್ಮ ಆಶೀರ್ವಾದದಿಂದಲೂ ಚಿದಂಬರನ ಕೃಪೆಯಿಂದಲೂ ಹಾಗಾಗಲಿಕ್ಕಿಲ್ಲವೆಂದು ಎನಿಸುತ್ತದೆ. ಆದರೆ ಮಾಯೆಯ ಅದ್ಭುತವಾದ ಮಹಿಮೆಗೆ ನಾನು ಎಂದೂ ಒಳಗಾಗಲಿಕ್ಕಿಲ್ಲೆಂದು ಹೇಗೆ ಹೇಳಲಿ ?

ಗು:— ಮಗೂ, ನಿನಗೆ ಇನ್ನೂ ಮಾಯೆಯ ಅಂಜಿಕೆಯಿರುವದೇ ? ದೇವರು ಕೃಪೆದೋರಿ, ನಾವು ಆಶೀರ್ವದಿಸಿದ ಮೇಲೂ ನಿನಗೆ ಮಾಯೆಯ ಬೆದರಿಕೆಯೇ ? ಆ ವಿಚಾರವನ್ನು ಬಿಟ್ಟುಬಿಡು. ಆ ಬಗ್ಗೆ ನೀನು ಚಿಂತಿಸುವ ಕಾರಣವಿಲ್ಲ.

ಮು: ಹಾಗಾದರೆ ತಮ್ಮ ಅಪ್ಪಣೆಯೇನು ?

ಗು:— ಮನುಷ್ಯನು ಬ್ರಹ್ಮಜ್ಞಾನ ಪಡೆದು ಕೃತಾರ್ಥನಾದ ಮೇಲೆ ಏನು ಮಾಡಬೇಕೆಂದು ನಿನ್ನ ತಿಳಿವಳಿಕೆಯಿದೆ ?

ಮು:— ಪ್ರಾರಬ್ಧಶೇಷವು ಮುಗಿಯುವ ದಾರೀ ನೋಡುತ್ತ ಶಾಸ್ತ್ರಕ್ಕನುಸಾರವಾಗಿ ಆಚರಣೆ ಮಾಡುತ್ತಿರಬೇಕು.

ಗು:— ಇಷ್ಟೇಯೇ ?

ಮು: — ನನಗೆ ಇದಕ್ಕಿಂತ ಹೆಚ್ಚಿನ ಕೆಲಸವೇನೂ ಕಾಣುವದಿಲ್ಲ !

ಗು:— ಶ್ರೀಕೃಷ್ಣ ಪರಮಾತ್ಮನು ಮಾಯಾತೀತನೆಂದೂ ಮಾಯಾಧೀಶ್ವರನೆಂದೂ ನೀನು ಒಪ್ಪುವಿಯಾ ?

ಮು:— ಇದೇನು ಕೇಳುವದು ? ಅವನಿಗೆಲ್ಲಿಯ ಮಾಯೆಯು ?

ಗು:— ಹಾಗಿದ್ದರೂ ಅವನು ಕರ್ಮಗಳಲ್ಲಿಯೇ ತೊಡಗಿದ್ದನಲ್ಲವೇ ? ಅದಕ್ಕೆ ಕಾರಣವೇನು ?

ಮು:— ''ಅರ್ಜುನಾ, ಶ್ರೇಷ್ಠ ಜನರು ಹಾಕಿಕೊಟ್ಟ ಪಾಠವನ್ನೇ ಸಾಮಾನ್ಯ ಜನರು ತೀಡುವರು. ನನಗೆ ಗಳಿಸಬೇಕಾದುದೇನೂ ಇಲ್ಲ. ಆದರೂ ನಾನು ಕರ್ಮಗಳನ್ನು ಮಾಡುತ್ತಲೇ ಇರುವೆನು. ನಾನು

ಹಾಗೆ ಮಾಡದಿದ್ದರೆ ಎಲ್ಲ ಕಡೆಗೂ ಅವ್ಯವಸ್ಥೆಯಾಗಿ ಲೋಕದ ಜನರು ಹಾನಿಗೊಳಗಾಗುವರು'' ಎಂದು (ಭ. ಗೀ. ೩–೨೨–೨೫) ಭಗವಂತನು ತನ್ನ ಮುಖದಿಂದಲೇ ಅದಕ್ಕೆ ಉತ್ತರವನ್ನು ಕೊಟ್ಟಿದ್ದಾನೆ. ಅದಕ್ಕಿಂತ ಹೆಚ್ಚಿಗೆ ನಾನೇನು ಹೇಳಲಿ ?

ಗು:— ಭಗವಂತನು ಹೇಳಿಕೊಟ್ಟ ಮಾತನ್ನು ನೀನಾದರೂ ಒಪ್ಪುವಿಯಷ್ಟೇ?

ಮ:— ಯಾರಾದರೂ ಅದನ್ನು ಒಪ್ಪಲೇ ಬೇಕು.

ಗು:— ನಿನ್ನಂತೆ ತಾರುಣ್ಯದಲ್ಲಿಯೇ ವೈರಾಗ್ಯವಡೆದು, ದೇವರ ಮತ್ತು ಗುರುಗಳ ಕೃಪೆ ಸಂಪಾದಿಸಿ ಮುಕ್ತನಾದವನು, ಜಗತ್ತನ್ನು ಬಿಟ್ಟು ಪರ್ವತಗಳ ಗುಹೆಗಳಲ್ಲಿ ಕಾಲಕಳೆಯಹತ್ತಿದರೆ, ಅಜ್ಞಾನಾಂಧಃಕಾರದಲ್ಲಿ ಮುಣುಮುಣುಗಿ ಏಳುತ್ತಿರುವ ದೀನಜನರ ಪಾಡೇನು ?

ಮ:— ಅದಕ್ಕೆ ನಾನೇನು ಮಾಡಲಿ, ಗುರುಗಳೇ ? ಎಲ್ಲರೂ ಪ್ರಾರಬ್ಧಾಧೀನರು. ನಾನಾದರೂ ಪ್ರಾರಬ್ಧಕ್ಕೆ ಅಧೀನನಾದವನೇ. ನನ್ನ ಪ್ರಾರಬ್ಧವು ಹೇಗಿರುವದೋ ಹಾಗೆ ಕಾಲಕಳೆಯಬೇಕಲ್ಲ !

ಗು:—ಇಲ್ಲವೆಂದು ಯಾರು ಹೇಳಿದರು ? ನಾನೂ ಅದನ್ನೇ ಹೇಳುತ್ತಿದ್ದೇನೆ. ನೀನು ನಿನ್ನ ಪ್ರಾರಬ್ಧಕ್ಕನುಸಾರವಾಗಿಯೇ, ಭಗವದ್ವಿಮುಖರಾಗಿ ದುಃಖಬಡುತ್ತಿರುವ ಜನರನ್ನು ಪರಮಾರ್ಥ ಮಾರ್ಗಕ್ಕೆ ಹಚ್ಚಿ ಉದ್ಧರಿಸಬೇಕಾಗಿದೆ. ನಿನ್ನ ಸಲುವಾಗಿ ಎಷ್ಟು ಜೀವಿಗಳು, ಎಷ್ಟು ಸಾಧಕರು ದಾರೀ ಕಾಯುತ್ತಿರುವರೆಂಬದನ್ನು ನೀನೇನು ಬಲ್ಲೆ !

ಮ:— ಜಗತ್ತನ್ನುದ್ಧಾರ ಮಾಡುವ ಕೆಲಸವು ಪರಮಾತ್ಮನದು. ಅದು ನನ್ನಂಥ ಪಾಮರನ ಕಡೆಯಿಂದ ಹೇಗಾಗಬೇಕು ?

ಗು:— ಕೆಲಸವನ್ನು ಮಾಡಿಸಿಕೊಳ್ಳುವವನು ಪರಮಾತ್ಮನು. ಅವನು ಯಾರ ಮುಖಾಂತರವಾಗಿ ಕೆಲಸ ಮಾಡಿಸಬೇಕೆನ್ನುತ್ತಾನೋ—ಅವರು ದೊಡ್ಡವರಿರಲಿ, ಸಣ್ಣವರಿರಲಿ—ಅವರ ಕಡೆಯಿಂದಲೇ ಆ ಕೆಲಸವು ಆಗತಕ್ಕದ್ದು. ಭಗವದಿಚ್ಛೆಯಿಂದ ಕಡ್ಡಿಯೂ ಗುಡ್ಡಾಗಬಹುದು. ಗುಡ್ಡವೂ ಕಡ್ಡಿಯಾಗಬಹುದು. ಭಗವಂತನು ಇಂಥವರನ್ನು ಇಂಥ

ಕೆಲಸಕ್ಕಾಗಿಯೇ ಏಕೆ ಉಪಯೋಗಿಸುತ್ತಾನೆಂಬ ಮಾತನ್ನು ನಾವು ಚರ್ಚಿಸಬಹುದೇ ?

ಶು:— ಅದು ನಮ್ಮ ಕೆಲಸವಲ್ಲ. ಭಗವಂತನ ಇಚ್ಛೆಗನುಸಾರವಾಗಿ ಮನಃಪೂರ್ವಕವಾಗಿ ಕೆಲಸ ಮಾಡುವುದೇ ನಮ್ಮ ಪರಮಧರ್ಮವು. ಅದೇ ಅವನ ನಿಜವಾದ ಸೇವೆಯು.

ಗು:— ಶಾಬಾಸ್ ! ಎಷ್ಟು ಸರಿಯಾಗಿ ಮಾತಾಡುತ್ತಿರುವಿಯಲ್ಲ ! ದೇವರು ನಿನ್ನ ಸಂನ್ಯಾಸಕ್ಕೆ ಅನುಕೂಲವಾದ ಪರಿಸ್ಥಿತಿಯನ್ನು ತಂದು ಕೊಟ್ಟು, ನಿನಗೆ ಸಂನ್ಯಾಸವನ್ನು ಏಕೆ ಕೊಡಿಸಿರುವನೆಂಬದು ನಿನಗೆ ಇನ್ನೂ ಗೊತ್ತಾಗಿಲ್ಲವೇ ? ಯಾರ ಮೇಲೆಯೂ ಅನುಗ್ರಹ ಮಾಡದಿರುವ ನಾವು ನಿನ್ನ ಮೇಲೆಯೇ ಇಷ್ಟೇಕೆ ಮಮತ್ವ ತೋರಿಸಿರುವೆವೆಂಬದರ ಗೂಢವೂ ನಿನಗೆ ಇನ್ನೂ ಸ್ಪಷ್ಟವಾಗಿಲ್ಲನೇ ?

ಮು:— ತಾವೇ ದಯವಿಟ್ಟು ಅಪ್ಪಣೆ ಕೊಡಿಸಬೇಕು.

ಗು:— ವತ್ಸಾ, ನೀನು ಸಂನ್ಯಾಸ ತಕ್ಕೊಂಡದ್ದು ಚಿದಂಬರನ ಸೇವೆಗಾಗಿಯೇ ! ಚಿದಂಬರನ ಸೇವೆಗಾಗಿಯೇ ನೀನು ಹುಟ್ಟಿ ಬಂದಿರುವೆ. ಚಿದಂಬರನ ಸೇವೆಯೇ ನಿನ್ನ ಜನ್ಮದ ಗುರಿ. ಅದಕ್ಕಾಗಿಯೇ ದೇವರು ನಿನ್ನ ಮೇಲೆ ಕೃಪೆ ಮಾಡಿರುತ್ತಾನೆ. ಅದಕ್ಕಾಗಿಯೇ ನಾವಾದರೂ ನಿನ್ನ ಮೇಲೆ ಅನುಗ್ರಹ ಮಾಡಿದ್ದೇವೆ. ನಿನ್ನ ಪ್ರಾರಬ್ಧವೇ ಹಾಗಿದೆ. ಅದನ್ನು ತಪ್ಪಿಸಿಕೊಳ್ಳಬೇಕೆಂದು ನೀನು ಯತ್ನ ಮಾಡಬೇಡ. ನೀನು ಯತ್ನ ಮಾಡಿದರೂ ನಿನಗೆ ಅದರಲ್ಲಿ ಯಶಸ್ಸು ಸಿಕ್ಕಲಾರದು !

ಈ ಮಾತುಗಳನ್ನಾಡುವ ಕಾಲಕ್ಕೆ ಶ್ರೀ ಶಾಂತಾಶ್ರಮ ಸ್ವಾಮಿಗಳವರಿಗೆ ಒಳ್ಳೇ ಆವೇಶವು ಬಂದಂತೆ ಕಾಣಿಸಿತು. ಅವರ ಸಹಜವಾದ ಸ್ವಭಾವಕ್ಕೆ ಈ ಆವೇಶವು ವಿಚಿತ್ರವಾಗಿಯೇ ತೋರುವಂತಿತ್ತು. ನಮ್ಮ ಚರಿತ್ರನಾಯಕರು ಗುರುಗಳ ಮಾತುಗಳನ್ನು ಲಕ್ಷ್ಯಪೂರ್ವಕವಾಗಿಯೇ ಕೇಳುತ್ತಿದ್ದರು. ತಾವು ಪೂರ್ವಾಶ್ರಮದಲ್ಲಿದ್ದಾಗ ''ಲೋಕಸಂಗ್ರಹವೇ ನನ್ನ ಆಯುಷ್ಯದ ಮುಖ್ಯ ಕರ್ತವ್ಯವು.'' ಎಂದು ಅವರು ನಿಶ್ಚಯಪೂರ್ವಕವಾಗಿ ಹೇಳಿದ್ದು

ಈಗ ಅವರ ನೆನಪಿಗೆ ಬಂತು. ಶ್ರೀ ಸಮರ್ಥ ಅಕ್ಕಲಕೋಟೆ ಸ್ವಾಮೀ ಮಹಾರಾಜರ ಸಂದೇಶವೂ ನೆನಪಾಯಿತು. ಹೀಗೆ ತಾವು ಪೂರ್ವಾಶ್ರಮದಲ್ಲಿ ಕಂಡ ಕನಸನ್ನೇ ಸತ್ಯಮಾಡಿ ತೋರಿಸುವ ಪ್ರಸಂಗ ಬಂದುದಕ್ಕಾಗಿ ಅವರಿಗೆ ಒಂದು ರೀತಿಯಿಂದ ಆನಂದವೇ ಆಯಿತು. ಅವರೂ ಆವೇಶ ಪೂರ್ವಕವಾಗಿಯೇ ಆದರೂ ವಿನಯದಿಂದ ಗುರುಗಳ ಕಾಲನ್ನು ಮುಟ್ಟಿ ನಮಸ್ಕಾರ ಮಾಡಿ ಹೇಳಿದರು:— ''ಏನು ? ಚಿದಂಬರನ ಸೇವೆಗಾಗಿಯೇ ನನ್ನ ಸಂನ್ಯಾಸವೇ ? ಚಿದಂಬರನ ಸೇವೆಗಾಗಿಯೇ ನನ್ನ ಜನ್ಮವೇ ? ನನ್ನ ಇಚ್ಛೆ ಇಲ್ಲದಿದ್ದರೂ ಚಿದಂಬರನು ನನ್ನ ಕಡೆಯಿಂದ ಸೇವೆಯನ್ನು ತಕ್ಕೊಂಡೇ ಬಿಡತಕ್ಕವನೇ ? ಹಾಗಿದ್ದರೆ ನಾನು ಕೃತಕೃತ್ಯನಾದೆನೆಂದು ತಿಳಿಯುತ್ತೇನೆ. ಚಿದಂಬರನೇ ತಮ್ಮ ಮುಖದಿಂದ ಈಗ ಆಜ್ಞೆ ಮಾಡುತ್ತಿದ್ದಾನೆಂದು ನನ್ನ ನಿಶ್ಚಯವಾಗಿದೆ. ತಮ್ಮ ಆಜ್ಞೆಯು ನನಗೆ ಶಿರಸಾಮಾನ್ಯವು.''

ಶ್ರೀ ಶಾಂತಾಶ್ರಮ ಸ್ವಾಮಿಗಳವರು ಆನಂದದಿಂದ ಮಹಾರಾಜರ ಬೆನ್ನ ಮೇಲೆ ಕೈಯಾಡಿಸುತ್ತ ಹೇಳಿದರು:— ''ಅಪ್ಪಾ, ನಿನ್ನ ಭಾಗ್ಯವು ಬಲು ದೊಡ್ಡದು. ಇದೇ ಜನ್ಮದಲ್ಲಿಯೇ ನೀನು ದೇವರಂತೆ ಪೂಜ್ಯನಾಗುವೆ. ನಿನ್ನ ಕಡೆಯಿಂದ ಅಪಾರವಾದ ಚಿದಂಬರನ ಸೇವೆಯೂ, ದೊಡ್ಡ ಪ್ರಮಾಣದ ಲೋಕಸಂಗ್ರಹ ಲೋಕಕಲ್ಯಾಣಗಳೂ ಆಗುವವು. ಇಷ್ಟೇ ಅಲ್ಲ, ನಿನ್ನ ಪಾರ್ಥಿವ ಶರೀರವು ಬಿದ್ದಮೇಲೂ ನಿನ್ನ ಸ್ಥಾನವು ಅಚಂದ್ರಾರ್ಕವಾಗಿ ಪುಣ್ಯ ಸ್ಥಾನವೆಂದು ಪರಿಗಣಿಸಲ್ಪಡುವದು.''

ಕೃತಜ್ಞತೆಯ ಮೂಲಕ ಮಹಾರಾಜರ ಬಾಯಿಯಿಂದ ಮಾತುಗಳೇ ಹೊರಡಲಿಲ್ಲ. ಆದರೂ ಅವರು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಲೆತ್ನಿಸಿದರು. ಶಬ್ದಗಳು ಒಂದೊಂದೇ ಆಗಿ ಅಸ್ಪಷ್ಟವಾಗಿ ಹೊರಬಿದ್ದವು:— ''ಎ....ಲ್ಲ....ವೂ ತ....ಮ್ಮ.... ಅ....ಪಾ....ರ....ವಾದ.... ಕಾ....ರು.... ಣ್ಯ....ವೇ.... ಸ....ರಿ.''

ಶ್ರೀ ಶಾಂತಾಶ್ರಮ ಸ್ವಾಮಿಗಳವರು ಮತ್ತೆ ಮಾತಾಡಹತ್ತಿದರು:— ''ವತ್ಸಾ, ಚಿದಂಬರನ ಸೇವೆಯು ಸುಲಭವಲ್ಲ ಕಂಡೆಯಾ. ಅನೇಕ ಜನರು ನಿನಗೆ ಅನೇಕ ತರದಿಂದ ಕಷ್ಟಕೊಡುವರು. ನಾನಾತರದ

ಅಪವಾದಗಳನ್ನು ಸಹನ ಮಾಡಬೇಕಾಗುವದು. ಆದರೆ ಚಿದಂಬರನ ಕಡೆಗೆ ಲಕ್ಷ್ಯವಿಟ್ಟು ಅವುಗಳನ್ನೆಲ್ಲ ಮರೆತು ಬಿಡಬೇಕು, ತಿಳಿಯಿತೇ ? ನಿನಗೆ ತೀರ್ಥಯಾತ್ರೆ ಮಾಡಬೇಕೆಂಬ ಇಚ್ಛೆ ಇದ್ದರೆ ಅದನ್ನೂ ಮಾಡಬಹುದು. ನೀನೊಬ್ಬನೇ ಏಕೆ, ಅನೇಕ ಭಕ್ತರನ್ನೂ ಸಂಗಡ ಕರಕೊಂಡು ನೀನು ತೀರ್ಥಯಾತ್ರೆ ಮಾಡುವೆ. ಆದರೂ ಕರ್ನಾಟಕದಲ್ಲಿಯೇ ನೀನು ಚಿದಂಬರ ಸೇವೆ ಮಾಡಬೇಕು. ಚಿದಂಬರ ಮಹಾರಾಜರು ಲೀಲೆ ಮಾಡಿ ತೋರಿಸಿದ ಅವರ ಜನ್ಮಭೂಮಿಯಲ್ಲಿಯೇ ಅವರ ಹೆಸರೂ ಕೂಡ ಕೇಳಬರದಂತಾಗಿದೆ. ಚಿದಂಬರ ಸಾಂಪ್ರದಾಯವು ಮೃತಪ್ರಾಯವಾಗಿದೆ. ಅದನ್ನು ನೀನು ಪುನರುಜ್ಜೀವನ ಗೊಳಿಸಬೇಕು. ಚಿದಂಬರನ ನಾಮದುಂದುಭಿಯನ್ನು ಮೊಳಗಿಸುತ್ತ ಜನರಲ್ಲಿ ಚಿದಂಬರನ ಭಕ್ತಿಯನ್ನು ಬೆಳೆಸುತ್ತ ಹೋಗು. ಈ ಕಾರ್ಯದಲ್ಲಿ ನಿನಗೆ ಯಶಸ್ಸು ಕಟ್ಟಿಟ್ಟದ್ದು, ತಿಳಿಯಿತೇ ?''

ನಮ್ಮ ಚರಿತ್ರನಾಯಕರು ಮೌನದಿಂದಲೇ ಎಲ್ಲವನ್ನೂ ಒಪ್ಪಿಕೊಂಡರು.

ಗುರುಗಳ ಆಪ್ಪಣೆಗನುಸಾರವಾಗಿ ಶಾ. ಶ. ೧೮೫೨ನೆಯ ಕಾರ್ತಿಕ ಶುದ್ಧ ಪೌರ್ಣಿಮೆಯ ದಿವಸ ಮಹಾರಾಜರು ಭಿಕ್ಷೆಯಾದ ಮೇಲೆ ಹರಿಪುರವನ್ನು ಬಿಟ್ಟರು.

———

೬ ಗುರ್ಲಹೊಸೂರ

ಗುರ್ಲಹೊಸೂರು ಬೆಳಗಾಂವಿಯಿಂದ ಎಲ್ಲಮ್ಮನ ಗುಡ್ಡಕ್ಕೆ ಹೋಗುವ ಲೈನದಾರಿಯ ಮೇಲೆ ಮಲಪ್ರಭೆಯ ದಡದಲ್ಲಿ ನೆಲೆಸಿದೆ. ಊರು ಅಷ್ಟೇನೂ ದೊಡ್ಡದಲ್ಲ. ಆದರೆ ಅದು ತಕ್ಕಮಟ್ಟಿಗೆ ವ್ಯಾಪಾರದ ಸ್ಥಳವಾಗಿರುವದರಿಂದ ಅದಕ್ಕೆ ಮಹತ್ತ್ವ ಬಂದಿದೆ. ಕಾಂಗ್ರೆಸ ಚಳವಳಿ ಸುರುವಾದಾಗಿನಿಂದ ಈ ಊರು ಪ್ರಮುಖ ಜಾದೀ ಕೇಂದ್ರವಾಗಿದೆ. ಇಲ್ಲಿ ಅನೇಕ ಜನ ನೇಕಾರರಿದ್ದಾರೆ. ಬ್ರಾಹ್ಮಣರ ವಸತಿಯೂ ಚನ್ನಾಗಿದೆ. ಕುಶಲರಾದ ಕಲಾವಿದರೂ ಕೆಲ ಜನರಿದ್ದಾರೆ. ಲೋಕಮಾನ್ಯರ ಸ್ಮಾರಕವೆಂದು ಹೊರಟ ''ಟಿಳಕವಾಚನಾಲಯ''ವಿರುವದಲ್ಲದೆ, ಪೋಸ್ಟಾಫೀಸೂ ಇರುತ್ತದೆ. ಇಲ್ಲಿಯ ಗಂಡು ಹವೆಯೂ ಮಲಪ್ರಭೆಯ ಆರೋಗ್ಯಕರವಾದ ನೀರೂ, ಪ್ರಸಿದ್ಧವಾಗಿವೆ. ನದಿ ಮತ್ತು ಹಳ್ಳಗಳಗುಂಟ ತೋಟಪಟ್ಟಿಗಳಿದ್ದು, ಕಾಯಿಪಲ್ಲೆಗಳೂ ಬೇಕಾದಷ್ಟು ಸಿಕ್ಕುತ್ತವೆ. ಆದರೆ ಗುರ್ಲಹೊಸೂರು ಈ ಕಾರಣಗಳಿಂದ ಮುಂದೆ ಬಂದಿರುವದಿಲ್ಲ. ಅದು ಜನರಿಗೆ ಗೊತ್ತಿರುವದು ಚಿದಂಬರೇಶ್ವರನ ಯಾತ್ರಾಸ್ಥಳವೆಂದೇ.

ಈ ಊರು ನೆಲೆಸಿದ್ದು ಇತ್ತೀಚೆಗೆ. ಮೊದಲು ಇಲ್ಲಿ ಮನೆಗಳಾಗಲಿ ಜನರಾಗಲಿ ಯಾರೂ ಇರುತ್ತಿದ್ದಿಲ್ಲ. ನದಿಯ ದಡಕ್ಕೆ ಒಂದು ಮಾರುತಿಯ ದೇವಾಲಯವು ಮಾತ್ರ ಇತ್ತು. ಈ ಗುಡಿಯು ಇಂದಿಗೂ ಅಲ್ಲಿದೆ. ಮಳೆಗಾಲದಲ್ಲಿ ನದಿಗೆ ಮಹಾಪೂರ ಬಂದು ರಹದಾರಿಯು ಬಂದಾಗುತ್ತಿದ್ದುದರಿಂದ ನಾಲ್ಕಾರು ಅಂಬಿಗರು ಮಾತ್ರ ನದಿಯ ದಂಡೆಯ ಮೇಲೆ ಗುಡಿಸಲುಗಳನ್ನು ಕಟ್ಟಿಕೊಂಡು ಕೊಪ್ಪರಿಗೆಯೊಳಗಿಂದ ಜನರನ್ನು ಒಂದು ಬದಿಯಿಂದ ಇನ್ನೊಂದು ಬದಿಗೆ ಒಯ್ಯುತ್ತಿದ್ದರು, ಅಷ್ಟೇ.

ಸದಾಶಿವನ ಅವತಾರವೆಂದೆನಿಸಿಕೊಂಡ ಶ್ರೀ ಚಿದಂಬರ ದೀಕ್ಷಿತ ಮಹಾಸ್ವಾಮಿಗಳೇ ಈ ಊರನ್ನು ಸ್ಥಾಪಿಸಿದರು. ಅವರ ಜನ್ಮಭೂಮಿಯು ಮುರಗೋಡೆಂಬದು ವಾಚಕರಿಗೆ ಗೊತ್ತಿದೆ. ಅವರ ಮುಖ್ಯ ಲೀಲಾಭೂಮಿ ಯಾದರೂ ಮುರಗೋಡವೇ ಸರಿ. ಆದರೆ ಕಾರಣಾಂತರಗಳಿಂದ ಮುರ-ಗೋಡ ಹದ್ದಿಯಲ್ಲಿ ಬ್ರಹ್ಮಹತ್ಯೆಯಂತಹ ಘೋರವಾದ ಅನ್ಯಾಯವೊಂದು ನಡೆಯಿತು. ಶ್ರೀ ದೀಕ್ಷಿತ ಪ್ರಭುಗಳು ಆ ಸುದ್ದಿಯನ್ನು ಕೇಳಿದೊಡನೆ ಇದ್ದಕ್ಕಿದ್ದಂತೆ ಮುರಗೋಡ ಬಿಟ್ಟು ಹೊರಬಿದ್ದರು. ನಿಷ್ಕಾರಣವಾಗಿ ಬ್ರಹ್ಮಹತ್ಯೆಯಾದ ಊರಲ್ಲಿ ೧೨ ವರುಷಗಳ ಕಾಲ ಇರಬಾರದೆಂದು ಸಂಕಲ್ಪ ಮಾಡಿ ದೀಕ್ಷಿತರು ಆ ಊರಿಗೆ ಶರಣು ಹೊಡೆದರು. ಈ ಅವಧಿಯಲ್ಲಿ ಅವರು ಅಲ್ಲಲ್ಲಿ ಕೆಲವು ದಿನಗಳಿದ್ದು, ಕೊನೆಗೆ ಗುರ್ಲಹೊಸೂರಿಗೆ ಬಂದು ಅಲ್ಲಿಯೇ ವಾಸಮಾಡಹತ್ತಿದರು. ಅನುಯಾಯಿಗಳಾದವರೂ ಸ್ವಾಭಾವಿಕ-ವಾಗಿ ಅಲ್ಲಿಗೇ ಬಂದು ಅವರ ಸಂಗಡ ಮನೆ ಮಾಡಿಕೊಂಡು ಇರಹತ್ತಿದರು. ಹೀಗೆ ಈ ಊರು ಅಸ್ತಿತ್ವದಲ್ಲಿ ಬಂತು. ಈ ಕಾರಣದಿಂದಲೇ ಜನರು ಅದನ್ನು ''ಗುರುಗಳ ಹೊಸ ಊರು'' ಎಂದು ಕರೆಯಲಾರಂಭಿಸಿದರು. ಅದೇ ಸಂಕ್ಷೇಪವಾಗಿ ಗುರ್ಲಹೊಸೂರಾಯಿತು. ಗುರುನವಪುರವೆಂಬದು ಅದರ ಸಂಸ್ಕೃತ ರೂಪವು.

ಶ್ರೀ ದೀಕ್ಷಿತ ಮಹಾರಾಜರು ಪೇಶವೆಯಂಥವರಿಗೂ ಗುರುಗಳಾಗಿ-ದ್ದರು. ಆದುದರಿಂದ ಅವರ ಸೇವೆಗೆಂದು ಪೇಶವೆಯ ಸರದಾರರನೇಕರು ಗುರ್ಲಹೊಸೂರಿಗೆ ಬರುತ್ತಿದ್ದರು. ಅವರು ಗುರ್ಲಹೊಸೂರಿಗೆ ಬಂದಾಗ ಇರಲಿಕ್ಕೆ ಇಲ್ಲೇ ಮನೆಮಾರುಗಳನ್ನು ಕಟ್ಟಿಸಿದರು. ಅವರಲ್ಲಿ ಪ್ರಮುಖ ನಾದ ಬಾಪೂ ಗೋಖಲೇನ ವಾಡೆಯನ್ನು ಇಂದಿಗೂ ಕಾಣಬಹುದು. ಇದೇ ರೀತಿಯಾಗಿ ಮಹಾ ಸ್ವಾಮಿಗಳವರ ಆಶ್ರಯಕ್ಕೆ ಬಂದು ನಿಂತು, ಇಲ್ಲಿಯೇ ಕಾಯಂ ವಸತಿ ಮಾಡಿದ ಅನೇಕ ದೇಶಸ್ಥ, ಕೊಂಕಣಸ್ಥ ಮತ್ತು ಕರ್ಹಾಡೆ ಬ್ರಾಹ್ಮಣರ ಮನೆತನಗಳು ಇಂದಿಗೂ ಇಲ್ಲಿ ಪ್ರಸಿದ್ಧವಾಗಿವೆ. ಕಿರ್ಲೋಸ್ಕರ, ಖರೇ, ವೇಲಣಕರ, ಜೋಗಳೇಕರ, ಡೆಹರೆ, ಗರ್ದೇ ಮೊದಲಾದ ಮನೆಗಳ ಹೆಸರನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು.

ಸನ್ ೧೯೧೪ನೆಯ ಇಸ್ವಿಯ ಮಹಾಪೂರದಲ್ಲಿ ಸ್ವತಂತ್ರವಾಗಿದ್ದ ಬ್ರಾಹ್ಮಣರ ಓಣಿಯು ಸಂಪೂರ್ಣವಾಗಿ ನಾಶವಾಯಿತು. ಈಗ ಆವರೆಲ್ಲ ಬೇರೆ ಕಡೆಗೆ ಮನೆಗಳನ್ನು ಕಟ್ಟಿಕೊಂಡು ಇರುತ್ತಿದ್ದಾರೆ.

ಶ್ರೀ ಚಿದಂಬರ ದೀಕ್ಷಿತರು ತಮ್ಮ ಪ್ರಿಯ ಶಿಷ್ಯನಾದ ರಾಜಾರಾಮನಿಗೆ ಇಲ್ಲಿಯೇ ಅನುಗ್ರಹವಿತ್ತು ಉದ್ಧಾರ ಮಾಡಿದರು. ಈ ಕಾರಣದಿಂದಲೇ ರಾಜಾರಾಮನಾದರೂ ಕೊನೆಯ ವರೆಗೆ ಈ ಊರಲ್ಲಿಯೇ ಇದ್ದುಕೊಂಡು ಚಿದಂಬರ ಭಕ್ತಿಯನ್ನು ಹಬ್ಬಿಸಿದನು. ಅವನು ಇಲ್ಲಿ ವಾಸ ಮಾಡುತ್ತಿದ್ದ ಮಠವು ಇಂದಿಗೂ ''ರಾಜಾರಾಮನ ಮಠ''ವೆಂದು ಪ್ರಸಿದ್ಧವಾಗಿದೆ.

ಶ್ರೀ ಚಿದಂಬರ ದೀಕ್ಷಿತರಿಗೆ ಆರು ಜನ ಗಂಡು ಮಕ್ಕಳಾದರು. ಅವರಲ್ಲಿ ಕೊನೆಯವರೇ ಶ್ರೀ ಬಾಪೂ ದೀಕ್ಷಿತರೆಂಬ ಹೆಸರಿನಿಂದ ಪ್ರಸಿದ್ಧವಾದರು. ಆವರ ನಾಲಿಗೆಯ ಮೇಲೆ ಪದ್ಮಚಿಹ್ನವಿತ್ತಂತೆ! ಎಂತೆಯೇ ಚಿದಂಬರ ಮಹಾರಾಜರು ಅವರಿಗೆ ''ವರರುಚಿ'' ಎಂದು ಹೆಸರಿಟ್ಟರು. ವರರುಚಿ ಎಂದರೆ ತನ್ನ ಮನಸ್ಸಿಗೆ ಬಂದದ್ದನ್ನು ಮಾಡುವ ಶಕ್ತಿಯುಳ್ಳವನೆಂದು ಅರ್ಥ. ಅವರ ಬಾಯಿಂದ ಬಂದ ಮಾತುಗಳು ಎಂದೂ ಸುಳ್ಳಾಗುತ್ತಿದ್ದಿಲ್ಲ. ಆವರ ವಾಕ್ಸಿದ್ಧಿಯ ಪ್ರತ್ಯಯವನ್ನು ಪಡೆದ ಅನೇಕ ಜನರನ್ನು ಇನ್ನೂ ನೋಡಬಹುದು. ಇವರ ದರ್ಪವು ಸಹಜವಾಗಿಯೇ ಎಲ್ಲರ ಮೇಲಿತ್ತು. ಗುರ್ಲಹೊಸೂರ ಗ್ರಾಮವು ದೀಕ್ಷಿತರ ಮನೆಗೆ ಇನಾಮಾಗಿ ಸಿಕ್ಕದ್ದು ಇವರ ಕಾಲದಲ್ಲಿಯೇ.

ಶ್ರೀ ಚಿದಂಬರ ದೀಕ್ಷಿತರು ನಿಜರೂಪದಲ್ಲಿ ಐಕ್ಯರಾದ ಮೇಲೆ ಮುರಗೋಡದಲ್ಲಿ ಆವರ ಗುಡಿಯು ಕಟ್ಟಲ್ಪಟ್ಟು ಉತ್ಸವಾದಿಗಳು ಯಥಾಸಾಂಗವಾಗಿ ನಡೆಯುತ್ತಿದ್ದವು. ಆದರೆ ಅವರ ಮತ್ತೊಂದು ಪ್ರೀತಿಯ ಸ್ಥಾನವಾದ ಗುರ್ಲಹೊಸೂರಲ್ಲಿ ಮಾತ್ರ ಇನ್ನೂ ಯಾವ ಉತ್ಸವದ ವ್ಯವಸ್ಥೆಯೂ ಆಗಿರಲಿಲ್ಲ. ಶ್ರೀ ಬಾಪೂ ದೀಕ್ಷಿತರು ಗುರ್ಲಹೊಸೂರಲ್ಲಿಯೇ ಇರುತ್ತಿದ್ದರು. ಆವರ ಮನಸ್ಸಿನಲ್ಲಿ ಈ ಮಾತು ಕಟಿಯುತ್ತಲೇ ಇತ್ತು. ಏನಾದರೂ ಮಾಡಿ ಗುರ್ಲಹೊಸೂರಲ್ಲಿಯೂ ಶ್ರೀ ಶಿವಚಿದಂಬರನ ದೇವಾಲಯವನ್ನು ಸ್ಥಾಪಿಸಿ,

ಪೂಜಾ ಉತ್ಸವಾದಿಗಳು ನಡೆಯುವಂತೆ ಮಾಡಬೇಕೆಂದು ಅವರು ಎಂದಿನಿಂದಲೂ ವಿಚಾರ ಮಾಡುತ್ತಿದ್ದರು. ದೈವ ಸಂಕಲ್ಪದಿಂದ ಅದು ಒಂದು ಸಾರೆ ಸಫಲವಾಗುವ ಯೋಗಬಂತು.

ಮುರಗೋಡದಲ್ಲಿ ಮಾರ್ಗಶೀರ್ಷ ಮಾಸದೊಳಗೆ ಶ್ರೀ ಚಿದಂಬರನ ಶೈವಾಗನೋಕ್ತ ಉತ್ಸವವು ನಡೆಯುತ್ತಿರುತ್ತದೆಂಬದನ್ನು ವಾಚಕರು ಬಲ್ಲರು. ಆ ಪ್ರಸಂಗದೊಳಗೆ ರಥೋತ್ಸವದ ಕಾಲಕ್ಕೆ ಎಲ್ಲಿದ್ದರೂ ಶ್ರೀ ಬಾಪೂ ದೀಕ್ಷಿತರು ಹಾಜರಾಗತಕ್ಕವರೇ. ಅವರು ಹೋದ ಹೊರತು ತೇರನ್ನು ಜಗ್ಗುವ ವಾಡಿಕೆಯೇ ಇರಲಿಲ್ಲ. ಆದರೆ ಒಂದು ವರುಷ ಶ್ರೀ ಬಾಪೂ ದೀಕ್ಷಿತರಿಗೆ ತಕ್ಕ ವೇಳೆಗೆ ಮುರಗೋಡಿಗೆ ಹೋಗುವದಾಗಲಿಲ್ಲ. ಎಲ್ಲರೂ ಅವರ ದಾರೀ ನೋಡಿ ನೋಡಿ ಬೇಸತ್ತು, ಸಾಯಂಕಾಲವಾಗುವದೆಂಬ ಹೆದರಿಕೆಯಿಂದಲೂ, ಬಹುಶಃ ಶ್ರೀ ಬಾಪೂ ದೀಕ್ಷಿತರು ಅಂದು ಬರಲಿಕ್ಕಿಲ್ಲೆಂಬ ಪ್ರಾಮಾಣಿಕವಾದ ತಿಳಿವಳಿಕೆಯಿಂದಲೂ, ರಥೋತ್ಸವದ ಕೆಲಸವನ್ನು ಸುರುವು ಮಾಡಿಬಿಟ್ಟರು. ತೇರಿನ ಮೆರವಣಿಗೆಯು ಇನ್ನೂ ಮುಗಿದಿರಲಿಲ್ಲ. ಆದರೆ ಅಷ್ಟರಲ್ಲಿಯೇ ಶ್ರೀ ಬಾಪೂ ದೀಕ್ಷಿತರ ಸವಾರಿಯು ಬಂದು ಬಿಟ್ಟಿತು. ತಮ್ಮನ್ನು ಬಿಟ್ಟೇ ತೇರನ್ನು ಎಳೆಯುತ್ತಿರುವದನ್ನು ನೋಡಿ ಅವರ ಕಣ್ಣು ಕೆಂಪಾದವು. ಕ್ರೋಧಾವೇಶದಿಂದ ಅವರು ನಡುಗಹತ್ತಿದರು. ಯಾರು ಎಷ್ಟು ಹೇಳಿದರೂ ಅವರ ಸಿಟ್ಟು ಶಾಂತವಾಗಲಿಲ್ಲ. ಈರ್ಷೆಯ ಮೂಲಕ ಅವರು ಗುಡಿಯ ಪ್ರಾಕಾರದೊಳಗೆ ಕೂಡ ಕಾಲಿಡಲಿಲ್ಲ. ಅವರು ಹೊರಗಿಂದ ಹೊರಗೆ ತಿರುಗಿ ಹೋದರು. ಹೋಗುವ ಮೊದಲು ಎಲ್ಲರಿಗೂ ಕೇಳುವಂತೆ ಒಂದು ಪ್ರತಿಜ್ಞೆಯನ್ನು ಮಾಡಿಬಿಟ್ಟರು:— ''ಒಂದೆರಡು ವರುಷಗಳೊಳಗಾಗಿ ನಾನು ಗುರ್ಲಹೊಸೂರಲ್ಲಿಯೇ ಒಂದು ಸ್ವತಂತ್ರವಾದ ಚಿದಂಬರ ದೇವಾಲಯವನ್ನು ಕಟ್ಟಿಸಿ, ಅಲ್ಲಿಯೇ ರಥೋತ್ಸವವನ್ನು ಮಾಡಿಸುವೆನು. ಇನ್ನು ಇಲ್ಲಿಯ ರಥೋತ್ಸವಕ್ಕೆ ನಾನೆಂದಿಗೂ ಬರಲಿಕ್ಕಿಲ್ಲ.''

ಶ್ರೀ ಬಾಪೂ ದೀಕ್ಷಿತರಂಥ ಅಲೌಕಿಕ ವ್ಯಕ್ತಿಗಳ ಪ್ರತಿಜ್ಞಾಸಿದ್ಧಿಯಾಗುವದೆಷ್ಟೊತ್ತು ? ಇಷ್ಟಾಗಿ ಶ್ರೀ ಚಿದಂಬರ ದೀಕ್ಷಿತರೇ ದೇಹವಿಡುವ ಮೊದಲು ಕೆಂಗೇರಿ ಗುರ್ಲಹೊಸೂರುಗಳು ನನ್ನ ಪ್ರೀತಿಯ ಸ್ಥಾನಗಳು.

ಅಲ್ಲಿ ನಾನು ಎಂದೆಂದಿಗೂ ಗುಪ್ತವಾಗಿದ್ದುಕೊಂಡು ಭಕ್ತರ ಮನೋರಥಗಳನ್ನು ಪೂರ್ಣ ಮಾಡುವೆನು'' ಎಂದು ಹೇಳಿದ್ದರು. ಅದಕ್ಕನುಗುಣವಾಗಿ ಈಗ ಕೆಲಸವಾಗಬೇಕಾದ ಯೋಗ ಬಂದಿತ್ತು, ಎಂದ ಮೇಲೆ ಕೇಳುವದೇನು? ಶ್ರೀ ಬಾಪೂ ದೀಕ್ಷಿತರು ಅಲ್ಪಾವಧಿಯಲ್ಲಿಯೇ ಸಾವಿರಾರು ರೂಪಾಯಿಗಳನ್ನು ಕೂಡಿಸಿ ಈಗಿರುವ ಚಿದಂಬರ ದೇವಾಲಯವನ್ನು ಕಟ್ಟಿಸಿದರು. ದೇವಾಲಯದೊಳಗೆ ಮೂರು ಕೋಣೆಗಳಿದ್ದು, ನಡುಮನೆಯ ಗರ್ಭಗುಡಿಯಲ್ಲಿ ಶ್ರೀ ಚಿದಂಬರನ ಲಿಂಗವನ್ನು ಸ್ಥಾಪನೆ ಮಾಡಿದ್ದಾಗಿದೆ. ಅದರ ಒಂದು ಬದಿಯ ಕೋಣೆಯಲ್ಲಿ ಶ್ರೀರಾಮ-ಲಕ್ಷ್ಮಣ-ಸೀತಾ-ಹನುಮಂತರ ವಿಗ್ರಹಗಳನ್ನು ಕೂಡಿಸಲಾಗಿದೆ. ಇನ್ನೊಂದು ಬದಿಗೆ ಶಿವಪಂಚಾಯತವನ್ನು ಸ್ಥಾಪಿಸಲಾಗಿದೆ.

ಕಾರ್ತಿಕ ವದ್ಯ ಷಷ್ಠಿಯೆಂದರೆ ಶ್ರೀ ಚಿದಂಬರ ಮಹಾರಾಜರ ಜನ್ಮ ತಿಥಿಯು. ಆ ತಿಥಿಯನ್ನು ಒಳಗೊಳ್ಳುವಂತೆ ಶ್ರೀ ಬಾಪೂ ದೀಕ್ಷಿತರು ಗುರ್ಲಹೊಸೂರ ಚಿದಂಬರನ ವಾರ್ಷಿಕ ಉತ್ಸವವನ್ನು ಏರ್ಪಡಿಸಿದರು. ಕಾರ್ತಿಕ ವದ್ಯ ಪ್ರತಿಪದೆಯಿಂದ ಸಪ್ತಮಿಯ ವರೆಗೆ ಈ ಉತ್ಸವವಾಗಬೇಕೆಂದು ನಿಶ್ಚಿತವಾಯಿತು. ಷಷ್ಠಿಯ ದಿನ ರಥೋತ್ಸವವೂ ಸಪ್ತಮಿಯ ದಿನ ಅವಭೃತವೂ ಆಗಿ ಉತ್ಸವವು ಕೊನೆಗಾಣತಕ್ಕದ್ದೆಂದು ಗೊತ್ತು ಮಾಡಲಾಯಿತು. ಮುರಗೋಡ ಉತ್ಸವವು ಮಾರ್ಗಶೀರ್ಷದಲ್ಲಾಗುವದರಿಂದ ಆ ಮೊದಲೇ ಈ ಉತ್ಸವವು ಜರುಗಬೇಕೆಂದು ಶ್ರೀ ಬಾಪೂ ದೀಕ್ಷಿತರ ಮನಸಿನಲ್ಲಿತ್ತೆಂಬದು ಸ್ಪಷ್ಟವಿದೆ.

ಶ್ರೀ ಬಾಪೂ ದೀಕ್ಷಿತರು ಗುರ್ಲಹೊಸೂರಲ್ಲಿ ಹೊಸದಾಗಿ ಸುರುವು ಮಾಡಿದ ಶ್ರೀ ಚಿದಂಬರೇಶ್ವರನ ವಾರ್ಷಿಕ ಉತ್ಸವವು ಮೊಟ್ಟಮೊದಲು ಶಾ. ಶ. ೧೭೬೦ ರಲ್ಲಿ. ಎಂದರೆ ಇಸವೀ ಸನ್ ೧೮೩೮ರಲ್ಲಿ ಜರುಗಿತು. ಅಂದಿನಿಂದ ಅದರ ಎಲ್ಲ ಆಡಳಿತೆಯನ್ನು ಅವರೇ ಚೆನ್ನಾಗಿ ನಡೆಸುತ್ತ ಬಂದರು. ಅವರು ಮಾಡಿದ ಕೊನೆಯ ಉತ್ಸವವೆಂದರೆ ಶಾ. ಶ. ೧೮೯೬ ಅಥವಾ ಇ. ಸ. ೧೯೭೪ರಲ್ಲಾಯಿತು. ಅದೇ ವರ್ಷ ಮಾರ್ಗಶಿರ ಮಾಸದಲ್ಲಿ ಶ್ರೀ ಬಾಪೂ ದೀಕ್ಷಿತರು ಕಾಲವಶರಾದರು. ಅವರು ದೇಹಬಿಡುವ

ಎರಡು ವರುಷಗಳ ಪೂರ್ವದಲ್ಲಿ ಚತುರ್ಥಾಶ್ರಮವನ್ನು ಸ್ವೀಕಾರ ಮಾಡಿದರು. ಅವರ ಯತ್ಯಾಶ್ರಮದ ಹೆಸರು ಶ್ರೀ ಬ್ರಹ್ಮಾನಂದ ಸ್ವಾಮಿಗಳೆಂದಿತ್ತು. ಇವರು ದೇಹಬಿಟ್ಟ ಮೇಲೆ, ಅವರ ಸಮಾಧಿಯನ್ನು ಚಿದಂಬರನ ಗುಡಿಯ ಪ್ರಾಕಾರದಲ್ಲಿ, ಶ್ರೀ ಚಿದಂಬರೇಶ್ವರನ ಬಲಭಾಗದಲ್ಲೆಯೇ ಮಾಡಲಾಯಿತು ಆದರೆ ಅವರ ಸಮಾಧಿಯನ್ನು ಸರಿಯಾಗಿ ಕಟ್ಟಿಸಿ ಪೂರ್ಣ ಮಾಡುವ ಕೆಲಸವು ಮಾತ್ರ ಯಾರಿಂದಲೂ ನೆರವೇರಿರಲಿಲ್ಲ.

ಶ್ರೀ ಬಾಪೂ ದೀಕ್ಷಿತರು ಈ ಉತ್ಸವದ ಮೂಲಕ ದೇಶದೊಳಗೆ ಅತ್ತಿತ್ತ ಸಂಚಾರ ಮಾಡುತ್ತ ಜನರಲ್ಲಿ ಚಿದಂಬರನ ಭಕ್ತಿಯನ್ನು ವ್ಯಸಾರಗೊಳಿಸುವ ಕೆಲಸವನ್ನು ಒಳಿತಾಗಿಯೇ ಮಾಡಿದರೆಂದು ಹೇಳಬಹುದು ಅವರು ಜೀವಿಸಿರುವ ವರೆಗೆ ಯಾವುದಕ್ಕೂ ಕೊರತೆಯಾಗಲಿಲ್ಲ. ಆದರೂ ಅವರು ಬರಬರುತ್ತ ಮುಪ್ಪಿನಿಂದ ಅಶಕ್ತರಾದುದರಿಂದ, ಅವರ ಕಡೆಯಿಂದಲೂ ಕೆಲಸವು ಕೊನೆಕೊನೆಗೆ ಸರಿಯಾಗಿ ಆಗದಂತಾಯಿತು. ಹಾಗೂ ಹೀಗೂ ಮಾಡಿ ಅವರು ತಮ್ಮ ಕಾಲಾವಧಿಯವರೆಗೆ ಉತ್ಸವವನ್ನು ನೆರವೇರಿಸುತ್ತ ಬಂದರು. ಆದರೆ ಅವರು ಬ್ರಹ್ಮೀಭೂತರಾದ ಮೇಲೆ ಪರಿಸ್ಥಿತಿಯು ದಿನೇ ದಿನೇ ಹದಗೆಡುತ್ತ ನಡೆಯಿತು. ಅವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನನುಸರಿಸಿ ನಿಃಸ್ವಾರ್ಥ ಬುದ್ಧಿಯಿಂದ ಉತ್ಕೃಷ್ಟವಾಗಿ ಕೆಲಸ ಮಾಡಬಲ್ಲ ಕರ್ತೃತ್ವಶಾಲಿಗಳು ಅವರ ವಂಶದಲ್ಲಿ ಯಾರೂ ಇರಲಿಲ್ಲ. ಅವರ ವಂಶಜರು ಬರಿಯ ಅಭಿಮಾನದಿಂದ ಆ ಕೆಲಸವನ್ನು ಮಾಡಬೇಕೆನ್ನುತ್ತಿದ್ದರು, ಅಷ್ಟೇ. ಈ ಕಾರಣದಿಂದ ಶ್ರೀ ಬಾಪೂ ದೀಕ್ಷಿತರು ಕಾಲವಶರಾದ ಮೇಲೆ ಗುರ್ಲಹೊಸೂರ ಉತ್ಸವವು ಕ್ರಮೇಣವಾಗಿ ನಿಕೃಷ್ಟಾವಸ್ಥೆಗೆ ಇಳಿಯಹತ್ತಿತು ಅದು ಪೂರ್ಣವಾಗಿ ಮೃತವಾಗದಿದ್ದರೂ, ಮೃತಪ್ರಾಯವಾದ ಸ್ಥಿತಿಗೆ ಬಂದು ಬಿಟ್ಟಿತು. ಅವರ ವಂಶಜರು ಹಾಗೂ ಹೀಗೂ ಮಾಡಿ ಉತ್ಸವವನ್ನು ಜೀವಂತವಾಗಿರಿಸಿಕೊಂಡು ಬಂದಿದ್ದರು ಇಷ್ಟೊತ್ತಿಗೆ ಶ್ರೀ ಬಾಪೂ ದೀಕ್ಷಿತರು ಕೈಲಾಸವಾಸಿಗಳಾಗಿ ಹದಿನಾಲ್ಕು ವರುಷಗಳಾಗಿ ಹೋಗಿದ್ದವು. ಉತ್ಸವದ ತೀರ ಮುರಕಳಿಯ ಸ್ಥಿತಿಯನ್ನು ನೋಡಿದರೆ, ಅದು ಎಲ್ಲಿ ಸಂಪೂರ್ಣವಾಗಿ ನಾಮಶೇಷವಾಗುವದೋ, ಎಂಬ ಚಿಂತೆಯು ಎಲ್ಲ ಚಿದಂಬರ ಭಕ್ತರನ್ನೂ ಬಲವಾಗಿ ಬಾಧಿಸಹತ್ತಿತ್ತು.

ಶ್ರೀ ಬಾಪೂ ದೀಕ್ಷಿತರು ಕಟ್ಟಿಸಿದ ಗುಡಿಯಾದರೂ ಅಪೂರ್ಣವಾಗಿತ್ತು. ವಿಗ್ರಹಗಳನ್ನು ಕೂಡಿಸುವ ಮಟ್ಟಿಗೆ ಬೇಕಾಗುವ ಭಾಗವನ್ನಷ್ಟೇ ಅವರು ಕಟ್ಟಿಸಿ ದೇವರ ಪೂಜೆಯನ್ನು ಸುರುವು ಮಾಡಿಬಿಟ್ಟಿದ್ದರು. ಗರ್ಭಾಲಯದ ಮುಂದಿನ ಮಂಟಪದ ಕೆಲಸವೂ ಕೂಡ ಮುಗಿದಿರಲಿಲ್ಲ. ಕಲ್ಲಿನ ಕೆಲವೆ ಕಂಬಗಳನ್ನು ಮಾತ್ರ ಅಲ್ಲಲ್ಲಿಗೆ ನಿಲ್ಲಿಸಿದ್ದರು. ಆದರೆ ಅವುಗಳ ಮೇಲೆ ಕಲ್ಲಿನ ಹಲಿಗೆಗಳನ್ನು ಸರಿಯಾಗಿ ಕೂಡಿಸಿರಲಿಲ್ಲ. ಎಲ್ಲ ಕಂಬಗಳ ಮೇಲೆ ಸಾಕಾಗುವಷ್ಟು ಹಲಿಗೆಗಳೂ ಕೂಡ ದೊರೆತಿದ್ದಿಲ್ಲ.

ಶ್ರೀ ಬ್ರಹ್ಮಾನಂದ ಸ್ವಾಮಿಗಳು ಸಮಾಧಿಸ್ಥರಾಗುವ ವರೆಗೆ ಗುಡಿಯಾದರೂ ಸ್ವಚ್ಛವಾಗಿರುತ್ತಿತ್ತು. ಅವರು ಇಹಲೋಕವನ್ನು ಬಿಟ್ಟು ಹೋದ ಮೇಲೆ ಗುಡಿಯ ಅವ್ಯವಸ್ಥೆಯೂ ಹೆಚ್ಚಾಗುತ್ತ ನಡೆಯಿತು. ಹಣದ ಅನುಕೂಲತೆಯಿಲ್ಲದ್ದರಿಂದ ಇದ್ದಷ್ಟು ಗುಡಿಯ ವ್ಯವಸ್ಥೆಯನ್ನಾದರೂ ಚನ್ನಾಗಿಡಲಿಕ್ಕೆ ದೀಕ್ಷಿತ ವಂಶದವರಿಗೆ ಆಗಿದ್ದಿಲ್ಲ. ಕಲ್ಲು ಹಲಿಗೆಗಳ ಸಂದಿಗೊಂದಿಗಳಲ್ಲಿ ಓತೀಕಾಟಿಗಳು ಮನೆಮಾಡಿಕೊಂಡು ನಿರ್ಭಯವಾಗಿ ಓಡಾಡುತ್ತಿದ್ದವು. ಪ್ರಾಕಾರದ ಒಳಭಾಗದಲ್ಲಿ ಮಣ್ಣಿನ ಗುಂಪಿಗಳು ಸಿಕ್ಕಸಿಕ್ಕಲ್ಲಿ ಬಿದ್ದುಕೊಂಡಿದ್ದವು. ನೆಲವೆಲ್ಲವೂ ನೆಗ್ಗಿಲು-ಮುಳ್ಳುಗಳಿಂದ ತುಂಬಿ ಹೋದುದರಿಂದ, ಅಲ್ಲಿ ನಿರ್ಭಯವಾಗಿ ಕಾಲಿಡುವದೂ ಕಠಿಣವಾಗಿತ್ತು. ಅಲ್ಲಲ್ಲಿ ಬೋರೆಯ ಮತ್ತು ಬೇರೆ ತರದ ಕಂಟಿಗಳೂ ಗಿಡಗಳೂ ಬೆಳೆದಿದ್ದವು. ಸಾರಾಂಶವೇನೆಂದರೆ--ಎಲ್ಲಿ ನೋಡಿದಲ್ಲೆಲ್ಲ ಅವ್ಯವಸ್ಥೆಯೂ ಅಸ್ವಚ್ಛತೆಯೂ ಕಂಡು ಬರುತ್ತಿದ್ದವು. ಸ್ವಚ್ಛತೆ ಹಾಗೂ ವ್ಯವಸ್ಥೆಗಳ ತವರುಮನೆಯಾಗಿರಬೇಕಾದ ದೇವಾಲಯವು ಅವುಗಳಿಂದ ಪೂರ್ಣವಾಗಿ ಹೊರಗಾಗಿತ್ತು. ಇಷ್ಟೇ ಅಲ್ಲ, ಗುಡಿಯ ಸುತ್ತುಮುತ್ತು ಮತ್ತು ಒಳಗೆ ಮುಳಿಗಳ್ಳಿಯೂ ಭಯಾನಕವಾಗಿ ಬೆಳೆದುಕೊಂಡಿತ್ತು. ಇವೆಲ್ಲ ಕಾರಣಗಳಿಂದ ದೊಡ್ಡವರಾದವರೂ ಕೂಡ ಹಗಲು ಹೊತ್ತಿನಲ್ಲಿ ಸಹ ಚಿದಂಬರನ ಗುಡಿಗೆ ಹೋಗಲಿಕ್ಕೆ ಹೆದರುತ್ತಿದ್ದರು. ಕಿಂಬಹುನಾ, ಚಿದಂಬರನ ಗುಡಿಯೆಂದರೆ ದೆವ್ವ-ಭೂತಗಳು ಸಂಚರಿಸುವ ಸ್ಥಾನವೆಂದು ಆಗಿನ ಕಾಲದ ಜನರು ತಿಳಿಯುತ್ತಿದ್ದರು. ಮನೆಯಲ್ಲಿ ಚಿಕ್ಕಮಕ್ಕಳು ಜಾಸ್ತಿ ಕಿರಿಕಿರಿ ಮಾಡಹತ್ತಿದವೆಂದರೆ, ಚಿದಂಬರನ ಗುಡಿಯ ಮಗ್ಗಲಿಗೆ

ಜನರು ಮಂಡಕ್ಕೆ ಮತ್ತು ಬಾಳೇ ಹಣ್ಣುಗಳನ್ನು ಸಿವಾಳಿಸಿ ಒಗೆಯುತ್ತಿದ್ದರಂತೆ ! ಇದರ ಮೇಲಿಂದ ದೇವಾಲಯದ ಪರಿಸ್ಥಿತಿಯು ಯಾವ ಸ್ಥಿತಿಗೆ ಬಂದಿತ್ತೆಂಬುದನ್ನು ವಾಚಕರೇ ಊಹಿಸಬೇಕು.

ಹೀಗೆ ಗುರ್ಲಹೊಸೂರ ಚಿದಂಬರನ ದೇವಾಲಯವು ಎಲ್ಲ ಬಗೆಯಿಂದಲೂ ಮುರಕಳಿಯ ಸ್ಥಿತಿಗೆ ಬಂದು, ಭಕ್ತರೆಲ್ಲರೂ ತೀರ ನಿರಾಶರಾಗುವ ಹೊತ್ತಿಗೆ ಶ್ರೀ ಚಿದಂಬರೇಶ್ವರನ ಪ್ರೇರಣೆಯಿಂದ ಮುಧೋಳರಾಜರು ಅಕಸ್ಮಾತ್ತಾಗಿ ಆಲ್ಲಿಗೆ ಬಂದರು. ಇವರು ಅಲ್ಲಿಗೆ ಹೇಗೆ ಮತ್ತು ಏಕೆ ಬಂದರೆಂಬದರ ಕಡೆಗೆ ನಾವೀಗ ದೃಷ್ಟಿಯನ್ನು ಹೊರಳಿಸುವ.

ಶಾ. ಶ ೧೭೧೩ನೆಯ ಕಾರ್ತಿಕ ಪೌರ್ಣಿಮೆಯ ದಿನ ಮಹಾರಾಜರು ಹರಿಪುರವನ್ನು ಬಿಟ್ಟರೆಂಬದನ್ನು ವಾಚಕರು ಬಲ್ಲರು ಇವರು ಹರಿಪುರದಿಂದ ಹೊರಟವರು ಶ್ರೀ ನೃಸಿಂಹವಾಡಿ— ಎಡೂರುಗಳ ಮೇಲಿಂದ ಮುರಗೋಡಿಗೆ ಬಂದರು. ವಾಡಿಕೆಯಂತೆ ಮಾರ್ಗಶೀರ್ಷದ ಚಿದಂಬರೋತ್ಸವಕ್ಕೆ ಧಾರವಾಡದಿಂದ ವಾಜೀಂದ್ರರೂ ಮುರಗೋಡಿಗೆ ಬಂದರು. ಗುರುಶಿಷ್ಯರಿಗೆ ಅಲ್ಲಿ ದರುಶನವಾಗಿ ಇಬ್ಬರಿಗೂ ಆನಂದವಾಯಿತು. ಮುರಗೋಡದಲ್ಲಿ ಮಹಾರಾಜರು ತಮ್ಮ ಪೂರ್ವಾಯುಷ್ಯದ ಅನೇಕ ದಿನಗಳನ್ನು ಕಳೆದಿದ್ದರು. ಆದರಿಂದ ಅಲ್ಲಿಯ ಜನರಿಗೆಲ್ಲ ಮಹಾರಾಜರ ಮೇಲೆ ವಿಶೇಷ ಪ್ರೇಮವಿತ್ತು. ಮಹಾರಾಜರ ಸಂನ್ಯಾಸದ ವೇಷವನ್ನು ನೋಡಿ ಅವರಲ್ಲಿ ಕೆಲವರು ಸಂತೋಷಬಟ್ಟರು; ಬೇರೆ ಕೆಲವರಿಗೆ ದುಃಖವಾಯಿತು. ಮಹಾರಾಜರು ಉತ್ಸವದಲ್ಲಿ ತಮ್ಮ ಕೈಯಿಂದಾದಷ್ಟು ಸೇವೆ ಮಾಡಿದರು. ಆವರು ತಮ್ಮ ಆಯುಷ್ಯದ ಮೀಸಲು ಕೆಲಸವಾದ ಚಿದಂಬರನ ಸೇವೆಯನ್ನು ಹೇಗೆ ಮತ್ತು ಎಲ್ಲಿ ಪ್ರಾರಂಭ ಮಾಡಬೇಕೆಂಬದನ್ನು ಇನ್ನೂ ನಿರ್ಧರಿಸಿದ್ದಿಲ್ಲ. ಮುರಗೋಡವನ್ನೇ ತಮ್ಮ ಕಾರ್ಯಕ್ಷೇತ್ರವಾಗಿ ಆರಿಸಬಹುದೇ— ಎಂಬದೊಂದು ವಿಚಾರವು ಮಹಾರಾಜರ ಮನಸ್ಸಿನಲ್ಲಿ ಬರದೇ ಹೋಗಲಿಲ್ಲ. ಆದರೆ ಅವರ ಮನಸ್ಸಿನಲ್ಲಿ ಆ ವಿಚಾರಕ್ಕೆ ಅಷ್ಟೊಂದು ಪ್ರಾಶಸ್ತ್ಯ ಸಿಕ್ಕಲಿಲ್ಲ. ಆದೇಕೋ, ಅವರ ಚಿತ್ತದಲ್ಲಿ ಅನೇಕ ವಿಕಲ್ಪಗಳು ಬರಹತ್ತಿದವು. ಹೀಗೆ ಅವರು ಅಲ್ಲಿದ್ದಾಗ ಈ ಬಗ್ಗೆ ಯಾವ ನಿಶ್ಚಿತವಾದ ನಿರ್ಣಯಕ್ಕೆ ಬರದಿದ್ದರೂ

ಬಹುಶಃ ಮುರಗೋಡದಲ್ಲಿ ಚಿದಂಬರನು ತಮ್ಮ ಸೇವೆಯನ್ನು ಅಪೇಕ್ಷಿಸು-ಸುವದಿಲ್ಲೆಂದು ಅವರ ಸೂಕ್ಷ್ಮಬುದ್ಧಿಗೆ ಹೊಳೆಯದೆ ಹೋಗಲಿಲ್ಲ.

ಧಾರವಾಡದೊಳಗೆ ಮದಿಹಾಳದ ದತ್ತಮಂದಿರದಲ್ಲಿ ವಾಜೀಂದ್ರರು ಶ್ರೀಗುರು ಪ್ರತಿಪದೆಯ ಉತ್ಸವವನ್ನು ಪ್ರತಿವರುಷ ವಿಜೃಂಭಣೆಯಿಂದ ನೆರವೇರಿಸುತ್ತಿದ್ದರು. ಆ ಉತ್ಸವಕ್ಕೆಂದು ಮಹಾರಾಜರು ಮುರಗೋಡ-ದಿಂದ ವಾಜೀಂದ್ರರೊಡನೆ ಧಾರವಾಡಕ್ಕೆ ಹೋಗಿ ಅಲ್ಲಿ ಕೆಲ ದಿನ ಇದ್ದರು. ಮಹಾರಾಜರ ಆಗಮನದಿಂದ ಈ ವರುಷದ ಉತ್ಸವಕ್ಕೆ ವಿಶೇಷ ಕಳೆ ಬಂದಿತೆಂದು ಬೇರೆ ಹೇಳಲಿಕ್ಕೆ ಬೇಡ.

ಉತ್ಸವವು ಮುಗಿದೊಡನೆ ವಾಜೀಂದ್ರರನ್ನು ಧಾರವಾಡದಲ್ಲಿಯೇ ಬಿಟ್ಟು, ಮಹಾರಾಜರು ಶಿಷ್ಯನಾದ ಲಕ್ಷ್ಮಣ ಕುಬೇರರೊಡನೆ ತೀರ್ಥ ಯಾತ್ರೆಗಾಗಿ ಹೊರಟರು. ಧಾರವಾಡದಿಂದ ಹೊರಟವರು ಎಲ್ಲಕ್ಕೂ ಮೊದಲು ಕೃಷ್ಣಾತೀರದ ವಾಯಿಗೆ ಹೋದರು. ಅಲ್ಲಿಂದ ಮಹಾರಾಜರು ಇತಿಹಾಸ ಪ್ರಸಿದ್ಧವಾದ ಪುಣ್ಯಪತ್ತನ (ಪುಣೆ)ಕ್ಕೆ ದಯಮಾಡಿಸಿದರು. ಪುಣೆಯಲ್ಲಿ ಕೆಲ ದಿನಗಳು ಕಳೆದ ಮೇಲೆ ಅವರು ಶ್ರೀ ಕ್ಷೇತ್ರ ನಾಶಿಕಕ್ಕೆ ಹೊರಟರು. ನಾಶಿಕ ಕ್ಷೇತ್ರವೆಂದರೆ ಪುರಾಣಕಾಲದ ಪಂಚವಟಿಯು. ಅಲ್ಲಿ ಶ್ರೀ ರಾಮ ಲಕ್ಷ್ಮಣರು ಸೀತೆಯೊಡನೆ ಅನೇಕ ದಿವಸಗಳವರೆಗಿದ್ದು, ಆ ಸ್ಥಳವನ್ನು ಪಾವನಗೊಳಿಸಿದ್ದಾರೆ. ಭಗವತಿಯಾದ ಗೌತಮಿಯು ಗೋದಾವರಿ ನದಿಯೆಂಬ ಹೆಸರಿನಿಂದ ಇಲ್ಲಿಯೇ ಹರಿಯುತ್ತಿದ್ದಾಳೆ. ಆದುದರಿಂದ ಮಹಾರಾಜರು ಗೋದಾವರಿಯ ಪವಿತ್ರವಾದ ತೀರದಲ್ಲಿ ಹದಿನೈದು ದಿನಗಳನ್ನು ಕಳೆದರು. ಅಲ್ಲಿಂದ ಅವರು ಗೋದಾವರಿಯು ಸುಪ್ರಸಿದ್ಧ ಉಗಮಸ್ಥಾನವಾದ ಶ್ರೀ ಕ್ಷೇತ್ರ ತ್ರ್ಯಂಬಕೇಶ್ವರಕ್ಕೆ ಪಯಣ ಬೆಳಿಸಿದರು. ತ್ರ್ಯಂಬಕೇಶ್ವರನ ದರುಶನವಾದ ಮೇಲೆ ಮಹಾರಾಜರು ಶ್ರೀ ನರ್ಮದೆಯ ತೀರಕ್ಕೆ ಹೊರಟರು. ಕೃಷ್ಣಾ—ಗೋದಾವರಿಗಳಂತೆ ನರ್ಮದೆಯ ಸ್ನಾನವೂ ಬಲು ಪವಿತ್ರವೆಂದು ಎಣಿಸಲ್ಪಡುತ್ತದೆ. ಎಷ್ಟೋ ಜನರು ಧಾರ್ಮಿಕ ಬುದ್ಧಿಯಿಂದ ನರ್ಮದೆಯ ಪ್ರದಕ್ಷಿಣೆಯನ್ನೂ ಮಾಡು-ವರು ಮಹಾರಾಜರು ಎಷ್ಟೋ ದಿನಗಳ ವರೆಗೆ ನರ್ಮದೆಯ ಪುಣ್ಯಕರವಾದ

ನೀರಿನಲ್ಲಿ ಸ್ನಾನ-ಪಾನಗಳನ್ನು ಮಾಡಿ ಧನ್ಯರಾದರು. ಮುಂದೆ ಅಲ್ಲಿಂದ ಹೊರಟವರು ನೆಟ್ಟಗೆ ಗಂಗಾ-ಯಮುನೆಗಳ ಪುಣ್ಯಸಂಗಮವಾದ ಪ್ರಯಾಗಕ್ಕೆ ಬಂದು ಮುಟ್ಟಿದರು. ಅಲ್ಲಿ ಮಹಾರಾಜರು ಹಲವು ದಿನಗಳ ವರೆಗೆ ಧ್ಯಾನ ಜಪಗಳಲ್ಲಿ ನಿರತರಾಗಿ ಕಾಲಕಳೆದರು. ಪ್ರಯಾಗವಾದ ಮೇಲೆ ಆನಂದಕಾನನವೆಂದು ಹೆಸರುಗೊಂಡ ಕಾಶೀ ಅಥವಾ ವಾರಣಾಸೀ ಕ್ಷೇತ್ರಕ್ಕೆ ಮಹಾರಾಜರು ವಿಜಯ ಮಾಡಿದರು. ಕಾಶೀ ಎಂದರೆ ಎಲ್ಲ ಹಿಂದೂ ಜನರಿಗೂ ಅತ್ಯಂತ ಪವಿತ್ರವಾದ ಕ್ಷೇತ್ರವು. ಅಲ್ಲಿ ಮಹಾರಾಜರು ಭಾಗೀರಥಿಯಲ್ಲಿ ಮಿಂದು ವಿಶ್ವೇಶ್ವರನ ದರುಶನ ಪೂಜೆಗಳಿಂದ ಕೃತಕೃತ್ಯರಾದರು. ಕಾಶಿಯಿಂದ ಮಹಾರಾಜರು ವಿಷ್ಣುವಾದಕ್ಕಾಗಿ ವಿಖ್ಯಾತವಾದ ಗಯೆಗೆ ಹೋದರು. ಪ್ರಯಾಗ-ವಾರಣಾಸೀ-ಗಯಾಯಾತ್ರೆಯು ತ್ರಿಸ್ಥಲೀಯಾತ್ರೆಯೆಂದು ಪ್ರಸಿದ್ಧವಾಗಿದೆ. ಆಸ್ತಿಕರಾದ ಹಿಂದೂ ಜನರೆಲ್ಲ ಈ ಯಾತ್ರೆಯನ್ನು ತಮ್ಮ ಆಯುಷ್ಯದಲ್ಲಿ ಒಂದು ಸಲವಾದರೂ ಮಾಡಿಯೇ ತೀರಬೇಕೆಂದು ಹಂಬಲಿಸುತ್ತಾರೆ. ಮಹಾರಾಜರು ಗಯೆಯಿಂದ ಹೊರಟು ಆಷಾಢ ಶುದ್ಧ ಏಕಾದಶಿಯೊಳಗಾಗಿ ಶ್ರೀ ಕ್ಷೇತ್ರ ಪಂಢರಪುರಕ್ಕೆ ಬಂದು ಮುಟ್ಟಿದರು. ಆಷಾಢ ಏಕಾದಶಿಯ ದಿನ ಪಂಢರಪುರದಲ್ಲಿ ನಡೆಯುವ ಮಹೋತ್ಸವವನ್ನು ನೋಡಿದರೆ ಎಂಥವರ ಬುದ್ಧಿಯೂ ನುಂಕಾಗಿ ಹೋಗುತ್ತದೆ. ಆ ದಿನ ಅಲ್ಲಿ ಹಾಜರಿದ್ದವರು ಎಷ್ಟೇ ನಾಸ್ತಿಕರಿರಲಿ, ಅವರ ಹೃದಯಗಳು ಕೆಲಕಾಲವಾದರೂ ಭಕ್ತಿರಸದಿಂದ ತುಂಬಿತುಳುಕದೇ ಉಳಿಯಲಿಕ್ಕಿಲ್ಲೆಂದು ಎದೆತಟ್ಟಿ ಹೇಳಬಹುದು. ದೂರುದೂರಿನ ಕಡೆಯಿಂದ ದೇವರ ದರುಶನಕ್ಕೆಂದು ತವಕದಿಂದ ಬಂದಿರುವ ಲಕ್ಷಾಂತರ ಜನರೆಲ್ಲ ಅಖಂಡವಾಗಿ ''ವಿಠ್ಠಲ, ವಿಠ್ಠಲ''ವೆಂದು ದೇವರ ನಾಮಘೋಷವನ್ನು ಮಾಡುತ್ತ ಆನಂದದಿಂದ ಕುಣಿದಾಡುವರು. ಎಲ್ಲಿ ನೋಡಿದಲ್ಲೆಲ್ಲ ಭಗವತ್ಕೀರ್ತನೆಯ ಸಂಭ್ರಮವೇ ಸಂಭ್ರಮವು. ಮಹಾರಾಜರು ಈ ಅಪೂರ್ವ ಉತ್ಸವದಿಂದ ಪುಲಕಿತರಾಗಿ, ತಮ್ಮ ಆ ವರುಷದ ಚಾತುರ್ಮಾಸ್ಯವನ್ನು ಕೂಡ ಅಲ್ಲಿಯೇ ಕಳೆದರು. ಚಾತುರ್ಮಾಸ್ಯವು ಮುಗಿದ ಮೇಲೆ ಮಹಾರಾಜರು ಪಂಢರಪುರದಿಂದ ಹೊರಟವರು ಪಯಣ ಮಾಡುತ್ತ ಮಾಡುತ್ತ ಧಾರವಾಡಕ್ಕೆ ಬಂದು ಮುಟ್ಟಿದರು. ವಾಜೀಂದ್ರರ ಆತ್ಯಾಗ್ರಹದಿಂದ ಮಹಾರಾಜರು ಅಲ್ಲಿ ಕೆಲವು

ದಿನಗಳನ್ನು ಕಳೆಯಬೇಕಾಯಿತು. ಅಷ್ಟರೊಳಗಾಗಿ ಮುರಗೋಡ ಉತ್ಸವದ ದಿನಗಳು ಸಮೀಪಿಸಿದ್ದವು. ಆದಕ್ಕಾಗಿ ಮಹಾರಾಜರು ಧಾರವಾಡವನ್ನು ಬಿಟ್ಟು ಮುರಗೋಡಿಗೆಂದು ಹೊರಟರು. ಧಾರವಾಡದಿಂದ ಮುರಗೋಡಿಗೆ ಹೋಗಬೇಕಾದರೆ ನಡುವೆ ಗುರ್ಲಹೊಸೂರು ಹತ್ತುವದು. ಈ ಕಾರಣದಿಂದಲೇ ಮಹಾರಾಜರು ಧಾರವಾಡದಿಂದ ಮುರಗೋಡಿಗೆ ಹೊರಟವರು ನಡುವೆ ಗುರ್ಲಹೊಸೂರಲ್ಲಿ ಅಕಸ್ಮಾತ್ತಾಗಿ ಉಳಕೊಳ್ಳುವ ಪ್ರಸಂಗ ಬಂತು. ಮಹಾರಾಜರು ಎಲ್ಲಕ್ಕೂ ಮೊದಲು ಗುರ್ಲಹೊಸೂರಲ್ಲಿ ಕಾಲಿಟ್ಟದ್ದು ಶಾ. ಶ. ೧೮೧೩ನೆಯ ವರುಷದ ಕಾರ್ತಿಕ ಶುದ್ಧ ಪಂಚಮಿಯ ದಿನ. ಹೀಗೆ ಮಹಾರಾಜರು ತಮ್ಮ ಕನಸುಮನಸಿನಲ್ಲಿಲ್ಲದೆ ಗುರ್ಲಹೊಸೂರಲ್ಲಿ ಕಾಲಿಟ್ಟವರು, ಕೊನೆಯ ವರೆಗೂ ಚಿದಂಬರ ಸೇವೆಯನ್ನು ಮಾಡುತ್ತ ಅಲ್ಲಿಯೇ ಉಳಿದುಕೊಂಡರು. ಇದೆಲ್ಲ ಚಿದಂಬರನ ಯೋಜನೆಯಲ್ಲದೆ ಮತ್ತೇನು ?

———

೭ ಕಾಲಪುರುಷನ ಲೀಲೆ

ನಾವು ಕಾಲಪುರುಷನ ಕೈಯೊಳಗಿನ ಗೊಂಬೆಗಳು ಮಾತ್ರ! ಅವನು ವಿಶ್ವವೆಂಬ ಚದುರಂಗ ಪಟದ ಮೇಲೆ ನಮ್ಮ ಮುಖಾಂತರವಾಗಿ ಚದುರಂಗದಾಟವನ್ನಾಡುತ್ತಿದ್ದಾನೆ. ಆ ಆಟದಲ್ಲಿ ನಮಗೆ ಸ್ವತಂತ್ರತೆಯಿಲ್ಲ. ಅವನ ಕ್ರೀಡೆಯೊಳಗೇ ನಮ್ಮ ಆಯುಷ್ಯವು ಹೋಗುತ್ತದೆ. "ಕಾಲಃ ಕ್ರೀಡತಿ ಗಚ್ಛತ್ಯಾಯುಃ" ಎಂದು ಶ್ರೀ ಮಚ್ಛಂಕರ ಭಗವತ್‌ಪಾದರವರು ಹೇಳುತ್ತಾರೆ. ನಮಗೆ ಯಾವ ಕ್ಷಣದಲ್ಲಿ ಎಲ್ಲಿಗೆ ಹೋಗಬೇಕಾಗುವದೋ, ಎಂದು ಯಾವ ಕೆಲಸವನ್ನು ಮಾಡಬೇಕಾಗುವದೋ ದೇವರೇ ಬಲ್ಲ! ನಮ್ಮ ಭವಿಷ್ಯವು ನಮಗೆ ಸಹಸಾ ತಿಳಿಯಲಾರದು. ಕಾಲಪುರುಷನು ನಮ್ಮ ಕಡೆಯಿಂದ ಎಂದು, ಎಲ್ಲಿ, ಯಾವ ಕೆಲಸವನ್ನು ಮಾಡಲಿಕ್ಕೆ ಹಚ್ಚುವನೋ ಅದನ್ನು ನಾವು ಎಂದೂ ನಿಶ್ಚಯಪೂರ್ವಕವಾಗಿ ಹೇಳಲಾರೆವು. ಆದರೆ ಭವಿಷ್ಯವು ಅಜ್ಞಾತವಾಗಿರುವದೆಂದೇ ಜೀವನವು ಸ್ವಾರಸ್ಯಮಯವಾಗಿದೆ. ನಮ್ಮ ಭವಿಷ್ಯವೆಲ್ಲ ಇಂದೇ ಸಂಪೂರ್ಣವಾಗಿ ತಿಳಿದುಬಿಟ್ಟರೆ ಜೀವನವು ನೀರಸವಾಗುವದೆಂಬದರಲ್ಲಿ ಸಂದೇಹವೇ ಇಲ್ಲ. ಮುಂದಿನದು ತಿಳಿದಿರುವದಿಲ್ಲೆಂದೇ ಮನುಷ್ಯನು ಯಾವಾಗಲೂ ಆಶಾವಾದಿಯಾಗಿ ಪ್ರಯತ್ನ ಮಾಡುತ್ತಿರುತ್ತಾನೆ. ಪ್ರಯತ್ನವಿಲ್ಲದ ಜೀವನವು ಜೀವನವಲ್ಲ; ಅದು ಜೀವನ್ಮೃತಿಯೇ ಸರಿ. ಇನ್ನು, ಸ್ವಾತಂತ್ರ್ಯವಿದ್ದ ಹೊರತು ಪ್ರಯತ್ನವೆಂಬದಕ್ಕೆ ಅರ್ಥವಿಲ್ಲ. ಹೀಗೆ ಮಾನವನ ಜೀವನವು ಸ್ವಾತಂತ್ರ್ಯ-ಪಾರತಂತ್ರ್ಯಗಳ ಕಗ್ಗಂಟಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ತಾವು ಗುರ್ಲಹೊಸೂರಲ್ಲಿ ಚಿದಂಬರನ ಸೇವೆಯನ್ನು ಮಾಡಬೇಕಾಗಬಹುದೆಂಬದರ ಗಂಧವೂ ಕೂಡ ನಮ್ಮ ಚರಿತ್ರನಾಯಕರಿಗಿರಲಿಲ್ಲ. ಅವರು ಗುರ್ಲಹೊಸೂರಿಗೆ ಬಂದದ್ದು ಕೇವಲ ಕಾಕತಾಲೀಯ ನ್ಯಾಯವೆಂದೇ

ತೋರುವಂತಿದೆ. ಬೇರೆ ಊರಿಗೆ ಹೊರಟಿರುವಾಗ ಸಂಜೆಯಾಯಿತೆಂದು ಮಹಾರಾಜರು ಗುರ್ಲಹೊಸೂರಲ್ಲಿ ಮುಕ್ಕಾಂ ಮಾಡಿದರು, ಇಷ್ಟೇ. ಆದರೆ ಈ ಆಕಸ್ಮಿಕವಾದ ಸಂಗತಿಯಿಂದ ಮುಂದೆ ಎಂತೆಂತಹ ಮಹತ್ತ್ವದ ಘಟನೆಗಳಾದವೆಂಬದನ್ನು ನೋಡಿದರೆ ಕಾಲಪುರುಷನ ಕೌಶಲ್ಯಕ್ಕೆ ಮನಸ್ಸು ಮೆಚ್ಚದಿರಲಾರದು.

ಗುರ್ಲಹೊಸೂರಿಗೆ ಮಹಾರಾಜರು ತೀರ ಅಪರಿಚಿತರಾಗಿದ್ದರು. ಅವರ ಗುರುತಿನವರು ಅಲ್ಲಿ ಯಾರೂ ಇರಲಿಲ್ಲ. ಎಲ್ಲಿ ಇಳಿದುಕೊಳ್ಳಬೇಕೆಂಬದೂ ಅವರಿಗೆ ಒಗಟವಾಗಿಯೇ ಇದ್ದಿತು. ಆದರೆ ಮಹಾರಾಜರು ಸಂನ್ಯಾಸಿಗಳು. ಅವರಿಗೆ ಇಂಥ ಮಾತುಗಳ ಅಡಚಣೆಯುಂಟಾಗುವದು ಶಕ್ಯವಿರಲಿಲ್ಲ. ನಿತ್ಯ ಪ್ರವಾಸಿಗಳು ಗುರುತಿನ ಸ್ಥಳಕ್ಕಾಗಿ ಅಂಟಿಕೊಂಡರೆ ಹೇಗೆ ಸಾಗೀತು? ಅತ್ತಿತ್ತ ವಿಚಾರಿಸಲಾಗಿ ಕಿಲ್ಲೇಸ್ವರ ವಾಡೆಯೊಳಗಿನ ಈಶ್ವರ ಗುಡಿಯು ತಮ್ಮಂಥವರಿಗೆ ಬಿಡಾರ ಹೊಡೆಯಲಿಕ್ಕೆ ಸರಿಯಾದ ಸ್ಥಳವಾಗಿರುವದೆಂದು ಮಹಾರಾಜರಿಗೆ ತಿಳಿದು ಬಂತು. ಅಲ್ಲಿ ಎಲ್ಲ ಅನುಕೂಲತೆಗಳೂ ಇದ್ದವು. ಆದುದರಿಂದ ಮಹಾರಾಜರು ಆ ದಿನ ಅಲ್ಲಿಗೆ ಹೋಗಿ ತಳವೂರಿದರು.

ಗುರ್ಲಹೊಸೂರು ಚಿದಂಬರನ ಸ್ಥಾನವೆಂಬ ದೃಷ್ಟಿಯಿಂದ ಮಹಾರಾಜರು ಆ ಊರ ಸಂಬಂಧವಾಗಿ ವಿಶೇಷ ವಿಚಾರಣೆ ಮಾಡಹತ್ತಿದರು. ಆಗ ಅವರಿಗೆ ಒಂದೊಂದೇ ಸಂಗತಿಗಳು ಗೊತ್ತಾಗಹತ್ತಿದವು. ಚಿದಂಬರನ ಪಟ್ಟಶಿಷ್ಯರಾದ ಶ್ರೀರಾಜಾರಾಮರು ಈ ಊರಲ್ಲಿಯೇ ತಮ್ಮ ಆಯುಷ್ಯದ ಬಹುಭಾಗವನ್ನು ಕಳೆದರೆಂದೂ, ಅಲ್ಲಿ ಅವರದೊಂದು ಮಠವು ಇನ್ನೂ ಇರುವದೆಂದೂ ಮಹಾರಾಜರಿಗೆ ತಿಳಿದು ಬಂತು. ಅವರು ಕೂಡಲೇ ಕಿಲ್ಲೇಸ್ವರ ವಾಡೆಯನ್ನು ಬಿಟ್ಟು ರಾಜಾರಾಮನ ಮಠಕ್ಕೆ ಹೋದರು. ಮಠದಲ್ಲಿ ಯಾರೂ ವಾಸಮಾಡುತ್ತಿದ್ದಿಲ್ಲವಾದುದರಿಂದ ಅದು ಹೊಲಸಾದುದೂ ಅವ್ಯವಸ್ಥಿತವಾದುದೂ ಆಗಿತ್ತು. ಮಹಾರಾಜರು ಅದನ್ನು ತಕ್ಕಮಟ್ಟಿಗೆ ಸ್ವಚ್ಛಮಾಡಿಸಿಕೊಂಡು ಅಲ್ಲಿಯೇ ಇರಹತ್ತಿದರು. ಮಹಾರಾಜರ ಮನಸ್ಸು ಸ್ವಾಭಾವಿಕವಾಗಿಯೇ ಅಲ್ಲಿ ಪ್ರಫುಲ್ಲಿತವೂ ಆನಂದಿತವೂ ಆಯಿತು. ಅವರು

ಅಲ್ಲಿ ಕೆಲವು ದಿನಗಳ ವರೆಗೆ ಇದ್ದುಕೊಂಡು ಅನುಷ್ಠಾನ ಮಾಡಬೇಕೆಂದು ಸಂಕಲ್ಪ ಮಾಡಿದರು. ಮಹಾರಾಜರು ಅಲ್ಲಿಯೇ ಕೆಲವು ದಿನ ವಾಸ-ಮಾಡಬೇಕೆಂಬದಕ್ಕೆ ಇನ್ನೂ ಒಂದು ಕಾರಣವಿತ್ತು. ಅವರು ಕಾರ್ತಿಕ ಶುದ್ಧ ಪಂಚಮಿಯ ದಿನ ಗುರ್ಲಹೊಸೂರಿಗೆ ಬಂದರೆಂಬದು ವಾಚಕರಿಗೆ ಗೊತ್ತಿದೆ. ಗುರ್ಲಹೊಸೂರ ಚಿದಂಬರೋತ್ಸವವು ಕಾರ್ತಿಕ ವದ್ಯ ಪ್ರತಿಪದೆಗೆ ಸುರುವಾಗುತ್ತಿತ್ತು. ಆದುದರಿಂದ ಈ ಉತ್ಸವವನ್ನು ಮುಗಿಸಿಕೊಂಡೇ ಮುರಗೋಡಿಗೆ ಹೋಗಬಹುದೆಂದು ಮಹಾರಾಜರು ಸಹಜವಾಗಿಯೇ ವಿಚಾರ ಮಾಡಿದರು.

ಆದರೆ ವಾಡಿಕೆಯಂತೆ ಆ ಸಲದ ಚಿದಂಬರೋತ್ಸವವು ಕಾರ್ತಿಕ ವದ್ಯ ಪ್ರತಿಪದೆಗೆ ಪ್ರಾರಂಭವಾಗಲಿಲ್ಲ. ಊರೊಳಗಿರುವ ಯಾವ ದೀಕ್ಷಿತರೂ ಆ ಕೆಲಸವನ್ನು ಮಾಡಲಿಕ್ಕೆ ಮುಂದಾಗಿ ಬರಲಿಲ್ಲ. ಉತ್ಸವದ ಸಂಚಾರ-ಕ್ಕೆಂದು ಹೋದ ವೇ. ಮೂ. ಬಾಬಾದೀಕ್ಷಿತರಿಗೂ ೫೦ ರೂಪಾಯಿಗಳಿಗಿಂತ ಹೆಚ್ಚು ಹಣ ಸಿಗಪ್ಪರಿಂದ, ಅವರೂ ನಿರಾಶರಾಗಿ ಸಕಾಲಕ್ಕೆ ಗುರ್ಲ-ಹೊಸೂರಿಗೆ ಬರಲಿಲ್ಲ. ಅನೇಕ ವರ್ಷಗಳಿಂದ ಅವಿಚ್ಛಿನ್ನವಾಗಿ ನಡೆಯುತ್ತ ಬಂದ ಚಿದಂಬರೋತ್ಸವವು ಈ ಸಲ ಬಂದಾಗಿಬಿಟ್ಟಿತೆಂದು ಚಿದಂಬರ ಭಕ್ತರು ಉಸಿರ್ಗರೆಯಹತ್ತಿದರು. ಆದರೆ ಏನು ಮಾಡಬೇಕೆಂಬುದು ಮಾತ್ರ ಯಾರಿಗೂ ತಿಳಿಯಲಿಲ್ಲ.

ಕಾರ್ತಿಕ ವದ್ಯ ಷಷ್ಠಿಯ ದಿನವೇ ಚಿದಂಬರ ಜಯಂತಿಯು. ಆದುದರಿಂದ ಪಂಚಮಿಯ ದಿನ ಸಂಜೆಗೆ ಕೆಲಭಕ್ತ ಜನರು ಗುರ್ಲಹೊಸೂರಲ್ಲಿ ಕೂಡಿದರು. ವೇ. ಮೂ. ಬಾಬಾದೀಕ್ಷಿತರೂ ಸಂಚಾರವನ್ನು ಮುಗಿಸಿ-ಕೊಂಡು ಅಂದೇ ತಿರುಗಿ ಗುರ್ಲಹೊಸೂರಿಗೆ ಬಂದರು. ಅವರೆಲ್ಲರೂ ಒತ್ತಟ್ಟಿಗೆ ಸೇರಿ ಮುಂದೇನು ಮಾಡಬೇಕೆಂಬ ಬಗ್ಗೆ ವಿಚಾರ ನಡೆಸಿದರು. ಯಾರ ಬುದ್ಧಿಗೂ ಮುಂದಿನ ದಾರಿಯು ತೋರಲೊಲ್ಲದು. ರಥೋತ್ಸವ ಮೊದಲಾದವುಗಳ ವೆಚ್ಚಕ್ಕೆ ನಾಲ್ಕೈದು ನೂರು ರೂಪಾಯಿಗಳಾದರೂ ಬೇಕಾಗುವವೆಂದೂ, ಅವನ್ನು ಕೂಡಿಸುವದು ಶಕ್ಯವಿಲ್ಲೆಂದೂ ತೀರ್ಮಾನ-ವಾಯಿತು. ಎಲ್ಲರ ಮೋರೆಯ ಮೇಲೂ ನಿರಾಶೆಯ ಹುಚ್ಚು ಕಳೆಯು

ಸುರಿಯಹತ್ತಿತು. ಶ್ರೀ ಬಾಪೂ ದೀಕ್ಷಿತರ ಪುಣ್ಯವಿಂದು ತೀರಿದಂತಾಯಿತೆಂದು ಅನೇಕರು ಸ್ಪಷ್ಟವಾಗಿ ಮಾತಾಡಹತ್ತಿದರು.

ಆದರೆ ಚಿದಂಬರನ ಇಚ್ಛೆಯು ಬೇರೆಯಾಗಿತ್ತು. ಗುರ್ಲಹೊಸೂರ ಉತ್ಸವವು ಬಂದಾಗಬಾರದೆಂದು ಎಲ್ಲಿಯ ವರೆಗೆ ಚಿದಂಬರನ ಅನೇಕ್ಷೆ ಇರುವದೋ ಅಲ್ಲಿಯ ವರೆಗೆ ಅದನ್ನು ಬಂದು ಮಾಡುವ ಸಾಮರ್ಥ್ಯವುಳ್ಳವರಾರು? ತೀರ ಪ್ರತಿಕೂಲ ವಾತಾವರಣವಿದ್ದಾಗ ಕೂಡ ದೇವರು ತನ್ನ ಕೆಲಸವನ್ನು ಸರಿಯಾಗಿಯೂ ಸುಲಭವಾಗಿಯೂ ಮಾಡಿಸಿಕೊಳ್ಳುತ್ತಾನೆಂಬದಕ್ಕೆ ಅನೇಕ ಭಕ್ತರು ಸಾಕ್ಷಿಯಾಗಿದ್ದಾರೆ. ಆ ಮಾತು ಅಂದಿನ ಚಿದಂಬರ ಭಕ್ತರ ಅನುಭವಕ್ಕೂ ಬಂತು. ಮಾತಿಗೆ ಮಾತು ಹೊರಟು ಕೂಡಿದವರಲ್ಲೊಬ್ಬನು ಘಕ್ಕನೇ ಒಂದು ವಿಚಾರವನ್ನು ಮಂಡಿಸಿದನು:—

"ಈ ಊರಲ್ಲಿ ಚಿದಂಬರ ಭಕ್ತರಾದ ಪರಮಹಂಸರೊಬ್ಬರು ರಾಜಾರಾಮನ ಮಠದಲ್ಲಿ ವಾಸಮಾಡಿಕೊಂಡಿದ್ದಾರೆ. ಅವರ ಮುಖವನ್ನು ನೋಡಿದರೆ ಅವರು ಚಿದಂಬರನ ಪೂರ್ಣ ಕೃಪೆಗೆ ಪಾತ್ರರಾದಂತೆ ಕಾಣುತ್ತದೆ. ಅವರ ಚಿದಂಬರ ಪ್ರೇಮವೂ ಆಧ್ಯಾತ್ಮಿಕ ತೇಜಸ್ಸೂ ಅವರ್ಣನೀಯವಾಗಿವೆ. ನಾವು ಈ ಉತ್ಸವದ ಭಾರವನ್ನು ಅವರ ಮೇಲೆ ಹಾಕಿಬಿಟ್ಟರೆ, ಅವರಿಂದ ಈ ಕೆಲಸವು ನಿರಾಯಾಸವಾಗಿ ಕೊನೆಗಾಣಬಹುದು" ಆಯಿತು. ಸಾಯುತ್ತಿರುವವರಿಗೆ ಸಂಜೀವನಿ ಮಾತ್ರೆ ಸಿಕ್ಕಂತಾಯಿತು. ನಿರಾಶರಾದವರ ಮೋರೆಗಳೆಲ್ಲ ಈ ಸೂಚನೆಯಿಂದ ಅರಳಿದವು. ಈ ಆಲೋಚನೆಯು ಎಲ್ಲರ ಮನಸ್ಸಿಗೂ ಬಂತು. ಮರುದಿವಸ ಮುಂಜಾನೆ ಎದ್ದಕೂಡಲೇ ಮಹಾರಾಜರ ಕಡೆಗೆ ಹೋಗತಕ್ಕದ್ದೆಂದು ಎಲ್ಲರೂ ನಿರ್ಣಯ ಮಾಡಿ ಆನಂದದಿಂದ ಮಲಗಿಕೊಳ್ಳಲಿಕ್ಕೆ ಹೋದರು.

ಇಂದು ಶ್ರೀ ಚಿದಂಬರನ ಜಯಂತಿಯ ದಿನ. ಲೋಕಪತಿಯಾದ ಶ್ರೀ ಶಂಕರನು ಲೋಕೋದ್ಧಾರಕ್ಕಾಗಿ ಮುರಗೋಡದಲ್ಲಿ ಅವತಾರ ಮಾಡಿದ ಸಂಸ್ಮರಣೀಯವಾದ ತಿಥಿಯು ಇದೇ. ಶ್ರೀ ಚಿದಂಬರನು ಹುಟ್ಟಿದ ದಿನವು ಕೈಲಾಸ ಮತ್ತು ಈ ಲೋಕಗಳಲ್ಲಿರುವ ಪ್ರಾಣಿಗಳಿಗೆಲ್ಲ ಸಮಾನವಾಗಿಯೇ ಪೂಜ್ಯವಾದುದು. ನಮ್ಮ ಚರಿತ್ರನಾಯಕರಿಗಂತೂ ಇಂದು

ವಿಶೇಷ ಸಂಭ್ರಮ, ಆನಂದ. ಅವರು ಈ ಹೊತ್ತು ನಿತ್ಯಕ್ಕಿಂತಲೂ ಬೇಗನೇ ಎದ್ದು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು, ಮಲಾಪಹಾರಿಯಲ್ಲಿ ಸ್ನಾನಮಾಡಿ ಮೈಮೇಲೆ ವಿಭೂತಿ ಧರಿಸಿಕೊಂಡು, ಕೊರಳಲ್ಲಿ ರುದ್ರಾಕ್ಷಿಯ ಮಾಲೆಗಳನ್ನು ಹಾಕಿಕೊಂಡು ಧ್ಯಾನಸ್ಥರಾಗಿ ಕುಳಿತುಬಿಟ್ಟಿದ್ದರು.

ಇಷ್ಟೊತ್ತಿಗೆ ಗುರ್ಲಹೊಸೂರಲ್ಲಿ ನೆರೆದ ಚಿದಂಬರ ಭಕ್ತರೂ ಊರ ದೀಕ್ಷಿತರೂ ಒಟ್ಟಾರೆಯಾಗಿ, ಕೈಯಲ್ಲಿ ತೆಂಗಿನಕಾಯಿ ಮೊದಲಾದ ಕಾಣಿಕೆಯ ಪದಾರ್ಥಗಳನ್ನು ಹಿಡಿದುಕೊಂಡು ರಾಜಾರಾಮನ ಮಠಕ್ಕೆ ಬಂದರು. ಮಹಾರಾಜರ ಶಿಷ್ಯನಾದ ಲಕ್ಷ್ಮಣಕುಬೇರನು ಈ ಜನರಿಗೆ ಒಳಗೆ ಪ್ರವೇಶಿಸಬಾರದೆಂದೂ, ಮಹಾರಾಜರು ಧ್ಯಾನಸ್ಥರಾಗಿರುವದರಿಂದ ಅವರ ಧ್ಯಾನಕ್ಕೆ ಭಂಗತರಬಾರದೆಂದೂ ಬೇಕಾದಷ್ಟು ಹೇಳಿಕೊಂಡನು. ಆದರೆ ಯಾರೂ ಅವನ ಮಾತನ್ನು ಕೇಳಲಿಲ್ಲ. ಕೆಲಸದ ಉತ್ಕಂಠೆಯಿಂದ ಕೂಡಿದ ಜನರ ತಂಡವು ಕುಬೇರನಂಥವನ ಮಾತು ಕೇಳುವದೇ ? ಅವರು ಕೂಡಲೇ ಒಳಗೆ ನುಗ್ಗಿ ''ಔದುಂಬರ ನಿವಾಸೀ ಭಕ್ತಾಭಿಮಾನೀ ರಾಜಾಧಿರಾಜ ಶ್ರೀ ಶಿವಚಿದಂಬರೇಶ್ವರ ಮಹಾರಾಜಕೀಜಯ'' ಎಂದು ನಾಮಘೋಷ ಮಾಡಿದರು. ಮತ್ತು ತಮ್ಮ ತಮ್ಮ ಕೈಯೊಳಗಿನ ಕಾಣಿಕೆಗಳನ್ನು ಯತಿಗಳ ಮುಂದಿಟ್ಟು ನಮಸ್ಕಾರ ಮಾಡಿ ನಿಂತುಕೊಂಡರು. ಮಹಾರಾಜರು ಆ ಕಾಲಕ್ಕೆ ಸ್ವಸ್ತಿಕಾಸನವನ್ನು ಹಾಕಿಕೊಂಡು, ಎರಡೂ ಹಸ್ತದ ತಲಗಳನ್ನು ಒಂದರ ಮೇಲೊಂದು ಹೇರಿ ತೊಡೆಯ ಮೇಲಿಟ್ಟುಕೊಂಡು ಧ್ಯಾನಮಗ್ನರಾಗಿದ್ದರು. ಮುಖದ ಮೇಲೆ ಅಪೂರ್ವವಾದ ಕಾಂತಿಯು ಒಡಮೂಡಿತ್ತು. ಆ ಕಾಲದಲ್ಲಿ ಆ ಪ್ರಶಾಂತವಾದ ಮೂರ್ತಿಯನ್ನು ನೋಡಿದವರಿಗೆ ತಾವು ಶ್ರೀ ಸಾಕ್ಷಾತ್ ಶಂಕರನ ಮುಂದೇ ನಿಂತಿರುವೆವೆಂದು ತೋರಿದ್ದರೆ ಆಶ್ಚರ್ಯವಿಲ್ಲ.

ತಮ್ಮ ಆರಾಧ್ಯನಾದ ಚಿದಂಬರನ ನಾಮಘೋಷವನ್ನು ಕೇಳಿ ಮಹಾರಾಜರ ಸಮಾಧಿಯು ಕೊನೆಗಂಡಿತು. ಏಕಾಗ್ರವಾದ ಅವರ ಚಿತ್ತವು ಕ್ರಮವಾಗಿ ತಮ್ಮ ಸುತ್ತುಮುತ್ತಲಿನ ವಿಷಯಗಳ ಕಡೆಗೆ ಹೊರಳಿತು. ಮಹಾರಾಜರು ಮೆಲ್ಲನೆ ಕಣ್ಣು ತೆರೆದು ನೋಡಿದರು. ತಾವು ರಾಜಾರಾಮನ

ಮಠದಲ್ಲಿರುವೆದಂದೂ, ಅನೇಕ ಜನ ಚಿದಂಬರ ಭಕ್ತರೂ ವಂಶಜರೂ ತಮ್ಮ ಮುಂದೆ ನಿಂತಿರುವರೆಂದೂ ಅವರಿಗೆ ಗೊತ್ತಾಯಿತು. ಆವರಿಗೆ ಇದೇನು ಗೂಢವಿರಬಹುದೆಂದು ಒಂದೆರಡು ನಿಮಿಷ ಆಶ್ಚರ್ಯವಾಯಿತು ಆದರೆ ಅವರು ಕೂಡಲೇ ತಮ್ಮ ಆಸನದಿಂದ ಎದ್ದು, ದೀಕ್ಷಿತರ ವಂಶಜರಾದ ಪೇ. ಮೂ. ಬಾಬಾದೀಕ್ಷಿತ ಮೊದಲಾದವರನ್ನು ಆದರದಿಂದ ಕೈ ಹಿಡಿದು ಆಸನಗಳ ಮೇಲೆ ಕೂಡಿಸಿದರು. ಮತ್ತು ಉಳಿದ ಭಕ್ತ ಜನರಿಗೂ ಯಥಾ ಸ್ಥಾನದಲ್ಲಿ ಕುಳ್ಳಿರಬೇಕೆಂದು ಸೂಚಿಸಿದರು. ಆ ಪ್ರಕಾರ ಎಲ್ಲ ಜನರೂ ತಮತಮಗುಚಿತವಾದ ಸ್ಥಾನಗಳಲ್ಲಿ ಸುಖವಾಗಿ ಕುಳಿತುಕೊಂಡರು.

ಮಹಾರಾಜರೇ ಮೊದಲಿಗೆ ಮಾತಾಡಲಾರಂಭಿಸಿದರು:— ''ಇದೇನು, ಇಷ್ಟು ಜನರು ಬಂದಿರುವಿರಲ್ಲ ! ನನ್ನ ಕಡೆಯಿಂದ ತಮ್ಮ ಸೇವೆಯೇನಾದರೂ ಆಗಬೇಕಾಗಿರುವದೇ ? ಹಾಗಿದ್ದರೆ ಹೇಳಬೇಕು. ನಾನು ಅವಶ್ಯವಾಗಿಯೂ ತಮ್ಮ ಕೆಲಸವನ್ನು ಮಾಡಲಿಕ್ಕೆ ಸಿದ್ಧನಿದ್ದೇನೆ.''

ದೊಡ್ಡವಾಡದ ಶ್ರೀ ರಾಜಾರಾಮ ರುದ್ರೋ ಪಾಟೀಲರೆಂಬವರು ಎಲ್ಲ ಜನರ ಪರವಾಗಿ ಮಾತಾಡಹತ್ತಿದರು:— ''ಈ ವರುಷದ ಇಲ್ಲಿಯ ಉತ್ಸವವು ತೀರ ಕಟ್ಟಾಗಿ ಬಿಟ್ಟಿದೆ. ಪ್ರತಿಪದೆಗೇ ಸುರುವಾಗಬೇಕಾದ ಉತ್ಸವವು ಇನ್ನೂ ವರೆಗೆ ನೆನೆಗುದಿಗೆ ಬಿದ್ದದೆ. ಇಂದು ಶ್ರೀ ಮಹಾಸ್ವಾಮಿಗಳವರ ಜನ್ಮ ತಿಥಿಯು. ರಥೋತ್ಸವವೂ ಅನ್ನ ಸಂತರ್ಪಣೆಯೂ ನಡೆಯಬೇಕು. ದೇವಸ್ಥಾನಕ್ಕೆ ಈ ಬಗ್ಗೆ ಕಾಯಂ ಉತ್ಪನ್ನವಂತೂ ಏನೂ ಇರುವದಿಲ್ಲ. ಎಲ್ಲ ವೆಚ್ಚವೂ ಭಕ್ತರ ಕಾಣಿಕೆಗಳ ಮೇಲೆಯೇ ಅವಲಂಬಿಸಿದೆ ಈ ಸಲದ ಸಂಚಾರವು ತೀರ ಕಡಿಮೆಯೆಂದರೆ ಐವತ್ತು ರೂಪಾಯಿ ಮಾತ್ರ ಆಗಿದೆ. ಏನಿಲ್ಲೆಂದರೂ ಇಂದು ನಾಳೆ ಕೂಡಿ ಮುನ್ನೂರು-ನಾನೂರು ರೂಪಾಯಿಗಳಾದರೂ ಬೇಕು. ಈ ಭಾರವನ್ನು ಹೊರಲಿಕ್ಕೆ ದೀಕ್ಷಿತ ವಂಶದವರು ಯಾರೂ ಸಮರ್ಥರಿಲ್ಲ. ಸಾಲವೂ ಸಿಕ್ಕುವಂತಿಲ್ಲ. ಸಾಲ ಸಿಕ್ಕರೂ ಆದನ್ನು ತೀರಿಸುವ ಶಕ್ತಿಯು ಯಾರಿಗಿಲ್ಲ. ಚಿದಂಬರನ ಸೇವೆಯು ಇಲ್ಲಿಯ ವರೆಗೆ ಅಖಂಡವಾಗಿ ನಡೆಯುತ್ತ ಬಂದಿದೆ. ಈಗ ಆದನ್ನು ಹೇಡಿತನದಿಂದ ನಿಲ್ಲಿಸುವದು ನಮ್ಮ ಜೀವದ ಸುತ್ತು ಬಂದಿದೆ.''

ಮಹಾರಾಜರು ಮತ್ತೆ ಪ್ರಶ್ನೆಮಾಡಿದರು:— ''ಈ ಮಾತು ಅತ್ಯಂತ ವಿಷಾದಕರವು. ಆದರೆ ಆದಕ್ಕೆ ನಾನೇನು ಮಾಡಬೇಕೆನ್ನುವಿರಿ?''

ಪಾಟೀಲರು ಉತ್ತರಕೊಟ್ಟರು:— ''ತಾವು ಚಿದಂಬರನ ಭಕ್ತರು. ಹೇಗಾದರೂ ಮಾಡಿ ಈ ಉತ್ಸವವು ಯಥಾಸಾಂಗವಾಗಿ ನೆರವೇರುವಂತೆ ಅನುಗ್ರಹಿಸಬೇಕು.''

ಬಾಬಾದೀಕ್ಷಿತರು ನಡುವೇ ಬಾಯಿ ಹಾಕಿದರು:— ''ಸ್ವಾಮಿನ್, ಇಂಥ ಕೆಲಸಕ್ಕೆ ಸರ್ವಸಂಗ ಪರಿತ್ಯಾಗ ಮಾಡಿದ ತಮ್ಮಂಥ ಪರಮಹಂಸರೇ—ಯೋಗಿಗಳೇ—ಸಮರ್ಥರು. ನಾವು ಸಂಸಾರದ ಸ್ವಾರ್ಥಕ್ಕೆ ಸಿಕ್ಕಿಬಿದ್ದುದರಿಂದ, ನಮ್ಮ ಕಡೆಯಿಂದ ಚಿದಂಬರನ ಸೇವೆಯು ಸರಿಯಾಗಿ ಆಗಲೊಲ್ಲದು. ನಾವು ಹೀಗೆ ಸ್ವಾರ್ಥಪರಾಯಣರಾದುದರಿಂದಲೇ ಚಿದಂಬರನು ನಮ್ಮ ಸೇವೆಯನ್ನು ನಿರಾಕರಿಸುತ್ತಿರುವಂತೆ ಕಾಣುತ್ತದೆ. ನನಗಂತೂ ಚಿದಂಬರನು ಈ ಸಲದ ಸೇವೆಗಾಗಿಯೇ ತಮ್ಮನ್ನಿಲ್ಲಿಗೆ ಬರಮಾಡಿಕೊಂಡಿರುವನೆಂದು ನಿಶ್ಚಯವಾಗಿದೆ. ತಾವು ಹೇಗಾದರೂ ಮಾಡಿ ಈ ಉತ್ಸವದ ಭಾರವನ್ನು ಹೊತ್ತು ಈ ಕೆಲಸವನ್ನು ಪಾರುಗಾಣಿಸಬೇಕೆಂದು ಬೇಡಿಕೊಳ್ಳುತ್ತೇನೆ.''

ಮಹಾರಾಜರ ಮುಖವು ಗಂಭೀರವಾಯಿತು. ಅವರ ಕಣ್ಣುಗಳು ತಮ್ಮಷ್ಟಕ್ಕೆ ತಾವೇ ಮುಚ್ಚಿದವು. ಕೆಲ ಹೊತ್ತಿನ ವರೆಗೆ ಅವರು ವಿಚಾರ ಮಗ್ನರಾದಂತೆ ಕಂಡಿತು. ಗುರುಗಳಾದ ಶ್ರೀ ಶಾಂತಾಶ್ರಾಮ ಸ್ವಾಮಿಗಳವರು ಹೇಳಿದ ಸಂದೇಶವು ಕಿವಿಯಲ್ಲಿ ಗುಣುಗುಟ್ಟಹತ್ತಿತು - ''ನೀನು ಸಂನ್ಯಾಸ ತಕ್ಕೊಂಡದ್ದು ಚಿದಂಬರನ ಸೇವೆಗಾಗಿಯೇ.'' ಅವರ ಕೂದಲುಗಳು ನಿಗರಿದವು. ತಾವು ಚಿದಂಬರನ ಸೇವೆಯನ್ನು ಎಲ್ಲಿ ಮತ್ತು ಹೇಗೆ ಪ್ರಾರಂಭ ಮಾಡಬೇಕೆಂದು ಯೋಚಿಸುತ್ತಿರುವಾಗ, ಚಿದಂಬರನ ಸೇವೆಯನ್ನು ಪ್ರತ್ಯಕ್ಷವಾಗಿ ಮಾಡುವ ಸುಯೋಗವು ತಾನಾಗಿಯೇ ಬಂದುದಕ್ಕಾಗಿ ಅವರ ಮನಸ್ಸು ಸಂತೋಷಗೊಂಡಿತು. ಬಂದ ಪ್ರಸಂಗಕ್ಕೆ ಎದೆಗೊಡಲೇಬೇಕೆಂದು ಅವರು ಸಂಕಲ್ಪ ಮಾಡಿದರು. ಆ ಮೊದಲು ಅವರು ಚಿದಂಬರನಿಗೆ ಕೆಲಹೊತ್ತು ಮನೋಮಯ ಪ್ರಾರ್ಥನೆ ಮಾಡಿಕೊಂಡರು. ಅವರ

ಅಂತಃಕರಣದಲ್ಲಿ ಚಿದಂಬರನ ಸಂದೇಶವೇ ಕೇಳಬಂದಂತಾಯಿತು. ಇಂಥ ಪ್ರಸಂಗದಲ್ಲಿ ಅಂತಃಕರಣಪ್ರವೃತ್ತಿಯೇ ಪ್ರಮಾಣವೆಂದು ಕವಿಕುಲಗುರುವಾದ ಕಾಲಿದಾಸನು ಹೇಳುತ್ತಾನಲ್ಲವೆ ? ಮಹಾರಾಜರ ಅಂತಃಕರಣವೂ ಈ ಕೆಲಸವನ್ನು ಕೈಕೊಳ್ಳಬೇಕೆಂದೇ ಸೂಚಿಸಿತು. ಮಹಾರಾಜರು ಕೂಡಲೇ ಕಣ್ಣು ತೆರೆದು ಎಲ್ಲರನ್ನೂ ಮುಗುಳು ನಗೆಯಿಂದ ನೋಡುತ್ತ ಮಾತಾಡಿದರು:— ''ಓಳ್ಳೆಯದು. ಚಿದಂಬರನು ಎಲ್ಲಕ್ಕೂ ಸಮರ್ಥನಿದ್ದಾನೆ. ಆದರೆ ಅವನ ಸಾಮರ್ಥ್ಯವನ್ನು ವ್ಯವಹಾರದಲ್ಲಿ ಹೇಗೆ ಉಪಯೋಗಿಸಿಕೊಳ್ಳಬೇಕೆಂಬದು ನಮಗೆ ತಿಳಿಯದಿರುವದರಿಂದ, ನಾವು ದುಃಖಪಡಬೇಕಾಗುತ್ತದೆ. ಇರಲಿ. ಧರ್ಮಕ್ಕೆ ಅವಿರುದ್ಧವಾದ ಇಚ್ಛೆಯು ಸತ್‌ಸಂಕಲ್ಪವೆಂದೆನಿಸಿಕೊಳ್ಳುವದು. ಈ ತರದ ಸಂಕಲ್ಪವೆಂದರೆ ಸಾಕ್ಷಾತ್ ಭಗವಂತನ ಸ್ವರೂಪವೇ—ಎಂದು ಗೀತೆಯು ಹೇಳುತ್ತದೆ. ನಾವು ಭಕ್ತಿ ವಿಶ್ವಾಸಗಳಿಂದ ಕೂಡಿದವರಾಗಿದ್ದರೆ ಎಲ್ಲ ಸತ್‌ಸಂಕಲ್ಪಗಳೂ ಪೂರ್ಣವಾಗಲಿಕ್ಕೆ ಬೇಕು. ಚಿದಂಬರನ ಸೇವೆಯ ಇಚ್ಛೆಯಂತೂ ಸತ್‌ಸಂಕಲ್ಪವೆಂಬದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ನಾವು ಯಾವುದಕ್ಕೂ ಹೆದರುವ ಕಾರಣವಿಲ್ಲ. ಮೇಲಾಗಿ ನಿಮ್ಮೆಲ್ಲರ ಸಹಾಯವಿದ್ದರೆ ಯಾವುದಕ್ಕೂ ಕೊರತೆ ಬೀಳುವ ಕಾರಣವಿಲ್ಲ. ಇಂದೇ ಚಿದಂಬರನ ಜನ್ಮತಿಥಿಯು. ನೀವು ಉತ್ಸವವನ್ನು ಕೂಡಲೇ ಪ್ರಾರಂಭ ಮಾಡಿರಿ. ಎಲ್ಲವನ್ನೂ ಚಿದಂಬರನು ಯಥಾಸಾಂಗವಾಗಿ ಮುಗಿಸಿಕೊಳ್ಳುತ್ತಾನೆ.''

ಆದರೂ ವೇ. ಮೂ. ಬಾಬಾದೀಕ್ಷಿತರು ಮುಂದಾಗಿ ಉತ್ಸವವನ್ನು ಕೈಕೊಳ್ಳಲಿಕ್ಕೆ ಸಿದ್ಧರಾಗಲಿಲ್ಲ. ಅವರು ತಮ್ಮ ಕಡೆಗೆ ಕೂಡಿದ ೫೦ ರೂ. ಗಳನ್ನು ಮಹಾರಾಜರ ಮುಂದೆ ಇಟ್ಟು ''ಉತ್ಸವವನ್ನು ತಾವೇ ನೆರವೇರಿಸಬೇಕು. ತಾವು ಯಾವ ಕೆಲಸವನ್ನು ಮಾಡಬೇಕೆಂದು ನಮಗೆ ಆಜ್ಞಾಪಿಸುವಿರೋ ಅದನ್ನು ಮಾತ್ರ ನಾವು ಮಾಡತಕ್ಕವರು. ಉಳಿದೆಲ್ಲ ಭಾರವು ತಮ್ಮ ಮೇಲೆಯೇ'' ಎಂದು ಬೇಡಿಕೊಂಡರು.

ಮಹಾರಾಜರು ''ಹಾಗೇ ಆಗಲೆಂ''ದು ಹೇಳಿ, ಚಟ್ಟನೆದ್ದು ಎಲ್ಲ ಭಕ್ತ ಜನರನ್ನು ಕೂಡಿಕೊಂಡು ಚಿದಂಬರನ ಗುಡಿಗೆ ಬಂದರು ಮತ್ತು

ದೇವರ ಮುಂದೆ ನಿಂತು ಎಲ್ಲರೊಡನೆ ದೇವರಿಗೆ ಪ್ರಾರ್ಥನೆ ಮಾಡಿಕೊಂಡರು:— ''ಪ್ರಭೋ, ನಾವು ಅಲ್ಪರು, ಪಾಮರರು. ಎಲ್ಲವನ್ನು ಮಾಡುವವನೂ ಮಾಡಿಸುವವನೂ ನೀನೇ. ಆದರೂ ನಮ್ಮ ಕಡೆಯಿಂದ ನಿಷ್ಕಾಮ ಸೇವೆಯನ್ನು ತೆಗೆದುಕೊಂಡು ನಮ್ಮನ್ನು ದ್ಧರಿಸಬೇಕು.''

ಆಯಿತು, ಕ್ಷಣಾರ್ಧದಲ್ಲಿ ಗುಡಿಯೊಳಗಿನ ವಾತಾವರಣವೆಲ್ಲ ಸಂಪೂರ್ಣವಾಗಿ ಬದಲಾವಣೆಯನ್ನು ಹೊಂದಿತು. ಎಲ್ಲೆಲ್ಲಿಯೂ ಹಬ್ಬಿಕೊಂಡಿದ್ದ ನಿರಾಶೆಯು ಹೇಳಹೆಸರಿಲ್ಲದೆ ಓಡಿಹೋಯಿತು. ಎಲ್ಲರ ಮೋರೆಯ ಮೇಲೂ ಉತ್ಸಾಹದ ಹೊಸ ಹುರುಪು ಕುಣಿದಾಡಹತ್ತಿತು. ಮಹಾರಾಜರಂಥ ತ್ಯಾಗಿಗಳ ನೇತೃತ್ವದಲ್ಲಿ ಭಕ್ತಜನರು ತನುಮನ-ಧನಗಳಿಂದ ಚಿದಂಬರನ ಸೇವೆಗಾಗಿ ಟೊಂಕ ಕಟ್ಟಿದರು. ಸುತ್ತಲಿನ ಊರುಗಳೊಳಗಿನ ಜನರು ಗುರ್ಲಹೊಸೂರಿಗೆ ಧಾವಿಸಿ ಬಂದರು ಬೆಟಸೂರ, ಸವದತ್ತಿ, ಅಸುಂಡಿ, ಹೊಸೂರು, ದೊಡವಾಡ ಮೊದಲಾದ ಊರುಗಳ ಜನರು ತಂಡತಂಡವಾಗಿ ಕೂಡಿದರು. ಅವರೆಲ್ಲರೂ ಮಹಾರಾಜರ ದರುಶನದಿಂದಲೂ ಉಪದೇಶದಿಂದಲೂ ಧನ್ಯರಾಗಿ, ಸಂತೋಷದಿಂದ ತಮ್ಮ ಯೋಗ್ಯತೆ ಮೀರಿ ಹಣಕೊಟ್ಟರು. ಗುರ್ಲಹೊಸೂರೊಳಗಿನ ಸೆಟ್ಟಿ ಸಾವುಕಾರರೂ ಕೂಡ ಮುಕ್ತಹಸ್ತದಿಂದ ಸಹಾಯ ಮಾಡಿದರು.

ಉತ್ಸವವು ಎಲ್ಲ ಬಗೆಯಿಂದಲೂ ಹೊಸದಾಗಿ ಕಂಡಿತು. ''ಏನೋ ಬಿಡಲಾರದ ಕರ್ಮ''ವೆಂಬ ಭಾವನೆಯಿಂದ ನಡೆಯುತ್ತಿದ್ದ ದೇವಕಾರ್ಯವು ಈ ಸಲ ಬೇರೆ ರೂಪವನ್ನು ಹೊಂದಿತು. ಈ ವರುಷದ ಉತ್ಸವವು ನಿಜವಾದ ಉತ್ಸವವಾಗಿ ಪರಿಣಮಿಸಿತು. ಎಲ್ಲಿ ನೋಡಿದಲ್ಲೆಲ್ಲ ಚಿದಂಬರನ ವಿಷಯಕವಾದ ಭಕ್ತಿ-ಪ್ರೇಮಗಳು ತುಂಬಿ ತುಳುಕುತ್ತಿದ್ದವು. ಎಲ್ಲ ಕಾರ್ಯಕ್ರಮಗಳಲ್ಲಿಯೂ ಶ್ರದ್ಧಾವಿಶ್ವಾಸಗಳು ಓಡೆದು ಕಾಣುತ್ತಿದ್ದವು. ಉತ್ಸವದ ಪ್ರತಿಯೊಂದು ಸಂಗತಿಯಲ್ಲಿ ಓರಣ, ಶಿಸ್ತು, ವ್ಯವಸ್ಥೆ, ಕ್ರಮ ಮತ್ತು ಸುಧಾರಣೆಗಳು ಕಂಡುಬಂದವು. ಕೂಡಿದವರೆಲ್ಲ ''ಇಲ್ಲಿ ಚಿದಂಬರನೊಬ್ಬನೇ ಸ್ವಾಮಿಯು. ನಾವೆಲ್ಲರೂ ಅವನ ಸೇವಕರು. ನಮ್ಮೊಳಗೆ ದೊಡ್ಡವರು ಸಣ್ಣವರೆಂಬ ಭೇದವಿಲ್ಲ'' ಎಂಬ ಭಾವನೆಯಿಂದ ಕೂಡಿದವರಾಗಿ ನಮ್ರತೆಯಿಂದ ಕೆಲಸ ಮಾಡಿದರು.

ಅನ್ನಸಂತರ್ಪಣೆಯೂ ಯಥಾಸಾಂಗವಾಗಿಯೇ ನಡೆಯಿತು. ಎಲ್ಲರ ಮನಸ್ಸುಗಳೂ ಪ್ರಸನ್ನವಾದವು. ಇಷ್ಟೇ ಅಲ್ಲ; ಚಿದಂಬರನ ಉತ್ಸವ ಮೂರ್ತಿಯ ಮುಖದ ಮೇಲೆ ಸಹ ಈ ವರ್ಷ ಪ್ರಸನ್ನತೆಯ ಕಳೆಯು ಸುಸ್ಪಷ್ಟವಾಗಿತ್ತೆಂದು ಜನರು ಮಾತಾಡಹತ್ತಿದರು. ಈ ಮಾತು ಚಿದಂಬರನ ಭಕ್ತವಾತ್ಸಲ್ಯದ ದ್ಯೋತಕವೋ, ಅಥವಾ ಜನರು ತಮ್ಮ ಅಂತಃಕರಣಗಳೊಳಗಿನ ಭಾವವನ್ನೇ ಹೊರಗೆ ಕಂಡದ್ದರ ಚಿಹ್ನವೋ ಯಾರು ಹೇಳಬೇಕು ? ಆದರೆ ಎಲ್ಲ ಕಡೆಗೆ ಶಾಂತಿ-ಸುಖ-ಸಮಾಧಾನಗಳು ಮಾತ್ರ ಬೇರೂರಿದವು. ''ಉತ್ಸವವಾದರೆ ಹೀಗಾಗಬೇಕು'' ಎಂದು ಎಲ್ಲರೂ ಬಾಯಿ ತುಂಬ ಹೊಗಳಹತ್ತಿದರು.

ಆ ವರುಷದ ಉತ್ಸವದ ವೆಚ್ಚವೇನೂ ಕಡಿಮೆಯಾಗಲಿಲ್ಲ. ೩೫೦ ರೂ. ಗಳನ್ನು ಮಿಕ್ಕಿತು. ಆದರೆ ಆಶ್ಚರ್ಯದ ಮಾತೆಂದರೆ ಯಾವ ಸಾಮಾನು-ಗಳನ್ನೂ ಕಡದ ಮೇಲೆ ತಂದಿರಲಿಲ್ಲ. ಮತ್ತು ಯಾವ ಸಾಮಾನಕ್ಕೂ ಕೊರತೆ ಬೀಳಲಿಲ್ಲ. ಉತ್ಸವವು ಮುಗಿದ ಮೇಲೆ ಆಯವ್ಯಯಗಳೆರಡೂ ಸಮಾನವಾಗಿರುವವೆಂದು ಕಂಡುಬಂತು. ವಾಚಕರೇ, ಇದಕ್ಕೇನೆನ್ನಬೇಕೆಂಬದನ್ನು ನೀವೇ ಊಹಿಸಿರಿ. ನಮ್ಮ ಪ್ರೀತಿಯವರು ನಮ್ಮ ಸೇವೆಮಾಡಹತ್ತಿದರೆ—ಅದು ಅಪೂರ್ಣವಾಗಿ ಕಂಡರೂ— ನಮಗೆ ಸಂತೋಷವಾಗುತ್ತದೆ. ನಮಗೆ ಬೇಡಾದವರು ಸೇವೆ ಮಾಡಲನುವಾದರೆ—ಅದು ಪೂರ್ಣವಾಗಿ ಕಂಡರೂ—ನಮಗೆ ಸಮಾಧಾನವಾಗುವದಿಲ್ಲ. ಹಾಗೆಯೇ, ತನ್ನ ಪ್ರೀತಿಯ ಭಕ್ತನು ಸೇವೆ ಮಾಡುವ ಸಲುವಾಗಿ ಮುಂದೆ ಬಂದುದರಿಂದ, ಸಂತುಷ್ಟನಾದ ಚಿದಂಬರನೇ ಈ ಚಮತ್ಕಾರವನ್ನು ಮಾಡಿ ತೋರಿಸಿದನೆಂದು ಎದೆತಟ್ಟಿ ಹೇಳಬಹುದಲ್ಲವೆ ?



ಶ್ರೀಮತ್ಪರಮಹಂಸ ಶ್ರೀ ಕೈವಲ್ಯಾಶ್ರಮ ಸ್ವಾಮಿ
ಮಹಾರಾಜರು (ಸಂನ್ಯಾಸವಾದ ಕೆಲವು ವರುಷಗಳ ಮೇಲೆ)

೮ ಜೀರ್ಣೋದ್ಧಾರ ಅಥವಾ ಸುವರ್ಣವೃಷ್ಟಿ

ಧಾರ್ಮಿಕ, ಸಾಮಾಜಿಕ, ಅಥವಾ ರಾಷ್ಟ್ರೀಯ ಕೆಲಸಗಳನ್ನು ಮಾಡಲು ಮುಂದೆ ಬರುವ ಜನರು ನಿಜವಾಗಿ ತ್ಯಾಗಿಗಳೂ, ಸ್ವಾರ್ಥ-ರಹಿತರೂ ಆಗಿದ್ದರೆ, ಅವರಿಗೆ ಯಾವ ಮಾತಿನ ಕೊರತೆಯೂ ಆಗುವದಿಲ್ಲ. ತಾವು ಕೈಕೊಂಡ ಕೆಲಸಗಳನ್ನು ಈಡೇರಿಸುವ ವಿಷಯದಲ್ಲಿ ಅವರು ಏನು ಬೇಕಾದ ಚಮತ್ಕಾರವನ್ನು ಮಾಡಿ ತೋರಿಸುವರು. ಅಶಕ್ಯವಾದುದನ್ನು ಶಕ್ಯಮಾಡಿ ಬಿಡುವರು. ಅಸಾಧ್ಯವಾದುದನ್ನು ಸಾಧ್ಯಮಾಡಿ ತೋರಿಸು-ವರು. ಹಣವು ಬೇಕೆಂದು ಅವರು ಹೇಳುವದೊಂದೇ ತಡ. ಅವರ ಮೇಲೆ ಸುವರ್ಣವೃಷ್ಟಿಯೇ ಆಗಹತ್ತುವದು. ಮುಸಲ್ಮಾನರ ಅಮಾನುಷವಾದ ಉಪಟಳದಿಂದ ಬೇಸತ್ತ ಹಿಂದೂ ಜನರನ್ನು ಹುರಿದುಂಬಿಸಿ ಕರ್ನಾಟಕ ಸಾಮ್ರಾಜ್ಯವನ್ನು ಕಟ್ಟಲುಜ್ಜುಗಿಸಿದ ವಿದ್ಯಾರಣ್ಯರು ತಮ್ಮ ತಪಃಪ್ರಭಾವ-ದಿಂದ ಬಂಗಾರದ ಮಳೆಯನ್ನು ಸುರಿಸಿದರೆಂದು ನಾವು ಓದುತ್ತೇವೆ. ಈ ರೀತಿಯಿಂದ ಆಕಾಶದಿಂದಲೇ ಬಂಗಾರದ ನಾಣ್ಯಗಳು ಬಿದ್ದವೆಂಬದನ್ನು ನಂಬಲಾರದವರು ಅನೇಕರಿರಬಹುದು ಆದರೆ ವಿದ್ಯಾರಣ್ಯರಂಥವರು ಎಲ್ಲರ ಹಿತಕ್ಕೆಂದೇ ಕೈಕೊಂಡ ಉಚ್ಚಧ್ಯೇಯದ ಸಲುವಾಗಿ ಜನರು ಆನಂದದಿಂದ ಅವರ ಮೇಲೆ ಬಂಗಾರದ ಮಳೆ ಸುರಿಸಿರಬಹುದೆಂದು ನಾಸ್ತಿಕರೂ ಕೂಡ ಒಪ್ಪಬೇಕಾದ ಮಾತು. ಈಗಿನ ಕಾಂಗ್ರೆಸ ಚಳುವಳಿಯನ್ನು ನೋಡಿದವರಿ-ಗಂತೂ ಈ ಮಾತು ಕೂಡಲೇ ಸಮ್ಮತವಾಗುವಂತಿದೆ. ಮಹಾತ್ಮಾ ಗಾಂಧೀಜಿ-ಯವರು, ಖಾದೀ ಪ್ರಸಾರಕ್ಕಾಗಿ, ಹರಿಜನೋದ್ಧಾರಕ್ಕಾಗಿ, ಅಥವಾ ಕಾಂಗ್ರೆಸ್ ಕೆಲಸಗಳಿಗಾಗಿ ಕೈಯೊಡ್ಡುವದೊಂದೇ ತಡ, ಕೋಟಿಗಟ್ಟಲೆ ರೂಪಾಯಿಗಳ ರಾಸಿಯು ಬೀಳುವದು. ಪಂಡಿತ ನೆಹರುರವರು ಆಸ್ಪತ್ರೆಯ ಕೆಲಸಕ್ಕಾಗಿ ಜೋಳಿಗೆ ಹಿಡಿದೊಡನೆ ಲಕ್ಷಾಂತರ ರೂಪಾಯಿಗಳು ದಬದಬನೆ

ಬೀಳುವವು. ಇದೆಲ್ಲಕ್ಕೂ ಕಳಸವೆಂದರೆ, ಭಾರತದ ವಿಮೋಚನೆಗಾಗಿಯೇ ಆಜನ್ಮ ಬ್ರಹ್ಮಚಾರಿಗಳಾದ ಸುಭಾಷಚಂದ್ರರು ರಾಷ್ಟ್ರೀಯ ಸೈನ್ಯವನ್ನು ನಿಲ್ಲಿಸುವದಕ್ಕಾಗಿ ಪ್ರಯತ್ನ ಮಾಡಿದ ಕಾಲಕ್ಕೆ ಅವರ ಕೊರಳೊಳಗಿನ ಹೂವಿನ ಮಾಲೆಯೊಂದಕ್ಕೆ ಒಂದೂವರೆ ಲಕ್ಷ ರೂಪಾಯಿಗಳು ಸಿಕ್ಕದ್ದು. ಮತ್ತು ಅಲ್ಪ ಕಾಲದಲ್ಲಿಯೇ ೮—೧೦ ಕೋಟಿ ರೂಪಾಯಿಗಳು ಕೂಡಿದ್ದು ಹಾಗೂ ರಾಷ್ಟ್ರೀಯ ಬ್ಯಾಂಕಿಗಾಗಿ ಒಬ್ಬನೇ ಐವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟದ್ದು ಇದೆಲ್ಲದರ ತಾತ್ಪರ್ಯವಿಷ್ಟೇ : ತಾವು ಕೊಡುವ ಹಣವು ನಿಜವಾಗಿ ಒಳ್ಳೇ ಕೆಲಸಗಳಿಗಾಗಿ ಉಪಯೋಗವಾಗುವದೆಂದೂ ಹಣವನ್ನು ತೆಗೆದುಕೊಳ್ಳುವ ತ್ಯಾಗಿಯು ಸಮರ್ಥನಿದ್ದು ನಿಃಸ್ವಾರ್ಥ ಬುದ್ಧಿಯಿಂದ ಅದನ್ನು ವೆಚ್ಚಮಾಡುವನೆಂದೂ ಖಚಿತವಾಗಿ ಗೊತ್ತಾದರೆ ಹಣದ ಕೊರತೆಯು ಎಂದೂ ಬೀಳುವದಿಲ್ಲ.

ನಮ್ಮ ಚರಿತ್ರನಾಯಕರ ವಿಷಯದಲ್ಲಿಯೂ ಈ ಮಾತಿನ ಸತ್ಯತೆಯು ಕಂಡುಬಂತು. ಸಂಸಾರಿಗಳಾದ ದೀಕ್ಷಿತ ವಂಶದವರು ಚಿದಂಬರ ಸೇವೆಯ ನೆವವನ್ನು ಮುಂದೆ ಮಾಡಿ, ಎಷ್ಟೇ ಯಾಚನೆ ಮಾಡಿದರೂ ಅವರಿಗೆ ಸಾಕಷ್ಟು ಹಣ ಕೂಡುತ್ತಿರಲಿಲ್ಲ. ಅದೇ ಮಹಾರಾಜರಂಥವರು ಆ ಕೆಲಸಕ್ಕೆ ಮುಂದೆ ಬಂದೊಡನೆ ಎಂತಹ ಚಮತ್ಕಾರವಾಯಿತೆಂಬುದನ್ನು ವಾಚಕರು ಬಲ್ಲರು. ಈ ಪ್ರಕರಣದಲ್ಲಿಯಾದರೂ ಇದೇ ಮಾತು ಸುಸ್ಪಷ್ಟವಾಗಿ ಕಾಣುವಂತಿದೆ. ಮಹಾರಾಜರು ಚಿದಂಬರ ಸೇವೆಗಾಗಿ ಮುಂದೆ ಬಂದುದೇ ತಡ, ಅವರ ಮೇಲೆ ಬಂಗಾರದ ಮಳೆಯೇ ಆಗಹತ್ತಿತು.

ಮಹಾರಾಜರಿಗೀಗ ಗುರ್ಲಹೊಸೂರೇ ತಮ್ಮ ಚಿದಂಬರ ಸೇವೆಯ ಮುಖ್ಯ ಕ್ಷೇತ್ರವೆಂಬದು ಚನ್ನಾಗಿ ಮನವರಿಕೆಯಾಗಿತ್ತು. ಗುರ್ಲಹೊಸೂರನ್ನೇ ಚಿದಂಬರ ಸೇವೆಯ ಮಧ್ಯಬಿಂದುವನ್ನಾಗಿ ಮಾಡಿಕೊಂಡು, ಸುತ್ತು ಮುತ್ತಲಿನ ಭಾಗಗಳಲ್ಲಿ ಚಿದಂಬರ ಭಕ್ತಿಯನ್ನೂ ಮಹಾತ್ಮ್ಯವನ್ನೂ ಬೆಳೆಸುವದೇ ತಮ್ಮ ಶೇಷಾಯುಷ್ಯದ ಕೆಲಸವಾಗಿರುವದೆಂದು ಅವರು ನಿಶ್ಚಯಿಸಿದರು. ಅದಕ್ಕನುಸಾರವಾಗಿ ಮಧ್ಯಬಿಂದುವು ಗಟ್ಟಿಮುಟ್ಟಾದುದೂ, ಎಲ್ಲ ಬಗೆಯಿಂದ ಮನೋಹರವಾದುದೂ, ಆಕರ್ಷಕವಾದುದೂ ಆಗುವದು

ಆವಶ್ಯಕವಾಗಿತ್ತು. ಮೇಟಿಯು ಗಟ್ಟಿಯಾಗಿದ್ದರಲ್ಲವೇ ಹಂತಿಯು ಸರಿಯಾಗಿ ತಿರುಗುವದು ? ಮಹಾರಾಜರಿಗೆ ಚಿದಂಬರ ಭಕ್ತಿಯ ಬೀಜಗಳನ್ನು ಬಿತ್ತಿ, ಬೆಳೆಸಿ, ಒಕ್ಕಬೇಕಾಗಿತ್ತು. ಅದಕ್ಕಾಗಿ ಬೀಜದ ಕಾಳುಗಳನ್ನು ಸಂಗ್ರಹಿಸಿ, ಒತ್ತಟ್ಟಿಗಿಟ್ಟು, ಬೇಕಾದವರಿಗೆ ಅವುಗಳನ್ನು ಹಂಚುವದಕ್ಕಾಗಿಯೂ, ಬೆಳೆಗಳಿಗೆ ಬೇಕಾದ ಗೊಬ್ಬರವನ್ನು ಪೂರಯಿಸುವದಕ್ಕಾಗಿಯೂ, ಒಕ್ಕಲಿಕ್ಕೆ ಬೇಕಾಗುವ ಕಣವನ್ನು ಸಿದ್ಧಗೊಳಿಸುವದಕ್ಕಾಗಿಯೂ ಮಹಾರಾಜರು ಟೊಂಕಕಟ್ಟಬೇಕಾಗಿತ್ತು. ಈ ಕೆಲಸವನ್ನು ಚಿದಂಬರನು ತಾನಾಗಿಯೇ ಹೇಗೆ ಮಾಡಿಸಿಕೊಂಡನೆಂಬದು ಬಹು ಮನೋರಂಜಕವಾದ ಮಾತಾಗಿದೆ.

ಗುರ್ಲಹೊಸೂರ ಚಿದಂಬರೋತ್ಸವವು ಮುಗಿದ ಮೇಲೆ ಅವರು ತಮ್ಮ ಮೊದಲಿನ ವೇಳಾಪತ್ರಿಕೆಯಂತೆ ಮುರಗೋಡಿಗೆ ಹೋಗಬೇಕಾಗಿತ್ತು. ಆದರೆ ಆ ಮಾತು ಚಿದಂಬರನ ಮನಸ್ಸಿಗೆ ಬರಲಿಲ್ಲ. ಮುರಗೋಡ ಚಿದಂಬರೋತ್ಸವವು ಆ ಕಾಲಕ್ಕೆ ಒಳ್ಳೇ ವಿಜೃಂಭಣೆಯಿಂದಲೇ ನಡೆಯುತ್ತಿತ್ತು. ಅಲ್ಲಿ ಮಹಾರಾಜರ ಆವಶ್ಯಕತೆಯಿರಲಿಲ್ಲ. ಮಹಾರಾಜರು ಅಲ್ಲಿ ಕೈಹಾಕಿ ಏದನ್ನು ಸುಧಾರಿಸುವ ಅವಕಾಶವೂ ಇರಲಿಲ್ಲ. ಆದುದರಿಂದ ಚಿದಂಬರನ ಅಂತಃಪ್ರೇರಣೆಯಿಂದ ಮಹಾರಾಜರು ಗುರ್ಲಹೊಸೂರಲ್ಲಿಯೇ ಇರಲಾರಂಭಿಸಿದರು.

ಮಹಾರಾಜರು ವಾಸಮಾಡಿಕೊಂಡು ಇರಹತ್ತಿದಾಗಿನಿಂದ ರಾಜಾರಾಮನ ಮಠವು ಅಚ್ಚುಕಟ್ಟಾದ ಮಾರ್ಪಾಟನ್ನು ಹೊಂದಿತು. ಅದು ಎಲ್ಲ ತರದಿಂದ ಅಂದವಾಗಿ ತೋರಹತ್ತಿತು. ತೀರ ಮುರಕಳಿಯ ಸ್ಥಿತಿಗೆ ಬಂದು ಹಾಳು ಸುರಿಯುತ್ತಿದ್ದ ಆ ಕಟ್ಟಡವು ಈಗ ನಿಜವಾದ ಮಠವಾಗಿ ಪರಿಣಮಿಸಿತು. ಮಹಾರಾಜರಂಥವರ ಸತ್ಸಂಗದ ಪ್ರಭಾವವು ಆ ನಿರ್ಜೀವವಾದ ಕಟ್ಟಡದ ಮೇಲೂ ಸ್ಪಷ್ಟವಾಗಿ ಕಾಣಹತ್ತಿತು. ಅದು ಮಹಾರಾಜರಿಗೆ ತಪೋಭೂಮಿಯಾಗಿಯೂ ಭಕ್ತಜನರಿಗೆ ಪುಣ್ಯಸ್ಥಲವಾಗಿಯೂ ಮೆರೆಯಹತ್ತಿತು. ಅಲ್ಲಿಯ ವಾತಾವರಣದಲ್ಲೆಲ್ಲ ನವಚೈತನ್ಯವು ತುಂಬಿ ತುಳುಕಲಾರಂಭಿಸಿತು.

ಮಹಾರಾಜರು ದಿನಾಲೂ ಬ್ರಾಹ್ಮಮುಹೂರ್ತದಲ್ಲೆದ್ದು, ಪ್ರಾತರ್ವಿಧಿಗಳನ್ನು ತೀರಿಸಿಕೊಂಡು, ಮಲಾಪಹಾರಿಯ ಪವಿತ್ರವಾದ ನೀರಿನಲ್ಲಿ ಮಿಂದು ಸೂರ್ಯೋದಯವಾಗುವ ಪೂರ್ವದಲ್ಲಿಯೇ ಆಸನವನ್ನು ಹಾಕಿಕೊಂಡು ಕುಳಿತುಕೊಳ್ಳುವರು. ಮಧ್ಯಾಹ್ನದ ಹನ್ನೆರಡು ಗಂಟೆಯ ವರೆಗೂ ಯೋಗಾಭ್ಯಾಸ, ಜಪ, ಅನುಷ್ಠಾನ ಮತ್ತು ಧ್ಯಾನಗಳಲ್ಲಿ ವೇಳೆಯು ಹೋಗುವದು. ಆ ಮೇಲೆ ಮಧ್ಯಾಹ್ನದ ಸ್ನಾನ ತೀರಿಸಿಕೊಂಡು ಊರೊಳಗೆ ಭಿಕ್ಷೆಗಾಗಿ ಹೋಗುವರು. ಮೂರು ಅಥವಾ ಐದು ಮನೆಗಳಲ್ಲಿ ಭಿಕ್ಷಾನ್ನವನ್ನು ಹಾಕಿಸಿಕೊಂಡು ಬಂದು ಚಿದಂಬರನಿಗೆ ಸಮರ್ಪಣೆಮಾಡಿ ಊಟ ಮಾಡುವರು. ಊಟವಾದ ಮೇಲೆ ತುಸುಹೊತ್ತು ವಿಶ್ರಾಂತಿ. ಆ ಮೇಲೆ ಶ್ರೀಮದ್ಭಗವದ್ಗೀತೆಯ ಪಾರಾಯಣವು ನಡೆಯುವದು. ಇಳಿಹೊತ್ತಾದ ಮೇಲೆ ಪುರಾಣ ವಾಚನವು. ಸಂಜೆಯ ಐದು ಗಂಟೆಗೆ ದೇವರ ದರುಶನಕ್ಕಾಗಿ ಚಿದಂಬರನ ಗುಡಿಗೆ ಹೋಗಿಬರುವರು. ಸಾಯಂಕಾಲವಾಗುತ್ತಲೆ ಮತ್ತೆ ಸ್ನಾನಮಾಡಿ ತಮ್ಮ ನಿತ್ಯಾನುಷ್ಠಾನ ತೀರಿಸಿಕೊಳ್ಳುವರು. ಮುಂದೆ ಭಜನ, ಆರತಿ, ಮತ್ತು ನಾಮಸ್ಮರಣಗಳು ನಡೆಯುವವು. ಅದಾದ ಮೇಲೆ ಮಹಾರಾಜರು ಕೂಡಿದ ಜನರಿಗೆ ಉಪದೇಶಪರವಾದ ನಾಲ್ಕು ಮಾತುಗಳನ್ನು ಹೇಳುವರು. ಮುಖ್ಯವಾಗಿ ಚಿದಂಬರನ ಚರಿತ್ರೆಯನ್ನೂ ಸಾಧುಸಂತರ ಕಥೆಗಳನ್ನೂ ವರ್ಣಿಸಿ ಹೇಳುವರು. ಆದರೆ ಕಥೆಗಳ ಉದ್ದೇಶವು ಮನರಂಜನೆಯಾಗಿರಲಿಲ್ಲ. ನೀರಸವಾದ ವೇದಾಂತದ ತತ್ತ್ವಗಳನ್ನು ಕಥೆಗಳ ರೂಪದಿಂದ ಜನರಿಗೆ ಬೋಧಿಸಿ, ಅವರನ್ನು ಸನ್ಮಾರ್ಗಕ್ಕೆ ಹಚ್ಚುವದೇ ಅವುಗಳ ಉದ್ದೇಶವಾಗಿತ್ತು. ಇದರಿಂದ ಅಲ್ಲಿಗೆ ಬರುವ ಜನರ ಸಂಖ್ಯೆಯು ದಿನೇ ದಿನೇ ಬೆಳೆಯಹತ್ತಿತು. ಮತ್ತು ಸಕ್ಕರೆಗೆ ಇರಿವೆಗಳು ಮುಕುರುವಂತೆ ಜನರು ಮಹಾರಾಜರ ಸುತ್ತು ಗುಂಪುಗುಂಪಾಗಿ ಕೂಡಹತ್ತಿದರು ಇದರಿಂದ ಮಹಾರಾಜರಿಗೆ ಚಿದಂಬರ ಭಕ್ತಿಯ ಬೀಜಗಳನ್ನು ಸಹಜವಾಗಿ ಎಲ್ಲ ಕಡೆಗೂ ಬಿತ್ತಲಿಕ್ಕೆ ಅನುಕೂಲವಾಯಿತು.

ಹೀಗೆ ಮೂರು ನಾಲ್ಕು ತಿಂಗಳುಗಳು ಕಳೆದು ಹೋಗುವದರೊಳಗಾಗಿ ಗುರ್ಲಹೊಸೂರಲ್ಲಿ ಮಹಾಮಾರೀ ಬೇನೆಯು ಉದ್ಭವಿಸಿತು. ಆ ಬೇನೆಯು

ಆ ಕಾಲಕ್ಕೆ ಅಲ್ಲಿ ಕಾಣಿಸಿಕೊಳ್ಳಲಿಕ್ಕೆ ಸ್ವಾಭಾವಿಕವಾದ ಯಾವ ಕಾರಣಗಳೂ ಜನರಿಗೆ ಕಾಣಲಿಲ್ಲ. ಊರ ಜನರು ಸರಕಾರೀ ಅಧಿಕಾರಿಗಳ ಸಹಾಯದಿಂದ ಅದನ್ನು ಆಟೋಪಕ್ಕೆ ತರಬೇಕೆಂದು ಎಷ್ಟು ಯತ್ನ ಮಾಡಿದರೂ ಏನೂ ಉಪಯೋಗವಾಗಲಿಲ್ಲ. ಜೇನೆಯು ಬರಬರುತ್ತ ಉಗ್ರ ರೂಪವನ್ನು ತಾಳಹತ್ತಿತು. ಜೇನೆ ಬಂದವರಲ್ಲಿ ಬದುಕಿ ಉಳಿಯುವವರೇ ಇಲ್ಲದಂತಾದರು. ಜೇನೆಯು ಬಂತುಬಂತೆಂಬದರೊಳಗಾಗಿ ಜನರು ಪಟಪಟನೇ ಸಾಯಹತ್ತಿದರು. ತಮಗೆ ಸಾಧ್ಯವಿದ್ದ ಎಲ್ಲ ಭೌತಿಕ ಉಪಾಯಗಳೂ ಮುಗಿದ ಮೇಲೆ ಜನರ ದೃಷ್ಟಿಯು ಮಹಾರಾಜರ ಕಡೆಗೆ ಹೊರಳಿತು. ಒಂದು ದಿನ ಊರ ಪ್ರಮುಖರೆಲ್ಲ ಕೂಡಿ ಈ ವಿಷಯದಲ್ಲಿ ಮಹಾರಾಜರಿಗೆ ಶರಣುಹೋಗಬೇಕೆಂದೂ ಅವರು ಹೇಳಿದಂತೆ ಕೇಳಬೇಕೆಂದೂ ನಿಶ್ಚಯವಾಯಿತು.

ಆ ಪ್ರಕಾರ ಊರ ಹಿರಿಯಾಳುಗಳೆಲ್ಲ ಕೂಡಿಕೊಂಡು ಮರುದಿವಸ ರಾಜಾರಾಮನ ಮಠಕ್ಕೆ ಬಂದರು. ಎಲ್ಲರೂ ನಮಸ್ಕಾರ ಮಾಡಿ ಕುಳಿತ ಮೇಲೆ ಕುಶಲ ಪ್ರಶ್ನೆಗಳಾದವು. ಊರ ಪ್ರಮುಖರು ಎಲ್ಲ ಸಂಗತಿಗಳನ್ನೂ ವಿವರವಾಗಿ ತಿಳಿಸಿ, ಜೇನೆಯು ಶಾಂತವಾಗುವ ಮಾರ್ಗವನ್ನು ತೋರಿಸಬೇಕೆಂದು ಬೇಡಿಕೊಂಡರು. ಮಹಾರಾಜರು ಕೆಲಕಾಲ ಕಣ್ಣು ಮುಚ್ಚಿಕೊಂಡು ವಿಚಾರವಶರಾದವರಂತೆ ಕುಳಿತರು. ಆ ಮೇಲೆ ಅವರು ಕಣ್ಣು ತೆರೆದು ಮುಗುಳುನಗೆ ನಗುತ್ತ ಅಪ್ಪಣೆ ಕೊಡಿಸಿದರು:— "ಈ ಆಪತ್ತು ಭೌತಿಕವಾದುದಲ್ಲ. ಅದು ದೈವೀ ಕಾರಣದಿಂದ ಉಂಟಾಗಿದೆ. ಈ ಊರು ಶ್ರೀ ಬ್ರಹ್ಮಾನಂದ ಸ್ವಾಮಿಗಳವರದು. ಅವರೇ ಈ ಊರಿಗೆ ಒಡೆಯರು. ಈ ಊರ ಮೇಲೆ ಅವರ ಪ್ರೇಮಲೋಭಗಳೂ ವಿಶೇಷವಾಗಿವೆ. ಅವರು ಈ ಊರಲ್ಲಿ ಚಿದಂಬರನ ಗುಡಿಯನ್ನು ಕಟ್ಟಿಸಿ ಅನೇಕ ತರದಿಂದ ಲೋಕ ಕಲ್ಯಾಣದ ಕೆಲಸವನ್ನು ಮಾಡಿದ್ದಾರೆ. ಅವರು ದೇಹವಿಟ್ಟು ಇಂದಿಗೆ ೧೭—೧೮ ವರುಷಗಳಾದವು. ಆದರೂ ಅವರಿಗೆ ತಕ್ಕ ಮರ್ಯಾದೆ ತೋರಿಸುವ ಪ್ರಯತ್ನವನ್ನು ಇಲ್ಲಿಯ ವರೆಗೆ ಯಾರೂ ಮಾಡಿಲ್ಲ. ಅವರ ಸಮಾಧಿಯು ಅತ್ಯಂತ ಪವಿತ್ರವಾದ ಸ್ಥಾನವಾಗಿದ್ದು ಅದು ಇನ್ನೂ ವರೆಗೆ ಬಿಸಿಲು ಮಳೆಗಾಳಿಗಳಿಗೆ ತುತ್ತಾಗಿ ನಿಂತಿದೆ. ಅಲ್ಲಿ ಪಾದುಕೆಗಳನ್ನು ಸ್ಥಾಪಿಸಿ

ಅದರ ಮೇಲೆ ನೆರಳಾಗುವಂತೆ ಕಟ್ಟಡವನ್ನು ಕಟ್ಟಿಸಿ, ಅವರ ಪೂಜಾ—ಅರ್ಚನಾ-ಆರಾಧನೆಗಳನ್ನು ಮಾಡುವದು ನಿಮ್ಮ ಕರ್ತವ್ಯವಾಗಿದೆ. ಆದರೆ ನೀವು ಅವರನ್ನು ಸಂಪೂರ್ಣವಾಗಿ ಮರೆತುಬಿಟ್ಟಿರುವಿರಿ. ಅವರ ಕೃಪೆಯಿಂದಲೇ ನೀವಿಲ್ಲಿ ವಾಸವಾಗಿದ್ದು ಅವರನ್ನೇ ಮರೆತು ಬಿಟ್ಟಿರುವದರಿಂದ ಅವರ ಕೋಪಕ್ಕೆ ನೀವು ಪಾತ್ರರಾಗಿರುವಿರಿ. ರೋಗವು ನಾಮಶೇಷವಾಗಬೇಕೆಂದು ನಿಮ್ಮ ಇಚ್ಛೆಯಿದ್ದರೆ, ನೀವು ಅವರಿಗೆ ಪ್ರಾರ್ಥನೆ ಮಾಡಿಕೊಂಡು ಅವರ ಆಶೀರ್ವಾದವನ್ನು ಪಡೆಯಬೇಕು. ಮತ್ತು ಅವರ ಸಮಾಧಿ ಸ್ಥಳದ ಮೇಲೆ ಪಾದುಕೆಗಳನ್ನು ಕೂಡಿಸಿ, ಮೇಲೆ ಗುಡಿ ಕಟ್ಟುವೆವೆಂದು ಸಂಕಲ್ಪ ಮಾಡಬೇಕು. ಎಂದರೆ ಎಲ್ಲವೂ ಸರಿಯಾಗಬಹುದು.''

ಶ್ರೀಗಳವರ ಈ ಅಪ್ಪಣೆಯು ಎಲ್ಲರಿಗೂ ಮಾನ್ಯವಾಯಿತು. ತಮ್ಮ ಪರವಾಗಿ ಶ್ರೀಗಳವರೇ ಶ್ರೀ ಬ್ರಹ್ಮಾನಂದರಲ್ಲಿ ಪಂಚಾಯತಿಯನ್ನು ಮಾಡಬೇಕೆಂದು ಎಲ್ಲರೂ ಬೇಡಿಕೊಂಡರು. ಅದಕ್ಕೊಪ್ಪಿ ಮಹಾರಾಜರು ಎಲ್ಲರನ್ನೂ ಕೂಡಿಕೊಂಡು ಚಿದಂಬರನ ಗುಡಿಗೆ ಬಂದರು. ಮತ್ತು ಶ್ರೀ ಬ್ರಹ್ಮಾನಂದಸ್ವಾಮಿಗಳವರ ಸಮಾಧಿಯ ಮುಂದೆ ನಿಂತುಕೊಂಡು ಪ್ರಾರ್ಥನೆ ಮಾಡಿಕೊಂಡರು. ಕೂಡಿದ ಜನರು ಅಲ್ಲಿಂದಲೇ ತಮ್ಮ ಕೈಲಾದಷ್ಟು ಸಹಾಯ ಮಾಡುವೆವೆಂದು ವಾಗ್ದಾನ ಮಾಡಿದರು. ಕ್ಷಣಾರ್ಧದಲ್ಲಿ ಐವತ್ತು ರೂಪಾಯಿಗಳ ಆಶ್ವಾಸನ ದೊರೆಯಿತು. ಮರುದಿನವೇ ಬ್ರಹ್ಮಾನಂದರ ಸಮಾಧಿಯ ಕಟ್ಟಡವು ಸುರುವಾಯಿತು. ಎಲ್ಲ ಕೆಲಸವು ಮುಗಿಯಬೇಕಾದರೆ ೧೫೦—೨೦೦ ರೂಪಾಯಿಗಳಾದರೂ ವೆಚ್ಚವಾಗಿರಬಹುದು.

ಅಂದು ಮಹಾರಾಜರ ಮುಖಾಂತರವಾಗಿ ಶ್ರೀ ಬ್ರಹ್ಮಾನಂದರಿಗೆ ಬೇಡಿಕೊಂಡ ಮೇಲೆ ರೋಗವು ತತ್ಕಾಲಕ್ಕೆ ಹಿಮ್ಮೆಟ್ಟಿತು. ಆ ಕ್ಷಣದ ನಂತರ ಮಾರಿಕಾ ಬೇನೆಯು ಹೊಸದಾಗಿ ಯಾರಿಗೂ ಬರಲಿಲ್ಲ. ಇಷ್ಟೇ ಅಲ್ಲ; ಅಷ್ಟರೊಳಗಾಗಿ ಮಾರಿಕಾ ಬೇನೆಯಿಂದ ಮಲಗಿಕೊಂಡವರು ಕೂಡ ಅದರ ದವಡೆಯೊಳಗಿಂದ ಪಾರಾದರು. ಇದರಿಂದ ಜನರ ಮನಸ್ಸಿನೊಳಗೆ ದೇವರ ವಿಷಯಕವಾದ ಭಕ್ತಿಭಾವವು ಬೆಳೆಯಿತಲ್ಲದೆ, ಮಹಾರಾಜರ ಬಗ್ಗೆ ಹೆಚ್ಚಿಚ್ಚಾಗಿ ಪೂಜ್ಯಭಾವವೂ ಪ್ರೇಮ ವಿಶ್ವಾಸಗಳೂ ಹುಟ್ಟಿದವು.

ಅಂದಿನಿಂದ ಮಹಾರಾಜರು ಗುರ್ಲಹೊಸೂರ ಜನರಿಗೆ ಪ್ರತ್ಯಕ್ಷ ಚಿದಂಬರ ಸ್ವರೂಪರಾಗಿ ತೋರಹತ್ತಿದರೆ ಆಶ್ಚರ್ಯವಿಲ್ಲ.

ಹೀಗೆ ಚಿದಂಬರನ ಗುಡಿಯ ಪ್ರಾಕಾರದಲ್ಲಿ ಶ್ರೀ ಬ್ರಹ್ಮಾನಂದ ಸ್ವಾಮಿಗಳವರ ಸಮಾಧಿಯ ಕೆಲಸವು ಸುರುವಾದೊಡನೆ, ಮಹಾರಾಜರ ಮನಸ್ಸಿನಲ್ಲಿ ಗುಡಿಯ ಜೀರ್ಣೋದ್ಧಾರದ ವಿಚಾರವೂ ಸುಳಿದಾಡಹತ್ತಿತು. ಚಿದಂಬರನ ಗುಡಿಯು ತೀರ ಕೀಳುಸ್ಥಿತಿಗೆ ಬಂದಿತ್ತೆಂಬದನ್ನು ಈ ಮೊದಲೇ ವಾಚಕರಿಗೆ ತಿಳಿಸಿದ್ದೇವೆ. ಚಿದಂಬರ ಭಕ್ತಿಯ ಕೇಂದ್ರವಾಗಬೇಕಾದರೆ ಚಿದಂಬರನ ಗುಡಿಯು ಸುಂದರವಾಗಬೇಕಾದುದು ಎಲ್ಲಕ್ಕೂ ಮೊದಲನೆಯ ಕೆಲಸವು. ಆದರೆ ಗುಡಿಯ ಪರಿಸ್ಥಿತಿಯ ಮೇಲಿಂದ ವಿಚಾರ ಮಾಡಿದರೆ ಸುಧಾರಣೆ ಮಾಡಬೇಕಾದ ಕಾರ್ಯವು ಸಣ್ಣದಾಗಿದ್ದಿಲ್ಲ. ಮಹಾರಾಜರ ಮನಸ್ಸಿಗೆ ತಕ್ಕಂತೆ ಅದು ಮೂರ್ತಾಗಬೇಕಾದರೆ ಏನಿಲ್ಲೆಂದರೂ ೨೦–೨೫ ಸಾವಿರ ರೂಪಾಯಿಗಳಾದರೂ ಬೇಕೆನಿಸುವಂತಿತ್ತು. ಆದುದರಿಂದ ಮಹಾರಾಜರು ಯೋಚನೆಗೆ ಒಳಗಾದರು.

ನಮ್ಮ ಚರಿತ್ರನಾಯಕರೀಗ ತಮ್ಮ ಆಯುಷ್ಯದ ಅತಿಮುಖ್ಯವಾದ ಭಾಗಕ್ಕೆ ಬಂದಿದ್ದರು. ಅವರ ವಯಸ್ಸೀಗ ೩೫—೩೬. ಈ ಕಾಲವೆಂದರೆ ಮಾನವನ ಪ್ರೌಢಾವಸ್ಥೆಯ ಪ್ರಾರಂಭವೆಂದು ಹೇಳಬಹುದು. ಈ ವಯಸ್ಸಿಗೆ ಅವನ ಅಂಗಾಂಗಗಳೂ ಮನಸ್ಸೂ ಪೂರ್ಣವಾಗಿ ವಿಕಸಿತವಾಗಿರುತ್ತವೆ. ಮನುಷ್ಯನಲ್ಲಿ ಈ ಕಾಲಕ್ಕೆ ಅಪಾರವಾದ ಉತ್ಸಾಹವಿರುತ್ತದೆ; ಹುಮ್ಮಸವಿರುತ್ತದೆ; ಮಹತ್ತ್ವಾಕಾಂಕ್ಷೆ ಇರುತ್ತದೆ. ಬೇಕಾದ ಕೆಲಸವನ್ನು ಬೇಕಾದಷ್ಟು ವೇಳೆ ಮಾಡಿಯೂ ದಣಿಯದಿರುವ ಸಾಮರ್ಥ್ಯವು ದೇಹ ಮನಸ್ಸುಗಳಿಗಿರುತ್ತದೆ. ಒಟ್ಟಿನ ಮೇಲೆ ಈ ವಯಸ್ಸಿನಲ್ಲಿ ಕೈಕೊಂಡ ಕಾರ್ಯವು ಸಹಜವಾಗಿ ಸಿದ್ಧಿಗೆ ಹೋಗುವಂತಿರುತ್ತದೆ.

ಮಹಾರಾಜರ ಪೂರ್ವಾಯುಷ್ಯವೆಲ್ಲ ಅವರ ಉತ್ತರಾಯುಷ್ಯದ ಸಿದ್ಧತೆಯಲ್ಲಿಯೇ ಕಳೆಯಿತೆಂದು ನಾವು ಹಿಂದೊಂದು ಸಲ ಹೇಳಿದ್ದೇವೆ. ಅವರ ಕಡೆಯಿಂದ ಮಾಡಿಸಬೇಕಾದ ಈಶಸೇವೆ ಮತ್ತು ಲೋಕಸೇವೆಗಳಿಗಾಗಿ ಚಿದಂಬರನೇ ಅವರಿಗೆ ಶಿಕ್ಷಣ ಕೊಡುತ್ತ ಬಂದಿದ್ದನು. ಆ ಶಿಕ್ಷಣವೀಗ

ಪೂರ್ಣ ಮುಗಿದಿತ್ತು. ಅವರು ಈ ಮೊದಲೇ ಅಧ್ಯಾತ್ಮ ಅಥವಾ ಪರಮಾರ್ಥದ ಆಧಾರದ ಮೇಲೆ ಸಂತ ಲೋಕಕಲ್ಯಾಣ— ಲೋಕಸಂಗ್ರಹಗಳ ಪಾಠವನ್ನು ಶ್ರೀ ಸಮರ್ಥ ರಾಮದಾಸರ ದಾಸಬೋಧದಿಂದ ಚನ್ನಾಗಿ ಅರಿತುಕೊಂಡಿದ್ದರು. ಅವರು ಅಲ್ಲಿ ಓದಿದ ಜ್ಞಾನವು ತಾತ್ತ್ವಿಕವಾಗಿತ್ತು. ಈಗ ಅದನ್ನೇ ಪ್ರತ್ಯಕ್ಷವಾಗಿ ಕೃತಿಯಲ್ಲಿಳಿಸಿ ಪ್ರಯೋಗ ಮಾಡುವ ವೇಳೆ ಬಂತು. ಅವರು ೧೦—೧೨ ವರುಷಗಳ ವರೆಗೆ ಪ್ರಪಂಚ ಮಾಡಿ ಲೌಕಿಕದ ಅನುಭವವನ್ನೂ ಸರಿಯಾಗಿ ಪಡೆದುಕೊಂಡಿದ್ದರು. ಸಂನ್ಯಾಸವನ್ನಂತೂ ಸ್ವೀಕರಿಸಿ ಆಚರಣೆಯನ್ನೂ ಮಾಡುತ್ತಿದ್ದರು ಅಪರೀಗ ದೇವರ ಕೃಪೆಗೂ ಗುರುಗಳ ಕೃಪೆಗೂ ಪೂರ್ಣವಾಗಿ ಪಾತ್ರರಾಗಿದ್ದರು. ಅವರು ಗುರುಗಳ ಮುಖದಿಂದ ವೇದಾಂತ ಶ್ರವಣವನ್ನೂ ಸಾಧನವನ್ನೂ ಮಾಡಿ ಮುಗಿಸಿ ಸಿದ್ಧಪುರುಷರಾಗಿದ್ದರು. ಅವರ ಅಧ್ಯಾತ್ಮ ಸಾಧನವು ಕೊನೆಗಂಡಿತ್ತು. ಅವರಿಗೆ ಸಿಕ್ಕಬೇಕಾದುದೆಲ್ಲ ಸಿಕ್ಕಿತ್ತು. ಅವರೀಗ "ಶಾಬ್ದೇ ಪರೇಚ ನಿಷ್ಣಾತ"ರಾಗಿ ಧರ್ಮ ಅಧ್ಯಾತ್ಮ ಮತ್ತು ಭಕ್ತಿಗಳ ಪಾಠಶಾಲೆಯನ್ನು ತೆಗೆಯಲಿಕ್ಕೆ ಸರ್ವಥೈವಯೋಗ್ಯರಾಗಿದ್ದರು.

ಜನರೊಳಗೀಗ ಚಿದಂಬರ ಭಕ್ತಿಯನ್ನು ಹರಡಬೇಕಾಗಿತ್ತು. ಚಿದಂಬರನ ನಾಮಮಹಾತ್ಮ್ಯವನ್ನು ಹಬ್ಬಿಸಬೇಕಾಗಿತ್ತು. ಚಿದಂಬರ ಚರಿತ್ರೆಯನ್ನು ಪ್ರಸಾರ ಮಾಡಬೇಕಾಗಿತ್ತು. ಚಿದಂಬರ ಸಂಪ್ರದಾಯಕ್ಕೆ ವ್ಯವಸ್ಥಿತವಾದ ರೂಪವನ್ನು ಕೊಡಬೇಕಾಗಿತ್ತು. ಕೇವಲ ತಮ್ಮ ಅಜ್ಞಾನದಿಂದಲೇ ಅಡ್ಡದಾರಿಯನ್ನು ಹಿಡಿದು ದುಃಖಬಡುತ್ತಿರುವ ಜನರಿಗೆ ಸನ್ಮಾರ್ಗವನ್ನು ತೋರಿಸಿ ಸಮಾಧಾನಗೊಳಿಸಬೇಕಾಗಿತ್ತು. ಪರಮಾರ್ಥಕ್ಕೆ ವಿರೋಧ ಬರದಂತೆ ಪ್ರಪಂಚವನ್ನು ಎಲ್ಲರಿಗೂ ಸುಖವಾಗುವ ಹಾಗೆ ಮಾಡುವ ಕೌಶಲ್ಯವನ್ನು ಜನರಿಗೆ ತಿಳಿಸಿಕೊಡಬೇಕಾಗಿತ್ತು. ಇಹಪರಗಳೆರಡೂ ಸಾಧಿಸುವಂತೆ ಪ್ರಪಂಚ-ಪರಮಾರ್ಥಗಳೆರಡಕ್ಕೂ ಸುಲಭವಾಗಿ ಮೇಳ ಹಾಕುವ ಹತೋಟಿಯನ್ನು ಜನರಿಗೆ ಬೋಧಿಸಬೇಕಾಗಿತ್ತು. ಪರಮಾರ್ಥದ ಹಸಿವೆಯಿದ್ದರೂ ಸರಿಯಾದ ಮಾರ್ಗವನ್ನು ಕಾಣದೆ ತೊಳಲುತ್ತಿರುವ ಸಾಧಕರಿಗೆ ನೇರಾದ ಸಾಧನಗಳನ್ನು ಹೇಳಿಕೊಡಬೇಕಾಗಿತ್ತು. ನಿಜವಾದ ಮುಮುಕ್ಷುಗಳಿಗೆ ಮೋಕ್ಷ ಮಾರ್ಗವನ್ನು ಸೂರೆ ಮಾಡಬೇಕಾಗಿತ್ತು.

ಜನ್ಮಾಂತರದಲ್ಲಿ ಇವರ ಸೇವೆಮಾಡಿದ ಪುಣ್ಯವಂತರನ್ನೀಗ ಶಿಷ್ಯರೆಂದು ಸ್ವೀಕರಿಸಿ ಅನುಗ್ರಹ ಮಾಡಬೇಕಾಗಿತ್ತು. ಇವರ ಸೇವೆ ಮಾಡಿ ಧನ್ಯತೆಯನ್ನು ಪಡೆಯಲಿಕ್ಕೆಸುವ ಭಾವಿಕರಿಗೆ ಹಾಗೆ ಮಾಡಲಿಕ್ಕೆ ಅವಕಾಶವನ್ನೊದಗಿಸಿ ಕೊಡಬೇಕಾಗಿತ್ತು. ಎಲ್ಲ ರೀತಿಯಿಂದಲೂ ತಮ್ಮನ್ನೇ ಆಶ್ರಯಿಸಿದವರಿಗೆ ಅವರವರ ಭಾವದಂತೆ ಉಪಾಸ್ಯನಾಗಿ, ತಂದೆಯಾಗಿ, ತಾಯಿಯಾಗಿ, ಆಶ್ರಯಸ್ಥಾನವಾಗಿ, ಒಡೆಯನಾಗಿ, ಗೆಳೆಯನಾಗಿ ಲೀಲಾವಿಹಾರ ಮಾಡಬೇಕಾಗಿತ್ತು. ಸಾರಾಂಶವೇನೆಂದರೆ—ಇಲ್ಲಿಯ ವರೆಗೆ ಚಿದಂಬರನ ಶಾಲೆಯಲ್ಲಿ ಕಲಿತು ಪಡಕೊಂಡ ತಮ್ಮ ಎಲ್ಲ ಕೌಶಲ್ಯವನ್ನೂ ಉಪಯೋಗಿಸಿ ತಮ್ಮ ಜೀವನದ ನಾಟಕವನ್ನಾಡಿ ತೋರಿಸಬೇಕಾದ ಕಾಲವೀಗ ಮಹಾರಾಜರಿಗೆ ಬಂದಿತ್ತು.

ನಮ್ಮ ಚರಿತ್ರನಾಯಕರು ಇದೆಲ್ಲಕ್ಕೂ ಸಿದ್ಧರಾದರು. ಚನ್ನಾಗಿ ಅಭ್ಯಾಸ ಮಾಡಿದ ವಿದ್ಯಾರ್ಥಿಗೆ ಪರೀಕ್ಷೆಯೆಂದರೆ ಒಂದು ಸಂಭ್ರಮವಲ್ಲವೇ? ಏನು ಬೇಕಾದ್ದಾದರೂ ಸರಿ, ಚಿದಂಬರ ದೇವಾಲಯವ ಜೀರ್ಣೋದ್ಧಾರವನ್ನ ಮಾಡಿಯೇ ಬಿಡಬೇಕೆಂದು ಮಹಾರಾಜರು ನಿಶ್ಚಯಿಸಿದರು. ಈಷ್ಟರಲ್ಲಿ ದೊಡ್ಡವಾಡದೊಳಗಿನ ಅವರ ಭಕ್ತರು, ಆ ಸಲದ (ಶಾ. ಶ. ೧೮೧೧) ಚಾತುರ್ಮಾಸ್ಯಕ್ಕೆ ತಮ್ಮಲ್ಲಿಗೆ ಬರಬೇಕೆಂದು ಆಗ್ರಹ ಪಡಿಸಿದ್ದರಿಂದ ಮಹಾರಾಜರು ಅಲ್ಲಿಗೆ ಹೋಗಬೇಕಾಯಿತು.

ದೊಡ್ಡವಾಡದೊಳಗೆ ಚಿದಂಬರನ ಭಕ್ತಜನರು ವಿಶೇಷವಾಗಿದ್ದರು. ಚಿದಂಬರನ ಉತ್ಸವಕ್ಕೆ ಆ ಊರ ಮಾನದಿಂದ ಧನಸಹಾಯವಾದರೂ ಒಳಿತಾಗಿ ಆಗುತ್ತಿತ್ತು. ಅಲ್ಲಿಯ ಜನರೊಳಗೆ ಬಹುಜನ ಸಮುದಾಯವು ಚಿದಂಬರನ ಉತ್ಸವಕ್ಕೆ ಪ್ರತಿವರುಷ ತಪ್ಪದೇ ಬರುತ್ತಿತ್ತು. ರಾಜಾರಾಮ ಗುದ್ಯೋ ಪಾಟೀಲರೆಂಬವರು ಇಲ್ಲಿಯವರೇ ಆಗಿದ್ದು ಅವರು ಅನೇಕ ವರುಷಗಳಿಂದ ಚಿದಂಬರನ ಉತ್ಸವದಲ್ಲಿ ಮುಖ್ಯ ಭಾಗವನ್ನು ವಹಿಸುತ್ತ ಬಂದಿದ್ದರು. ಅದರಂತೆಯೇ ಪಾಟೀಲ ನಾರಣಪ್ಪನವರೂ, ನವಲಗುಂದ ತೀರ್ಥಪ್ಪನವರೂ ಚಿದಂಬರ ಭಕ್ತರಾಗಿ, ಮಹಾರಾಜರ ಶಿಷ್ಯರಾಗಿದ್ದರು. ಇವೆಲ್ಲ ಕಾರಣಗಳಿಂದ ಮಹಾರಾಜರು ಆ ಸಲದ ಚಾತುರ್ಮಾಸ್ಯವನ್ನು ದೊಡ್ಡವಾಡದಲ್ಲಿಯೇ ಕಳೆಯಬೇಕೆಂದು ನಿರ್ಣಯಿಸಿದರು.

ಚಾತುರ್ಮಾಸ್ಯದೊಳಗೆ ಮಹಾರಾಜರ ದೈನಂದಿನ ಕಾರ್ಯಕ್ರಮವು ನಿಯಮಿತವಾದುದೂ ಲೋಕೋಪಕಾರಕವಾದುದೂ ಆಗಿರುತ್ತಿತ್ತು. ಆದರೆ ಆ ವಿಷಯವು ಬೇರೊಂದು ಪ್ರಕರಣದಲ್ಲಿ ಬರುವದರಿಂದ ಅದನ್ನಿಲ್ಲಿ ವಿವರಿಸುತ್ತ ಕೂಡುವದಿಲ್ಲ. ಹೊಡ್ಡಮಾಡದೊಳಗೆ ಮಹಾರಾಜರು ಆ ವರುಷ ಮಾಡಿದ ಒಂದೆರಡು ಸಂಸ್ಮರಣೀಯ ಸಂಗತಿಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಿ ಮುಂದಿನ ವಿಷಯದ ಕಡೆಗೆ ಹೊರಳುವೆವು

ಮಹಾರಾಜರು ಇಲ್ಲಿದ್ದಾಗ ಮುಷ್ಟಿಭಿಂಡಿನ ಉಪಕ್ರಮವನ್ನು ಹೊಸದಾಗಿ ಸುರುವು ಮಾಡಿದರು ಪ್ರತಿದಿವಸ ಪ್ರತಿಯೊಬ್ಬ ಕುಟುಂಬದವರು ಒಂದು ಮುಷ್ಟಿ ಕಾಳನ್ನು ತೆಗೆದಿಡಬೇಕೆಂಬುದೇ ಇದರ ಅರ್ಥವು. ಜನರಿಗೆ ಭಾರವೆನಿಸದಂತೆ ಅವರ ಕಡೆಯಿಂದ ಸಹಾಯ ತಕ್ಕೊಂಡು, ಸಾರ್ವಜನಿಕ ಕೆಲಸಗಳನ್ನು ಮಾಡಿ, ಎಲ್ಲರಿಗೂ ಉಪಯೋಗವಾಗುವಂತೆ ಮಾಡುವದಲ್ಲದೆ ಎಲ್ಲರನ್ನೂ ಪುಣ್ಯಭಾಗಿಗಳನ್ನಾಗಿ ಮಾಡಬೇಕೆಂಬುದು ಇದರ ಉದ್ದೇಶವಾಗಿತ್ತು. ಇದರ ನೆರಲಿಂದ ಮಹಾರಾಜರು ಲೋಕಸಂಗ್ರಹ ಮಾಡುವದರಲ್ಲಿ ಎಷ್ಟು ಜಾಗರೂಕರಾಗಿರುತ್ತಿದ್ದರೆಂಬುದು ತಿಳಿಯುವಂತಿದೆ. ಇರಲಿ. ಈ ಉಪಕ್ರಮದಿಂದ ಅಲ್ಲಿ ನೂರಾರು ರೂಪಾಯಿಗಳು ಸಹಜವಾಗಿ ಕೂಡಿದವು ಆ ಹಣದಿಂದ ಅದೇ ಊರಲ್ಲಿದ್ದ ಮಾರುತಿ ದೇವಾಲಯದ ಜೀರ್ಣೋದ್ಧಾರದ ಕೆಲಸವು ಕೊನೆಗೊಂಡಿತು.

ಇದೇ ಚಾತುರ್ಮಾಸ್ಯದಲ್ಲಿ ಮಹಾರಾಜರು ಅಲ್ಲಿ ಇನ್ನೊಂದು ಚಮತ್ಕಾರ ಮಾಡಿ ತೋರಿಸಿದರು. ಮಹಾರಾಜರಿಗೆ ದಿನಾಲು ಆಕಳ ಹಾಲು ಬೇಕಾಗುತ್ತಿತ್ತು. ಆದುದರಿಂದ ಅವರ ಶಿಷ್ಯರು ಆ ಬಗ್ಗೆ ವಿಚಾರಣೆ ನಡೆಸಿದರು ಆಗ ಮಹಾರಾಜರ ಶಿಷ್ಯರಾದ ಘೋಂಡಭಟ್ಟ ಜೋಶಿ ಎಂಬವರಲ್ಲಿ ಆಕಳವಿರುವದೆಂದು ಗೊತ್ತಾಯಿತು. ಆ ಪ್ರಕಾರ ಘೋಂಡಭಟ್ಟ ಜೋಶಿಯವರಿಗೆ ಹೇಳಿ ಕಳಿಸಲು ಅವರು ಬಂದು ಮಹಾರಾಜರ ಮುಂದೆ ಕೈ ಜೋಡಿಸಿ ನಿಂತುಕೊಂಡರು. "ನಾವಿಲ್ಲಿ ಇರುವ ವರೆಗೆ ನೀವು ನಮಗೆ ದಿನಾಲೂ ಆಕಳ ಹಾಲು ಕೊಡಬೇಕು" ಎಂದು ಮಹಾರಾಜರು ಆಜ್ಞೆಮಾಡಿದರು. ಆಗ ಘೋಂಡಭಟ್ಟರು ದುಃಖಿತರಾಗಿ ಕಣ್ಣೀರು ಚಲ್ಲುತ್ತ

ಆರಿಕೆ ಮಾಡಿಕೊಂಡರು:— "ಮಹಾರಾಜ, ತಮ್ಮಂಥವರಿಗೆ ಹಾಲು ಪೂರೈಸಿ ಪುಣ್ಯಪಡಕೊಳ್ಳುವ ಭಾಗ್ಯವು ನನಗೆಲ್ಲಿಂದ ಬರಬೇಕು ? ನನ್ನಲ್ಲಿ ಆಕಳು ಇಹುವ ಸಂಗತಿಯೇನೋ ಸತ್ಯ. ಆದರೆ ಇದು ಒದ್ದುಕೊಂಡು ಎರಡು ತಿಂಗಳುಗಳಾದವು. ಅದು ಕೆಚ್ಚಲೊಳಗೆ ಕೈಯನ್ನೂ ಕೂಡ ಹಾಕಗೊಡುವದಿಲ್ಲ. ಏನು ಮಾಡಲಿ ?"

ಮಹಾರಾಜರು ಮುಗುಳುನಗೆ ನಕ್ಕು ಹೇಳಿದರು:— "ಏನು, ಧೋಂಡಭಟ್ಟರೇ, ಅದಕ್ಕೇಕಿಷ್ಟು ಚಿಂತೆ ? ನಮಗೆ ಹಾಲು ಜೇಕಾಗಿದೆ. ನಿಮಗೆ ಹಾಲು ಕೊಡುವ ಆತುರತೆಯಿದೆ. ಎಂದ ಮೇಲೆ ನಿಮ್ಮ ಗೋಮಾತೆಯು ಹಾಲು ಕೊಡದಿರುವಳೇ ? ನೋಡಿರಿ ಚಿದಂಬರನ ಹೆಸರಿನಿಂದ ಪ್ರಯತ್ನವನ್ನಾದರೂ ಮಾಡಿ ನೋಡಿರಿ."

ಇದರಿಂದ ಧೋಂಡಭಟ್ಟರು ಉತ್ತೇಜಿತರಾಗಿ "ಹಾಗೇ ಆಗಲಿ, ಸ್ವಾಮೀ, ಎಲ್ಲವೂ ತಮ್ಮ ಕೃಪೆ" ಎಂದು ಹೇಳಿ ಮನೆಗೆ ಹೋದರು. ಮತ್ತು ಮಹಾರಾಜರ ಅಪ್ಪಣೆಯಂತೆ ಆ ದಿನ ತಮ್ಮ ಆಕಳ ಕೆಚ್ಚಲಲ್ಲಿ ಕೈಹಾಕಲು ಅದು ಮಹಾರಾಜರಿಗೆ ಬೇಕಾಗುವಷ್ಟು ಹಾಲನ್ನು ಸುಮ್ಮನೆ ಹಿಂಡಿತು. ಮುಂದೆ ಸಹ ಮಹಾರಾಜರು ಅಲ್ಲಿ ಇರುವ ವರಗೂ ಆ ಆಕಳು ಪ್ರತಿನಿತ್ಯ ಸಾಕಾಗುವಷ್ಟು ಹಾಲನ್ನು ಕೊಡುತ್ತಿತ್ತು. ಆದರೆ ಮಹಾರಾಜರು ದೊಡ್ಡವಾಡವನ್ನು ಬಿಟ್ಟೊಡನೆ ಅದು ಮತ್ತೆ ಮೊದಲಿನಂತೆ ಬರಡಾಗಿ ಬಿಟ್ಟಿತು. ವಾಚಕರೇ, ಸತ್ಪುರುಷರ ಮಹಿಮೆಯು ಅಗಾಧವಲ್ಲವೇ ?

ಮಹಾರಾಜರು ದೊಡ್ಡವಾಡದಿಂದ ತಿರುಗಿ ಗುರ್ಲಹೊಸೂರಿಗೆ ಬಂದೊಡನೆ ಚಿದಂಬರ ದೇವಾಲಯದ ಜೀರ್ಣೋದ್ಧಾರದ ಕೆಲಸವನ್ನು ಕೈಕೊಂಡರು. ಎಲ್ಲ ಭಕ್ತಜನರೂ ಈ ಕಾರ್ಯದಲ್ಲಿ ಮಹಾರಾಜರಿಗೆ ಮಿತಿಮೀರಿ ಸಹಾಯ ಮಾಡಿದರು. ಮುರಗೋಡದ ಶ್ರೀ ಮಾಟೊಳ್ಳಿ ಲಿಂಗಪ್ಪನವರು ಎಲ್ಲಕ್ಕೂ ಮೊದಲು ಮುಂದಾಗಿ ೬೦ ರೂಪಾಯಿಗಳನ್ನು ಕೊಟ್ಟೊಡನೆ ಕಾರ್ಯವು ಪ್ರಾರಂಭವಾಯಿತು. ಶಾ. ಶ. ೧೮೧೫ನೆಯ ವರುಷದ ವೈಶಾಖ ಶುದ್ಧ ಪಂಚಮಿಯ ದಿನ ಮಹಾರಾಜರು ಜೀರ್ಣೋದ್ಧಾರವನ್ನು ಸುರುವು ಮಾಡಿದರು. ಸರ್ವಸಂಗ ಪರಿತ್ಯಾಗ ಮಾಡಿ ಯತಿಗಳಾದ

ಮಹಾರಾಜರು ಸ್ವತಃ ಟೊಂಕಕಟ್ಟಿಕೊಂಡು ಜೀರ್ಣೋದ್ಧಾರದ ಸ್ಮತಿಯೊಂದು ವಿಷಯದಲ್ಲಿ ಮನಸ್ಸು ಹಾಕಿ ದುಡಿಯಹತ್ತಿದರು. ಬೇಕಾದಾಗ ಶಾರೀರಿಕ ಶ್ರಮವನ್ನೂ ಸಹ ವಹಿಸಲಿಕ್ಕೆ ಅವರು ಹಿಂದುಮುಂದಾಗುತ್ತಿದ್ದಿಲ್ಲ. ಮಹಾರಾಜರು ಒಮ್ಮೊಮ್ಮೆ ತಾವೇ ಸ್ವತಃ ಗಚ್ಚಿನ ಹಾಗೂ ಮಣ್ಣಿನ ಬುಟ್ಟಿಗಳನ್ನು ಎತ್ತಿಕೊಡುತ್ತಿದ್ದರು. ಕೈಯಲ್ಲಿ ಕುಡಗೋಲು ಹಿಡಿದುಕೊಂಡು ಮುಳಗಳ್ಳಿಯನ್ನೂ ಉಳಿದ ಗಿಡಗಂಟಿಗಳನ್ನೂ ತುಂಡರಿಸಿ ಜೆಲ್ಲುತ್ತಿದ್ದರು. ಅವಶ್ಯವೆನಿಸಿದಾಗ ಗಾಣದ ಎತ್ತುಗಳನ್ನೂ ಹಿಂಬಾಲಿಸುತ್ತಿದ್ದರು. ಒಂದೊಂದು ಸಲ ಮಹಾರಾಜರು ನೀರನ್ನೂ ಕೂಡ ತಂದು ಕೊಡುತ್ತಿದ್ದರು. ಸಾರಾಂಶವೇನಂದರೆ— ''ನಿರ್ಲಜ್ಜೋ ಗುರುಸನ್ನಿಧೌ'' ಎಂಬ ಗುರುಗೀತೆಯ ಮಾತನ್ನು ಮಹಾರಾಜರು ಅಗ ಅಕ್ಷರಶಃ ಪಾಲಿಸಿದರು.

ಜೀರ್ಣೋದ್ಧಾರದ ಕೆಲಸವು ಪ್ರಾರಂಭವಾದೊಡನೆ ಒಂದೆರಡು ಚಮತ್ಕಾರಗಳೂ ಆದವು. ಮಹಾರಾಜರು ಕೈಕೊಂಡ ಕೆಲಸವು ಚಿದಂಬರನ ಮನಸ್ಸಿಗೆ ಸಂಪೂರ್ಣವಾಗಿ ಬಂದಿತು, ಅದು ಹೆಚ್ಚೆಚ್ಚು ಉತ್ಕರ್ಷವನ್ನು ಹೊಂದುತ್ತ ಹೋಗುವದು—ಎಂಬದನ್ನು ಹೇಳಿಕೊಡುವ ಶುಭ ಶಕುನಗಳೇ ಅವು ಅಹುದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ದಿನಾಲೂ ಸಂಜೆಯ ಮುಂದೆ ಮಹಾರಾಜರು ಕೈಯಲ್ಲಿ ಜಪಮಾಲೆಯನ್ನು ತಕ್ಕೊಂಡು ನಾಮಸ್ಮರಣೆ ಮಾಡುತ್ತ ಗುಡಿಗೆ ಪ್ರದಕ್ಷಿಣೆ ಹಾಕುವ ಪರಿಪಾಠವಿತ್ತು. ಆ ಕಾಲಕ್ಕೆ ನೂರಾರು ಜನ ಭಕ್ತರು ಅವರ ಜೊತ್ತು ಹತ್ತಿ ನಾಮಸ್ಮರಣೆ ಮಾಡುತ್ತಿದ್ದರು. ಮಹಾರಾಜರು ಹೀಗೆ ಪ್ರದಕ್ಷಿಣೆ ಮಾಡಹತ್ತಿದೊಡನೆ ಒಂದು ನಯನಮನೋಹರವಾದ ದೊಡ್ಡ ನವಿಲು ಗುಡಿಗೆ ಬರಲಾರಂಭಿಸಿತು. ಅದು ಎಲ್ಲಕ್ಕಿಂತ ಮೊದಲು ಆವಾರದ ಗೋಡೆಯ ಮೇಲೆ ಕೂಡುವದು. ಆ ಮೇಲೆ ಅದು ಮೆಲ್ಲಮೆಲ್ಲನೆ ಕೆಳಗೆ ಪ್ರಾಕಾರದೊಳಗೆ ಇಳಿದು, ಅತ್ತಿತ್ತ ಚಿನ್ನಾಟವಾಡಿ, ಗರ್ಭಗುಡಿಯ ಮೇಲಕ್ಕೆ ಹಾರುವದು. ಅಲ್ಲಿಂದ ಮುಂದೆ ಅದು ದೇವಾಲಯದ ಎತ್ತರವಾದ ಶಿಖರದ ಮೇಲೆ ಕೆಲ ಹೊತ್ತು ಕುಳಿತು, ತಿರುಗಿ ತನ್ನ ವಾಸಸ್ಥಳಕ್ಕೆ ಹಾರಿ ಹೋಗುವದು. ನವಿಲಿನ ಈ ಕ್ರಮವು ಅಖಂಡವಾಗಿ ಹನ್ನೆರಡು ವರುಷಗಳ ವರೆಗೆ ನಡೆಯಿತು!

ಇನ್ನೊಂದು ಪ್ರಸಂಗದಲ್ಲಿ ಇದೇ ತರದ ಬೇರೊಂದು ದೈವೀ ಘಟನೆಯು ಸಂಭವಿಸಿತು. ಜೀರ್ಣೋದ್ಧಾರದ ಕೆಲಸವು ನಡೆದಿರುವಾಗ ಗಚ್ಚಿನ ಗಾಣಗಳು ಎಷ್ಟೋ ಸಾರೆ ರಾತ್ರಿಯಲ್ಲಿಯೂ ತಿರುಗುತ್ತಿದ್ದವು. ಒಂದು ದಿನ ರಾತ್ರಿ ಮಹಾರಾಜರು ಶ್ರೀ ಬ್ರಹ್ಮಾನಂದ ಸ್ವಾಮಿಗಳ ಸಮಾಧಿಯ ಎದುರಿಗಿರುವ ಬೇವಿನ ಗಿಡದ ಕೆಳಗೆ ಮಲಗಿದ್ದರು. ಗಾಣದವನು ಎತ್ತುಗಳನ್ನು ಹೊಡೆಯುತ್ತಿದ್ದನು. ಮಧ್ಯರಾತ್ರಿಯ ಹೊತ್ತಿಗೆ ಶ್ರೀ ಬ್ರಹ್ಮಾನಂದರ ಗುಡಿಯಲ್ಲಿ ಝಗ್ಗನೇ ಮಿಂಚಿನಂತಹ ಪ್ರಕಾಶವು ಕಾಣಹತ್ತಿತು. ಗಾಣ ಹೊಡೆಯುವವನ ಕಣ್ಣು ಕುಕ್ಕಿದವು. ಅವನಿಗೆ ಅದನ್ನು ನೋಡುವದು ಅಸಾಧ್ಯವಾಯಿತು ಕವನು ಚಿಟ್ಟನೇ ಚೀರಿ, ಧೊಪ್ಪನೇ ನೆಲಕ್ಕೆ ಬೀಳಲು ಮೂರ್ಛಿತನಾದನು. ಮಹಾರಾಜರು ಈ ಗೊಂದಲದಿಂದ ಎಚ್ಚರಾಗಿ ನೋಡಿದರು. ಗುಡಿಯೊಳಗಿನ ಪ್ರಕಾಶವು ಇನ್ನೂ ಕಾಣುತ್ತಲೇ ಇತ್ತು. ಆದರೆ ಅದರಿಂದ ಅವರು ಅಂಜದೇ ಆನಂದಿತರಾದರು. ಅವರು ಲಗುಬಗೆಯಿಂದ ಗಾಣದವನನ್ನೆಬ್ಬಿಸಿ ಅವನ ಮೂರ್ಛೆಯ ಕಾರಣವನ್ನು ಕೇಳಿದರು. ಅವನು ತನಗಾದ ಎಲ್ಲ ಸಂಗತಿಯನ್ನೂ ವಿವರಿಸಿ ಹೇಳಿದನು. ಆಗ ಮಹಾರಾಜರು ಅವನನ್ನು ಸಂತೈಸುತ್ತ ಹೇಳಿದರು: – ''ಇದು ನಿಮ್ಮ ಉತ್ಕರುಷದ ಕಾಲವು. ಆದುದರಿಂದಲೇ ಇಂಥ ಶುಭಶಕುನಗಳು ತೋರಹತ್ತಿವೆ. ಇವುಗಳಿಗೆ ಯಾರೂ ಹೆದರುವ ಕಾರಣವಿಲ್ಲ. ನೀನು ನಿನ್ನ ಕೆಲಸವನು ಸಮಾಧಾನದಿಂದ ಮಾಡುತ್ತ ಹೋಗು.''

ತಾವು ಕೈಕೊಂಡ ಕಾರ್ಯವು ಬಹು ದೊಡ್ಡದಾದುದರಿಂದ ಗುರ್ಲಹೊಸೂರಲ್ಲಿಯೇ ಕುಳಿತರೆ ಕೆಲಸವಾಗಲಾರದೆಂದು ಮಹಾರಾಜರು ನಿಶ್ಚಯಿಸಿದರು. ಆದುದರಿಂದ ಅವರು ಕೆಲಜನ ಶಿಷ್ಯರನ್ನು ಕರಕೊಂಡು ಸಂಚಾರಕ್ಕಾಗಿ ಹೊರಟರು ಅವರು ಬಯಸಿದ್ದರೆ, ಒಬ್ಬಿಬ್ಬರ ಕಡೆಯಿಂದಲೇ ಅವರಿಗೆ ಬೇಕಾಗುವಷ್ಟು ಹಣ ದೊರೆಯಬಹುದಾಗಿತ್ತು. ಆದರೆ ಮಹಾರಾಜರ ಲೋಕಸಂಗ್ರಹದ ತತ್ತ್ವವು ಬೇರೆಯಾಗಿತ್ತು. ಹೂವಿಗೆ ಧಕ್ಕೆಯಾಗದಂತೆ ಹೇಗೆ ಜೇನುನೊಣಗಳು ಜೇನನ್ನು ಸಂಗ್ರಹಿಸುವವೋ, ಅಥವಾ ಜಾಣನಾದ ಗೋಪಾಲನು ಆಕಳು ಮತ್ತು ಕರುಗಳಿಗೆ ತೊಂದರೆಯಾಗದಂತೆ ಹೇಗೆ ಹಾಲು ಕರೆದುಕೊಳ್ಳುವನೋ, ಹಾಗೆಯೇ ಮಹಾರಾಜರು

ಎರಡನೆಯವರಿಗೆ ಕಷ್ಟವೆನಿಸದಂತೆ ಧನಸಂಗ್ರಹ ಮಾಡುತ್ತಿದ್ದರು ಆವೇಶದ ಭರದಲ್ಲಿ ಯಾರಾದರೂ ತಮ್ಮ ಯೋಗ್ಯತೆ ಮೀರಿ ಹಣಕೊಡ ಹೋದರೆ ಮಹಾರಾಜರು ಅದನ್ನೆಂದೂ ಸ್ವೀಕರಿಸುತ್ತಿರಲಿಲ್ಲ. ''ಹಾಗೆ ಮಾಡಬಾರದಪ್ಪಾ ! ನೀವು ಕುಟುಂಬಿಗಳು ನಿಮ್ಮ ಕುಟುಂಬಕ್ಕೆ ಘಾತವಾಗದಂತೆ ನೀವು ದಾನ ಮಾಡಬೇಕಲ್ಲದೆ, ಹೆಚ್ಚು ಕೊಡುವದು ತರವಲ್ಲ. ಬಡವರ ಒಂದೊಂದು ಬಿಲ್ಲಿಯಿಂದಲೇ ಚಿದಂಬರನು ಸಂತುಷ್ಟನಾಗುತ್ತಾನೆ'' ಎಂದು ಅಂಥವರಿಗೆ ಬುದ್ಧೀ ಹೇಳಿ ಹೆಚ್ಚಿನ ಹಣವನ್ನು ತಿರುಗಿ ಕೊಡುತ್ತಿದ್ದರು. ಹೀಗೆ ಮಾಡುವದರಲ್ಲಿ ಅವರದು ಇನ್ನೊಂದು ಉದ್ದೇಶವು ಇರುತ್ತಿತ್ತು. ಚಿದಂಬರನ ಕಾರ್ಯಕ್ಕೆ ಬೇಕಾಗುವ ಎಲ್ಲ ಹಣವನ್ನೂ ಒಬ್ಬರಿಂದಲೇ ತಕ್ಕೊಂಡರೆ, ಅವರಿಗಷ್ಟೇ ಚಿದಂಬರನ ಸೇವೆಯ ಪುಣ್ಯವು ಸಿಕ್ಕು, ಉಳಿದವರಿಗೆ ಅದರಲ್ಲಿ ಭಾಗವಹಿಸಲಿಕ್ಕೆ ಅವಕಾಶವುಳಿಯುವದಿಲ್ಲ. ಚಿದಂಬರನ ಸೇವೆಯಲ್ಲಿ ಭಾಗ ತಕ್ಕೊಳ್ಳುವಂತೆ ಎಲ್ಲರಿಗೂ ಅನುಕೂಲತೆ ಇರಬೇಕು. ಇದರಿಂದ ಚಿದಂಬರ ಸೇವೆಯ ಭಾರವು ಅನೇಕ ಜನರ ಮೇಲೆ ಹಂಚಿಹೋಗಿ ಪುಣ್ಯವು ಮಾತ್ರ ಬಹುಜನರಿಗೆ ದೊರಕುವಂತಾಗುತ್ತಿತ್ತು.

ಎಂದೂ ಕೈಯೊಡ್ಡುವದನ್ನೆರಿಯದ ಮಹಾರಾಜರು ಈ ಕೆಲಸಕ್ಕಾಗಿ ಅನೇಕರ ಮುಂದೆ ಹೋಗಿ ಕೈಯೊಡ್ಡಿದರು. ವಾಚಕರೇ, ಭಿಕ್ಷೆ ಬೇಡುವ-ಬೇಡುವದೆಂದರೆ ಸಣ್ಣ ಮಾತಲ್ಲ, ಕಂಡಿರಾ ! ಎಲ್ಲಿಯ ವರೆಗೆ ಮನುಷ್ಯನು ಎರಡನೆಯವರ ಬಾಗಿಲಿಗೆ ಹೋಗಿರುವದಿಲ್ಲವೋ, ಅಲ್ಲಿಯ ವರೆಗೆ ಮಾತ್ರ ಅವನ ದೊಡ್ಡಿಸ್ತಿಕೆಯು. ''ದೇಹಿ'' ಎಂದು ಕೈಯೊಡ್ಡುವಾಗ ಭಿಕ್ಷೆಯನ್ನು ಪಡೆವನು ತನ್ನ ಎಲ್ಲ ದೊಡ್ಡಿಸ್ತಿಕೆಯನ್ನೂ ಮರೆತು ಬಿಡಬೇಕಾಗುತ್ತದೆ. ಅನಂತಕೋಟಿ ಬ್ರಹ್ಮಾಂಡ ನಾಯಕನಾದ ನಾರಾಯಣನು ಕೂಡ ಬಲಿ-ಚಕ್ರವರ್ತಿಯ ಕಡೆಗೆ ಭಿಕ್ಷೆಗೆ ಹೋದಾಗ ವಾಮನನೇ ಆಗಬೇಕಾಯಿತಲ್ಲವೇ? ದಾನ ಕೊಡುವವನು, ಎಷ್ಟೇ ಅಲ್ಪನಿದ್ದರೂ, ದಾನ ಕೊಡುವ ಕಾಲಕ್ಕೆ ದೊಡ್ಡವನಾಗಿಬಿಡುವನು. ದಾನ ಬೇಡುವವನು, ಎಷ್ಟೇ ದೊಡ್ಡವನಿದ್ದರೂ ದಾನ ತಕ್ಕೊಳ್ಳುವ ಕಾಲಕ್ಕೆ ಸಣ್ಣವನಾಗಬೇಕಾಗುವದು.

ಮಹಾರಾಜರು ಈ ಸಂಘರ್ಷದಲ್ಲಿ ಅನೇಕ ಕಷ್ಟ-ನಷ್ಟಗಳಿಗೆ ಒಳಗಾಗಬೇಕಾಯಿತು. ನಿಂದಾಸ್ತುತಿಗಳನ್ನು ಸಹಿಸಬೇಕಾಯಿತು. ಅನೇಕ ತರಹದ ಕೀಳ್ಮಡಿಗಳನ್ನು ಕೇಳಬೇಕಾಯಿತು ಆದರೆ ಲೋಕಸಂಗ್ರಹ-ಲೋಕ ಕಲ್ಯಾಣಗಳನ್ನು ಮಾಡಬಯಸುವವನು ಇವುಗಳನ್ನು ಎದುರಿಸಲೇಬೇಕಲ್ಲವೇ ? ಮಹಾರಾಜರು ಈ ಮಾತುಗಳನ್ನು ಮೊದಲೇ ನಿರೀಕ್ಷಿಸಿದ್ದರು. ಅವರಿಗೆ ಅವುಗಳನ್ನೆಲ್ಲ ಸಹನ ಮಾಡುವದೊಂದು ಲೀಲೆಯಾಗಿ ಬಿಟ್ಟಿತು. ತಾವು ಸ್ಥಿತಪ್ರಜ್ಞಪದವಿಗೆ ಯೋಗ್ಯವಾಗಿರುವೆವೋ ಇಲ್ಲವೋ ಎಂಬುದನ್ನು ಪರೀಕ್ಷಿಸುವ ಕಾಲವಿದೆಂದು ಅವರು ಭಾವಿಸಿದರು. ಅನೇಕ ಜನರು ''ನೀವು ಕೈಕೊಂಡ ಕಾರ್ಯವು ಒಳ್ಳೇ ಸ್ತುತ್ಯವಾದುದು. ನೀವು ಎಲ್ಲ ಸ್ವಾರ್ಥವನ್ನು ತೊರೆದು ಈ ಲೋಕೋಪಕಾರದ ಕೆಲಸ ಮಾಡುವದನ್ನು ನೋಡಿದರೆ ನಿಮ್ಮ ಉಪಕಾರವನ್ನು ನಾವೆಷ್ಟು ನೆನಿಸಿದರೂ ಕಡಿಮೆಯೇ'' ಎಂದು ಪ್ರಾಮಾಣಿಕತನದಿಂದ ನುಡಿದು ತಮ್ಮ ಸಹಾಯವನ್ನು ನೀಡುವರು. ಬೇರೆ ಕೆಲವರು ''ನಿಮಗೇಕೆ ಬೇಕು ಈ ಸಲ್ಲದ ಉಸಾಬರಿ ? ಎಲ್ಲವನ್ನೂ ಬಿಟ್ಟಿರುವೆವೆಂದು ಹೇಳಿ ಹಣಸಂಗ್ರಹ ಮಾಡಲಿಕ್ಕೆ ನಿಮಗೆ ನಾಚಿಕೆ ಬರುವದಿಲ್ಲವೇ ? 'ಉದರನಿಮಿತ್ತಂ ಬಹುಕೃತವೇಷಃ' ಎಂಬ ಮಾತೇ ಸರಿ. ನಾನಾತರದ ವೇಷಗಳಿಂದ ಜನರನ್ನು ವಂಚಿಸುವ ನಿಮ್ಮಂಥ ಜನರ ಸಂಖ್ಯೆಯು ನಮ್ಮ ದೇಶದಲ್ಲಿ ಹೆಚ್ಚಾಗಿರುವದರಿಂದಲೇ ನಮ್ಮ ದೇಶದ ಅವನತಿಯಾಗಿದೆ'' ಎಂದು ನಿರ್ದಾಕ್ಷಿಣ್ಯವಾಗಿ ಹೇಳಿ ಬಿಡುತ್ತಿದ್ದರು. ಆದರೆ ಮಹಾರಾಜರು ಮುಗುಳುನಗೆಯಿಂದಲೇ ಎಲ್ಲವನ್ನೂ ಸ್ವಾಗತಿಸುತ್ತ ಮುಂದೆ ಸಾಗುತ್ತಿದ್ದರು.

ಜೀರ್ಣೋದ್ಧಾರದ ಕೆಲಸವು ಮೂರು ಮೂರುವರೆ ವರುಷಗಳ ವರೆಗೆ ನಾಗಿತು. ಮಹಾರಾಜರು ಈ ಕಾಲದಲ್ಲಿ ಅವಿಶ್ರಾಂತವಾಗಿ ದುಡಿಯಬೇಕಾಯಿತು. ಅವರು ಈ ಕೆಲಸಕ್ಕಾಗಿ ನೂರಾರು ಊರುಗಳನ್ನಾದರೂ ಸುತ್ತಾಡಿಕೊಂಡು ಬಂದರು. ಇತ್ತ ಪ್ರವಾಸಮಾಡುತ್ತ ಹಣ ಕೂಡಿಸಬೇಕು. ಅತ್ತ ಮತ್ತೆ ಮತ್ತೆ ಗುರ್ಲಹೊಸೂರಿಗೆ ಹೋಗಿ ಕಟ್ಟಡದ ಮೇಲ್ವಿಚಾರಣೆ ಮಾಡಬೇಕು. ಹೀಗಾಗಿ ಈ ಅವಧಿಯಲ್ಲಿ ಮಹಾರಾಜರಿಗೆ

ವಿಶ್ರಾಂತಿಯೆಂಬುದೇ ಗೊತ್ತಾಗುತ್ತಿರಲಿಲ್ಲ. ಆದರೂ ಮಹಾರಾಜರು ಎಲ್ಲವನ್ನೂ ಸಂತೋಷದಿಂದ ಸಹಿಸಿ ಕೈಕೊಂಡ ಕಾರ್ಯವನ್ನು ಪೂರ್ಣಗೊಳಿಸಿದರು. ಅರ್ಧಮರ್ಧ ಸ್ಥಿತಿಯಲ್ಲಿದ್ದ ಚಿದಂಬರ ದೇವಾಲಯವು ಪೂರ್ಣವಾಯಿತು. ಕಲ್ಲಿನ ಅಂಕಣಗಳ ಕೆಲಸವೆಲ್ಲ ಸರಿಯಾಗಿ ಕೊನೆಗಂಡಿತು. ಪ್ರಾಕಾರದ ಗೋಡೆಗಳನ್ನು ಚನ್ನಾಗಿ ಸುಧಾರಣೆ ಮಾಡಿ, ಮೆತ್ತಿ, ಸಾರಿಸಿದರು. ಅಲ್ಲಲ್ಲಿ ಬಿದ್ದಿರುವ ಮಣ್ಣು ಗುಂಪಿಗಳನ್ನು ತೆಗಿಸಲಾಯಿತು. ಸಿಕ್ಕಸಿಕ್ಕಲ್ಲಿ ಬೆಳೆದಿದ್ದ ಗಿಡಗಂಟಿಗಳನ್ನು ಕಡಿಸಿ ಹಾಕಿ ಗುಡಿಯನ್ನು ಹಸನ ಮಾಡಲಾಯಿತು. ತಗ್ಗುದಿನ್ನೆಗಳನ್ನೆಲ್ಲ ಸರಿಪಡಿಸಿ, ಪ್ರಾಕಾರದೊಳಗಿನ ನೆಲವೆಲ್ಲ ಒಂದೇ ಪಾತಳಿಯಲ್ಲಿ ಬರುವಂತೆ ಮಾಡಲಾಯಿತು. ಸಾರಾಂಶವೇನೆಂದರೆ— ದೇವರ ದರುಶನಕ್ಕೆಂದು ಬರುವ ಪ್ರತಿಯೊಬ್ಬನ ಮನಸು ಸುಪ್ರಸನ್ನವಾಗುವಂತಾಯಿತು. ಚಿದಂಬರನ ದೇವಾಲಯವು ಈಗ ನಿಜವಾಗಿಯೂ ದೇವಾಲಯವಾಗಿ ಕಂಗೊಳಿಸಹತ್ತಿತು.

ಮುಂದಾದರೂ ಗುಡಿಯ ಸುಧಾರಣೆಯ ಕೆಲಸವು ಕೊನೆಯ ವರೆಗೆ ನಡದೇ ಇತ್ತು. ಮಹಾರಾಜರು ಕಾಲಾನುಕ್ರಮದಿಂದ ಗರುಡ ಮತ್ತು ಹನುಮಂತದೇವರ ಗುಡಿಗಳನ್ನು ಕಟ್ಟಿಸಿದರಲ್ಲದೆ, ಕರೆವ್ವನ ಬಾವಿಯನ್ನು ಸುಸ್ಥಿತಿಗೆ ತಂದರು. ಚಿದಂಬರನ ದೇವಾಲಯದಲ್ಲಿ ಕಲ್ಲಿನ ಪಾವಟಿಗೆಗಳ ಬದಿಗೆ ಜನರು ಬೀಳಬಾರದೆಂದು ಕಬ್ಬಿಣ ಕಟಾಂಜನಗಳನ್ನು ಹಾಕಿಸಿದರು. ತೀರ ಕೀಳು ಸ್ಥಿತಿಯಲ್ಲಿದ್ದ ಕುಂಡಮಂಟಪದ ಸ್ವರೂಪವನ್ನು ಬದಲು ಮಾಡಿ ಅಂದಗೊಳಿಸಿದರು. ದೇವಾಲಯದ ಮುಂದೆ ಕಲ್ಲಿನ ಹಾಸಿಗೆಗಳನ್ನು ಹಾಕಿಸಿ ಹೆಚ್ಚು ಉಪಯೋಗವಾಗುವಂತೆ ಮಾಡಿದರು. ಚಿದಂಬರನ ಗುಡಿಯೊಳಗೆ ಶ್ರೀ ಬ್ರಹ್ಮಾನಂದರು ತೋಡಿಸಿದ ಬಾವಿಯು ಅಪೂರ್ಣವಾಗಿದ್ದುದರಿಂದ, ಅದನ್ನು ಹೆಚ್ಚೆಚ್ಚಾಗಿ ಕಡಿಸುತ್ತ ಹೋಗಿ ಸಾಕಷ್ಟು ನೀರು ಬರುವಂತೆ ಮಾಡಿದರು. ದೇವಾಲಯಕ್ಕೆ ಅವಶ್ಯವಾದ ಉಗ್ರಾಣ ಮತ್ತು ನಗಾರಖಾನೆಗಳು ಇಲ್ಲದ್ದರಿಂದ ಅವೆರಡನ್ನೂ ಅಂದವಾಗಿ ಕಟ್ಟಿಸಿದರು. ಕೊನೆಯ ವರ್ಷ (ಶಕೆ ೧೮೦೩) ಸ್ವತಂತ್ರವಾದ ಸಭಾಮಂಟಪದ ಅವಶ್ಯಕತೆ ತೋರಿದ್ದರಿಂದ ಅದನ್ನೂ ಪ್ರಶಸ್ತವಾಗಿ ಕಟ್ಟಿಸಿ ತಮ್ಮ ಈ ಸೇವೆಯನ್ನು ಮುಗಿಸಿದರು.

ಮಹಾರಾಜರು ಗುರ್ಲಹೊಸೂರಲ್ಲಷ್ಟೇ ಈ ತರದ ಕೆಲಸವನ್ನು ಮಾಡಲಿಲ್ಲ. ಬೇರೆ ಅನೇಕ ಕಡೆಗೂ ಅವರು ಜೀರ್ಣೋದ್ಧಾರದ ಕೆಲಸವನ್ನು ಮಾಡಿದರು. ದೊಡ್ಡವಾಡವಲ್ಲಿ ಮಾರುತಿಯ ದೇವಾಲಯದ ಜೀರ್ಣೋದ್ಧಾರದ ಸಂಗತಿಯು ಮೇಲೆ ಬಂದಿದೆ. ಮುರಗೋಡದೊಳಗೆ ಶ್ರೀ ಚಿದಂಬರ ದೀಕ್ಷಿತರ ಹೆತ್ತ ತಾಯಿಯವರಾದ ಶ್ರೀ ಮಹಾಲಕ್ಷ್ಮಿಯವರ ನಿಧನ ಸ್ಥಳದಲ್ಲಿ, ಅವರ ಸ್ಮರಣಾರ್ಥವಾಗಿ ಒಂದು ಚಿಕ್ಕ ಗುಡಿಯನ್ನು ಕಟ್ಟಿಸಿದರು. ಮತ್ತೊಂದು ಚಿದಂಬರ ಸ್ನಾನವಾದ ಬಡಲಿಯಲ್ಲಿ ಕುಂಡ-ಮಂಟಪವು ತೀರ ಗೀಳಾದುದರಿಂದ ಅದನ್ನೂ ಜೀರ್ಣೋದ್ಧಾರ ಮಾಡಿದರು. ಕೊನೆಗೆ ಕೃಷ್ಣಾ ತಟಾಕದಲ್ಲಿರುವ ಶ್ರೀ ಗಾಲವಕ್ಷೇತ್ರ ಅಥವಾ ಗಲಗಲಿಯೊಳಗೆ ಅಪೂರ್ಣ ಸ್ಥಿತಿಯಲ್ಲಿದ್ದ ಶ್ರೀ ದತ್ತಾತ್ರೇಯನ ಮಂದಿರವನ್ನು ಹೊಸದಾಗಿ ಕಟ್ಟಿಸಿ, ಅಲ್ಲಿಯ ಪೂಜಾ-ಅರ್ಚಾ-ಉತ್ಸವಾದಿಗಳು ಚನ್ನಾಗಿ ನಡೆಯುವಂತೆ ಮಾಡಿದರು. ಗಲಗಲಿಯ ಸಂಗತಿಯು ಒಳ್ಳೇ ಬೋಧಪ್ರದವಾಗಿರುವದರಿಂದ ಅದನ್ನು ಬೇರೊಂದು ಪ್ರಕರಣದಲ್ಲಿ ವಿವರಿಸಿದ್ದೇವೆ.

ಹೀಗೆ ಮಹಾರಾಜರು ಕೊನೆಯ ವರೆಗೆ ಜೀರ್ಣೋದ್ಧಾರದ ಕೆಲಸದಲ್ಲಿ ತೊಡಗಿದ್ದರೆಂದು ಹೇಳಲಡ್ಡಿಯಿಲ್ಲ. ಅವರು ಕೈಕೊಂಡ ಚಿದಂಬರ ಸೇವೆಯಲ್ಲಿ ಜೀರ್ಣೋದ್ಧಾರವೊಂದು ಮಹತ್ತ್ವದ ಭಾಗವೆಂಬದನ್ನು ನೆನಪಿನಲ್ಲಿಟ್ಟರೆ, ಮಹಾರಾಜರು ಈ ಕೆಲಸವನ್ನು ಮಾಡಿದುದರ ರಹಸ್ಯವು ಚನ್ನಾಗಿ ತಿಳಿಯುವಂತಿದೆ. ಒಟ್ಟಿಗೆ ಈ ಕೆಲಸದಲ್ಲಿ ಮಹಾರಾಜರಿಗೆ ಇಪ್ಪತ್ತೈದು ಮೂವತ್ತು ಸಾವಿರ ರೂಪಾಯಿಗಳನ್ನಾದರೂ ಕೂಡಿಸಿ ವೆಚ್ಚಮಾಡಬೇಕಾಯಿತು. ವಾಚಕರೇ, ಲಂಗೋಟಿಯನ್ನು ಧರಿಸಿದ ಫಕೀರನೊಬ್ಬನು ಇಷ್ಟು ರೂಪಾಯಿಗಳನ್ನು ಕೂಡಿಸುವದೆಂದರೆ ಸುವರ್ಣವೃಷ್ಟಿಯನ್ನು ಕೆಡವಿದಂತೆಯೇ ಅಲ್ಲವೇ ? ಇಷ್ಟೇ ಅಲ್ಲ, ಇದಕ್ಕೂ ಹೆಚ್ಚಾಗಿ ಶ್ರೀ ಚಿದಂಬರೇಶ್ವರನ ಉತ್ಸವದ ನಿಮಿತ್ತವಾಗಿ ಅನ್ನ ಸಂತರ್ಪಣೆ ಮೊದಲಾದ ಕೆಲಸಗಳಿಗಾಗಿಯೂ ಮಹಾರಾಜರು ಅನೇಕ ಸಾವಿರ ರೂಪಾಯಿಗಳನ್ನು ಕೂಡಿಸಿ ವೆಚ್ಚಮಾಡಿದರು. ಅದು ಮುಂದಿನ ಪ್ರಕರಣದಲ್ಲಿ ಬರುವದರಿಂದ ಅದನ್ನಿಲ್ಲಿ ವಿವರವಾಗಿ ಬರೆಯುವ ಕಾರಣವಿಲ್ಲ.

೯ ಚಿದಂಬರನ ಆಗನೋಕ್ತ ಉತ್ಸವ

ಮಾನವನು ಸ್ವಭಾವತಃ ಸಾಮಾಜಿಕ ಪ್ರಾಣಿಯು. ಹುಟ್ಟಿದ ಕೂಸು ಬೇರೆಯವರ ಮೇಲಲ್ಲದಿದ್ದರೂ, ತಾಯಿಯ ಮೇಲಾದರೂ ಅವಲಂಬಿಸಲೇ ಬೇಕು. ಮನುಷ್ಯನು ಹುಟ್ಟಿದಂದಿನಿಂದ ಒಬ್ಬಂಟಿಗನಾಗಿರುವದು ಶಕ್ಯವಿಲ್ಲ. ಶಕ್ಯವಿದ್ದರೂ, ಅವನ ಮನುಷ್ಯತ್ವದ ಹೆಗ್ಗುರುತಾದ ಬುದ್ಧಿಶಕ್ತಿಯು ಮಾತ್ರ ಬೆಳೆಯುವದು ಸಾಮಾಜಿಕ ಜೀವನದಲ್ಲಿಯೇ ಎಂದು ಈಗಿನ ಮಾನಸ ಶಾಸ್ತ್ರಜ್ಞರು ಚನ್ನಾಗಿ ಪರಿಕಿಸಿ, ನಿರೀಕ್ಷಣೆ ಮಾಡಿ ಹೇಳಿದ್ದಾರೆ. ಎಂದರೆ ಮಾನವನು ಗುಂಪುಕಟ್ಟಿಕೊಂಡೇ ಇರಬೇಕು. ಗುಂಪಿನೊಳಗಿನ ಅಥವಾ ಸಂಘಜೀವನವೇ ಅವನಿಗೆ ಸಹಜವಾದ, ಪೋಷಕವಾದ, ಅವಶ್ಯಕವಾದ ವಾತಾವರಣವು. ಸಂಘಜೀವನದಲ್ಲಿಯೇ ಅವನ ಹಿತವಿದೆ, ಕಲ್ಯಾಣವಿದೆ.

ಮನುಷ್ಯನು ಸಂಘಜೀವಿಯಾದಂತೆ ಉತ್ಸವಪ್ರಿಯನೂ ಆಗಿರುತ್ತಾನೆ. ಸ್ವಭಾವತಃ ಒಳ್ಳೇ ಗಂಭೀರನೂ ಉದಾಸೀನನೂ ಆದ ಮನುಷ್ಯನೂ ಕೂಡ ಕೆಲವು ವೇಳೆಯಾದರೂ ಒಂದಿಲ್ಲೊಂದು ತರದ ಉತ್ಸವದಲ್ಲಿ ಸೇರಿ ಮನಸ್ಸನ್ನು ಹಗುರು ಮಾಡಿಕೊಳ್ಳಬೇಕಾಗುತ್ತದೆ. ಉತ್ಸವವೆಂದರೆ ಹಬ್ಬ ಅಥವಾ ಸಂತೋಷದ ಸಮಾರಂಭವು. ಉಲ್ಲಾಸ, ಆನಂದ ಅಥವಾ ಸುಖಬಡುವ ಕಾಲವದು. ನಾನಾತರದ ವಿನೋದದ ಕಾರ್ಯಕ್ರಮಗಳಿಂದಲೂ, ಪ್ರೇಮ-ಹಾಸ್ಯ ಮೊದಲಾದ ರಸಪ್ರಸಂಗಗಳಿಂದಲೂ ಉತ್ಸವಕ್ಕೆ ಕಳೆಬರುತ್ತದೆ. ಉತ್ಸವವು ಗ್ರಾಮ್ಯಜನರ ಕೈಯೊಳಗೆ ಸಿಕ್ಕು ಬೀಭತ್ಸವಾಗಬಹುದು; ಅಥವಾ ಶ್ರೇಷ್ಠ ಜನರ ಕೈಯೊಳಗೆ ಸಿಕ್ಕು ನಾಗರಿಕ ಜೀವನಕ್ಕೆ ಅತ್ಯುಪಯುಕ್ತವಾದ ಕಾರ್ಯಕ್ರಮವಾಗಬಹುದು. ಉತ್ಸವವು ಹೇಗೆ ಪರಿಣಮಿಸೀತೆಂಬದು ಅದರ ಯೋಜಕರ ಮೇಲೆ ಅವಲಂಬಿಸಿದೆ.

ಹೀಗೆ ಮಾನವನಲ್ಲಿ ಸಹಜವಾಗಿರುವ ಸಾಮಾಜಿಕ ಪ್ರವೃತ್ತಿ ಮತ್ತು ಉತ್ಸವ ಪ್ರಿಯತೆಗಳಿಗೆ ಸರಿಯಾಗಿ ಮೇಳ ಹಾಕಿ, ಅವೆರಡಕ್ಕೂ ಅವಕಾಶವನ್ನೊದಗಿಸಿಕೊಡುವದು ಸಮಾಜ ಹಿತಚಿಂತಕರ ಮತ್ತು ಒಳ್ಳೇ ಧರ್ಮ ಶಾಸ್ತ್ರಕಾರರ ಕೆಲಸವಾಗಿದೆ. ಎಂತೆಯೇ ಎಲ್ಲ ಮತಪಂಥಗಳಲ್ಲಿಯೂ ಹಬ್ಬ ಮೊದಲಾದವುಗಳಿರುವದು ಕಂಡುಬರುತ್ತದೆ ಅವುಗಳ ಮುಖಾಂತರವಾಗಿ ಮಾನವನಿಗೆ ನಾನಾತರದ ರುಚಿಕರ ಪದಾರ್ಥಗಳನ್ನು ತಿನ್ನಲಿಕ್ಕೆ ಸಿಕ್ಕುವದಲ್ಲದೆ, ತನ್ನ ಗೆಳೆಯರು ಮತ್ತು ಬಾಂಧವರೊಡನೆ ಕೂಡಿಕೊಂಡು ವಿನೋದದಿಂದಲೂ ಸರಸಸಲ್ಲಾಪಗಳಿಂದಲೂ ಕಾಲಕಳೆಯಲಿಕ್ಕೆ ಸಿಕ್ಕುತ್ತದೆ.

ನಮ್ಮ ಶಾಸ್ತ್ರಗಳೊಳಗೆ ಆಗಮಗಳೆಂದು ಪ್ರಸಿದ್ಧವಾದ ಗ್ರಂಥಗಳು ಇದೇ ಉದ್ದೇಶದಿಂದಲೇ ಅಸ್ತಿತ್ವದಲ್ಲಿ ಬಂದಿವೆ. ಆಗಮಗಳನ್ನು ತಂತ್ರಗಳೆಂದೂ, ಸಂಹಿತೆಗಳೆಂದೂ, ಯಾಮಲಗಳೆಂದೂ ಕರೆಯುವ ರೂಢಿಯಿದೆ. ವರ್ಣಸಾಧನೆ ಅಥವಾ ಮಂತ್ರಪುರಶ್ಚರಣವು ಇವುಗಳಲ್ಲಿ ಉಕ್ತವಾಗಿದೆ. ಆಗಮಗಳು ಬಹುತರವಾಗಿ ಪೌರಾಣಿಕ ದೇವದೇವತೆಗಳ ಉಪಾಸನೆಗಳನ್ನೇ ವಿಧಿಸುತ್ತವೆ. ಅವುಗಳ ಉಪಾಸನಾಕ್ರಮವು ಕೆಲವಂಶಗಳಲ್ಲಿ ವೇದಪದ್ಧತಿಗಿಂತ ಬೇರೆಯಾಗಿದೆ. ನಮ್ಮಲ್ಲಿ ಈಗ ರೂಢವಾಗಿರುವ ಉಪಾಸನಾಕ್ರಮವು (೧) ವೈದಿಕ, (೨) ತಾಂತ್ರಿಕ, ಮತ್ತು (೩) ಮಿಶ್ರವೆಂದು ಮೂರು ತೆರನಾಗಿರುವದೆಂದು ಶ್ರೀಮದ್ಭಾಗವತವು ಹೇಳುತ್ತದೆ ಆದರೆ ನಾವೆಲ್ಲರೂ ಈಗ ಮಿಶ್ರ ಉಪಾಸಕರೇ ಆಗಿದ್ದೇವೆ.

ಗುಡಿಗಳು ಹೇಗಿರಬೇಕು, ಅವುಗಳನ್ನು ಯಾವ ರೀತಿಯಿಂದ ಮತ್ತು ಎಲ್ಲಿ ಕಟ್ಟಬೇಕು, ಅಲ್ಲಿ ಯಾವ ತರದಿಂದ ಯಾವ ಮೂರ್ತಿಗಳನ್ನು ಯಾವ ಕ್ರಮದಿಂದ ಪ್ರತಿಷ್ಠಾಪನೆ ಮಾಡಬೇಕು, ಅವುಗಳ ಪೂಜೆ-ಉತ್ಸವಾದಿಗಳನ್ನು ಹೇಗೆ ಮಾಡಬೇಕು,—ಎಂಬಿವೇ ಮೊದಲಾದ ಎಲ್ಲ ವಿಷಯಗಳನ್ನು ಸವಿಸ್ತಾರವಾಗಿ ಆಗಮ ಗ್ರಂಥಗಳಲ್ಲಿ ವರ್ಣಿಸಿದ್ದಾರೆ ಮೂರ್ತಿರೂಪದಿಂದ ಪ್ರತಿಷ್ಠಿತವಾಗಿರುವ ದೇವಪೂಜಾಕ್ರಮಕ್ಕೆಲ್ಲ ಆಗಮಗಳೇ ಆಧಾರ. ಇಂತಹ ಪೂಜೆಗೆ ಶುದ್ಧ ವೈದಿಕ ಪದ್ಧತಿಯಲ್ಲಿ ಸ್ಥಾನವಿದ್ದಂತೆ ಕಂಡುಬರುವದಿಲ್ಲ ನಿತ್ಯದ ಪಂಚಮಹಾಯಜ್ಞಗಳ ಹೊರತಾಗಿ ದೇವರ ಪೂಜೆ ಎಂಬದನ್ನು

ಸ್ವತಂತ್ರವಾಗಿ ಮಾಡಬೇಕೆಂದು ಧರ್ಮಸೂತ್ರಕಾರರು ಹೇಳುವದಿಲ್ಲ. ಆದುದರಿಂದ ನಮ್ಮ ದೇಶದಲ್ಲಿ ಕಂಡುಬರುವ ಮೂರ್ತಿ ಪೂಜೆಯೆಲ್ಲ ಈ ಆಗಮಗಳ ಮೇಲೆಯೇ ಅವಲಂಬಿಸಿರುವದೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಆಗಮಗಳನ್ನು ಅನೇಕ ತರದಿಂದ ವಿಂಗಡಿಸಬಹುದಾದರೂ, ಅವುಗಳಲ್ಲಿ ಮುಖ್ಯವಾಗಿ ಮೂರು ಭಾಗಗಳನ್ನು ಮಾಡಬಹುದು: (೧) ಶಿವನ ಪೂಜೆಯನ್ನು ವರ್ಣಿಸುವ ಶೈವಾಗಮಗಳು, (೨) ವಿಷ್ಣುವಿನ ಪೂಜೆಯನ್ನು ವಿವರಿಸುವ ವೈಷ್ಣವಾಗಮಗಳು, ಮತ್ತು (೩) ದೇವಿಯ ಉಪಾಸನೆಯನ್ನು ಹೇಳುವ ಶಾಕ್ತಾಗಮಗಳು. ಶೈವಾಗಮಗಳು ಕಾಮಿಕ, ಪಾರಮೇಶ್ವರ, ವಾತುಲ, ವೀರ ಎಂದು ಮೊದಲಾಗಿ ೨೮ ಇರುವವೆಂದು ತಿಳಿಯುತ್ತದೆ. ವೈಷ್ಣವ ಅಥವಾ ಪಾಂಚರಾತ್ರಾಗಮಗಳು ಪದ್ಮಸಂಹಿತಾ, ನಾರದ, ಎಂದು ಮೊದಲಾಗಿ ೧೦೮ ಇರುತ್ತವೆ. ಶಾಕ್ತಾಗಮಗಳು ಮಹಾಮಾಯಾಶಂಬರ, ಮಹಾಸಮ್ಮೋಹನ ಎಂದು ಮೊದಲಾಗಿ ೬೪ ಇರುತ್ತವೆ. ಆದರೆ ಇವೆಲ್ಲ ಗ್ರಂಥಗಳು ಇನ್ನೂ ಪೂರ್ಣವಾಗಿ ಉಪಲಬ್ಧವಾಗಿಲ್ಲ. ಅವೆಲ್ಲವುಗಳ ಸರಿಯಾದ ಶೋಧವಾದ ಮೇಲೆ ಈ ವಿಷಯದ ಮೇಲೆ ಇನ್ನೂ ಹೆಚ್ಚಾಗಿ ಬೆಳಕು ಬೀಳಬಹುದು.

ಗುರ್ಲಹೊಸೂರಲ್ಲಿ ಶ್ರೀ ಬಾಪೂ ದೀಕ್ಷಿತರು (ಶ್ರೀ ಬ್ರಹ್ಮಾನಂದ ಸ್ವಾಮಿಗಳು) ಬಹು ಪ್ರಯಾಸದಿಂದ ಆಗಮೋಕ್ತ ರೀತಿಯಂತೆ ಕಟ್ಟಿಸಿದ ಗುಡಿಯಲ್ಲಿ, ಶ್ರೀ ಏಪಚಿದಂಬರೇಶ್ವರನೆಂಬ ಹೆಸರಿನ ಶಿವಲಿಂಗವನ್ನು ವೈಖಾಗಮೋಕ್ತ ವಿಧಿಯಿಂದಲೇ ಪ್ರತಿಷ್ಠಾಪನೆ ಮಾಡಿ ಅದರ ನಿತ್ಯ ನೈಮಿತ್ತಿಕ ಪೂಜಾ ಕ್ರಮವನ್ನು ಏರ್ಪಡಿಸಿದ್ದರೆಂಬದು ವಾಚಕರಿಗೆ ಗೊತ್ತಿದೆ. ಅವರೇ ಆಗಮವಿಹಿತವಾದ ಪದ್ಧತಿಯನ್ನನುಸರಿಸಿ ಕಾರ್ತಿಕ ವದ್ಯ ಪ್ರತಿಪದೆಯಿಂದ ಐದು ದಿವಸಗಳ ವರೆಗೆ ಶಿವೋತ್ಸವವನ್ನು ಗುರ್ಲಹೊಸೂರಲ್ಲಿ ರೂಢಿಯೊಳಗೆ ತಂದರು. ಐದು ದಿವಸಗಳ ವರೆಗಿನ ಕಾರ್ಯಕ್ರಮವಾದುದರಿಂದ ಅದಕ್ಕೆ ಪಾಂಚಾಹಿಕ ಉತ್ಸವವೆಂದು ಹೆಸರು.

ಈ ಸಮಾರಂಭದಲ್ಲಿ ಕುಂಡಮಂಟಪದ ಕೆಲಸವು ಐದು ದಿನಗಳ ವರೆಗೆ ಸಾಗುತ್ತದೆ. ಈ ಐದು ದಿನಗಳಲ್ಲಿ ಪರಿವಾರ ದೇವತೆಗಳು ಸಹಿತವಾಗಿ

ಶ್ರೀ ಸಾಂಬಸದಾಶಿವನ ಪೂಜಾ-ಅರ್ಚಾದಿ ಕಾರ್ಯಕ್ರಮಗಳು ಯಥಾ-ಸಾಂಗವಾಗಿ ನಡೆಯುತ್ತವೆ. ಆಗಮೋಕ್ತ ರೀತಿಯಿಂದ ರಚಿಸಿದ ಕುಂಡ-ದೊಳಗೆ ಅಗ್ನಿಪ್ರತಿಷ್ಠಾಪನೆ ಮಾಡಿ, ಶಿವನ ಪ್ರೀತ್ಯರ್ಥವಾಗಿ ತುಪ್ಪದ ಹೋಮವನ್ನು ಮಾಡುವರು. ಶಿವನಿಗೆ ಅಭಿಷೇಕ ಮಾಡುವದು, ಅಲಂಕಾರ ಗಳನ್ನಿಡಿಸಿ ಮೆರವಣಿಗೆ ತೆಗೆಯುವದು, ಶಿವನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ಸಭೆಮಾಡುವದು, ಸಭೆಗಳಲ್ಲಿ ನೃತ್ಯ, ಗಾಯನ, ಕೀರ್ತನ, ಪುರಾಣ, ಪ್ರವಚನ ಮೊದಲಾದ ಕಾರ್ಯಗಳನ್ನು ನಡೆಸುವದು, ಶಿವನ ಸಂತೋಷಕ್ಕಾಗಿ ಬ್ರಾಹ್ಮಣರಿಗೂ ಊಳಿದವರಿಗೂ ಊಟ ಮಾಡಿಸುವದು, ಶಿವನ ಧ್ಯಾನ, ಸ್ತುತಿ ಮೊದಲಾದವುಗಳನ್ನು ಮಾಡುವದು, ಶಿವಭಕ್ತಿಯನ್ನು ಹಬ್ಬಿಸುವದು—ಇವೇ ಮೊದಲಾದ ಕೆಲಸಗಳು ವಿಜೃಂಭಣೆಯಿಂದ ನಡೆಯುವವು.

ಈ ಐದು ದಿನಗಳಲ್ಲಿ ನಾಲ್ಕೂ ವೇದಗಳೊಳಗಿಂದ ಆರಿಸಿ ತೆಗೆದ ಮಂತ್ರಗಳ ಪಠಣವು ಕರ್ಣಮನೋಹರವಾಗಿ ನಡೆಯುತ್ತದೆ. ಮಂತ್ರ ಪಾಠದೊಡನೆ ತುಪ್ಪದ ಹೋಮವೂ ಅಖಂಡವಾಗಿ ಸಾಗುತ್ತದೆ. ಪೂರ್ವ-ದ್ವಾರದಲ್ಲಿ ಋಗ್ವೇದಸ್ತೋತ್ರವೂ, ದಕ್ಷಿಣದ್ವಾರದಲ್ಲಿ ಯಜುರ್ವೇದ ಪಾಠವೂ, ಪಶ್ಚಿಮ ದ್ವಾರದಲ್ಲಿ ಸಾಮಗಾನವೂ, ಉತ್ತರ ದ್ವಾರದಲ್ಲಿ ಅಥರ್ವಘೋಷವೂ ಎಡೆಬಿಡದೆ ಕೇಳಬರುತ್ತವೆ. ಪ್ರತಿದಿವಸ ಮುಂಜಾನೆ ಮತ್ತು ಸಂಜೆಯ ಕಡೆಗೆ ಗುಡಿಯ ಒಳಹೊರಗಿನ ನಿಶ್ಚಿತ ಸ್ಥಳಗಳಲ್ಲಿ ಬಲಿಹರಣವಾಗುತ್ತದೆ. ಮೊದಲನೆಯ ದಿನದ ಭೇರೀತಾಡನವಿಧಿಯು ವೀಕ್ಷಣೀಯವಾಗಿರುತ್ತದೆ. ಮಂತ್ರಾರ್ಘವನ್ನು ಲಕ್ಷಕ್ಕೆ ತಂದರೆ ಭೇರಿಯಲ್ಲಿ ಸರ್ವದೇವತೆಗಳ ಆವಾಹ-ನವು ಎಷ್ಟು ಸೂಕ್ಷ್ಮವಾಗಿಯೂ ಸುಂದರವಾಗಿಯೂ ಅಡಕವಾಗಿರುವ-ದೆಂಬದು ತಿಳಿದು ಬರುವಂತಿದೆ. ಈ ವಿಧಿಗೂ, ಧ್ವಜಸ್ತಂಭದ ಆರೋಪಣ ಮೊದಲಾದವುಗಳಿಗೂ ಒಂದು ಪ್ರಹರಕ್ಕಿಂತ ಹೆಚ್ಚಿಗೆ ವೇಳೆಬೇಕು. ಪ್ರಾರಂಭದ ಎಲ್ಲ ಅನುಷ್ಠಾನಗಳೂ ಮೊದಲನೆಯ ಒಂದೇ ದಿನವೇ ಮುಗಿಯಬೇಕಾದರೆ ಬಲು ಕಷ್ಟವಾಗುತ್ತದೆ. ಆದುದರಿಂದ ಈ ಪ್ರಾರಂಭದ ವಿಧಿಗಳನ್ನು ಮಾಡಿ ಮುಗಿಸಲಿಕ್ಕೆ ಎರಡು ದಿವಸಗಳು ಹಿಡಿಯುತ್ತವೆ. ಉಳಿದ ಕೆಲಸಗಳಿಗೆ ನಾಲ್ಕು ದಿನ ಬೇಕು- ಹೀಗೆ ಪಾಂಚಾಹಿಕ ಉತ್ಸವಕ್ಕೆ

ಆರು ದಿವಸಗಳು ಬೇಕಾಗುತ್ತವೆ. ಏಳನೆಯ ದಿನ ಅವಭೃತಸ್ನಾನ. ಈ ರೀತಿಯಾಗಿ ಈ ಉತ್ಸವವು ಕೊನೆಗಾಣಬೇಕಾದರೆ ಒಟ್ಟಿಗೆ ಏಳು ದಿನಗಳು ಬೇಕು. ಕಾರ್ತಿಕ ವದ್ಯ ಪ್ರತಿಪದೆಯಿಂದ ಸಪ್ತಮಿಯ ವರೆಗೆ ಈ ಸಪ್ತಾರಂಭವು ನಡೆಯುವದು. ಸಾರಾಂಶವೇನೆಂದರೆ, ಇದೊಂದು ಸಣ್ಣ ಯಜ್ಞವೆಂದೇ ತಿಳಿದರೆ ತಪ್ಪಾಗಲಾರದು—

ಪ್ರಥಮಂ ಪುಷ್ಪಯಾನಂ ಸ್ಯಾತ್ ದ್ವಿತೀಯಂತು ಮಯೂರಕಂ ।
ತೃತೀಯಂ ನಂದಿಯಾನಂ ಸ್ಯಾತ್ ಚತುರ್ಥಂ ಗಜವಾಹನಂ ।
ಪಂಚಮೇ ದಿವಸೇ ಪ್ರಾಪ್ತೇ ರಥಮಾರೋಪಯೇಚ್ಛಿವಂ ॥

ಎಂದು ಶಾಸ್ತ್ರವು ಹೇಳುತ್ತದೆ. ಎಂದರೆ ಮೊದಲನೆಯ ದಿನ ಶಿವನಿಗೆ ಹೂವಿನ ವಾಹನವು, ಎರಡನೆಯ ದಿನ ನವಿಲು, ಮೂರನೆಯ ದಿನ ನಂದಿ, ನಾಲ್ಕನೆಯ ದಿನ ಆನೆ, ಐದನೆಯ ದಿನ ರಥವು ವಾಹನಗಳಾಗುವವು. ಆಯಾ ವಾಹನಗಳ ಮೇಲೆ ಶಿವ-ಪಾರ್ವತಿಯರನ್ನು ಕೂಡಿಸಿ ಊದುತ್ತ ಬಾರಿಸುತ್ತ, ಜಯಘೋಷ ಮಾಡುತ್ತ, ಹಾಡುತ್ತ ಕುಣಿಯುತ್ತ ಗುಡಿಯಿಸುತ್ತಲೂ ಮೆರವಣಿಗೆ ಹೊರಡುವದು. ಆ ಕಾಲದ ಸಂಭ್ರಮವನ್ನು ಏನೆಂದು ಬಣ್ಣಿಸಬೇಕು ? ಅನೇಕ ಜನ ಭಕ್ತರು ಆ ಕಾಲಕ್ಕೆ ದೇವರ ಮೇಲೆ ಬೆಂಡು-ಬೆತ್ತಾಸ ಮೊದಲಾದವುಗಳನ್ನು ಮಳೆಗರೆಯುತ್ತಾರೆ. ಎಂತಹ ನಾಸ್ತಿಕನಲ್ಲಿಯೂ ಕೂಡ ಆ ದೃಶ್ಯದಿಂದ ಧರ್ಮಭಾವನೆಯು ಜಾಗೃತವಾಗಿ ಕ್ಷಣಹೊತ್ತಾದರೂ ಭಕ್ತಿಭಾವವನ್ನು ಹುಟ್ಟಿಸಬಹುದು.

ಈ ಮೇರೆಗೆ ವೇದಘೋಷ, ಹೋಮ-ಹವನ, ವಾಹನ-ಬಲಿಹರಣ, ನೃತ್ಯ-ಗಾಯನ, ಪುರಾಣ-ಕೀರ್ತನ, ಭಜನ-ಧ್ಯಾನ ಮೊದಲಾದ ಕಾರ್ಯಕ್ರಮಗಳನ್ನೊಳಗೊಂಡಿರುವ ಈ ಉತ್ಸವದಿಂದ ಭಾವಿಕರ ಧರ್ಮಭಾವನೆಯು ಉಕ್ಕೇರುವದಲ್ಲದೆ, ಜನರ ಮನರಂಜನೆಯೂ ಆಗುವದು. ಉತ್ಸವದ ಸಂಕಲ್ಪದಲ್ಲಿ ಎಲ್ಲ ಜನರ ಕಲ್ಯಾಣಕ್ಕಾಗಿ ಇದು ಆಚರಿಸಲ್ಪಡುವದೆಂದು ಹೇಳಿದೆ. ಇಂತಹ ಉತ್ಸವಗಳನ್ನು ಮಾಡುವವರೂ, ಅದರಲ್ಲಿ ಭಾಗ ತೆಗೆದುಕೊಳ್ಳುವವರೂ ಅಶ್ವಮೇಧಯಾಗದ ಪುಣ್ಯವನ್ನು ಪಡೆಯುವರೆಂದು ಫಲಶ್ರುತಿಯಲ್ಲಿ ಹೇಳಿದೆ. ಹೀಗೆ ಎಲ್ಲ ತರಗತಿಯ ಜನರನ್ನು ಮನರಂಜಿಸಿ

ಅವರ ವಿನೋದ ಉತ್ಸವ ಭಾವಗಳಿಗೆ ಎಡೆಗೊಟ್ಟು, ಅದೇ ಕಾಲಕ್ಕೆ ಅವರನ್ನು ದೇವರ ಕಡೆಗೆ ತಿರುಗಿಸುವ ಈ ತರದ ಉತ್ಸವದ ಮಹತಿಯನ್ನು ಎಷ್ಟೆಂದು ವರ್ಣಿಸಬೇಕು ?

ಧಾರ್ಮಿಕ ಉತ್ಸವದಂತಹ ಉಪಕ್ರಮಗಳು ಎಷ್ಟು ಲೋಕೋಪಕಾರಿಯಾಗಿ ಪರಿಣಮಿಸಬಹುದೆಂಬದು, ಅವುಗಳ ಯೋಜಕರ ಮೇಲೂ ವ್ಯವಸ್ಥಾಪಕರ ಮೇಲೂ ಅವಲಂಬಿಸಿರುವದೆಂಬದು ಸಹಜವಿದೆ. ಅವುಗಳನ್ನು ಏರ್ಪಾಟು ಮಾಡುವವರ ಉದ್ದೇಶವು ಉದಾತ್ತವಾದುದೂ, ವ್ಯವಸ್ಥೆಯು ಸರಿಯಾದುದೂ ಆಗಿದ್ದರೆ ಉತ್ಸವಗಳಿಂದ ಲೋಕಜಾಗೃತಿಯಂತಹ ಪ್ರಚಂಡ ಕಾರ್ಯವು ಸುಲಭವಾಗಿ ಆಗುತ್ತದೆ. ಯಾಕೆಂದರೆ ಉತ್ಸವದ ನಿಮಿತ್ತವಾಗಿ ಬಹಳಷ್ಟು ಜನರು ಒಂದೇ ಕಡೆಗೆ ಕೂಡುತ್ತಾರೆ. ಉತ್ಸವದ ಕಾಲದ ಮಟ್ಟಿಗಾದರೂ ಅವರು ತಮ್ಮ ತಮ್ಮ ಪ್ರಪಂಚದ ಚಿಂತೆಯಿಂದ ದೂರವಾಗಿರುತ್ತಾರೆ. ಅನೇಕ ಜನರು ಒಂದೆಡೆಗೆ ಬರುವದರಿಂದ ವಿಚಾರ ವಿನಿಮಯಕ್ಕೆ ಅವಕಾಶವಾಗುವದು. ಧಾರ್ಮಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಮತ್ತು ಆರ್ಥಿಕ ವಿಷಯಗಳನ್ನು ಅವರಿಗೆ ಅಲ್ಲಿ ಸಹಜವಾಗಿಯೇ ಚರ್ಚಿಸಲಿಕ್ಕೆ ಅನುವು ದೊರೆಯುವದು. ಉತ್ಸವದ ಕೆಲಸಕ್ಕೆಂದು ವಿದ್ವಜ್ಜನರೂ ಬಂದಿರುವದರಿಂದ ಸಾಮಾನ್ಯರಿಗೆ ಸುಲಭವಾಗಿಯೇ ಅವರ ಉಪಚಾರಗಳನ್ನು ಕೇಳಲಿಕ್ಕೆ ಸಿಕ್ಕುವದು. ಮೇಲಾಗಿ ಕಲಾವಂತಿಣಿಯರ ನರ್ತನ ಮತ್ತು ಸಂಗೀತಗಾರರ ಗಾಯನ ಮೊದಲಾದ ಮನರಂಜನೆಯ ಕಾರ್ಯಕ್ರಮಗಳೂ ಇರುವವು. ಸಾರಾಂಶವೇನೆಂದರೆ— ಧಾರ್ಮಿಕ ಉತ್ಸವಗಳೆಂದರೆ ಜನರನ್ನು ಚನ್ನಾಗಿ ಸಂಘಟನೆ ಮಾಡಿ, ಅವರಲ್ಲಿ ಹೊಸ ಹುರುಪು ತುಂಬಿ, ಅವರಿಗೆ ಹೊಸ ದೃಷ್ಟಿಯನ್ನು ಕೊಟ್ಟು, ಲೋಕಕಲ್ಯಾಣವಾಗುವಂತೆ ಅವರನ್ನು ಕಾರ್ಯೋನ್ಮುಖರನ್ನಾಗಿ ಮಾಡುವ ಸಂಸ್ಥೆಗಳೆಂದು ಹೇಳಬಹುದು. ಇಷ್ಟೇ ಅಲ್ಲ, ಅವು ಧಾರ್ಮಿಕ ಉದ್ದೇಶದಿಂದ ಹೊರಟಿರುವವಾದುದರಿಂದ, ಅವು ಮಾನವನ ಐಹಿಕ ಮತ್ತು ಪಾರಮಾರ್ಥಿಕವೆಂಬ ಎರಡೂ ತರದ ಉನ್ನತಿಗೆ ಕಾರಣವಾಗುತ್ತವೆಂದು ತಿಳಿದರೆ ತಪ್ಪಾಗಲಿಕ್ಕಿಲ್ಲ. ಆದುದರಿಂದ ಸಾಮಾನ್ಯ ಜನರಿಗೆ ಉತ್ಸವಗಳೆಂದರೆ

ಭಾಗ್ಯೋದಯದ ಕಾಲವೆಂದೇ ಹೇಳಬೇಕು. ಯಾಕೆಂದರೆ ಸಾಮಾನ್ಯರು ತಮ್ಮ ಮನೆಮಾರು ಮತ್ತು ಹೆಂಡಿರು ಮಕ್ಕಳೆಂಬ ಮರ್ಯಾದಿತವಾದ ಕಕ್ಷೆಯೊಳಗೇ ಸೆರೆಸಿಕ್ಕಿರುತ್ತಾರೆ. ಭಕ್ತರಾಜನಾದ ಪ್ರಹ್ಲಾದನು ಹೇಳುವಂತೆ ಮನೆಯೆಂದರೆ ಸಾಮಾನ್ಯರಿಗೆ ಅಂಧಕೂಪ ಅಥವಾ ಕತ್ತಲೆಯ ಭಾವಿಯಾಗಿರುತ್ತದೆ. ಕತ್ತಲೆಯಿಂದ ತುಂಬಿದ ಆಳವಾದ ಬಾವಿಯೊಳಗೆ ಬಿದ್ದವರಿಗೆ ಬಾವಿಯ ಹೊರಗೆ ಹಬ್ಬಿರುವ ಆನಂದಮಯವಾದ ಪ್ರದೇಶದ ಕಲ್ಪನೆಯು ಹೇಗೆ ಬರಬೇಕು ? ಹಾಗೆಯೇ ಸಂಸಾರದಲ್ಲಿ ಆಸಕ್ತರಾದವರಿಗೆ ಪರಮಾರ್ಥಸುಖದ ಅರಿವೇ ಇರುವದಿಲ್ಲ. ಸತ್ಪುರುಷರು ಧಾರ್ಮಿಕ ಉತ್ಸವಗಳ ನೆವದಿಂದ ಸಂಸಾರೀ ಜನರನ್ನು ತಮ್ಮೆಡೆಗೆ ಬರಮಾಡಿಕೊಂಡು ಅವರಿಗೆ ಪರಮಾರ್ಥ ಬೋಧವನ್ನು ಮಾಡುವರು. ಬರೀ ಪರಮಾರ್ಥವನ್ನು ಬೋಧಮಾಡಿದರೆ ಸಾಮಾನ್ಯರಿಗೆ ದಕ್ಕಲಾರದೆಂದು, ಸತ್ಪುರು ವಿವಿಧ ಕಾರ್ಯಕ್ರಮಗಳ ಜೊತೆಗೇ ಪರಮಾರ್ಥವನ್ನು ಹೇಳಿಕೊಡುವರು. ಕಹಿಯಾದ ಔಷಧಿಯನ್ನು ಸಕ್ಕರೆ ಮೊದಲಾದ ರುಚಿಕರ ಪದಾರ್ಥಗಳೊಡನೆ ಬೆರಿಸಿ ಕೊಡುವಂತೆ, ಪರಮಾರ್ಥವನ್ನೂ ವಿವಿಧ ವಿನೋದದ ಕಾರ್ಯಕ್ರಮಗಳೊಡನೆ ಕೂಡಿಸಿ ಬೋಧಿಸುವರು. ಆದರೆ ಧಾರ್ಮಿಕ ಉತ್ಸವಗಳ ಮುಖ್ಯ ಉದ್ದೇಶವು ಮಾತ್ರ ಪರಮಾರ್ಥ ಪ್ರಚಾರವೇ ಆಹುದೆಂಬದನ್ನು ಮರೆಯಲಾಗದು. ಸಾಂಸಾರಿಕ ಜನರ ಚಿತ್ತವನ್ನು ದೇವರ ಕಡೆಗೆ ತಿರುಗಿಸುವದೇ ಇವುಗಳ ಪ್ರಧಾನ ಉದ್ದೇಶ. ಉಳಿದ ಕಾರ್ಯಕ್ರಮಗಳೆಲ್ಲ ಇದಕ್ಕಧೀನ.

ಮಹಾರಾಜರಿಗೆ ಇದನ್ನೇ ಸಾಧಿಸಬೇಕಾಗಿದ್ದುದರಿಂದ, ಅವರು ಚಿದಂಬರನ ಉತ್ಸವದ ಪಾಠವನ್ನು ತಮ್ಮ ಕೊರಳಿಗೆ ಹಾಕಿಕೊಂಡರು. ಅವರು ದಾಸಬೋಧ ವಾಚನದಿಂದ ಲೋಕಸಂಗ್ರಹದ ಪಾಠವನ್ನು ಜೆನ್ನಾಗಿ ಕಲಿತಿದ್ದರೆಂಬದು ವಾಚಕರಿಗೆ ಗೊತ್ತಿದೆ—

> ಸಾಮರ್ಥ್ಯ ಆಹೇ ಜಳವಳೀಚೇ ಜೋ ಜೋ ಕರೀಲ ತಯಾಚೇ ।
> ಪರೀ ತೇಥೇ ಭಗವಂತಾಚೇ । ಅಧಿಷ್ಠಾನ ಪಾಹಿಜೇ ॥

ಎಂಬದು ಸಮರ್ಥರ ಮರ್ಮವಾಕ್ಯವು. ನಮ್ಮ ಚರಿತ್ರನಾಯಕರು ಇದನ್ನು ಸಂಪೂರ್ಣವಾಗಿ ಅನುಸರಿಸಿ ನಡೆದರು. ಅವರು ಮೊದಲಿನಿಂದಲೂ

ಚಿದಂಬರ ಭಕ್ತರು. ಆದುದರಿಂದ ಶ್ರೀ ಶಿವಚಿದಂಬರೇಶ್ವರನ ಉತ್ಸವದಂತಹ ಧಾರ್ಮಿಕ ಕಾರ್ಯವನ್ನು ಕೈಕೊಂಡು, ಅದರ ಮುಖಾಂತರ ಜನರಿಗೆ ಭಕ್ತಿಮಾರ್ಗವನ್ನು ಬೋಧಿಸಿ, ಅವರ ಸಂಘಟನೆ ಮಾಡಿ, ಪ್ರಪಂಚವನ್ನು ಮಾಡುತ್ತಿರುವದರ ಜೊತೆಗೇ ಪರಮಾರ್ಥವನ್ನು ಹೇಗೆ ಗಳಿಸಬಹುದೆಂಬ ತೀರ ಸುಲಭವಾದ ಹೆದ್ದಾರಿಯನ್ನು ಮಹಾರಾಜರು ತೋರಿಸಿದರು. ಎಲ್ಲವನ್ನೂ ತೊರೆದು ಯತಿಗಳಾವ ಮಹಾರಾಜರು ಲೋಕಕಲ್ಯಾಣ ಮತ್ತು ಲೋಕಸಂಗ್ರಹಗಳ ಉಚ್ಚಧ್ಯೇಯದಿಂದಲೇ ಈ ಕೆಲಸವನ್ನು ಕೈಯಲ್ಲಿ ತೆಗೆದುಕೊಂಡು ಯಶಸ್ವಿಯಾಗಿ ತಮ್ಮ ಆಯುಷ್ಯದ ಇತಿಕರ್ತವ್ಯವನ್ನು ಜರುಗಿಸಿದರು.

ಮಹಾರಾಜರು ಗುರ್ಲಹೊಸೂರಿಗೆ ಬಂದದ್ದು ಶಕೆ ೧೮೧೩ರಲ್ಲಿ. ಅಂದಿನಿಂದ ಕೊನೆಯ ವರೆಗೆ ಮಹಾರಾಜರು ಮುಖ್ಯವಾಗಿ ಗುರ್ಲಹೊಸೂರಲ್ಲಿಯೇ ಕಾಲಕಳೆದರು. ಅವರ ಮೂರನೆಯ ಚಾತುರ್ಮಾಸ್ಯವು ಶಕೆ ೧೮೧೪ರಲ್ಲಿ ದೊಡ್ಡವಾಡದಲ್ಲಿ ಆಯಿತೆಂಬದು ವಾಚಕರಿಗೆ ಗೊತ್ತಿದೆ. ಶಕೆ ೧೮೧೫, ೧೮೧೬, ೧೮೧೭ ಮತ್ತು ೧೮೧೮ ಈ ನಾಲ್ಕು ವರುಷಗಳ ಚಾತುರ್ಮಾಸ್ಯಗಳು ಗುರ್ಲಹೊಸೂರಲ್ಲಿಯೇ ಆದವು. ಈ ಅವಧಿಯಲ್ಲಿ ಅವರು ದೇವಾಲಯದ ಅಪೂರ್ಣವಾದ ಕಾರ್ಯವನ್ನು ಪೂರ್ತಿಗೊಳಿಸಿದರು. ಆದರೆ ಅಷ್ಟರಿಂದಲೇ ಮಹಾರಾಜರಿಗೆ ಸಮಾಧಾನವಾಗುವಂತಿರಲಿಲ್ಲ. ಚಿದಂಬರನ ಉತ್ಸವದಲ್ಲಿ ಆಗುತ್ತಿರುವ ಅವ್ಯವಸ್ಥೆಯನ್ನು ಅವರು ಸುಮ್ಮನೇ ನೋಡುತ್ತ ಕೂಡುವದು ಶಕ್ಯವಿರಲಿಲ್ಲ. ಉತ್ಸವದ ಕಾಲಕ್ಕೆ ಬ್ರಾಹ್ಮಣ ಭೋಜನವು ಪ್ರತಿದಿವಸ ರಾತ್ರಿಯಲ್ಲಿ ದೀವಟಿಗೆಯ ಬೆಳಕಿನಲ್ಲಿ ಆಗುತ್ತಿತ್ತು. ಜನರೆಲ್ಲ ಚಳಿಯಲ್ಲಿ ನಡುಗುತ್ತ ಊಟ ಮಾಡಬೇಕಾಗುತ್ತಿತ್ತು. ಉಳಿದ ಕಾರ್ಯಕ್ರಮಗಳೂ ಅವ್ಯವಸ್ಥಿತ ರೀತಿಯಿಂದ ಸಾಗುತ್ತಿದ್ದವು. ಆದುದರಿಂದ ಮಹಾರಾಜರು ಅತ್ತ ಕಡೆಗೆ ಲಕ್ಷ ಕೊಡಬೇಕಾಯಿತು. ಅವರು ಉತ್ಸವದ ಬಗ್ಗೆ ಕಾರ್ಯಕ್ರಮ ಪತ್ರಿಕೆಯನ್ನು ಸಿದ್ಧಪಡಿಸಿ, ಉತ್ಸವದ ಆಯಾ ಕಾರ್ಯಗಳು ಸಕಾಲದಲ್ಲಿ ನಡೆಯುವಂತೆ ದಕ್ಷತೆ ವಹಿಸಿದರು. ಅವರು ಊಗ್ರಾಣದ ಮೇಲೂ ಅಡಿಗೆಯ ಮೇಲೂ ಯೋಗ್ಯ ವ್ಯವಸ್ಥಾಪಕರನ್ನು

ನೇಮಿಸಿ ಬಡಿಸುವವರಿಗೆ ತಕ್ಕ ವ್ಯವಸ್ಥೆಯನ್ನು ಹೇಳಿ ಕೊಟ್ಟು, ಬ್ರಾಹ್ಮಣ ಭೋಜನವು ಶಕ್ಯವಿದ್ದ ಮಟ್ಟಿಗೆ ಸಕಾಲದಲ್ಲಿ ಆಗುವಂತೆ ಯತ್ನ ಮಾಡಿದರು. ಮಹಾರಾಜರ ಆಪ್ಪಣೆಯಿಂದ ಉತ್ಸವಕಾಲ ಬಂದೊಡನೆ ದೇವಾಲಯವೂ ಆವಾರದ ಗೋಡೆಗಳೂ ಸಾರಿಸಲ್ಪಟ್ಟು ಶೃಂಗಾರವಾಗಹತ್ತಿದವು. ಶಕೆ ೧೮೧೭ ರಲ್ಲಿ ಮಹಾರಾಜರ ಇಚ್ಛೆಗನುಸರಿಸಿ ಸಿಂಹಾಸನದ ಕಟ್ಟೆಯ ಮುಂದೆ ಸುಂದರವಾದ ಸಭಾಮಂಟಪವನ್ನು ಹಾಕಿಸಿ ಅದರಲ್ಲಿ ಕೀರ್ತನವು ಪ್ರಾರಂಭಿಸಲ್ಪಟ್ಟಿತು. ಆದರೆ ಶಕೆ ೧೮೧೮ರ ವರೆಗೆ ಉತ್ಸವದ ಸಂಪೂರ್ಣ ವ್ಯವಸ್ಥೆಯು ಮಹಾರಾಜರ ಕಡೆಗೆ ಬಂದಿರಲಿಲ್ಲ. ಶಕೆ ೧೮೧೮ ರಿಂದ ಮಾತ್ರ ಉತ್ಸವದ ವ್ಯವಸ್ಥೆಯೆಲ್ಲ ಕೇವಲ ಮಹಾರಾಜರ ಮೇಲ್ವಿಚಾರಣೆಯಲ್ಲಿಯೇ ನಡೆಯಹತ್ತಿತು.

———

೧೦ ಮಹಾರಾಜರು ಮಾಡಿದ ಚಿದಂಬರೋತ್ಸವಗಳು

ಶಕೆ ೧೮೧೯ ರಿಂದ ಉತ್ಸವದ ಎಲ್ಲ ಭಾರವೂ ಮಹಾರಾಜ ಹೆಗಲ ಮೇಲೆಯೇ ಬಿದ್ದಿತು. ಆದರೆ ಅವರೇನೂ ಅದನ್ನು ಬಯಸಿರಲಿಲ್ಲ. ಅವರ ಹೆಗಲ ಮೇಲೆ ಬಿದ್ದ ಮೇಲೆ ಅದಕ್ಕವರು ಒಲ್ಲೆಂದೂ ಎನಲಿಲ್ಲ. ಎಲ್ಲವೂ ಚಿದಂಬರನ ಇಚ್ಛೆ, ಅವನ ಮನಸಿಗೆ ಹೇಗೆ ಬರುವದೋ ಹಾಗೆ ಆಗಲೆಂದು ಅವರು ಸುಮ್ಮನಾದರು. ಮಹಾರಾಜರು ಗುರ್ಲಹೊಸೂರಿಗೆ ಬಂದಾಗಿನಿಂದ ಅವರ ನೇತೃತ್ವದಲ್ಲಿ ನಡೆಯುವ ಕೆಲಸಗಳೆಲ್ಲ ಒಳ್ಳೇ ಯಶಸ್ವಿಯಾಗುವ-ವೆಂಬದನ್ನು ಎಲ್ಲರೂ ಮನಗಂಡಿದ್ದರು. ಅವರ ಚಿದಂಬರ ಭಕ್ತಿ, ನಿಃಸ್ವಾರ್ಥ ಬುದ್ಧಿ, ಪ್ರಾಮಾಣಿಕತನ, ಕಾರ್ಯಕ್ಷಮತೆ, ಸತತೋದ್ಯೋಗ, ಪರೋಪ-ಕಾರದ ಉತ್ಸುಕತೆ, ಲೋಕಸಂಗ್ರಹದ ಅಪೇಕ್ಷೆ, ಹೆರವರ ಬಗ್ಗೆ ಅವರಲ್ಲಿದ್ದ ದಯಾ-ಕಾರುಣ್ಯ-ಪ್ರೇಮಗಳು, ಮೋರೆಯ ಮೇಲೆ ಮಿನುಗುತ್ತಿರುವ ಅಪೂರ್ವವಾದ ಆಧ್ಯಾತ್ಮಿಕ ತೇಜಸ್ಸಂಪತ್ತು—ಇವೆಲ್ಲವೂ ಅವರನ್ನು ಜನರ ಮೆಚ್ಚಿಗೆಗೆ ಪಾತ್ರರನ್ನಾಗಿ ಮಾಡಿದವು. ಅವರ ದಂಭರಹಿತವಾದ ನಿಷ್ಕಪಟ ಆಚಾರ ವಿಚಾರಗಳಿಗೆ ಜನರು ಮುಗ್ಧರಾಗಿದ್ದರು. ಅವರ ನಿರ್ವಂಚನೆಯ ನಡತೆಯೂ ನಮ್ರಸ್ವಭಾವವೂ ಎಲ್ಲರಿಗೂ ಗೊತ್ತಾಗಿದ್ದುವು. ಎಲ್ಲವೂ ತಮ್ಮಿಂದಲೇ ಆಗುತ್ತಿದ್ದರೂ, ಅವರು ಯಾವುದಕ್ಕೂ ತಾವು ಕಾರಣರೆಂದು ಹೇಳಿಕೊಳ್ಳುತ್ತಿರಲಿಲ್ಲ. ಎಲ್ಲದಕ್ಕೂ ಅವರು ಚಿದಂಬರನನ್ನೇ ಬೊಟ್ಟು ಮಾಡಿ ತೋರಿಸುತ್ತಿದ್ದರು.

ಆದುದರಿಂದ ಉತ್ಸವದ ಎಲ್ಲ ಹೊರೆಯನ್ನೂ ಮಹಾರಾಜರ ಮೇಲೆಯೇ ಹಾಕಿಬಿಡುವದು ಒಳ್ಳೆಯದೆಂದು ಎಲ್ಲರೂ ಯೋಚಿಸಹತ್ತಿದರು. ದೀಕ್ಷಿತ ವಂಶದವರೂ ಈ ಮಾತನ್ನೊಪ್ಪಿಕೊಂಡು ತಾವಾಗಿಯೇ ಈ ಬಗ್ಗೆ ಮಹಾ-ರಾಜರಿಗೆ ಪ್ರಾರ್ಥಿಸಿಕೊಂಡರು. ಅಲ್ಲಿಯ ವರೆಗೆ ಉತ್ಸವವನ್ನು ಸಾಗಿಸಿ ಕೊಂಡು ಬರುತ್ತಿದ್ದ ಶ್ರೀ ಬಾಬಾ ದೀಕ್ಷಿತರಿಗೆ ಈ ಕೆಲಸವು ಬಿಟ್ಟರೆ

ಸಾಕಾಗಿತ್ತು. ಶ್ರೀ ಪರಮೇಶ್ವರ ದೀಕ್ಷಿತರೂ ಈ ಮಾತಿಗೆ ಸಮ್ಮತಿಸಿದರು. ಶ್ರೀ ಬಾಪೂ ದೀಕ್ಷಿತರ ಅಳಿಯಂದಿರಾದ ಶ್ರೀ ರಾಜಾರಾಮ ರುದ್ರೋ ಪಾಟೀಲರಂತೂ ಈ ವಿಷಯವಾಗಿ ಹಟವನ್ನೇ ಹಿಡಿದರು. ಶ್ರೀ ದತ್ತೋ ಬಾಳಾಜಿ ಕರೀಕಟ್ಟೆ ಮೊದಲಾದ ಜೇರೆ ಸದ್ಗೃಹಸ್ಥರೂ ಇದಕ್ಕೆ ಪುಷ್ಟಿ ಕೊಟ್ಟರು. ಹೀಗೆ ಇವರೆಲ್ಲರ ಆಗ್ರಹದ ಮೂಲಕ ಮಹಾರಾಜರು ಉತ್ಸವದ ಮುಂದಾಳುವಾಗಲಿಕ್ಕೆ ಒಪ್ಪಿಕೊಂಡರು. ಇವರೆಲ್ಲರ ಮುಖಾಂತರವಾಗಿ ಶ್ರೀ ಚಿದಂಬರನೇ ತಮಗೆ ಆಜ್ಞೆಮಾಡುತ್ತಿರುವನೆಂದೂ, ಅದನ್ನು ಚೆನ್ನಾಗಿ ನಿರ್ವಹಿಸುವದೇ ತಮ್ಮ ಕರ್ತವ್ಯವೆಂದೂ ಅವರು ತಿಳಿದುಕೊಂಡಿದ್ದರೆ ಆಶ್ಚರ್ಯವಿಲ್ಲ.

ಶಕೆ ೧೮೧೪ ರಿಂದ ಮಹಾರಾಜರೇ ಉತ್ಸವದ ಸರ್ವಾಧಿಕಾರಿಗಳಾಗಿದ್ದರೂ, ಅವರ ಹೆಸರು ಕೂಡ ಶಕೆ ೧೮೩೭ ರವರೆಗೆ ಎಲ್ಲಿಯೂ ಉಲ್ಲೇಖವಾದದ್ದು ಕಂಡು ಬರುವದಿಲ್ಲ. ಸಾರ್ವಜನಿಕ ಉತ್ಸವದ ಆಯವ್ಯಯ ಪತ್ರಿಕೆಯು ಎಲ್ಲರ ದೃಷ್ಟಿಗೂ ಬೀಳುವದು ಅತ್ಯಗತ್ಯವೆಂಬ ಮಾತು ಮಹಾರಾಜರಿಗೆ ಯಥಾರ್ಥವಾಗಿಯೇ ಗೊತ್ತಿತ್ತು. ತಾವು ದೇವರ ಸೇವೆಗೆಂದು ಕೊಟ್ಟ ದುಡ್ಡು ನಿಜವಾಗಿಯೇ ಆ ಕೆಲಸಕ್ಕೆ ಉಪಯುಕ್ತವಾಗುತ್ತಿದೆಯೋ ಇಲ್ಲವೋ ಎಂಬದನ್ನು ತಿಳಿದುಕೊಳ್ಳುವ ಅಧಿಕಾರವು ಪ್ರತಿಯೊಬ್ಬ ಭಕ್ತನಿಗೂ ಇರುವದಲ್ಲವೇ ? ಆದುದರಿಂದ ಭಕ್ತರು ಕೇಳಲಿ, ಬಿಡಲಿ, ಅವರಿಗೆ ಉತ್ಸವದ ವರದಿಯನ್ನೊಪ್ಪಿಸುವದು ಎಲ್ಲ ಸಾರ್ವಜನಿಕ ಕಾರ್ಯಕರ್ತರ ಕರ್ತವ್ಯವಾಗಿದೆ. ಕೊಡಲ್ಪಟ್ಟ ಹಣವು ಉದ್ದಿಷ್ಟವಾದ ಕಾರ್ಯಕ್ಕೆ ನಿಜವಾಗಿಯೂ ವೆಚ್ಚವಾಗುವದೆಂದೂ, ಆಪವ್ಯಯವು ಎಷ್ಟು ಮಾತ್ರವೂ ಇಲ್ಲೆಂದೂ ತಿಳಿದು ಬಂದರೆ, ಬೇಕಾದಷ್ಟು ಹಣವು ಕೂಡುತ್ತದೆ. ಆದುದರಿಂದ ಮಹಾರಾಜರು ಎಲ್ಲಕ್ಕೂ ಮೊದಲು ಕೈಕೊಂಡ ಕೆಲಸವೆಂದರೆ ಚಿದಂಬರನ ಆಗಮೋಕ್ತ ಉತ್ಸವದ ಆಯವ್ಯಯ ಪತ್ರಿಕೆಯನ್ನು ಪ್ರತಿವರುಷ ತಯಾರಿಸಿ, ಅಚ್ಚು ಹಾಕಿಸಿ, ಪ್ರಸಿದ್ಧಗೊಳಿಸಿ, ಎಲ್ಲ ಭಕ್ತರಿಗೂ ಮುಟ್ಟುವಂತೆ ಮಾಡುವದು. ಇದರಿಂದ ಮಹಾರಾಜರ ಚಾಣಾಕ್ಷತನವೂ ಬುದ್ಧಿಕೌಶಲ್ಯವೂ ಗೊತ್ತಾಗುತ್ತವೆ.

ಮಹಾರಾಜರು ಒಟ್ಟಿಗೆ ೧೫ ಉತ್ಸವಗಳನ್ನು ಮಾಡಿ ೧೫ ಪುಸ್ತಕಗಳನ್ನು ಪ್ರಸಿದ್ಧಗೊಳಿಸಿರುತ್ತಾರೆ. ಆದರೆ ಆಶ್ಚರ್ಯದ ಮಾತೆಂದರೆ, ಈ ಯಾವ ವರದಿಯಲ್ಲಿಯೂ ವ್ಯಾಮುಖ್ಯತೆಯಿಂದ ಮಹಾರಾಜರ ಹೆಸರು ಕಾಣಿಸುವದಿಲ್ಲ. ಶಕೆ ೧೮೬೬ರ ಕೊನೆಯ ವರೆಗೆ ಮಹಾರಾಜರ ಹೆಸರಿನ ಉಲ್ಲೇಖವು ಎಷ್ಟು ಮಾತ್ರವೂ ಇರುವದಿಲ್ಲ. ಉತ್ಸವದ ವ್ಯವಸ್ಥಾಪಕರೆಂದು ಶ್ರೀ ರಾಜಾರಾಮ ರುದ್ರೋ ಪಾಟೀಲ ಮತ್ತು ಶ್ರೀ ದತ್ತೋ ಬಾಳಾಜಿ ಕರೀಕಟ್ಟಿ ಇವರ ಹೆಸರುಗಳು ತೋರಿಸಲ್ಪಟ್ಟಿವೆ. ಹದಿನೈದೂ ಪುಸ್ತಕಗಳು ಶ್ರೀ ಬಾಬಾಭಟ್ಟ ಇವರೊಬ್ಬರ ಹೆಸರಿನಿಂದಾಗಲಿ, ಅಥವಾ ಇವರ ಮತ್ತು ಶ್ರೀ ಸರಮೇಶ್ವರ ದೀಕ್ಷಿತರ ಹೆಸರಿನಿಂದಾಗಲಿ ಪ್ರಸಿದ್ಧವಾಗಿವೆ. ಶಕೆ ೧೮೨೭ ರಿಂದ ೧೮೩೨ ರ ವರೆಗೆ ಪ್ರಕಟವಾದ ಪುಸ್ತಕಗಳ ಮುಖಪೃಷ್ಠದ ಮೇಲೆ ಮಾತ್ರ —

> "ಶ್ರೀಮತ್ಪರಮಹಂಸ ಶ್ರೀ ಕೈವಲ್ಯಾಶ್ರಮ ಸ್ವಾಮಿ
> ಮ. ಅವರ ಆಜ್ಞೆಯಿಂದ, ಅವರ ಶಿಷ್ಯ
> ಪ್ರೇಮಾನಂದ ಉರ್ಫ ವಾಜೀಂದ್ರ ಶ್ರೀನಿವಾಸ
> ಕರವೀರ ಇವರು ಛಾಪಿಸಿ ಪ್ರಸಿದ್ಧ ಮಾಡಿದರು."

ಎಂದು ಬರೆದದ್ದು ಕಂಡು ಬರುತ್ತದೆ. ಎಂದರೆ ಉತ್ಸವಗಳಿಗಿದ್ದ ಮಹಾರಾಜರ ಸಂಬಂಧವು ಇಷ್ಟರ ಮಟ್ಟಿಗೆ ಮಾತ್ರ ತೋರಿಸಲ್ಪಟ್ಟಿದೆ. ವಾಚಕರೇ, ಇದರಿಂದ ಮಹಾರಾಜರ ಅಪ್ರತಿಮವಾದ ಸೌಜನ್ಯವು ವ್ಯಕ್ತವಾಗುವದಿಲ್ಲವೇ? ಕೇವಲ ದಾಂಭಿಕ ಬುದ್ಧಿಯಿಂದಲೇ ಮಾಡಿದ ಅಲ್ಪ ಸತ್ಕಾರ್ಯವನ್ನೂ ಡಂಗುರ ಹೊಡೆದು ಸಾರಲು ನಾವೆಲ್ಲರೂ ಉತ್ಸುಕರಾಗಿರುತ್ತೇವೆ. ಆದರೆ ಮಹಾರಾಜರು ಚಿದಂಬರ ಸೇವೆ ಮಾಡಿದ್ದು ಯಾತಕ್ಕಾಗಿ? ಖ್ಯಾತಿಯು ಸಿಕ್ಕಬೇಕೆಂದಾಗಲಿ, ಲಾಭವು ದೊರಕಬೇಕೆಂದಾಗಲಿ, ಅಥವಾ ಪೂಜೆಯು ಆಗಲೆಂದಾಗಲಿ, ಅಲ್ಲವೇ ಅಲ್ಲ. ಕೀರ್ತಿ ಮೊದಲಾದವುಗಳ ಬೆನ್ನು ಹತ್ತುವವನು ನಿಜವಾಗಿ ತಿಳಿಗೇಡಿಯು. ಅವೆಲ್ಲ ಮೃಗಜಲದಂತೆ. ಮಹಾರಾಜರು ಮಾಡಿದ್ದು ಚಿದಂಬರನ ಸೇವಾರೂಪವಾದ ಲೋಕಸಂಗ್ರಹದ ನಿಷ್ಕಾಮ ಕರ್ಮವು. ಅಲ್ಲಿ ಕಿರುಕುಳ ಕಲ್ಪನೆಗಳಿಗೆ ಎಡೆಯೇ ಇರಲಿಲ್ಲ. ಶಕೆ ೧೮೨೭ ರಿಂದ ಅವರ ಹೆಸರು ತೋರಿಸಲ್ಪಟ್ಟದ್ದೂ ಸಹ ಭಕ್ತಜನರ ಆಗ್ರಹದಿಂದ. ನಿಜವಾಗಿ ನೋಡಿದರೆ ಅದಕ್ಕೆ ಅವರ ಸಮ್ಮತಿಯೇ ಇರಲಿಲ್ಲ.

''ನಾನು ಯಾರೂ ಅಲ್ಲ; ನನ್ನದೆಂಬುವದೇನೂ ಇಲ್ಲಿ ಇಲ್ಲ'' ಎಂಬದೇ ಅವರ ಚಿದಂಬರನ ಸೇವೆಯ ಮಹಾಮಂತ್ರವಾಗಿತ್ತು. ಆದರೆ ಆ ಸೂತ್ರದ ಯಥಾರ್ಥ ವಿವೇಚನೆಯು ಬೇರೊಂದು ಕಡೆಯಲ್ಲಿ ಬರತಕ್ಕದ್ದಿರುವದರಿಂದ ಇಲ್ಲಿ ಅದರ ಚರ್ಚೆ ಮಾಡುವ ಕಾರಣವಿಲ್ಲ.

''ಸ್ವಚ್ಛತೆ, ವ್ಯವಸ್ಥೆ ಮತ್ತು ನಮ್ರತೆ'' ಯೆಂಬ ಮೂರು ಶಬ್ದಗಳಲ್ಲಿ ಚಿದಂಬರ ಸೇವೆಯ ರಹಸ್ಯವೆಲ್ಲ ಅಡಕವಾಗಿರುವದೆಂದು ಮಹಾರಾಜರು ಮೇಲಿಂದ ಮೇಲೆ ಹೇಳುತ್ತಿದ್ದರು. ಮಹಾರಾಜರ ನಿರಭಿಮಾನ ವೃತ್ತಿಯ ಉದಾಹರಣೆಯನ್ನಂತೂ ಮೇಲೆ ಹೇಳಿಯೇ ಇದ್ದೇವೆ. ಮಹಾರಾಜರು ಎಂದೂ ಯಾರಿಗೂ ನಿಷ್ಠುರವಾಗಿ ''ಹಾಗೆ ಮಾಡು, ಹೀಗೆ ಮಾಡು'' ಎಂದು ಹೇಳಲಿಲ್ಲ. ಎರಡನೆಯವರ ಮನಸು ನೊಯ್ಯದಂತೆ ಅವರಿಗೆ ಮಾಡತಕ್ಕದ್ದನ್ನು ಪರ್ಯಾಯದಿಂದ ತಿಳಿಸಿಕೊಡುವದು ಮಹಾರಾಜರ ಮುಂದಾಳುತನದ ವೈಶಿಷ್ಟ್ಯವಾಗಿತ್ತು. ''ಚಿದಂಬರನ ದರ್ಬಾರದಲ್ಲಿ ಚಿದಂಬರನೊಬ್ಬನೇ ಪೂಜ್ಯನು. ಅವನೇ ಸೇವ್ಯನು. ನಾವೆಲ್ಲರೂ ಅವನ ಸೇವಕರು. ನಮ್ಮ ನಮ್ಮ ಅಧಿಕಾರಾನುರೂಪವಾಗಿ ನಾವು ನಿರ್ವಂಚನೆಯಿಂದ ಅವನ ಸೇವೆ ಮಾಡುವದೇ ನಮ್ಮ ಕರ್ತವ್ಯವು. ಚಿದಂಬರ ದರ್ಬಾರದೊಳಗೆ ಮಾಡ ಬೇಕಾದ ಸೇವೆಯೊಳಗೆ ಉಚ್ಚನೀಚವೆಂಬ ಭೇದವಿಲ್ಲ'' ಎಂದು ಮಹಾರಾಜರು ಯಾವಾಗಲೂ ಉಪದೇಶ ಮಾಡುತ್ತಿದ್ದರು.

ಆದರೆ ನಮ್ರನಾಗುವದೆಂದರೆ ಎಲ್ಲವನ್ನೂ ಸುಮ್ಮನೇ ಸಹನ ಮಾಡುವದಲ್ಲವೆಂದು ಮಹಾರಾಜರು ತಿಳಿಸಿ ಹೇಳುತ್ತಿದ್ದರು. ಉತ್ಸವಗಳಲ್ಲಿ ಸುವ್ಯವಸ್ಥೆಯು ಅಗತ್ಯವಾದ ಮಾತಾಗಿದೆ. ಸಾವಿರಾರು ಜನರು ಕೂಡಿದ ಪ್ರಸಂಗಗಳಲ್ಲಿ ವ್ಯವಸ್ಥೆಯಿಲ್ಲದಿದ್ದರೆ, ಎಲ್ಲವೂ ಕೆಟ್ಟು ಹೋಗಿ, ಎಲ್ಲರೂ ತೊಂದರೆಗೊಳಗಾಗುವ ಪ್ರಸಂಗ ಬರುವದು. ನಮ್ರತೆಯ ಸಂಗಡಲೇ ಶಿಸ್ತು-ವ್ಯವಸ್ಥೆಗಳನ್ನೂ ಕಾಯ್ದುಕೊಳ್ಳಲಿಕ್ಕೇ ಬೇಕು. ಮಹಾರಾಜರು ಉತ್ಸವ ಮಾಡುವ ವರೆಗೆ ಗುರ್ಲಹೊಸೂರ ಜಾತ್ರೆಗೆ ಪ್ರತಿವರುಷ ನಾಲ್ಕೈದು ಸಾವಿರ ಜನರಾದರೂ ತಪ್ಪದೇ ಕೂಡುತ್ತಿದ್ದರು. ಶಕೆ ೧೮೮೯ ರಲ್ಲಿ ಉತ್ಸವದ ಕಾಲಕ್ಕೆ ಲೋ. ಬಾಳ ಗಂಗಾಧರ ತಿಲಕರು ಆಗಮಿಸಿದಾಗಂತೂ

೧೦—೧೫ ಸಾವಿರ ಜನರು ಕೂಡಿದ್ದರು. ಅರ್ಥಾತ್, ಹೀಗೆ ಕೂಡಿದ ಜನರ ಊಟ ವಸತಿಗಳ ವ್ಯವಸ್ಥೆಯೆಲ್ಲ ಮಹಾರಾಜರ ಮೇಲೆಯೇ ಬೀಳುತ್ತಿತ್ತು. ಇದರ ಹೊರತಾಗಿ ಆಗಡಿಯ ಶ್ರೀ ಶೇಷಾಚಲ ಸ್ವಾಮಿಗಳವರೂ, ಶ್ರೀ ಟೇಂಬೇ ಸ್ವಾಮಿಗಳವರೂ ಗುರ್ಲಹೊಸೂರಿಗೆ ದಯಮಾಡಿಸಿದಾಗ ಗುರ್ಲಹೊಸೂರಿಗೆ ಬಂದು ಹೋಗುವ ಜನರ ಆದರಾತಿಥ್ಯವೂ ಮಹಾರಾಜರ ಮೇಲೆಯೇ ಬೀಳುತ್ತಿತ್ತು. ಆದರೆ ಮಹಾರಾಜರು ಯಾವುದಕ್ಕೂ ಹೆದರದೆ ಎಲ್ಲ ಭಾರವನ್ನೂ ಹೊರಲಿಕ್ಕೆ ಮುಂದುವರೆಯುತ್ತಿದ್ದರು. ಎಂದ ಮೇಲೆ ಇವೆಲ್ಲ ಕೆಲಸಗಳು ಸರಿಯಾಗಿ ಆಗಬೇಕಾದರೆ ವ್ಯವಸ್ಥೆಯಿಲ್ಲದಿದ್ದರೆ ಹೇಗೆ ?

ವ್ಯವಸ್ಥೆಯ ಮೇಲೆ ಮಹಾರಾಜರ ಕಟಾಕ್ಷವು ಬಹಳ. ಉತ್ಸವ ಬರುವದರೊಳಗಾಗಿಯೇ ಉತ್ಸವಕ್ಕೆ ಬೇಕಾಗುವ ಎಲ್ಲ ಸಾಹಿತ್ಯಗಳನ್ನೂ ಸರಿಯಾಗಿ ಸಕಾಲದಲ್ಲಿ ಶೇಖರಿಸುತ್ತಿದ್ದರು. ಯಾವ ಪದಾರ್ಥಗಳು ಯಾವ ಕಾಲಕ್ಕೆ ಯಾರ ಕಡೆಗೆ ಉಚಿತವಾಗಿ ಆಗಲಿ ಅಥವಾ ಸುಲಭ ಬೆಲೆಯಲ್ಲಾಗಲಿ ಸಿಕ್ಕುವವೋ, ಅವುಗಳನ್ನು ಅದೇ ಕಾಲಕ್ಕೆ ಅವರ ಕಡೆಯಿಂದಲೇ ಸಂಗ್ರಹಮಾಡುತ್ತಿದ್ದರು. ವ್ಯವಸ್ಥೆಯೊಳಗೆ ಮಿತವ್ಯಯವು ಬಂದೇ ಬರುವದಲ್ಲವೇ? ಯಾರ ಯಾರ ಕಡೆಯಿಂದ ಉತ್ಸವದ ಯಾವಯಾವ ಕೆಲಸವು ಆಗುವಂತಿರುವದೋ, ಅದನ್ನು ಅವರ ಕಡೆಯಿಂದಲೇ ಸಕಾಲಕ್ಕೆ ಮಾಡಿಸಿಕೊಳ್ಳುತ್ತಿದ್ದರು. ಸಾರಾಂಶವೇನೆಂದರೆ—ಚಾಣಾಕ್ಷನಾದ ಒಳ್ಳೇ ಸಂಸಾರಿಯು ತನ್ನ ಕುಟುಂಬದ ವ್ಯವಸ್ಥೆ ಮಾಡುವಂತೆ ಮಹಾರಾಜರು ಉತ್ಸವದ ಬಗ್ಗೆ ವರ್ತಿಸುತ್ತಿದ್ದರು. ಆದರೆ ಆದರಲ್ಲಿ ಮಹಾರಾಜರ ಸ್ವಾರ್ಥವು ಮಾತ್ರ ಎಷ್ಟೂ ಇರುತ್ತಿದ್ದಿಲ್ಲ. ಸಾರ್ವಜನಿಕ ದುಡ್ಡೆಂದು ಆದರ ವೆಚ್ಚದ ಬಗ್ಗೆ ಮಹಾರಾಜರು ಎಂದೂ ಉದಾಸೀನರಾಗುತ್ತಿದ್ದಿಲ್ಲವೆಂಬದು ನೆನಪಿನಲ್ಲಿಡಬೇಕಾದ ಮಾತು.

ಮನುಷ್ಯ ಪರೀಕ್ಷೆಯಲ್ಲಂತೂ ಮಹಾರಾಜರು ಬಲು ನಿಷ್ಣಾತರು. ಯಾವನೊಬ್ಬನ ಮೋರೆಯನ್ನು ನೋಡಿದೊಡನೆ ಮಹಾರಾಜರು ಅವನ ಬೆಲೆಯನ್ನು ಇಂತಿಷ್ಟೇ ಎಂದು ಕಟ್ಟಿಬಿಡುತ್ತಿದ್ದರು. ಆದರೆ ತಾವು ಕಂಡುಹಿಡಿದ

ಮಾತುಗಳನ್ನು ಮಾತ್ರ ಮಾತಾಡಿ ಹೊರಗೆಡಹುತ್ತಿರಲಿಲ್ಲ. ಯಾವನೊಬ್ಬನು ಉಳಿದ ವಿಷಯಗಳಲ್ಲಿ ಎಷ್ಟೇ ಅಯೋಗ್ಯನಿದ್ದರೂ, ಯಾವ ಒಂದೆರಡು ಸಂಗತಿಗಳಲ್ಲಿ ಅವನ ಕಡೆಯಿಂದ ಚಿದಂಬರ ಸೇವೆಯು ಚನ್ನಾಗಿ ಆಗುವದೆಂದು ತೋರುವದೋ ಅವನಿಗೆ ಅವೇ ಸಂಗತಿಗಳನ್ನು ಒಪ್ಪಿಸಿಕೊಡುತ್ತಿದ್ದರು. ಯಾಕೆಂದರೆ ಯಾವ ಮನುಷ್ಯನೂ ಪೂರ್ಣನಿರುವದಿಲ್ಲ. ಅಥವಾ ಸರ್ವಥೈವ ತ್ಯಾಜ್ಯನಿರುವದಿಲ್ಲ. ಪ್ರತಿಯೊಬ್ಬನಲ್ಲಿ ಕೆಲವು ಒಳ್ಳೆಯ ಗುಣಗಳೂ ಕೆಲವು ದುಷ್ಟ ಗುಣಗಳೂ ಇದ್ದೇ ಇರುವವು. ಅವನ ದುರ್ಗುಣಗಳಿಗೆ ಆಸ್ಪದ ಸಿಕ್ಕದಂತೆ ಮಾಡಿ, ಅವನ ಸದ್ಗುಣಗಳ ಲಾಭವನ್ನು ತಮ್ಮ ಕೆಲಸಕ್ಕೆ ಮಾಡಿಕೊಳ್ಳುವದೇ ಮುಂದಾಳುವಿನ ಕೆಲಸವು. ಆದುದರಿಂದ ಮಹಾರಾಜರ ಪರಿವಾರದಲ್ಲಿಯೂ ನಾನಾತರದ ಜನರು ಸಿಕ್ಕುತ್ತಿದ್ದರು. ಕಳ್ಳರೂ ವ್ಯಭಿಚಾರಿಗಳೂ ಅಸತ್ಯವಾದಿಗಳೂ ಕೂಡ ಮಹಾರಾಜರ ಸೇವೆಯಲ್ಲಿ ರತರಾಗಿದ್ದದು ಕಂಡುಬರುತ್ತಿತ್ತು. ಇದರಿಂದ ಕೆಲವು ಸಾರಿ ಮಹಾರಾಜರ ಮೇಲೂ ಕೆಲ ತಿಳಿಗೇಡಿಗಳು ಸಿಟ್ಟಿಗೇಳುವ ಪ್ರಸಂಗ ಬರುತ್ತಿತ್ತು. ''ಇಂತಹ ದುಷ್ಟರಿಗೆ ನಿಮ್ಮ ಬಳಿಯಲ್ಲಿ ಸ್ಥಾನವೇಕೆ?'' ಎಂಬುದೇ ಅವರ ಆಕ್ಷೇಪಣೆಯ ಸಾರವಿರುತ್ತಿತ್ತು. ಒಂದು ಸಲ ಮಹಾರಾಜರ ತೀರ ಸಮೀಪದಲ್ಲಿ ಓಡಾಡುವ ಮನುಷ್ಯನೊಬ್ಬನ ಬಗ್ಗೆ ಇದೇ ತರದ ವಾದವುಂಟಾಯಿತು. ಜನರು ಅವನನ್ನು ಅವನು ದುಷ್ಕೃತ್ಯ ಮಾಡುವ ಕಾಲದಲ್ಲಿಯೇ ಹಿಡಿದು ಮಹಾರಾಜರ ಮುಂದೆ ತಂದು ನಿಲ್ಲಿಸಿದರು. ಅವನು ವ್ಯಭಿಚಾರಿಯಾಗಿರುವನೆಂದೂ ತುಡುಗನೆಂದೂ ಮಹಾರಾಜರ ಮುಂದೆ ಅವರು ಅಪಾದನೆ ಮಾಡಿದರು. ಮಹಾರಾಜರು ಎಲ್ಲ ಸಂಗತಿಗಳನ್ನೂ ಸಮಾಧಾನದಿಂದಲೇ ಕೇಳಿಕೊಂಡರು. ಅವರ ಸ್ವಾಭಾವಿಕವಾದ ಮಂದಹಾಸವು ಅವರ ಮೋರೆಗೆ ಕಾಂತಿಕೊಡುತ್ತಿರುವಾಗಲೇ ಅವರು ಹೇಳಿದ್ದೇನೆಂದರೆ— ''ಟೊಂಕದ ವರೆಗಿನ ಇವನ ದೇಹದ ಭಾಗವು ನಮಗೆ ತೀರ ನಿರುಪಯುಕ್ತವಾಗಿದೆ. ಆದರೆ ಅಷ್ಟರಿಂದ ಇವನು ತೀರಾ ನಿರುಪಯುಕ್ತನೆಂದು ಹೇಳುವದು ಸರಿಯಾಗಲಾರದು. ಎಂದೂ ತಪ್ಪು ಮಾಡದ ಮನುಷ್ಯರು ಯಾರಾದರೂ ಇರುವರೇ, ನೀವೇ ಹೇಳಿರಿ! ಅವನು ಕಳವು ಮಾಡಿದ್ದು ಕೂಡ ತಿಳಿಗೇಡಿತನದಿಂದಲೇ ಸರಿ. ಬಡತನದ ಭೂತವೇ ಅವನ

ಕಡೆಯಿಂದ ಹಾಗೆ ಮಾಡಿಸಿದೆ. ಅದಕ್ಕಾಗಿ ನಾವು ಅವನ ಮೇಲೆ ಸಿಟ್ಟು-ಗೇಳುವ ಬದಲು ಕರುಣೆದೋರಬೇಕು. ಅವನು ಮಾಡುತ್ತಿರುವ ಸೇವೆಯನ್ನು ನೋಡಿದರೆ, ಅವನಿಗೆ ನಾವು ಕೊಡಬೇಕಾದ ಪ್ರತಿಫಲವು ಅವಕ್ಕೂ ಹೆಚ್ಚಾಗಬೇಕಾಗುತ್ತದೆ.''

ಆಯಾ ಕೆಲಸಗಳಿಗೆ ಯೋಗ್ಯರಾದವರನ್ನು ಆರಿಸಿ ತೆಗೆದು, ಅವರಿಗೇ ಆ ಕೆಲಸಗಳನ್ನು ಮಹಾರಾಜರು ಒಪ್ಪಿಸಿ ಕೊಡುತ್ತಿದ್ದರು. ಉತ್ಸವದ ಒಟ್ಟು ಕೆಲಸವನ್ನು ಶಾಖೆ ಶಾಖೆಗಳಲ್ಲಿ ವಿಂಗಡಿಸಿ, ಬೇರೆ ಬೇರೆ ಜನರಿಗೆ ಅವುಗಳನ್ನು ವಹಿಸಿಕೊಡುತ್ತಿದ್ದರು. ಪ್ರತಿಯೊಬ್ಬನು ತನಗೆ ನಿಯಮಿಸಿ ಕೊಟ್ಟದ್ದನ್ನೇ ಮಾಡಬೇಕೆಂದೂ ಮಹಾರಾಜರ ನಿಯಮವಿರುತ್ತಿತ್ತು. ಕುಂಡಮಂಟಪದ ಕೆಲಸವು ಒಬ್ಬನ ಕಡೆಗೆ, ಅಡಿಗೆಯ ವ್ಯವಸ್ಥೆಯು ಮತ್ತೊಬ್ಬನ ಕಡೆಗೆ, ನೀರಿನ ಕೆಲಸವು ಇನ್ನೊಬ್ಬನ ಕಡೆಗೆ, ಬಡಿಸುವ ಕೆಲಸವು ಬೇರೊಬ್ಬನ ಕಡೆಗೆ, ವಾಹನ ಮೊದಲಾದವುಗಳ ವ್ಯವಸ್ಥೆಯು ಐದನೆಯವನ ಕಡೆಗೆ ಹಂಚಿ ಕೊಡಲ್ಪಡುತ್ತಿದ್ದುದರಿಂದ, ಎಲ್ಲ ಕೆಲಸಗಳೂ ವೇಳಾಪತ್ರಿಕೆಗೆ ಸರಿಯಾಗಿ ನಡೆಯುತ್ತಿದ್ದವು. ಇಷ್ಟೊತ್ತಿಗೆ ಊಟವಾಗಬೇಕೆಂದಿದ್ದರೆ, ಬೇಕಾದಷ್ಟು ಜನ ಕೂಡಲಿ, ಅಷ್ಟೊತ್ತಿಗ ಸರಿಯಾಗಿ ಎಲ್ಲರೂ ಊಟಕ್ಕೆ ಕೂಡುವಂತೆ ವ್ಯವಸ್ಥೆಯಾಗುತ್ತಿತ್ತು. ಮೊದಲನೆಯ ಪಂಕ್ತಿಯು ಸರಿಯಾಗಿ ಮಧ್ಯಾಹ್ನದ ೧೨ ಗಂಟೆಗೆ ಊಟಕ್ಕೆ ಕೂಡಬೇಕೆಂದು ಮಹಾರಾಜರು ನಿಶ್ಚಯಿಸಿದರೆ, ಅಷ್ಟೊತ್ತಿಗೆ ಅವರೆಲ್ಲ ಊಟ ಸುರುಮಾಡಬಹುದೆಂಬದನ್ನು ಸೂಚಿಸುವ ತೋಪು ಸರಿಯಾಗಿ ಹಾರುತ್ತಿತ್ತು. ಜಾತ್ರೆಗೆ ಬರುವ ಜನರ ಸಂಖ್ಯೆಯಲ್ಲಿ ಎಷ್ಟೇ ಹೆಚ್ಚು ಕಡಿಮೆಯಾದರೂ ಮಹಾರಾಜರ ಈ ನಿಯಮಕ್ಕೆ ಭಂಗ ಬರುತ್ತಿದ್ದಿಲ್ಲ. ಶಕೆ ೧೮೮೯ನೆಯ ಉತ್ಸವದಲ್ಲಿ ಲೋ. ತಿಲಕರು ಗುಲ್ಬರ್ಗಾಕ್ಕೆ ದಯಮಾಡಿಸಿದರಷ್ಟೇ. ಅವರಿಗೆ ಸಹ ಮಹಾರಾಜರು ಇಷ್ಟೊತ್ತಿಗೆ ಮೊದಲನೆಯ ಪಂಕ್ತಿಯು ಊಟಕ್ಕೆ ಕೂಡುವದೆಂದೂ, ನೀವು ಆಪ್ಪಟೊಳಗಾಗಿ ಮಡಿಯುಟ್ಟುಕೊಂಡು ಬರಬೇಕೆಂದೂ, ಮೊದಲೇ ತಿಳಿಸಿದ್ದರು. ಆದರೆ ಅಕಸ್ಮಾತ್ತಾಗಿ ಲೋಕಮಾನ್ಯರಿಗೆ ಬರಲಿಕ್ಕೆ ತಡವಾಯಿತು. ಮಹಾರಾಜರಾದರೋ ನಿಷ್ಠುರರಾದ ನಿರ್ದಾಕ್ಷಿಣ್ಯ ವ್ಯವಸ್ಥಾಪಕರು. ಅವರು ಸರಿಯಾದ ವೇಳೆಗೆ ಎಲ್ಲರಿಗೂ ಊಟಕ್ಕೆ ಕೊಡಲಿಕ್ಕೆ

ಅಪ್ಪಣೆ ಕೊಟ್ಟುಬಿಟ್ಟರು. ಬ್ರಾಹ್ಮಣರ ಊಟ ಸುರುವಾದ ೫–೧೦ ನಿಮಿಷ ಗಳೊಳಗಾಗಿ ಲೋಕಮಾನ್ಯರು ಮಡಿಯುಟ್ಟುಕೊಂಡು ಊಟಪ ಸಲುವಾಗಿ ಬಂದು ನಿಂತರು. ಮಹಾರಾಜರ ಹೊರತು ಮತ್ತೆ ಯಾರಾದರೂ ಅಲ್ಲಿದ್ದರೆ ಅವರು ಹೌಹಾರಿ ಕೂಡಬಹುದಾಗಿತ್ತು. ಆದರೆ ಸಮಯಜ್ಞರಾದ ಮಹಾ-ರಾಜರು ಆ ಪ್ರಸಂಗಕ್ಕೆ ಬೇರೊಂದು ರೂಪವನ್ನು ಕೊಟ್ಟರು. ಅವರು ಲೋಕಮಾನ್ಯರಿಗೆ ''ನೀವೀಗ ಊಟಕ್ಕೆ ಕೂಡುವದು ಬೇಡ. ನಿಮ್ಮನ್ನು ನೋಡಬೇಕೆಂದು ಎಲ್ಲ ಜನರೂ ಆತುರರಾಗಿದ್ದಾರೆ. ಆದುದರಿಂದ ನೀವು ನೀರು ಕೇಳುತ್ತ ಎಲ್ಲ ಪಂಕ್ತಿಗಳಲ್ಲಿಯೂ ಓಡಾಡಿರಿ. ಎಂದರೆ ಎಲ್ಲ ಜನರಿಗೂ ಅನಾಯಾಸವಾಗಿಯೇ ನಿಮ್ಮ ದರುಶನವಾಗುವದಲ್ಲದೆ, ನಿಮಗೂ ಚಿದಂಬರ ಸೇವೆಯು ಪುಣ್ಯದೊರಕುವದು,'' ಎಂದು ಹೇಳಿಬಿಟ್ಟರು. ಸೂಜ್ಞರಾದ ಲೋಕಮಾನ್ಯರಿಗೆ ಮಹಾರಾಜರ ಕೌಶಲ್ಯವನ್ನು ನೋಡಿ ಆನಂದವಾಯಿತು. ಮಹಾರಾಜರ ಸೂಚನೆಗೆ ಅವರು ಸಂತೋಷದಿಂದಲೇ ಸಮ್ಮತಿಸಿದರೆಂದು ಬೇರೆ ಹೇಳಲಿಕ್ಕೆ ಬೇಡ. ಇದರ ಮೇಲಿಂದ ಮಹಾರಾಜರು ವ್ಯವಸ್ಥೆಯನ್ನು ನಿಷ್ಕುರವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ಕಾಯ್ದುಕೊಂಡು ಹೋಗುವದರ ಜೊತೆಗೆ, ನೈಮೇಲೆ ಬಂದಂಥ ಸೂಕ್ಷ್ಮ ಪ್ರಸಂಗಗಳಿಗೆ ಹೇಗೆ ಎದೆಗೊಡು-ತ್ತಿದ್ದರೆಂಬದೂ ತಿಳಿಯುವಂತಿದೆ

ವ್ಯವಸ್ಥೆಯನ್ನು ಕಾಯ್ದುಕೊಂಡು ಹೋಗಬೇಕೆನ್ನುವವರಿಗೆ ಮೇಲಿ-ನಂಥ ಕಠಿಣ ಪ್ರಸಂಗಗಳು ಅನೇಕ ಸಲ ಬರುತ್ತವೆ. ಮತ್ತೊಂದು ಸಾರೆ ಮಹಾರಾಜರು ಒಬ್ಬ ಮೂಕನಿಗೆ ''ನೀನು ನೀರಿನ ಮೇಲೆ ನಿಂತಿರಬೇಕು. ನಮ್ಮ ಅಪ್ಪಣೆಯಾಗುವ ವರೆಗೆ ಯಾರಿಗೂ ನೀರಿನ ಹೌದನ್ನು ಮುಟ್ಟಗೊಡ-ಬಾರದು. ಮತ್ತು ನಾವು ನಿಯಮಿಸಿದ ಜನರ ಹೊರತಾಗಿ ಬೇರೆ ಯಾರಿಗೂ ಅಲ್ಲಿ ಬರಗೊಡಲಾಗದು'' ಎಂದು ಆಜ್ಞೆ ಮಾಡಿದರು. ಹೀಗೆ ಅಪ್ಪಣೆಯಾದ ಕೆಲ ನಿಮಿಷಗಳ ಮೇಲೆ ಉತ್ಸವಕ್ಕೆ ಬಂದ ಒಬ್ಬ ಪ್ರತಿಷ್ಠಿತ ಜಹಗೀರ-ದಾರರಿಗೆ ನೀರು ಬೇಕಾದವು. ಮಹಾರಾಜರು ಮಾಡಿದ ವ್ಯವಸ್ಥೆಯು ಅವರಿಗೆ ಗೊತ್ತಿರಲಿಲ್ಲ. ನೀರು ಬಡಿಸುವ ಅಧಿಕಾರವೂ ಅವರಿಗೆ ಮಹಾ-ರಾಜರಿಂದ ಸಿಕ್ಕಿರಲಿಲ್ಲ. ಜಹಗೀರದಾರರು ನೀರಿಗಾಗಿ ಮೊದಲೊಬ್ಬ

ಹುಡುಗನನ್ನು ಕಳಿಸಿದರು. ಮೂಕನು ಆ ಹುಡುಗನಿಗೆ ನೀರು ಮುಟ್ಟಿಗೊಡಲಿಲ್ಲ ಜಹಗೀರದಾರರು ಒಳ್ಳೇ ಆಪ್ಯತೆಯಿಂದ ತಾವೇ ನೀರು ತರಬೇಕೆಂದು ತಂಬಿಗೆ ತಕ್ಕೊಂಡು ಹೊರಟರು. ಅವರು ಹೋಗಿ ಮೂಕನಿಗೆ ನೀರು ಕೊಡಬೇಕೆಂದು ಹೇಳಿಕೊಂಡಿದ್ದರೆ, ಅವರಿಗೆ ನೀರು ಸಿಕ್ಕಬಹುದಾಗಿತ್ತು. ಆದರೆ ತಾವೇ ಹೌದನ್ನು ಮುಟ್ಟಿ ನೀರು ತಕ್ಕೊಳ್ಳಬೇಕೆಂದು ಅವರು ಸ್ರಯತ್ನಿಸಿದರು. ಆದರೆ ಮೂಕನು ಏನು ಮಾಡಿದರೂ ಅವರನ್ನು ನೀರಿನ ಸಮೀಪಕ್ಕೆ ಬರಗೊಡಲಿಲ್ಲ. ಜಹಗೀರದಾರರಿಗೆ ಬಲು ಅಪಮಾನವಾದಂತಾಗಿ, ಮೂಕನ ಬಗ್ಗೆ ಅವರಲ್ಲಿ ಕ್ರೋಧವುಂಟಾಯಿತು. ಮೂಕನಂತಹ ಒಬ್ಬ ಯಃಕಶ್ಚಿತ ಮನುಷ್ಯನು ಸಾರ್ವಜನಿಕ ಉತ್ಸವದಲ್ಲಿ ಸಾರ್ವಜನಿಕರ ಸಲುವಾಗಿ ಇಟ್ಟ ನೀರಿನ ಹೌದನ್ನು ತಮ್ಮುಂಥವರಿಗೆ ಮುಟ್ಟಿಗೊಡುವ ದಿಲ್ಲೆಂಬದರ ಅರ್ಥವೇನೆಂಬದು ಅವರಿಗೆ ತಿಳಿಯದಂತಾಯಿತು. ತನ್ನ ವರ್ತನದ ಕಾರಣವನ್ನು ನಾಲಿಗೆಯಿಂದ ಸ್ಪಷ್ಟವಾಗಿ ತಿಳಿಸಿ ಹೇಳುವ ಸ್ಥಿತಿಯು ಮೂಕನಿಗಿದ್ದಿಲ್ಲ. ಅವನಿಗೆ ಮಾತಾಡುವ ಶಕ್ತಿಯೇ ಇಲ್ಲವೆಂದ ಮೇಲೆ ಅವನಾದರೂ ಏನು ಮಾಡಬೇಕು? ನಿಜಸ್ಥಿತಿಯು ತಿಳಿಯದ್ದರಿಂದ ಜಹಗೀರದಾರರೂ ಈರ್ಷೆಗೆ ಬಿದ್ದರು. ಅವರು ಮೂಕನನ್ನು ಬಲಾತ್ಕಾರದಿಂದ ನುಗಿಸಿ ನೀರು ಒಯ್ದೇ ತೀರಬೇಕೆಂದು ಹಟತೊಟ್ಟರು. ಆದರೆ ಮೂಕನೇನೂ ಸಾಮಾನ್ಯನಾಗಿದ್ದಿಲ್ಲ. ಅವನೆಂದರೆ ಕಲಿಯುಗದ ಭೀಮಸೇನನೇ ಸರಿ. ಅವನು ಕೊನೆಗೆ ಜಹಗೀರದಾರರನ್ನು ಎತ್ತಿ ನೆಲಕ್ಕೆ ಒಗೆದೇ ಬಿಟ್ಟನು. ಜಹಾಗೀರದಾರರು ಸಿಟ್ಟಿನಿಂದ ಹಲ್ಲು ಕಡಿಯುತ್ತ ನೆಟ್ಟಗೆ ಮಹಾರಾಜರ ಕಡೆಗೆ ಬಂದು ತಮಗಾದ ಅಪಮಾನವನ್ನು ತಿಳಿಸಿ, ಮೂಕನನ್ನು ಸರಿಯಾಗಿ ಶಾಸನಮಾಡಿಯೇ ತೀರಬೇಕೆಂದು ಆಗ್ರಹಪಡಹತ್ತಿದರು. ಮಹಾರಾಜರು ಎಲ್ಲ ಸಂಗತಿಗಳನ್ನು ಸರಿಯಾಗಿ ಕೇಳಿಕೊಂಡು, ಮೂಕನ ವರ್ತನೆಯು ನ್ಯಾಯವಾದುದೆಂದೂ ಅವನಿಗೆ ಶಿಕ್ಷೆ ಕೊಡಲಾಗದೆಂದೂ ನಿರ್ದಾಕ್ಷಿಣ್ಯವಾಗಿ ನಿರ್ಣಯ ಕೊಟ್ಟರು. ಜಹಗೀರದಾರರು ಸಿಟ್ಟಿನ ಆವೇಶವಿರುವ ವರೆಗೆ ಮಹಾರಾಜರ ನಿರ್ಣಯವು ಅಯೋಗ್ಯವೆಂದು ತಿಳಿದರೂ, ಕೊನೆಗೆ ಅವರು ಮಹಾರಾಜರ ಕ್ಷಮೆಯನ್ನೂ ಮೂಕನ ಕ್ಷಮೆಯನ್ನೂ ಕೇಳಿಕೊಂಡೇ ಗುರ್ಲಹೊಸೂರನ್ನು ಬಿಟ್ಟರು.

ಮಹಾರಾಜರು ಬಹಳ ಅಶಕ್ತರಾಗಿದ್ದುದರಿಂದ ಅವರಿಗೆ ವಿಶೇಷವಾಗಿ ಅಡ್ಡಾಡಲಿಕ್ಕೆ ಆಗುತ್ತಿದ್ದಿಲ್ಲ. ಆದರೂ ಅವರು ಒಂದೇ ಕಡೆಗೆ ಕುಳಿತು ಎಲ್ಲದರ ಮೇಲ್ವಿಚಾರಣೆಯನ್ನು ತಪ್ಪದೇ ಮಾಡುತ್ತಿದ್ದರು. ಹಗಲು ರಾತ್ರಿಯನ್ನದೆ, ವೇಳೆ-ಅವೇಳೆಯೆನ್ನದೆ ಎಲ್ಲ ಕೆಲಸಗಳ ಮೇಲೂ ಅವರ ದೃಷ್ಟಿಯಿರುತ್ತಿತ್ತು. ಇದರಿಂದ ಉತ್ಸವದ ಕಾಲಕ್ಕೆ ಅವರಿಗೆ ಅತ್ಯಾವಶ್ಯಕವಾದ ನಿದ್ರೆ-ವಿಶ್ರಾಂತಿಗಳೂ ಕೂಡ ಸಿಕ್ಕುತ್ತಿರಲಿಲ್ಲ. ಆದರೂ ಅವರು ಕರ್ತವ್ಯಚ್ಯುತರಾಗುತ್ತಿದ್ದಿಲ್ಲ. ತಾವು ಕುಳಿತಲ್ಲಿಂದಲೇ ತಮ್ಮ ಶಿಷ್ಯನಿಗೆ ತಿಳಿಯುವಂತೆ ಅವರು ತಮ್ಮ ಕಣ್ಣುಗಳಿಂದಲೇ ಆಜ್ಞೆ ಮಾಡುತ್ತಿದ್ದರು. ಜಾಣರಾದ ಶಿಷ್ಯರೂ ಗುರುಗಳ ಕಣ್ಣುಸನ್ನೆಯ ಮೇಲಿಂದಲೇ ಅವರ ಮನೋಗತವನ್ನು ತಿಳಿದುಕೊಂಡು ಅದರಂತೆ ವರ್ತಿಸುತ್ತಿದ್ದರು. ಒಮ್ಮೊಮ್ಮೆ ಈ ರೀತಿಯಿಂದ ಅಪ್ಪಣೆ ತಿಳಿಸುವದು ಅಶಕ್ಯವಾದರೆ, ಮಹಾರಾಜರು ತಮ್ಮ ಕೈಯೊಳಗಿನ ''ಮಾರುತಿ''ಯೆಂಬ ಹೆಸರಿನ ಬಡಿಗೆಯನ್ನು ಕೊಟ್ಟು ಕಳಿಸುತ್ತಿದ್ದರು. ಆ ಬಡಿಗೆ ಯಾವನ ಕೈಯಲ್ಲಿ ಇರುವದೋ, ಅವನು ಹೇಳಿದ್ದನ್ನೆಲ್ಲ ಕೇಳಬೇಕೆಂದು ಮಹಾರಾಜರ ಕಟ್ಟಪ್ಪಣೆಯಿತ್ತು. ಪ್ರಸಿದ್ಧವಾದ ಆ ಮಾರುತಿಯನ್ನು ಬೇಕಾದವರು ಇಂದಿಗೂ ಮಹಾರಾಜರ ಸನ್ನಿಧಾನದಲ್ಲಿ ನೋಡಬಹುದು.

ಶಿಸ್ತು ಮತ್ತು ವ್ಯವಸ್ಥೆಗಳನ್ನು ಪಾಲಿಸಬೇಕೆನ್ನುವ ವ್ಯವಸ್ಥಾಪಕರಿಗೆ ಅವುಗಳನ್ನು ಮೀರಿ ನಡೆದ ಜನರಿಗೆ ಶಿಕ್ಷೆ ಮಾಡುವ ಪ್ರಸಂಗವೂ ಬಂದೇ ಬರುವದು. ಮಹಾರಾಜರಾದರೂ ಹೀಗೆ ಅಪರಾಧಿಗಳಾದವರಿಗೆ ಶಿಕ್ಷೆಯನ್ನೇನೋ ವಿಧಿಸುತ್ತಿದ್ದರು. ಆದರೆ ಅದೆಂತಹ ಶಿಕ್ಷೆಯು ! ಶಿಕ್ಷಿಸಲ್ಪಟ್ಟ ಜನರ ಮನಸ್ಸಿಗೆ ಮಾತ್ರ ಆ ಶಿಕ್ಷೆಯ ವೆಟ್ಟು ಕೂಡುತ್ತಿತ್ತಲ್ಲದೆ ಉಳಿದ ಯಾವ ರೀತಿಯಿಂದಲೂ ಆ ಶಿಕ್ಷೆಯಲ್ಲಿ ಕಠೋರತನವಿರಲಿಲ್ಲ ! ಮಹಾರಾಜರು ತಾವು ಕೊಡುತ್ತಿರುವ ಶಿಕ್ಷೆಗಳಲ್ಲಿ ಅ, ಬ, ಮತ್ತು ಕ ಎಂದು ಮೂರು ವರ್ಗಗಳನ್ನು ಮಾಡಿದ್ದರು. ಅ ವರ್ಗದ ಅಪರಾಧಿಗೆ ಶಿಕ್ಷೆಯೇನಂದರೆ ''ಅವಲಕ್ಕಿ''ಯನ್ನು ತಿನ್ನಬೇಕೆಂಬದು ! ಬ ವರ್ಗದವನಿಗೆ 'ಬಾಳೇಹಣ್ಣು' ಸಿಕ್ಕುತ್ತಿದ್ದವು. ಕ ವರ್ಗದವನಿಗೆ ಕರ್ಚೀಕಾಯಿ ಕೊಡುತ್ತಿದ್ದರು.

ವಾಚಕರೇ, ನೋಡಿದಿರಾ, ಈ ಶಿಕ್ಷೆಗಳ ಸ್ವಾರಸ್ಯವನ್ನು ! ಇದರ ಹೊರ್ತಾಗಿ ಮಹಾರಾಜರು ಅಪರಾಧಿಗಳಿಗೆ ಬೇರೆ ಯಾವ ಶಬ್ದವನ್ನೂ ಆಡುತ್ತಿರಲಿಲ್ಲ. ಎಲ್ಲವೂ ವಿನೋದದ ವಾತಾವರಣದಲ್ಲಿಯೇ ಮುಗಿದು ಬಿಡುತ್ತಿತ್ತು. ಮಹಾರಾಜರು ಮುಗುಳು ನಗೆಯಿಂದಲೇ ಹೇಳುತ್ತಿದ್ದರು:— "ಯಾರೇನು ಮಾಡುವದು, ರಾಯರೇ ! ನಿಮ್ಮ ಅಪರಾಧವು ದೊಡ್ಡದಾಗಿದೆ. ನೀವು ಹೆಚ್ಚು ಬಾಳೇ ಹಣ್ಣುಗಳನ್ನು ತಿನ್ನಲೇ ಬೇಕು." ಅಪರಾಧ ಮಾಡಿದವರೂ ಸಹ ತಮ್ಮ ಅಪರಾಧವನ್ನು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಂಡು ಶಿಕ್ಷೆಯನ್ನನುಭವಿಸಿ ಮಹಾರಾಜರ ಕೃಪೆಗೆ ಪಾತ್ರರಾಗುತ್ತಿದ್ದರು.

ಮಹಾರಾಜರು ಶಿಸ್ತು-ವ್ಯವಸ್ಥೆಗಳ ಮೇಲೆ ಒಳ್ಳೇ ಪ್ರೀತಿಯಿದ್ದವರಾಗಿದ್ದರೂ, ಒಮ್ಮೊಮ್ಮೆ ಅಕಸ್ಮಾತ್ತಾಗಿ ನಡೆದ ದುರ್ಘಟನೆಗಳನ್ನು ಸಹಜವಾಗಿ ಕ್ಷಮಿಸುತ್ತಿದ್ದರು. ಒಂದುಸಲ ಚಿದಂಬರನ ಉತ್ಸವಕ್ಕೆಂದು ಸವದತ್ತಿಯ ಸೆಟ್ಟರೊಬ್ಬರ ಕಡೆಯಿಂದ ದೊಡ್ಡ ಕನ್ನಡಿಯೊಂದನ್ನು ತಂದಿದ್ದರು. ಸಭಾಮಂಟಪವನ್ನು ಸಿಂಗರಿಸುವ ಕೆಲಸ ನಡೆದಿತ್ತು. ಒಬ್ಬ ಸೇವಕನ ಅಜಾಗರೂಕತೆಯಿಂದ ಆ ಕನ್ನಡಿಯು ಕೆಳಗೆ ಬಿದ್ದು ಒಡೆದು ಚೂರುಚೂರಾಗಿ ಹೋಯಿತು. ಅಪರಾಧಿಯು ಅಂಜಿ ಗದಗದ ನಡುಗಹತ್ತಿದನು. ಮಹಾರಾಜರು ಬಂದು ಏನು ಶಿಕ್ಷೆ ಮಾಡುವರೋ ಎಂದು ಅವನ ಎದೆಯು ಡವಡವನೆ ಬಡಿದುಕೊಳ್ಳಹತ್ತಿತು. ಮಹಾರಾಜರು ಅದನ್ನು ದೂರಿಂದಲೇ ನೋಡಿ ಅಲ್ಲಿಗೆ ಬಂದರು. ಆ ಬಡವನ ದೈನ್ಯವನ್ನು ನೋಡಿ ಅವರಿಗೆ ಸಿಟ್ಟುಬರುವದರ ಬದಲಾಗಿ ಅಪಾರವಾದ ಕಾರುಣ್ಯವು ಅವರ ಹೃದಯದಿಂದ ಹೊರಸೂಸಹತ್ತಿತು. ಅವರು ಅವನನ್ನು ಮೃದುವಾದ ಶಬ್ದಗಳಿಂದ ಸಂತಯಿಸಿದರು:— "ತಮ್ಮಾ, ಕೈತಪ್ಪಿ ಆದುದಕ್ಕೆ ಇಷ್ಟು ಅಂಜಬೇಕೇಕೆ ? ಎಲ್ಲರ ಕೈಯಿಂದಲೂ ತಪ್ಪುಗಳಾಗುತ್ತವೆ. ಅವುಗಳ ಬಗ್ಗೆ ಶೋಕಿಸದೆ ಮನುಷ್ಯನು ತನ್ನ ಕರ್ತವ್ಯ ಮಾಡುತ್ತಿರಬೇಕು. ಆದಷ್ಟು ಯತ್ನಮಾಡಿ ಮತ್ತೊಮ್ಮೆ ಅದೇ ತರದ ತಪ್ಪಾಗದಂತೆ ಎಚ್ಚರಪಡಬೇಕು, ಕಂಡೆಯಾ."

ಗುರ್ಲಹೊಸೂರಂತಹ ಚಿಕ್ಕ ಊರಿಗೆ ಹೊರಗಿನಿಂದ ನಾಲ್ಕೈದು ಸಾವಿರದಷ್ಟು ಜನ ಒಮ್ಮೆಲೇ ಬಂದ ಮೇಲೆ ಅಲ್ಲಾಗುವ ಗಜಿಬಿಜಿಯನ್ನು

ಎಷ್ಟೆಂದು ಹೇಳಬೇಕು ? ಬೇರೆ ಬೇರೆ ಜನರು ತಮತಮಗೆ ಅನುಕೂಲವಾದ ಗುಡಿಗುಂಡಾರ ಮನೆಗಳಲ್ಲಿ ಇಳಿದುಕೊಳ್ಳತಕ್ಕವರು. ಅವರಲ್ಲಿ ಬೇರೆ ಬೇರೆ ಜಾತಿ-ಗೋತ್ರಗಳ ಜನರಿರತಕ್ಕವರು. ಹುಡುಗರೂ ಹೆಂಗಸರೂ ಇದ್ದವರೇ. ಬೇನೆಯಿಂದ ಬಳಲುವ ಕೆಲಜನರೂ ಇರುವವರೇ ಇವರೆಲ್ಲರ ವ್ಯವಸ್ಥೆ ಮಾಡುವ ಕೊನೆಯ ಭಾರವು ಮಹಾರಾಜರ ಮೇಲೆಯೆ. ಸರಿ. ಆದರೆ ಕರುಣಾಳುವಾದ ಮಹಾರಾಜರು ಚಾಚೂ ಎನ್ನದೆ ಎಲ್ಲ ಕಡೆಗೂ ಲಕ್ಷಗೊಡುತ್ತಿದ್ದರು. ಪರಸ್ಥಳದವರು ಇಳಿದುಕೊಂಡ ಕಡೆಗೆ ತಾವೇ ಸ್ವತಃ ಹೋಗಿ ಅವರ ಯೋಗಕ್ಷೇಮವನ್ನು ತಕ್ಕೊಳ್ಳುತ್ತಿದ್ದರು. ಬೇನೆಯವರ ಬಗ್ಗೆಯಂತೂ ಮಹಾರಾಜರು ವಿಶೇಷ ದಕ್ಷತೆ ವಹಿಸಿ, ಆಗತ್ಯನೆನಿಸಿದಲ್ಲಿ ತಾವೇ ಅವರ ಔಷಧ ಪಥ್ಯಗಳನ್ನು ಪೂರೈಸುತ್ತಿದ್ದರು ಪರೂರಿಂದ ಬಂದವರಿಗೆ ದೀಪ ಬೇಕಾಗಿದ್ದರೆ ಅವರಿಗೆ ಪಣತಿ ಮತ್ತು ಎಣ್ಣೆ ಮುಟ್ಟಿದವೋ ಇಲ್ಲವೋ, ಗುಡಾರ ಬೇಕಾದವರಿಗೆ ಗುಡಾರ ಸಿಕ್ಕಿತೋ ಇಲ್ಲವೋ, ಅಕ್ಕಿ, ಬೆಲ್ಲ, ಬೇಳೆ ಬೇಕಾದವರಿಗೆ ಅವು ಸಿಕ್ಕವೋ ಇಲ್ಲವೋ, ಸಣ್ಣ ಹುಡುಗರ ಊಟದ ವ್ಯವಸ್ಥೆಯಾಯಿತೋ ಇಲ್ಲವೋ, ಎತ್ತು ಚಕ್ಕಡಿಗಳನ್ನು ತಂದವರಿಗೆ ಹೊಟ್ಟು ಮೇವು ಸಿಕ್ಕವೋ ಇಲ್ಲವೋ—ಎಂಬ ಸಣ್ಣ ಸಣ್ಣ ಮಾತುಗಳ ಕಡೆಗೆ ಸಹ ಸ್ವತಃ ಮಹಾರಾಜರೇ ಗಮನ ಕೊಡುತ್ತಿದ್ದರು. ಯಾವ ಜನರಿಂದಲೂ ನಮಗೆ ಇಂತಹದು ಸಿಕ್ಕಲಿಲ್ಲ, ನಮಗೆ ಹೀಗೆ ಅಡಚಣೆಯಾಯಿತು, ಎಂಬ ದೂರು ಕೇಳಬರುತ್ತಿದ್ದಿಲ್ಲ. ತಾತ್ಪರ್ಯವೇನಂದರೆ—ಭಾಗವತ ಧರ್ಮದ ತತ್ತ್ವವು ಹೇಳುವಂತೆ ಮಹಾರಾಜರು ಎಲ್ಲ ಪ್ರಾಣಿಗಳಲ್ಲಿಯೂ ಭಗವಂತನನ್ನು ಕಂಡು ಅವನ ಸೇವೆಯನ್ನು ಮಾಡುತ್ತಿದ್ದರು.

ಕೂಡಿದ ಜನರೊಳಗೆ ಕೆಲವರು ಅಪ್ರಾಮಾಣಿಕರೂ ಇರುತ್ತಿದ್ದರು. ಗುರ್ಲಹೊಸೂರಕ್ಕೆ ಬಂದಾಗಿನಿಂದ ತಮ್ಮ ಊರಿಗೆ ತಿರುಗಿ ಹೋಗಿ ಮುಟ್ಟುವ ವರೆಗೆ ಬೇಕಾಗುವ ಎಲ್ಲ ಸಾಮಾನುಗಳನ್ನೂ ಉತ್ಸವದ ಉಗ್ರಾಣದೊಳಗಿಂದ ಎಲ್ಲರೂ ತೆಗೆದುಕೊಳ್ಳಬಹುದಾಗಿತ್ತು. ಆದರೆ ಹಲ ಕೆಲವು ಆಸೆಬುರುಕ ಜನರು ತಮಗೆ ಬೇಕಾಗುವಷ್ಟಕ್ಕಿಂತ ಹೆಚ್ಚು ಸಾಮಾನುಗಳನ್ನು ಒಯ್ದು ಪಾಪಕ್ಕೆ ಗುರಿಯಾಗುತ್ತಿದ್ದರು. ಜೇಡಲಿಕ್ಕೆ ಬಂದವರಿಗೆ

ಇಲ್ಲಿನ್ನ ಬಾರದೆಂದು ಉಗ್ರಾಣದ ಅಧಿಕಾರಿಗೆ ಮಹಾರಾಜರು ಅಪ್ಪಣೆ ವಿಧಿಸಿದ್ದರು. ಬೇಡುವವರು ತಾವಾಗಿಯೇ ತಮಗೆ ಬೇಕಾದಷ್ಟನ್ನೇ ವಿಚಾರ ಮಾಡಿ ಬೇಡಬೇಕೆಂದೂ ಮಹಾರಾಜರ ಅಪ್ಪಣೆಯಿತ್ತು. ಒಂದು ಸಲ ಒಬ್ಬ ದೊಡ್ಡ ಗೃಹಸ್ಥರು ಅಸೆಬರುಕತನ ಮಾಡಿ ಚಿದಂಬರನ ಸ್ವತ್ತನ್ನು ಅಪಹರಣ ಮಾಡಿದರು. ಮರುದಿವಸ ಅವರ ಸೌಭಾಗ್ಯವತಿಯು ಬಾವಿಯ ನೀರು ಜಗ್ಗುತ್ತಿರುವಾಗ, ಕೈಯೊಳಗಿನ ಬಂಗಾರದ ಬಳೆಗಳು ಅಕಸ್ಮಾತ್ತಾಗಿ ಬಾವಿಯಲ್ಲಿ ಬಿದ್ದುಬಿಟ್ಟವು. ಗೃಹಸ್ಥರು ಬೇಕಾದಷ್ಟು ದಾನತಿಬಿಟ್ಟು ಹುಡುಕಿಸಿದರು. ಏನೂ ವ್ಯಯೋಜನವಾಗವಾಲಿಲ್ಲ. ಕೊನೆಗೆ ಅವರ ಅಳುಮೋರೆಯಿಂದ ಮಹಾರಾಜರ ಕಡೆಗೆ ಬಂದು ಚಿದಂಬರನ ಮೇಲೆ ದೂರು ಹೇಳಲಾರಂಭಿಸಿದರು:— "ಮಹಾರಾಜ, ನಾವು ಚಿದಂಬರ ಚಿದಂಬರನೆಂದು ಇಷ್ಟುದೂರ ಬಂದಿರಲು, ಇಲ್ಲಿಯೇ ನಮ್ಮ ವಸ್ತಗಳು ಕಳೆದು ಹೋಗಬೇಕೆ ? ಇದೇನೋ ದೇವರ ದರ್ಬಾರದಲ್ಲಿಯ ನ್ಯಾಯ?"

ಮಹಾರಾಜರ ಮೋರೆಯ ಮೇಲೆ ಅವರ ಸಹಜವಾದ ಮುಗುಳು ನಗೆಯ ಲಹರಿಯೊಂದು ತಲೆದೋರಿತು ಅವರು ನಗುತ್ತಲೇ ರಾಯರಿಗೆ ಉತ್ತರ ಕೊಟ್ಟರು:— "ರಾಯರೇ, ಚಿದಂಬರನ ದರ್ಬಾರದಲ್ಲಿ ಎಂದೂ ಎಳ್ಳಷ್ಟೂ ಅನ್ಯಾಯವಾಗಲಾರದು, ಕಂಡಿರಾ. ದೇವರ ಮೇಲೆ ತಪ್ಪು ಹೊರಿಸುವ ಮೊದಲು ನಾವು ನಮ್ಮ ಅಂತಃಕರುಣವನ್ನೊಮ್ಮೆ ಶೋಧಿಸಿ ನೋಡುವದೊಳಿತು. ನೀವು ಚಿದಂಬರನ ಸ್ವತ್ತನ್ನೇನೋ ಅಪಹಾರ ಮಾಡಿರುತ್ತೀರಿ. ಎಂತೆಯೇ ಈ ವಿಸ್ಸತ್ತಿಗೆ ಒಳಗಾಗಿರುವಿರಿ ಅದನ್ನಷ್ಟು ಇಂದೇ ತಿರುಗಿ ಕೊಡುವೆನೆಂದು ಸಂಕಲ್ಪಮಾಡಿ ಚಿದಂಬರನಿಗೆ ಪ್ರಾರ್ಥಿಸಿಕೊಳ್ಳಿರಿ. ಎಂದರೆ ನಿಮ್ಮ ಬಂಗಾರದ ಬಳೆಗಳು ನಿಮಗೆ ತಿರುಗಿ ಸಿಕ್ಕುವವು. ರಾಯರೇ, ಚಿದಂಬರನು ಕಣ್ಣಿಗೆ ಕಾಣುವದಿಲ್ಲೆಂದು, ಅಪರಾಧಿಗಳನ್ನು ಮಾತ್ರ ಸುಮ್ಮನೇ ಬಿಡುವನೆಂದು ತಿಳಿಯಬೇಡಿರಿ. ಅಪರಾಧಿಗಳ ಸಲುವಾಗಿ ಅವನು ದಂಡವನ್ನು ಹಿಡಿಯದಿದ್ದರೆ, ಜಗತ್ತಿನ ಸುವ್ಯವಸ್ಥೆಯು ನಾಶವಾಗುವದು, ಬಲ್ಲಿರಾ." ಮಹಾರಾಜರ ಈ ಸೌಮ್ಯವೂ, ಯಥಾರ್ಥವೂ, ನಿಷ್ಠುರವೂ ಆದ ಉಪದೇಶದಿಂದ ರಾಯರ ಮೋರೆಯು ಇಳಿಯಿತು. ಅವರು ಕೂಡಲೇ

ತಮ್ಮ ಎಲ್ಲ ತಪ್ಪನ್ನೂ ಒಪ್ಪಿಕೊಂಡು ಮಹಾರಾಜರು ಹೇಳಿದಂತೆ ಆವರು ಸಂಕಲ್ಪಮಾಡಿ ಚಿದಂಬರನಿಗೆ ಪ್ರಾರ್ಥನೆ ಮಾಡಿಕೊಂಡು, ಬಳೆಗಳನ್ನು ಹುಡುಕಿಸಿದೊಡನೆ ಅವು ಎಷ್ಟೂ ಆಯಾಸವಿಲ್ಲದೆ ಸಿಕ್ಕವು.

ಮಹಾರಾಜರ ವ್ಯವಸ್ಥೆಯ ಮಾದರಿಯೆಂದು ಶಕೆ ೧೬೧೮ ರಲ್ಲಿ ಅನುಸರಿಸಲ್ಪಟ್ಟ ವೇಳಾಪತ್ರಿಕೆಯ ವಿವರವನ್ನು ಇಲ್ಲಿ ಕೊಡಬಯಸುತ್ತೇವೆ :

ಕಾರ್ತಿಕ ವದ್ಯ ಪ್ರತಿಪದೆಯಿಂದ ಪಂಚಮಿಯ ವರೆಗಿನ ದೈನಂದಿನ ಕಾರ್ಯಕ್ರಮವು.

೧. ದಿನಾಲು ಮುಂಜಾನೆ ೬ ಗಂಟೆಯಿಂದ ೯ ರ ವರೆಗೆ ಕುಂಡ-ಮಂಟಪದಲ್ಲಿಯೂ ದೇವಾಲಯದಲ್ಲಿಯೂ ಆಗಮೋಕ್ತ ಪೂಜೆ, ಹೋಮ, ಅನುಷ್ಠಾನ, ಬಲಿ ಮೊದಲಾದವುಗಳು.

೨. ಮುಂಜಾನೆ ೯ ರಿಂದ ೧೦ರ ವರೆಗೆ—ಸಭಾಮಂಟಪದಲ್ಲಿ ದೇವರ ಮುಂದೆ ನೃತ್ಯ, ಗಾಯನ, ವಾದನ ಮೊದಲಾದವುಗಳು.

೩. ಮುಂಜಾನೆ ೧೦ ರಿಂದ ೧೧ರ ವರೆಗೆ ವಾಹನೋತ್ಸವ.

೪. ಮಧ್ಯಾಹ್ನ ೧೨ ರಿಂದ ೫ರ ವರೆಗೆ ಬ್ರಾಹ್ಮಣ ಭೋಜನ.

೫. ಸಾಯಂಕಾಲ ೫ ರಿಂದ ೬ ರ ವರೆಗೆ ಪುರಾಣ, ಬಲಿ ಮೊದಲಾದವುಗಳು.

೬. ರಾತ್ರಿ ೭ ರಿಂದ ೮ ರ ವರೆಗೆ ಕೀರ್ತನ. ೯ ರಿಂದ ೧೦ ರ ವರೆಗೆ ನರ್ತನ ಮತ್ತು ಗಾಯನ. ೧೧ ರಿಂದ ೧೨ ರ ವರೆಗೆ ವಾಹನೋತ್ಸವ.

ಕಾರ್ತಿಕ ವದ್ಯ ಷಷ್ಠಿಯ ದಿನ

೭. ವಿವಾಹ ಪೂರ್ವಕ ರಥೋತ್ಸವ, ವನಯಾತ್ರೆ ಮತ್ತು ಶಿವ-ಪಾರ್ವತೀ ಸಂವಾದ.

ಕಾರ್ತಿಕ ವದ್ಯ ಸಪ್ತಮಿಯ ದಿನ

೮. ಅವಭೃತ, ಪೂರ್ಣಾಹುತಿ, ಶ್ರೇಯಃ ಸಂಪಾದನೆ, ಅನುಷ್ಠಾನ ಬ್ರಾಹ್ಮಣರಿಗೆ ದಕ್ಷಿಣೆಕೊಡುವದು, ಮತ್ತು ಸಮಾರಾಧನೆ ಮೊದಲಾದವುಗಳು.

ಈ ಪ್ರಕಾರ ಉತ್ಸವದ ಕಾರ್ಯಕ್ರಮವು ಒಟ್ಟಿಗೆ ಏಳು ದಿವಸ.

ಸ್ವಚ್ಛತೆಯ ಬಗ್ಗೆ ಹೇಳುವದಾದರೆ ಮಹಾರಾಜರು ಪಾವಿತ್ರ್ಯದ ಮೂರ್ತಿಯೇ ಆಗಿದ್ದರು. ಸ್ವಚ್ಛತೆಯ ಮಹಾತ್ಮ್ಯವನ್ನು ಎಲ್ಲರೂ ಮುಕ್ತ ಕಂಠದಿಂದ ಹೊಗಳಿದ್ದಾರೆ. ''ಸ್ವಚ್ಛತೆಯು ದೇವತ್ವಕ್ಕೆ ತೀರ ಸಮೀಪವಾಗಿದೆ''ಯೆಂದು ಇಂಗ್ಲೀಷ ಗಾದೆಯು ಹೇಳುತ್ತದೆ. ಹೊಲಸುತನವು ಸೋಮಾರಿತನದ ಗುರುತಾಗಿದೆಯೆಂದು ಮಹಾತ್ಮಾ ಗಾಂಧೀಜಿಯವರು ಅಭಿಸ್ರಾಯಬಟ್ಟಿದ್ದಾರೆ. ಮನಸು ನಿರ್ಮಲವಾಗಿರಬೇಕಾದರೆ ಹೊರಗಿನ ನೈರ್ಮಲ್ಯವನ್ನು ಚನ್ನಾಗಿಯೇ ಕಾಯ್ದುಕೊಳ್ಳಬೇಕಾಗುತ್ತದೆಂಬದು ಸ್ಪಷ್ಟವಿದೆ. ಜಳಜಳವಾಗಿಯೂ ಅಚ್ಚುಕಟ್ಟಾಗಿಯೂ ಇರುವ ಪದಾರ್ಥಗಳನ್ನು ನೋಡಿದರೆ ಮನಸು ತಾನಾಗಿಯೇ ಅರಳಿ ಪ್ರಸನ್ನವಾಗುವದು. ಹೊಲಸು ಪದಾರ್ಥಗಳನ್ನು ನೋಡಿ ಮನಸಿಗೆ ಸಹಜವಾಗಿಯೇ ಹೇಸಿಕೆಯುಂಟಾಗುತ್ತದೆ. ಮನಸು ದೇವರ ಕಡೆಗೆ ಹತ್ತಬೇಕಾದರೆ ಸ್ವಚ್ಛವಾದ ವಾತಾವರಣವು ಅತ್ಯಾವಶ್ಯಕ. ಎಂತೆಯೇ ಮಹಾರಾಜರು ಸ್ವಚ್ಛತೆಯ ಬಗ್ಗೆ ಬಹಳ ದಕ್ಷತೆ ವಹಿಸುತ್ತಿದ್ದರು. ಅವರಿರುವ ವರೆಗೆ ಶ್ರೀ ಚಿದಂಬರೇಶ್ವರನ ಗುಡಿಯೂ ಅದರ ಸುತ್ತುಮುತ್ತಲಿನ ಸ್ಥಳಗಳೂ ಯಾವಾಗಲೂ ಬಹು ಸ್ವಚ್ಛವಾಗಿರುತ್ತಿದ್ದವು. ಗುಡಿಯೊಳಗೆ ಒಂದು ಕಸಕಡ್ಡಿ ಕೂಡ ಬಿದ್ದದ್ದು ಮಹಾರಾಜರಿಗೆ ಸಹನವಾಗುತ್ತಿರಲಿಲ್ಲ. ಮಹಾರಾಜರು ಸ್ವತಃ ಕೈಯಲ್ಲಿ ಕಸಬರಿಗೆ ತಕ್ಕೊಂಡು ದೇವರ ಗುಡಿಯನ್ನು ಉಡುಗುತ್ತಿದ್ದರು. ಅವರ ಈ ವ್ರತವು ಕೊನೆಯ ವರೆಗೂ ಅಖಂಡವಾಗಿ ನಡೆದೇ ಇತ್ತು. ಶಿಷ್ಯರು ಯಾರಾದರೂ ''ಸ್ವಾಮೀ, ತಾನೇಕೆ ಈ ಕೆಲಸವನ್ನು ಮಾಡುವಿರಿ? ಅದನ್ನು ಮಾಡಲಿಕ್ಕೆ ನಾವಿದ್ದೇವಲ್ಲ. ನಮಗೇ ಅದನ್ನು ಮಾಡಗೊಡಿರಿ'' ಎಂದು ಬಿನ್ನಹ ಮಾಡಿಕೊಂಡರೆ, ಮಹಾರಾಜರು ನಗುತ್ತಲೇ ಉತ್ತರ ಕೊಡುತ್ತಿದ್ದರೇನಂದರೆ:— ''ಹೌದಪ್ಪ, ಈ ಕೆಲಸವನ್ನು ನೀನು ಮಾಡಬಲ್ಲಿಯೆಂಬದು ಸರಿಯೇ. ಆದರೆ ನನ್ನ ಕಡೆಯಿಂದ ಚಿದಂಬರ ಸೇವೆಯು ಏನಾದರೂ ಆಗುವದು ಬೇಡವೇ ? ನಾನೇ ಈ ಕೆಲಸವನ್ನು ಮಾಡುವೆನು. ನೀನು ಬೇರೆ ಕೆಲಸವನ್ನು ಮಾಡಬಹುದು'' ಅವರಿರುವ ಕೋಣೆ, ಅವರ ಅರಿವೆ-ಆಂಚಡಿಗಳು, ಅವರ ಪಾತ್ರೆ, ಹಾಸಿಗೆ ಮೊದಲಾದವುಗಳು ಯಾವಾಗಲೂ ನಿರ್ಮಲವಾಗಿರಬೇಕಾಗುತ್ತಿತ್ತು.

ಚಿದಂಬರನ ಉತ್ಸವದಲ್ಲಿ ಒಮ್ಮೆಲೇ ೪—೫ ಸಾವಿರ ಜನರು ಕೂಡುತ್ತಿದ್ದ ಕಾರಣ, ಅವರ ಆರೋಗ್ಯದ ಬಗ್ಗೆ ಮಹಾರಾಜರು ಮೊದಲೇ ಪೂರ್ವೋಪಾಯಗಳನ್ನು ಮಾಡಿಡುತ್ತಿದ್ದರು. ಜನರು ಇಳಿದುಕೊಳ್ಳಬಹುದಾದ ಎಲ್ಲ ಸ್ಥಳಗಳನ್ನೂ ಅವರು ಉಡುಗಿಸಿ ಸಾರಿಸಿ ಇಡಿಸುತ್ತಿದ್ದರು. ಉತ್ಸವದ ಪೂರ್ವದಲ್ಲಿಯೇ ಚಿದಂಬರನ ಗುಡಿಯ ಹಾಗೂ ಆವಾರದ ಗೋಡೆಗಳ ಎರಡೂ ಮಗ್ಗಲಗಳನ್ನು ಚನ್ನಾಗಿ ಸಾರಿಸಿ ಅವುಗಳ ಮೇಲೆ ದೊಡ್ಡ ದೊಡ್ಡ ಅಕ್ಷರಗಳಲ್ಲಿ "ಶಿವಚಿದಂಬರ" ಎಂದು ಬರೆಸಿ, ಎಲ್ಲರ ಮನಸು ಸಹಜವಾಗಿ ಆಕರ್ಷಿತವಾಗುವಂತೆ ಮಾಡುತ್ತಿದ್ದರು. ಉತ್ಸವದ ಕಾಲಕ್ಕೆ ಜನರಿಗೆ ಎಷ್ಟು ಹೇಳಿದರೂ ಕೇಳದೆ ಸಿಕ್ಕಸಿಕ್ಕಲ್ಲಿ ಹೊಲಸು ಮಾಡುತ್ತಿದ್ದರು. ಮಹಾರಾಜರು ಆ ಬಗ್ಗೆ ಮೇಲ್ವಿಚಾರಕರನ್ನು ನಿಯಮಿಸಿ, ಕಾಲ ಕಾಲಕ್ಕೆ ಎಂಜಲದೆಲೆಗಳನ್ನು ತೆಗೆದು ಮಲಮೂತ್ರದ ಸ್ಥಳಗಳನ್ನು ನಿರ್ಮಲವಾಗಿರಿಸುವ ಕೆಲಸವನ್ನು ತಪ್ಪದೇ ಮಾಡಿಸುತ್ತಿದ್ದರು. ಜನಸಂದಣಿಯ ಕಾಲಕ್ಕೆ ಆರೋಗ್ಯದ ನಿಯಮಗಳು ಪಾಲಿಸಲ್ಪಡದಿದ್ದರೆ, ದೊಡ್ಡ ದೊಡ್ಡ ರೋಗಗಳು ಒಮ್ಮೆಲೇ ಉಬ್ಬವಿಸಿ ಪ್ರಸಾರವಾಗುವ ಸಂಭವ ಹೆಚ್ಚು. ಆದುದರಿಂದ ಕುಡಿಯುವ ಮತ್ತು ಬಳಿಕೆಯ ನೀರಿನ ಬಗ್ಗೆಯೂ, ಆರೋಗ್ಯಕ್ಕೆ ಅವಶ್ಯವಾದ ಉಳಿದ ಸಂಗತಿಗಳ ಬಗ್ಗೆಯೂ, ಮಹಾರಾಜರು ಬಹು ಎಚ್ಚರಿಕೆಯನ್ನು ತಕ್ಕೊಳ್ಳುತ್ತಿದ್ದರು.



ಶ್ರೀ ಕೈವಲ್ಯಾಶ್ರಮ ಸ್ವಾಮಿ ಮಹಾರಾಜರು
(ಉತ್ಸವ ಮಾಡುತ್ತಿದ್ದಾಗ)

೧೧ ಮಹಾರಾಜರು ಮಾಡಿದ ಚಿದಂಬರೋತ್ಸವಗಳು

(ಮುಂದುವರೆದದ್ದು)

ಶಕೆ ೧೪೧೪ ನೆಯ ಚಿದಂಬರೋತ್ಸವವು ಸಂಪೂರ್ಣವಾಗಿ ಮಹಾರಾಜರ ಕಡೆಗೆ ಬಂದಿತೆಂಬದು ವಾಚಕರಿಗೆ ಈ ಮೊದಲೇ ಗೊತ್ತಾಗಿದೆ. ಉತ್ಸವದ ಖರ್ಚು ಹೆಚ್ಚಾಗಿದ್ದು, ಆದಾಯವು ಕಡಿಮೆಯಾಗುತ್ತಿದ್ದುದರಿಂದಲೇ ಅದರ ಭಾರವನ್ನು ದೀಕ್ಷಿತ ವಂಶದವರು ಹೊರಲಾರದವರಾಗಿದ್ದರು. ನಿಜವಾಗಿ ನೋಡಿದರೆ ಇಡೀ ಗುರ್ಲಹೊಸೂರ ಊರೇ ದೀಕ್ಷಿತರಿಗೆ ಇನಾಮಾಗಿತ್ತು. ಆದರೆ ಇನಾಮು ಉತ್ಪನ್ನವನ್ನು ಅವರು ತಮ್ಮ ಸ್ವಂತ ಕುಟುಂಬದ ವೆಚ್ಚಕ್ಕಾಗಿ ಉಪಯೋಗಿಸುತ್ತಿದ್ದರು. ಉತ್ಸವದ ವೆಚ್ಚವೆಲ್ಲ ಜನರಿಂದ ಬಂದ ದೇಣಿಗೆಗಳ ಮೇಲೆ ಸಾಗುತ್ತಿತ್ತು. ಈ ಕಾರಣದಿಂದ ಉತ್ಸವವು ಎಲ್ಲ ಬಗೆಯಿಂದಲೂ ಕಳೆಗುಂದಿದುದರಿಂದ ಅದನ್ನು ಮಹಾರಾಜರ ಕೊರಳಿಗೆ ಹಾಕುವ ಪ್ರಸಂಗ ಬಂತು.

ಉತ್ಸವದ ಹೊರೆಯನ್ನು ಹೊತ್ತೊಡನೆ ಅದಕ್ಕಾಗಿ ಧನಸಂಗ್ರಹವನ್ನು ಎಲ್ಲಕ್ಕೂ ಮೊದಲು ಮಾಡಬೇಕಾಯಿತು. ಭಾದ್ರಪದದ ಪೌರ್ಣಿಮೆಯ ವರೆಗೆ ಯತಿಗಳು ತಮ್ಮ ಸ್ಥಾನವನ್ನು ಬದಲಿಸಬಾರದೆಂಬ ನಿಯಮವಿದ್ದುದರಿಂದ ಮಹಾರಾಜರು ಭಾದ್ರಪದ ವದ್ಯ ಪ್ರತಿಪದೆಯಿಂದ ತಮ್ಮ ಸಂಚಾರ ಸುರುವು ಮಾಡುತ್ತಿದ್ದರು. ದೇವರಿಗಾಗಿ, ಧರ್ಮಕ್ಕಾಗಿ, ರಾಷ್ಟ್ರಕ್ಕಾಗಿ, ಪರೋಪಕಾರಕ್ಕಾಗಿ ಬೇಡಿದ ಭಿಕ್ಷೆಯು ಭಿಕ್ಷೆಯೆಂದೆನಿಸಿಕೊಳ್ಳುವದಿಲ್ಲ, ಆದರೆ ಸ್ವಾರ್ಥಕ್ಕಾಗಿ, ತನ್ನ ಮತ್ತು ತನ್ನ ಕುಟುಂಬದ ಪಾಲನೆ-ಪೋಷಣೆಗಾಗಿ ಹಿಡಿದ ಜೋಳಿಗೆಯು ಮಾತ್ರ ಮನುಷ್ಯನನ್ನು ಅಧೋಗತಿಗಿಳಿಸುವದೆಂದು ಶ್ರೀ ಸಮರ್ಥ ರಾಮದಾಸರು ಅಪ್ಪಣೆ ಕೊಡಿಸಿದ್ದಾರೆ. ಸಾಮಾನ್ಯರಿಗೇನೋ ಮಹಾರಾಜರು ಭಿಕ್ಷುಕರಾಗಿ ತೋರಿರಬಹುದು. ಆದರೆ ಚಿದಂಬರನ

ಉತ್ಸವಕ್ಕೆ ಭಿಕ್ಷುಕನ ವೇಷವನ್ನು ಧರಿಸಿದ ಮಹಾರಾಜರ ಉದ್ದೇಶವೇ ಬೇರೆಯಾಗಿತ್ತು. ಸಂಸಾರದ ದಾವಾನಲದಲ್ಲಿ ಸಿಕ್ಕು ಬೆಂದು ಬೆಂಡಾಗಿ, ಮುಂಗಾಣದೆ ಉಸಿರ್ಗರೆಯುತ್ತಿರುವ ಜನರ ಮನೆಗೆ ತಾವೇ ಹೋಗಿ, ಅವರ ದೃಷ್ಟಿಯನ್ನು ತಮ್ಮ ದಿವ್ಯ ತೇಜಸ್ಸಿನಿಂದ ಆಕರ್ಷಿಸಿ, ಅವರ ದುಃಖಗಳನ್ನು ಸಹಾನುಭೂತಿಪೂರ್ವಕವಾಗಿ ಕೇಳಿಕೊಂಡು, ಅವರ ದುಃಖದ ಆವೇಗವನ್ನು ಕಡಿಮೆ ಮಾಡುವದು ಮೊದಲನೆಯ ಕೆಲಸವು. ಸಾಮಾನ್ಯ ಜನರಿಗೆ ತಮ್ಮ ದುಃಖಗಳನ್ನು ಆತ್ಮೀಯತೆಯಿಂದ ಕೇಳುವ ಜನರು ಸಿಕ್ಕರೂ ಕೂಡ ಹಾಯ್ ಎನಿಸುವದು. ಅವರು ಸಾಂಸಾರಿಕ ಸುಖದಲ್ಲಿ ಲೋಲಾಡುತ್ತಿದ್ದರೆ, ಮಹಾರಾಜರು ಅವರ ಸುಖದಲ್ಲಿ ತಾವೂ ಪಾಲುಗಾರರಾಗುವಂತೆ ತೋರುವರು. ಆದರೆ ಅವರೆಲ್ಲರ ಚಿತ್ತವನ್ನು ದೇವರ ಕಡೆಗೆ ಸೆಳೆದುಕೊಳ್ಳುವದೇ ಮಹಾರಾಜರ ಮುಖ್ಯ ಕೆಲಸವಾಗಿತ್ತು. ಅವರವರ ಊರಿಗೆ ಹೋದಾಗ, ಅವರು ಹೇಳಿದ ಸಾಂಸಾರಿಕ ದುಃಖಗಳನ್ನು ತಪ್ಪದೇ ನೆನಪಿನಲ್ಲಿಟ್ಟುಕೊಂಡು, ಅವರು ಗುರ್ಲಹೊಸೂರಿಗೆ ಬಂದಾಗ ಅವೇ ಮಾತುಗಳ ಬಗ್ಗೆ ಮಹಾರಾಜರು ಪ್ರಶ್ನೆ ಮಾಡುತ್ತಿದ್ದರು. ಇದರಿಂದ ಜನರ ಮನಸಿನಲ್ಲಿ ಮಹಾರಾಜರ ಬಗ್ಗೆ ಒಳ್ಳೇ ಆತ್ಮೀಯ ಭಾವವು ಹುಟ್ಟುತ್ತಿತ್ತು ಮಿಕ್ಕವರಿಗಿಂತಲೂ ಮಹಾರಾಜರು ತಮ್ಮ ಮೇಲೆಯೇ ಹೆಚ್ಚಾಗಿ ಪ್ರೀತಿಮಾಡುವರೆಂದು ಗುರ್ಲಹೊಸೂರಿಗೆ ಬಂದ ಪ್ರತಿಯೊಬ್ಬ ಭಕ್ತನಿಗೆ ಎನಿಸುತ್ತಿತ್ತು.

ಆಯಾ ಊರುಗಳಲ್ಲಿ ಮಹಾರಾಜರು ಬೀಡುಬಿಟ್ಟಾಗ ತಮ್ಮ ದೈನಂದಿನ ಕಾರ್ಯಕ್ರಮಗಳಿಂದ ಅವರು ಜನರಿಗೆ ಪರಮಾರ್ಥ ಕಲಿಸುತ್ತಿದ್ದರು. ಮಾತಿಗಿಂತಲೂ ಕೃತಿಯಿಂದಲೇ ಅವರು ಜನರಿಗೆ ಉಪದೇಶ ಮಾಡುತ್ತಿದ್ದರು. ದಿನಾಲೂ ನಿಯಮಿತ ವೇಳೆಗೆ ಅವರು ಎಲ್ಲರನ್ನೂ ಕೂಡಿಕೊಂಡು "ಶಿವಚಿದಂಬರ, ಶಿವಚಿದಂಬರ" ಎಂದು ಉಚ್ಚಸ್ವರದಿಂದ ಜಪಮಾಡುತ್ತ ದೇವರ ಗುಡಿ ಮೊದಲಾದವುಗಳಿಗೆ ಪ್ರದಕ್ಷಿಣೆ ಹಾಕುನರು. ನಿರ್ದಿಷ್ಟ ಜಪಸಂಖ್ಯೆಯಾಗುವ ವರೆಗೆ ಈ ಕೆಲಸವು ನಡೆಯುತ್ತಿತ್ತು. ಆ ವೇಳೆಯಲ್ಲಿ ಎಲ್ಲರೂ ಜಪಮಾಡಬೇಕಲ್ಲದೆ ಯಾರೂ ಮಾತಾಡಬಾರದೆಂಬ ನಿಯಮವಿರುತ್ತಿತ್ತು. ಸಾಯಂಕಾಲದಲ್ಲಿ ಎಲ್ಲರನ್ನೂ ಕೂಡಿಕೊಂಡು

ಸುಂದರವಾಗಿ ಭಜನೆ ಮಾಡುವರು. ಶ್ರೀ ರಾಜಾರಾಮರು ಬರೆದ ಭಕ್ತಿರಸ-ಪೂರ್ಣವಾದ ಅಭಂಗಗಳನ್ನು ಮಹಾರಾಜರು ತನ್ಮಯರಾಗಿ ಹಾಡಹತ್ತಿದರೆಂದರೆ ಎಂತಹ ನಾಸ್ತಿಕನಲ್ಲಿಯೂ ಭಕ್ತಿಯು ಉಕ್ಕಿಬರುತ್ತಿತ್ತು. ಅನುಕೂಲವಾದ ವೇಳೆಯಲ್ಲಿ ಮಹಾರಾಜರು ಎಲ್ಲರಿಗೂ ಅವರವರ ಅಧಿಕಾರಕ್ಕೆ ತಕ್ಕಂತೆ ಪರಮಾರ್ಥವನ್ನು ಬೋಧಿಸುತ್ತಿದ್ದರು. ವೇದಾಂತದ ಗಹನವಾದ ತತ್ತ್ವಗಳನ್ನು ಅವರು ಸರಸವಾದ ಕಥೆಗಳಿಂದ ಸುಲಭವಾಗಿ ತಿಳಿಸಿಕೊಡುತ್ತಿದ್ದರೇ ಹೊರತು, ರುಕ್ಷವಾದ ಪ್ರವಚನಗಳನ್ನು ಅವರು ಎಂದೂ ಕೈಕೊಳ್ಳುತ್ತಿರಲಿಲ್ಲ ''ಅಸ್ಸಗಳಿರಾ, ದೇವರ ಮೇಲೆ ಮತ್ತು ಸ್ವಧರ್ಮದ ಮೇಲೆ ವಿಶ್ವಾಸವಿಟ್ಟು ನೀತಿಯಿಂದ ನಡೆಯಿರಿ. ಪ್ರಪಂಚ ಪರಮಾರ್ಥಗಳೆರಡನ್ನೂ ಗಳಿಸುವದು ಶಕ್ಯವಿದೆ. ಮತ್ತು ಹಾಗೆ ಎರಡನ್ನೂ ಗಳಿಸುವವರೇ ಧನ್ಯರು. ಪ್ರಪಂಚವನ್ನು ಸಂಪೂರ್ಣವಾಗಿ ಬಿಟ್ಟು ಪರಮಾರ್ಥಗಳಿಸುವದು ಸುಲಭವಾದ ಮಾತಲ್ಲ. ಅದಕ್ಕೆ ಪರಮಾವಧಿಯ ವೈರಾಗ್ಯಬೇಕು. ಅದು ಎಲ್ಲರಲ್ಲಿಯೂ ಇರಲಿಕ್ಕೆ ಸಾಧ್ಯವಿಲ್ಲ. ಪ್ರಪಂಚ ತೊರೆದು ಪರಮಾರ್ಥ ಮಾಡಬೇಕೆನ್ನುವವನು ಅನೇಕ ತರದ ತೊಂದರೆಗಳನ್ನು ಎದುರಿಸಬೇಕಾಗುವದು. ಅವನಿಗೆ ಒಮ್ಮೊಮ್ಮೆ ತಿನ್ನಲಿಕ್ಕೆ ಅನ್ನ ಕೂಡಸಿಕ್ಕದಂತಹ ಪ್ರಸಂಗ ಬರುತ್ತದೆ. ಅದೆಲ್ಲಕ್ಕೂ ಅವನು ಸಿದ್ಧನಾಗಬೇಕು. ಇದಕ್ಕೆ ವಿರುದ್ಧವಾಗಿ ಪರಮಾರ್ಥವನ್ನು ಅಪೂಟ ಕೈಬಿಟ್ಟು, ಪ್ರಪಂಚದ ಬೆನ್ನುಹತ್ತುವದೂ ತರವಲ್ಲ. ಹಾಗೆ ಮಾಡಿದರೆ ಮುಂದೆ ಯಮಯಾತನೆಗಳನ್ನು ಅನುಭವಿಸಬೇಕಾಗುವದು. ಆದುದರಿಂದ ನಿಮ್ಮುಂಥವರು ಪ್ರಪಂಚವನ್ನು ಮಾಡಿಕೊಂಡು ಪರಮಾರ್ಥವನ್ನು ಗಳಿಸುವ ಯತ್ನಮಾಡಬೇಕು. ಚಿದಂಬರನ ಚರಣದಲ್ಲಿ ಅಖಂಡವಾಗಿ ಚಿತ್ತವನ್ನಿಟ್ಟು ನೀವು ಸುಖವಾಗಿ ಸಂಸಾರ ಮಾಡಿರಿ. ಇದರಿಂದ ನಿಮಗೆ ಇಹಪರಗಳೆರಡೂ ಸಾಧಿಸುವವು'' ಎಂಬದು ಮಹಾರಾಜರ ಉಪದೇಶದ ಸಾರವಾಗಿರುತ್ತಿತ್ತು. ''ಇದನ್ನು ಸಾಧಿಸಲಿಕ್ಕೆ ಗುರ್ಲಹೊಸೂರ ಚಿದಂಬರೋತ್ಸವಕ್ಕೆ ಅವಶ್ಯವಾಗಿ ಬರ್ರಿ'' ಎಂದು ಅವರು ಎಲ್ಲರಿಗೂ ಆಗ್ರಹಪೂರ್ವಕವಾಗಿ ಆಮಂತ್ರಣ ಕೊಡುತ್ತಿದ್ದರು. ''ಸಂಸಾರ ಕಿಲುಬಿನಿಂದ ಜಂಗುಹಿಡಿದ ನಿಮ್ಮ ಮನಸು ಅಲ್ಲಿಯ ಶುದ್ಧವಾದ ಗಾಳಿಯಿಂದ

ನಿಜವಾಗಿಯೂ ತಿಳಿಯಾಗುವದು. ಪರಮಾತ್ಮನ ನಿಷ್ಕಾಮ ಸೇವೆಯಲ್ಲಿ ಭಾಗವಹಿಸುವದೇ ಮನಸಿನ ಹೊಲಸನ್ನು ತೆಗೆದುಹಾಕುವ ಉತ್ತಮ ಸಾಧನವು'' ಎಂದು ಮಹಾರಾಜರು ಅವರಿಗೆ ಮತ್ತೆ ಮತ್ತೆ ಹೇಳುವರು.

ಮಹಾರಾಜರು ತಮ್ಮ ತಮ್ಮ ಊರುಗಳಿಗೆ ಚಿದಂಬರನ ಉತ್ಸವದ ನಿಮಿತ್ತದಿಂದಾದರೂ ಬಂದೇ ಬರಬೇಕೆಂದು ಎಲ್ಲ ಜನರೂ ಇಚ್ಛಿಸುತ್ತಿದ್ದರು. ಮಹಾರಾಜರು ತಮ್ಮ ಊರಿಗೆ ಬಂದಾಗ ಜನರು ತಮ್ಮ ವೈಯಕ್ತಿಕ ದ್ವೇಷಾಸೂಯೆಗಳನ್ನು ಮರೆತು ಒಂದಾಗಿ ನಡೆಯುತ್ತಿದ್ದರು. ಮಹಾರಾಜರ ಸಂನಿಧಾನದ ಪ್ರಭಾವವೇ ಅಂತಹದು. ಮಹಾರಾಜರು ತಮ್ಮ ಊರಿಗೆ ದಯಮಾಡಿಸಿರುವರೆಂಬ ಆನಂದದ ಭರದಲ್ಲಿ ಅವರು ರುದ್ರಾಭಿಷೇಕ ನೊದಲಾದ ಧಾರ್ಮಿಕ ಕಾರ್ಯಕ್ರಮಗಳನ್ನೇರ್ಪಡಿಸುತ್ತಿದ್ದರು. ಎಲ್ಲರ ಊಟ ಉಡಿಗೆಗಳೂ ಒಂದೇ ಕಡೆಗೆ ಆಗುತ್ತಿದ್ದವು. ಹೆಚ್ಚೇನು ? ಮಹಾರಾಜರ ಸಾನ್ನಿಧ್ಯದಿಂದ ಪ್ರತಿಯೊಂದು ಊರು ಗೋಕುಲದಂತೆ ಕಂಗೊಳಿಸುತ್ತಿತ್ತು. ಮಹಾರಾಜರು ಎಂದೆಂದಿಗೂ ತಮ್ಮಲ್ಲಿಯೇ ಇರಬೇಕೆಂದೂ, ಅವರ ವಿಯೋಗವಾಗಬಾರದೆಂದೂ ಅವರಿಗೆ ಸ್ವಾಭಾವಿಕವಾಗಿಯೇ ಎನಿಸುತ್ತಿತ್ತು. ಕುಟುಂಬ-ಕುಟುಂಬಗಳಲ್ಲಿ ತಲೆತಲಾಂತರಗಳಿಂದ ನಡೆದುಬಂದ ವೈರಭಾವವು ಮಹಾರಾಜರ ಸಂಗತಿಯಿಂದಲೂ ಸದುಪದೇಶದಿಂದಲೂ ನಾಮಶೇಷವಾಗಿ ಎಲ್ಲರೂ ಸೋದರರಂತೆ ವರ್ತಿಸುತ್ತಿದ್ದರು. ಸಂಪಗಾವಿಯೊಳಗೆ ಒಂದು ಪ್ರಸಂಗದಲ್ಲಿ ಮಹಾರಾಜರು ಇದೇ ರೀತಿಯಿಂದ ಅಲ್ಲಿಯ ಬ್ರಾಹ್ಮಣರೊಳಗಿನ ದೀರ್ಘದ್ವೇಷವನ್ನು ನಾಶಮಾಡಿದ ಉದಾಹರಣೆಯು ಪ್ರಸಿದ್ಧವಿದೆ. ಅಲ್ಲಿಯ ಕೆಲವು ಕುಟುಂಬಗಳೊಳಗೆ ಪರಸ್ಪರ ತಿಕ್ಕಾಟವಿರುವದು. ಮಹಾರಾಜರ ದೃಷ್ಟಿಗೆ ಬಿದ್ದೊಡನೆ ಅವರು ಊಟವಾದ ಮೇಲೆ ಎಲ್ಲರನ್ನೂ ಕೂಡಿಸಿ ನಾಲ್ಕು ಉಪದೇಶದ ಮಾತುಗಳನ್ನು ಹೇಳಿದರು. ''ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ'' ಎಂಬ ಗೀತಾವಾಕ್ಯವು (೧೨–೧೩) ಅಂದಿನ ಅವರ ಉಪದೇಶಕ್ಕೆ ಆಧಾರವಾಗಿತ್ತು. ಮಹಾರಾಜರು ಆ ಗೀತಾವಾಕ್ಯವನ್ನು ಹೇಳಿ ಅದರ ವಿವರಣೆ ಮಾಡಿದರು:— ''ಬಂಧುಗಳೇ, ನಮ್ಮೊಳಗಿನ ಅಣ್ಣತಮ್ಮಂದಿರ ಜಗಳವು ಕೌರವ-ಪಾಂಡವರ

ಕಾಲದಿಂದಲೂ ಅನರ್ಥವನ್ನುಂಟು ಮಾಡುತ್ತ ಬಂದಿದೆ. ಹಿಂದುಸ್ಥಾನದಲ್ಲಿ ವಿಧರ್ಮೀಯರಾದ ಮುಸಲ್ಮಾನರು ಪ್ರವೇಶ ಮಾಡಲಿಕ್ಕೆ ಈ ತರದ ತಂಟೆಯೇ ಕಾರಣವಾಯಿತೆಂಬದು ನಿಮಗೆಲ್ಲರಿಗೂ ಗೊತ್ತಿದೆ. ನಮ್ಮ ದೇಶದ ಇಂದಿನ ದುರವಸ್ಥೆಗೂ ನಮ್ಮ ನಮ್ಮೊಳಗಿನ ತಿಕ್ಕಾಟವೇ ಕಾರಣವು. ಇಷ್ಟು ಅನರ್ಥಕರವಾದ ದಾಯಾದಿತನವನ್ನು ನಾವು ಬಿಸುಟಿಹಾಕಲಾರೆವೇ? ನಾವು ಬಂಧು-ಬಳಗದವರಾಗಿ ಹುಟ್ಟಿಬಂದುದು ಏತಕ್ಕಾಗಿ? ದ್ವೇಷಾಸೂಯೆಗಳಿಂದ ಒಬ್ಬರೊಬ್ಬರ ಕುತ್ತಿಗೆ ಹಿಚುಕಲಿಕ್ಕೋ? ಅಥವಾ ಒಬ್ಬರೊಬ್ಬರಿಗೆ ಸಹಾಯಕರಾಗುವದಕ್ಕೋ? ನಾವೆಲ್ಲರೂ ಕೂಡಿ ಒಕ್ಕಟ್ಟಾಗಿ ನಡೆದರೂ ಸಂಸಾರವು ಸುಖಪೂರ್ಣವಾಗುವಂತಿರುವದಿಲ್ಲ. ಎಂದ ಮೇಲೆ ಮೊದಲೇ ದುಃಖದ ಆಗರವಾದ ಸಂಸಾರವನ್ನು ನಮ್ಮ ಅಜ್ಞಾನಮೂಲಕವಾದ ಜಗಳಗಳಿಂದ ಇನ್ನಿಷ್ಟು ದುಃಖಕರವಾಗಿ ಏಕೆಮಾಡಬೇಕು? ಒಂದು ವಿಷಯದಲ್ಲಿ ಮಾತ್ರ ನಮ್ಮೊಳಗೆ ಸಾತ್ವಿಕ ಸ್ಪರ್ಧೆಯಿರಬಹುದು. ಅದೇನೆಂದರೆ — ಚಿದಂಬರನ ಸೇವೆ. ಭಗವಂತನ ಸೇವೆಯನ್ನು ನಾನು ಹೆಚ್ಚಾಗಿ ಮಾಡುವೆನು, ನಾನು ಹೆಚ್ಚಾಗಿ ಮಾಡುವೆನು, ಎಂದು ಬೇಕಾದರೆ ನಾವು ಅಹಮಹಮಿಕೆಯನ್ನು ತೋರಿಸಬಹುದು. ಆದರೆ ಆ ಉತ್ಸಾಹವೂ ಕೂಡ ಈರ್ಷೆ-ಅಸೂಯೆಗಳಲ್ಲಿ ಪರಿಣಮಿಸದಂತೆ ಎಚ್ಚರಪಡಬೇಕು. ಉಳಿದ ವಿಷಯಗಳಲ್ಲಿ ನಮ್ಮ ನಮ್ಮೊಳಗಿನ ಅಣ್ಣತಮ್ಮಂದಿರ ಭಾವದ ಜಗಳವನ್ನು ಸಂಪೂರ್ಣವಾಗಿ ಚಿವುಟಿ ಹಾಕಲಿಕ್ಕೆ ಕಲಿಯಬೇಕು. ಗೀತೆಯಲ್ಲಿ ಭಗವಂತನು ಹೇಳುವಂತೆ ನಮಗೆ ಶತ್ರುಗಳೆಂಬವರೇ ಇರಬಾರದು. ನಮ್ಮ ವರ್ತನೆಯೇ ಹಾಗಿರುವಂತೆ ಜಾಗರೂಕರಾಗಿರಬೇಕು. ನಾವು ಯಾರಿಗೂ ಶತ್ರುಗಳಾಗಬಾರದು. ಇದೇ ಮನುಷ್ಯನ ನಡತೆಯ ಪರಮೋದ್ದೇಶವಾಗಿರಬೇಕು. ಎಲ್ಲರೂ ಮಿತ್ರರಾಗುವಂತೆ ನಡೆಯುವದು ಪ್ರತಿಯೊಬ್ಬ ಮನುಷ್ಯನ ಸ್ವಾಧೀನದ ಮಾತು. ಎಲ್ಲರೂ ವಸ್ತುತಃ ಒಂದೇ ಆತ್ಮಸ್ವರೂಪವಾಗಿರುವದರಿಂದ ನಾವು ಒಬ್ಬರೊಬ್ಬರ ಮೇಲೆ ಕರುಣೆ-ದಯೆ ತೋರಲಿಕ್ಕೆ ಕಲಿಯಬೇಕು, ಪ್ರೇಮ ಮಾಡಬೇಕು. ಎಲ್ಲರಲ್ಲಿಯೂ ನಾನೇ ಇದ್ದೇನೆ, ನನ್ನಲ್ಲಿಯೇ ಎಲ್ಲರೂ ಇದ್ದಾರೆ, ಎಂದು ಯಾವನು ಕಾಣುವನೋ ಅವನಿಗೆ ಶೋಕವೆಲ್ಲಿಯದು, ಮೋಹವೆಲ್ಲಿಯದು,

ಎಂದು ಉಪನಿಷತ್ತು ಹೇಳುತ್ತದೆ ಈ ಸ್ಥಿತಿಯನ್ನು ಹೊಂದುವದೇ ಪ್ರತಿಯೊಬ್ಬ ವಿಚಾರಿಯಾದವನ ಕರ್ತವ್ಯವು. ಅದಕ್ಕಾಗಿ ಯತ್ನ ಮಾಡುವದನ್ನು ಬಿಟ್ಟು ಕೆರುಕುಳ ತಂಟೆಗಳಲ್ಲಿ ನಮ್ಮ ಶಕ್ತಿಯನ್ನೂ ವೇಳೆಯನ್ನೂ ಕಳೆಯುತ್ತಿದರೆ ನಮಗೆ ಏನೆನ್ನಬೇಕು ? ಹೀಗೆ ಮಾಡುವದು ಆತ್ಮಘಾತವಲ್ಲವೇ ? ಆದುದರಿಂದ ಇಂದಿನಿಂದ ನೀವು ನಿಮ್ಮ ದ್ವೇಷಾಗ್ನಿಯನ್ನು ಚಿದಂಬರನ ಚರಣಸಾಕ್ಷಿಯಾಗಿ ನೊಂದಿಸಿ ಸುಖಿಗಳಾಗುವಿರೆಂದು ನಂಬಿದ್ದೇನೆ.'' ಮಹಾರಾಜರ ಈ ಉಪದೇಶದ ಪರಿಣಾಮವು ಅತ್ಯದ್ಭುತವಾಯಿತು. ಮೊದಲು ಯಾರಿಂದಲೂ ಆಗದಿದ್ದ ಕೆಲಸವು ಮಹಾರಾಜರ ಶಬ್ದಗಳಿಂದ ಕ್ಷಣಾರ್ಧದಲ್ಲಿ ಆಗಿಬಿಟ್ಟಿತು. ಕೂಡಲೇ ಸಭೆಯಲ್ಲಿ ನೆರೆದಿದ್ದ ಕುಟುಂಬದ ಮುಖ್ಯಸ್ಥರು ಸಭೆಯಲ್ಲಿಯೇ ಎದ್ದು ನಿಂತು, ತಾವಿನ್ನು ಮೊದಲಿನ ವೈರ ಭಾವವನ್ನು ಬಿಟ್ಟಿವೆಂದೂ ಚಿದಂಬರನ ಸೇವೆಗಾಗಿಯೇ ಎಲ್ಲರೂ ಯತ್ನಿಸುವೆವೆಂದೂ ಪ್ರತಿಜ್ಞೆಮಾಡಿದರು. ವಾಚಕರೇ, ಕ್ಷಣಾರ್ಧದ ಮಟ್ಟಿಗಾದರೂ ಸತ್ಸಂಗ ಸಿಕ್ಕರೆ ಅದರಿಂದ ಪರಮಕಲ್ಯಾಣವಾಗುವದೆಂದು ಶಾಸ್ತ್ರಗಳು ಹೇಳುವದು ಸುಳ್ಳಲ್ಲವೆಂಬದು ಇದರಿಂದ ಗೊತ್ತಾಗುವದಿಲ್ಲವೇ ?

ಚಿದಂಬರನ ಉತ್ಸವಕ್ಕೆ ಎಲ್ಲರೂ ತಮ್ಮ ತಮ್ಮ ಯೋಗ್ಯತೆಗೆ ತಕ್ಕಂತೆಯೇ ಸಹಾಯ ಮಾಡಬೇಕೆಂದು ಮಹಾರಾಜರು ಬಯಸುತ್ತಿದ್ದರು. ಯಾರ ಕಡೆಯಿಂದಲೂ ಅವರು ಹೆಚ್ಚಿಗೆ ಹಣತಕ್ಕೊಳ್ಳುತ್ತಿರಲಿಲ್ಲ. ತಾವಾಗಿಯೇ ಹೆಚ್ಚಾಗಿ ಕೊಡಬಂದರೂ ಅವರಿಗೆ ಬುದ್ಧೀ ಹೇಳುತ್ತಿದ್ದರೇ ಹೊರತು ಅದನ್ನು ಎಂದೂ ಸ್ವೀಕರಿಸುತ್ತಿದ್ದಿಲ್ಲ. ಒಂದೊಂದು ಸಲ ಯಾರಾದರೂ ಹೆಚ್ಚುಕೊಟ್ಟೇ ತೀರುವೆವೆಂದು ಹಟಹಿಡಿದರೆ ''ಒಳ್ಳೆಯದು. ದೇವರ ಮುಂದೆ ಚೀಟಿ ಹಾಕೋಣ. ಎಷ್ಟು ಕೊಡಬೇಕೆಂದು ಬರುವದೋ ಅಷ್ಟು ಕೊಡಿರಿ'' ಎಂದು ಉಪಾಯಾಂತರದಿಂದ ಅವರನ್ನು ಸಮಾಧಾನ ಮಾಡುತ್ತಿದ್ದರು. ಮತ್ತು ದೇವರ ಮುಂದೆ ಚೀಟೇ ಹಾಕಿದಾಗ ಯಾವಾಗಲೂ ಮಹಾರಾಜರ ಮನಸ್ಸಿನಲ್ಲಿ ಆ ಭಕ್ತನು ಎಷ್ಟು ಕೊಡಬೇಕೆಂದು ಇರುತ್ತಿತ್ತೋ, ಅಷ್ಟೇ ಹಣವು ಎತ್ತಿದ ಚೀಟಿಯಲ್ಲಿ ಇರುತ್ತಿತ್ತು. ಯಾರಿಗೆ ಹಣ ಕೊಡಲಿಕ್ಕೆ ಸಾಧ್ಯವಿದ್ದಿಲ್ಲವೋ ಅಂಥವರು ಮಹಾರಾಜರ ಮುಂದೆ

ಬಂದು ಅಳುಮೋರೆಯಿಂದ ಕುಳಿತಾಗ ಮಹಾರಾಜರು ಅವರಿಗೆ ಸರಿಯಾದ ಸಮಾಧಾನ ಹೇಳುತ್ತಿದ್ದರು:— ''ಹುಚ್ಚಪ್ಪಾ, ಇದಕ್ಕೇಕಿಷ್ಟು ಮನಸ್ಸಿಗೆ ಹಚ್ಚಿಕೊಳ್ಳುವೆ ! ಚಿದಂಬರನಿಗೆ ಹಣವೇಕಾಗಿಲ್ಲ, ಅವನಿಗೆ ಭಾವವೇಕು. ಹಣಕೊಟ್ಟರೇ ಚಿದಂಬರನ ಸೇವೆಯಾಗುವದೆಂದಲ್ಲ. ಚಿದಂಬರ ಸೇವೆಯ ರೂಪವು ಅನೇಕಮುಖವಾಗಿದೆ. ನೀನು ಉತ್ಸವಕ್ಕೆ ಬಂದು ನಿನ್ನ ಕಡೆಯಿಂದಾದ ಕಾಯಿಕ ಸೇವೆಯನ್ನು ಮಾಡು. ಅದರಿಂದಲೇ ಚಿದಂಬರನು ನಿನ್ನ ಮೇಲೆ ಸಂತುಷ್ಟನಾಗುವನು.'' ನಿಜವಾದ ಭಕ್ತಿಭಾವವಿಲ್ಲದೆ, ತಮ್ಮ ಆಧ್ಯತೆ ತೋರಿಸುವದಕ್ಕಾಗಿ ಯಾವನೊಬ್ಬನು ಎಷ್ಟೇ ಹಣ ಕೊಡವಾಡಿದರೂ ಮಹಾರಾಜರು ಅದನ್ನು ಸ್ವೀಕರಿಸುತ್ತಿರಲಿಲ್ಲ.

ಹೀಗೆ ಮಹಾರಾಜರ ಸಂಚಾರವೆಂದರೆ ಚಿದಂಬರ ಭಕ್ತಿಯ ಪ್ರಸಾರ ಮತ್ತು ಲೋಕ ಶಿಕ್ಷಣಗಳ ಒಂದು ಸ್ತುತ್ಯವಾದ ಉಪಕ್ರಮವಾಗಿತ್ತು. ಮಹಾರಾಜರು ಭಾದ್ರಪದ ವದ್ಯ ೧೫ಕ್ಕೆ ಸಂಚಾರಕ್ಕೆ ಹೊರಟವರು ಕಾರ್ತಿಕ ಶುದ್ಧ ೫ ರೊಳಗಾಗಿ ತಿರುಗಿ ಗುರ್ಲಹೊಸೂರಿಗೆ ಬರುತ್ತಿದ್ದರು. ಆದರೆ ಇಷ್ಟು ಅಲ್ಪ ಕಾಲದಲ್ಲಿ ಅವರಿಗೆ ಎಲ್ಲ ಊರುಗಳಿಗೂ ಹೋಗಿಬರಲಿಕ್ಕೆ ಆಗುತ್ತಿದ್ದಿಲ್ಲ. ಆದರೆ ಒಂದಿಲ್ಲೊಂದು ವರುಷ ಎಲ್ಲ ಊರುಗಳಿಗೂ ಭೆಟ್ಟಿ ಸಿಕ್ಕುವಂತೆ ಮಹಾರಾಜರ ಸಂಚಾರದ ಕಾರ್ಯಕ್ರಮವಿರುತ್ತಿತ್ತು. ಈ ನಿಮಿತ್ತದಿಂದ ಅವರು ಕರ್ನಾಟಕದ ಈ ಭಾಗದೊಳಗಿನ ಬಹುಶಃ ಎಲ್ಲ ಊರುಗಳಿಗೂ ಸಂದರ್ಶನವನ್ನಿತ್ತು ಲೋಕ ಜಾಗೃತಿಯನ್ನು ಮಾಡಿದರೆಂದು ಹೇಳಬಹುದು. ಆದರೆ ಸ್ವತಃ ಮಹಾರಾಜರಿಗೆ ಹೋಗಲಿಕ್ಕೆ ಆಗದಿದ್ದರೂ, ಆಯಾ ಊರ ಜನರು ತಾವೇ ತಮ್ಮ ವರ್ಗಣಿ ಹಣವನ್ನು ಕೂಡಿಸಿ ಸಕಾಲಕ್ಕೆ ಮಹಾರಾಜರ ಕಡೆಗೆ ಕಳಿಸಿಕೊಡುತ್ತಿದ್ದರು.

ಕಾರ್ತಿಕ ಶುದ್ಧ ಪಂಚಮಿಗೆ ಮಹಾರಾಜರು ತಿರುಗಿ ಗುರ್ಲಹೊಸೂರಿಗೆ ಬಂದ ಮೇಲೆ ದೇವಾಲಯ ಮೊದಲಾದವುಗಳನ್ನು ಸ್ವಚ್ಛವಾಡುವ ಕೆಲಸವೂ ಶೃಂಗಾರದ ಕೆಲಸಗಳೂ, ಸಭಾಮಂಟಪವನ್ನು ಹಾಕುವ ಕೆಲಸವೂ ನಡೆಯುತ್ತಿದ್ದವು. ಈ ಕೆಲಸಗಳಿಗೆಲ್ಲ ಸಹಜವಾಗಿಯೇ ೮—೧೦ ದಿನಗಳು ಬೇಕಾಗುತ್ತಿದ್ದವು. ಅಲ್ಲಲ್ಲಿ ಸಂಗ್ರಹಿಸಿದ ಕಾಳುಕಡಿ ಮೊದಲಾದವುಗಳನ್ನು

ಇದೇ ಅವಧಿಯಲ್ಲಿ ಗುರ್ಲಹೊಸೂರಿಗೆ ತರಿಸಿಕೊಂಡು, ಅರಿಸಿ, ಕುಟ್ಟಿ, ಬೀಸಿ ಅಣಿಮಾಡಿ ಇಡಿಸುತ್ತಿದ್ದರು. ಕಾರ್ತಿಕ ವದ್ಯ ಪ್ರತಿಪದೆಯೊಳಗಾಗಿ ಎಲ್ಲ ಸಾಮಾನುಗಳೂ ಸಂಗ್ರಹಿಸಲ್ಪಡುತ್ತಿದ್ದವಲ್ಲದೆ, ಉತ್ಸವದ ಎಲ್ಲ ಸಿದ್ಧತೆಯೂ ಪೂರ್ಣವಾಗುತ್ತಿತ್ತು. ಈ ಪೂರ್ವ ಸಿದ್ಧತೆಯು ಮುಗಿದ ಮೇಲೆ ಉತ್ಸವದ ಏಳು ದಿನಗಳ ವೇಳಾಪತ್ರಿಕೆಯು ಬರೆಯಲ್ಪಡುತ್ತಿತ್ತು. ಮತ್ತು ಏನು ಬೇಕಾದ್ದಾದರೂ ಆ ವೇಳಾಪತ್ರಿಕೆಯಂತೆ ಎಲ್ಲ ಕಾರ್ಯಕ್ರಮಗಳು ಆದರಲ್ಲಿ ಕಾಣಿಸಿದ ವೇಳೆಗೆ ತಪ್ಪದೆ ಸುವ್ಯವಸ್ಥಿತವಾಗಿ ಸಾಗುತ್ತಿದ್ದವು.

ಈ ರೀತಿಯಾಗಿ ಮಹಾರಾಜರ ಮೇಲ್ವಿಚಾರಣೆಯಲ್ಲಿ ಸುವ್ಯವಸ್ಥಿತವಾಗಿ ನಡೆದ ಚಿದಂಬರೋತ್ಸವವು ಕ್ರಮೇಣ ವಿಸ್ತಾರ ಹೊಂದುತ್ತ ನಡೆದಿದ್ದರೆ ಆಶ್ಚರ್ಯವಿಲ್ಲ. ಮಹಾರಾಜರ ಆಜ್ಞೆಯಿಂದ ಪ್ರಸಿದ್ಧವಾದ ಉತ್ಸವಗಳ ವಾರ್ಷಿಕ ವರದಿಗಳನ್ನು ತುಲನೆ ಮಾಡಿ ನೋಡಿದರೆ ಈ ಮಾತು ಚನ್ನಾಗಿ ಮನದಟ್ಟಾಗುವಂತಿದೆ. ಶಕೆ ೧೮೧೮ ರಲ್ಲಿ ಸುಮಾರು ಒಂದು ಸಾವಿರ ರೂಪಾಯಿಗಳ ಆಯವ್ಯಯವಿದ್ದು, ಅದು ಕ್ರಮೇಣ ೧೧೦೦, ೧೨೦೦ ಹೀಗೆ ಏರುತ್ತೇರುತ್ತ ಶಕೆ ೧೮೨೫ ರಲ್ಲಿ ೧೫೦೦ ರೂಪಾಯಿಗಳಿಗೆ ಬಂದು ನಿಂತಿತು. ಶಕೆ ೧೮೨೬ ರಲ್ಲಿ ಅದು ೧೭೦೦ ರೂಪಾಯಿಗಳಿಗೆ ಏರಿ, ೧೮೨೭ ರಲ್ಲಿ ಅದು ೨೧೦೦ ರೂಪಾಯಿ ಆಯಿತು. ಅದರ ಮುಂದಿನ ವರುಷ ಅದು ೩೨೦೦ ರೂಪಾಯಿಗಳಷ್ಟಾಗಿ, ಶಕೆ ೧೮೨೯ ರಲ್ಲಿ ಅದು ೩೮೦೦ ರೂಪಾಯಿಗಳನ್ನು ಮುಟ್ಟಿತು. ಶಕೆ ೧೮೩೦ ರಲ್ಲಿ ಈ ಅಂಕಿಯು ೪೩೦೦ ಕ್ಕೆ ಏರಿತು. ಇದೇ ಪರಮಾವಧಿ ಅಂಕೆಯು. ಶಕೆ ೧೮೩೧ ಮತ್ತು ೩೨ ರಲ್ಲಿ, ಈ ಅಂಕೆಯು ತುಸು ಕಡಿಮೆಯಾದಂತೆ ಕಂಡಬಂದರೂ, ಉಳಿದ ವಿಷಯಗಳಲ್ಲಿ ಪ್ರಗತಿಯು ಆಗುತ್ತಲೇ ಇತ್ತು.

ಶಕೆ ೧೮೧೮ ರಲ್ಲಿ ದೇವರ ಒಡೆತನದ ಪಾತ್ರೆಗಳಾಗಲಿ, ಉತ್ಸವಕ್ಕೆ ಬೇಕಾಗುವ ಬೇರೆ ಸಾಮಾನುಗಳಾಗಲಿ, ಎಷ್ಟು ಮಾತ್ರವೂ ಇರಲಿಲ್ಲ. ಆದರೆ ಚಿದಂಬರನ ನಿತ್ಯ ನೈಮಿತ್ತಿಕ ಪೂಜಾ-ಅರ್ಚಾದಿಗಳು ಯಥಾಸಾಂಗವಾಗಿ ಸಾಗಿ, ಉತ್ಸವವು ವಿಜೃಂಭಣೆಯಿಂದ ನಡೆಯಬೇಕಾದರೆ, ದೇವಸ್ಥಾನಕ್ಕೆ ಸ್ವಂತ ಒಡೆತನದ ಪಾತ್ರೆಗಳೂ ಸಾಮಾನುಗಳೂ ಇರುವದು

ಅತ್ಯಾವಶ್ಯಕವಾಗಿತ್ತು. ಆದುದರಿಂದ ಶಕೆ ೧೮೧೯ ರಲ್ಲಿಯೇ ಮಹಾರಾಜರು ಈ ಸಂಗತಿಯ ಕಡೆಗೆ ಲಕ್ಷಕೊಟ್ಟರು. ಕಾರಣ ಅದೇ ವರುಷ ಅನೇಕ ಜನ ಭಕ್ತರು ಸಂತೋಷದಿಂದ ಮುಂದೆ ಬಂದು, ಅನೇಕ ಪಾತ್ರೆಗಳನ್ನೂ, ಪೇಳೆಡಂಬರ ಮೊದಲಾದ ವಸ್ತುಗಳನ್ನೂ ಮಾಡಿಸಿ ಕೊಟ್ಟರು. ಇದೇ ವರುಷ ಕೈ. ವ್ಯಾ. ರಾವಸಾಹೇಬ ಮಲ್ಲಾರ ಲಿಂಗೋ ಕುಲಕರ್ಣಿ, ಸೂಡಿ, ಇವರಿಗೆ ದೃಷ್ಟಾಂತವಾದುದರಿಂದ, ಅವರು ಪ್ರತಿ ಸೋಮವಾರ ಪಲ್ಲಕ್ಕಿಯ ಸೇವೆಯು ಅಖಂಡವಾಗಿ ನಡೆಯಬೇಕೆಂದು ವ್ಯವಸ್ಥೆ ಮಾಡಿ, ಪ್ರತಿವರುಷ ಆ ಬಗ್ಗೆ ಆರು ರೂಪಾಯಿ ಕಳಿಸಿಕೊಡಲಾರಂಭಿಸಿದರು. ಅದರಂತೆ ಬೇರೆ ಜನರು ನಂದಾದೀಪಕ್ಕಾಗಿಯೂ, ದೀಪಾರಾಧನೆಗಾಗಿಯೂ, ಸೋಮವಾರದ ಪಲ್ಲಕ್ಕಿಗೆ ಬೇಕಾಗುವ ತೆಂಗಿನ ಕಾಯಿ ಕಪ್ಪುರಗಳಿಗಾಗಿಯೂ ಕಾಯಂ ವ್ಯವಸ್ಥೆ ಮಾಡಿದರು. ಇದೇ ವರುಷ ದೇವಸ್ಥಾನದಲ್ಲಿ ಒಂದು ಮುದ್ರೆ ಮಾಡಿದ ಪೆಟ್ಟಿಗೆಯನ್ನಿಟ್ಟು, ಅದರೊಳಗಿಂದ ಬಂದ ಹಣದಿಂದ ದೇವಸ್ಥಾನದ ಗಿಡಗಳಿಗೆ ನೀರು ಹಾಕಿಸುವದು, ದೇವಸ್ಥಾನವನ್ನು ಸಾರಿಸುವದು. ಇವೇ ಮೊದಲಾದ ಕೆಲಸಗಳನ್ನು ಮಾಡಿಸಹತ್ತಿದರು. ಮಹಾರಾಜರು ಸುರುವು ಮಾಡಿದ ಈ ಉಪಕ್ರಮವು ಬೆಳೆಯುತ್ತ ಹೋಗಿ, ದೇವಸ್ಥಾನಕ್ಕೆ ಬೇಕಾಗುವ ಎಲ್ಲ ಪಾತ್ರೆಗಳೂ ವಸ್ತುಗಳೂ ಸಹಜವಾಗಿ ಸಂಗ್ರಹವಾದವು. ಅವೆಲ್ಲವುಗಳ ಬೆಲೆಯು ಒಂದು ಸಾವಿರ ರೂಪಾಯಿಗಳನ್ನಾದರೂ ಮಿಕ್ಕಬಹುದು.

ಶಕೆ ೧೮೨೮ ರಲ್ಲಿ ಮಹಾರಾಜರು ಇನ್ನೊಂದು ಅಸಾಧಾರಣವಾದ ಕೌಶಲ್ಯವನ್ನು ತೋರಿಸಿದರು. ಗುರ್ಲಹೊಸೂರು ಪೇಟೆಯ ಸ್ಥಳವಾಗಿದ್ದು ಅಲ್ಲಿ ಅನೇಕ ಜನ ವರ್ತಕರಿರುತ್ತಾರೆ. ಅವರಲ್ಲಿ ಯಾರೂ ಬ್ರಾಹ್ಮಣರಿದ್ದಿಲ್ಲವೆಂಬುದು ನೆನಪಿನಲ್ಲಿಡಬಹುದಾದ ಮಾತಾಗಿದೆ. ಆದರೆ ಮಹಾರಾಜರು ಎಲ್ಲ ಜಾತಿಯವರಿಗೂ ಸಮಾನವಾಗಿಯೇ ಪ್ರಿಯರಾಗಿದ್ದರು. ಅಲ್ಲಿಯ ವರ್ತಕರು ಮಹಾರಾಜರ ವ್ಯವಸ್ಥೆಗೆ ಮನಮೆಚ್ಚಿ ತಾವೂ ಚಿದಂಬರ ಸೇವೆಯಲ್ಲಿ ಭಾಗ ತೆಕ್ಕೊಳ್ಳಬೇಕೆಂದು ಟೊಂಕಕಟ್ಟಿದರು. ಶಕೆ ೧೮೨೮ ನೆಯ ಮಾರ್ಗಶಿರ್ಷ ಶುದ್ಧ ದಶಮಿಯ ದಿನ (ತಾ. ೨೫—೧೧—೧೯೦೬)

ಅವರೆಲ್ಲರೂ ಕೂಡಿ ಮಹಾರಾಜರಿಗೆ ಒಂದು ಸಮ್ಮತಿ ಪತ್ರವನ್ನು ಬರೆದು-ಕೊಟ್ಟರುತ್ತಾರೆ. ಅದರ ಪ್ರಾರಂಭವು ಹೀಗಿದೆ:—

''ನಾವು ಕೆಳಗೆ ಸಹಿ ಮಾಡುವ ಜನರು ಸಾವಕಾರ, ಶೆಟ್ಟಿ, ಜವಳಿ, ಕಿರಾಣಿ ಅಂಗಡಿ ವಗೈರೆ ವ್ಯಾಪಾರಿ ಜನರು ನಾವು ನಮ್ಮ ಸಂತೋಷದಿಂದ ಈ ಊರಲ್ಲಿ ಇರುವ ಶ್ರೀ ಚಿದಂಬರೇಶ್ವರ ದೇವಸ್ಥಾನಕ್ಕೆ ನಮ್ಮ ಎಲ್ಲ ಜನರ ಕಡೆಯಿಂದ ವರ್ಷಾ ವಿನಾದರೂ ಉತ್ಪನ್ನ ಮುಟ್ಟಬೇಕೆಂಬುವ ಅಪೇಕ್ಷೆಯಿಂದ ನಾವು ಎಲ್ಲರೂ ಕೂಡಿ ವಿಚಾರ ಮಾಡಿ ಕೆಳಗೆ ಬರಿದಂತೆ ಠರಾವು ಮಾಡಿ-ಕೊಂಡಿರುತ್ತೇವೆ. ಅದರ ವಿವರ—''

ಈ ಸಮ್ಮತಿ ಪತ್ರದಿಂದ ಅವರು ಗುರ್ಲಹೊಸೂರಲ್ಲಿ ಕಾಳುಕಡಿ, ರೇಶಿಮೆ, ನೂಲು ಮುಂತಾದವುಗಳ ವ್ಯಾಪಾರವಾದಲ್ಲಿ ಪ್ರತಿಯೊಂದು ರೂಪಾಯಿಗೆ ೧ ಕಾಸಿನಂತೆ ತೆಗೆದಿಡುವೆವೆಂದೂ, ಹೀಗೆ ತೆಗೆದಿಟ್ಟ ಹಣವನ್ನು ಆಯಾ ವರ್ಷ ಕಾರ್ತಿಕ ಪೌರ್ಣಿಮೆಯೊಳಗಾಗಿ ಮಹಾರಾಜರ ಕಡೆಗೆ ಒಪ್ಪಿಸುವೆವೆಂದೂ ಒಪ್ಪಿಕೊಂಡರು. ಮತ್ತು ಗುರ್ಲಹೊಸೂರಲ್ಲಿ ಪ್ರತಿ ಶನಿವಾರ ಸಂತೆಯಾಗುತ್ತಿದ್ದು, ಆ ಸಂತೆಗೆ ಲ ಸೊಲಿಗೆಗಳಿಗಿಂತ ಹೆಚ್ಚಿನ ಕಾಳನ್ನು ಮಾರಲಿಕ್ಕೆ ತರುವವರ ಕಡೆಯಿಂದ ಚೀಲಕ್ಕೊಂದು ಗಿರಪಾವಿನಂತೆ ದೇವರಿಗೆ ಕಾಳು ತೆಗೆದು ಇಡಿಸುವೆವೆಂದು ಅವರು ವಚನ ಕೊಟ್ಟರು. ಎಲ್ಲರ ಕಡೆಯಿಂದ ಧಾನ್ಯವನ್ನು ವಸೂಲ ಮಾಡಿ ಒಟ್ಟುಗೂಡಿಸಲಿಕ್ಕೆ ಒಬ್ಬ ಮನುಷ್ಯನು ಬೇಕು. ಕಾರಣ ಇದರ ಗುತ್ತಿಗೆಯನ್ನು ಸವಾಲಮಾಡಿ ಯಾರು ಹೆಚ್ಚಿಗೆ ಬೇಡುವರೋ ಅವರ ಕಡೆಯಿಂದ ಅಷ್ಟು ಹಣವು ದೇವರಿಗೆ ತಪ್ಪದೇ ಮುಟ್ಟುವಂತೆ ವ್ಯವಸ್ಥೆ ಮಾಡುವೆವೆಂದು ಮಾತುಕೊಟ್ಟರು. ಆ ಸಮ್ಮತಿ ಪತ್ರದ ಕೊನೆಗೆ ಹೀಗೆ ಬರಿಯಲ್ಪಟ್ಟಿದೆ:—

''ನಾವು ಯಾವತ್ತೂ ಜನರು ದೇವಸ್ಥಾನ ಘಂಡಿನ ವಿಷಯಕ್ಕೆ ಕಾಯಾ ವಾಚಾ ಮನಸಿನಿಂದ ಝುಟಾಯಿಸಿ ಮಾಡುತ್ತೇವೆ. ಅಂತಾ ಸಂತೋಷದಿಂದ ಬರಕೊಟ್ಟ ಯಾದಿ. ಇದೇ ದೇವಾಲಯದಲ್ಲಿ ಇದ್ದ ಶ್ರೀ ಕೈವಲ್ಯ ಸ್ವಾಮಿ ಮಹಾರಾಜ ಇವರ ಆಜ್ಞೆಕ್ಕೆ ಅನುಸರಿಸಿ ಅವರ ಅಪ್ಪಣೆ ಮೇಲಿಂದ ಬರ-ಕೊಟ್ಟ ಯಾದಿ ಸಹಿ ತಾರೀಖು.''

ಈ ರೀತಿಯಾಗಿ ಬಂದ ಹಣದಿಂದ ದೇವಾಲಯದ ನಗಾರಖಾನೆಯು ಸುರುವಾಗಿ ಚೌಘಡಾ ಬಾರಿಸುವ ಕೆಲಸವು ಪ್ರಾರಂಭವಾಯಿತು. ಈ ದ್ವಾರದಿಂದ ಪ್ರತಿವರ್ಷ ದೇವಸ್ಥಾನಕ್ಕೆ ತುಸು ಹೆಚ್ಚು ಕಡಿಮೆ ಒಂದು ನೂರು ರೂಪಾಯಿ ಉತ್ಪನ್ನ ಬರಹತ್ತಿತು.

ಶಕೆ ೧೭೩೦ ರಲ್ಲಿ ಮಹಾರಾಜರು ಇನ್ನೂ ಒಂದು ದೊಡ್ಡ ಕೆಲಸವನ್ನು ಮಾಡಿದರು. ರಥೋತ್ಸವದ ದಿನ ಬ್ರಾಹ್ಮಣ ಭೋಜನವು ಶಾಶ್ವತವಾಗಿಯೂ ಅವಿಚ್ಛಿನ್ನವಾಗಿಯೂ ನಡೆಯಬೇಕಾದರೆ, ಅದಕ್ಕೆ ಏನಾದರೂ ಸ್ಥಾವರ ಆಸ್ತಿಯು ಆವಶ್ಯಕವೆಂದು ಮಹಾರಾಜರು ಆಲೋಚಿಸಿದರು. ಇದೇ ಕಾಲಕ್ಕೆ ದೀಕ್ಷಿತರ ವಂಶದೊಳಗಿನ ಒಬ್ಬ ಸಾಧ್ವಿಗೆ ಚಿದಂಬರನ ಸೇವೆ ಮಾಡಬೇಕೆಂದು ಇಚ್ಛೆಯುಂಟಾಗಿತ್ತು. ಮಹಾರಾಜರು ಈ ಸಂಧಿಯನ್ನು ಸಾಧಿಸಿ ಅವಳ ಮನವೊಲಿಸಿ, ಅವಳ ಕಡೆಯಿಂದ ಒಂದು ವಿಶ್ವಸ್ತ (ಟ್ರಸ್ಟ) ಪತ್ರವನ್ನು ಮಾಡಿಸಿದರು. ಅವಳು ೧೮೦೦ ರೂಪಾಯಿ ಕೊಟ್ಟು ಒಂದು ಹೊಲವನ್ನು ಕೊಂಡು ಅದರ ಉತ್ಪನ್ನದೊಳಗಿಂದ ರಥೋತ್ಸವವಾದ ದಿವಸ ಬ್ರಾಹ್ಮಣರ ಸಂತರ್ಪಣೆಯು ಸಾಗಬೇಕೆಂದು ಪಂಚರ ಹೆಸರಿನಿಂದ ಕಾಗದ ಬರಕೊಟ್ಟಿದ್ದಾಳೆ. ಅದರೊಳಗೆ ಖನೆಯ ಪ್ಯಾರಾದಲ್ಲಿ ಹೀಗೆ ಬರೆದಿದೆ:—

"ಸದರೀ ಆಗಮೋಕ್ತ ಉತ್ಸವದ ಕೆಲಸ ಶ್ರೀಮತ್ಪರಮಹಂಸ ಶ್ರೀ ಕೈವಲ್ಯಾಶ್ರಮ ಸ್ವಾಮಿಗಳ ದೇಖರೇಖಿಯ ಕೆಳಗೆ ಆಗುವ ವರೆಗೆ ಸದರೀ ಜಮೀನಿನಿಯ ವಾರ್ಷಿಕ ಉತ್ಪನ್ನದ ರಕಮು ದರಸಾಲ ಬಂದಷ್ಟು ಸದರೀ ಸ್ವಾಮಿ ಮಹಾರಾಜರವರ ಕಡೆಗೆ ಒಪ್ಪಿಸತಕ್ಕದ್ದು. ಮತ್ತು ಆ ರಕಮಿನ ಖರ್ಚಿನ ಬಾಬತ್ತು ಅವರಿಗೆ ಲಿಖ್ತು ವಗೈರೆ ಕೇಳತಕ್ಕದ್ದಲ್ಲ."

ಇದರ ನೇರಿಂದ ಮಹಾರಾಜರ ವಿಷಯಕ್ಕೆ ಅವಳ ಮನಸಿನಲ್ಲಿ ಎಷ್ಟು ಪೂಜ್ಯಭಾವವಿತ್ತೆಂಬದು ಒಡೆದು ಕಾಣುತ್ತದೆ.

ಶಕೆ ೧೭೩೦ ರಲ್ಲಿ ಮಹಾರಾಜರ ಕೈಯಿಂದ ಮತ್ತೊಂದು ದೊಡ್ಡ ಕಾರ್ಯವಾಯಿತು. ಚಿದಂಬರನ ರಥೋತ್ಸವಕ್ಕೆ ಬೇಕಾಗುವ ಹೊಸ ರಥವನ್ನು ಇನ್ನೂ ವರೆಗೆ ಮಾಡಿಸುವದಾಗಿದ್ದಿಲ್ಲ. ಈ ವರ್ಷ ಅದನ್ನು ಮಾಡಿಸುವ ಯೋಗವು ಅನಾಯಾಸವಾಗಿ ಬಂತು. ಈ ಪೂರ್ವದಲ್ಲಿಯೇ

ಮಹಾರಾಜರ ಪರಮಭಕ್ತರಲ್ಲೊಬ್ಬರಾದ ಸಂಪಗಾಂವಿಯ ಶ್ರೀ ರಂಗೋ ರಾಮಚಂದ್ರ ಕುಲಕರ್ಣಿಯೆಂಬವರು ಮಹಾರಾಜರ ದರುಶನಕ್ಕೆ ಬಂದಾಗ ಕೋರ್ಟಿನಲ್ಲಿ ನಡೆದ ತಮ್ಮ ಸೋದರಳಿಯನ ವಾಜ್ಯದ ಬಗ್ಗೆ ಮಹಾರಾಜರಿಗೆ ಬಿನ್ನವಿಸಿಕೊಂಡಿದ್ದರು. ಆಗ ಮಹಾರಾಜರು ವಿನೋದದಿಂದ ''ತಮ್ಮಾ, ಚಿದಂಬರನು ಮೊದಲು ತಕ್ಕೊಳ್ಳದೆ ಏನೂ ಕೊಡುವದಿಲ್ಲ. ವ್ಯಾಜ್ಯದ ನಿರ್ಣಯವು ನಿನ್ನ ಅಳಿಯನಂತಾದರೆ ಚಿದಂಬರನಿಗೆ ಏನು ಕೊಡುವಿ, ಹೇಳು. ಅಂದರೆ ಆ ತಂಟೆಯ ಯಶಾಪಯಶಗಳ ಉತ್ತರವು ನಿನಗೆ ದೊರೆಯುವದು'' ಎಂದು ಹೇಳಿದರು. ರಂಗರಾಯರು— ''ದೇವರೂ, ವ್ಯಾಜ್ಯವು ನಮ್ಮಂತೆ ನಿರ್ಣೀತವಾದರೆ ವಾಜ್ಯದಲ್ಲಿರುವ ಆಸ್ತಿಯ ಒಂದು ವರ್ಷದ ಉತ್ಪನ್ನವನ್ನು ಶ್ರೀಗಳ ಚರಣಕ್ಕೆ ಅರ್ಪಿಸುವೆನು'' ಎಂದು ಹೇಳಿಬಿಟ್ಟರು ಇಷ್ಟು ಮಾತುಗಳಾಗುವದರೊಳಗೆ ಯಾರೋ ಒಬ್ಬರು ಮಹಾರಾಜರಿದುರಿಗೆ ಎರಡು ತಂಬಿಗೆ ಹಾಲನ್ನು ತಂದಿಟ್ಟರು. ಇದನ್ನು ನೋಡಿ ಮಹಾರಾಜರು— ''ತಮ್ಮಾ, ಅಮೃತವು ಮುಂದೆ ಬಂದದ್ದರಿಂದ ನಿನ್ನ ಕೆಲಸದಲ್ಲಿ ನಿಶ್ಚಯವಾಗಿಯೂ ಯಶಸ್ಸು ಸಿಕ್ಕುವದು ಚಿಂತಿಸಬೇಡ'' ಎಂದು ಹೇಳಿದರು. ಮುಂದೆ ತುಸು ದಿವಸಗಳಲ್ಲಿಯೇ ಶ್ರೀ ಸ್ವಾಮೀ ಮಹಾರಾಜರ ಆಶೀರ್ವಾದದಂತೆ ರಂಗರಾಯರ ಕೆಲಸವು ರಂಗರಾಯರಂತೆ ಆಯಿತು ಆ ಕಾಲಕ್ಕೆ ಮಹಾರಾಜರು ಅಷ್ಟಗಿ ಗ್ರಾಮದಲ್ಲಿದ್ದು ಕಾಶೀ ಯಾತ್ರೆಗೆ ಹೊರಟು ನಿಂತಿದ್ದರು. ರಂಗರಾಯರು ಒಳ್ಳೇ ಸಂತೋಷದಿಂದ ಅಲ್ಲಿಗೆ ಬಂದು ವಾಜ್ಯದ ಒಂದು ವರುಷದ ಉತ್ಪನ್ನದಷ್ಟು ಹಣವನ್ನು, ಅಂದರೆ ಐದುನೂರು ರೂಪಾಯಿಗಳನ್ನೂ ಪೇಡೆಯ ಎರಡು ತಾಟುಗಳನ್ನೂ ಮಹಾರಾಜರ ಮುಂದಿಟ್ಟು ಸಾಷ್ಟಾಂಗ ನಮಸ್ಕಾರ ಮಾಡಿ ಎಲ್ಲ ಸಂಗತಿಯನ್ನು ತಿಳಿಸಿದರು. ಮಹಾರಾಜರು ರಂಗರಾಯರ ಭಕ್ತಿಗೆ ಮೆಚ್ಚಿದರು. ಮತ್ತು ''ತಮ್ಮಾ, ನಿನ್ನ ಸತ್ಯತೆಯನ್ನು ಕಂಡು ಸಂತೋಷವಾಯಿತು. 'ಹೊಳೆ ದಾಟಿದ ಮೇಲೆ ಅಂಬಿಗನ ಮಿಂಡ'ನೆಂಬ ಗಾದೆಯಂತೆ, ಸಕಾಮ ಭಕ್ತರು ತಮ್ಮ ಕೆಲಸವಾದ ಮೇಲೆ ದೇವರನ್ನು ಮರೆತು ಬಿಡುತ್ತಾರೆ. ನೀನು ಇಷ್ಟು ಬೇಗ ಹೀಗೆ ಮಾಡುವಿಯೆಂದೆನಿಸಿರಲಿಲ್ಲ. ಒಳ್ಳೆಯದು. ನಿನ್ನ ನಡತೆಯಿಂದ ನಾವು ಸಂತುಷ್ಟರಾದೆವು. ಆದರೆ ನಾವೀಗ ಕಾಶೀಯಾತ್ರೆಗೆ

ಹೊರಟು ನಿಂತಿದ್ದೇವೆ ನಾವೀಗ ಹಣವನ್ನು ತೆಗೆದುಕೊಂಡು ಏನು ಮಾಡ-ಬೇಕು ? ಹೇಗೂ ಚಿದಂಬರೇಶ್ವರನ ರಥವು ತೀರ ಮುರಕಲಿಗೆ ಬಂದಿದೆ. ಹೊಸ ರಥವನ್ನು ಅವಶ್ಯವಾಗಿ ಮಾಡಿಸಬೇಕಾಗಿದೆ. ಈ ಹಣವನ್ನು ಖರ್ಚು ಮಾಡಿ ಹೊಸ ತೇರನ್ನು ಕಟ್ಟಿಸಿಬಿಡು, ಅಂದರಾಯಿತು. ಈ ಕೆಲಸದಲ್ಲಿ ಓವ್ಹರಸಿಅರನಾದ ಕಾಗತಿಯ ನಾರಾಯಣನು* ನಿನಗೆ ಸಹಾಯಕನಾಗು-ವನು'' ಎಂದು ಅಪ್ಪಣೆ ಕೊಡಿಸಿದನು. ರಂಗರಾಯರು ಕೈಜೋಡಿಸಿ ವಿನಯ-ದಿಂದ ಉತ್ತರಕೊಟ್ಟರು: — ''ಸ್ವಾಮಿನ್, ತಮ್ಮ ಆಜ್ಞೆಯು ನನಗೆ ಶಿರಸಾ ಮಾನ್ಯವು. ರಥದ ಕೆಲಸವು ಬಹಳ ಮಹತ್ತ್ವದ್ದು. ಅದು ನೂರಾರು ವರುಷಗಳ ವರೆಗೆ ಬಾಳಬೇಕೆಂದು ನನ್ನ ಇಚ್ಛೆ. ಆದುದರಿಂದ ತಾವು ಕಾಶಿಯಿಂದ ತಿರುಗಿ ಬಂದ ಮೇಲೆ ತಮ್ಮ ಮೇಲ್ವಿಚಾರಣೆಯಲ್ಲಿಯೇ ಆ ಕೆಲಸವಾಗಬೇಕೆಂದು ಪ್ರಾರ್ಥಿಸುತ್ತೇನೆ. ಈ ಹಣವನ್ನೀಗ ದಯವಿಟ್ಟು ಸ್ವೀಕರಿಸಬೇಕು.'' ರಂಗರಾಯರ ಇಂಗಿತವನ್ನರಿತ ಮಹಾರಾಜರು ಇದಕ್ಕೆ ಸಮ್ಮತಿಸಿದರು. ರಂಗರಾಯರು ಮನೆಯಿಂದ ಹೊರಡುವಾಗ ಸರಿಯಾಗಿ ಐದುನೂರೇ ರೂಪಾಯಿಗಳನ್ನು ಎಣಿಸಿ ಗಂಟುಕಟ್ಟಿಕೊಂಡು ಬಂದಿದ್ದರು ಮಹಾರಾಜರ ಮುಂದೆ ಆ ಗಂಟನ್ನು ಬಿಚ್ಚಿ ಎಣಿಸಿದಾಗ ಅವು ಐದುನೂರಾ ಎರಡು ರೂಪಾಯಿಗಳಾದವು ! ರಂಗರಾಯರು ಆಶ್ಚರ್ಯಕ್ಕೊಳಗಾಗಿ ಮತ್ತೆ ಮತ್ತೆ ಎಣಿಸಿದರು. ಆದರೂ ಎರಡು ರೂಪಾಯಿ ಹೆಚ್ಚೇ ! ರಂಗ-ರಾಯರು ಗುರುಗಳ ಮಹಿಮೆಯನ್ನು ಕಂಡು ಬೆರಗಾದರು. ಮಹಾರಾಜರು ಮುಗುಳುನಗೆ ನಗುತ್ತ:— ''ರಂಗಣ್ಣಾ, ನಿನ್ನ ಭಕ್ತಿಗೆ ಮೆಚ್ಚಿ ಚಿದಂಬರನು ಈ ಎರಡು ರೂಪಾಯಿಗಳನ್ನು ಪ್ರಸಾದವೆಂದು ಕೊಡ ಮಾಡಿದ್ದಾನೆ. ಸ್ವೀಕರಿಸ ಬೇಕು'' ಎಂದು ಹೇಳಿದರು. ರಂಗರಾಯರು ಭಕ್ತಿ ಪ್ರೇಮಾದರಗಳಿಂದ ಅವುಗಳನ್ನು ಸ್ವೀಕರಿಸುವಾಗ ಅವರ ಗಂಟಲ ಸಿರವು ಉಬ್ಬಿಬಂತು. ಅವರು ಗುರುಗಳ ಚರಣಾರವಿಂದಗಳಿಗೆ ಮತ್ತೆ ಮತ್ತೆ ನಮಸ್ಕಾರ ಮಾಡಿದರು

---

* ಇವರು ಮಹಾರಾಜರ ಪರಮಭಕ್ತರು. ಇವರೀಗ ರಾವಬಹಾದ್ದೂರ ಆಗಿರುತ್ತಾರೆ. ಇವರ ಚರಿತ್ರೆಯು ಉದ್ಬೋಧಕವಾಗಿದ್ದು, ಇದೇ ಗ್ರಂಥದಲ್ಲಿ ಬೇರೆ ಕಡೆಗೆ ಸಾರಾಂತ ರೂಪದಿಂದ ಉಕ್ತವಾಗಿರುತ್ತದೆ.

ಪ್ರಸಾದದ ಆ ಎರಡೂ ರೂಪಾಯಿಗಳನ್ನು ಇಂದಿಗೂ ಅವರು ದೇವರಲ್ಲಿಟ್ಟು ಪೂಜಿಸುತ್ತಾರೆ.

ಆದರೆ ಇಷ್ಟರಿಂದಲೇ ರಥದ ಕೆಲಸವು ಪೂರ್ಣವಾಗುವಂತಿರಲಿಲ್ಲ. ಅದಕ್ಕಾಗಿ ಚಿದಂಬರನು ಈ ಕೆಲಸಕ್ಕೆ ಇನ್ನೂ ಒಬ್ಬರನ್ನು ಯೋಜಿಸಿದನು. ಗುರ್ಲಹೊಸೂರಲ್ಲಿ ಬಸಪ್ಪ ಯಾದವಾಡ ಎಂಬೊಬ್ಬ ಗೃಹಸ್ಥರಿದ್ದರು. ಬಹುದಿನಗಳಾಗಿದ್ದರೂ ಅವರಿಗೆ ಗಂಡು ಮಕ್ಕಳಾಗಿದ್ದಿಲ್ಲ. ಮಹಾರಾಜರ ಅದ್ಭುತವಾದ ಲೀಲೆಗಳನ್ನು ಕೇಳಿ ಅವರಲ್ಲಿಯೂ ಆಶಾಂಕುರವು ಹುಟ್ಟಿತು. ಅವರು ಈ ಬಗ್ಗೆ ಮಹಾರಾಜರ ಭಕ್ತರಲ್ಲೊಬ್ಬರಾದ ಬೆಹರೆ ಶಂಕರರಾಯರಿಗೆ ಗಂಟುಬಿದ್ದರು. ಶಂಕರರಾಯರು ಬಸಪ್ಪನನ್ನು ಕರಕೊಂಡು ಬಂದು ಮಹಾರಾಜರ ಕಾಲುಗಳ ಮೇಲೆ ಹಾಕಿ, ಅವನಿಗೆ ಗಂಡು ಮಗನಾಗುವಂತೆ ಅನುಗ್ರಹಿಸಬೇಕೆಂದು ಬೇಡಿಕೊಂಡರು. ಅದಕ್ಕೆ ಕರುಣಾಳುಗಳಾದ ಮಹಾರಾಜರು ಹೃದಯ ಕರಗಿದವರಾಗಿ ಹೇಳಿದರು:— "ನಿಜವಾದ ಭಜಕರಿಗೆ ಚಿದಂಬರನು ಕಾಮಧೇನುವಾಗಿದ್ದಾನೆ. ಅವನಲ್ಲಿ ನಿಷ್ಠೆಯಿಟ್ಟು ಯಾರು ಏನು ಬೇಡುವರೋ ಅದನ್ನವನು ಕೊಡುವನು. ಚಿದಂಬರನ ಮೇಲೆ ಬಸಪ್ಪನು ನಂಬಿಗೆಯಿಟ್ಟಿದ್ದಾದರೆ ಮುಂದಿನ ವರುಷದೊಳಗಾಗಿ ಅವನ ಇಚ್ಛೆಯು ಸಫಲವಾಗುವದು." ಅದರಂತೆ ಬಸಪ್ಪನಿಗೆ ವರ್ಷ ತುಂಬುವದರೊಳಗಾಗಿ ಪುತ್ರೋತ್ಸವವಾಯಿತು. ಅವನು ಆನಂದದಿಂದ ಎರಡುನೂರು ರೂಪಾಯಿಗಳನ್ನು ತಂದು ಮಹಾರಾಜರ ಮುಂದೆ ಇಟ್ಟು ಸ್ವೀಕರಿಸಬೇಕೆಂದು ಅರಿಕೆ ಮಾಡಿಕೊಂಡನು. ರಂಗರಾಯರು ಕೊಟ್ಟ ರೂಪಾಯಿಗಳಿಗೆ ಇವುಗಳನ್ನು ಕೂಡಿಸಿ ರಥದ ಕೆಲಸವು ಸುರುವಾಯಿತು. ಇದಲ್ಲದೆ ಇನ್ನೂ ಒಬ್ಬಿಬ್ಬರು ಈ ಕೆಲಸಕ್ಕೆ ಸಹಾಯ ಮಾಡಿದರು. ಹೀಗೆ ಶಕೆ ೧೮೩೦ ರಲ್ಲಿ ಸುರುವಾದ ರಥವು ಶಕೆ ೧೮೩೧ರಲ್ಲಿ ಪೂರ್ಣವಾಗಿ, ಆ ಸಲದ ಉತ್ಸವಕ್ಕೆ ಸಿದ್ಧವಾಯಿತು. ಶ್ರೀ ಶಿವಚಿದಂಬರೇಶ್ವರನ ರಥೋತ್ಸವವು ಇಂದಿಗೂ ಆದೇ ರಥದಲ್ಲಿಯೇ ಆಗುತ್ತದೆ.

ಶಕೆ ೧೮೩೧ ರಲ್ಲಿ ಮಹಾರಾಜರು ಉತ್ಸವಕ್ಕೆ ಇನ್ನೊಂದು ರೀತಿಯಿಂದ ಕಳೆ ತುಂಬಿದರು. ಆ ವರುಷ ಅವರು ಕಾಶಿಯ ಪಂಡಿತರಿಗೂ

ಪ್ರಯಾಗದ ಪಂಡಿತರಿಗೂ ಅಲ್ಲಲ್ಲಿಂದ ಭಾಗೀರಥಿಯ ಪವಿತ್ರೋದಕವನ್ನು ತಕ್ಕೊಂಡು ಉತ್ಸವಕ್ಕೆ ಬರಬೇಕೆಂದು ಆಮಂತ್ರಣ ಕಳಿಸಿದರು. ಅದಕ್ಕೆ ಅಲ್ಲಿಯ ಜನರಾದರೂ ಸಮ್ಮತಿಸಿದರು. ಪ್ರಯಾಗದಿಂದ ಶ್ರೀ ಮಥುರಾನಾಥ ಮಿಶ್ರರಯಾ ದೀನಪಾಠಕ ಇವರೂ, ಕಾಶಿಯಿಂದ ವೇ. ಮೂ. ಬಾಬೂ ದೀಕ್ಷಿತ ಜಡೇ ಅಂಬುನವರೂ ಭಾಗೀರಥಿಯೊಡನೆ ಚಿದಂಬರನ ರಥೋತ್ಸವದ ದಿನವೇ ಗುರ್ಲಹೊಸೂರಿಗೆ ಬಂದರು. ಕೇವಲ ಮಹಾರಾಜರ ಶಬ್ದಗಳಿಗೆ ಮರ್ಯಾದೆಕೊಟ್ಟು ಇಷ್ಟು ದೂರಿಂದ ಈ ಮಹನೀಯರು ಬಂದುದನ್ನು ನೋಡಿ ಎಲ್ಲರೂ ಸಂತೋಷಪಟ್ಟರು. ಬಂದವರಾದರೂ ಮಹಾರಾಜರನ್ನು ಅನೇಕ ರೀತಿಯಿಂದ ಕೊಂಡಾಡಿದರು. ''ನಿಮ್ಮ ದಕ್ಷಿಣದವರ ಭಾಗ್ಯವೆಂದೇ ಈ ಮಹಾಪುರುಷರು ನಿಮ್ಮಲ್ಲಿ ಹುಟ್ಟಿರುತ್ತಾರೆ. ಇವರು ಸಂನ್ಯಾಸವನ್ನು ತಕ್ಕೊಂಡಿದ್ದರೂ ಕೇವಲ ನಿಮ್ಮೆಲ್ಲರನ್ನು ಉದ್ಧಾರ ಮಾಡುವ ಲೋಕಸಂಗ್ರಹ ಬುದ್ಧಿಯಿಂದಲೇ ಇಲ್ಲಿ ನಿಂತು ಈ ಉತ್ಸವವನ್ನು ಕೈಕೊಂಡಿದ್ದಾರೆ. ಮಹಾರಾಜರು ಧನ್ಯರು. ಅವರ ಸಂಗತಿಯ ಲಾಭವನ್ನು ಪಡೆಯುತ್ತಿರುವ ನೀವೂ ಧನ್ಯರೇ. ಮಹಾರಾಜರು ನಮಗಾ ಚಿದಂಬರ ದರ್ಶನವನ್ನೂ ನಿಮಗೆ ಭಾಗೀರಥಿಯನ್ನೂ ಕೊಟ್ಟು ಇಬ್ಬರನ್ನೂ ಪವಿತ್ರಗೊಳಿಸಿದುದಕ್ಕಾಗಿ ನಾವೆಲ್ಲರೂ ಅವರಿಗೆ ಉಪಕೃತರಾಗಿದ್ದೇವೆ.'' ಯಥಾಕಾಲದಲ್ಲಿ ಶ್ರೀ ಶಿವಚಿದಂಬರನಿಗೆ ಅವರು ತಂದ ಭಾಗೀರಥಿಯಿಂದ ರುದ್ರಾಭಿಷೇಕವಾಗಿ ಎಲ್ಲರಿಗೂ ತೀರ್ಥ ಸಿಕ್ಕಿತು. ಇದರಿಂದ ಕೂಡಿದ ಭಕ್ತಜನರೆಲ್ಲರಿಗೂ ಪರಮಾಹ್ಲಾದವಾಯಿತೆಂದು ಬೇರೆ ಹೇಳಲಿಕ್ಕೆ ಬೇಡ.

ವರುಷ ವರುಷಕ್ಕೆ ಮಹಾರಾಜರು ಉತ್ಸವದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿ, ಅದು ಹೆಚ್ಚು ಲೋಕೋಪಯೋಗಿಯಾಗುವಂತೆ ಮಾಡಿದರು. ಬ್ರಾಹ್ಮಣರ ಮೂಲವಾದ ವೇದಾಭ್ಯಾಸವು ಹ್ರಾಸವಾಗುತ್ತ ನಡೆದಿರುವದನ್ನು ನೋಡಿ, ಅದಕ್ಕೆ ಉತ್ತೇಜನ ಕೊಡಬೇಕೆಂಬ ಉದ್ದೇಶದಿಂದ ಮಹಾರಾಜರು ಶಕೆ ೧೮೨೧ ರಿಂದ ವೇದಶಾಸ್ತ್ರ ಪರೀಕ್ಷೆಯನ್ನು ಪ್ರಾರಂಭಿಸಿದರು. ನಿಯಮಿತವಾದ ವೇದಾಭ್ಯಾಸದ ಪಾಠಗಳಲ್ಲಿ ಪರೀಕ್ಷೆ ಕೊಟ್ಟು ಉತ್ತೀರ್ಣರಾದವರಿಗೆ ಬಹುಮಾನಗಳನ್ನು ಕೊಟ್ಟು ಗೌರವಿಸುವ ಉಪಕ್ರಮವು ಇದೇ ವರುಷದಿಂದ ಸುರುವಾಯಿತು. ಶಕೆ ೧೮೨೭ ರಿಂದ

ಉತ್ಸವಕ್ಕೆ ಬಂದ ವಿದ್ವಜ್ಜನರಿಂದ ವೇದಾಂತದ ಮೇಲೆ ವ್ಯಾಖ್ಯಾನ ಕೊಡಿಸುವ ಕೆಲಸವು ಆರಂಭಿಸಲ್ಪಟ್ಟಿತು. ಶಕೆ ೧೮೨೪ ರಲ್ಲಿ ದೇ. ಭ. ಗಂಗಾಧರರಾವ ದೇಶಪಾಂಡೆಯವರೂ, ಶಕೆ ೧೮೮೯ ರಲ್ಲಿ ಲೋ. ತಿಲಕ ಮತ್ತು ಪಠಾಂಜಪೆಯವರೂ ಚಿದಂಬರೇಶ್ವರನ ಉತ್ಸವದಲ್ಲಿ ಭಾಷಣ ಮಾಡಿದರು ಆದರೆ ಆ ವಿಷಯವು ಬೇರೊಂದು ಪ್ರಕರಣದಲ್ಲಿ ಬರಲಿರುವದರಿಂದ ಅದನ್ನಿಲ್ಲಿ ಹೆಚ್ಚಾಗಿ ವಿವರಿಸುವ ಕಾರಣವಿಲ್ಲ. ಅದರಂತೆಯೇ ಚಿದಂಬರನ ಉತ್ಸವದಲ್ಲಿ ಮಹಾರಾಜರ ಆಪ್ಪಣೆಯಿಂದ ವೇದ ಶಾಸ್ತ್ರೋತ್ತೇಜಕವಾದ ಕಾತ್ಯಾಯನೀ ಪರಿಷತ್ತು ಎರಡು ಸಲ ಶಕೆ ೧೮೮೯ ಮತ್ತು ೧೮೩೧) ಗುರ್ಲಹೊಸೂರಲ್ಲಿ ನಡೆದು ಯಶಸ್ವಿಯಾಗಿ ಕೆಲಸ ಮಾಡಿತು. ಅದರ ವಿಷಯವಾದರೂ ಬೇರೆ ಪ್ರಕರಣದಲ್ಲಿ ಬರಲಿದೆ. ಅದರಲ್ಲಿ ಸ್ವತಃ ಸ್ವಾಮಿ ಮಹಾರಾಜರು ಮಾಡಿದ ಭಾಷಣವು ಅತ್ಯಂತ ಮನನೀಯವಾಗಿದೆ. ವಾಚಕರಿಗೆ ಅದು ಮುಂದಿನ ಪ್ರಕರಣಗಳಲ್ಲಿ ಓದಲಿಕ್ಕೆ ಸಿಕ್ಕೇ ಸಿಗುವದರಿಂದ, ಈಗಲೇ ಅವರು ಆ ಬಗ್ಗೆ ಅಧೀರರಾಗಬಾರದೆಂದು ಬೇಡಿಕೊಳ್ಳುತ್ತೇವೆ

ಮಹಾರಾಜರ ಉತ್ಸವದ ಕೀರ್ತಿಯು ಎಲ್ಲ ಕಡೆಗೂ ಹಬ್ಬಿತು. ಬರಬರುತ್ತ ದೊಡ್ಡ ದೊಡ್ಡ ಜನರೂ ಇವರ ಉತ್ಸವಕ್ಕೆ ತಲೆಬಾಗಿದರು. ಶಕೆ ೧೮೨೧ ರಲ್ಲಿ ಶಿರಸಂಗಿಯ ಶ್ರೀಮಂತ ಸರದೇಸಾಯಿಯವರು ಉತ್ಸವದ ಕಾಲಕ್ಕೆ ಚಿದಂಬರ ಸೇವೆಗೆಂದು ತಮ್ಮ ಸರಂಜಾಮವನ್ನು ಕಳಿಸಿಕೊಟ್ಟರು. ಅವರ ಸರಂಜಾಮಿನಿಂದ ಆ ವರುಷದ ವಾಹನೋತ್ಸವವು ಬಲು ಶೋಭಾಯಮಾನವಾಯಿತೆಂದು ಬೇರೆ ಹೇಳಲಿಕ್ಕೆ ಬೇಡ. ಶಕೆ ೧೮೨೬ ರ ಉತ್ಸವಕ್ಕೆ ತೊರಗಲ್ಲ ಸಂಸ್ಥಾನಿಕರು ತಮ್ಮ ಸಿಂಗರಿಸಿದ ಕುದುರೆಯನ್ನು ಕಳಿಸಿಕೊಟ್ಟಿದ್ದರು. ಶಕೆ ೧೮೩೨ ರಲ್ಲಿ ಶ್ರೀಮಂತರಾದ ಎಡೀಹಳ್ಳಿ ದೇಸಾಯರು ಚಿದಂಬರೋತ್ಸವಕ್ಕೆಂದು ಒಂದು ಕುದುರೆಯನ್ನೇ ಅರ್ಪಿಸಿ ಬಿಟ್ಟರು. ಇದರ ಹೊರ್ತಾಗಿ ರಾಮದುರ್ಗ, ಜವ್ಹಾರ ಮೊದಲಾದ ಸಂಸ್ಥಾನಿಕರೂ ಚಿದಂಬರನ ಉತ್ಸವಕ್ಕೆಂದು ಹಣಕಳಿಸಿಯೂ ಬೇರೆ ರೀತಿಯಿಂದಲೂ ಸಹಾಯ ಮಾಡಿದರು. ಈ ಸಂಸ್ಥಾನಿಕರಲ್ಲಿ ಅನೇಕರು ಬ್ರಾಹ್ಮಣರಾಗಿದ್ದಿಲ್ಲವೆಂಬದನ್ನು ನೆನಪಿನಲ್ಲಿಡುವಂತಿದ.

ಮಹಾರಾಜರಿಗೆ ಈ ಉತ್ಸವಗಳನ್ನು ಮಾಡುವ ಕಾಲಕ್ಕೆ ಅನೇಕ ತರದ ಅಡಚಣೆಗಳು ಬರದೆ ಹೋಗಲಿಲ್ಲ. ಅವರ್ಷಣದಿಂದುಂಟಾದ ಬರಗಾಲ ಮತ್ತು ಪ್ಲೇಗ ಮೊದಲಾದ ರೋಗಗಳೂ ಮಹಾರಾಜರು ನಡಿಸಿದ ಉತ್ಸವಕ್ಕೆ ಒಳ್ಳೇ ವಿಘ್ನಕಾರಿಗಳಾದವೆಂದು ಹೇಳ ಬಹುದು. ಇ. ಸ. ೧೮೯೪ (ಶಕ ೧೮೩೦) ಗ್ ಸುಮಾರಕ್ಕೆ ನಮ್ಮ ದೇಶದಲ್ಲಿ ಹೊಸದಾಗಿ ಪ್ರಾದುರ್ಭವಿಸಿದ ಪ್ಲೇಗಿನ ಉಪದ್ರವ ವಂತೂ ೪—೫ ವರುಷಗಳ ವರೆಗೆ ಜನರನ್ನು ಕಕ್ಕಾವಿಕ್ಕಿಯಾಗಿ ಮಾಡಿಬಿಟ್ಟಿತು. ಆದರೂ ಮಹಾರಾಜರು ಯಾವುದಕ್ಕೂ ಹೆದರದೆ ಉತ್ಸವ-ವನ್ನು ಸರಿಯಾಗಿಯೇ ಸಾಗಿಸಿಕೊಂಡು ಹೋದರು. ಮಹಾರಾಜರ ಕಾಲಕ್ಕೆ ಉತ್ಸವವು ಯಾವುದೇ ವರುಷ ಯಾವುದೇ ರೀತಿಯಿಂದ ಕಳೆಗುಂದ-ಲಿಲ್ಲ. ಈ ಸಂದರ್ಭದಲ್ಲಿ ವಿಶೇಷವಾಗಿ ಶಕೆ ೧೮೩೩ನೆಯ ವರುಷವು ಸ್ಮರಣೆಯಲ್ಲಿಡುವಂತಿದೆ ಆ ವರುಷದ ಮಹಾರಾಜರ ಚಾತುರ್ಮಾಸ್ಯವು ಕೆಂಗೇರಿಯಲ್ಲಾಯಿತು ಅಲ್ಲಿ ಇರುವಾಗಲೇ ಪಿತ್ತಾತಿಶಯದಿಂದ ಮಹಾ-ರಾಜರ ಪ್ರಕೃತಿಯು ತೀರ ಕೆಟ್ಟುಹೋಗಿ ಒಂದು ತಿಂಗಳ ವರೆಗೆ ಬಹಳ ತೊಂದರೆಯಾಯಿತು ಈ ಕಾಲದಲ್ಲಿ ಮಹಾರಾಜರ ಶರೀರಕ್ಕುಂಟಾದ ಅಶಕ್ತತೆಯು ಕೊನೆಯ ವರೆಗೂ ಅವರನ್ನು ಬಾಧಿಸಿತು. ಅದರಿಂದ ಅವರು ತಿರುಗಿ ಎಂದೂ ಪೂರ್ಣವಾಗಿ ಗುಣವನ್ನು ಹೊಂದಲೇ ಇಲ್ಲ. ಮಹಾ-ರಾಜರು ಹಾಸಿಗೆ ಹಿಡಿದದ್ದರಿಂದ ಆ ವರುಷದ ಗುರ್ಲಹೊಸೂರ ಉತ್ಸವವು ಎಲ್ಲಿ ನಿಂತೇ ಹೋಗುವದೋ ಎಂಬ ವಿವಂಚನೆಯು ಎಲ್ಲರಿಗೂ ಉಂಟಾ-ಯಿತು. ಸಂಚಾರಕ್ಕೆ ಹೋದ ಹೊರತು ಉತ್ಸವದ ವೆಚ್ಚವು ನಡೆಯು-ವಂತಿದ್ದಿಲ್ಲ. ಅದರಲ್ಲಿಯೂ ಪ್ಲೇಗ ಮತ್ತು ದುರ್ಭಿಕ್ಷಗಳ ಮೂಲಕ ಪ್ರತಿ-ಯೊಂದು ಕುಟುಂಬದಲ್ಲಿ ಹಾಹಾಕಾರವೆದ್ದಿತ್ತು. ಇಂತಹ ಪರಿಸ್ಥಿತಿಯಲ್ಲಿ ಉತ್ಸವಕ್ಕೆ ಬೇಕಾಗುವ ಹಣವು ಹೇಗೆ ಕೂಡೀತೆಂಬ ಚಿಂತೆಯು ಎಲ್ಲ-ರಲ್ಲಿಯೂ ಕಾಣಿಸಿಕೊಂಡಿತು. ಮೇಲಾಗಿ ಸಂಚಾರ ಮಾಡುವವರೇ ಹಾಸಿಗೆ ಹಿಡಿದಿದ್ದರು. ಆದುದರಿಂದ ಉತ್ಸವದ ಹಿತಚಿಂತಕರಿಗೆಲ್ಲ ಒಳ್ಳೇ ಕಠಿಣ ಪ್ರಸಂಗ ಬಂದು ಬಿಟ್ಟಿತು. ಆದರೆ ಚಿದಂಬರನ ಲೀಲೆಯು ಅಗಾಧವಾದುದು. ಎಂತೆಯೇ ಅವನ ಭಕ್ತರಾದ ಶ್ರೀ ರಾಜಾರಾಮರು—

ಅಗಾಧ ಹೀ ಸತ್ತಾ ಅಸೇ ಚಿದಂಬರೀ

ಎಂದು ಯಥಾರ್ಥವಾಗಿ ಹಾಡಿದ್ದಾರೆ. ಉತ್ಸವಕ್ಕೆ ಇನ್ನು ಹದಿನೈದು ದಿನಗಳು ಮಾತ್ರ ಉಳಿದಿರುವಾಗ ಮಹಾರಾಜರ ಪ್ರಕೃತಿಯು ತುಸು ಸುಧಾರಿಸಿತು. ಈ ವರುಷದ ಪರಿಸ್ಥಿತಿಯನ್ನರಿತ ಎಷ್ಟೋ ಜನ ಭಕ್ತರು ಸ್ವಯಂ ಪ್ರೇರಣೆಯಿಂದ ಪ್ರತಿವರುಷಕ್ಕಿಂತ ಹೆಚ್ಚಾಗಿ ಹಣ ಕೊಟ್ಟು ಸಹಾಯ ಮಾಡಿದರು. ದೂರಿನವರು ತಾವಾಗಿಯೇ ಮನಿಯಾರ್ಡರ ಮಾಡಿ ರೂಪಾಯಿ ಕಳಿಸಿಕೊಟ್ಟರು. ಹೀಗಾಗಿ ೮—೧೦ ದಿನಗಳಲ್ಲಿಯೇ ಎಲ್ಲರ ಪ್ರೋತ್ಸಾಹದಿಂದ ಉತ್ಸವದ ಎಲ್ಲ ಸಿದ್ಧತೆಯೂ ಸರಿಯಾಗಿಯೇ ಆಯಿತು ಇಷ್ಟೇ ಅಲ್ಲ, ಆ ಸಲದ ಉತ್ಸವವು ಹಿಂದಿನ ಉತ್ಸವಗಳಿಗಿಂತಲೂ ಹೆಚ್ಚಾದ ವಿಜೃಂಭಣೆಯಿಂದಲೇ ಜರುಗಿತು. ಗಾಯನ, ವಾದನ, ಕೀರ್ತನ, ನರ್ತನ ಮೊದಲಾದ ಎಲ್ಲ ಕಾರ್ಯಕ್ರಮಗಳೂ ಎಂದಿನಂತೆ ಸರಸವಾಗಿಯೇ ಸಾಗಿದವು. ಬ್ರಾಹ್ಮಣ ಸಂತರ್ಪಣೆಯೂ ಕೂಡ ಯಥಾಸಾಂಗವಾಗಿ ದೊಡ್ಡ ಪ್ರಮಾಣದ ಮೇಲೆಯೇ ಆಯಿತು.

ಹೀಗೆ ಮಹಾರಾಜರಿಂದ ನಡಿಸಲ್ಪಟ್ಟ ಚಿದಂಬರೇಶ್ವರನ ಹದಿನೈದೂ ಉತ್ಸವಗಳು ಪಂಡಿತ ಪಾಮರರನ್ನೂ, ಶ್ರೀಮಂತ-ಬಡವರನ್ನೂ, ಗಂಡಸು ಹೆಂಗಸರನ್ನೂ ಮನರಂಜಿಸಿ, ಅವರಲ್ಲಿ ವೈದಿಕ ಧರ್ಮದ ಬಗ್ಗೆ ಅಭಿಮಾನ-ಆದರಗಳನ್ನೂ, ಚಿದಂಬರನ ಬಗ್ಗೆ ಪ್ರೇಮವನ್ನೂ ಹುಟ್ಟಿಸಿ, ಜನಜಾಗೃತಿಯನ್ನು ಮಾಡಿದವೆಂದು ಹೇಳಬಹುದು. ಒಟ್ಟಿನ ಮೇಲೆ ಮಹಾರಾಜರ ಮೇಲ್ವಿಚಾರಣೆಯಲ್ಲಿ ಲಕ್ಷಗಟ್ಟಲೆ ಬ್ರಾಹ್ಮಣರ ಭೋಜನವಾಯಿತೆಂದು ಎಡೆತಟ್ಟಿ ಹೇಳಬಹುದು. ಬ್ರಾಹ್ಮಣರಿಗೆ ಎಷ್ಟು ತರದಿಂದ ಉಣಿಸಿದರೂ ತಿನಿಸಿದರೂ ಮಹಾರಾಜರಿಗೆ ಸಮಾಧಾನವಾಗುತ್ತಿರಲಿಲ್ಲ. ಮಹಾರಾಜರು ಬ್ರಾಹ್ಮಣರ ಪಂಕ್ತಿಗಳಲ್ಲಿ ತಾವೇ ಸ್ವತಃ ಓಡಾಡಿ ಬಡಿಸುತ್ತಿದ್ದರು. ಒಳ್ಳೇ ಆಗ್ರಹ ಮಾಡಿ ಸ್ವಲ್ಪ ಸ್ವಲ್ಪ ಬಡಿಸುತ್ತ ಹೆಚ್ಚಾಗಿ ತಿನ್ನಿಸುತ್ತಿದ್ದರು. "ಹೆಚ್ಚಾದುದನ್ನು ಮೊದಲು ತಿಂದುಬಿಡಿರಿ. ಆ ಮೇಲೆ ಉಳಿದದ್ದಂತೂ ನಿಮಗೆ ಬೇಕೇ ಆದದ್ದಾಗಿರುವದರಿಂದ, ಅದನ್ನು ಚಲ್ಲುವ ಕಾರಣವೇ ಇಲ್ಲ" ಎಂದು ಮಹಾರಾಜರು ನಗುತ್ತ ಹೇಳುತ್ತಿದ್ದರು. ಒಂದೊಂದು ಸಲ ಎಲ್ಲರ ಊಟವಾದ ಮೇಲೆ ಊಟದ ಸ್ಪರ್ಧೆಯನ್ನೇರ್ಪಡಿಸಿ ಬ್ರಾಹ್ಮಣರನ್ನು

ಸಂತೃಪ್ತಗೊಳಿಸುತ್ತಿದ್ದರು. ಒಟ್ಟಿನ ಮೇಲೆ ಶ್ರೀ ಸಮರ್ಥ ಅಕ್ಕಲಕೋಟೇ ಸ್ವಾಮೀ ಮಹಾರಾಜರು ಮೊದಲೇ ಭವಿಷ್ಯ ನುಡಿದಂತೆ, ನಮ್ಮ ಚರಿತ್ರ-ನಾಯಕರ ಕಡೆಯಿಂದ ಲಕ್ಷಾವಧಿ ಬ್ರಾಹ್ಮಣರ ಭೋಜನವು ಉತ್ತಮ ರೀತಿಯಿಂದ ಕೊನೆಗಂಡಿತು. ಇಷ್ಟೇ ಅಲ್ಲ, ಉಳಿದ ಜಾತಿಯ ಜನರೂ ಸಹ ಬಹುಸಂಖ್ಯಾಕರಾಗಿ ಮಹಾರಾಜರ ಕೈಯಲ್ಲಿ ಸುಖವಾಗಿ ಉಂಡು ಸಂತುಷ್ಟರಾದರು.

ಆದರೆ ಇಷ್ಟೆಲ್ಲ ಜನರಿಗೆ ಮಹಾರಾಜರು ಸವಿಸವಿಯಾದ ಅನ್ನವನ್ನು ಉಣಿಸಿದರೂ, ತಾವು ಸ್ವತಃ ಮಾತ್ರ ಎಂದೂ ಅದನ್ನು ಮುಟ್ಟುತ್ತಿರಲಿಲ್ಲ. ಅವರು ಯಾವಾಗಲೂ ಮಾಧುಕರಿಯ ಮೇಲೆಯೇ ಜೀವಿಸುತ್ತಿದ್ದರು. ಉತ್ಸವ ನಡೆದಾಗ ಸಹ ಮಾಧುಕರಿಯೇ ಅವರಿಗೆ ಆಹಾರ. ಅದೂ ಸಹ ಉಳಿದವರೆಲ್ಲರ ಊಟ ಮುಗಿದ ಮೇಲೆ ನದಿಯ ಮೇಲೆ ಯಾವುದೋ ಒಂದು ಗಿಡದ ಕೆಳಗೆ ಕುಳಿತು ಒಂದೇ ಲಿಂಬೀಕಾಯಿಯಷ್ಟು ಅನ್ನವನ್ನು ಉಂಡು ಮಹಾರಾಜರು ತಮ್ಮ ಊಟದ ವಿಧಿಯನ್ನು ಮುಗಿಸುತ್ತಿದ್ದರು. ವಾಚಕರೇ ಈ ನೈರಾಶ್ಯ ವೃತ್ತಿಯನ್ನು ಹೇಗೆ ಕೊಂಡಾಡಬೇಕೆಂಬದನ್ನು ನೀವೇ ವಿಚಾರ ಮಾಡಿರಿ.

ಚಿದಂಬರ ದೇವಾಲಯದ ಜೀರ್ಣೋದ್ಧಾರ ಮತ್ತು ಉತ್ಸವಗಳ ನಿಮಿತ್ತವಾಗಿ ಮಹಾರಾಜರು ಸಾವಿರಾರು ರೂಪಾಯಿಗಳ ಆಯವ್ಯಯಕ್ಕೆ ಕಾರಣರಾದರು. ಒಟ್ಟಿಗೆ ಜೀರ್ಣೋದ್ಧಾರಕ್ಕೆ ೨೫—೩೦ ಸಾವಿರ ರೂಪಾಯಿಗಳೂ, ಉತ್ಸವಕ್ಕೆ ೪೦ ಸಾವಿರ ರೂಪಾಯಿಗಳೂ ಖರ್ಚಾಗಿರಬಹುದೆಂದು ಅಂದಾಜು ಮಾಡಬಹುದು. ಆದರೆ ಆ ಮಹಾಮಹಿಮರು ಎಂದಾದರೂ ಒಂದು ಕಾಸನ್ನಾಗಲಿ ಮುಟ್ಟಿದರೇ ? ಛೇ, ಎಂದೂ ಇಲ್ಲ. ಯತಿಗಳು ಹಣವನ್ನು ಮುಟ್ಟಬಾರದೆಂಬ ನಿಯಮವುಂಟು. ಅದನ್ನು ಮಹಾರಾಜರು ಕೊನೆಯ ವರೆಗೆ ಅಕ್ಷರಶಃ ಪಾಲಿಸಿದರು ಉತ್ಸವವು ಮುಗಿದೊಡನೆ ಮಹಾರಾಜರು ಲಂಗೋಟಿಯನ್ನು ಕೂಡ ಕಿತ್ತಿಹಾಕಿ ದಿಗಂಬರರಾಗುತ್ತಿದ್ದರು. ಎಂದರೆ ಯಾವುದರ ಸಂಬಂಧವೂ ತಮಗಿಲ್ಲೆಂದೂ ತಾವು ಎಲ್ಲದರಿಂದಲೂ ನಿರ್ಲಿಪ್ತರೆಂದೂ ಮಹಾರಾಜರು ಪ್ರತ್ಯಕ್ಷವಾಗಿ ಆಚರಿಸಿ ತೋರಿಸುತ್ತಿದ್ದರು.

ಮಹಾರಾಜರ ಈ ಉತ್ಕರ್ಷಾತಿಶಯವನ್ನು ನೋಡಲಾರದೆ ದೀಕ್ಷಿತ ವಂಶದವರಲ್ಲಿ ಒಬ್ಬಿಬ್ಬರಿಗೆ ಅಸೂಯಾಬುದ್ಧಿಯೂ ಒಮ್ಮೊಮ್ಮೆ ಹುಟ್ಟುತ್ತಿತ್ತು. ಆಗ ಯಾರಾದರೂ ದೀಕ್ಷಿತರು ಮಹಾರಾಜರಿಗೆ ಹಾಗೆ ನಿರ್ದಾಕ್ಷಿಣ್ಯವಾಗಿ ಬಿಚ್ಚು ಮನಸ್ಸಿನಿಂದ ಹೇಳಿಯೂ ಬಿಡುತ್ತಿದ್ದರು: — "ಚಿದಂಬರನ ಉತ್ಸವವು ನಮ್ಮದು. ಅದನ್ನು ನಾವೇ ಮಾಡಿಕೊಳ್ಳಲು ಸಮರ್ಥರಿದ್ದೇವೆ. ಅದಕ್ಕೆ ನಿಮ್ಮದೇನೂ ಸಂಬಂಧವಿಲ್ಲ. ನೀವು ಇಲ್ಲಿಂದ ತೊಲಗಿರಿ" ಮಹಾರಾಜರಿಗೆ ಈ ಮಾತುಗಳಿಂದ ಸಿಟ್ಟು ಬರುತ್ತಿತ್ತೆಂದು ಯಾರಾದರೂ ತಿಳಿದರೆ ಅದು ಸರ್ವಥಾ ತಪ್ಪು. ಹಾಗೆ ಮಾತಾಡುವವರ ಅಜ್ಞಾನದ ಬಗ್ಗೆ ಮಾತ್ರ ಮಹಾರಾಜರಲ್ಲಿ ಕರುಣೆ ಹುಟ್ಟುತ್ತಿತ್ತು. ಒಂದೊಂದು ಸಲ ಅವರ ಉಪಟಳಕ್ಕೆ ಮಹಾರಾಜರು ಕೂಡ ಬೇಸರಿಯುತ್ತಿದ್ದರು. ಒಮ್ಮೆ ಇಂತಹ ಒಂದು ಪ್ರಸಂಗದಲ್ಲಿ ಮಹಾರಾಜರು ಎಲ್ಲವನ್ನೂ ತೊರೆದು ಲಂಗೋಟಿಯನ್ನು ಕೂಡ ತೆಗೆದೊಗೆದು, ಗುರ್ಲಹೊಸೂರ ಊರನ್ನೇ ಬಿಟ್ಟು ಅಸುಂಡಿಗೆ ಹೋದರು ಊರ ಪ್ರಮುಖರಿಗೆ ನಿಜಸ್ಥಿತಿಯು ಗೊತ್ತಾಗಲು, ಅವರು ದೀಕ್ಷಿತರಿಗೆ ಸಿಟ್ಟುಮಾಡಿದರು. ಮತ್ತು ದೀಕ್ಷಿತರನ್ನು ಮಹಾರಾಜರ ಕಡೆಗೆ ಕರೆದುಕೊಂಡು ಹೋಗಿ, ತಪ್ಪನ್ನು ಕ್ಷಮಿಸಬೇಕೆಂದೂ ಮೊದಲಿನಂತೆ ಗುರ್ಲಹೊಸೂರಿಗೆ ತಿರುಗಿ ಬಂದು ತಮ್ಮೆಲ್ಲರನ್ನು ಕೃತಾರ್ಥರನ್ನಾಗಿ ಮಾಡಬೇಕೆಂದೂ ಬೇಡಿಕೊಂಡರು. ಮಹಾರಾಜರು ಅದಕ್ಕೆ ಸಮ್ಮತಿಸಿ, ತಿರುಗಿ ಬಂದು ಚಿದಂಬರ ಸೇವೆಯಲ್ಲಿ ನಿರತರಾದರು. ಸಾರಾಂಶ ವೇನೆಂದರೆ: — : ಬಂದ ಎಲ್ಲ ತೊಡರುಗಳನ್ನು ಸಮಾಧಾನದಿಂದಲೂ ಕೌಶಲ್ಯದಿಂದಲೂ ಎದುರಿಸುತ್ತ, ಮಹಾರಾಜರು ತಮ್ಮ ಜೀವನದ ಮುಖ್ಯೋದ್ದೇಶವಾದ ಚಿದಂಬರನ ಸೇವೆಯನ್ನು ಚನ್ನಾಗಿ ಮಾಡಿ, ಕೊನೆಗೆ ಚಿದಂಬರನಲ್ಲಿ ಐಕ್ಯವಾಗಿ, ತಾವೇ ಸ್ವತಃ ಚಿದಂಬರರೂಪವಾಗಿ ಬಿಟ್ಟರು. ಸ್ವಯತ್ನ ಮಾಡುವದರಿಂದ ನರನು ತಾನೇ ನಾರಾಯಣನಾಗಬಲ್ಲನೆಂಬದಕ್ಕೆ ಮಹಾರಾಜರ ಜೀವನ ಚರಿತ್ರೆಯೇ ಸಾಕ್ಷಿ.



ಶ್ರೀಮದ್ವಾಸುದೇವಾನಂದ ಸರಸ್ವತೀ (ಟೇಂಬೆ)
ಸ್ವಾಮಿ ಮಹಾರಾಜರು

ಅವಿರ್ಭಾವ ಶಕೆ ೧೭೭೬ — ತಿರೋಧಾವ ಶಕೆ ೧೮೫೬
ಶ್ರಾವಣ ಶುದ್ಧ ೫ — ಜೇಷ್ಠ ಬಹುಳ ೩೦

೧೨ ಮಹಾರಾಜರು ಮತ್ತು ಟೇಂಬೇ ಸ್ವಾಮಿಗಳವರು

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ವಾಸುದೇವಾನಂದ ಸರಸ್ವತೀ ಸ್ವಾಮಿಗಳವರ ಹೆಸರನ್ನು ಕೇಳದ ಭಾವಿಕರು ಅಪರೂಪ. ಅವರು ಸಾಮಾನ್ಯರಿಗೆ ಗೊತ್ತಿದ್ದುದು 'ಶ್ರೀ ಟೇಂಬೇಸ್ವಾಮೀ ಮಹಾರಾಜ' ಎಂಬ ಹೆಸರಿನಿಂದಲೇ. ಅವರ ಶಾಸ್ತ್ರಶುದ್ಧವಾದ ಆಚರಣೆ, ನಿರ್ಮಲವಾದ ವೈರಾಗ್ಯ, ಪವಿತ್ರವಾದ ಜೀವನ, ಕಠೋರವಾದ ತಪಶ್ಚರ್ಯ, ಮತ್ತು ಲೋಕಕಲ್ಯಾಣಕರವಾದ ಕಾರುಣ್ಯಗಳು ಪ್ರಸಿದ್ಧವಾಗಿವೆ. ಅವರು ಮಂತ್ರ ತಂತ್ರಗಳಲ್ಲಿ ನಿಷ್ಣಾತರಿದ್ದಂತೆ, ವೈದ್ಯ, ಜೋತಿಷ್ಯ, ವೇದ ಮೊದಲಾದವುಗಳಲ್ಲಿಯೂ ಪೂರ್ಣತೆಯನ್ನು ಪಡೆದಿದ್ದರು. ಅವರು ಹಟಯೋಗ, ರಾಜಯೋಗ ಮೊದಲಾದವುಗಳನ್ನು ಅಭ್ಯಾಸಮಾಡಿ ಸಿದ್ಧಿಪಡೆದಂತೆ, ವೇದಾಂತದ ಶ್ರವಣ-ಮನನ-ನಿಧಿಧ್ಯಾಸಗಳಿಂದಲೂ ಸಾಕ್ಷಾತ್ಕಾರ ಹೊಂದಿದ್ದರು. ಅವರ ಸಗುಣ-ನಿರ್ಗುಣ ಬ್ರಹ್ಮಾನುಭವವು ಪರಾಕಾಷ್ಠೆಯನ್ನು ಮುಟ್ಟಿತ್ತು. ಭಗವಾನ್ ಶ್ರೀ ದತ್ತಾತ್ರೇಯನು ಅವರ ಮೇಲೆ ಪೂರ್ಣಕೃಪೆ ಮಾಡಿದ್ದನಲ್ಲದೆ, ಅವರೊಡನೆ ಸಾಕಾರರೂಪದಿಂದ ಕ್ರೀಡಿಸುತ್ತಿದ್ದನು.

ಭಗವತಿಯಾದ ನರ್ಮದೆಯು ಕೂಡ ಅವರಿಗೆ ಸಾಕ್ಷಾತ್ ದರ್ಶನ ಕೊಟ್ಟಿದ್ದಳು. ಅವರು ನರ್ಮದೆಯ ದಡದಲ್ಲಿರುವಾಗ ಒಂದು ದಿನ ಬೆಳಗು ಮುಂಜಾನೆ ಇನ್ನೂ ಕತ್ತಲಿರುವಾಗ ಎದ್ದು ಸ್ನಾನಕ್ಕೆಂದು ನದಿಗೆ ಹೊರಟರು. ದಾರಿಯು ಬಹಳ ಇಕ್ಕಟ್ಟಿನದಾಗಿರುವದರಿಂದ, ಅವರು ಅಕಸ್ಮಾತ್ತಾಗಿ ಕಾಲುತಪ್ಪಿ ಬಿದ್ದರು. ಅದರಿಂದ ಕಾಲಿಗೆ ವಿಪರೀತ ನೋವಾಗಿ ಅವರಿಗೆ ಅಡ್ಡಾಡಲಿಕ್ಕೆ ಸಹ ಬರದಂತಾಯಿತು. ಆದರೂ ಕರ್ಮನಿಷ್ಠರಾದ ಅವರು ಸರಿಯುತ್ತ ಸರಿಯುತ್ತಲೇ ನರ್ಮದೆಗೆ ಹೋಗಿ ಸ್ನಾನ ಮಾಡಹತ್ತಿದರು. ಆದರೆ ನೋವು ತೀರ ಹೆಚ್ಚಾಗಿ ಇದೂ ಸಹ ಬಂದಾಗುವ

ಪ್ರಸಂಗ ಬಂತು. ಆಗ ಅವರ ಈ ತೊಳಲಾಟವನ್ನು ಸಹಿಸುವದು ಅಶಕ್ಯ-ವಾಗಿ, ಸಾಕ್ಷಾತ್ ನರ್ಮದಾ ದೇವಿಯೇ ಸ್ತ್ರೀ ರೂಪದಿಂದ ಅವರ ಬಳಿಗೆ ಬಂದಳು. ಮತ್ತು ಪ್ರೇಮದಿಂದ ಅವರನ್ನು ತನ್ನ ತೊಡೆಯ ಮೇಲೆ ಎತ್ತಿಕೊಂಡು, "ಮಗೂ, ನಿನಗೆ ಇಲ್ಲಿ ಬಹಳ ತೊಂದರೆಯಾಗಿದೆ. ನಾನು ಮಂತ್ರ ಹಾಕಿ ನಿನ್ನ ಈಗಿನ ನೋವನ್ನು ದೂರಮಾಡುವದಲ್ಲದೆ, ಇನ್ನೊಮ್ಮೆ ಹೀಗೆ ನೋವಾಗದಂತೆ ಮಾಡುವೆನು, ಕಂಡೆಯಾ" ಎಂದು ಹೇಳಿ ಅವ-ರನ್ನು ನೆಟ್ಟಗೆ ಮಾಡಿದಳಂತೆ. ಮಹಾರಾಜರು ಸಾಕ್ಷಾತ್ತಾಗಿಯೇ ಈ ಮಾತನ್ನು ಹೇಳುತ್ತಿದ್ದರೆಂದ ಮೇಲೆ ಇದರ ಮೇಲೆ ಯಾರೂ ಅವಿಶ್ವಾಸ-ಪಿಡುವ ಕಾರಣವಿಲ್ಲ. ಸಾರಾಂಶವೇನೆಂದರೆ— ಶ್ರೀ ಟೇಂಬೇ ಸ್ವಾಮಿ-ಗಳೆಂದರೆ ಭಗವಂತನ ವಿಭೂತಿ ಪುರುಷರಲ್ಲೊಬ್ಬರೆಂದು ನಿಃಸಂದೇಹವಾಗಿ ಹೇಳಬಹುದು.

ಶ್ರೀ ಟೇಂಬೇ ಸ್ವಾಮಿಗಳವರು ಜನ್ಮತಕ್ಕೊಂಡದ್ದು ಶಾ. ಶ. ೧೭೭೬ ರಲ್ಲಿ. ಅವರ ಜನ್ಮದಿಂದ ಪಾವನವಾದುದು ಸಾವಂತವಾಡೀ ಸಂಸ್ಥಾನ-ದೊಳಗಿನ ಮಾಣಗಾಂವ ಎಂಬ ಊರು. ಅವರು ಹುಟ್ಟಿದ್ದು ಋಗ್ವೇದದ ಆಶ್ವಲಾಯನ ಶಾಖೆಗೆ ಸೇರಿದ ಕರ್ಹಾಡೇ ಬ್ರಾಹ್ಮಣ ಕುಟುಂಬದಲ್ಲಿ. ಚಿಕ್ಕಂದಿನಲ್ಲಿಯೇ ಷಡಂಗಸಹಿತವಾಗಿ ವೇದಾಭ್ಯಾಸವನ್ನು ಮಾಡಿ ದಶಗ್ರಂಥಿ ಬ್ರಾಹ್ಮಣರೆಂದು ಹೊಗಳಿಸಿಕೊಂಡರು. ಲಗ್ನವಾದ ಮೇಲೆ ಅವರು ಅಗ್ನಿಹೋತ್ರವನ್ನಿಟ್ಟು ಶಾಸ್ತ್ರವಿಹಿತವಾದ ಮಾರ್ಗದಿಂದ ನಡೆಯ-ಹತ್ತಿದರು. ಶಕೆ ೧೮೧೨ ರಲ್ಲಿ ಅವರ ಪತ್ನಿಯು ಮೃತವಾದೊಡನೆ, ಅವರು ಕೂಡಲೇ ಸಂನ್ಯಾಸವನ್ನು ಸ್ವೀಕರಿಸಿ ಆದರ್ಶ ಯತಿಗಳಾದರು. ಅವರ ಸಮಾಧಿಯು ಶಕೆ ೧೮೩೬ ರಲ್ಲಿ ನರ್ಮದೆಯ ದಡದ ಮೇಲಿರುವ ಗರು-ಡೇಶ್ವರದಲ್ಲಿ ಆಯಿತು. ಅವರು ವಿಶೇಷವಾಗಿ ದತ್ತ ಸಾಂಪ್ರದಾಯಕ್ಕೆ ಪೋಷಕವಾದ ಅನೇಕ ಉದ್ಗ್ರಂಥಗಳನ್ನೂ, ಆರತೀ, ಸ್ತೋತ್ರ, ಪದ, ಅಭಂಗ ಮೊದಲಾದವುಗಳನ್ನೂ ಬರೆದಿದ್ದಾರೆ. ಅವರಿಂದ ಅನುಗ್ರಹ ಪಡೆದ ಅನೇಕ ಜನ ಮಹನೀಯರು ಇಂದಿಗೂ ಜೀವಿಸಿದ್ದಾರೆ.

ಟೇಂಬೇ ಸ್ವಾಮಿಗಳವರು ಎಂದೂ ಯಾವ ವಾಹನವನ್ನೂ ಏರಲಿಲ್ಲ. ಆದರೂ ಅವರು ನಿತ್ಯ ಪ್ರವಾಸಿಗಳಾಗಿದ್ದರು. ಅವರು ಪಾದಚಾರಿಗಳಾಗಿಯೇ ೨—೩ ಸಲ ಹಿಂದುಸ್ಥಾನವನ್ನು ಸುತ್ತಾಡಿಕೊಂಡು ಬಂದರು. ಶಾ. ಶ. ೧೮೨೭ ರಲ್ಲಿ ಅವರು ವಾಡಿಗೆ ಬಂದ ಮೇಲೆ ಅವರದು ಇತ್ತ ಕಡೆಗೆ ಒಳ್ಳೇ ಪ್ರಸಿದ್ಧಿಯಾಯಿತು. ಅವರು ತಮ್ಮ ಪ್ರೀತಿಯ ಸ್ಥಾನವಾದ ನೃಸಿಂಹವಾಡಿಗೆ ಬಂದೊಡನೆ ಅಲ್ಲಿ ''ದಿಗಂಬರಾ, ದಿಗಂಬರಾ, ಶ್ರೀಪಾದವಲ್ಲಭ ದಿಗಂಬರಾ'' ಎಂಬ ದತ್ತ ಭಜನವನ್ನು ರೂಢಿಗೊಳಿಸಿದರು. ಅವರು ಅಲ್ಲಿಗೆ ಬಂದ ಸುದ್ದಿಯು ಸುತ್ತುಮುತ್ತಲಿನ ಪ್ರಾಂತದೊಳಗಿರುವ ಭಾವಿಕ ಜನರಿಗೆ ಶೀಘ್ರದಲ್ಲಿಯೇ ಗೊತ್ತಾಯಿತು. ಅದರಂತೆ ಈ ಸುದ್ದಿಯು ಗುರ್ಲಹೊಸೂರಕ್ಕೂ ಬಂತು ಅವರ ಪ್ರಖ್ಯಾತಿಯನ್ನು ಕೇಳಿದ ನಮ್ಮ ಚರಿತ್ರನಾಯಕರು ಶ್ರೀ ನೃಸಿಂಹವಾಡಿಯ ವರೆಗೆ ಹೋಗಿ ಶ್ರೀ ದತ್ತ ದರ್ಶನವನ್ನು ಮಾಡಿಕೊಂಡು ಟೇಂಬೇ ಸ್ವಾಮಿಗಳವರಿಗೂ ಜೆಟ್ಟಿಯಾಗಿ ಬರಬೇಕೆಂದು ಸ್ವಾಭಾವಿಕವಾಗಿಯೇ ಅಪೇಕ್ಷಿಸಿದರು. ಅವರ ಅಪೇಕ್ಷೆಯಂತೆ ಹೊರಡುವ ಎಲ್ಲ ಸಿದ್ಧತೆಯೂ ಆಯಿತು.

ಸಂಗಡ ಮಹಾರಾಜರ ಶಿಷ್ಯರಾದ ವಿಷ್ಣುಬುವಾ ಮತ್ತು ಗೋಪಾಳಬುವಾ ಎಂಬವರಿಬ್ಬರೂ ಇದ್ದರು. ಮಹಾರಾಜರು ತೀರ ಕೃಶರಾದುದರಿಂದ ಅವರಿಗೆ ಕಾಲು ನಡಿಗೆಯಿಂದ ಪ್ರವಾಸ ಮಾಡುವದು ಶಕ್ಯವಿರಲಿಲ್ಲ. ಆದುದರಿಂದ ಒಂದು ಎತ್ತಿನ ಬಂಡಿಯಲ್ಲಿ ಪ್ರವಾಸವು ಸುರುವಾಯಿತು. ಗುರ್ಲಹೊಸೂರಿಂದ ಹೊರಟವರು ಮೊದಲನೆಯ ದಿನ ಸಂಜೆಗೆ ಮುರಗೋಡ— ಹೊಸೂರಿಗೆ ಮುಟ್ಟಿದರು. ಮರುದಿವಸ ಮುಂಜಾನೆ ಅಲ್ಲಿಂದ ಹೊರಟು ಮೂರು ನಾಲ್ಕು ತಾಸು ಹೊತ್ತೇರುವದರೊಳಗಾಗಿ ಮಹಾರಾಜರು ಸಂಪಗಾವಿಗೆ ಬಂದರು. ಅಲ್ಲಿ ಮಹಾರಾಜರ ಅನೇಕ ಜನ ಭಕ್ತರಿದ್ದುದರಿಂದ, ಅವರೆಲ್ಲರಿಗೂ ಮಹಾರಾಜರ ಆಗಮನದಿಂದ ಒಳ್ಳೇ ಹರುಷವಾಯಿತು. ಮಹಾರಾಜರು ವಾಡಿಗೆ ಹೋಗುವ ಸುದ್ದಿಯನ್ನು ಕೇಳಿ, ಅವರಲ್ಲನೇಕರು ತಾವೂ ಅವರ ಸಂಗಡ ವಾಡಿಗೆ ಹೋಗಬೇಕೆಂದು ಸಂಕಲ್ಪ ಮಾಡಿದರು. ಮಧ್ಯಾಹ್ನ ಊಟವಾಗಿ ಇಳಿಹೊತ್ತಾದೊಡನೆ ಮುಂದಿನ ಪ್ರವಾಸ ಕೈಕೊಳ್ಳಬೇಕೆಂದು ನಿಶ್ಚಯವಾಗಿತ್ತು.

ಮಧ್ಯಾಹ್ನದ ಭಿಕ್ಷೆಯಾಗಿ ಮಹಾರಾಜರು ತುಸು ವಿಶ್ರಾಂತಿ ತಕ್ಕೊಂಡರು. ಆ ಮೇಲೆ ಬಹಿರ್ದೆಶೆಗೆ ಹೋಗಬೇಕೆಂದು ಅವರು ಹೊರಟೊಡನೆ, ಶಿಷ್ಯರಾದ ವಿಷ್ಣುಬುವಾ ಅವರು ಸಂಗಡ ತಂಬಿಗೆ ತಕ್ಕೊಂಡು ಬೆನ್ನು ಹತ್ತಿದರು. ಆದೇ ಕಾಲದಲ್ಲಿ ಮಹಾರಾಜರ ಮನಸ್ಸಿನಲ್ಲಿ ಮಾರ್ಮಾಟಾದಂತೆ ಕಂಡಿತು. ಅವರು ತಿರುಗಿ ಮನೆಗೆ ಬಂದು ಕೈಕಾಲು ಮೋರೆ ತೊಳಕೊಂಡರು. ಆಗ ಮಹಾರಾಜರು ವಿಷ್ಣುಬುವಾ ಅವರನ್ನು ಕುರಿತು— "ವಿಷ್ಣೂ, ಯಾಕೋ ನನ್ನ ಮನಸ್ಸು ಚಂಚಲವಾಗಿದೆ, ನೋಡು. ಗುರ್ಲಹೊಸೂರೆಲ್ಲಿ, ವಾಡಿಯೆಲ್ಲಿ ? ನಾವು ಇಷ್ಟು ದೂರ ಏತಕ್ಕೆ ಹೋಗಬೇಕೋ ತಿಳಿಯದಾಗಿದೆ. ಸುಮ್ಮನೇ ತಿರುಗಿ ಗುರ್ಲಹೊಸೂರಿಗೇ ಹೋಗುವದೊಳಿತೆಂದು ಎನಿಸಹತ್ತಿದೆ. ಆದುದರಿಂದ ಮುಂದಿನ ಪ್ರವಾಸವನ್ನು ರಹಿತಪಡಿಸಿ, ಹಿಂದಿರುಗುವದು ಯೋಗ್ಯವೆಂದು ಕಾಣುತ್ತದೆ" ಎಂದು ಹೇಳಿದರು. ಇದರಿಂದ ಅವರ ಶಿಷ್ಯರಿಗೆ ವಜ್ರಾಘಾತವಾದಂತಾಯಿತು. ಮಹಾರಾಜರಂಥವರ ಸಹವಾಸದಲ್ಲಿ ವಾಡಿಯ ಕ್ಷೇತ್ರದ ದರುಶನವಾಗುವದಲ್ಲದೆ, ಶ್ರೀ ಟೇಂಬೇ ಸ್ವಾಮಿಗಳಂಥವರ ಭೆಟ್ಟಿಯ ಯೋಗವು ತಮಗೂ ಅನಾಯಾಸವಾಗಿ ಆಗುವದೆಂದು, ಪಾಪ, ಆ ಶಿಷ್ಯರು ತಿಳಿದುಕೊಂಡಿದ್ದರು. ಆದರೆ ಮಹಾರಾಜರ ಈ ವಿಚಾರದಿಂದ ಅವರಿಗೆ ತೀವ್ರ ನಿರಾಶೆಯಾಗುವ ಪ್ರಸಂಗ ಬಂತು. ಅವರು ಒಳ್ಳೇ ವಿನಯದಿಂದ ಕೈಜೋಡಿಸಿ ಪ್ರಾರ್ಥಿಸಿಕೊಂಡರು:— "ಸ್ವಾಮಿನ್, ಶ್ರೀ ಟೇಂಬೇ ಸ್ವಾಮಿಗಳವರ ಭೆಟ್ಟಿಗೆಂದು ಇಲ್ಲಿಯ ವರೆಗೆ ಬಂದು ತಿರುಗಿ ಊರಿಗೆ ಹೋಗುವದು ಯೋಗ್ಯವಾಗಬಹುದೇ ? ನಾವು ತಿರುಗಿ ಹೊರಟು ಹೋದರೆ ಜನರು ಏನೆಂದಾರು ? ಮೇಲಾಗಿ ಸಾಮಾನುಗಳೆಲ್ಲ ಕಟ್ಟಿ ಸಿದ್ಧವಾಗಿವೆ. ಸಂಪಗಾವಿಯ ಜನರೂ ಕೂಡ ನಮ್ಮ ಸಂಗಡ ಬರಬೇಕೆಂದು ಸಜ್ಜಾಗಿ ನಿಂತಿದ್ದಾರೆ. ಈ ಪ್ರಸಂಗದಲ್ಲಿ ನಾವು ಹಿಂದುರುಗಿದರೆ ಎಲ್ಲರಿಗೂ ತೀವ್ರ ನಿರಾಶೆಯಾಗುವದಿಲ್ಲವೇ ?"

ಮಹಾರಾಜರು ಹೇಳಿದರು:— "ತಮ್ಮಾ, ನಮ್ಮ ಇಚ್ಛೆ ಅಥವಾ ಅನುಕೂಲತೆ ಅನಾನುಕೂಲತೆಗಳನ್ನು ತೆಗೆದುಕೊಂಡೇನು ಮಾಡುವದು ?

ಆದರಂತೆ ಜನರು ಏನೆಂದಾರೆಂಬದನ್ನಾದರೂ ನಾವು ವಿಚಾರ ಮಾಡುವ ಕಾರಣವಿಲ್ಲ. ನಮ್ಮ ಅಥವಾ ಹೆರವರ ಮನಸಿಗೆ ಬರಲಿ, ಅಥವಾ ಬಿಡಲಿ. ಮುಖ್ಯವಾಗಿ ಚಿದಂಬರನ ಇಚ್ಛೆಯು ಹೇಗಿರುವದೋ ಹಾಗೆ ನಡೆಯುವದು ನಮ್ಮ ಕರ್ತವ್ಯವು ನಮ್ಮ ಇಂದಿನ ಪ್ರವಾಸಕ್ಕೆ ಚಿದಂಬರನ ಆಜ್ಞೆಯಿದ್ದಂತೆ ಕಾಣುವದಿಲ್ಲ.''

ಆ ಮೇಲೆ ಮಹಾರಾಜರು ಸ್ನಾನಮಾಡಿ ಭಸ್ಮಧಾರಣೆ ಮಾಡಿಕೊಂಡು ಧ್ಯಾನಸ್ಥರಾಗಿ ಕುಳಿತರು. ಅವರ ನಿರ್ಣಯದಲ್ಲಿ ಬದಲಾವಣೆಯಾದ ಸುದ್ದಿಯು ಹಾಹಾ ಎನ್ನುವದರೊಳಗೆ ಊರಲ್ಲಿ ಹಬ್ಬಿತು. ಮಹಾರಾಜರು ಶ್ರೀ ದಾದೋಪಂತ ಕುಲಕರ್ಣಿ ಎಂಬವರ ಮನೆಯಲ್ಲಿ ಇಳಿದುಕೊಂಡಿದ್ದರು. ದಾದೋಪಂತರೂ ಉಳಿದ ಸದ್ಗೃಹಸ್ಥರೂ ಈ ಸುದ್ದಿಯಿಂದ ಚಕಿತರಾಗಿ ಮಹಾರಾಜರು ಕುಳಿತಲ್ಲಿಗೆ ಬಂದರು. ಮಹಾರಾಜರು ಆಗ ಕಣ್ಣು ತೆರೆದು ಎಲ್ಲರನ್ನೂ ಮಂದಹಾಸದಿಂದ ನೋಡುತ್ತ ತಮ್ಮ ನಿರ್ಣಯವನ್ನು ಅವರಿಗೆ ತಿಳಿಸಿದರು. ಕೂಡಿದ ಜನರಿಗೆ ಇದರಿಂದ ಬಹಳ ದುಃಖವಾಯಿತು. ಅವರು ಮಹಾರಾಜರಿಗೆ ಅನೇಕ ಬಗೆಯಿಂದ ಪ್ರಾರ್ಥಿಸಿಕೊಳ್ಳಹತ್ತಿದರು. ''ಉಳಿದಾವ ಕಾರಣವಿಲ್ಲದಿದ್ದರೆ, ನಮಗಾಗಿಯಾದರೂ ತಾವು ನೃಸಿಂಹವಾಡಿಗೆ ಬರಬೇಕೆ''ಂದು ಅವರು ಹಟಹಿಡಿದರು. ಆದರೆ ಮಹಾರಾಜರು ಯಾವುದಕ್ಕೂ ಹಣಿಯಲಿಲ್ಲ ಅವರು ಎಲ್ಲರಿಗೂ ಕೊಟ್ಟ ಉತ್ತರವು ಒಂದೇ— ''ಶ್ರೀ ಚಿದಂಬರನ ಆಜ್ಞೆಯೇ ನಮಗೆ ಪ್ರಮಾಣವು. ನಿಮಗೂ ಅದು ಪ್ರಮಾಣವಾಗಿರುವದೆಂದು ನಾನು ನಂಬಿದ್ದೇನೆ. ಆದುದರಿಂದ ದೇವರ ಮುಂದೆ ಚೀಟಿ ಹಾಕೋಣ. ಅವನ ಆಜ್ಞೆಯು ಹೇಗಾಗುವದೋ ಹಾಗೆ ಎಲ್ಲರೂ ಕೇಳೋಣ.'' ಅರ್ಥಾತ್ ಮಹಾರಾಜರ ಈ ಸೂಚನೆಯು ಎಲ್ಲರ ಮನಸಿಗೂ ಬಂತು.

ಆದರಂತೆ ''ಗುರ್ಲಹೊಸೂರಿಗೆ ಹೋಗಬೇಕು'', ''ವಾಡಿಗೆ ಹೋಗಬೇಕು'' ಎಂದು ಎರಡು ಬೇರೆ ಬೇರೆ ಚೀಟಿಗಳನ್ನು ಬರೆದು ದೇವರ ಮುಂದೆ ಇರಿಸಲಾಯಿತು. ಮತ್ತು ಎಲ್ಲರೂ ದೇವರನ್ನು ಕುರಿತು ತಮಗೆ ಸರಿಯಾದ ಮಾರ್ಗತೋರಿಸಬೇಕೆಂದು ಪ್ರಾರ್ಥನೆ ಮಾಡಿಕೊಂಡರು. ಶ್ರೀ ದಾದೋಪಂತ ಕುಲಕರ್ಣಿಯವರೇ ಚೀಟಿಯನ್ನು ತೆಗೆದರು. ತೆಗೆದ

ಚೀಟಿಯಲ್ಲಿ ಗುರ್ಲಹೊಸೂರಿಗೆ ಹೋಗಬೇಕು, ಎಂಬ ಆಜ್ಞೆಯಿತ್ತು. ಇದರಿಂದ ಸಂಪಗಾವಿಯ ಜನರಿಗೆ ಮಾತಾಡಲಿಕ್ಕೆ ಮಾರ್ಗವಿಲ್ಲದಂತಾಯಿತು. ಆದರೂ ಅವರು ತೀರ ಖಿನ್ನರೋರೆ ಮಾಡಿದರು. ಆಗ ಮಹಾರಾಜರು ಅವರನ್ನು ಸಂತೈಸುವ ಉದ್ದೇಶದಿಂದ ಹೇಳಿದ್ದೇನಂದರೆ— ''ಅಪ್ಪಗಳಿರಾ, ನೀವು ಚಿಂತೆ ಮಾಡುವ ಕಾರಣವಿಲ್ಲ. ನಮ್ಮ ಹಿತವು ಯಾತರಲ್ಲಿರುವದೆಂಬದು ನಮಗೆ ಸಹಸಾ ತಿಳಿಯುತ್ತಿರುವದಿಲ್ಲ. ಎಲ್ಲವನ್ನೂ ಸರ್ವಜ್ಞನಾದ ದೇವರಿಗೊಪ್ಪಿಸಿ, ಅವನ ಆಜ್ಞೆಯಂತೆ ನಡೆಯಲಿಕ್ಕೆ ನಾವು ಕಲಿಯಬೇಕು ನಮ್ಮ ಎಲ್ಲ ಭಾರವನ್ನೂ ನಾವು ಅವನ ತಲೆಯ ಮೇಲೆ ಹಾಕಿದರೆ, ಅವನು ನಮ್ಮ ಕಲ್ಯಾಣವನ್ನು ಮಾಡಬಲ್ಲನು.''

ಮಹಾರಾಜರು ಆ ದಿನ ಸಂಪಗಾಂವಿಯಿಂದ ಹೊರಟು ಹೊಸೂರಿಗೆ ಮುಕ್ಕಾಂ ಮಾಡಿದರು. ಮರು ದಿವಸ ೩—೪ ತಾಸು ಹೊತ್ತೇರುವದರೊಳಗಾಗಿ ಮಹಾರಾಜರ ಚಕ್ಕಡಿಯು ತಿರುಗಿ ಗುರ್ಲಹೊಸೂರಿಗೆ ಬಂತು. ಜನರಿಗೆಲ್ಲರಿಗೂ ಮಹಾರಾಜರು ಹೀಗೆ ತಿರುಗಿ ಬಂದುದು ಬಹಳ ಆಶ್ಚರ್ಯವನ್ನುಂಟು ಮಾಡಿತು. ಆದರೆ ಮರುದಿನದ ಮಧ್ಯಾಹ್ನದ ಮೇಲೆ ವಾಡಿಯಿಂದ ಒಂದು ಪತ್ರವು ಬಂತು. ಅದರಲ್ಲಿ ಶ್ರೀ ಟೇಂಬೇ ಸ್ವಾಮಿಗಳು ಗುರ್ಲಹೊಸೂರಿಗೆ ಹೋಗಬೇಕೆಂದು ವಾಡಿಯನ್ನು ಬಿಟ್ಟು ಮಿರಜಿಗೆ ಹೋದರು. ಒಂದೆರಡು ದಿನಗಳಲ್ಲಿ ಅವರು ಗುರ್ಲಹೊಸೂರಕ್ಕೆ ಬರಬಹುದು'' ಎಂಬ ಸುದ್ದಿಯಿತ್ತು. ಇದಕ್ಕೂ ಹೆಚ್ಚು ಅದ್ಭುತವಾದ ಮಾತೆಂದರೆ ಮಹಾರಾಜರು ಯಾವ ಕಾಲಕ್ಕೆ ಸಂಪಗಾವಿಯನ್ನು ಬಿಟ್ಟು ತಿರುಗಿ ಗುರ್ಲಹೊಸೂರಿಗೆ ಹೋಗಬೇಕೆಂದು ನಿಶ್ಚಯಿಸಿದರೋ, ಆದೇ ಕಾಲಕ್ಕೆ ಶ್ರೀ ಟೇಂಬೇ ಸಾಮಿಗಳವರು ವಾಡಿಯನ್ನು ಬಿಟ್ಟು ಗುರ್ಲಹೊಸೂರಿಗೆ ಹೂರಟ್ಟಿದ್ದರು !

ಈ ಪತ್ರವು ಕೈಸೇರಿದೊಡನೆ ಶಿಷ್ಯರ ಸಂಶಯಗಳೆಲ್ಲ ದೂರಾದವು. ಅವರಿಗೂ ಮತ್ತು ಉಳಿದವರಿಗೂ ಆಗ ಮಹಾರಾಜರ ಅಂತಜ್ಞಾನದ ಸಿದ್ಧಿಯು ಗೊತ್ತಾಯಿತು. ಮಹಾರಾಜರ ಈ ಸಾಮರ್ಥ್ಯವನ್ನು ಕಂಡು

ಅವರು ಬೆರಗಾದರು. ಆವರ ಕಣ್ಣುಗಳಿಂದ ಆನಂದಾಶ್ರುಗಳು ಉದುರ-ಹತ್ತಿದವು. ಮಹಾರಾಜರು ಮೌನದಿಂದಲೇ ಮಾಡಿ ತೋರಿಸಿದ ಲೀಲೆ-ಯನ್ನು ನೋಡಿ ಅವರ ಹೃದಯವು ಉಕ್ಕೇರಿ ಬಂತು. ಆವರೆಲ್ಲ ಕೈ ಜೋಡಿಸಿಕೊಂಡು ಬಂದು ಮಹಾರಾಜರಿಗೆ ವಾಡಿಯ ಪತ್ರದ ಸಂಗತಿ-ಯನ್ನು ನಿವೇದಿಸಿದರು. ಮಹಾರಾಜರು ಮುಗುಳುನಗೆ ನಗುತ್ತ ಉತ್ತರ ಕೊಟ್ಟರು:— ''ಚಿದಂಬರನ ಲೀಲೆಯು ಅಗಾಧವಾದುದು. ಎಂತೆಯೇ ಸಂಪಗಾವಿಯಲ್ಲಿ ನಮ್ಮ ಮನಸ್ಸು ಚಂಚಲವಾಯಿತು. ಆ ಕಾಲಕ್ಕೆ ನಮ್ಮ ಕೃತಿಯು ಅನೇಕರಿಗೆ ತೀರ ವಿಕ್ಷಿಪ್ತವಾಗಿ ಕಂಡಿರಬಹುದು. ಆದರೆ ಚಿದಂಬರನು ಮಾಡಿ ತೋರಿಸಿದ ಆಟದ ಅರ್ಥವು ಈಗ ಎಲ್ಲರಿಗೂ ಸ್ಪಷ್ಟ-ವಾಗಿ ತಿಳಿದಂತಾಯಿತು.'' ಊರ ಜನರು ತಿರುಗಿ ನಿವೇದನೆ ಮಾಡಿ-ಕೊಂಡರು:— ''ಮಹಾರಾಜರೇ, ತಮಗೆ ತಿಳಿಯದಿದ್ದುದು ಯಾವುದಿದೆ ? ಎಲ್ಲವನ್ನೂ ಅಂತರ್ಜ್ಞಾನದಿಂದಲೇ ಅರಿತು, ತಾವು ಚಿದಂಬರನ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಿರುವಿರಿ, ಅಷ್ಟೇ.''

ಮರುದಿವಸ ಶ್ರೀ ಗುರುನಾಥ ವೆಂಕಟೇಶ ಕಿತ್ತೂರ, ಮತ್ತು ಬಾಗೇವಾಡಿಯ ಜನರಿಂದ ಪತ್ರಗಳು ಬಂದವು. ಅವುಗಳಲ್ಲಿ ಶ್ರೀ ಟೇಂಬೇ ಸ್ವಾಮಿಗಳು ಬೆಳಗಾಂವಿಯ ಮೇಲಿಂದ ಬಾಗೇವಾಡಿಗೆ ಬಂದಿರುವರೆಂದೂ ಅಂದೇ ಸಂಜೆಗೆ ಗುರ್ಲಹೊಸೂರಿಗೆ ಬರಬಹುದೆಂದೂ ಬರೆಯಲ್ಪಟ್ಟಿತ್ತು. ಅದಕ್ಕನುಸಾರವಾಗಿ ಟೇಂಬೇ ಸ್ವಾಮಿಗಳು ಆ ದಿನ ಸಂಜೆಗೆ ಗುರ್ಲ-ಹೊಸೂರಿಗೆ ಬಂದೇಬಿಟ್ಟರು. ಆವರ ಬರುವಿಕೆಯನ್ನು ಮೊದಲೇ ಅರಿತು-ಕೊಂಡು ತಮಗೆ ಸೂಚನೆ ಕೊಡುವದಕ್ಕಾಗಿ ಮಹಾರಾಜರು ಕುದುರೆಯ ಸ್ವಾರನೊಬ್ಬನನ್ನು ಮುಂದೆ ಕಳಿಸಿದ್ದರು. ಅವನ ಕಡೆಯಿಂದ ಸ್ವಾಮಿಗಳು ಬರಹತ್ತಿರುವರೆಂಬ ಆನಂದದ ಸುದ್ದಿ ಬಂತು. ಮಹಾರಾಜರು ಲಗುಬಗೆ-ಯಿಂದ ಶ್ರೀ ದಾಮೋದರ ಭಟ್ಟ ಮೊದಲಾದ ಏಳೆಂಟು ಜನ ವೈದಿಕರನ್ನೂ ಪ್ರತಿಷ್ಠಿತ ಸದ್ಗೃಹಸ್ಥರನ್ನೂ, ದೀಕ್ಷಿತ ಪ್ರಮುಖರನ್ನೂ ಸಂಗಡ ಕರಕೊಂಡು ತಾಸೇ, ಬಜಂತ್ರಿ ಮೊದಲಾದವುಗಳೊಡನೆ ಶ್ರೀ ಟೇಂಬೇ ಸ್ವಾಮಿಗಳ ಸ್ವಾಗತಕ್ಕೆಂದು ನದಿಯ ದಂಡೆಯ ವರೆಗೆ ಹೋದರು. ಇಬ್ಬರೂ ಯತಿ ಶ್ರೇಷ್ಠರ ಪ್ರಥಮ ಸಂದರ್ಶನವು ನದಿಯ ದಡದಲ್ಲಿಯೇ ಆಯಿತು. ಯತಿಗಳು

ಒಬ್ಬರಿಗೊಬ್ಬರು ಬೆಟ್ಟಿಯಾದಾಗ ಒಂದು ವಿಶಿಷ್ಟ ಪದ್ಧತಿಯಲ್ಲಿಯೇ ಅಭಿವಾದನ ಮಾಡಬೇಕೆಂದು ನಿಯಮವಿದೆ. ಆದರೆ ಒಬ್ಬರನ್ನೊಬ್ಬರು ನೋಡಿ, ಪರಸ್ಪರ ಯೋಗ್ಯತೆಯನ್ನರಿತು ಇಬ್ಬರೂ ಸಂಭ್ರಮದಲ್ಲಿರುವಾಗ ಆ ಶಾಸ್ತ್ರನಿಯಮವು ಯಾರ ನೆನಪಿನಲ್ಲಿಯೂ ಉಳಿಯಲಿಲ್ಲ. ಪ್ರೇಮಾತಿಶಯವಾದಾಗ ಎಲ್ಲ ವಿಧಿವಿಧಾನಗಳೂ ಗೌಣವಾಗಿ ಬಿಡುತ್ತವಷ್ಟೇ. ಅದರಂತೆ ಅವರಿಬ್ಬರೂ ಒಬ್ಬರನ್ನೊಬ್ಬರು ಪ್ರೇಮದಿಂದ ಆಲಿಂಗನ ಮಾಡಿದಾಗ ಇಬ್ಬರ ಮೈಮೇಲೆಯೂ ಎಚ್ಚರವುಳಿಯಲಿಲ್ಲ. ಪರಸ್ಪರ ಆಲಿಂಗನ ಮಾಡುತ್ತಿರುವ ಹರಿಹರರ ಜೋಡಿಯಂತೆ ಆ ಯತಿವರ್ಯರಾಗ ಕಂಡರು. ಇಬ್ಬರ ಕಣ್ಣೊಳಗಿಂದಲೂ ಆನಂದಾಶ್ರುಗಳು ಧಾರೆಯಾಗಿ ಹರಿಯಹತ್ತಿದವು. ಇಬ್ಬರ ಗಂಟಲ ಶಿರಗಳೂ ಉಬ್ಬಿದವು ಈ ರೀತಿಯಾಗಿ ಕೆಲ ಹೊತ್ತಿನ ವರೆಗೆ ಪ್ರೇಮಸುಖವು ಅಲ್ಲಿ ತುಳುಕಾಡಿತು. ಆ ಮೇಲೆ ಮಹಾರಾಜರು ಸ್ವಾಮಿಗಳಿಗೆ ಕೂಡಿದ ಜನರ ಪರಿಚಯ ಮಾಡಿಕೊಟ್ಟರು. ಕುಶಲಪ್ರಶ್ನೆಗಳಾದ ಮೇಲೆ ಎಲ್ಲರ ಸಂಧ್ಯಾವಂದನೆಯು ನದಿಯ ದಡದಲ್ಲಿಯೇ ನಡೆಯಿತು. ಸುಮಾರು ಒಂದು ತಾಸು ರಾತ್ರಿಯಾದಾಗ ಊದುತ್ತ ಬಾರಿಸುತ್ತ ಮೆರವಣಿಗೆಯು ಹೊರಟಿತು. ಶ್ರೀ ಟೇಂಬೇ ಸ್ವಾಮಿಗಳವರು ಬಲು ವಿಜೃಂಭಣೆಯಿಂದ ಪೇಟೆಯ ಮಾರ್ಗವಾಗಿ ಶ್ರೀ ಚಿದಂಬರೇಶ್ವರನ ಗುಡಿಗೆ ಬಂದು ಮುಟ್ಟಿದರು. ವೈದಿಕರ ಮಂತ್ರನಿನಾದವು ಎಲ್ಲರ ಕಿವಿಗಳನ್ನೂ ಚನ್ನಾಗಿ ತಣಿಸುತ್ತಿತ್ತು.

ಶ್ರೀ ಟೇಂಬೇ ಸ್ವಾಮಿಗಳಂಥ ಸತ್ಪುರುಷರು ತಮ್ಮಲ್ಲಿ ಆದಷ್ಟು ಹೆಚ್ಚು ದಿನ ನಿಲ್ಲಬೇಕೆಂದು ಎಲ್ಲರೂ ಅಪೇಕ್ಷಿಸುವದು ಸ್ವಾಭಾವಿಕವು. ಆದರೆ ಯತಿಗಳು ಒಂದೇ ಕಡೆಗೆ ಬಹಳ ದಿನ ನಿಲ್ಲಬಾರದೆಂಬ ನಿಯಮವಿದ್ದುದರಿಂದ ಶ್ರೀ ಟೇಂಬೇ ಸ್ವಾಮಿಗಳು ಎಲ್ಲಿಯೂ ೧—೨ ದಿನಕ್ಕಿಂತ ಹೆಚ್ಚಾಗಿ ನಿಲ್ಲುತ್ತಿರಲಿಲ್ಲ. ಆದರೂ ಅವರನ್ನೂ ಹೇಗಾದರೂ ಮಾಡಿ ಗುರ್ಲಹೊಸೂರಲ್ಲಿ ೭—೮ ದಿನಗಳ ವರೆಗಾದರೂ ಮುಕ್ಕಾಂ ಮಾಡಿಸಬೇಕೆಂದು ಮಹಾರಾಜರು ಆಲೋಚಿಸಿದರು. ಮರುದಿವಸ ಭಿಕ್ಷೆಯಾದ ಮೇಲೆ ಯೋಗ್ಯ ಸಮಯವನ್ನು ನಿರೀಕ್ಷಿಸಿ ಮಹಾರಾಜರು ''ಮೂರು ನಾಲ್ಕು ದಿನಗಳಾದರೂ

ತಮ್ಮ ಸಹವಾಸ ಲಾಭವಾಗಲಿ'' ಎಂದು ಸ್ವಾಮಿಗಳಿಗೆ ಬಿನ್ನವಿಸಿಕೊಂಡರು. ಸ್ವಾಮಿಗಳು ತುಸುನಕ್ಕು ಹೇಳಿದರು: — ''ನಿಮ್ಮಂಥವರ ಜೊತೆಯಲ್ಲಿ ಇರುವದೆಂದರೆ ನಮಗೂ ಲಾಭವೇ ಸರಿ. ಆದರೆ ನಾನು ಸದ್ಯಕ್ಕೆ ರಾಮೇಶ್ವರಕ್ಕೆ ಹೋಗಬೇಕೆಂಬ ಗಡಿಬಿಡಿಯಲ್ಲಿದ್ದೇನೆ. ಆದುದರಿಂದ ದಯವಿಟ್ಟು ಈ ಸಲ ಕ್ಷಮಿಸಿರಿ. ಇನ್ನೊಮ್ಮೆ ಬಂದಾಗ ನಿಮ್ಮ ಇಚ್ಛೆಯಂತೆ ಇಲ್ಲಿ ಕೆಲ ದಿನ ನಿಲ್ಲುವೆನು'' ಮಹಾರಾಜರು ಸದ್ಯಕ್ಕೆ ಹೆಚ್ಚಾಗಿ ಮಾತಾಡುವದು ನಿಷ್ಪ್ರಯೋಜಕವೆಂದರಿತು ಸುಮ್ಮನಾಗಿ ಬಿಟ್ಟರು.

ಆದರೆ ಚಾಣಾಕ್ಷರಾದ ಮಹಾರಾಜರು ಆಷ್ಟಕ್ಕೆ ನಿರಾಶರಾಗಲಿಲ್ಲ. ಸ್ವಾಮಿಗಳನ್ನು ಗುರ್ಲಹೊಸೂರಲ್ಲಿ ಇಟ್ಟುಕೊಳ್ಳಲಿಕ್ಕೆ ಅವರು ಬೇರೊಂದು ಹಂಚಿಕೆಯನ್ನು ಹೂಡಿದರು. ಪ್ರತಿಯೊಬ್ಬ ವ್ಯಕ್ತಿಗೂ ಕೆಲಕೆಲವು ಮರ್ಮಸ್ಥಾನಗಳಿರುತ್ತವೆ. ಆಯಾ ವ್ಯಕ್ತಿಯ ಮರ್ಮಸ್ಥಾನಗಳನ್ನು ಸರಿಯಾಗಿ ಕಂಡು ಹಿಡಿದು, ಅವುಗಳ ಮೇಲೆ ಕೈಯೂರಿದರೆ ನಮ್ಮ ಕೆಲಸವು ಸುಸೂತ್ರವಾಗಿ ಆಗುವಂತಿರುತ್ತಿದೆ. ಇದನ್ನರಿತ ಮಹಾರಾಜರು ಮರುದಿವಸ ಮುಂಜಾನೆ ಶ್ರೀ ಟೇಂಬೇ ಸ್ವಾಮಿಗಳವರು ಗುರ್ಲಹೊಸೂರಿಂದ ಹೊರಡತಕ್ಕದ್ದೆಂಬವಕ್ಕೆ ಆಗ ಸಮ್ಮತಿಯನ್ನು ಕೊಟ್ಟರು. ಅದರಂತೆ ಮರುದಿನ ಮುಂಜಾನೆ ಸ್ವಾಮಿಗಳು ಸ್ನಾನಕ್ಕಾಗಿ ನದಿಗೆ ಹೋದರು. ಅವರು ತಿರುಗಿ ಬರುವಷ್ಟರಲ್ಲಿ, ಮಹಾರಾಜರು ಶ್ರೀ ಮಲ್ಹಾರ ಬಾಳಕೃಷ್ಣ ಕುಲಕರ್ಣಿ, ಬೈಲವಾಡ, ಮೊದಲಾದವರನ್ನು ಚಿದಂಬರೇಶ್ವರನ ಗುಡಿಯೊಳಗೆ ನಿಲ್ಲಿಸಿ, ಕೈಯಲ್ಲಿ ತಾಳಕೊಟ್ಟು, ''ದಿಗಂಬರಾ, ದಿಗಂಬರಾ, ಶ್ರೀಪಾದವಲ್ಲಭ ದಿಗಂಬರಾ'' ಎಂದು ಎಡೆಬಿಡದೆ ಭಜನೆ ಮಾಡುತ್ತ ನಿಲ್ಲಬೇಕೆಂದು ಆಜ್ಞಾಪಿಸಿದರು. ಆಯಿತು. ಸ್ವಾಮಿಗಳು ಸ್ನಾನಮಾಡಿಕೊಂಡು ತಿರುಗಿ ಗುಡಿಗೆ ಬರುವದರೊಳಗಾಗಿ ದಿಗಂಬರ ಭಜನೆಯು ಸುರುವಾಯಿತು. ಸ್ವಾಮಿಗಳು ಕ್ಷಣಾರ್ಧದಲ್ಲಿ ಮಹಾರಾಜರ ಜಾಣತನವನ್ನು ಕಂಡು ಹಿಡಿದರು. ಅವರು ನಗುತ್ತ ''ಇದೇನು ಉಪಕ್ರಮವು?'' ಎಂದು ಪ್ರಶ್ನೆ ಮಾಡಿದರು. ಮಹಾರಾಜರು ನಗುತ್ತಲೇ ಉತ್ತರ ಕೊಟ್ಟರು:— ''ಶ್ರೀ ದತ್ತನ ಪ್ರೀತ್ಯರ್ಥವಾಗಿ ದಿಗಂಬರ ಭಜನ ಸಪ್ತಾಹವು ಸುರುವಾಗಿದೆ. ಅದು

ಮುಗಿಯುವ ವರೆಗೆ ತಾವಿಲ್ಲಿರಬೇಕೆಂದು ಪ್ರಾರ್ಥನೆಯಿದೆ.'' ಸ್ವಾಮಿಗಳು ಮತ್ತಿಷ್ಟು ನಕ್ಕು ಹೇಳಿದರು:— ''ದತ್ತನ ಹೆಸರೆಂದರೆ ನಮಗೆ ಆಣೆಹಾಕಿದಂತೆ. ಆಗಲಿ. ನಮ್ಮನ್ನಿಲ್ಲಿ ಇಟ್ಟುಕೊಳ್ಳುವದಕ್ಕಾಗಿಯೇ ನೀವು ಈ ಭಜನ ಸಪ್ತಾಹವನ್ನು ಕೈಕೊಂಡಿರುವಿರೆಂಬದು ಸ್ಪಷ್ಟವಿದೆ. ನಿಮ್ಮೆಲ್ಲರ ಇಚ್ಛೆಯಂತೆ ನಾನು ಈ ಉತ್ಸವವು ಮುಗಿದ ಮೇಲೆಯೇ ಗುರ್ಲಹೊಸೂರನ್ನು ಬಿಡುವೆನು. ಆಯಿತೋ ಇಲ್ಲವೋ ?'' ಈ ಉತ್ತರದಿಂದ ಕೂಡಿದ ಎಲ್ಲ ಜನರ ಕಣ್ಣುಗಳೊಳಗಿಂದ ಕೃತಜ್ಞತೆಯ ಪ್ರೇಮಾಶ್ರುಗಳು ಉದುರಿದವೆಂಬದು ಸಹಜವಿದೆ.

ಏಳು ದಿನಗಳ ವರೆಗೆ ದಿಗಂಬರ ಭಜನೆಯು ಅಖಂಡವಾಗಿ ನಡೆಯಿತು. ಸ್ವಾಮಿಗಳ ದರುಶನ ಮತ್ತು ಉಪದೇಶಗಳಿಗಾಗಿ ನೂರಾರು ಜನರು ಕೂಡಿದರು. ಎಲ್ಲರ ಊಟವು ಗುಡಿಯಲ್ಲಿಯೇ ನಡೆಯಹತ್ತಿತು. ಸ್ವಾಮಿಗಳು ಪ್ರಾತಃಕಾಲದಲ್ಲಿ ಐತರೇಯೋಪನಿಷತ್ತಿನ ಮೇಲೆ ಪ್ರವಚನ ಮಾಡಹತ್ತಿದರು. ಉಪನಿಷತ್ತುಗಳೆಂದರೆ ಅಧ್ಯಾತ್ಮಜ್ಞಾನದ ರಹಸ್ಯವನ್ನು ಸೂರೆ ಮಾಡುವ ಉದ್ಗ್ರಂಥಗಳು. ಒಂದೊಂದು ಉಪನಿಷತ್ತು ಒಂದೊಂದು ಬಗೆಯಿಂದ ಆತ್ಮಜ್ಞಾನವನ್ನು ತಿಳಿಸಿಕೊಡುತ್ತದೆ. ಜೀವಬ್ರಹ್ಮರ ಐಕ್ಯವನ್ನು ಅನೇಕ ಬಗೆಯಿಂದ ತಿಳಿಸಿಕೊಡುವದೇ ಎಲ್ಲ ಉಪನಿಷತ್ತುಗಳ ಉದ್ದೇಶವಾಗಿದೆ. ನಮ್ಮೆಲ್ಲರ ಹೃದಯಗಳೊಳಗೆ ಅನುಭವಕ್ಕೆ ಬರುತ್ತಿರುವ ಚೈತನ್ಯವೇ ಬ್ರಹ್ಮವೆಂದು ಐತರೇಯೋಪನಿಷತ್ತು ಹೇಳುತ್ತದೆ. ಎಲ್ಲ ಪ್ರಾಣಿಗಳು ಪ್ರಜ್ಞಾನ ಅಥವಾ ಚೈತನ್ಯದ ಆಧಾರದಿಂದಲೇ ವ್ಯವಹಾರ ಮಾಡುವವು, ಆ ಪ್ರಜ್ಞಾನವು ದೇಹದ ಮುಖಾಂತರವಾಗಿಯೇ ಕೆಲಸ ಮಾಡುವಂತೆ ಕಂಡರೂ ಅದು ದೇಹದಿಂದ ಬೇರೆಯಾಗಿದೆ, ಮತ್ತು ''ಶುದ್ಧ, ಬುದ್ಧ, ಮುಕ್ತ ಮತ್ತು ಅದ್ವೀತಿಯವಾದ ಆ ಚಿನ್ಮಾತ್ರವೇ ನಾನು'' ಎಂದು ತಿಳಿಯುವದೇ ಆತ್ಮಜ್ಞಾನವು, ಎಂದು ಆ ಉಪನಿಷತ್ತು ಚನ್ನಾಗಿ ತಿಳಿಸಿಕೊಡುತ್ತದೆ. ''ಪ್ರಜ್ಞಾನಂ ಬ್ರಹ್ಮ''ವೆಂಬ ಋಗ್ವೇದದ ಮಹಾವಾಕ್ಯವು ಈ ಉಪನಿಷತ್ತಿನಲ್ಲಿಯೇ ಬಂದಿದೆ. ಸ್ವಾಮಿಗಳು ಈ ಉಪನಿಷತ್ತನ್ನು ಸ್ವಾನುಭವದಿಂದ ವಿವರಿಸುವಾಗ, ಶ್ರೋತೃಗಳಿಗೂ

ಬ್ರಹ್ಮಾನುಭೂತಿಯು ರುಚಿಯು ಸುಲಭವಾಗಿ ಸಿಕ್ಕುತ್ತಿತ್ತು. ಹೇಳಹೇಳುತ್ತ ಸ್ವಾಮಿಗಳಂತೂ ಆ ಅವಸ್ಥೆಯೊಳಗೇ ಮಗ್ನರಾಗಿ ನಿಶ್ಚಲವಾಗಿ ಕುಳಿತು ಬಿಡುತ್ತಿದ್ದರು. ಇದರ ಹೊರತಾಗಿ ಮುಮುಕ್ಷುಗಳು ಸ್ವಾಮಿಗಳಿಗೆ ಬೇಕಾದ ಆಧ್ಯಾತ್ಮಿಕ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತಿದ್ದರು. ಹೀಗೆ ಈ ಎಂಟು ಹತ್ತು ದಿನಗಳ ಕಾಲವೆಂದರೆ ಭಾವಿಕರಿಗೆ ಪರ್ವಣಿಯ ಕಾಲವಾಗಿ ಪರಿಣಮಿಸಿತು. ''ಶ್ರೀ ಬೋಧೇ ಸ್ವಾಮಿಗಳವರ ದಯೆಯಿಂದ ನಮಗೆ ಶ್ರೀ ಟೇಂಬೇ ಸ್ವಾಮಿಗಳವರ ಅಲಭ್ಯವಾದ ಸಹವಾಸವು ಅನಾಯಾಸವಾಗಿ ಇಷ್ಟು ದಿನಗಳ ವರೆಗೆ ಸಿಕ್ಕಿತು'' ಎಂದು ಜನರು ಯಥಾರ್ಥವಾಗಿ ಕೊಂಡಾಡಿದರು. ಭಜನ ಸವಾತ್ಹವು ಮುಗಿದೊಡನೆ ಸ್ವಾಮಿಗಳು ಗುರ್ಲಹೊಸೂರನ್ನು ಬಿಟ್ಟು ಸವದತ್ತಿಗೆ ಹೋದರು. ಅಲ್ಲಿಂದ ಅವರು ಎಲ್ಲಮ್ಮನ ಗುಡ್ಡಕ್ಕೆ ಹೋಗಿ ದೇವಿಯ ದರುಶನ ಮಾಡಿಕೊಂಡು ರಾಮೇಶ್ವರದ ದಾರೀ ಹಿಡಿದರು.

ಮುಂದೆ ಶಾ. ಶ. ೧೮೩೨ ನೆಯ ವರುಷ ಶ್ರೀ ಟೇಂಬೇ ಸ್ವಾಮಿಗಳವರು ಎರಡನೆಯ ಸಲ ಗುರ್ಲಹೊಸೂರಿಗೆ ದಯಮಾಡಿಸಿದರು. ವೈಶಾಖ ವದ್ಯ ತ್ರಯೋದಶಿಯ ದಿನ ಸ್ವಾಮಿಗಳು ಮುರಗೋಡ—ಹೊಸೂರಿಗೆ ಬಂದಿರುವರೆಂಬ ಸುದ್ದೀ ಕೇಳಿ, ಮಹಾರಾಜರು ಶಿಷ್ಯರೊಡನೆ ಅಲ್ಲಿಗೆ ಹೋದರು. ಚತುರ್ದಶಿಯ ದಿನ ಇಬ್ಬರೂ ಸತ್ಪುರುಷರು ಕೆಂಗೇರಿಗೆ ಪ್ರಯಾಣ ಬೆಳಿಸಿದರು. ಕೆಂಗೇರಿಯು ಶ್ರೀ ಚಿದಂಬರನ ಸ್ಥಾನವೆಂಬದು ವಾಚಕರಿಗೆ ಗೊತ್ತಿದೆ. ಎಂತೆಯೇ ಶ್ರೀ ಟೇಂಬೇ ಸ್ವಾಮಿಗಳವರ ಮನಸ್ಸಿನಲ್ಲಿ ಆ ಸ್ಥಾನವನ್ನು ನೋಡಬೇಕೆಂಬ ಕುತೂಹಲವುಂಟಾಗಿತ್ತು. ಆ ದಿನ ಗುಡಿಯೊಳಗೇ ಭಿಕ್ಷೆಯಾಯಿತು. ಈ ಇಬ್ಬರೂ ಸತ್ಪುರುಷರು ಅಲ್ಲಿಗೆ ಬಂದಿರುವ ಸುದ್ದೀ ಕೇಳಿ ಊರೊಳಗಿನ ಎಲ್ಲ ಜಾತಿಯ ಜನರೂ ಚಿದಂಬರನ ಗುಡಿಗೆ ಧಾವಿಸಿ ಬಂದರು. ಅಂದು ಚಿದಂಬರನಿಗೆ ಲಘುರುದ್ರಾಭಿಷೇಕ ಪೂಜೆಯಾಯಿತು. ಗುಡಿಯೊಳಗೇ ನೂರಾರು ಭಕ್ತಜನರು ಸೇರಿ ಅಡಿಗೆ ಮಾಡಿ ಬ್ರಾಹ್ಮಣ ಸಂತರ್ಪಣೆ ನಡೆಸಿದರು. ಈ ಎಲ್ಲ ಕಾರ್ಯಕ್ಕೆ ಆ ಕಾಲದ ದೀಕ್ಷಿತ ವಂಶಜರಾದ ಬ್ರ. ಶ್ರೀ. ಅಣ್ಣಾ ದೀಕ್ಷಿತರು ಮುಂದಾಳುವಾಗಿದ್ದರು. ಸ್ವಾಮಿಗಳು ಇನ್ನೂ ಒಂದೆರಡು ದಿನ ಅಲ್ಲಿ ನಿಲ್ಲಬೇಕೆಂದು ದೀಕ್ಷಿತರೂ ಉಳಿದ

ಜನರೂ ಬೇಕಾದಷ್ಟು ಆಗ್ರಹ ಮಾಡಿದರು. ಆದರೆ ಮರುದಿನ ಅಮಾವಾಸ್ಯೆ-ಯಿದ್ದುದರಿಂದ, ದಂಡಸ್ನಾನಕ್ಕಾಗಿ ನದಿಗೆ ಹೋಗಲೇಬೇಕೆಂದು ಸ್ವಾಮಿಗಳು ಎಷ್ಟು ನಿಂತರು. ಹೀಗೆ ಆದೇ ದಿನ ಸಂಜೆಯ ೫ ಗಂಟೆಗೆ ಟೇಂಬೇ ಸ್ವಾಮಿಗಳವರು ಶ್ರೀ ವಿಷ್ಣುಬುವಾ ಅವರೊಡನೆ ಪಾದಚಾರಿಗಳಾಗಿಯೇ ಕೆಂಗೇರಿಯಿಂದ ಗುರ್ಲಹೊಸೂರಿಗೆ ಹೊರಟರು. ಮಹಾರಾಜರು ಅಶಕ್ತರಾದುದರಿಂದ ಗಾಡಿಯೊಳಗೆ ಕುಳಿತು ಬರಬೇಕಾಯಿತು. ಸ್ವಾಮಿಗಳು ಮೊದಲು ಗುರ್ಲಹೊಸೂರಿಗೆ ಮುಟ್ಟಿದರು. ಅವರು ಬಂದ ಒಂದೆರಡು ತಾಸುಗಳ ಮೇಲೆ ಮಹಾರಾಜರು ಅಲ್ಲಿಗೆ ಬಂದು ಸೇರಿದರು.

ಅಮಾವಾಸ್ಯೆಯ ದಿನ ಭಿಕ್ಷೆಯಾಗಿ ವಿಶ್ರಾಂತಿಯಾದ ಮೇಲೆ, ಅನೇಕ ಜನರು ಶ್ರೀ ಟೇಂಬೇ ಸ್ವಾಮಿಗಳವರ ಕಡೆಗೆ ಬಂದರು. ಮತ್ತು ''ಹೋದ ಸಲದಂತೆ ಈ ಸಾರೆಯಾದರೂ ಇಲ್ಲಿ ಕೆಲವು ದಿನ ನಿಂತು ನಮಗೆ ಉಪದೇಶ-ಮಾಡಬೇಕು'' ಎಂದು ಬೇಡಿಕೊಂಡರು. ಆಗ ಸ್ವಾಮಿಗಳು:— ''ಅಪ್ಪಗಳಿರಾ, ನಿಮ್ಮ ಪುಣ್ಯದಿಂದಲೇ ನಿಮಗೆ ಶ್ರೀ ಕೈವಲ್ಯಾಶ್ರಮ ಸ್ವಾಮಿಗಳಂಥವರ ಸಹವಾಸ ಲಾಭವು ಅಖಂಡವಾಗಿ ಸಿಕ್ಕುತ್ತಿರುತ್ತದೆ. ಅಂಥವರು ಇಲ್ಲಿ ಇರುವರೆಂದ ಮೇಲೆ ನಾವು ಇಲ್ಲಿ ಹೆಚ್ಚಾಗಿ ನಿಲ್ಲುವ ಆವಶ್ಯಕತೆ ಯೇನೂ ಇರುವದಿಲ್ಲ. ಉತ್ತರದಲ್ಲಿ ಶ್ರೀ ಶಾಂತಾಶ್ರಮ ಸ್ವಾಮಿಗಳವರೂ ದಕ್ಷಿಣದಲ್ಲಿ ಶ್ರೀ ಜೋಶೇ ಸ್ವಾಮಿಗಳವರೂ ಯತ್ಯಾಶ್ರಮಕ್ಕೆ ಅಲಂಕಾರವಾಗಿದ್ದಾರೆ. ಎಂತೆಯೇ ನಾವು ಹೋದ ಸಲ ಇಲ್ಲಿಗೆ ಬಂದಾಗ ಒಂದೇ ದಿನವಿರಬೇಕೆಂದು ಸಂಕಲ್ಪ ಮಾಡಿದ್ದರೂ, ಅದನ್ನು ಬದಿಗಿರಿಸಿ, ೮—೧೦ ದಿನ ಇದ್ದು ಹೋದೆವು. ಆದುದರಿಂದ ನೀವು ನಮ್ಮ ಮೋರೆಯ ಕಡೆಗೆ ನೋಡದೆ ಇವರಿಗೆ ಶರಣು ಹೋಗಿ ನಿಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಬೇಕು'' ಎಂದು ಉತ್ತರಕೊಟ್ಟರು. ಆದರೂ ಜ್ಯೇಷ್ಠ ಶು. ೧ ರಿಂದ ದಶಮಿಯ ವರೆಗೆ ''ದಶಹರಾ'' ಉತ್ಸವವಿರುವದರಿಂದ, ಆ ಉತ್ಸವವನ್ನು ಇಲ್ಲಿಯೇ ಮುಗಿಸಿಕೊಂಡು ಹೋಗಬೇಕೆಂದೂ, ಆ ಕಾಲದಲ್ಲಿ ಹತ್ತು ದಿನಗಳ ವರೆಗೆ ಅಖಂಡವಾಗಿ ದಿಗಂಬರ ಭಜನೆ ನಡೆಯುವಂತೆ ಏರ್ಪಾಟು ಮಾಡುವೆವೆಂದೂ ಜನರು ವಿನ್ನವಿಸಿಕೊಂಡರು. ಅದಕ್ಕೆ ಸ್ವಾಮಿಗಳು ಏನೂ

ಉತ್ತರ ಕೊಡದೆ ಮಹಾರಾಜರ ನೋರೆಯ ಕಡೆಗೆ ನೋಡಿ ನಗಹತ್ತಿದರು. ಮಹಾರಾಜರ ಇಚ್ಛೆಯಿದ್ದರೆ ಮಾತ್ರ ತಾವು ಅಲ್ಲಿ ನಿಲ್ಲುವೆವೆಂದೂ, ಇಲ್ಲವಾದರೆ ಹೊರಟು ಹೋಗಬೇಕೆಂದೂ ಸ್ವಾಮಿಗಳ ಇಚ್ಛೆಯಿದ್ದಂತೆ ಕಂಡಿತು. ಮಹಾರಾಜರು ಸ್ವಾಮಿಗಳ ಇಂಗಿತವನ್ನರಿತು ಪ್ರಾರ್ಥಿಸಿದ್ದೇನೆಂದರೆ:— ‘ ಎಲ್ಲ ಜನರ ವಿನಂತಿಗೆ ಮನ್ನಣೆಯನ್ನಿತ್ತು, ಈ ಸಲದ ದಶಹರಾ ವ್ರತವನ್ನು ಮುಗಿಸಿಕೊಂಡು ಹೋಗಬೇಕೆಂದು ನನ್ನ ಅಪೇಕ್ಷೆಯೂ ಇದೆ. ತಮ್ಮ ದರುಶನ ಉಪದೇಶಗಳಿಂದ ಈ ಭಾಗದ ಜನರೂ ಪುನೀತರಾಗಲಿ.’’

ದಶಹರಾ ಉತ್ಸವವೆಂದರೆ ಗಂಗೆಯ ಉತ್ಸವವು. ಇದು ಹತ್ತು ದಿನಗಳ ವರೆಗೆ ನಡೆಯುವದು. ಜೇಷ್ಠ ಶುದ್ಧ ದಶಮಿಯ ದಿವಸ ಲೋಕಪಾವನೆಯಾದ ಗಂಗೆಯು ಅವತಾರ ಮಾಡಿ ಈ ಲೋಕದಲ್ಲಿ ಪ್ರಕಟವಾದಳು. ಅವಳ ಪವಿತ್ರವಾದ ಜನ್ಮೋತ್ಸವದ ದಿನವಾದುದರಿಂದ, ಜ್ಯೇಷ್ಠ ಶುದ್ಧ ದಶಮಿಯ ದಿನವನ್ನು ಭಾವಿಕರು ಪುಣ್ಯದಿನವೆಂದು ತಿಳಿಯುವದು ಸಹಜವಿದೆ. ಜೇಷ್ಠ ಶುದ್ಧ ಪ್ರತಿಪದೆಯ ದಿವಸ ಗಂಗೆಯನ್ನು ಸ್ಥಾಪಿಸಿ, ಹತ್ತು ದಿನಗಳ ವರೆಗೆ ಅವಳ ಪೂಜಾ, ಅರ್ಚಾ, ಭಜನ ಮೊದಲಾದವುಗಳನ್ನು ಮಾಡುವ ಪರಿಪಾಠವಿದೆ. ಈ ಉತ್ಸವವು ವಿಶೇಷವಾಗಿ ನೃಸಿಂಹವಾಡಿಯಲ್ಲಿ ಒಳ್ಳೇ ವಿಜೃಂಭಣೆಯಿಂದ ನಡೆಯುವದು.

ಶ್ರೀ ಟೇಂಬೇ ಸ್ವಾಮಿಗಳು ಈ ಸಲ ಜೇಷ್ಠ ಪೌರ್ಣಿಮೆಯ ವರೆಗೆ ಗುರ್ಲಹೊಸೂರಲ್ಲಿದ್ದರು. ಪ್ರತಿಪದೆಯ ದಿನ ಮುಂಜಾನೆ ಊದುತ್ತ ಬಾರಿಸುತ್ತ ಮಲಪ್ರಭೆಗೆ ಹೋಗಿ, ಕಲಶದೊಳಗಿಂದ ನೀರನ್ನು ತಂದು ಗಂಗಾಸ್ಥಾಪನೆ ಮಾಡಿದರು. ಹತ್ತು ದಿನಗಳ ವರೆಗೆ ಗಂಗೆಯ ಉತ್ಸವವು ಯಥಾಸ್ಥಿತವಾಗಿ ನಡೆಯಿತು. ಈ ಕಾಲದಲ್ಲಿ ದತ್ತನ ನಾಮಗರ್ಜನೆಯೂ ಚಿದಂಬರನ ಗುಡಿಯಲ್ಲಿ ಅಖಂಡವಾಗಿ ಕೇಳಬರುತ್ತಿತ್ತು. ಮತ್ತು ಪ್ರತಿ ದಿವಸದಲ್ಲಿ ಶ್ರೀ ಸ್ವಾಮಿಗಳವರು ಈ ಶಾವಾಸ್ಯೋಪನಿಷತ್ತನ್ನು ಶ್ರೀಮಚ್ಛಂಕರ ಭಗವತ್ಪಾದರವರ ಭಾಷ್ಯದೊಡನೆ ರಸವತ್ತಾಗಿ ತಿಳಿಸಿ ಕೊಡುತ್ತಿದ್ದರು. ಮತ್ತು ಗಂಗಾಮಹಾತ್ಮ್ಯವನ್ನೂ ಚನ್ನಾಗಿ ವಿವರಿಸಿ

ಹೇಳುತ್ತಿದ್ದರು. ಈ ಅವಧಿಯಲ್ಲಿ ಗುಡಿಯೊಳಗೆ ದಿನಾಲೂ ೨೦೦ –೩೦೦ ಜನರ ಊಟವಾಗುತ್ತಿತ್ತು. ಮಹಾರಾಜರು ಎಲ್ಲ ವ್ಯವಸ್ಥೆಯನ್ನೂ ಸರಿಯಾಗಿ ಮಾಡಿದರು. ವೇಳಾಪತ್ರಿಕೆಗೆ ಸರಿಯಾಗಿ ಎಲ್ಲ ಕೆಲಸವೂ ನಡೆಯುತ್ತಿತ್ತು. ಪುರಾಣ, ಪುಣ್ಯಕಥೆ, ಪ್ರವಚನ ಮೊದಲಾದವುಗಳು ಕಾಲಕಾಲಕ್ಕೆ ತಪ್ಪದೇ ಸಾಗುತ್ತಿದ್ದವು. ವೇದ, ವೇದಾಂತ, ಮಂತ್ರ-ತಂತ್ರ, ಜ್ಯೋತಿಷ್ಯ, ಹಟ-ಯೋಗ, ರಾಜಯೋಗ ಮೊದಲಾದ ಅನೇಕ ವಿಷಯಗಳ ಮೇಲೆ ಮನೋ-ರಂಜಕವಾದ ಮತ್ತು ಅತ್ಯುಪಯುಕ್ತವಾದ ಪ್ರಶ್ನೋತ್ತರಗಳು ಕೇಳಲಿಕ್ಕೆ ಸಿಕ್ಕುತ್ತಿದ್ದುವು. ಸಂಜೆಯ ೪ ರಿಂದ ೫ರ ವರೆಗೆ ಸಾರ್ವಜನಿಕರು ತಮ-ತಮಗೆ ಬೇಕಾದ ಪ್ರಶ್ನೆಗಳನ್ನು ಕೇಳಬಹುದೆಂದು ನಿಯಮಿತವಾಗಿತ್ತು. ಅದರೆ ದುರ್ದೈವದ ಮಾತೆಂದರೆ ತಮ್ಮ ಸಾಂಸಾರಿಕ ಅಡಚಣೆಗಳನ್ನು ವಿವರಿಸಿ, ಅವುಗಳ ಪರಿಹಾರೋಪಾಯಗಳನ್ನು ಕೇಳುವ ಜನರೇ ಹೆಚ್ಚಾ-ಗಿದ್ದರು. ಸ್ವಾಮಿಗಳು ಆಯುರ್ವೇದದಲ್ಲಿಯೂ ನಿಷ್ಣಾತರಿದ್ದರು. ಅವರು ಆ ಕಾಲಕ್ಕೆ ಅನೇಕರಿಗೆ ಯೋಗ್ಯವಾದ ಔಷಧಿಗಳನ್ನೂ, ಮಂತ್ರಗಳನ್ನೂ ಹೇಳಿಕೊಟ್ಟು, ಎಲ್ಲರನ್ನೂ ಸಮಾಧಾನ ಮಾಡಿ ಕಳಿಸುತ್ತಿದ್ದರು.

ಹೀಗೆ ಸರ್ವೋಪಕಾರಕವಾದ ಈ ಕಾರ್ಯಕ್ರಮವು ಹದಿನೈದು ದಿನಗಳ ವರೆಗೆ ನಡೆಯಿತು. ದ್ವಾದಶಿಯ ದಿವಸ ಬ್ರಾಹ್ಮಣ ಸಂತರ್ಪಣೆಯು ನಡೆ-ಯಿತು. ತ್ರಯೋದಶಿಯ ದಿವಸ ಶ್ರೀ ಸ್ವಾಮಿಗಳವರು ಬಡ್ಲಿಗೆ ದಯ-ಮಾಡಿಸಿ, ಅಲ್ಲಿ ದೀಕ್ಷಿತರ ಮನೆಯೊಳಗೆ ಭಿಕ್ಷೆಯನ್ನು ಸ್ವೀಕಾರ ಮಾಡಿದರು. ಪೌರ್ಣಿಮೆಯ ದಿನ ಗುರ್ಲಹೊಸೂರೊಳಗೆ ಭಿಕ್ಷೆ ತೀರಿಸಿಕೊಂಡು ಸ್ವಾಮಿಗಳು ಅಸುಂಡಿಯ ಮಾರ್ಗವಾಗಿ ಧಾರವಾಡಕ್ಕೆ ಹೊರಟರು. ಮಹಾರಾಜರೂ ಅವರ ಶಿಷ್ಯರೂ ಸಹ ಅವರ ಸಂಗಡಲೇ ಹೊರಟರು. ಆ ದಿವಸ ರಾತ್ರಿಯು ಅಸುಂಡಿಯಲ್ಲಿಯೇ ಕಳೆಯಿತು. ಮರುದಿವಸ ಭಿಕ್ಷೆಯು ದೊಡ್ಡವಾಡದಲ್ಲಿ ಆಯಿತು. ಅಲ್ಲಿಂದ ಕಲ್ಲೂರ ಮೇಲೆ ಹಾಯ್ದು ಇಬ್ಬರೂ ಸತ್ಪುರುಷರು ಧಾರವಾಡವನ್ನು ಮುಟ್ಟಿದರು. ಮದೀಹಾಳದ ನರಸಿಂಹದೇವರ ಗುಡಿಯಲ್ಲಿ ಅವರಿಗೆ ಇಳಕೊಳ್ಳಲಿಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಶ್ರೀ ಟೇಂಬೇ ಸ್ವಾಮಿಗಳು ಅಲ್ಲಿ ಒಂದು ದಿನ ಇದ್ದು, ಮರುದಿವಸ ಭಿಕ್ಷೆಯಾದ ಮೇಲೆ

ಧೋ ಧೋ ಎಂದು ಸುರಿಯುತ್ತಿರುವ ಮಳೆಯಲ್ಲಿ ಧಾರವಾಡವನ್ನು ಬಿಟ್ಟು ಹೊರಟರು. ಆ ಸಲದ ಅವರ ಚಾತುರ್ಮಾಸ್ಯವು ಧಾರವಾಡ ಜಿಲ್ಲೆಯ ಹಾವನೂರಲ್ಲಾಯಿತು. ಮಹಾರಾಜರು ಮುಂದೆ ೫—೬ ದಿನ ಧಾರವಾಡದಲ್ಲಿ ಇದ್ದು, ಅಲ್ಲಿಂದ ಚಾತುರ್ಮಾಸ್ಯಕ್ಕಾಗಿ ಗಲಗಲಿಗೆ ಹೋದರು.

ಅದೇ ವರುಷ, ಎಂದರೆ ಶಾ. ಶ. ೧೮೩೨ನೆಯ ಪೌಷ ಮಾಸಕ್ಕೆ ಶ್ರೀ ಟೇಂಬೇ ಸ್ವಾಮಿಗಳು ಕೊನೆಯ ಸಲ ಗುರ್ಲಹೊಸೂರಿಗೆ ಬಂದರು. ಆ ಸಲದ ಅವರ ಚಾತುರ್ಮಾಸ್ಯವು ಹಾವನೂರಲ್ಲಾಯಿತೆಂದು ಮೇಲೆ ಬರೆದಿದೆ. ಹಾವನೂರಿಂದ ಅವರು ಗೋಕರ್ಣಕ್ಕೆ ಹೋಗಿ, ಗೋಕರ್ಣದಿಂದ ಮತ್ತೆ ಗುರ್ಲಹೊಸೂರಿಗೆ ಬಂದರು. ಈ ಸಾರೆ ಅವರು ಮೂರು ದಿನಗಳವರೆಗೆ ಗುರ್ಲಹೊಸೂರಲ್ಲಿದ್ದರು. ಆ ಕಾಲಕ್ಕೆ ನಮ್ಮ ಚರಿತ್ರನಾಯಕರು ಗಲಗಲಿಯಿಂದ ತಿರುಗಿ ಬಂದು, ಸಭಾಮಂಟಪದ ಕೆಲಸವನ್ನು ಕೈಕೊಂಡಿದ್ದರು. ಸ್ವಾಮಿಗಳು ಗುರ್ಲಹೊಸೂರ ಬಿಡುವ ಮುಂಚೆ, ಶ್ರೀ ವಿಷ್ಣುಬುವಾ ಅವರನ್ನು ಕರೆದು:— ''ಇಲ್ಲಿಯ ಹವೆ ಕೆಟ್ಟು ರೋಗವಾಗುವ ಸಂಭವವಿದೆ. ಮುಂದಿನ ಕಾಲವು ಕಂಟಕಮಯವಾಗಿದೆ. ಅಶಾಂತಿಯು ಹೆಚ್ಚುವ ಲಕ್ಷಣವಿದೆ. ನಿಮಗೆ ಅನೇಕ ತರದ ಎಡರುಗಳನ್ನು ಎದುರಿಸುವ ಪ್ರಸಂಗ-ಬರಬಹುದು ಗುರುಕೃಪೆಯಿಂದ ಎಲ್ಲವೂ ಸರಿಯಾಗಿ ಕೊನೆಗಾಣುವದು. ನೀವು ಧೈರ್ಯಬಿಡುವ ಕಾರಣವಿಲ್ಲ. ಆದರೂ ಎಚ್ಚರಿಕೆಯಿಂದಿರಬೇಕಾಗುವದೆಂಬದನ್ನು ಮಾತ್ರ ಮರೆಯಬೇಡಿರಿ'' ಎಂದು ಯಥಾರ್ಥವಾಗಿ ಭವಿಷ್ಯವನ್ನು ಸೂಚಿಸಿದರು.

ಶ್ರೀ ಟೇಂಬೇ ಸ್ವಾಮಿಗಳು ಗುರ್ಲಹೊಸೂರಿಂದ ಹೊರಟವರು ಕೃಷ್ಣಾ ತಟಾಕಕ್ಕೆ ಹೋಗಬೇಕೆಂಬ ಉದ್ದೇಶದಿಂದ ಗಲಗಲಿಯ ಮಾರ್ಗವಾಗಿ ಪ್ರವಾಸ ಮಾಡಹತ್ತಿದರು. ಈ ಪ್ರವಾಸದಲ್ಲಿ ಅವರಿಗೆ ಒಂದು ಅದ್ಭುತವಾದ ಅನುಭವ ಬಂತು. ದಾರಿಯೊಳಗೆ ಅವರೊಂದು ದಿನ ಸಂಜೆಗೆ ವಿಜಾಪುರ ಜಿಲ್ಲೆಯೊಳಗಿನ ಶೆಲ್ಲೀಕೇರಿ ಎಂಬ ಗ್ರಾಮವನ್ನು ಮುಟ್ಟಿದರು. ಸ್ವಾಮಿಗಳು ಎಂದೂ ಯಾರ ಮನೆಯಲ್ಲಿಯೂ ವಸತಿ ಮಾಡುತ್ತಿರಲಿಲ್ಲೆಂಬದು ವಾಚಕರಿಗೆ ಗೊತ್ತಿರಲು ಸಾಕು. ಅವರು ಯಾವಾಗಾದರೂ ಗುಡಿಗುಂಡಾರಗಳಲ್ಲಿಯೇ

ವಾಸಮಾಡತಕ್ಕವರು. ಆದರಂತೆ ಆ ದಿನ ಅವರು ಶೆಲ್ಲೀಕೇರಿ ಊರ ಹೊರಗೆ ಹಳ್ಳದ ದಂಡೆಯ ಮೇಲಿರುವ ಶಿವಮಂದಿರದಲ್ಲಿ ವಾಸಮಾಡಿದ್ದರು. ಮರುದಿನ ಮುಂಜಾನೆ ಅವರು ನಾಲ್ಕು ಗಂಟೆಗೆ ಎದ್ದರು. ಮತ್ತು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಅಲ್ಲಿಂದ ಹೊರಡಲಿಕ್ಕೆ ಸಿದ್ಧರಾದರು. ಅಷ್ಟೊತ್ತಿಗೆ ೪-೩೦ ಅಥವಾ ೫ ಗಂಟೆಯಾಗಿರಬಹುದು. ಅಷ್ಟರಲ್ಲಿ ಹಣೆಯ ಮೇಲೆ ಭವ್ಯವಾಗಿ ಕುಂಕುಮ ಹಚ್ಚಿದ ಪ್ರೌಢ ಸ್ತ್ರೀಯೊಬ್ಬಳು ಬಂದು ಅವರಿಗೆ ನಮಸ್ಕಾರಮಾಡಿ ನಿಂತಳು. ಮತ್ತು ಸ್ವಾಮಿಗಳಿಗೆ— "ದಯಮಾಡಿ ಇದೊಂದು ದಿನ ಇಲ್ಲಿ ನಿಂತು ಭಿಕ್ಷೆಯನ್ನು ತೀರಿಸಿಕೊಂಡು ಹೋಗಬೇಕು" ಎಂದು ವಿಜ್ಞಾಪನೆ ಮಾಡಿಕೊಂಡಳು. ಅದಕ್ಕೆ ಸ್ವಾಮಿಗಳು ಚಕಿತರಾಗಿ ಹೇಳಿದರು— "ಇಲ್ಲ; ನನಗೆ ಗಡಿಬಿಡಿಯಿರುವದರಿಂದ ಇಲ್ಲಿ ನಿಲ್ಲಲಿಕ್ಕೆ ಅವಕಾಶವಿಲ್ಲ. ದಯವಿಟ್ಟು ಕ್ಷಮಿಸಬೇಕು" ಆದರೆ ಆ ಸಾಧ್ವಿಯು ಮತ್ತೂ ಆಗ್ರಹಪಡಿಸ-ಹತ್ತಿದಳು – "ಅಲ್ಲಿ ಆವರ* ಕಡೆಗೆ ಹದಿನೈದು ದಿನಗಳ ವರೆಗೆ ಇರಲಿಕ್ಕೆ ನಿಮಗೆ ಸಂಕೋಚವಾಗಲಿಲ್ಲ. ಇಲ್ಲಿ ಒಂದು ದಿನ ಇರ್ರಿ, ಎಂದು ಹೇಳಿದರೆ ಇಲ್ಲದ ಕಾರಣವನ್ನು ಮುಂದು ಮಾಡುತ್ತಿರುವಿರಿ. ಅದನ್ನೇನೂ ನಾನು ಕೇಳುವವಳಲ್ಲ. ನೀವು ಇಂದು ಇಲ್ಲಿ ಭಿಕ್ಷೆಯನ್ನು ತೀರಿಸಿಕೊಂಡೇ ಹೋಗ ಬೇಕು. ಹಾಗೆಯೇ ಹೋಗಬಾರದು." ಬೆಳಗು ಮುಂಜಾನೆ ಇನ್ನೂ ಕತ್ತಲೆಯಿರುವಾಗ ಮತ್ತು ಯಾರೂ ಇಲ್ಲದ ಏಕಾಂತ ಸ್ಥಳದಲ್ಲಿ ತಮಗೆ ಇಷ್ಟು ದಿಟ್ಟತನದಿಂದ ಹೀಗೆ ಒತ್ತಾಯಪಡಿಸುವ ಸಾಹಸ ಮಾಡುವ ಈ ದಿಟ್ಟ ಸ್ತ್ರೀಯು ಯಾರಿರಬಹುದು, ಎಂದು ಸ್ವಾಮಿಗಳು ವಿಚಾರ ಮಾಡು-ತ್ತಿರುವಾಗಲೇ, ಅವಳು ನಿಂತ ನಿಂತಲ್ಲಿಯೇ ಅದೃಶ್ಯಳಾದಳು. ಇದರಿಂದ ಸ್ವಾಮಿಗಳಿಗೆ ಇನ್ನೂ ಹೆಚ್ಚಾಗಿ ದಿಗಿಲು ಬಿತ್ತು. ಇಲ್ಲಿಯೇನೋ ಕೌತುಕ ಕಾಣುತ್ತದೆ, ಎಲ್ಲವನ್ನೂ ವಿಚಾರಿಸಿ ನೋಡೋಣ, ಎಂದು ಸ್ವಾಮಿಗಳು ತಮ್ಮ ಪ್ರಯಾಣದ ವಿಚಾರವನ್ನು ಮುಂದೆ ಹಾಕಿದರು. ಅಷ್ಟರಲ್ಲಿ ಜುಮು ಜುಮು ಬೆಳಗಾಯಿತು. ಗುಡಿಯ ಪೂಜಾರಿಯು ಕಕ್ಕಡಾರತಿಗೆಂದು

---

*ಹಿಂದೂ ಹೆಂಡತಿಯು ಗಂಡನ ವಿಷಯವಾಗಿ ಮಾತಾಡುವಾಗ "ಅವರು" ಎಂದು ಹೇಳುವಳಷ್ಟೇ. ಇಲ್ಲಿ ಆ ಪತಿಪ್ರತೆಯು ಉಪಯೋಗಿಸಿದ ಶಬ್ದವೂ ಇದೇ ಅರ್ಥವನ್ನು ಸೂಚಿಸುತ್ತಿತ್ತು.

ಗುಡಿಗೆ ಬಂದನು. ಆಗ ಸ್ವಾಮಿಗಳು ಅವನಿಗೆ ''ಇದು ಯಾವ ಊರು, ಇಲ್ಲಿ ಯಾರಾದರೂ ದೊಡ್ಡ ಯೋಗ್ಯತೆಯಹೆಂಗಸರು ಆಗಿಹೋಗಿರುವರೇ ?'' ಎಂದು ಪ್ರಶ್ನೆಮಾಡಿದರು. ಅದಕ್ಕೆ ಪೂಜಾರಿಯು ಎಲ್ಲ ಸಂಗತಿಗಳನ್ನೂ ವಿವರವಾಗಿ ತಿಳಿಸಿಕೊಟ್ಟನು. ಶ್ರೀ ಚಿದಂಬರ ಮಹಾರಾಜರ ಪೂಜ್ಯಪತ್ನಿಯವರಾದ ಸೌ. ಸಾವಿತ್ರೀಬಾಯಿಯವರು ಇದೇ ಊರವರೆಂದು ಅವನ ಮಾತಿನಿಂದ ಸ್ವಾಮಿಗಳಿಗೆ ಗೊತ್ತಾಯಿತು. ತಮಗೆ ಭೆಟ್ಟಿಯಾದ ನಾರೀಶಿರೋಮಣಿಯು ಅವರೇ ಇರಬೇಕೆಂದು ಸ್ವಾಮಿಗಳು ನಿರ್ಧರಿಸಿದರು. ಗುರ್ಲಹೊಸೂರಲ್ಲಿ ಆ ಸಾಧ್ವಿಯ ಪತಿದೇವರಾದ ಶ್ರೀ ಚಿದಂಬರ ಮಹಾರಾಜರು ಕೆಲಕಾಲ ವಾಸಮಾಡಿದ್ದರಿಂದ ''ಅಲ್ಲಿ ಅವರ ಹತ್ತರ ೧೫ ದಿನಗಳ ವರೆಗೆ ನಿಲ್ಲುವಿರಿ'' ಎಂದು ಅವಳು ಹೇಳಿದ ಮಾತುಗಳಿಗೀಗ ಸರಿಯಾದ ಉಪಪತ್ತಿಯು ಹತ್ತಿದಂತಾಯಿತು.

ಸ್ವಾಮಿಗಳು ಇದರಿಂದ ಅವಾಕ್ಕಾದರು. ಶ್ರೀ ಚಿದಂಬರ ಮಹಾರಾಜರು ಆಂದಿಗೆ ದೇಹವಿಟ್ಟು ಸುಮಾರು ೯೪ ವರುಷಗಳಾಗಿದ್ದವು. ಜೀವಗಳು ಎಲ್ಲಿ, ಯಾವ ರೂಪದಿಂದ ಮತ್ತು ಹೇಗೆ ಇರುವವೆಂಬದನ್ನು ಹೇಳಲಿಕ್ಕಾಗುವದಿಲ್ಲೆಂಬದೇ ಸರಿ. ಸ್ವಾಮಿಗಳು ಸಾಕ್ಷಾತ್ತಾಗಿ ತಮ್ಮ ಮುಖದಿಂದಲೇ ಈ ಮಾತನ್ನು ಅನೇಕ ಸಲ ಶ್ರೀ ವಿಷ್ಣುಬುವಾ ಆವರಿಗೆ ಹೇಳಿದ್ದರಿಂದ, ಇದರ ಬಗ್ಗೆ ಯಾರೂ ಸಂದೇಹಪಡುವ ಕಾರಣವಿಲ್ಲ. ಸ್ವಾಮಿಗಳು ಆ ದಿನ ಆ ನಾರೀಮಣಿಯ ತೌರುಮನೆಯಲ್ಲಿಯೇ ಭಿಕ್ಷೆಯನ್ನು ತೀರಿಸಿಕೊಂಡು ಗಲಗಲಿಯ ಹಾದೀ ಹಿಡಿದರು.

೧೩ ಮಹಾರಾಜರು ಮತ್ತು ಲೋಕಮಾನ್ಯ ಟಿಳಕರು

ಭಾರತದ ರಾಜಕಾರಣದಲ್ಲಿ ಲೋಕಮಾನ್ಯ ಟಿಳಕರ ಸ್ಥಾನವು ಉಚ್ಚವಾಗಿದೆ. ಈಗಿನ ಯುಗವನ್ನು ಗಾಂಧೀಯುಗವೆಂದು ಕರೆಯುವಂತೆ ಹಿಂದಿನ ಯುಗವನ್ನು ''ತಿಲಕ ಯುಗ''ವೆಂದು ಕರೆದರೂ ತಪ್ಪಾಗಲಿಕ್ಕಿಲ್ಲ. ಸುಮಾರು ೨೦—೩೦ ವರುಷಗಳ ವರೆಗೆ ಲೋಕಮಾನ್ಯ ಟಿಳಕರು ಭಾರತದ ರಾಜಕಾರಣದಲ್ಲಿ ಕೈಹಾಕಿ ಅದಕ್ಕೊಂದು ನಿಶ್ಚಿತವಾದ ಸ್ವರೂಪವನ್ನು ತಂದುಕೊಟ್ಟರು. ಅವರ ಕರ್ತೃತ್ವ ಶಕ್ತಿಯು ರಾಜಕಾರಣದಲ್ಲಿ ವಿಶೇಷವಾಗಿ ಪ್ರಕಟವಾದರೂ ಅವರು ಬರೀ ರಾಜಕಾರಣ ಪಟುಗಳಾಗಿದ್ದಿಲ್ಲ. ಅವರು ಪಂಡಿತರೂ ಆಹುದು. ಸ್ವಾರ್ಥ ತ್ಯಾಗಿಗಳೂ ಆಹುದು. ಹಿಂದೂ ಸಂಸ್ಕೃತಿಯ ಮರ್ಮವನ್ನು ಅವರು ಸರಿಯಾಗಿ ಕಂಡು ಹಿಡಿದಿದ್ದರಲ್ಲದೆ, ಅದರ ಮುಖ್ಯ ಪುರಸ್ಕರ್ತರೂ ಆಗಿದ್ದರು.

ಲೋಕಮಾನ್ಯರು ಹುಟ್ಟಿದ್ದು ಇಸ್ವಿ ಸನ್ ೧೮೫೬ ರಲ್ಲಿ. ಈ ಕಾಲವೆಂದರೆ ಭಾರತದ ಇತಿಹಾಸದೊಳಗೆ ಒಂದು ಕ್ರಾಂತಿಯುಗವೆಂಬದು ವಾಚಕರಿಗೆ ಗೊತ್ತಿದೆ. ಆ ಕಾಲಕ್ಕೆ ಅನೇಕ ಸತ್ಪುರುಷರು ಹುಟ್ಟಿ ಭಾರತದ ಧರ್ಮವನ್ನು ಕಾಯ್ದುಕೊಂಡಂತೆ, ಅನೇಕ ರಾಜಕಾರಣಿಗಳೂ ಹುಟ್ಟಿ ಭಾರತದ ಸ್ವಾತಂತ್ರ್ಯ ಚಳವಳಿಗೆ ಪ್ರೋತ್ಸಾಹನೆ ಕೊಟ್ಟರೆಂಬದು ಇತಿಹಾಸ ಪ್ರಸಿದ್ಧ ಮಾತಾಗಿದೆ. ಇಂಗ್ಲೀಷರ ಆಳಿಕೆ ಸುರುವಾಗಿ, ಭಾರತದಲ್ಲಿ ಸ್ವಾಭಿಮಾನ ಶೂನ್ಯತೆಯು ಹಬ್ಬಿದ ಅತಿ ಕಠಿಣ ಕಾಲದಲ್ಲಿ ಲೋಕಮಾನ್ಯರು ಮುಂದೆ ಬಂದು, ನಮ್ಮ ಧರ್ಮ, ಶಿಕ್ಷಣ, ಸಂಸ್ಕೃತಿ ಮೊದಲಾದವುಗಳ ಪರಂಪರೆಯು ಉಜ್ವಲವಾದುದೆಂದೂ, ಪಾಶ್ಚಿಮಾತ್ಯರ ಅಂಧಾನುಕರಣದಿಂದ ನಮ್ಮ ಘಾತವಾಗಬಹುದಲ್ಲದೆ ಪ್ರಗತಿಯು ಎಂದೂ ಆಗಲಾರದೆಂದೂ ಡಂಗುರ ಸಾರಿದರು. ರಾಷ್ಟ್ರೀಯತ್ವ ಪೋಷಕವಾದ ವಿಚಾರಗಳನ್ನು



ಕೈ. ವಾ. ಲೋಕಮಾನ್ಯ ಬಾಳ ಗಂಗಾಧರ
ಟಿಳಕರು

ಜನ್ಮ, ಶಾ. ೩-೭-೧೭೮೬ ನಿಧನ, ಶಾ. ೧-೮-೧೮೪೨

ಹರಡುವದಕ್ಕಾಗಿ ಅವರು ತಮ್ಮ ನೇತೃತ್ವದ ಕೆಳಗೆ ನಡೆಯುವ ಶಿಕ್ಷಣಾಲಯ ಗಳನ್ನೂ ವರ್ತಮಾನ ಪತ್ರಗಳನ್ನೂ ಸುರುವು ಮಾಡಿದರು. ಇಂಗ್ಲೀಷರ ಆಳಿಕೆಯು ಪ್ರಾರಂಭವಾದ ಮೇಲೆ ಸ್ವಾರ್ಥತ್ಯಾಗದ ಬೀಜಗಳನ್ನು ಎಲ್ಲಕ್ಕೂ ಮೊದಲು ಬಿತ್ತಿದವರು ಇವರೇ ರಾಷ್ಟ್ರಕ್ಕಾಗಿ ಇವರು ಅನೇಕ ಸಲ ಸೆರೆಮನೆ ವಾಸವನ್ನೂ ಅನುಭವಿಸಬೇಕಾಯಿತು. ಆದರೆ ಅವರು ಯಾವುದಕ್ಕೂ ಹಿಂಜರಿಯಲಿಲ್ಲ ಅವರು ವಿದ್ವನ್ಮಾನ್ಯವಾದ ಅನೇಕ ಉತ್ಕೃಷ್ಟ ಗ್ರಂಥಗಳನ್ನು ಬರೆದು ಮಾಕ್ಸ್‌ಮುಲ್ಲರರಂಥವರ ಆದರವನ್ನು ಸಂಪಾದಿಸಿದರು. ಅವರ "ಗೀತಾ ರಹಸ್ಯ"ವಂತೂ ಅವರ ದಿವ್ಯವಾದ ಜೀವನಕ್ಕೆ ಕಳಸವನ್ನು ಇಟ್ಟಂತಾಗಿದೆ

ಲೋಕಮಾನ್ಯ ಟಿಳಕರು ಸ್ವತಃ ಒಳ್ಳೇ ಕರ್ಮನಿಷ್ಠರಾದ ಬ್ರಾಹ್ಮಣ-ರೆಂದೆನಿಸಿಕೊಳ್ಳದಿದ್ದರೂ, ಅವರ ಧರ್ಮ ಶ್ರದ್ಧೆಯೂ ದೇವಭಕ್ತಿಯೂ ವಿಶೇಷವಾಗಿದ್ದವು. ಅವರ ತಾತ್ವಿಕ ಭೂಮಿಕೆಯು "ಜ್ಞಾನಯುಕ್ತ-ಭಕ್ತಿ-ಪ್ರಧಾನ ಕರ್ಮಯೋಗವು" ಎಂದು ಕರೆಯಲ್ಪಟ್ಟಿದೆ ಎಂತೆಯೇ ಟಿಳಕರು ನಮ್ಮ ಚರಿತ್ರನಾಯಕರ ವಿಶೇಷ ಪ್ರೇಮಾದರಗಳಿಗೆ ಒಳಗಾಗಿದ್ದರು. ಟಿಳಕ-ರೆಂದರೆ ಗೀತೆಯಲ್ಲಿ ಹರ್ಷಿಸಲ್ಪಟ್ಟ ಯೋಗಭ್ರಷ್ಟರೊಬ್ಬರೆಂದು ಮಹಾ-ರಾಜರು ಸ್ಪಷ್ಟವಾಗಿಯೇ ಹೇಳುತ್ತಿದ್ದರು. ಭಾರತದ ಉದ್ಧಾರವನ್ನು ಮಾಡಲಿಕ್ಕೆ ಹುಟ್ಟಿಬಂದ ಅನೇಕ ಮಹಾಪುರುಷರಲ್ಲಿ ಟಿಳಕರು ಒಬ್ಬರೆಂದು ಮಹಾರಾಜರ ಅಭಿಪ್ರಾಯವಾಗಿತ್ತು. ಈ ಕಾರಣದಿಂದ ಮಹಾರಾಜರು ಲೋಕಮಾನ್ಯರ ದರುಶನ ಹುತ್ತು ಉಪದೇಶಗಳ ಲಾಭವನ್ನು ಈ ಭಾಗದ ಜನರಿಗೆ ಮಾಡಿಕೊಡಬೇಕೆಂದು ಬಯಸಿದ್ದರೆ ಆಶ್ಚರ್ಯವಿಲ್ಲ.

ಲೋಕಮಾನ್ಯರಂತಹ ಅದ್ಭುತ ವ್ಯಕ್ತಿಗಳು ಸ್ವಾಮೀ ಮಹಾರಾಜ ರಂಥವರಲ್ಲಿಗೆ ಬಂದು ಹೇಗೆ ವಿನೀತರಾದರೆಂಬದನ್ನು ನೋಡುವದು ಬಲು ಉದ್ಬೋಧಕವಾಗಿದೆ. ನಿಜವಾಗಿ ನೋಡಿದರೆ ಒಂದೊಂದು ರೀತಿಯಲ್ಲಿ ಇಬ್ಬರೂ ದೊಡ್ಡವರೇ. ಆವರಿಬ್ಬರ ಜೀವನಗಳನ್ನು ತುಲನೆ ಮಾಡುವದು ಸದ್ಯಕ್ಕೆ ಅಪ್ರಸ್ತುತವೂ, ಅಯೋಗ್ಯವೂ ಆಗಿದೆ. ಆದರೂ ಅವರಲ್ಲಿರುವ

ಸಾಮ್ಯಾಸಾಮ್ಯಗಳು ಸ್ಪಷ್ಟವಾಗಿವೆ. ಇಬ್ಬರೂ ಜನ್ಮತಃ ಜನರ ಮುಂದಾಳುಗಳು. ಜನ ಸಮೂಹವನ್ನು ಕೂಡಿಸಿ ಅವರಿಗೆ ಮಾರ್ಗದರ್ಶನ ಮಾಡುವದು ಇಬ್ಬರ ಜೀವನದ ವೈಶಿಷ್ಟ್ಯವಾಗಿತ್ತು. ಆದರೆ ಅವರವರ ಜೀವನದ ಮುಖ್ಯ ಉದ್ದೇಶ ಅಥವಾ ಧ್ಯೇಯಗಳು ಮಾತ್ರ ಬೇರೆಯಾಗಿದ್ದವು. ಜನರನ್ನು ಕೂಡಿಸಿ ಉಪಾಸನಾ ಮಾರ್ಗ ಅಥವಾ ಧರ್ಮವನ್ನು ಬೋಧಿಸುವದು ಶ್ರೀ ಸ್ವಾಮೀ ಮಹಾರಾಜರ ಜೀವನ ರಹಸ್ಯವಾಗಿದ್ದರೆ, ಸ್ವರಾಜ್ಯದ ಅಭಿವೃದ್ಧಿಯನ್ನು ಮಾಡುವದು, ಲೋಕಮಾನ್ಯರ ಕೆಲಸವಾಗಿತ್ತು. ಧರ್ಮಸ್ಥಾಪನೆಯು ಮಹಾರಾಜರಿಗೆ ಸ್ವಯಂ ಸಿದ್ಧವಾಗಿದ್ದರೆ, ಲೋಕಮಾನ್ಯ ಟಿಳಕರಿಗೆ ಸ್ವರಾಜ್ಯ ಸ್ಥಾಪನೆಯು ಜನ್ಮದಿಂದ ಬಂದ ಉಪಕ್ರಮವಾಗಿತ್ತು. ಮಹಾರಾಜರು ಚಿದಂಬರ ಭಕ್ತಿಗೆ ಅನುಷಂಗಿಕವಾಗಿ ದೇಶಭಕ್ತಿಯ ಪ್ರಚಾರ ಮಾಡಿದರೆ ಲೋಕಮಾನ್ಯರು ಗಣಪತಿ ಉತ್ಸವ ಮೊದಲಾದವುಗಳ ಮುಖಾಂತರ ರಾಷ್ಟ್ರ ಭಾವನೆಯನ್ನು ಉದ್ದೀಪನಗೊಳಿಸಿದರು. ಆದರೆ ಇದರಿಂದ ಮಹಾರಾಜರು ರಾಷ್ಟ್ರಭಕ್ತಿಯನ್ನು ಉಪೇಕ್ಷಿಸುತ್ತಿದ್ದರೆಂದಾಗಲೀ ಅಥವಾ ಲೋಕಮಾನ್ಯ ಧರ್ಮ ಶ್ರದ್ಧೆಯು ಗೌಣವಾಗಿತ್ತೆಂದಾಗಲೀ ಯಾರೂ ತಿಳಿಯಬಾರದು. ಮಹಾರಾಜರೂ ತಮ್ಮ ಕೈಯಿಂದಾದಷ್ಟು ರಾಷ್ಟ್ರ ಕಾರ್ಯಮಾಡಿ ರಾಜಕಾರಣದ ಋಣವನ್ನು ತೀರಿಸಿದರು. ದಾಸಬೋಧದಲ್ಲಿ ಹೇಳಿದಂತೆ, ಅವರು ಆಧ್ಯಾತ್ಮ ಪ್ರಧಾನವಾಗಿ ರಾಜಕಾರಣ ಮಾಡಿದರೆ, ಲೋಕಮಾನ್ಯರು ರಾಜಕಾರಣ ಪ್ರಧಾನರಾಗಿ ಆಧ್ಯಾತ್ಮ ಮಾಡಿದರು. ಇಬ್ಬರೂ ಉತ್ಕಟ ದೇಶಭಕ್ತರು. ಇಬ್ಬರಿಗೂ ಸ್ವದೇಶಿಯ ಮೇಲೆ ವಿಶೇಷ ಪ್ರೇಮ. ಮಹಾರಾಜರು ಯಾವಾಗಲೂ ಕೈ ನೂಲಿನ ಬಟ್ಟೆಗಳನ್ನೇ ಉಪಯೋಗಿಸುತ್ತಿದ್ದರೆಂದೂ, ಪರದೇಶೀ ಸಕ್ಕರೆ ಮೊದಲಾದವುಗಳನ್ನು ಎಂದೂ ಮುಟ್ಟುತ್ತಿರಲಿಲ್ಲೆಂದೂ ಹೇಳಿದರೆ ಸಾಕು. ಇಬ್ಬರ ಬುದ್ಧಿಯು ತೀಕ್ಷ್ಣವಾದುದು. ಇಬ್ಬರೂ ವ್ಯವಹಾರ ಚತುರರು. ಆದರೆ ಮಹಾರಾಜರು ಸತ್ಕಾರ್ಯಗಳಿಗೆ ಉತ್ತೇಜನ ಕೊಟ್ಟರೆ, ಲೋಕಮಾನ್ಯರು ರಾಷ್ಟ್ರಪೋಷಕವಾದ ಕಾರ್ಯಗಳಿಗೆ ಪುಟಕೊಡುತ್ತಿದ್ದರು. ಹೀಗೆ ಈ ಮಹಾಪುರುಷರಿಬ್ಬರ ಜೀವನದ ಕಾರ್ಯಗಳು ಪರಸ್ಪರ ಪೋಷಕವಾಗಿದ್ದವೆಂದು

ಎದೆತಟ್ಟಿ ಹೇಳಬಹುದು. ಯಾಕೆಂದರೆ ರಾಜಕಾರಣಕ್ಕೆ ಧರ್ಮದ ತಳಹದಿ ಬೇಕು. ಎಂದರೇ ರಾಜಕಾರಣವು ಜಯಶಾಲಿಯಾದೀತು. ಆದರಂತೆಯೇ ಧರ್ಮಕ್ಕೆ ರಾಜಕಾರಣದ ಆಶ್ರಯವು ಬೇಕು. ಎಂದರೆ ಮಾತ್ರ ಧರ್ಮದ ಅಭಿವೃದ್ಧಿಯಾದೀತು. ಶ್ರೀಕೃಷ್ಣಾರ್ಜುನರ ಜೋಡಿಯಿದ್ದಲ್ಲಿಯೇ ಸಂಪತ್ತು, ಜಯವು, ಪ್ರಗತಿ, ಮತ್ತು ನಿಶ್ಚಲವಾದ ನೀತಿಯಿರುವವೆಂದು ಗೀತೆಯು ಹೇಳುವದಲ್ಲವೇ? ರಾಮದಾಸ ಮತ್ತು ಶಿವಾಜಿ, ವಿದ್ಯಾರಣ್ಯ ಮತ್ತು ಹುಕ್ಕ ಬುಕ್ಕರ ಜೋಡಿಗೆ ಶ್ರೀ ಕೈವಲ್ಯಾಶ್ರಮ ಸ್ವಾಮಿ ಮತ್ತು ಲೋಕಮಾನ್ಯರನ್ನು ಹೋಲಿಸಿದರೆ ತಪ್ಪಾಗಲಿಕ್ಕಿಲ್ಲೆಂದು ತೋರುತ್ತದೆ.

ಶಾ. ಶ. ೧೮೩೮ ನೆಯ ವರುಷದ ಮಾಘಮಾಸದಲ್ಲಿ ನಮ್ಮ ಚರಿತ್ರನಾಯಕರು ಶ್ರೀ ಕ್ಷೇತ್ರ ಆಳಂದಿಗೆ ಹೋಗಿದ್ದರು. ಆಳಂದಿಯೆಂದರೆ ಶ್ರೀ ಜ್ಞಾನೇಶ್ವರ ಮಹಾರಾಜರ ಪುಣ್ಯ ಕ್ಷೇತ್ರವು. ಅಲ್ಲಿ ಜ್ಞಾನೇಶ್ವರರು ಜೀವಂತ ಸಮಾಧಿಯನ್ನು ತಕ್ಕೊಂಡ ಸಂಗತಿಯು ಪ್ರಸಿದ್ಧವಿದೆ. ಮಹಾರಾಜರ ಸಂಗಡ ಆಗ ಶಿಷ್ಯರಾದ ವಿಷ್ಣು ಬುವಾ ಒಬ್ಬರೇ ಇದ್ದರು. ಮಹಾರಾಜರು ಆಳಂದಿಯಿಂದ ತಿರುಗಿ ಬಂದು ಪುಣ್ಯಪತ್ತನದಲ್ಲಿ ಕೆಲವು ದಿನ ವಾಸವಾಗಿದ್ದರು. ಬುಧವಾರ ಪೇಟೆಯೊಳಗೆ ಜೋಗೇಶ್ವರೀ ಬೋಳದಲ್ಲಿರುವ ಜವ್ಹಾರ ಸಂಸ್ಥಾನದ ವಾಡೆಯಲ್ಲಿ ಮಹಾರಾಜರ ವಸತಿಯಿತ್ತು. ಸಂಸ್ಥಾನದ ಕಾರಕೂನರಾದ ಶ್ರೀ ವಿನಾಯಕ ನಾರಾಯಣ ಗಾಡಗೀಳ ಎಂಬವರ ಆಗ್ರಹದ ಮೇರೆಗೆ ಮಹಾರಾಜರು ಅಲ್ಲಿ ತಂಗಿದ್ದರು. ಶ್ರೀ ಗಾಡಗೀಳರವರ ಮಧ್ಯಸ್ಥಿಕೆಯಿಂದ ಒಂದು ದಿನ ಮಧ್ಯಾಹ್ನದ ಎರಡು ಗಂಟೆಗೆ ಲೋಕಮಾನ್ಯರು ಮಹಾರಾಜರ ಭೆಟ್ಟಿಗೆ ಬರುವೆವೆಂದು ಹೇಳಿಕಳಿಸಿದರು. ಆದರೆ ಮಹಾರಾಜರ ಮನಸ್ಸಿಗೆ ಈ ಮಾತು ಅಷ್ಟೊಂದು ಪ್ರಶಸ್ತವಾಗಿ ತೋರಲಿಲ್ಲ. ಲೋಕಮಾನ್ಯರಂಥವರು ತಮ್ಮ ಭೆಟ್ಟಿಗೆ ಬರುವದರಿಂದ ಇಲ್ಲದ ಲೌಕಿಕವು ಬೆಳೆದು ತೊಂದರೆಗೆಡೆಯಾಗಬಹುದು. ಆದುದರಿಂದ ತಾವಾಗಿಯೇ ಲೋಕಮಾನ್ಯರ ಮನೆಗೆ ಹೋಗಬೇಕೆಂದು ಮಹಾರಾಜರು ನಿಶ್ಚಯಿಸಿದರು. ಆದುದರಿಂದ ಅವರು ತಮ್ಮ ಶಿಷ್ಯನನ್ನು ಕರೆದುಕೊಂಡು ೨ ಗಂಟೆಯಾಗುವದರೊಳಗಾಗಿ ಲೋಕಮಾನ್ಯರ ಮನೆಗೆ

ಹೋದರು. ಲೋಕಮಾನ್ಯರು ಬಟ್ಟೆಗಳನ್ನು ಧರಿಸಿ ಮಹಾರಾಜರ ದರ್ಶನಕ್ಕೆ ಹೋಗಬೇಕೆಂದು ಸಿದ್ಧರಾಗಿ ನಿಂತಿದ್ದರು. ಮಹಾರಾಜರಂಥ ಯತಿಶ್ರೇಷ್ಠರು ತಮ್ಮಲ್ಲಿ ಬರುವದು, ಲೋಕಮಾನ್ಯರಿಗೆ ಅಪ್ಪುಸಮಂಜಸವೆನಿಸಲಿಲ್ಲ. ಅವರಿಗೆ ಮಹಾರಾಜರ ಕೃತಿಯಿಂದ ತುಸು ಅಸಮಾಧಾನವೆನಿಸಿತು. ಆದರೂ ಮಹಾರಾಜರು ಬಂದೊಡನೆ ಅವರು ವಿನಯ ಭಾವದಿಂದ ಮಹಾರಾಜರ ಮುಂದೆ ತೆಂಗಿನಕಾಯಿ ಇಟ್ಟು ನಮಸ್ಕಾರ ಮಾಡಿದರು. ಕುಶಲ ಪ್ರಶ್ನೆಗಳಾದ ಮೇಲೆ ಮಾತು ಕತೆಗೆ ಪ್ರಾರಂಭವಾಯಿತು.

ಮಹಾರಾಜರು ಚಿದಂಬರ ಮಹಾರಾಜರ ಅದ್ಭುತವಾದ ಚರಿತ್ರೆಯನ್ನು ಸ್ವಲ್ಪದರಲ್ಲಿ ಹೇಳಿ, ಕೊನೆಯ ಪೇಶವೆಯಾದ ೨ ನೆಯ ಬಾಜೀರಾಯನೂ, ಅವನ ಉಳಿದ ಸರದಾರರೂ, ಅವರೊಡನೆ ಯಾವ ತರದ ಸಂಬಂಧವನ್ನಿಟ್ಟುಕೊಂಡಿದ್ದರೆಂಬದನ್ನು ವಿವರವಾಗಿ ತಿಳಿಸಿದರು. ಇಷ್ಟೇ ಅಲ್ಲದೆ ಅವರೆಲ್ಲರ ವಾಡೆಗಳು ಗುರ್ಲಹೊಸೂರಲ್ಲಿ ಇರುವವೆಂದೂ, ಅಲ್ಲಿ ಚಿದಂಬರ ಮಹಾರಾಜರ ಆಗಮೋಕ್ತ ಉತ್ಸವವು ಬಲು ವಿಜೃಂಭಣೆಯಿಂದ ನಡೆಯುವದೆಂದೂ ಹೇಳಿದರು. ಎಲ್ಲ ವಿವರಗಳನ್ನು ಲೋಕಮಾನ್ಯರು ಯಥಾರ್ಥವಾಗಿ ತಿಳಿದುಕೊಂಡ ಮೇಲೆ, ಪೂಜ್ಯಭಾವದಿಂದ ಕೈಜೋಡಿಸಿ ಕೇಳಿಕೊಂಡರು:— "ಸ್ವಾಮಿನ್, ತಾವು ಇಲ್ಲಿಯ ವರೆಗೆ ಬಂದು ಈ ಸಂಗತಿಯನ್ನು ತಿಳಿಸಿಕೊಟ್ಟದ್ದಕ್ಕಾಗಿ ಕೃತಜ್ಞನಾಗಿದ್ದೇನೆ. ಅದರೆ ನನ್ನ ಕಡೆಯಿಂದ ಶ್ರೀ ಸೇವೆಯು ಏನಾದರೂ ಆಗಬೇಕಾಗಿದ್ದರೆ, ದಯವಿಟ್ಟು ಅಪ್ಪಣೆ ಕೊಡಿಸೋಣವಾಗಬೇಕು. ನಾನು ಯಾವಾಗಲೂ ತಮ್ಮ ಸೇವೆಗೆ ಸಿದ್ಧನಿದ್ದೇನೆ."

ಮಹಾರಾಜರು ಮುಗುಳುನಗೆ ನಗುತ್ತ ಹೇಳಿದರು:— "ನೀವು ಜನತಾರೂಪ ಜನಾರ್ದನನ ಸೇವೆಯನ್ನು ಅಖಂಡವಾಗಿ ಮಾಡುತ್ತಲೇ ಇರುವಿರಿ. ಅದೇ ಚಿದಂಬರನ ನಿಜವಾದ ಸೇವೆಯು. ಆದರೂ ನೀವೊಂದು ಸಲ ಗುರ್ಲಹೊಸೂರಕ್ಕೆ ಬರಬೇಕೆಂದು ನಮ್ಮ ಇಚ್ಛೆಯಿದೆ. ಅಲ್ಲಿಗೆ ಬಂದರೆ ಆ ಭಾಗದ ಜನರಿಗೆ ನಿಮ್ಮನ್ನು ನೋಡುವ, ಮತ್ತು ನಿಮ್ಮ ಉಪದೇಶವನ್ನು ಕೇಳುವ ಭಾಗ್ಯವು ಸಿಕ್ಕುವದಲ್ಲದೆ, ನಿಮಗೂ ಅತ್ತ ಕಡೆಯ

ಜನರಲ್ಲಿ ರಾಷ್ಟ್ರಭಕ್ತಿಯ ಜಾಗೃತಿ ಮಾಡುವ ಅವಕಾಶ ದೊರಕುತ್ತಿದೆ. ನೀವು ಚಿದಂಬರನ ನಿಮಿತ್ತದಿಂದ ಗುರ್ಲಹೊಸೂರಿಗೆ ಬರುವದರಿಂದ, ಜನರೊಳಗೆ ಚಿದಂಬರ ಭಕ್ತಿಯ ಪ್ರಸಾರವೂ ಆಗುವಂತಿದೆ."

ಮಹಾರಾಜರ ಪ್ರೇಮ ಪೂರ್ಣವಾದ ಮಾತುಗಳಿಗೆ ಲೋಕಮಾನ್ಯರು ಮುಗ್ಧರಾಗಿ, ಮುಂದಿನ ಸಲದ ಉತ್ಸವಕ್ಕೆ ತಪ್ಪದೇ ಬರುವೆನೆಂದು ಅಭಿವಚನವನ್ನಿತ್ತರು. ಇದರಿಂದ ಮಹಾರಾಜರಿಗೆ ಸಂತೋಷವಾಯಿತು. ಲೋಕಮಾನ್ಯರು ಅವರಿಗೆ ಮತ್ತೆ ನಮಸ್ಕಾರ ಮಾಡಿ ಬೀಳ್ಕೊಟ್ಟರು.

ಶಾ. ಶ. ೧೮೮೯ (ಇಶ್ವಿ ಸನ್ ೧೯೦೭) ನೆಯ ವರುಷದ ಕಾರ್ತಿಕ ಮಾಸವು ಬಂತು. ವದ್ಯ ಪ್ರತಿಪದೆಗೆ ಚಿದಂಬರನ ಉತ್ಸವವು ಸುರುವಾಗುವದಿತ್ತು. ಆ ಉತ್ಸವಕ್ಕೆ ಲೋ. ಟಿಳಕರು ಬರತಕ್ಕವರಿರುವರೆಂಬ ಸುದ್ದಿಯು ಎಲ್ಲ ಕಡೆಗೂ ಹಬ್ಬಿತ್ತು. ಆದಕ್ಕಾಗಿ ಎಲ್ಲ ಕಡೆಯಿಂದಲೂ ಜನರು ಕೂಡಿದರು. ಆದುದರಿಂದ ಲೋಕಮಾನ್ಯರನ್ನು ಕರೆದುಕೊಂಡು ಬರಬೇಕೆಂದು ಬೈಲಹೊಂಗಲದ ವಕೀಲರಾದ ಶ್ರೀ ಕೃಷ್ಣರಾವ ಜಾಯದೇ ವಕೀಲರು ಪುಣೆಗೆ ಹೋಗಿ ಬಂದರು. ಆದರೆ ಅವರು ಬರಿಗೈಯಿಂದ ಬಂದುದರಿಂದ ಜನರೆಲ್ಲ ತೀವ್ರ ನಿರಾಶೆಯಾಯಿತು. ಕೂಡಿದ ಭಕ್ತಜನರು ಖಿನ್ನವದನರಾಗಿ ಬಿಟ್ಟರು. ಆದರೆ ಇನ್ನು ಮುಂದೆ ಏನು ಮಾಡಬೇಕೆಂಬದು ಮಾತ್ರ ಯಾರಿಗೂ ಹೊಳೆಯಲೊಲ್ಲದು. ಮಹಾರಾಜರು ಮತ್ತೆ ಯಾರನ್ನಾದರೂ ಪುಣೆಗೆ ಕಳಿಸಬೇಕೆಂದು ವಿಚಾರ ಮಾಡಹತ್ತಿದರು. ಅಷ್ಟರಲ್ಲಿ ಗುರ್ಲಹೊಸೂರ ಕೆಲ್ಕೋಸ್ಕರ ಮನೆತನದವರಾದ ಶ್ರೀ ಗಣಪತರಾಯರು ಮಹಾರಾಜರ ಕಡೆಗೆ ಬಂದು ಕೈಜೋಡಿಸಿಕೊಂಡು ಹೇಳಿದರು— "ಸ್ವಾಮಿನ್, ತಾವು ಚಿಂತೆ ಮಾಡುವ ಕಾರಣವಿಲ್ಲ. ಏನು ಬೇಕಾದ್ದು ಮಾಡಿ ನಾನು ಲೋಕಮಾನ್ಯರನ್ನು ಈ ಸಲದ ಉತ್ಸವಕ್ಕೆ ತಪ್ಪದೇ ಕರೆದುಕೊಂಡು ಬರುವೆನು. ಇದಕ್ಕೆಂದೂ ತಪ್ಪಲಿಕ್ಕಿಲ್ಲ. ತಾವು ಕೃಪೆಮಾಡಿ ನನಗೆ ಅಪ್ಪಣೆ ಕೊಡಬೇಕು."

ಶ್ರೀ ಗಣಪತರಾಯರ ಉತ್ಸಾಹವು ಅವರಿಮಿತವಾಗಿತ್ತು. ಅವರ ಕಡೆಯಿಂದ ಆ ಕೆಲಸವು ಆಗುವದೆಂಬ ಬಗ್ಗೆ ಯಾರಿಗೂ ಸಂದೇಹ ಕೂಡ

ಬರುವಂತಿರಲಿಲ್ಲ. ಲೋಕಮಾನ್ಯರನ್ನು ಕರೆತರದೆ ಗುರ್ಲಹೊಸೂರಿಗೆ ತಿರುಗಿ ಕಾಲನ್ನೇ ಹಾಕಲಿಕ್ಕಿಲ್ಲೆಂದು ಅವರು ಪ್ರತಿಜ್ಞೆ ಮಾಡಿರುವಂತೆ ತೋರಿತು. ಮಹಾರಾಜರು ಸಂತೋಷದಿಂದ ಅವರನ್ನು ಹರಿಸಿ, ಬೀಳ್ಕೊಟರು.

ಗಣಪತರಾಯರು ಲೋಕಮಾನ್ಯರ ಕಡೆಗೆ ಹೋಗಿ ತಮ್ಮ ದೃಢ ನಿರ್ಧಾರವನ್ನು ಸ್ಪಷ್ಟವಾಗಿ ಹೇಳಿದರು. ನಿಜವಾಗಿ ನೋಡಿದರೆ ಲೋಕ ಮಾನ್ಯರಿಗೆ ಆಗ್ಗೆ ಗುರ್ಲಹೊಸೂರಿಗೆ ಬರಲಿಕ್ಕೆ ಅವಕಾಶವಿರಲಿಲ್ಲ. ಅವರ ಪ್ರಕೃತಿಯೂ ಸ್ವಸ್ಥವಾಗಿರಲಿಲ್ಲ. ಲೋಕಮಾನ್ಯರು ಗಣಪತರಾಯರಿಗೆ ಬಗೆಬಗೆಯಿಂದ ಹೇಳಿ ನೋಡಿದರು. ಏನೂ ಪ್ರಯೋಜನವಾಗಲಿಲ್ಲ. ''ನೀವು ಇಲ್ಲಿಂದ ಹೊರಡುವ ವರೆಗೆ ನಾನು ನಿಮ್ಮ ಬಾಗಿಲಲ್ಲಿ ಅನ್ನ-ನೀರುಗಳಿಲ್ಲದೆ ಕುಳಿತುಬಿಡುವೆನು. ನಿಮ್ಮನ್ನು ಬಿಟ್ಟುಹೋಗಿ ನಾನು ತಿರುಗಿ ಗುರ್ಲ-ಹೊಸೂರಲ್ಲಿ ಕಾಲನ್ನೇ ಇಡುವ ಹಾಗಿಲ್ಲ. ನೀವು ಬರದಿದ್ದರೆ ಸಾವಿರಾರು ಜನರಿಗೆ ನಿರಾಶೆಯಾಗುವದು. ಮತ್ತು ನೀವು ಮಹಾರಾಜರಂಥವರಿಗೆ ಕೊಟ್ಟ ವಚನವನ್ನು ಮುರಿದ ದೋಷವು ನಿಮ್ಮ ಪಾಲಿಗೆ ಬರುವದು. ಆದುದ-ರಿಂದ ಯಾವ ನೆಪವನ್ನೂ ಮುಂದೆ ಮಾಡದೆ ಬಂದೇ ತೀರಬೇಕೆಂದು ನನ್ನ ಆತ್ಯಾಗ್ರಹದ ಹಟವಿದೆ. ಪ್ರಾರ್ಥಯಿದೆ. ಸತ್ಯಾಗ್ರಹವಿದೆ'', ಎಂದು ಗಣಪತರಾಯರು ನಿಷ್ಠುರವಾಗಿ ನುಡಿದು ಬಿಟ್ಟರು. ಆದರೆ ಬರಿಯ ಬೆದರಿ-ಕೆಯ ಮಾತುಗಳಿಗೆ ಲೋಕಮಾನ್ಯರು ಮಣಿಯುವವರಲ್ಲ. ಗಣಪತರಾಯರು ಕೊನೆಗೆ ಲೋಕಮಾನ್ಯರ ಮನೆಯ ಮುಂದೆ ಎರಡು ದಿವಸ ಉಪವಾಸವನ್ನು ಮಾಡಿ ನಿಜವಾಗಿಯೂ ಸತ್ಯಾಗ್ರಹವನ್ನು ಹೂಡಿಬಿಟ್ಟರು.

ಇನ್ನು ಮಾತ್ರ ಲೋಕಮಾನ್ಯರಿಗೆ ಸುಮ್ಮನಿರುವದು ಶಕ್ಯವಿರಲಿಲ್ಲ. ಲೋಕ ಸೇವೆಯ ಅಸಿಧಾರಾವ್ರತವನ್ನು ಕೈಕೊಂಡವರು ತಮ್ಮ ಸ್ವಂತ ದ ಅನುಕೂಲತೆ ಅನನುಕೂಲತೆಗಳ ಕಡೆಗೆ ನೋಡುತ್ತ ಕೂಡುವದು ಶಕ್ಯವಿರುವ-ದಿಲ್ಲ. ತನ್ನ ಸ್ವಂತದ ಸುಖದ ಕಡೆಗೆ ನೋಡುವವನ ಕಡೆಯಿಂದ ಲೋಕ ಸೇವೆಯಾಗಲಾರದು. ಆದರೆ ಲೋಕಮಾನ್ಯರು ಲೋಕಮಾನ್ಯರೇ. ಗಣಪತ-ರಾಯರ ಮಾತು ಮತ್ತು ಕೃತಿಗಳೊಳಗಿಂದ ಹೊರಬೀಳುವ ಜನತಾರೂಪ

ಜನಾರ್ದನನ ಆಜ್ಞೆಯನ್ನು ಮನ್ನಿಸಿದ ಹೊರತು ಅವರಿಗೆ ಗತ್ಯಂತರ ಉಳಿಯಲಿಲ್ಲ. ಆದುದರಿಂದ ಅವರು ಗಣಪತರಾಯರ ಆಗ್ರಹಕ್ಕೆ ಒಳಗಾಗಿ ಗುರ್ಲಹೊಸೂರಿಗೆ ಹೊರಡತಕ್ಕದೆಂದು ನಿಶ್ಚಯಿಸಿದರು.

ಈ ವಿಜಯದಿಂಡ ಗಣಪತರಾಯರಿಗೆ ಹರ್ಷೋದ್ರೇಕವಾಯಿತು. ಅವರು ಕೂಡಲೇ ಧಾರವಾಡ, ಬೆಳಗಾಂವಿ ಮತ್ತು ಗುರ್ಲಹೊಸೂರುಗಳಿಗೆ ತಂತೀಬಿಟ್ಟು ಈ ಆನಂದದ ಸುದ್ದಿಯನ್ನು ತಿಳಿಸಿದರು. ಬೆಳಗಾಂವಿ ಸ್ಟೇಶನ್ನಿಗೆ ಇಳಿದು ಗುರ್ಲಹೊಸೂರಿಗೆ ಹೋಗುವದಕ್ಕಿಂತ, ಧಾರವಾಡ ಸ್ಟೇಶನ್ನಿಗಿಳಿಯುವದು ಹೆಚ್ಚು ಸುಖಕರವಾಗಿತ್ತು. ಬೆಳಗಾಂವಿಯಿಂದ ಗುರ್ಲಹೊಸೂರು ೪೨ ಮೈಲು ಆಗುತ್ತಿದ್ದು, ಧಾರವಾಡದಿಂದ ಅದರ ಅಂತರವು ೨೮ ಮೈಲು ಮಾತ್ರ. ಈಗಿನಂತೆ ಆಗ ಮೋಟಾರ ಗಾಡಿಗಳು ಇಲ್ಲದ್ದರಿಂದ, ಟಾಂಗಾ ಅಥವಾ ಚಕ್ಕಡಿಗಳಲ್ಲಿ ಪ್ರವಾಸ ಮಾಡಬೇಕಾಗುತ್ತಿತ್ತು. ಆದುದರಿಂದ ಲೋಕಮಾನ್ಯರು ಧಾರವಾಡದ ವರೆಗೆ ರೇಲಗಾಡಿಯಲ್ಲಿ ಬಂದು, ಅಲ್ಲಿಂದ ಬಗಿಯೊಳಗೆ ಕುಳಿತು ಗುರ್ಲಹೊಸೂರಿಗೆ ಹೋಗಬೇಕೆಂದು ನಿರ್ಣಯವಾಯಿತು.

ಗುರ್ಲಹೊಸೂರಿಗೆ ಲೋಕಮಾನ್ಯರು ಬರುವರೆಂಬ ಸುದ್ದಿಯು ಎಲ್ಲ ಕಡೆಗೂ ವಿದ್ಯುದ್ವೇಗದಿಂದ ಹಬ್ಬಿತು. ಸುತ್ತುಮುತ್ತಲಿನ ಜನರು ಲೋಕಮಾನ್ಯರನ್ನು ನೋಡಲಿಕ್ಕೆಂದು ತಂಡತಂಡವಾಗಿ ಗುರ್ಲಹೊಸೂರಿಗೆ ಹೊರಟರು. ಈ ಪ್ರಸಂಗದಲ್ಲಿ ಗುರ್ಲಹೊಸೂರಲ್ಲಿ ೧೦—೧೨ ಸಾವಿರ ಜನ ರಾದರೂ ಕೂಡಿರಬೇಕೆಂದು ಬಲ್ಲವರು ಹೇಳುತ್ತಾರೆ. ಇವರಲ್ಲಿ ಬಹು ಜನರ ಊಟದ ವ್ಯವಸ್ಥೆಯ ಭಾರವು ಮಹಾರಾಜರ ಮೇಲೆಯೇ ಬಿದ್ದಿತೆಂಬದು ಸಹಜವಿದೆ. ಆದಕೆ ಚಿದಂಬರನ ಕೃಪೆಗೊಳಗಾದ ಮಹಾರಾಜರು ಯಾವು ದಕ್ಕೂ ಎದೆಗುಂದದೆ, ಎಲ್ಲರ ವ್ಯವಸ್ಥೆಯನ್ನು ಸರಿಯಾಗಿ ಮಾಡಿ ಎಲ್ಲರ ಕೃತಜ್ಞತೆಗೂ ಪಾತ್ರರಾದರು.

ಕಾರ್ತಿಕ ವದ್ಯ ಸಪ್ತಮಿಯ ದಿನವೆಂದರೆ ಚಿದಂಬರೋತ್ಸವದ ಕೊನೆಯ ದಿನವು. ಅಂದು ಅವಭೃತ ಸ್ನಾನವಾಗಿ ಬ್ರಾಹ್ಮಣ ಸಂತರ್ಪಣೆಯ ಕೆಲಸವು

ನಡೆಯುತ್ತಿದೆ. ಲೋಕಮಾನ್ಯರು ಆ ದಿನ ಮಧ್ಯಾಹ್ನದ ಒಂದು, ಒಂದೂವರೆ ಗಂಟೆಯ ಸುಮಾರಿಕ್ಕೆ ಗುರ್ಲಹೊಸೂರಿಗೆ ಬಂದರು. ಅವರು ಧಾರವಾಡದಿಂದ ೨—೩ ತಾಸು ರಾತ್ರಿ ಇರುವಾಗಲೇ ಹೊರಟು, ನಡುನಡುವೆ ಹತ್ತು ಪೂರ ಪ್ರಮುಖರ ಸತ್ಕಾರವನ್ನು ಸ್ವೀಕರಿಸುತ್ತ. ಗುರ್ಲಹೊಸೂರಿಗೆ ಬರಬೇಕಾದರೆ ಇಷ್ಟು ವೇಳೆ ಹತ್ತಿದುದು ಸಹಜವಾಗಿದೆ. ದಾರಿಯೊಳಗೆ ಸಪದತ್ತಿಯಲ್ಲಿ, ಅವರಿಗೆ ವಿಶೇಷ ಸತ್ಕಾರವನ್ನೇರ್ಪಡಿಸಲಾಗಿತ್ತು.

ಗುರ್ಲಹೊಸೂರ ಊರಂತೂ ಅಂದು ಬಲು ಮನೋಹರವಾಗಿ ಅಲಂಕರಿಸಲ್ಪಟ್ಟಿತ್ತು. ಅಲ್ಲಲ್ಲಿಗೆ ತಳಿರು ತೋರಣಗಳನ್ನು ಕಟ್ಟಿ, ಜನರು ಬೀದಿಗಳನ್ನು ಸಿಂಗರಿಸಿದ್ದರು. ಅಲ್ಲಿಯ ಜನರ ಅಂದಿನ ಉತ್ಸಾಹಕ್ಕೆ ಪಾರಾವಾರವೇ ಇರಲಿಲ್ಲ. ಊರ ಪ್ರಮುಖರು ಊರಿಂದ ಅರ್ಧ ಮೈಲಿನ ಮೇಲೆ ಕುಳಿತು ಲೋಕಮಾನ್ಯರ ದಾರೀ ಕಾಯುತ್ತಿದ್ದರು. ಆನೆ, ಕುದುರೆ ಮತ್ತು ಮಂಗಲಕರವಾದ ವಾದ್ಯಗಳಿಂದ ಅವರು ಸಜ್ಜಾಗಿ ಕುಳಿತಿದ್ದರು. ಲೋಕಮಾನ್ಯರು ಬಂದೊಡನೆ ಅವರನ್ನು ಎದುರ್ಗೊಂಡು, ಸತ್ಕಾರಮಾಡಿ ಮೆರವಣಿಗೆಯಿಂದ ಕರಕೊಂಡು ಬರುವ ವ್ಯವಸ್ಥೆ ಮಾಡಲಾಗಿತ್ತು.

ಕಹಳೆ, ಕೊಂಬು, ತುತೂರಿ, ತಾಸೆ, ಬಜಂತ್ರಿ, ನಗಾರಿ ಮೊದಲಾದ ವಾದ್ಯಗಳು ಲೋಕಮಾನ್ಯರ ಬರುವಿಕೆಯನ್ನು ಉದ್ಘೋಷಿಸಿದವು ಲೋಕಮಾನ್ಯರು ಬಂದೊಡನೆ, ಅವರ ಬಗಿಯನ್ನು ಎಳೆಯುತ್ತಿದ್ದ ಕುದುರೆಯನ್ನು ಅಲ್ಲಿಯೇ ಬಿಟ್ಟು, ಜನರೇ ಅವರ ಗಾಡಿಯನ್ನು ಎಳೆಯುತ್ತ ಹೊರಟರು. ದಾರಿಯುದ್ದಕ್ಕೆ ಎರಡೂ ಕಡೆಗೆ ಜನರು ನಿಂತು ''ವಂದೇ ಮಾತರಂ'', ''ಲೋಕಮಾನ್ಯರಿಗೆ ಜಯವಾಗಲಿ'' ಎಂದು ಗರ್ಜನೆ ಮಾಡುತ್ತಿದ್ದರು. ಲೋಕಮಾನ್ಯರು ಕುಳಿತ ಬಗಿಯ ಮೇಲಿನ ಆವರಣವನ್ನು ತೆಗೆದು ಬಿಟ್ಟಿದ್ದರಿಂದ ಎಲ್ಲರೂ ಅವರನ್ನು ಸುಲಭವಾಗಿ ನೋಡಬಹುದಾಗಿತ್ತು. ಲೋಕಮಾನ್ಯರಿಗಾಗ ವಿಶೇಷ ವಯಸ್ಸಾಗಿರಲಿಲ್ಲ. ಅವರು ಆಗ ಜಗ ವರುಷದವರಾಗಿದ್ದರು. ಅವರ ಬಣ್ಣವು ಸಾದಗಪ್ಪು-ತಲೆಯ ಮೇಲೆ ಪಗಡಿಯನ್ನು ಹಾಕಿಕೊಂಡು, ಉದ್ದವಾದ ಬಗಲಬಂಡಿಯನ್ನು ಅವರು ಹಾಕಿಕೊಂಡಿದ್ದರು. ಕಾಲಲ್ಲಿ ಪುಣೆಯ ಮಚ್ಚೀ ಜೋಡು. ಹೆಗಲ ಮೇಲೊಂದು

ಶಲ್ಲೆಯು ಶೋಭಿಸುತ್ತಿತ್ತು. ಲೋಕಮಾನ್ಯರು ಎಲ್ಲ ಜನರನ್ನು ಸಂತೋಷದಿಂದ ನೋಡುತ್ತ ಪುರಪ್ರವೇಶ ಮಾಡಿದರು. ಅಲ್ಲಲ್ಲಿ ಜನರು ಅವರ ಮೇಲೆ ಹೂವಿನ ಮಳೆ ಸುರಿಸುತ್ತಿದ್ದರು. ಲೋಕಮಾನ್ಯರು ತಮ್ಮ ಸಂಗಡಿಗರಾದ ಪ್ರೊ. ಶಿವರಾಮ ಮಹಾದೇವ ಪರಾಂಜಪೆಯವರೊಡನೆ ಗುಡಿಯ ಬಾಗಿಲದಲ್ಲಿ ಗಾಡಿಯ ಮೇಲಿಂದ ಕೆಳಕ್ಕಿಳಿದು, ಗುಡಿಯೊಳಗೆ ಪ್ರವೇಶ ಮಾಡಿದರು. ಅಲ್ಲಿ ಅವರಿಬ್ಬರೂ ಶ್ರೀ ಚಿದಂಬರೇಶ್ವರನಿಗೂ, ಪೂಜ್ಯರಾದ ಶ್ರೀ ಬ್ರಹ್ಮಾನಂದರಿಗೂ ಭಕ್ತಿಪೂರ್ವಕವಾಗಿ ನಮಸ್ಕಾರ ಮಾಡಿ ಧನ್ಯರಾದರು. ಆ ಮೇಲೆ ಅವರು ವಿಧಿಪೂರ್ವಕವಾಗಿ ಶ್ರೀ ಕೈವಲ್ಯಾಶ್ರಮ ಸ್ವಾಮಿ ಮಹಾರಾಜರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಕುಳಿತುಕೊಂಡರು. ಆಗ ಆ ಇಬ್ಬರು ರಾಷ್ಟ್ರಸೇವಕರ ಜೋಡಿಯನ್ನು ನೋಡಿ ಮಹಾರಾಜರ ಕಣ್ಣುಗಳಿಂದ ಆನಂದಾಶ್ರುಗಳು ಉದುರಹತ್ತಿದವು. ಕುಶಲ ಪ್ರಶ್ನೆಗಳಾದ ಮೇಲೆ, ಅವರಿಬ್ಬರೂ ಮಹಾರಾಜರ ಅಪೇಕ್ಷೆಯಂತೆ, ಎತ್ತರವಾದ ಪಾವಟಿಗೆಗಳ ಮೇಲೆ ನಿಂತು ದರ್ಶನೋತ್ಸುಕರಾದ ಎಲ್ಲ ಜನರಿಗೂ ದರುಶನ ಲಾಭವನ್ನು ಕೊಟ್ಟರು. ಅಲ್ಲಿ ಕೂಡಿದ ಬ್ರಹ್ಮಸಮುದಾಯವು ಅವರಿಗೆ ಸರಿಯಾದ ಸ್ವಾಗತವಿತ್ತು ಸಂಭ್ರಮದಿಂದ ಕುಣಿದಾಡಿತು. ಪ್ರವಾಸದ ಬಳಲಿಕೆಯಿಂದ ಇಬ್ಬರೂ ದಣಿದಿದ್ದರು. ಆದುದರಿಂದ ಅವರು ಆ ಮೇಲೆ ಗಣಸತರಾವ ಕಿರ್ಲೋಸ್ಕರ ಅವರ ಮನೆಗೆ ವಿಶ್ರಾಂತಿಗೆಂದು ಹೋದರು. ಅಲ್ಲಿಗೆ ಹೋಗಿ ತುಸು ವಿಶ್ರಾಂತಿ ಪಡೆಯುವಷ್ಟರಲ್ಲಿ ಊಟದ ವ್ಯವಸ್ಥೆಯಾಗಿ ಬ್ರಾಹ್ಮಣರೆಲ್ಲ ಊಟಕ್ಕೆ ಕುಳಿತರು. ಮಹಾರಾಜರ ಆಜ್ಞೆಯಂತೆ ಇಬ್ಬರೂ ದೇಶಭಕ್ತರು ಆ ಕಾಲಕ್ಕೆ ಗುಡಿಗೆ ಬಂದು ಬ್ರಾಹ್ಮಣರ ಪಙ್ತಿಗಳೊಳಗೆ ಓಡಾಡಿ, ಎಲ್ಲರನ್ನೂ ದರುಶನ ಲಾಭದಿಂದ ತಣಿಸಿದರು. ಆ ಮೇಲೆ ಅವರು ಶ್ರೀ ಸ್ವಾಮಿಗಳವರ ಜೋಡಿಗೆ. ಊಟಕ್ಕೆ ಕುಳಿತು ಪ್ರಸಾದ ಗ್ರಹಣ ಮಾಡಿದರು. ತಾಂಬೂಲ ಸೇವೆಯಾದ ಮೇಲೆ ಮತ್ತೆ ಕಿರ್ಲೋಸ್ಕರವರ ಮನೆಗೆ ವಿಶ್ರಾಂತಿಗಾಗಿ ತೆರಳಿದರು.

೧೪ ರಾಜಕಾರಣವು ಅಧ್ಯಾತ್ಮಕ್ಕೆ ತಲೆಬಾಗಿತು

ವಸಿಷ್ಠ ಮತ್ತು ವಿಶ್ವಾಮಿತ್ರರ ಬಗ್ಗೆ ಒಂದು ಕಥೆಯು ಪ್ರಸಿದ್ಧವಿದೆ. ವಸಿಷ್ಠರು ಬ್ರಾಹ್ಮಣರು, ವಿಶ್ವಾಮಿತ್ರರು ಕ್ಷತ್ರಿಯರು. ವಿಶ್ವಾಮಿತ್ರರೇನು ಸಾಮಾನ್ಯವಾದ ವ್ಯಕ್ತಿಯಾಗಿರಲಿಲ್ಲ. ದೀರ್ಘವಾದ ತಪಸ್ಸಿನಿಂದ ಪ್ರತಿ ಸೃಷ್ಟಿಯನ್ನು ಮಾಡಬಲ್ಲ ಶಕ್ತಿಯು ಅವರಲ್ಲಿ ಪ್ರಕಟವಾಗಿತ್ತು. ವಸಿಷ್ಠರೂ ನಿಷ್ಠಾವಂತರಾದ ಬ್ರಾಹ್ಮಣರು. ಅವರಿಗೆ ದೇವ-ದೇವತೆಗಳೂ ತಲೆಬಾಗಿ ನಡೆಯುತ್ತಿದ್ದರು. ಈ ಕಾರಣದಿಂದ ವಿಶ್ವಾಮಿತ್ರರ ಮನಸ್ಸಿನಲ್ಲಿ ವಸಿಷ್ಠರ ವಿಷಯಕ್ಕೆ ಒಮ್ಮೆ ಅಸೂಯೆಯು ಹುಟ್ಟಿತು. ಆದರಂತೆ ವಸಿಷ್ಠರನ್ನು ಹಿಂದೆ ಹಾಕಬೇಕೆಂದು ಅವರು ವಿಶ್ವಪ್ರಯತ್ನ ಮಾಡಿದರು. ಆದರೆ ವಿಶ್ವಾಮಿತ್ರರ ಕ್ಷಾತ್ರತೇಜದ ಆಟವು ವಸಿಷ್ಠರ ಮುಂದೆ ಎಷ್ಟೂ ನಡೆಯಲಿಲ್ಲ. ವಿಶ್ವಾಮಿತ್ರರ ಎಲ್ಲ ಪ್ರಯತ್ನಗಳೂ ನಿರರ್ಥಕವಾದ ಮೇಲೆ ಅವರ ಬಾಯಿಂದ ಉದ್ಗಾರವೊಂದು ಹೊರಬಿತ್ತಂತೆ : ''ಧಿಗ್‌ಬಲಂ ಕ್ಷತ್ರಿಯ ಬಲಂ ಬ್ರಹ್ಮ ತೇಜೋ ಬಲಂ ಬಲಂ''— ಎಂದರೆ ಕ್ಷಾತ್ರಬಲಕ್ಕೆ ಧಿಕ್ಕಾರವಿರಲಿ, ಬ್ರಾಹ್ಮಣರ ಆಧ್ಯಾತ್ಮಿಕ ತೇಜಸ್ಸಿನ ಬಲವೇ ನಿಜವಾದ ಬಲವು. ಇತ್ಯರ್ಥವೇನೆಂದರೆ, ಆಧ್ಯಾತ್ಮ ಶಕ್ತಿಯ ಮುಂದೆ ಉಳಿದೆಲ್ಲ ತರದ ಸಾಮರ್ಥ್ಯಗಳು ಕೈಯೂರಬೇಕಾಗುತ್ತವೆ. ಗಾಂಧೀಜಿಯವರಂಥ ಸಾಮಾನ್ಯ ವ್ಯಕ್ತಿಯೊಂದು ಬ್ರಿಟಿಶ ಸಾಮ್ರಾಜ್ಯ ಶಕ್ತಿಯನ್ನು ಎದುರಿಸಿ ವಿಜಯ ಪಡೆದದ್ದು ಯಾವುದರ ಆಧಾರದ ಮೇಲೆ ? ಆತ್ಮಬಲದಿಂದಲೇ ಅಲ್ಲವೇ ? ಈ ಮಾತಿನ ಅನುಭವವು ಲೋಕಮಾನ್ಯ ಮತ್ತು ನಮ್ಮ ಚರಿತ್ರನಾಯಕರ ಭೆಟ್ಟಿಯ ಕಾಲಕ್ಕೆ ಎಲ್ಲರಿಗೂ ಬಂತು.

ಶಾ. ಶ. ೧೮೮೯ನೆಯ ವರುಷದ ಕಾರ್ತಿಕ ವದ್ಯ ಸಪ್ತಮಿಯ ದಿವಸ ಲೋಕಮಾನ್ಯರು ಗುರ್ಲಹೊಸೂರಿಗೆ ಬಂದರೆಂದು ಹೋದ ಪ್ರಕರಣದಲ್ಲಿ

ಬಂದಿದೆ. ಆ ದಿನವೇ ರಾತ್ರಿಯೊಳಗೆ ಪ್ರೊ. ಪರಾಂಜಪೆಯವರ ವ್ಯಾಖ್ಯಾನವನ್ನು ಇಡಲಾಯಿತು. ಲೋ. ಟಿಳಕರು ಆ ಸಭೆಗೆ ಅಧ್ಯಕ್ಷರಾದರು. ಸಭೆಯು ಶ್ರೀ ಚಿದಂಬರೇಶ್ವರನ ಗುಡಿಯ ದಕ್ಷಿಣಕ್ಕಿರುವ ವಿಸ್ತಾರವಾದ ಬೈಲಿನಲ್ಲಿ ಕೂಡಿತ್ತು. ಅಧ್ಯಕ್ಷ ಮತ್ತು ಭಾಷಣಕಾರರ ಸಲುವಾಗಿ, ಬೈಲಿನ ನಡುವೆ ಎತ್ತರವಾದ ಆಟ್ಟವನ್ನು ಏರ್ಪಡಿಸಲಾಗಿತ್ತು. ಸಭೆಗೆ ೧೫ ಸಾವಿರ ಜನರಾದರೂ ಕೂಡಿರಬಹುದು. ಲೋ. ಟಿಳಕರಿಗಾಗಲಿ, ಪ್ರೊ. ಪರಾಂಜಪೆಯವರಿಗಾಗಲಿ ಕನ್ನಡ ಭಾಷೆ ಬರುತ್ತಿರಲಿಲ್ಲ. ಆವರಿಬ್ಬರೂ ಮರಾಠಿಯಲ್ಲಿಯೇ ಮಾತಾಡತಕ್ಕವರು ಕೂಡಿದ ಜನರಾದರೋ ಹೆಚ್ಚಾಗಿ ಕನ್ನಡಿಗರೇ. ಆದರೂ ಲೋಕಮಾನ್ಯರು ಬರುವರೆಂಬ ಸುದ್ದಿ ಕೇಳಿ ಎರಡು ಮೂರು ದಿನ ಮುಂಚಿತವಾಗಿ ಹಳ್ಳಿಹಳ್ಳಿಯ ಜನರು ರೊಟ್ಟೀ ಕಟ್ಟಿಕೊಂಡು ಗುರ್ಲಹೊಸೂರಿಗೆ ಬಂದಿದ್ದರು. ಕೂಡಿದ ಜನರಿಗೆ ಮರಾಠಿಯು ತಿಳಿಯುವದಿಲ್ಲೆಂಬ ಕಾರಣದಿಂದ ಪ್ರೊ. ಪರಾಂಜಪೆಯವರ ವ್ಯಾಖ್ಯಾನವನ್ನು ಶ್ರೀ ಮುದವೀಡು ಕೃಷ್ಣರಾಯರೂ, ಲೋಕಮಾನ್ಯರ ಭಾಷಣವನ್ನು ಶ್ರೀ ದೇಶಪಾಂಡೆ ಗಂಗಾಧರರಾಯರೂ ಕನ್ನಡಿಸಿ ಹೇಳುತ್ತಿದ್ದರು. ಇಷ್ಟೊಂದು ಜನಸಂದಣಿಯಿದ್ದರೂ, ಎಲ್ಲರೂ ಶಾಂತ ರೀತಿಯಿಂದ ಭಾಷಣವನ್ನು ಕೇಳುತ್ತಿದ್ದರು.

ಆ ಕಾಲಕ್ಕೆ (ಸನ್ ೧೯೦೭) ಸ್ವದೇಶೀ ಚಳವಳಿಯು ಭಾರತದ ಮೂಲೆ ಮೂಲೆಯಲ್ಲಿಯೂ ತಲೆಯೆತ್ತಹತ್ತಿತ್ತು. ಕರ್ನಾಟಕವು ದೇಶಭಕ್ತಿಯ ಗಂಡುನಾಡಾದ್ದರಿಂದ, ಇಲ್ಲಿಯೂ ಅದರ ಗಾಳಿಯು ಭರದಿಂದ ಬೀಸುತ್ತಿತ್ತು. ಸನ್ ೧೯೦೫ ರಲ್ಲಿ ಬಂಗಾಲವನ್ನು ಇಬ್ಭಾಗಿಸಬೇಕೆಂದು ಲಾರ್ಡ ಕರ್ಝನರು ಮಾಡಿದ ಸೂಚನೆಯಿಂದ ಸಿಟ್ಟಿಗೆದ್ದ ಭಾರತವರ್ಷೀಯರು, ಸ್ವದೇಶೀ ವಸ್ತುಗಳನ್ನಷ್ಟೇ ಎಲ್ಲರೂ ಉಪಯೋಗಿಸಬೇಕೆಂದೂ, ಪರದೇಶದ, ಅದರಲ್ಲಿಯೂ ಇಂಗ್ಲಂಡದ ವಸ್ತುಗಳನ್ನು ಬಹಿಷ್ಕರಿಸಬೇಕೆಂದೂ, ಆಂದೋಲನವನ್ನು ಹೂಡಿದ್ದರು. ಹೀಗೆ ಆ ಪ್ರಶ್ನವು ಆಗ ಎಲ್ಲ ಕಡೆಗೂ ಪ್ರಾಮುಖ್ಯತೆಯನ್ನು ಪಡೆದಿತ್ತು. ಆದುದರಿಂದ ಪ್ರೊ. ಪರಾಂಜಪೆಯವರು ಅಂದು ಸ್ವದೇಶೀ ಚಳವಳಿಯ ಮೇಲೆಯೇ ಭಾಷಣ ಮಾಡಿದರು. ಆವರ ಭಾಷಣದ

ಸಾರವನ್ನು ನಾವೀಗ ಕೊಡುತ್ತ ಕೂಡುವದು ಅನಾವಶ್ಯಕವಿದೆ. ಅಧ್ಯಕ್ಷ-ರಾದ ಲೋಕಮಾನ್ಯರು ಮಂಡಿಸಿದ ವಿಚಾರಗಳ ಸಾರವು ಮಾತ್ರ ಹೀಗಿತ್ತು : ದೇಶದ ಉನ್ನತಿಯು ಆಯಾ ದೇಶದ ಜನರು ಮಾಡುವ ಪ್ರಯತ್ನಗಳನ್ನೇ ಅವಲಂಬಿಸಿದೆ. ಆದುದರಿಂದ ನಮ್ಮ ಜನರು ಈಗ ಸ್ವಾವಲಂಬಿಗಳಾಗು-ವದು ಅತ್ಯಾವಶ್ಯಕವಿದೆ. ಶ್ರೀ ಚಿದಂಬರ ಮಹಾಸ್ವಾಮಿಗಳವರ ಕಾಲಕ್ಕೆ ಪೇಶವೆ ದರಬಾರದ ದೊಡ್ಡ ದೊಡ್ಡ ಸರದಾರರು ಕೂಡ ಅವರಿಗೆ ಭೆಟ್ಟಿಯಾಗ-ಬೇಕೆಂಬ ಆಪೇಕ್ಷೆಯಿಂದ ಈ ಕ್ಷೇತ್ರಕ್ಕೆ ಬರುತ್ತಿದ್ದರೆಂಬದು ಎಲ್ಲರಿಗೂ ಗೊತ್ತಿದ್ದ ಮಾತು. ಈ ಮಾತಿಗೆ ಆ ಸರದಾರರು ಇಲ್ಲಿ ಕಟ್ಟಿಸಿದ ಮನೆಗಳೇ ಸಾಕ್ಷಿ ಆ ಮನೆಗಳ ಅವಶೇಷಗಳು ಇಂದಿಗೂ ಇಲ್ಲಿ ನೋಡಲಿಕ್ಕೆ ಸಿಕ್ಕು-ವಂತಿವೆ. ಹೀಗೆ ಈ ಊರ ಮಹತ್ತ್ವವು ಇತಿಹಾಸ ಪ್ರಸಿದ್ಧವಾಗಿದೆ-ಧರ್ಮ ಮತ್ತು ರಾಜಕಾರಣಗಳ ತಳಕು ಇಲ್ಲಿ ಆ ಕಾಲದಿಂದ ಇದೆ. ಆದುದರಿಂದ ಈ ಉತ್ಸವದಂತಹ ಧಾರ್ಮಿಕವೂ ಮಂಗಲಕರವೂ ಆದ ಪ್ರಸಂಗಗಳಲ್ಲಿ ದೇಶ ಕಾರ್ಯವನ್ನು ಮಾಡಿ ಅವೆರಡರ ತಳಕನ್ನು ಕಾಯ್ದು ಕೊಂಡು ಹೋಗುವದು ಎಲ್ಲ ದೇಶಾಭಿಮಾನಿಗಳ ಕರ್ತವ್ಯವಾಗಿದೆ.

ಮರುದಿನ ಮುಂಜಾನೆ ಶ್ರೀ. ವಿನೋಬಾ ರಾಮದುರ್ಗಕರ ಅವರ ಗಾಯನವು ನಡೆಯಿತು. ಅವರ ಅಂದಿನ ಜಲತರಂಗ ವಾದನವು ಅಪೂರ್ವ-ವಾಗಿತ್ತು. ಅದು ಮುಗಿದೊಡನೆ ಇಬ್ಬರೂ ದೇಶಭಕ್ತರು ಮಹಾರಾಜರಿಗೆ ನಮಸ್ಕಾರ ಮಾಡಿ ಬಿನ್ನವಿಸಿಕೊಂಡರು:— ''ಇಂದು ಊಟವಾದ ಮೇಲೆ ಬೈಲಹೊಂಗಲ ಸಂಪಗಾವಿ ಮೊದಲಾದ ಊರುಗಳ ಮೇಲಿಂದ ಬೆಳಗಾವಿಗೆ ಹೋಗತಕ್ಕವರಿದ್ದೇವೆ. ದಯವಿಟ್ಟು ಅಪ್ಪಣೆಯಾಗಬೇಕು.'' ಅದಕ್ಕೆ ಮಹಾರಾಜರು ತುಸು ನಕ್ಕು ಹೇಳಿದ್ದೇನಂದರೆ:— ''ಹೀಗೋ ! ನಿಮ್ಮ ಮನಸ್ಸಿನಲ್ಲಿ ಇಂದೇ ಹೋಗಬೇಕೆಂದಿದ್ದರೂ, ಚಿದಂಬರನು ಇನ್ನೊಂದು ದಿನ ನಿಮ್ಮನ್ನು ಇಲ್ಲಿ ಇಟ್ಟುಕೊಳ್ಳಬೇಕೆಂದೆನ್ನುತ್ತಾನೆ. ಅವನ ಇಚ್ಛೆಯ ಮುಂದೆ ಓಡುವನವರಾರು ?'' ಅದಕ್ಕೆ ಲೋಕಮಾನ್ಯರು ನಿಶ್ಚಯಪೂರ್ವಕ-ವಾಗಿಯೇ ಉತ್ತರ ಕೊಟ್ಟರು:— ''ಇಲ್ಲ, ಸ್ವಾಮಿನ್, ನಮ್ಮ ಮುಂದಿನ

ಕಾರ್ಯಕ್ರಮವನೆಲ್ಲ ಮೊದಲೇ ನಿಶ್ಚಿತವಾಗಿದೆ. ಅದನ್ನೀಗ ಬದಲಿಸುವದು ಸಾಧ್ಯವಿಲ್ಲ. ಜನರು ಅಲ್ಲಲ್ಲಿ ದಾರೀ ಕಾಯುತ್ತ ಕುಳಿತಿರಬಹುದು. ಏನೇ ಆದರೂ ನಾವಿಂದು ಇಲ್ಲಿ ನಿಲ್ಲುವದು ಸಾಧ್ಯವಿಲ್ಲ. ನಾವು ಊಟವಾದೊಡನೆ ಹೊರಡಲೇಬೇಕು. ದಯವಿಟ್ಟು ಅಪ್ಪಣೆ ದೊರೆಯಬೇಕು.'' ಅದಕ್ಕೆ ಮಹಾರಾಜರು:— ''ಒಳ್ಳೆಯದು, ನೋಡೋಣ. ಚಿದಂಬರನ ಇಚ್ಛೆಯು ಹೇಗಿರುವದೋ ಹಾಗೆ ಆಗಲಿ. ಅವನ ಇಚ್ಛೆಯನ್ನು ಮೀರಿ ನಡೆಯುವದು ಯಾರಿಗೂ ಸಾಧ್ಯವಿಲ್ಲವಷ್ಟೆ ?'' ಎಂದು ಉತ್ತರ ಕೊಟ್ಟು ಸುಮ್ಮನಾದರು.

ಲೋಕಮಾನ್ಯರು ಊಟವಾದೊಡನೆ ಹೊರಡುವಂತೆ ಎಲ್ಲ ಸಿದ್ಧತೆಯನ್ನೂ ಮಾಡಿಕೊಂಡಿದ್ದರು. ಅವರು ಹೊರಡುವದಕ್ಕಾಗಿ ಮಹಾರಾಜರಿಂದ ಅಪ್ಪಣೆಯನ್ನು ಕೂಡ ಪಡಕೊಂಡಂತೆ ಮಾಡಿದ್ದರು. ''ನಾವು ಹೋಗತಕ್ಕವರೇ'' ಎಂದು ಹಟ ಹಿಡಿದುದರಿಂದ, ಮಹಾರಾಜರು ಅವರಿಗೆ ವಸ್ತ್ರ, ತೆಂಗಿನಕಾಯಿ, ಅಕ್ಷತೆ ಮೊದಲಾದವುಗಳನ್ನು ಕೊಟ್ಟು, ಸತ್ಕರಿಸಿ, ಅನಿರ್ವಾಹವೆಂದು ''ಹೋಗಿ ಬರ್ರಿ'' ಎಂದು ಹೇಳಿದ್ದರು, ಅಷ್ಟೇ. ಹೀಗೆ ರಾಜಕಾರಣ ಪಟುಗಳಾದ ಲೋಕಮಾನ್ಯರು, ಮಹಾರಾಜರ ಮನಸ್ಸಿನಲ್ಲಿ ಇಲ್ಲದಿದ್ದರೂ, ಅವರ ಕಡೆಯಿಂದ ತಮ್ಮ ಪ್ರಯಾಣಕ್ಕೆ ಅಪ್ಪಣೆ ತಕ್ಕೊಂಡ ತಮ್ಮ ಬಿಡಾರವಾದ ಕಿರ್ಲೋಸ್ಕರವಾಡಿಗೆ ತೆರಳಿದರು.

ಆದರೆ ಲೋಕಮಾನ್ಯರು ಊಟ ಮುಗಿಸಿಕೊಂಡು ಮಧ್ಯಾಹ್ನದ ೨—೩ ಗಂಟೆಗೆ ಪ್ರವಾಸಕ್ಕಾಗಿ ಹೊರಡುವಷ್ಟರಲ್ಲಿ ಭಕ್ತಾಭಿಮಾನಿಯಾದ ಚಿದಂಬರನು ಚಮತ್ಕಾರ ಮಾಡಿ ತೋರಿಸಿದನು. ಅವು ಸುಳಿಯ ದಿನಗಳಲ್ಲದಿದ್ದರೂ, ಎಲ್ಲಿಂದಲೋ ನಿಬಿಡವಾದ ಕಾರ್ಮೋಡಗಳು ಆಕಸ್ಮಾತ್ತಾಗಿ ಆಕಾಶವನ್ನು ಮುಸುಕುಹಾಕಿ, ಅತ್ಯುಗ್ರವಾದ ಮಳೆಯನ್ನು ಸುರಿಸಿಬಿಟ್ಟವು. ಅದರ ಪರಿಣಾಮವೆಂದು ಒಂದು—ಒಂದೂವರೆ ಗಂಟೆಯೊಳಗಾಗಿ ಎಲ್ಲಿ ನೋಡಿದಲ್ಲೆಲ್ಲ ನೀರೇ ನೀರಾಯಿತು. ಹಳ್ಳಪಳ್ಳಗಳೂ ಕೂಡ ಒಮ್ಮೆಲೇ ತುಂಬಿ ಹರಿಯಹತ್ತಿದವು. ಮುಂಜಾವಿನಲ್ಲಿ ಮೊಳಕಾಲ ಕೆಳಗೆ ನೀರುಳ್ಳ ನದಿಗೆ ಈಗ ಆಕಸ್ಮಾತ್ತಾಗಿ ಮಹಾಪೂರ ಬಂದುಬಿಟ್ಟಿತು. ಆಯಿತು, ಗುರ್ಲಹೊಸೂರ ಮುಂದಿನ ನದಿಯನ್ನು ದಾಟುವದು ಬೇಕಾದಂಥವನಿಗೂ

ಅಸಾಧ್ಯವಾಗಿ ಬಿಟ್ಟಿತು. ಈಗಿನಂತೆ ನದಿಗೆ ಆಗ ವರಸಿಯೂ ಇರಲಿಲ್ಲ. ನದಿಯನ್ನು ಕಾಲಿನಿಂದಲೇ ದಾಟಿ ಹೋಗಬೇಕಾಗುತ್ತಿತ್ತು. ಆದುದರಿಂದ ಕುದುರೆಯ ಗಾಡಿಯೊಳಗೆ ಕುಳಿತು ನದಿಯನ್ನು ದಾಟುವದು ಲೋಕಮಾನ್ಯರಿಗೆ ಅಶಕ್ಯವಾಗಿ ಬಿಟ್ಟಿತು. ಕೊಪ್ಪರಿಗೆ ಅಥವಾ ಡೋಣಿಯನ್ನೇರಿ ದಾಟಿ ಹೋಗುವದೆಂದರೆ ಅದಕ್ಕೆ ವೇಳೆ ಹಿಡಿಯುವಂತಿತ್ತು. ಯಾಕೆಂದರೆ ಮಳೆಯ ದಿನವಲ್ಲವಾದುದರಿಂದ ಅವುಗಳ ವ್ಯವಸ್ಥೆಯಿರಲಿಲ್ಲ. ಅಂಬಿಗರೂ ಊರಲ್ಲಿರಲಿಲ್ಲ. ಎಲ್ಲ ವ್ಯವಸ್ಥೆಯನ್ನು ಆರಂಭದಿಂದಲೇ ಮಾಡಬೇಕೆಂದರೆ, ಅಲ್ಲಿಯೇ ಹೊತ್ತು ಮುಣುಗಿ ಸಂಜೆಯಾಗುವಂತಿತ್ತು. ಹೀಗೆ ಲೋಕಮಾನ್ಯರು ಎಷ್ಟು ಪ್ರಯತ್ನ ಮಾಡಿದರೂ, ಆ ದಿನ ಅವರಿಗೆ ಗುರ್ಲಹೊಸೂರ ಊರನ್ನು ಬಿಡುವದು ಅಶಕ್ಯವಾಯಿತು.

ಗುರ್ಲಹೊಸೂರ ಊರನ್ನು ಅಂದು ಬಿಟ್ಟೇ ತೀರಬೇಕೆಂದು ಹಟ ಹಿಡಿದ ಲೋಕಮಾನ್ಯರು ನದಿಯ ವರೆಗೆ ಹೋಗಿ, ಅಲ್ಲಿಯ ಪರಿಸ್ಥಿತಿಯನ್ನು ವಿಚಾರಿಸಿ ನೋಡಿ, ಚಕಿತರಾದರು. ''ಚಿದಂಬರನು ಇನ್ನೊಂದು ದಿನ ನಿಮ್ಮನ್ನು ಇಲ್ಲಿ ಇಟ್ಟುಕೊಳ್ಳಬೇಕೆನ್ನುತ್ತಾನೆ'' ಎಂದು ಮಹಾರಾಜರು ಸಹಜವಾಗಿ ಆಡಿದ ಮಾತುಗಳು, ಚಾಣಾಕ್ಷರಾದ ಲೋಕಮಾನ್ಯರ ಮನಶ್ಚಕ್ಷುವಿನ ಮುಂದೆ ಎದ್ದು ನಿಂತು ಕುಣಿದಾಡಹತ್ತಿದವು. ಲೋಕಮಾನ್ಯರ ಆಯುಷ್ಯದಲ್ಲಿ ಆ ಕ್ಷಣಕ್ಕೆ ಹೂಸ ಮಾತಿನವೊಂದರ ಅನುಭವ ಬಂದಂತಾಯಿತು. ''ನಮ್ಮ ವಿಚಾರವೊಂದು, ದೈವದ ವಿಚಾರವು ಬೇರೊಂದು'' ಎಂಬ ಗಾದೆಯ ಮಾತು ಅವರಿಗೆ ಪಕ್ಕನೇ ನೆನಪಾಯಿತು. ಮಹಾರಾಜರ ಆಧ್ಯಾತ್ಮಿಕ ಬಲವನ್ನು ನೋಡಿ ಲೋಕಮಾನ್ಯರು ನಿಂತಲ್ಲಿಯೇ ಅವರಿಗೆ ಮನಸಾ ಕೈಮುಗಿದರು. ಅವರು ಅಲ್ಲಿಂದ ತಿರುಗಿ ಬಂದವರು ನೆಟ್ಟಗೆ ಗುಡಿಯ ದಾರೀ ಹಿಡಿದರು. ಅಲ್ಲಿ ಅವರು ಮಹಾರಾಜರನ್ನು ಹುಡುಕುತ್ತ, ಅವರಿದ್ದಲ್ಲಿಗೆ ಬಂದು, ದೀರ್ಘದಂಡ ನಮಸ್ಕಾರ ಮಾಡಿ ''ನನ್ನ ಅಪರಾಧವನ್ನು ಕ್ಷಮಿಸಬೇಕು'' ಎಂದು ಬೇಡಿಕೊಂಡರು. ಆಗ ಲೋಕಮಾನ್ಯರ ಕುತ್ತಿಗೆಯ ಶಿರಗಳು ಬಿಗಿದಿದ್ದವು. ಕಣ್ಣೊಳಗಿಂದ ನೀರು ಬಳಬಳನೆ ಉದುರಿದವು. ಮಹಾರಾಜರು ಅವರಿಗೆ ಸಹಜವಾದ ಮುಗುಳುನಗೆಯಿಂದ

ನಗುತ್ತ ಹೇಳಿದರು:— ''ಚಿದಂಬರನ ಮುಂದೆ ಓಡುವವರಾರು ? ಅವನು ನಿಮ್ಮನ್ನು ಇನ್ನೊಂದು ದಿನ ಇಲ್ಲಿ ಇಟ್ಟುಕೊಂಡು ಆಶೀರ್ವದಿಸಬೇಕೆಂದು ಬಯಸಿರಬಹುದೆಂತೆ ತೋರುತ್ತದೆ. ಎಲ್ಲವೂ ಅವನ ಆಟವೇ. ನೀವು ಅವನ ಕೃಪೆಗೆ ಒಳಗಾದವರಾಗಿರುವದರಿಂದ ನೀವು ಭಾಗ್ಯವಂತರೇ ಸರಿ.'' ಲೋಕಮಾನ್ಯರ ಕಂಠವು ಇನ್ನೂ ಹೆಚ್ಚಾಗಿ ಬಿಗಿದು ಬಂತು. ಅವರು ಶ್ರೀಗಳವರ ಕಾಲನ್ನು ಗಟ್ಟಿಯಾಗಿ ಹಿಡಿದುಕೊಂಡು:— ''ಸ್ವಾಮಿನ್, ವ್ಯಾಪಕನಾದ ಚಿದಂಬರನು ನಮಗೆ ಅಗೋಚರನು. ಸರ್ವೇಶ್ವರನಾದ ಅಂತಹ ಚಿದಂಬರನನ್ನು ವಶಪಡಿಸಿಕೊಂಡು, ನೀವೇ ಅವನ ಪ್ರತಿನಿಧಿಗಳಾಗಿ ಇಲ್ಲಿ ಆಟವಾಡುತ್ತಿರುವಿರಿ. ಜ್ಞಾನಿಯಾದ ಭಕ್ತನಿಗೂ ದೇವರಿಗೂ ಭೇದವಿಲ್ಲೆಂದು ಗೀತೆಯಲ್ಲಿ ಹೇಳಿದ್ದು ಸುಳ್ಳಲ್ಲ. ನಿಮ್ಮ ಬಾಯಿಂದ ಬಂದ ಮಾತೇ ಚಿದಂಬರನಿಗೆ ಗ್ರಾಹ್ಯವು. ನಾನು ಇಲ್ಲಿಯ ವರೆಗೆ ದೇವರ ವಿಷಯಕವಾಗಿ ಪುಸ್ತಕಗಳೊಳಗಿನ ವರ್ಣನೆಗಳನ್ನು ಮಾತ್ರ ಓದುತ್ತಿದ್ದೆನು. ಅವನ ಲೀಲೆಯ ಪ್ರತ್ಯಕ್ಷ ಅನುಭವವು ಮಾತ್ರ ಇಂದು ಬಂದಂತಾಯಿತು. ಅಧ್ಯಾತ್ಮಬಲದ ಶ್ರೇಷ್ಠತೆಯನ್ನು ನಾನು ಇಂದು ಮನಗಂಡೆನು. ನಾನು ಅನೇಕ ಕಡೆಗೆ ಅಡ್ಡಾಡಿ ನೋಡಿದ್ದೇನೆ. ಆದರೆ ಈ ಗುಡಿಯಲ್ಲಿ ಮಾತ್ರ ಏನೋ ಒಂದು ವೈಶಿಷ್ಟ್ಯವಿರುವದೆಂದು ಹೇಳದಿರಲಾರೆನು'' ಎಂದು ಹೇಳುತ್ತ ಮತ್ತೆ ಮತ್ತೆ ನಮಸ್ಕಾರ ಮಾಡಿದರು.

ಅಂದು ರಾತ್ರಿ ಒಂಬತ್ತು ಗಂಟೆಗೆ ಪ್ರೊ. ಪರಾಂಜಪೆಯವರು ಚಿದಂಬರೇಶ್ವರನ ಗುಡಿಯಲ್ಲಿ ಪುರಾಣವನ್ನು ಹೇಳಿದರು. ಮರುದಿವಸ, ಎಂದರೆ ನವಮಿಯ ಮುಂಜಾನೆ ಉಪಹಾರ ತಾಂಬೂಲಾದಿಗಳಾಗಿ ಇಬ್ಬರೂ ದೇಶಭಕ್ತರು ಊರಿಗೆ ಹೊರಟು ನಿಂತರು. ಆಗ ಮಹಾರಾಜರು ಅವರಿಬ್ಬರಿಗೂ ಚಿಕ್ಕ ಭಾಷಣ ಮಾಡಬೇಕೆಂದು ಹೇಳಿದ್ದರಿಂದ, ಅವರೀರ್ವರೂ ಅದರಂತೆ ಮಾಡಿದರು. ಆ ಕಾಲಕ್ಕೆ ಲೋಕಮಾನ್ಯರು ಹೇಳಿದ್ದೇನೆಂದರೆ:— ''ನಾನು ಏನೂ ಅಲ್ಲ, ಪರಮೇಶ್ವರನೇ ನನ್ನ ಕಡೆಯಿಂದ ಈ ಉತ್ಸವವನ್ನು ಮಾಡಿಸಿ ಕೊಳ್ಳುತ್ತಿದ್ದಾನೆ, ಎಂದು ಶ್ರೀ ಸ್ವಾಮೀ ಮಹಾರಾಜರು ಹೇಳುವದು ಯಥಾರ್ಥವಾಗಿದೆ. ''ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸಂನ್ಯಾಸಂ ಕವಯೋ ವಿದುಂ'', ಎಂದರೆ ಎಲ್ಲ ಕಾಮ್ಯ ಕರ್ಮಗಳನ್ನು

ತೊರೆಯುವದೇ ನಿಜವಾದ ಸಂನ್ಯಾಸವೆಂದು ಭಗವಜ್ಜಚನವಿದೆ. ನಾನು ಏನೂ ಅಲ್ಲ, ಎಂದು ತಿಳಿಯುವ ಒಬ್ಬ ವಿಭೂತಿ ಪುರುಷರು ಇಲ್ಲಿ ಇರುವದರಿಂದಲೇ ಸಾವಿರಾರು ಜನರು ಇಲ್ಲಿ ಕೂಡುತ್ತಾರೆ. ಮತ್ತು ಹಾಗೆನ್ನುವ ಶ್ರೀ ಸ್ವಾಮೀ ಮಹಾರಾಜರಿಗೆ ದ್ರವ್ಯಸಹಾಯವೂ ಸಾಕಷ್ಟು ದೊರೆಯುತ್ತಿದೆ. ಈಗ ಹಿಂದುಸ್ಥಾನಕ್ಕೆ 'ನಾನು ಏನೂ ಅಲ್ಲ' ಎಂಬ ಭಾವನೆಯಿಂದ ರಾಷ್ಟ್ರಕಾರ್ಯವನ್ನು ಮಾಡುವ ಜನರೇ ಅವಶ್ಯವಾಗಿ ಬೇಕಾಗಿರುವರು. ನಾನು ಏನೂ ಅಲ್ಲ, ನನ್ನದೇನೂ ಇಲ್ಲ, ಎಂದು ಹೇಳುವ ರಾಮದಾಸ ಶಿವಾಜಿಗಳ ಸಂಗಮವಾಯಿತೆಂದೇ ಮಹಾರಾಷ್ಟ್ರವು ಸ್ವಾತಂತ್ರ್ಯಸುಖವನ್ನು ಅನುಭವಿಸಿತು. 'ನಾನು ಏನೂ ಅಲ್ಲ' ಎಂದು ರಾಷ್ಟ್ರಕಾರ್ಯವನ್ನು ಮಾಡುವವನು ಜನಸಮುದಾಯವನ್ನು ಕೂಡಲೇ ವಶಪಡಿಸಿಕೊಳ್ಳುವನು, ಎಂಬ ಮಾತು ಇಲ್ಲಿಯ ಸ್ವಾಮೀ ಮಹಾರಾಜರ ಉದಾಹರಣೆಯಿಂದ ತಿಳಿಯುವಂತಿದೆ. ಈ ತರದ ಪುರುಷರು ನಮ್ಮ ದೇಶದಲ್ಲಿ ಹುಟ್ಟಲೆಂದೂ, ಮತ್ತು ರಾಷ್ಟ್ರಕಾರ್ಯದ ಕಡೆಗೆ ಅವರ ಉಪಯೋಗವಾಗಲೆಂದೂ ನಾನು ಶ್ರೀ ಚಿದಂಬರೇಶ್ವರನಲ್ಲಿ ಕೈಜೋಡಿಸಿ ಬೇಡಿಕೊಳ್ಳುತ್ತೇನೆ. ಅವನು ಅದನ್ನು ಪೂರ್ಣ ಮಾಡಿಯೇ ಮಾಡುತ್ತಾನೆಂದು ನನ್ನ ವಿಶ್ವಾಸವಿದೆ.''

ಇಬ್ಬರೂ ಅಪ್ಪಣೆ ಪಡಕೊಂಡು ಹೊರಡುವಾಗ ಮಹಾರಾಜರು:— ''ನಿಮ್ಮ ಮಹತ್ತ್ವದ ರಾಷ್ಟ್ರಕಾರ್ಯವನ್ನು ಬದಿಗಿರಿಸಿ, ಶ್ರೀ ಚಿದಂಬರನ ಉತ್ಸವಕ್ಕೆ ಇಲ್ಲಿಯ ವರೆಗೆ ಬಂದು, ಸಮಾರಂಭಕ್ಕೆ ಕಳಿ ತಂದುದಕ್ಕಾಗಿ ನನಗೆ ಒಳ್ಳೇ ಆನಂದವಾಯಿತು. ಈ ಬಗ್ಗೆ ಇಲ್ಲಿ ಕೂಡಿದ ಜನರೆಲ್ಲ ನಿಮಗೆ ಕೃತಜ್ಞರು'' ಎಂಬ ಉದ್ಗಾರ ತೆಗೆದರು. ಆ ಕಾಲಕ್ಕೆ ಅಲ್ಲಿ ನೆರೆದ ಜನರಿಗೆಲ್ಲ ಆದ ಆನಂದವನ್ನು ವರ್ಣಿಸಲಾಸಲ್ಲ. ಹೀಗೆ ಈ ರೀತಿಯಾಗಿ ಲೋಕಮಾನ್ಯರು ಮಹಾರಾಜರ ಅನುಗ್ರಹ ಪಡೆದು ಬೈಲಹೊಂಗಲ ಮುಖಾಂತರವಾಗಿ ತಮ್ಮ ಊರ ಕಡೆಗೆ ಪ್ರಯಾಣ ಬೆಳೆಸಿದರು.

ಈ ಮಾತಿಗೆ ೮—೧೦ ತಿಂಗಳುಗಳು ಕಳೆದು ಹೋದವು. ಅಷ್ಟರಲ್ಲಿ ಲೋಕಮಾನ್ಯರ ಮೇಲೆ ಮುಂಬೈ ಹೈಕೋರ್ಟಿನಲ್ಲಿ ನಡೆದ ರಾಜದ್ರೋಹದ ವಿಚಾರಣೆಯು ಕೊನೆಗಂಡಿತು. ಅದರಲ್ಲಿ ಲೋಕಮಾನ್ಯರಿಗೆ ೬ ವರ್ಷ ಶಿಕ್ಷೆಯಾಗಿ, ಅವರನ್ನು ಗಡಿಪಾರು ಮಾಡಿ ಮಂಡಾಲೆಗೆ ಕಳಿಸಬೇಕೆಂಬ

ನಿರ್ಣಯವು ಹೊರಬಿತ್ತು. ಆ ನಿರ್ಣಯವು ಹೊರಬಿದ್ದಾಗ ಮಹಾರಾಜರು ಶಕೆ ೧೮೩೦ ನೆಯ ವರುಷದ ಚಾತುರ್ಮಾಸಕ್ಕಾಗಿ ಅಷ್ಟಗಿಯಲ್ಲಿ ಇರುತ್ತಿದ್ದರು. ಪ್ರತಿನಿತ್ಯದ ಕಾರ್ಯಕ್ರಮದಂತೆ ಪುರಾಣ ಮುಗಿಯುವಷ್ಟರೊಳಗೆ ಪುಣೆಯಲ್ಲಿ ಹೊರಡುತ್ತಿದ್ದ ''ರಾಷ್ಟ್ರಮತ'' ಎಂಬ ವರ್ತಮಾನ ಪತ್ರವನ್ನು ತಕ್ಕೊಂಡು ಒಬ್ಬ ಗೃಹಸ್ಥರು ಅಲ್ಲಿಗೆ ಬಂದರು. ಅದರಲ್ಲಿ ಲೋಕಮಾನ್ಯರಿಗಾದ ಶಿಕ್ಷೆಯ ಸಾದ್ಯಂತ ಸಂಗತಿಯು ಪ್ರಕಟವಾಗಿತ್ತು. ಮಹಾರಾಜರು ಅದನ್ನೆಲ್ಲ ಕುತೂಹಲದಿಂದ ಓದಿಸಿ ಕೇಳಿಕೊಂಡರು. ಜನ್ಮತಃ ಮನಸಾ ವಿರಕ್ತರಾಗಿದ್ದು, ಈಗ ಎಲ್ಲವನ್ನೂ ಪ್ರತ್ಯಕ್ಷವಾಗಿಯೇ ತೊರೆದು ಸಂನ್ಯಾಸವನ್ನು ಸ್ವೀಕರಿಸಿದ ಮಹಾರಾಜರ ಮುಖದ ಮೇಲೂ ವಿಷಣ್ಣತೆಯ ಛಾಯೆಯು ಹಬ್ಬಿದಂತೆ ತೋರಿತು. ಆದರೆ ಅದಕ್ಕೂ ಕೂಡ ಅವರು ಹೆಚ್ಚಾಗಿ ಅವಕಾಶ ಕೊಡದೆ ಕೂಡಿದ ಜನರಿಗೆ ಹೇಳಿದ್ದೇನೆಂದರೆ:— ''ಒಳ್ಳೆಯದು; ಆಗುವದೆಲ್ಲವೂ ಚಿದಂಬರನ ಇಚ್ಛೆಯಿಂದಲೇ ಆಗುತ್ತಿರುತ್ತದೆ. ಬಂಧುಗಳೇ, ಲೋಕಮಾನ್ಯರೆಂದರೆ ಸಾಮಾನ್ಯ ಪುರುಷನಲ್ಲ, ಕಂಡಿರಾ ! ಅವನೊಬ್ಬ ಶ್ರೇಷ್ಠ ತರಗತಿಯ ಯೋಗಭ್ರಷ್ಟನು. ಅವನು ರಾಷ್ಟ್ರಕಾರ್ಯಕ್ಕಾಗಿ ಹುಟ್ಟಿ ಬಂದಿದ್ದಾನೆ. ಅಂಥವರಿಗೆ ಕೈಯಿಂದಾದಷ್ಟು ಸಹಾಯ ಸಲ್ಲಿಸುವದು ನಮ್ಮೆಲ್ಲರ ಕರ್ತವ್ಯವು. ಅವನ ಶೀಘ್ರ ಬಿಡುಗಡೆಗಾಗಿ ನಾವು ಮಾಡಬಹುದಾದ ಕೆಲಸವೊಂದೇ. ಅದಷ್ಟು ತೀವ್ರ ಆ ಮಹಾಪುರುಷನನ್ನು ಈಗೊದಗಿದ ಬಂಧನದೊಳಗಿಂದ ಬಿಡಿಸಬೇಕೆಂದು ನಾವು ಚಿದಂಬರನಿಗೇ ಪ್ರಾರ್ಥಿಸಿಕೊಳ್ಳೋಣ. ನಿಮ್ಮಲ್ಲಿ ಪ್ರತಿಯೊಬ್ಬರು ತಮಗಾಗಿ ತಮ್ಮ ತಮ್ಮ ನಿತ್ಯ ಜಪವನ್ನು ಮಾಡುವದಲ್ಲದೆ ಅದು ಮುಗಿದ ಮೇಲೆ ಲೋಕಮಾನ್ಯರ ಬಿಡುಗಡೆ ಮತ್ತು ಆಯುರಾರೋಗ್ಯಗಳ ಸಲುವಾಗಿ ಕೆಲವೊಂದು ಜಪ ಮಾಡುವಿರೆಂದು ನಂಬಿದ್ದೇನೆ. ಇದಕ್ಕಾಗಿ ನಾನು ಸಹ ಒಂದು ಕಾರ್ಯಕ್ರಮವನ್ನು ಇಟ್ಟುಕೊಳ್ಳುತ್ತೇನೆ. ದಿನಾಲೂ ನಾವು ''ಮಾಝಾಧಾಕ ಮಾನೀ'' ಎಂಬದನ್ನು ಒಂದೇ ಸಲ ಎನ್ನುತ್ತಿರುತ್ತೇವೆ. ಈ ಅಭಯ ವಾಣಿಯು ಸಾಕ್ಷಾತ್ ಚಿದಂಬರ ಮಹಾರಾಜರ ಬಾಯಿಂದ ಬಂದದ್ದಾಗಿರುತ್ತದೆ. ಅದನ್ನು ಪಠಣ ಮಾಡುವವನು ಎಲ್ಲ ತರದ ಆಂಜಿಕೆಗಳಿಂದ ಬಿಡುಗಡೆ ಹೊಂದುತ್ತಾನೆ. ಆದುದರಿಂದ

ನಾವಿದನ್ನು ಇಂದಿನಿಂದ ಎರಡೆರಡು ಸಾರೆ ಅನ್ನುತ್ತ ಹೋಗುತ್ತೇನೆ. ಯಾವ ಪರಮಾತ್ಮನ ಶಾಸನಕ್ಕೊಳಗಾಗಿ, ಮತ್ತು ಯಾವನ ಅಂಜಿಕೆಯಿಂದ ಎಲ್ಲ ದೇವ-ದೇವತೆಗಳೂ ಪ್ರಾಣಿಗಳೂ ತಮ್ಮ ತಮ್ಮ ಕಾರ್ಯವನ್ನು ತಪ್ಪದೇ ಮಾಡುತ್ತಿರುವವೋ, ಆ ಪರಮಾತ್ಮನಿಗೇ ನಾವು ಶರಣು ಹೋದರೆ ಯಾವ ಕೆಲಸವೂ ಅಸಾಧ್ಯವಲ್ಲ. ಲೋಕಮಾನ್ಯರಿಗೆ ಶಿಕ್ಷೆ ಕೊಡಬೇಕೆನ್ನುವ ಅಥವಾ ಕೊಟ್ಟಿರುವ ಜನರೂ ಸಹ ಆ ಚಿದಂಬರನ ಅಂಕಿತದೊಳಗೇ ಇರುವರಷ್ಟೇ. ಆದುದರಿಂದ ಅವರೆಲ್ಲರಿಗೂ ಶಾಸಕನಾಗಿರುವ ಚಿದಂಬರನಿಗೇ ನಾವು ಪ್ರಾರ್ಥನೆ ಮಾಡಿಕೊಂಡರೆ, ನಮ್ಮ ಬಯಕೆಗಳು ಈಡೇರುವದರಲ್ಲಿ ಸಂದೇಹವಿಲ್ಲ.”

ಇದರ ಮೇಲಿಂದ ಮಹಾರಾಜರು ರಾಜಕಾರಣದ ಬಗ್ಗೆ ಸಹ ಎಷ್ಟು ದಕ್ಷರಾಗಿದ್ದರೆಂಬದು ಸಹಜವಾಗಿ ತಿಳಿಯುವಂತಿದೆ. ಪೈನೀ ವ್ರೇರಣೆಯಿಂದ ಚಿಕ್ಕಂದಿನಲ್ಲಯೇ ದಾಸಬೋಧವನ್ನೋದಿದ ಮಹಾರಾಜರು ರಾಜಕಾರಣವನ್ನು ಅಪೂಟವಾಗಿ ಮರೆತು ಬಿಡುವದು ಶಕ್ಯವೇ ಇರಲಿಲ್ಲ. ಯಥಾಶಕ್ತಿಯಾಗಿ ಅವರು ಅದನ್ನು ಮುಖ್ಯವಾದ ಚಿದಂಬರ ಭಕ್ತಿಯೊಡನೆ ಕೂಡಿಸಿಕೊಂಡು ಆಚರಣೆ ಮಾಡಿದರು, ಅಷ್ಟೇ.

೧೫ ಕಾತ್ಯಾಯನ ಪರಿಷತ್ತು

ಸರ್ವಶ್ರೇಷ್ಠವಾದ ವೈದಿಕ ಧರ್ಮವನ್ನು ಪುನರುಜ್ಜೀವನಗೊಳಿಸ ಬೇಕೆನ್ನುವ ಪ್ರಯತ್ನಗಳಿಗೆ ಮಹಾರಾಜರು ಯಾವಾಗಲೂ ಉತ್ತೇಜನ ಕೊಡುತ್ತಿದ್ದರು. ಇದೇ ರೀತಿಯಿಂದ ಮಹಾರಾಜರ ಪರಮಭಕ್ತರೂ ಶಿಷ್ಯರೂ ಆದ ಶ್ರೀ ಗೋವಿಂದರಾವ ಜೈನಾಪುರ ಎಂಬ ವಕೀಲರು ಮಹಾರಾಜರ ಆಶೀರ್ವಾದದಿಂದ ಕಾತ್ಯಾಯನ ಪರಿಷತ್ತನ್ನು ಶಕೆ ೧೮೨೨ ರಲ್ಲಿ ಸ್ಥಾಪಿಸಿದರು. ಅದರ ಮುಖ್ಯ ಉದ್ದೇಶವು ಎಲ್ಲ ವಿಧದಿಂದ ಸಂಸ್ಕೃತ ಭಾಷೆಯ ಅಧ್ಯಯನಕ್ಕೆ ಪ್ರೋತ್ಸಾಹಕೊಟ್ಟು, ವೇದಶಾಸ್ತ್ರಾಭ್ಯಾಸವನ್ನು ಬೆಳಿಸುವದೇ ಆಗಿತ್ತು. ಈ ಪರಿಷತ್ತಿನ ಎರಡನೆಯ ಅಧಿವೇಶನವು ಶ್ರೀ ಕ್ಷೇತ್ರ ಗುರ್ಲಹೊಸೂರಲ್ಲಿಯೇ ಆಯಿತು. ಶ್ರೀ ಶಿವಚಿದಂಬರೇಶ್ವರನ ಉತ್ಸವದ ಕಾಲಕ್ಕೆ ಅನಾಯಾಸವಾಗಿಯೇ ನಾಲ್ಕೂ ಕಡೆಯ ಬ್ರಾಹ್ಮಣರು ಕೂಡಿರುವದರಿಂದ ಅದೇ ಕಾಲಕ್ಕೆ ಪರಿಷತ್ತನ್ನು ಕರೆಯಲಾಗಿತ್ತು. ಅದು ಒಳ್ಳೇ ಯಶಸ್ವಿಯಾದುದರಿಂದ, ಪರಿಷತ್ತಿನ ನಾಲ್ಕನೆಯ ಅಧಿವೇಶನವನ್ನು ಕೂಡ ಶಾ. ಶ. ೧೮೩೧ ರಲ್ಲಿ ಮಹಾರಾಜರ ಅಪ್ಪಣೆಯಿಂದ ಗುರ್ಲಹೊಸೂರಲ್ಲಿ ಉತ್ಸವದ ಕಾಲಕ್ಕೇ ಇಟ್ಟಿದ್ದಾಯಿತು. ಶ್ರೀಮತ್ ಪರಮಹಂಸ ಶಂಕರಾನಂದ ವಾಡೀಕರ ಎಂಬ ಯತಿಗಳು ಪರಿಷತ್ತಿನ ಅಧ್ಯಕ್ಷರಾಗಿದ್ದರು. ಆ ಕಾಲಕ್ಕೆ ಕೂಡಿದ ಅನೇಕ ಜನ ವಿದ್ವಾಂಸರು ವೈದಿಕ ಧರ್ಮದ ವೈಶಿಷ್ಟ್ಯವನ್ನೂ ಘನತೆಯನ್ನೂ ಕೊಂಡಾಡಿ, ಅದರ ಪುನರುಜ್ಜೀವನದ ಆವಶ್ಯಕತೆಯ ಬಗ್ಗೆ ಭಾಷಣ ಮಾಡಿದರು. ಮಹಾರಾಜರು ಸಭೆಯಲ್ಲಿ ಮುಗುಳುನಗೆ ನಗುತ್ತ ನಡೆದುದೆಲ್ಲವನ್ನೂ ಸುಮ್ಮನೇ ನೋಡುತ್ತ ಕುಳಿತುಕೊಂಡಿದ್ದರು. ಇದ್ದಕ್ಕಿದ್ದಂತೆ ಶ್ರೋತೃವೃಂದದಲ್ಲಿ ಒಮ್ಮೆಲೇ ಒಂದು ಕೂಗು ಎದ್ದಿತು. ಶ್ರೀಮತ್‌ಪರಮಹಂಸ ಶ್ರೀ ಕೈವಲಾಶ್ರಮ ಸ್ವಾಮೀ ಮಹಾರಾಜರು ನಾಲ್ಕು

ಉಪದೇಶದ ಮಾತುಗಳನ್ನು ಹೇಳಬೇಕೆಂದು ಎಲ್ಲ ಕಡೆಯಿಂದಲೂ ಜನರು ಪ್ರಾರ್ಥಿಸಿಕೊಳ್ಳಹತ್ತಿದರು. ಅಧ್ಯಕ್ಷರಾದ ಶ್ರೀ ಶಂಕರಾನಂದರು ಸದಸ್ಯರ ಅಭಿಪ್ರಾಯಕ್ಕೆ ಮನ್ನಣೆಕೊಟ್ಟು ಮಾತಾಡಬೇಕೆಂದು ಮಹಾರಾಜರಿಗೆ ಬಿನ್ನಹ ಮಾಡಿಕೊಂಡರು. ಮಹಾರಾಜರ ಮನಸಿನಲ್ಲಿ ಮಾತಾಡುವದು ಇಲ್ಲದಿದ್ದರೂ, ಜನರ ಒತ್ತಾಯಕ್ಕೆ ಬಾಗಲೇ ಬೇಕಾಯಿತು. ಅವರು ಭಾಷಣಕ್ಕೆ ಎದ್ದು ನಿಂತೊಡನೆ, ಜನರೆಲ್ಲ ಪ್ರಚಂಡ ಕರತಾಡನ ಮಾಡಿ ಅವರಿಗೆ ಸ್ವಾಗತವಿತ್ತರು.

ಮಹಾರಾಜರು ಎಲ್ಲಕ್ಕೂ ಮೊದಲು ಈಶಚಿಂತನ ಮಾಡಿ ತಮ್ಮ ಮಾತುಗಳನ್ನಾರಂಭಿಸಿದರು. ಅವರ ಅಂದಿನ ಭಾಷಣದ ಸಾರಾಂಶವು ಹೀಗಿತ್ತು:—

" 'ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ' ಎಂದು ಭಗವಂತನು ಗೀತೆಯಲ್ಲಿ ಹೇಳಿದ್ದಾನೆ. ಜ್ಞಾನದಂತಹ ಪಾವನಕರವಾದ ಬೇರೆ ಯಾವ ಪಸ್ತುವೂ ಜಗತ್ತಿನಲ್ಲಿರುವದಿಲ್ಲ. ಪಶುಗಳು ಪಶುಗಳಾಗಿರುವದ ಏತರಿಂದ? ಜ್ಞಾನವಿರುವದಿಲ್ಲಿಂದೇ ಅಲ್ಲವೇ? ಮನುಷ್ಯನು ಮನುಷ್ಯನಾಗಿರುವದು ಏತರಿಂದ? ಜ್ಞಾನವಿರುವದೆಂದೇ ಅಲ್ಲವೇ? ಸಂಸಾರದ ಎಲ್ಲ ಅನುಕೂಲತೆಗಳಿದ್ದವರೂ ಕೇವಲ ಜ್ಞಾನವಿಲ್ಲದ ಮೂಲಕ ದುಃಖಬಡುವದನ್ನು ನಾವು ನೋಡುವದಿಲ್ಲವೇ? ಇದಕ್ಕೆ ವಿರುದ್ಧವಾಗಿ, ಸಂಸಾರದಲ್ಲಿ ಯಾವ ಅನುಕೂಲತೆಗಳು ಇಲ್ಲದಿದ್ದರೂ ಜ್ಞಾನದ ಬಲದಿಂದ ಸುಖಬಡುವದನ್ನು ನಾವು ನೋಡುವದಿಲ್ಲವೇ? ಒಟ್ಟಿನ ಮೇಲೆ ಜ್ಞಾನದ ಮಹತಿಯನ್ನು ಎಷ್ಟೆಂದು ಬಣ್ಣಿಸಬೇಕು? ಎಂತೆಯೇ ಸಂಸಾರದ ಅನರ್ಥಕ್ಕೆಲ್ಲ ಕೇವಲ ಅಜ್ಞಾನವೊಂದೇ ಕಾರಣವೆಂದೂ, ಜ್ಞಾನದಿಂದಲೇ ಅದು ನಾಶವಾಗಬಲ್ಲದೆಂದೂ, ಶ್ರೀಮಚ್ಛಂಕರಭಗವತ್ಪಾದರವರು ಹೇಳಿದ್ದಾರೆ. 'ನ ಋತೆ ಜ್ಞಾನಾನ್ಮುಕ್ತಿಃ' ಎಂದು ಉಪನಿಷತ್ತು ಹೇಳುತ್ತದೆ. 'ನಾನ್ಯಃ ಪಂಥಾ ವಿದ್ಯತೇಯನಾಯ' ಎಂದೂ ವೇದವು ಹೇಳುತ್ತದೆ. ಸಾರಾಂಶವೇನೆಂದರೆ:— ಜ್ಞಾನವೇ ಸುಖದ ಮೂಲ, ಜ್ಞಾನವೇ ಸಾಮರ್ಥ್ಯದ ಬೀಜ, ಜ್ಞಾನವೇ ನಿರ್ಭಯತೆಯ ಕಾರಣ, ಜ್ಞಾನವೇ ಗೆಲವಿನ ರಹಸ್ಯ, ಜ್ಞಾನವೇ ಮೋಕ್ಷದ ಹೆದ್ದಾರಿ. ಅದಿಲ್ಲದಿದ್ದಲ್ಲಿ ಸೋಲು

ನಿರಾಶೆ, ಭಯ, ಬಂಧ ಮತ್ತು ದುಃಖಗಳುಂಟು. ಆದುದರಿಂದ ಜ್ಞಾನವನ್ನು ಪಡೆಯುವದು ಪ್ರತಿಯೊಬ್ಬರ ಕರ್ತವ್ಯವು.

"ಜ್ಞಾನವು ದ್ವಿವಿಧವಾಗಿದೆ. ಅವುಗಳನ್ನು ಉಪನಿಷತ್ಕಾರರು ಪರಾವಿದ್ಯೆ, ಅಪರಾವಿದ್ಯೆ, ಎಂದು ಕರೆದಿದ್ದಾರೆ. ಲೌಕಿಕ ವಿದ್ಯೆಗಳೆಲ್ಲ ಅಪರಾ ವಿದ್ಯೆಯೊಳಗೆ ಬರುತ್ತವೆ. 'ಅಪರಾ' ಎಂದರೆ ಕಡಿಮೇ ತರದ್ದೆಂದರ್ಥ. ಅಪರಾವಿದ್ಯೆಯಿಂದ 'ಪ್ರೇಮ'ವನ್ನು ಮಾತ್ರ ಗಳಿಸಬಹುದು. ಎಂದರೆ ಮನುಷ್ಯನು ಅದರಿಂದ ಶ್ರೀಮಂತನಾಗಬಹುದು; ಐಹಿಕಸುಖ ಸಮೃದ್ಧಿಗಳನ್ನು ಪಡೆಯಬಹುದು; ಅಧಿಕಾರ ಒಡೆತನಗಳನ್ನು ಗಳಿಸಬಹುದು. ಆದರೆ ಅದರಿಂದ ಮನುಷ್ಯನಿಗೆ 'ಶ್ರೇಯ'ವೆಂಬದು ಸಿಕ್ಕಲಾರದು. ಎಂದರೆ ಅಪರಾವಿದ್ಯೆಯಿಂದ ನಮಗೆ ಚಿರಸುಖ-ಶಾಂತಿ-ಸಮಾಧಾನಗಳು ಸಿಕ್ಕಲಾರವು. ಅದರಿಂದ ನಮ್ಮ ಕಲ್ಯಾಣವಾಗಲಾರದು. ನಿರ್ಭಯಾವಸ್ಥೆಯು ಪ್ರಾಪ್ತವಾಗಲಾರದು. ಆ ಅವಸ್ಥೆಯನ್ನು ಗಳಿಸಬೇಕಾದರೆ ನಾವು ಪರಾವಿದ್ಯೆಗೇ ಶರಣು ಹೋಗಬೇಕು; ಅದರ ಅಭ್ಯಾಸವನ್ನೇ ಮಾಡಬೇಕು. 'ಪರಾ' ಎಂದರೆ 'ಶ್ರೇಷ್ಠವಾದದ್ದು' ಎಂದರ್ಥ. ಇದರಿಂದ ಆತ್ಮಜ್ಞಾನವಾಗುತ್ತದೆ. ಪರಮಾತ್ಮ ಸಾಕ್ಷಾತ್ಕಾರವಾಗುತ್ತದೆ. ಮೋಕ್ಷವಾಗುತ್ತದೆ. ಎಂತೆಯೇ ಗೀತೆಯು 'ಅಧ್ಯಾತ್ಮವಿದ್ಯಾ ವಿದ್ಯಾನಾಂ' ಎಂದು ಹೇಳುತ್ತದೆ.

"ಲೌಕಿಕ ವಿದ್ಯೆಗಳನ್ನು ಕಲಿಯಬಾರದೆಂದು ಇದರ ಅರ್ಥವಲ್ಲ. ನಾವು ಪ್ರಸಂಚದೊಳಗಿರುವ ವರೆಗೆ ಲೌಕಿಕ ಜ್ಞಾನವು ಬೇಕೇ ಬೇಕು. ಆದರೆ ಬರೇ ಲೌಕಿಕ ಜ್ಞಾನದಿಂದ ಸುಖವಾದೀತೆಂಬ ನಿಯಮವಿಲ್ಲ. ಅದು ಕುರುಡನ ಕೈಯಲ್ಲಿಯ ಶಸ್ತ್ರವಿದ್ದಂತೆ. ಅದರಿಂದ ಯಾವ ವೇಳೆಯಲ್ಲಿ ಯಾವ ತರದ ಅನರ್ಥವಾದೀತೆಂಬದನ್ನು ಹೇಳಲಿಕ್ಕಾಗದು. ಆದುದರಿಂದ ನಮ್ಮ ಲೌಕಿಕ ಜ್ಞಾನವು ಅಧ್ಯಾತ್ಮ ಜ್ಞಾನಕ್ಕೆ ಪೋಷಕವಾಗುವಂತಹದಿರಬೇಕು. ಅಧ್ಯಾತ್ಮ ಜೀವನಕ್ಕೆ ಸಹಾಯವಾಗುವಂತೆ ಲೌಕಿಕ ಜ್ಞಾನವನ್ನು ಅಭ್ಯಾಸ ಮಾಡಲಿಕ್ಕೆ ಅಡ್ಡಿಯಿರುವದಿಲ್ಲ. ಕಿಂಬಹುನಾ, ಎಲ್ಲ ಜ್ಞಾನಕ್ಕೂ ಅಧ್ಯಾತ್ಮವೇ ತಳಹದಿಯಾಗಬೇಕು. ಲೌಕಿಕ ಜ್ಞಾನದಲ್ಲಿ

ಮನುಷ್ಯನು ಬೇಕಾದಷ್ಟು ಮುಂದುವರೆಯಲಿ, ಆಧ್ಯಾತ್ಮವೇ ತನ್ನ ಅಂತಿಮ-ಧ್ಯೇಯವೆಂಬದನ್ನು ಅವನು ಮರೆಯಬಾರದು. ಮತ್ತು ಆಧ್ಯಾತ್ಮಕ್ಕೆ ವಿರುದ್ಧವಾದ, ಎಂದರೆ ನಮ್ಮ ಪರಮ ಕಲ್ಯಾಣದಿಂದ ನಮ್ಮನ್ನು ದೂರ ಮಾಡುವ ಜ್ಞಾನವು ಎಂದೂ ಸಂಗ್ರಾಹ್ಯವಲ್ಲ. ಅಂತಹ ಜ್ಞಾನಕ್ಕೆ ನಾವೆಂದೂ ಮನಸೋಲಬಾರದು.

"ಹೀಗೆ ಲೌಕಿಕ-ಪಾರಮಾರ್ಥಿಕ ವಿದ್ಯೆಗಳೆರಡಕ್ಕೂ ಸರಿಯಾಗಿ ಮೇಳಹಾಕಿ ಸಮಾಜದ ರಚನೆಯನ್ನು ಮಾಡಿದವರು ನಮ್ಮ ಪೂರ್ವದ ಋಷಿಗಳು. ಇದೇ ನಮ್ಮ ಧರ್ಮದ ವೈಶಿಷ್ಟ್ಯವಾಗಿದೆ. ವೈದಿಕ ಧರ್ಮವು ವೇದಾಂತ ವ್ಯವಹಾರಗಳನ್ನು ಸರಿಯಾಗಿ ಕೂಡಿಸಿದೆ. ವೇದಾಂತದ ಆಧಾರದಿಂದ ಸಮಾಜದ ಲೌಕಿಕ ಸುಖವೂ ಆಗುವಂತೆ ಮಾಡುವದೇ ನಮ್ಮ ಧರ್ಮದ ಗುರಿ. ನಮ್ಮ ಧರ್ಮವು ಹೀಗೆ ಭದ್ರವಾದ ತಳಹದಿಯ ಮೇಲೆ ಇರುವದೆಂದೇ ಅದು ಇಂದಿಗೂ ಅಭೇದ್ಯವಾಗಿ ನಿಂತಿದೆ. ಜಗತ್ತಿನೊಳಗೆ ನಮ್ಮ ಧರ್ಮದಷ್ಟು, ಪ್ರಾಚೀನವಾದ ಧರ್ಮವು ಬೇರೆ ಎಲ್ಲಿಯೂ ನೋಡಲಿಕ್ಕೆ ಸಿಕ್ಕುವದಿಲ್ಲ. ನಮ್ಮವರ ದೃಷ್ಟಿಯು ಕೇವಲ ಪಾರಲೌಕಿಕವಾಗಿತ್ತೆಂದೂ, ಐಹಿಕವನ್ನು ಅವರು ಉದಾಸೀನ ಮಾಡಿ ಬಿಟ್ಟರೆಂದೂ, ಕಿಂಬಹುನಾ ಆದರಿಂದಲೇ ಅವರು ಐಹಿಕ ಅವನತಿಯನ್ನು ಹೊಂದಿದರೆಂದೂ ಕೆಲವರು ವಾದಿಸುತ್ತಾರೆ. ಆದರೆ ಅದು ತಪ್ಪು. ರಾಮರಾಜ್ಯವನ್ನು ಕಟ್ಟುವದೇ ನಮ್ಮ ಧರ್ಮಕಾರರ ಧ್ಯೇಯವಾಗಿದೆ. ಪ್ರಲ್ಹಾದ, ಅಲರ್ಕ, ರಾಮ, ಜನಕ, ಕಾರ್ತವೀರ್ಯಾರ್ಜುನರಂಥ ರಾಜರನ್ನು ನಿರ್ಮಾಣಮಾಡುವದೇ ನಮ್ಮ ಸ್ಮೃತಿಕಾರರ ಉದ್ದೇಶವಾಗಿದೆ. ಈ ಧ್ಯೇಯವು ಈಗಿನವರಿಗೆ ಅಶಕ್ಯವಾಗಿ ತೋರಿದರೂ, ಅದು ನಮ್ಮ ಪ್ರಾಚೀನ ಭಾರತದಲ್ಲಿ ಸತ್ಯಸೃಷ್ಟಿಯೊಳಗಿನ ಮಾತಾಗಿತ್ತು.

ಈ ವೈದಿಕ ಧರ್ಮದ ರಹಸ್ಯವು ನಾಲ್ಕು ವೇದ, ಆರುಶಾಸ್ತ್ರ, ಹದಿನೆಂಟು ಪುರಾಣಗಳಲ್ಲಿ ಉಕ್ತವಾಗಿದೆ. ಇಪ್ಪತ್ತೆಂಟು ಸ್ಮೃತಿಗಳಲ್ಲಿಯೂ ಅದು ವಿವರಿಸಲ್ಪಟ್ಟಿದೆ. ಅವೆಲ್ಲ ಸಂಸ್ಕೃತ ಭಾಷೆಯಲ್ಲಿವೆ. ಈಗ ಸಂಸ್ಕೃತ ವಿದ್ಯೆಯು ಲುಪ್ತಪ್ರಾಯವಾಗಿರುವದರಿಂದ ನಮ್ಮ ಧರ್ಮದ ರಹಸ್ಯವೇ

ನಮಗೆ ತಿಳಿಯದಂತಾಗಿದೆ. ನಮ್ಮ ಧರ್ಮದ ರಹಸ್ಯವನ್ನು ನಾವು ಪರರಿಗೆ ತಿಳಿಸಿಕೊಡುವ ಪರಿಸ್ಥಿತಿಯು ಬದಲಾಗಿ, ನಮ್ಮ ಧರ್ಮವನ್ನು ನಮಗೇ ಬೇರೆಯವರು ತಿಳಿಸಿ ಹೇಳಬೇಕಾಗಿದೆ. ಇದರ ಪರಿಣಾಮವೇನಾಗಿದೆಯೆಂದರೆ, ನಮ್ಮ ಧರ್ಮ ನಮ್ಮ ಸಂಸ್ಕೃತಿ, ನಮ್ಮ ರಾಷ್ಟ್ರ, ನಮ್ಮ ನುಡಿ ಇವುಗಳ ಬಗ್ಗೆ ನಮ್ಮಲ್ಲಿ ಸ್ವಾಭಿಮಾನವೇ ಇಲ್ಲದಂತಾಗಿದೆ. ನಮ್ಮದಾದುದೆಲ್ಲ ಕೆಟ್ಟದ್ದೆಂದೂ, ಪಾಶ್ಚಿಮಾತ್ಯರ ಅಂಧಾನುಕರಣದಲ್ಲಿಯೇ ನಮ್ಮ ಉನ್ನತಿಯಿರುವದೆಂದೂ, ನಮ್ಮವರಲ್ಲಿ ಸುಶಿಕ್ಷಿತರೆಂದೆನಿಸಿಕೊಳ್ಳುವವರೂ ತಿಳಿಯಹತ್ತಿದ್ದಾರೆ. ಈ ಸ್ಥಿತಿಯು ದೂರವಾಗಬೇಕಾದರೆ ಸಂಸ್ಕೃತ ಭಾಷೆಯ ಪುನರುಜ್ಜೀವನವಾಗುವದು ಅತ್ಯವಶ್ಯವಿದೆ. ಈ ದೃಷ್ಟಿಯಿಂದ ಈ ಪರಿಷತ್ತಿನ ಕಾರ್ಯವು ಅಭಿನಂದನೀಯವಾಗಿದೆ.

"ಎಲ್ಲ ಜನರು ಎಲ್ಲ ಕೆಲಸಗಳನ್ನು ಎಂದೂ ಸರಿಯಾಗಿ ಮಾಡಲಾರರು. ಸಂಸ್ಕಾರ, ಶೀಲ, ಪ್ರಕೃತಿಮಾನ, ಶಿಕ್ಷಣ, ಸ್ವಭಾವ, ಹವೆ, ನೀರು, ಭೂಮಿಯ ಗುಣ ಮೊದಲಾದವುಗಳಿಗನುಸಾರವಾಗಿ ಸಮಾಜದೊಳಗಿನ ಬೇರೆ ಬೇರೆ ಜನರು ಬೇರೆ ಬೇರೆ ಕೆಲಸಗಳನ್ನು ಮಾಡಲಿಕ್ಕೆ ಯೋಗ್ಯರಾಗಿರುತ್ತಾರೆ. ಇಷ್ಟೇ ಅಲ್ಲ, ಒಬ್ಬನೇ ಮನುಷ್ಯನು ತನ್ನ ವಯಸ್ಸಿನ ಬೇರೆಬೇರೆ ಭಾಗಗಳಲ್ಲಿ ಬೇರೆ ಬೇರೆ ಕೆಲಸಗಳನ್ನು ಮಾತ್ರ ಮಾಡುವ ಯೋಗ್ಯತೆಯುಳ್ಳವನಾಗಿರುತ್ತಾನೆ. ಇನ್ನು ಯಾವ ಕೆಲಸವನ್ನು ಮಾಡಲಿಕ್ಕೆ ಯಾರು ಯೋಗ್ಯರಾಗಿರುತ್ತಾರೋ ಅವರಿಗೇ ಆ ಕೆಲಸವನ್ನು ಒಪ್ಪಿಸಿಕೊಡುವದು ಸಮಾಜದ ಹಿತದ ದೃಷ್ಟಿಯಿಂದ ಅಗತ್ಯವಿದ್ದಾಗಿದೆ. ಸಮಾಜದ ಘಟಕವಾದ ಪ್ರತಿಯೊಂದು ವ್ಯಕ್ತಿಯು ತನತನಗುಚಿತವಾದ ಸಾಮಾಜಿಕ ಹಿತದ ಕೆಲಸಗಳಲ್ಲಿ ತೊಡಗಿದರೆ, ಆಯಾ ಸಮಾಜವು ಉತ್ಕರ್ಷ ಹೊಂದಲೇ ಬೇಕು. ಈ ಮಾತನ್ನು ಲಕ್ಷದಲ್ಲಿಟ್ಟೇ ಗೀತೆಯು 'ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ' ಎಂದು ಹೇಳಿರುತ್ತದೆ. ವೈದಿಕ ಧರ್ಮದೊಳಗಿನ ವರ್ಣಾಶ್ರಮ ಧರ್ಮ ವ್ಯವಸ್ಥೆಯು ಈ ದೃಷ್ಟಿಯಿಂದಲೇ ರೂಢಿಯೊಳಗೆ ಬಂತು. ಆ ವ್ಯವಸ್ಥೆಯು ಸರಿಯಾಗಿ ನಡೆಯುತ್ತಿರುವ ವರೆಗೆ ನಮ್ಮ ದೇಶದಲ್ಲಿ ಶಾಂತಿ-ಸುಖ-ಸಮಾಧಾನಗಳು ನೆಲೆಗೊಂಡದ್ದಕ್ಕೆ ಇತಿಹಾಸವು ಸಾಕ್ಷಿಯಾಗಿದೆ.

ಆದುದರಿಂದಲೇ ನಮ್ಮ ಭರತಖಂಡವು ಪೂರ್ವಕಾಲದಲ್ಲಿ 'ಸುವರ್ಣ ಭೂಮಿ' ಎಂದು ಕರೆಸಿಕೊಳ್ಳಲ್ಪಡುತ್ತಿತ್ತು. ವರ್ಣಾಶ್ರಮ ವ್ಯವಸ್ಥೆಯ ಕಟ್ಟು ಕ್ರಮೇಣ ಶಿಥಿಲವಾಗುತ್ತ ಬಂದಂತೆ ನಮ್ಮ ದೇಶವು ಅವನತಿಯ ಹಾದಿಯನ್ನು ಹಿಡಿಯಿತು.

ವೈದಿಕ ಧರ್ಮದೊಳಗೆ ಬ್ರಾಹ್ಮಣನ ಸ್ಥಾನವು ಶ್ರೇಷ್ಠವಾಗಿದೆ. ಆದರೆ ಅದರ ಜೊತೆಗೆ ಅವನ ಮೇಲಿನ ಭಾರವೂ ಬಹಳವಾಗಿದೆ.

ಶಮೋದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ ।
ಜ್ಞಾನ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಂ ॥

ಎಂದು ಗೀತೆಯು (೧೮. ೪೨.) ಬ್ರಾಹ್ಮಣರಿಗುಚಿತವಾದ ಕರ್ಮಗಳನ್ನು ವಿವರಿಸುತ್ತದೆ. ಇಂದ್ರಿಯಗಳನ್ನೂ ಮನಸ್ಸನ್ನೂ ನಿಗ್ರಹ ಮಾಡಿ ಶಾಸ್ತ್ರ-ವಿಹಿತವಾದ ತಪಸ್ಸನ್ನಾಚರಿಸುತ್ತಿರಬೇಕು. ಬ್ರಾಹ್ಮಣನಾದವನು ಅತ್ಯಂತ ಶುಚಿಯಾಗಿಯೂ, ಕ್ಷಮಾಗುಣದಿಂದ ಕೂಡಿದವನಾಗಿಯೂ ಇದ್ದು, ಸರಳ ಮಾರ್ಗದಿಂದ ನಡೆಯುವವನಾಗಿರಬೇಕು. ಅವನಿಗೆ ಶಾಸ್ತ್ರಗಳ ಸರಿಯಾದ ಜ್ಞಾನವೂ, ಅವುಗಳಲ್ಲಿ ಹೇಳಿದ ಮಾರ್ಗದಂತೆ ನಡೆಯುವದ-ರಿಂದುಂಟಾಗುವ ಅನುಭವವೂ ಇರಬೇಕು. ಅವನಿಗೆ ವೇದಾದಿಗಳಲ್ಲಿ ಅಚಲವಾದ ಶ್ರದ್ಧೆಯಿರಬೇಕು. ಇವೇ ಮೊದಲಾದವುಗಳು ಬ್ರಾಹ್ಮಣನ ಸ್ವಾಭಾವಿಕವಾದ ಕರ್ಮಗಳು. ಹೀಗೆ ನಡೆಯುವವನು ಮಾತ್ರ ಬ್ರಾಹ್ಮಣ ನೆನಿಸಿಕೊಳ್ಳಲಿಕ್ಕೆ ಯೋಗ್ಯನಾಗುವನು. ಸಾರಾಂಶವೇನೆಂದರೆ:— ವೇದ ಶಾಸ್ತ್ರಾಭ್ಯಾಸವೂ, ತದನುಸಾರ ವರ್ತನವೂ ಬ್ರಾಹ್ಮಣರ ಕರ್ತವ್ಯ ಕರ್ಮ-ಗಳಾಗಿವೆ. ಇವುಗಳನ್ನನುಸರಿಸಿ ನಡೆಯುವ ಬ್ರಾಹ್ಮಣನು ಇಂದಿಗೂ ವಂದ್ಯನೇ ಆಗಿರುವನೆಂಬದರಲ್ಲಿ ಸಂದೇಹವಿಲ್ಲ.

''ಆದರೆ ಬ್ರಾಹ್ಮಣರ ಸದ್ಯದ ಪರಿಸ್ಥಿಯನ್ನು ನೋಡಿದರೆ ಕನಿಕರ ಹುಟ್ಟುವಂತಿದೆ. ಹೀಗಾಗಲಿಕ್ಕೆ ನಮ್ಮ ಆಚಾರಹೀನತೆಯೇ ಕಾರಣವು. 'ಬ್ರಾಹ್ಮಣೋ ಹೀನಸೇವಯಾ' ಎಂಬಂತೆ ನಾವು ಹೀನವಾದ ಸೇವಾವೃತ್ತಿ-ಯನ್ನವಲಂಬಿಸಿ ಸತ್ತ್ವಹೀನರಾಗಿದ್ದೇವೆ. ವೇದ ಶಾಸ್ತ್ರಾಧ್ಯಯನವಂತೂ

ಒತ್ತಟ್ಟಿಗಿರಲಿ, ಬ್ರಾಹ್ಮಣನಿಗೆ ನಿತ್ಯಕರ್ಮವಾದ ಸಂಧ್ಯೋಪಾಸನೆಯನ್ನೂ ಕೂಡ ಬ್ರಾಹ್ಮಣರು ಮಾಡದವರಾಗಿದ್ದಾರೆ. ಸಂಧ್ಯಾವಂದನೆಗೆ ಬಹಳವಾದರೆ ೧೦—೧೫ ಮಿನಿಟುಗಳು ಹಿಡಿಯಬಹುದು. ಆದರೆ ಸುಶಿಕ್ಷಿತರಾದ ಬ್ರಾಹ್ಮಣರಿಗೆ ಇಷ್ಟು ವೇಳೆಯನ್ನು ಕೂಡ ಸಂಧ್ಯಾವಂದನೆಗೆ ಕೊಡುವದು ಕಠಿಣವಾಗಿದೆ. ಸಂಧ್ಯೋಪಾಸನೆ ಮಾಡಲಿಕ್ಕೆ ಕಾಲಾವಕಾಶವಿಲ್ಲವೆನ್ನುವದಕ್ಕಿಂತ, ಅವರ ಔದಾಸೀನ್ಯವೇ ಮುಖ್ಯಕಾರಣವೆಂದು ತೋರುತ್ತದೆ. ಸಂಧ್ಯೆಯ ಮತ್ತು ಗಾಯತ್ರಿಯ ಮಹತ್ತ್ವವು ಅಗಾಧವಾಗಿದೆ. ಆದರೆ ಅತ್ತ ಗಮನ ಕೊಡುವವರು ಯಾರು ?

''ವೇದಶಾಸ್ತ್ರಾಧ್ಯಯನವು ಲೋಪವಾದೊಡನೆ ಶ್ರೌತಸ್ಮಾರ್ತ ಕರ್ಮಗಳೂ ಅಸ್ತಂಗತವಾದವು. ಧರ್ಮವಿಧಿಗಳ ಮೇಲಿನ ನಂಬಿಗೆಯು ಹಾರಿತು. ಸ್ನಾನಸಂಧ್ಯಾದಿಗಳು ಕಾಣದಂತಾದವು. ತಿಂಬುಂಬುವದರಲ್ಲಿ ನಿರ್ಬಂಧವಿಲ್ಲದಂತಾಯಿತು. ಕೆಲವರು ಸ್ನಾನ, ಸಂಧ್ಯಾ, ತಿಂಬುಂಬುವದರಲ್ಲಿ ನಿರ್ಬಂಧ, ಇವು ಕೇವಲ ವರ್ಣಧರ್ಮಗಳಾಗಿದ್ದು, ಇವುಗಳಿಗೂ, ಸತ್ಯ, ನ್ಯಾಯ, ಪ್ರೇಮ ಮೊದಲಾದ ಶಾಶ್ವತ ಧರ್ಮದ ಆಧಾರಭೂತ ಗುಣಗಳಿಗೂ ಏನೂ ಸಂಬಂಧವಿಲ್ಲೆಂದು ಆಕ್ಷೇಪಿಸಬಹುದು. ಆದರೆ ಇದಕ್ಕೆ ಉತ್ತರವೇನೆಂದರೆ— ಸ್ನಾನ, ಸಂಧ್ಯಾ, ಊಟ ಉಡಿಗೆಗಳಲ್ಲಿ ನಿರ್ಬಂಧವಿಡುವದರಿಂದ ನೀತಿವೃದ್ಧಿಗೆ ಆವಶ್ಯಕಗಳಾದ ಆತ್ಮಸಂಯಮನ, ಮನಃಶಾಂತಿ ಮೊದಲಾದವುಗಳ ಸಂಸ್ಕಾರವಾಗುತ್ತಿರುತ್ತದೆ. ಈಗ ಈ ನಿರ್ಬಂಧವಿಲ್ಲದ್ದರಿಂದ ಆ ಸಂಸ್ಕಾರವಿಲ್ಲದಂತಾಗಿ ಅಸತ್ಯದ ಪ್ರಚಾರವು ಹೆಚ್ಚಾಗಿರುತ್ತದೆ. ಇತ್ತೀಚೆಗೆ ಎಷ್ಟೋ ಬ್ರಾಹ್ಮಣರು ಬೇಕಾದ್ದನ್ನು ಬೇಕಾದ್ದಲ್ಲಿ ತಿನ್ನುತ್ತಾರೆ. ಮತ್ತು ಕುಡಿಯುತ್ತಾರೆ. ಬೇಕಾದವರು ಬೇಯಿಸಿದ ಅನ್ನವನ್ನು ಸೇವಿಸುತ್ತಾರೆ. ಅವರು ಹೊರಗೆ ಪಾವಿತ್ರ್ಯದ ಸೋಗು ಹಾಕಿದರೂ ಒಳಗೆ ಆತ್ಮಸಂಯಮನವಿಲ್ಲದ್ದರಿಂದ ಅಸತ್ಯದ ಆಗರವಾಗಿರುತ್ತಾರೆ. ಸಾರಾಂಶವೇನೆಂದರೆ— ಬ್ರಾಹ್ಮಣರು ತಮ್ಮ ಕರ್ತವ್ಯ ಪರಾಙ್ಮುಖರಾಗಿ ಧರ್ಮಭ್ರಷ್ಟರಾದುದರಿಂದಲೇ ಈಗಿನ ಹೀನ ಸ್ಥಿತಿಯು ಅವರಿಗೆ ಪ್ರಾಪ್ತವಾಗಿರುತ್ತದೆ.

''ಮೇಲೆ ಹೇಳಿದಂತೆ ಬ್ರಾಹ್ಮಣರಿಗೆ ಬಂದ ಈ ವಿಪನ್ನಾವಸ್ಥೆಯನ್ನು ಶಕ್ತ್ಯನುಸಾರವಾಗಿ ದೂರಮಾಡಲಿಕ್ಕೆಂದು ಈ ಕಾತ್ಯಾಯನ ಪರಿಷತ್ತು ಸ್ಥಾಪಿತವಾಗಿದೆ. ಸಂಸ್ಕೃತ ಭಾಷೆ ಮತ್ತು ವೇದಶಾಸ್ತ್ರಗಳ ಪುನರುಜ್ಜೀವನವೇ ಅದರ ಧ್ಯೇಯವಾಗಿದೆ. ಪೌರಾಣಿಕ ಕಾಲದ ಬ್ರಾಹ್ಮಣರಂತೆ ಶ್ರೇಷ್ಠತೆಯು ಬೇಕಾಗಿದ್ದರೆ, ಮೊದಲಿನ ಆಶ್ರಮಗಳಂತೆ ಅಲ್ಲಲ್ಲಿ ಪಾಠಶಾಲೆಗಳನ್ನು ಸ್ಥಾಪಿಸಿ, ಅವುಗಳ ಮುಖಾಂತರವಾಗಿ ವೇದಾಭ್ಯಾಸವೂ ಅವುಗಳಿಗನುಸಾರವಾಗಿ ಆಚರಣೆಯೂ ಆಗಬೇಕು. ಈ ವಿಷಯಕ್ಕೆ ಬ್ರಾಹ್ಮಣ ಸಮಾಜದೊಳಗಿನ ಈಗಿನ ಗ್ಲಾನಿಯೂ ಔದಾಸೀನ್ಯವೂ ದೂರವಾಗಬೇಕಾದರೆ ವೇದಾಭ್ಯಾಸ ಮಾಡಿ ವೇದವಿಹಿತ ಆಚಾರನಿಷ್ಠರಾದ ವಾಗ್ಮಿಗಳು ಧರ್ಮೋಪದೇಶಕರಾಗಿ ಊರೂರಿಗೆ ಅಡ್ಡಾಡಿ, ವ್ಯಾಖ್ಯಾನಗಳನ್ನು ಕೊಟ್ಟು, ಜನರಲ್ಲಿ ಧರ್ಮಜಾಗೃತಿಯನ್ನುಂಟು ಮಾಡಬೇಕು. ವೇದಶಾಸ್ತ್ರಜ್ಞರೆನಿಸಿಕೊಳ್ಳುವ ವೈದಿಕರು ಸ್ವಾರ್ಥತ್ಯಾಗ ಮಾಡಿ ವಿದ್ಯಾದಾನ ಮಾಡಲಿಕ್ಕೆಂದು ಮುಂದೆ ಬರಬೇಕು. ಈ ಕೆಲಸಕ್ಕೆ ದ್ರವ್ಯಬಲವು ಅತ್ಯಾವಶ್ಯಕವಾದುದರಿಂದ, ಧನಿಕ ಜನರಾದರೂ ಮುಕ್ತಹಸ್ತದಿಂದ ಇದಕ್ಕೆ ಸಹಾಯ ಮಾಡಬೇಕು. ಈಗ ಕೂಡಿದಂತೆ ಪರಿಷತ್ತು ಪ್ರಾಂತದ ಬೇರೆ ಬೇರೆ ಭಾಗಗಳಲ್ಲಿ ಕೂಡಿ, ವೈದಿಕ ಧರ್ಮದ ವಿಷಯಕ್ಕೆ ಜನರಲ್ಲಿ ಪ್ರೇಮವೂ ಪೂಜ್ಯಭಾವವೂ ಹುಟ್ಟುವಂತೆ ಯತ್ನಿಸಬೇಕು.

''ಈಗ ಕೆಲವು ವರುಷಗಳ ಹಿಂದೆ ಶ್ರೀ ಚಿದಂಬರ ವಂಶೋದ್ಭವ ಬ್ರಹ್ಮೀಭೂತ ಶ್ರೀ ಮಾರ್ತಾಂಡ ದೀಕ್ಷಿತ ಮಹಾರಾಜರು ಬೆಳಗಾವಿಯಲ್ಲಿ 'ಸ್ಮಾರ್ತ ಮತೋತ್ತೇಜಕ ಸಂಸ್ಥೆ'ಯನ್ನು ಸ್ಥಾಪನೆ ಮಾಡಿ, ಅದರ ಮೂಲಕ ವೇದಶಾಸ್ತ್ರಾಭ್ಯಾಸಕ್ಕೆ ಬಹಳ ಉತ್ತೇಜನ ಕೊಟ್ಟಿದ್ದರು ಈ ಸಂಸ್ಥೆಯಿಂದ ವೇ. ಕೃಷ್ಣಶಾಸ್ತ್ರಿ ಉಪ್ಪಿನ ಬೆಟಗೇರಿ, ಗುರುನಾಥಭಟ್ಟ ಐನಾಪುರ ಮೊದಲಾದ ವಿದ್ವಾಂಸರು ಹೊರಟರು. ನಮ್ಮ ಪರಮಪೂಜ್ಯ ಪಿತೃಗಳಂತಿರುವ ಶ್ರೀ ಯಜ್ಞೇಶ್ವರ ದೀಕ್ಷಿತ, ಬಡ್ಡಿ, ಇವರು ಇದೇ ತರದ ಕೆಲಸವನ್ನು ಕೈಕೊಂಡದ್ದನ್ನು ನೋಡಿ ಅತ್ಯಾನಂದವಾಗುತ್ತದೆ. ಆದರೆ

ಈ ಕೆಲಸವು ಬಹಳ ಮಹತ್ವದ್ದಾದುದರಿಂದ ಇದಕ್ಕೆ ಈಗಿನಕೆಂತ ಹೆಚ್ಚಾಗಿ ಧನಸಹಾಯವೂ ಜನಸಹಾಯವೂ ಬೇಕು. ಆದುದರಿಂದ ಸಮಸ್ತ ಬ್ರಾಹ್ಮಣ ವರ್ಗಕ್ಕೆ ನಾವು ಆಗ್ರಹಪೂರ್ವಕವಾಗಿ ಸೂಚನೆ ಮಾಡುವದೇನೆಂದರೆ— ಈ ಪವಿತ್ರವಾದ ಕಾರ್ಯಕ್ಕೆ ಪ್ರತಿಯೊಬ್ಬರು ಕಾಯಾ-ವಾಚಾ-ಮನಸಿನಿಂದ ಸಹಾಯ ಮಾಡಲಿಕ್ಕೆ ಬೇಕು. ಶ್ರೀ ಚಿದಂಬರನ ಪ್ರೇರಣೆಯಿಂದ ಈ ಸಂಸ್ಥೆಯಿಂದ ವೇದಶಾಸ್ತ್ರಾಭ್ಯಾಸವು ಭರದಿಂದ ಸಾಗಿ, ಬ್ರಾಹ್ಮಣರಿಗೆ ಗತಕಾಲೀನ ಸುಸ್ಥಿತಿಯು ತೀವ್ರ ಪ್ರಾಪ್ತವಾಗಲೆಂದು ನಾವು ಆಶೀರ್ವದಿಸುತ್ತೇವೆ.''

ವಾಚಕರೇ, ಮಹಾರಾಜರು ಆ ಕಾಲಕ್ಕೆ ಮಾಡಿದ ಅಮೌಲ್ಯವಾದ ಉಪದೇಶದ ಮಾತುಗಳು ಇಂದಿಗೂ ಅನ್ವಯಿಸುವದಿಲ್ಲವೇ ?

೧೬ ಗಲಗಲಿಯ ದತ್ತಮಂದಿರ

ಗಲಗಲಿಯು ಕೃಷ್ಣಾತೀರದ ಒಂದು ಪ್ರಸಿದ್ಧವಾದ ಊರು. ಅದು ಭಾವಿಕರಲ್ಲಿ ಗಾಲವ ಕ್ಷೇತ್ರವೆಂದು ಹೆಸರಾಗಿದೆ. ಪೂರ್ವಕಾಲದಲ್ಲಿ ಗಾಲವನೆಂಬೊಬ್ಬ ಋಷಿಯು ತಪಸ್ಸು ಮಾಡುತ್ತಿದ್ದುದರಿಂದ ಆ ಊರಿಗೆ ಈ ಹೆಸರು ಬಂದಿದೆಯಂತೆ. ಇದು ವಿಜಾಪುರ ಜಿಲ್ಲೆಯೊಳಗೆ ಬೀಳಗಿ ಪೇಠಾದಲ್ಲಿ ಇರುತ್ತದೆ. ಇಂದಿಗೂ ಇಲ್ಲಿ ಬ್ರಾಹ್ಮಣ ಜನಸಂಖ್ಯೆಯು ಚನ್ನಾಗಿದೆ. ಇಲ್ಲಿಂದ ಅನೇಕ ಜನ ವಿದ್ವಾಂಸರು ಹೊರಬಿದ್ದಿದ್ದಾರೆ. ಊರು ರಮಣೀಯವಾಗಿದೆ. ಹವೆಯೂ ಚನ್ನಾಗಿದೆ. ಸ್ವಾರ್ಥ ಪರಮಾರ್ಥಗಳೆರಡನ್ನೂ ಗಳಿಸಬೇಕೆನ್ನುವ ಜನರು ಇಂದಿಗೂ ಅಲ್ಲಿಗೆ ಹೋಗುತ್ತಾರೆ.

ಮಹಾರಾಜರು ಮೊಟ್ಟಮೊದಲು ಗಲಗಲಿಯೊಳಗೆ ಕಾಲಿಟ್ಟುದು ಶಕೆ ೧೮೨೦ ರಲ್ಲಿ. ಆ ವರುಷ ಗುರುವು ಕನ್ಯಾರಾಶಿಗೆ ಸಂಕ್ರಮಣ ಮಾಡಿ ಅಲ್ಲಿ ಒಂದು ವರುಷದ ವರೆಗೆ ಇರುವದರಿಂದ, ಭಾಗೀರಥಿಯು ಕೃಷ್ಣೆಗೆ ದಯಮಾಡಿಸಿದ್ದಳೆಂದು ಭಾವಿಕರಾದವರು ನಂಬುತ್ತಾರೆ. ಈ ಪ್ರಸಂಗವು ''ಕನ್ಯಾಗತ'' ಎಂದು ಪ್ರಸಿದ್ಧವಿರುತ್ತದೆ. ಎಂದರೆ ಸಾಕ್ಷಾತ್ ಭಾಗೀರಥಿಯೊಳಗೆ ಸ್ನಾನ ಮಾಡಿದರೆ ಯಾವ ಪುಣ್ಯವು ದೊರೆಯುವದೋ ಅದೇ ಪುಣ್ಯವು ಆ ವರುಷ ಕೃಷ್ಣಾಸ್ನಾನದಿಂದ ದೊರೆಯುವದೆಂದು ಅರ್ಥವು. ಆದುದರಿಂದ ಕೃಷ್ಣಾತಟಾಕದ ಎಲ್ಲ ಕ್ಷೇತ್ರಗಳಲ್ಲಿಯಂತೆ ಆ ವರುಷ ಗಲಗಲಿಯಲ್ಲಿಯೂ ಬರಹೋಗುವ ಜನರ ಗಡಿಬಿಡಿಯು ವಿಶೇಷವಾಗಿತ್ತು.

ಗಲಗಲಿಯ ಅನೇಕ ಜನ ಬ್ರಾಹ್ಮಣರು ಗುರ್ಲಹೊಸೂರ ಚಿದಂಬರೋತ್ಸವಕ್ಕೆ ಬರುತ್ತಿದ್ದರು. ಅವರೆಲ್ಲರು ಮಹಾರಾಜರ ವರ್ಚಸ್ಸನ್ನೂ ಆಧ್ಯಾತ್ಮಿಕ ಸಿದ್ಧಿಯನ್ನೂ ಮನಗಂಡಿದ್ದರು. ಮಹಾರಾಜರು ತಮ್ಮಲ್ಲಿಗೆ

ಬಂದರೆ ತಮ್ಮ ಊರವರಿಗೆ ಅದೊಂದು ಪರ್ವಕಾಲವಾಗುವದೆಂದು ಅವರು ಸರಿಯಾಗಿ ಭಾವಿಸಿದರು. ಮಹಾರಾಜರಂಥವರ ಸಹವಾಸ, ಉಪದೇಶ ಮೊದಲಾದವುಗಳಿಂದ ತಾವು ಪುನೀತರಾಗುವೆವೆಂದು ಅವರಿಗೆ ಎನಿಸಿದ್ದರೆ ಆಶ್ಚರ್ಯವಿಲ್ಲ. ಈ ಕಾರಣದಿಂದ ಮಹಾರಾಜರನ್ನು ಗಲಗಲಿಗೆ ಕರಕೊಂಡೇ ಬರುವೆವೆಂದು ಪ್ರತಿಜ್ಞೆಮಾಡಿ, ಅಲ್ಲಿಯ ಬ್ರಾಹ್ಮಣರ ಪ್ರತಿನಿಧಿಗಳಾದವರು ಗುರ್ಲಹೊಸೂರಿಗೆ ಬಂದು, ಮಹಾರಾಜರಿಗೆ ಗಂಟುಬಿದ್ದರು. ಅವರ ಉತ್ಸಾಹವನ್ನೂ ಆತುರತೆಯನ್ನೂ ನೋಡಿ ಮಹಾರಾಜರ ಹೃದಯವು ಕರಗಿತು. ಅವರು ಆ ಸಲದ ತಮ್ಮ ಚಾತುರ್ಮಾಸ್ಯವನ್ನು ಗಲಗಲಿಯಲ್ಲಿ ಕಳೆಯಲಿಕ್ಕೆ ಆನಂದದಿಂದ ಒಡಂಬಟ್ಟರು.

ಮಹಾರಾಜರ ಚಾತುರ್ಮಾಸ್ಯವು ಗಲಗಲಿಯಲ್ಲಿ ಒಳ್ಳೇ ವಿಜೃಂಭಣೆಯಿಂದ ಸಾಂಗವಾಯಿತು. ಅಲ್ಲಿಯ ಮಾಧ್ವ ಸಂಪ್ರದಾಯದ ಬ್ರಾಹ್ಮಣರೂ ಸಹ ಮಹಾರಾಜರ ದಿವ್ಯ ತೇಜಸ್ಸಿಗೂ, ಅಲೌಕಿಕತ್ವಕ್ಕೂ ಮೆಚ್ಚಿ, ಅವರ ಸೇವೆಯಲ್ಲಿ ನಿರತರಾದರು. ಮಹಾರಾಜರ ಚಾತುರ್ಮಾಸ್ಯದ ಕ್ರಮವು ಇಲ್ಲಿ ಬಲು ಚನ್ನಾಗಿ ಸಾಗಿತು. ಕಕ್ಕಡಾರತಿ, ರುದ್ರಾಭಿಷೇಕ, ಜಪ, ಪುರಾಣ, ಪ್ರವಚನ, ಭಜನೆ ಮೊದಲಾದ ಎಲ್ಲ ವಿವಿಧಾಂಗಗಳು ತಪ್ಪದೇ ಯಥಾಕಾಲದಲ್ಲಿ ನಡೆಯುತ್ತಿದ್ದವು. ಬ್ರಾಹ್ಮಣ ಸಂತರ್ಪಣೆಯಂತೂ ಅವಿಚ್ಛಿನ್ನವಾಗಿತ್ತು. ಕನ್ಯಾಗತದ ನಿಮಿತ್ತವಾಗಿ ಅಲ್ಲಿಗೆ ಬಂದ ಅನೇಕ ಯಾತ್ರಿಕರು ಮಹಾರಾಜರ ದರ್ಶನ-ಸೇವೆಗಳಿಂದ ಧನ್ಯರಾದರು. ನೂರಾರು ಜನರು ಶಿಷ್ಯರಾಗಿ ಅವರ ಕಡೆಯಿಂದ ಅನುಗ್ರಹವನ್ನು ಪಡೆದರು. ಮಹಾರಾಜರು ಅಲ್ಲಿ ಚಿದಂಬರ ಮಹಾತ್ಮ್ಯವನ್ನೂ ಚರಿತ್ರವನ್ನೂ ಚನ್ನಾಗಿ ಹಬ್ಬಿಸಿ, ಆ ಭಾಗದ ಜನರಲ್ಲಿ ಚಿದಂಬರ ಪ್ರೇಮ ಮತ್ತು ಭಕ್ತಿಗಳ ಬೀಜಗಳನ್ನು ಬಿತ್ತಿದರು.

ಅಲ್ಲಿದ್ದಾಗ ಮಹಾರಾಜರ ದೃಷ್ಟಿಯು ಇನ್ನೊಂದು ಮಾತಿನ ಕಡೆಗೆ ಹೊರಳಿತು. ಆ ಊರಲ್ಲಿ ಕೃಷ್ಣಾನದಿಯ ದಂಡೆಯ ಸಮೀಪದಲ್ಲಿ ಒಂದು ಜೀರ್ಣವಾದ ದತ್ತಮಂದಿರವಿತ್ತು. ಆ ದೇವಾಲಯದ ಆಗಿನ ಸ್ಥಿತಿಯನ್ನು ನೋಡಿದರೆ ಯಾವ ದತ್ತಭಕ್ತನಿಗೂ ಸಮಾಧಾನವಾಗುವಂತಿರಲಿಲ್ಲ.

ಆ ಊರ ದತ್ತಭಕ್ತರ ಮನಸ್ಸಿನಲ್ಲಂತೂ ಈ ಮಾತು ಒಳಿತಾಗಿ ಕೊರೆಯುತ್ತಿತ್ತು. ಮಹಾರಾಜರು ದತ್ತಪ್ರಭುವಿನ ಸಾಕ್ಷಾತ್ ಅವತಾರವಾದ ಶ್ರೀ ಅಕ್ಕಲಕೋಟ ಸ್ವಾಮೀ ಮಹಾರಾಜರಿಂದ ಅನುಗ್ರಹ ಪಡೆದಿದ್ದರು. ಆದುದರಿಂದ ಸ್ವಾಭಾವಿಕವಾಗಿ ಮಹಾರಾಜರ ಮನಸ್ಸಿನಲ್ಲಿ ಒಂದು ವಿಚಾರವು ಒಡಮೂಡಿತು: "ಈ ಜೀರ್ಣವಾದ ದತ್ತಮಂದಿರವನ್ನು ಹೊಸದಾಗಿ ಕಟ್ಟಿಸುವದು ವಿಹಿತವಲ್ಲವೇ?" ಆದರೆ ಸಾಧಕ ಬಾಧಕ ವಿಚಾರಗಳನ್ನು ತೂಗಿ ನೋಡಿದ ಹೊರತು ಅದನ್ನು ಹೊರಗೆಡವಬಾರದೆಂದು ಮಹಾರಾಜರು ಅಷ್ಟಕ್ಕೇ ಸುಮ್ಮನಾದರು.

ಆದರೆ ಮಹಾರಾಜರು ಇನ್ನೂ ಆ ಊರಲ್ಲಿಯೇ ಇರುವಾಗ ಅಲ್ಲಿಯ ಕೆಲವು ಜನರು ಈ ಮಾತಿನ ಪ್ರಸ್ತಾಪವನ್ನು ಅವರ ಮುಂದೆ ಎತ್ತಿಯೇ ಬಿಟ್ಟರು. ಅವರೊಂದು ದಿನ "ಸ್ವಾಮಿನ್, ತಾವು ದಯಮಾಡಿ ಇಲ್ಲಿಯ ದತ್ತಮಂದಿರದ ಜೀರ್ಣೋದ್ಧಾರ ಮಾಡಬೇಕೆಂದು ಬೇಡಿಕೊಳ್ಳುತ್ತೇವೆ. ತಮ್ಮಂಥವರು ಮುಂದಾದ ಹೊರತು ಈ ಕೆಲಸವು ಆಗುವಂತಿಲ್ಲ. ನಾವು ನಮ್ಮ ಕೈಯಿಂದಾದ ಎಲ್ಲ ರೀತಿಯಿಂದಲೂ ಈ ಕೆಲಸಕ್ಕೆ ಸಹಾಯ ಮಾಡಲು ಆತುರರಿದ್ದೇವೆ. ಆದರೆ ನಾವೇ ಮುಂದಾಗಿ ಈ ಕೆಲಸವನ್ನು ಮಾಡುವ ಧೈರ್ಯವು ಮಾತ್ರ ನಮ್ಮಲ್ಲಿರುವದಿಲ್ಲ. ತಾವು ಇದಿಷ್ಟು ಕಾರ್ಯಮಾಡಿದರೆ ನಮ್ಮೆಲ್ಲರ ಮೇಲೆ ಕೃಪೆಮಾಡಿದಂತಾಗುವದು." ಎಂದು ಬೇಡಿಕೊಂಡರು. ಮಹಾರಾಜರು ಆದಕ್ಕೆ ನಗುತ್ತ ಉತ್ತರಕೊಟ್ಟರು:— "ಒಳ್ಳೆಯದು. ನೋಡೋಣ ಚಿದಂಬರನ ಇಚ್ಛೆಯಿದ್ದರೆ ಮತ್ತು ನಿಮ್ಮೆಲ್ಲರ ಮನಸ್ಸಿಗೆ ಬಂದರೆ ಈ ಕೆಲಸವಾಗುವದರಲ್ಲಿ ಸಂದೇಹವಿಲ್ಲ. ಆದರೆ ಸದ್ಯಕ್ಕಂತೂ ಆ ಯೋಗ ಬಂದಂತೆ ಕಾಣುವದಿಲ್ಲ. ಮುಂದೆ ನೋಡುವ."

ಚಾತುರ್ಮಾಸ್ಯ ಮುಗಿದೊಡನೆ ಮಹಾರಾಜರು ತಿರುಗಿ ಗುರ್ಲಹೊಸೂರಿಗೆ ಹೋಗಿಬಿಟ್ಟರು. ಗಲಗಲಿಯ ದತ್ತಮಂದಿರದ ವಿಚಾರವು ನೆನೆಗುದಿಗೆ ಬಿತ್ತು. ಆದರೆ ಅದು ಮಹಾರಾಜರ ಮನಸ್ಸಿನೊಳಗಿಂದ ಸಂಪೂರ್ಣವಾಗಿ ಅಳಿಸಿ ಹೋಗುವದು ಶಕ್ಯವಿರಲಿಲ್ಲ. ಈ ಮಾತಿಗೆ ೧೦–೧೧ ವರುಷಗಳು ಕಳೆದು ಹೋದುವು. ಗಲಗಲಿಯ ಜನರ ಮನಸಿನಲ್ಲಿ

ಮಹಾರಾಜರನ್ನು ಮತ್ತೆ ತಮ್ಮ ಊರಿಗೆ ಕರಕೊಂಡು ಹೋಗಬೇಕೆಂಬ ಪ್ರಬಲವಾದ ಇಚ್ಛೆಯುಂಟಾಯಿತು. ಅದರಂತೆ ಶಕೆ ೧೮೩೧ನೆಯ ಚಾತುರ್ಮಾಸ್ಯಕ್ಕೆ ಮಹಾರಾಜರನ್ನು ಪುನಃ ಗಲಗಲಿಗೆ ಕರಕೊಂಡು ಹೋದದ್ದೂ ಆಯಿತು. ಆಗ ಸ್ವಾಭಾವಿಕವಾಗಿ ದತ್ತ ಮಂದಿರದ ಜೀರ್ಣೋದ್ಧಾರದ ವಿಷಯವು ಹೊರಟಿತು. ಮಹಾರಾಜರ ಮನಸಿನಲ್ಲಿ ಅದು ಈಗ ಪ್ರಮುಖ ಸ್ಥಾನವನ್ನು ಪಡೆದಿತ್ತು. ತಮ್ಮ ಅವತಾರ ಕಾರ್ಯವು ಮುಗಿಯುತ್ತ ಬಂದಿದೆಯೆಂಬದನ್ನು ಮಹಾರಾಜರೀಗ ಕಂಡುಹಿಡಿದಿದ್ದರು. ಆದುದರಿಂದ ಅವರು:— "ಒಳ್ಳೆಯದು. ಈ ಕಾರ್ಯವನ್ನೀಗ ಕೈಕೊಳ್ಳುವ ಕಾಲವು ಬಂದಂತೆ ಕಾಣುತ್ತದೆ. ಬರುವ ಸುಗ್ಗಿಗೆ ನೀವು ಟೊಂಕ ಕಟ್ಟಿಕೊಂಡು ಈ ಬಗ್ಗೆ ಹಣ ಕೂಡಿಸುವ ಕೆಲಸ ಮಾಡಿರಿ. ನಾವಂತೂ ಇದ್ದೇ ಇದ್ದೇವೆ. ಆ ದೇವಸ್ಥಾನವನ್ನು ಹೊಸದಾಗಿ ಕಟ್ಟಿಸಿ ಯಥಾವಿಧಿಯಾಗಿ ದತ್ತನ ಪಾದುಕೆಗಳನ್ನಲ್ಲಿ ಸ್ಥಾಪಿಸುವದು ನಮ್ಮ ಕೆಲಸವು. ಆದರೆ ಅದರ ಪೂಜಾ-ಉತ್ಸವಾದಿಗಳು ಕೊನೆಯ ವರೆಗೆ ನಡೆಯುವಂತೆ ವ್ಯವಸ್ಥೆ ಮಾಡುವ ಹೊಣೆಯು ಮಾತ್ರ ನಿಮ್ಮದು. ಯಾಕೆಂದರೆ ಬರೇ ದೇವಾಲಯವನ್ನು ಕಟ್ಟಿಸಿ ದೇವರನ್ನು ಸ್ಥಾಪಿಸುವದಕ್ಕಿಂತಲೂ, ಅದರ ಪೂಜಾದಿಗಳು ಶಾಶ್ವತವಾಗಿ ನಡೆಯುವಂತೆ ಏರ್ಪಾಟು ಮಾಡುವದು ಹೆಚ್ಚುಮಹತ್ತ್ವದ್ದು" ಎಂದು ಅವರಿಗೆ ಪ್ರೋತ್ಸಾಹನ ಕೊಟ್ಟರು. ಇದರಿಂದ ಅಲ್ಲಯ ದತ್ತ ಭಕ್ತರಿಗೆ ಒಳ್ಳೇ ಹುರುಪು ಬಂದಂತಾಗಿ ಅವರು ಆ ಕಾರ್ಯಕ್ಕಾಗಿ ಟೊಂಕಕಟ್ಟಿ ನಿಂತರು.

ಚಿದಂಬರನ ಮನಸಿಗೆ ಬಂದ ಮೇಲೆ ಕೇಳುವದೇನು? ಶಕೆ ೧೮೩೨ನೆಯ ಚಾತುರ್ಮಾಸ್ಯಕ್ಕೂ ಮಹಾರಾಜರು ಗಲಗಲಿಗೇ ಹೋಗಬೇಕಾಯಿತು. ಮಹಾರಾಜರು ಈ ಸಲ ಅಲ್ಲಿಗೆ ಹೋದೊಡನೆ ಪ್ರಾಮುಖ್ಯವಾಗಿ ಈ ಕೆಲಸವನ್ನೇ ಕೈಕೊಂಡರು. ಮಹಾರಾಜರಂಥವರು ಈ ಕೆಲಸವನ್ನು ಅಂಗೀಕಾರ ಮಾಡಿದ್ದನ್ನು ನೋಡಿ ಗಲಗಲಿ ಊರೊಳಗಿನ ಎಲ್ಲ ಜನರೂ ಇದಕ್ಕೆ ಶಕ್ತಿಮೀರಿ ಸಹಾಯ ಮಾಡಿದರು. ಇಷ್ಟೇ ಅಲ್ಲ, ಸುತ್ತುಮುತ್ತಲಿನ ಊರೊಳಗಿರುವ ಶ್ರೀಮಂತರೂ, ದೇಸಾಯಿ ದೇಶಪಾಂಡೆಯವರೂ ಇದಕ್ಕೆ

ಮುಕ್ತಹಸ್ತದಿಂದ ಧನಸಹಾಯ ಮಾಡಿದರು. ಕಟ್ಟಡವನ್ನು ಕಟ್ಟುವ ಕೆಲಸವು ಒತ್ತರದಿಂದ ಸಾಗಿತು. ಮೇಲೆ ಮಳೆಯು ಸುರಿಯುತ್ತಿದ್ದರೂ, ಮಹಾರಾಜರ ಕೃಪಾಶೀರ್ವಾದಗಳಿಂದ ಉತ್ತೇಜಿತರಾದ ದತ್ತಭಕ್ತರು ಯಾವುದನ್ನೂ ಲೆಕ್ಕಿಸದೆ ದೇವಾಲಯದ ಕೆಲಸವನ್ನು ಸಮಾಧಾನಕರವಾಗಿ ಮಾಡಹತ್ತಿದರು. ಮುಪ್ಪು ಮತ್ತು ಬೇನೆಯಿಂದುಂಟಾದ ಅಶಕ್ತತೆಯಿಂದ ಮಹಾರಾಜರು ತೀರ ಹಣ್ಣಾಗಿದ್ದರು. ಆದರೂ ಅವರು ಭಕ್ತಾತಿಶಯದಿಂದ ಶಾರೀರಿಕ ಸೇವೆಯನ್ನು ಕೂಡ ಮಾಡತೊಡಗುವದನ್ನು ನೋಡಿ, ಅವರನ್ನು ಆ ಕೆಲಸದಿಂದ ಬಿಡಿಸಬೇಕೆಂದು ಜನರು ನಾಮುಂದೆ ನೀಮುಂದೆ ಎಂದು ಧಾವಿಸುತ್ತಿದ್ದರು. ಆದರೆ ಅವರೆಲ್ಲರ ಕಣ್ಣು ತಪ್ಪಿಸಿ ಮಹಾರಾಜರು ಪ್ರತಿ ದಿವಸ ಸ್ವಲ್ಪಾದರೂ ಸೇವೆಯನ್ನು ಸಲ್ಲಿಸುತ್ತಲೇ ಇದ್ದರು.

ಹೀಗೆ ಸಾಕ್ಷಾತ್ತಾಗಿ ಮಹಾರಾಜರ ಮೇಲ್ವಿಚಾರಣೆಯ ಕೆಳಗೆ ಕಟ್ಟಡದ ಕೆಲಸವು ಮುಗಿಯುತ್ತ ಬಂತು. ಕಾರ್ಯವು ದೊಡ್ಡದಾದುದರಿಂದ ಹಣದ ಕೊರತೆಯು ಮೇಲಿಂದ ಮೇಲೆ ಭಾಸವಾಗುತ್ತಿತ್ತು. ಮಹಾರಾಜರ ಪರಮಭಕ್ತರಾದ ಶ್ರೀ. ಸಿದ್ದೋಪಂತ ಪೂಜಾರರವರು ಆ ಕಾಲಕ್ಕೆ ಬೀಳಗಿ ಪೇಶಾದ ಕಚೇರಿಯಲ್ಲಿ ಮಹಾಲಕರಿಯ ಕೈಕೆಳಗೆ ಕಾರಕೂನರಾಗಿದ್ದರು. ಅವರೂ ಸಹ ಈ ಧಾರ್ಮಿಕ ಕಾರ್ಯಕ್ಕೆ ತನು-ಮನ-ಧನಗಳಿಂದ ಸಹಾಯ ಮಾಡಿದರು. ಆದರೆ ಏನೇ ಆದರೂ ದೇವಾಲಯದ ಕೆಲಸವು ಮುಗಿಯಲೊಲ್ಲದಂತಾಯಿತು. ಗೋಡೆಗಳು ಏರಿದರೂ ಚಪ್ಪರದ ಕೆಲಸವು ಇನ್ನೂ ಉಳಿದಿತ್ತು.

ಪರಿಸ್ಥಿತಿಯು ಹೀಗೆ ಬಿಕ್ಕಟ್ಟಿಗೆ ಬಂದಿರುವಾಗ ಮಹಾರಾಜರ ಮತ್ತೊಬ್ಬ ಶಿಷ್ಯರಾದ ಶ್ರೀ. ಪಾರಸೇಕರರು ಮುಂಬಯಿಯಿಂದ ಮಹಾರಾಜರ ದರುಶನಕ್ಕಾಗಿ ಗಲಗಲಿಗೆ ಬಂದರು. ಶ್ರೀ. ಪಾರಸೇಕರರ ವಿಷಯವಾಗಿ ಈ ಮೊದಲೇ ನಾವು ಉಲ್ಲೇಖ ಮಾಡಿರುವದರಿಂದ ಅದನ್ನಿಲ್ಲಿ ಮತ್ತೆ ಬರೆಯುವ ಕಾರಣವಿಲ್ಲ. ಅವರು ದತ್ತಮಂದಿರದ ಕೆಲಸವನ್ನು ನೋಡಿ ಅತ್ಯಾನಂದಪಟ್ಟರು. ಆ ದಿನ ಸಾಯಂಕಾಲದಲ್ಲಿ ಪ್ರತಿನಿತ್ಯದಂತೆ ಭಜನವಾದ ಮೇಲೆ, ಪ್ರಸಾದಕ್ಕೆಂದು ಭಕ್ತರು ಹಣ್ಣುಕಾಯಿಗಳನ್ನು ತಂದು

ಮಹಾರಾಜರ ಮುಂದೆ ಇಟ್ಟರು. ಅವುಗಳೊಳಗಿಂದ ಮಹಾರಾಜರು ೧ ತೆಂಗಿನ ಕಾಯಿಯನ್ನೂ, ೨ ಬಾಳೇಹಣ್ಣುಗಳನ್ನೂ ತಮ್ಮ ಕೈಯಲ್ಲಿ ತಕ್ಕೊಂಡು, ಅವುಗಳನ್ನು ತಮ್ಮ ಅಮೃತದೃಷ್ಟಿಯಿಂದ ನೋಡಿ, ಮುಂದಿಟ್ಟುಕೊಂಡು ಕುಳಿತರು. ಮತ್ತು 'ಭಕ್ತಿವಿಜಯ'ದೊಳಗಿಂದ ಒಂದು ಸ್ವಾರಸ್ಯಪೂರ್ಣವಾದ ಕಥೆಯನ್ನು ಹೇಳಿ, ಅಲ್ಲಿ ಕೂಡಿದ ಭಕ್ತಜನರನ್ನುದ್ದೇಶಿಸಿ ಮಾತಾಡಿದರು:— ''ಭಕ್ತರೇ, ಸದ್ಯಕ್ಕೆ ಇಲ್ಲಿ ಪ್ರಾರಂಭವಾಗಿರುವ ದೇವಾಲಯದ ಕೆಲಸಕ್ಕೆ ದ್ರವ್ಯಸಹಾಯವು ಅವಶ್ಯವಾಗಿರುವದು. ಆದುದರಿಂದ ಮುಂದೆ ಇಟ್ಟಿರುವ ಈ ಪ್ರಸಾದವನ್ನು ಲಿಲಾವಿನಲ್ಲಿ ಮೇಲಾಟದಿಂದ ಯಾರಾದರೂ ತಕ್ಕೊಂಡರೆ, ಆ ಹಣದಿಂದ ಮಂದಿರದ ಜೀರ್ಣೋದ್ಧಾರದ ಕೆಲಸವು ಮುಗಿಯುವಂತಿದೆ. ಆ ಯೋಗದಿಂದ ಅವರಿಗೆ ಆಗುಂಡ ಪುಣ್ಯಲಾಭವು ದೊರೆಯುವದು. ಮನಸಿನಲ್ಲಿದ್ದವರು ಮುಂದೆ ಬಂದು ಜೋಡಬಹುದು.''

ಆಯಿತು. ಕೇಳುವದೇನು ? ಅಲ್ಲಿ ಕೂಡಿದ ಭಕ್ತರೊಳಗೆ ಒಮ್ಮೆಲೇ ವಿದ್ಯುತ್ ಸಂಚಾರವಾದಂತಾಯಿತು. ಮಹಾತ್ಮರ ದಿವ್ಯದೃಷ್ಟಿಗೆ ಒಳಗಾದ ಯಾವ ಪದಾರ್ಥವೂ ಅವರ ಭಕ್ತರಿಗೆ ಅಮೃತತುಲ್ಯವಾಗಿರುತ್ತದೆ. ಸತ್ಪುರುಷರ ಕರಸ್ಪರ್ಶದಿಂದ ಪುನೀತವಾದ ಯಾವ ವಸ್ತುವೂ ಅವರ ಶಿಷ್ಯರಿಗೆ ರತ್ನಪ್ರಾಯವಾಗಿರುತ್ತದೆ. ದೊಡ್ಡವರ ಬಾಯಿಂದ ಬಂದ ಯಾವ ಮಾತೂ ಅವರ ಅನುಯಾಯಿಗಳಿಗೆ ವರದಾನನಾಗಿರುತ್ತದೆ. ಆದುದರಿಂದ ಮಹಾರಾಜರ ಭಕ್ತರು ಈ ಪ್ರಸಂಗದಲ್ಲಿ ಅಹಮಹಮಿಕೆಯಿಂದ ಏರಾಡಹತ್ತಿದರು. ಮಹಾರಾಜರು ತಾವಾಗಿಯೇ ಪ್ರಸಾದವೆಂದು ಕೊಡುವ ವಸ್ತುವನ್ನು, ಏನುಬೇಕಾದ್ದು ಕೊಟ್ಟು ತಕ್ಕೊಳ್ಳಲೇಬೇಕೆಂದು ಎಷ್ಟೋ ಜನರು ಸಂಕಲ್ಪ ಮಾಡಿದರು. ಮಹಾರಾಜರ ಪ್ರಸಾದವೆಂದರೇನು ಸಾಮಾನ್ಯವೇ? ''ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪ ಜಾಯತೇ'' ಎಂದು ಗೀತೆಯು ಹೇಳುತ್ತದೆ. ಎಂದರೆ ದೊಡ್ಡವರ ಪ್ರಸಾದ ಸಿಕ್ಕಿತೆಂದರೆ ಭಕ್ತರ ಎಲ್ಲ ದುಃಖಗಳೂ ದೂರಾಗುವವೆಂದು ಅರ್ಥವು. ಇಂಥ ಪ್ರಸಾದಕ್ಕಾಗಿ ಆದಾವನು ಮುಂದುವರಿಯದೆ ಇರುವನು ? ಯಾವನು ಶಕ್ಯವಿದ್ದು ಕೈಮುಚ್ಚಿಕೊಂಡು ಕೂಡುವನು ?

ಆ ಕಾಲಕ್ಕೆ ಪ್ರಚಂಡವಾದ ಏರಾಟವು ನಡೆಯಿತು. ''ಚಿದಂಬರ ಸರಕಾರವು ಇದಕ್ಕೆ ಮೊದಲನೆಯ ಸಾರೆ ಐದು ರೂಪಾಯಿ ಬೆಲೆಯನ್ನು ಹೇಳುವದು'' ಎಂದು ಶ್ರೀ ವಾಜೀಂದ್ರರು ಮಹಾರಾಜರ ಅಪ್ಪಣೆಯಿಂದ ಲಿಲಾವು ಸುರುಮಾಡಿದರು. ವಾಜೀಂದ್ರರ ಮಾತು ಮುಗಿಯುವದರೊಳಗಾಗಿ ''ಹತ್ತು ರೂಪಾಯಿ'' ಎಂದು ಒಬ್ಬನು ಕೂಗಿದನು. ಅಷ್ಟರಲ್ಲಿಯೇ ಮತ್ತೊಬ್ಬನು ''ಹದಿನೈದು ರೂಪಾಯಿ'' ಎಂದು ಒದರಿದನು. ತತ್ಕಾಲದಲ್ಲಿ ಇನ್ನೊಬ್ಬನು ''ಇಪ್ಪತ್ತು ರೂಪಾಯಿ'' ಎಂದು ಚೀರಿದನು. ಹೀಗೆ ಸವಾಲಿನ ಅಂಕೆಯು ಭರದಿಂದ ಏರಹತ್ತಿತು. ಹಾಹಾ ಎನ್ನುವಷ್ಟರಲ್ಲಿ ಸಂಖ್ಯೆಯು ನೂರನ್ನು ಮುಟ್ಟಿತು. ಆಗ ಶ್ರೀ. ಪಾರಸೇಕರರು ಸಭೆಯಲ್ಲಿ ಎದ್ದು ನಿಂತವರೇ ''ನೂರಾಐವತ್ತು'' ರೂಪಾಯಿ ಎಂದು ಹೇಳಿದರು. ಅವರ ಬೇಡಿಕೆಯಿಂದ ಗಲಗಲಿಯ ಶ್ರೀಮಂತರಾದ ಶ್ರೀ. ಬಾಳಪ್ಪ ವಜ್ರಮುಷ್ಟಿ ಎಂಬವರಿಗೆ ಕೆರಳಿಸಿದಂತಾಯಿತು. ಗಲಗಲಿಯಲ್ಲಿ ನಡೆದ ಏರಾಟದೊಳಗೆ ಮುಂಬಯಿ ಸಾವಕಾರನ ಕೈಮೇಲಾಗಗೊಡಬೇಕೇ ಎಂಬ ವಿಚಾರವು ಅವರಿಗೆ ಬಂದು, ಅವರು ಸವಾಲಿನ ಅಂಕೆಯನ್ನು ೧೭೫ಕ್ಕೆ ಏರಿಸಿದರು. ಮುಂಬಯಿ ಸಾವಕಾರನ ಮುಂದೆ ಈ ಹಳ್ಳಿಯವರ ಪಾಡೇನು, ಎಂಬ ಹೆಮ್ಮೆಯಿಂದ ಶ್ರೀ ಪಾರಸೇಕರರು ಏರಾಟ ನಡೆಸಿದರು. ಈ ಇಬ್ಬರು ಶ್ರೀಮಂತರ ನಡುವೆ ನಡೆದ ತುರಸಿನ ಏರಾಟವನ್ನು ನೋಡಿ ಉಳಿದವರೆಲ್ಲ ತಣ್ಣಗೆ ಕುಳಿತರು ಶ್ರೀ ಪಾರಸೇಕರರು ಅಂದು ಏನು ಬೇಕಾದ್ದು ಕೊಡಲಿಕ್ಕೂ ಸಿದ್ಧರಾಗಿರುವರೆಂಬದು ನಿಶ್ಚಯವಾದೊಡನೆ, ಶ್ರೀ ವಜ್ರಮುಷ್ಟಿಯವರು ಹಿಂದೆಗೆದರು. ಕೊನೆಗೆ ೪೦೧ ರೂಪಾಯಿಗಳಿಗೆ ಶ್ರೀ ಪಾರಸೇಕರರು ಆ ಪ್ರಸಾದವನ್ನು ಪಡೆದು ಧನ್ಯರಾದರು.

ಆ ಮೇಲೆ ಮಹಾರಾಜರು ಸಮಾರೋಪ ಮಾಡಬೇಕೆಂಬ ದೃಷ್ಟಿಯಿಂದ ನಾಲ್ಕು ಉಪದೇಶದ ಮಾತುಗಳನ್ನಾಡಿದರು:— ''ಅಪ್ಪಗಳಿರಾ, ಚಿದಂಬರನ ದರಬಾರದಲ್ಲಿ ಇಂಥ ಸವಾಲುಗಳೇಕೆ, ಎಂದು ಸಂದೇಹ ಪಡಬೇಡಿರಿ. ಪ್ರಸಾದವು ಲಿಲಾವಿಗೆ ಹಚ್ಚತಕ್ಕ ವಸ್ತುವಲ್ಲ. ಲಿಲಾವಿನಲ್ಲಿ ಸಿಕ್ಕತಕ್ಕ ವಸ್ತುವೂ ಪ್ರಸಾದವಲ್ಲ. ಆದರೆ ಹಣವು ದೇವರ ಸೇವೆಗೇ

ಹೋಗುವದೆಂಬದನ್ನು ಲಕ್ಷದಲ್ಲಿಡಿರಿ. ಸೇವೆಯ ಕಡೆಗೆ ಮಾತ್ರ ದೃಷ್ಟಿ ಇಟ್ಟು ನಡೆಯುವವರಿಗೆ ಯಾವ ಚಿಂತೆಯೂ ಇಲ್ಲ ಕಂಡಿರಾ " ಆನಂತರದಲ್ಲಿ ಮಹಾರಾಜರು ಶ್ರೀ ಪಾರಸೇಕರರವರನ್ನು ಕುರಿತು ಅಪ್ಪಣೆಕೊಡಿಸಿದ್ದೇನೆಂದರೆ:— "ನೀವು ಕೊಡಬೇಕಾದ ರೂಪಾಯಿಗಳಲ್ಲಿ ಚಪ್ಪರಕ್ಕೆ ಬೇಕಾಗುವ ಕಬ್ಬಿಣದ ತಗಡುಗಳನ್ನು ಮುಂಬಯಿಯಲ್ಲಿ ಕೊಂಡು ಇಲ್ಲಿಗೆ ಕಳಿಸಿ ಕೊಡಿರಿ. ಎಂದರೆ ನಿಮ್ಮ ಸೇವೆಯು ಪೂರ್ಣವಾಗುವದು." ಈ ಮಾತಿಗೆ ಪಾರಸೇಕರರು ಅತ್ಯಾನಂದದಿಂದ ಒಪ್ಪಿಕೊಂಡರೆಂದು ಬೇರೆ ಹೇಳುವ ಕಾರಣವಿಲ್ಲ. ಅವರು ಕಳಿಸಿಕೊಟ್ಟ ತಗಡುಗಳಿಂದಲೇ ದತ್ತಮಂದಿರದ ಚಪ್ಪರದ ಕೆಲಸವು ಕೊನೆಗಂಡಿತು.

ಈ ದತ್ತಮಂದಿರದ ವಿಷಯದಲ್ಲಿಯೇ ಮಹಾರಾಜರು ಗಲಗಲಿಯಲ್ಲಿ ಇನ್ನೊಂದು ಚಮತ್ಕಾರ ಮಾಡಿ ತೋರಿಸಿದರು. ಸತ್ಪುರುಷರ ಚರಿತ್ರಗಳನ್ನು ಓದಿದರೆ, ಅವರು ಭಕ್ತರ ಸಲುವಾಗಿಯೂ, ದೇವರ ಮಹಾತ್ಮೆಯನ್ನು ಬೆಳೆಸುವ ಸಲುವಾಗಿಯೂ ಬೇಕಾದ ಪವಾಡಗಳನ್ನು ಮಾಡಿ ತೋರಿಸುವರೆಂದು ಕಂಡುಬರುತ್ತದೆ. ಅದರಂತೆ ಮಹಾರಾಜರೂ ಗಲಗಲಿಯಲ್ಲಿ ಆ ಸಲ ಮಾಡಿದರು. ಭಾದ್ರಪದ ಶುದ್ಧ ಪೌರ್ಣಿಮೆಗೆ ಚಾತುರ್ಮಾಸ್ಯವು ಮುಗಿದಂತಾಯಿತು. ಆ ದಿವಸ ಯತಿಗಳಿಗೆ ದೊಡ್ಡ ಉತ್ಸವ. ಶಕೆ ೧೮೩೨ನೆಯ ಭಾ. ಶುಕ್ಲ ೧೫ಕ್ಕೆ ಮಹಾರಾಜರು ತಮ್ಮ ಆ ಚಾತುರ್ಮಾಸ್ಯವನ್ನು ಮುಗಿಸತಕ್ಕವರಿದ್ದರು. ಅಂದೇ ಶುಭ ಮುಹೂರ್ತವಿದ್ದುದರಿಂದ, ಹೊಸದಾಗಿ ಕಟ್ಟಿಸಿದ ದತ್ತಮಂದಿರದಲ್ಲಿ ಪಾದುಕೆಗಳನ್ನಾದರೂ ಆ ದಿವಸವೇ ಸ್ಥಾಪನೆ ಮಾಡಬೇಕೆಂದು ಗೊತ್ತಾಗಿತ್ತು. ಎರಡು ಸಾವಿರಕ್ಕೆ ಮಿಕ್ಕಿ ಬ್ರಾಹ್ಮಣರು ಕೂಡಿದ್ದರು. ಶಾಸ್ತ್ರವಿಧಿಗಳೆಲ್ಲ ಯಥಾಸಾಂಗವಾಗಿ ಮುಗಿದವು. ಬ್ರಾಹ್ಮಣರ ಊಟವಾಗುವದಷ್ಟು ಉಳಿದಿತ್ತು. ಅಡಿಗೆಯೆಲ್ಲ ಸಿದ್ಧವಾಗಿತ್ತು. ಬೈಲಲ್ಲಿ ಎಲೆಗಳನ್ನು ಹಾಕಿದ್ದರು. ಬಡಿಸುವ ವ್ಯವಸ್ಥೆ ಯಾಗುವದರೊಳಗೇ ಸುತ್ತಲೆಲ್ಲ ಮೋಡಮುಸುಕಿ ಕತ್ತಲು ಕವಿಯಿತು. ಹಸ್ತಾನಕ್ಷತ್ರದ ಮಳೆಯು. ಕೇಳುವದೇನು ? ಭಯಂಕರವಾಗಿ ಸುರಿಯುವದೆಂದು ಎಲ್ಲರಿಗೂ ಎನಿಸಿತು. ಮಳೆಯ ಹನಿಗಳಾದರೂ ಉದುರಹತ್ತಿದವು. ಗಾಳಿಯು ಕೂಡ ಅದಕ್ಕೆ ಅನುಕೂಲವಾಗಿಯೇ ಬೀಸಹತ್ತಿತ್ತು.

ಮಳೆಯು ಬೀಳುವ ವಿಷಯದಲ್ಲಿ ಇನ್ನು ಯಾರಿಗೂ ಸಂಶಯವುಳಿಯಲಿಲ್ಲ. ಕೂಡಲೇ, ಬಡಿಸುವವರು ಮಹಾರಾಜರ ಹತ್ತರ ಬಂದು ಈ ಸಂಗತಿಯನ್ನು ತಿಳಿಸಿದರು. ಮಹಾರಾಜರು ಗುಂಗಾಳುನಗೆ ನಗುತ್ತ ಲಗುಬಗೆಯಿಂದ ಹೊರಗೆ ಬಂದರು. ಮತ್ತು ಹತ್ತಿಪ್ಪತ್ತು ಜನ ಪ್ರಾಯಸ್ಥರನ್ನು ತಮ್ಮ ಕಡೆಗೆ ಕರೆದು ಉಚ್ಚಸ್ವರದಿಂದ 'ಶಿವಚಿದಂಬರ, ಶಿವಚಿದಂಬರ' ಎಂಬ ನಾಮೋಚ್ಚಾರ ಮಾಡಲಿಕ್ಕೆ ತಿಳಿಸಿದರು. ಕ್ಷಣಾರ್ಧದಲ್ಲಿ 'ಶಿವಚಿದಂಬರ' ಎಂಬ ಭಗವನ್ನಾಮ ಗರ್ಜನೆಯಿಂದ ಆಕಾಶವು ಗಡುಚಿಕ್ಕಿ ಹೋಯಿತು. ಮಹಾರಾಜರು ತಮ್ಮ ಹೊದ್ದುಕೊಳ್ಳುವ ಶಾಟಿಯಲ್ಲಿ ಒಂದು ತೆಂಗಿನ-ಕಾಯಿಯನ್ನು ಕಟ್ಟಿ, ಅದನ್ನು ಒಬ್ಬನ ಕೈಯಲ್ಲಿ ಕೊಟ್ಟು, ಸಮೀಪದಲ್ಲಿರುವ ಗಿಡವನ್ನೇರಿ ಹೋಗಿ, ಒಂದೇ ಸವನೆ ಆ ಗಿಡದ ಮೇಲೆ ತಿರುಗಿಸಲಿಕ್ಕೆ, ಅಪ್ಪಣೆಕೊಟ್ಟರು. ಒಬ್ಬನ ಕೈಸೋತರೆ, ಮತ್ತೊಬ್ಬನು ಗಿಡವನ್ನೇರಿ ಹೋಗಿ, ಆ ಕಾಯಿಗಂಟನ್ನು ತಿರುಗಿಸಬೇಕೆಂದು ಸೂಚಿಸಿದರು. ಇತ್ತ, ಬಡಿಸುವವರಿಗೆ ನಿರ್ಭಯದಿಂದ ಬಡಿಸಲಿಕ್ಕೆ ಪ್ರಾರಂಭಿಸಿರಿ, ಎಂದು ಆಜ್ಞೆ-ಯನ್ನಿತ್ತರು. ಅಲ್ಪಾವಕಾಶದಲ್ಲಿಯೇ ಎಲ್ಲ ಎಲೆಗಳು ಬಡಿಸಲ್ಪಟ್ಟು, ಬ್ರಾಹ್ಮಣರೆಲ್ಲ ಊಟಕ್ಕೆ ಕುಳಿತರು. ಎಲ್ಲರೂ ಸಾವಕಾಶವಾಗಿ ಊಟ ಮಾಡಬೇಕೆಂದು ಬ್ರಾಹ್ಮಣರಿಗೆ ಮಹಾರಾಜರು ಆಗ್ರಹ ಪಡಿಸಹತ್ತಿದರು. ಶ್ರೀಗಳವರ ಅಪ್ಪಣೆಯಂತೆ ಬ್ರಾಹ್ಮಣರು ಸಾವಕಾಶವಾಗಿಯೂ ಸಂತೋಷ-ದಿಂದಲೂ ಊಟ ಮಾಡಲಾರಂಭಿಸಿದರು. ನಡುನಡುವೆ ಭಗವತ್‌ಸ್ಮರಣೆ-ಯನ್ನೊಳಗೊಂಡು ಸಂತೃಪ್ತಿ-ಸೂಚಕವಾಗಿರುವ ಶ್ಲೋಕಗಳನ್ನೂ ಹಾಡು-ಗಳನ್ನೂ ಅನೇಕರು ಹೇಳುತ್ತಿದ್ದರು. ಆಗಾಗ ಭಗವನ್ನಾಮಗರ್ಜನೆಯು ಉಚ್ಚಸ್ವರದಿಂದ ಆಗುತ್ತಿತ್ತು. ಬ್ರಾಹ್ಮಣರ ಊಟವಾಗಲಿಕ್ಕೆ ಕನಿಷ್ಟ ಪಕ್ಷಕ್ಕೆ ಒಂದು ಅಥವಾ ಒಂದೂ ಅರ್ಧದಷ್ಟಾದರೂ ಗಂಟೆಯು ಹತ್ತಿರ-ಬೇಕು. ಎಲ್ಲರೂ ಸಮಾಧಾನದಿಂದ ಊಟ ಮುಗಿಸಿ, ಕೈತೊಳೆದುಕೊಂಡು ಗುರುಲೀಲೆಯನ್ನು ಕೊಂಡಾಡುತ್ತ ಮನೆಯನ್ನು ಮುಟ್ಟುವದೊಂದೇ ತಡ, ತಡೆದುನಿಂತ ಮಳೆಯು ಭಯಂಕರವಾಗಿ ಬಿದ್ದು ನೋಡಿದತ್ತೆಲ್ಲ ನೀರೇನೀರಾ-ಯಿತು. ಎಂಜಲದೆಲೆಗಳು ಸಹ ಮಳೆಯ ನೀರಿನಿಂದಲೇ ತೇಲಿಹೋದವು. ಜನರೆಲ್ಲ ಈ ಚಮತ್ಕಾರಕ್ಕೆ ತಲೆದೂಗಿದರು. ಗುರ್ಲಹೊಸೂರ ಉತ್ಸವದಲ್ಲಿ

ಕೂಡ ಒಂದು ಸಲ ಮಹಾರಾಜರು ಇದೇ ತರದ ಚಮತ್ಕಾರವನ್ನು ತೋರಿಸಿದರೆಂಬದು ಅನೇಕರಿಗೆ ಗೊತ್ತಿದ್ದ ಮಾತಾಗಿದೆ.

ಚಾತುರ್ಮಾಸ್ಯ ಮುಗಿದೊಡನೆ ಮಹಾರಾಜರು ಗಲಗಲಿಯಿಂದ ಕೂಡಲೇ ಗುರ್ಲಹೊಸೂರಕ್ಕೆ ಹೊರಟರು. ಆದರೆ ಮಹಾರಾಜರಿಗೆ ವಚನಕೊಟ್ಟಂತೆ, ಅಲ್ಲಿಯ ಭಕ್ತ ಜನರು ಕೂಡಿ ದತ್ತ ಪಾದುಕೆಗಳ ಪೂಜಾ-ಉತ್ಸವಾದಿಗಳು ಕೊನೆಯ ವರೆಗೆ ನಡೆಯುವಂತೆ ಚನ್ನಾಗಿ ವ್ಯವಸ್ಥೆ-ಮಾಡಿದರು. ಇಂದಿಗೂ ಇಲ್ಲಿಯ ವ್ಯವಸ್ಥೆಯು ಸರಿಯಾಗಿ ನಡೆದಿರುವದು ಸಂತೋಷಕರವಾದ ಮಾತು. ದೇವಾಲಯದ ಎಲ್ಲ ಕೆಲಸವು ಮುಂದೆ ವಿಜಯಾ ದಶಮಿಗೆ ಮುಗಿಯಿತು. ಅಲ್ಲಿಯ ವರೆಗೆ ಆ ಕೆಲಸವು ನಡೆದೇ ಇತ್ತು. ಒಟ್ಟಿಗೆ ಈ ಕೆಲಸಕ್ಕೆ ಮೂರು ಸಾವಿರಕ್ಕೆ ಮೀರಿ ರೂಪಾಯಿಗಳು ಹತ್ತಿದವೆಂದು ನಿರ್ಭಯವಾಗಿ ಹೇಳಬಹುದು.

———

೧೭ ಶಿಕ್ಷಣ ಪದ್ಧತಿ

ಯಾವನೊಬ್ಬ ಸತ್ಪುರುಷನ ಚರಿತ್ರೆಯನ್ನು ಓದುವ ಸಾಧಕರಿಗೆ ಆ ಸತ್ಪುರುಷನು ಹೇಳಿಕೊಡುತ್ತಿದ್ದ ವಿಶಿಷ್ಟಸಾಧನವಾವುದು, ಎಂಬ ಪ್ರಶ್ನೆಯು ಬಹಳ ಮಹತ್ತ್ವದ್ದಾಗಿದೆ. ಎಲ್ಲ ಸಾಧುಪುರುಷರೂ ಒಂದೇ ತರದ ಗುರಿಯನ್ನು ಹೇಳಿಕೊಡುತ್ತಾರೆ. ಎಲ್ಲ ದೇಶದ ಮತ್ತು ಎಲ್ಲ ಕಾಲಗಳಲ್ಲಾಗಿ ಹೋದ ಸಾಕ್ಷಾತ್ಕಾರಿಗಳ ಅಂಬೋಣವನ್ನು ತೆಗೆದುಕೊಂಡು ವಿಚಾರಿಸಿದರೆ, ಜೀವಾತ್ಮನು ಪರಮಾತ್ಮನೊಡನೆ ಐಕ್ಯವನ್ನನುಭವಿಸುವದೇ ಅಧ್ಯಾತ್ಮದ ಪರಮಸಾಧ್ಯವೆಂಬದು ಗೊತ್ತಾಗುವಂತಿದೆ. ಎಂದರೆ ಐಕ್ಯಾನುಭವವೇ ಎಲ್ಲ ಪರಮಾರ್ಥ ಸಾಧನಗಳ ಚರಮ ಧ್ಯೇಯವಾಗಿರುವದು.

ಆದರೆ ಸಾಧನಗಳ ಬಗ್ಗೆ ಮಾತ್ರ ಈ ಏಕವಾಕ್ಯತೆಯು ಕಂಡು ಬರುವದಿಲ್ಲ. ಬೇರೆ ಬೇರೆ ಸಾಕ್ಷಾತ್ಕಾರಿಗಳು ಬೇರೆ ಬೇರೆ ತರದ ಸಾಧನಗಳ ಮೇಲೆ ಹೆಚ್ಚು ಕೈಯೂರುವಂತೆ ಕಾಣುತ್ತದೆ. ಇದೇ ರೀತಿಯಿಂದ ಕರ್ಮಯೋಗ, ಮಂತ್ರಯೋಗ, ತಂತ್ರಯೋಗ, ಹಟಯೋಗ, ಲಯಯೋಗ, ರಾಜಯೋಗ, ಧ್ಯಾನಯೋಗ, ಜ್ಞಾನಯೋಗ, ಭಕ್ತಿಯೋಗ ಮೊದಲಾದವುಗಳನ್ನು ಪುರಸ್ಕರಿಸುತ್ತಿರುವ ಅನೇಕ ಮತಗಳು ಅಸ್ತಿತ್ವದಲ್ಲಿ ಬಂದಿವೆ. ಆದರೆ ನಿಜವಾಗಿ ನೋಡಿದರೆ ಸಾಧನಗಳ ಬಗ್ಗೆ ಆಗ್ರಹವಿರಬಾರದು. 'ಯಾರು ಯಾರಿಗೆ ಯಾವ ಯಾವ ಸಾಧನ ಅಥವಾ ವಿಚಾರ ಸರಣಿಯಿಂದ ಐಕ್ಯ-ಜ್ಞಾನವಾಗುವದೋ, ಅವರವರಿಗೆ ಅದೇ ಉತ್ತಮವಾದ ಸಾಧನವೆಂದು ತಿಳಿಯಬೇಕು'' ಎಂದು ಸುರೇಶ್ವರಾಚಾರ್ಯರು ಹೇಳಿದ ಮಾತನ್ನು ಇಲ್ಲಿ ನೆನಪಿನಲ್ಲಿಡುವಂತಿದೆ. ಪ್ರತಿಯೊಬ್ಬನ ಪೂರ್ವಸಂಸ್ಕಾರ, ಪರಿಸ್ಥಿತಿ ಮತ್ತು ಬುದ್ಧಿಶಕ್ತಿಗಳಿಗನುಸರಿಸಿ ಸಾಧನಗಳು ಬೇರೆ ಬೇರೆಯಾಗುವದು ಅಪರಿಹಾರ್ಯವಿದೆ.

ಈ ದೃಷ್ಟಿಯಿಂದ ನೋಡಿದರೆ ನಮ್ಮ ಚರಿತ್ರನಾಯಕರು ಯಾವ ವಿಶಿಷ್ಟ ಸಾಧನವನ್ನು ಜನರಿಗೆ ಉಪದೇಶಿಸುತ್ತಿದ್ದರು ಮತ್ತು ಅದನ್ನು ಯಾವ ರೀತಿಯಿಂದ, ಯಾವಾಗ, ಹೇಗೆ ಉಪದೇಶಿಸುತ್ತಿದ್ದರು, ಎಂಬ-ದನ್ನು ವಿಚಾರಿಸುವದು ಅಗತ್ಯದ್ದಾಗಿದೆ. ಯಾಕೆಂದರೆ ಇದೇ ಮಾತು ನಿಜವಾಗಿ ಸಾಧಕರಿಗೆ ಹೆಚ್ಚು ಉಪಯುಕ್ತವಾದುದು.

ಬೃಹದಾರಣ್ಯಕೋಪನಿಷದ್ಭಾಷ್ಯದಲ್ಲಿ ಶ್ರೀ ಮಚ್ಛಂಕರಭಗವತ್ ಪಾದರವರು, ಬ್ರಹ್ಮಾನುಭವದ ಸಾಕ್ಷಾತ್ ಸಾಧನವು ಯಾವದು, ಎಂಬ ಪ್ರಶ್ನೆಗೆ ಉತ್ತರ ಕೊಡುವಾಗ, ಬ್ರಹ್ಮಜ್ಞಾನವೇ ಮುಖ್ಯವಾದ ಸಾಧನ-ವೆಂದೂ, ಅದು ಯಾರಿಗೆ ಸಾಧಿಸುವದಿಲ್ಲವೋ ಅವರು ಬ್ರಹ್ಮ ಚಿಂತನವನ್ನು ಮಾಡಬೇಕೆಂದೂ ಸ್ಪಷ್ಟವಾಗಿ ಹೇಳಿಕೊಟ್ಟಿದ್ದಾರೆ. ನಮ್ಮ ಚರಿತ್ರನಾಯಕ-ರಿಗಾದರೂ ಇದೇ ಮಾತು ಸಮ್ಮತವಿತ್ತು. ಆದರೆ ಸಾಮಾನ್ಯರಿಗೆ ಬ್ರಹ್ಮ ಜ್ಞಾನವು ತೀರ ಕಠಿಣವಾಗಿರುವದೆಂಬ ಕಾರಣದಿಂದ, ಅವರು ಎಲ್ಲರಿಗೂ ಬ್ರಹ್ಮಚಿಂತನವನ್ನೇ ವಿಶೇಷವಾಗಿ ಉಪದೇಶ ಮಾಡುತ್ತಿದ್ದರು. ಆದರಿಂದ ಮಹಾರಾಜರಲ್ಲಿ ಯೋಗ, ಯಾಗ, ಮಂತ್ರ, ತಂತ್ರ, ಚಾ ಚೂ ಮೊದಲಾದ ಯಾವ ಆಡಂಬರವೂ ಇರಲಿಲ್ಲ. ಅವರ ಎಲ್ಲ ಸಾಧನ ಮತ್ತು ಸಾಧ್ಯವೆಂದರೆ ಚಿದಂಬರನೊಬ್ಬನೇ ಸರಿ. ಯಾವ ತತ್ತ್ವವನ್ನು ಉಪನಿಷತ್ತುಗಳು ಬ್ರಹ್ಮ ವೆಂದೂ ಆತ್ಮವೆಂದೂ ಕರೆಯುವವೋ ಅದನ್ನೇ ಮಹಾರಾಜರು ಚಿದಂಬರ ನೆಂದು ಸಂಬೋಧಿಸುತ್ತಿದ್ದರು. ಚಿದಂಬರಕೃತ ಶಿಷ್ಯರಾದ ರಾಜಾರಾಮರು ಈ ವಿಷಯವಾಗಿ ಬರೆದ ಅಭಂಗಗಳು ಮಹಾರಾಜರ ಮನೋಭೂಮಿಕೆಗೆ ಸರಿಯಾಗಿ ಹತ್ತುವಂತಿವೆ: —

ಚಿದಂಬರ ಕ್ರಿಯಾಕರ್ಮ । ಸರ್ವತೂಚಿ ಮಾಝಾಬ್ರಹ್ಮ ॥
ತುಝೀ ರೂಪ ಮಾಝೀ ಧ್ಯಾನ । ತುಝೆ ನಾವು ಮಾಝೆ ಜ್ಞಾನ ॥
ತುಝಿ ಆಜ್ಞೇಚಾ ಪ್ರಮಾಣ । ಭಕ್ತಿಯೋಗ ತೇಚಿ ಜಾಣ ॥
ಹೃದಯಿ ತೂಚಿ ಆತ್ಮಾರಾಮು । ದಾಸ ಮ್ಹಣೆ ರಾಜಾರಾಮು ॥

"ಚಿದಂಬರಾ, ನನ್ನ ಕ್ರಿಯಾಕರ್ಮಗಳೆಂದರೆ ನೀನೇ. ನನ್ನ ಸಕಲ ಬ್ರಹ್ಮವೂ ನೀನೇ. ನಿನ್ನ ರೂಪನೇ ನನ್ನ ಧ್ಯಾನದ ವಿಷಯವು ನಿನ್ನ

ನಾಮವೇ ನನಗೆ ಜ್ಞಾನವು. ನಿನ್ನ ಆಜ್ಞೆಯೇ ನನಗೆ ಪ್ರಮಾಣವು. ಅದೇ ಭಕ್ತಿಯೋಗವು. ನೀನೇ ಆತ್ಮರಾಮನಿದ್ದು, ನನ್ನ ಹೃದಯದಲ್ಲಾದರೂ ನೀನೇ ಇರುವಿ. ಈ ಮಾತನ್ನು ದಾಸನಾದ ರಾಜಾರಾಮನು ಎದೆ ತಟ್ಟಿ ಹೇಳುವನು." ''ಚಿದಂಬರನ ಧ್ಯಾನಮಾಡುವದೇ ನನ್ನ ಸಂಧ್ಯಾಸ್ನಾನ-ಗಳು. ಪ್ರತಿನಿತ್ಯವೂ ಚಿದಂಬರನ ಭಜನ ಕೀರ್ತನಗಳನ್ನು ಮಾಡುವದೇ ನನ್ನ ಮುಖ್ಯ ಅನುಷ್ಠಾನವು.'' ''ನನ್ನ ತಂದೆ ತಾಯಿ, ಅಣ್ಣ ತಮ್ಮ, ಮತ್ತು ಆಪ್ತೇಷ್ಟರೆಂದರೆ ನೀನೊಬ್ಬನೇ. ನಿನ್ನ ಹೊರತಾಗಿ ನನಗೆ ಬೇರೆ ಯಾರೂ ಗತಿಯಿಲ್ಲ. ಚಿದಂಬರಾ, ನಿನಗೆ ನಾನು ಸಂಪೂರ್ಣ ಶರಣಾಗತ ನಾಗಿದ್ದೇನೆ. ನೀನೇ ನನ್ನ ಸ್ವಾಮಿಯು. ನನ್ನ ದೇಹವು ನಿನ್ನ ಚರಣ ಸೇವೆಗೆ ಮೀಸಲಾಗಿದೆ. ಆದುದರಿಂದ ಇನ್ನು ಮುಂದೆ ನಿನಗೆ ಏನು ಮಾಡುವದು ಉಚಿತವೆಂದು ತೋರುವದೋ ಹಾಗೆ ಮಾಡಬಹುದು. ಈ ದಾಸನಿಗೆ ಇನ್ನು ಯಾವ ಚಿಂತೆಯೂ ಇರುವದಿಲ್ಲ.''

ಶ್ರೀಮಚ್ಛಂಕರಭಗವತ್‌ಪಾದರವರ ಬ್ರಹ್ಮಜ್ಞಾನವು ಸಾಮಾನ್ಯರಿಗೆ ಅಶಕ್ಯವಾಗಿರುವಂತೆ ತೋರುತ್ತದೆ. ಆದುದರಿಂದ ಅದನ್ನು ಸಾಮಾನ್ಯ ಜನರ ಹಿಡಿತದೊಳಗೆ ತರಲಿಕ್ಕೆಂದು ಮಹಾರಾಷ್ಟ್ರದ ಸಾಧುಸಂತರು, ಅದ್ವೈತ ವೇದಾಂತಕ್ಕೆ ಭಾಗವತ ಧರ್ಮದ ಭಕ್ತಿಯ ಮೇಳವನ್ನು ಹಾಕಿದರು. ಎಂತೆಯೇ ಅವರು ಸಾಮಾನ್ಯ ಜನರೊಳಗೂ ಕೂಡ ವೇದಾಂತವನ್ನು ಹರಡಲಿಕ್ಕೆ ಸಮರ್ಥರಾದರು. ನಮ್ಮ ಚರಿತ್ರನಾಯಕರಿಗೆ ಭಾಗವತ ಧರ್ಮದ ಈ ಸಾಮರ್ಥ್ಯವು ಚನ್ನಾಗಿ ಮನವರಿಕೆಯಾದುದರಿಂದ, ಅವರು ಭಾಗವತ ಧರ್ಮದ ತತ್ತ್ವಗಳಿಗನುಸರಿಸಿ ತಮ್ಮ ಪರಮಾರ್ಥ ಜ್ಯೋತಿಯ ಕೆಲಸವನ್ನು ಕೈಕೊಂಡರು. ಮಹಾರಾಜರು ಸ್ವತಃ ಶಾಂಕರಮತಾನು-ಯಾಯಿಗಳಾಗಿದ್ದರು. ಆದರೂ ಅವರು ಭಾಗವತ ಏಕಾದಶೀ ಮೊದಲಾದವು ಗಳನ್ನು ಪರಿಪಾಲಿಸುತ್ತಿದ್ದರು. ಎಲ್ಲವನ್ನೂ ಭಗವಂತನಿಗೆ ಅರ್ಪಣಮಾಡು-ವದು, ಎಲ್ಲ ಪ್ರಾಣಿಗಳೂ ಪರಮಾತ್ಮ ಸ್ವರೂಪವೆಂದು ತಿಳಿಯುವದು, ಜಾತಿ-ಕುಲ-ಗೋತ್ರ-ಲಿಂಗ-ವಿದ್ಯಾ-ವಯಸ್ಸು ಮೊದಲಾದವುಗಳ ಹಂಗಿಲ್ಲದೆ ಎಲ್ಲರಿಗೂ ಪರಮಾರ್ಥದ ಬಾಗಿಲವನ್ನು ತೆರೆಯುವದು, ಭಗವನ್ನಾಮ

ಸ್ಮರಣೆಯನ್ನು ಮುಖ್ಯ ಸಾಧನವೆಂದು ಪುರಸ್ಕರಿಸುವದು, ಇವೇ ಮೊದಲಾದವುಗಳು ಭಾಗವತ ಧರ್ಮದ ತಿರುಳಾಗಿವೆ. ಭಾಗವತರು ಜ್ಞಾನಕ್ಕಿಂತಲೂ ಭಕ್ತಿಯ ಮೇಲೆ ಹೆಚ್ಚು ಕೈಯೂರುವರು. ಮಹಾರಾಷ್ಟ್ರದ ಸಂತರು ಈ ಮಾತನ್ನು "ಮುಕ್ತಿಯ ಮೇಲಿನ ಭಕ್ತಿ"ಯೆಂದು ವರ್ಣಿಸಿದ್ದಾರೆ. ಮಹಾರಾಜರ ಶಿಕ್ಷಣವೆಲ್ಲ ಈ ತತ್ತ್ವಗಳ ಮೇಲೆಯೇ ಅವಲಂಬಿಸಿತ್ತೆಂದು ಹೇಳಬಹುದು. "ಚಿದಂಬರನ ಚರಣದಲ್ಲಿ ಮನಸ್ಸನ್ನಿಟ್ಟು ಸುಖವಾಗಿ ಸಂಸಾರ ಮಾಡಿರಿ" ಎಂದು ಮಹಾರಾಜರು ಸಂಸಾರೀ ಭಕ್ತರಿಗೆ ಮತ್ತೆ ಮತ್ತೆ ಉಪದೇಶಿಸುತ್ತಿದ್ದರು.

ಗುರೂಪದಿಷ್ಟವಾದ "ಶಿವಚಿದಂಬರ" ಎಂಬ ನಾಮಸ್ಮರಣವನ್ನು ಮಹಾರಾಜರು ಸ್ವತಃ ಅಖಂಡವಾಗಿ ಮಾಡುತ್ತಿದ್ದರೆಂಬದು ವಾಚಕರಿಗೆ ಗೊತ್ತಿದೆ. ಅವರು ನಿದ್ರೆ ಮಾಡುತ್ತಿದ್ದುದು ತೀರ ತುಸು ವೇಳೆ ಮಾತ್ರ ಎಂದರೆ ಒಂದೆರಡು ತಾಸು ಮಾತ್ರ. ರಾತ್ರಿಯೆಲ್ಲವೂ ಚಿದಂಬರನ ಜಪದಲ್ಲಿಯೇ ಹೋಗಿ ಬಿಡುತ್ತಿತ್ತು. ಶ್ವಾಸೋಚ್ಛ್ವಾಸದೊಡನೆ ಭಗವನ್ನಾಮವನ್ನು ಕೂಡಿಸಿಕೊಂಡು ಅಭ್ಯಾಸ ಮಾಡುವದು ಶ್ರೇಷ್ಠವಾದ ಉಪಾಯವೆಂದು ಎಲ್ಲ ಸತ್ಪುರುಷರೂ ಹೇಳಿದ್ದಾರೆ. ಈ ಸಾಧನವು ಒಮ್ಮೆ ಸಾಧಿಸಿತೆಂದರೆ, ಮನುಷ್ಯನಿಗೆ ಎಚ್ಚರವಿರಲಿ, ಇರದಿರಲಿ, ನಾಮಸ್ಮರಣವು ಎಡೆಬಿಡದೆ ತಾನಾಗಿಯೇ ನಡೆಯಹತ್ತುತ್ತದೆ. ಶ್ವಾಸೋಚ್ಛ್ವಾಸವು ಯಾವ ಅವಸ್ಥೆಯಲ್ಲಿಯೂ ಬಂದಾಗುವದಿಲ್ಲವಷ್ಟೇ. ಹಾಗೆಯೇ, ಅದರೊಡನೆ ಒಂದಾಗಿ ಹೋದ ನಾಮಸ್ಮರಣವೂ ಅವನ ಎಲ್ಲ ಅವಸ್ಥೆಗಳಲ್ಲಿ ನಡೆಯಲಾರಂಭಿಸುತ್ತದೆ. ಮಹಾರಾಜರಿಗೆ ಈ ಸಾಧನವು ಎಂದೋ ಸಾಧಿಸಿತ್ತು. ಅದನ್ನವರು ಅಧಿಕಾರಿಗಳಾದ ಸಾಧಕರಿಗೆ ಹೇಳಿಯೂ ಕೊಡುತ್ತಿದ್ದರು. ಅದರಂತೆ ಕನ್ನಡಿಯಲ್ಲಿ ಮೋರೆಯನ್ನು ನೋಡಿಕೊಂಡು, ಅದರ ಧ್ಯಾನ ಮಾಡುವ ಒಂದು ಸಾಧನವೂ ಇದೆ. ದೇಹಾತ್ಮ ಬುದ್ಧಿಯ ನಿರಾಸಕ್ಕೆ ಈ ಸಾಧನವು ಬಲು ಉಪಯುಕ್ತವಾಗಿದೆ. ಮಹಾರಾಜರ ಈ ಸಾಧನವು ಕೊನೆಯ ವರೆಗೂ ಸಾಗಿತ್ತು. ನಿರಭಿಮಾನದಿಂದ ಲೋಕಲಜ್ಜೆಯಿಲ್ಲದೆ ಭಜನ ಮಾಡುವದು, ಕೀರ್ತನ ಮಾಡುವದು, ಪೂಜೆ ಮಾಡುವದು, ಭಗವಂತನ

ಗುಣಗಾನವನ್ನು ಹೇಳುವದು—ಕೇಳುವದು, ಇವೆಲ್ಲ ಮಹಾರಾಜರ ನಿತ್ಯಕರ್ಮಗಳಾಗಿದ್ದವು. ನವವಿಧಭಕ್ತಿಯ ರಹಸ್ಯವೆಲ್ಲ ಮಹಾರಾಜರ ಕೈವಶವಾಗಿತ್ತು. ಅವರು ಜ್ಞಾನಿಗಳಾಗಿದ್ದರೂ, ಮುಖ್ಯವಾಗಿ ಚಿದಂಬರ ಭಕ್ತರು. ಅವರ ಆಚರಣೆಯ ಮರ್ಮವನ್ನು ಶ್ರೀ. ಗುರುನಾಥ ವೆಂಕಟೇಶ ಕಿತ್ತೂರ ಎಂಬವರು ರಚಿಸಿದ ಮಹಾರಾಜರ ಸಂಸ್ಕೃತ ಚರಿತ್ರೆಯಲ್ಲಿ ಹೀಗೆ ವರ್ಣಿಸಿದ್ದಾರೆ:—

ಚಿದಂಬರಪದೇ ಚಿತ್ತೇ ಚಿದಂಬರಜಪೋ ಮುಖೇ।
ಚಿದಂಬರಕಥಾ ಶ್ರೋತ್ರೇ ಯಸ್ಯ ತಸ್ಮೈ ನಮೋ ನಮಃ ॥

ಎಂದರೆ ಅವರ ಮನಸಿನಲ್ಲಿ ಚಿದಂಬರನ ಚರಣ-ಕಮಲಗಳು, ಬಾಯಲ್ಲಿ ಚಿದಂಬರನ ನಾಮವು, ಮತ್ತು ಕಿವಿಯೊಳಗೆ ಚಿದಂಬರನ ಕಥೆಯು ಅಖಂಡವಾಗಿ ಇರುತ್ತಿದ್ದವು. ಅವರ ಯಾವ ಇಂದ್ರಿಯವೂ ಯಾವ-ಕಾಲದಲ್ಲಿಯೂ ಚಿದಂಬರ ವ್ಯತಿರಿಕ್ತವಾದ ವಿಷಯದಲ್ಲಿ ತೊಡಗಿರುತ್ತಿರಲಿಲ್ಲ. ಕಿಂಬಹುನಾ, ಮಹಾರಾಜರು ಚಿದಂಬರಮಯರಾಗಿದ್ದರೆಂದೇ ಹೇಳ-ಬಹುದು.

ಇದರ ಮೇಲಿಂದ ಮಹಾರಾಜರು ಮುಖ್ಯವಾಗಿ ಯಾವ ಸಾಧನ-ವನ್ನು ಉಪದೇಶಿಸುತ್ತಿದ್ದರೆಂಬದು ಸ್ಪಷ್ಟವಾಗುವಂತಿದೆ. ಚಿದಂಬರ ಭಕ್ತಿ-ಯೊಂದೇ ಅವರ ಉಪದೇಶವು. ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಮತ್ತು ಆತ್ಮನಿವೇದನವೆಂಬ ನವವಿಧ ಭಕ್ತಿಗೆ ಚಿದಂಬರನೊಬ್ಬನೇ ವಿಷಯವು. ಇವುಗಳಲ್ಲಿ ಯಾವದೊಂದು ಅಥವಾ ಹಲವನ್ನು ಆರಿಸಬಹುದೆಂದು ಮಹಾರಾಜರು ಹೇಳುತ್ತಿದ್ದರೂ ಚಿದಂಬರ ಸ್ಮರಣವು ಅವರ ಅತ್ಯಂತ ಪ್ರೀತಿಯ ಸಾಧನವಾಗಿತ್ತು. ಅದನ್ನೇ ಅವರು ಮುಖ್ಯವಾಗಿ ಉಪದೇಶಿಸುತ್ತಿದ್ದರು.

ಚಿದಂಬರ ಭಕ್ತಿಯ ಪ್ರಸಾರಕ್ಕಾಗಿ ಮಹಾರಾಜರು ಅನೇಕ ಉಪಾಯ-ಗಳನ್ನು ಕೈಕೊಂಡರು. ಹೆಚ್ಚೇನು? ಅವರ ನಿತ್ಯದ ಮತ್ತು ಜೀವನ-ದೊಳಗಿನ ಪ್ರತಿಯೊಂದು ಚಟುವಟಿಕೆ ಮತ್ತು ಉಪಕ್ರಮಗಳು ಕೇವಲ ಚಿದಂಬರ ಭಕ್ತಿಯ ಪ್ರಸಾರಕ್ಕಾಗಿಯೇ ಕೈಕೊಳ್ಳಲ್ಪಡುತ್ತಿದ್ದವೆಂದು

ಹೇಳಬಹುದು. ಮಹಾರಾಜರು ಚಿದಂಬರ ಭಕ್ತಿಯ ಪ್ರಚಾರಕ್ಕಾಗಿ ಕೈಕೊಂಡ ಎಲ್ಲ ಉಪಾಯಗಳನ್ನು ಇಲ್ಲಿ ವಿವರಿಸುವದು ಸಾಧ್ಯವಿಲ್ಲ. ದಿಗ್ದರ್ಶನ ಮಾಡುವದಕ್ಕಾಗಿ ಮಾತ್ರ ಕೆಲವು ಸಂಗತಿಗಳನ್ನು ಬರೆಯುತ್ತೇವೆ.

ಮುಖ್ಯವಾಗಿ ಗುರ್ಲಹೊಸೂರ ಚಿದಂಬರೋತ್ಸವದ ನಿಮಿತ್ತವಾಗಿ ಮಹಾರಾಜರು ಚಿದಂಬರ ಭಕ್ತಿಯನ್ನು ಹರಡಿಸಿದರಂಬದು ಸ್ಪಷ್ಟವಿದೆ. ಆದರೆ ಅದರ ಹೊರತಾಗಿ ಬೇರೆ ಬೇರೆ ಜನರಿಗೆ ಬೇರೆ ಬೇರೆ ಉತ್ಸವಗಳನ್ನು ವಹಿಸಿಕೊಟ್ಟು, ಅವರ ಕಡೆಯಿಂದ ಆ ಉತ್ಸವಗಳನ್ನು ಮಾಡಿಸುತ್ತಿದ್ದರು. ಪೌಷ ಶುದ್ಧ ಚತುರ್ಥಿಯೆಂದರೆ ಚಿದಂಬರ ಮಹಾರಾಜರ ಪುಣ್ಯತಿಥಿಯು. ಆ ಉತ್ಸವವನ್ನು ಮಹಾರಾಜರು ದೊಡ್ಡವಾಡದವರಿಗೆ ಒಪ್ಪಿಸಿಕೊಟ್ಟಿದ್ದರು. ಮಹಾರಾಜರು ಆ ಕಾಲಕ್ಕೆ ಪ್ರತಿವರುಷ ಅಲ್ಲಿಗೆ ಹೋಗಿ, ೩– ೪ ದಿನಗಳವರೆಗೆ ಅಲ್ಲಿದ್ದು, ಚಿದಂಬರನ ಅಭಿಷೇಕ, ಪೂಜೆ, ಕೀರ್ತನ, ಪುರಾಣ ಮೊದಲಾದ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ಅನ್ನಸಂತರ್ಪಣವಂತೂ ಸರಿಯೇ. ಸಂಜೆಯ ಕಡೆಗೆ ಚಿದಂಬರನನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ದಿಂಡೀ ಹೊರಡಿಸುವರು. ಶಕೆ ೧೮೭೦ರ ಉತ್ಸವದಲ್ಲಿ ಒಂದು ವಿಶೇಷ ಸಂಗತಿ ನಡೆಯಿತು. ಆ ಸಲದ ಉತ್ಸವವು ಇನ್ನೂ ಪೂರ್ತಿಯಾಗಿ ಮುಗಿಯದಿರುವಾಗಲೇ ಮಹಾರಾಜರು ಯಾರಿಗೂ ಹೇಳದೇ ಕೇಳದೇ ದೊಡ್ಡವಾಡವನ್ನು ಬಿಟ್ಟು ಹೊರಟರು. ಇದರಿಂದ ದುಃಖಿತರಾದ ಜನರು ಮಹಾರಾಜರ ಬೆನ್ನು ಹತ್ತಿ ಬಿಟ್ಟರು. ಶ್ರೀ. ತೀರ್ಥೋ ನಾರಾಯಣ ನವಲಗುಂದ, ನಾರಾಯಣ ರಾಮಚಂದ್ರ ಪಾಟೀಲ, ರಾಜಾರಾಮ ರುದ್ರೋ ಪಾಟೀಲ ಮೊದಲಾದವರು ಅವರಲ್ಲಿ ಪ್ರಮುಖರಾಗಿದ್ದರು. ಮಹಾರಾಜರು ಅವರನ್ನು ನೋಡಿ ಒತ್ತಟ್ಟಿಗೆ ಕುಳಿತರು. ಮತ್ತು ಮಣ್ಣಿನ ಎರಡು ಗುಂಪಿಗಳನ್ನು ಹಾಕಿ, ಅವುಗಳಲ್ಲಿ ಒಂದನ್ನು ಆರಿಸಬೇಕೆಂದು ಶ್ರೀ ತೀರ್ಥ ಶಾಸ್ತ್ರಿಗಳಿಗೆ ಆಜ್ಞಾಪಿಸಿದರು. ಅವುಗಳಲ್ಲಿ ಒಂದು ಗುಂಪಿಯೊಳಗೆ ಗೊರಟಿಯ ಹೂವಿತ್ತು. ಆದರೆ ಶ್ರೀ. ತೀರ್ಥಪ್ಪನವರ ಪಾಲಿಗೆ ಬರಿಯ ಮಣ್ಣಿನ ಗುಂಪಿಯೇ ಬಂತು. ಆಗ ಮಹಾರಾಜರು ಉಸಿರ್ಗರೆದು ಹೇಳಿದರು—: "ಅಪ್ಪಗಳಿರಾ, ಕಠಿಣ ದಿನಗಳು ಬರಲಿವೆ. ಆದರೂ ಚಿದಂಬರನ ಮೇಲೆ

ಭಾರವನ್ನು ಹಾಕಿ ಸ್ವಸ್ಥವಾಗಿ ಇರ್ರಿ.'' ಮುಂದೆ ಒಂದೆರಡು ತಿಂಗಳಲ್ಲಿ ಪ್ಲೇಗ ಬೇನೆಯು ದೊಡ್ಡವಾಡದೊಳಗೆ ಉಗ್ರರೂಪದಿಂದ ಕಾಣಿಸಿಕೊಂಡಿತು. ಮತ್ತು ಆ ಬೇನೆಗೆ ತೀರ್ಥಪ್ಪನವರೇ ಮೊದಲನೆಯ ತುತ್ತಾದರು !

ಇದೇ ರೀತಿಯಿಂದ ಮಹಾರಾಜರು ಮುರಗೋಡ ಹೊಸೂರಲ್ಲಿ ಶ್ರೀ. ನಾಗೇಶ ಲಿಂಗೋ ಕುಲಕರ್ಣಿ ಅಂಬುವವರಿಗೆ ಶ್ರೀ ಸಮರ್ಥ ಅಕ್ಕಲಕೋಟೆ ಸ್ವಾಮೀ ಮಹಾರಾಜರ ಆರಾಧನೆಯನ್ನು ಮಾಡಬೇಕೆಂದು ವಿಧಿಸಿದ್ದರು. ಶ್ರೀ ಸಮರ್ಥರು ದೇಹವಿಟ್ಟದ್ದು ಚೈತ್ರ ವದ್ಯ ೧೩. ಈ ನಿಮಿತ್ತವಾಗಿ ಮಹಾರಾಜರು ಪ್ರತಿವರ್ಷ ಅಲ್ಲಿಗೆ ಹೋಗಿ ದಶಮಿಯಿಂದ ಅಮಾವಾಸ್ಯೆಯ ವರೆಗೆ ಉತ್ಸವ ಮಾಡಿಸುತ್ತಿದ್ದರು. ಶ್ರೀ ಸಮರ್ಥರ ಭಾವಚಿತ್ರವನ್ನಿಟ್ಟು ಉತ್ಸವವು ನಡೆಯುತ್ತಿತ್ತು. ಬ್ರಾಹ್ಮಣ ಸಂತರ್ಪಣೆ, ಜಪ, ನಾರಾಯಣ ಮೊದಲಾದ ಎಲ್ಲ ಕಾರ್ಯಗಳೂ ತಪ್ಪದೇ ನಡೆಯುತ್ತಿದ್ದವು.

ಇದೇ ರೀತಿಯಾಗಿ ಮಹಾರಾಜರು ರಾಮನವಮಿ, ಕೃಷ್ಣಾಷ್ಟಮೀ, ಶ್ರೀಮಜ್ಜಗದ್ಗುರು ಶಂಕರಾಚಾರ್ಯರ ಉತ್ಸವ, ಗುರುದ್ವಾದಶೀ, ಗುರುಪ್ರತಿಪದಾ, ದತ್ತಜಯಂತಿ ಮೊದಲಾದ ಉತ್ಸವಗಳನ್ನು ಸ್ವಂತ ಮಾಡುವದಲ್ಲದೆ, ಬೇರೆಯವರ ಕಡೆಯಿಂದಲೂ ಮಾಡಿಸುತ್ತಿದ್ದರು. ಈ ತರದಿಂದ ಭಕ್ತಿಯ ಪ್ರಚಾರ ಕಾರ್ಯವು ಬಲು ಸರಸವಾಗಿ ಆಯಿತೆಂಬದು ಒಡೆದು ಕಾಣುವಂತಿದೆ.

ಇಷ್ಟೇ ಅಲ್ಲದೆ ಚಿದಂಬರ ಸಂಪ್ರದಾಯವನ್ನು ಸುವ್ಯವಸ್ಥಿತವಾಗಿ ಹಬ್ಬಿಸಿ ಪ್ರಸಾರ ಮಾಡುವದಕ್ಕಾಗಿ ಮಹಾರಾಜರು ಇನ್ನೊಂದು ಉಪಕ್ರಮವನ್ನು ಕೈಕೊಂಡರು. ಚಿದಂಬರ ಸಾಂಪ್ರದಾಯಿಕರಿಗೆ ತಮ್ಮ ಕರ್ತವ್ಯದ ಬಗ್ಗೆ ಎಚ್ಚರಿಕೆಯನ್ನ ಹುಟ್ಟಿಸಿ, ಅವರಿಗೆ ನಿತ್ಯನೈಮಿತ್ತಿಕ ನಿಯಮಗಳನ್ನು ಹಾಕಿಕೊಟ್ಟು,, ಅವರನ್ನು ಸನ್ಮಾರ್ಗಕ್ಕೆ ಹಚ್ಚುವದೇ ಮಹಾರಾಜರ ಉದ್ದೇಶವಾಗಿತ್ತು. ಈಗಿನ ಕಾಂಗ್ರೆಸ ಮೊದಲಾದವುಗಳ ಅನುಯಾಯಿಗಳು ಸ್ವಾತಂತ್ರ್ಯ ಮೊದಲಾದವುಗಳ ಪ್ರತಿಜ್ಞೆಗಳನ್ನು ಥಾಪಿಸಿ, ಅವುಗಳ ಕೆಳಗೆ ಜನರ ಸಹಿ ತೆಗೆದುಕೊಳ್ಳುವಂತೆ, ಮಹಾರಾಜರು ಚಿದಂಬರ ಸಾಂಪ್ರದಾಯಿಕ ನಿಯಮಗಳ ಕೆಳಗೆ ಹಾಗೆ ತಪ್ಪದೇ ನಡೆಯುವ ಬಗ್ಗೆ ಭಕ್ತರ

ಕಡೆಯಿಂದ ಸಹಿ ತಕ್ಕೊಳ್ಳುತ್ತಿದ್ದರು. ಮಹಾರಾಜರು ಆ ಬಗ್ಗೆ ಸಿದ್ಧಪಡಿಸಿದ ಪುಸ್ತಕದೊಳಗಿನ ಮುಖ್ಯ ಭಾಗವನ್ನು ಕೆಳಗೆ ಕೊಡಲಾಗಿದೆ.

ಶ್ರೀ ಚಿದಂಬರ ಪ್ರಸನ್ನ

ನರದೇಹವು ದುರ್ಲಭವಾಗಿದೆ. ಮನುಷ್ಯನು ಉಳಿದ ಪ್ರಾಣಿಗಳಂತೆಯೇ ತನ್ನ ಆಯುಷ್ಯವನ್ನು ಕಳೆದರೆ ಅವನಿಗೂ ಉಳಿದ ಪ್ರಾಣಿಗಳಿಗೂ ಏನೂ ಭೇದವಿಲ್ಲದಂತಾಗುವದು. ಕಾರಣ ಅವನಿಗೆ ಸಿಕ್ಕಿರುವ ಸೂಕ್ಷ್ಮವಾದ ಬುದ್ಧಿಯ ಉಪಯೋಗ ಮಾಡಿಕೊಂಡು ತನ್ನ ಜನ್ಮವನ್ನು ಸಾರ್ಥಕಗೊಳಿಸಬೇಕು.

ಸಾಧುಗಳ ಸಂರಕ್ಷಣೆ ಮತ್ತು ದುಷ್ಟಜನರ ನಾಶಕ್ಕಾಗಿ ಭಗವಂತನು ಅನೇಕ ಅವತಾರಗಳನ್ನು ಮಾಡಿರುತ್ತಾನಷ್ಟೇ. ಅವುಗಳಲ್ಲಿ ಚಿದಂಬರೇಶ್ವರನ ಅವತಾರವೂ ಒಂದು. ಭಗವಂತನು ಅವತಾರ ಮಾಡಿದ ಕಾಲಕ್ಕೆ ಅವನ ಭಕ್ತರು ಹುಟ್ಟಿಬಂದು, ಆ ದೇವರನ್ನು ಹೇಗೆ ಭಜಿಸಬೇಕೆಂಬ ಬಗ್ಗೆ ಸಾಂಪ್ರದಾಯ ಹಾಕಿಕೊಡುತ್ತಾರೆ. ಆ ಪದ್ಧತಿಗನುಸರಿಸಿ ದೇವರನ್ನು ಭಜಿಸುವದಕ್ಕೆ ಉಪಾಯಕ್ಕೆ ಉಪಾಸನೆಯೆಂಬ ಹೆಸರು. ಶ್ರೀ ಚಿದಂಬರೇಶ್ವರನ ಸಂಪ್ರದಾಯವು ಭಕ್ತನಾದ ರಾಜಾರಾಮನಿಂದ ರೂಢವಾಗಿದೆ. ಶ್ರೀ ರಾಜಾರಾಮನು ಹಾಕಿಕೊಟ್ಟ ಸಾಂಪ್ರದಾಯಿಕ ಪದ್ಧತಿಯಂತೆ ನಡೆಯುವದು ಎಲ್ಲ ಚಿದಂಬರ ಭಕ್ತರ ಕರ್ತವ್ಯವಾಗಿದೆ.

ನಿತ್ಯಕ್ರಮ

೧. ಮುಂಜಾನೆ ಮುಖಮಾರ್ಜನವಾದ ಮೇಲೆ ಭೂಪಾಳೀ, ಪಂಚರತ್ನ ಸ್ತೋತ್ರ ಮೊದಲಾದವುಗಳ ಪಠಣಮಾಡಬೇಕು. ಆ ಮೇಲೆ ೪೦೦ ಶಿವಚಿದಂಬರ ನಾಮಸ್ಮರಣ ಮಾಡಬೇಕು.

೨. ಸ್ನಾನವಾದ ನಂತರ ವರ್ಣಾಶ್ರಮೋಕ್ತ ರೀತಿಯಿಂದ ಭಸ್ಮಧಾರಣ ಮಾಡಿ, ಸಂಧ್ಯಾ (ಬ್ರಹ್ಮಯಜ್ಞ), ಸೂರ್ಯ ಅಥವಾ ಇಷ್ಟ ದೇವರಿಗೆ ೧೨ ನಮಸ್ಕಾರಗಳನ್ನು ಹಾಕಬೇಕು. ದೇವಪೂಜಾ ಮತ್ತು ವೈಶ್ವದೇವಗಳನ್ನು ತಪ್ಪದೇ ಮಾಡಬೇಕು. ಶ್ರೀ ಶಿವಚಿದಂಬರ ಜಪ ೧೦೮,

ಮತ್ತು ಶಕ್ತ್ಯಾನುಸಾರ ಚಿದಂಬರ ಚರಿತ್ರದ ೫೦ ಶ್ಲೋಕಗಳನ್ನಾದರೂ ಓದುತ್ತಿರಬೇಕು.

೩. ಊಟವಾದ ಮೇಲೆ ೨೦೦ ಶಿವಚಿದಂಬರ ನಾಮಸ್ಮರಣೆ ಮಾಡಬೇಕು. ಅನಂತರದಲ್ಲಿ ಯಾವುದಾದರೊಂದು ಆಧ್ಯಾತ್ಮಿಕ ಗ್ರಂಥವನ್ನೋದಬೇಕು. ಪುಸ್ತಕ ಮುಗಿಸುವದರ ಕಡೆಗೆ ಮನಸ್ಸಿಡದೆ, ಅದರೊಳಗಿನ ವಿಷಯಗಳನ್ನು ಮನನ ಮಾಡುತ್ತ ಹೋಗಬೇಕು.

೪. ಸೂರ್ಯಾಸ್ತವಾದ ಮೇಲೆ ಭಸ್ಮಧಾರಣ ಮಾಡಿ ಸಂಧ್ಯೋಪಾಸನೆ ಮಾಡಬೇಕು. ಮನೆಯಲ್ಲಾಗಲಿ ದೇವಸ್ಥಾನದಲ್ಲಾಗಲಿ ಭಜನೆ ಮಾಡುತ್ತಿರಬೇಕು. ಶಕ್ಯವಿದ್ದರೆ ಜನರನ್ನು ಕೂಡಿಕೊಂಡು ಭಜನೆ ಮಾಡಬೇಕು. ಇಲ್ಲವಾದರೆ ಒಬ್ಬನೇ ಮಾಡಬೇಕು. ಪಂಚಪದಿಗಳನ್ನು ಪಾಠ ಮಾಡಿರಬೇಕು. ಆವುಗಳಲ್ಲಿ ಪ್ರತಿದಿವಸ ಕ್ರಮವಾಗಿ ೧೦ ಅಭಂಗಗಳನ್ನು ಅನ್ನುತ್ತ ಹೋಗಿ, ಪುಸ್ತಕವನ್ನು ಮತ್ತೆ ಮತ್ತೆ ಮುಗಿಸಬೇಕು. ಆ ಮೇಲೆ ದೇವರಿಗೆ ಆರತೀ ಮಾಡಿ, ಊಟ, ತಾಂಬೂಲ ಸೇವೆ ಮತ್ತು ನಿದ್ರೆಯ ಅಭಂಗಗಳನ್ನು ಅಂದು ಭಜನ ಮುಗಿಸಬೇಕು.

೫. ರಾತ್ರಿಯ ಊಟವಾದ ಮೇಲೆ ಹಾಸಿಗೆಯ ಮೇಲೆ ಶಾಂತ ಮನಸ್ಸಿನಿಂದ ಕುಳಿತುಕೊಂಡು ೪೦೦ ಶಿವಚಿದಂಬರ ನಾಮಸ್ಮರಣ ಮಾಡಬೇಕು. ಆ ಮೇಲೆ ಆನಂದದಿಂದ ನಿದ್ರೆ ಮಾಡಬೇಕು. ಪ್ರತಿನಿತ್ಯ ೧೧೦೮ ಜಪಗಳಾದರೂ ಆಗಲೇಬೇಕು. ವೇಳೆಸಿಕ್ಕಾಗ ಜಪ ಮಾಡಬಹುದು.

೬. ರುದ್ರಾಕ್ಷಿಯ ಮಾಲೆಗಳನ್ನು ಹಾಕಿಕೊಳ್ಳಬೇಕು

೭. ತಂದೆ-ತಾಯಿಗಳನ್ನು ದೇವರೆಂದು ತಿಳಿದು ಸೇವೆ ಮಾಡಬೇಕು. ಅವರ ಅಪ್ಪಣೆಯನ್ನು ಎಂದೂ ಮೀರಬಾರದು.

೮. ತಮ್ಮಿಂದ ಎರಡನೆಯವರಿಗೆ ಯಾವ ತೊಂದರೆಯೂ ಆಗದಂತೆ ಎಚ್ಚರ ಪಡಬೇಕು.

ನೈಮಿತ್ತಿಕ ಕ್ರಮ

೧. ಪ್ರತಿವರ್ಷ ಉತ್ಸವಕ್ಕೆ ಶ್ರೀ ಕ್ಷೇತ್ರ ಕೆಂಗೇರಿಗೆ ಹೋಗಬೇಕು. ಅಲ್ಲಿಯ ಭಜಕರೊಡನೆ ಸೇರಿ ತಾನೂ ಭಜನೆ ಮಾಡಬೇಕು. ಭಕ್ತಜನರು

ಇಲ್ಲದಿದ್ದರೆ ತಾನೊಬ್ಬನೇ ನಿಯಮದಿಂದ ಅಭಂಗ ಮೊದಲಾದವುಗಳನ್ನು ಅನ್ನಬೇಕು.

೨. ದೇವರ ಮುಂದೆ ಚಂದ್ರಮಸಿಯೊಳಗೆ ತನಗೆ ಶಕ್ಯವಿದ್ದ ಹಣವನ್ನು ಸಮರ್ಪಣೆ ಮಾಡಬೇಕು. ಪಂಢರಪುರ, ವಾಡೀ ಮೊದಲಾದ ಕ್ಷೇತ್ರಗಳಿಗೆ ಹೋದವರು ಅಲ್ಲಿ ದೇವರಿಗೆ ನೈವೇದ್ಯ ಮಾಡಿಸುವ ಪರಿಪಾಠವಿದೆ-ಆ ತರದ ಪರಿಪಾಠವು ಕೆಂಗೇರಿಯಲ್ಲಿಲ್ಲ. ಅದರ ಬದಲಾಗಿ ಚಂದ್ರಮಸಿಯೊಳಗೆ ಹಣ ಸಮರ್ಪಣೆ ಮಾಡುವ ರೂಢಿಯಿದೆ. ಅದುದರಿಂದ ತೆಂಗಿನಕಾಯಿ ಸಹಿತವಾಗಿ ತಮಗೆ ಕೊಡಬೇಕಾದ ಹಣವನ್ನು ಚಂದ್ರಮಸಿಯಲ್ಲಿ ಹಾಕಬೇಕು. ಮತ್ತು ಅಲ್ಲಿಯ ಶ್ರೀ ದೀಕ್ಷಿತ ಮಹಾರಾಜರ ಕಡೆಯಿಂದ ಪ್ರಸಾದದ ಮಂತ್ರಾಕ್ಷತೆಗಳನ್ನು ಪಡೆದುಕೊಳ್ಳಬೇಕು.

೩. ಬ್ರಾಹ್ಮಣ ಸಂತರ್ಪಣೆಯ ಕಾಲಕ್ಕೆ ಊಟಕ್ಕೆ ಬಡಿಸುವದು, ಎಂಜಲದ ಎಲೆಗಳನ್ನು ತೆಗೆದು ಗೋಮಯದಿಂದ ಸಾರಿಸುವದು, ಇವೇ ಮೊದಲಾದ ಕೆಲಸಗಳನ್ನು ಸೇವಾಬುದ್ಧಿಯಿಂದ ತನಗೆ ಶಕ್ಯವಾದಂತೆ ಮಾಡಬೇಕು.

ಫಲ

ಶಿವಾಗಮೋತ್ಸವವನ್ನು ನೋಡಿದರೆ ಶಿವಲೋಕ ಪ್ರಾಪ್ತಿಯಾಗುವದು. ಮತ್ತು ವಾಹನಗಳೊಡನೆ ಪ್ರದಕ್ಷಿಣೆ ಹಾಕಿದರೆ ಹೆಜ್ಜೆಹೆಜ್ಜೆಗೆ ಅಶ್ವಮೇಧದ ಫಲ ಸಿಕ್ಕುತ್ತದೆ.

೪. ಚಿದಂಬರ ಜಯಂತಿಯ ಉತ್ಸವವನ್ನು ಕಾರ್ತಿಕ ವದ್ಯ ಷಷ್ಠಿಯ ದಿನ ಮಾಡಬೇಕು.

ಅವಕಾಶ ಸಿಕ್ಕಹಾಗೆ ಮಾಡಬೇಕಾದ ಕೆಲಸಗಳು

೧. ಕಾರ್ತಿಕ ವದ್ಯ ಪ್ರತಿಪದೆಗೆ ಗುರ್ಲಹೊಸೂರ ಉತ್ಸವಕ್ಕೆ ಹೋಗುವದು.

೨. ಚೈತ್ರ ಶುದ್ಧ ದಶಮಿಯ ದಿವಸ ಬಡಲಿಯ ಉತ್ಸವಕ್ಕೆ ಹೋಗುವದು.

೨. ಫಾಲ್ಗುಣ ಸದ್ಯ ದ್ವಿತಿಯಾದ ದಿವಸ ಶಹಾಪೂರದಲ್ಲಾಗುವ ರಾಜಾರಾಮನ ಜಯಂತ್ಯುತ್ಸವಕ್ಕೆ ಹೋಗುವದು.

೪. ಪೌಷ ಶುದ್ಧ ೪ಕ್ಕೆ ಚಿದಂಬರನ ಆರಾಧನೆ ಮಾಡುವದು.

೫. ಶ್ರೀ ರಾಜಾರಾಮನ ಜಯಂತೀ ಮಾಡುವದು.

ಚಿದಂಬರ ಮಿತಿ ಬ್ರೂಯಾತ್ಸಕೃಜ್ಜನನ ವರ್ಜಿತವಮ್ ।
ಮುಕ್ತಿ ಘಂಟಾ ಮಣಿಪದಂ ಮೋಕ್ಷ ಏವ ನ ಸಂಶಯಃ ॥

ಶ್ರೀ ಗುರ್ವಾರ್ಪಣಮಸ್ತು.

ಈ ಕ್ರಮದಿಂದ ಎಷ್ಟೋ ಜನರು ಮಹಾರಾಜರ ಮುಖಾಂತರ ಚಿದಂಬರ ಸಾಂಪ್ರದಾಯಕ್ಕೆ ಸೇರಿ, ಆ ಪುಸ್ತಕದೊಳಗೆ ಪ್ರತಿಜ್ಞಾಪೂರ್ವಕವಾಗಿ ಸಹಿ ಮಾಡಿ, ಅದರಂತೆ ನಡೆದು ಉದ್ಧಾರವಾದರು.

ಇದರ ಹೊರತಾಗಿ ಮಹಾರಾಜರು ಕಾಲಕಾಲಕ್ಕೆ ತಕ್ಕ ಉಪಾಯಗಳನ್ನು ಯೋಚಿಸಿ, ಜನರನ್ನು ಸನ್ಮಾರ್ಗಕ್ಕೆ ಹಚ್ಚುತ್ತಿದ್ದರು. ಅವುಗಳಲ್ಲಿ ಕೆಳಗಿನ ಸಂಗತಿಗಳು ಸಂಸ್ಮರಣೀಯವಾಗಿವೆ.

ಒಂದು ಸಲ ಮಹಾರಾಜರು ಮುಂಜಾನೆ ದೇವರ ಗುಡಿಯಲ್ಲಿ ಚಿದಂಬರ ನಾಮ ಜಪ ಮಾಡುತ್ತ ಅಡ್ಡಾಡುತ್ತಿದ್ದರು. ಆಗ ಕೆಲವು ಹೆಣ್ಣುಮಕ್ಕಳು ಆ ಗುಡಿಗೆ ಬಂದು ಅಲ್ಲಿಯ ಬಾಂವಿಯೊಳಗಿನ ನೀರು ಒಯ್ಯುತ್ತಿದ್ದರು. ಆದರೆ ಒಬ್ಬರಿಗಿಂತ ಹೆಚ್ಚಾಗಿ ಹೆಣ್ಣುಮಕ್ಕಳು ಕೂಡಿದರೆ, ಅವರು ಯಾವ ವಿಷಯವಾಗಿ ಹರಟುವರೆಂಬದು ವಾಚಕರಿಗೆ ಗೊತ್ತೇ ಇದೆ. "ಅವಳ ಗಂಡನು ಹಾಗೆ ಇದ್ದಾನೆ, ಅವನು ಹಾಗೆ ಅಂದನು, ಇವರು ಹೀಗೆ ಮಾಡಿದರು"— ಎಂಬಿವೇ ಮೊದಲಾದ ಕೆರುಕುಳಿ ಸಾಂಸಾರಿಕ ಮಾತುಗಳೇ ಅವರ ಹರಟೆಯ ಸಾಮಾನ್ಯ ವಿಷಯವು. ಮಹಾರಾಜರು ಅವರ ಹರಟೆಗಳನ್ನು ಕೇಳಿ ಕೇಳಿ ಬೇಸತ್ತರು. ಹೆಂಗಸರು ಎಷ್ಟೋ ಸಾರೆ ನೀರು ಒಯ್ದರೂ, ಅವರ ಹರಟೆಯು ಹಾಗೇ ನಡೆದಿತ್ತು. ಮಹಾರಾಜರಿಗೆ ಆ ಜನರನ್ನು ನೋಡಿ ಕರುಣೆ ಬಂತು. ಅವರು ಕೂಡಲೇ ಆ ಹೆಂಗಸರ ಕಡೆಗೆ ಹೋಗಿ—

"ಅವ್ವಗಳಿರಾ, ನಾನು ಬಾಲಕನು. ತಾವು ತಾಯಿಗಳು. ನನಗೆ ಹಸಿವೆಯಾಗಿದೆ. ದಯಮಾಡಿ ಭಿಕ್ಷೆ ಹಾಕುವಿರಾ ?" ಎಂದು ತಮ್ಮ ಶಾಟಿಯ ಪದರು ಒಡ್ಡಿದರು. ಮಹಾರಾಜರ ಈ ಕೃತಿಯನ್ನು ನೋಡಿ ಆ ಹೆಂಗಸರು ಅವಾಕ್ಕಾದರು. ಅವರಿಗೆ ಮಹಾರಾಜರ ನಿಜವಾದ ಅಭಿಪ್ರಾಯವು ತಿಳಿಯುವದು ಶಕ್ಯವಿರಲಿಲ್ಲ. ಏನಾದರೂ ಉತ್ತರಕೊಡಬೇಕೆಂದು ಅವರಲ್ಲಿ ಒಬ್ಬಳು ಹೇಳಿದಳು: "ಸ್ವಾಮಿನ್, ಇದು ಮುಂಜಾವಿನ ವೇಳೆ. ಇನ್ನೂ ಅಡಿಗೆಯಾಗಿಲ್ಲ. ಈ ಕೂಡಲೆ ನಾನು ಮೈತೊಳಕೊಂಡು ಶೀಘ್ರವಾಗಿ ಅಡಿಗೆ ಮಾಡಿ ಭಿಕ್ಷೆ ಹಾಕುವೆನು. ದಯವಿಟ್ಟು ಅಲ್ಲಿಯ ವರೆಗೆ ತಡೆಯಬೇಕು." ಮಹಾರಾಜರು ಮುಗುಳುನಗೆ ನಗುತ್ತ ಮತ್ತೆ ಕೇಳಿದರು:— "ಅಮ್ಮಾ, ನನಗೆ ಅನ್ನದ ಭಿಕ್ಷೆಯು ಮೇಲೆ ಆಸ್ಥೆಯಿಂದು ಮನಸಿಲ್ಲ. ನನಗೆ ಬೇಕಾದ ಭಿಕ್ಷೆ ಮತ್ತೊಂದರದು. ಅದನ್ನು ದಯವಿಟ್ಟು ಹಾಕುವಿರಾ ?"

ಮಹಾರಾಜರ ಮಾತುಗಳಿಂದ ಆ ಹೆಣ್ಣುಮಕ್ಕಳು ಇನ್ನಿಷ್ಟು ಗೊಂದಲದಲ್ಲಿ ಬಿದ್ದರು. ಅವರಲ್ಲಿ ಇನ್ನೊಬ್ಬಳು ದಿಟ್ಟತನದಿಂದ ಕೇಳಿದಳು:— "ಮತ್ಯಾವ ಭಿಕ್ಷೆ ಸ್ವಾಮೀ ? ನಮಗೇನೂ ತಿಳಿಯಲೊಲ್ಲದು. ತಮ್ಮಂಥವರು ಕೇಳಿದ ಭಿಕ್ಷೆ ನೀಡದಿರುವ ಪಾಪಿಗಳಾರು ? ತಮಗೆ ಯಾತರ ಭಿಕ್ಷೆ ಬೇಕಾಗಿರುವದೆಂಬದನ್ನು ಕೃಪೆಮಾಡಿ ಸ್ಪಷ್ಟವಾಗಿ ತಿಳಿಸಬೇಕು. ನಮಗೆ ಶಕ್ಯವಿದ್ದರೆ ನಾವು ಅವಶ್ಯವಾಗಿಯೂ ತಮಗೆ ಭಿಕ್ಷೆ ಹಾಕುವೆವು."

ಮಹಾರಾಜರು ಉತ್ತರಕೊಟ್ಟರು:— "ಅಮ್ಮಗಳಿರಾ, ನಾನು ಬೇಡುವ ಭಿಕ್ಷೆಯನ್ನು ನೀಡುವದು ಎಲ್ಲರಿಗೂ ಶಕ್ಯವಿದೆ, ಕಂಡಿರಾ. ನೀವು ನೀರು ತರುವ ಮೊದಲಾದ ಕೆಲಸಗಳಲ್ಲಿ ತೊಡಗಿದಾಗ ವ್ಯರ್ಥವಾಗಿ ಇಲ್ಲದ ಮಾತುಗಳ ಬಗ್ಗೆ ಹಂಟಿ ಹೊಡೆಯುವದನ್ನು ಬಿಟ್ಟು, ಚಿದಂಬರನ ನಾಮಸ್ಮರಣೆ ಮಾಡಬೇಕೆಂಬದೇ ನಾನು ಬೇಡುವ ಭಿಕ್ಷೆ. ನನಗೆ ಚಿದಂಬರ ನಾಮದ ಹಸಿವಾಗಿದೆ. ಎಷ್ಟು ಉಂಡರೂ ನನ್ನ ಹಸಿವು ಹಿಂಗಲೊಲ್ಲದು, ಈ ಭಿಕ್ಷೆಗಾಗಿ ನೀವೂ ಹಣ ವೆಚ್ಚಮಾಡುವ ಕಾರಣವಿಲ್ಲ. ತೀರ ಸುಲಭವಾಗಿ ನೀವು ಈ ಭಿಕ್ಷೆಯನ್ನು ನನಗೆ ಹಾಕಬಹುದು. ಒಪ್ಪುವಿರಾ ?"

ಹೆಣ್ಣು ಮಕ್ಕಳ ಕಣ್ತುಂಬ ನೀರು ಬಂದವು. ಅವರು ಮೈಮರೆತು ಹರಟಿ ಹೊಡೆಯುವಾಗ ಅನೇಕ ತರದ ಅಪಶಬ್ದಗಳನ್ನೂ ಉಪಯೋಗಿಸಿದ್ದರು. ಅವರಿಗೆ ಅವುಗಳ ನೆನಪಾಗಿ ನಾಚಿಕೆಯುಂಟಾಯಿತು. ಅವರು ಪಶ್ಚಾತ್ತಾಪದಿಂದ ಮಹಾರಾಜರ ಕಾಲುಗಳ ಮೇಲೆ ಬಿದ್ದು, ಇನ್ನೊಮ್ಮೆ ಹಾಗೆ ಮಾಡುವದಿಲ್ಲೆಂದೂ, ಚಿದಂಬರನ ನಾಮಸ್ಮರಣೆಯನ್ನೇ ಅಖಂಡವಾಗಿ ಮಾಡುತ್ತ ಹೋಗುವೆವೆಂದೂ, ಈಗ ಮಾಡಿದ ತಪ್ಪನ್ನು ಕ್ಷಮಿಸಬೇಕೆಂದೂ ಬೇಡಿಕೊಂಡರು. ಮಹಾರಾಜರು ಅವರ ತಪ್ಪನ್ನು ಉದಾರ ಹೃದಯದಿಂದ ಕ್ಷಮಿಸಿ, ನಾಲ್ಕು ಉಪದೇಶದ ಮಾತುಗಳನ್ನು ಹೇಳಿ, ಅವರನ್ನು ಸನ್ಮಾರ್ಗಕ್ಕೆ ಹಚ್ಚಿದರು.

ಮಹಾರಾಜರು ಗುಡಿಯಲ್ಲಿ ಕುಳಿತಾಗ ಎಷ್ಟೋ ಜನರು ಗುಡಿಗೆ ಬಂದು ದೇವರಿಗೆ ನಮಸ್ಕಾರ ಮಾಡಿ ತಿರುಗಿ ಹೊರಡಲುದ್ಯುಕ್ತರಾಗುವರು. ಆಗ ಮಹಾರಾಜರು ಅವರನ್ನು ತಮ್ಮ ಕಡೆಗೆ ಕರೆದು, ನಗುತ್ತ "ಅಪ್ಪಗಳಿರಾ, ನಾವು ಗುಡಿಯೊಳಗಿರುವ ಸುಂಕದ ಕಟ್ಟೆಯವರಾಗಿದ್ದೇವೆ. ಈ ಗುಡಿಗೆ ಬರಬೇಕೆನ್ನುವ ಪ್ರತಿಯೊಬ್ಬ ಭಕ್ತನು ನಮಗೆ ಸುಂಕ ಕೊಡಲೇಬೇಕು. ಕಾರಣ ನೀವೂ ನಿಮ್ಮ ಸುಂಕ ಕೊಡಬೇಕು, ಕಂಡಿರಾ" ಎಂದು ಕೇಳುವರು. ಗುಡಿಗೆ ಬಂದ ಹೊಸಬರಿಗೆ ಈ ಮಾತುಗಳ ಅರ್ಥವೇ ಆಗುವದು ಶಕ್ಯವಿರಲಿಲ್ಲ. ಆಗ ಮಹಾರಾಜರು ತಮಗೆ ಬೇಕಾದ ಸುಂಕದ ವಿವರಣೆ ಮಾಡುವರು:— 'ದೇವರ ಗುಡಿಯಲ್ಲಿ ಬಂದಾಗ ನೀವು ಎಂಟುಹತ್ತು ಸಾವೆಯಾದರೂ ದೇವರ ನಾಮವನ್ನು ಚ್ಚರಿಸಬೇಕು. ನಾವು ಇಲ್ಲಿ ಹೇರುತ್ತಿರುವ ಸುಂಕವು ಇದೇ. ಈ ಸುಂಕವನ್ನು ನೀವು ಆನಂದದಿಂದ ತೆತ್ತುವಿರೆಂದು ನಂಬಿದ್ದೇನೆ." ಬಂದವರಿಗೆ ಈ ಮಾತುಗಳನ್ನು ಕೇಳಿ ಆಶ್ಚರ್ಯವಾಗುವದು. ಅವರು ಕೂಡಲೇ ಮಹಾರಾಜರ ಮುಂದೆ ಕೆಲಹೊತ್ತು ನಾಮಸ್ಮರಣೆ ಮಾಡಿ, ಕೊನೆಯ ವರೆಗೂ ದೇವರ ನಾಮ ಜಪಿಸುವೆವೆಂದು ಪ್ರತಿಜ್ಞೆ ಮಾಡಿ ಹೋಗುವರು.

ಭಜನೆ, ಕೀರ್ತನೆ, ಅಥವಾ ದೇವರ ಬೇರೆ ತರದ ಸೇವೆಯ ಕಾರ್ಯಕ್ರಮಗಳು ನಡೆದಿರುವಾಗ ಮಹಾರಾಜರು ಒಮ್ಮೆಲೇ ಕೆಲ ವ್ಯಕ್ತಿಗಳನ್ನು

ಕುರಿತು— "ತಮ್ಮಾ, ಈಗ ನಿನ್ನ ಮನಸ್ಸಿನಲ್ಲಿ ಏನು ನಡೆದಿರುವದು, ಹೇಳು. ವಂಚನೆ ಮಾತ್ರ ಬೇಡ" ಎಂದು ಪ್ರಶ್ನೆಮಾಡುವರು. ಆ ಜನರು ದೇಹದಿಂದ ಮಹಾರಾಜರ ಬಳಿಯಲ್ಲಿದ್ದರೂ, ಮನಸಿನೊಳಗೆ ಸಾಂಸಾರಿಕ ಸಂಗತಿಗಳ ಬಗ್ಗೆ ಇಲ್ಲದ ಮನೋರಾಜ್ಯಗಳನ್ನು ಕಟ್ಟುತ್ತಿದ್ದರೆಂಬದು ಸ್ಪಷ್ಟವಿದೆ. ಅವರ ಮನೋರಾಜ್ಯವು ಶಿಖರವನ್ನು ಸಮೀಪಿಸುವ ಹೊತ್ತಿಗೆ ಸರಿಯಾಗಿಯೇ ಮಹಾರಾಜರು ಅವರನ್ನು ತಡವುತ್ತಿದ್ದರು. ಇದರಿಂದ ಆ ಜನರು ಪಶ್ಚಾತ್ತಾಪಪಟ್ಟು, ಲಜ್ಜಿತರಾಗಿ, ಸತ್ಯಸಂಗತಿಯನ್ನು ಹೇಳಿ ಇನ್ನೊಮ್ಮೆ ಹಾಗೆ ಮಾಡುವದಿಲ್ಲೆಂದು ಪ್ರತಿಜ್ಞೆ ಮಾಡುತ್ತಿದ್ದರು. ಈ ರೀತಿಯಿಂದ ಮಹಾರಾಜರು ಅನೇಕ ಜನರಿಗೆ ವೇದಾಂತದ ಜೀವಾಳವಾದ ಅಂತರ್ನಿರೀಕ್ಷಣೆಯ ಅಭ್ಯಾಸವನ್ನು ಕಲಿಸುತ್ತಿದ್ದರು. ಈ ಅಭ್ಯಾಸದಿಂದ ಸಾಧಕರ ಪ್ರಗತಿಯು ಭರದಿಂದಾಗುವದೆಂಬದು ಅನುಭವದಿಂದ ಗೊತ್ತಾಗುವಂತಿದೆ.

ಸಾಯಂಕಾಲದ ಭಜನೆ ಮೊದಲಾದವುಗಳು ಮುಗಿದ ಮೇಲೆ, ಮಹಾರಾಜರು ಕೂಡಿದ ಜನರೊಳಗೆ ಯಾವನೊಬ್ಬನಿಗೆ "ದೇವರ ವಿಷಯಕವಾದ ಒಂದು ಕಥೆಯನ್ನು ಹೇಳಿರಿ" ಎಂದು ಆಜ್ಞಾಪಿಸುತ್ತಿದ್ದರು. ಮಹಾರಾಜರು ಹೀಗೆ ಆಜ್ಞಾಪಿಸಿದೊಡನೆ ಜನರು ಗಾಬರಿಯಾಗುತ್ತಿದ್ದರು. ದೇವರ ವಿಷಯಕವಾದ ಕಥೆ ಗೊತ್ತಿರಬೇಕು, ಅದರೊಳಗೆ ಏನಾದರೂ ಸ್ವಾರಸ್ಯವಿರಬೇಕು, ಅದರಲ್ಲಿ ಬೋಧ ಅಥವಾ ನೀತಿಯಿರಬೇಕು. ಮತ್ತು ಕೂಡಿದ ಜನರಿಗೆ ಅದನ್ನು ಸರಿಯಾಗಿ ತಿಳಿಸಿಕೊಡುವ ದಿಟ್ಟತನಬೇಕು. ಹೀಗೆ ಇವೆಲ್ಲ ಸಂಗತಿಗಳಿದ್ದರೆ ಮಾತ್ರ ಮಹಾರಾಜರ ಆಜ್ಞೆಯನ್ನು ಪರಿಪಾಲಿಸುವದು ಶಕ್ಯವು. ಇಲ್ಲವಾದರೆ ಎಲ್ಲವೂ ಕಠಿಣವೇ. ಆದರೆ ಈ ತರದ ಶಕ್ತಿಯಿರುವ ಜನರೆಷ್ಟು ? ಮಹಾರಾಜರ ಆಜ್ಞೆಯನ್ನು ಮೀರುವ ಸಾಹಸವನ್ನಂತೂ ಯಾರೂ ಮಾಡುವಂತಿರಲಿಲ್ಲ. ಮತ್ತು ಮಹಾರಾಜರು ಎಂದು ಯಾರಿಗೆ, ಈ ಆಜ್ಞೆ ಮಾಡುತ್ತಿದ್ದರೆಂಬದೂ ತಿಳಿಯದ ವಿಷಯವೇ. ಆದುದರಿಂದ ದಿನಾಲೂ ಅಲ್ಲಿಗೆ ಬರುವ ಜನರು ಈ ಸಿದ್ಧತೆಯನ್ನು ಮೊದಲೇ ಮಾಡಿಕೊಂಡು ಬರಬೇಕಾಗುತ್ತಿತ್ತು. ಅದಕ್ಕಾಗಿ ಅವರು ಮನೆಯಲ್ಲಿ

ಪುರಾಣ ಪುಣ್ಯ ಕಥೆಗಳನ್ನೋದಿ, ಅವುಗಳ ಮನನ ಮಾಡಿ, ಅವುಗಳೊಳಗಿಂದ ಒಂದು ರಸವತ್ತಾದ ಕಥೆಯನ್ನು ಆರಿಸಿ, ಅದನ್ನು ಚನ್ನಾಗಿ ನೆನಪಿನಲ್ಲಿಟ್ಟುಕೊಂಡು ಬರಬೇಕಾಗುತ್ತಿತ್ತು. ಇದರ ಪರಿಣಾಮವೇನಾಯಿತೆಂದರೆ: ಎಷ್ಟೋ ಜನರಲ್ಲಿ ಆಧ್ಯಾತ್ಮ ವಾಚನದ ಪ್ರೇಮವು ಬೆಳೆದು, ದೇವರ ವಿಷಯಕವಾದ ಭಕ್ತಿಯು ಜಾಗೃತವಾಯಿತು.

ಶ್ರೀ ಸ್ವಾಮೀ ಮಹಾರಾಜರು ಎರಡನೆಯವರನ್ನು ಸುಧಾರಿಸಿ ಸನ್ಮಾರ್ಗಕ್ಕೆ ಹಚ್ಚುವ ಕೆಲಸವನ್ನು ಬಹು ಚತುರತೆಯಿಂದಲೂ ಜಾಣತನದಿಂದಲೂ ಮಾಡುತ್ತಿದ್ದರೆಂಬುದು ಮೇಲಿನ ವಿವೇಚನೆಯಿಂದ ವಾಚಕರಿಗೆ ಮನದಟ್ಟಾಗಿರಲಿಕ್ಕೆ ಸಾಕು. ಅವರು ತಾವು ಹೇಳಬೇಕಾದ ಮಾತನ್ನು ಖಂಡಿತವಾಗಿ ನಿಷ್ಠುರವಾಗಿ ಎಂದೂ ಹೇಳಲಿಲ್ಲ. ವೇದಾಂತಗಳ ಅತಿಗಹನವಾದ ತತ್ವಗಳನ್ನು ಕೂಡ ಅವರು ಸುಲಭವಾದ ಕಥೆಗಳ ಸಹಾಯದಿಂದ ಹೇಳಿಕೊಡುತ್ತಿದ್ದರು. ಆದರೆ ಅವರು ಆಗಾಗ್ಗೆ ಹೇಳಿಕೊಟ್ಟ ಎಲ್ಲ ಕಥೆಗಳನ್ನು ಇಲ್ಲಿ ಸಂಗ್ರಹಿಸುವದು ಶಕ್ಯವಿಲ್ಲ. ಮಹಾರಾಜರು ಹೇಳಿದ ಕಥೆಗಳ ಸಂಗ್ರಹವೇ ಒಂದು ದೊಡ್ಡ ಪುಸ್ತಕವಾಗಿ ಬಿಡುವಂತಿದೆ. ವ್ಯಸನಾಧೀನ ಜನರನ್ನು ಕೂಡ, ಅವರ ಮನಸು ನೊಯ್ಯದಂತೆ ಹೇಗೆ ಸನ್ಮಾರ್ಗಕ್ಕೆ ತರಬೇಕೆಂಬ ಬಗ್ಗೆ ಒಂದು ಕಥೆಯನ್ನು ಹೇಳುತ್ತಿದ್ದರು. ಮಾದರಿಗಾಗಿ ಅದನ್ನಿಲ್ಲಿ ಕೊಡಬಹುದು-

ಒಬ್ಬನಿಗೆ ಅಫೀಮು ತಿನ್ನುವ ವ್ಯಸನವಿತ್ತು. ಅವನಿಗೆ ದಿನಾಲೂ ಒಂದು ತೊಲಿ ಅಫೀಮು ಬೇಕಾಗುತ್ತಿತ್ತು. ಏನು ಮಾಡಿದರೂ ಅವನಿಗೆ ಆ ವ್ಯಸನವನ್ನು ಬಿಡುವದು ಶಕ್ಯವಿರಲಿಲ್ಲ. ಆದರೂ ಗುರುಗಳ ಮೇಲೆ ಅವನಿಗೆ ವಿಶೇಷ ಶ್ರದ್ಧೆಯಿತ್ತು. ಗುರುಗಳು ಒಂದು ಹಂಚಿಕೆ ಮಾಡಿದರು : ''ತಮ್ಮಾ, ನಿನಗೆ ದಿನಾಲೂ ಒಂದು ತೊಲಿ ಅಫೀಮು ಸಾಕಷ್ಟೆ ?'' ಎಂದು ಅವರು ಶಿಷ್ಯನಿಗೆ ಪ್ರಶ್ನೆ ಮಾಡಿದರು. ''ಹೌದು'' ಎಂದು ಶಿಷ್ಯನು ಉತ್ತರ ಕೊಟ್ಟನು. ಗುರುಗಳು ಮತ್ತೆ ಪ್ರಶ್ನೆ ಮಾಡಿದರು:— ''ನಿನಗೆ ದಿನಾಲೂ ತಿನ್ನಲಿಕ್ಕೆ ಅಷ್ಟು ಅಫೀಮು ಕೊಡುವೆನು. ಆದರೆ ನನ್ನದೊಂದು ಮಾತನ್ನು ಮಾತ್ರ ನಡೆಸುವಿಯಾ ?'' ಈ ಮಾತಿಗೆ ಶಿಷ್ಯನು ಕೂಡಲ್ಯೇ

ಒಪ್ಪಿಕೊಂಡನು. ಗುರುಗಳು ಒಂದು ತೊಲಿ ಭಾರವಾದ ಖಡುವಿನ ತುಂಡನ್ನೊಂದು ತಂದು, ಶಿಷ್ಯನಿಗೆ ಇದನ್ನು ತೂಗಿ ನೋಡೆಂದು ಹೇಳಿದರು. ಶಿಷ್ಯನು ಅದನ್ನು ತೂಗಿ ನೋಡಿ ಅದು ಒಂದು ತೊಲಿ ಇರುವದೆಂದು ನಿಶ್ಚಯ ಮಾಡಿಕೊಂಡನು. ಗುರುಗಳು ಕೇಳಿದರು:— ''ನಿನಗೆ ದಿನಾಲೂ ಇದರ ತೂಕದಷ್ಟು ಅಫೀಮು ಸಿಕ್ಕರೆ ಸಾಕು?'' ಅದಕ್ಕೆ ಶಿಷ್ಯನು ಸಹಜವಾಗಿಯೇ ಸಮ್ಮತಿಸಿದನು. ಗುರುಗಳು ಮತ್ತೆ ಆಜ್ಞೆ ಮಾಡಿದರು— ''ಈ ಖಡುವಿನ ತುಂಡಿಗೆ ಸರಿಯಾದ ಭಾರದಷ್ಟು ಅಫೀಮನ್ನು ನೀನು ದಿನಾಲೂ ಸೇವಿಸುತ್ತ ಹೋಗು. ಆದರೆ ಪ್ರತಿ ದಿವಸ ತಪ್ಪದೇ ಆ ಹೊತ್ತಿನ ಮಿತಿಯನ್ನು ಬರೆದು, ಅಂದು ಅಷ್ಟು ಅಫೀಮನ್ನು ಸೇವಿಸಿದೆನೆಂದು ಈ ಖಡುವಿನಿಂದ ಬರೆಯುತ್ತ ಹೋಗಬೇಕು.'' ಶಿಷ್ಯನು ಅದರಂತೆ ಮಾಡಹತ್ತಿದನು. ಆದರೆ ಶಿಷ್ಯನಿಗೆ ಸಹಜವಾಗಿ ಗೊತ್ತಾಗದಂತೆ ಆ ಖಡುವಿನ ತುಂಡು ಸವೆಯುತ್ತ ಹೋದುದರಿಂದ, ಅವನು ಸೇವಿಸುವ ಅಫೀಮಿನ ಪ್ರಮಾಣವಾದರೂ ಕ್ರಮೇಣ ಕಡಿಮೆಯಾಗುತ್ತ ಹೋಯಿತು. ಹೀಗೆ ಕೆಲವು ದಿನಗಳಲ್ಲಿ ಅವನ ಚಟವು ಸಂಪೂರ್ಣವಾಗಿ ನಿಂತು ಹೋಯಿತು.

ಮಹಾರಾಜರಲ್ಲಿ ಸಮಯಜ್ಞತೆಯೂ ಚಾಣಾಕ್ಷತನವೂ ಅಪರಿಮಿತವಾಗಿದ್ದವು. ಉತ್ಸವದಲ್ಲಿ ಸಾವಿರಾರು ಜನರು ಒತ್ತಟ್ಟಿಗೆ ಕೂಡುತ್ತಿದ್ದರಷ್ಟೇ. ಆದರೆ ಮಹಾರಾಜರು ಅವರವರ ಮನಸ್ಸಿನೊಳಗಿನ ಮಾತುಗಳನ್ನೇ ಅವರವರಿಗೆ ಆಡಿ ತೋರಿಸಿ ಎಲ್ಲ ಜನರನ್ನೂ ತಮ್ಮ ಕಡೆಗೆ ಆಕರ್ಷಿಸಿಕೊಳ್ಳುತ್ತಿದ್ದರು. ಮಹಾರಾಜರ ಸಂಬಂಧದೊಳಗೆ ಬಂದ ಪ್ರತಿಯೊಬ್ಬ ವ್ಯಕ್ತಿಗೆ ''ಮಹಾರಾಜರ ಪ್ರೀತಿಯು ನನ್ನ ಮೇಲೆಯೇ ಹೆಚ್ಚಾಗಿದೆ'' ಎಂದೆನಿಸುವಂತೆ ಮಹಾರಾಜರು ವರ್ತಿಸುತ್ತಿದ್ದರು. ಒಂದು ದಿನ ಮಲ್ಹಾರ ಬಾಳಕೃಷ್ಣ ಕುಲಕರ್ಣಿ (ಬೈಲವಾಡ) ಎಂಬವರು ಉತ್ಸವದ ಕಾಲದಲ್ಲಿ ಚಿತ್ರಗಳನ್ನು ತೆಗೆದಿದ್ದರು. ಆ ದಿನ ಸಂಜೆಯ ಮುಂದೆ ಎಲ್ಲರೂ ಕೂಡಿ ಭಜನೆ ಮಾಡುತ್ತಿದ್ದರು. ಶ್ರೀಗಳವರು ಎಲ್ಲರ ನಡುವೆ ನಿಂತು ಕುಣಿಕುಣಿದು

ಭಜನೆ ಮಾಡುತ್ತಿದ್ದರು. ಕುಲಕರ್ಣಿಯವರ ಮನಸ್ಸಿನಲ್ಲಿ "ನಾನು ಇಷ್ಟು ಶ್ರಮಬಟ್ಟು ಚಿತ್ರ ತೆಗೆದಿದ್ದೇನೆ. ಸ್ವಾಮಿಗಳು ಅದನ್ನು ನೋಡಿ ನನಗೆ ಧನ್ಯವಾದಗಳನ್ನು ಕೊಡಲಿಲ್ಲವಲ್ಲ!" ಎಂಬ ವಿಚಾರಗಳು ಬಂದವು. ಕೂಡಲೇ ಶ್ರೀಗಳವರು ಅವರಿದ್ದಲ್ಲಿಗೆ ಬಂದು—"ತಮ್ಮಾ, ನೀನು ಚಿತ್ರ ತೆಗೆದು ಬಹಳ ಶ್ರಮಬಟ್ಟಿರುವಿ. ನಡೆ, ಅದನ್ನು ನೋಡುವ" ಎಂದು ಹೇಳಿ ಅವನನ್ನು ಕರಕೊಂಡು ಹೋಗಿ, ಚಿತ್ರ ನೋಡಿ, ಅವನ ಕೌಶಲ್ಯವನ್ನು ಕೊಂಡಾಡಿದರು. ಇದರಿಂದ ಮಲ್ಲಾರರವರಿಗೆ ಅತ್ಯಾನಂದವಾಯಿತೆಂಬುದು ಸ್ಪಷ್ಟವಿದೆ. ಅವರು ಇಂದಿಗೂ ಆ ಮಾತನ್ನು ಒಳ್ಳೇ ಪ್ರೇಮಾದರಗಳಿಂದ ವರ್ಣಿಸಿ ಹೇಳುತ್ತಾರೆ.

ಒಟ್ಟಿನ ಮೇಲೆ ಮಹಾರಾಜರು ತಮ್ಮ ಸೌಮ್ಯವಾದ ತೇಜಸ್ಸಿನಿಂದ ಎಲ್ಲರನ್ನೂ ತಮ್ಮ ಕಡೆಗೆ ಸೆಳೆದುಕೊಂಡು ಸನ್ಮಾರ್ಗಕ್ಕೆ ಹಚ್ಚುತ್ತಿದ್ದರೆಂದು ಹೇಳಬಹುದು. ಈ ಮಾತನ್ನು ಮಹಾರಾಜರಿಗೆ ದಂಡವನ್ನನುಗ್ರಹಿಸಿದ, ಶ್ರೀ ಶಾಂತಾಶ್ರಮ ಸ್ವಾಮಿಗಳವರೇ ಸ್ಪಷ್ಟವಾಗಿ ಆಡಿ ತೋರಿಸುತ್ತಿದ್ದರು. ನಮ್ಮ ಚರಿತ್ರನಾಯಕರು ಕೊನೆಯ ಸಲ (ಎಂದರೆ ಶಾ ಶ. ೧೮೬೦ ರಲ್ಲಿ) ಕಾಶಿಗೆ ಹೋಗಿದ್ದರು. ಆ ಕಾಲಕ್ಕೆ ಒಂದು ದಿನ ಶ್ರೀ ಶಾಂತಾಶ್ರಮ ಸ್ವಾಮಿಗಳು ಪರಾಂಜಪೆಯೆಂಬ ಗೃಹಸ್ಥನೊಡನೆ ಮಾತಾಡುತ್ತ ಕುಳಿತಿದ್ದರು. ಪರಾಂಜಪೆಯವರು ಶಾಂತಾಶ್ರಮ ಸ್ವಾಮಿಗಳವರಿಗೆ ಒಂದು ಪ್ರಶ್ನೆ ಮಾಡಿದರು:— "ಸ್ವಾಮೀ, ತಾವು ಈ ತಾರಕ ಮಠದಲ್ಲಿ* ಅನೇಕ ವರ್ಷಗಳ ವರೆಗಿದ್ದು ಸುವ್ಯವಸ್ಥೆಯನ್ನಿಟ್ಟಿರುವಿರಿ. ಆದರೆ ತಮ್ಮ ಪಶ್ಚಾತ್ ಇಲ್ಲಿಯ ವ್ಯವಸ್ಥೆಯನ್ನು ಕಾಯ್ದುಕೊಂಡು ಹೋಗುವದಕ್ಕಾಗಿ ಒಬ್ಬ ಯೋಗ್ಯ ಶಿಷ್ಯನನ್ನೇಕೆ ಆರಿಸುವದಿಲ್ಲ?" ಅದಕ್ಕೆ ಉತ್ತರ ರೂಪವಾಗಿ ಶ್ರೀ ಶಾಂತಾಶ್ರಮ ಸ್ವಾಮಿಗಳವರು ಅಪ್ಪಣೆ ಕೊಡಿಸಿದರು:— "ಇಲ್ಲದ

---

* ಕಾಶಿಯೊಳಗೆ ಇರುವ ಯತಿಗಳ ಮಠ

ಶಿಷ್ಯರನ್ನು ತಕ್ಕೊಂಡೇನು ಮಾಡುವದು ? ನಮಗೆ ಅಂತಿಂತಹ ಶಿಷ್ಯರು ಬೇಕಾಗಿರುವದೇ ಇಲ್ಲ, ನಮಗಿರುವವನು ಒಬ್ಬನೇ ಶಿಷ್ಯನು. ಅವನು ಶರತ್ಕಾಲದ ಆಕಾಶದೊಳಗಿನ ಪೂರ್ಣ ಚಂದ್ರಮನಂತೆ ಶಾಂತವಾಗಿಯೂ ಪ್ರಸನ್ನವಾಗಿಯೂ ದಕ್ಷಿಣ ಭಾರತದಲ್ಲಿ ಬೆಳಗುತ್ತಿದ್ದಾನೆ. ಅವನ ಹೊರತಾಗಿ ಬೇರೆ ಶಿಷ್ಯರನ್ನು ಮಾಡಿಕೊಳ್ಳುವ ಆಸೆಯೇ ನಮಗಿರುವದಿಲ್ಲ.'' ವಾಚಕರೇ, ಶ್ರೀ ಶಾಂತಾಶ್ರಮ ಸ್ವಾಮಿಗಳವರ ಒಂದೇ ಶಬ್ದದಲ್ಲಿ ನಮ್ಮ ಚರಿತ್ರನಾಯಕರ ದೊಡ್ಡಿಸ್ತಿಕೆಯು ಯಥಾರ್ಥವಾಗಿ ಪ್ರತಿಬಿಂಬಿತವಾಗಿರುವದಿಲ್ಲವೇ ?

೧೮ ಮಹಾರಾಜರ ಚಾತುರ್ಮಾಸ್ಯಗಳು

ಚತುರ್ಮಾಸ್ಯವೆಂದರೆ ನಾಲ್ಕು ತಿಂಗಳುಗಳಿಗೆ ಸಂಬಂಧಿಸಿದ್ದೆಂದರ್ಥ. ಆಷಾಢದಿಂದ ಕಾರ್ತಿಕದ ವರೆಗಿನ ನಾಲ್ಕು ತಿಂಗಳುಗಳಿಗೆ ಚತುರ್ಮಾಸವೆಂದು ಹೆಸರು. ಆಷಾಢ ಶುದ್ಧ ಏಕಾದಶಿಯಿಂದ ಕಾರ್ತಿಕ ಶುದ್ಧ ಏಕಾದಶಿಯ ವರೆಗೆ ಈ ಕಾಲವನ್ನು ಎಣಿಸುವ ರೂಢಿಯಿದೆ. ಈ ನಾಲ್ಕೂ ತಿಂಗಳುಗಳಿಗೆ ವರ್ಷಾಕಾಲವೆಂದು ಹೆಸರು. ಯಾಕೆಂದರೆ ಆಗ ಮಳೆಯು ವಿಶೇಷವಾಗಿ ಬೀಳುತ್ತಿರುತ್ತದೆ.

ಚಾತುರ್ಮಾಸ್ಯವು ಯತಿಗಳಿಗೆ ಒಳ್ಳೇ ಮಹತ್ವದ ಸಂಗತಿಯಾಗಿದೆ. ಯತಿಗಳ ಹಿರಿಯತನ-ಕಿರಿಯತನಗಳು ಅವರು ಕಳೆದ ಚಾತುರ್ಮಾಸ್ಯಗಳ ಸಂಖ್ಯೆಯ ಮೇಲೆ ಅವಲಂಬಿಸಿವೆ. ಆಶ್ರಮವಾದಾಗಿನಿಂದ ಅವರಿಗೆ ಎಷ್ಟು ಚಾತುರ್ಮಾಸ್ಯಗಳಾದವೆಂಬದನ್ನು ಲೆಕ್ಕ ಮಾಡಬೇಕಾಗುತ್ತದೆ.

ಯತಿಗಳು ಸಾಮಾನ್ಯವಾಗಿ ಪರ್ಯಟನ ಮಾಡುತ್ತಿರಬೇಕೆಂದು ನಿಯಮವಿದ್ದರೂ, ಚಾತುರ್ಮಾಸ್ಯದಲ್ಲಿ ಒಂದೇ ಕಡೆಗೆ ಇರಬೇಕೆಂಬ ನಿರ್ಬಂಧವಿದೆ. ಇದರ ಕಾರಣವೂ ಸ್ಪಷ್ಟವಾಗಿದೆ. ಮಳೆಗಾಲವೆಂದರೆ ಪ್ರವಾಸಕ್ಕೆ ಎಲ್ಲ ತರದಿಂದಲೂ ಅನನುಕೂಲತೆಯ ಕಾಲವು. ದಾರಿಗಳು ಕೆಸರಿನಿಂದ ತುಂಬಿರುತ್ತವೆ. ನಡುನಡುವೆ ನದಿಹಳ್ಳಗಳಿಗೆ ಮಹಾಪೂರ ಬಂದು ದಾರಿ ಕಟ್ಟಾಗಿರುತ್ತವೆ. ಮೇಲಾಗಿ ಮಳೆಗಾಲದಲ್ಲಿ ನಾನಾತರದ ಸಣ್ಣ ಸಣ್ಣ ಕ್ರಿಮಿಕೀಟಗಳು ಅಸಂಖ್ಯವಾಗಿ ಹುಟ್ಟುತ್ತವೆ. ದಾರಿಕಾರರು ಆಗ ಪ್ರಾಣಿ ಹಿಂಸೆ ಮಾಡದೆ ಪ್ರವಾಸ ಮಾಡುವದು ಶಕ್ಯವಿಲ್ಲದಿರುವದರಿಂದ ಪ್ರವಾಸಿಗಳಿಗೆ ತೊಂದರೆಯಾಗುತ್ತದೆ. ವೇಳೆ ವೇಳೆಗೆ ಊಟ ಮೊದಲಾದವುಗಳ ವ್ಯವಸ್ಥೆಯಾಗುವದೂ ಕಠಿಣವಾಗುತ್ತದೆ. ಇವೆಲ್ಲ ಕಾರಣಗಳ ಮೂಲಕ

ಯತಿಗಳು ಆಗ ಪ್ರವಾಸ ಮಾಡದೆ, ಒಂದೇ ಕಡೆಗೆ ನಿಲ್ಲಬೇಕೆಂದು ಸ್ಮೃತಿ ಕಾರರು ವಿಧಿಸಿದ್ದಾರೆ. ಇಷ್ಟೇ ಅಲ್ಲ, ಗೃಹಸ್ಥರಾದವರು ಕೂಡ ಆಗ ಒಂದೇ ಊರಲ್ಲಿದ್ದುಕೊಂಡು ನೇವಾಧ್ಯಯನ ಮೊದಲಾವುದಗಳನ್ನು ಮಾಡಬೇಕೆಂದು ಧರ್ಮ ಶಾಸ್ತ್ರಗಳು ಹೇಳುತ್ತವೆ. ಯತಿಗಳಿಗೆ ಈ ನಾಲ್ಕು ತಿಂಗಳು ಒಂದೇ ಕಡೆಗೆ ಇರುವದು ಆಶಕ್ಯವಾದರೆ ಮೊದಲಿನ ಎರಡು ತಿಂಗಳುಗಳ-ನ್ನಾದರೂ ಅವರು ಒಂದೇ ಊರಲ್ಲಿ ಕಳೆಯಬೇಕೆಂಬ ಆಗ್ರಹವಿದೆ. ಆಷಾಢ ಪೌರ್ಣಿಮೆಯಿಂದ ಭಾದ್ರಪದ ಪೌರ್ಣಿಮೆಯ ವರೆಗಾದರೂ ಯತಿಗಳು ಒಂದೇ ಊರಲ್ಲಿ ಇರಲೇಬೇಕಾಗುವದು.

ಯಾವ ಊರಲ್ಲಿ ಯತಿಗಳು ಇರಬೇಕೆಂದು ಇಚ್ಛಿಸುವರೋ ಅಲ್ಲಿ ಅವರ ವಾಸಕ್ಕೆ ಯಾವ ತರದ ಪ್ರತಿಬಂಧಗಳೂ ಇರಬಾರದು. ಎಂದರೆ ಅವರ ಅಲ್ಲಿಯ ವಾಸದಿಂದ ಯಾರಿಗೂ ತೊಂದರೆಯಾಗಬಾರದು. ಇಂತಹ ಸ್ಥಳವನ್ನು ನೋಡಿ ಯತಿಗಳು ಅಲ್ಲಿರುವ ಸಂಕಲ್ಪ ಮಾಡಬೇಕು. ಮತ್ತು ಅಲ್ಲಿಯ ಗ್ರಾಮವಾಸಿಗಳು ಅವರಿಗೆ ಸ್ವಾಗತವಿತ್ತು, ಅವರನ್ನು ಬರಮಾಡಿ-ಕೊಳ್ಳಬೇಕು. ''ತಾವಿಲ್ಲಿ ಸುಖವಾಗಿ ವಾಸಮಾಡಬೇಕು. ಅದರಿಂದ ನಾವು ಕೃತಾರ್ಥರಾಗುವೆವು. ಮತ್ತು ಸಂತೋಷದಿಂದ ನಮ್ಮ ಕೈಯಿಂದಾ-ದಷ್ಟು ತಮ್ಮ ಪೂಜಾದಿಗಳನ್ನು ಮಾಡುವೆವು'' ಎಂದು ಅವರು ಆ ಕಾಲಕ್ಕೆ ಪ್ರಾರ್ಥನೆ ಮಾಡಿಕೊಳ್ಳಬೇಕಾಗುವದು.

ಚಾತುರ್ಮಾಸ್ಯದಿಂದ ಯತಿಗಳಿಗೆ ವೈಯಕ್ತಿಕ ಕಲ್ಯಾಣವಂತೂ ಆಗಿಯೇ ಆಗುತ್ತದೆ. ನಾಲ್ಕು ತಿಂಗಳ ವರೆಗೆ ಒಂದೇ ಕಡೆಗೆ ಇರುವದರಿಂದ ಯತಿಗಳು ತಮ್ಮ ಆಧ್ಯಾತ್ಮ ಸಾಧನವನ್ನು ಹೆಚ್ಚಾಗಿ ಮುಂದುವರಿಸಿಕೊಳ್ಳ-ಲಿಕ್ಕೆ ಅಸ್ಪದವಾಗುತ್ತದೆ. ಧ್ಯಾನ, ಜಪ, ಅನುಷ್ಠಾನ ಮತ್ತು ಆಧ್ಯಾತ್ಮ ವಾಚನ ಮೊದಲಾದವುಗಳಿಗೆ ಒಳ್ಳೇ ಅವಕಾಶ ಸಿಕ್ಕುತ್ತದೆ. ಆದರೆ ಮುಖ್ಯ ವಾಗಿ ಯತಿಗಳ ಚಾತುರ್ಮಾಸ್ಯವು ಎಲ್ಲ ಪ್ರಾಣಿಗಳ ಹಿತಕ್ಕಾಗಿ ಇರುವ-ದೆಂದು ಯತಿಧರ್ಮ ಸಂಗ್ರಹದಲ್ಲಿ ಬರೆಯಲ್ಪಟ್ಟಿದೆ. ಯತಿಗಳು ಚಾತುರ್ಮಾಸ್ಯದ ಪ್ರಾರಂಭಕ್ಕೆ ಮಾಡಬೇಕಾಗುವ ಸಂಕಲ್ಪದಲ್ಲಿಯೇ ಈ ಮಾತು ಅಡಕವಾಗಿದೆ.

ವಿರಕ್ತರಾದ, ಸದಾಚಾರನಿಷ್ಠರಾದ, ಮತ್ತು ದೇವರ ಚರಣಾರವಿಂದಗಳಲ್ಲಿ ರತರಾದ ಯತಿಗಳು ಒಂದೊಂದು ವರ್ಷದ ಚಾತುರ್ಮಾಸ್ಯವನ್ನು ಒಂದೊಂದು ಊರಲ್ಲಿಕಳೆದು, ಭಗವದ್ವಿಮುಖರಾಗಿರುವ ಅಲ್ಲಿಯ ಸಾಂಸಾರಿಕ ಜನರನ್ನು ಸನ್ಮಾರ್ಗಕ್ಕೆ ಹಚ್ಚುವ ಪರೋಪಕಾರ ಕೆಲಸವನ್ನು ಮಾಡಿದರೆ ಮಾತ್ರ ಅವರ ಸಂನ್ಯಾಸವು ಸಫಲವಾದಂತಾಗುವದು. ಈ ಕೆಲಸದಲ್ಲಿ ಅಂಧವರಿಗೆ ಸಿಕ್ಕಬಹುದಾದಷ್ಟು ಯಶಸ್ಸು ಬೇರೆಯವರಿಗೆ ಸಿಕ್ಕಲಾರದು.

ನಮ್ಮ ಚರಿತ್ರನಾಯಕರಂತೂ ಚಿದಂಬರ ಸೇವೆಗಾಗಿಯೇ ಸಂನ್ಯಾಸ ತಕ್ಕೊಂಡವರು. ಭಗವದ್ವಿಮುಖರಾದ ಜನರನ್ನು ಪರಮಾರ್ಥದ ಕಡೆಗೆ ಹೊರಳಿಸುವದೇ ಅವರ ಚಿದಂಬರ ಸೇವೆಯ ಬಹು ಮುಖ್ಯವಾದ ಭಾಗವಾಗಿತ್ತು. ಆದುದರಿಂದ ಅವರ ಎಲ್ಲ ಚಾತುರ್ಮಾಸ್ಯಗಳೂ ಕೇವಲ ಲೋಕಸಂಗ್ರಹ, ಲೋಕಕಲ್ಯಾಣ, ಪರೋಪಕಾರ ಮತ್ತು ಅಧ್ಯಾತ್ಮ ವಿದ್ಯಾ ಪ್ರಸಾರಗಳ ಸಲುವಾಗಿಯೇ ಮೀಸಲಾಗಿದ್ದವೆಂದು ಎದೆತಟ್ಟಿ ಹೇಳಬಹುದು. ಚಾತುರ್ಮಾಸ್ಯವು ಅನೇಕ ಸಂನ್ಯಾಸಿಗಳಿಗೆ ಒಂದೇ ಔಪಚಾರಿಕ ವಿಧಿಯಾಗಿರುತ್ತದೆ. ಆದರೆ ಮಹಾರಾಜರ ಮಾತು ಹಾಗಲ್ಲ. ಅವರ ಎಲ್ಲ ಕಾರ್ಯಕ್ರಮಗಳಂತೆ ಚಾತುರ್ಮಾಸ್ಯದ ಕಾರ್ಯಕ್ರಮವಾದರೂ ಅಪೂರ್ವವಾಗಿತ್ತು. ಅವರು ಒಟ್ಟಿಗೆ ೨೨ ಚಾತುರ್ಮಾಸ್ಯಗಳನ್ನು ಕಳೆದರು. ಅವರ ಚಾತುರ್ಮಾಸ್ಯಗಳು ಒಟ್ಟಿಗೆ ೧೦ ಊರುಗಳಲ್ಲಿ ಆದವು. ಅವುಗಳೊಳಗೆ ಮೊದಲಿನ ಒಂದೆರಡು ಚಾತುರ್ಮಾಸ್ಯಗಳನ್ನು ಬಿಟ್ಟರೆ, ಅವರ ಉಳಿದೆಲ್ಲ ಚಾತುರ್ಮಾಸ್ಯಗಳು ಕೇವಲ ಪ್ರಾಣಿಮಾತ್ರರ ಉದ್ಧಾರಕ್ಕಾಗಿ ಏರ್ಪಡಿಸಿದ ಸುವ್ಯವಸ್ಥಿತವಾದ ಉಪಕ್ರಮಗಳಾಗಿ ಪರಿಣಮಿಸಿದವೆಂದು ಧೈರ್ಯದಿಂದ ಹೇಳಬಹುದು.

ಮಹಾರಾಜರು ಆಶ್ರಮ ತಕ್ಕೊಂಡದ್ದು ಶಕೆ ೧೮೧೨ ನೆಯ ಚೈತ್ರದಲ್ಲಿ. ಆ ಸಲದ ಅವರ ಚಾತುರ್ಮಾಸ್ಯವು ಶ್ರೀ ಶಾಂತಾಶ್ರಮ ಸ್ವಾಮಿಗಳವರ ಸಂಗತಿಯೊಳಗೆ ಹರಿಪುರದಲ್ಲಿಯೇ ಆಯಿತು. ಎರಡನೆಯ ಚಾತುರ್ಮಾಸ್ಯವು ಶ್ರೀ ಕ್ಷೇತ್ರ ಪಂಢರಪುರದಲ್ಲಾಯಿತು. ಮೂರನೆಯ ಚಾತುರ್ಮಾಸ್ಯವು

ದೊಡ್ಡವಾಡದಲ್ಲಿಯೂ, ಮುಂದಿನ ನಾಲ್ಕು ಚಾತುರ್ಮಾಸ್ಯಗಳು ಗುರ್ಲಹೊಸೂರಲ್ಲಿಯೂ ಆದವು. ಶಕೆ ೧೮೧೫ ರಲ್ಲಿ ಗುರ್ಲಹೊಸೂರ ಊರೊಳಗಾವ ಚಾತುರ್ಮಾಸ್ಯ ಸಂಕಲ್ಪದ ಕಾಲಕ್ಕೆ ಎಲ್ಲ ಜನರೂ ವಾಡಿಕೆಯಂತೆ ಶ್ರೀ ಚಿದಂಬರೇಶ್ವರ ದೇವಾಲಯದಲ್ಲಿ ಕೂಡಿದ್ದರು. ಆಗ ಅವರೆಲ್ಲರೂ ಪದ್ಧತಿಯಂತೆ ''ಇಲ್ಲಿ ನೀವು ಸುಖವಾಗಿರಬೇಕು'' ಎಂದು ಬೇಡಿಕೊಂಡರು. ಆಗ ಮಹಾರಾಜರು— ''ನೀವು ನಮಗೆ ಬೇಕಾದ ಭಿಕ್ಷೆಯನ್ನು ಹಾಕುವೆವೆಂದು ಹೇಳಿದರೆ ನಾವಿಲ್ಲಿ ವಾಸ ಮಾಡುವೆವು'' ಎಂದು ನಗುತ್ತ ಹೇಳಿದರು. ಊರ ಪ್ರಮುಖರು ಈ ಮಾತಿಗೆ ಸಂತೋಷದಿಂದ ಒಪ್ಪಿಕೊಂಡರು. ಆದಕ್ಕೆ ಮಹಾರಾಜರು ಮತ್ತೆ ಹೇಳಿದರು:— ''ನಮಗೆ ಬೇಕಾದುದು 'ಶಿವ-ಚಿದಂಬರ' ನಾಮಸ್ಮರಣೆಯ ಭಿಕ್ಷೆಯು. ನಿಮ್ಮಲ್ಲಿ ಯಾರು ಯಾರು ಪ್ರತಿನಿತ್ಯದಲ್ಲಿ ಎಷ್ಟು ಎಷ್ಟು ನಾಮಸ್ಮರಣೆಯನ್ನು ಮಾಡುವಿರೆಂಬದನ್ನು ನಮ್ಮ ಜೋಳಿಗೆಯಲ್ಲಿ ಹಾಕಬೇಕು. ಮತ್ತು ಇಂದಿನಿಂದಲೇ ಪ್ರಾರಂಭಿಸಿ, ಮನಃಪೂರ್ವಕವಾಗಿ ನಾಮಸ್ಮರಣೆ ಮಾಡುತ್ತ, ಗೊತ್ತು ಮಾಡಿದ ಸಂಖ್ಯೆಯನ್ನು ಮುಗಿಸಬೇಕು. ಮತ್ತು ಚಾತುರ್ಮಾಸ್ಯ ಮುಗಿಯುವ ವೇಳೆಗೆ ಹಾಗೆ ಎಲ್ಲರೂ ಮಾಡಿದ ಸಂಗತಿಯನ್ನು ತಿಳಿಸಬೇಕು. ಈ ಮಾತು ನಿಮಗೆ ಸಮ್ಮತವಿದ್ದರೆ ಈ ಸಾರೆಯ ಚಾತುರ್ಮಾಸ್ಯವನ್ನು ನಾವಿಲ್ಲಿ ಆನಂದದಿಂದ ಕಳೆಯುವೆವು.'' ಮಹಾರಾಜರು ಚಿದಂಬರ ಭಕ್ತಿಯ ಪ್ರಸಾರಕ್ಕಾಗಿ ಹೂಡಿದ ಈ ಯುಕ್ತಿಯನ್ನು ಕಂಡು ಕೂಡಿದ ಜನರಲ್ಲಿ ಆಶ್ಚರ್ಯವೂ ಪ್ರೇಮಾದರಗಳೂ ಹುಟ್ಟಿದವು. ಅವರು ಮಹಾರಾಜರ ಇಚ್ಛೆಯಂತೆ ನರ್ತಿಸಿ ಅವರನ್ನು ಸಂತೋಷಪಡಿಸಿದರೆಂಬದನ್ನು ಬೇರೆ ಹೇಳಲಿಕ್ಕೆ ಬೇಡ.

ಮಹಾರಾಜರ ಎಂಟನೆಯ ಚಾತುರ್ಮಾಸ್ಯವು ಉಗರಗೋಳದಲ್ಲಿ, ಒಂಬತ್ತನೆಯದು ಗಲಗಲಿಯಲ್ಲಿ, ಹತ್ತನೆಯದು ಗುರ್ಲಹೊಸೂರಲ್ಲಿ, ಹನ್ನೊಂದನೆಯದು ಕಾಶಿಯಲ್ಲಿ, ಹನ್ನೆರಡನೆಯದು ಕೆಂಗೇರಿಯಲ್ಲಿ ಮತ್ತು ಮುಂದಿನ ನಾಲ್ಕು ಚಾತುರ್ಮಾಸ್ಯಗಳು ಗುರ್ಲಹೊಸೂರಲ್ಲಿ ಆದವು. ಹದಿನೇಳನೆಯ ಚಾತುರ್ಮಾಸ್ಯವು ಅಷ್ಟಗಿಯಲ್ಲಿ, ೧೮ನೆಯದು ಜೈನಾಪುರದಲ್ಲಿ, ೧೯ನೆಯದು ಪುನಃ ಅಷ್ಟಗಿಯಲ್ಲಿ, ೨೦—೨೧ ನೆಯ ಚಾತುರ್ಮಾಸ್ಯಗಳು ಗಲಗಲಿಯಲ್ಲಿ ಮತ್ತು ಕೊನೆಯ ಚಾತುರ್ಮಾಸ್ಯವು

ಅಷ್ಟಗಿಯಲ್ಲಿ ಆದವು. ಇದರ ಮೇಲಿಂದ ಮಹಾರಾಜರ ಒಂಬತ್ತು ಚಾತುರ್ಮಾಸ್ಯಗಳು ಗುರ್ಲಹೊಸೂರಲ್ಲಿಯೂ, ೩ ಗಲಗಲಿಯಲ್ಲಿಯೂ, ೩ ಅಷ್ಟಗಿಯಲ್ಲಿಯೂ, ಉಳಿದ ಏಳು ಬೇರೆ ಬೇರೆ ಊರುಗಳಲ್ಲಿಯೂ ಆದವೆಂಬದು ತಿಳಿಯುವಂತಿದೆ. ಗುರ್ಲಹೊಸೂರವೇ ಅವರ ಮುಖ್ಯ ಕಾರ್ಯಕ್ಷೇತ್ರವಾದುದರಿಂದ ಅವರ ಚಾತುರ್ಮಾಸ್ಯಗಳು ಹೆಚ್ಚಾಗಿ ಗುರ್ಲಹೊಸೂರಲ್ಲಿ ಆದರೆ ಆಶ್ಚರ್ಯ ಪಡಬೇಕಾಗಿಲ್ಲ.

ಮಹಾರಾಜರ ಚಾತುರ್ಮಾಸ್ಯದ ಕ್ರಮವು ಬಲು ಲೋಕೋಪಕಾರಿಯಾಗಿತ್ತು. ಒಂದು ವಿಶಾಲವಾದ ಸ್ಥಳದೊಳಗೆ ನಡುವೆ ಚಿದಂಬರನ ಮೂರ್ತಿಯನ್ನು ಸ್ಥಾಪಿಸುತ್ತಿದ್ದರು ಎಲ್ಲ ಕಾರ್ಯಕ್ರಮಗಳೂ ಆ ದೇವರ ಸಮ್ಮುಖದಲ್ಲಿಯೇ ನಡೆಯುತ್ತಿದ್ದವು. ಮಹಾರಾಜರು ಸ್ವತಃ ಮೂರು ಗಂಟೆಗೆ ಏಳುತ್ತಿದ್ದರು. ಆದರೆ ಸಾರ್ವಜನಿಕ ಕಾರ್ಯಕ್ರಮವು ಮುಂಜಾನೆ ಆರು ಗಂಟೆಗೆ ಸುರುವಾಗುತ್ತಿತ್ತು. ಮತ್ತು ಸಂಜೆಯ ೧೦— ೩೦ ಗಂಟೆಯವರೆಗೆ ಅಖಂಡವಾಗಿ ನಡೆಯುತ್ತಿತ್ತು. ಅದರ ವಿವರಗಳು: —

ಮುಂಜಾನೆ

೬ ರಿಂದ ೭-೩೦ ವರೆಗೆ— ಕಕ್ಕಡಾರತಿ, ಭೂಪಾಳಿ, ಪ್ರಾತಃಸ್ತೋತ್ರಗಳು, ನಾಮಸ್ಮರಣ ಮೊದಲಾದವುಗಳು.

೭-೩೦ ರಿಂದ ೮-೩೦ ವರೆಗೆ— ಪುರಾಣ. ಭಾರತ ರಾಮಾಯಣಗಳು, ಏಕನಾಥೀ ಭಾಗವತ ಅಥವಾ ಚಿದಂಬರ ಚರಿತ್ರೆಗಳೊಳಗೆ ಯಾವುದಾದರೊಂದರ ಶ್ರವಣ ನಡೆಯುವದು.

೮-೩೦ ರಿಂದ ೯-೩೦ ವರೆಗೆ— ಚಿದಂಬರನ ಮೂರ್ತಿಯ ಸುತ್ತು ಎಲ್ಲರೂ ಪ್ರದಕ್ಷಿಣೆ ಹಾಕುವದು. ಬಾಯಿಂದ 'ಶಿವ-ಚಿದಂಬರ" ಎಂಬ ನಾಮೋಚ್ಚಾರಣೆಗಳನ್ನು ಎಲ್ಲರೂ ಮಾಡಬೇಕಾಗುತ್ತಿತ್ತು. ನಾಮಸ್ಮರಣೆಯ ಸಂಖ್ಯೆಯು ೨೦೦೦ಕ್ಕೆ ಮುಟ್ಟುವವರೆಗೆ ಈ ಕಾರ್ಯಕ್ರಮವು ನಡೆಯುತ್ತಿತ್ತು.

೯-೩೦ ರಿಂದ ೧೦ ವರೆಗೆ— ವಿಶ್ರಾಂತಿ. ಆದರೂ ನಿಜವಾದ ಮುಮುಕ್ಷುಗಳಿಗೆ ವೈಯಕ್ತಿಕವಾಗಿ ಸಾಧನಗಳನ್ನು ರಹಸ್ಯವಾಗಿ ತಿಳಿಸಿ ಕೊಡುತ್ತಿದ್ದರು.

೧೦ ರಿಂದ ೧೨ ವರೆಗೆ — ಬಹಿರ್ದೆಸೆಗೆ ಹೋಗುವದು, ಸ್ನಾನ, ಪೂಜೆ, ಆಹ್ನಿಕ, ಉಳಿದ ನಿತ್ಯಕ್ರಮ ಮೊದಲಾದವುಗಳು ನಡೆಯುವವು. ಇದೇ ವೇಳೆಯಲ್ಲಿ ಕೂಡಿದ ಬ್ರಾಹ್ಮಣರು ಚಿದಂಬರೇಶ್ವರನಿಗೆ ರುದ್ರಾಭಿಷೇಕ ಮಾಡುವರು. ಬೇಕಾದವರು ಅಲ್ಲಿ ಕುಳಿತುಕೊಂಡು ತಮತಮಗೆ ಇಷ್ಟವಾದ ಪಾರಾಯಣ-ಅನುಷ್ಠಾನಗಳನ್ನೂ ಮಾಡಬಹುದಾಗಿತ್ತು.

ಮಧ್ಯಾಹ್ನ

೧೨ ರಿಂದ ೧-೩೦ ವರೆಗೆ— ಭಿಕ್ಷೆ.

೧-೩೦ ರಿಂದ ೩ ವರೆಗೆ— ವಿಶ್ರಾಂತಿ.

೩ ರಿಂದ ೩-೩೦ ವರೆಗೆ— ಮುಖಮಾರ್ಜನ ಮೊದಲಾದವುಗಳು.

೩-೩೦ ರಿಂದ ೪-೩೦ ವರೆಗೆ— ಪುರಾಣ.

೪-೩೦ ರಿಂದ ೫-೩೦ ವರೆಗೆ— ಗೀತಾ ಮತ್ತು ವಿಷ್ಣು ಸಹಸ್ರ ನಾಮಗಳ ಪಠಣ.

೫-೩೦ ರಿಂದ ೬-೩೦ ವರೆಗೆ— ಪ್ರಾತಃಕಾಲದಲ್ಲಿಯಂತೆ ಎಲ್ಲರನ್ನೂ ಕೂಡಿಕೊಂಡು ೨೦೦೦ ನಾಮಸ್ಮರಣೆಯಾಗುವವರೆಗೆ ಪ್ರದಕ್ಷಿಣೆ ಹಾಕುವದು.

೬-೩೦ ರಿಂದ ೮-೩೦ ವರೆಗೆ— ಸ್ನಾನ, ಭಸ್ಮಧಾರಣೆ, ಸಾಯಂಸಂಧ್ಯಾ, ಪೂಜೆ, ನಿತ್ಯದ ಭಜನೆ, ಪಂಚಪದೀ, ಅಭಂಗಗಳ ಪಠಣ, ಶೇಜಾರತೀ ಮೊದಲಾದವುಗಳು.

೪-೩೦ ರಿಂದ ೯-೩೦ ವರೆಗೆ— ಮಹಾರಾಜರ ಉಪದೇಶ, ಭಕ್ತ ಜನರು ಕಥೆ ಹೇಳುವದು, ಇತ್ಯಾದಿ.

೯-೩೦ ರಿಂದ ೧೦-೩೦ ವರೆಗೆ– ಉಪಹಾರ ಮೊದಲಾದವುಗಳು. ಆ ಮೇಲೆ ವಿಶ್ರಾಂತಿ.

ಹೀಗಾಗಿ ಮಹಾರಾಜರ ಚಾತುರ್ಮಾಸ್ಯಗಳೆಂದರೆ ಸಾಧಕ ಜನರಿಗೆ ಪರ್ವಣಿಯ ಕಾಲವಾಗಿತ್ತೆಂದು ಹೇಳಬಹುದು. ಸುತ್ತು ಮುತ್ತಲಿನ, ಅದೇಕೆ ದೂರು ದೂರದ ಹಳ್ಳಿಗಳಿಂದ ಸಹ ಜನರು ಆ ಕಾಲಕ್ಕೆ ಅಲ್ಲಿಗೆ ಆಗಮಿಸಿ, ಮಹಾರಾಜರು ನಡಿಸಿದ ಆಧ್ಯಾತ್ಮ ಸತ್ರದ ಲಾಭ ಪಡೆಯುತ್ತಿದ್ದರು. ಮಹಾರಾಜರು ಎಲ್ಲ ಸಾಧಕರಿಗೆ ಉಪಯುಕ್ತವಾಗುವಂತೆ ಕೆಲವು ಸಾಮಾನ್ಯ ಸಾಧನಗಳನ್ನು ಹೇಳಿಕೊಡುತ್ತಿದ್ದರೂ, ಅವರವರ ಅಧಿಕಾರಕ್ಕೆ ತಕ್ಕಂತೆ ಬೇರೆ ಬೇರೆ ಸಾಧಕರಿಗೆ ವೈಯಕ್ತಿಕವಾಗಿಯೂ ಮಾರ್ಗದರ್ಶನ ಮಾಡುತ್ತಿದ್ದರು. ಅನ್ನ ಸಂತರ್ಪಣವಂತೂ ನಡೆದೇ ಇರುತ್ತಿತ್ತು. ಪ್ರತಿನಿತ್ಯ ಕನಿಷ್ಟವೆಂದರೆ ನೂರಾರು ಜನರಾದರೂ ಊಟಕ್ಕೆ ಇದ್ದೇ ಇರುತ್ತಿದ್ದರು.

೧೯ ಮಹಾರಾಜರ ತೀರ್ಥ-ಯಾತ್ರೆಗಳು

ದೇಶ ಪರ್ಯಟಣವು ಯಥಾರ್ಥವಾಗಿ ಶಿಕ್ಷಣದ ಒಂದು ಪ್ರಮುಖವಾದ ಅಂಗವೆಂದು ತಿಳಿಯಲ್ಪಡುತ್ತದೆ. ಸರಿಯಾಗಿ ಪ್ರವಾಸ ಮಾಡಿದ ವಿನಾ ಶಿಕ್ಷಣವು ಪೂರ್ಣವಾಗುವದಿಲ್ಲೆಂದು ಈಗಿನ ಶಿಕ್ಷಣ ತಜ್ಞರು ಒಮ್ಮತದಿಂದ ಹೇಳುತ್ತಾರೆ. ಬರೀ ಶಾಲೆ ಕಾಲೇಜುಗಳಲ್ಲಿ ಪುಸ್ತಕಗಳನ್ನೋದಿದ ಮಾತ್ರಕ್ಕೆ ಜೀವನದ ಬಹುಮುಖವಾದ ಅನುಭವವಾಗುವದು ಸಾಧ್ಯವಿಲ್ಲ. ಶಿಕ್ಷಣಾಲಯಗಳಲ್ಲಿ ಆಗುವ ತಾತ್ತ್ವಿಕ ಜ್ಞಾನಕ್ಕೆ ಜಗತ್ತಿನ ವ್ಯಾವಹಾರಿಕ ಜ್ಞಾನವು ಅವಶ್ಯವಾದ ಪೂರಕವಾಗಿದೆ: ಎಂತೆಯೇ ಶಾಲೆ ಕಾಲೇಜಗಳ ವಿದ್ಯಾರ್ಥಿಗಳೂ ಶಿಕ್ಷಕರೂ ಅನೇಕ ಸಲ ಪ್ರವಾಸಗಳನ್ನು ಕೈಕೊಳ್ಳುತ್ತಾರೆ. ಇವುಗಳಿಂದ ವಿದ್ಯಾರ್ಥಿಗಳಿಗೆ ವಿನೋದವೂ ಸಂತೋಷವೂ ಆಗುವದಲ್ಲದೆ, ಮನಸ್ಸೂ ವಿಕಸಿತವಾಗುವದು.

ಪ್ರವಾಸಗಳಲ್ಲಿ ನಾನಾದೇಶ ಮತ್ತು ಭಾಷೆಗಳ ಪರಿಚಯವಾಗುವದು. ಅನೇಕ ತರದ ಜನರನ್ನು ನೋಡಲಿಕ್ಕೆ ಸಿಕ್ಕುವದು. ಬೇರೆ ಬೇರೆ ಆಚಾರ ವಿಚಾರಗಳ ಅನುಭವವು ಬರುವದು. ಅಲ್ಲಲ್ಲಿ ರೂಢವಾಗಿರುವ ಮತ, ಸಾಂಪ್ರದಾಯ, ಧರ್ಮ ಮತ್ತು ಪಂಥಗಳು ಗೊತ್ತಾಗುವವು. ಬೇರೆ ಬೇರೆ ತರದ ಪ್ರಸಂಗಗಳನ್ನು ಹೇಗೆ ಎದುರಿಸಬೇಕೆಂಬ ಧೈರ್ಯವುಂಟಾಗುವದು. ಬುದ್ಧಿಯು ಸಹಜವಾಗಿ ಪ್ರಗಲ್ಭ, ವಿಶಾಲ ಮತ್ತು ಉದಾರವಾಗುವದು. ಮನುಷ್ಯನು ಪ್ರವಾಸದಿಂದ ಎರಡನೆಯವರ ತಪ್ಪುಗಳನ್ನು ಕ್ಷಮಿಸಲಿಕ್ಕೆ ಕಲಿಯುವನು. ತನ್ನ ದೋಷಗಳನ್ನು ಅರಿತುಕೊಳ್ಳುವನು. ನಾಲ್ಕು ಜನರ ಕೂಡ ಹೇಗೆ ವ್ಯವಹಾರ ಮಾಡಬೇಕೆಂಬದನ್ನು ಕಲಿಯುವನು. ಮೈಯಲ್ಲಿ ಚಟುವಟಿಕೆ ಮೊದಲಾದ ಸದ್ಗುಣಗಳು ಒಡಮೂಡುವವು. ಅನೇಕ ಸಂಗತಿಗಳ ಜ್ಞಾನವು ಅನಾಯಾಸವಾಗಿ ಆಗುವದು.

ಇವೆಲ್ಲ ಪ್ರವಾಸದಿಂದಾಗುವ ಲೌಕಿಕ ಲಾಭಗಳು. ಆದರೆ ಅದರ ಜೊತೆಗೆ ಧರ್ಮದ ಮೇಳವನ್ನು ಹಾಕಿದರೆ ಚಿನ್ನಕ್ಕೆ ಪುಟಕೊಟ್ಟಂತೆ ಆಗುತ್ತದೆ. ಇದೇ ದೃಷ್ಟಿಯಿಂದಲೇ ತೀರ್ಥಾಟಣದ ಸಂಪ್ರದಾಯವು ನಮ್ಮ ಜನರೊಳಗೆ ರೂಢವಾಗಿದೆ. ಪ್ರವಾಸವನ್ನು ಧಾರ್ಮಿಕ ಬುದ್ಧಿಯಿಂದ ಮಾಡಹತ್ತಿದರೆ, ಪ್ರವಾಸದಿಂದಾಗಬೇಕಾದ ಲೌಕಿಕ ಲಾಭಗಳು ಸಿಕ್ಕುವದಲ್ಲದೆ, ಪುಣ್ಯ ಸಂಪಾದನೆಯಿಂದ ಪ್ರವಾಸಿಕನ ಆಧ್ಯಾತ್ಮಿಕ ಉನ್ನತಿಯೂ ಆಗುತ್ತದೆ. ಅನೇಕ ಸತ್ಪುರುಷರಿಂದಲೂ, ಅವತಾರಿಕ ಪುರುಷರಿಂದಲೂ ಪವಿತ್ರಗೊಳಿಸಲ್ಪಟ್ಟ ನದಿ, ತೀರ್ಥ, ಕ್ಷೇತ್ರ ಮೊದಲಾದವುಗಳಿಗೆ ಹೋಗುವದರಿಂದ ಮನಸ್ಸಿನ ಮೇಲೆ ಉತ್ತಮ ಸಂಸ್ಕಾರಗಳು ಸಹಜವಾಗಿ ಆಗುತ್ತವೆ. ಅಂಥ ದೊಡ್ಡವರು ಸ್ನಾನ ಮಾಡಿದ ನದಿಗಳ ಪವಿತ್ರ ಜಲದಲ್ಲಿ ಮಿಂದು ಅವರ ಪಾದಸ್ಪರ್ಶದಿಂದ ಪುನೀತವಾದ ಭೂಮಿಯ ಮೇಲೆ ಅಡ್ಡಾಡಿ, ಅಲ್ಲಿಯ ಧೂಲಿಯನ್ನು ಮೈಮೇಲೆ ಎರಚಿಕೊಂಡು, ಅವರ ವಾಸಸ್ಥಳಗಳಾಗಿದ್ದ ಗುಡಿಗುಂಡಾರಗಳಲ್ಲಿ ವಾಸಮಾಡುವದರಿಂದ ಮಾನವನ ಅಂತಃಕರಣವು ಶೀಘ್ರವಾಗಿ ಶುದ್ಧವಾಗುತ್ತದೆ. ಅಲ್ಲಿಯ ಸ್ಥಳ ಪುರಾಣದ ಸಂಗತಿಗಳು, ಸಾಧು ಪುರುಷರ ಜೀವನ ಚರಿತ್ರಗಳು, ಅವರು ಮಾಡಿ ತೋರಿಸಿದ ಲೋಕೋಪಕಾರಕ ಲೀಲೆಗಳು, ಅಲ್ಲಿ ಇಂದಿಗೂ ಅನುಭವಕ್ಕೆ ಬರುತ್ತಿರುವ ಸ್ಥಾನಮಹಾತ್ಮ್ಯವು— ಇವೆಲ್ಲವುಗಳಿಂದ ಮಾನವನ ಮನಸ್ಸಿನೊಳಗಿನ ಜಾಡ್ಯವೆಲ್ಲ ಕಡಿಮೆಯಾಗಿ ಮನಸು ತಿಳಿಯಾಗುತ್ತದೆ.

ಇವೆಲ್ಲ ಕಾರಣಗಳಿಂದಲೇ ತೀರ್ಥಯಾತ್ರೆಗಳಿಗೆ ಹೋಗಿ ಬರುವ ರೂಢಿಯು ಹುಟ್ಟಿಬಂದಿರುವದೆಂದು ತೋರುತ್ತದೆ. ಸಂಸಾರದಲ್ಲಿಯೇ ಆಸಕ್ತರಾದ ಜನರೂ ಸಹ ತಮ್ಮ ಆಯುಷ್ಯದಲ್ಲಿ ಒಮ್ಮಿಲ್ಲೊಮ್ಮೆ ತೀರ್ಥಾಟಣೆ ಮಾಡಬೇಕೆಂದು ಅಪೇಕ್ಷಿಸುತ್ತಾರೆ. ಬಾವಾಬೈರಾಗಿಗಳಂತೂ ತೀರ್ಥಾಟಣದೊಳಗೇ ತಮ್ಮ ಆಯುಷ್ಯವನ್ನು ಕಳೆಯುತ್ತಾರೆ. ಚತುರ್ಥಾಶ್ರಮ ಸ್ವೀಕರಿಸಿದ ಯತಿಗಳಿಗೆ ತೀರ್ಥಾಟಣವು ಅತ್ಯಾವಶ್ಯಕವಾದ ವಿಧಿಯಾಗಿದೆ. ಯತ್ಯಾಶ್ರಮದ ಧ್ಯೇಯವಾದ ಆತ್ಮಜ್ಞಾನವು ತೀರ್ಥಾಟಣದಿಂದಲೇ ಪೂರ್ಣಗೊಳ್ಳುವದು. ‘‘ಮೊದಲು ನಾನು ಬ್ರಹ್ಮನೆಂದು ಅನುಭವ ಪಡೆಯಬೇಕು.

ಆ ಮೇಲೆ ಇದೆಲ್ಲವೂ ಬ್ರಹ್ಮವೆಂದು ಸಾಕ್ಷಾತ್ಕರಿಸಿಕೊಳ್ಳಬೇಕು. ಹೀಗೆ ಆತ್ಮಜ್ಞಾನವು ಎರಡು ಅಂಗಗಳಿಂದ ಪೂರ್ಣವಾಗುವದು'' ಎಂದು ಶ್ರೀ ಮಚ್ಛಂಕರಭಗವತ್ಪಾದರವರು ಅಪ್ಪಣೆ ಕೊಡಿಸಿದ್ದಾರೆ. ''ನಾನು ಬ್ರಹ್ಮನು'' ಎಂದು ಅನುಭವವಾದಾಕ್ಷಣಕ್ಕೆ ಮುಗಿಯಲಿಲ್ಲ. ಅದರ ಸತ್ಯತೆಯನ್ನು ಅನೇಕ ಕಡೆಗೆ ಪ್ರವಾಸಮಾಡಿ ಮನನಗಾಣ ಬೇಕಾಗುವದು. ''ಎಲ್ಲವೂ ಬ್ರಹ್ಮವೇ'' ಎಂಬ ಅನುಭವವೇನೂ ಸಾಮಾನ್ಯವಾದ ಮಾತಲ್ಲ. ಆದಕ್ಕೆ ಬಾಧಕವೆಂದು ತೋರುವ ಅನೇಕ ಪ್ರಸಂಗಗಳು ಪ್ರವಾಸದಲ್ಲಿ ಬರುವವು. ಅದರೆ ಅಂತಹ ಪರೀಕ್ಷೆಯ ಸಂದರ್ಭಗಳಲ್ಲಿಯೂ ಮನಸು ಚಲವಿಚಲ ಹೊಂದದಿದ್ದರೆ ಜ್ಞಾನವು ಪೂರ್ಣವಾಯಿತೆಂದು ತಿಳಿಯಲಡ್ಡಿಯಿಲ್ಲ. ಹೀಗೆ ತೀರ್ಥಾಟಣವು ಒಂದು ರೀತಿಯಿಂದ ಜ್ಞಾನದ ಒರೆಗಲ್ಲಾಗಿರುವದೆಂದು ಹೇಳಿದರೂ ಅಡ್ಡಿಯಿಲ್ಲ.

ಈ ದೃಷ್ಟಿಯಿಂದಲೇ ಶ್ರೀ ಸಮರ್ಥ ರಾಮದಾಸರು ಸಮಗ್ರ ೧೨ ವರುಷಗಳ ಕಾಲವನ್ನು ತೀರ್ಥಾಟಣದಲ್ಲಿ ಕಳೆದರು. ಅದರಿಂದ ಅವರು ತಮಗೆ ಮುಂದೆ ಮಾಡಬೇಕಾಗಿರುವ ಕೆಲಸದ ಸಾಹಿತ್ಯವನ್ನೆಲ್ಲ ಸಂಗ್ರಹಿಸಿದರು. ನಮ್ಮ ಚರಿತ್ರನಾಯಕರೂ ಇದೇ ತರದ ವಿಚಾರಗಳಿಂದಲೇ ಅನೇಕ ಸಲ ತೀರ್ಥಯಾತ್ರೆಗಳನ್ನು ಕೈಕೊಂಡರು. ಗುರ್ಲಹೊಸೂರಲ್ಲಿ ಮಾಡಬೇಕಾದ ಚಿದಂಬರ ಸೇವೆಯ ಮೂಲಕ ಅವರಿಗೆ ತಮ್ಮ ಆಯುಷ್ಯವನ್ನು ಹೆಚ್ಚಾಗಿ ತೀರ್ಥಾಟಣೆಯಲ್ಲಿ ಕಳೆಯಲಿಕ್ಕೆ ಅವಕಾಶವೇ ಸಿಕ್ಕಲಿಲ್ಲ. ಆದರೂ ಅವರು ಆಗಾಗ್ಗೆ ಸವಡು ಸಿಕ್ಕಾಗ ತೀರ್ಥ ಪ್ರವಾಸವನ್ನು ಸರಿಯಾಗಿ ಮಾಡಿ, ಅವರ ಗುರುಗಳಾದ ಶ್ರೀ ಶಾಂತಾಶ್ರಮ ಸ್ವಾಮಿಗಳವರ ಮುಖದಿಂದ ಬಂದ ಭವಿಷ್ಯವನ್ನು ಸತ್ಯಗೊಳಿಸಿದರು.

ಮಹಾರಾಜರು ಮಾಡಿದ ಎಲ್ಲ ತೀರ್ಥ-ಯಾತ್ರೆಗಳನ್ನು ಇಲ್ಲಿ ವಿವರಿಸುವದು ಶಕ್ಯವಿಲ್ಲ. ಅವರು ಕೈಕೊಂಡ ಕೆಲ ಮುಖ್ಯ ತೀರ್ಥ-ಯಾತ್ರೆಗಳ ಉಲ್ಲೇಖನವನ್ನಷ್ಟೇ ಇಲ್ಲಿ ಮಾಡಬೇಕೆಂದು ನಿಶ್ಚಯಿಸಿದ್ದೇವೆ. ಮಹಾರಾಜರು ತೀರ್ಥಾಟಣೆ ಕೈಕೊಂಡದ್ದು ತಮಗಾಗಿ ಅಲ್ಲ. ಅವರು ಹಾಗೆ ಮಾಡಿದ್ದು ತೀರ್ಥಗಳನ್ನು ಪವಿತ್ರಗೊಳಿಸುವದಕ್ಕಾಗಿ, ಶಿಷ್ಯರನ್ನು ಉದ್ಧಾರ

ಮಾಡುವದಕ್ಕಾಗಿ, ಅಲ್ಲಲ್ಲಿಯ ಜನರ ಮೇಲೆ ಅನುಗ್ರಹ ಮಾಡುವದಕ್ಕಾಗಿ. ಅವರ ಸಂಗತಿಯಲ್ಲಿ ತೀರ್ಥಯಾತ್ರೆ ಮಾಡಿಬಂದ ಜನರು ಅನೇಕರು ಇನ್ನೂ ಜೀವಿಸಿದ್ದು, ಅವರು ಆ ಪರ್ಯಟಣದ ಸಂಗತಿಗಳನ್ನು ಹೇಳಹತ್ತಿದರೆ, ಕೃತಜ್ಞತೆಯ ಆಧಿಕ್ಯದಿಂದ ಅವರ ಮಾತುಗಳೇ ನಿಂತು ಹೋಗುತ್ತವೆ; ಅವರ ಕುತ್ತಿಗೆಯ ಶಿರಗಳು ಉಬ್ಬಿ ಬರುತ್ತವೆ. ಮತ್ತು ಕಣ್ಣೀರು ಧಾರೆಯಾಗಿ ಬೀಳಹತ್ತುತ್ತವೆ.

ಮಹಾರಾಜರು ಶಕೆ ೧೮೧೨ ರಲ್ಲಿ ಸಂನ್ಯಾಸ ತಕ್ಕೊಂಡ ಮೇಲೆ, ಆದೇ ವರುಷ ಶಿಷ್ಯರಾದ ಕುಬೇರರೊಡನೆ ಕಾಶೀ-ಪ್ರಯಾಗ ಮೊದಲಾದ ಸ್ಥಳಗಳಿಗೆ ಹೋಗಿ ಬಂದ ಸಂಗತಿಯು ಈ ಮೊದಲೇ ಬಂದಿದೆ. ಅದರ ನಿರ್ದೇಶವನ್ನಷ್ಟೇ ಇಲ್ಲಿ ಮಾಡಿದರೆ ಸಾಕು. ಮುಂದೆ ಶಕೆ ೧೮೧೮ ರಲ್ಲಿ ಮಹಾರಾಜರು ಪೌಷ ಮಾಸದೊಳಗೆ ಶಿಷ್ಯರೊಡನೆ ಹೊರಟು ದಕ್ಷಿಣ ಹಿಂದುಸ್ಥಾನದೊಳಗಿನ ಯಾತ್ರೆಗಳನ್ನೆಲ್ಲ ಮುಗಿಸಿಕೊಂಡು ಬಂದರು. ಈ ಕಾಲಕ್ಕೆ ಅವರು ಶ್ರೀ ಕ್ಷೇತ್ರ ರಾಮೇಶ್ವರದ ವರೆಗೆ ಹೋಗಿ ಬಂದರು.

ಶಾ. ಶ. ೧೮೨೩ (ಸನ್ ೧೯೦೦) ರಲ್ಲಿ ಮಹಾರಾಜರು ಎರಡನೆಯ ಸಲ ಕಾಶೀಯಾತ್ರೆಗೆ ಹೊರಟರು. ಈ ಪ್ರಸಂಗದಲ್ಲಿ ಅವರ ಸಂಗಡ ಶಿಷ್ಯ ಜನರು ಅನೇಕರಿದ್ದರು. ಮಹಾರಾಜರ ಈ ಸಲದ ಚಾತುರ್ಮಾಸ್ಯವು ಕಾಶಿಯಲ್ಲಿಯೇ ಆಯಿತು. ಅವರ ಗುರುಗಳಾದ ಶ್ರೀ ಶಾಂತಾಶ್ರಮ ಸ್ವಾಮಿಗಳವರು ಮಹಾರಾಜರ ಆದರ್ಶ ಜೀವನವನ್ನು ನೋಡಿ ಧನ್ಯೋದ್ಗಾರಗಳನ್ನು ತೆಗೆದರು. ತನಗಿಂತ ಹೆಚ್ಚು ಮುಂದೆ ಬಂದ ಮಗನನ್ನು ನೋಡಿ ತಂದೆಗೆ ಆನಂದವಾಗುವಂತೆ, ತನ್ನ ಪರಂಪರೆಯನ್ನು ಹೆಚ್ಚು ವ್ಯಾಪಕವಾಗಿ ಮತ್ತು ಪರಿಣಾಮಕಾರಿಯಾಗಿ ಮುಂದೆ ಸಾಗಿಸುವ ಶಿಷ್ಯನನ್ನು ನೋಡಿ ಗುರುವಿಗೂ ಒಳ್ಳೇ ಸಂತೋಷವಾಗುವದು. ಮಹಾರಾಜರ ಕೀರ್ತಿಯನ್ನು ಶ್ರೀ ಶಾಂತಾಶ್ರಮ ಸ್ವಾಮಿಗಳವರು ಎರಡನೆಯವರ ಮುಖದಿಂದ ಅನೇಕ ಸಲ ಕೇಳಿದ್ದರು. ಈ ಸಾರೆ ಅವರ ವಿವರವಾದ ಚಿದಂಬರ ಸೇವೆಯ ವೃತ್ತಾಂತವನ್ನು ಮಹಾರಾಜರ ಶಿಷ್ಯರ ಬಾಯಿಂದಲೇ

ಕೇಳುವ ಯೋಗವು ಅವರಿಗೆ ಸಿಕ್ಕಿತು. ಕಾಶಿಯೊಳಗಿನ ಈ ಪ್ರಖ್ಯಾತ ಗುರುಶಿಷ್ಯರ ಜೋಡಿಯನ್ನು ನೋಡಿ ಎಲ್ಲ ಸಾಧಕರಿಗೂ ಆತ್ಯಾನಂದವಾಯಿತು. ದಿನಾಲೂ ಕಥೆ ಮತ್ತು ಪುರಾಣಗಳ ಶ್ರವಣವೂ, ಅಧ್ಯಾತ್ಮ ವಿವರಣೆಯೂ ತಪ್ಪದೇ ನಡೆಯುತ್ತಿದ್ದವು.

ಹೀಗೆ ಗುರುಗಳ ಸುಖಸಮಾಗಮದಲ್ಲಿ ಚಾತುರ್ಮಾಸ್ಯವು ಕಳೆದು ಹೋದ ಮೇಲೆ, ಮಹಾರಾಜರು ಗುರುಗಳ ಅಪ್ಪಣೆ ಪಡಕೊಂಡು ಉತ್ತರ ಹಿಂದುಸ್ತಾನದೊಳಗಿನ ಉಳಿದ ಕ್ಷೇತ್ರಯಾತ್ರೆಗಳಿಗಾಗಿ ಹೊರಟರು. ತೀರ್ಥ ಯಾತ್ರೆಗಳನ್ನು ಹೇಗೋ ಮಾಡಿ ಮುಗಿಸಿದೆವೆಂದೆನಿಸಿಕೊಳ್ಳಲಿಕ್ಕೆ ಮಾತ್ರ ಮಹಾರಾಜರು ಹೊರಟವರಾಗಿದ್ದಿಲ್ಲ. ಅವರು ಪ್ರತಿಯೊಂದು ಸ್ಥಲಕ್ಕೆ ಹೋದಾಗ ಅಲ್ಲಿ ಆಗಿ ಹೋದ ಅವತಾರಿಕ ಪುರುಷರ ಚರಿತ್ರೆಗಳನ್ನು ಸಂಪೂರ್ಣವಾಗಿ ಕೇಳಿಕೊಂಡು ಪ್ರೇಮದಿಂದ ತನ್ಮಯರಾಗಿ ಹೋಗುವರು. ಅನೇಕ ಸಾಧುಸಂತರು ಅಲ್ಲಿ ಮಾಡಿ ತೋರಿಸಿದ ಲೀಲೆಗಳನ್ನು ಕೇಳಿ ಅವರ ಮನಸು ಭಗವಂತನಲ್ಲಿ ವಿಲೀನವಾಗುವದು. ಅವರು ಈ ರೀತಿ ತಮ್ಮಷ್ಟಕ್ಕೇ ಆ ಸುಖವನ್ನು ಅನುಭವಿಸುತ್ತಿದ್ದರೆಂದಲ್ಲ. ಅವರ ಸಂಗಡಿಗರಿಗೂ ಅದು ಯಥೇಚ್ಛವಾಗಿ ಉಣ್ಣಲಿಕ್ಕೆ ಸಿಕ್ಕುತ್ತಿತ್ತು.

ಮಹಾರಾಜರು ಅಯೋಧ್ಯೆಗೆ ಹೋದಾಗ ಜಗದುದ್ಧಾರಕನಾದ ಶ್ರೀ ರಾಮಚಂದ್ರ ಪ್ರಭುವಿನ ವಿಹಾರ ಭೂಮಿಯನ್ನು ನೋಡಿ ಪುಲಕಿತರಾದರು. ಅಲ್ಲಿ ರಾಮಾಯಣದ ಕಥೆಯೆಲ್ಲ ಅವರ ಕಣ್ಣು ಮುಂದೆ ಕಟ್ಟಿತು. ಶ್ರೀ ರಾಮಚಂದ್ರನ ಅಪೂರ್ವವಾದ ತ್ಯಾಗ, ಭರತನ ದಿವ್ಯವಾದ ಭ್ರಾತೃ ಸ್ನೇಹ, ಲಕ್ಷ್ಮಣನ ಶ್ರೇಷ್ಠವಾದ ಅನುಯಾಯಿತ್ವ, ಮಾರುತಿಯ ಆದರ್ಶ ದಾಸ್ಯಭಕ್ತಿ – ಇವೆಲ್ಲ ಮಹಾರಾಜರನ್ನು ಭಾವಾವೇಶದಲ್ಲಿ ಮುಳುಗಿಸಿದವು. ಲೋಕಪಾವನೆಯಾದ ಸೀತಾಮಾತೆಯ ಶೋಕಜೀವನವು ಅವರ ಎದೆಯೊಳಗಿಂದ ಮತ್ತೆ ಮತ್ತೆ ಬಿಸಿಯುಸಿರನ್ನು ಹೊರಕ್ಕೆ ತರಿಸಿತು. ಈ ರೀತಿಯಾಗಿ ರಾಮಾಯಣದ ಅಯೋಧ್ಯೆಯಲ್ಲಿ ಕೆಲ ದಿನಗಳನ್ನು ಕಳೆದ ಮೇಲೆ ಮಹಾರಾಜರು ಶ್ರೀ ಕೃಷ್ಣಭಗವಂತನ ಬಾಲಲೀಲೆಯ ಪ್ರದೇಶಗಳಿಗೆ ತೆರಳಿದರು.

ಅಹಾ ! ಗೋಕುಲ, ವೃಂದಾವನ, ಮಥುರೆಗಳೆಂದರೆ ಎಂತಹ ಅದ್ಭುತ ರಮ್ಯವಾದ ಪ್ರದೇಶಗಳು ! ಅಲ್ಲಿ ಪ್ರತಿಯೊಂದು ಮಣ್ಣಿನ ಮತ್ತು ಉಸುಬಿನ ಕಣವೂ ಕೂಡ ಕೃಷ್ಣ, ಕೃಷ್ಣ, ಎನ್ನುತ್ತಿರಬಹುದಲ್ಲವೇ ? ಅಲ್ಲಿಯ ಪ್ರತಿಯೊಂದು ಗಿಡಗಂಟಿ, ಬಳ್ಳಿ ಮೊದಲಾದವುಗಳು ಕೂಡ ಕೃಷ್ಣಮಯವಾಗಿರಬಹುದಲ್ಲವೇ ? ಪ್ರೇಮರಸದಿಂದ ಉನ್ಮತ್ತರಾದ ಗೋಪಿಕಾ ಸ್ತ್ರೀಯರು ಅಲ್ಲಿ ಸುರಿಸಿದ ಭಕ್ತಿರಸದಿಂದ ಈ ಭೂಮಿಯು ಇಂದಿಗೂ ಹಸಿಯಾಗಿರಬಹುದಲ್ಲವೇ ? ಉದ್ಧವನಂಥ ಉಚ್ಚಕೋಟಿಯ ಭಕ್ತನೂ ಕೂಡ ''ನಾನು ಗೋಕುಲದೊಳಗೆ ಒಂದು ಗಿಡವಾಗಿ, ಕಂಟಿಯಾಗಿ, ಬಳ್ಳಿಯಾಗಿಯಾದರೂ ಹುಟ್ಟಬಾರದೇ ? ಯಾಕೆಂದರೆ ಆ ಪ್ರಸಂಗದಲ್ಲಿ ಇಲ್ಲಿ ಅಡ್ಡಾಡುತ್ತಿರುವ ಗೋಪಿಕಾ ಸ್ತ್ರೀಯರ ಪಾದದಿಂದ ಹೊರಟ ಒಂದು ಧೂಲಿಯ ಕಣವಾದರೂ ನನ್ನ ಮೇಲೆ ಬೀಳಬಹುದು.. ಮತ್ತು ನಾನು ಅಷ್ಟರಿಂದಲೇ ಉದ್ಧಾರವಾಗಬಹುದು'' ಎಂದು ಉದ್ಗಾರ ತೆಗೆದನಂತೆ ಸಾರಾಂಶವೇನಂದರೆ— ಆ ಸ್ಥಾನಗಳ ಮಹಾತ್ಮ್ಯವನ್ನು ಬಣ್ಣಿಸುವದು ಯಾರಿಗೆ ತಾನೇ ಸಾಧ್ಯ ? ಎಂತೆಯೇ ಇಂದಿಗೂ ಕೂಡ ಶ್ರೀ ಕೃಷ್ಣನು ಅಲ್ಲಿ ರಾಸಕ್ರೀಡೆಯನ್ನು ನಿಜವಾಗಿಯೇ ಆಡುವನೆಂದು ಭಾವಿಕರು ತಿಳಿಯುತ್ತಾರೆ.

ಮಹಾರಾಜರು ಈ ಸ್ಥಳಗಳಲ್ಲಿದ್ದಾಗ ಅವರು ಅನುಭವಿಸಿದ ಸುಖದ ಸವಿಯನ್ನು ವರ್ಣಿಸುವದು ಅಶಕ್ಯವೇ ಸರಿ. ಮಹಾರಾಜರು ಭಾಗವತ ಸಾಂಪ್ರದಾಯಕ್ಕೆ ಸೇರಿದವರೆಂಬದು ವಾಚಕರಿಗೆ ಗೊತ್ತಿದೆ. ಭಾಗವತರಿಗೆ ಶ್ರೀ ಕೃಷ್ಣನೆಂದರೆ ತೀರಿಹೋಯಿತು. ಶ್ರೀಮದ್ಭಾಗವತದ ದಶಮ ಸ್ಕಂಧ. ದೊಳಗಿನ ಶ್ರೀ ಕೃಷ್ಣನ ಮನೋಹರವಾದ ಬಾಲಲೀಲೆಯನ್ನು ಮಹಾರಾಜರು ಅನೇಕ ಸಲ ಪಾರಾಯಣ ಮಾಡಿದ್ದರು. ಅಲ್ಲಿದ್ದಾಗಲೂ ಮಹಾರಾಜರು ಅದರ ಪಾರಾಯಣ ಮಾಡಿದರೆಂದು ಬೇರೆ ಹೇಳಲಿಕ್ಕೆ ಬೇಡ. ಅಲ್ಲಿ ವರ್ಣಿಸಿದ ಸಂಗತಿಗಳನ್ನು ಒಂದೊಂದಾಗಿ ನೆನಿಸಿಕೊಂಡು, ಇಲ್ಲಿಯೇ ಕೃಷ್ಣನು ಹೀಗೆ ಮಾಡಿರಬಹುದಲ್ಲವೇ ? ಅಲ್ಲಿಯೇ ಆ ಲೀಲೆ ತೋರಿರಬಹುದಲ್ಲವೇ,—ಎಂದು ಮೊದಲಾಗಿ ಅವರು ತನ್ಮತೆಯಿಂದ ಅಡ್ಡಾಡುವರು.

ಮಹಾರಾಜರು ಅಲ್ಲಿದ್ದಾಗ ಅನೇಕ ಸಲ ಅವರು ಯಾರನ್ನೂ ಸಂಗಡ ಕರಕೊಳ್ಳದೇ, ಒಬ್ಬರೇ ಅಡ್ಡಾಡುತ್ತಿದ್ದರು. ಆಗ ಅವರು ಕೃಷ್ಣಮಯರಾಗಿ ಕಣ್ಣೀರು ಸುರಿಸುತ್ತ ಗೋಪೀಜನರ ಪ್ರೇಮಸುಖವನ್ನು ತಾವೂ ಅನುಭವಿಸಿದರು.

ಶ್ರೀ ಕೃಷ್ಣನ ಬಾಲಲೀಲೆಯ ಸ್ಥಾನಗಳ ಸುಖವನ್ನನುಭವಿಸಿ, ಮಹಾರಾಜರು ಉಜ್ಜಯನಿಗೆ ದಯಮಾಡಿಸಿದರು. ಉಜ್ಜಯನಿಯ ಮಹಾಕಾಲನೆಂದರೆ ಪ್ರಾತಃಸ್ಮರಣೀಯವಾದ ೧೨ ಜ್ಯೋತಿರ್ಲಿಂಗಗಳಲ್ಲಿ ಒಂದು. ಮಹಾರಾಜರ ಉಪಾಸ್ಯನೆಂದರೆ ಚಿದಂಬರನು ಅಥವಾ ಪಾರ್ವತಿ ಪತಿಯು. ಆದುದರಿಂದ ಅಲ್ಲಿ ಮಹಾರಾಜರ ಅನೇಕ ದಿನಗಳು ಕಳೆದು ಹೋದವು. ಅಲ್ಲಿಂದ ಮಹಾರಾಜರು ಮತ್ತೊಂದು ಜ್ಯೋತಿರ್ಲಿಂಗವಾದ ಓಂಕಾರ ಅಮರೇಶ್ವರನ ಸ್ಥಾನಕ್ಕೆ ದಯಮಾಡಿಸಿದರು. ಅಲ್ಲಿ ಸದಾಶಿವನ ಪೂಜೆ, ಧ್ಯಾನ ಮತ್ತು ಸೇವೆಗಳಿಂದ ಮಹಾರಾಜರು ಧನ್ಯತೆಯನ್ನು ಪಡೆದರು. ಅಷ್ಟರಲ್ಲಿ ಗುರುದ್ವಾದಶಿಯು ಸಮೀಪಿಸಿದ್ದರಿಂದ ಮಹಾರಾಜರು ಅಲ್ಲಿಂದ ನೆಟ್ಟಗೆ ಶ್ರೀ ಕ್ಷೇತ್ರ ನೃಸಿಂಹವಾಡಿಗೆ ಪಯಣ ಬೆಳಿಸಿದರು. ಅಲ್ಲಿ ಶ್ರೀ ದತ್ತಾತ್ರೇಯನ ದರುಶನದಿಂದ ಆನಂದಪಟ್ಟವರಾಗಿ, ಉತ್ಸವದ ಹೊತ್ತಿಗೆ ತಿರುಗಿ ಗುರ್ಲಹೊಸೂರಿಗೆ ಬಂದು ಮುಟ್ಟಿದರು.

ಮುಂದಿನ ವರುಷ ಎಂದರೆ ಶಕೆ ೧೮೩೨ ನೆಯ ವರುಷ ಮಹಾರಾಜರು ಗೋದಾವರಿ ತೀರಕ್ಕೆ ಹೋದರು. ಗೋದೆಯ ದಂಡೆಯ ಮೇಲೆ ಬಾಬುಳಗಾಂವ ಎಂಬದೊಂದು ಊರು ಇದೆ. ಅದು ಚಿದಂಬರ ಭಕ್ತರಿಗೆ ಒಳ್ಳೇ ಪವಿತ್ರವಾದ ಯಾತ್ರಾ ಸ್ಥಳವಾಗಿದೆ. ಯಾಕೆಂದರೆ ಚಿದಂಬರ ಮಹಾರಾಜರ ಪ್ರಖ್ಯಾತ ಶಿಷ್ಯರಾದ ಶ್ರೀ ರಾಜಾರಾಮ ಪಾಟೇಲರು ಇದೇ ಊರವರು. ಅವರು ಅಲ್ಲಿಯೇ ಹುಟ್ಟಿ ಅಲ್ಲಿಯೇ ಬೆಳೆದರು. ಅವರ ವಂಶಜರು ಇಂದಿಗೂ ಅಲ್ಲಿ ವಾಸವಾಗಿದ್ದಾರೆ. ಶ್ರೀ ರಾಜಾರಾಮರ ಅಭಂಗಗಳ ಮೂಲ ಕೈ ಬರಹದ ಪುಸ್ತಕವೂ ಅಲ್ಲಿದೆ. ಅವರು ಒಳ್ಳೇ ಭಕ್ತಿಯಿಂದ ಸಿದ್ಧಪಡಿಸಿದ ಚಿದಂಬರನ ಸುಂದರವಾದ ಮೂರ್ತಿಯ ಅಲ್ಲಿದೆ. ಸುಮಾರು ೧೪ ವರುಷದ ಹುಡುಗರಷ್ಟು ಅದು ದೊಡ್ಡದಾಗಿದೆ.

ಚಿದಂಬರ ಮೂರ್ತಿಯ ಜೊತೆಗೆ ಸಾವಿತ್ರೀ ಮತ್ತು ಸರಸ್ವತೀ ಅಮ್ಮನವರ ಮೂರ್ತಿಗಳೂ ಇರುತ್ತವೆ. ಆ ಮೂರ್ತಿಗಳು ಶ್ರೀ ರಾಜಾರಾಮನೊಡನೆ ಪ್ರತ್ಯಕ್ಷವಾಗಿ ವ್ಯವಹಾರ ಮಾಡುತ್ತಿದ್ದವೆಂದು ಆಖ್ಯಾಯಿಕೆಯಿದೆ. ರಾಜಾರಾಮನು ಅವುಗಳೊಡನೆ ಮಾತಾಡುತ್ತಿದ್ದನಂತೆ. ಆದರೆ ಯಾವ ಕಾರಣದಿಂದಲೋ ಆ ಮೂರ್ತಿಗಳನ್ನು ವಿಧಿವತ್ತಾಗಿ ಸ್ಥಾಪಿಸುವ ಕೆಲಸವು ರಾಜಾರಾಮನ ಕಡೆಯಿಂದ ಆಗಿದ್ದಿಲ್ಲ. ಅವೆಲ್ಲ ಮೂರ್ತಿಗಳು ಇನ್ನೂ ವರೆಗೆ ಒಂದು ಕೋಣೆಯಲ್ಲಿ ಹಾಗೇ ನಿಂತಿವೆ. ಮಹಾರಾಜರ ಮನಸ್ಸಿನಲ್ಲಿ ಶ್ರೀ ರಾಜಾರಾಮನ ಪುಣ್ಯ ಸ್ಥಳವನ್ನು ನೋಡಬೇಕೆಂದೂ, ಶಕ್ಯವಾದರೆ ಆ ಮೂರ್ತಿಗಳನ್ನು ಗುರ್ಲಹೊಸೂರಿಗೆ ತಕ್ಕೊಂಡು ಬಂದು ಅಲ್ಲಿ ಸ್ಥಾಪನೆ ಮಾಡಬೇಕೆಂದೂ ಇತ್ತು. ಮಹಾರಾಜರು ಅಲ್ಲಿ ಏಳೆಂಟು ದಿನಗಳ ವರೆಗೆ ನಿಂತರು. ಆದರೆ ಮಹಾರಾಜರ ಉದ್ದೇಶವು ಸಫಲವಾಗಲಿಲ್ಲ. ರಾಜಾರಾಮನ ವಂಶದವರು ಯಾವ ಕಾರಣದಿಂದಲೂ ಆ ಮೂರ್ತಿಗಳನ್ನು ಮಹಾರಾಜರ ವಶಕ್ಕೆ ಕೊಡಲಿಕ್ಕೆ ಸಮ್ಮತಿಸಲಿಲ್ಲ. ಮಹಾರಾಜರು ನಿರುಪಾಯರಾಗಿ ಹಾಗೆಯೇ ತಿರುಗಿ ಬರಬೇಕಾಯಿತು ಅಲ್ಲಿದ್ದಾಗ ಮಹಾರಾಜರು ಅಖಂಡ ನಾಮಸ್ಮರಣೆ, ಭಜನ, ಮತ್ತು ಅನ್ನಸಂತರ್ಪಣಾದಿ ಕೆಲಸಗಳನ್ನು ಯಥಾಸಾಂಗವಾಗಿ ಜರುಗಿಸಿದರು. ಮತ್ತು ರಾಜಾರಾಮನ ಅಭಂಗಗಳಲ್ಲಿ ಕೆಲವನ್ನು ಆರಿಸಿ ಸಂಗ್ರಹಿಸಿಕೊಂಡು ಬಂದರು.

ಶಕೆ ೧೮೨೬ ರಲ್ಲಿ (ಇ. ಸ. ೧೯೦೫) ಮಹಾರಾಜರು ನರಗುಂದ ಮಾರ್ಗವಾಗಿ ಗೊಣ್ಣಾಗರಕ್ಕೆ ಹೋದರು. ಗೊಣ್ಣಾಗರವೆಂಬದು ಮಲಪ್ರಭಾತೀರದ ಮೇಲಿದೆ ಅದು ರಾಮದುರ್ಗ ಸಂಸ್ಥಾನದೊಳಗಿನ ಒಂದು ತೀರ ಚಿಕ್ಕಹಳ್ಳಿಯಾಗಿದೆ. ಆದರೆ ಆ ಸ್ಥಳವು ಚಿದಂಬರ ಭಕ್ತರಿಗೆ ಬಲು ಪಾವನ ಕರವಾದ ಸ್ಥಳವಾಗಿದೆ. ಯಾಕೆಂದರೆ ಸಾಕ್ಷಾತ್ ಶ್ರೀ ಚಿದಂಬರ ಮಹಾರಾಜರೇ ಅಲ್ಲಿ ಸನ್ ೧೮೦೭ರ ಸುಮಾರಕ್ಕೆ ಒಂದು ದೊಡ್ಡ ಯಜ್ಞ ಮಾಡಿದರು. ಸ್ವಯಂ ಸದಾಶಿವನು ದೀಕ್ಷಿತನಾಗಿ ಮಾಡಿದ ಯಜ್ಞದ ಮಹಾತ್ಮ್ಯವನ್ನು ನಾವೇನು ಬಣ್ಣಿಸಬೇಕು ? ಆ ಯಜ್ಞದ ಕಾಲಕ್ಕೆ ಜೀವಿಸಿದ್ದ ಎಲ್ಲ ಅವತಾರಿಕ ಪುರುಷರೂ, ಸಾಧುಸಂತರೂ ಅದರೊಳಗೆ

ಭಾಗ ತೆಗೆದುಕೊಂಡು ಯಜ್ಞಪುರುಷನ ಸೇವೆ ಮಾಡುತ್ತಿದ್ದರು. ಅಕ್ಕಲ-ಕೋಟೆಯ ಶ್ರೀ ಸ್ವಾಮೀ ಸಮರ್ಥರೂ, ಗರಗದ ಶ್ರೀ ಮಡಿವಾಳಪ್ಪನವರೂ ಆ ಯಜ್ಞದ ಕಾಲಕ್ಕೆ ಉಪಸ್ಥಿತರಾಗಿದ್ದರೆಂದು ಗೊತ್ತಾಗುತ್ತದೆ. ಯಜ್ಞವು ಒಕ್ಕೈ ವಿಜೃಂಭಣೆಯಿಂದ ನಡೆಯಿತಲ್ಲದೆ ಲಕ್ಷಾವಧಿ ಜನರು ಅನ್ನಸಂತರ್ಪಣೆಯಿಂದ ತೃಪ್ತರಾದರು. ಶ್ರೀಮಂತ ಬಾಜೀರಾವ ಪೇಶವೆಯು ತನ್ನ ಪ್ರಮುಖ ಸರದಾರರೊಡನೆ ಆ ಕಾಲಕ್ಕೆ ಅಲ್ಲಿಗೆ ದಯಮಾಡಿಸಿದ್ದನು.

ಗೊಣ್ಣಾಗರಕ್ಕೆ ಹೋಗುವ ಮೊದಲು ಮಹಾರಾಜರು ನರಗುಂದದಲ್ಲಿ ಒಂದು ತಿಂಗಳ ವರೆಗೆ ಇದ್ದರು. ಅಲ್ಲಿರುವಾಗ ಅಲ್ಲಿಯ ಸುಪ್ರಸಿದ್ಧರಾದ ಶ್ರೀ ಶಿವಾಜೀರಾವ ದೇಸಾಯಿ ಎಂಬವರು ಮಹಾರಾಜರಿಗೆ ಶರಣು ಬಂದು ಅವರ ಶಿಷ್ಯರಾಗಿ, ಅನುಗ್ರಹ ಪಡೆದು ಧನ್ಯರಾದರು. ಮಹಾರಾಜರು ಅಲ್ಲಿರುವ ವರೆಗೆ ದೇಸಾಯರು ಜ್ಞಾನಸಿಂಧುವೆಂಬ ಹೆಸರಿನ ವೇದಾಂತ ಗ್ರಂಥವನ್ನು ಓದುತ್ತಿದ್ದರು. ಮಹಾರಾಜರು ಅದರ ವಿವರಣೆ ಮಾಡುತ್ತಿದ್ದರು.

ಮಹಾರಾಜರು ನರಗುಂದದಿಂದ ಹೊರಟು ಗೊಣ್ಣಾಗರಕ್ಕೆ ಆಗಮನ ಮಾಡಿದರು. ಮಹಾರಾಜರು ಅಲ್ಲಿಗೆ ಹೋದದ್ದು ಪೌಷ್ಯ ಶುದ್ಧ ದ್ವಾದಶಿಯ ದಿವಸ. ಮಹಾರಾಜರು ಅಲ್ಲಿ ೧೫ ದಿನಗಳ ವರೆಗೆ ಇದ್ದರು. ಆಗ ಚಿದಂಬರ ನಾಮ ಗರ್ಜನೆಯು ಅಖಂಡವಾಗಿ ಅಲ್ಲಿ ನಡೆಯುವ ಏರ್ಪಾಟು ಮಾಡಲಾಗಿತ್ತು. ನಾಮಸಪ್ತಾಹವೂ ವಿಧಿವತ್ತಾಗಿ ನಡೆಯಿತು. ಚಿದಂಬರ ಪುರಾಣ, ಕೀರ್ತನ, ಪ್ರವಚನ ಮೊದಲಾದವುಗಳು ದಿನಾಲೂ ನಡೆಯುತ್ತಿದ್ದವು ಸುಮಾರು ನೂರೆರಡು ನೂರು ಜನರು ಮಹಾರಾಜರ ಪರಿವಾರದಲ್ಲಿ ಸೇರಿದ್ದರು. ಅನ್ನಸಂತರ್ಪಣೆಯ ಕೆಲಸವು ಯಥೇಚ್ಛವಾಗಿ ನಡೆಯಿತು. ಮಹಾರಾಜರು ಅಲ್ಲಿಯ ಹಣಮಂತ ದೇವರ ಗುಡಿಯಲ್ಲಿ ಮಲಗುತ್ತಿದ್ದರು. ಮಹಾರಾಜರು ಅಲ್ಲಿಂದ ಹೊರಟವರು ಮಾಘವದ್ಯ ಪ್ರತಿಪದೆಯೊಳಗಾಗಿ ಗುರುಪ್ರತಿಪದೆಯ ಉತ್ಸವದ ಸಲುವಾಗಿ ಧಾರವಾಡಕ್ಕೆ ಬಂದು ಮುಟ್ಟಿದರು.

ಶಕೆ ೧೮೩೦ ರಲ್ಲಿ ಮಹಾರಾಜರು ಮೂರನೆಯ ಮತ್ತು ಕೊನೆಯ ಸಲ ಕಾಶೀಯಾತ್ರೆಗಾಗಿ ಹೊರಟರು. ಮಹಾರಾಜರೊಡನೆ ಆ ಕಾಲಕ್ಕೆ ಸುಮಾರು ೫೦ ಜನ ಶಿಷ್ಯರು ಹೊರಟಿದ್ದರು. ಅವರೊಳಗೆ ಅನೇಕ ಜನ ಹೆಂಗಸರೂ ಇದ್ದರು. ಹೆಂಗಸರು ಮತ್ತು ಹುಡುಗರನ್ನು ಕೂಡಿಕೊಂಡು ತೀರ್ಥಯಾತ್ರೆ ಮಾಡುವದೆಂದರೆ ಎಷ್ಟು ಕಠಿಣವಾದ ಮತ್ತು ಜವಾಬದಾರಿಯ ಕೆಲಸವೆಂಬದು ವಾಚಕರಿಗೆ ಗೊತ್ತಿದೆ. ಆದರೂ ಸಂಗಡ ಬರುತ್ತೇವೆನ್ನುವ ಯಾರಿಗೂ ಬರಬೇಡಿರೆಂದು ಮಹಾರಾಜರು ಹೇಳಲಿಲ್ಲ. ತಿರುಗಿ ಕೇಳಿದರೆ ಅಂತಹ ಎಲ್ಲ ಜನರಿಗೆ ಪುಷ್ಟಿಯನ್ನೇ ಕೊಟ್ಟರು. ಬರಬೇಕೆನ್ನುವ ಜನರೆಲ್ಲ ಒಂದು ವಿಶಿಷ್ಟ ಅವಧಿಯೊಳಗಂಗಿ ಪುಣ್ಣಿಸತ್ತನದಲ್ಲಿ ಕೂಡಬೇಕೆಂದು ಮಹಾರಾಜರ ಆಜ್ಞೆಯಾಗಿತ್ತು. ಅದರಂತೆ ಅಲ್ಲಿ ಎಲ್ಲ ಜನರೂ ಕೂಡಿದ ಮೇಲೆ ಕಾಶೀಯಾತ್ರೆಯ ಪ್ರವಾಸವು ಸುರುವಾಯಿತು.

ಮಹಾರಾಜರು ತಮ್ಮ ಪರಿವಾರದ ಜನರಿಗೆ ತಂದೆಯಾಗಿ, ತಾಯಿಯಾಗಿ, ಗುರುವಾಗಿ, ವೈದ್ಯರಾಗಿ, ಸಹಾಯಕರಾಗಿ ಮಾರ್ಗದರ್ಶನ ಮಾಡಿ ಎಲ್ಲರನ್ನೂ ಸುಖರೂಪವಾಗಿ ಪ್ರವಾಸ ಮಾಡಿಸಿಕೊಂಡು ಬಂದರು. ವಾರಿಯಲ್ಲಿ ಪರಿವಾರದೊಳಗಿನ ಅನೇಕ ಜನರು ರೋಗಗ್ರಸ್ತರಾಗಿ ಹಾಸಿಗೆ ಹಿಡಿದರು. ಆದರೆ ಮಹಾರಾಜರ ಮೇಲ್ವಿಚಾರಣೆಯ ಕೆಳಗೆ ಯಾರಿಗೂ ತೊಂದರೆಯಾಗಲಿಲ್ಲ. ಅಥವಾ ಯಾರಿಗೂ ಜೀವ ಕಳೆದುಕೊಳ್ಳುವ ಪ್ರಸಂಗ ಬರಲಿಲ್ಲ. ಮಹಾರಾಜರ ಸಂಗಡ ಆಗ ಅನುಚರರಾಗಿ ಹೋದ ಜನರ ಬಾಯಿಂದ, ಮಹಾರಾಜರ ದಯಾರ್ದ್ರ ವೃತ್ತಿಯನ್ನೂ ಪ್ರೇಮಮಯವಾದ ಆಚರಣೆಯನ್ನೂ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ. ಅವರೂ ಆ ಪ್ರವಾಸದ ವೃತ್ತಾಂತವನ್ನು ಒಳ್ಳೇ ಆದರದಿಂದ ಹೇಳುವರಲ್ಲದೆ ನಡುನಡುವೆ ಮಹಾರಾಜರನ್ನು ನೆನಿಸಿ ಅವರ ಕಂಠವು ಸದ್ಗದಿತವಾಗುವದು. ಮೇಲೆ ಹೇಳಿದಂತೆ ಕೃತಜ್ಞತೆಯ ಆಧಿಕ್ಯದಿಂದ ಅವರಿಗೆ ಮಾತಾಡಲಿಕ್ಕೆ ಕೂಡ ಬಾರದಂತಾಗಿ, ಅವರು ದೊಡ್ಡದನಿ ತೆಗೆದು ಅತ್ತು ಬಿಡುವರು.

ಈ ಸಲದ ಮಹಾರಾಜರ ಕಾಶೀವಾಸದೊಳಗೆ ಸಂಭವಿಸಿದ ಒಂದು ಸಂಗತಿಯು ವರ್ಣನೆ ಮಾಡುವಂತಿದೆ. ಮಹಾರಾಜರು ಮತ್ತು ಅವರ

ಪರಿವಾರದವರಿಗೆ ಕೂಡಿ ಅಲ್ಲಿ ಇರಲಿಕ್ಕೆಂದು ಒಂದು ದೊಡ್ಡ ಮಂದಿರವು ಸಿಕ್ಕಿತ್ತು. ಮನೆಯು ವಿಸ್ತಾರವಾದುದೂ ಮೂರು ನಾಲ್ಕು ಅಂತಸ್ತುಗಳುಳ್ಳದ್ದಾಗಿಯೂ, ಸರಿಯಾದ ವ್ಯವಸ್ಥೆಯುಳ್ಳದ್ದಾಗಿಯೂ ಇತ್ತು. ಗಂಗಾನದಿಗೆ ತೀರ ಸಮೀಪವಾಗಿದ್ದುದರಿಂದ ಒಳ್ಳೇ ಅನುಕೂಲವಾಗಿಯೂ ಇತ್ತು. ಮಹಾರಾಜರ ವಿಶಾಲವಾದ ಪರಿವಾರಕ್ಕೆಲ್ಲ ಅಲ್ಲಿ ಸುಖವಾಗಿ ವಾಸಮಾಡಲಿಕ್ಕೆ ಬೇಕಾಗುವಷ್ಟು ಅವಕಾಶವಿತ್ತು. ಸ್ವಾಭಾವಿಕವಾಗಿ ಇಂತಹ ಮನೆಯು ಇಷ್ಟು ಅನಾಯಾಸವಾಗಿ ಸಿಕ್ಕಿದ್ದರಿಂದ ಎಲ್ಲರಿಗೂ ಸಂತೋಷವಾಯಿತು.

ಆ ಮನೆಯಲ್ಲಿ ಏಳೆಂಟು ದಿನಗಳು ಸುಖವಾಗಿ ಕಳೆದು ಹೋದುವು. ಒಂದು ದಿನ ಸಾಯಂಕಾಲದ ಭಜನೆ ಮುಗಿಯುವ ಹೊತ್ತಿಗೆ ಒಬ್ಬ ವೃದ್ಧ ವಿಧವೆಯ ಮೈಯಲ್ಲಿ ಒಮ್ಮೆಲೇ ಭೂತ ಸಂಚಾರವಾಯಿತು. ಅವಳ ಆಗಿನ ಸ್ಥಿತಿಯನ್ನು ನೋಡಿ ಎಲ್ಲರೂ ಗಾಬರಿಯಾದರು. ಆ ಮನೆಯನ್ನು ತನ್ನ ವಾಸಸ್ಥಳವನ್ನಾಗಿ ಮಾಡಿಕೊಂಡಿರುವ ಬ್ರಹ್ಮರಾಕ್ಷಸವೊಂದು ಅವಳ ಮೈಯಲ್ಲಿ ಪ್ರಕಟವಾಗಿ ಮಾತಾಡಹತ್ತಿತು:— "ಈ ಮನೆಯು ನನ್ನ ವಾಸಸ್ಥಳವು. ಇಲ್ಲಿ ಮೊದಲಿನಿಂದಲೂ ನಾನು ಸುಖವಾಗಿದ್ದೇನೆ. ನಾನೇ ಇದರ ಒಡೆಯನು. ಕಳೆದ ೨೦—೨೫ ವರುಷಗಳಿಂದ ಇಲ್ಲಿ ಪ್ರವೇಶ ಮಾಡಲಿಕ್ಕೆ ನಾನು ಯಾರಿಗೂ ಅವಕಾಶ ಕೊಟ್ಟಿಲ್ಲ. ಒಂದರಕ್ಷಣವಾದರೂ ಇಲ್ಲಿ ಇರುವ ಧೈರ್ಯವನ್ನು ಯಾರೂ ಮಾಡಲಾರರು. ಮನೆಗೆ ಕೀಲಿ ಹಾಕಿದ್ದನ್ನಂತೂ ನೀವೆಲ್ಲ ನೋಡಿಯೇ ಇರುವಿರಿ. ಆದರೂ ದೊಡ್ಡ ಸತ್ಪುರುಷರು ಬಂದಿರುವರೆಂದು ನಾನು ಯಾರಿಗೂ ತೊಂದರೆ ಕೊಟ್ಟಿಲ್ಲ. ನಾನು ಮಹಾರಾಜರ ಸಲುವಾಗಿ ಈ ಸ್ಥಳವನ್ನು ಬಿಟ್ಟು ಇಷ್ಟು ದಿನಗಳವರೆಗೆ ಬಿಸಿಲು ಮತ್ತೆ ಗಾಳಿಗಳಲ್ಲಿ ಕಾಲಕಳೆದೆ. ಆದರೆ ನಾನು ಹೀಗೆ ನಿರ್ಗತಿಕನಾಗಿ ಇನ್ನೆಷ್ಟು ದಿನ ಕಾಲಕಳೆಯಲಿ ? ನನ್ನ ಸ್ಥಳದಲ್ಲಿ ನಾನಿನ್ನು ಇರಬೇಕೆನ್ನುತ್ತೇನೆ. ಮಹಾರಾಜರು ನನಗೆ ದಯಮಾಡಿ ಪರವಾನಿಗೆ ಕೊಡಬೇಕು." ಆ ಮಾತುಗಳನ್ನು ಕೇಳಿ ಯಾತ್ರಿಕರೆಲ್ಲರ ಮೈಯಲ್ಲಿ ನಡುಗು ಹುಟ್ಟಿತು. ಅವರು ಆಶ್ಚರ್ಯದಿಂದಲೂ ಭಯದಿಂದಲೂ

ಕಂಗಾಲಾದರು. ಹೆಣ್ಣು ಮಕ್ಕಳಂತೂ ತೀರ ಕಂಗೆಟ್ಟು ಹೋದರು. ಆದರೆ ಮಹಾರಾಜರು ಎಲ್ಲರಿಗೂ ಆಶ್ವಾಸನ ಕೊಟ್ಟು ಎಲ್ಲರನ್ನೂ ಸಂತಯಿಸಿದರು. ಯಾರೂ ಹೆದರುವ ಕಾರಣವಿಲ್ಲ, ತುಸು ಎಚ್ಚರಿಕೆಯಿಂದ ಇದ್ದರೆ ಆ ಭೂತವು ಯಾರಿಗೂ ಏನೂ ಮಾಡಲಾರದೆಂದು ಮಹಾರಾಜರು ಎಲ್ಲರಿಗೂ ಧೈರ್ಯ ಕೊಟ್ಟರು.

ಮಹಾರಾಜರು ಆ ಭೂತದ ಸಂಗಡ ಮಾತಾಡಹತ್ತಿದರು. ಅದು ತನ್ನ ದುರ್ಗತಿಯ ಎಲ್ಲ ಸಂಗತಿಗಳನ್ನೂ ಸಾದ್ಯಂತವಾಗಿ ವಿವರಿಸಿ ಹೇಳಿತು. ಅದರ ವೃತ್ತಾಂತವನ್ನೆಲ್ಲ ಕೇಳಿದ ಮೇಲೆ ಮಹಾರಾಜರ ಮನಸ್ಸಿನಲ್ಲಿ ಅದರ ವಿಷಯವಾಗಿ ಒಳ್ಳೇ ಮರುಕವುಂಟಾಯಿತು. ಅವರು ಅದಕ್ಕೆ ಉಪದೇಶ ಮಾಡಿದ್ದೇನೆಂದರೆ:— "ತಮ್ಮಾ, ನಿನ್ನ ದುಃಸ್ಥಿತಿಯನ್ನು ನೋಡಿ ದುಃಖವೆನಿಸುತ್ತದೆ. ಆದರೆ ಮಾಡುವದೇನು ? ನಾವು ಮಾಡಿದ ಕರ್ಮಗಳನ್ನು ನಾವೇ ಉಂಡು ತೀರಿಸಬೇಕಲ್ಲದೆ, ಅದಕ್ಕೆ ಬೇರೆ ಮಾರ್ಗವಿಲ್ಲ. ಕರ್ಮಗಳನ್ನು ಮಾಡುವಾಗ ನಗೆ ಬರುತ್ತಿರುವದಷ್ಟೇ. ಅವುಗಳ ಫಲವನ್ನುಣ್ಣುವಾಗ ದುಃಖವಾಗುವದೂ ಅಷ್ಟೇ ಸ್ವಾಭಾವಿಕವಾಗಿದೆ. ನಿನ್ನ ಈಗಿನ ಅನವಸ್ಥೆಗೆ ನೀನೇ ಕಾರಣನಾಗಿರುವಿ. ನಿನ್ನ ಇತಿಹಾಸವನ್ನೆಲ್ಲ ನಾನು ಮತ್ತೆ ನಿನಗೆ ನೆನಪು ಮಾಡಿಕೊಡುವ ಕಾರಣವಿಲ್ಲ. ಆದರೂ ನೀನು ನಮಗೆ ತ್ರಾಸಕೊಡುವ ಗೊಡವೆಗೆ ಹೋಗದೆ ಸುಮ್ಮನಾಗಿರುವಿ. ನಿನ್ನ ಈ ವರ್ತನೆಯಿಂದ ನಾವೂ ಸಂತುಷ್ಟರಾಗಿದ್ದೇವೆ. ನಾವು ಇಲ್ಲಿಂದ ಕಾಲ್ತೆಗೆಯಬೇಕಾದರೆ ಇನ್ನೂ ಕೆಲ ದಿನ ಬೇಕು. ನಮ್ಮ ಸಂಗಡ ಹೆಣ್ಣು ಮಕ್ಕಳೂ ಸಹ ಇದ್ದಾರೆ. ನಾವೆಲ್ಲ ಇಲ್ಲಿಂದ ಪಯಣ ಬೆಳೆಸುವ ವರೆಗೆ ನಮ್ಮ ಅಥವಾ ನಮ್ಮ ಪರಿವಾರದೊಳಗೆ ಯಾರ ಉಸಾಬರಿಗೆ ಬರಬೇಡ. ಎಂದರೆ ಕರುಣಾನಿಧಿಯಾದ ಕಾಶೀವಿಶ್ವನಾಥನು ನಿನ್ನನ್ನು ಈ ದುರದೃಷ್ಟದಿಂದ ಆದಷ್ಟು ತೀವ್ರ ಬಿಡುಗಡೆ ಮಾಡುವನೆಂದು ಭರವಸೆ ಕೊಡುತ್ತೇನೆ ನಿನಗೆ ಹಾಗಾಗಲೆಂದು ನಾವು ಹೃತ್ಪೂರ್ವಕವಾಗಿ ಆಶೀರ್ವದಿಸುವೆವು. ಚಿಂತೆ ಮಾಡಬೇಡ. ತಪ್ಪು ಮಾಡಿದವರಿಗಾಗಿ ದೇವರು ನ್ಯಾಯದಂಡವನ್ನು

ಓಡಿದಿದ್ದರೂ, ಶರಣಾಗತರಾದವರಿಗೆ ಅಭಯ ಹಸ್ತವನ್ನೂ ನೀಡುತ್ತಾನೆ. ಈ ಸ್ಥಿತಿಯಲ್ಲಿ ಕೂಡ ನೀನು ಅನ್ಯರಿಗೆ ಕಷ್ಟಕೊಡದೆ ಶಾಂತಿಯಿಂದಿರಲಿಕ್ಕೆ ಕಲಿಯಬೇಕು.''

ಮುಂದೆ ಮಹಾರಾಜರು ಕೆಲವೇ ಜನ ಶಿಷ್ಯರನ್ನು ಕರಕೊಂಡು ಬೇರೆ ಕಡೆಗೆ ಹೋಗುವ ಪ್ರಸಂಗ ಬಂತು. ಅವರ ಜೊತೆಗಿದ್ದವರೊಳಗೆ ಬಹು ಜನರು ಕಾಶಿಯಲ್ಲಿಯೇ ಕೆಲದಿನ ನಿಲ್ಲಬೇಕಾದ ಸಂದರ್ಭವೊದಗಿ ಬಂತು. ಆಗ ಮಹಾರಾಜರು ಎಲ್ಲರಿಗೂ ಕೂಡಲೇ ಆ ಮನೆಯನ್ನು ಬಿಟ್ಟು ಬೇರೆ ಕಡೆಗೆ ಹೋಗಬೇಕೆಂದೂ, ಇಲ್ಲವಾದರೆ ನಿಷ್ಕಾರಣವಾಗಿ ದುಃಖಕ್ಕೀಡಾಗಬೇಕಾಯಿತೆಂದೂ ಎಚ್ಚರಿಕೆ ಕೊಡಲಿಕ್ಕೆ ಮರೆಯಲಿಲ್ಲ. ಮಹಾರಾಜರ ಪರಿವಾರದವರಿಗೆ ಭೂತಸಂಚಾರದ ನಂತರ ಆ ಮನೆಯ ಇತಿಹಾಸವೆಲ್ಲ ಗೊತ್ತಾದೀತು. ಮನೆಯು ಬಿರುಸಾದುದರಿಂದಲೇ, ಅಲ್ಲಿ ಯಾರೂ ವಾಸಮಾಡದೆ ಮೊದಲಿನಿಂದ ಅದಕ್ಕೆ ಕೇಲಿಯನ್ನೇ ಹಾಕಿತ್ತೆಂದೂ, ಮಹಾರಾಜರ ಸಲುವಾಗಿ ಅದನ್ನು ಬೇಕೆಂತಲೇ ತೆರವು ಮಾಡಿ ಕೊಟ್ಟಿದ್ದರೆಂದೂ, ತಿಳಿದು ಬಂತು. ವಾಚಕರೇ, ಜನರು ಯಾವ ತರದವರಿರುವರೆಂಬದನ್ನು ನೀವೇ ನೋಡಿರಿ. ಸತ್ಪುರುಷರು ನಿಜವಾಗಿ ಸತ್ಪುರುಷರಿರುವರೋ ಇಲ್ಲವೋ ಎಂಬದನ್ನು ಜನರು ಅನೇಕ ಬಗೆಯಿಂದ ಪರೀಕ್ಷೆ ಮಾಡಿ ನೋಡುವರು. ಆದರೆ ಮಹಾರಾಜರು ಆ ಮನೆಯಲ್ಲಿ ಏನೂ ತೊಂದರೆಯಿಲ್ಲದೆ ಅನೇಕ ದಿನಗಳ ವರೆಗೆ ಇದ್ದುದನ್ನು ನೋಡಿ, ಕಾಶಿಯ ಜನರೆಲ್ಲ ಮಹಾರಾಜರ ಕಡೆಗೆ ಬಂದು, ತಮ್ಮ ಅಪರಾಧವನ್ನೊಪ್ಪಿಕೊಂಡು ಕ್ಷಮೆ ಬೇಡಿ ಹೋದರು.

ಸಾರಾಂಶವೇನೆಂದರೆ:— ಮಹಾರಾಜರ ತೀರ್ಥಯಾತ್ರೆಗಳ ಪ್ರಸಂಗಗಳೂ ಕೂಡ ಲೋಕಸಂಗ್ರಹ ಮತ್ತು ಲೋಕಕಲ್ಯಾಣಗಳಲ್ಲಿಯೇ ಪರ್ಯವಸಾನ ಹೊಂದಿದವೆಂದು ನಿರ್ವಿವಾದವಾಗಿ ಹೇಳಬಹುದು.

———

೨೦ ಮಹಾರಾಜರ ಭಕ್ತಸೇವಕ ವರ್ಗ

ದೇವರು ಅವತಾರ ಮಾಡಿದನೆಂದರೆ, ಅವನ ಭಕ್ತರೂ ಅವನೊಡನೆ ಹುಟ್ಟಿ ಬರುತ್ತಾರೆ. ಯಾಕೆಂದರೆ ದೇವರಿದ್ದಲ್ಲಿ ಭಕ್ತರು, ಭಕ್ತರಿದ್ದಲ್ಲಿ ದೇವರು, ಎಂಬದು ಅವಿಭಾಜ್ಯದ್ವಂದ್ವವಾಗಿದೆ. ಎಂತೆಯೇ ದೇವರಿಗೆ ದೇವತ್ವವನ್ನು ತಂದು ಕೊಟ್ಟವರು ಭಕ್ತರೇ, ಅವರಿಲ್ಲದಿದ್ದರೆ ದೇವರನ್ನು ದೇವರೆಂದು ತಿಳಿಯುವವರು ಯಾರು, ಎಂದು ಶ್ರೀ ತುಕಾರಾಮ ಮಹಾರಾಜರು ಯಥಾರ್ಥವಾಗಿ ಕೇಳುತ್ತಾರೆ. ''ಭಕ್ತರು ಸಾಕಾರ-ಸಗುಣರಾಗಿರುವರು. ಎಂದ ಮೇಲೆ ದೇವರಾದರೂ ಹೇಗೆ ನಿರ್ಗುಣನಾಗುವನು ? ನಾವು ದೇವರನ್ನು ನಮ್ಮಂತೆ ಸಗುಣನನ್ನಾಗಿಯೇ ಮಾಡುವೆವು'' ಎಂದು ಭಕ್ತಶ್ರೇಷ್ಠರಾದ ಶ್ರೀ ರಾಜಾರಾಮರು ಹೇಳುತ್ತಾರೆ. ''ಜ್ಞಾನಿಯಾದ ಭಕ್ತನು ನನ್ನ ಆತ್ಮವೇ ಸರಿ. ಅವನ ಮತ್ತು ನನ್ನ ನಡುವೆ ಎಷ್ಟೂ ಭೇದವಿಲ್ಲ'' ಎಂದು ಶ್ರೀ ಕೃಷ್ಣನು ಗೀತೆಯಲ್ಲಿ ಹೇಳುವನು. ಹೀಗೆ ದೇವ-ಭಕ್ತರ ಜೋಡಿಯು ಎಂದಿಗೂ ಅಗಲಲಾರದಂತಹದಾಗಿದೆ.

ದೇವ-ಭಕ್ತರ ಜೋಡಿಯಂತೆ ಗುರು-ಶಿಷ್ಯರ ಜೋಡಿಯೂ ಅವಿಭಾಜ್ಯವೇ. ಗುರುವಿಲ್ಲದೆ ಯಾವನೂ ಶಿಷ್ಯನಾಗಲಾರನು. ಶಿಷ್ಯನಿರದೆ ಯಾವನೂ ಗುರುವೆಂದೆನಿಸಿಕೊಳ್ಳಲಾರನು. ಅವೆರಡೂ ಯಾವಾಗಲೂ ಸಾಪೇಕ್ಷ ಶಬ್ದಗಳು. ಆದುದರಿಂದ ಗುರುವು ಹುಟ್ಟಿ ಬಂದೊಡನೆ, ಅವನ ಸಂಗಡ ಅವನ ಶಿಷ್ಯರೂ, ಅವನ ಬೆಂಬಲಿಗರೂ, ಅವನ ಕೆಲಸದಲ್ಲಿ ಅವನಿಗೆ ಅನೇಕ ರೀತಿಯಿಂದ ಸಹಾಯ ಮಾಡಬೇಕಾಗಿದ್ದ ಅನುಚರರೂ ಹುಟ್ಟಿ ಬರತಕ್ಕವರೇ. ಪ್ರತಿಯೊಂದು ಮುಖ್ಯ ದೇವತೆಗೆ ಪರಿವಾರ ದೇವತೆಗಳಿದ್ದಂತೆ ಪ್ರತಿಯೊಬ್ಬ ಗುರುವಿಗೆ ಪರಿವಾರ ವರ್ಗವಿರುವದು. ದೇವರು

ಚನ್ನಾಗಿ ಎದ್ದು ಕಾಣಬೇಕಾದರೆ, ಹಿಂದೆ ಪ್ರಭಾವಲಯವು ಬೇಕೇಬೇಕಷ್ಟೇ. ಹಾಗೆಯೇ ಗುರುಗಳಿಗೆ ಗುರುತ್ವವನ್ನು ತಂದು ಕೊಡುವವರು ಶಿಷ್ಯರೇ ಸರಿ. ಅವರಿಂದಲೇ ಗುರುವಿನ ದೊಡ್ಡಿಸ್ತಿಕೆಯು ಹೆಚ್ಚೆಚ್ಚಾಗಿ ಪ್ರಕಟವಾಗುತ್ತ ಹೋಗುತ್ತದೆ. ಒಂದು ರೀತಿಯಿಂದ ಗುರುವಿನನ್ನು "ಮಾಡುವವರು" ಶಿಷ್ಯರೇ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ,

ಇದೇ ನ್ಯಾಯದಿಂದ ನಮ್ಮ ಚರಿತ್ರನಾಯಕರ ಪ್ರಭಾವಲಯವನ್ನಲಂಕರಿಸುವ ಭಾಗ್ಯ ಸಿಕ್ಕವರನೇಕರು ಆಗಿಹೋದರು. ಎಷ್ಟೋ ಜನರ ಮೇಲೆ ಮಹಾರಾಜರು ಸಂಪೂರ್ಣ ಅನುಗ್ರಹವನ್ನು ಮಾಡಿದರು. ಎಷ್ಟೋ ಜನರ ಕಡೆಯಿಂದ ಮಹಾರಾಜರು ಸೇವೆಯನ್ನು ಸ್ವೀಕರಿಸಿ, ಅವರಿಗೆ ಉದ್ಧಾರವಾಗಲಿಕ್ಕೆ ಅವಕಾಶವೊದಗಿಸಿ ಕೊಟ್ಟರು. ವಾಚಕರೇ, ಗುರುಸೇವೆ ಯೆಂದರೆ ಸಾಮಾನ್ಯವಲ್ಲ. ಗುರುವಿನ ಮನಸ್ಸಿಗೆ ಬಂದರೆ ಮಾತ್ರ ಅವನು ಸೇವೆ ತಕ್ಕೊಳ್ಳುವನು. ಇಲ್ಲವಾದರೆ ಗುರುಸೇವೆ ಸಿಕ್ಕುವದೂ ದುರ್ಲಭವೇ. ಗುರುಸೇವೆ ಮಾಡಬೇಕೆಂದು ನಾವು ನಿಶ್ಚಯಿಸಿದ ಮಾತ್ರಕ್ಕೆ ಕೆಲಸವಾಗಲಿಲ್ಲ. ಗುರುವು ಒಪ್ಪಿಕೊಂಡರಲ್ಲವೇ ಗುರುಸೇವೆಯ ಮಾತು ? ಗುರುವು ಸೇವೆಯನ್ನು ತಕ್ಕೊಳ್ಳಲಿಕ್ಕೆ ಒಪ್ಪಿದರೆ ಮಾತ್ರ ಶಿಷ್ಯರ ಭಾಗ್ಯವು ತೆರೆದಂತಾಗುವದು. ಶಿಷ್ಯನಲ್ಲಿ ನಿಜವಾದ ಪ್ರೇಮಭಾವವು ಹುಟ್ಟಿದ ಹೊರತು ಗುರುವು ಶಿಷ್ಯನ ಮೇಲೆ ಎಂದೂ ಕೃಪೆ ಮಾಡಲಾರನೆಂಬದು ಸಹಜವಿದೆ

ಮಹಾರಾಜರ ಶಿಷ್ಯರು ಅನೇಕರಾದರು. ಅವರ ಸಂಪರ್ಕದೊಳಗೆ ಬಂದು ಅವರಿಂದ ಸ್ಫೂರ್ತಿಯನ್ನೂ ಮಾರ್ಗದರ್ಶನವನ್ನೂ ಪಡೆದುಕೊಂಡ ಜನರೂ ಅನೇಕರಾದರು. ಅವರೆಲ್ಲರ ನಾಮನಿರ್ದೇಶ ಮಾಡುವದಿಲ್ಲಿ ಶಕ್ಯವಿಲ್ಲ. ಅವರಲ್ಲಿ ಪ್ರತಿಯೊಬ್ಬರು ಮಹಾರಾಜರ ಸಂಬಂಧದೊಳಗೆ ಹೇಗೆ ಬಂದರು, ಅವರ ಮೇಲೆ ಮಹಾರಾಜರು ಯಾವ ರೀತಿಯಿಂದ ಅನುಗ್ರಹ ಮಾಡಿದರು, ಅವರಿಗೆ ಬಂದ ಅನುಭವಗಳು ಯಾವವು, ಎಂಬಿವೇ ಮೊದಲಾದ ಪ್ರಶ್ನೆಗಳಿಗೆ ನಾವಿಲ್ಲಿ ಉತ್ತರ ಕೊಡಬಯಸುವದಿಲ್ಲ. ಮಹಾರಾಜರು ಪ್ರತಿಯೊಬ್ಬ ವ್ಯಕ್ತಿಯ ಯೋಗ್ಯತೆಯನ್ನು ಕಂಡು ಹಿಡಿದು, ಅವನನ್ನು ಅವನಿಗುಚಿತವಾದ ಉಪಾಯಗಳಿಂದಲೇ ಸನ್ಮಾರ್ಗಕ್ಕೆ ತಂದು, ಅವನ

ಪೂರ್ವಸಂಸ್ಕಾರಗಳು, ಅವನ ಕೌಟುಂಬಿಕ ಪರಿಸ್ಥಿತಿ ಮೊದಲಾದವುಗಳಿಗನುಗುಣವಾಗಿ ಅವನಿಗೆ ಉಪಯೋಗವಾಗಬಹುದಾದ ಸಾಧನಗಳನ್ನೇ ಸೂಚಿಸುತ್ತಿದ್ದರು. ಆದುದರಿಂದ ಮಹಾರಾಜರಿಂದ ಈ ರೀತಿ ಸಹಾಯ ಪಡೆದವರ ಎಲ್ಲ ಸಂಗತಿಗಳನ್ನು ಹೇಳುವದೆಂದರೆ ಅಶಕ್ಯವೇ ಸರಿ. ನಾವಿಲ್ಲಿ ಮಹಾರಾಜರ ಕೃಪೆಗೊಳಗಾದ ಕೆಲವು ಮಹನೀಯರ ಸಂಗತಿಗಳನ್ನು ಮಾತ್ರ ವಿವರಿಸಬೇಕೆಂದು ಮಾಡಿದ್ದೇವೆ. ಯಾರ ಹೆಸರುಗಳು ಇಲ್ಲಿ ಬರದೇ ಹೋಗುವವೋ, ಅದರೆ ಯಾರಿಗೆ ತಮ್ಮ ಹೆಸರುಗಳು ಇಲ್ಲಿ ಬರಬೇಕಾಗಿತ್ತೆಂದು ಎನಿಸುವದೋ, ಅವರು ದಯವಿಟ್ಟು ನಮ್ಮನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುತ್ತೇವೆ. ನಮಗೆ ಗೊತ್ತಿದ್ದವರ ಹೆಸರುಗಳು ಮಾತ್ರ ಇಲ್ಲಿ ಬರುವವೆಂಬದು ಸಹಜವಿದೆ. ಆದರೆ ನಾವು ಶಕ್ಯವಿದ್ದಷ್ಟು ವಿಚಾರಮಾಡಿ ವಿಷಯಗಳನ್ನು ಸಂಗ್ರಹಿಸಿ ಇಲ್ಲಿ ಬರೆದಿರುವೆವೆಂಬದನ್ನು ವಾಚಕರು ದಯವಿಟ್ಟು ಲಕ್ಷ್ಯದಲ್ಲಿಡಬೇಕು.

ಮಹಾರಾಜರ ಅನೇಕ ಜನ ಶಿಷ್ಯರ ಹೆಸರುಗಳೂ ಸಂಗತಿಗಳೂ ಈ ಮೊದಲೇ ಬಂದು ಹೋಗಿವೆ. ಅವುಗಳನ್ನೆಲ್ಲ ಮತ್ತೆ ಬರೆಯುತ್ತ ಕೂಡುವ ಕಾರಣವಿಲ್ಲ. ಆದರೆ ಸದ್ಯದ ವಿಷಯದ ಪೂರ್ತತೆಗಾಗಿ ಅವರ ಹೆಸರುಗಳನ್ನಷ್ಟೇ ಇಲ್ಲಿ ಉಲ್ಲೇಖ ಮಾಡಿದರೆ ಸಾಕು. ಸವದತ್ತಿ ತಾಲೂಕಿನ ಎಡಿಹಳ್ಳಿ ಗ್ರಾಮದ ಶ್ರೀ ಕೃಷ್ಣಾಜಿ ಶಂಕರ ಕುಲಕರ್ಣಿ ಎಂಬುವ ಭಾಗ್ಯವಂತರೇ ಮಹಾರಾಜರ ಮೊದಲನೆಯ ಶಿಷ್ಯರು. "ದೇವನೊಬ್ಬ, ನಾಮ ಹಲವು" ಎಂಬ ಹೆಸರಿನ ಪ್ರಕರಣದಲ್ಲಿ ಅವರ ಸಂಗತಿಗಳನ್ನು ವಿಸ್ತಾರವಾಗಿ ವಿವರಿಸಿದ್ದೇವೆ. ವಾಜೀಂದ್ರ ಶ್ರೀನಿವಾಸ ಕರವೀರ, ಲಕ್ಷ್ಮಣ ಗೋಪಾಳ ಕುಬೇರ, ನರಸೋ ಭಗವಂತ ಕುಲಕರ್ಣಿ, ಮಹಾದೇವರಾವ ಆತ್ಮಾರಾಮ ಪಾರಸೇಕರ, ಖಾನಾಪುರದ ಶ್ರೀ ಯಶವಂತರಾವ ದೇಶಪಾಂಡೆ ಇವರೇ ಮೊದಲಾದ ಶಿಷ್ಯರ ಸಂಗತಿಗಳೂ ಅದೇ ಪ್ರಕರಣದಲ್ಲಿ ಬಂದಿವೆ. ಇವರ ಇತಿಹಾಸವನ್ನು ನಾವೀಗ ಮತ್ತೆ ಬರೆಯುತ್ತ ಕೂಡದೆ, ಇವರ ಹೊರತಾಗಿ ಯಾರು ಮಹಾರಾಜರ ಪರಿವಾರಕ್ಕೆ ಸೇರಿ ಧನ್ಯರಾದರೊ ಅವರನ್ನೇ ಕುರಿತು ಕೆಲವು ಮಾತುಗಳನ್ನು ಬರೆಯುತ್ತೇವೆ.

ನಾವೀಗ ಬರೆಯಬೇಕಾಗಿರುವ ಹೆಸರುಗಳಲ್ಲಿ ಶ್ರೀ. ವಿಷ್ಣು ಕೃಷ್ಣ ಕವೀಶ್ವರರ ಹೆಸರು ಅಗ್ರಸ್ಥಾನದಲ್ಲಿರತಕ್ಕದ್ದಾಗಿದೆ. ಇವರ ಪೂರ್ವಪುಣ್ಯವು ಅಗಣಿತವಾಗಿದೆ. ಜನ್ಮಾಂತರದ ಸಂಸ್ಕಾರಗಳೂ ಅತ್ಯಂತ ಶ್ರೇಷ್ಠವಾಗಿವೆ. ಎಂತೆಯೇ ಇವರೊಳಗೆ ತೀರ ಬಾಲ್ಯದಲ್ಲಿಯೇ ವೈರಾಗ್ಯವು ಹುಟ್ಟಿತು. ನಮ್ಮ ಚರಿತ್ರನಾಯಕರಂಥ ಸದ್ಗುರುಗಳು ಸಿಕ್ಕರು. ಮತ್ತು ಗುರುಮಹಾರಾಜರ ಪ್ರಥಮ ಸಂದರ್ಶನದಲ್ಲಿಯೇ ಅವರಿಬ್ಬರ ಜನ್ಮಾಂತರದ ಪವಿತ್ರವಾದ ಸಂಬಂಧವು ಒಮ್ಮೆಲೇ ಅಂಕುರಿತವಾಯಿತು. ಒಮ್ಮೆ ಗುರುಪಾದಗಳ ಕಡೆಗೆ ಹತ್ತಿದ ಇವರ ಮನಸು ಯಾವ ಕಾರಣದಿಂದಲೂ ಅಲ್ಲಿಂದ ಕದಲಲಿಲ್ಲ. ಇವರ ಕಡೆಯಿಂದಾಪ ಗುರುಸೇವೆಯ ಪರಿಮಾಣವನ್ನ ಳೆಯುವದು ಯಾರಿಗೂ ಸಾಧ್ಯವಿಲ್ಲ. ಶ್ರೀ ಕೈವಲ್ಯಾಶ್ರಮ ಸ್ವಾಮೀ ಸಂಸ್ಥೆಯು ಮುಂದೆ ಬಂದದ್ದು ಇವರಿಂದಲೇ. ಅದು ಇಂದು ಉತ್ಕರ್ಷಾತಿಶಯವನ್ನು ಹೊಂದಿ ನಿಂತಿರುವದೂ ಮುಖ್ಯವಾಗಿ ಇವರಿಂದಲೇ. ಇವರು ಗುರುಗಳಿಗೆ ಪ್ರಥಮ ಭೆಟ್ಟಿಯಲ್ಲಿಯೇ ತಮ್ಮ ಸರ್ವಸ್ವವನ್ನು ಅರ್ಪಿಸಿದ ತ್ಯಾಗಿಗಳು. ಇವರನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ.

ಇವರು ಹುಟ್ಟಿದ್ದು ಬೆಳಗಾಂವಿಯ ತಾಲೂಕಿನ ಅಷ್ಟಗಿ ಎಂಬ ಊರಲ್ಲಿ. ಅಲ್ಲಿ ಇವರು ಶಾಲಿವಾಹನ ಶಕೆ ೧೮೧೧ ಶ್ರಾ. ವದ್ಯ ಅಷ್ಟಮಿಯ ದಿವಸ ಜನ್ಮ ತಾಳಿದರು. ಎಂದರೆ ಯಾವ ದಿನ ಶ್ರೀ ಭಗವಾನ್ ಕೃಷ್ಣನು ಅವತಾರ ಮಾಡಿದನೋ, ಆ ಗೋಕುಲಾಷ್ಟಮಿಯ ದಿವಸ ಇವರು ಹುಟ್ಟಿದರು. ಚಿಕ್ಕಂದಿನಿಂದಲೇ ಇವರಲ್ಲಿ ಮಾತೃಭಕ್ತಿ, ಪಿತೃಭಕ್ತಿ ಮತ್ತು ದೇವಭಕ್ತಿಗಳು ತಲೆದೋರಿದವು. ಶಿಲಾಪ್ರತಿಮೆಗಳನ್ನು ಪುಷ್ಪಾದಿಗಳಿಂದ ಪೂಜೆ ಮಾಡಿ ಸಂತೋಷಪಡುವದು ಇವರ ಚಿಕ್ಕಂದಿನ ಮುಖ್ಯವಾದ ಆಟವಾಗಿತ್ತು. ಎಂದರೆ ಜನ್ಮದಿಂದಲೇ ಇವರು ಭಗವದ್ಭಕ್ತರು. ಇವರು ಬುದ್ಧಿವಂತರಾದರೂ ಲೌಕಿಕ ಶಿಕ್ಷಣದ ಕಡೆಗೆ ಮಾತ್ರ ಇವರ ಮನಸು ಹತ್ತಲಿಲ್ಲ. ಕನ್ನಡ, ಮರಾಠಿ ಭಾಷೆಗಳ ಸಾಮಾನ್ಯ ಜ್ಞಾನವು ಆಗುವ ಮಟ್ಟಿಗೆ ಇವರು ಶಾಲೆ ಕಲಿತರಲ್ಲದೆ ಇಂಗ್ಲೀಷ ನಾಲ್ಕನೆಯ ಇಯತ್ತೆಯ ವರೆಗೂ ಅಭ್ಯಾಸ ಮಾಡಿ ತುಸುಮಟ್ಟಿಗೆ ಆಂಗ್ಲಭಾಷೆಯ ಪರಿಚಯವನ್ನು ಮಾಡಿಕೊಂಡಿದ್ದಾರೆ. ಇವರ ಧ್ವನಿಯು ಜನ್ಮತಃ ಮಧುರವೂ ಮೋಹಕವೂ

ಆಗಿದ್ದು, ಸಂಗೀತದಲ್ಲಿ ಇವರಿಗೆ ಪ್ರೇಮ ಬಹಳ. ಕೆಲವು ದಿನಗಳ ವರೆಗೆ ಇವರು ಸುಪ್ರಸಿದ್ಧರಾದ ಒಬ್ಬ ಸಂಗೀತಗಾರರಲ್ಲಿ ಇದ್ದು ಆ ಶಾಸ್ತ್ರದ ಅಭ್ಯಾಸವನ್ನೂ ಮಾಡಿದ್ದಾರೆ. ಎಂತೆಯೇ ಇವರ ಭಜನೆಯು ಶ್ರೋತೃಗಳ ಮನಸ್ಸನ್ನು ತಲ್ಲೀನಗೊಳಿಸುತ್ತದೆ.

ಚಿಕ್ಕಂದಿನಲ್ಲಿಯೇ ಇವರಲ್ಲಿ ಬೇರುಗೊಂಡ ಪರಮಾರ್ಥದ ಹಸಿವು ಇವರನ್ನು ಏನು ಮಾಡಿದರೂ ಸುಮ್ಮನೇ ಕೂಡಗೊಡಲಿಲ್ಲ. ಇವರ ಮನಸು ಒಂದು ಅಜ್ಞಾತವಾದ ಅತೃಪ್ತಿಯಿಂದ ಯಾವಾಗಲೂ ಕೊರಗ-ಹತ್ತಿತ್ತು. ಏನು ಮಾಡಲಿ, ಎಲ್ಲಿ ಹೋಗಲಿ, ಎಂದು ಇವರು ಹಗಲಿರುಳೂ ಕೊರಗಹತ್ತಿದರು. ಅವರು ಸುಮಾರು ೧೨—೧೩ ವರುಷದವರಿದ್ದಾಗ, ಬೆಳಗಾಂವ ತಾಲೂಕಿನೊಳಗೆ ಇರುವ ಬಸಾಪುರ ಎಂಬ ಊರಲ್ಲಿ ತಮ್ಮ ಅಣ್ಣನ ಹತ್ತರ ಇರಹತ್ತಿದರು. ಆಗ ಅವರ ಸ್ಥಿತಿಯು ತೀರ ಕರುಣಾ-ಜನಕವಾಗಿತ್ತು. ಮನಸಿಗೆ ಸಮಾಧಾನವೆಂದರೇನೆಂಬದು ಅವರಿಗೆ ಗೊತ್ತಾಗದಂತಾಯಿತು. ಅವರು ಜನಸಹವಾಸವನ್ನು ಬಿಟ್ಟು ಏಕಾಂತ ಪ್ರಿಯರಾದರು. ಅವರು ಎಷ್ಟೋ ಸಾರೆ ಬಸಾಪುರದಿಂದ ಸುಮಾರು ಅರ್ಧ ಮೈಲಿನ ಮೇಲಿರುವ ಬಸವಣ್ಣನ ಗುಡಿಯಲ್ಲಿ ಏಕಾಕಿಯಾಗಿ ಕೂಡು-ತ್ತಿದ್ದರು. ಮತ್ತು ಅಲ್ಲಿ ಅನೇಕ ಬಗೆಯಿಂದ ಪರಮಾತ್ಮನಿಗೆ ಪ್ರಾರ್ಥನೆ ಮಾಡಿಕೊಳ್ಳಹತ್ತಿದರು. ಒಂದೊಂದು ಸಲ, ಸದ್ಗುರುವು ಯಾವಾಗ ಸಿಕ್ಕು ನನ್ನನ್ನು ದ್ಧಾರ ಮಾಡುವನು, ಎಂಬ ವಿಚಾರದಿಂದ ಅವರು ಕಂಗೆಟ್ಟು ಎಚ್ಚರದಪ್ಪಿ ಬೀಳುವರು. ಮೈಮೇಲೆ ಆವೇಶ ಬಂದವರಂತೆ ಒಮ್ಮೊಮ್ಮೆ ಗುಡ್ಡದ ತುದಿಯ ಮೇಲೇರಿ ಹೋಗಿ ತಾಸು ತಾಸುಗಟ್ಟಲೆ ನಿಶ್ಚಲರಾಗಿ, ಕುಳಿತುಬಿಡುತ್ತಿದ್ದರು. ಧಾರೆ ಧಾರೆಯಾಗಿ ಕಣ್ಣೀರು ಹೋಗಹತ್ತಿದವು. ರಾತ್ರಿಯಲ್ಲಿ ನಿದ್ದೆ ಹತ್ತದಂತಾಯಿತು. ಆಂಗ್ಲ ಶಿಕ್ಷಣಕ್ಕಾಗಿ ಕುರಂದವಾಡ-ದಲ್ಲಿದ್ದಾಗ ಇವರಿಗೆ ನೃಸಿಂಹವಾಡಿಯ ಸಂಬಂಧವು ಬಂದಿತ್ತು. ಅದಕ್ಕಾಗಿ ಅವರು ಈ ಪ್ರಸಂಗದಲ್ಲಿ ದೇವರೇ ತಮ್ಮ ಮೊರೆಯನ್ನು ಕೇಳತಕ್ಕವನೆಂದು ನಿಶ್ಚಯಿಸಿ, ಗುರುಪ್ರಾಪ್ತಿಯಾಗಬೇಕೆಂಬ ಉದ್ದೇಶದಿಂದ ಶ್ರೀಗುರು ಚರಿತ್ರದ ಅನೇಕ ಸಪ್ತಾಹ ಪಾರಾಯಣಗಳನ್ನು ಮಾಡಿದರು. ಭಕ್ತಜನರನ್ನು

ದಾರ ಮಾಡುವದಕ್ಕಾಗಿ ಇಂದಿಗೂ ಭೂಮಿಯ ಮೇಲೆ ಸಂಚರಿಸುತ್ತಿದ್ದ ಕರುಣಾಮಯನಾದ ಅತ್ರಿನಂದನನು ಇವರ ನಿರ್ಮಲವಾದ ಪ್ರೇಮಭಕ್ತಿಯಿಂದ ಪ್ರಸನ್ನನಾಗಿ, ಇವರಿಗೆ ಸದ್ಗುರುವಿನ ಬೆಟ್ಟ ಮಾಡಿಸಬೇಕೆಂಬು ಸಂಕಲ್ಪ ಮಾಡಿದ್ದರೆ ಆಶ್ಚರ್ಯವಿಲ್ಲ.

ಸನ್ ೧೯೦೩ನೇ ಇಸವಿಯಲ್ಲಿ ಮಹಾರಾಜರು ಸಂಚಾರಕ್ಕಾಗಿ ಬೆಳಗಾಂವ ತಾಲೂಕಿನ ಹಿರೇ ಬಾಗೇವಾಡಿಗೆ ಬಂದಿದ್ದರು. ಆವಾಗ ಶ್ರೀ ಮಾರುತಿ ದೇವರ ಗುಡಿಯಲ್ಲಿ ಇಳಿದುಕೊಂಡಿದ್ದರು. ಬಾಗೇವಾಡಿಯು ಬಸಾಪುರದಿಂದ ಒಂದು ಮೈಲು ಮಾತ್ರ. ಮಹಾರಾಜರ ದರುಶನಕ್ಕೆಂದು ಶ್ರೀ ವಿಷ್ಣುಬುವಾ ಅವರು ಮಾರುತಿಯ ಗುಡಿಗೆ ಹೋಗಿ ಮಹಾರಾಜರನ್ನೊಮ್ಮೆ ನೋಡಿದರು, ಮಾತ್ರ. ಅಷ್ಟರಿಂದಲೆ ಅವರಲ್ಲಿ ಪ್ರಬಲವಾಗಿ ಕೊರೆಯುತ್ತಿದ್ದ ಪರಮಾರ್ಥದ ಹಸಿವು ಒಮ್ಮೆಲೇ ಶಾಂತವಾಗಿ ಹೋಯಿತು. ಒಂದರಕ್ಷಣದಲ್ಲಿ ಅವರಿಗೆ ಬೇಕಾದ್ದೆಲ್ಲ ಸಿಕ್ಕುಹೋಯಿತು. ಮಹಾರಾಜರ ಸುಮಧುರ ಮುಖದರುಶನದಿಂದ ಅವರಿಗೆ ಅಮೃತದ ಸೇಚನಮಾಡಿದಂತಾಯಿತು. ತಾನು ಯಾವ ಸದ್ಗುರುವಿನ ಸಲುವಾಗಿ ಇಷ್ಟು ದಿವಸ ದಾರೀ ಕಾಯುತ್ತಿದ್ದೆನೋ, ಅದೇ ಸದ್ಗುರುವೀಗ ಕಣ್ಣು ಮುಂದಿರುವನೆಂಬದನ್ನು ಗುರುತಿಸಲಿಕ್ಕೆ ಅವರ ಶುದ್ಧವಾದ ಮನಸಿಗೆ ವೇಳೆ ಹಿಡಿಯಲಿಲ್ಲ. ಆವರ ಕಣ್ಣಿನಿಂದ ಆನಂದಾಶ್ರುಗಳು ಉದುರಹತ್ತಿದವು. ಆವರ ಕುತ್ತಿಗೆಯ ಶಿರಗಳು ಬಿಗಿದು ಬಂದವು ಮೈಮೇಲೆ ರೋಮಾಂಚಗಳೆದ್ದವು. ಅವರು ಒಮ್ಮೆಲೇ ಓಡಿಹೋಗಿ ಮಹಾರಾಜರ ಚರಣಗಳ ಮೇಲೆ ಬಿದ್ದವರು ತಿರುಗಿ ಏಳಬೇಕಾದರೆ ಸಾಕುಸಾಕಾಗಿ ಹೋಯಿತು.

ಜನ್ಮಾಂತರಗಳ ಜ್ಞಾನವುಳ್ಳವರಾದ ಮಹಾರಾಜರಿಗೂ ತಮ್ಮ ಶಿಷ್ಯರತ್ನವನ್ನು ಗುರುತಿಸಲಿಕ್ಕೆ ವೇಳೆ ಹತ್ತಲಿಲ್ಲ. ಹಿಂದಿನ ಜನ್ಮಗಳಲ್ಲಿ ಗುರುಸೇವೆ ಬೇಕು, ಗುರುಸೇವೆ ಬೇಕು, ಎಂದು ಹಂಬಲಿಸುತ್ತ, ಆದರೂ ಆ ಇಚ್ಛೆಯು ಸಾಕಷ್ಟು ತೃಪ್ತಿಹೊಂದುವ ಪೂರ್ವದಲ್ಲೆಯೇ ದೇಹತ್ಯಾಗ ಮಾಡಿದ, ಪೂರ್ವಜನ್ಮದ ಶಿಷ್ಯನೊಬ್ಬನು ಕೇವಲ ಆ ಇಚ್ಛೆಯನ್ನು ಸಫಲಮಾಡಿಕೊಳ್ಳುವದಕ್ಕಾಗಿಯೇ ಹುಟ್ಟಬಂದು, ಈಗ ತಮ್ಮ ಸಮ್ಮುಖದಲ್ಲಿ

ತಮ್ಮ ಪ್ರಸಾದಕ್ಕಾಗಿ ಬಂದಿರುವದನ್ನು ನೋಡಿ ಮಹಾರಾಜರು ಆನಂದ-ಪರವಶರಾದರು. ಅವರಲ್ಲಿ ವಾತ್ಸಲ್ಯಭಾವವು ಹೊರಹೊಮ್ಮಿತು. ಕೇವಲ ಹದಿನಾಲ್ಕು ವರುಷಗಳ ಬಾಲಕನೊಬ್ಬನು ಈ ಪರಿ ತಮ್ಮ ಮೇಲೆ ಅಕೃತ್ರಿಮ ಪ್ರೇಮ ಮಾಡುವದನ್ನು ನೋಡಿದರೆ ಯಾರಿಗೆ ತಾನೇ ವಾತ್ಸಲ್ಯ ಪ್ರೇಮ ಉಂಟಾಗಲಿಕ್ಕಿಲ್ಲ ? ಮಹಾರಾಜರು ಆ ಸಣ್ಣ ಹುಡುಗನನ್ನು ಹಿಡಿದೆಬ್ಬಿಸಿ ಆನಂದಪರವಶತೆಯಿಂದ ಉದ್ಗಾರ ತೆಗೆದರು:— ''ಅಪ್ಪಾ, ಇದು ಪೂರ್ವಜನ್ಮದ ಸಂಬಂಧವು ಈಗಿನದಲ್ಲ.''

ವಿಷ್ಣುಬುವಾ ಅವರು ಆ ಸಂತೋಷದಲ್ಲಿ ಎಲ್ಲವನ್ನೂ ಮರೆತುಬಿಟ್ಟರು. ಅವರಿಗೆ ತಮ್ಮ ಮನೆ, ಅಣ್ಣ, ತಮ್ಮ ಮೊದಲಾದವರ ಯಾರ ನೆನಪೂ ಉಳಿಯಲಿಲ್ಲ. ತಂದೆ ತಾಯಿಗಳಂತೂ ಚಿಕ್ಕಂದಿನಲ್ಲಿಯೇ ತೀರಿಕೊಂಡಿದ್ದರು. ಅವರು ಕೇವಲ ಮಹಾರಾಜರ ಮುಖವನ್ನು ನೋಡುತ್ತ ಕುಳಿತವರು ಎಷ್ಟು ಹೊತ್ತಾದರೂ ಸ್ಥಳಬಿಟ್ಟು ಕದಲಲಿಲ್ಲ. ''ಊಟದ ಹೊತ್ತಾಯಿತು; ಮನೆಗೆ ಹೋಗೋಣ ನಡೆ'' ಎಂದು ಅಣ್ಣಂದಿರು ಅನೇಕ ಸಾರಿ ಹೇಳಿದರೂ ಅವರು ಗಮನ ಕೊಡಲಿಲ್ಲ ಕೊನೆಗೆ ಮಹಾರಾಜರು ತಾವೇ ಅವರನ್ನು ಕರೆದು ''ತಮ್ಮಾ, ಅಪ್ಪಣೆಯಾದಾಗ ಬರುವಿಯಂತೆ. ಈಗ ಮನೆಗೆ ಹೋಗು.'' ಎಂದು ಆಜ್ಞೆ ಮಾಡಿ, ಪ್ರಸಾದವೆಂದು ಒಂದು ಉತ್ತತ್ತಿಯನ್ನು ಕೊಟ್ಟರು. ಗುರುಗಳ ಕೈಯಿಂದ ಬಂದ ಪ್ರಸಾದವಾದುದರಿಂದ ಬುವಾ ಅವರು ಅದನ್ನು ಬೀಜ ಸಹಿತವಾಗಿ ನುಂಗಿ ಬಿಟ್ಟರು.

ಬುವಾ ಅವರು ಮಹಾರಾಜರ ಆಜ್ಞಾಪರಿಪಾಲನೆ ಮಾಡಬೇಕೆಂದು ಮನೆಗೇನೋ ಹೋದರು. ಆದರೆ ಮನಸ್ಸಿಗೆ ಸಮಾಧಾನ ಮಾತ್ರ ಸಿಕ್ಕಲಿಲ್ಲ. ಗುರುಗಳು ಎಂದು ತಮ್ಮನ್ನು ಕರೆಸಿಕೊಳ್ಳುವರೋ ಮತ್ತು ಎಂದು ಗುರುಪಾದಪದ್ಮಗಳ ಪುನರ್ದರ್ಶನವಾಗುವದೋ, ಎಂದು ಅವರು ಸದಾ ಕೊರಗಹತ್ತಿದರು. ಗುರುಗಳ ಕಡೆಯಿಂದ ಬರಬೇಕೆಂಬ ಆಜ್ಞೆಯು ತೀವ್ರ ಬರಲೆಂದು ಅವರು ದೇವರಿಗೆ ಒಂದೇ ಸವನೆ ಬೇಡಿಕೊಳ್ಳಹತ್ತಿದರು. ಮತ್ತು ದೇವರ ಕೃಪೆಯಾಗಬೇಕೆಂದು ಮತ್ತೆ ಗುರುಚರಿತ್ರ ಸಪ್ತಾಹ ಪಾರಾಯಣವನ್ನು ಸುರುವು ಮಾಡಿದರು. ಇವರೇ ಸೇವೆಯಿಂದ ಶ್ರೀ ದತ್ತರಾಜನು ಮತ್ತೆ ಪ್ರಸನ್ನನಾದನು. ಒಂದು ಸಪ್ತಾಹ ಮುಗಿಯುವದರೊಳಗಾಗಿಯೇ ''ಬರಬೇಕು'' ಎಂಬ ಸ್ವಪ್ನ ದೃಷ್ಟಾಂತವಾಯಿತು.

ಮರುದಿವಸ ಮುಂಜಾನೆ ಬುವಾ ಅವರು ಯಾರಿಗೂ ಹೇಳದೇ ಕೇಳದೆ ತಮ್ಮ ಮನೆ ಬಿಟ್ಟು ಗುರ್ಲಹೊಸೂರ ದಾರೀ ಹಿಡಿದರು. ಬಸಾಪುರದಿಂದ ಗುರ್ಲಹೊಸೂರು ೩೧ ಮೈಲು ಆಗುತ್ತದೆ. ೧೪ – ೧೫ ವರುಷಗಳ ಚಿಕ್ಕ ವಯಸ್ಸಿನಲ್ಲಿ ಅವರು ಎಲ್ಲವನ್ನೂ ತೊರೆದು ಕೇವಲ ಗುರುಸೇವೆಗಾಗಿ ಈ ಪ್ರವಾಸಕ್ಕೆ ಸಿದ್ಧರಾದರು. ವಾಚಕರೇ, ಮಹಾರಾಜರಾದರೂ ಇದೇ ವಯಸ್ಸಿನಲ್ಲಿ ಅಕ್ಕಲಕೋಟೆಗೆ ಹೊರಟದ್ದು ನಿಮಗೆ ಗೊತ್ತಿದೆ. ಧನ್ಯ ! ಧನ್ಯ !! ಗುರುಶಿಷ್ಯರಿಬ್ಬರೂ ವೈರಾಗ್ಯದ ಮೂರ್ತಿಗಳೇ. ಸದ್ಗುರುವಿಗೆ ಸಚ್ಛಿಷ್ಯನಾಗಬೇಕೆನ್ನುವವನು ಸದ್ಗುರುವಿನ ಗುಣಗಳ ಅನುಕರಣ ಮಾಡಲೇ ಬೇಕಲ್ಲವೆ ?

ಬುವಾ ಅವರು ಯಾವ ಸಿದ್ಧತೆಯೂ ಇಲ್ಲದೆ ಬಸಾಪುರವನ್ನು ಬಿಟ್ಟರು. ಯಾವ ವಾಹನಗಳ ಸೌಕರ್ಯವೂ ಇರಲಿಲ್ಲ. ಆದರೂ ಅವರು ಕಂಗೆಡಲಿಲ್ಲ. ಅನ್ನ ನೀರುಗಳಿಲ್ಲದೆ ಅವರು ಕಾಲು ನಡಿಗೆಯಿಂದಲೇ ಇಷ್ಟು ದೂರ ದಾರಿಯನ್ನು ನಡೆದುಹೋಗಿ, ಸಂಜೆಯ ಒಂದು ತಾಸು ಹೊತ್ತು ಇರುವ ಸುಮಾರಿಗೆ ಗುರ್ಲಹೊಸೂರಿಗೆ ಬಂದು ಮುಟ್ಟಿದರು. ಮಹಾರಾಜರು ಮುಖದಿಂದ ಚಿದಂಬರನ ಜಪ ಮಾಡುತ್ತ ಗುಡಿಗೆ ಪ್ರದಕ್ಷಿಣೆ ಹಾಕುತ್ತಿದ್ದರು. ಬುವಾ ಅವರ ಮೋರೆಯು ಬಳಲಿ ಬೆಂಡಾಗಿ ಹೋಗಿತ್ತು. ಅವರು ಮಹಾರಾಜರನ್ನು ದೂರಿಂದಲೇ ನೋಡಿ ಓಡುತ್ತ ಬಂದು, ನಮಸ್ಕಾರ ಮಾಡಿ ದೊಡ್ಡದನಿ ತೆಗೆದು ಅಳಹತ್ತಿದರು. ಮಹಾರಾಜರು ಪ್ರೇಮಾತಿಶಯದಿಂದ ಅವರ ಬೆನ್ನ ಮೇಲೆ ಕೈಯಾಡಿಸುತ್ತ "ಎಂತಹ ಹುಚ್ಚನಪ್ಪಾ. ಬಾ ಎಂದ ಮಾತ್ರಕ್ಕೆ ಹೊರಟೀಬಿಡಬೇಕೇ ? ಅನ್ನ ನೀರುಗಳ ವ್ಯವಸ್ಥೆಯನ್ನಾದರೂ ಮಾಡಿಕೊಂಡು ಬರಬಾರದೇ ?" ಎಂದು ಸಂತಯಿಸಿದರು. ಮತ್ತು ಕೂಡಲೇ ಸಮೀಪದಲ್ಲಿದ್ದವರಿಗೆ ಹೇಳಿ ಅವರ ಸ್ನಾನ ಮತ್ತು ಊಟಗಳ ವ್ಯವಸ್ಥೆ ಮಾಡಿದರು.

ಹೀಗೊಮ್ಮೆ ಅವರು ಗುರುಸೇವೆಗಾಗಿ ಬಂದು ನಿಂತವರು ತಿರುಗಿ ಮನೆ ಎನ್ನಲಿಲ್ಲ. ಇವರ ಅಣ್ಣಂದಿರೂ ಉಳಿದ ಆಪ್ತರೂ ಇವರನ್ನು ಈ ಮಾರ್ಗದಿಂದ ಬಿಡಿಸಿ ಸಂಸಾರದ ಕಡೆಗೆ ಹೊರಳಿಸಬೇಕೆಂದು ಬೇಕಾದಷ್ಟು

ಯತ್ನಮಾಡಿದರು. ಆದರೆ ಬುವಾ ಅವರ ಸೈನ್ಯದ ಮುಂದೆ ಯಾರ ಆಟವೂ ನಡೆಯಲಿಲ್ಲ. ಅಣ್ಣ-ತಮ್ಮಂದಿರು ಎಷ್ಟೋ ಸಾರೆ ಸಿಟ್ಟಿಗೆದ್ದು ಇವರಿಗೂ ಮಹಾರಾಜರಿಗೂ ಅಪಶಬ್ದಗಳನ್ನು ಕೂಡ ಉಪಯೋಗಿಸಿದರು. ಆದರೆ ಇವರು ಯಾವುದಕ್ಕೂ ಸೊಪ್ಪು ಹಾಕಲಿಲ್ಲ. ಎಲ್ಲವನ್ನು ಶಾಂತಿಯಿಂದಲೂ ಸಮಾಧಾನದಿಂದಲೂ ಸಹನ ಮಾಡಿಕೊಂಡರು. ಇವರು ಇಂದಿಗೂ ನೈಷ್ಠಿಕ ಬ್ರಹ್ಮಚಾರಿಗಳಾಗಿಯೇ ಉಳಿದು ಗುರುಸೇವೆ ಮಾಡುತ್ತಿದ್ದಾರೆ.

ಬುವಾ ಅವರ ಮೇಲೆ ಮಹಾರಾಜರ ಪ್ರೇಮವೂ ಬಹಳವಾಗಿತ್ತು. ಬುವಾ ಅವರನ್ನು ಬಿಟ್ಟು ಮಹಾರಾಜರು ಒಂದರಗಳಿಗೆ ಕೂಡ ಇರುತ್ತಿರಲಿಲ್ಲ. ಬುವಾ ಅವರು ಸೇವೆ ಮಾಡಿದರೇ ಅವರಿಗೆ ತೃಪ್ತಿ. ಉಳಿದವರಾರು ಯಾವ ಕೆಲಸ ಮಾಡಿದರೂ ಮಹಾರಾಜರಿಗೆ ಅಷ್ಟು ತೃಪ್ತಿಯಾಗುತ್ತಿದ್ದಿಲ್ಲ. ಮಹಾರಾಜರು ಬುವಾ ಅವರನ್ನು ಕುರಿತು ಅನ್ನುತ್ತಿದ್ದರೇನೆಂದರೆ:— ''ಚಿದಂಬರನು ಈ ಹುಡುಗನನ್ನು ೧೪—೧೫ ವರುಷಗಳ ವರೆಗೆ ಜೋಕೆ ಮಾಡಿ, ದೊಡ್ಡವನನ್ನಾಗಿ ಮಾಡಿ ನನ್ನ ಸೇವೆಗೆ ಮೀಸಲಾಗಿ ಕೊಟ್ಟಿದ್ದಾನೆ.'' ಇಷ್ಟೇ ಅಲ್ಲ, ಮಹಾರಾಜರು ತಾವು ದೇಹವಿಡುವ ಮೊದಲು ಶ್ರೀ ವಾಜೀಂದ್ರರನ್ನು ಕರೆಸಿ ಹೇಳಿದರು:— ''ಅವ್ವಾ, ವಾಜೀಂದ್ರಾ, ನನಗೆ ಬೇರೆ ಯಾವ ಚಿಂತೆಯೂ ಇಲ್ಲ, ನೋಡು. ಈ ಹುಡುಗನದೊಂದು ಮಾತ್ರ ಚಿಂತೆಯಿದೆ. ಅವನೇನೋ ನಮಗೆ ಎಂದೂ ಭಾರವಾಗಿಲ್ಲ. ಮಧುಕರಿಯನ್ನು ಬೇಡಿ ನಮ್ಮ ಸೇವೆ ಮಾಡುತ್ತ ಬಂದಿದ್ದಾನೆ. ಆದರೆ, ಪಾಪ, ಇನ್ನು ಮೇಲೆ ಅವನ ಯೋಗಕ್ಷೇಮವನ್ನು ನೋಡುವವರು ಯಾರು ? ಅವನು ಮಾಧುಕರೀ ಬೇಡುತ್ತಾನೆ. ಆದರ ಅದೆಲ್ಲ ಒಣ ಅನ್ನವು ಅದಕ್ಕೆ ತುಸು ತುಪ್ಪ, ಹಾಲು, ಮೊಸರು, ಕೊನೆಗೆ ತುಸು ಮಜ್ಜಿಗೆಯಾದರೂ ಬೇಡವೇ ? ವಾಜೀಂದ್ರಾ ನೋಡು, ನೀನಿಷ್ಟು ವ್ಯವಸ್ಥೆ ಮಾಡುವಿಯಾ?'' ವಾಜೀಂದ್ರರು ಕಣ್ಣೀರುದುರಿಸುತ್ತ ಹೇಳಿದರಂತೆ ''ಇಲ್ಲ, ಸ್ವಾಮೀ. ತಾವು ಅವನ ಬಗ್ಗೆ ಚಿಂತೆ ಮಾಡಬಾರದು. ನಾನು ಹಾಲು ಮೊಸರಿನ ವ್ಯವಸ್ಥೆಯನ್ನು ತಪ್ಪದೇ ಮಾಡುತ್ತೇನೆ.''

೭೯೧೯ರಲ್ಲಿ ಮಹಾರಾಜರು ಅಷ್ಟಗಿಯೊಳಗೆ ಚಾತುರ್ಮಾಸ್ಯಕ್ಕೆ ಕುಳಿತಾಗ, ಇನ್ನೊಂದು ಬಾರಿ ಬುವಾ ಅವರ ಮೇಲಿನ ತಮ್ಮ ಅಕೃತ್ರಿಮ ಪ್ರೇಮವನ್ನು ತೋರಿಸಿದರು. ಮಹಾರಾಜರು ತಮ್ಮ ಟ್ರೇನಿಂಗ ಕಾಲೇಜದ ಶಿಕ್ಷಣಕ್ಕಾಗಿ ಧಾರವಾಡದಲ್ಲಿದ್ದಾಗ ಕೊಂಡ ಒಂದು ಭಗವದ್ಗೀತೆಯ ಚಿಕ್ಕ ಪುಸ್ತಕವನ್ನು ಪಾರಾಯಣಕ್ಕಾಗಿ ಉಪಯೋಗಿಸುತ್ತಿದ್ದರು. ಮುಂದೆ ಕೆಲ ಕಾಲದ ಮೇಲೆ ಅದನ್ನು ಅವರು ತಮ್ಮ ಪ್ರಿಯ ಶಿಷ್ಯರಾದ ಶ್ರೀ ವಾಜೀಂದ್ರರಿಗೆ ಕೊಟ್ಟು, ಬೇಡಿದಾಗ ತಿರುಗಿ ಕೊಡಬೇಕು, ಎಂದು ಆಜ್ಞಾಪಿಸಿದ್ದರು. ಅಷ್ಟಗಿಯೊಳಗಿರುವಾಗ ವಾಜೀಂದ್ರರಿಗೆ ಪತ್ರ ಬರೆದು ಆ ಪುಸ್ತಕವನ್ನು ತಿರುಗಿ ತರಿಸಿಕೊಂಡರು. ಮತ್ತು ಒಂದು ದಿನ ಸಾಯಂಕಾಲದ ಭಜನೆ ಮುಗಿದ ಮೇಲೆ, ಮಹಾರಾಜರು ಆ ಪುಸ್ತಕವನ್ನು ತಮ್ಮ ಕೈಯೊಳಗೆ ಹಿಡಿದುಕೊಂಡು ಸುತ್ತಲೂ ಕುಳಿತಿರುವ ಭಕ್ತರನ್ನೆಲ್ಲ ದಿಟ್ಟಿಸಿ ನೋಡುತ್ತ ಎರಡು ಮೂರು ಸಲ ಅತ್ತಿತ್ತ ಅಡ್ಡಾಡಿದರು. ಎಲ್ಲ ಜನರೂ, ಆ ಪುಸ್ತಕವು ನನಗೆ ಸಿಕ್ಕುವದು, ನನಗೆ ಸಿಕ್ಕುವದು, ಎಂದು ಉತ್ಕಂಠೆಯಿಂದ ಮಹಾರಾಜರ ಕಡೆಗೆ ನೋಡುತ್ತಿದ್ದರು. ಆದರೆ ಮಹಾರಾಜರ ದೃಷ್ಟಿಗೆ ಆ ಪುಸ್ತಕ ಪಡೆದುಕೊಳ್ಳುವ ಯೋಗ್ಯತೆಯುಳ್ಳ ಯಾವ ವ್ಯಕ್ತಿಯೂ ಕಾಣಲಿಲ್ಲ. ಆಗ ಶ್ರೀ ವಿಷ್ಣು ಬುವಾ ಅವರು ಎಲ್ಲರ ಹಿಂದೆ ಒಂದು ಮೂಲೆಯಲ್ಲಿ ಕಣ್ಣು ಮುಚ್ಚಿಕೊಂಡು ಕುಳಿತು ಶ್ರೀ ಗುರುಗಳ ಧ್ಯಾನದಲ್ಲಿ ಮಗ್ನರಾಗಿದ್ದರು. ಆಗ ಮಹಾರಾಜರು ತಮ್ಮ ದೃಷ್ಟಿಯನ್ನು ಅತ್ತ ಕಡೆಗೆ ಹೊರಳಿಸಿ "ವಿಷ್ಣೂ ಇಲ್ಲಿ ಬಾ. ಈ ನಮ್ಮ ವಿಶ್ವಾಸದ ಠೇವನ್ನಿಡಲಿಕ್ಕೆ ಎಲ್ಲರಲ್ಲಿ ನೀನೊಬ್ಬನೇ ತಕ್ಕವನಾಗಿರುವಿ. ಇಕೋ ತೆಗೆದುಕೋ, ಈ ಠೇವನ್ನು" ಎಂದು ಅವರನ್ನು ಕರೆದು ಅವರ ಕೈಯಲ್ಲಿ ಆ ಪುಸ್ತಕವನ್ನು ಕೊಟ್ಟರು. ಆಗ ಮಹಾರಾಜರು ಮತ್ತೂ ಹೇಳಿದ್ದೇನೆಂದರೆ:— "ಇದು ನಮ್ಮ ಆತ್ಮವು. ಅದನ್ನೇ ನಿನಗೆ ಅರ್ಪಿಸಿದ್ದೇವೆ. ಅದನ್ನು ನೀನು ಒಳ್ಳೇ ಜತನ ಮಾಡಿ ಕೊನೆಗೆ ನಮಗೆ ತಿರುಗಿ ಕೊಡಬೇಕು." ಮಹಾರಾಜರು ಕೊಟ್ಟ ಪುಸ್ತಕವು ತೀರ ಜೀರ್ಣವಾಗಿತ್ತು. ಅದುದರಿಂದ ಬುವಾ ಅವರು ಅದನ್ನು ಮರುದಿವಸ ಬೈಂಡ ಮಾಡಿಸಿ ತರಿಸಿ ಮಹಾರಾಜರಿಗೆ ತೋರಿಸಿದರು. ಆಗ ಮಹಾರಾಜರು ಮುಗುಳುನಗೆ ನಗುತ್ತ ಹೇಳಿದರು:— "ನೆಟ್ಟಗೆ ಮಾಡಿದಿ.

ನಾವು ನಿನ್ನ ಕಡೆಗೆ ಅದನ್ನು ಕೊಟ್ಟದ್ದಾದರೂ ಇದಕ್ಕಾಗಿಯೇ'' ಬುವಾ ಅವರು ಆ ಪುಸ್ತಕವನ್ನು ಬಹಳ ಜೋಕೆಯಿಂದ ಕಾಯ್ದು, ಕೊನೆಗೆ ಮಹಾರಾಜರು ಸಮಾಧಿಸ್ಥರಾಗಲು ಅದನ್ನು ಗುರುಗಳ ಚರಣ ಕಮಲಗಳ ಮೇಲೆ ಇಟ್ಟು, ತಮ್ಮ ವಿಶ್ವಾಸದ ಠೇವಣಿಯನ್ನು ಅವರಿಗೆ ತಿರುಗಿ ಅರ್ಪಿಸಿದರು.

ಶ್ರೀ ವಿಷ್ಣುಬುವಾ ಅವರ ನಂತರ ಹೆಸರು ತೆಗೆದುಕೊಳ್ಳಲಿಕ್ಕೆ ಯೋಗ್ಯರಾದವರೆಂದರೆ ಶ್ರೀ ಗೋಪಾಳಬುವಾ ಗ್ಯಾನೋಪಾಧ್ಯೆ ಎಂಬವರು ಶ್ರೀ ವಿಷ್ಣುಬುವಾ ಅವರು ಮಹಾರಾಜರ ಕಡೆಗೆ ಬಂದ ತುಸು ದಿವಸಗಳಲ್ಲಿಯೇ ಶ್ರೀ ಗೋಪಾಳಬುವಾ ಅವರೂ ಬಂದು ಸೇರಿದರು. ಇವರು ಬೆಳಗಾಂವಿಯವರು. ಅಲ್ಲಿ ಮಹಾರಾಜರ ದರುಶನ ಪಡೆದು ಸಂತೋಷಭರಿತರಾದರು. ಮತ್ತು ಮಹಾರಾಜರ ದಿವ್ಯತೇಜಸ್ಸಿಗೆ ಮುಗ್ಧರಾಗಿ ಅವರು ಮಹಾರಾಜರ ಸೇವೆ ಮಾಡಿ ಜನ್ಮಸಾರ್ಥಕ ಮಾಡಿಕೊಳ್ಳಬೇಕೆಂದು ಆಲೋಚಿಸಹತ್ತಿದರು. ಅವರು ಆ ಆಲೋಚನೆಯಲ್ಲಿರುವಾಗಲೇ ಮಹಾರಾಜರು ಅವರಿಗೆ ಸ್ವಪ್ನದೃಷ್ಟಾಂತ ಕೊಟ್ಟು ''ಏ, ತಮ್ಯಾ, ನಮಗೆ ಅವಶ್ಯವಿರುವ ಇಬ್ಬರು ಶಿಷ್ಯರಲ್ಲಿ ಈಗೊಬ್ಬನು ಅನಾಯಾಸವಾಗಿ ಸಿಕ್ಕಿರುವನು. ನೀನೂ ತೀವ್ರವಾಗಿ ಬರುವ ಯೋಚನೆ ಮಾಡು'' ಎಂದು ಆಜ್ಞಾಪಿಸಿದರು. ಅದಕ್ಕನುಸಾರವಾಗಿ ಗೋಪಾಳಬುವಾ ಅವರು ಮರುದಿನವೇ ಬೆಳಗಾಂವಿಯಿಂದ ಹೊರಟು ಮಹಾರಾಜರ ಕಡೆಗೆ ಬಂದರು. ಆಗ ಮಹಾರಾಜರು ಎಲ್ಲಮ್ಮನ ಗುಡ್ಡದಲ್ಲಿದ್ದರು. ಗೋಪಾಳಭಟ್ಟರು ಅಲ್ಲಿಗೇ ಹೋಗಿ ಮಹಾರಾಜರ ದರುಶನ ತಕ್ಕೊಂಡರು. ಮಹಾರಾಜರು ಅವರನ್ನು ನೋಡುತ್ತಲೇ ಮುಗುಳುನಗೆ ನಕ್ಕರು. ಗೋಪಾಳಭಟ್ಟರು ತಮಗಾದ ಸ್ವಪ್ನದೃಷ್ಟಾಂತವನ್ನು ವಿವರಿಸಿದರು. ಮಹಾರಾಜರು ನಕ್ಕು ಹೇಳಿದ್ದೇನೆಂದರೆ:— ''ನಾವು ಈಗ ಮಹಾಯಾತ್ರೆಗೆ ಹೊರಟಿರುವೆವು. ಬಂದ ಬಳಿಕ ಬೆಟ್ಟಿಯಾಗು.'' ಅದರಂತೆ ಆಗ ಗೋಪಾಳಭಟ್ಟರು ತಿರುಗಿ ಹೋದರು. ಮತ್ತು ಮಹಾರಾಜರು ರಾಮೇಶ್ವರದ ಯಾತ್ರೆಯನ್ನು ಮುಗಿಸಿಕೊಂಡು ಬಂದ ಮೇಲೆ ಶ್ರೀ. ಗೋಪಾಳಬುವಾ ಅವರು ಮಹಾರಾಜರ ಶಿಷ್ಯರಾಗಿ ಅವರ ಪರಿವಾರದಲ್ಲಿ ಸೇರಿದರು. ಅವರಾದರೂ ಮಹಾರಾಜರ ಸೇವೆಯನ್ನು

ಅಖಂಡವಾಗಿ ಮಾಡಿದರು. ಕೊನೆಯ ವರೆಗೆ ಬ್ರಹ್ಮಚಾರಿಗಳಾಗಿಯೇ ಉಳಿದು ಪರಮಾರ್ಥ ಗಳಿಸಿದರು. ಅವರು ಈಗ ಎರಡು ಮೂರು ವರುಷಗಳ ಹಿಂದೆ ಗುರುಪಾದಪದ್ಮಗಳಲ್ಲಿ ವಿಲೀನರಾದ ಸಂಗತಿಯು ಎಲ್ಲರಿಗೆ ಗೊತ್ತಿದೆ.

ರಾವಬಹಾದ್ದೂರ ನಾರಾಯಣರಾವ ಜೋಶಿಯವರ ಹೆಸರು ಮೂರನೆಯದು. ನಾರಾಯಣರಾಯರು ಭಾವಿಕ ಮನೆತನದಲ್ಲಿ ಜನ್ಮಪಡೆದವರು. ಅವರ ಅಜ್ಜಂದಿರಾದ ಶ್ರೀಗುರುನಾಥರಾಯರೂ ಅಜ್ಜಿಯಾದ ತುಳಸಾಬಾಯಿಯವರೂ ಶ್ರೀ ಚಿದಂಬರ ಮಹಾರಾಜರ ಸಾಕ್ಷಾತ್ ಕೃಪೆಗೆ ಒಳಗಾದವರಾಗಿದ್ದರು. ನಾರಾಯಣರಾಯರು ಹುಟ್ಟಿದ್ದು ಇ. ಸ. ೧೮೮೬ ರಲ್ಲಿ. ಅವರು ಬೆಳಗಾಂವಿಯಲ್ಲಿ ೨ನೇ ನಂಬರ ಕನ್ನಡ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವಾಗ್ಗೆ ಶ್ರೀ ಕೈವಲಾಶ್ರಮ ಸ್ವಾಮೀ ಮಹಾರಾಜರ ಹೆಸರು ಎಲ್ಲಕ್ಕೂ ಮೊದಲು ಅವರ ಕಿವಿಯ ಮೇಲೆ ಬಿತ್ತು. ಅವರ ಶಿಕ್ಷಕರಾದ ಶ್ರೀ ಬಾಳಕೃಷ್ಣ ಪಂತರು ಶ್ರೀ ಸ್ವಾಮೀ ಮಹಾರಾಜರ ಕೈಕೆಳಗೆ ಶಿಕ್ಷಕರ ಕೆಲಸವನ್ನು ಮಾಡಿ ಅವರ ಮಾದರಿಯನ್ನೇ ತಮ್ಮ ಶಾಲೆಯಲ್ಲಿಯೂ ಇಟ್ಟುಕೊಂಡಿದ್ದರು. ಶಾಲೆ ಬಿಡುವಾಗ ಎಲ್ಲ ಹುಡುಗರೂ ತಮ್ಮ ತಮ್ಮ ಇಷ್ಟದೇವತೆಯ ಧ್ಯಾನ ಮಾಡಿ ''ಶ್ರೀ ಕೈವಲ್ಯಾಶ್ರಮ ಸ್ವಾಮೀ ಮಹಾರಾಜಕೀ ಜಯ'' ಎಂದು ಉಚ್ಚಸ್ವರದಿಂದ ಜಯಘೋಷ ಮಾಡಬೇಕಾಗುತ್ತಿತ್ತು.. ಹೀಗೆ ಈ ರೀತಿಯಿಂದ ರಾಯರ ಕಿವಿಯೊಳಗೆ ಮಹಾರಾಜರ ಸುಮಧುರವಾದ ಹೆಸರು ಪ್ರವೇಶ ಮಾಡಿತು.

ಮಹಾರಾಜರು ಸಂನ್ಯಾಸ ತಕ್ಕೊಂಡ ಮೇಲೆ ಒಂದು ಸಲ ಬೆಳಗಾಂವಿಯೊಳಗೆ ಖಡೇಬಾಜಾರದಲ್ಲಿರುವ ವಿಠ್ಠಲನ ಗುಡಿಯಲ್ಲಿ ಇಳಿದುಕೊಂಡಿದ್ದರು. ಆಗ ಭಕ್ತರೆಲ್ಲ ಕೂಡಿ ಅಲ್ಲಿ ಶ್ರೀ ಚಿದಂಬರನ ಅಖಂಡ ಜಪವನ್ನು ಪ್ರಾರಂಭ ಮಾಡಿದರು. ಜಪ ಮಾಡುವವರೊಳಗೆ ನಾರಾಯಣರಾಯರ ಪ್ರವೇಶವಾಯಿತು. ಅವರ ಗುರುಗಳಾದ ಬಾಳಕೃಷ್ಣ ಪಂತರೇ ಅವರನ್ನು ಇದರಲ್ಲಿ ಸೇರ್ಪಡೆ ಮಾಡಿದ್ದರು. ಅಲ್ಲಿ ರಾಯರು, ತಾವು ಶಾಲೆ ಬಿಡುವಾಗ ಯಾವ ಸತ್ಪುರುಷರ ಹೆಸರನ್ನು ತೆಗೆದುಕೊಳ್ಳುತ್ತಿರುವೆವೋ, ಅವರೇ ಇವರು, ಎಂಬದನ್ನು ಮನಗಂಡರು. ಮೊದಲು ಮಹಾರಾಜರ ಹೆಸರಿನ ಶ್ರವಣವಾಯಿತು. ಈಗಿದು ದರುಶನವಾಯಿತು.

ಒಂದು ದಿನ ಮಹಾರಾಜರು ಶಹಾಪುರದ ಹತ್ತಿರಿರುವ ರಾಜಾರಾಮನ ಗುಡಿಗೆ ಹೋಗಿ ಧ್ಯಾನ-ಭಜನೆಗಳಲ್ಲಿ ರತರಾಗಿದ್ದರು. ಆ ದಿನ ನಾರಾಯಣ ರಾಯರೂ ಅಲ್ಲಿಯ ಉಪಸ್ಥಿತರಾಗಿದ್ದರು. ಆಕಸ್ಮಾತ್ತಾಗಿ ಆ ದಿನದ ಭಜನೆಗೆ ಕಲ್ಪನೆಗಿಂತ ಹೆಚ್ಚು ಜನ ಸಮ್ಮರ್ದವು ಸೇರಿತು. ಅಣಿಮಾಡಿಟ್ಟ ಪ್ರಸಾದವು ಸ್ವಲ್ಪ ಜನರ ಸಲುವಾಗಿ ಇದ್ದುದರಿಂದ, ಅದು ಎಲ್ಲ ಜನರಿಗೆ ಹೇಗೆ ಸಾಲಜೇಕೆಂದು ವಾಜೀಂದ್ರರು ಚಿಂತೆಗೊಳಗಾದರು. ಊರು ತನು ಅಂತರದ ಮೇಲೆ ಇದ್ದುದರಿಂದ ಅಲ್ಲಿಗೆ ಕಳಿಸಿ ಪ್ರಸಾದದ ಸಾಹಿತ್ಯ ತರಿಸಲಿಕ್ಕೆ ಅವಕಾಶವಿದ್ದಿದ್ದಿಲ್ಲ. ಆಗ ಮಹಾರಾಜರು ವಾಜೀಂದ್ರರಿಗೆ ಹೇಳಿದ್ದೀನೆಂದರೆ:— ''ವಾಜೀಂದ್ರ, ಅನುಮಾನಿಸುವ ಕಾರಣವಿಲ್ಲ. ಪ್ರಸಾದವನ್ನು ಕೊಡಲಿಕ್ಕೆ ಪ್ರಾರಂಭಿಸು. ಚಿದಂಬರನು ಸಮರ್ಥನಿದ್ದಾನೆ.'' ಮತ್ತು ತಾವು ಸ್ವತಃ ರಾಜಾರಾಮನ ಸಮಾಧಿಯ ಹಿಂದೆ ಹೋಗಿ ನಿಂತು ಒತ್ತರದಿಂದ ಪ್ರಸಾದವನ್ನು ಪೂರಯಿಸಹತ್ತಿದರು. ಆಶ್ಚರ್ಯದ ಮಾತೆಂದರೆ ಪ್ರಸಾದವನ್ನು ಎಲ್ಲ ಜನರಿಗೂ ಹಂಚುವದು ಮುಗಿದ ಮೇಲೆ ಸಹ, ಮೊದಲು ಎಷ್ಟು ಪ್ರಸಾದವಿತ್ತೋ ಅಷ್ಟು ಪ್ರಸಾದವು ಉಳಿದೇ ಇರುವದೆಂದು ಕಂಡುಬಂತು. ಈ ಸಂಗತಿಯನ್ನು ನಾರಾಯಣರಾಯರು ಪ್ರತ್ಯಕ್ಷ ನೋಡಿದ್ದರಿಂದ ಮಹಾರಾಜರ ಮೇಲೆ ಸ್ವಾಭಾವಿಕವಾಗಿಯೇ ಅವರ ಭಕ್ತಿವಿಶ್ವಾಸಗಳು ಕುಳಿತವು.

ಸನ್ ೧೯೦೦ ರಲ್ಲಿ ನಾರಾಯಣರಾಯರ ಹಿರಿಯಣ್ಣನೂ ತಾಯಿಯೂ ತೀರಿಕೊಂಡರು. ಈ ವೇಳೆಗೆ ಅವರು ಇಂಗ್ಲೀಷ ನಾಲ್ಕನೆಯ ಇಯತ್ತೆಯಲ್ಲಿ ಕಲಿಯುತ್ತಿದ್ದರು. ತಂದೆಯವರಂತೂ ಹತ್ತು ವರುಷಗಳ ಪೂರ್ವದಲ್ಲಿಯೇ ಮೃತರಾಗಿದ್ದರು. ಅವರ ಶಿಕ್ಷಣಕ್ಕಿನ್ನು ಸಹಾಯ ಮಾಡುವವರಾರೂ ಕಾಣಲಿಲ್ಲ. ಈ ಭಯಂಕರವಾದ ಆಪತ್ತಿನಿಂದ ಅವರಿಗೆ ಸಂಸಾರದ ವಿಷಯಕ್ಕೆ ಹೇಯವುಂಟಾಯಿತು. ಮತ್ತು ಮನಸು ಶ್ರೀ ಸ್ವಾಮೀ ಮಹಾರಾಜರ ಕಡೆಗೆ ಭರದಿಂದ ಓಡಹತ್ತಿತು. ತನ್ನಂಥ ಅನಾಥರಿಗೆ ಅವರೇ ಗತಿಯೆಂದೂ, ಅವರ ಹೊರತಾಗಿ ಬೇರೆ ಎಲ್ಲಿಯೂ ಶಾಂತಿ ಸಿಕ್ಕಲಾರದೆಂದೂ ಅವರು ನಿಶ್ಚಯಿಸಿ ಗುರ್ಲಹೊಸೂರಿಗೆ ಬಂದು ಮಹಾರಾಜರ ಚರಣಗಳನ್ನು ಗಟ್ಟಿಯಾಗಿ ಅಪ್ಪಿಕೊಂಡು ಅಳಹತ್ತಿದರು: ''ಮಹಾರಾಜ, ನನಗೆ ಯಾರೂ ಇಲ್ಲ ನನಗೆ ನೀವೊಬ್ಬರೇ ಆಶ್ರಯವು. ನನ್ನವರೆನ್ನುವವರೆಲ್ಲ ನನ್ನನ್ನು ಬಿಟ್ಟು ಹೋದರು. ನಾಯಿಯಂತೆ ಜನ್ಮ ಮಾಡುವ ಇಚ್ಛೆಯು

ನನಗೆ ಎಷ್ಟೂ ಇಲ್ಲ. ನಾನು ಕೊನೆಯ ವರೆಗೆ ಇಲ್ಲಿಯೇ ಇದ್ದು ತಮ್ಮ ಸೇವೆ ಮಾಡಿ ಜನ್ಮ ಸಾರ್ಥಕಗೊಳಿಸಬೇಕೆನ್ನುತ್ತೇನೆ. ದಯವಿಟ್ಟು ಪಾದದ ಬಳಿಯಲ್ಲಿ ಸ್ಥಾನಕೊಡಬೇಕು ” ಮಹಾರಾಜರು ಅವರನ್ನು ಪ್ರೀತಿಯಿಂದ ಹಿಡಿದೆಬ್ಬಿಸಿ ಸಂತೈಸಿದರು.

ಮಹಾರಾಜರ ಆಜ್ಞೆಯಂತೆ ನಾರಾಯಣರಾಯರು ಶ್ರೀಗುರು ಚರಿತ್ರ ಪಾರಾಯಣ ಸುರು ಮಾಡಿದರು. ನಾರಾಯಣರಾಯರ ಕಡೆಯಿಂದ ಚರಿತ್ರವನ್ನು ಓದಿಸಿ, ಮಹಾರಾಜರು ಕೇಳುತ್ತ ಕೂಡುತ್ತಿದ್ದರು. ಪಾರಾಯಣ ಮುಗಿದ ಮೇಲೆ ನಾರಾಯಣರಾಯರು ಮಧುಕರಿಯನ್ನು ಬೇಡಿಕೊಂಡು ಬಂದು ಗುರುಗಳಿಗೆ ಸಮರ್ಪಣೆ ಮಾಡುವರು. ಮಹಾರಾಜರು ಅದನ್ನು ಗುರುದೇವದತ್ತನಿಗೆ ನೈವೇದ್ಯತೋರಿಸಿ ನಾರಾಯಣರಾಯರಿಗೆ ಪ್ರಸಾದವನ್ನು ಕೊಡುವರು. ಹೀಗಿದು ಕಾರ್ಯಕ್ರಮವು ಐದು ದಿನಗಳ ವರೆಗೆ ನಡೆಯಿತು. ನಾರಾಯಣರಾಯರ ಸೇವೆಯಿಂದ ಮಹಾರಾಜರು ಪ್ರಸನ್ನರಾದರು. ಅವರು ಕೊನೆಗೆ ನಾರಾಯಣರಾಯರಿಗೆ ‘‘ತಮ್ಮಾ, ನೀನು ಸದ್ಯಕ್ಕೆ ತಿರುಗಿ ಊರಿಗೆ ಹೋಗಿ ಅಭ್ಯಾಸವನ್ನು ಚನ್ನಾಗಿ ಮಾಡು. ಆದರಲ್ಲಿಯೇ ನಿನ್ನ ಕಲ್ಯಾಣವಿದೆ. ನೀನೀಗ ಮನಸ್ಸಿನಲ್ಲಿ ಉಳಿದಾವ ವಿಚಾರವನ್ನೂ ತರಬೇಡ’’ ಎಂದು ಹೇಳಿದರು. ನಾರಾಯಣರಾಯರ ಮನಸ್ಸಿನಲ್ಲಿ ಮುಂದೆ ಶಾಲೆ ಕಲಿಯುವದಿರಲಿಲ್ಲ. ಆದರೂ ಮಹಾರಾಜರ ಇಚ್ಛೆಯಂತೆ ಅವರು ತಿರುಗಿ ಬೆಳಗಾಂವಿಗೆ ಬಂದು ತಮ್ಮ ಶಿಕ್ಷಣವನ್ನು ಮುಂದುವರಿಸಿದರು.

ಮುಂದೆ ಸನ್ ೧೯೦೩—ಳರ ಸುಮಾರಕ್ಕೆ ಬೆಳಗಾಂವಿಯಲ್ಲಿ ಪ್ಲೇಗಿನ ಬೇನೆಯು ಬಹಳವಾದ್ದರಿಂದ ನಾರಾಯಣರಾಯರು ತಮ್ಮ ಆಪ್ತರೊಡನೆ ಸಿಂಧೊಳ್ಳಿಯಲ್ಲಿ ಬಂದಿರಹತ್ತಿದರು. ಅಲ್ಲಿ ಅವರು ಗುರುಚರಿತ್ರ ಸಪ್ತಾಹವನ್ನು ಪ್ರಾರಂಭಿಸಿ ಆಶ್ವಿನ ವದ್ಯ ದಶಮಿಗೆ ಮುಗಿಸಿದರು. ಅಷ್ಟರಲ್ಲಿ ಮಹಾರಾಜರು ಸಿಂಧೊಳ್ಳಿಗೆ ಸಮೀಪವಿದ್ದ ಹಳ್ಳಿಗೆ ದಯಮಾಡಿಸಿರುವರೆಂಬ ಸಮಾಚಾರವು ರಾಯರಿಗೆ ಗೊತ್ತಾಯಿತು. ಕೂಡಲೇ ಅವರು ಮನೆಯಲ್ಲಿ ಯಾರಿಗೂ ಹೇಳದೆ, ಮಹಾರಾಜರನ್ನು ಹುಡುಕುತ್ತ ಹೊರಟರು. ಅವರು

ಬಾಗೇವಾಡಿ, ಅರಳೀಕಟ್ಟೆ, ಬಸಾಪುರ ಮೊದಲಾದ ಊರುಗಳನ್ನು ಸುತ್ತಿ-ಕೊಂಡು ಕೊನೆಗೆ ಅಷ್ಟಗಿ ಗ್ರಾಮಕ್ಕೆ ಬಂದು ಮುಟ್ಟಿದರು. ನಾರಾಯಣ ರಾಯರನ್ನು ಹುಡುಕುವದಕ್ಕಾಗಿ ಅವರ ಅಣ್ಣನೂ ಬೆನ್ನತ್ತಿ ಬಂದನು. ಹೀಗೆ ಅವರಿಬ್ಬರೂ ಅಷ್ಟಗಿಗೆ ಬರಬೇಕಾದರೆ ರಾತ್ರಿಯಾಯಿತು. ಆ ದಿನ ಏಕಾದಶೀ. ಆದರೆ ಕರುಣಾಳುಗಳಾದ ಮಹಾರಾಜರು ಶಿಷ್ಯರಿಗೆ ಮೊದಲೇ ಈ ಇಬ್ಬರು ಹುಡುಗರ ವಿಷಯವಾಗಿ ಸೂಚನೆ ಕೊಟ್ಟಿದ್ದರು:— ''ಹುಡು ಗರೀರ್ವರು ಹಸಿದು ಕಂಕ್ರಾಂತರಾಗಿ ಬರತಕ್ಕವರಿದ್ದಾರೆ. ಅವರಿಬ್ಬರ ಫಲಾಹಾರದ ವ್ಯವಸ್ಥೆ ಮಾಡಿ ದ್ವಾದಶಿಯ ಅಡಿಗೆಯ ವಿಚಾರ ಮಾಡಿರಿ.''

ಹುಡುಗರು ಮಹಾರಾಜರನ್ನು ನೋಡಿ ಆನಂದ ಸಾಗರದಲ್ಲಿ ತೇಲಾಡ. ಹತ್ತಿದರು. ನಾರಾಯಣರಾಯರು ಸ್ವಾಮಿಗಳಿಗೆ ಮತ್ತೆ ಮತ್ತೆ ನಮಸ್ಕರಿಸಿ, ಕೈಜೋಡಿಸಿ ಪ್ರಾರ್ಥಿಸಿಕೊಂಡರು:— ''ದೇವರೂ, ನಾನು ಗುರುಚರಿತ್ರೆಯ ಸಪ್ತಾಹವನ್ನು ನಿನ್ನಿನ ದಿನವೇ ಮುಗಿಸಿರುವೆನು. ನಾಳೆ ಹೇಗಾದರೂ ಗುರುದ್ವಾದಶಿಯಿದೆ. ತಾವು ದಯವಿಟ್ಟು ನಾಳಿನ ದಿನ ನಮ್ಮಲ್ಲಿಗೆ ಬಂದು ಭಿಕ್ಷೆಯನ್ನು ಸ್ವೀಕರಿಸಿದರೆ, ಶ್ರೀ ಸದ್ಗುರು ದತ್ತಾತ್ರೇಯನೇ ನಮ್ಮ ಮನೆಗೆ ಬಂದಷ್ಟು ಸಂತೋಷವಾಗುವದು.'' ರಾಯರ ಬಾಲಸ್ವಭಾವದಿಂದ ಮಹಾ-ರಾಜರ ಹೃದಯವು ಕರಗಿತು. ಅದರೆ ಅಷ್ಟಗಿಯ ಭಕ್ತವೃಂದವೆಲ್ಲ ಮಹಾರಾಜರ ಗುರುದ್ವಾದಶಿಯ ಉತ್ಸವದ ವ್ಯವಸ್ಥೆಯನ್ನು ಅಷ್ಟಗಿಯಲ್ಲಿ ಪೂರ್ಣಮಾಡಿಟ್ಟಿದ್ದರು. ಅವರು ಏನು ಮಾಡಿದರೂ ಮಹಾರಾಜರು ಸಿಂಧೊಳ್ಳಿಗೆ ಹೋಗತಕ್ಕದ್ದಲ್ಲವೆಂದು ಹಟಹಿಡಿದರು. ಮಹಾರಾಜರು ಕತ್ತರಿಯಲ್ಲಿ ಸಿಕ್ಕಂತಾಯಿತು. ಕೊನೆಗೆ ಶ್ರೀ ಚಿದಂಬರನ ಮುಂದೆ ಚೀಟೇ ಹಾಕಬೇಕೆಂದು ನಿಶ್ಚಯವಾಯಿತು. ಚೀಟಿಯಲ್ಲಿ ಮಹಾರಾಜರ ಮನಸ್ಸಿ ನಲ್ಲಿದ್ದಂತೆ, ಎಂದರೆ ಸಿಂಧೊಳ್ಳಿಗೆ ಹೋಗಬೇಕೆಂದೇ ಬಂತು. ಅದರಂತೆ ಮಹಾರಾಜರು ಅಷ್ಟಗಿಯ ಜನರನ್ನೆಲ್ಲ ಕರಕೊಂಡು ಸಿಂಧೊಳ್ಳಿಗೆ ದಯ-ಮಾಡಿಸಿ, ನಾರಾಯಣರಾಯರ ಮನೆಯಲ್ಲಿ ಗುರುದ್ವಾದಶಿಯ ಉತ್ಸವ-ವನ್ನು ಸಂಭ್ರಮದಿಂದ ಕೊನೆಗಾಣಿಸಿದರು.

ಸನ್ ೧೯೦೩ ರಲ್ಲಿ ರಾಯರು ಸ್ಕೂಲ ಫಾಯನಲ್ ಪರೀಕ್ಷೆಯಲ್ಲಿ ನಾವಾಸಾಗಿದ್ದರು. ಆದುದರಿಂದ ಅವರು ಬಹಳ ಕಷ್ಟಪಟ್ಟು, ಸಾಂಗ್ಲಿ ದಿವಾಣರ ಮಧ್ಯಸ್ಥಿಕೆಯಿಂದ ಎಲ್. ಸಿ. ಪೀ. ಎಸ್. ಕಲಿಸುವ ವಿದ್ಯಾಲಯಕ್ಕೆ ಪ್ರವೇಶ ಸಿಕ್ಕುವಂತೆ ಮಾಡಿಕೊಂಡಿದ್ದರು. ರಾಯರು ಸಾಂಗ್ಲೀ ಸಂಸ್ಥಾನಕ್ಕೆ ಸೇರಿದ ಕಾಗತಿ ಊರವರಾದುದರಿಂದ ಅವರಿಗೆ ಅಲ್ಲಿ ಪುಕ್ಕಟೇ ಶಿಕ್ಷಣ ಸಿಕ್ಕುವ ಏರ್ಪಾಟೂ ಆಗಿತ್ತು. ಹೀಗೆ ಪ್ರವೇಶ ಮಾಡುವ ಅಪ್ಪಣೆ ದೊರಕಿಸಬೇಕಾದರೆ ರಾಯರಿಗೆ ನಾಕುಸಾಕಾಗಿ ಹೋಗಿತ್ತು. ಆದರೂ ಅವರ ಕೆಲಸ ಯಶಶ್ವಿಯಾದುದರಿಂದ ಒಂದು ರೀತಿಯಿಂದ ಸಮಾಧಾನವಾಗಿದ್ದಿತು.

ಮೇಲೆ ಹೇಳಿದಂತೆ ಗುರುದ್ವಾದಶಿಯ ಉತ್ಸವ ಮುಗಿದ ಮೇಲೆ ನಾರಾಯಣರಾಯರು ಮಹಾರಾಜರ ಬೆನ್ನುಹತ್ತಿ ಹೊರಟರು. ಅವರ ಆಗಿನ ಪರಿಸ್ಥಿತಿಗನುಗುಣವಾಗಿ ಅವರಲ್ಲಿ ಕ್ರಮೇಣ ವೈರಾಗ್ಯವು ಹುಟ್ಟುಹತ್ತಿತ್ತು. ಅವರು ಮಹಾರಾಜರ ಸಹವಾಸದಲ್ಲಿ ಅನೇಕ ದಿನಗಳನ್ನು ಕಳೆಯುತ್ತ ನಡೆದುದರಿಂದ, ಅವರಿಗೀಗ ಮುಂದೆ ವಿದ್ಯೆ ಕಲಿಯಬೇಕು, ಉದ್ಯೋಗ ವ್ಯವಸಾಯ ಮಾಡಿ ಹಣ ಗಳಿಸಬೇಕು, ಎಂಬಿನೇ ಮೊದಲಾದ ವಿಚಾರಗಳು ಬರದಂತಾದವು ಬಹಳ ಕಷ್ಟಪಟ್ಟು ಎಲ್. ಸಿ. ಪಿ ಎಸ್. ವಿದ್ಯಾಲಯಕ್ಕೆ ಪ್ರವೇಶ ಸಿಕ್ಕುವಂತಿದ್ದರೂ ಅತ್ತ ಕಡೆಗೆ ಅವರ ಲಕ್ಷ್ಯವೇ ಇರಲಿಲ್ಲ. ಈ ಸ್ಥಿತಿಯಲ್ಲಿ ಅವರು ಮಹಾರಾಜರೊಡನೆ ಕಾರ್ತಿಕದ ಉತ್ಸವಕ್ಕೆಂದು ಗುರ್ಲಹೊಸೂರಕ್ಕೆ ಬಂದರು.

ಉತ್ಸವವು ಮುಗಿದ ಮೇಲೆ ಮಹಾರಾಜರು ಎಲ್ಲರಿಗೂ ''ಹೋಗಿ ಬರ್ರಿ''ಂದು ಹೇಳಿ, ಎಲ್ಲರನ್ನು ಅವರವರ ಊರಿಗೆ ಕಳಿಸಹತ್ತಿದರು. ಕೊನೆಗೆ ನಾರಾಯಣರಾಯರ ಪಾಳಿಬಂತು. ಆದರೆ ರಾಯರ ಮನಸ್ಸಿನಲ್ಲಿ ತಿರುಗಿ ಊರಿಗೆ ಹೋಗುವದಿರಲಿಲ್ಲ. ಮಧುಕರಿಯನ್ನು ಬೇಡುತ್ತ ಇಲ್ಲಿಯೇ ಇದ್ದು ಗುರುಸೇವೆಯಲ್ಲಿ ಜನ್ಮ ಕಳೆಯಬೇಕೆಂದು ಅವರು ಸಂಕಲ್ಪ ಮಾಡಿದ್ದರು. ಆದರೆ ಮಹಾರಾಜರು ನಾರಾಯಣರಾಯರನ್ನು ಕರಿಸಿ ಅವರಿಗೂ ''ಊರಿಗೆ ಹೋಗಿ ಬಾ'' ಎಂದು ಅಪ್ಪಣೆ ಕೊಟ್ಟರು. ಇದರಿಂದ ರಾಯರಿಗೆ

ದಿಗಿಲುಬಿತ್ತು. ಮನಸಿಗೆ ಕೆಡಕೂ ಎನಿಸಿತು. ಅವರು ವಿನಯದಿಂದ ಮಹಾರಾಜರಿಗೆ ಕೈಜೋಡಿಸಿ ಪ್ರಾರ್ಥಿಸಿಕೊಂಡರು:— ''ಸ್ವಾಮಿನ್, ನಾನು ಮಧುಕರಿಯನ್ನು ಬೇಡಿಕೊಂಡು ತಮ್ಮ ಪಾದಸೇವೆಯಲ್ಲಿ ಕಾಲಕಳೆಯಬೇಕೆಂದಿದ್ದೇನೆ. ದಯಮಾಡಿ ನನ್ನನ್ನು ತಮ್ಮ ಬಳಿಯಲ್ಲಿರಿಸಿಕೊಳ್ಳಬೇಕು.'' ಆದರೆ ಮಹಾರಾಜರು ಏನು ಮಾಡಿದರೂ ಅದಕ್ಕೊಪ್ಪಲಿಲ್ಲ. ಅವರು ಹೇಳಿದ್ದೇನೆಂದರೆ:— ''ತಮ್ಮಾ, ಸೇವೆಯೆಂದರೇನೆಂಬದನ್ನು ಬಲ್ಲಿಯಾ? ಅನುಕೂಲಾಚರಣೆಯೇ ಸೇವೆಯಲ್ಲವೇ? ಎಂದ ಮೇಲೆ ನಾನು ಹೇಳಿದಂತೆ ಮಾಡುವದೇ ನನ್ನ ನಿಜವಾದ ಸೇವೆಯಲ್ಲವೇ? ನನ್ನ ಸೇವೆಯನ್ನು ಮಾಡಬೇಕೆಂದು ನಿನ್ನ ಇಚ್ಛೆಯಿದ್ದರೆ ನಾನೀಗ ಹೇಳಿದಂತೆ ಕೇಳು. ನಿನ್ನ ಸೇವೆ ನನಗೀಗ ಬೇಕಾಗಿಲ್ಲ. ಈಗ ತಿರುಗಿ ಹೋಗಿ ಕಲಿತು ಏನಾದರೂ ಉದ್ಯೋಗ ಮಾಡು.'' ನಾರಾಯಣರಾಯರು ನಿರುಪಾಯರಾಗಿ ಈ ಮಾತಿಗೆ ಸಮ್ಮತಿಸಿದರು. ಆದರೂ ಅವರ ಮನಸ್ಸು ದುಃಖದಿಂದ ತಪ್ತವಾಯಿತು.

ಮಹಾರಾಜರ ಅಪ್ಪಣೆಯಂತೂ ಆಯಿತು. ಎಂದ ಮೇಲೆ ಗುರ್ಲಹೊಸೂರ ಊರನ್ನು ಬಿಟ್ಟು ಹೊರಡಲೇ ಬೇಕಲ್ಲವೇ? ಅದಕ್ಕಾಗಿ ರಾಯರು ಮಹಾರಾಜರ ಮುಂದೆ ಕಾಯಿ ಇಟ್ಟು ನಮಸ್ಕಾರ ಮಾಡಿ ಸಣ್ಣವೋರಿ ಮಾಡಿಕೊಂಡು ನಿಂತರು. ಮಹಾರಾಜರು ರಾಯರೊಬ್ಬರನ್ನೇ ಕರೆದುಕೊಂಡು ಚಿದಂಬರನ ಗುಡಿಗೆ ಬಂದರು. ಮತ್ತು ''ಮುಂದ ಯಾವ ಕೆಲಸ ಮಾಡಬೇಕೆನ್ನುವಿ?'' ಎಂದು ಕೇಳಿದರು. ಆಗ ನಾರಾಯಣರಾಯರು ಎಲ್. ಸಿ. ಪಿ. ಎಸ್. ವಿದ್ಯಾಲಯದೊಳಗೆ ಪ್ರವೇಶ ಸಿಕ್ಕುವ ಬಗ್ಗೆ ತಾವು ಮಾಡಿದ ಯತ್ನಗಳನ್ನು ವಿವರಿಸಿ ''ನಾನು ಡಾಕ್ಟರನಾಗಬೇಕೆಂದು ಮಾಡಿದ್ದೇನೆ'' ಎಂದು ಹೇಳಿದರು. ಮಹಾರಾಜರು ಮತ್ತೆ ನಿಶ್ಚಯಪೂರ್ವಕವಾಗಿ ಹೇಳಿದರು:— ''ಡಾಕ್ಟರಿಕೆಯನ್ನು ಮಾಡಬೇಡ. ಅದನ್ನೊಂದು ಬಿಟ್ಟು ಬೇಕಾದ್ದು ಮಾಡು.'' ಮತ್ತು ನಾರಾಯಣರಾಯರ ಕೈಯಲ್ಲಿ ನೀರು ಕೊಟ್ಟು ಚಿದಂಬರನ ಮುಂದೆ 'ನಾನು ಡಾಕ್ಟರಿಕೆಯು ಹವ್ಯಾಸವನ್ನು ಬಿಟ್ಟು ಬಿಟ್ಟಿದ್ದೇನೆ.' ಎಂದು ಸಂಕಲ್ಪೋದಕ ಬಿಡಿಸಿದರು.

ರಾಯರು ಇದರಿಂದ ಖಿನ್ನರಾದರು. ಮಹಾರಾಜರಿಗೆ ಅವರನ್ನು ನೋಡಿ ಕರುಣೆ ಹುಟ್ಟಿತು. ಅದಕ್ಕಾಗಿ ಮಹಾರಾಜರು ರಾಯರನ್ನು ಕೇಳಿದರು:— 'ತಮ್ಮಾ, ಡಾಕ್ಟರಿಕೆಯನ್ನೇ ಮಾಡಬೇಕೆಂದು ನೀನು ಏಕೆ ಯೋಚಿಸಿದ್ದೆ ?'

ರಾಯರು:— ನಾನು ಬಡವನು. ಆದರೆ ನನಗೆ ಪರೋಪಕಾರ ಮಾಡಬೇಕೆಂಬ ಇಚ್ಛೆಯಿದೆ. ನಾನು ಡಾಕ್ಟರನಾದರೆ ಬಡಜನರಿಗೆ ಪುಕ್ಕಟೆ ಔಷಧ ಕೊಟ್ಟು ಪರೋಪಕಾರ ಮಾಡುವದು ಸಾಧ್ಯವಿದೆ.

ಮಹಾರಾಜರು:— ತಮ್ಮಾ, ಮನುಷ್ಯನ ಹತ್ತರ ಸಾಧನ ಸಂಪತ್ತು ಇಲ್ಲದಾಗ ಅವನ ತಲೆಯಲ್ಲಿ ನಾನಾತರದ ಪರೋಪಕಾರದ ವಿಚಾರಗಳು ಸುಳಿವಾಡುತ್ತವೆ. ಅದೇ ಸಂಪತ್ತು ಬಂತೆಂದರೆ ಅವೆಲ್ಲ ಎಲ್ಲಿಂದಲೋ ಮಾಯವಾಗುತ್ತವೆ. ಡಾಕ್ಟರ ಜನರಿಗೆ ರೊಕ್ಕಸಿಕ್ಕುವದು ಯಾವಾಗ, ಬಲ್ಲಿಯಾ ? ಅವರಿಗೆ ವಿಶೇಷ ರೊಕ್ಕಬೇಕಾದರೆ ದೇಶದಲ್ಲಿ ಪ್ಲೇಗ, ಮಾರಿಕಾ ಮೊದಲಾದ ಬೇನೆಗಳು ಹೆಚ್ಚಾಗಬೇಕು. ಆದುದರಿಂದ ಡಾಕ್ಟರ ಜನರ ಮನಸ್ಸಿನಲ್ಲಿ ಅವರಿಗೆ ಗೊತ್ತಾಗದಂತೆ ರೋಗಿಗಳು ಹೆಚ್ಚಾಗಲೆಂಬ ಲೋಭ ಬುದ್ಧಿಯು ಬಲಿಯುತ್ತದೆ. ಡಾಕ್ಟರಿಕೆಯಿಂದ ಪರೋಪಕಾರ ಮಾಡಬೇಕೆಂಬ ನಿನ್ನ ಬುದ್ಧಿಯು ವ್ಯರ್ಥವಾದದ್ದು.

ರಾಯರು:— ಒಳ್ಳೆಯದು. ತಮ್ಮ ಆಜ್ಞೆಯಂತೆ ಡಾಕ್ಟರಿಕೆಯ ವಿಚಾರವನ್ನಂತೂ ಬಿಟ್ಟುಕೊಟ್ಟೆ. ಆದರೆ ಮುಂದೆ ಏನು ಮಾಡಬೇಕೆಂಬದನ್ನು ಮಾತ್ರ ತಾವು ದಯವಿಟ್ಟು ಅಪ್ಪಣೆ ಕೊಡಿಸಬೇಕು.

ಮಹಾರಾಜರು:— ಮತ್ತೆ ಯಾವ ಉದ್ಯೋಗವನ್ನೂ ಸೂಚಿಸಲಾರೆಯಾ? ರಾಯರು ಅತ್ತಿತ್ತ ವಿಚಾರ ಮಾಡಿ ಹೇಳಿದರು: ನನಗೆ ಉಪಯೋಗವಾಗುವಂತಿರುವ ಇನ್ನೊಂದು ಮಾರ್ಗವಿದೆ. ತಮ್ಮ ದಯವಿದ್ದರೆ ಅದೂ ನನಗೆ ಸಿಕ್ಕಬಹುದು.

ಮಹಾರಾಜರು:— ಏನದು ?

ರಾಯರು:— ಎಂಜಿನಿಯರಿಂಗ ಎಂದು ಅದಕ್ಕೆ ಕರೆಯುತ್ತಾರೆ. ಎಂಜಿನಿಯರಿಂಗದಲ್ಲಿ ದೊಡ್ಡ ಪರೀಕ್ಷೆಯೊಂದು ಬೇರೆ ಇರುತ್ತದೆ. ಆದರೆ ನಾನು ಹೇಳುವದು ಅದಲ್ಲ. ನಾನು ಹೇಳುವದು ಓವ್ಹರಸೀಅರ ಕ್ಲಾಸು. ಅಲ್ಲಿಯೂ ಪ್ರವೇಶ ಪರೀಕ್ಷೆ ಇದೆ. ಅದರಲ್ಲಿ ಪಾಸಾದರೆ ಕೆಲವು ವರ್ಷಗಳ ವರೆಗೆ ಶಿಕ್ಷಣ ಪಡೆಯಬೇಕಾಗುವದು. ಮುಂದೆ ಸಂಕಾರದಲ್ಲಿಯೇ ನೌಕರಿಯೂ ಸಿಕ್ಕುವದು.

ಇದನ್ನು ಕೇಳಿ ಮಹಾರಾಜರು ಒಮ್ಮೆಲೇ ತಲೆ ಅಲ್ಲಾಡಿಸಿದರು. ''ಹೌದು, ನೋಡು. ಅದೇ ನಿನಗೆ ಸರಿಯಾದದ್ದು. ನೀನು ಅಲ್ಲಿ ಹೋದರೆ ಮಾತ್ರ ಕಲ್ಯಾಣವಾಗುವದು. ಬೇರೆ ಎಲ್ಲಿ ಹೋದರೂ ನಿನಗೆ ಯಶಸು ಸಿಕ್ಕಲಿಕ್ಕಿಲ್ಲೆಂದು ತೋರುತ್ತದೆ.''

ಅದರಂತೆ ಪುಣೆ ಪಟ್ಟಣಕ್ಕೆ ಹೋಗಿ ಓವ್ಹರಸೀಅರ ಕ್ಲಾಸಿಗೆ ಪ್ರವೇಶ ದೊರಕಿಸಬೇಕೆಂದು ನಿಶ್ಚಯವಾಯಿತು. ಆದರೆ ಅದೆಲ್ಲ ಹಣದ ಮೇಲೆಯೇ ಅವಲಂಬಿಸಿದುವದೆಂಬದು ಸ್ಪಷ್ಟವಿತ್ತು. ರಾಯರಾದರೋ ತೀರ ಬಡವರು. ಅವರ ಮೈಮೇಲಿನ ಅರಿವೆಗಳನ್ನು ಕೂಡ ಮಹಾರಾಜರೇ ಮಾಡಿಸಿ ಕೊಟ್ಟಿದ್ದರು. ಎಂದ ಮೇಲೆ, ಮುಂದೇನು ಮಾಡಬೇಕು, ಎಂದು ರಾಯರು ಚಿಂತೆಗೊಳಗಾದರು. ಮಹಾರಾಜರಿಗೆ ಈ ಮಾತು ತಿಳಿಯಿತು. ಅವರು ರಾಯರನ್ನು ಕರಿಸಿ ಆಶೀರ್ವದಿಸಿ, ಅವರಿಗೆ ತಮ್ಮ ಕೈಯಿಂದಲೇ ಕುಂಕುಮದ ಬೊಟ್ಟು ಇಟ್ಟು, ಕೈಯಲ್ಲಿ ಎರಡು ರೂಪಾಯಿಗಳನ್ನು ಕೊಟ್ಟು, ''ಹೋಗಿ ಬಾ'' ಎಂದು ಅಪ್ಪಣೆ ಕೊಟ್ಟರು. ಪುಣ್ಯಪತ್ತನಕ್ಕೆ ಹೋಗಿ ಕಾಲೇಜದೊಳಗೆ ಪ್ರವೇಶ ದೊರಕಿಸುವ ಯತ್ನ ಮಾಡಬೇಕಾದರೆ ೩೦-೪೦ ರೂಪಾಯಿಗಳಾದರೂ ಬೇಕು; ಎರಡು ರೂಪಾಯಿಗಳಿಂದ ಕೆಲಸ ಹೇಗಾಗಬೇಕು, ಎಂದು ರಾಯರು ತೀರ ಖಿನ್ನವದನರಾಗಿ ಮಾತಾಡಲಾರದೆ ನಿಂತುಕೊಂಡರು. ಅವರ ಕಣ್ಣೀರಿಂದ ನೀರು ದಳದಳನೆ ಬೀಳಹತ್ತಿದವು. ಆಗ ಮಹಾರಾಜರು ಮುಗುಳುನಗೆ ನಗುತ್ತ ಮತ್ತೆ ಆಶ್ವಾಸನ ಕೊಟ್ಟರುಃ— ''ಬಾಳಾ ಸಣ್ಣ ಮೋರೆ ಮಾಡಬೇಡ. ನೀನು ಸಣ್ಣಮೋರೆ ಮಾಡಿದ್ದನ್ನು ನಾನು ನೋಡಲಾರೆ. ಬೇಕಾದಂತಹ ಪ್ರಸಂಗ ಬಂದರೂ ನಾನು ಕೊಟ್ಟ ಎರಡು ರೂಪಾಯಿಗಳನ್ನು ಮಾತ್ರ

ವೆಚ್ಚಮಾಡಬೇಡ. ಅವುಗಳನ್ನು ಜೋಕೆಯಿಂದ ಕಾಯಿ. ಚಿದಂಬರನ ಕೃಪೆಯಿಂದ ನಿನ್ನ ಜನ್ಮವಿರುವ ವರೆಗೆ ನಿನಗೆ ಕೊಕ್ಕದ ಕೊರತೆ ಬೀಳುವದಿಲ್ಲ, ಕಂಡೆಯಾ. ನಿನಗೆ ಯಶಸ್ಸು ಕಟ್ಟಿಟ್ಟದ್ದು. ಹೂ, ಅಳಬೇಡ. ನಗು, ನೋಡೋಣ ಆದರೆ ಡಾಕ್ಟರಿಕೆಯನ್ನು ಮಾತ್ರ ಮಾಡುವ ಹವ್ಯಾಸಕ್ಕೆ ಹೋಗಬೇಡ. ತಿಳಿಯಿತಷ್ಟೇ ?''

ಆಶ್ಚರ್ಯದ ಮಾತೆಂದರೆ ಅಂದಿನಿಂದ ನಾರಾಯಣರಾಯರ ಭಾಗ್ಯೋದಯವು ತೆರೆಯಿತು. ಅವರು ಮಹಾರಾಜರ ಅಪ್ಪಣೆಯನ್ನು ಶಿರಸಾವಹಿಸಿ ಪುಣ್ಯಪತ್ತನಕ್ಕೆ ಹೋಗಿ ಅಭ್ಯಾಸ ಮಾಡಹತ್ತಿದರು. ಅವರಿಗೆ ಒಂದರ ಹಿಂದೊಂದು ಅದ್ಭುತವಾದ ಅನುಭವಗಳು ಬರಹತ್ತಿದವು. ಅವುಗಳನ್ನೆಲ್ಲ ಬರೆಯುತ್ತ ಕುಳಿತರೆ ಒಂದು ದೊಡ್ಡ ಹೊತ್ತಿಗೆಯೇ ಆಗುವಂತಿದೆ. ರಾಯರಿಗೆ ಗೊತ್ತಿಲ್ಲದ ರೀತಿಯಲ್ಲಿ ಅವರಿಗೆ ನಾನಾ ಬಗೆಯಿಂದ ಸಹಾಯವಾಗಹತ್ತಿತು. ಎಲ್ಲಿಲ್ಲಿಂದಲೋ ಹೇಗೆ ಹೇಗೋ ಹಣಬರಹತ್ತಿತು. ಇವರನ್ನು ಕಂಡವರೆಲ್ಲ ಇವರ ಮೇಲೆ ಪ್ರೇಮ ಮಾಡುವವರೇ. ಒಂದು ಸಲ ಇವರು ಮದ್ರಾಸ ಕಡೆಯ ಕನ್ನಡ ಪ್ರವಾಸಿಕರಿಗೆ (ಅವರಿಗೆ ಮರಾಠೀ ಬರುತ್ತಿದ್ದಿಲ್ಲ.) ರೇಲ್ವೆ ಪ್ರವಾಸದಲ್ಲಿ ಸಹಾಯ ಮಾಡಿದರು. ಆದರಿಂದ ರೇಲ್ವೆ ಅಧಿಕಾರಿಗಳು ಸಂತುಷ್ಟರಾಗಿ ಇವರಿಗೆ ಒಂದು ನೂರು ರೂಪಾಯಿ ಕೊಟ್ಟುಬಿಟ್ಟರು. ರಾಯರಿಗೆ ಹಣ ಬಂದು ಕೆಲ ದಿನಗಳಾಗುವದರೊಳಗಾಗಿ ಮಹಾರಾಜರು ಶ್ರೀ. ವಿಷ್ಣುಬುವಾ ಆವರೊಡನೆ ಪುಣ್ಯಪತ್ತನಕ್ಕೆ ಹೋಗಿ ''ತಮ್ಮಾ, ನಿನಗೆ ಹೇಗೂ ರೂಪಾಯಿ ಬಂದಿವೆ, ನಡೆ. ಆ ಹಣದಿಂದ ಆಳಂದೀ, ಪಂಢರಪುರ ಗಾಣಗಾಪುರ ಮೊದಲಾದ ಕ್ಷೇತ್ರಗಳಿಗೆ ಹೋಗಿ ಬರೋಣ'' ಎಂದು ಆಜ್ಞೆ ಮಾಡಿದರು. ನಾರಾಯಣರಾಯರು ಈ ಮಾತಿಗೆ ಆನಂದದಿಂದ ಒಪ್ಪಿಕೊಂಡರು. ಆ ಪ್ರವಾಸದೊಳಗೆ ಗಾಣಗಾಪುರಕ್ಕೆ ಹೊರಟಿರುವ ರೇಲ್ವೆಗಾಡಿಯೊಳಗೆ ಮಹಾರಾಜರೂ, ಬುವಾ ಅವರೂ, ನಾರಾಯಣರಾಯರೂ ಕುಳಿತುಕೊಂಡಾಗ, ಮಹಾರಾಜರು ಒಮ್ಮೆಲೇ ರಾಯರಿಗೆ ಪ್ರಶ್ನೆ ಮಾಡಿದರು: ''ನಾರಾಯಣಾ, ನೀನು ದೊಡ್ಡ ಪದವಿಗೇರಿದರೆ ನಮ್ಮನ್ನು ಮರೆಯುವದಿಲ್ಲವಷ್ಟೇ.'' ನಾರಾಯಣರಾಯರು ಉತ್ತರ ಕೊಟ್ಟರುಃ— ''ಇಲ್ಲ,

ಸ್ವಾಮೀ. ಹಾಗೆಂದೂ ಆಗಲಿಕ್ಕಿಲ್ಲ.'' ಕೂಡಲೇ ಮಹಾರಾಜರು, ವಿಷ್ಣು ಬುವಾ ಆವರಿಂದ ಈ ವಾಕ್ಯವನ್ನು ಸ್ಮರಣೆಯ ಪುಸ್ತಕದಲ್ಲಿ ಬರೆಯಿಸಿ, ಮಿತಿಯನ್ನು ಸಹ ಹಾಕಿಸಿದರು. ಈ ವಾಕ್ಯವೆಂದರೆ ಮಹಾರಾಜರ ವರದಾನವೇ ಎಂದು ನಾರಾಯಣರಾಯರು ತಿಳಿದಿದ್ದರೆ ಆಶ್ಚರ್ಯವಿಲ್ಲ.

ಮಹಾರಾಜರ ಕೃಪೆಯಿಂದ ನಾರಾಯಣರಾಯರಿಗೆ ಉತ್ತರೋತ್ತರ ಕಲ್ಯಾಣವಾಗುತ್ತ ನಡೆಯಿತು. ಇವರು ಓಪ್ಹರಸೀಆರ ಪರೀಕ್ಷೆಯನ್ನಷ್ಟೇ ಪಾಸಾಗಿದ್ದರೂ, ಪುಣೆ ಮತ್ತು ಮುಂಬಯಿಗಳಲ್ಲಿರುವ ಗವರ್ನಮೆಂಟ ಹೌಸಿನ ವ್ಯವಸ್ಥೆಯೆಲ್ಲ ಇವರ ಕೈಸೇರಿತ್ತು. ಅತ್ಯುಗ್ರರಾದ ಯುರೋಪಿಯನ್ ಸಾಹೇಬರು ಕೂಡ ಇವರ ಮುಂದೆ ನೆತ್ತಗಾಗುತ್ತಿದ್ದರು. ಇವರು ಸಾತಾರಾ ಜಿಲ್ಲೆಯೊಳಗೆ ಮಾಹುಲಿಯಲ್ಲಿರುವಾಗ್ಗೆ, ಮಹಾರಾಜರು ಅಲ್ಲಿಗೆ ಹೋದರು. ರಾಯರ ವರಿಷ್ಠನಾದ ಯುರೋಪಿಯನ್ ಸಾಹೇಬನು ಬಹು ಕಠೋರನಾಗಿದ್ದನು. ಕೈಕೆಳಗಿನವರು ಕಚೇರಿಗೆ ಒಂದು ಕ್ಷಣ ಸಹ ತಡಮಾಡಿ ಬಂದರೂ ಅವನಿಗೆ ಸಹನೆಯಾಗುತ್ತಿರಲಿಲ್ಲ. ಆದರೆ ಮಹಾರಾಜರು ಮಾಹುಲಿಗೆ ಬಂದಾಗ ಎಂಟು ದಿನಗಳ ವರೆಗೆ ರಾಯರು ತಮ್ಮ ಕಚೇರಿಗೆ ಹೋಗಲೇ ಇಲ್ಲ; ಅಥವಾ ಸಾಹೇಬನಿಗೆ ರಜೆಯ ಚೀಟಿಯನ್ನೂ ಕಳಿಸಲಿಲ್ಲ. ಇದರಿಂದ ರುಷ್ಟನಾದ ಸಾಹೇಬನು ಬಹುಶಃ ತಮ್ಮ ಕೆಲಸಕ್ಕೆ ಅರದಾಳ ಹಚ್ಚುವನೆಂದು, ರಾಯರು ಅಂಜುತ್ತಂಜುತ್ತ ೯ನೆಯ ದಿನ ಕಚೇರಿಯೊಳಗೆ ಕಾಲಿಟ್ಟರು. ಆದರೆ ಆ ಸಾಹೇಬನು ಎಂದಿನಂತೆ ಇವರನ್ನು ನೋಡಿ ಸಂತೋಷದಿಂದಲೇ ಮಾತಾಡಿಸಿದನಲ್ಲದೆ ಇವರಿಗೆ ಏನೂ ಮಾಡಲಿಲ್ಲ !

ಇಂತಹ ಅನೇಕ ದುರ್ಧರ ಪ್ರಸಂಗಗಳೊಳಗಿಂದ ರಾಯರು ಸುಲಭವಾಗಿ ಪಾರಾಗುತ್ತ ಬಂದರು. ಮಹಾರಾಜರ ಭವಿಷ್ಯದಂತೆ ಆವರ ತಿಂಗಳ ಸಂಬಳವು ಆರೇಳುನೂರು ರೂಪಾಯಿಗಳ ವರೆಗೆ ಏರಿ, ಅವರು ಎಲ್ಲರ ಆದರಕ್ಕೆ ಪಾತ್ರರಾದರು. ಸರಕಾರದವರು ಆವರ ಕೆಲಸಕ್ಕೆ ಮೆಚ್ಚಿ ರಾವ ಬಹಾದ್ದೂರ ಎಂಬ ಬಿರುದು ಕೊಟ್ಟಿದ್ದಾರೆ. ಅವರೀಗ ಸರಕಾರೀ ಕೆಲಸದಿಂದ ನಿವೃತ್ತರಾಗಿ ಗುರುಸೇವೆಯಲ್ಲಿ ರತರಾಗಿದ್ದಾರೆ. ಆವರು ಅನೇಕ

ಸಾವಿರ ರೂಪಾಯಿ ವೆಚ್ಚಮಾಡಿ ಗುರುಸೇವೆ ಸಲ್ಲಿಸಿದ್ದಾರೆ. ೧೦– ೧೨ ವರುಷಗಳ ಹಿಂದೆ ೬ ಕೋಟಿ ಶಿವಚಿದಂಬರ ಜಪವನ್ನೂ ಅವರು ಮಾಡಿಸಿದರು. ಅವರೀಗ ಶ್ರೀ ಕೈವಲ್ಯಾಶ್ರಮ ಸ್ವಾಮೀ ಸಂಸ್ಥೆಗೆ ಮುಖ್ಯ ಆಧಾರವಾಗಿದ್ದಾರೆಂದು ಹೇಳಬಹುದು. ಮಹಾರಾಜರ ಕೃಪೆಯಿಂದ ಅವರು ಎಲ್ಲ ರೀತಿಯಿಂದ ಸಂಪನ್ನರಾಗಿದ್ದಾರೆ. ಧನ, ಧಾನ್ಯ, ಸಂಪತ್ತು, ಸಂತತಿ, ಆಯುಷ್ಯ ಮೊದಲಾದವುಗಳೆಲ್ಲ ಅವರಿಗೆ ಸಿಕ್ಕಿವೆ. ಒಟ್ಟಿನ ಮೇಲೆ ಶ್ರೀ ಕೈವಲ್ಯ ಮಾತೆಯು ಬೆಳಸಿ ಜೋಕೆ ಮಾಡಿ ಮುಂದೆತಂದ ಕೂಸೇ ನಾರಾಯಣರಾಯರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಶ್ರೀ ಸಾವಳಾರಾಮ ಎಂಬವರು ಮಹಾರಾಜರ ಪ್ರಮುಖ ಶಿಷ್ಯರಲ್ಲಿ ಗಣನೆಯಾಗತಕ್ಕವರು. ಅವರ ಪೂರ್ಣ ಹೆಸರು ರಾಮಚಂದ್ರ ಗೋಪಾಳ ಗ್ರಾಮೋಪಾಧ್ಯೆ ಎಂಬುದಿತ್ತು. ಅವರ ಜನ್ಮಸ್ಥಳ ಅಷ್ಟಗಿ. ಅವರ ಅಜ್ಜಂದಿರು ವೇದವಿದ್ಯೆಯಲ್ಲಿ ಘನವಿದ್ವಾಂಸರಾಗಿದ್ದರು. ಇಸ್ವಿ ಸನ್ ೧೮೭೪ರ ಸುಮಾರಕ್ಕೆ ಶ್ರೀ ಚಿದಂಬರ ಮಹಾ ಸ್ವಾಮಿಗಳವರ ಕರಿಯ ಮಕ್ಕಳಾದ ಶ್ರೀ ಬಾಪೂ ದೀಕ್ಷಿತ ಅಥವಾ ಶ್ರೀ ಬ್ರಹ್ಮಾನಂದ ಸ್ವಾಮಿಗಳು ಅಷ್ಟಗಿಗೆ ದಯಮಾಡಿಸಿದ್ದರು. ಅವರು ಶ್ರೀ ಸಾವಳಾರಾಮ ಅವರ ಮನೆಯಲ್ಲಿಯೇ ಇಳಿದುಕೊಂಡಿದ್ದರು. ೨—೩ ದಿನ ವಾಸಮಾಡಿದ ಮೇಲೆ ಅವರು ಮೇಣೆಯಲ್ಲಿ ಕುಳಿತು ಹೊರಟರು. ಸಾವಳಾರಾಮರ ಮನೆಬಿಟ್ಟು ೫೦ ಹೆಜ್ಜೆ ಅವರು ಹೋಗಿರಬಹುದು. ಆಷ್ಟರಲ್ಲಿ ಅವರು ತಮ್ಮ ಮೇಣೆಯನ್ನು ತರುಬಿ, ಸಾವಳಾರಾಮರ ತಾಯಿಯನ್ನು ಕರೆಕಳುಹಿದರು:— "ನಾವು ಆ ಹೆಣ್ಣು ಮಗಳಿಗೆ ಆಶೀರ್ವಾದ ಮಾಡದೆ ಹಾಗೆಯೇ ಹೊರಟಿದ್ದೇವೆ. ಅವಳನ್ನು ಕರೆಯಿಸಿ" ಅವಳು ಬಂದು ನಮಸ್ಕಾರಮಾಡಲು ಶ್ರೀ ಬ್ರಹ್ಮಾನಂದ ಸ್ವಾಮಿಗಳು ಅವಳ ಉಡಿಯಲ್ಲಿ ಎರಡು ತೆಂಗಿನ ಕಾಯಿಗಳನ್ನು ಹಾಕಿ, ಉಡಿತುಂಬಿ, ಹರಸಿದರು. ಅವರ ಆಶೀರ್ವಾದದಿಂದಲೇ ಮುಂದೆ ಸಾವಳಾರಾಮರು ಹುಟ್ಟಿದರು.

ಇ. ಸ. ೧೯೦೩ ರಲ್ಲಿ ಮಹಾರಾಜರು ತಮ್ಮ ಸಂಚಾರದೊಳಗೆ ಅಷ್ಟಗಿಗೆ ದಯಮಾಡಿಸಿದರು. ಅದೇ ಕಾಲಕ್ಕೆ ಶ್ರೀ ಸಾವಳಾರಾಮರು

ಮಹಾರಾಜರನ್ನು ನೋಡಿದರು. ಜನ್ಮಾಂತರಗಳ ಸಂಸ್ಕಾರದಿಂದ ಪರಿಶುದ್ಧವಾಗಿ, ಈಗಿನ ಪವಿತ್ರ ಆಚರಣೆಯಿಂದ ನಿರ್ಮಲವಾಗಿಸಲ್ಪಟ್ಟ ಅವರ ಮನಸು ಮಹಾರಾಜರನ್ನು ನೋಡಿದೊಡನೆ ಅಲ್ಲಿಯೇ ಆಸಕ್ತವಾಯಿತು. ಅವರು ಮಹಾರಾಜರನ್ನು ನೋಡಿ ತಲೆಬಾಗಿದರು. ಮರುವರ್ಷ ಅವರಿಗೊಂದು ಸ್ವಪ್ನದೃಷ್ಟಾಂತವಾಯಿತು. ಅದರಿಂದ ಉತ್ತೇಜಿತರಾಗಿ ಅವರು ಗುರ್ಲಹೊಸೂರಕ್ಕೆ ಹೋದರು. ದೃಷ್ಟಾಂತದಲ್ಲಿ ಕಂಡ ಸಂಗತಿಗಳೆಲ್ಲ ಅಲ್ಲಿ ಪ್ರತ್ಯಯಕ್ಕೆ ಬಂದವು. ಮಹಾರಾಜರು ಅವರನ್ನು ನೋಡಿ ವಾತ್ಸಲ್ಯದಿಂದ ಕರೆದು ಅವರ ಕೈಯಲ್ಲಿ ಉತ್ಸವದ ಗುಂಡಿಯನ್ನು ಕೊಟ್ಟು, ''ಚಿದಂಬರೋತ್ಸವದ ಲೆಕ್ಕಪತ್ರಗಳೆಲ್ಲ ಇಂದಿನಿಂದ ನಿನ್ನ ಕಡೆಗೆ'' ಎಂದು ಆಜ್ಞೆ ಮಾಡಿದರು. ಶ್ರೀ ಸಾವಳಾರಾಮರು ಗುರುಗಳ ಆಜ್ಞೆಯನ್ನು ಶಿರಸಾವಹಿಸಿದರು. ಮುಂದೆ ಮಹಾರಾಜರು ಅವರಿಗೆ ಮಂತ್ರೋಪದೇಶಕೊಟ್ಟು, ಅನುಗ್ರಹಿಸಿದರು. ಮಹಾರಾಜರ ಸಮಾಧಿಯಾದ ಮೇಲೂ ಅವರು ಶ್ರೀ ಕೈವಲ್ಯಾಶ್ರಮ ಸಂಸ್ಥೆಯ ಸಹ ಕಾರ್ಯದರ್ಶಿಗಳಾಗಿ ಕೊನೆಯವರೆಗೆ ಕೆಲಸ ಮಾಡಿದರು. ದೇಹವಿಡುವ ವರೆಗೆ ಆ ಸಂಸ್ಥೆಯ ಲೆಕ್ಕಪತ್ರಗಳೆಲ್ಲ ಅವರ ಕಡೆಗೇ ಇದ್ದವು. ಅವರು ಗುರುಸ್ಮರಣೆ ಮಾಡುತ್ತ ಸನ್ ೧೯೪೪ ರಲ್ಲಿ ಮಾಘ ವದ್ಯ ಅಷ್ಟಮಿಯ ದಿವಸ ಗುರುಚರಣಗಳಲ್ಲಿ ಐಕ್ಯವಾದರು. ಅವರು ಒಳ್ಳೆ ಶಾಂತ ಸ್ವಭಾವದವರೂ, ದಂಭರಹಿತರೂ, ಗುರುಭಕ್ತರೂ ಆಗಿದ್ದರು.

ಮಹಾರಾಜರ ಭಕ್ತವರ್ಗದೊಳಗೆ ಪ್ರವೇಶ ದೊರಕಿಸುವ ಭಾಗ್ಯಪಡೆದ ಕನ್ಯಾಮಣಿಯೆಂದರೆ ಮಾತೋಶ್ರೀಯವರಾದ ಮಜಲಿ ಕಾಶಕ್ಕನವರು. ಬೆಳಗಾಂವಿಗೆ ಸಮೀಪದಲ್ಲಿರುವ ಕಲ್ಲಿಹೋಳ ಎಂಬದು ಅವರ ತವರೂರು. ನಾನಾ ಕುಲಕರ್ಣಿ ಎಂಬವರ ಮಗಳು. ಬೆಳಗಾಂವಿಯ ಸುಪ್ರಸಿದ್ಧರಾದ ಮಜಲಿ ಗುರುರಾಯರ ತಮ್ಮ ಶ್ರೀ ಅನಂತರಾಯರಿಗೆ ಇವರನ್ನು ಕೊಟ್ಟಿತ್ತು. ಮಹಾರಾಜರು ಬೆಳಗಾಂವಿಯಲ್ಲಿ ಶಿಕ್ಷಕರಾಗಿದ್ದಾಗ, ಮಜಲಿ ಗುರುರಾಯರ ಮನೆಗೆ ಅವರು ಮೇಲಿಂದ ಮೇಲೆ ಹೋಗುತ್ತಿದ್ದರು. ಕಾಶಕ್ಕನವರಿಗೆ ಮಹಾರಾಜರ ಪರಿಚಯವಾದುದು ಅಲ್ಲಿ. ಆಗಲೇ ಅವರ ಮನಸ್ಸಿನಲ್ಲಿ ಮಹಾರಾಜರ ಬಗ್ಗೆ ಭಕ್ತ್ಯಾದರಗಳು ಉಂಟಾಗಿದ್ದವು. ಮುಂದೆ ಕಾಶಕ್ಕನವರ

ಪುಲ್ಲೈವದಿಂದ ಗಂಡನೂ ಮಕ್ಕಳೂ ತೀರಿಕೊಂಡಿದ್ದರಿಂದ, ಅವರು ಜಿಗುಪ್ಸೆಯಿಂದ ಕಾಶಿಗೆ ಹೋದರು. ಅಲ್ಲಿ ನುತ್ತಿ ಅವರಿಗೆ ಸಂನ್ಯಸ್ತರಾದ ಮಹಾರಾಜರ ಭೆಟ್ಟಿಯಾಯಿತು. ಮಹಾರಾಜರನ್ನು ನೋಡಿ ಅವಳು ಮುಕ್ತಕಂಠದಿಂದ ಅಳ್ತು ಬಿಟ್ಟಳು. ಮಹಾರಾಜರು ಅವಳನ್ನು ಸಂತೈಸಿ ಅವಳ ಮನಸ್ಸನ್ನು ಚಿದಂಬರನ ಕಡೆಗೆ ತಿರುಗಿಸಿದರು. ಅವರು ಕಾಶಿಯಿಂದ ತಿರುಗಿ ಬಂದು ನೇಲಿಂದ ಮೇಲೆ ಮಹಾರಾಜರ ಭೆಟ್ಟಿಗೆ ಬರಹತ್ತಿದರು. ಕ್ರಮೇಣ ಅವರ ದುಃಖವೆಲ್ಲ ಕಡಿಮೆಯಾಗಿ, ಅವರು ಚಿದಂಬರನ ನಿಃಸೀಮ ಭಕ್ತರಾದರು. ಮಹಾರಾಜರು ದೇಹವಿಟ್ಟ ಮೇಲೆ, ಅವರು ಸ್ವಾಮೀ ಸಂಸ್ಥೆಯ ಆಧಾರಭೂತ ವ್ಯಕ್ತಿಗಳಲ್ಲೊಬ್ಬರಾಗಿ ಕೊನೆಯ ವರೆಗೆ ಸ್ವಾಮೀ ಸೇವೆ ಮಾಡಿದರು. ಶ್ರೀ ವಿಷ್ಣುಬುವಾ ಅವರ ಮೇಲೆ ಅವರು ಮಾತೃಪ್ರೇಮ ತೋರಿಸುತ್ತಿದ್ದರು. ಅವರು ಸನ್ ೧೯೩೫ರ ಸುಮಾರಕ್ಕೆ ಸ್ವಾಮೀ ಸೇವೆ ಮಾಡುತ್ತಿರುವಾಗಲೇ ಗುರ್ಲಹೊಸೂರಲ್ಲಿ ದೇಹವಿಟ್ಟು ಸ್ವಾಮಿಗಳಲ್ಲಿ ಲೀನವಾದರು.

೨೧ ಮಹಾರಾಜರ ಭಕ್ತಸೇವಕ ವರ್ಗ

(ಮುಂದುವರಿದದ್ದು)

ಈಗ ಹೆಸರು ತಕ್ಕೊಳ್ಳಬೇಕಾದುದು ಶ್ರೀ ಹತ್ತಿ ರಾಚಪ್ಪನವರದು. ಅವರು ಸಂಪಗಾಂವ ತಾಲೂಕಿನೊಳಗಿನ ಮುಗುಟಖಾನ ಹುಬ್ಬಳ್ಳಿಯವರು. ನಿಷ್ಠಾವಂತರಾದ ವೀರಶೈವರು. ೩೨ನೆಯ ವರುಷದ ಟ್ರೇಂಡ್ ಶಿಕ್ಷಕರು. ಸದ್ಯಕ್ಕೆ ಅವರು ಸೇವಾನಿವೃತ್ತರಾಗಿದುತ್ತಾರೆ. ಮೊದಲಿನಿಂದಲೂ ಅವರ ಒಲವು ಪರಮಾರ್ಥದ ಕಡೆಗಿದೆ. ಅವರಿಗೆ ಬಹು ದಿನಗಳ ಹಿಂದೆಯೇ ಶ್ರೀ ಸ್ವಾಮೀ ಮಹಾರಾಜರ ಕೃಪೆಗೆ ಪಾತ್ರರಾಗುವ ಯೋಗ ಬಂತು. ಅಂದಿನಿಂದ ಅವರು ಮಹಾರಾಜರ ಚರಣದಲ್ಲಿ ಅನನ್ಯಭಕ್ತಿಯನ್ನಿಟ್ಟು ತಮ್ಮ ಜನ್ಮವನ್ನು ಸಾರ್ಥಕಗೊಳಿಸಿಕೊಂಡಿರುತ್ತಾರೆ. ಮಹಾರಾಜರಾದರೂ ಅವರನ್ನು ಬಹಳ ಪ್ರೇಮದಿಂದಲೂ ವಾತ್ಸಲ್ಯದಿಂದಲೂ ಕಾಣುತ್ತಿದ್ದರು. ಮಹಾರಾಜರು ಅವರಿಗೆ ಪ್ರೀತಿಯಿಂದ 'ವಾಸ' ಎಂದು ಹೆಸರಿಟ್ಟು ತಮ್ಮ ಪ್ರೇಮವನ್ನು ವ್ಯಕ್ತಪಡಿಸಿದರು. ರಾಚಪ್ಪನವರಾದರೂ ಆ ಹೆಸರನ್ನು ಒಳ್ಳೇ ಭಕ್ತಿಭಾವದಿಂದಲೇ ಉಪಯೋಗಿಸುತ್ತ ಬಂದಿರುತ್ತಾರೆ.

ರಾಚಪ್ಪನವರು ಮಹಾರಾಜರ ಕೃಪೆಗೆ ಪಾತ್ರರಾಗುವ ಯೋಗವು ಬಂದುದು ಈ ರೀತಿ: ಅವರು ಸನ್ ೧೯೦೧—೨ ರಲ್ಲಿ ವಣ್ಣೂರ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಆಗ ಮಹಾರಾಜರು ತಮ್ಮ ಸಂಚಾರದಲ್ಲಿ ಅಕಸ್ಮಾತ್ತಾಗಿ ವಣ್ಣೂರಿಗೆ ದಯಮಾಡಿಸಿರು. ಅಲ್ಲಿ ಮಹಾರಾಜರು ಶ್ರೀ ಹುದ್ದಾರ ಅವರ ಮನೆಯಲ್ಲಿ ಇಳಕೊಂಡಿದ್ದರು. ರಾಚಪ್ಪನವರು ಪರಮಾರ್ಥ ಜಿಜ್ಞಾಸುಗಳಾದುದರಿಂದ ಯಾವ ಕೃತ್ರಿಮ ಭೇದಭಾವವನ್ನೂ ಗಣನೆಗೆ ತರದೆ ಮಹಾರಾಜರ ದರುಶನಕ್ಕೆ ಹೋದರು. ಮಹಾರಾಜರ

ದಿವ್ಯ ತೇಜಸ್ಸನ್ನು ನೋಡಿ ರಾಚಪ್ಪನವರ ಮನಸು ಕೂಡಲೇ ವಿಲೀನವಾಯಿತು. ಮಹಾರಾಜರು ತಮ್ಮ ಪದ್ಧತಿಗನುಸರಿಸಿ ವೇದಾಂತವನ್ನು ತೀರ ಸುಲಭಮಾಡಿ ಚಿಕ್ಕಮಕ್ಕಳಿಗೂ ಕೂಡ ತಿಳಿಯುವಂತೆ ಮಾಡುವ ಉಪದೇಶದಿಂದ ರಾಚಪ್ಪನವರ ಮನಸ್ಸಿನ ಮೇಲೆ ಬಹಳ ಪರಿಣಾಮವಾಯಿತು.

ರಾಚಪ್ಪನವರಿಗೆ ಇನ್ನೂ ಆಧ್ಯಾತ್ಮಿಕ ಗುರುಗಳು ಸಿಕ್ಕಿರಲಿಲ್ಲ. ಗುರುವಿನ ಹೊರತು ಗತಿಯಿಲ್ಲೆಂಬ ಮಾತು ಅವರಿಗೆ ಗೊತ್ತಿತ್ತು. ಆದರೂ ಅವರು ಸುಶಿಕ್ಷಿತರಾದುದರಿಂದ ಮನಸು ಹೊಯ್ದಾಡುತ್ತಿತ್ತು. ಸುಶಿಕ್ಷಿತರು ಗುರುಗಳೆಂದರೆ ಹೆದರುತ್ತಾರೆಂಬದು ವಾಚಕರಿಗೆ ಗೊತ್ತಿದೆ. ಗುರುಗಳೆಂಬೊಡನೆ ಸುಶಿಕ್ಷಿತರ ಮನಸಿನಲ್ಲಿ ಬುವಾಬಾಜಿಯ ವಿಚಾರಗಳೇ ಬರುತ್ತವೆ. ಅದರಂತೆ ರಾಚಪ್ಪನವರಾದರೂ ಗುರುಗಳಿಲ್ಲದೆ ಸೇಚಾಡುತ್ತಿದ್ದರು. ಮಹಾರಾಜರನ್ನು ನೋಡಿದ ಮೇಲೂ ಅವರನ್ನು ಗುರುಗಳನ್ನಾಗಿ ಮಾಡಿಕೊಳ್ಳಬೇಕೆಂಬ ಉತ್ಸುಕತೆಯು ಅವರಲ್ಲಿ ಉಂಟಾಗಿದ್ದಿಲ್ಲ. ಆದರೆ ಮಹಾರಾಜರ ಸಂಗದಿಂದ ಅವರ ಪರಮಾರ್ಥ ವಿಚಾರಗಳು ಬಹಳ ಜಾಗೃತವಾದವು. ಅವರು ತಮ್ಮ ಅಂತರಾತ್ಮನಿಗೆ ಸದ್ಗುರುವನ್ನು ತೋರಿಸಬೇಕೆಂದು ಒಂದೇ ಸವನೆ ಪ್ರಾರ್ಥನೆ ಮಾಡಿಕೊಳ್ಳಹತ್ತಿದರು. ಮತ್ತು ದಿನಾಲೂ ಮಲಗುವಾಗ ಬೇಗನೇ ಸದ್ಗುರುವಿನ ಗುರುತು ಮಾಡಿಕೊಡಬೇಕೆಂದು ಕುಲದೇವರಿಗೆ ಬೇಡಿಕೊಳ್ಳಹತ್ತಿದರು. ಅವರ ಈ ಸ್ಥಿತಿಯಲ್ಲಿ ಒಂದು ದಿನ ಅವರಿಗೊಂದು ದೃಷ್ಟಾಂತವಾಯಿತು. ಕನಸಿನಲ್ಲಿ ಮಹಾರಾಜರು ಸಿಂಹಾಸನಾರೂಢರಾಗಿ ಕುಳಿತಂತೆಯೂ, ರಾಚಪ್ಪನವರು ಅವರಿಗೆ ಶಿಷ್ಯಭಾವದಿಂದ ಶರಣುಹೋಗಿ, ಅವರನ್ನು ಮಲ್ಲಿಗೆ, ಸೇವಂತಿಗೆ ಮೊದಲಾದ ಸುಂದರವಾದ ಬಿಳಿಯ ಬಣ್ಣದ ಹೂವುಗಳಿಂದ ಪೂಜಿಸಿದಂತೆಯೂ ಭಾಸವಾಯಿತು. ಆಯಿತು. ಪೂರ್ವ ಪುಣ್ಯದಿಂದ ಅವರ ಸದ್ಗುರುವಿನ ಗುರುತು ಅವರಿಗಾದಂತಾಯಿತು. ಮುಂದೆ ಸನ್ ೧೯೦೩ ರಲ್ಲಿ ಮಹಾರಾಜರು ಮತ್ತೆ ವಣ್ಣೂರಿಗೆ ದಯಮಾಡಿಸಿದರು. ಆಗ ರಾಚಪ್ಪನವರು ಹಿಂದೆ ಮುಂದೆ ನೋಡದೆ ಮಹಾರಾಜರಿಗೆ ಶರಣುಹೋಗಿ ಅವರ ಶಿಷ್ಯಕೋಟಿಯಲ್ಲಿ ಪ್ರವೇಶ ದೊರಕಿಸಿಕೊಂಡರು.

ಆ ಮೇಲೆ ಗುರುಗಳಿಗೆ ಕಾಣಿಕೆಯೆಂದು ರಾಚಪ್ಪನವರು ಒಂದು ಬಹು ಮೂಲ್ಯದ ಪೀತಾಂಬರವನ್ನು ಮಹಾರಾಜರ ಮುಂದೆ ಇಟ್ಟರು. ಆದರೆ ಮಹಾರಾಜರು ಹೇಳಿ ಕೇಳಿ ಯತಿಗಳು. ಅವರು ಆ ರೇಶಿಮೆಯ ವಸ್ತ್ರವನ್ನು ತಕ್ಕೊಂಡು ಏನು ಮಾಡಬೇಕು ? ಅದನ್ನವರು ಪ್ರಸಾದವೆಂದು ತಿರುಗಿ ರಾಚಪ್ಪನವರಿಗೇ ಕೊಡಬೇಕೆಂದು ಬಯಸಿದರು. ಆದರೆ ರಾಚಪ್ಪನವರು ಅದಕ್ಕೆ ಒಪ್ಪುವಂತೆ ಕಾಣಲಿಲ್ಲ. ಅದಕ್ಕಾಗಿ ಮಹಾರಾಜರು ಒಂದು ಯಕ್ತಿಯನ್ನು ಮಾಡಿದರು. ಅಲ್ಲಿ ಆ ಕಾಲಕ್ಕೆ ಕುಳಿತ ಎಲ್ಲ ಜನರ ಹೆಸರಿನ ಒಂದೊಂದು ಚೀಟಿಯನ್ನು ಬರೆಸಿ, ಆ ಚೀಟಿಗಳ ಗುಂಪು ಹಾಕಿಸಿದರು. ಶ್ರೀ ಚಿದಂಬರನನ್ನು ಸ್ಮರಿಸಿ ಅದರೊಳಗಿಂದ ಒಂದು ಚೀಟಿಯನ್ನು ತೆಗೆಯ ತಕ್ಕದ್ದೆಂದೂ, ಅದು ಯಾರ ಹೆಸರಿನದು ಹೊರಡುವದೋ ಅವರಿಗೆ ಪೀತಾಂಬರವು ಪ್ರಸಾದ ರೂಪವಾಗಿ ಸಿಕ್ಕಬೇಕೆಂದೂ ಗೊತ್ತಾಯಿತು. ರಾಚಪ್ಪನವರೂ ಈ ಮಾತಿಗೆ ಒಪ್ಪಿದರು. ಚೀಟಿ ತೆಗೆದು ನೋಡಿದರು. ''ಬಸವದಾಸ'' ಎಂಬ ಹೆಸರಿನ ಚೀಟಿಯು ಬಂತು. ರಾಚಪ್ಪನವರ ಸಾಂಕೇತಿಕ ಹೆಸರೇ ಅದಾಮುದರಿಂದ ಪೀತಾಂಬರವನ್ನು ತಿರುಗಿ ರಾಚಪ್ಪನವರೇ ತಕ್ಕೊಳ್ಳಬೇಕಾಯಿತು. ಮಹಾರಾಜರು ಒಳ್ಳೇ ಆನಂದದಿಂದ ಅದನ್ನು ತಮ್ಮ ವರದ ಹಸ್ತಗಳಿಂದ ರಾಚಪ್ಪನವರ ತಲೆಗೆ ಸುತ್ತಿದರು. ಮತ್ತು ಅತ್ಯಂತ ಪ್ರೇಮಾಂತಃಕರಣಗಳಿಂದ ತಾಯಿಯು ಕೂಸನ್ನು ಅಪ್ಪಿಕೊಳ್ಳುವಂತೆ ಮಹಾರಾಜರು ರಾಚಪ್ಪನವರನ್ನು ಗಟ್ಟಿಯಾಗಿ ಅಪ್ಪಿಕೊಂಡರು. ಆ ಕಾಲಕ್ಕೆ ಮಹಾರಾಜರ ಬಾಯಿಂದ ''ಅಂತಃಕರಣಗಳು ಐಕ್ಯವಾದವು'' ಎಂಬ ಉದ್ಗಾರಗಳು ಹೊರಹೊರಟವು.

ಮರು ದಿವಸ ಮಹಾರಾಜರು ಒಂದು ಕಡೆ ಕುಳಿತು ಪರಮಾರ್ಥ ಬೋಧೆಯನ್ನು ಮಾಡುತ್ತಿದ್ದರು. ರಾಚಪ್ಪನವರು ಅವರ ಉಪದೇಶಾಮೃತವನ್ನು ಶ್ರವಣ ಮಾಡುತ್ತ ಕುಳಿತಿದ್ದರು. ಮಹಾರಾಜರು ಜೀವಾತ್ಮನು ಪರಮಾತ್ಮನೊಡನೆ ಒಂದಾಗುವನೆಂದರೆ ಏನು ಎಂಬ ಮಾತನ್ನು ತಿಳಿಸಿ ಹೇಳುತ್ತಿದ್ದರು. ಅವರೀ ಮಾತನ್ನು ಉಪ್ಪಿನ ಗೊಂಬೆಯು ಸಮುದ್ರಕ್ಕೆ ಹೋದ ಕತೆಯ ಉದಾಹರಣೆಯಿಂದ ವಿಸ್ತರಿಸಿ ಹೇಳುತ್ತಿದ್ದರು. ಅವರು

ಆ ಸ್ಥಿತಿಯನ್ನು ವರ್ಣಿಸುತ್ತಿರುವಾಗ, ಅವರ ವೃತ್ತಿಯು ಅಂತರ್ಮುಖವಾಗಿ ನಿಜವಾಗಿಯೂ ಆ ಸ್ಥಿತಿಯಲ್ಲಿ ಹೋಗಿ ನಿಂತುಕೊಂಡಿತು. ಆಗ ಅವರ ಮೈಮೇಲೆ ಎಚ್ಚರಿಕೆಯುಳಿಯಲಿಲ್ಲ, ಅವರು ಭರ್ರನೇ ಎದ್ದು ನಡೆದರು. ರಾಚಪ್ಪ ಮೊದಲಾದವರು ಬೆನ್ನುಹತ್ತಿದರು. ದಾರಿಯಲ್ಲಿ ಶ್ರೀಗಳವರ ಮೈಮೇಲೆ ಒಂದು ನಾಯಿ ಬಂತು. ಮಹಾರಾಜರು ಅದಕ್ಕೂ ಬ್ರಹ್ಮಭಾವದಿಂದ ನಮಸ್ಕಾರ ಮಾಡಿದರು. ನಾಯಿಯು ಸುಮ್ಮನಾಗಿ ಓಡಿಹೋಯಿತು. ಆಮೇಲೊಂದು ಬೆದರಿದ ಎಮ್ಮೆಯು ಮಹಾರಾಜರನ್ನು ಒಗೆಯಬೇಕೆಂದೇ ಬರುತ್ತಿರುವಂತೆ ಕಾಣಿತು. ಮಹಾರಾಜರು ಅದಕ್ಕೂ ಬ್ರಹ್ಮಭಾವದಿಂದ ನಮಸ್ಕಾರ ಮಾಡಿದರು. ಅದೂ ಸುಮ್ಮನಾಗಿಹೋಯಿತು. ಮಹಾರಾಜರು ಊರ ಆಗಸಿಯಲ್ಲಿ ಮೈಮೇಲಿನ ಲಂಗೋಟಿಯನ್ನು ಕೂಡ ತೆಗೆದು ಒಬ್ಬನ ಕೈಗೆ ಬಿಸಾಟಿದರು. ಕೊರಳೊಳಗಿನ ರುದ್ರಾಕ್ಷಿಯ ಮಾಲೆಯನ್ನು ತೆಗೆದು ರಾಚಪ್ಪನವರ ಕೊರಳಲ್ಲಿ ಹಾಕಿದರು. ಹೀಗೆ ಮಹಾರಾಜರು ದಿಗಂಬರರಾಗಿ ಸಂಚಾರ ಮಾಡಹತ್ತಿದರು. ಕೊನೆಗೆ ಊರ ಹಳ್ಳದಲ್ಲಿ ಒಂದು ಗಿಡದ ಕೆಳಗೆ ಕುಳಿತರು. ಆಗ ಅವರ ವೃತ್ತಿಯು ತುಸು ಶಾಂತವಾದಂತೆ ಕಂಡಿತು. ''ತಿರುಗಿ ಊರ ಕಡೆಗೆ ಹೋಗಬೇಕ್ಕೋ'' ಅಥವಾ ''ಈಗಿದ್ದ ಸ್ಥಿತಿಯಲ್ಲೆಯೇ ಉಳಿದು ದಾರಿ ಸಿಕ್ಕ ಕಡೆಗೆ ಹೋಗಬೇಕೋ" ಎಂಬ ಎರಡು ಚೀಟಿಗಳನ್ನು ಬರಿಸಿ, ಚಿದಂಬರನಿಗೆ ಪ್ರಾರ್ಥಿಸಿ, ಚೀಟಿ ತೆಗೆಸಿದರು. ಅವರೊಳಗೆ ತಿರುಗಿ ಊರ ಕಡೆಗೆ ಹೋಗಬೇಕೆಂಬ ಆಜ್ಞೆ ಬಂತು. ಆಗ ಮಹಾರಾಜರು ಒಂದು ದೋತರವನ್ನು ಹರಿದು, ಅದನ್ನು ಕಪನಿಯಂತೆ ಮಾಡಿ ಕೊರಳಿಗೆ ಹಾಕಿಕೊಂಡು, ತಿರುಗಿ ಊರಿಗೆ ಬಂದರು.

ರಾಚಪ್ಪನವರೊಡನೆ ಮಹಾರಾಜರು ನಾನಾ ರೀತಿಯಿಂದ ಲೀಲೆಯಾಡಿದರು. ರಾಚಪ್ಪನವರಿಗೆ ಅವರು ಅನೇಕ ಬಗೆಯಿಂದ ಶಿಕ್ಷಣ ಕೊಟ್ಟರು. ಅವೆಲ್ಲ ಸಂಗತಿಗಳನ್ನಿಲ್ಲಿ ಹೇಳುವದು ಸಾಧ್ಯವಿಲ್ಲ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿರುತ್ತೇವೆ.

ಕಡುತರವಾದ ಬ್ರಹ್ಮಚರ್ಯವನ್ನು ಪಾಲಿಸಬೇಕೆಂದು ರಾಚಪ್ಪನವರ ನಿಶ್ಚಯವಿತ್ತು. ಆದರೆ ಮಹಾಭಾರತಕಾರರು ಹೇಳಿದಂತೆ

'ಇಂದ್ರಿಯಗಳು ಬಹಳ ಬಲಿಷ್ಠವಾಗಿವೆ. ಅವು ದೊಡ್ಡ ದೊಡ್ಡ ವಿದ್ವಾಂಸರನ್ನು ಮಣ್ಣು ಮುಕ್ಕಿಸುತ್ತವೆ.'' ಆದರಂತೆ ರಾಚಪ್ಪನವರ ಮನಸು ಕಾಮ ವಿಕಾರಗಳಿಗೆ ವಶವಾಗಿ ಸ್ತ್ರೀಶೃಂಗಾರದ ವಿಚಾರಗಳಲ್ಲಿ ಸಿಕ್ಕು ಒದ್ದಾಡ-ಹತ್ತಿತು. ರಾಚಪ್ಪನವರಿಗೆ ನಿಗ್ರಹ ಮಾಡುವದು ತೀರ ಅಶಕ್ಯವಾಗಿ ಇಲ್ಲದ ಅಶ್ಲೀಲ ವಿಚಾರಗಳಿಗೆ ಅವರು ಆಶ್ರಯ ಕೊಟ್ಟರು. ತುಸು-ಹೊತ್ತಿನಲ್ಲಿ ಅವರಿಗೆ ಮಹಾರಾಜರ ಭೆಟ್ಟಿಯಾಗಿ ಮಹಾರಾಜರು ಅವರಿಗೆ ''ಸೋತೆಯಾ ?'' ಎಂದು ಪ್ರಶ್ನೆ ಮಾಡಿದರು. ರಾಚಪ್ಪನವರ ಹೃದಯವು ದಸ್ಸೆಂದಿತು. ಮತ್ತು ಮೋರೆದುು ನಾಚಿಕೆಯಿಂದ ಕಪ್ಪಿಟ್ಟಿತು.

ರಾಚಪ್ಪನವರು ಕಣಬರಗೀ ಶಾಲೆಗೆ ವರ್ಗವಾಗಿ ಬಂದಿದ್ದರು. ಮಹಾರಾಜರ ಮುಕ್ಕಾಮು ಕಣಬರಗಿಗೆ ಸಮೀಪವಾದ ಅಷ್ಟಗೀ ಗ್ರಾಮ ದೊಳಗಿತ್ತು. ಮಹಾರಾಜರು ಅಷ್ಟಗಿಯಿಂದ ಒಮ್ಮೆ ಕಣಬರಗಿಗೆ ಬಂದರು. ಅಲ್ಲಿ ಮಹಾರಾಜರು ಅವರ ಮನೆ ಇವರ ಮನೆ ಪ್ರವೇಶ ಮಾಡುತ್ತ ಮಾಡುತ್ತ, ರಾಚಪ್ಪನವರಿಗೆ ಅಕಸ್ಮಾತ್ತಾಗಿ ಕೇಳಿದರು: ''ದಾಸ, ನಿನ್ನ ಮನೆ'' ಎಂದು. ಅಲ್ಲಿಯ ವರೆಗೆ ಮಹಾರಾಜರು ರಾಚಪ್ಪನವರ ಮನೆಗೆ ಎಂದೂ ಬಂದಿದ್ದಿಲ್ಲ. ಈ ಪ್ರಶ್ನೆಯಿಂದ ರಾಚಪ್ಪನವರಿಗೆ ಬಲು ಸಂತೋಷ ವಾಯಿತು. ಪ್ರೀತಿಯ ಗೆಳೆಯನ ಕೈ ಹಿಡಿದುಕೊಂಡು ಹೋಗುವಂತೆ, ಮಹಾರಾಜರು ರಾಚಪ್ಪನವರ ಕೈಹಿಡಿದುಕೊಂಡು ಅವರ ಮನೆಗೆ ಹೋದರು. ಶಿಷ್ಯಸಮೇತರಾಗಿ ಮಹಾರಾಜರು ರಾಚಪ್ಪನವರ ಮನೆಯಲ್ಲಿ ಸ್ವಸ್ಥವಾಗಿ ಕುಳಿತರು. ಕೊನೆಗೆ ಮಹಾರಾಜರು ಮುಗುಳುನಗೆ ನಗುತ್ತ ''ಹಾ, ಇಂದು ಊಟ ದಾಸನಲ್ಲಿಯೇ'' ಎಂದು ಅಪ್ಪಣೆ ಕೊಡಿಸಿದರು. ಅವರ ಮಾತುಗಳಿಂದ ಎಲ್ಲರಿಗೂ ಆಶ್ಚರ್ಯವಾಯಿತು. ದೊಡ್ಡವರ ಆಚರ-ಣೆಯನ್ನರಿತುಕೊಳ್ಳುವ ಯೋಗ್ಯತೆಯು ಸಾಮಾನ್ಯರಿಗಿರುವದಿಲ್ಲ. ಮಹಾ-ರಾಜರು ನಿಜವಾಗಿ ತ್ರಿಗುಣಾತೀತರು. ಅವರಿಗೆಲ್ಲಿಯ ಜಾತಿಗೋತಿಗಳು? ಆದರೆ ಪರಿವಾರದವರು ನಡಿಸಿದ ಗೊಂದಲವನ್ನು ನೋಡಿ ನಕ್ಕು ಒಂದು ಸೇರಿನಷ್ಟು ಅಕ್ಕಿಯನ್ನು ತಕ್ಕೊಂಡು ಅಲ್ಲಿಂದ ಹೊರಬಿದ್ದರು.

ಮತ್ತೊಂದು ಸಲ ರಾಚಪ್ಪನವರು ಕಣಬರಗಿಯ ಶಾಲೆಯಲ್ಲಿ ಹುಡುಗರಿಗೆ ಪಾಠ ಹೇಳಿ ಕೊಡುತ್ತಿರುವಾಗಲೇ, ಮಹಾರಾಜರು ಶಾಲೆಯೊಳಗೆ ಹೋದರು. ಮತ್ತು ಹುಡುಗರನ್ನು ಕುರಿತು ಕೇಳಿದರು:— ''ನಿಮಗೆ ಇವರು ಏನು ಕಲಿಸಿರುತ್ತಾರೆ?'' ಹುಡುಗರು ''ಈಶ ಪ್ರಾರ್ಥನೆಯನ್ನು'' ಎಂದು ಉತ್ತರ ಕೊಟ್ಟರು. ಆಗ ಮಹಾರಾಜರು ಮತ್ತೆ ಹೇಳಿದರು:— ''ಬಾಲಕರೇ, ನಿಮಗೊಂದು ಉಪದೇಶದ ಮಾತು ಹೇಳುವೆ, ಕೇಳುವಿರಾ? ಬಹಳಿಲ್ಲ. ಒಂದೇ ಮಾತು. ಧ್ಯಾನದಲ್ಲಿಡಿರಿ. ಆದರಂತೆ ನಡೆಯುವಿರಾ? ಹಾಗಾದರೆ ಕೇಳಿರಿ:— 'ಸುಳ್ಳು ಆಡಬೇಡಿರಿ.' ಒಳ್ಳೇದು. ಇವರಿಗೆ ಚಿದಂಬರನ ಪ್ರಸಾದ ಕೊಡುವ. ದಾಸ, ಇವರಿಗೆ ಮಿಠಾಯಿ ತಂದುಕೊಡಿರಿ.'' ಹೀಗೆ ಹೇಳಿ ಮಹಾರಾಜರು ರಾಚಪ್ಪನವರ ಕೈಯಲ್ಲಿ ಒಂದು ರೂಪಾಯಿ ಕೊಟ್ಟರು. ಹೊರಗೆ ಮಹಾರಾಜರು ರಾಚಪ್ಪನವರಿಗೆ ದಾಸನೆಂದು ಏಕವಚನದಿಂದ ಕರೆಯುತ್ತಿದ್ದರೂ, ಶಾಲೆಯಲ್ಲಿ ವಿದ್ಯಾರ್ಥಿಗಳ ಎದುರಿಗೆ ಅವರಿಗೆ ಬಹುವಚನವನ್ನು ಪಯೋಗಿಸಿದರೆಂಬದು ಚಾಣಾಕ್ಷರಾದ ವಾಚಕರಿಗೆ ಹೊಳೆದಿರಲಿಕ್ಕೆ ಸಾಕು.

ಒಮ್ಮೆ ಗುರ್ಲಹೊಸೂರಲ್ಲಿ ಉತ್ಸವವು ಕೊನೆಗಂಡಾಗ, ಮಹಾರಾಜರು ಉಗ್ರಾಣದೊಳಗೆ ಉಳಿದ ಸಾಮಾನುಗಳನ್ನು ಒಂದೊಂದಾಗಿ ಶಿಷ್ಯರಿಗೆ ಪ್ರಸಾದ ಕೊಡುತ್ತಿದ್ದರು. ಒಬ್ಬರಿಗೆ ಬೆಲ್ಲದ ಪೆಂಟಿ, ಒಬ್ಬರಿಗೆ ತುಸು ಅಕ್ಕಿ, ಮತ್ತೊಬ್ಬರಿಗೆ ಕಾರದ ಪುಡಿ ಹೀಗೆ ಬೇರೆ ಬೇರೆ ಜನರಿಗೆ ಬೇರೆ ಬೇರೆ ಪದಾರ್ಥಗಳು ದೊರೆತವು. ರಾಚಪ್ಪನವರ ತಾಯಿಯವರೂ ಆ ಕಾಲಕ್ಕೆ ಉಪಸ್ಥಿತರಾಗಿದ್ದರು. ಅವರಿಗೆ ಸಹ ಮಹಾರಾಜರು ಕುಪ್ಪಸದ ಕಣವನ್ನು ಕೊಟ್ಟರು. ಈ ಸಂದರ್ಭದಲ್ಲಿ ತಮಗೂ ಏನಾದರೂ ಪ್ರಸಾದ ವಸ್ತುವು ಸಿಕ್ಕಬಹುದೆಂದು ರಾಚಪ್ಪನವರು ದಾರೀ ಕಾಯುತ್ತಿದ್ದರು. ಆದರೆ ಪ್ರಸಾದ ವಸ್ತುಗಳ ಹಂಚುವಿಕೆಯು ಮುಗಿಯಿತು. ರಾಚಪ್ಪನವರಿಗೆ ಏನೂ ಸಿಕ್ಕಲಿಲ್ಲ. ಇದರಿಂದ ರಾಚಪ್ಪನವರಿಗೆ ಬಹಳ ಕೆಡಕೆನಿಸಿತು. ''ಪ್ರಸಾದ ಹಂಚುವಿಕೆಯೊಳಗೆ ಎಲ್ಲರಿಗೂ ಪಾಲು ಸಿಕ್ಕಿತು. ನನಗೆ ಮಾತ್ರ ಏನೂ ಪಾಲು ಸಿಕ್ಕಲಿಲ್ಲವಲ್ಲ'' ಎಂದು ಅವರು ಮನಸಿನಲ್ಲಿ

ಚಡಪಡಿಸಹತ್ತಿದರು. ಆಗ ಒಮ್ಮಿಂಒಮ್ಮೆಲೇ ''ನನ್ನ ಪಾಲುಗಾರ ನೀನೇ'' ಎಂಬ ಮಹಾರಾಜರ ಶಬ್ದಗಳು ರಾಚಪ್ಪನವರ ಕಿವಿಯ ಮೇಲೆ ಬಿದ್ದವು! ರಾಚಪ್ಪನವರು ಗಡಬಡಿಸಿಕೊಂಡು ನೋಡುತ್ತಾರೆ! ಮಹಾರಾಜರು ಎಲ್ಲಿಯೂ ಕಾಣಲಿಲ್ಲ.

ರಾಚಪ್ಪನವರಿಗೆ ಅವರ ಕೆಲಸದ ಮೂಲಕ ಮೇಲಿಂದ ಮೇಲೆ ಶ್ರೀ ಸನ್ನಿಧಿಗೆ ಬರುವದಾಗುತ್ತಿರಲಿಲ್ಲ. ಅದಕ್ಕಾಗಿ ಮಹಾರಾಜರು ರಾಚಪ್ಪನವರ ಹೆಸರಿನಿಂದ ಆಗಾಗ್ಗೆ ಪತ್ರಗಳನ್ನು ಬರೆಸುತ್ತಿದ್ದರು. ಪತ್ರದಲ್ಲಿ ಎಲ್ಲಕ್ಕೂ ಮೇಲೆ ರಾಜಾರಾಮನ ಒಂದೆರಡು ಅಭಂಗ ವಾಕ್ಯಗಳನ್ನು ಬರೆದು ಪತ್ರದ ಉಪದೇಶವು ಸುರುವಾಗುತ್ತಿತ್ತು. ರಾಚಪ್ಪನವರಿಗೆ ಯಾವ ಯಾವ ಕಾಲಕ್ಕೆ ಈ ಪತ್ರಗಳು ಕೈಸೇರುತ್ತಿದ್ದವೋ, ಆಯಾ ಕಾಲಕ್ಕೆ ಅವರ ಮನಃಸ್ಥಿತಿಗೆ ಅನುಗುಣವಾಗಿ ಆ ಪತ್ರಗಳೊಳಗಿನ ಉಪದೇಶವಿರುತ್ತಿತ್ತು. ಇದನ್ನು ನೋಡಿ ರಾಚಪ್ಪನವರಿಗೆ ಮಹಾರಾಜರ ಅಂತಃಸಾಕ್ಷಿತ್ವದ ಬಗ್ಗೆ ಕೌತುಕವೆನಿಸುತ್ತಿತ್ತು.

ಜಯಂತಿ, ಏಕಾದಶಿ ಮೊದಲಾದ ದಿನಗಳಲ್ಲಿ ಬ್ರಾಹ್ಮಣ ಶಿಷ್ಯ ಜನರು ಉಪವಾಸ ಮಾಡುತ್ತಿದ್ದರು. ಆದರೆ ಆ ದಿವಸ ಸಹ ಮಹಾರಾಜರ ಅಪ್ಪಣೆಯಿಂದ ರಾಚಪ್ಪನವರಿಗೆ ಅಕ್ಕಿ ಬೇಳೆ ಮೊದಲಾದ ಊಟದ ಪದಾರ್ಥಗಳು ಕೊಡಲ್ಪಡುತ್ತಿದ್ದವು. ''ಹೀಗೆ ಮಾಡುವದು ವಿರುದ್ಧವಾಗುವದಿಲ್ಲವೆ?'' ಎಂದು ಒಂದು ದಿನ ರಾಚಪ್ಪನವರು ಮಹಾರಾಜರಿಗೇ ಪ್ರಶ್ನೆ ಮಾಡಿದರು. ಅದಕ್ಕೆ ಮಹಾರಾಜರು:— ''ಅವರು ಉಪವಾಸ ಮಾಡಿದರೆ ಚಿದಂಬರನು ಸಂತುಷ್ಟನಾಗುತ್ತಾನೆ. ಆದರೆ ನೀನು ಊಟ ಮಾಡಿದರೇ ಅವನು ಸಂತುಷ್ಟನಾಗುತ್ತಾನೆ. ಯಾರಿಗೆ ಏನು ಆಜ್ಞೆಯಿದೆಯೋ ಅವರು ಅದನ್ನು ಪಾಲಿಸಬೇಕು'' ಎಂದು ಉತ್ತರ ಕೊಟ್ಟರು.

ಮಹಾರಾಜರ ಉಪದೇಶದ ಸಾರವನ್ನೆಲ್ಲ ರಾಚಪ್ಪನವರು ಆರು ಸೂತ್ರಗಳಲ್ಲಿ ಸಂಗ್ರಹಿಸಿ ನಮ್ಮ ಕಡೆಗೆ ಕಳಿಸಿಕೊಟ್ಟಿದ್ದಾರೆ. ಅವುಗಳ ವಿವರಣೆಯೆಲ್ಲ ಈ ಮೊದಲೇ ವಿಸ್ತಾರವಾಗಿ ಬಂದಿದೆ. ಆದರೂ ಇಲ್ಲಿ ಸಂಗ್ರಹವಾಗಿ ಅವುಗಳನ್ನು ಕೊಟ್ಟರುತ್ತೇವೆ:

೧ ನಮ್ರತೆ, ಸ್ವಚ್ಛತೆ, ವ್ಯವಸ್ಥೆ.

೨ ನಾಮಜಪ, ನಾಮಭಜನೆ ಮತ್ತು ನಾಮ ಸಂಕೀರ್ತನೆ.

೩ ಶ್ರೀ ಚಿದಂಬರನ ಚರಣದಲ್ಲಿ ಲಕ್ಷ್ಯವಿಟ್ಟು ಪ್ರಾರಬ್ಧಭೋಗವನ್ನು ಬಲು ಧೈರ್ಯದಿಂದ ಅನುಭವಿಸುತ್ತ ಸದಾ ಆನಂದದಲ್ಲಿರಬೇಕು.

೪ ದೇಹನಿರಸನ, ಆತ್ಮಾನುಸಂಧಾನ.

೫ ನಾನು ಇಲ್ಲಿ ಯಾರೂ ಅಲ್ಲ; ನನ್ನದೇನೂ ಇಲ್ಲಿ ಇಲ್ಲ.

೬ ''ಯಾರೂ ಅಲ್ಲ; ಹಾಗಾದರೆ ನಾನು ಯಾರು ?'' ಈ ಪ್ರಶ್ನೆಯ ಉತ್ತರವನ್ನು ಮಹಾರಾಜರು ರಾಚಪ್ಪನವರ ಕಿವಿಯೊಳಗೆ ಏಕಾಂತದಲ್ಲಿ ಹೇಳಿದರಂತೆ. ಆದರೆ ಆ ಉತ್ತರವನ್ನು ರಾಚಪ್ಪನವರು ಪ್ರಕಟಗೊಳಿಸಲಿಕ್ಕೆ ಸಿದ್ಧರಿಲ್ಲ. ಅದೇನಿರಬಹುದೆಂಬದನ್ನು ಊಹಿಸುವ ಕೆಲಸವನ್ನು ನಾವು ವಾಚಕರಿಗೇ ಒಪ್ಪಿಸಿ ಬಿಡುತ್ತೇವೆ.

ಆ ಮೇಲೆ ಉಲ್ಲೇಖ ಮಾಡತಕ್ಕ ಹೆಸರೆಂದರೆ ಶ್ರೀ ದತ್ತೋ ದೇವಜ ಕುಲಕರ್ಣಿ, ಹುಕ್ಕೇರಿ ಇವರದು. ಮಹಾರಾಜರು ಬೆಳಗಾಂವಿಯಲ್ಲಿ ಇನ್ನೂ ಶಿಕ್ಷಕರಾಗಿರುವಾಗ, ದತ್ತೋಪಂತರು ಮಹಾರಾಜರ ಮೇಲ್ವಿಚಾರಣೆಗೆ ಒಳಗಾದರು. ದತ್ತೋಪಂತರ ತಂದೆಯವರು ದತ್ತೋಪಂತರನ್ನು ಶಿಷ್ಯಭಾವದಿಂದ ಮಹಾರಾಜರಿಗೆ ಒಪ್ಪಿಸಿ, ''ಇವನು ನನ್ನ ಮಗನು ಆದರೂ ನಿಮಗೆ ಇವನನ್ನು ಒಪ್ಪಿಸಿದ್ದೇನೆ. ಇವನ ಮುಂದಿನ ಕಲ್ಯಾಣವೆಲ್ಲ ನಿಮ್ಮ ಕಡೆಗೆ'' ಎಂದು ಪ್ರಾರ್ಥಿಸಿಕೊಂಡರು. ಮಹಾರಾಜರು ಅದಕ್ಕೆ ಕೂಡಲೇ ಸಮ್ಮತಿಸಿ ''ಆತನ ವಿಷಯವಾಗಿ ನೀವು ಇನ್ನು ಮುಂದೆ ಚಿಂತ ಮಾಡುವ ಕಾರಣವಿಲ್ಲ'' ಎಂದು ಆಶ್ವಾಸನ ಕೊಟ್ಟರು.

ಮುಂದೆ ದತ್ತೋಪಂತರ ದುರ್ದೈವದಿಂದ ಹೆಚ್ಚಾಗಿ ಶಾಲೆ ಕಲಿಯುವ ದಾಗಲಿಲ್ಲ. ಆದರೆ ಮಹಾರಾಜರು ತಾವು ಕೊಟ್ಟ ವಚನವನ್ನು ಎಂದೂ ಮರೆಯಲಿಲ್ಲ. ಅವರು ಆಶ್ರಮ ತಕ್ಕೊಂಡ ಮೇಲೆ ಸಹ ಹುಕ್ಕೇರಿಗೆ ಮತ್ತೆ ಮತ್ತೆ ಹೋಗಿ ದತ್ತೋಪಂತರನ್ನು ಸನ್ಮಾರ್ಗಕ್ಕೆ ಹಚ್ಚಿದರು. ಮಹಾರಾಜರು ಅವರ ಮೇಲೆ ಕೃಪೆಮಾಡಿ, ಮಂತ್ರೋಪದೇಶ ಮಾಡಿ ಕೃತಾರ್ಥರನ್ನಾಗಿ ಮಾಡಿದರು. ಮಹಾರಾಜರು ತಮ್ಮ ಸ್ವಂತ ಕೈಯಿಂದ ದತ್ತನ

ಪಾದುಕೆಗಳನ್ನು ಪೂಜೆಗಾಗಿ ಪಂತರಿಗೆ ಕೊಟ್ಟಿದ್ದರು. ಆದರೆ ಪಂತರು ಅವುಗಳನ್ನು ಹೇಗೋ ಕಳೆದುಕೊಂಡು ಬಿಟ್ಟರು. ಮಹಾರಾಜರು ಎರಡನೆಯ ಸಲ ಒಂದು ಚಿಕ್ಕ ಈಶ್ವರ ಲಿಂಗವನ್ನೂ ಉಂಗುರವನ್ನೂ ಕೊಟ್ಟರು. ಪಂತರು ಅವುಗಳನ್ನೂ ಕಳಕೊಂಡು, ಅಳುಮೋರೆಯಿಂದ ಮತ್ತೆ ಮಹಾರಾಜರ ಕಡೆಗೆ ಬಂದರು. ಮಹಾರಾಜರು ಕರುಣೆಯಿಂದ ಮತ್ತೆ ಬೆಳ್ಳಿಯ ಪಾದುಕೆಗಳನ್ನು ಕೊಟ್ಟು, ಅವುಗಳನ್ನು ದಿನಾಲೂ ಸಂಗಡ ತಕ್ಕೊಂಡು ಪೂಜಿಸದೇ, ಮನೆಯಲ್ಲಿಯೇ ಇಟ್ಟು ಪೂಜಿಸಬೇಕೆಂದು ಹೇಳಿದರು.

ಮಹಾರಾಜರು ಸಮಾಧಿಸ್ಥರಾದ ಮೇಲೆ ಸಹ ಎರಡುಸಾರೆ ಪಂತರಿಗೆ ಸ್ವಪ್ನದೃಷ್ಟಾಂತಕೊಟ್ಟು, ಅವರ ಪರಮಾರ್ಥ ಸಾಧನೆಯ ಬಗ್ಗೆ ಸಲಹೆಗಳನ್ನು ಕೊಟ್ಟರು. ಮೊದಲನೆಯ ಸಾರೆ ಪಂತರು ಪಂಢರಪುರಕ್ಕೆ ಹೋಗಬೇಕೆಂದು ಆಜ್ಞೆಯಾಯಿತು. ಅದರಂತೆ ಪಂತರು ಅಲ್ಲಿಗೆ ಹೋದಾಗ ವಿಠ್ಠಲನ ಸ್ಥಳದಲ್ಲಿ ಅವರಿಗೆ ವಿಠ್ಠಲನ ಬದಲಾಗಿ ಮಹಾರಾಜರ ಸಗುಣ ಮೂರ್ತಿಯ ದರುಶನವಾಯಿತು. ಎರಡನೆಯ ಸಲ ಅವರಿಗೆ ಗಾಣಗಾಪುರಕ್ಕೆ ಹೋಗಬೇಕೆಂದು ಆಜ್ಞೆಯಾಯಿತು. ಆದರೆ ಅವರಿಗೆ ಇನ್ನೂ ವರೆಗೆ ಗಾಣಗಾಪುರಕ್ಕೆ ಹೋಗುವದಾಗಿಲ್ಲ. ಅವರು ಮಹಾರಾಜರ ಮೇಲೆ ಒಳ್ಳೇ ನಿಷ್ಠೆಯುಳ್ಳವರಾಗಿದ್ದು, ಶ್ರೀ ಕೈವಲ್ಯಾಶ್ರಮ ಸ್ವಾಮೀ ಸಂಸ್ಥೆಯ ವಿಶ್ವಸ್ತರಲ್ಲಿ ಒಬ್ಬರಾಗಿದ್ದಾರೆ.

ಮಹಾರಾಜರ ಪ್ರಮುಖ ಶಿಷ್ಯರೊಳಗೆ ಅಂಕಲಿಗಿಯ ದೇಶಪಾಂಡೆ ಬಾಪೂರಾಯರೂ ಒಬ್ಬರು. ಶಕೆ ೧೮೬೪ ರಲ್ಲಿ ಅವರಿಗೆ ಮೊದಲನೆಯ ಸಲ ಮಹಾರಾಜರ ಭೆಟ್ಟಿಯಾಯಿತು. ಅಂದಿನಿಂದ ಅವರ ಚಿತ್ತವು ಮಹಾರಾಜರ ಚರಣಗಳಲ್ಲಿ ರಮಿಸಿ ಕೊನೆಯ ವರೆಗೂ ಅಲ್ಲಿಯೇ ಸ್ಥಿರವಾಗಿ ಉಳಿಯಿತು. ಅವರಿಗೆ ಪುತ್ರ ಸಂತಾನವಿರಲಿಲ್ಲ. ಬರೇ ೩—೪ ಜನ ಹೆಣ್ಣು ಮಕ್ಕಳಿದ್ದರು. ಅದಕ್ಕಾಗಿ ಬಾಪೂರಾಯರೊಮ್ಮೆ ಸಣ್ಣ ಮೋರೆ ಮಾಡಿದಾಗ ಮಹಾರಾಜರು "ನೀವು ಸಣ್ಣ ಮೋರೆ ಮಾಡುವ ಕಾರಣವಿಲ್ಲ. ನಿಮಗೆ ಪುತ್ರಲಾಭವಾಗುವದು. ನೀವು ಚಿದಂಬರನ ನಾಮಸ್ಮರಣೆಯನ್ನೂ ಗುರುಚರಿತ್ರ ಪಾರಾಯಣವನ್ನೂ ದಿನಾಲೂ ತಪ್ಪದೇ ಮಾಡುತ್ತ

ಹೋಗಿರಿ" ಎಂದು ಆಜ್ಞಾಪಿಸಿದರು. ಅದರಂತೆ ಮಾಡಲು ಬಾಪೂ ರಾಯರಿಗೆ ಇಚ್ಛಿತ ಸಂತತಿಯಾಗಿ ಅವರ ಮನಸಿಗೆ ಸಂತೋಷವಾಯಿತು.

ಮಹಾರಾಜರನ್ನೇ ಸಂಪೂರ್ಣವಾಗಿ ನಂಬಿ ಅವರಿಗೆ ಚಿದಂಬರೋತ್ಸವದಲ್ಲಿ ಎಲ್ಲ ಬಗೆಯಿಂದಲೂ ಸಹಾಯಮಾಡಿದವರಲ್ಲಿ ದತ್ತಾತ್ರೇಯ ಬಾಳಾಜಿ ಕರೀಕಟ್ಟಿ ಎಂಬವರ ಹೆಸರನ್ನು ಹೇಳಿಕೊಡುವದು ಅಗತ್ಯದ್ದಾಗಿದೆ. ಅವರೊಮ್ಮೆ ರೋಗದಿಂದ ಬಹಳ ಅಶಕ್ತರಾಗಿ ಜೀವದ ಆಸೆಯನ್ನು ಕೂಡ ಬಿಟ್ಟವರಾಗಿದ್ದರು. ಅನೇಕ ನಾಮಾಂಕಿತ ಡಾಕ್ಟರರೂ ವೈದ್ಯರೂ ಅವರಿಗೆ ಔಷಧ ಕೊಟ್ಟು ಕೈಯೂರಿದ್ದರು ಆಗ ಅವರಿಗೆ ಯಾರೋ ಒಬ್ಬರು "ನೀವು ಶ್ರೀ ಕೈವಲ್ಯಾಶ್ರಮ ಸ್ವಾಮೀ ಮಹಾರಾಜರಿಗೆ ಶರಣು ಹೋದರೆ ನಿಮ್ಮ ರೋಗವು ಖಂಡಿತವಾಗಿ ನೆಟ್ಟಗಾಗುವದು" ಎಂದು ಸೂಚನೆಕೊಟ್ಟರು. ಎಲ್ಲ ಉಪಾಯಗಳನ್ನೂ ಮಾಡಿ ಬೇಸತ್ತಿದ್ದ ದತ್ತಪ್ಪನವರು ಆ ಸೂಚನೆಯನ್ನು ಸ್ವೀಕರಿಸಿ ಗುರ್ಲಹೊಸೂರಿಗೆ ಬಂದು ಮಹಾರಾಜರ ಚರಣಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಅಳಹತ್ತಿದರು. ಆಗ ಮಹಾರಾಜರು "ಅಪ್ಪಾ, ನಾನೂ ನಿನ್ನಂತೆಯೇ ಒಬ್ಬ ಮನುಷ್ಯನು. ನನ್ನ ಕೈಯಿಂದ ಏನಾದೀತು ? ಆದರೆ ಚಿದಂಬರನು ಸಮರ್ಥನಿದ್ದಾನೆ. ನೀನು ದೃಢ ಭಾವನೆಯಿಂದ ಅವನನ್ನು ಭಜಿಸಿದರೆ ಗುಣಹೊಂದಬಹುದು. ಅದರಲ್ಲಿ ಅಶಕ್ಯವಾದುದೇನೂ ಇಲ್ಲ" ಎಂದು ಹೇಳಿದರು. ದತ್ತಪ್ಪನವರು ಮಹಾರಾಜರ ಹೇಳಿಕೆಯಂತೆ ಚಿದಂಬರನ ಗುಡಿಯಲ್ಲಿಯೇ ಉಳಕೊಂಡು ದೇವರ ಸೇವೆ ಮಾಡಿ, ರೋಗದಿಂದ ಮುಕ್ತರಾದರು. ಇದರಿಂದ ಅವರ ಮನಸು ಸ್ವಾಮೀ ಮಹಾರಾಜರ ಕಡೆಗೆ ಹೊರಳಿದ್ದು ಸಹಜವೇ. ಅವರು ಆಮರಣ ಗುರುಮಹಾರಾಜರ ಸೇವೆಯನ್ನು ಮಾಡಿದರು.

ಇದೇ ರೀತಿಯಿಂದ ಗುರ್ಲಹೊಸೂರ ಶ್ರೀ ಶಂಕರ ಪಾಂಡುರಂಗ ಬೆಹರೆ, ಅಷ್ಟಗಿಯ ಶ್ರೀ ರಾಮಭಟ್ಟ ಜೋಶಿ (ಇವರನ್ನು ಮಹಾರಾಜರು ಭೋಳಾರಾಮ ಎಂದು ಕರೆಯುತ್ತಿದ್ದರು.) ಶ್ರೀ ಗೋವಿಂದ ದತ್ತಾತ್ರೇಯ ಕರೀಕಟ್ಟಿ, ಶ್ರೀ ಚಿಂತಾಮಣ ತೀರ್ಥೋ ನವಲಗುಂದ, ಅನಂತರಾವ ದೊಡ್ಡವಾಡ, ಶ್ರೀ ರಾಮಚಂದ್ರ ಗಂಡೋ ಜೋಶಿ, (ಇವರನ್ನು ಮಹಾರಾಜರು

ಮಾಣಿಕ ಎಂದು ಕರೆಯುತ್ತಿದ್ದರು.) ಶ್ರೀ ಶಂಭೂಭಟ್ಟ ಗ್ರಾಮೋಪಾಧ್ಯೆ, ಅಷ್ಟಗಿಯ ಇನಾಮದಾರರಾದ ಶ್ರೀ ಕೇಶವರಾಯರ ಪತ್ನಿಯವರು ಇವರೇ ಮೊದಲಾದವರು ಬೇರೆ ಬೇರೆ ಪ್ರಸಂಗಗಳಲ್ಲಿ ರೋಗಕ್ಕೊಳಗಾಗಿ ಸಾವಿನ ಬಾಯಿಯೊಳಗೆ ಸಿಕ್ಕವರು, ಮಹಾರಾಜರ ಕೃಪಾಕಟಾಕ್ಷದಿಂದ ಗುಣ-ಹೊಂದಿದರು. ಅವರೆಲ್ಲರೂ ಮಹಾರಾಜರ ಶಿಷ್ಯರಾಗಿ ಅವರ ಸೇವೆ ಮಾಡಿದ್ದು ಮತ್ತು ಮಾಡುತ್ತಿರುವದು ಸಹಜವೇ ಇದೆ.

ಮಹಾರಾಜರ ಭಕ್ತವರ್ಗದೊಳಗೆ ಸೇರಿ, ಮಹಾರಾಜರು ಕೈಕೊಂಡ ಚಿದಂಬರ ಸೇವೆಯಲ್ಲಿ ನಾನಾ ಬಗೆಯಿಂದ ಸೇವೆ ಮಾಡಿದವರಲ್ಲಿ ಇನ್ನೂ ಅನೇಕರ ಹೆಸರಗಳನ್ನು ಹೇಳಬೇಕು. ಶ್ರೀಯುತರಾದ ೧ ಗಣಪತರಾವ ಕಿಲ್ಲೋರ್ಸ್ಕರ, ೨ ಸುಬ್ಬಾಭಟ್ಟ ಘಾಟೀ, ೩ ಆಪ್ಪಾಭಟ್ಟ ಗಲಗಲಿ, ೪ ರಾಮಚಂದ್ರ ಆಬಾಜೀ ಜೋಗಳೇಕರ,, ೫ ಹಣಮಂತರಾವ ಸಬನೀಸ ವಕೀಲರು, ೬ ದಾದಾ ಚಿದಂಬರ ಶಿರಹಟ್ಟಿ, ೭ ದಾಮೋದರ ಭಟಜೀ ಹಾವನೂರ, ೮ ಶಿವಾಜಿ ಬಿಷ್ಟೋ ಕುಲಕರ್ಣಿ ಹುಲಗೂರ, ೯ ಶಿವಾಜಿ ಸಾಂಬಾಜಿ ನರಗುಂದ, ೧೦ ವೀರಭದ್ರ ರಾಮಚಂದ್ರ ಪಾಟೀಲ, ೧೧ ರಂಗೋ ರಾಮಚಂದ್ರ ಕುಲಕರ್ಣಿ ಸಂಪಗಾಂವ, ೧೨ ರಾಜಾರಾಮ ರುದ್ರೋ ಪಾಟೀಲ, ೧೩ ಅಣ್ಣಾಜಿ ಮಾರ್ತಂಡ ಕುಲಕರ್ಣಿ ಉಣಕಲ್ಲ, ೧೪ ಫಕ್ಕೀರಪ್ಪ ಸೂರೇಬಾನ ಗುರ್ಲಹೊಸೂರ ೧೫ ಸಾವಳಿಗೆಪ್ಪ ಪಟ್ಟಣ ಶೆಟ್ಟಿ ೧೬ ಗೋಪಾಳಪ್ಪ ನವಲೇ, ೧೭ ಶ್ರೀಪಾದ ಬಾಪೂಜಿ ಕುಲಕರ್ಣಿ, ೧೮ ಕೃಷ್ಣಶಾಸ್ತ್ರಿ ನವಲಗುಂದ, ೧೯ ದಾಸಪ್ಪ ಮುನವಳ್ಳಿ, ೨೦ ಜೀವಪ್ಪ ಉಗರಗೋಳ, ೨೧ ಚಿಕ್ಕಪ್ಪ ಪಾಟೀಲ, ಬೆಟಸೂರ, ೨೨ ನಾಗಪ್ಪ ಕುಲಕರ್ಣಿ ಹೊಸೂರ, ೨೩ ಕಾಶೀಕರ ಮಾಸ್ತರ, ೨೪ ದೇಮಣ್ಣ ಬಡಿಗೇರ, ೨೫ ದತ್ತಪ್ಪ ಜಾವೂರ, ೨೬ ಲಕ್ಷ್ಮಣಭಟ್ಟ ಕುರಡೂರ, ೨೭ ವೀರಭದ್ರಪ್ಪ ಉಪ್ಪಿನ ದೊಡ್ಡವಾಡ, ೨೮ ಸಂಗಟಿಪ್ಪ ಅಸುಂಡಿ, ೨೯ ಮಲ್ಹಾರ ಬಾಳಕೃಷ್ಣ ಕುಲಕರ್ಣಿ ಬೈಲವಾಡ, ೩೦ ಬಂಡೋಪಂತ ಕುಲಕರ್ಣಿ ಕಣಬರಿಗಿ, ೩೧ ಅನಂತ ನಾಗೇಶ ಕುಲಕರ್ಣಿ ಕಣಬರಿಗಿ, ೩೨ ಅನಂತ ಕೇಶವರಾವ ದೇಶಪಾಂಡೆ, ೩೩ ಗುಡ್ಡೊ ಮುಕುಂದ

ಇವರೇ ಮೊದಲಾದವರು ಕೊನೆಯ ವರೆಗೆ ಮಹಾರಾಜರಲ್ಲಿ ನಿಷ್ಠೆಯಿಟ್ಟು ನಡಕೊಂಡರು. ಇವರಲ್ಲಿ ಪ್ರತಿಯೊಬ್ಬರ ಸಂಬಂಧವು ಮಹಾರಾಜರೊಡನೆ ಹೇಗೆ ಬಂದಿತು, ಅವರಿಗೆ ಬಂದ ಅನುಭವಗಳೇನು—ಎಂಬವೇ ಮೊದಲಾದ ಸಂಗತಿಗಳನ್ನು ವಿಸ್ತಾರ ಭಯದಿಂದ ಬರೆದಿರುವದಿಲ್ಲ. ವಾಚಕರು ದಯವಿಟ್ಟು ಕ್ಷಮಿಸಬೇಕೆಂದು ಕೈ ಜೋಡಿಸಿ ಬೇಡಿಕೊಳ್ಳುತ್ತೇವೆ.

ಮಹಾರಾಜರು ತಮ್ಮ ಶುದ್ಧ ಸಾತ್ವಿಕ ತೇಜಸ್ಸಿನಿಂದ ಸಾಮಾನ್ಯ ಜನರನ್ನು ಆಕರ್ಷಣ ಮಾಡಿದಂತೆ, ಇಂಗ್ಲೀಷ ಕಲಿತ ಸನ್ಮಾನ್ಯ ಗೃಹಸ್ಥರನ್ನೂ ಪರಮಾರ್ಥ ಮಾರ್ಗಕ್ಕೆ ಹಚ್ಚಿದರು. ಇಂಥ ಉದಾಹರಣೆಗಳಲ್ಲಿ ಒಂದೆರಡು ಉದಾಹರಣೆಗಳು ಹೇಳಲಿಕ್ಕೆ ತಕ್ಕವಾಗಿವೆ.

ಮಹಾರಾಜರ ಶಿಷ್ಯರಾದ ಶಂಕರ ಪಾಂಡುರಂಗ ಬೆಹರೆ ಎಂಬವರಿಗೆ ಒಬ್ಬ ಸೋದರಳಿಯರಿದ್ದಾರೆ. ಅವರ ಹೆಸರು ಶ್ರೀ ವೆಂಕಟೇಶ ವಿಟ್ಠಲ ಲಿಮಯೆ ಎಂದು ಇದೆ. ಅವರು ಎಂ ಎ. ಪರೀಕ್ಷೆಗೆ ಕುಳಿತು, ಗುರ್ಲಹೊಸೂರಿಗೆ ಬಂದಾಗಿನ ಸುದ್ದಿ. ಆಗ ಅವರು ಮಹಾರಾಜರ ಕಡೆಗೆ ಪ್ರತಿನಿತ್ಯ ಬಂದು ಮಹಾರಾಜರ ಮುಂದೆ ಜ್ಞಾನೇಶ್ವರಿಯನ್ನು ಓದುತ್ತಿದ್ದರು. ಮಹಾರಾಜರು ಅದರ ಅರ್ಥವಿವರಣೆ ಮಾಡುವರು. ಶ್ರೀ ಲಿಮಯೇಯವರಾದರೂ ತಮ್ಮ ಸಮಯೋಚಿತ ಪ್ರಶ್ನೆ ಮತ್ತು ವಿವರಣೆಗಳಿಂದ ಪರಮಾರ್ಥ ಚರ್ಚೆಗೆ ಒಳ್ಳೇ ರಂಗನ್ನು ತರುತ್ತಿದ್ದರು. ಈ ಕ್ರಮವು ಅವ್ಯಾವಹತವಾಗಿ ಒಂದೆರಡು ತಿಂಗಳು ನಡೆದಿತ್ತು. ಕೊನೆಗೆ ಎಂ. ಎ. ಪರೀಕ್ಷೆಯ ಪರಿಣಾಮ ಪ್ರಕಟವಾಗಬೇಕಾದ ದಿನ ಬಂತು. ಪರೀಕ್ಷೆಯ ಪರಿಣಾಮವು ಮುಂಬಯಿಯಲ್ಲಿ ಪ್ರಸಿದ್ಧವಾದ ಕೂಡಲೇ ತಮಗೆ ತಂತೀ ಬಿಡಬೇಕೆಂದು ಲಿಮಯೇಯವರು ಸ್ನೇಹಿತರಿಗೆ ಹೇಳಿ ವ್ಯವಸ್ಥೆ ಮಾಡಿ ಬಂದಿದ್ದರು. ಆದರೆ ಬರಬೇಕಾದ ತಂತಿ ಬರಲಿಲ್ಲ. ಪರೀಕ್ಷೆಯ ಪರಿಣಾಮವು ವರ್ತಮಾನ ಪತ್ರಗಳಲ್ಲಿ ಪ್ರಕಟವಾಗಿತ್ತು. ಅದರಲ್ಲಿದ್ದೂ ಅವರ ಹೆಸರು ಇರಲಿಲ್ಲ. ಇದರ ಮೇಲಿಂದ ತಾವು ಪರೀಕ್ಷೆಯಲ್ಲಿ ತೇರ್ಗಡೆಯಾಗಿಲ್ಲೆಂದು ಸ್ವಾಭಾವಿಕವಾಗಿಯೇ ಲಿಮಯೇಯವರ ತಿಳಿವಳಿಕೆಯಾಯಿತು. ಅದರಿಂದ ಅವರ ಮನಸಿಗೆ ಕೆಡಕೆನಿಸಿ ಅವರು ಆ ದಿನ ಮಹಾರಾಜರ ಕಡೆಗೆ ಪ್ರತಿನಿತ್ಯ

ಬರುವಂತೆ ಬರಲಿಲ್ಲ. ಜ್ಞಾನೇಶ್ವರಿಯನ್ನು ಓದುವ ವೇಳೆಯಾದರೂ ಲಿಮಯೇಯವರು ಬಾರದೇ ಇದ್ದುದನ್ನು ನೋಡಿ ಮಹಾರಾಜರು ಅವರನ್ನು ಕರೆಕಳುಹಿದರು. ಅವರು ಬಂದೊಡನೆ ಮಹಾರಾಜರು ''ಯಾಕೆ ಇಂದು ಜ್ಞಾನೇಶ್ವರಿಯನ್ನು ಓದುವದಿಲ್ಲವೇ ?'' ಎಂದು ಪ್ರಶ್ನೆ ಮಾಡಿದರು. ಲಿಮಯೇಯವರು ತಮಗಾದ ದುಃಖವನ್ನು ವಿವರಿಸಿ ತಮ್ಮ ಮನಸು ಸಮಾಧಾನದಿಂದ ಇರದ್ದರಿಂದ ಜ್ಞಾನೇಶ್ವರಿಯನ್ನೋದುವದು ಸಾಧ್ಯವಿಲ್ಲೆಂದರು. ಅದಕ್ಕೆ ಮಹಾರಾಜರು ಮುಗುಳುನಗೆ ನಗುತ್ತ ''ಓಹೋ, ಇದಕ್ಕೇಕೆಷ್ಟು ಚಿಂತೆ ? ನೀವು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವಿರಿ. ನಾಳಿನ ದಿನ ನಿಮಗೆ ಎಲ್ಲವೂ ತಿಳಿಯುವದು. ನೀವು ಪರೀಕ್ಷೆ ಪಾಸಾಗಿದ್ದರೆ ಹೇಗೆ ಇರಬೇಕೋ ಆದೇ ರೀತಿಯಿಂದ ಇರ್ರಿ. ಚಿದಂಬರನ ಇಚ್ಛೆಯಿಂದ ಎಲ್ಲವೂ ಸರಿಯಾಗುವದು'' ಎಂದು ಹೇಳಿದರು. ಆದರೂ ಲಿಮಯೇಯವರ ಸಂಶಯವು ದೂರಾಗಲಿಲ್ಲ. ಅವರು ಗುರುಗಳ ಆಜ್ಞೆಯಂತೆ ಜ್ಞಾನೇಶ್ವರಿಯನ್ನೋದಿ ಮನೆಗೆ ಹೋದರು. ರಾತ್ರಿಯೆಲ್ಲ ಚಿಂತೆಯಲ್ಲಿಯೇ ಹೋಯಿತು. ಮರುದಿವಸ ಟಪಾಲಿಗೆ ಅವರ ಸ್ನೇಹಿತರ ಪತ್ರಬಂತು. ಅದರ ಮೇಲೆ ವಿಳಾಸ ಬರೆದದ್ದರಲ್ಲಿ ಲಿಮಯೆಯವರ ಹೆಸರು ಬರೆದು ಮುಂದೆ ಎಂ. ಎ. ಎಂದು ಬರೆದಿತ್ತು. ಅದರಿಂದ ಲಿಮಯೆಯವರಿಗೆ ಹಿಡಿಸಲಾರದಷ್ಟು ಆನಂದವಾಯಿತು. ಪತ್ರದೊಳಗಿನ ಸಂಗತಿಗಳನ್ನು ಓದಿದ ಮೇಲಂತೂ ಅವರ ಸಂಶಯಕ್ಕೆ ಆಸ್ಪದವೇ ಉಳಿಯಲಿಲ್ಲ. ಕೆಲವು ಅಡಚಣೆಗಳ ಮೂಲಕ ಅವರ ಸ್ನೇಹಿತರಿಗೆ ಆ ಸಂಗತಿಯನ್ನು ಇದಕ್ಕೂ ಹೆಚ್ಚು ಶೀಘ್ರವಾಗಿ ತಿಳಿಸಲಿಕ್ಕೆ ಆಗಿರಲಿಲ್ಲ, ಇಷ್ಟೇ. ಅಂದಿನಿಂದ ಲಿಮಯೆಯವರು ಮಹಾರಾಜರ ಏಕನಿಷ್ಠ ಸೇವಕರಾದರು. ಅವರು ಮಹಾರಾಜರ ಚರಿತ್ರೆಯ ಪೂರ್ವಾರ್ಧವನ್ನು ಮರಾಠಿ ಭಾಷೆಯಲ್ಲಿ ಬರೆದು ಪ್ರಸಿದ್ಧ ಮಾಡಿರುತ್ತಾರೆ. ಆದರೆ ಮುಂದಿನ ಚರಿತ್ರೆ ಮಾತ್ರ ಬರೆಯುವದು, ಅದೇಕೋ, ಅವರ ಕಡೆಯಿಂದ ಆಗಲಿಲ್ಲ.

ಇದೇ ಮಾದರಿಯ ಇನ್ನೊಬ್ಬ ಮಹನೀಯರ ಅನುಭವವನ್ನು ಕೇಳುವಂತಿದೆ: ಆ ಗೃಹಸ್ಥರ ಹೆಸರು ಶ್ರೀ ದತ್ತಾತ್ರೇಯ ಗಂಗಾಧರ ಹಣಬರಹಟ್ಟಿ

ಎಂದು ಇದೆ. ಇವರು ಸದ್ಯಕ್ಕೆ ಜೈಲಹೊಂಗಲದಲ್ಲಿ ನಾಮಾಂಕಿತ ವಕೀಲರೆಂದು ಹೆಸರುಗೊಂಡಿದ್ದಾರೆ. ಅವರಿಗೆ ಮಹಾರಾಜರ ವಿಷಯಕವಾಗಿ ಬಂದ ಅನುಭವವನ್ನು ಇದ್ದಕ್ಕಿದ್ದಂತೆ ಅವರ ಶಬ್ದಗಳಲ್ಲಿಯೇ ಕೆಳಗೆ ಕೊಟ್ಟಿರುವೆವು. ಅವರೇ ಸ್ವತಃ ತಮ್ಮ ಬಾಯಿಂದ ನಮಗೆ ಈ ಸಂಗತಿಯನ್ನು ಹೇಳಿದ್ದರಿಂದ ಆ ಬಗ್ಗೆ ಯಾರೂ ಸಂದೇಹಪಡುವ ಕಾರಣವಿಲ್ಲ.

"ಶ್ರೀ ಕೈವಲ್ಯಾಶ್ರಮ ಸ್ವಾಮಿಗಳು ಪೂರ್ವಾಶ್ರಮದಲ್ಲಿದ್ದಾಗಿನಿಂದ ನನ್ನ ತಂದೆ ಮತ್ತು ಕಕ್ಕಂದಿರ ಸ್ನೇಹಿತರು ಆಶ್ರಮ ತಕ್ಕೊಂಡ ಮೇಲೆ ಸಹ ಅವರದು ನಮ್ಮ ಮನೆಗೆ ಬಂದು ಹೋಗುವ ಪರಿಪಾಠ ಬಹಳ. ಆ ಕಾಲಕ್ಕೆ ನಾನು ಚಿಕ್ಕವನಿದ್ದು, ಅವರ ಮೇಲೆ ನನ್ನದು ಸ್ವಾಭಾವಿಕವಾಗಿ ಪ್ರೇಮ ಕೂತಿತು. ಅವರು ನನ್ನನ್ನು ತಮ್ಮ ಹತ್ತರ ಕುಳ್ಳಿರಿಸಿಕೊಂಡು ನನ್ನ ಕಡೆಯಿಂದ ನಾಮಸ್ಮರಣೆ ಮಾಡಿಸುತ್ತಿದ್ದರು. ಮತ್ತು ಶ್ಲೋಕಗಳನ್ನು ಅನ್ನಿಸಿಕೊಳ್ಳುತ್ತಿದ್ದರು ಸನ್ ೧೯೦೨ ರಲ್ಲಿ ನಾನು ಗುರುಗಳ ಮಾನಸ ಪೂಜೆಯನ್ನು ಕೆಲಕಾಲ ಮಾಡುತ್ತಿದ್ದೆನು. ಮುಂದೆ ಸನ್ ೧೯೦೪ ರಲ್ಲಿ ನಾನು ವಕೀಲೀ ಪರೀಕ್ಷೆಗೆ ಕೂತೆನು. ನಾನು ಅದರಲ್ಲಿ ಪಾಸಾದ ಬಗ್ಗೆ ನನ್ನ ಸ್ನೇಹಿತರೊಬ್ಬರ ಕಡೆಯಿಂದ ತಾರು ಬಂತು. ಮರು ದಿವಸ ದೈನಿಕ ಜ್ಞಾನಪ್ರಕಾಶದಲ್ಲಿ ಪಾಸಾದ ವಿದ್ಯಾರ್ಥಿಗಳ ಲಿಸ್ಟು ಪ್ರಸಿದ್ಧವಾಯಿತು. ಅದರಲ್ಲಿ ನನ್ನ ಹೆಸರು ಇರಲಿಲ್ಲ. ಅದರಿಂದ ನನಗೆ ಸಿಡಿಲು ಬಡಿದಂತಾಗಿ ಮನಸಿಗೆ ಬಹಳ ವ್ಯಥೆಯಾಯಿತು. ಪರೀಕ್ಷೆಯ ಪರಿಣಾಮವನ್ನು ನಿಃಸಂದೇಹವಾಗಿ ತಿಳಿದುಕೊಳ್ಳುವ ಸಲುವಾಗಿ ಮುಂಬಯಿ ಹೈಕೋರ್ಟ ರಿಜಿಸ್ಟ್ರಾರರ ಕಡೆಗೆ ಒಂದು, ಮತ್ತು ಮುಂಬಯಿಯೊಳಗಿನ ನನ್ನ ಮಿತ್ರರಿಗೊಂದು ಹೀಗೆ ಎರಡು ತಾರಾ ತಾರು ಮಾಡಿದೆ. ಉತ್ತರವು ಬರಲಿಲ್ಲ ಮನಸ್ಸಿಗೆ ಎಳ್ಳಷ್ಟೂ ಸಮಾಧಾನವಿರಲಿಲ್ಲ. ಆಗ ನಾನು ಬೆಳಗಾಂವಿಯ ಡಿಸ್ಟ್ರಿಕ್ಟ ಕೋರ್ಟಿನೊಳಗೆ ಬದಲೀ ಕಾರಕೂನನಾಗಿದ್ದೆ. ಆದರೆ ಮನಸ್ಸು ತೀರ ದುಃಖಿತವಾದುದರಿಂದ ಕೋರ್ಟಿಗೆ ಹೋಗುವದಂತೂ ಇರಲಿ, ಅಧಿಕಾರಿಗಳಿಗೆ ಬರಲಿಕ್ಕಾಗುವದಿಲ್ಲೆಂದು ತಿಳಿಸುವದು ಸಹ ನನ್ನಿಂದಾಗಲಿಲ್ಲ. ಮುಂದೆ ಹೋಳೀ ಹುಣ್ಣಿವೆಯ ಸೂಟಿ ಇತ್ತು. ಹಾಗೆಯೇ ನನ್ನ ಊರಾದ ಹಣಬರಹಟ್ಟಿಗೆ ಬಂದು ಬಿಟ್ಟೆ. ಆ ದಿವಸ ರಾತ್ರಿ ಮಲಗುವ

ಮುಂಚೆ ಗುರುಗಳ ಸ್ಮರಣೆಮಾಡಿ ನನ್ನ ಪರೀಕ್ಷೆಯ ವಿಷಯವಾಗಿ ಪ್ರಾರ್ಥನೆ ಮಾಡಿಕೊಂಡು ಮಲಗಿದೆ.

''ರಾತ್ರಿಯಲ್ಲಿ ಸ್ವಪ್ನವೊಂದು ಬಿತ್ತು. ಗುರುಗಳು ಬಂದು 'ನೀನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವಿ. ಏನೂ ಚಿಂತೆ ಮಾಡಬೇಡ' ಎಂದು ಹೇಳಿದರು. ನನಗೆ ಪಕ್ಕನೇ ಎಚ್ಚರಾಯಿತು. ಸ್ವಪ್ನದ ಮಾತು ಸುಳ್ಳೆಂದು ಎನಿಸಹತ್ತಿತು. ಆದರ ಮೇಲೆ ವಿಶ್ವಾಸವೇ ಕೂಡದಾಯಿತು. ಕೆಲಹೊತ್ತಿನ ಮೇಲೆ ಮತ್ತೊಂದು ಕನಸುಬಿತ್ತು. ಪುನಃ ಶ್ರೀ ಕೈವಲ್ಯ ಸದ್ಗುರುಗಳು ಬಂದು 'ನೀನು ಪರೀಕ್ಷೇಯಲ್ಲಿ ಪಾಸಾಗಿರುವಿಯೆಂದು ನಾನು ಹೇಳಿದರೂ ನಂಬಲಾರೆಯಾ ? ಖಂಡಿತವಾಗಿಯೂ ಹೇಳುತ್ತೇನೆ, ನೀನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವಿ. ನನ್ನ ಸತ್ಯತೆಯನ್ನು ಕಾಣಬೇಕೆಂದಿದ್ದರೆ, ಬೆಳಗಾಂವಿಯ ಸರದಾರ ಹೈಸ್ಕೂಲಿಗೆ ಹೋಗು. ಸರಕಾರೀ ಗ್ಯಾಝೀಟು ಬಂದಿರುತ್ತದೆ. ಗ್ಯಾಝೀಟನ್ನು ತಕ್ಕೊಂಡು ನೋಡು. ಬಲಗಡೆಯ ಪಾನಿನ ಮೇಲೆ ಪಾಸಾದ ವಿದ್ಯಾರ್ಥಿಗಳ ಲಿಸ್ಟು ಪ್ರಾರಂಭವಾಗಿದೆ. ಆ ಪಾನನ್ನು ತಿರುವು. ಆದರ ಹಿಂದಿನ ಮಗ್ಗಲು ಎಲ್ಲಕ್ಕೂ ಮೇಲಿನ ಹೆಸರು ನಿನ್ನದಿದೆ. ಸಂಶಯಪಡಬೇಡ' ಎಂದು ನಿಶ್ಚಯವಾಣಿಯಿಂದ ಆಶ್ವಾಸನ ಕೊಟ್ಟರು. ಅಷ್ಟರಲ್ಲಿ ನನಗೆ ಎಚ್ಚರಾಯಿತು. ಈ ಸಾರೆ ಮನಸಿಗೆ ಆಹ್ಲಾದವಾಯಿತು. ಕನಸಿನ ಸಂಗತಿಯು ಕೇವಲ ಕನಸಾಗಿರದೆ ಸತ್ಯದ ಸೂಚಕವಾಗಿರಬೇಕೆಂದು ಮನಸ್ಸಿಗೆ ನಿಶ್ಚಯವಾಯಿತು. ಬೆಳಗಾದ ಮೇಲೆ ಬಹಿರ್ದಿಶೆಗೆ ಹೋಗಬೇಕೆಂದು ಮನೆಬಿಟ್ಟು ಹೊರಬಿದ್ದೆ. ಅಷ್ಟರಲ್ಲಿ ಒಬ್ಬನು ನನ್ನ ಹೆಸರಿನ ಟಪಾಲು ತಕ್ಕೊಂಡು ನನ್ನನ್ನೇ ಒದರುತ್ತ ನನ್ನ ಕಡೆಗೆ ಬಂದನು. ಟಪಾಲು ಒಡೆದು ನೋಡಿದೆ. ಆದರಲ್ಲಿ ನನ್ನ ತಾರಿನ ಉತ್ತರಗಳಿದ್ದವು. ಪರೀಕ್ಷೆಯಲ್ಲಿ ನಿಜವಾಗಿಯೂ ಉತ್ತೀರ್ಣನಾಗಿದ್ದೆ. ಕೂಡಲೇ ಬೆಳಗಾಂವಿಗೆ ಹೋಗಿ ಗ್ಯಾಝೀಟಿನ ಸಂಗತಿಯ ಬಗ್ಗೆ ಮನಸ್ಸಿಗೆ ನಿಶ್ಚಯಮಾಡಿಕೊಳ್ಳುವಗೋಸ್ಕರ ಹೈಸ್ಕೂಲಿನ ಗ್ಯಾಝೀಟು ನೋಡಿದೆ. ಎಲ್ಲವೂ ಶ್ರೀಗುರುಗಳು ಕನಸಿನಲ್ಲಿ ಹೇಳಿದಂತೆಯೇ ತಂತೋತಂತವಾಗಿ ಇತ್ತು. ಆಗಿನ ನನ್ನ ಭಾವವನ್ನು ನಾನು ಶಬ್ದಗಳಿಂದ ವರ್ಣಿಸಲಾರೆ. ಶ್ರೀಗುರುಕೈವಲ್ಯ !''

———



ಶ್ರೀ ಕೈವಲ್ಯಾಶ್ರಮ ಸ್ವಾಮಿ ಮಹಾರಾಜರು

(ಜೀವನದ ಕೊನೆಯ ಭಾಗದಲ್ಲಿ)

೨೨ ಮಹಾರಾಜರ ಲೀಲೆಗಳು

ಸತ್ಪುರುಷರ ಲೀಲೆಗಳು ಅಗಾಧವಾಗಿರುತ್ತವೆ. ಭಕ್ತರಿಗಾಗಿ ಧರ್ಮ ಸಂವರ್ಧನೆಗಾಗಿ, ಜನರಿಗೆ ಬೋಧಮಾಡುವದಕ್ಕಾಗಿ, ಸೇವಕರ ದುಃಖವನ್ನು ದೂರ ಮಾಡುವದಕ್ಕಾಗಿ ಹೀಗೆ ಅನೇಕ ಕಾರಣಗಳಿಂದ ಸತ್ಪುರುಷರು ತಮ್ಮ ಲೀಲೆಗಳನ್ನು ತೋರಿಸುವರು. ಮಹಾರಾಜರು ಹೀಗೆ ಮಾಡಿ ತೋರಿಸಿದ ಲೀಲೆಗಳು ಅಸಂಖ್ಯವಾಗಿವೆ. ಅವುಗಳನ್ನೆಲ್ಲ ಇಲ್ಲಿ ಸಾದ್ಯಂತವಾಗಿ ವಿವರಿಸುತ್ತ ಕೂಡುವದು ಅಶಕ್ಯವಾಗಿದೆ. ಈ ಮೊದಲೇ ನಮ್ಮ ಚರಿತ್ರನಾಯಕರ ಕೆಲವು ಲೀಲೆಗಳ ವರ್ಣನೆಯು ಬಂದು ಹೋಗಿದೆ. ಈ ಪ್ರಕರಣದಲ್ಲಿ ಮಹಾರಾಜರ ಬೇರೆ ಕೆಲವು ಲೀಲೆಗಳನ್ನು ವರ್ಣಿಸುತ್ತೇವೆ.

ಗಿಳಿಯ ಆಟ

ಶಕೆ ೧೮೩೧ (೧೯೦೯) ನೆಯ ಚಿದಂಬರೋತ್ಸವದಲ್ಲಿ ನಡೆದ ಒಂದು ಸಂಗತಿಯಿದು. ಒಬ್ಬ ಮನುಷ್ಯನು ಗಿಳಿ, ಗುಬ್ಬಿ ಮೊದಲಾದ ಪಕ್ಷಿಗಳನ್ನು ಪಂಜರದಲ್ಲಿರಿಸಿಕೊಂಡು, ನೆಟ್ಟಗೆ ಮಹಾರಾಜರ ಬಳಿಗೆ ಬಂದು ನಮಸ್ಕಾರ ಮಾಡಿ— ''ದೇವರೂ, ಈ ಗಿಳಿಗಳ ಆಟವು ಒಳ್ಳೇ ಚಮತ್ಕಾರವಾದದ್ದಿದೆ. ಜನಸಮೂಹವು ತಕ್ಕಷ್ಟುಂಟು. ಆಟವಾಡಲಿಕ್ಕೆ ಅಪ್ಪಣೆಯನ್ನಿತ್ತರೆ, ಇಲ್ಲಿ ಕೂಡಿದ ಜನರ ಮನರಂಜನೆ ಮಾಡುವೆನು'' ಎಂದು ಬೇಡಿಕೊಂಡನು. ಮಹಾರಾಜರು ವಿರಕ್ತರು. ಅವರಿಗೆ ಇಂತಹ ಸಂಗತಿಗಳಲ್ಲಿ ಅಷ್ಟು ಆಸಕ್ತಿ ಇರಲಿಲ್ಲ. ಆದರೆ ಕೂಡಿದ ಜನರ ಆತುರತೆ ಮತ್ತು ಆಗ್ರಹಗಳ ಮೂಲಕ ಮಹಾರಾಜರು ಅವನಿಗೆ ಆಟವಾಡಲಿಕ್ಕೆ ಪರವಾನಿಗೆ ಕೊಡಬೇಕಾಯಿತು. ಆಟಗಾರನು ಬೇರೆ ಬೇರೆ ತರದ ಸೋಜಿಗದ ಆಟಗಳನ್ನಾಡಿ ತೋರಿಸಿ ಜನರನ್ನು ಆನಂದಗೊಳಿಸಿದನು. ಆ ಆನಂದದ ಭರದಲ್ಲಿ ಜನರು ಅವನಿಗೆ

ಕನಿಷ್ಠ ಹತ್ತು ರೂಪಾಯಿಗಳನ್ನಾದರೂ ಕೊಡಬೇಕೆಂದು ಅಭಿಪ್ರಾಯ ಪಟ್ಟರು. ಆಟವು ಮುಗಿದ ಕೂಡಲೆ ಮಹಾರಾಜರು ಆಟಗಾರನನ್ನು ಮುಂದಕ್ಕೆ ಕರೆದು "ಈ ಉತ್ಸವದ ದುಡ್ಡು ಒಬ್ಬರದೇ ಅಲ್ಲ. ಸಾರ್ವಜನಿಕವಾಗಿದೆ. ಎಂದರೆ ಸಾರ್ವಜನಿಕರು ಇದನ್ನು ದೇವರ ಸೇವೆಗಾಗಿ ಕೊಟ್ಟಿದ್ದಾರೆ. ನಿನ್ನಂಥ ಆಟಗಾರನಿಗೆ ಇದರೊಳಗಿಂದ ಕೆಲವು ಹಣವನ್ನು ಕೊಟ್ಟರೆ ಅದರ ದುರುಪಯೋಗ ಮಾಡಿದಂತಾಗುವದು. ಆದರೂ ಎಲ್ಲ ಜನರ ಸಮ್ಮತಿಯಿಂದ ನಾವು ಈ ಆಟವನ್ನು ಆಡಿಸಿದ್ದರಿಂದ, ನಿನಗೆ ಏನಾದರೂ ಕೊಡಲೇಬೇಕು. ನಾವು ಪ್ರತಿಯೊಂದು ಚೀಟಿಯಲ್ಲಿ ೧ ರಿಂದ ೯೦ರ ವರೆಗಿನ ಅಂಕಿಗಳಲ್ಲಿ ಒಂದೊಂದನ್ನು ಬರೆದು, ಹತ್ತೂ ಚೀಟಿಗಳನ್ನು ಇಲ್ಲಿ ಇಡುತ್ತೇವೆ ನೀನು ದೇವರಲ್ಲಿ ಹೆಚ್ಚಿನ ಹಣವನ್ನು ಬೇಡಿ, ನಿನ್ನ ಗಿಳಿಯನ್ನು ಬಿಡು. ಗಿಳಿಯು ಇವುಗಳಲ್ಲಿ ಯಾವ ಅಂಕಿಯ ಚೀಟಿಯನ್ನು ತೆಗೆದು ಕೊಳ್ಳುವದೋ ಅಷ್ಟು ರೂಪಾಯಿಗಳು ನಿನಗೆ ದೊರೆಯುವವು" ಎಂದು ಹೇಳಿದರು. ಈ ಮಾತಿಗೆ ಆಟದವನು ಒಪ್ಪಿದನು. ಚೀಟಿಗಳು ಸಿದ್ಧವಾದವು. ಗಿಳಿಯು ಚೀಟಿಗಳನ್ನು ಹುಡುಕಹತ್ತಿತು. ಕೆಲವು ಚೀಟಿಗಳನ್ನು ಅದು ಚುಂಚುವಿನಿಂದ ತಕ್ಕೊಂಡು ಅಲ್ಲಿಂದಲ್ಲೇ ಜಿಸುಟಿತು ಕಡೆಗೆ ಒಂದು ಚೀಟಿಯನ್ನು ಬಾಯೊಳಗೆ ಹಿಡಿದುಕೊಂಡು, ಭರ್ರನೇ ಹಾರಿಬಂದು, ಆಟದವನ ಕೈಯಲ್ಲಿ ತಂದುಕೊಟ್ಟಿತು. ಆಟದವನು ಅದನ್ನು ತಂದು ಮಹಾರಾಜರ ಮುಂದೆ ಇಟ್ಟನು. ಮಹಾರಾಜರ ಆಜ್ಞೆಯಿಂದ ಕರೀಕಟ್ಟೆ ದತ್ತಪ್ಪನವರು ಆ ಚೀಟಿಯನ್ನು ತೆರೆದು ಓದಿ ನೋಡಿದರು. ಅದು ೯೦ ರೂಪಾಯಿಗಳ ಚೀಟಿಯಾಗಿತ್ತು. ಇದರಿಂದ ಎಲ್ಲರಿಗೂ ಆಶ್ಚರ್ಯವಾಯಿತು. ಎಲ್ಲ ಜನರ ಮನಸ್ಸಿನಲ್ಲಿ ಇದ್ದುದನ್ನೇ ಗಿಳಿಯು ಚಿದಂಬರನ ಪ್ರೇರಣೆಯಿಂದ ಆರಿಸಿ ತೆಗೆಯಿತು. ಆಟದವನು ೯೦ ರೂಪಾಯಿಗಳನ್ನು ತಕ್ಕೊಂಡು ಮಹಾರಾಜರಿಗೆ ನಮಸ್ಕರಿಸಿ, ಹೊರಟು ಹೋದನು. ಅಷ್ಟರಲ್ಲಿ ಬಾಳೇ ಹಣ್ಣುಗಳು ಬಂದವು. ಅವುಗಳಲ್ಲಿ ಎರಡು ಹಣ್ಣುಗಳು ಅಂಟಿಕೊಂಡು ಒಂದಾದಂಥ ಒಂದು ಹಣ್ಣಿತ್ತು. ಅದನ್ನು ಯಾರೋ ಒಬ್ಬರು ಮಹಾರಾಜರ ಬಳಿಗೆ ತಂದರು. ಕೂಡಲೆ ಆ ಹಣ್ಣು ತಕ್ಕೊಂಡು, ಕಟ್ಟೆಯ ಮೇಲೆ ಎದ್ದು ನಿಂತು, ಮಹಾರಾಜರು— "ಯಾರು ಗಂಡುಮಕ್ಕಳನ್ನು

ಅಪೇಕ್ಷಿಸುವರೋ ಅವರು ಲಿಲಾವಿನಲ್ಲಿ ಹೆಚ್ಚು ಹಣಕ್ಕೆ ಬೇಡಿ, ಈ ಫಲವನ್ನು ತಕ್ಕೊಳ್ಳಬೇಕು. ಅಂದರೆ ಮುಂದಿನ ವರುಷದೊಳಗಾಗಿ ಗಂಡು ಕೂಸನ್ನು ಪಡೆಯುವರು'' ಎಂದು ನುಡಿದರು. ಲಿಲಾವಿನ ಹಣವು ಏರುತ್ತೇರುತ್ತ ೨೨ ರೂಪಾಯಿಗಳ ವರೆಗೆ ಬಂತು. ಒಬ್ಬ ಗೃಹಸ್ಥರು ಅಲ್ಲಿಂದಲ್ಲೇ ಅಷ್ಟು ಹಣ ಕೊಟ್ಟು ಆ ಹಣ್ಣು ತಕ್ಕೊಂಡರು. ಮಹಾರಾಜರು ವಾಜೀಂದ್ರರಿಗೆ— ''ನಾವು ಸಾರ್ವಜನಿಕ ದ್ರವ್ಯದ ದುರುಪಯೋಗ ಮಾಡಿದ್ದೆವು. ಈಗ ಚಿದಂಬರನ ಕೃಪೆಯಿಂದ ಅದು ತುಂಬಿಬಂತು'' ಎಂದು ನುಡಿದರು. ಆ ಫಲವನ್ನು ಪಡೆದ ಗೃಹಸ್ಥರಿಗೆ ವರ್ಷತುಂಬುವದರೊಳಗಾಗಿ ಗಂಡುಮಗನು ಹುಟ್ಟಿದನೆಂದು ಬೇರೆ ಹೇಳಲಿಕ್ಕೆ ಬೇಡ.

ಪಿಶಾಚಿಗೆ ಮುಕ್ತಿ

ಇಲ್ಲಿ ವರ್ಣಿಸಿದ ಸಂಗತಿಯು ನಡೆದುದು ಶಕೆ ೧೮೧೫ ರಲ್ಲಿ. ಆಗ ಮಹಾರಾಜರು ಜೀರ್ಣೋದ್ಧಾರಕ್ಕಾಗಿ ಅತ್ತಿತ್ತ ಸಂಚಾರ ಮಾಡಹತ್ತಿದ್ದರು. ಅವರಾಗ ಒಂದು ಸಲ ಸವದತ್ತಿ ತಾಲೂಕಿನೊಳಗಿರುವ ಬೆಟಸೂರ ಎಂಬ ಊರಿಗೆ ಹೋದರು. ಆ ಊರು ಗುರ್ಲಹೊಸೂರಿಂದ ಏಳೆಂಟು ಮೈಲುಗಳ ಮೇಲಿದೆ. ಅಲ್ಲಿ ಚಿಕ್ಕಪ್ಪ ಪಾಟೀಲರೆಂಬ ಗೃಹಸ್ಥರೊಬ್ಬರಿದ್ದರು. ಅವರಿಗೆ ಅನೇಕ ದಿನಗಳಿಂದ ಪಿಶಾಚ ಬಾಧೆಯುಂಟಾಗಿತ್ತು. ಅದರಿಂದ ಅವರಿಗೆ ಬಹಳ ತೊಂದರೆಯಾಗಿತ್ತು. ಅನ್ನನೀರುಗಳು ಎಷ್ಟೂ ಹೋಗುತ್ತಿರಲಿಲ್ಲ. ಅದರಿಂದ ಅವರ ಶರೀರವು ತೀರ ಕೃಶವಾಗಿತ್ತು. ಅನೇಕ ಜನ ಮಾಂತ್ರಿಕರು ಅವರನ್ನು ಗುಣಪಡಿಸಬೇಕೆಂದು ಯತ್ನಮಾಡಿದ್ದರು. ಆದರೆ ಏನೂ ಉಪಯೋಗವಾಗಿದ್ದಿಲ್ಲ. ಪಿಶಾಚಿಯ ಯೋಗದಿಂದ ಅವರು ಆಗಾಗ್ಗೆ ಎಚ್ಚರದಪ್ಪಿ ಬೀಳುತ್ತಿದ್ದರು. ನಾಮಾಂಕಿತರಾದ ಡಾಕ್ಟರರೂ ವೈದ್ಯರೂ ಕೈಯೂರಿದ್ದರು. ಮಹಾರಾಜರು ಬೆಟಸೂರಿಗೆ ಹೋದಾಗ ಚಿಕ್ಕಪ್ಪನವರ ಮನೆಯವರು ಅವರನ್ನು ಕರಕೊಂಡು ಬಂದು ಮಹಾರಾಜರ ಮುಂದೆ ಅಡ್ಡ ಕೆಡವಿ, ವಿನಯಭಾವದಿಂದ ಸಾಷ್ಟಾಂಗ ನಮಸ್ಕಾರ ಮಾಡಿದರು. ಮಹಾರಾಜರು ಅವರ ಬಾಯಿಂದ ಎಲ್ಲ ವೃತ್ತಾಂತವನ್ನು ಕೇಳಿಕೊಂಡರು. ''ಚಿಕ್ಕಪ್ಪನವರನ್ನು ನೀವು ಗುರ್ಲಹೊಸೂರಿಗೆ ಕರೆದುಕೊಂಡು ಬಂದರೆ

ಶ್ರೀ ಚಿದಂಬರನ ಕೃಪೆಯಿಂದ ಒಳಿತಾದೀತು'' ಎಂದು ಮಹಾರಾಜರು ಅವರಿಗೆ ಆಶ್ವಾಸನ ಕೊಟ್ಟರು. ಅವರ ಮನೆಯವರು ಅದರಂತೆ ಚಿಕ್ಕಪ್ಪನವರನ್ನು ಗುರ್ಲಹೊಸೂರಿಗೆ ಕರಕೊಂಡು ಬಂದರು. ಪಾಟೀಲರು ಸ್ವತಃ ಸೇವೆ ಮಾಡಲಿಕ್ಕೆ ಅಸಮರ್ಥರಾದುದರಿಂದ ಶ್ರೀಗುರು ಚರಿತ್ರೆಯ ಸಪ್ತಾಹಕ್ಕಾಗಿ ಒಬ್ಬ ಬ್ರಾಹ್ಮಣನನ್ನು ನಿಯಮಿಸಿದರು. ಬ್ರಾಹ್ಮಣನು ಗಟ್ಟಿಯಾಗಿ ಗುರುಚರಿತ್ರೆಯನ್ನೋದುತ್ತಿರಬೇಕು, ಮತ್ತು ಪಾಟೀಲರ ಕಿವಿಯ ಮೇಲೆ ಆ ಶಬ್ದಗಳು ಬೀಳುವಂತೆ ಅವರನ್ನು ಕುಳ್ಳಿರಿಸಬೇಕು, ಎಂಬ ವ್ಯವಸ್ಥೆ ಮಾಡಲಾಗಿತ್ತು. ಸಪ್ತಾಹ ಪ್ರಾರಂಭವಾಗಿ ನಾಲ್ಕು ದಿನಗಳು ಕಳೆದು ಹೋದವು. ಆದರೆ ಐದನೆಯ ದಿನ ಗುರುಚರಿತ್ರೆಯ ವಾಚನ ನಡೆದಾಗ್ಗೆ ಗೌಡರು ಒಮ್ಮಿಂದೊಮ್ಮೆ ಎಚ್ಚರದಪ್ಪಿ ಹಲ್ಲುಗಟ್ಟಿಕ್ಕಿದರು ಶರೀರವೆಲ್ಲ ತಣ್ಣಗಾಗಿ ಹೋಯಿತು. ಅವರ ಮನೆಯವರು ಅತ್ತು ಕರೆದು ಆಕ್ರೋಶ ಮಾಡಹತ್ತಿದರು. ಕೂಡಲೇ ಮಹಾರಾಜರು ಅಲ್ಲಿಗೆ ಬಂದು ಅಳುತ್ತಿರುವ ಎಲ್ಲ ಜನರಿಗೆ ಸಮಾಧಾನ ಹೇಳಿದ್ದಲ್ಲದೆ, ಅತ್ಯುಚ್ಚ ಸ್ವರದಿಂದ ಶಿವಚಿದಂಬರ ನಾಮಸ್ಮರಣೆ ಮಾಡಲಿಕ್ಕೆ ಆಜ್ಞಾಪಿಸಿದರು. ಮತ್ತು ತಾವು ಶ್ರೀ ಚಿದಂಬರನ ಗರ್ಭಾಲಯವನ್ನು ಹೊಕ್ಕು ಶ್ರೀ ಚಿದಂಬರನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಅಂತಃಕರಣ ಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಂಡರು. ಆ ಮೇಲೆ ದೇವರ ಅಂಗಾರವನ್ನೂ ತ್ರಿಶೂಲವನ್ನೂ ತಕ್ಕೊಂಡು ಎಚ್ಚರಿಲ್ಲದೆ ಬಿದ್ದುಕೊಂಡಿರುವ ಗೌಡರ ಹತ್ತರ ಬಂದರು. ಶ್ರೀ ಬೆಹರೆಯವರಿಗೆ 'ಮಾಝಾ ಥಾಕ ಮಾನೀ" ಎಂಬ ಅಭಂಗವನ್ನು ಅನ್ನುತ್ತ ನಿಂತಿರಬೇಕೆಂದು ಆಜ್ಞಾಪಿಸಿ, ಸ್ವಹಸ್ತದಿಂದ ಗೌಡರ ಸರ್ವಾಂಗಕ್ಕೂ ವಿಭೂತಿಯನ್ನು ಹಚ್ಚಿದ್ದಲ್ಲದೆ, ತ್ರಿಶೂಲವನ್ನು ಅವರ ತಲೆಯ ಮೇಲಿಟ್ಟರು. ಕೂಡಲೇ ಮೈಯೊಳಗಿನ ಪಿಶಾಚವು ಎದ್ದು ಕುಳಿತು ಕೈಜೋಡಿಸಿ ''ಮಹಾರಾಜರೇ, ತ್ರಿಶೂಲದ ಬಾಧೆಯು ಸಹನವಾಗಲೊಲ್ಲದು. ತೀವ್ರವಾಗಿ ಅದನ್ನು ತಕ್ಕೊಳ್ಳುವ ಕೃಪೆಯಾಗಬೇಕು" ಎಂದು ಪ್ರಾರ್ಥನೆ ಮಾಡಹತ್ತಿತು. ಆದಕ್ಕೆ ಪ್ರತ್ಯುತ್ತರವಾಗಿ ಮಹಾರಾಜರು ಹೇಳಿದರು:— ''ನಿನ್ನಿಂದ ಗೌಡರಿಗೆ ಬಹಳ ತೊಂದರೆಯಾಗಿದೆ. ಇನ್ನು ಮುಂದೆ ಇವರಿಗೆ ಯಾವ ಬಗೆಯಿಂದಲೂ ಉಪದ್ರವ ಕೊಡಲಾಗದು." ಈ ಮಾತನ್ನು ಕೇಳಿ ಪಿಶಾಚಿಯು ನಡುಗುತ್ತ

ಬೇಡಿಕೊಂಡಿತು:— "ಸ್ವಾಮೀ ಇವರು ನನಗೆ ಎಷ್ಟು ವಿಧವಾಗಿ ಪೀಡಿಸಿರುವರೆಂಬದನ್ನು ನಾನು ತಮ್ಮ ಮುಂದೆ ವರ್ಣಿಸಲಾರೆನು. ಇವರು ನನಗೆ ಕೊಟ್ಟ ಪೀಡೆಯ ಮಾನದಿಂದ ನೋಡಿದರೆ ನಾನು ಇವರ ಜೀವನವನ್ನೇ ತಕ್ಕೊಳ್ಳಬೇಕಾಗಿತ್ತು. ಆದರೆ ತಾವು ಇವರ ಮೇಲೆ ಅನುಗ್ರಹ ಮಾಡಿದ್ದರಿಂದ ಉಪಾಯವಿಲ್ಲದಾಗಿದೆ. ತಮ್ಮ ಆಜ್ಞೆಯಂತೆ ನಾನು ಬಿಟ್ಟು ಹೋಗಲು ಸಿದ್ಧಳಿದ್ದೇನೆ. ಆದರೆ ತಾವು ದಯಮಾಡಿ ನನ್ನ ಮೇಲೆ ಕರುಣೆದೋರಿ ಉದ್ಧರಿಸಬಾರದೇ ?" ಅದಕ್ಕೆ ಮಹಾರಾಜರು ಹೇಳಿದ್ದೇನೆಂದರೆ:— "ನೀನು ಪರಪೀಡೆಯನ್ನು ಬಿಟ್ಟುಕೊಟ್ಟು ದೇವರಿಗೆ ಶರಣು ಹೋಗು ಎಂದರೆ ದೇವರು ನಿನ್ನನ್ನು ಉದ್ಧರಿಸುವನು. ನಾವೀಗ ಮತ್ತೇನಾದರೂ ನಿನ್ನ ಸಲುವಾಗಿ ಮಾಡುವಂತಿದ್ದರೆ ಹೇಳು" ಪಿಶಾಚಿಯು ಹೇಳಿತು:— "ತಾವು ತಮ್ಮ ಹಸ್ತದಿಂದಲೇ ನನ್ನ ಹಣೆಗೆ ಕುಂಕುಮ ಹಚ್ಚಿ ಕಾಯಿ ಹಾಕಿ ಉಡಿ ತುಂಬಿದರೆ ತೀರಿತು. ಇದಕ್ಕೂ ಹೆಚ್ಚಿನ ಇಚ್ಛೆಯೇನೂ ಇಲ್ಲ." ಮಹಾರಾಜರು ಹಾಗೆ ಮಾಡಲು ಕೂಡಲೇ ಪಿಶಾಚಿಯು ಶ್ರೀ ಚಿದಂಬರೇಶ್ವರನ ಎದುರಿಗೆ ಹೋಗಿ ನಿಂತು, ನಮಸ್ಕಾರ ಮಾಡಿ ದೊಪ್ಪನೆ ನೆಲಕ್ಕೆ ಬಿತ್ತು. ತುಸುಹೊತ್ತಿನ ಮೇಲೆ ಗೌಡರಿಗೆ ಎಚ್ಚರಿಕೆ ಬಂತು. ಅಲ್ಲದೆ ಮುಂದೆ ದಿನದಿನಕ್ಕೆ ಅವರ ಪ್ರಕೃತಿಯು ಸುಧಾರಿಸಹತ್ತಿತು. ತುಸು ದಿವಸಗಳಲ್ಲಿ ಅವರು ಪೂರ್ಣಗುಣ ಹೊಂದಿ, ಕೊನೆಯವರೆಗೆ ಮಹಾರಾಜರ ಸೇವಕ ವರ್ಗದಲ್ಲಿ ಪ್ರಾಮುಖ್ಯತೆಯಿಂದ ಕಾಣಿಸಿಕೊಂಡರು.

ಅಗ್ನಿನಾರಾಯಣನಿಗೆ ದಕ್ಷಿಣೆ

ಶಕೆ ೧೮೧೪ (ಸನ್ ೧೮೯೨) ರಲ್ಲಿ ಮಹಾರಾಜರು ಸಂಗಡ ಕೆಲವು ಜನ ಶಿಷ್ಯರನ್ನು ಕರಕೊಂಡು ಜೀರ್ಣೋದ್ಧಾರದ ಸಂಚಾರಕ್ಕಾಗಿ ಗುರ್ಲಹೊಸೂರಿಂದ ದೊಡ್ಡವಾಡಕ್ಕೆ ಹೋಗುತ್ತಲಿದ್ದರು. ಆಗ ಚಳಿಗಾಲವಿತ್ತು. ಅದರಲ್ಲಿಯೂ ಇವರು ಒಳ್ಳೇ ಮುಂಜಾವಿನಲ್ಲಿ ಹೊರಟಿದ್ದರಿಂದ ಚಳಿಯು ವಿಶೇಷವೆನಿಸಿತು. ಅವರಿಂದ ಮಾರ್ಗದಲ್ಲಿ ಹತ್ತುವ ಅಸುಂಡಿಯೆಂಬ ಊರನ್ನು ಹೊಕ್ಕರು. ಆ ಕಾಲಕ್ಕೆ ಬಸಪ್ಪ ಬಡಿಗೇರ ಎಂಬ ಗೃಹಸ್ಥನು ಕುಲಿಮೆಯನ್ನು ಹೊತ್ತಿಸಿ, ತಿದಿಯಿಂದ ಊದುತ್ತಲಿದ್ದನು. ಕೆಂಡಗಳು ನಿಗಿನಿಗಿಯಾಗಿದ್ದವು. ಮಹಾರಾಜರು ಹೋಗ ಹೋಗುತ್ತ ಆ ಅಗ್ನಿಯನ್ನು

ಕಂಡು, ಕಾಸಿಕೊಳ್ಳುವದಕ್ಕಾಗಿ ಆದರ ಬಳಿಗೆ ಹೋದರು. ಸ್ವಾಮಿಗಳು ಮುಂಜಾವಿನಲ್ಲಿ ತನ್ನ ಮನೆಗೆ ಆಗಮಿಸಿದರೆಂಬ ಸಂತೋಷದಿಂದ ಬಸಪ್ಪನು ಅವರಿಗೆ ಮಣೆಯನ್ನು ತಂದುಕೊಟ್ಟು, ಆದರದಿಂದ ಕುಳ್ಳಿರಿಸಿ ಕಾಸಿಕೊಳ್ಳಲು ವಿನಂತಿ ಮಾಡಿಕೊಂಡನು. ಮಹಾರಾಜರು ಕೆಲಹೊತ್ತು ಕಾಸಿಕೊಂಡು ಮುಂದೆ ಹೊರಡುವಾಗ ತಮ್ಮ ಶಿಷ್ಯರಲ್ಲಿ ಒಬ್ಬನನ್ನು ಕರೆದು "ತಮ್ಮಾ, ಈ ಅಗ್ನಿನಾರಾಯಣನ ಮುಂದೆ ಎಂಟು ಆಣೆ ದಕ್ಷಿಣೆಯನ್ನಿಡು" ಎಂದು ಹೇಳಿದರು. ಶಿಷ್ಯನು ಹಾಗೆ ಮಾಡಲು ಬಸಪ್ಪನು "ಬುದ್ಧೀ, ತಮ್ಮಂಥ ಸತ್ಪುರುಷರು ವಹಿಸಿದ ದೇವರ ಕಾರ್ಯಕ್ಕೆ ನಮ್ಮಂಥವರು ಕೈಯಿಂದಾದಷ್ಟು ಸಹಾಯ ಮಾಡಬೇಕು. ಹೀಗಿದ್ದು ತಾವೇ ಎಂಟಾಣೆಯನ್ನು ಕೊಡುವಿರಲ್ಲ! ಇದನ್ನು ನಾನು ಹೇಗೆ ತಕ್ಕೊಳ್ಳಲಿ?" ಎಂದು ಪ್ರಶ್ನೆ ಮಾಡಿದನು. ಅದಕ್ಕೆ ಮಹಾರಾಜರು ನಕ್ಕು "ತಮ್ಮಾ, ಇದು ಸಿನ್ನದಲ್ಲ. ಅಗ್ನಿನಾರಾಯಣನ ದಕ್ಷಿಣೆಯು. ಇದನ್ನು ನೀನು ವೆಚ್ಚಮಾಡದೆ ಪೂಜಿಸುತ್ತ ಹೋದರೆ ನಿನಗೆ ಕಲ್ಯಾಣವಾಗುವದು" ಎಂದು ಹೇಳಿದರು. ಬಸಪ್ಪನು ಅದರಂತೆ ಮಾಡಿ ಸುಖಿಯಾದನು.

ದೈವಿಕ ಪ್ರಭಾವ

ಶಕೆ ೧೮೬೫ ರಲ್ಲಿ ಚಿದಂಬರನ ಉತ್ಸವಕ್ಕಾಗಿ ಮಹಾರಾಜರು ದೊಡ್ಡವಾಡಕ್ಕೆ ಸಂಚಾರಕ್ಕಾಗಿ ಹೋಗಿದ್ದರು. ಅಲ್ಲಿ ಒಂದು ದಿನ ಮಹಾರಾಜರು ತಮ್ಮ ಶಿಷ್ಯ ಪರಿವಾರ ಸಹಿತವಾಗಿ ರಾಮಪ್ಪ ಬೆಟಗೇರಿ ಎಂಬವನ ಮನೆಗೆ ಹೋದರು. ಚಿದಂಬರನ ನಾಮಗರ್ಜನೆ ಮಾಡಿ ಎಲ್ಲರೂ ಕುಳಿತುಕೊಂಡರು. ರಾಮಪ್ಪನ ಮನಸಿನಲ್ಲಿ ವಿಕಲ್ಪ ಬಂತು. ಅವನು ಒಳಗೆ ಹೋಗಿ ನಾಲ್ಕು ಒಳ್ಳೆಯ ರೂಪಾಯಿಗಳನ್ನೂ ನಾಲ್ಕು ಕೆಟ್ಟ ರೂಪಾಯಿಗಳನ್ನೂ ಕೂಡಿಸಿ ೮ ರೂಪಾಯಿಗಳನ್ನು ಒಂದೇ ಮುಷ್ಟಿಯಲ್ಲಿ ತಕ್ಕೊಂಡು ಬಂದನು. ಮತ್ತು ಮಹಾರಾಜರ ಮುಂದೆ ಒಳ್ಳೇ ವಿನಯ ಭಕ್ತಾದಿಗಳನ್ನು ತೋರಿಸುತ್ತ ಅವರಿಟ್ಟ ಗುಂಡಿಯಲ್ಲಿ ಆ ಎಂಟೂ ರೂಪಾಯಿಗಳನ್ನು ಒಮ್ಮೆಲೇ ಸುರುವಿದನು. ಆದರೆ ಎಂತಹ ಆಶ್ಚರ್ಯ! ಒಳ್ಳೆಯವಾಗಿದ್ದ ನಾಲ್ಕು ರೂಪಾಯಿಗಳಷ್ಟೇ ಆ ಗುಂಡಿಯೊಳಗೆ ಬಿದ್ದು,

ಮೊಟ್ಟೆಯಾಗಿದ್ದ ನಾಲ್ಕೂ ರೂಪಾಯಿಗಳು ಹೊರಗೆ ಬಿದ್ದವು. ಇದೇನು ಚಮತ್ಕಾರವೆಂದು ಶಿಷ್ಯರು ಕೆಳಗೆ ಬಿದ್ದ ರೂಪಾಯಿಗಳನ್ನು ತಕ್ಕೊಂಡು ನೋಡಲು ವಸ್ತುಸ್ಥಿತಿಯು ಹೊರಬಿತ್ತು. ಇದರಿಂದ ರಾಮಪ್ಪನ ಮೋರೆ ಸಣ್ಣದಾಯಿತು. ಅವನು ದುಃಖದಿಂದ ಮತ್ತೆ ಒಳಕ್ಕೆ ಹೋಗಿ ಬೇರೆ ನಾಲ್ಕು ರೂಪಾಯಿ ಕೊಡಬೇಕೆಂದು ಯತ್ನ ನಡಿಸಿದನು. ಅವನನ್ನು ಕುರಿತು ಮಹಾರಾಜರು ಉಪದೇಶ ಮಾಡಿದರು:— ''ಅಪ್ಪಾ, ಭಾವನೆಯಂತೆ ದೇವರಿದ್ದಾನೆ. ಶ್ರೀ ಚಿದಂಬರಸಿಗೆ ನೀನು ಪೂರ್ಣ ಸಂತೋಷದಿಂದ ಅರ್ಪಿಸಿದ ನಾಲ್ಕೇ ರೂಪಾಯಿಗಳು ಸಾಕು. ಅಷ್ಟರಿಂದಲೇ ಅವನು ತೃಪ್ತನಾಗಿದ್ದಾನೆ. ಹೆಚ್ಚಿನ ರೂಪಾಯಿಗಳು ಬೇಡ. ನೀನು ದುಃಖದಿಂದ ಅವುಗಳನ್ನು ತಂದುಕೊಟ್ಟರೂ ದೇವರಿಗೆ ಸಮಾಧಾನವಾಗಲಾರದು. ಆದರೆ ದೇವರ ಸಂಗಡ ಹುಡುಗಾಟವಾಡುವದು ಮಾತ್ರ ತರವಲ್ಲ, ಕಂಡೆಯಾ.''

ಶಿಷ್ಯರ ಪರೀಕ್ಷೆ

ಮಹಾರಾಜರು ಗುರ್ಲಹೊಸೂರ ದತ್ತಮಂದಿರದಲ್ಲಿ ಇದ್ದಾಗ್ಗೆ ಒಂದು ದಿನ ರಾತ್ರಿ ಭಜನೆಯಾಗಿ ಕಥೆಯನ್ನು ಹೇಳಿದ ಬಳಿಕ ಎಲ್ಲರನ್ನೂ ಉದ್ದೇಶಿಸಿ ಕೇಳಿದರು- ''ನೀವೆಲ್ಲರು ಇಲ್ಲಿಗೆ ಬಂದು ಒಮ್ಮನಸ್ಸಿನಿಂದ ನಾವು ಹೇಳುವ ಉಪದೇಶಗಳನ್ನು ಕೇಳುವಿರಷ್ಟೇ. ಆದರೆ ಇಂದು ನಿಮ್ಮ ಪರೀಕ್ಷೆ ತಕ್ಕೊಳ್ಳಬೇಕೆಂದಿರುವೆವು. ನಾವು ಹೇಳಿದ ಮಾತನ್ನು ಕೇಳಲಿಕ್ಕೆ ಯಾರು ಸಿದ್ಧರಿರುವಿರಿ ? ಹೇಳಿರಿ.'' ಆದಕ್ಕೆ ಉತ್ತರವಾಗಿ ಪ್ರತಿಯೊಬ್ಬನು ''ನಾನು, ನಾನು'' ಎಂದು ಹೇಳಹತ್ತಿದನು ಮಹಾರಾಜರು ಮುಗುಳುನಗೆ ನಗುತ್ತ ಎಲ್ಲರನ್ನೂ ನಿರೀಕ್ಷಿಸಿ, ಅವರಲ್ಲಿ ವೃದ್ಧ ಗೃಹಸ್ಥರಾದ ಶೇ. ಅಪ್ಪಾ ಭಟ್ಟ ಗಲಗಲಿಯವರನ್ನು ಮುಂದಕ್ಕೆ ಕರೆದು ಹೇಳಿದರು:— ''ಮನುಷ್ಯನು ಕಾಮಕ್ರೋಧಾದಿ ಷಡ್ರಿಪುಗಳಲ್ಲಿ ಒಂದೊಂದನ್ನು ಕಡಿಮೆ ಮಾಡುತ್ತ ಸಾಗಲು ಕ್ರಮದಿಂದ ಅವನ ಮನಸ್ಸು ನಿರ್ಮಲವಾಗಿ ಸರಮಾರ್ಥದ ಕಡೆಗೆ ಹೊರಳಹತ್ತುತ್ತದೆ. ನಾನು ಅಂಥವನು, ನಾನು ಇಂಥವನು, ನನಗೆ ಅದು ಬೇಕು, ನನಗೆ ಇದು ಬೇಕು, ಎಂಬ ದೇಹದ ಅಭಿಮಾನವನ್ನು ಎಲ್ಲಕ್ಕೂ ಮೊದಲು ಬಿಡಬೇಕಾಗುತ್ತದೆ. ದೇಹಾಭಿಮಾನ ಬಿಟ್ಟ ಹೊರತು ಯಾವ ಪರಮಾರ್ಥ

ಸಾಧನವೂ ದಕ್ಕಲಾರದು. ಇದಕ್ಕೆ ನಿಮ್ಮ ಅಭಿಪ್ರಾಯವೇನು?'' ಎಲ್ಲ ಸಂಗತಿಗಳು ಸತ್ಯವೆಂದು ಹೇಳಿ ಅಪ್ಪಾಭಟ್ಟರು ತಲೆ ಅಲ್ಲಾಡಿಸಿದರು. ಮತ್ತು ತಾವು ದೇಹಾಭಿಮಾನವನ್ನು ಸಂಪೂರ್ಣವಾಗಿ ಬಿಟ್ಟಿರುವೆವೆಂದು ಹೇಳಿದರು. ಮಹಾರಾಜರು ''ಹಾಗಾದರೆ ನಮ್ಮ ಮಾತು ಕೇಳುತ್ತೀರಾ?'' ಎಂದು ಕೇಳಿದರು. ''ಕೇಳುವೆನು'' ಎಂದು ಭಟ್ಟರು ಉತ್ತರಕೊಟ್ಟರು. ಅದಕ್ಕೆ ಮಹಾರಾಜರು ನಗುತ್ತ ಹೇಳಿದರು:— ''ನೀವು ಉಟ್ಟ ಧೋತರವನ್ನು ತೆಗೆದಿಟ್ಟು ಮೂರು ಸಾರೆ ಅತ್ತಿತ್ತ ಓಡಾಡಿರಿ.'' ಇದನ್ನು ಕೇಳಿ ಎಲ್ಲರಿಗೂ ಚಮತ್ಕಾರವೆನಿಸಿತು. ಅಪ್ಪಾಭಟ್ಟರಿಗೆ ದಿಗಿಲು ಬಿತ್ತು. ಮಹಾರಾಜರು ಚೇಷ್ಟೆ ಮಾಡುವರೆನ್ನಬೇಕೇ? ಅವರು ಎಂದೂ ಹಾಗೆ ಹುಡುಗಾಟವಾಡುವವರಲ್ಲ. ಸತ್ಯವಾಗಿಯೂ ಹಾಗೆ ಕೇಳುವರೆನ್ನಬೇಕೇ, ವಿಚಿತ್ರವಾದ ಆಜ್ಞೆಯಾಗಿದೆ. ಏನು ಮಾಡಲಿ, ಎಂದು ಅಪ್ಪಾಭಟ್ಟರು ದಿಙ್ಮೂಢರಾಗಿ ನಿಂತಿರಲು, ಮಹಾರಾಜರು ಮತ್ತೊಮ್ಮೆ ಅವರಿಗೆ ಹಾಗೆ ಮಾಡಿರಿ ಎಂದು ಹೇಳಿದರು. ಅಪ್ಪಾಭಟ್ಟರೂ ಬಡಿದೆಬ್ಬಿಸಿದವರಂತೆ ''ದೇವರೂ, ಇದನ್ನೊಂದು ಬಿಟ್ಟು ಬೇಕಾದದ್ದು ಹೇಳಿರಿ, ಕೇಳುವೆನು'' ಎಂದು ನುಡಿದರು ಅದಕ್ಕೆ ಮಹಾರಾಜರು ಗಹಗಹಿಸಿ ನಗುತ್ತ ''ಅಪ್ಪಾಭಟ್ಟರೇ, ದೇಹಾಭಿಮಾನವನ್ನು ಬಿಡುವ ಮಾತು ಸಾಮಾನ್ಯವಲ್ಲ, ಕಂಡಿರಾ. ನೀವು ಎಷ್ಟರ ಮಟ್ಟಿಗೆ ದೇಹಾಭಿಮಾನವನ್ನು ಬಿಟ್ಟಂತಾಗಿದೆಯೆಂಬದನ್ನು ನಿಮ್ಮ ಅಂತಃಕರಣದ ಈಗಿನ ಸ್ಥಿತಿಯ ಮೇಲಿಂದ ಪರೀಕ್ಷಿಸಿ ನೋಡಿರಿ. ವೇದಾಂತದ ದೊಡ್ಡ ದೊಡ್ಡ ಮಾತುಗಳನ್ನು ಬಾಯಿಂದ ಆಡುವದು ಸುಲಭ. ಅದರಂತೆ ಕೃತಿ ಮಾಡುವದು ಬಹಳ ಕಷ್ಟ'' ಎಂದರು. ಅಪ್ಪಾಭಟ್ಟರು ಮೋರೆ ತಗ್ಗಿಸಿ ಸುಮ್ಮನಾದರು. ಆ ಮೇಲೆ ಮಹಾರಾಜರು ಅದೇ ಸಂಗತಿಯನ್ನು ಮಾಡಲಿಕ್ಕೆ ಸಿದ್ಧರಿದ್ದವರು ಮುಂದೆ ಬರಬೇಕೆಂದು ಹೇಳಿದರು. ಎಲ್ಲರೂ ಅಪ್ಪಾಭಟ್ಟರ ಉತ್ತರವನ್ನೇ ಕೊಟ್ಟರು. ಆಗ ಮಹಾರಾಜರು ಮತ್ತೆ ಹೇಳಿದರು: ''ನಾವು ಇನ್ನೊಮ್ಮೆ ನಿಮ್ಮ ಪರೀಕ್ಷೆ ಮಾಡುವೆವು. ನೀವು ನಿಮ್ಮ ವಿಚಾರಗಳನ್ನು ಗಟ್ಟಿಗೊಳಿಸಿಕೊಂಡು ಅದಕ್ಕೆ ಸಿದ್ಧರಾಗಿರಿ.''

ಮೇಲೆ ವಿವರಿಸಿದ ಮಾತಿಗೆ ಕೆಲವು ದಿನಗಳು ಕಳೆದು ಹೋದವು. ಭಜನೆಗಾಗಿ ಜನರೆಲ್ಲ ಮತ್ತೆ ಕೂಡಿದ್ದರು. ನಿತ್ಯಕ್ರಮ ಮುಗಿದ ಮೇಲೆ ಮಹಾರಾಜರು "ನಮ್ಮ ಮಾತನ್ನು ಕೇಳುವಿರಾ?" ಎಂದು ಎಲ್ಲರಿಗೂ ಪ್ರಶ್ನೆ ಮಾಡಿದರು. ಅದಕ್ಕೆ ಕುಳಿತವರೆಲ್ಲ ಒಪ್ಪಿಕೊಂಡು ತಲೆ ಅಲ್ಲಾಡಿಸಿದರು. ಮಹಾರಾಜರು ಮತ್ತೆ ಅಪ್ಪಾಭಟ್ಟರನ್ನು ಮುಂದೆ ಕರೆದು "ನೀವು ನಮ್ಮ ಮಾತನ್ನು ಕೇಳುತ್ತಿದ್ದರೆ, ನಿಮ್ಮ ಕೈಯಲ್ಲಿ ಕಸುವಿದ್ದಷ್ಟು ನನ್ನ ಕಪಾಳಕ್ಕೆ ಹೊಡೆಯಿರಿ" ಎಂದರು. ಅಪ್ಪಾಭಟ್ಟರು ವಿಸ್ಮಿತರಾಗಿ ಸುಮ್ಮನೇ ನಿಂತರು. ಆಗ ಮಹಾರಾಜರು ಪ್ರತಿಯೊಬ್ಬರಿಗೂ ಅದೇ ಮಾತನ್ನು ಹೇಳಿದರು. ಯಾರೂ ಮುಂದೆ ಬರಲಿಲ್ಲ ಕೊನೆಗೆ ಮಹಾರಾಜರು ಶಿಷ್ಯನಾದ ಕುಬೇರನನ್ನು ಕರೆದು "ಕುಬೇರ, ನಿನ್ನ ಕೈಯಲ್ಲಿ ಕಸುವಿದ್ದಷ್ಟು ನನ್ನ ಕಪಾಳಕ್ಕೆ ಹೊಡೆ, ನೋಡುವ" ಎನಲು, ಕುಬೇರನು ಹಿಂದೆ ಮುಂದೆ ನೋಡದೆ ಮಹಾರಾಜರ ಕಪಾಳಕ್ಕೆ ಜಗ್ಗಿ ಹೊಡೆದನು. ಕುಬೇರನ ಪೆಟ್ಟಿಗೆ ಮಹಾರಾಜರ ಕಪಾಳದ ಮೇಲೆ ಬಾಸಳು ಎದ್ದಿತು. ಇದನ್ನು ನೋಡಿದವರಿಗೆಲ್ಲ ದುಃಖವಾಯಿತು. ಆದರೆ ಮಹಾರಾಜರ ಶಾಂತ ಮುದ್ರೆಯಲ್ಲಿ ಎಳ್ಳಷ್ಟು ಹೆಚ್ಚು ಕಡಿಮೆಯಾಗಲಿಲ್ಲ. ಕಪಾಳವು ಬಾತಿದ್ದರೂ, ಮಹಾರಾಜರು ಅದನ್ನು ಸಹನೆ ಮಾಡಿಕೊಂಡು ಎಲ್ಲ ಜನರಿಗೆ "ಮಾತು ಕೇಳುವದಾದರೆ ಹೀಗೆ ದೇಹಾಭಿಮಾನವನ್ನು ಬಿಡಬೇಕಾಗುವದು" ಎಂದು ಸಮಾಧಾನದಿಂದ ಉತ್ತರಕೊಟ್ಟರು. ವಾಚಕರೇ, ನೀವೂ ವಿಚಾರಿಸಿ ನೋಡಿರಿ:— ಕುಬೇರನು ಮಾಡಿದ್ದು ಯೋಗ್ಯವೋ ಅಯೋಗ್ಯವೋ?

ಮತ್ತೊಂದು ಸಲ ಮಹಾರಾಜರು ವಾಜೀಂದ್ರ, ಕುಬೇರ ಮೊದಲಾವ ಶಿಷ್ಯರನ್ನು ಸಂಗಡ ಕರಕೊಂಡು ಉತ್ಸವದ ಸಲುವಾಗಿ ಪ್ರವಾಸ ಮಾಡುತ್ತಿದ್ದರು. ದಾರಿಯಲ್ಲಿ ಒಂದು ತೋಟ ಹತ್ತಿತು. ಆ ತೋಟದಲ್ಲಿ ಒಂದು ಬಾವಿ ಇತ್ತು. ಕುಬೇರನು ಮಹಾರಾಜರ ಹತ್ತಿರದಲ್ಲಿಯೇ ಇದ್ದನು. ಮಹಾರಾಜರು ಕುಬೇರನಿಗೆ "ಕುಬೇರಾ, ಈ ಬಾವಿಯಲ್ಲಿ ಜಿಗಿ, ನೋಡುವ" ಎಂದು ಆಜ್ಞೆ ಮಾಡಿದರು. ಕುಬೇರನಿಗೆ ಈಸಲಕ್ಕೆ ಬರುತ್ತಿದ್ದಿಲ್ಲ. ಆದರೂ ಮಹಾರಾಜರ ಬಾಯಿಂದ ಆಜ್ಞೆ ಹೊರಬೀಳುವದೊಂದೇ ತಡ, ಅವನು "ದೇವರೂ, ಜಿಗಿದೆನು" ಎಂದು ಅನ್ನುತ್ತ ಬಾವಿಯೊಳಗೆ ಹಾರಿಕೊಂಡನು

ಮತ್ತು ಈಸಲಾರದೆ ಮುಳುಗಹತ್ತಿದನು. ಎಲ್ಲರಿಗೂ ಇದರಿಂದ ಒಮ್ಮೆಲೇ ಆಶ್ಚರ್ಯ-ಭಯಗಳುಂಟಾದವು. ಮಹಾರಾಜರು ವಾಜೀಂದ್ರರಿಗೆ ಹೇಳಿ ತೋಟದ ಆಳುಗಳನ್ನು ಕರೆಯಿಸಿ ಅವರ ಸಹಾಯದಿಂದ ಕುಬೇರನನ್ನು ಮೇಲಕ್ಕೆ ತೆಗಿಸಿದರು ಅವನು ಮೇಲಕ್ಕೆ ಬಂದು ಮಹಾರಾಜರಿಗೆ ನಮಸ್ಕಾರ ಮಾಡಿ ನಿಂತನು. ಮಹಾರಾಜರು ಅವನ ಬೆನ್ನು ಚಪ್ಪರಿಸಿ ''ಇದ್ದರೆ ಇಂಥ ಶಿಷ್ಯರಿರಬೇಕು'' ಎಂದು ಅವನನ್ನು ಹೊಗಳಿದರು.

ಪ್ರಾಣದಾನ

ಶಕೆ ೧೮೧೫ ರಲ್ಲಿ ಯಾವನೋ ಒಬ್ಬ ದಾರಿಕಾರನು ಗುರ್ಲಹೊಸೂರ ಚಿದಂಬರೇಶ್ವರನ ಗರ್ಭಾಲಯದ ಮುಂಭಾಗದಲ್ಲಿ ಕಟ್ಟಿದ ಗಂಟೆಗಳ ಬುಡಕ್ಕೆ ಕಲ್ಲು ಹಾಸಿಗೆಯ ಮೇಲೆ ಮಲಗಿಕೊಂಡಿದ್ದನು. ಆಗ ಮಹಾರಾಜರ ಶಿಷ್ಯರಾದ ಬೆಹರೆಯವರು ಅಕಸ್ಮಾತ್ತಾಗಿ ಗುಡಿಗೆ ಹೋಗಿ ದೇವದರ್ಶನವನ್ನು ತಕ್ಕೊಳ್ಳುವಾಗ ಗಂಟೆಯ ನಾಲಿಗೆಯು ಸಡಿಲಾದದ್ದು ಕಂಡುಬಂತು. ಕೂಡಲೇ ಅವರು ಕಂಬಾರರವನ ಮನೆಗೆ ಹೋಗಿ ದೊಡ್ಡ ಕಬ್ಬಿಣ ಇಕ್ಕಳವನ್ನು ತಕ್ಕೊಂಡು ಬಂದು, ಅದನ್ನು ಸರಿಪಡಿಸಬೇಕೆನ್ನುವಷ್ಟರಲ್ಲಿ, ಕೈಯೊಳಗಿನ ಇಕ್ಕಳವು ಜಾರಿ ಬುಡದಲ್ಲಿ ಮಲಗಿಕೊಂಡಿದ್ದ ಪ್ರವಾಸಿಕನ ಸೊತ್ತಿಯ ಮೇಲಿನ ಮರ್ಮಸ್ಥಾನಕ್ಕೆ ಕಸುವಿನಿಂದ ಬಡೆಯಿತು. ಅದರಿಂದ ಆ ಮನುಷ್ಯನು ಒಮ್ಮೆ ಆರ್ತಧ್ವನಿಯಿಂದ ಒದರಿ ಗತಪ್ರಾಣನಾದನು. ಬೆಹರೆಯವರು ಹೌಹಾರಿದರು. ಅವರು ಭೀತಿಯಿಂದ ನಡುಗುತ್ತ ಮಹಾರಾಜರ ಮುಂದೆ ಬಂದರು. ಆದರೆ ಅಂಜಿಕೆಯಿಂದ ಅವರ ಬಾಯಿಂದ ಶಬ್ದಗಳು ಕೂಡ ಹೊರಡಲೊಲ್ಲವು. ಮಹಾರಾಜರು ಅವ ಬೆನ್ನುರ ಹತ್ತಿ ಅಪಘಾತವಾದ ಸ್ಥಳಕ್ಕೆ ಬಂದು ನೋಡಿದರು. ದಾರಿಹೋಕನ ಎದೆ ಹಿಡಿದು ಪರೀಕ್ಷೆ ಮಾಡಿದರು. ಶ್ವಾಸವಿರಲಿಲ್ಲ. ಅವನು ಸತ್ತು ಹೋಗಿರುವನೆಂಬ ಬಗ್ಗೆ ಯಾರಿಗೂ ಸಂದೇಹಬರುವಂತಿರಲಿಲ್ಲ. ಮಹಾರಾಜರು ಗರ್ಭಾಲಯದಲ್ಲಿ ಪ್ರವೇಶಿಸಿ, ಕೆಲಹೊತ್ತು ಧ್ಯಾನಸ್ಥರಾಗಿ ಕುಳಿತು, ಬಳಿಕ ಭಸ್ಮವನ್ನೂ ಕಮಂಡಲೋದಕವನ್ನೂ ತಂದು ಮೈಮೇಲೆ ಸಿಂಪಡಿಸಿದರು. ಕೆಲ ಹೊತ್ತಿನ ಮೇಲೆ ಪ್ರವಾಸಿಯು ನೆರಳುತ್ತ ಅತ್ತಿತ್ತ ನೋಡಹತ್ತಿದನು.

ಸ್ವಾಮೀ ಮಹಾರಾಜರು ನಡೆದ ಸಂಗತಿಯನ್ನು ಅವನಿಗೆ ತಿಳಿಸಲು ಅವನು ಆಶ್ಚರ್ಯಪಟ್ಟನು. ಹಾಗೂ ನೋವು ಬಹಳವಾಗಿದೆಯೆನ್ನಹತ್ತಿದನು. ಮುಂದೆ ಅವನಿಗೆ ಉಪಚಾರ ಮಾಡಲು, ತುಸು ದಿವಸಗಳಲ್ಲಿ ಪೂರ್ಣಗುಣವಾಗಿ ತನ್ನ ಸ್ಥಳಕ್ಕೆ ಹೊರಟು ಹೋದನು

ರೋಗ ಪರಿಹಾರ

ಶಕೆ ೧೮೩೮ (ಸನ್ ೧೯೧೬)ರ ಚಾತುರ್ಮಾಸ್ಯಕ್ಕಾಗಿ ಮಹಾರಾಜರು ಅಷ್ಟಗಿಯಲ್ಲಿ ಕುಳಿತಿದ್ದರು. ಅವರ ಚಾತುರ್ಮಾಸ್ಯವು ಮುಗಿಯಲಿಕ್ಕೆ ಇನ್ನೂ ಹದಿನೈದು ದಿನಗಳಿದ್ದವು. ಆ ಕಾಲಕ್ಕೆ ಮುಚ್ಚಂಡಿಯೊಳಗೆ ಕುಲಕರ್ಣಿಯರಾದ ಶ್ರೀ ರಾಮಚಂದ್ರ ಬಾಬಾರಾವ ಕುಲಕರ್ಣಿ ಎಂಬುವವರು ಬೇನೆಯಿಂದ ಹಾಸಿಗೆ ಹಿಡಿದಿದ್ದರು. ರೋಗವು ಹೆಚ್ಚಾದುದರಿಂದ ತಾವಿನ್ನು ಬದುಕುವ ಆಸೆಯಿಲ್ಲೆಂದು ಅವರಿಗೆ ನಿಶ್ಚಯವಾಯಿತು. ಆದರೆ ಅವರದು ಮೊದಲಿನಿಂದಲೂ ಮಹಾರಾಜರ ಮೇಲೆ ಬಹಳ ವಿಶ್ವಾಸ ಮಹಾರಾಜರು ತೀರ ಸಮೀಪದಲ್ಲಿರುವದರಿಂದ ಅವರನ್ನೊಮ್ಮೆ ಸಾಯುವ ಮೊದಲು ಕಣ್ತುಂಬ ನೋಡಬೇಕೆಂದು ಅವರು ಬಯಸಿದರು. ಅಷ್ಟಗಿಯಿಂದ ಮುಚ್ಚಂಡಿಯು ಒಂದೆರಡು ಮೈಲು ಮಾತ್ರ. ಆದುದರಿಂದ ಅವರು ತಮ್ಮ ಕುಟುಂಬದವರೊಳಗಿನವರೊಬ್ಬರನ್ನು ಮಹಾರಾಜರ ಕಡೆಗೆ ಕಳಿಸಿಕೊಟ್ಟರು. ಆದರೆ ಆಗ ಮಹಾರಾಜರ ಚಾತುರ್ಮಾಸ್ಯ ವ್ರತವಿದ್ದುದರಿಂದ ಅವರು ಗ್ರಾಮಾಂತರ ಮಾಡುವಂತಿರಲಿಲ್ಲ. ರಾಮಚಂದ್ರರಾಯರ ಸ್ಥಿತಿಯನ್ನು ಕೇಳಿ ಅವರಲ್ಲಿ ಪ್ರೇಮ ಸೆಲೆಯು ಒಡೆಯಿತು. ಆದರೆ ಏನು ಮಾಡುವದು? ''ನಮ್ಮ ಚಾತುರ್ಮಾಸ್ಯ ಮುಗಿದೊಡನೆ ಬರುತ್ತೇನೆ.'' ಎಂದು ಬಂದವನಿಗೆ ಹೇಳಿ ಕಳಿಸಿದರು. ರೋಗಿಯು ಮರುದಿವಸ ಮತ್ತೆ ಮಹಾರಾಜರಿಗೆ ಹೇಳಿ ಕಳಿಸಿದನು: — ''ಮಹಾರಾಜ, ನಾನು ಹೇಗೂ ಜೀವ ಬಿಡುತ್ತಿದ್ದೇನೆ. ಆದರೆ ಒಮ್ಮೆ ತಮ್ಮ ಭೆಟ್ಟೀ ತಕ್ಕೊಂಡು ಸಾದುಬೇಕೆನ್ನುತ್ತೇನೆ'' ಮಹಾರಾಜರು ಮತ್ತೆ ಹೇಳಿ ಕಳಿಸಿದರು: — ''ಭಾದ್ರಪದ ಹುಣ್ಣಿವೆಗೆ ನಮ್ಮ ವ್ರತವು ಮುಗಿಯುತ್ತದೆ. ನಾವು ಆದಿನ ತಪ್ಪದೇ ಬರುತ್ತೇನೆ. ನಮ್ಮನ್ನು ಕರೆಯಲಿಕ್ಕೆ ನೀವಾರೂ ಬರುವ ಅಗತ್ಯವಿಲ್ಲ. ಮತ್ತು ಅಲ್ಲಿಯ ತನಕ

ಅವನು ಸಾಯುವದೂ ಇಲ್ಲ. ಆ ಬಗ್ಗೆ ಯಾರೂ ಚಿಂತೆ ಮಾಡುವ ಕಾರಣವಿಲ್ಲ.''

ಮುಂದೆ ಭಾದ್ರಪದದ ಹುಣ್ಣಿಮೆಯ ದಿನ ಬಂತು. ಮಹಾರಾಜರು ಆ ಹೊತ್ತು ಮುಚ್ಚಂಡಿಗೆ ಹೋಗುವದಕ್ಕಾಗಿ ಹೊರಟಿ ಬಿಟ್ಟರು ಅವರು ಹೊರಬಿದ್ದುದನ್ನು ನೋಡಿ ಶಿಷ್ಯರೂ ಬೆನ್ನು ಹತ್ತಿದರು ಮಹಾರಾಜರು ವಾಯುವೇಗದಿಂದ ಹೊರಟಿದ್ದರು. ಮುಂದೆ ತುಸು ದೂರ ಹೋಗುವಷ್ಟರಲ್ಲಿ ಮೈಮೇಲಿನ ಹೊದ್ದುಕೊಳ್ಳುವ ಶಾಟಿಯು ತಾನಾಗಿಯೇ ಜರಿದು ಬಿದ್ದು ಕೊಂಡಿತು. ಶಿಷ್ಯರು ಅದನ್ನೆತ್ತಿಕೊಂಡು ಬೆನ್ನು ಹತ್ತಿದರು. ಇನ್ನೂ ತುಸು ಮುಂದಕ್ಕೆಹೋಗುವಷ್ಟರಲ್ಲಿ ಮಹಾರಾಜರು ಉಟ್ಟುಕೊಂಡ ಶಾಟಿಯೂ ಕೆಳಗೆ ಬಿದ್ದಿರುವದೆಂದು ಶಿಷ್ಯರಿಗೆ ಕಂಡಿತು ಶಿಷ್ಯರು ಗಾಬರಿಯಾಗಿ ಅದನ್ನೂ ಎತ್ತಿಕೊಂಡು ಓಡುತ್ತ ಮಹಾರಾಜರನ್ನು ಹಿಂಬಾಲಿಸಿದರು. ಹತ್ತಿಪ್ಪತ್ತು ಹೆಜ್ಜೆ ಮುಂದುವರಿಯುವಷ್ಟರಲ್ಲಿ ಮಹಾರಾಜರ ಕೌಪೀನವೂ ದಾರಿಯಲ್ಲಿ ಸಿಕ್ಕಿತು. ಶಿಷ್ಯರ ಚಿಂತೆಯು ಮತ್ತೂ ಹೆಚ್ಚಾಯಿತು. ಮಹಾರಾಜರು ದಿಗಂಬರ ರೂಪದಲ್ಲಿಯೇ ಮುಚ್ಚಂಡಿಗೆ ಹೋದರು. ಬಾಬಾರಾಯರು ಆಸನ್ನ ಮರಣ ಸ್ಥಿತಿಯಲ್ಲಿ ಹಾಸಿಗೆಯ ಮೇಲೆ ಮಲಗಿಕೊಂಡಿದ್ದರು. ಮನೆಯವರೆಲ್ಲರೂ ಗೋಳಿಟ್ಟು ಅಳುತ್ತಿದ್ದರು. ಮಹಾರಾಜರು ಅವರ ಮನೆಯೊಳಕ್ಕೆ ಹೋದವರೇ ಉಚ್ಚಸ್ವರದಿಂದ ಚಿದಂಬರನ ನಾಮ ಘೋಷವನ್ನು ಮಾಡಿದರು. ಆ ಧ್ವನಿಯು ಕವಿಯ ಮೇಲೆ ಬಿದ್ದೊಡನೆ ರೋಗಿಯ ಜಾಡ್ಯವು ತೊಲಗಿ, ಅವನು ಕಣ್ಣು ತೆರೆದನು. ಕೂಡಲೇ ಅವನ ಕಣ್ಣಿಗೆ ಮಹಾರಾಜರ ಮೂರುತಿಯ ದರುಶನ ದೊರಕಿತು. ಅದರಿಂದ ಅವನಿಗೆ ಇನ್ನೂ ಹೆಚ್ಚು ಉತ್ಸಾಹವೆನಿಸಹತ್ತಿತು. ಮಹಾರಾಜರು ಅವನನ್ನು ಕೆಲಹೊತ್ತು ತಮ್ಮ ಕಣ್ಣುಗಳಿಂದ ಎವೆಯಿಕ್ಕದೆ ನೋಡಿದರು. ಅದರಿಂದ ಅವರು ರೋಗಿಯ ರೋಗವನ್ನೇ ಹರಣ ಮಾಡುತ್ತಿರುವರೇನೋ ಎಂದೆನಿಸಿತು. ಯಾಕೆಂದರೆ ಅಷ್ಟರಿಂದಲೇ ರಾಮರಾಯರಿಗೆ ಚನ್ನಾಗಿ ಎಚ್ಚರಿಕೆ ಬಂದು ಅವರು ತುಸು ತುಸು ಮಾತಾಡಹತ್ತಿದರು. ಮಹಾರಾಜರು ಅವರ ಸಮೀಪಕ್ಕೆ ಹೋಗಿ ಅವರ ಬಾಯಲ್ಲಿ ತುಸು ಮಂತ್ರಿಸಿದ ವಿಭೂತಿಯನ್ನು

ಹಾಕಿದರು. ಮತ್ತು ಅವರ ಮೈಮೇಲೆ ತಮ್ಮ ಸುಕೋಮಲವಾದ ಕೈಗಳನ್ನು ಆಡಿಸಿದರು. ಅಯಿತು. ರಾಮರಾಯರಿಗೆ ಸಂಜೀವನಿ ಮಾತ್ರೆ ಸಿಕ್ಕಂತಾಯಿತು. ಸಾವಿನ ದವಡೆಯೊಳಗೆ ಸಿಕ್ಕು, ಈಗೋ ಇನ್ನೊಂದು ಗಳಿಗೆಗೋ, ಎಂದು ಒದ್ದಾಡುತ್ತಿದ್ದ ರಾಮರಾಯರು ಇದರಿಂದ ಹುರುಪು ಗೊಂಡವರಾಗಿ ಒಮ್ಮೆಲೇ ಎದ್ದು ಕುಳಿತರು. ಮತ್ತು ಮಹಾರಾಜರ ಚರಣಗಳ ಮೇಲೆ ತಮ್ಮ ಮಸ್ತಕವನ್ನಿಟ್ಟು ನಮಿಸಿದರು. ಅವರ ಕಣ್ಣುಗಳಿಂದ ಕೃತಜ್ಞತೆಯ ಆನಂದಾಶ್ರುಗಳು ಸೂಸಿ ಹರಿದವು ಮಹಾರಾಜರು ಅವರಿಗೆ ಅಭಯಕೊಟ್ಟು ಮಾತನಾಡಿದರು:— 'ಅಪ್ಪಾ, ಚಿದಂಬರನು ದಯಾಳುವಾಗಿದ್ದಾನೆ. ಆತನು ನಿಮ್ಮಂಥ ಸದ್ಭಕ್ತರ ಇಷ್ಟಾರ್ಥಗಳನ್ನು ಪೂರೈಸುವದಕ್ಕಾಗಿಯೇ ನೆಲಸಿದ್ದಾನೆ ನೀವಿನ್ನು ಹೆದರುವ ಕಾರಣವಿಲ್ಲ.' ಅಷ್ಟರಲ್ಲಿ ಶಿಷ್ಯರು ಧಾವಿಸಿ ಅಲ್ಲಿಗೆ ಬಂದರು ಆಗ ಮಹಾರಾಜರು ಅವರ ಕಡೆಯಿಂದ ತಮ್ಮ ಶಾಟಗಳನ್ನು ಇಸಕೊಂಡು, ಮತ್ತೆ ತಮ್ಮ ಮೊದಲಿನ ವೇಷವನ್ನು ಧರಿಸಿ ಅಷ್ಟಗಿಗೆ ಮರಳಿದರು. ನಾಲ್ಕೆಂಟು ದಿವಸಗಳಲ್ಲಿ ರಾಮರಾಯರಿಗೆ ಪೂರ್ಣವಾಗಿ ಗುಣವಾಯಿತೆಂದು ಬೇರೆ ಹೇಳುವ ಆವಶ್ಯಕತೆಯಿಲ್ಲ.

ಸತ್ತ ಕೂಸು ಹೊರಗೆ ಬಂದದ್ದು

ಮಹಾರಾಜರು ಚಾತುರ್ಮಾಸ್ಯಕ್ಕಾಗಿ ಅಷ್ಟಗಿಯಲ್ಲಿದ್ದಾಗ ಒಮ್ಮೆ ಒಂದು ವಿಚಿತ್ರವಾದ ಘಟನೆ ನಡೆಯಿತು. ಇನಾಮದಾರರಾದ ಶ್ರೀ ಕೇಶವರಾಯರ ಪತ್ನಿ ಕೃಷ್ಣಾತಾಯಿಯವರು ಗರ್ಭಿಣಿಯರಿದ್ದು ಅವರಿಗೆ ಪೂರ್ಣ ದಿನಗಳಾಗಿದ್ದವು. ಆದರೆ ಏನು ಮಾಡಿದರೂ ಕೂಸು ಹೊರಗೆ ಬರಲೊಲ್ಲದು. ಪ್ರಸೂತಿವಾಯುವು ಸಾಕಷ್ಟು ಪ್ರಬಲನಾಗಿದ್ದಿಲ್ಲ. ಅವರು ಎಷ್ಟೋ ಹೊತ್ತು ಬೇನೆ ತಿನ್ನುತ್ತ ಕುಳಿತರು. ಆದರೆ ಏನೂ ಫಲವಾಗಲಿಲ್ಲ. ಒಂದೆರಡು ದಿನಗಳು ಈ ರೀತಿಯಲ್ಲಿ ಕಳೆದವು. ಮಹಾರಾಜರು ಇನಾಮದಾರರ ಮನೆಯಲ್ಲಿಯೇ ವಾಸಿಸುತ್ತಿದ್ದರು. ಅದನ್ನೆಲ್ಲ ನೋಡಿ ಸ್ವಾಭಾವಿಕವಾಗಿ ಮಹಾರಾಜರಿಗೂ ತುಸು ಕೆಡಕೆನಿಸಿತು. ಕೊನೆಗೆ ಕೇಶವರಾಯರು ಗಾಬರಿಯಾಗಿ ಬೆಳಗಾಂವಿಗೆ ಒಬ್ಬ ಮನುಷ್ಯನನ್ನು ಮುದ್ದಾಂ ಕಳಿಸಿ,

ಒಬ್ಬ ದಾಯಿ (ನರ್ಸ)ಯನ್ನು ಕರೆಕಳುಹಿದರು. ದಾಯಿಯು ತನ್ನ ಸೂಲಗಿತ್ತಿಯ ಕೆಲಸದಲ್ಲಿ ಒಳ್ಳೇ ಅನುಭವಿಕಳೂ ಚಾಣಾಕ್ಷಳೂ ಇದ್ದಳು. ಅವಳು ಬಂದೊಡನೆ ಬಾಣಂತಿಗೆ ಇಂಜೆಕ್ಶನ್ ಕೊಟ್ಟಳು ಮತ್ತು ತನಗೆ ಗೊತ್ತಿದ್ದ ಎಲ್ಲ ಉಪಚಾರವನ್ನು ಮಾಡಿದಳು. ಆದರೆ ಏನೂ ಗುಣತೋರಲಿಲ್ಲ. ದಾಯಿಯು ಹೆಚ್ಚೆಚ್ಚು ಪರೀಕ್ಷೆ ಮಾಡಿ ನೋಡಿದಂತೆ ಒಳಗಿನ ಕೂಸು ಮೃತವಾಗಿರುವದೆಂದು ಕಂಡುಬಂತು. ಅವಳ ಮೋರೆಯು ತೀರ ಒಣಗಿ ಹೋಯಿತು ಒಳಗಿನ ಕೂಸು ಸತ್ತಿದ್ದರೆ ಅದು ಹೊರಗೆ ಬರಲಿಕ್ಕೆ ಆಸ್ಪದನೇ ಇರಲಿಲ್ಲ. ಹೊಟ್ಟೆಯೊಳಗೆ ಸತ್ತಿದ್ದ ಕೂಸನ್ನು ಹೊರಗೆ ತೆಗೆದು ತಾಯಿಯನ್ನು ಬದುಕಿಸುವ ಉಪಾಯವೆಂದರೆ ಒಂದೇ:— ತಾಯಿಯನ್ನು ಆಪರೇಶನ್ ಮಾಡುವದು. ಆದರೆ ಅಷ್ಟಗಿಯಲ್ಲಿ ಅಂತಹ ಡಾಕ್ಟರರು ಯಾರೂ ಇರಲಿಲ್ಲ. ಅಷ್ಟಗಿಗೆ ತೀರ ಸಮೀಪವಿದ್ದ ಊರೆಂದರೆ ಬೆಳಗಾಂವಿ. ಅದು ಅಲ್ಲಿಂದ ೮೦ ಮೈಲು ದೂರದಲ್ಲಿದೆ. ಎಂದ ಮೇಲೆ ಎಲ್ಲ ರೀತಿಯಿಂದಲೂ ನಿರಾಶೆಯೇ ಎನಿಸಹತ್ತಿತು. ಅಷ್ಟೊತ್ತಿಗೆ ಮೂರೂ ಸಂಜೆಯ ಹೊತ್ತಾಯಿತು. ದಾಯಿಯು ನಿರಾಶೆಯಿಂದ ''ಇನ್ನು ಯಾವ ಉಪಾಯವೂ ಉಳಿದಿಲ್ಲ. ಕೂಸಿನ ಆಸೆಯಂತೂ ಇಲ್ಲವೇ ಇಲ್ಲ. ಆದರೆ ತಾಯಿಯ ಪ್ರಾಣಕ್ಕೂ ಗಂಡಾಂತರವಿದೆ. ಅವರನ್ನು ಈಗಲೇ ಹಾಸ್ಪಿಟಲ್ಲಿಗೆ ಒಯ್ಯುವದು ಯೋಗ್ಯ. ಆದರೆ ಹಾಗೆ ಒಯ್ಯುವ ಸ್ಥಿತಿಯಲ್ಲಿಯೂ ಅವರಿಲ್ಲ'. ಎಂದು ಹೇಳಿಬಿಟ್ಟಳು. ಈ ಸುದ್ದಿಯಿಂದ ಕೇಶವರಾಯರ ಮೋರೆಯು ಕಪ್ಪಿಟ್ಟಿತು ಆದರೂ ಅವರು ದುಃಖವನ್ನು ಒಳಗೇ ನುಂಗಿಕೊಂಡು ಮಹಾರಾಜರ ಭಜನೆಯಲ್ಲಿ ಬಂದು ಸೇರ್ಪಡೆಯಾದರು. ಮಹಾರಾಜರು ಭಜನೆಯಲ್ಲಿ ತೊಡಗಿದ್ದರೂ, ಅವರು ಕೃಷ್ಣಾತಾಯಿಯವರ ಸ್ಥಿತಿಯನ್ನು ಕೇಳಿ ತಿಳಿದುಕೊಂಡಿದ್ದರು. ಮಹಾರಾಜರು ಸಹ ಅವರ ಸುದ್ದಿಯಿಂದ ಕಳವಳಗೊಂಡಿದ್ದರು. ಅವರು ಆರ್ತರಂತೆ ಆಗ ಕಾಣುತ್ತಿದ್ದರು. ಒಳಗಿಂದೊಳಗೆ ಅವರು ಚಿದಂಬರನಿಗೆ ಮೊರೆಯಿಡುತ್ತಿದ್ದರೋ ಏನೋ. ಇದ್ದಕ್ಕಿದ್ದಂತೆ ಒಮ್ಮೆಲೇ ಮಹಾರಾಜರಿಗೆ ಒಳ್ಳೇ ಆವೇಶ ಬಂದಂತಾಯಿತು. ಅವರು ಶ್ರೀ ಕೇಶವರಾಯರನ್ನು ಕರೆದು ''ಕೇಶವರಾವ, ನಿಶ್ಚಿಂತೆಯಿಂದ ದೇವರಿಗೆ ಆರತೀ ಮಾಡಿರಿ. ಚಿದಂಬರನು ಸಮರ್ಥನಿದ್ದಾನೆ. ಅವನಿಗೆ ಅಸಾಧ್ಯವಾದ ಮಾತು ಯಾವುದಿದೆ?'' ಎಂದು

ಹೇಳಿದರು. ಮಹಾರಾಜರ ಆಜ್ಞೆಯಂತೆ ಕೇಶವರಾಯರು ದೇವರಿಗೆ ಆರತೀ ಮಾಡಿ ಪ್ರಾರ್ಥನೆ ಮಾಡಿಕೊಂಡರು. ಅತ್ತ ಕಡೆಗೆ ತಾಯಿಗೆ ಗಾಢನಿದ್ರೆ ಹತ್ತಿತ್ತು. ಮತ್ತು ಆವರು ಕಣ್ಣು ತೆರೆಯುವದರೊಳಗಾಗಿ ಸತ್ತ ಕೂಸು, ಹೇಗೋ ಹೊರಗೆ ಬಂದು ಬಿದ್ದಿತ್ತು. ದಾಯಿಯು ಇದನ್ನು ನೋಡಿ ಬಟ್ಟು ಕಚ್ಚಿದಳು. 'ಇದೆಲ್ಲ ದೇವರ ಲೀಲೆ. ಮಹಾರಾಜರ ಕೃಪಾಕಟಾಕ್ಷದ ಫಲ. ಇಲ್ಲದಿದ್ದರೆ ಇನಾಮದಾರ ಬಾಯೀಸಾಹೇಬರು ಬದುಕುವದು ಶಕ್ಯವೇ ಇದ್ದಿಲ್ಲ.' ಎಂದು ಅವಳು ಸ್ಪಷ್ಟವಾಗಿ ಹೇಳಿದಳು. ಕೇಶವರಾಯರು ಕೃತಜ್ಞತೆಯಿಂದ ಮಹಾರಾಜರ ಕಾಲುಗಳ ಮೇಲೆ ತಲೆಯಿಟ್ಟು, ಶತಶಃ ನಮಸ್ಕಾರ ಮಾಡಿದರು.

೨೩ ಮಹಾರಾಜರ ಉನ್ಮನ್ಯವಸ್ಥೆಯ ಪ್ರಸಂಗಗಳು

ಜೀವನ್ಮುಕ್ತರ ಸ್ಥಿತಿಯು ಅದ್ಭುತವಾದುದು. ಅವರ ಮನಸ್ಸಿನ ಸ್ಥಿತಿಯನ್ನು ಯಾರೂ ಸರಿಯಾಗಿ ಅಳೆಯಲಾರರು. ''ಸಾಮಾನ್ಯ ಜನರಿಗಂತೂ ಅವರ ಆಳವು ಎಂದೂ ಗೊತ್ತಾಗಲಾರದು'' ಎಂದು ಶ್ರೀ ಗೌಡಪಾದಾಚಾರ್ಯರು ಮಾಂಡೂಕ್ಯಕಾರಿಕೆಯಲ್ಲಿ (೪. ೯೫) ಅಪ್ಪಣೆ ಕೊಡಿಸಿದ್ದಾರೆ. ಅದರ ಮೇಲೆ ಭಾಷ್ಯಬರೆಯುವಾಗ ಶ್ರೀಮಚ್ಛಂಕರಭಗವತ್ಪಾದರವರು ''ಆತ್ಮಜ್ಞಾನಿಯ ಗತಿಯು ದೇವತೆಗಳಿಗೆ ಕೂಡ ತಿಳಿಯಲಾರದ ಮಾತು. ಪಕ್ಷಿಗಳು ಆಕಾಶದೊಳಗೆ ಹಾರಾಡುವವೇನೋ ಸರಿಯೇ. ಆದರೆ ಅವು ಹಾರಾಡಿದ ಮಾರ್ಗದ ಚಿಹ್ನಗಳೇನೂ ಆಕಾಶದಲ್ಲಿ ಉಳಿಯುವದಿಲ್ಲ. ಆದದುರಿಂದ ಅವುಗಳ ಮಾರ್ಗವನ್ನು ಬಟ್ಟು ಮಾಡಿ ತೋರಿಸಿ ಕೊಡುವದು ಹೇಗೆ ಕಠಿಣವಾಗಿರುವದೋ, ಅದರಂತೆ ಸಾಕ್ಷಾತ್ಕಾರಿಗಳ ಗತಿಯನ್ನು ನಿಶ್ಚಿತವಾಗಿ ತೋರಿಸಿ ಕೊಡುವದು ಅಶಕ್ಯವಾಗಿದೆ'' ಎಂಬ ಮಾತುಗಳನ್ನು ಉದಾಹರಿಸಿ ಬರೆಯುತ್ತಾರೆ.

ಯಾವನು ಪರಮಾತ್ಮ ಸಾಕ್ಷಾತ್ಕಾರ ಪಡೆದ ಮೇಲೂ ಜೀವಿಸಿರುವನೋ ಅವನಿಗೇ ಜೀವನ್ಮುಕ್ತನೆಂದು ಹೆಸರು. ಪರಮಾತ್ಮಸಾಕ್ಷಾತ್ಕಾರವು ಮೊದಲನೆಯ ಸಲ ಆಗುವಾಗ ಜೀವವು ಗಾಬರಿಯಾಗುತ್ತದೆ. ಅಚ್ಚರಿಗೊಳ್ಳುತ್ತದೆ. ಆಗ ಒಮ್ಮೊಮ್ಮೆ ಅದು ಮೂರ್ಛೆಹೊಂದುವ ಸಂಭವವೂ ಇರುತ್ತದೆ. ಆ ಮೂರ್ಛೆಯು ತೀವ್ರವಾದರೆ ಮನುಷ್ಯನು ಬದುಕುವದೇ ಶಕ್ಯವಿಲ್ಲ. ಅವನು ಬ್ರಹ್ಮಸಾಕ್ಷಾತ್ಕಾರ ಹೊಂದಿದ ಮೇಲೆ ಸಾಮಾನ್ಯರಂತೆ ಜೀವಿಸಲಾರನು. ಆ ಅವಸ್ಥೆಯಲ್ಲಿಯೇ ಕೆಲವರ ಕೊನೆಯಾಗುವದು. ಮತ್ತೆ ಕೆಲವರು ಆ ಅವಸ್ಥೆಯೊಳಗೆ ಮೃತರಾಗದೆ ಜೀವದಿಂದ ಉಳಿಯುತ್ತಾರೇನೋ ಸರಿ. ಆದರೆ ಆ ಬ್ರಹ್ಮಾನಂದದ ಸ್ಥಿತಿಯೊಳಗಿಂದ ಅವರು

ವ್ಯವಹಾರದ ಭೂಮಿಕೆಗೆ ತಿರುಗಿ ಬರಲಿಕ್ಕೆ ಸಿದ್ಧರಿರುವದಿಲ್ಲ. ಅವರ ಮನಸ್ಸು ಆ ಪರಮಾತ್ಮ ಸ್ವರೂಪದಲ್ಲಿಯೇ ನಿಂತುಬಿಡುತ್ತದೆ. ಇಂತಹ ಜನರು ಉನ್ಮತ್ತರಂತೆ ವರ್ತಿಸುವರು. ಈಗ ಸುಮಾರು ೧೫೦ ವರುಷಗಳ ಹಿಂದೆ ದಕ್ಷಿಣ ಹಿಂದುಸ್ತಾನದಲ್ಲಾಗಿ ಹೋದ ಶ್ರೀ ಸದಾಶಿವೇಂದ್ರ ಯತಿಗಳ ಹೆಸರನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು. ಅವರು ಕೊನೆಯ ವರೆಗೆ ಮೈಮೇಲೆ ಎಚ್ಚರಿಕೆ ಇಲ್ಲದ ಸ್ಥಿತಿಯಲ್ಲಿಯೇ ವಾಸಿಸುತ್ತಿದ್ದರು. ಅವರು ಅಡ್ಡಾಡಬೇಕು, ಯಾರಾದರೂ ಬಾಯಲ್ಲಿ ಏನಾದರೂ ಹಾಕಿದರೆ ತಿನ್ನ ಬೇಕು—ಹೀಗೆ ಅವರ ಶಾರೀರಿಕ ಕ್ರಿಯೆಗಳೆಲ್ಲವೂ ನಡೆಯುತ್ತಿದ್ದಂತೆ ಕಾಣುತ್ತಿತ್ತು. ಆದರೆ ಅವರ ಲಕ್ಷ್ಯವು ವ್ಯವಹಾರದ ಕಡೆಗೆ ಎಷ್ಟೂ ಇರ-ಲಿಲ್ಲ ಅವರೊಂದು ಸಲ ಕಾವೇರಿ ನದಿಯ ತೀರದಲ್ಲಿ ಕುಳಿತಿರುವಾಗ ಮಹಾಪೂರ ಬಂದು, ಅವರು ಉಸುಬಿನ ಗುಡ್ಡೆಯಲ್ಲಿ ಎಷ್ಟೋ ದಿನ ಹೂತು ಹೋಗಿದ್ದರಂತೆ. ಆ ಮೇಲೆ ನದಿ ಇಳಿದ ಮೇಲೆ ಅಕಸ್ಮಾತ್ತಾಗಿ ಅವರ ಶೋಧವಾಯಿತು.

ಮತ್ತೆ ಕೆಲವರು ಬ್ರಹ್ಮಾನಂದದಲ್ಲಿಯೇ ಹೆಚ್ಚು ಕಾಲ ನಿಮಗ್ನರಾಗಿ-ದ್ದರೂ ನಡುನಡುವೆ ಕೆಲವು ವೇಳೆಯಾದರೂ ವ್ಯಾವಹಾರಿಕ ಜಗತ್ತಿನ ಕಲ್ಪನೆಯುಳ್ಳವರಾಗಿರುತ್ತಾರೆ. ಆದರೆ ಅವರಿಗೆ ವ್ಯವಹಾರವು ತೀರ ಗೌಣ-ವಾಗಿರುತ್ತದೆ. ಅವರು ವ್ಯಾವಹಾರಿಕ ಎಚ್ಚರಿಕೆಗೆ ಬಂದರೂ ಅವರ ಸ್ಥಿತಿಯು ಸಣ್ಣ ಹುಡುಗರಂತೆ ಅಥವಾ ಪಿಶಾಚಿಗಳಂತೆ ಇರುತ್ತದೆ. ಸಣ್ಣ ಮಕ್ಕಳಿಗೆ ನಿಶ್ಚಿತವಾದ ರಾಗದ್ವೇಷಾದಿಗಳಾಗಲಿ, ಇಂತಹ ವಸ್ತುಗಳೇ ಬೇಕೆಂಬ ಆಗ್ರಹವಾಗಲಿ, ಇಂಥಲ್ಲಿಯೇ ಇರಬೇಕೆಂಬ ಹಟವಾಗಲಿ ಯಾವುದೂ ಇರುವದಿಲ್ಲ. ಅವುಗಳಿಗೆ ತಮ್ಮ ಸ್ವಾರ್ಥದ ತಿಳಿವಳಿಕೆಯಿರುವ-ದಿಲ್ಲ. ಅವು ಸರ್ವಸ್ವಿಯಾಗಿ ಪರರ ಮೇಲೆಯೇ ಅವಲಂಬಿಸಿರುತ್ತವೆ. ಕೆಲವು ಜೀವನ್ಮುಕ್ತರು ತಮ್ಮ ಬಾಹ್ಯ ಆಚರಣೆಯಲ್ಲಿ ಹೀಗೆಯೇ ಇರುವದ-ರಿಂದ ಅವರನ್ನು 'ಬಾಲ'ರಿಗೆ ಹೋಲಿಸುವ ರೂಢಿಬಿದ್ದಿದೆ. ಬಾಲೋನ್ಮತ್ತ ಪಿಶಾಚವತ್'' ಎಂಬದು ಜೀವನ್ಮುಕ್ತರ ವಿಷಯವಾಗಿ ಹೇಳುವ ಮಾತು. ಕೆಲವು ಜ್ಞಾನಿಗಳಿಗೆ ಪಿಶಾಚಿಗಳ ಸಾವನ್ನು ಕೊಡುವ ಕಾರಣವೇನಂದರೆ:

ಪಿಶಾಚಿಗಳ ಸ್ಥಿತಿಯು ಹೇಗೆ ವಿಚಿತ್ರವಾಗಿರುವದೋ ಹಾಗೆ ಇವರ ಸ್ಥಿತಿಯಾದರೂ ಇರುತ್ತದೆ. ಪಿಶಾಚಿಗಳು ಕೆಲವರಿಗೆ ಹಿತವನ್ನೂ ಕೆಲವರಿಗೆ ಅಹಿತವನ್ನೂ ಮಾಡುವಂತೆ ಈ ತರದ ಜ್ಞಾನಿಗಳೂ ಸಾಂಸಾರಿಕರೊಡನೆ ವಿಕ್ಷಿಪ್ತವಾಗಿ ವರ್ತಿಸುತ್ತಾರೆ. ಆದರೆ ಏನೇ ಆದರೂ ಜ್ಞಾನಿಗಳಿಗೂ ಪಿಶಾಚಿಗಳಿಗೂ ಭೇದವಿದೆ. ಜ್ಞಾನಿಗಳಿಂದ ಕೆಲವರಿಗೆ ಹಿತವೂ, ಕೆಲವರಿಗೆ ಅಹಿತವೂ ಆಗುವಂತೆ ಕಂಡರೂ, ಅದಕ್ಕೆ ಜ್ಞಾನಿಗಳು ಜವಾಬದಾರರಲ್ಲ. ಆಯಾ ಜನರ ಪ್ರಾರಬ್ಧಕ್ಕನುಸರಿಸಿ ಜ್ಞಾನಿಗಳ ವರ್ತನೆಯಿರುತ್ತದೆ. ಆದರೆ ಪಿಶಾಚಿಗಳ ಮತ್ತು ಜ್ಞಾನಿಗಳ ನಡುವಿರುವ ಸಾಮ್ಯವು ಅವರಿಬ್ಬರಿಗೂ ಸಮಾನವಾಗಿರುವ ವಿಕ್ಷಿಪ್ತತನದಲ್ಲಿ ಮಾತ್ರ ಇರುತ್ತದೆ.

ಮೇಲೆ ವರ್ಣಿಸಿದವರ ಹೊರತಾಗಿ ಇನ್ನೊಂದು ವರ್ಗದ ಜೀವನ್ಮುಕ್ತರಿರುತ್ತಾರೆ. ಮೇಲೆ ಹೇಳಿದ ಸತ್ಪುರುಷರಿಂದ ಸಂಸಾರಾಸಕ್ತರಾದ ಸಾಮಾನ್ಯರಿಗೆ ವಿಶೇಷ ಉಪಯೋಗವಾಗುವದು ಬಲು ಕಡಿಮೆ. ಆದರೆ ಇನ್ನೊಂದು ವರ್ಗದ ಸತ್ಪುರುಷರು ಮಾತ್ರ ಸಾಮಾನ್ಯರಿಗೆ ಕಾಮಧೇನುವಾಗಿರುತ್ತಾರೆ. ಅವರಿಗೆ ಪರಮಾತ್ಮ ಜ್ಞಾನವಾಗಿಬಿಟ್ಟಿರುವದರಿಂದ ಅವರಿಗೆ ಪರಮಾರ್ಥದ ಬಗ್ಗೆ ಸಂದೇಹವೇ ಉಳಿದಿರುವದಿಲ್ಲ. ಆದರೆ ಲೌಕಿಕ ವ್ಯವಹಾರದ ಎಚ್ಚರಿಕೆಯಿರುವದರಿಂದ ಅವರು ಲೌಕಿಕ ವ್ಯವಹಾರ ಮಾಡಲಿಕ್ಕೂ ಹಿಂದೆ ಬೀಳುವಂತಿರುವದಿಲ್ಲ. ವೇದಾಂತ ಜ್ಞಾನ ಮತ್ತು ಲೌಕಿಕ ವ್ಯವಹಾರಗಳು ಹೀಗೆ ಒಂದೇ ಕಡೆಗೆ ಹೇಗೆ ಕೂಡುವದು ಶಕ್ಯವಿದೆ, ಎಂದು ವಾಚಕರಿಗೆ ಸಂದೇಹ ಬರಬಹುದು. ಹಾಗಿದ್ದರೆ ಜ್ಞಾನಿಗೂ ಲೌಕಿಕನಿಗೂ ಇರುವ ಭೇದವೇನಾದರೂ ಏನು, ಅವರಿಬ್ಬರ ಬಾಹ್ಯಾಚರಣೆಯು ಒಂದೇ ಇರುವದೆಂದಾಯಿತಲ್ಲ, ಎಂದೂ ವಾಚಕರು ಕೇಳಬಹುದು. ಅದಕ್ಕೆ ಉತ್ತರವಿಷ್ಟೇ:— ಹೌದು, ಅವರಿಬ್ಬರ ಬಾಹ್ಯಾಚರಣೆಗಳು ಒಂದೇ ತೆರನಾಗಿ ಕಂಡರೂ, ಅವರವರ ಮನೋವೃತ್ತಿಗಳು ತೀರ ಭಿನ್ನವಾಗಿರುತ್ತವೆ. ಜ್ಞಾನಿಯು ವ್ಯವಹಾರ ಮಾಡುತ್ತಿರುವಂತೆ ಕಂಡರೂ, ಅವನ ಮನಸ್ಸಿನಲ್ಲಿ ತನ್ನ ದೇಶ, ಕಾಲಮಾನ ಪರಿಸ್ಥಿತಿ, ಸಾಮಾಜಿಕ ಜೀವನ ಕೌಟುಂಬಿಕ ಮತ್ತು ವೈಯಕ್ತಿಕ ದರ್ಜೆ—ಸ್ವಲ್ಪದರಲ್ಲಿ ಹೇಳುವದಾದರೆ

ತನ್ನ ವರ್ಣ, ಆಶ್ರಮ, ವಯಸ್ಸು, ಅವಸ್ಥೆ ಮೊದಲಾದವುಗಳ ಬಗ್ಗೆ ಅವನಲ್ಲಿ ಎಷ್ಟೂ ಅಹಂಕಾರವಿರುವದಿಲ್ಲ. ಮತ್ತು ಅವನು ಕರ್ಮಗಳನ್ನು ಮಾಡುತ್ತಿರುವಂತೆ ಕಂಡರೂ ಅವುಗಳ ಫಲಗಳ ಬಗ್ಗೆ ಅವನಲ್ಲಿ ಆಗ್ರಹವಿರುವದಿಲ್ಲ. ಇದರಿಂದ ಅವನು ಬದ್ಧನಾಗುವದಿಲ್ಲ. ಆದರೆ ವ್ಯಾವಹಾರಿಕ ಮನುಷ್ಯನು ಇದಕ್ಕೆ ವಿರುದ್ಧವಾಗಿ ಅಹಂಕಾರಯುಕ್ತನಾಗಿ ಫಲಾಸೆಯಿಂದ ಕರ್ಮಮಾಡಿ ಸಿಕ್ಕಿಬೀಳುತ್ತಾನೆ. ಇವರಿಬ್ಬರ ಆಚರಣೆಯ ನಡುವಿನ ತಾರತಮ್ಯವನ್ನು ಒಂದು ಉದಾಹರಣೆಯಿಂದ ಸ್ಪಷ್ಟಗೊಳಿಸಬಹುದು. ದೊಡ್ಡವನೊಬ್ಬನು ಕೆಲವು ಹುಡುಗರನ್ನು ಕೂಡಿಕೊಂಡು, ಅವರನ್ನು ರಮಿಸುವದಕ್ಕಾಗಿ ಒಂದು ಪಗಡೆಯಾಟವನ್ನು ಆಡುತ್ತಿರುವನೆಂದು ತಿಳಿಯುವ. ಪ್ರೌಢನಾದವನು ಆ ಆಟವಾಡುವ ಪೂರ್ತಿ ಆಟದ ನಿಯಮಗಳನ್ನು ಅನುಸರಿಸಿ ನಡೆಯುತ್ತಾನೆ. ಆದರೆ ಆ ಆಟವ ಕೊನೆಯ ನಿರ್ಣಯದ ಬಗ್ಗೆ ಉದಾಸೀನನಾಗಿರುತ್ತಾನೆ ಆದರೆ ಎರಡು ವಿರುದ್ಧ ಪಕ್ಷಕಟ್ಟಿಕೊಂಡು ಆಟವಾಡುತ್ತಿರುವ ಹುಡುಗರಿಗೆ ಹಾಗೆನಿಸುವದಿಲ್ಲ ಅವರು ಆಟದ ಯಶಾಪಯಶಗಳಿಗೆ ಇಲ್ಲದ ಮಹತ್ವಕೊಟ್ಟು ಬಡಿವಾಡುತ್ತಾರೆ. ಪಗಡೆಯಾಟದಲ್ಲಿ ಬಡಿದಾಡಿ ಕೊನೆಯ ವರೆಗೆ ಮಾತು ಬಿಟ್ಟಿರುವ ತಿಳಿಗೇಡಿಗಳನ್ನೆಷ್ಟೋ ಸಲ ನಾವು ನೋಡುವದಿಲ್ಲವೇ ? ಪ್ರೌಢನಾದವನು ಆಟದ ಸ್ವರೂಪವನ್ನು ಬಲ್ಲವನಾಗಿ ಅದರಿಂದ ವಿನೋದವನ್ನು ಪಡೆಯುವನು. ಎರಡನೆಯವರಿಗೂ ಮನೋರಂಜನೆಯನ್ನೂ ವಿನೋದವನ್ನೂ ಕೊಡಬಲ್ಲನು. ಆದರೆ ಅದರೊಳಗೆ ಸಿಕ್ಕಲಾರನು.

ಅದರಂತೆ ಜೀವನ್ಮುಕ್ತರು ಜಗತ್ತಿನೊಳಗೆ ಇರುವಂತೆ ಕಂಡರೂ, ಅವರು ಈ ಜಗತ್ತಿಗೆ ಸಿಕ್ಕಿಕೊಂಡವರಲ್ಲ. ಅವರು ಸತ್ಯದೇವಿಯ ದರುಶನ ಪಡೆದವರಾಗಿ, ಮಾನವರನ್ನುದ್ಧರಿಸಲಿಕ್ಕೆಂದೇ ತಿರುಗಿ ಬಂದು ಅವರೊಳಗೆ ವ್ಯವಹಾರ ಮಾಡುತ್ತಾರೆ. ಈ ಮಾತನ್ನು ಪಾಶ್ಚಾತ್ಯರೊಳಗೆ ಸುಪ್ರಸಿದ್ಧ ಗ್ರೀಕ ತತ್ತ್ವಜ್ಞಾನಿಯೆಂದು ಹೆಸರುಗೊಂಡ ಪ್ಲೇಟೋನ ರೂಪಕದಿಂದ ವಿವರಿಸಿ ಹೇಳಬಹುದು:— ಒಂದು ಗುಹೆಯಿರುವದೆಂದು ತಿಳಿಯೋಣ. ಆ ಗುಹೆಯು ಒಳಗೆ ಇಳಿಜಾರಾಗುತ್ತ ಹೋಗುತ್ತದೆ. ಆ ಗುಹೆಯ ಮುಖವನ್ನು ದಾಟಿ ಒಳಕ್ಕೆ ಹೋದೊಡನೆ ಬೆಂಕಿಯೊಂದು ಪ್ರಜ್ವಲಿತವಾಗಿ ಉರಿಯುತ್ತಿರುತ್ತದೆ. ಅದನ್ನು ದಾಟಿದ

ಮೇಲೆ ಒಂದು ಅಡ್ಡ ದಾರಿಯಿದೆ. ಆ ದಾರಿಯಗುಂಟ ಒಂದು ತುಸು ಎತ್ತರವಾದ ಗೋಡೆಯಿದೆ. ಆ ಗೋಡೆಯ ಗುಂಟ ದಾರೀ ಹಿಡಿದು ಅನೇಕ ಜನರು ಹೋಗುತ್ತಿದ್ದಾರೆ. ಅವರು ತಮ್ಮೊಡನೆ ನಾನಾ ತರದ ಪಾತ್ರೆಗಳನ್ನೂ, ಪ್ರತಿಮೆಗಳನ್ನೂ, ಪ್ರಾಣಿಗಳ ಗೊಂಬೆಗಳನ್ನೂ ಒಯ್ಯುತ್ತಿದ್ದಾರೆ. ಅವು ಕಟ್ಟಿಗೆ, ಕಲ್ಲು ಅಥವಾ ಬೇರೆ ದ್ರವ್ಯಗಳಿಂದ ಮಾಡಿದವುಗಳಾಗಿರುತ್ತವೆ. ದಾರಿಕಾರರು ಕೆಲವರು ಹರಟೆ ಹೊಡೆಯುತ್ತಿದ್ದಾರೆ. ಬೇರೆ ಕೆಲವರು ಸುಮ್ಮನಿದ್ದಾರೆ. ಆ ಗೋಡೆಯನ್ನು ದಾಟಿ ಹಾಗೆಯೇ ಗುಹೆಯೊಳಗೆ ಮುಂದಕ್ಕೆ ಹೋದರೆ ಅಲ್ಲಿ ತುಸು ತಗ್ಗಿನೊಳಗೆ ಎಷ್ಟೋ ಜನ ಸೆರೆಯಾಳುಗಳಿದ್ದಾರೆ. ಆ ಗೋಡೆಗೆ ಬೆನ್ನು ಮಾಡಿಕೊಂಡು ಅವರು ಗುಹೆಯ ತಳಭಾಗವನ್ನು ನೋಡುತ್ತ ಕುಳಿತಿರುತ್ತಾರೆ. ಅವರ ಕಾಲುಗಳಲ್ಲಿ ಮತ್ತು ಕುತ್ತಿಗೆಗಳ ಮೇಲೆ ಜಡವಾದ ಬೇಡಿಗಳು ಕಂಡು ಬರುತ್ತವೆ. ಅವುಗಳ ಉದ್ದೇಶವೇನಂದರೆ ಅವರು ಎದ್ದು ನಿಲ್ಲಬಾರದು, ಮತ್ತು ಕುತ್ತಿಗೆಯನ್ನು ಗೋಡೆಯ ಕಡೆಗೆ ತಿರುಗಿಸಬಾರದು, ಎಂಬದು. ಆ ಕೈದಿಗಳು ಚಿಕ್ಕಂದಿನಿಂದಲೂ ಇದೇ ರೀತಿಯಲ್ಲಿ ಬದ್ಧರಾಗಿದ್ದಾರೆ. ಎಂದ ಮೇಲೆ ಅದರ ಪರಿಣಾಮವೇನಾಗುವದು ? ಅವರು ಆ ಗುಹೆಯ ತಳಭಾಗದ ಮೇಲೆ ಬೀಳುತ್ತಿರುವ ತಮ್ಮ ನೆರಳುಗಳನ್ನಷ್ಟೇ ನೋಡಬಲ್ಲವರಾಗುತ್ತಾರೆ. ಮತ್ತು ಆ ಗೋಡೆಯ ಗುಂಟ ಹೋಗುವ ಜನರ ಮತ್ತು ಅವರ ಸಂಗಡ ಇರುವ ವಸ್ತುಗಳ ನೆರಳುಗಳೂ ಆ ತಳಭಾಗದ ಮೇಲೆ ಬಿದ್ದು ಅವರಿಗೆ ದೃಶ್ಯವಾಗಿರುತ್ತವೆ. ಈ ರೀತಿ ನೆಳಲುಗಳನ್ನಷ್ಟೇ ಅಲ್ಲದೆ, ಅವರಿಗೆ ಬೇರೆ ವಸ್ತುಗಳನ್ನೇ ನೋಡಲಿಕ್ಕೆ ಸಿಕ್ಕಲಾರದು. ಆದುದರಿಂದ ಆ ನೆಳಲುಗಳೇ ನಿಜವಾದ ವಸ್ತುಗಳೆಂದು ಅವರಿಗೆ ತಪ್ಪು ತಿಳಿವಳಿಕೆಯಾಗುವದು ಸಹಜವಾಗಿದೆ.

ಗುಹೆಯ ಹೊರಗೆ ಸೂರ್ಯನನ್ನೂ, ಸೂರ್ಯ ಪ್ರಕಾಶವನ್ನೂ, ನಿಜವಾದ ವಸ್ತುಗಳನ್ನೂ, ಜಗತ್ತನ್ನೂ, ನೋಡಿದ ಪುಣ್ಯವಂತನೊಬ್ಬನು ಒಳಗೆ ಆ ಕೈದಿಗಳು ಕುಳಿತಲ್ಲಿಗೆ ಬಂದು, ಅವರಿಗೆ "ಅಪ್ಪಗಳಿರಾ, ನಿಮಗೆ ಕಾಣುವದೆಲ್ಲ ನೆಳಲು ಮಾತ್ರ. ನೀವು ಸದ್ವಸ್ತುಗಳನ್ನು ಇನ್ನೂ ನೋಡಿಯೇ ಇರುವದಿಲ್ಲ. ಅವುಗಳ ಮಹತಿಯನ್ನು ನಾನು ಎಷ್ಟೆಂದು ವರ್ಣಿಸಲಿ ?"

ಎಂದು ಹೇಳಿದರೆ, ಅವರಿಗೆ ಅದು ಸತ್ಯವೆನಿಸಬಹುದೇ ? ಆದರೂ ಅವನು ಅವರಿಗೆ ನಾನಾತರದಿಂದ ಉಪದೇಶ ಮಾಡಿ, ಅವರ ಮನವೊಲಿಸುವನೆಂದು ತಿಳಿಯುವ ಮುಳ್ಳಿನ ಬೇಡಿಗಳು ಚುಚ್ಚುತ್ತಿದ್ದರೂ, ಅದನ್ನು ಸಹಿಸಿಕೊಂಡು, ಮೊದಲು ಎದ್ದು ನಿಂತು, ಆ ಮೇಲೆ ಹಿಂದಿರುಗಿ ನೋಡಿದರೆ, ಅವರಿಗೆ ತಾವು ಇಷ್ಟು ಹೊತ್ತಿನ ವರೆಗೆ ನೋಡುತ್ತಿದ್ದ ನೆಳಲುಗಳಿಗೆ ಮೂಲವಾದ ವಸ್ತುಗಳು ಕಾಣುವದಲ್ಲದೆ, ಹಾಗೆಯೇ ಅವರ ಮನವೊಲಿಸಿ, ಅವರನ್ನು ಕ್ರಮದಿಂದ ಹೊರಕ್ಕೆ ಕರಕೊಂಡು ಬಂದು, ಅವರಿಗೂ ಹೊರಗಿನ ಸತ್ಯ ಜಗತ್ತನ್ನು ತೋರಿಸಬಹುದಲ್ಲವೇ ? ಮೊದಮೊದಲು ಅವರಲ್ಲಿ ಸೂರ್ಯ ಪ್ರಕಾಶವನ್ನು ಕೂಡ ನೋಡುವ ಶಕ್ತಿ ಇರುವದಿಲ್ಲ. ಆದರೆ ಕ್ರಮ ಕ್ರಮದಿಂದ ಅದೂ ಸಾಧ್ಯವಾಗಬಹುದು. ಆ ಮೇಲೆ ಸಾಕ್ಷಾತ್ ಸೂರ್ಯನ ದರುಶನವನ್ನೇ ಅವರು ಮಾಡಿಕೊಳ್ಳಬಹುದು.

ಈ ರೂಪಕದಲ್ಲಿ ವರ್ಣಿಸಿದ ಕೈದಿಗಳೆಂದರೇ ವ್ಯವಹಾರದೊಳಗೆ ಸತ್ಯತ್ವ ಬುದ್ಧಿಯನ್ನಿಟ್ಟು ವರ್ತಿಸುವವರು. ಪುಣ್ಯವಂತನೇ ಜೀವನ್ಮುಕ್ತ ಗುರುವು. ಬೇಡಿಗಳೆಂದರೆ ವಿಷಯಗಳು. ಅವುಗಳನ್ನು ಕಡಿಮುಕೊಂಡು ಹಿಂತಿರುಗುವದೆಂದರೆ ಸ್ವಾಭಾವಿಕವಾಗಿ ಬಹಿರ್ಮುಖವಾಗಿರುವ ಇಂದ್ರಿಯಗಳ ವೃತ್ತಿಯನ್ನು ನಿರೋಧಿಸಿ, ಮನಸ್ಸನ್ನು ಒಳಕ್ಕೆ ತಿರುಗಿಸುವದು. ಸೂರ್ಯನೆಂದರೆ ಪರಮಾತ್ಮ. ಹೀಗೆ ಪರಮಾತ್ಮನ ಸಾಕ್ಷಾದ್ದರ್ಶನ ಮಾಡಿಕೊಂಡ ಪರೋಪಕಾರಿಯೇ, ಕೈದಿಗಳ ದುಃಸ್ಥಿತಿಯನ್ನು ನೋಡಿ ಕರುಣೆಯಿಂದ ತಿರುಗಿ ಗುಹೆಯೊಳಗೆ ಬಂದು ಅವರಿಗೆ ಬೋಧಿಸುವನೆಂಬದನ್ನು ತೋರಿಸುವ ದಕ್ಕಾಗಿ ಪ್ಲೇಟೋನು ಈ ರೂಪಕವನ್ನು ಯೋಜಿಸಿದ್ದಾನೆ.

ಇಂತಹ ಜೀವನ್ಮುಕ್ತರನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ. ಅವರು ವ್ಯವಹಾರ ಮತ್ತು ಪರಮಾರ್ಥಗಳೆರಡರೊಳಗೂ ವಿಹಾರ ಮಾಡುತ್ತಿರುತ್ತಾರೆ. ಬ್ರಹ್ಮಾನುಭವ ಮತ್ತು ವ್ಯವಹಾರಗಳೆರಡರ ನಡುವೆ ಒಂದು ಗೋಡೆಯಿರುವದೆಂದು ತಿಳಿಯುವ. ವ್ಯವಹಾರವೇ ಸತ್ಯವೆಂದು ತಿಳಿಯುವವರು ಎಲ್ಲಿಯ ವರೆಗೆ ಗೋಡಿಯನ್ನು ಹತ್ತಿ, ಅದರಾಚೆಗಿರುವ ಸತ್ಯವನ್ನು ನೋಡಿಲ್ಲವೋ- ಅಲ್ಲಿಯ ವರೆಗೆ ತಮ್ಮ ವ್ಯವಹಾರಕ್ಕೇ ಅಂಟಿಕೊಳ್ಳುವರು. ಆದರೆ ಒಮ್ಮೆ ಅವರು ಹೇಗೋ ಆ ಗೋಡೆ ದಾಟಿ ಆಚೆಗೆ ಹೋಗಿ ಅಲ್ಲಿರುವ

ಸುಖವನ್ನು ಅನುಭವಿಸಿದರೆಂದು ತಿಳಿಯುವ. ಮತ್ತು ಗೋಡೆಯ ಇತ್ತ ಕಡೆಗಿರುವ ಜನರನ್ನು ನೆನೆದು, ಮತ್ತೆ ಆ ಗೋಡೆ ದಾಟಿ, ಇತ್ತಕಡೆಗೆ ಬಂದರೆಂದು ತಿಳಿಯುವ. ಅವರಿಗೆ ತಿರುಗಿ ವ್ಯವಹಾರವಷ್ಟೇ ಸತ್ಯವೆಂಬ ಭ್ರಮೆಯಾಗಬಹುದೇ? ಎಂದೂ ಇಲ್ಲ. ಆದರಂತೆ ಜೀವನ್ಮುಕ್ತರು ಪರಮಾರ್ಥವನ್ನೂ ಪ್ರತ್ಯಕ್ಷ ಅನುಭವಿಸುತ್ತಿರುತ್ತಾರೆ. ಮತ್ತು ಇತ್ತ ವ್ಯವಹಾರದೊಳಗೆ ಸಿಕ್ಕಿಬಿದ್ದು ನರಳುತ್ತಿರುವ ಅಜ್ಞಾನಿಗಳಿಗೂ ಉಪದೇಶ ಮಾಡುತ್ತಿರುತ್ತಾರೆ. ಅವರು ಯಾವಾಗಲೂ ನಡುವಿನ ಗೋಡೆಯ ಮೇಲೆ ಕುಳಿತವರಾಗಿರುವದರಿಂದ ಅವರಿಗೆ ಎರಡೂ ಅವಸ್ಥೆಗಳು ಸರಿಯಾಗಿಯೇ ಕಾಣುತ್ತಿರುತ್ತವೆ. ಅವರು ಮನಸು ಮಾಡಿದರೆ ಗೋಡೆಯ ಇತ್ತಕಡೆಗಿದ್ದವರ ಕೈಹಿಡಿದು ಗೋಡೆಯ ಮೇಲೆ ಕರೆದುಕೊಂಡು, ಅವರಿಗೆ ಅತ್ತಕಡೆಯ ಬ್ರಹ್ಮಾನಂದವನ್ನು ತೋರಿಸಬಹುದು. ಆದರೆ ಯಾರು ಗೋಡೆ ದಾಟಿ ಅತ್ತ ಜಿಗಿದು ಬಿಟ್ಟು, ಇತ್ತಕಡೆಗೆ ದುಃಖದಿಂದ ಬಳಲುತ್ತಿರುವವರನ್ನು ನೆನಿಸುವದಿಲ್ಲವೋ, ಅಂತಹ ಸಾಕ್ಷಾತ್ಕಾರಿಗಳ ಉಸಯೋಗವು ಇತ್ತ ಕಡೆಯ ಜನರಿಗೇನಾಗಬಲ್ಲದು? ಆದುದರಿಂದ ಯಾವ ಜ್ಞಾನಿಗಳು ಗೋಡೆಯ ಆಚೆಗೆ ಹೋಗಿ ಅಲ್ಲಿಯ ಸುಖವನ್ನುಂಡು, ತಿರುಗಿ ಗೋಡೆಯ ಮೇಲೆ ಬಂದು ಕುಳಿತು, ಇತ್ತಕಡೆಗಿದ್ದವರನ್ನು ಕೈಹಿಡಿದು ಮೇಲಕ್ಕೆಳೆದುಕೊಳ್ಳುವರೋ, ಅವರ ಉಪಕಾರವನ್ನು ನಾವೆಂತು ವರ್ಣಿಯುವದು? ಅವರು ಅವಶ್ಯಬಿದ್ದರೆ ತಾವೇ ಇತ್ತಕಡೆಗೆ ಇಳಿದು, ನಮ್ಮಂಥವರನ್ನು ಎತ್ತಿಹಿಡಿದು ಗೋಡೆಯ ಮೇಲೆ ಹತ್ತಿಸುವರು. ಈ ತರದ ಜೀವನ್ಮುಕ್ತ ಸ್ಥಿತಿಯನ್ನು ಅತುಲಾವಸ್ಥೆಯೆಂದು ಕರೆಯಬಹುದು. ಇಂತಹ ಜೀವನ್ಮುಕ್ತಾವಸ್ಥೆಯನ್ನು ನಮ್ಮ ಚರಿತ್ರನಾಯಕರು ಅನುಭವಿಸುತ್ತಿದ್ದರೆಂಬದು ಅವರ ಇಲ್ಲಿಯ ವರೆಗಿನ ಚರಿತ್ರದಿಂದ ವಾಚಕರಿಗೆ ಗೊತ್ತಾಗಿರಲಿಕ್ಕೆ ಸಾಕು.

ಇಂತಹ ಮುಕ್ತರು ತಮ್ಮ ಪರಮಾರ್ಥಸುಖಾಸ್ವಾದವನ್ನು ಬದಿಗೊತ್ತಿ ಕೇವಲ ಪರೋಪಕಾರ ಬುದ್ಧಿಯಿಂದ ಕೂಡಿದವರಾಗಿ, ವ್ಯಾವಹಾರಿಕ ಉಪಾಧಿಗಳನ್ನು ಹಿಡಿದುಕೊಂಡು, ವ್ಯವಹಾರಮಾಡಿ, ಹುಚ್ಚರ ಸಂಗಡ

ಹುಚ್ಚರಾಗಿ ವರ್ತಿಸಿ, ಸಾಮಾನ್ಯ ಜನರನ್ನು ಉದ್ಧಾರ ಮಾಡುತ್ತಾರೆ. ಆದರೆ ಅಂಧವರಿಗೂ ಕೂಡ ಒಮ್ಮೊಮ್ಮೆ ಆ ಪರಮಾರ್ಥ ಸುಖದ ರುಚಿಯು ಹೆಚ್ಚಾಯಿತೆಂದರೆ, ಅವರಿಗೆ ನಮ್ಮ ಲೌಕಿಕ ವ್ಯವಹಾರದ ಪೂರ್ಣ ಎಚ್ಚರಿಕೆಯುಳಿಯುವದಿಲ್ಲ. ನಮಗೆ ಆ ಜನರು ಆ ಕಾಲಕ್ಕೆ ತೀರ ಹುಚ್ಚರಂತೆ ತೋರುವದು ಸಹಜವಿದೆ. ಆದರೆ ಹುಟ್ಟಿಬಂದ ಪ್ರತಿಯೊಂದು ಪ್ರಾಣಿಯ ಇಚ್ಛೆಯು ತನ್ನ ಮೂಲಸ್ವರೂಪವಾದ ಪರಮಾರ್ಥ ಸುಖವನ್ನು ಪಡೆಯುವದೇ ಇರುತ್ತದೆ. ಸಾರಾಂಶವೇನೆಂದರೆ:— ಪ್ರತಿಯೊಬ್ಬ ಜೀವನ್ಮುಕ್ತನು ಲೌಕಿಕ ವ್ಯವಹಾರವನ್ನು ಎಷ್ಟೇ ಚೆನ್ನಾಗಿ ಮಾಡುತ್ತಿರಲಿ, ಕೆಲಕೆಲವು ಕ್ಷಣಗಳಲ್ಲಿ ಅವನು ಎಲ್ಲವನ್ನೂ ಮರೆತು ಸ್ವಸ್ವರೂಪದಲ್ಲಿ ನಿಂತುಬಿಡುತ್ತಾನೆ. ಇಂತಹ ಕ್ಷಣಗಳನ್ನು ಉನ್ಮನ್ಯವಸ್ಥೆಯ ಕ್ಷಣಗಳೆಂದು ಕರೆಯಬಹುದು. ಈ ಪ್ರಕರಣದಲ್ಲಿ ನನ್ನ ಚರಿತ್ರನಾಯಕರು ತೋರಿಸಿದ ಇಂತಹ ಒಂದೆರಡು ಪ್ರಸಂಗಗಳನ್ನು ವರ್ಣಿಸಬೇಕೆಂದಿದ್ದೇವೆ. ಅವರು ಮೇಲಿಂದ ಮೇಲೆ, ಕೆಂಬಹುನಾ ಬೇಕಾದಾಗ, ಈ ಅವಸ್ಥೆಯೊಳಗೆ ಹೋಗಿ ನಿಲ್ಲುತ್ತಿದ್ದರು. ಆದರೆ ಅದು ತೀರ ಹೆಚ್ಚಾದಾಗಿನ ಕೆಲವು ಕ್ಷಣಗಳ ಮಾಹಿತಿಯೆಂದು ಇಲ್ಲಿ ಅವುಗಳನ್ನು ಬರೆಯುಬಯಸುತ್ತೇವೆ.

ಈಗ ನಾವು ವರ್ಣಿಸುವ ಘಟನೆಯು ಶಕೆ ೧೮೭೧ ನೆಯ ವರುಷದಲ್ಲಿ ನಡೆಯಿತು. ಮಹಾರಾಜರ ಚಾತುರ್ಮಾಸ್ಯವು ಆ ವರುಷ ಗುರ್ಲಹೊಸೂರಲ್ಲಾಯಿತೆಂಬದು ಪಾಠಕರಿಗೆ ಗೊತ್ತಿದೆ. ಚಾತುರ್ಮಾಸ್ಯ ಮುಗಿದು ಕೆಲದಿನಗಳಾಗಿದ್ದವು. ಮಹಾರಾಜರು ಗುರ್ಲಹೊಸೂರೊಳಗೇ ಇದ್ದರು. ಮುಂಜಾನೆಯ ಸಮಯ. ಮಹಾರಾಜರು ಶ್ರೀ ಚಿದಂಬರೇಶ್ವರ ದೇವಾಲಯದೊಳಗಿನ ಅಂಕುರ ಮಂಟಪದಲ್ಲಿದ್ದರು. ಅವರು ಆಗ ಒಮ್ಮೆಲೇ ವಿಕ್ಷಿಪ್ತತನದಿಂದ ವರ್ತಿಸಹತ್ತಿದರು. ಜನರನ್ನು ಕರೆದು ತಮ್ಮ ಹತ್ತರ ಇರುವ ತಂಬಿಗೆ, ಥಾಲಿ, ಶಾಟಿ, ಕಮಂಡಲು, ಹಾಸಿಗೆ, ಕಂಬಳಿ ಮೊದಲಾದ ಎಲ್ಲ ವಸ್ತುಗಳನ್ನೂ ಒಂದೊಂದಾಗಿ ಅವರಿಗೆ ಕೊಟ್ಟುಬಿಟ್ಟರು. ಅವುಗಳನ್ನು ತಕ್ಕೊಳ್ಳುವ ಜನರೂ ದಿಙ್ಮೂಢರಾಗಿದ್ದರು

ಮಹಾರಾಜರ ಕೈಯಿಂದ ಪ್ರಸಾದ ರೂಪವಾಗಿ ಬಂದ ವಸ್ತುಗಳನ್ನು ಸ್ವೀಕರಿಸಬೇಕೋ ಬಿಡಬೇಕೋ, ಎಂಬ ಮನಸ್ಸಿನ ಅನಿಶ್ಚಿತ ಸ್ಥಿತಿಯಲ್ಲೆಯೇ ಅವರು ಅವುಗಳನ್ನು ತಕ್ಕೊಂಡು ಬಿಟ್ಟರು. ಆ ಮೇಲೆ ಮಹಾರಾಜರು ನದಿಯ ಕಡೆಗೆ ಹೋದರು. ಅಲ್ಲಿ ಸ್ನಾನಮಾಡಿ ದಂಡವನ್ನು ತ್ಯಾಗಮಾಡಿದರು. ಅಲ್ಲಿಂದ ತಿರುಗಿ ಊರೊಳಗೆ ಬರುವಷ್ಟರಲ್ಲಿ ಅವರ ಮೈಮೇಲೆ ಎಚ್ಚರಿಕೆಯಿದ್ದಂತೆ ಕಾಣಲಿಲ್ಲ. ಪೂರ್ಣ ಉನ್ಮತ್ತ ಸ್ಥಿತಿಯಲ್ಲಿ ಅವರಿರುವಂತೆ ಕಂಡು ಬಂತು. ಮೈಮೇಲೆ ಯಾವ ವಸ್ತ್ರವೂ ಇರಲಿಲ್ಲ. ಕೌಪೀನ ಸಹ ಇಲ್ಲದೆ ಅವರು ಸಂಪೂರ್ಣ ದಿಗಂಬರರಾಗಿದ್ದರು. ಅವರಿಗಾಗ ಯಾವ ವ್ಯಾವಹಾರಿಕ ನಿರ್ಬಂಧಗಳ ನೆನಪೂ ಇದ್ದಂತೆ ಕಾಣಲಿಲ್ಲ. ಬೇಕುಬೇಕಾದಾಗ ಬೇಕುಬೇಕಾದ ಸ್ಥಿತಿಯಲ್ಲಿ ಮಲಮೂತ್ರಗಳಾಗಹತ್ತಿದವು. ನಿಂತ-ನಿಂತಲ್ಲಿಯೇ ಕೂಡ ಆ ವ್ಯಾಪಾರಗಳು ನಡೆಯಹತ್ತಿದವು. ಆಗ ಮಹಾರಾಜರು ಬೇಕಾದವರ ಮನೆಗೆ ಹೋಗುವರು. ಬೇಕಾದವರು ಕೊಟ್ಟ ಭಕ್ಷರಿ ಮೊದಲಾವುಗಳನ್ನು ತಿನ್ನುವರು. ಬೇಕಾದವರು ಕುಡಿಸಿದ ನೀರನ್ನು ಕುಡಿಯುವರು ಬೇಕಾದಲ್ಲಿ ಕೂಡುವರು; ನಿಲ್ಲುವರು; ಮಲಗುವರು. ಮಹಾರಾಜರ ಆಗಿನ ವಿಚಿತ್ರವಾದ ಅವಸ್ಥೆಯನ್ನು ನೋಡಿ ಸಣ್ಣ ಸಣ್ಣ ಹುಡುಗರು ಅವರ ಸುತ್ತು ಗುಂಪುಗಟ್ಟಿಕೊಂಡು, "ಹುಚ್ಚ, ಹುಚ್ಚ" ಎಂದು ಓದರುತ್ತ ಕೇಕೆ ಹೊಡೆಯುತ್ತ, ಅವರ ಬೆನ್ನು ಹತ್ತಿದರು. ಅವರು ಆ ಸ್ಥಿತಿಯಲ್ಲಿ ಬಿಜ್ಜಿ, ಅಸುಂಡಿ, ಗುರ್ಲಹೊಸೂರ, ಮೊದಲಾದ ಊರುಗಳಲ್ಲಿ ಅಡ್ಡಾಡಿದರು. ತೋಟಪಟ್ಟಿಗಳಲ್ಲಿ ಸಂಚಾರ ಮಾಡಿದರು. ಆಗ ಅವರಿಗೆ ಸಂಪೂರ್ಣವಾದ ಮೌನವ್ರತ. ಯಾರು ಏನು ಅಂದರೂ ಅವರು ತಿರುಗಿ ಉತ್ತರವನ್ನೇ ಕೊಡುತ್ತಿದ್ದಿಲ್ಲ. ಅವರ ಮುಖಚರ್ಯೆಯ ಮೇಲಿಂದ ನೋಡಿದರೆ, ಅವರಿಗೆ ಪ್ರಶ್ನೆ ಕೇಳಿದವರ ಪ್ರಶ್ನೆಗಳ ಅರ್ಥವಾಗುತ್ತಿತ್ತೆಂದು ಹೇಳುವದೂ ಕಷ್ಟವಾಗಿತ್ತು. ಅವರು ಆ ಸ್ಥಿತಿಯೊಳಗೆ ಜಂಗಮವಾಡಿಗೆ ಹೋದರು. ಅಲ್ಲಿ ಜಂಗಮರೊಡನೆ ಜಂಗಮರಾಗಿ ನಡೆದಂತೆ ಭಾಸವಾಯಿತು. ಕೆಲಹೊತ್ತು ನೇಕಾರರ ಓಣಿಯಲ್ಲಿ ವಾಸವಾಗಿದ್ದರು. ಅಲ್ಲಿಯೂ ಅದೇ ಹಾಡು. ಸಾರಾಂಶವೇನೆಂದರೆ ಅವರು ಸಂಪೂರ್ಣ ವಿದೇಹ ಸ್ಥಿತಿಯಲ್ಲಿದ್ದರು. ಅವರಿಗೆ ಯಾತರ ಭಾನವೂ ಇರಲಿಲ್ಲ.

ಹೀಗೆ ಮೂರು ನಾಲ್ಕು ದಿನಗಳು ಕಳೆದವು. ಗುರ್ಲಹೊಸೂರ ಊರೊಳಗಿನ ಜನರೆಲ್ಲ ಗಾಬರಿಯಾದರು. ಅವರು ಮಹಾರಾಜರಿಗೆ ಏನಾದರೂ ಔಷಧೋಪಚಾರ ಮಾಡಬೇಕೆಂದು ಪ್ರಯತ್ನ ಮಾಡಿದರು. ಆದರೆ ಅದರಲ್ಲಿ ಅವರಿಗೆ ಯಶಸ್ಸು ಸಿಕ್ಕಲಿಲ್ಲ. ಯಾಕೆಂದರೆ ಮಹಾರಾಜರು ಆಗ ಯಾರನ್ನೂ ಹತ್ತರ ಬರಗೊಡುತ್ತಿರಲಿಲ್ಲ. ಅವರ ಸಮೀಪಕ್ಕೆ ಯಾರಾದರೂ ಬಲಾತ್ಕಾರದಿಂದ ಹೋಗಬೇಕೆಂದು ಯತ್ನಮಾಡಿದರೆ, ಅಂಥವರ ಮೈಮೇಲೆ ಮಹಾರಾಜರು ಕಲ್ಲುಗಳನ್ನು ಒಗೆಯುತ್ತಿದ್ದರು. ಮಹಾರಾಜರನ್ನು ಅವರ ಪೂರ್ವದ ಸ್ಥಿತಿಗೆ ತರುವದು ತಮಗೆ ಅಸಾಧ್ಯವೆಂದು ಗುರ್ಲಹೊಸೂರ ಜನರಿಗೆ ತಿಳಿದೊಡನೆ, ಅವರು ಉಪಾಯಗಾಣದೆ, ಮಹಾರಾಜರ ಮುಖ್ಯ ಶಿಷ್ಯರಾದ ವಾಜೀಂದ್ರರಿಗೆ ಹೇಳಿ ಕಳಿಸಿದರು. ವಾಜೀಂದ್ರರು ಆಗ ಧಾರವಾಡದಲ್ಲಿಯೇ ಇದ್ದರು. ವಾಜೀಂದ್ರರು ಮಹಾರಾಜರ ಸಂಗತಿಯನ್ನು ಕೇಳಿ ಹೌಹಾರಿದರು. ಅವರು ಲಗುಬಗೆಯಿಂದ ಒಂದು ಟಾಂಗಾ ತಕ್ಕೊಂಡು ಗುರ್ಲಹೊಸೂರಿಗೆ ಬಂದರು. ಮಹಾರಾಜರ ನಿಃಸೀಮಭಕ್ತರಾದ ವಾಜೀಂದ್ರರಿಗೆ ಮಹಾರಾಜರ ಆಗಿನ ಸ್ಥಿತಿಯನ್ನು ನೋಡಿ ತೀರ ಕೆಡಕೆನಿಸಿತು ಮಹಾರಾಜರ ಮನಃಸ್ಥಿತಿಯ ನಿಜವಾದ ಸ್ವರೂಪವು ಅವರಿಗೂ ತಿಳಿಯಲಿಲ್ಲ ಅವರು ಮಹಾರಾಜರನ್ನು ನೋಡಿ ದೊಡ್ಡದನಿ ತೆಗೆದು ಅತ್ತರು. ಮಹಾರಾಜರಿಗೆ ಬೇಕಾದಷ್ಟು ದೈನ್ಯದಿಂದ ಹೇಳಿಕೊಂಡು ನೋಡಿದರು. ಬೇಡಿಕೊಂಡರು. ಆದರೆ ಏನೂ ಉಪಯೋಗವಾಗಲಿಲ್ಲ. ಕೊನೆಗೆ ವಾಜೀಂದ್ರರು ಕೆಲ ಜನರ ಸಹಾಯದಿಂದ ಮಹಾರಾಜರನ್ನು ಬಲವಂತವಾಗಿಯೇ ಹಿಡಿದುಕೊಂಡರು. ಮತ್ತು ಟಾಂಗಾದೊಳಗೆ ಹಾಕಿಕೊಂಡು ಅವರನ್ನು ಧಾರವಾಡಕ್ಕೆ ತಕ್ಕೊಂಡು ಬಂದರು. ಅಲ್ಲಿ ವಾಜೀಂದ್ರರು ಮಹಾರಾಜರ ಸೇವೆ ಶುಶ್ರೂಷೆಯನ್ನು ಸರಿಯಾಗಿ ಮಾಡಹತ್ತಿದರಲ್ಲದೆ, ತಮ್ಮ ಗುರುಗಳು ಮೊದಲಿನ ಸ್ಥಿತಿಗೆ ಬರುವಂತೆ ಅನುಗ್ರಹಿಸೆಂದು ಅವರು ಗುರುದೇವದತ್ತನಿಗೆ ಶರಣುಹೊಕ್ಕರು. ಅವರ ತಪಶ್ಚರ್ಯ ಮತ್ತು ಸೇವೆಗಳ ಫಲವೆಂದು ಮಹಾರಾಜರ ವೃತ್ತಿಯು ಬರಬರುತ್ತ ಸೌಮ್ಯವಾಗುತ್ತ ನಡೆಯಿತು. ಸುಮಾರು ಒಂದು ತಿಂಗಳ

ಅವಧಿಯಲ್ಲಿ ಮಹಾರಾಜರಿಗೆ ಸಂಪೂರ್ಣ ಗುಣವಾಗಿ, ಅವರು ಮತ್ತೆ ಮೊದಲಿನ ಸ್ಥಿತಿಗೆ ಬಂದರು.

ಶಕೆ ೧೮೮೯ ರಲ್ಲಿ ಮಹಾರಾಜರು ಚಾತುರ್ಮಾಸ್ಯಕ್ಕಾಗಿ ವಿಜಾಪುರ ಜಿಲ್ಲೆಯೊಳಗೆ ಬಾಗಿಲುಕೋಟೆ ತಾಲೂಕಿನ ಜ್ಞಾನಾಪುರಕ್ಕೆ ಹೋಗಿದ್ದ ರೆಂಬುದನ್ನು ವಾಚಕರು ಬಲ್ಲರು. ಶ್ರೀ ಕೃಷ್ಣರಾವ ಭಿಡೆಯೆಂಬ ಸದ್ಗೃಹಸ್ಥರು ಆಗ ವಿಜಾಪುರ ಜಿಲ್ಲೆಯೊಳಗೆ ಅಸಿಸ್ಟಂಟ ಕಲೆಕ್ಟರರಾಗಿದ್ದರು. ಅವರದು ಮಹಾರಾಜರ ಮೇಲೆ ಪ್ರೇಮ ಬಹಳ. ಅವರ ಅಳಿಯಂದಿರಾದ ಶ್ರೀ ಗೋವಿಂದರಾವ ಜ್ಞಾನಾಪೂರ ಎಂಬ ಹೆಸರಿನ ವಕೀಲರೂ ಮಹಾರಾಜರ ಭಕ್ತರು. ಗೋವಿಂದರಾಯರ ಜನ್ಮಸ್ಥಳವೂ, ಮೂಲಸ್ಥಲವೂ ಜ್ಞಾನಾಪೂರ ಗ್ರಾಮವೇ ಆಗಿತ್ತು. ಆದುದರಿಂದ ಇವರಿಬ್ಬರ ಆಗ್ರಹದಿಂದ ಮಹಾರಾಜರು ಆ ಸಲದ ಚಾತುರ್ಮಾಸ್ಯವನ್ನು ಜ್ಞಾನಾಪುರದಲ್ಲಿ ಕಳೆಯಲು ಒಪ್ಪಿದರು. ಅವರಿಬ್ಬರೂ ಕೈಕಟ್ಟಿಕೊಂಡು ಮಹಾರಾಜರ ಸೇವೆಗಾಗಿ ನಿಂತಿದ್ದರಿಂದ, ಮಹಾರಾಜರ ಅಲ್ಲಿಯ ಕಾರ್ಯಕ್ರಮವು ಬಹಳ ಯಶಸ್ವಿಯಾಗಿ ನಡೆಯಿತು.

ಜ್ಞಾನಾಪುರವು ಕೃಷ್ಣೆಯ ದಂಡೆಯ ಮೇಲಿರುವ ಊರು. ಅಲ್ಲಿಯ ವಿಟ್ಠಲನ ಗುಡಿಯು ಮಹಾರಾಜರ ವಾಸಸ್ಥಳಕ್ಕೆ ಅನುಕೂಲವಾಗಿದ್ದುದರಿಂದ, ಮಹಾರಾಜರು ಅಲ್ಲಿಯೇ ಬಿಡಾರ ಹೂಡಿದ್ದರು. ಮಹಾರಾಜರ ಪ್ರತಿಸಲದ ಚಾತುರ್ಮಾಸ್ಯ ಕ್ರಮಗಳೆಲ್ಲ ಅಲ್ಲಿ ಯಥಾಕ್ರಮವಾಗಿ ಸರಾಗವಾಗಿ ಸಾಗಿದ್ದವು. ಮುಂಜಾನೆ ಭಾಗವತ ಪುರಾಣವೂ ಸಂಜೆಗೆ ಭಾರತವೂ ನಡೆಯುತ್ತಿದ್ದವು. ವೇ. ಮೂ. ವೆಂಕಣಭಟ್ಟ ಜೋಶಿ ಎಂಬ ವೈದಿಕ ಬ್ರಾಹ್ಮಣರು ಪುರಾಣ ಹೇಳುತ್ತಿದ್ದರು. ಪುರಾಣ ಕೇಳಲಿಕ್ಕೆಂದು ಊರೊಳಗಿಂದ ಅನೇಕ ಜನರು ಬರುತ್ತಿದ್ದರು. ಅವರಲ್ಲಿ ಎಲ್ಲ ಜಾತಿಯ ಜನರೂ ಇರುತ್ತಿದ್ದರು. ಜ್ಞಾನಾಪುರದ ದೇಸಾಯರು ಲಿಂಗವಂತ ಮತದವರು. ಅವರೂ ಸಹ ದಿನಾಲೂ ತಪ್ಪದೇ ಪುರಾಣ ಶ್ರವಣಕ್ಕೆ ಬರುತ್ತಿದ್ದರು. ಅವರು ಎರಡೂ ಹೊತ್ತು ನಿಯಮಿತವಾದ ವೇಳೆಯಲ್ಲಿ ಮಹಾರಾಜರ ಕಡೆಗೆ ಬಂದು ಅವರ ದರುಶನ ತಕ್ಕೊಂಡು ಹೋಗುತ್ತಿದ್ದರು. ದೇಸಾಯರು

ಮಧ್ಯವಯಸ್ಕರು. ಅವರ ಹೆಂಡತಿ ಚಿಕ್ಕವಳು. ದಂಪತಿಗಳಿಬ್ಬರೂ ಮಹಾರಾಜರ ಮೇಲೆ ಭಕ್ತಿವಿಶ್ವಾಸಗಳನ್ನಿಟ್ಟು ನಡೆದುಕೊಳ್ಳುತ್ತಿದ್ದರು.

ಒಂದು ದಿನ ಮುಂಜಾನೆಯ ಪುರಾಣ ಶ್ರವಣಕ್ಕೆ ದೇಸಾಯರು ಬರಲಿಲ್ಲ. ಆ ದಿನ ಅವರು ಮನೆಯಲ್ಲಿಯೇ ಉಳಿದುಕೊಂಡಿದ್ದರು. ಅವರ ಮನಸು ಸಾಂಸಾರಿಕ ಅಡಚಣೆಗಳಿಂದ ಬಹಳ ತೊಂದರೆಗೀಡಾಗಿ ವ್ಯಗ್ರವಾಗಿತ್ತು. ದೇಸಾಯರು ಎಷ್ಟು ಜನ ಹೆಂಡರನ್ನು ಮಾಡಿಕೊಂಡರೂ ಅವರಿಗೆ ಮಕ್ಕಳಾಗಿದ್ದಿಲ್ಲ. ಅವರ ಚಿಕ್ಕ ವಯಸ್ಸಿನ ಹೆಂಡತಿಯಂತೂ ಈ ಚಿಂತೆಯಿಂದ ಹಣ್ಣಾಗಿ ಹೋಗಿದ್ದಳು. ಅವಳ ಮನಸ್ಸೂ ಅಂದು ಸ್ವಸ್ಥವಿರಲಿಲ್ಲ.

ಅತ್ತ ವಿಟ್ಠಲನ ಗುಡಿಯಲ್ಲಿ ಮುಂಜಾನೆಯ ಪುರಾಣವು ೯ ಗಂಟೆಗೆ ಮುಗಿಯಿತು. ಪುರಾಣ ಮುಗಿದ ಮೇಲೆ ಮಹಾರಾಜರು ಎಲ್ಲ ಜನರನ್ನು ಕೂಡಿಕೊಂಡು ''ಶಿವಚಿದಂಬರ'' ಎಂದು ನಾಮಸ್ಮರಣೆ ಮಾಡುತ್ತ ಅಶ್ವತ್ಥ ವೃಕ್ಷಕ್ಕೆ ಪ್ರದಕ್ಷಿಣೆ ಹಾಕುವದು ನಾಡಿಕೆಯಾಗಿತ್ತು. ಅದರಂತೆ ಎಲ್ಲ ಜನರೂ ಪುರಾಣ ಮುಗಿದೊಡನೆ ಅಶ್ವತ್ಥ ವೃಕ್ಷದ ಕಡೆಗೆ ಹೋಗಿ ತಮ್ಮ ಕಾರ್ಯಕ್ರಮವನ್ನು ಸುರುವು ಮಾಡಿದರು. ಆದರೆ ನಿತ್ಯದ ಕ್ರಮದಂತೆ ಮಹಾರಾಜರು ಆ ದಿನ ಅತ್ತ ಕಡೆಗೆ ಹೋಗಲಿಲ್ಲ. ಅವರು ಒಮ್ಮಿಂದೊಮ್ಮೆ ಗುಡಿಬಿಟ್ಟು ವಾಯುವೇಗದಿಂದ ಎತ್ತ ಕಡೆಗೋ ಹೋಗಿಬಿಟ್ಟರು. ಸಂಗಡ ಯಾರೂ ಇರಲಿಲ್ಲ. ಒಬ್ಬರೇ ಹೋದರು. ಹೋಗಹೋಗುತ್ತಿದ್ದಂತೆ ಅವರ ಮೈಮೇಲಿನ ಅರಿವೆಗಳು ಒಂದೊಂದಾಗಿ ಬೀಳುತ್ತ ಹೋದವು. ಕೊನೆಗೆ ಕೌಪೀನವು ಸಹ ಕೆಳಗೆ ಬಿದ್ದು ಹೋಗಿ ಮಹಾರಾಜರು ಪೂರ್ಣ ದಿಗಂಬರರಾಗಿ ಓಣಿಗುಂಟ ಹೋಗಹತ್ತಿದರು. ಅವರ ಮೈಮೇಲೆ ಆ ಕಾಲಕ್ಕೆ ಎಷ್ಟೂ ಎಚ್ಚರವಿರುವಂತೆ ಕಾಣಲಿಲ್ಲ. ಅವರು ಆ ಸ್ಥಿತಿಯಲ್ಲಿ ಅತ್ತಿತ್ತ ಅಡ್ಡಾಡುತ್ತ ದೇಸಾಯರ ಅರಮನೆಗೆ ಹೋಗಿ ಮುಟ್ಟಿದರು. ದೇಸಾಯರು ಶೂನ್ಯಮನಸ್ಕರಾಗಿ ಅಂಗಳದಲ್ಲಿ ಅತ್ತಿತ್ತ ಅಡ್ಡಾಡುತ್ತಿದ್ದರು. ಮಹಾರಾಜರು ದಿಗಂಬರ ರೂಪದಲ್ಲಿ ಬಂದುದನ್ನು ನೋಡಿ ಅವರಿಗೆ ಭಯ-ಭಕ್ತಿ-ಆದರಗಳು ಒಮ್ಮೆಲೇ ಹುಟ್ಟಿದವು. ದೇಸಾಯರಿಗೆ ಆ ವೇಳೆಯಲ್ಲಿ ಏನು

ಮಾಡಬೇಕೆಂಬದು ಕೂಡ ತಿಳಿಯಲಿಲ್ಲ. ಮಹಾರಾಜರ ಮುಖದ ಮೇಲೆ ಕಾಣುತ್ತಿರುವ ವಿಚಿತ್ರವಾದ ಲಕ್ಷಣಗಳನ್ನು ನೋಡಿ ಮಹಾರಾಜರನ್ನು ಮಾತಾಡಿಸಬೇಕೆಂಬ ವಿಚಾರವೂ ಕೂಡ ಅವರಲ್ಲಿ ಬರಲಿಲ್ಲ. ಅವರಿಗೆ ದಿಗ್‌ಭ್ರಮೆಯಾದಂತಾಯಿತು. ಏನೂ ತಿಳಿಯದ ಹುಚ್ಚರಂತೆ ಅವರು ಮಹಾರಾಜರನ್ನು ಸುಮ್ಮನೇ ನೋಡುತ್ತ ನಿಂತುಬಿಟ್ಟರು. ಮಹಾರಾಜರು ಅವರ ಹತ್ತರ ಹೋಗಿ ಅವರನ್ನು ಕೈಯಿಂದ ಹಿಡಿದುಕೊಂಡು ಕರಕೊಂಡು ಬಂದು ಕಟ್ಟೆಯ ಮೇಲೆ ಕೂಡಿಸಿದರು. ದೇಸಾಯರು ಸುಮ್ಮನೆ ಎಲ್ಲಕ್ಕೂ ಅನುಮೋದನ ಕೊಟ್ಟು ಬಿಟ್ಟರು. ಮಹಾರಾಜರಿಗೆ ಪ್ರತಿಬಂಧ ಮಾಡಬೇಕೆಂಬ ವಿಚಾರವು ಅವರಲ್ಲಿ ಎಷ್ಟೂ ಬರಲಿಲ್ಲ.

ಮಹಾರಾಜರು ಆ ಮೇಲೆ ದೇಸಾಯರ ಆಡಿಗೆಯ ಮನೆಗೆ ಹೋದರು. ದೇಸಾಯಿಣಿಯು ಆಡಿಗೆಯ ಮನೆಯಲ್ಲಿ ಒಬ್ಬಳೇ ಏನೋ ಕೆಲಸ ಮಾಡುತ್ತಿದ್ದಳು. ಮಹಾರಾಜರು ಈ ಸ್ಥಿತಿಯಲ್ಲಿ ಬಂದುದನ್ನು ನೋಡಿ ಅವಳೂ ಅವಾಕ್ಕಾದಳು. ಮಹಾರಾಜರು ಆವೇಶ ಬಂದವರಂತೆ ಕಾಣುತ್ತಿದ್ದರು. ಆವರನ್ನು ನೋಡಿ ಅವಳಿಗೆ ನಾಚಿಕೆ ಬರುವದಕ್ಕಿಂತ ಪ್ರೇಮ-ಕಾರುಣ್ಯ-ಭಯ-ಭಕ್ತಿಗಳು ಅವಳಲ್ಲಿ ಅಂಕುರಿಸಿದವು. ಮಹಾರಾಜರು ತಟ್ಟನೇ ಹೋಗಿ ಅವಳ ಕೈಹಿಡಿದರು. ಅವಳು ಗಾಬರಿಯಾಗಲಿಲ್ಲ; ಚಿಟ್ಟನೇ ಚೀರಲಿಲ್ಲ; ಗಂಡನನ್ನೂ ಓದರಲಿಲ್ಲ; ಅಥವಾ ಮಹಾರಾಜರ ಹಿಡಿತದೊಳಗಿಂದ ತನ್ನ ಕೈ ಬಿಡಿಸಿಕೊಳ್ಳಲು ಯತ್ನಿಸಲಿಲ್ಲ. ಮಹಾರಾಜರು ಅವಳನ್ನು ಹಿಡಿದು ಹೊರಗೆ ಕರಕೊಂಡು ಬಂದರು. ಮತ್ತು ಅವಳನ್ನು ದೇಸಾಯರ ಹತ್ತರ ಕುಳ್ಳಿರಿಸಿದರು. ಗಂಡಹೆಂಡಿರಿಬ್ಬರೂ ಮಹಾರಾಜರು ಕೂಡಿಸಿದಲ್ಲಿ ಕುಳಿತರು. ಮಹಾರಾಜರು ಮತ್ತೆ ಒಳಕ್ಕೆ ಹೋಗಿ ಅರಿಷಿಣ ಕುಂಕುಮ ತಕ್ಕೊಂಡು ಬಂದು ದಂಪತಿಗಳಿಗಿಬ್ಬರಿಗೂ ಹಚ್ಚಿದರು. ಮತ್ತು ಅವರ ಮುಂದೆ ಕುಳಿತು "ನಾನೇ ನಿಮ್ಮ ಮಗನು" ಎಂದು ಉಚ್ಚರಿಸಿ, ಅವರ ತಲೆಯ ಮೇಲೆ ಕೈಯಿಟ್ಟರು. ಆ ಕ್ಷಣದಲ್ಲಿ ಮಕ್ಕಳ ಹಂಬಲದಿಂದ ಹುಚ್ಚು ಹಿಡಿದ ದಂಪತಿಗಳಿಬ್ಬರಿಗೂ ಒಂದು ವಿಚಿತ್ರವಾದ ಅನುಭವವಾಯಿತು. ಅವರ ವಾತ್ಸಲ್ಯ ಪ್ರೇಮವು ಹೊರಸೂಸಹತ್ತಿತು. ಆಶ್ಚರ್ಯದ ಮಾತೆಂದರೆ ಅವರ ಮನಸ್ಸಿನಲ್ಲಿದ್ದ ಮಕ್ಕಳ ಇಚ್ಛೆಯು ನಾಮಶೇಷವಾಗಿ ಹೋಯಿತು!

ಶಿಷ್ಯರಾದ ವಿಷ್ಣುಬುವಾ ಅವರು, ಮಹಾರಾಜರನ್ನು ಅಶ್ವತ್ಥವೃಕ್ಷದ ಕೆಳಗೆ ಕಾಣದೆ, ಅವರ ಬಗ್ಗೆ ವಿಚಾರ ಮಾಡುತ್ತ ಮಾಡುತ್ತ ಬೆನ್ನು ಹತ್ತಿ ಹೊರಟರು. ಹಾದಿಯಲ್ಲಿ ಮಹಾರಾಜರ ಆರಿವೆಗಳು ಅವರಿಗೆ ಒಂದೊಂದಾಗಿ ದೊರೆತವು. ಶಾಲು, ಕೌಪೀನ ಮತ್ತು ಟೊಪ್ಪಿಗೆ ಮೊದಲಾದವುಗಳನ್ನು ಅವರು ಎತ್ತಿಕೊಂಡು ಗಾಬರಿಯಾಗಿ ದೇಸಾಯರ ಮನೆಗೆ ಬಂದರು. ಮಹಾರಾಜರು ಇನ್ನೂ ಆವೇಶದ ಸ್ಥಿತಿಯಲ್ಲಿಯೇ ಇದ್ದರು. ಮುಂದೆ ಎಷ್ಟೋ ತಾಸುಗಳಾದ ಮೇಲೆ ಮಹಾರಾಜರು ಮತ್ತೆ ಮೊದಲಿನ ಸ್ಥಿತಿಗೆ ಬಂದರು.

ಅದೇ ವರುಷ ಮಹಾರಾಜರು ಚಿದಂಬರೋತ್ಸವದ ನಿಮಿತ್ತವಾಗಿ ಅತ್ತಿತ್ತ ಸಂಚರಿಸುತ್ತಿದ್ದರು. ಆಗ ಅವರೊಂದು ದಿನ ಆಕ್ಕತಂಗೇರ ಹಾಳದಲ್ಲಿ ಉಳಕೊಂಡಿದ್ದರು. ಅಲ್ಲಿಯ ಸುಪ್ರಸಿದ್ಧ ಗೃಹಸ್ಥರಾದ ಶ್ರೀ. ಸಿದ್ದೋ ಕೃಷ್ಣ ದೇಶಪಾಂಡೆಯವರ ಮನೆಯಲ್ಲಿ ಮಹಾರಾಜರ ವ್ಯವಸ್ಥೆ ಮಾಡಲಾಗಿತ್ತು. ಮಹಾರಾಜರು ಅಲ್ಲಿಗೆ ಬಂದಿರುವ ವಾರ್ತೆ ಕೇಳಿ, ಸುತ್ತುಮುತ್ತಲಿನ ಹಳ್ಳಿಯೊಳಗಿನ ಬ್ರಾಹ್ಮಣ ಜನರೆಲ್ಲ ಆಕ್ಕತಂಗೇರ ಹಾಳದಲ್ಲಿ ಒಟ್ಟಿಗೆ ಸೇರಿದ್ದರು. ದೇಶಪಾಂಡೆಯವರೂ ಮದವಾಲ, ಪಾಜ್ಜಾಪೂರ ಮೊದಲಾದ ಊರುಗಳಿಗೆ ಹೇಳಿ ಕಳಿಸಿ ಅನೇಕ ಜನ ವೈದಿಕ ಬ್ರಾಹ್ಮಣರನ್ನು ಕರಿಸಿಕೊಂಡಿದ್ದರು. ಸಿದ್ದೋಪಂತರು ಮಹಾರಾಜರ ಪರಮಭಕ್ತರು. ಮಹಾರಾಜರ ಆಗಮನದಿಂದ ಅವರ ಆನಂದಕ್ಕೆ ವಾರಾವಾರವಿಲ್ಲದಂತಾಗಿತ್ತು. ಬ್ರಾಹ್ಮಣರೆಲ್ಲ ಕೂಡಿಕೊಂಡು ದೇವರಿಗೆ ರುದ್ರಾಭಿಷೇಕ ಮಾಡುತ್ತಿದ್ದರು. ಸಿದ್ದೋಪಂತರ ಹೆಂಡತಿಯವರು ಅಲ್ಲಿಯೇ ಸಮೀಪದಲ್ಲಿ ದೇವರ ರುದ್ರಾಭಿಷೇಕದ ಪೂಜೆಯನ್ನು ನೋಡುತ್ತ ಕುಳಿತುಕೊಂಡಿದ್ದರು. ಮಹಾರಾಜರು ಮಧ್ಯಾಹ್ನದ ಸ್ನಾನಕ್ಕೆಂದು ಎದ್ದು ಬಚ್ಚಲ ಮನೆಗೆ ಹೋದರು. ಅಲ್ಲಿ ಅವರು ಸ್ನಾನ ಮಾಡಲಿಕ್ಕೆಂದು ಬಚ್ಚದಲ್ಲಿಯೂ ಇಳಿದರು ಮೈಮೇಲೆ ಕೌಪೀನವೊಂದರ ಹೊರತಾಗಿ ಬೇರೆ ಯಾವ ವಸ್ತ್ರಗಳೂ ಇರಲಿಲ್ಲ. ಮಹಾರಾಜರು ಆ ಕೌಪೀನವನ್ನೂ ಒಮ್ಮೆಲೇ ತೆಗೆದು ಬಿಸಾಟಿದರು. ಮತ್ತು ಹಾಗೆಯೇ ಬ್ರಾಹ್ಮಣರು ಕುಳಿತಲ್ಲಿಗೆ ಬಂದರು. ಜನರೆಲ್ಲ

ಅವರನ್ನು ಆ ಸ್ಥಿತಿಯಲ್ಲಿ ನೋಡಿ ಚಿಂತಾಕ್ರಾಂತರಾದರು. ಮಹಾರಾಜರಿಗೆ ಆಗ ಸ್ಮೃತಿಯಿರಲಿಲ್ಲವೆಂಬದು ಬೇಕಾದವರಿಗೂ ತಿಳಿದು ಬರುವಂತಿತ್ತು. ಅವರು ಅತ್ತಿತ್ತ ತುಸು ಆಡ್ಡಾಡಿ ನೆಟ್ಟಗೆ ಸಿದ್ದೋವಂತರ ಹೆಂಡತಿಯು ಕುಳಿತಲ್ಲಿಗೆ ಹೋದರು. ಮತ್ತು ಅವರ ತೊಡೆಯು ಮೇಲೆ ಸಣ್ಣ ಕೂಸುಗಳಂತೆ ಆಡ್ಡವಾಗಿ ಮಲಗಿಕೊಂಡು ಬಿಟ್ಟರು. ಆ ಹೆಣ್ಣು ಮಗಳಲ್ಲಿ ಇದರಿಂದ ಅಭೂತಪೂರ್ವ ವಾತ್ಸಲ್ಯಪ್ರೇಮವು ಹೊರಸೂಸಿತು. ಅವಳೂ ಹೆದರದೆ ಸಣ್ಣ ಹುಡುಗರನ್ನು ತಾಯಿಯು ಸಂತೈಸುವಂತೆ, ಮಹಾರಾಜರನ್ನು ಸಂತೈಸಿದಳು. ಮಹಾರಾಜರು ಆ ವೇಳೆಯಲ್ಲಿ ಅವಳನ್ನು "ಅವ್ವಾ, ಅವ್ವಾ" ಎಂದು ಸಂಬೋಧಿಸಿದರು. ಮಹಾರಾಜರು ಹಾಗೆ ಕರೆದಂತೆ ಅವಳ ಮಾತೃತ್ವಭಾವವು ಬೆಳೆಯುತ್ತ ಹೋಯಿತು. ಮಹಾರಾಜರು ಮುಂದೆ ಎಷ್ಟೋ ಹೊತ್ತಿನ ವರೆಗೆ ಅದೇ ಸ್ಥಿತಿಯಲ್ಲಿಯೇ ಇದ್ದರು. ಅವರು ಪುನಃ ಪೂರ್ವದ ಸ್ಥಿತಿಗೆ ಬಂದ ಮೇಲೆ, ಮಗನು ತಾಯಿಯನ್ನು ಪೂಜಾದಿಗಳಿಂದ ಉಪಚರಿಸುವಂತೆ, ಸಿದ್ದೋವಂತರ ಹೆಂಡತಿಯನ್ನು ಪೂಜಿಸಿದರು.

ಆದೇ ವರುಷ, ಎಂದರೆ ಶಕೆ ೧೮೮೯ ಇಥವಾ ಸನ್ ೧೯೬೭ ನೆಯ ವರುಷದ ಪೌಷ ವದ್ಯ ಏಕಾದಶಿಯ ದಿವಸ ಮಹಾರಾಜರು ಮತ್ತೊಮ್ಮೆ ಉನ್ಮತ್ತಾವಸ್ಥೆಗೆ ಒಳಗಾದರು. ಅವರು ಅಂದು ಮುಂಜಾನೆ ಎದ್ದಾಗ ಅವರ ಮೋರೆಯ ಮೇಲೆ ವಿಶೇಷ ಹೆಚ್ಚು ಕಡಿಮೆಯೇನೂ ಕಾಣಲಿಲ್ಲ. ಪ್ರತಿನಿತ್ಯದಂತೆಯೇ ಪ್ರಾತರ್ವಿಧಿಗಳೆಲ್ಲ ಅವರು ಆದರೆ ಮುಂಜಾನೆಯ ೧೧ ಗಂಟೆಯ ಸುಮಾರಕ್ಕೆ ಮಹಾರಾಜರು ಒಮ್ಮಿಂದೊಮ್ಮೆ ಗುಡಿಬಿಟ್ಟು ಹೊರಬಿದ್ದರು. ಶಿಷ್ಯರಾದ ವಿಷ್ಣುಬುವಾ ಅವರು ಶ್ರೀ ಚಿದಂಬರೇಶ್ವರನ ಗುಡಿಯೊಳಗೆ ಪೂಜೆ ಮಾಡುತ್ತ ಕುಳಿತಿದ್ದರಿಂದ, ಮಹಾರಾಜರು ಗುಡಿಬಿಟ್ಟು ಹೋಗುವದನ್ನು ಅವರು ನೋಡಲಿಲ್ಲ. ಮಹಾರಾಜರ ಉಳಿದ ಶಿಷ್ಯರಾದ ಗೋಪಾಳಭಟ್ಟರೂ ಬೇರೊಂದು ಕೆಲಸದಲ್ಲಿ ತೊಡಗಿದ್ದರು. ಆದುದರಿಂದ ಮಹಾರಾಜರು ಯಾರಿಗೂ ಹೇಳದೆ ತಾವೊಬ್ಬರೇ ಗುಡಿಬಿಟ್ಟು ಹೊರಬಿದ್ದರು. ಅವರು ಗುಡಿಯಿಂದ ನೆಟ್ಟಗೆ ಪೇಟೆಯ ಕಡೆಗೆ ಹೊರಟರು. ಅಲ್ಲಿಯೇ ಮುಂದೆ ಒಂದು ಬಸವಣ್ಣನ ಗುಡಿಯಿದೆ. ಮಹಾರಾಜರು ಅಲ್ಲಿಗೆ

ಹೋಗುವಷ್ಟರಲ್ಲಿ ದಿಗಂಬರರಾಗಿ ಬಿಟ್ಟಿದ್ದರು. ಅವರನ್ನು ಆ ಸ್ಥಿತಿಯಲ್ಲಿ ನೋಡಿದವರು, ಅವರಿಗೆ ಹುಚ್ಚು ಹಿಡಿದಿರುವದೆಂದು ಸಹಜವಾಗಿ ತಿಳಿಯುವಂತಿತ್ತು. ಮಹಾರಾಜರು ದಿಗಂಬರ ವೇಷದಿಂದ ಪೇಟೆಯಗುಂಟ ಹೊರಟೊಡನೆ ಕೇಳುವದೇನು ? ಹೆಂಗಸರು, ಗಂಡಸರು ಮತ್ತು ಹುಡುಗರು ಕುತೂಲಹದಿಂದ, ಅವರ ಸುತ್ತು ಗುಂಪುಗಟ್ಟಿದರು. ಅವರೊಳಗೆ ನಾನಾಜಾತಿ-ಮತ ಪಂಥಗಳ ಜನರಿದ್ದರೆಂದು ಹೇಳುವ ಅವಶ್ಯಕತೆಯಿಲ್ಲ. ಅವರೊಳಗಿಂದ ವೀರಶೈವರಾದ ಕೆಲವು ಜನರು ಮಹಾರಾಜರನ್ನು ಕೈಹಿಡಿದು ಕರಕೊಂಡು ಬಸವಣ್ಣನ ಗುಡಿಗೆ ಹೋದರು. ಮತ್ತು ಅವರನ್ನು ಅಲ್ಲಿ ಒಂದು ಕಡೆಗೆ ಕೂಡಿಸಿ ಅವರ ಮೈತುಂಬ ವಿಭೂತಿಯನ್ನು ಬಳೆದರು. ಕೊರಳೊಳಗೆ ನಾನಾತರದ ಚೌಕಗಳನ್ನೂ ಗುಂಡಗಡಿಗೆಗಳನ್ನೂ ಹಾಕಿದರು. ಮಹಾರಾಜರು ಯಾವುದಕ್ಕೂ ಅನುಮೋದನ ಕೊಡಲಿಲ್ಲ; ಅಥವಾ ಯಾವುದಕ್ಕೂ ಅವರು ಪ್ರತಿಬಂಧವನ್ನೂ ಮಾಡಲಿಲ್ಲ. ಅವರದು ಯಾವ ವಿಷಯದ ಕಡೆಗೂ ಗಮನವಿರುವಂತೆ ಕಾಣಲಿಲ್ಲ. ಜನರು ಅವರ ನಿಜವಾದ ಮನಃಸ್ಥಿತಿಯನ್ನು ತಿಳಿಯಲಾರದೆ, ಅವರ ಮುಖಾಂತರವಾಗಿ ತಮ್ಮ ಮನರಂಜನೆ ಮಾಡಿಕೊಳ್ಳುತ್ತಿದ್ದರು.

ಇತ್ತ ಶ್ರೀ ವಿಷ್ಣುಬುವಾ ಅವರು ತಮ್ಮ ಪೂಜೆ ಮುಗಿಸಿ, ಮಹಾರಾಜರು ಇರಬೇಕಾದ ಕೋಣೆಗೆ ಹೋದರು. ಮಹಾರಾಜರು ಅಲ್ಲಿರಲಿಲ್ಲ. ಅವರು ಗುಡಿಯೊಳಗೆ ಅತ್ತಿತ್ತ ಅಡ್ಡಾಡಿ ಬೇರೆ ಬೇರೆ ಕೋಣೆಗಳನ್ನು ನೋಡಿಕೊಂಡು ಬಂದರು. ಆದರೆ ಎಲ್ಲಿಯೂ ಅವರು ಕಾಣಲಿಲ್ಲ. ಇಂತಹ ಪ್ರಸಂಗಗಳಲ್ಲಿ ಎಷ್ಟೋ ಸಲ ಮಹಾರಾಜರು ನದಿಯ ದಂಡೆಯ ಮೇಲಿರುವ ಶ್ರೀ ಗರ್ದಿಯವರ ತೋಟದಲ್ಲಿ ಹೋಗಿ ಕೂಡುತ್ತಿದ್ದರೆಂಬದು ಶ್ರೀ ವಿಷ್ಣುಬುವಾ ಅವರಿಗೆ ಗೊತ್ತಿತ್ತು. ಆದುದರಿಂದ ಬುವಾ ಅವರು ನದಿಯ ಕಡೆಗೆ ಹೋದರು. ಮತ್ತು ತುಸು ದೂರಿಂದಲೇ ಗರ್ದಿಯವರ ತೋಟದ ಕಡೆಗೆ ನೋಡಿದರು. ಅಲ್ಲಿ ಮಹಾರಾಜರು ಒಂದು ಬೇವಿನ ಗಿಡದ ಕೆಳಗೆ ನಿಂತಿರುವದನ್ನು ಬುವಾ ಅವರು ಸ್ಪಷ್ಟವಾಗಿ ನೋಡಿದರು. ಅವರಿಗೆ ತುಸು ಸಂಶಯ ವೆನಿಸಿದ್ದರಿಂದ ಅವರು ಮಹಾರಾಜರನ್ನು ಮತ್ತೆ ಮತ್ತೆ ಪರೀಕ್ಷೆಮಾಡಿ

ನೋಡಿದರು. ಆದರೆ ಸಮೀಪಕ್ಕೆ ಮಾತ್ರ ಹೋಗಲಿಲ್ಲ. ಐದು ಮಿನಿಟುಗಳ ವರೆಗೆ ನೋಡಿದ ಮೇಲೆ ಗಿಡದ ಕೆಳಗೆ ನಿಂತಿರುವವರು ಮಹಾರಾಜರೇ ಆಹುದೆಂಬ ಬಗ್ಗೆ ಬುವಾ ಅವರ ಮನಸ್ಸಿನಲ್ಲಿ ಯಾವ ಸಂದೇಹವೂ ಉಳಿಯಲಿಲ್ಲ. ಯಾಕೆಂದರೆ ಆ ಅವಧಿಯಲ್ಲಿ ಮಹಾರಾಜರು ತಮ್ಮ ಮೈಮೇಲೆ ಹೊದ್ದು ಕೊಂಡಿರುವ ಚಿರಪರಿಚಿತವಾದ ಶಾಟಿಯು ಗಾಳಿಗೆ ಅಗಳಾಡಿದ್ದು ಬುವಾ ಅವರಿಗೆ ಚನ್ನಾಗಿ ಕಾಣಿಸಿತು.

ಬುವಾ ಅವರು ಕೂಡಲೇ ಗುಡಿಗೆ ಹಿಂದಿರುಗಿದರು. ಮಹಾರಾಜರು ತೋಟದಲ್ಲಿದ್ದು, ಅಲ್ಲಿ ಅವರಿಗೆ ಕೂಡಲಿಕ್ಕೆ ಆಸನ ಮೊದಲಾದ ಯಾವ ಸಾಮಗ್ರಿಯನ್ನೂ ಅವರಾಗ ತಮ್ಮ ಸಂಗಡ ಒಯ್ದಿದ್ದಿಲ್ಲ. ಗುಡಿಗೆ ಬಂದು ಅವರು ಗುರುಗಳಿಗೆ ಬೇಕಾಗುವ ಪದಾರ್ಥಗಳನ್ನೆಲ್ಲ ತಕ್ಕೊಂಡು ತಿರುಗಿ ಆ ಬೇವಿನ ಗಿಡಕ್ಕೆ ಹೋದರು. ಆದರೆ ಆಗ ಮಹಾರಾಜರು ಅಲ್ಲಿ ಕಾಣಲಿಲ್ಲ. ತೋಟದೊಳಗೆ ಮತ್ತೆ ಎಲ್ಲಿಗಾದರೂ ಹೋಗಿರಬಹುದೆಂಬ ಬುವಾ ಅವರು ಅಲ್ಲಿ ಎಲ್ಲ ಕಡೆಗೂ ಮತ್ತೆ ಮತ್ತೆ ಅಡ್ಡಾಡಿ ನೋಡಿದರು. ಎಲ್ಲಿಯೂ ಮಹಾರಾಜರ ಸುಳುವು ಹತ್ತಲಿಲ್ಲ. ಬುವಾ ಅವರು ಗೊಂದಲಕ್ಕೀಡಾಗಿ ತೋಟದವನ ಕಡೆಗೆ ಹೋಗಿ ಮಹಾರಾಜರ ಬಗ್ಗೆ ವಿಚಾರಣೆ ಮಾಡಿದರು. ''ಇಲ್ಲ, ಸ್ವಾಮೀ, ಮಹಾರಾಜರು ಇಂದು ಇಲ್ಲಿ ಬಂದಿರುವದೇ ಇಲ್ಲ'' ಎಂದು ತೋಟಗನು ಎದೆ ತಟ್ಟಿ ಹೇಳಿದನು. ಬುವಾ ಅವರ ಸಂದೇಹಕ್ಕೆ ಕೊನೆಯೇ ಕಾಣದಂತಾಯಿತು. ಅವರು ದಿಗ್ಭ್ರಾಂತರಾದರು. ''ಎಲ, ಇದೇನು ? ನಾನು ನನ್ನ ಕಣ್ಣುಗಳಿಂದಲೇ ಇದೀಗ ಮಹಾರಾಜರನ್ನಿಲ್ಲಿ ನೋಡಿ ಹೋಗಿದ್ದೇನೆ. ತೋಟಿಗನಾದರೋ ಅವರು ಇಲ್ಲಿ ಬಂದೇಯಿಲ್ಲ ವೆಂದು ಧೈರ್ಯದಿಂದ ಹೇಳುತ್ತಾನೆ. ಇದರ ರಹಸ್ಯವಾದರೂ ಏನಿರಬಹುದು ? ನಾನು ನನ್ನ ಕಣ್ಣುಗಳನ್ನು ನಂಬಬೇಕೋ ? ಏನೂ ತಿಳಿಯದಾಯಿತಲ್ಲ ! ಮಹಾರಾಜರನ್ನು ಎಲ್ಲಿ ಹುಡುಕಲಿ ? ತೋಟಗನ ಮಾತುಗಳನ್ನು ನಂಬಬೇಕೋ ? ಹೇಗೆ ಮಾಡಲಿ ?'' ಎಂಬ ಮೊದಲಾದ ವಿಚಾರಗಳ ಲಹರಿಯಲ್ಲಿ ಅವರು ಹುಚ್ಚುಬಡಿದವರಂತೆ ಅಲ್ಲಿಯೇ ಅತ್ತಿತ್ತ ಅಡ್ಡಾಡುತ್ತ ವೇಳೆ ಕಳೆಯಹತ್ತಿದರು.

ಬುವಾ ಅವರು ಈ ರೀತಿ ಅಲ್ಲಿ ಒಂದೆರಡು ತಾಸುಗಳನ್ನಾದರೂ ಕಳೆದಿರಬಹುದು. ಇಷ್ಟೊತ್ತಿಗೆ ಬಿಸಿಲು ಬಲಿತು ಪ್ರಖರವಾಗಿತ್ತು. ತಲೆಯ ಮೇಲೆ ನೆರಳು ಕೂಡ ಇರಲಿಲ್ಲ. ಮಧ್ಯಾಹ್ನವಾಗಿ ಊಟದ ವೇಳೆ ಮೀರಿ ಹೋಗಿತ್ತು. ಆದರೂ ಹೊಟ್ಟೆಯೊಳಗೆ ಅನ್ನದ ಒಂದು ಕಣ ಕೂಡ ಹೋಗಿರಲಿಲ್ಲ. ಮೇಲಾಗಿ ಗುರುಗಳು ಎಲ್ಲಿ ಹೋಗಿರುವರೋ ಎಂಬ ಚಿಂತೆ. ಹೀಗೆ ಇವೆಲ್ಲ ಕಾರಣಗಳ ಮೂಲಕ ಬುವಾ ಅವರು ಕಂಗೆಟ್ಟು ಹೋಗಿದ್ದರು. ಅವರ ಮೋರೆಯ ಮೇಲೆ ಹುಚ್ಚರ ಕಳೆಯಿಟ್ಟಿತ್ತು. ಅವರು ತೀರ ಮನನೊಂದವರಾಗಿ ದುಃಖದಿಂದ ಕಣ್ಣೀರುದುರಿಸುತ್ತ ಗುರುಸ್ಮರಣೆಯೊಳಗೆ ನಿಮಗ್ನರಾಗಿ ಕಣ್ಣು ಮುಚ್ಚಿಕೊಂಡು ಕುಳುತುಬಿಟ್ಟರು.

ಉನ್ನತ್ತಾವಸ್ಥೆಯಲ್ಲಿದ್ದ ಮಹಾರಾಜರ ಮನಸ್ಸಿಗೆ ಕೂಡ ಶಿಷ್ಯನ ಚಿಂತೆಯ ಆಘಾತವು ಬಡಿಯಿತು. ಅವರು ಘಕ್ಕನೇ ಕಣ್ಣು ತೆರೆದು ಸಮೀಪದಲ್ಲಿದ್ದ ಒಬ್ಬ ಮನುಷ್ಯನನ್ನು ಕರೆದು ಹೇಳಿದರು: "ನದಿಯ ದಂಡೆಯಲ್ಲಿ ನಮ್ಮ ಹುಡುಗನು ನಮ್ಮನ್ನು ಹುಡುಕುತ್ತಿದ್ದಾನೆ. ನಾವು ಇಲ್ಲಿರುವೆವೆಂದು ಹೇಳಿ ಅವನನ್ನು ಇಲ್ಲಿಗೆ ಕರಕೊಂಡು ಬರಬೇಕು." ಅದರಂತೆ ಆ ಮನುಷ್ಯನು ನದಿಯ ದಂಡೆಗೆ ಬಂದು ಬುವಾ ಅವರನ್ನು ನೋಡಿದನು. ಬುವಾ ಅವರು ಜಗತ್ತನ್ನು ಮರೆತವರಾಗಿ ಗುರುಗಳ ಧ್ಯಾನದಲ್ಲಿ ತಲ್ಲೀನರಾಗಿದ್ದರು. ಬಂದ ಮನುಷ್ಯನು ಎಲ್ಲ ಸಂಗತಿಯನ್ನೂ ಅವರಿಗೆ ತಿಳಿಸಿ, ಅವರನ್ನು ಕರೆದುಕೊಂಡೇ ಶ್ರೀ ಬಸವಣ್ಣ ದೇವರ ಗುಡಿಗೆ ಬಂದನು.

ಬುವಾ ಅವರು ಗುರುಗಳ ಸ್ಥಿತಿಯನ್ನು ನೋಡಿದರು. ಮಹಾರಾಜರು ಬುವಾ ಅವರನ್ನು ಕಣ್ಣೆತ್ತಿ ಕೂಡ ನೋಡಲಿಲ್ಲ. ಬುವಾ ಅವರು ಅವರನ್ನು ಮಾತಾಡಿಸಬೇಕೆಂದು ಪ್ರಯತ್ನ ಮಾಡಿ ನೋಡಿದರು. ಆದೂ ಯಶಸ್ವಿಯಾಗಲಿಲ್ಲ. ಜನರು ತುಪ್ಪದ ಬತ್ತಿಗಳಿಂದಲೂ, ಕರ್ಪೂರದಿಂದಲೂ ಮಹಾರಾಜರಿಗೆ ಆರತೀ ಮಾಡುತ್ತಿದ್ದರು. ಎಷ್ಟೋ ಜನ ಭಾವಿಕರು ತಾಬಾಣಗಳಲ್ಲಿ ಊಟವನ್ನು ಬಡಿಸಿಕೊಂಡು ಬಂದು ಮಹಾರಾಜರ ತುಟಿಯ ಹತ್ತರ ಹಿಡಿದು ನೈವೇದ್ಯ ತೋರಿಸುತ್ತಿದ್ದರು. ಈ ದೃಶ್ಯವನ್ನು ನೋಡಿ ಬುವಾ ಅವರ ಚಿಂತೆಯು ಇನ್ನೂ ಹೆಚ್ಚಾಯಿತು. ಅವರು ಸ್ತಂಭಿತರಾಗಿ ಸುಮ್ಮನೇ ನಿಂತುಬಿಟ್ಟರು.

ತುಸು ಹೊತ್ತಿನಲ್ಲಿ ಮಹಾರಾಜರು ಅಲ್ಲಿಂದ ಎದ್ದರು. ಪ್ರಖರವಾದ ಬಿಸಿಲಲ್ಲಿಯೇ ಅವರು ಲೈನದಾರಿಯನ್ನು ಹಿಡಿದು ಬಡಲಿಯ ಕಡೆಗೆ ಹೊರಟರು. ಜನರೆಲ್ಲ ಅವರು ಬೆನ್ನು ಹತ್ತಿದರು. ನದಿಯ ಹತ್ತರ ಬಸಪ್ಪ ಸುಣಗಾರ ಎಂಬ ವಾಲೀಕಾರನು ಬೆಟ್ಟಿಯಾದನು. ಮಹಾರಾಜರು ಒಮ್ಮೆಲೇ ಅವನ ಹತ್ತರ ಹೋಗಿ ಟಣ್ಣನೆ ಜಿಗಿದು ಅವನ ಹೆಗಲ ಮೇಲೆ ಕುಳಿತರು. ಬಸಪ್ಪನು ಮಹಾರಾಜರನ್ನು ಹೊತ್ತುಕೊಂಡೇ ಬಡಲಿಯ ಕಡೆಗೆ ನಡೆದನು. ಅಷ್ಟರಲ್ಲಿ ಹಿಂದಿನಿಂದ ಒಂದು ಒಂಟೆ ಬಂತು. ಅದೂ ಬಡಲಿಯ ಕಡೆಗೆ ಹೊರಟಿತ್ತು. ಅದು ಮಹಾರಾಜರ ಬದಿಯಲ್ಲಿಯೇ ಹಾಯಿದು ಹೊರಟಿತ್ತು. ಮಹಾರಾಜರು ಅದನ್ನು ನೋಡಿದವರೇ, ಬಸಪ್ಪನ ಹೆಗಲ ಮೇಲಿಂದ ಹಾರಿ ಒಂಟೆಯ ಬೆನ್ನ ಮೇಲೆ ಹೋಗಿ ಕುಳಿತರು. ಮತ್ತು ಒಂಟೆಯ ಮೇಲೆ ಕುಳಿತುಕೊಂಡೇ ಮುಂದಿನ ಪ್ರವಾಸವು ಸುರುವಾಯಿತು. ಮಹಾರಾಜರ ವಿಚಿತ್ರಸ್ವರೂಪವನ್ನು ನೋಡಿ ಒಂಟೆಯ ಮೇಲಿನ ಮನುಷ್ಯನು ಏನೂ ತಿಳಿಯಲಾರದೆ ಸುಮ್ಮನಿದ್ದನು. ಈ ಸ್ಥಿತಿಯಲ್ಲಿ ಮಹಾರಾಜರು ಬಡಲಿಯನ್ನು ದಾಟಿ ಯಕ್ಕುಂಡಿಯ ಸಮೀಪದ ವರೆಗೆ ಹೋದರು. ಯಕ್ಕುಂಡಿಯು ಇನ್ನೂ ಮುಂದೆ ತುಸು ಅಂತರದ ಮೇಲಿತ್ತು. ಅಲ್ಲಿ ಹಳ್ಳದ ಸಮೀಪಕ್ಕೆ ಒಂದು ಕಡೆ ಲೈನದಾರಿಯ ಎರಡು ಬದಿಗಳಿಗಿರುವ ಬೇವಿನ ಮತ್ತು ಹುಣಸೆಯ ಮರಗಳು ಮೇಲ್ಬಾಗದಲ್ಲಿ ಒಂದಕ್ಕೊಂದು ಕೂಡಿಕೊಂಡಿದ್ದವು. ಮಹಾರಾಜರು ಅದನ್ನು ನೋಡಿದವರೇ, ಆ ಗಿಡಗಳೆರಡೂ ಕೂಡಿದ ಟೊಂಗೆಗಳ ಭಾಗವನ್ನು ತಮ್ಮ ಕೈಗಳಿಂದ ಗಟ್ಟಿಯಾಗಿ ಹಿಡಿದುಕೊಂಡು ಒಂಟೆಯನ್ನು ಹಾಗೆಯೇ ಮುಂದಕ್ಕೆ ಹೋಗಗೊಟ್ಟರು. ಮಹಾರಾಜರು ಆ ಗಿಡಗಳ ಟೊಂಗೆಗಳ ಮೇಲೇರಿ ಅಲ್ಲಿಯೇ ಕಳಿತು ಬಿಟ್ಟರು. ಅವರನ್ನು ಹಿಂಬಾಲಿಸಿದ ಜನರು ಗಿಡದ ಕೆಳಗೆ ಹೋಗಿನಿಂತರು. ಆದರೆ ಏನು ಮಾಡಿದರೂ ಮಹಾರಾಜರು ಗಿಡವನ್ನು ಬಿಟ್ಟು ಇಳಿಯಲೊಲ್ಲರು. ಸಂಜೆಯ ೫ ಗಂಟೆಯಾಯಿತು. ಕೆಳಗೆ ಕುಳಿತವರೆಲ್ಲ ಮಹಾರಾಜರಿಗೆ ಅನೇಕ ಬಗೆಯಿಂದ ಬೇಡಿಕೊಂಡರು. ಮಹಾರಾಜರು ಕೊನೆಗೊಮ್ಮೆ ಗಿಡದಿಂದ ಕೆಳಗಿಳಿದರು. ಆದರೆ ಅವರಿನ್ನೂ ಪೂರ್ವದ ಸ್ಥಿತಿಗೆ

ಮಾತ್ರ ಬಂದಿರಲಿಲ್ಲ. ಆವರು ಅದೇ ಅವಸ್ಥೆಯಲ್ಲಿ ಹಾಗೆಯೇ ಹೊರಟು ಅಸುಂಡಿಗೆ ಹೋದರು. ಅಸುಂಡಿಯೊಳಗೆ ರಾತ್ರಿ ೧೧ ಗಂಟೆಯ ಸುಮಾರಕ್ಕೆ ಮಹಾರಾಜರಿಗೆ ಪೂರ್ವಪ್ರಜ್ಞೆ ಬಂತು !


ಮರುವರ್ಷ, ಎಂದರೆ ಸನ್ ೧೯೦೮ ರಲ್ಲಿ ಮಹಾರಾಜರು ಚಾತುರ್ಮಾಸ್ಯಕ್ಕಾಗಿ ಅಪ್ಪಗಿಯಲ್ಲಿ ಕುಳಿತಿದ್ದರು. ಚಾತುರ್ಮಾಸ್ಯವನ್ನು ಭಾದ್ರಪದ ಹುಣ್ಣಿಮೆಯ ದಿನ ಕೊನೆಗಾಣಿಸಬಹುದೆಂಬದು ವಾಚಕರಿಗೆ ಗೊತ್ತಿದೆ. ಚಾತುರ್ಮಾಸ್ಯ ಮುಗಿಸಿದ ದಿವಸ ಯತಿಗಳು, ತಾವು ಚಾತುರ್ಮಾಸ್ಯಕ್ಕಾಗಿ ಆರಿಸಿದ ಊರ ಸೀಮೆಯನ್ನು ದಾಟಬೇಕಾಗುತ್ತದೆ. ಇದಕ್ಕೆ ಸೀಮೋಲ್ಲಂಘನವೆಂದು ಹೆಸರು. ಅದರಂತೆ ಆ ವರುಷದ ಚಾತುರ್ಮಾಸ್ಯವು ಭಾದ್ರಪದ ಪೌರ್ಣಿಮೆಯ ದಿನ ಮುಗಿಯಿತು. ಮಹಾರಾಜರು ಸೀಮೋಲ್ಲಂಘನ ಮಾಡಬೇಕೆಂದು ಹೊರಟರು. ನಿಜವಾಗಿ ಅವರು ಸೀಮೋಲ್ಲಂಘನೆಗೆ ಹೊರಡಬೇಕಾಗಿದ್ದ ವೇಳೆಯು ಬಂದಿದ್ದಿಲ್ಲ. ಇನ್ನೂ ತುಸು ವೇಳೆಯಾದ ನಂತರ ಹೊರಡತಕ್ಕದ್ದೆಂದು ಗೊತ್ತಾಗಿತ್ತು. ಅನೇಕ ಜನರು ಇನ್ನೂ ಊಟ ಮಾಡುತ್ತಿದ್ದರು. ಮಹಾರಾಜರು ಯಾರಿಗೂ ಹೇಳದೇ ಕೇಳದೆ ಹೊರಟುಬಿಟ್ಟರು. ಅವರು ಹೊರಟದ್ದು ಮೊದಲು ಯಾರಿಗೂ ಗೊತ್ತಾಗಲಿಲ್ಲ. ಒಬ್ಬರೇ ಇದ್ದರು. ತುಸು ದೂರ ಹೋಗುವಷ್ಟರಲ್ಲಿ, ಮೈಮೇಲಿನ ಅರಿವೆಗಳು ಒಂದೊಂದಾಗಿ ಬೀಳುತ್ತ, ಮಹಾರಾಜರು ಪೂರ್ಣ ದಿಗಂಬರರಾದರು. ಮೈಮೇಲಿನ ಪ್ರಜ್ಞೆಯು ಹೋಗಿ ಬಿಟ್ಟಿತ್ತು. ಅವರು ಅತ್ತಿತ್ತ ಅಡ್ಡಾಡಿ ಗುಡ್ಡದ ಓರೆಯ ಮೇಲೆ ಹೋಗಿ ಕುಳಿತುಕೊಂಡರು.

ಮಹಾರಾಜರು ಹೀಗೆ ಅಕಸ್ಮಾತ್ತಾಗಿ ಹೊರಟು ಹೋದ ಸುದ್ದಿಯನ್ನು ಕೇಳಿ, ಶಿಷ್ಯರೂ ಉಳಿದವರೂ ಮಹಾರಾಜರನ್ನು ಹುಡುಕುತ್ತ ಬಂದರು. ಗುಡ್ಡದ ಓರೆಯ ಮೇಲೆ ಕುಳಿತ ಮಹಾರಾಜರನ್ನು ನೋಡಿ ಶಿಷ್ಯರೂ ಅಲ್ಲಿಗೆ ಹೋಗಬೇಕೆಂದು ಗುಡ್ಡವನ್ನೇರಹತ್ತಿದರು. ಆದರೆ ಮಹಾರಾಜರು ಯಾರನ್ನೂ ಸಮೀಪಕ್ಕೆ ಬರಗೊಡಲೊಲ್ಲರು. ತಮ್ಮ ಸಮೀಪಕ್ಕೆ ಬರಬೇಕು

ಕೆಂದು ಯತ್ನಿಸುವವರ ಮೇಲೆ ಮಹಾರಾಜರು ಹಿಂದೆ ಮುಂದೆ ನೋಡದೆ ಕಲ್ಲುಗಳನ್ನು ಎಸೆಯ ಹತ್ತಿದರು. ಶಿಷ್ಯರೂ, ಉಳಿದವರೂ ಭಯಭೀತರಾಗಿ ಕೆಳಗೆ ದೂರಿನಲ್ಲಿಯೇ ನಿಂತುಕೊಳ್ಳಬೇಕಾಯಿತು. ಮಹಾರಾಜರು ಈ ಅವಸ್ಥೆಯಲ್ಲಿ ನಾಲ್ಕೈದು ತಾಸುಗಳನ್ನು ಕಳೆದರು. ಆ ಮೇಲೆ ಅವರ ಮನಸು ತುಸು ಸೌಮ್ಯವಾದಂತೆ ಕಂಡಿತು. ಯಾಕೆಂದರೆ ಮಹಾರಾಜರು ಆಗ ಅಲ್ಲಿಂದ ಎದ್ದು, ಗುಡ್ಡದ ಓರೆಗುಂಟ ಮುಚ್ಚಂಡಿಯ ಸಿದ್ಧೇಶ್ವರನ ಗುಡಿಯ ಕಡೆಗೆ ಹೊರಟರು. ಆ ಗುಡಿಗೆ ಹೋದ ಮೇಲೆ ಜನರು ಚಿದಂಬರನ ಭಜನೆ ಮಾಡಹತ್ತಿದರು. ಆ ಮೇಲೆ ಮಹಾರಾಜರು ತಮ್ಮ ಮೊದಲಿನ ಸ್ಥಿತಿಗೆ ಬಂದರು. ಅಲ್ಲಿ ಗೀತಾಪಾಠವಾದ ಮೇಲೆ ತಿರುಗಿ ಊರಿಗೆ ಬಂದರು.



ಗುರ್ಲಹೊಸೂರ ಶ್ರೀ ಚಿದಂಬರೇಶ್ವರ
ದೇವಾಲಯದ ಮುಹಾದ್ವಾರ (ನಗಾರಖಾನೆ ಸಹಿತ)



ಶ್ರೀ ಕೈವಲ್ಯಾಶ್ರಮ ಸ್ವಾಮಿ ಮುಹಾರಾಜರ
ಸಮಾಧಿ ದರ್ಶನ.

೨೪ ಮಹಾಸಮಾಧಿ

ಮರಣವೆಂದರೆ ಸಾಮಾನ್ಯರಿಗೆ ಬಲು ಹೆದರಿಕೆ. ಮರಣವಾಗುವದೆಂದರೆ ಏನು, ಎಂಬದಕ್ಕೆ ಉತ್ತರ ಕೊಡುವದು ತೀರ ಕಠಿಣವಾಗಿದೆ. ಒಡೆಯಲಾರದ ಅನೇಕ ಜೀವನದ ಒಗಟಗಳಲ್ಲಿ ಮರಣವೂ ಒಂದು. ಮರಣದ ವಿಚಾರ ಬಂದುದರಿಂದಲೇ ಶ್ರೀ ರಮಣ ಮಹರ್ಷಿಗಳು ಎಲ್ಲವನ್ನೂ ಬಿಟ್ಟು, ಸತ್ಪಥವನ್ನು ಹಿಡಿದು ಮಹರ್ಷಿ ಪದವಿಯನ್ನು ಹೊಂದಿದರು. ಸಾಯುವ ವರೆಗೆ ತಾನೇ ದೇವರೆಂದು ತಿಳಿದ ದೊಡ್ಡ ಅಲೆಕ್ಸಾಂಡರನು ಸಾವಿನ ವಿಚಾರದ ಮುಂದೆ ಕೈಯೂರಿ ಮೆತ್ತಗಾದನು. ಅವನ ಕಣ್ಣು ತೆರೆದುದು, ಅವನು ಸಾವಿನ ದವಡೆಯೊಳಗೆ ಸಿಕ್ಕಾಗಲೇ.

ಮರಣವೆಂದರೇನೆಂಬದನ್ನು ಉಪನಿಷತ್ಕಾರರು ಚೆನ್ನಾಗಿ ವಿವರಿಸಿದ್ದಾರೆ. 'ಶರೀರ ಮತ್ತು ಪ್ರಾಣ, ಅಥವಾ ದೇಹ ಮತ್ತು ಆತ್ಮಾ ಇವರ ವಿಯೋಗವೇ ಸಾವೆಂದು ಅಲ್ಲಿ ಹೇಳಿದೆ. ಲಿಂಗಶರೀರ ಮತ್ತು ಸ್ಥೂಲ ಶರೀರಗಳ ಅಗಲುವಿಕೆಯೇ ಮರಣವೆಂದು ಹೇಳಬಹುದು. ಸತ್ತವರಿಗೆ ನಾಲ್ಕು ತರದ ಗತಿಗಳೆಂದು ಅವರ ಅಂಬೋಣವಿದೆ: ೧. ತೀರ ಕೆರುಕುಳ ಜೀವಿಗಳಿಗೆ ಪುತ್ತೆ ಮತ್ತೆ ಹುಟ್ಟಿ ಸಾಯುತ್ತಿರುವದೇ ಗತಿ. ಇದನ್ನು 'ಜಾಯಸ್ವ, ಮ್ರಿಯಸ್ವ' ಮಾರ್ಗವೆಂದು ಕರೆದಿದ್ದಾರೆ. ೨. ಪಿತೃಯಾಣವು ಎರಡನೆಯ ಗತಿ. ಎಂದರೆ / ಮೃತಜೀವಿಗಳು ಯಮಧರ್ಮನ ಲೋಕಕ್ಕೆ ಒಯ್ಯಲ್ಪಟ್ಟು, ಅಲ್ಲಿ ಅವರಿಗೆ ಅವರವರ ಪಾಪಪುಣ್ಯಗಳ ಫಲಗಳು ಸಿಕ್ಕುವವು. ೩. ದೇವಯಾನವು ಮೂರನೆಯ ಗತಿ. ಎಂದರೆ ದೇವರ ಧ್ಯಾನ ಮೊದಲಾದವುಗಳನ್ನು ಶಾಸ್ತ್ರಶುದ್ಧವಾದ ರೀತಿಯಲ್ಲಿ ಮಾಡಿದವರಿಗೆ ಸಿಕ್ಕುವ ಗತಿ. ಇವರು ಬ್ರಹ್ಮಲೋಕಕ್ಕೆ ಹೋಗುವರು. ೪. ಯಾರು ಪೂರ್ಣ ಸಾಕ್ಷಾತ್ಕಾರ ಪಡೆದ ಜ್ಞಾನಿಗಳಾಗಿರುವರೋ ಅಂಥವರಿಗಾಗುವ ಸ್ಥಿತಿ.

ಇವರು ಎಲ್ಲಿಯೂ ಹೋಗುವ ಕಾರಣವಿಲ್ಲ. ''ನ ತಸ್ಯ ಪ್ರಾಣಾ ಉತ್ಕ್ರಾಮಂತಿ'' ಎಂದು ಉಪನಿಷತ್ತು ಹೇಳುತ್ತದೆ. ಜ್ಞಾನಿಗಳ ಮರಣವೆಂದರೆ ಅವರ ಲಿಂಗಶರೀರವು ಅಲ್ಲಿಂದಲ್ಲಿಯೇ ಕರಗಿ ಹೋಗುವದು. ಲಿಂಗಶರೀರ ಭಂಗವಾದೊಡನೆ ಜ್ಞಾನಿಗಳು ಸರ್ವವ್ಯಾಪಕವಾದ ಪರಮಾತ್ಮ ಚೈತನ್ಯದಲ್ಲಿ ವಿಲೀನವಾಗಿ ಹೋಗುತ್ತಾರೆ.

ನಮ್ಮ ಚರಿತ್ರನಾಯಕರು ಪೂರ್ಣಜ್ಞಾನಿಗಳು. ಅವರಿಗೆ ತಮ್ಮ ಮರಣದ ಸಂಗತಿಯು ಮೊದಲೇ ತಿಳಿದಿತ್ತು. ಅವರು ಆದಕ್ಕಾಗಿ ಎಲ್ಲ ಸಿದ್ಧತೆಯನ್ನೂ ಮಾಡಿಕೊಂಡಿದ್ದರು. ''ಜೀವನದ ಕೊನೆಯ ಕ್ಷಣದಲ್ಲಿ ನಾರಾಯಣನನ್ನು ಸ್ಮರಿಸುವದೇ'' ಪರಮ ಪುರುಷಾರ್ಥವೆಂದು ಭಾಗವತದಲ್ಲಿ ಬರೆದಿದೆ. ಗೀತೆಯೂ ಆ ಮಾತಿಗೆ ಪುಷ್ಟಿಕೊಟ್ಟಿದೆ. ಮಹಾರಾಜರು ಆ ಬಗ್ಗೆ ಬಹಳ ಜಾಗರೂಕರಾಗಿದ್ದು, ಜೀವನದ ತಮ್ಮ ಕೊನೆಯ ಕ್ಷಣದಲ್ಲಿ ಭಗವಂತನನ್ನು ಅಖಂಡವಾಗಿ ಸ್ಮರಿಸುತ್ತಿದ್ದರು. ''ಶರಣರ ಮಹತಿಯು ಅವರ ಮರಣದಲ್ಲಿ'' ಎಂಬ ನಾಣ್ನುಡಿಯಂತೆ ಮಹಾರಾಜರು ತಮ್ಮ ದೊಡ್ಡಸ್ತಿಕೆಯನ್ನು ಆ ಕಾಲದಲ್ಲಿ ಸ್ಪಷ್ಟವಾಗಿ ತೋರಿಸಿಕೊಟ್ಟರು.

ಮಹಾರಾಜರು ತಮ್ಮ ಕೊನೆಯ ಚಾತುರ್ಮಾಸ್ಯಕ್ಕಾಗಿ ಕುಳಿತದ್ದು ಅಷ್ಟಗಿಯಲ್ಲಿ. ಅಲ್ಲಿ ಅವರು ಒಟ್ಟಿಗೆ ಮೂರು ಚಾತುರ್ಮಾಸ್ಯಗಳನ್ನು ಕಳೆದರೆಂಬದು ಪಾಚಕರಿಗೆ ಗೊತ್ತಿದೆ. ಅಷ್ಟಗಿಯ ಮೇಲೆ ಮಹಾರಾಜರ ಲೋಭವು ವಿಶೇಷವಾಗಿತ್ತು. ಅವರು ಗುರ್ಲಹೊಸೂರಲ್ಲಿ ದೇಹವಿಟ್ಟ ವೇಳೆಗೆ ಸರಿಯಾದ ಕಾಲದಲ್ಲಿಯೇ ಅಷ್ಟಗಿಯ ಇನಾಮದಾರರಾದ ಶ್ರೀ ಕೇಶವರಾಯರಿಗೆ ಸ್ವಪ್ನದಂತಹ ಸ್ಥಿತಿಯಲ್ಲಿ ಕಾಣಿಸಿಕೊಂಡರಂತೆ. ಆಗ ಅವರು ಪ್ರವಾಸಿಕನ ವೇಷದಲ್ಲಿದ್ದರು. ಎಂದರೆ ಅವರು ಶಾಟಿಯನ್ನು ಟೊಂಕಕ್ಕೆ ಸುತ್ತಿ, ಬಲಗೈಯಲ್ಲಿ ಒಂದು ಉದ್ದವಾದ ಬಡಿಗೆಯನ್ನು ಹಿಡಿದಿದ್ದರು. ಬೆನ್ನಮೇಲೆ ಪ್ರವಾಸಿಕರ ಗಂಟೊಂದು ಇತ್ತು. ಮಹಾರಾಜರು ಈ ಸ್ಥಿತಿಯಲ್ಲಿ ಇನಾಮದಾರರಿಗೆ ಭೆಟ್ಟಿಯಾಗಿ ''ನಾವಿನ್ನು ನಿಮ್ಮ ಮನೆಯ ಆಟ್ಟದ ಮೇಲೆ ಇರತಕ್ಕವರಿದ್ದೀವೆ. ನಮ್ಮ ವ್ಯವಸ್ಥೆಯನ್ನು ಸರಿಯಾಗಿ ಇಡಿರಿ'' ಎಂದು ಹೇಳಿದರಂತೆ.

ಮಹಾರಾಜರು ತಮ್ಮ ಜೀವಿತಾವಧಿಯಲ್ಲಿಯೇ ಅಷ್ಟಗಿಯ ಇನಾಮುದಾರರ ಮೇಲೆ ತಮ್ಮ ಪ್ರೇಮವನ್ನು ಸ್ಪಷ್ಟವಾಗಿ ತೋರಿಸಿದ್ದರು. ಇನಾಮದಾರರ ಸ್ಥಿತಿಯು ಮೊದಲಿನಂತೆ ವೈಭವದ್ದಾಗಿರಲಿಲ್ಲ. ಅವರು ಈಗ ಇಳಿಕೆಯ ಸ್ಥಿತಿಗೆ ಬಂದಿದ್ದರು. ಅವರು ತಮ್ಮ ಊರನ್ನೂ ಮನೆಯನ್ನೂ ಬಿಟ್ಟು ಬೇರೆ ಕಡೆಗೆ ಇರುವ ಹವ್ಯಾಸದಲ್ಲಿದ್ದರು. ಅದು ಮಹಾರಾಜರ ಮನಸ್ಸಿಗೆ ಬರಲಿಲ್ಲ. ಇನಾಮದಾರರು ತಮ್ಮ ಮೊದಲಿನ ಸ್ಥಿತಿಯನ್ನು ಪಡೆಯಬೇಕೆಂದು ಅವರು ಇಚ್ಛಿಸುತ್ತಿದ್ದರು. ಅದಕ್ಕೆ ಅವರು ಇನಾಮದಾರರಿಗೆ ಅನೇಕ ಸಲ ''ನೀವು ಈ ಮನೆಗೆ ಎಂದೂ ಕೀಲಿ ಹಾಕಬೇಡಿರಿ. ಒಬ್ಬರಾದರೂ ಇಲ್ಲಿ ಇರ್ರಿ. ಮನೆಯಲ್ಲಿ ದೀಪವನ್ನು ಆರಗೊಡಬೇಡಿರಿ. ನಂದಾದೀಪದಂತಾದರೂ ಒಂದು ದೀಪವನ್ನು ಇಲ್ಲಿ ಹಚ್ಚಿಕೊಂಡು ಯಾರಾದರೂ ಇರ್ರಿ. ಎಂದರೆ ಚಿದಂಬರನು ನಿಮ್ಮ ಕಲ್ಯಾಣ ಮಾಡುವನು. ಇಲ್ಲವಾದರೆ ನಿಮಗೆ ಬಹಳ ಕಠಿಣ ದಿನಗಳು ಬರಬಹುದು'' ಎಂದು ಹೇಳಿದ್ದರಂತೆ. ಆದರೆ ಇನಾಮದಾರರ ದುರ್ದೈವದಿಂದ ಅವರಿಗೆ ಇಂತಹ ಸಣ್ಣ ಮಾತನ್ನು ಕೂಡ ಸರಿಯಾಗಿ ನಡಿಸಿಕೊಂಡು ಹೋಗಲಿಕ್ಕಾಗಲಿಲ್ಲ.

ಮಹಾರಾಜರು ಅಷ್ಟಗಿ ಊರ ಇನಾಮದಾರರ ಮನೆತನದ ಮೇಲೆ ಇಷ್ಟು ಪ್ರೇಮ ತೋರಿಸಲಿಕ್ಕೆ ಯೋಗ್ಯ ಕಾರಣವಿತ್ತು. ಇನಾಮದಾರರ ಪೂರ್ವಜರು ಮೊದಲು ತೀರ ಬಡವರಾಗಿದ್ದರು. ಅವರ ಪೂರ್ವಜರಾದ ಶ್ರೀ ನರಸಿಂಹರಾಯರ ಪತ್ನಿಯವರಾದ ಲಕ್ಷ್ಮೀಬಾಯಿಯವರು ತಮ್ಮ ಸಣ್ಣ ಮಕ್ಕಳಾದ ಅಂಣಾಜೀ ಮತ್ತು ರಾವಜೀ ಎಂಬಿಬ್ಬರು ಹುಡುಗರನ್ನು ಕರೆದುಕೊಂಡು ಶ್ರೀ ಚಿದಂಬರ ದೀಕ್ಷಿತರ ಅನುಗ್ರಹಾರ್ಥ ಕೆಂಗೇರಿಗೆ ಹೋಗಿದ್ದರು. ದೀಕ್ಷಿತರು ಅವರಿಗೆ ಕೆಂಗೇರಿಯಲ್ಲಿ ಅಶ್ವತ್ಥವೃಕ್ಷದ ಸೇವೆ ಮಾಡಬೇಕೆಂದು ಹೇಳಿದರು. ಅದರಂತೆ ಅವರ ಸೇವೆ ನಡೆಯಿತು. ಒಂದು ದಿನ ಅವರು ಸೇವೆ ಮಾಡುತ್ತಿರುವಾಗ ಅಶ್ವತ್ಥವೃಕ್ಷಕ್ಕೆ ಅಕಸ್ಮಾತ್ತಾಗಿ ಬೆಂಕಿ ಹತ್ತಿದಂತೆ ಅವರಿಗೆ ಕಾಣಿಸಿತು. ಅದರಿಂದ ಅವರು ಮೂರ್ಛೆ ಹೋದರು. ಆಗ ಶ್ರೀ ಚಿದಂಬರ ದೀಕ್ಷಿತರು ಬಂದು ಅವರನ್ನೆಬ್ಬಿಸಿ, ಸೇವೆ ಸಾಕೆಂದು

ಹೇಳಿದರಂತೆ. ಮತ್ತು ಇಬ್ಬರು ಹುಡುಗರಿಗೆ ದೊಡ್ಡವಾಡದಲ್ಲಿ ಪೇಠೆಯವರ ಮನೆತನದ ಆಶ್ರಯಕ್ಕೆ ಹೋಗಿ ನಿಲ್ಲಬೇಕೆಂದು ಆಜ್ಞೆ ಮಾಡಿದರು. ಅದರಂತೆ ಆ ಹುಡುಗರು ಅಲ್ಲಿದ್ದಾಗ್ಗೆ, ಶ್ರೀಮಂತರಾದ ಚಿಂತಾಮಣ ಅಪ್ಪಾ ನಾಹೇಬ ಸಾಂಗ್ಲೀಕರರವರ ದೃಷ್ಟಿಗೆ ಬಿದ್ದರು. ದೀಕ್ಷಿತರ ಕೃಪೆಯಿಂದ ಅದೇ ಅವರ ಭಾಗ್ಯಕಾಲವಾಗಿ ಪರಿಣಮಿಸಿತು. ಸಾಂಗ್ಲೀಕರರು ಅವರನ್ನು ಕರೆದುಕೊಂಡು ಹೋಗಿ ತಮ್ಮ ಪದರಿನಲ್ಲಿಟ್ಟುಕೊಂಡರು. ಅವರ ಅನುಗ್ರಹದಿಂದ ಅವರಿಗೆ ಅಷ್ಟಗೀ, ಸೂಳೀಭಾವಿ, ಬೂದೀಹಾಳ ಮೊದಲಾದ ಊರುಗಳು ಇನಾಮಾಗಿ ಸಿಕ್ಕವು. ಹೀಗೆ ಶ್ರೀ ಚಿದಂಬರ ದೀಕ್ಷಿತರ ಕೃಪಾಕಟಾಕ್ಷದಿಂದ ಅವರು ಪರಮ ದಾರಿದ್ರ್ಯದಿಂದ ಇನಾಮದಾರ ಪದವಿಗೆ ಏರಿದ್ದರಿಂದ, ಅವರು ಕೊನೆಯವರೆಗೆ ಚಿದಂಬರ ಮಹಾರಾಜರ ಸೇವಕರಾಗಿದ್ದರೆಂಬದು ಸಹಜವಿದೆ. ಈ ರೀತಿ ತಮ್ಮ ಉಪಾಸ್ಯನಾದ ಶ್ರೀ ಚಿದಂಬರನ ಕೃಪೆಗೆ ಪಾತ್ರವಾದ ಕುಟುಂಬವೆಂದು ಮಹಾರಾಜರಿಗೆ ಈ ಮನೆತನದ ಮೇಲೆ ಅಷ್ಟು ಮಮತ್ವವುಂಟಾಗಿತ್ತು. ಎಂತೆಯೇ ಮಹಾರಾಜರು ಶ್ರೀ ಕೇಶವರಾಯರ ಹೆಂಡತಿ ಕೃಷ್ಣಾತಾಯಿಯವರನ್ನು ಸಾವಿನ ಕುತ್ತಿನೊಳಗಿಂದ ಪಾರುಮಾಡಿದರೆಂಬದು ವಾಚಕರಿಗೆ ಗೊತ್ತಿದೆ.

ಅಂಣಾಜಿಯವರ ಮೊಮ್ಮಕ್ಕಳೇ ಕೇಶವರಾಯರು. ಮಹಾರಾಜರ ಕಾಲಕ್ಕೆ ಇನಾಮದಾರರಾಗಿದ್ದವರೆಂದರೆ ಇವರೇ. ಅವರೂ ಮಹಾರಾಜರನ್ನು ಬಹಳ ಭಕ್ತಭಾವದಿಂದ ಕಾಣುತ್ತಿದ್ದರು. ಆದುದರಿಂದ ಮಹಾರಾಜರು ಮತ್ತೆ ಮತ್ತೆ ಅಷ್ಟಗಿಗೆ ಹೋಗುವರು. ಅಷ್ಟಗಿಯಲ್ಲಿ ಆಗ ಅನೇಕ ಜನ ವಿದ್ವಾಂಸರಾದ ವೈದಿಕ ಬ್ರಾಹ್ಮಣರು ಇರುತ್ತಿದ್ದರು. ಮಹಾರಾಜರ ಪ್ರಮುಖ ಶಿಷ್ಯರಾದ ಶ್ರೀ ರಾಮಭಟ್ಟ ಗ್ರಾಮೋಪಾಧ್ಯೆ, ಗೋಪಾಳಭಟ್ಟ ಗ್ರಾಮೋಪಾಧ್ಯೆ, ರಾಮಭಟ್ಟ ಜೋತೆ ಮತ್ತು ರಾಮಚಂದ್ರ ಗುಂಡೋ ಜೋಶಿ ಇವರೇ ಮೊದಲಾದವರೆಲ್ಲ ಆದೇ ಊರ ನಿವಾಸಿಗಳು. ಇವರೆಲ್ಲ ಮಹಾರಾಜರ ಪರಮಭಕ್ತರಾಗಿದ್ದು ಮಹಾರಾಜರ ಕೃಪೆಗೆ ಪಾತ್ರರಾದವರು. ಮಹಾರಾಜರ ಪಟ್ಟಶಿಷ್ಯರಾದ

ಶ್ರೀ ವಿಷ್ಣು ಬುವಾ ಅವರಾದರೂ ಇದೇ ಊರವರೆಂಬದು ವಾಚಕರಿಗೆ ಗೊತ್ತಿದೆ. ಇವೆಲ್ಲ ಕಾರಣಗಳಿಂದ ಮಹಾರಾಜರಿಗೆ ಅಷ್ಟಗಿಯ ಮೇಲೆ ಅಷ್ಟು ಪ್ರೀತಿ ಕುಳಿತಿತ್ತು.

ಮಹಾರಾಜರು ಈ ಸಾರೆ ಅಷ್ಟಗಿಯಲ್ಲಿದ್ದಾಗ ಬಂದವರಿಗೆಲ್ಲ ಭಗವದ್ಗೀತೆಯ ಉಪದೇಶ ಮಾಡಿದರು. ಮೊದಲಿನಿಂದಲೂ ಮಹಾರಾಜರದು ಗೀತೆಯ ಮೇಲೆ ವಿಶೇಷ ಪ್ರೇಮವಿತ್ತು. ಅವರ ಜೀವನವು ಭಗವದ್ಗೀತೆಯಲ್ಲಿ ವರ್ಣಿಸಿದ ಕರ್ಮಯೋಗಿ, ಭಕ್ತಿಯೋಗಿ, ಮತ್ತು ಜ್ಞಾನಯೋಗಿಗಳ ಆದರ್ಶವೇ ಇತ್ತೆಂಬದು ವಾಚಕರಿಗೆ ಈಗ ಹೊಳೆದಿರಲಿಕ್ಕೆ ಸಾಕು. ಅವರು ನಿತ್ಯದಲ್ಲಿ ಗೀತಾಪಾರಾಯಣ ಮಾಡುತ್ತಿದ್ದರು. ಅವರು ಚಿಕ್ಕದೊಂದು ಗೀತೆಯ ಪ್ರತಿಯನ್ನು ಧಾರವಾಡದಲ್ಲಿವ್ದಾಗಿನಿಂದ ಹತ್ತರ ಇಟ್ಟುಕೊಂಡಿದ್ದರು. ಅದನ್ನು ಮೊದಲು ಶ್ರೀ ವಾಜೀಂದ್ರರ ಕಡೆಗೂ, ಆ ಮೇಲೆ ಶ್ರೀ ವಿಷ್ಣು ಬುವಾ ಅವರ ಕಡೆಗೂ ಅವರು ಕೊಟ್ಟಿದ್ದರು. ಕೊನೆಗೆ ಅದು ಸಮಾಧಿಸ್ಥರಾದ ಮಹಾರಾಜರ ಚರಣಕಮಲಗಳ ಮೇಲೆಯೇ ಇಡಲ್ಪಟ್ಟಿತು. ಅವರು ಉಪದೇಶ ಮಾಡುವಾಗ ಮೇಲಿಂದ ಮೇಲೆ ಗೀತೆಯನ್ನು ಆಧಾರವಾಗಿಟ್ಟುಕೊಳ್ಳುತ್ತಿದ್ದರು. ಯಾರಿಗೆ ದಿನಾಲೂ ಗೀತಾಪಾಠವನ್ನು ಸಾಕಷ್ಟು ಮಾಡಲಿಕ್ಕಾಗುವದಿಲ್ಲವೋ ಅವರು ಕೆಳಗಿನ ೨ ಶ್ಲೋಕಗಳನ್ನಾದರೂ ಅನ್ನಲೇ ಬೇಕೆಂದು ಮಹಾರಾಜರು ಆಗ್ರಹದಿಂದ ಹೇಳುತ್ತಿದ್ದರು—

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥
ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್ಪ್ರಸಾದಾತ್ ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥

೧೮. ೬೧—೬೨

ಈ ಎರಡು ಶ್ಲೋಕಗಳನ್ನು ಯಾರು ಆದಷ್ಟು ಶೀಘ್ರವಾಗಿ ಪಾಠಮಾಡಿ ತೋರಿಸುವರೋ ಅವರಿಗೆ ಇನಾಮು ಕೊಡುವೆನೆಂದೂ ಮಹಾರಾಜರು ಹೇಳಿದರು. ಅದರ ಲಾಭವನ್ನು ಎಷ್ಟೋ ಜನರು ತಕ್ಕೊಂಡರು.

ಮಹಾರಾಜರು ಚಾತುರ್ಮಾಸ್ಯ ಮುಗಿದೊಡನೆ ಅಷ್ಟಗಿಯನ್ನು ಬಿಟ್ಟು ಹೊರಟರು. ಅವರು ಹೊರಟು ನಿಂತಾಗಿನ ದೃಶ್ಯವು ನೋಡುವಂತಹದಿತ್ತು. ಅಷ್ಟಗೀ ಇನಾಮದಾರರ ಮನೆಯು ಪೂರ್ವಾಭಿಮುಖವಾಗಿದೆ. ಮಹಾರಾಜರು ಕಟ್ಟೆಯ ಮೇಲೆ ನಿಂತಿದ್ದರು. ಅದರ ಕೆಳಗೆ ತುಸು ತಗ್ಗಿನಲ್ಲಿದ್ದ ಅಂಗಣದಲ್ಲಿ ನೂರಾರು ಜನ ಭಕ್ತರು ಸೇರಿದ್ದರು. ಶಿವಚಿದಂಬರ ನಾಮಸ್ಮರಣವು ಒಂದೇ ಸವನೆ ನಡೆದಿತ್ತು. ಮಹಾರಾಜರ ತೀರ ಕೃಶವಾದ, ಆದರೂ ಸುಂದರವಾದ ಮೂರುತಿಯು ಭಕ್ತರ ಗುಂಪಿನೊಳಗೆ ಬಲು ಚೆನ್ನಾಗಿ ಕಾಣುತ್ತಿತ್ತು. ಅವರ ಪಾದ ಸೇವಕರಾದ ಶ್ರೀ ಕೃಷ್ಣಾಜಿ ಮುರಕುಂಬಿ ಎಂಬ ಸದ್ಗೃಹಸ್ಥರು ತಮ್ಮ ಮೈಮೇಲಿನ ಎಲ್ಲ ಅರಿವೆಗಳ ಮೇಲೆ ''ಶಿವಚಿದಂಬರ, ಶಿವಚಿದಂಬರ'' ಎಂಬ ಅಚ್ಚನ್ನು ಒತ್ತಿಸಿಕೊಂಡು ನಿಂತಿದ್ದರು. ಒಮ್ಮಿಂದೊಮ್ಮೆಲೇ ಅವರ ದೃಷ್ಟಿಯು ಮಹಾರಾಜರ ಮೇಲೆ ಬಿದ್ದಿತು. ಅವರಿಗಾಗ ಏನೋ ಸ್ಫೂರ್ತಿಬಂದಂತಾಗಿ ಅವರು ಎಲ್ಲ ಜನರನ್ನುದ್ದೇಶಿಸಿ ಹೇಳಿದರು: ''ಅಪ್ಪಗಳಿರಾ, ಈ ಮೂರ್ತಿಯನ್ನು ಈಗಲೇ ಬೇಕಾದಷ್ಟು ನೋಡಿ ತಣಿಯಿರಿ. ಮುಂದೆ ನೋಡೇವೆಂದರೂ ಸಿಕ್ಕಲಾರದ ವಸ್ತುವಿದು. ಈಗ ನಾವು ಮೈಮರೆತರೆ ಮುಂದೆ ಪಶ್ಚಾತ್ತಾಪ ಪಡಬೇಕಾದೀತು. ಜನ್ಮಜನ್ಮಾಂತರಗಳಲ್ಲಿ ಬೇಕಾದಷ್ಟು ಯೋಗ, ಯಾಗ, ತೀರ್ಥ, ತಪ ಮೊದಲಾದವುಗಳನ್ನು ಹೂಡಿದರೂ ಇಂತಹ ವಸ್ತುವು ಸಿಕ್ಕುವದು ದುರ್ಲಭವು. ಈ ವಸ್ತುವನ್ನು ನೋಡುವ ಸಂಧಿ ದೊರೆತ ನೀವೆಲ್ಲರು ಪುಣ್ಯವಂತರು.'' ಈ ಸಂದರ್ಭದಲ್ಲಿ ರಾಜಾರಾಮರು ಚಿದಂಬರೇಶ್ವರನನ್ನು ಕುರಿತು ಮಾಡಿದ ಇದೇ ಅರ್ಥದ ಅಭಂಗಗಳು ಅವರಿಗೆ ನೆನಪಾದವು. ಅವರು ''ಹಾಕಾರೋನಿ ಸಾಂಗೇ ಸರ್ವಲಹಾನ ಥೋರಾ'' ಇತ್ಯಾದಿ ಅಭಂಗವನ್ನು ಬಲು ಸುಂದರವಾಗಿ ಅನ್ನುತ್ತ, ಕುಣಿದಾಡಿದರು; ಮತ್ತು ಅತ್ತಿತ್ತ ಜಿಗಿದಾಡಿದರು. ಅವರ ಬಾಯಿಂದ ಅಕಸ್ಮಾತ್ತಾಗಿ ಬಂದ ಈ ಶಬ್ದಗಳು ಮುಂದೆ ತುಸು ದಿವಸಗಳಲ್ಲಿ ಸತ್ಯವಾಗುವವೆಂದು ಯಾರು ತಾನೇ ಆಗ ಎಣಿಸಿದ್ದರು?

ಚಾತುರ್ಮಾಸ್ಯ ಮುಗಿದೊಡನೆ ಮಹಾರಾಜರು ಶ್ರೀ ಚಿದಂಬರೇಶ್ವರನ ಉತ್ಸವದ ಸಲುವಾಗಿ ಸಂಚಾರ ಹೊರಡುವದು ಕ್ರಮಪ್ರಾಪ್ತವಾಗಿತ್ತು. ಆದರೆ ಈ ಸಲದ ಅವರ ಪ್ರಕೃತಿಯು ತೀರ ಅಸ್ವಸ್ಥವಾದುದರಿಂದ ಈ ವಿಚಾರವು ಅಶಕ್ಯವಾಗಿತ್ತು. ಹವೆ ಬದಲಿಸುವದಕ್ಕಾಗಿ ಕೃಷ್ಣಾತಟಾಕಕ್ಕೆ ಹೋಗಬೇಕೆಂಬ ಕಲ್ಪನೆಯೂ ಮುಂದೆ ಬಂತು. ಆದರೆ ಬೂದೀಹಾಳ ಇನಾಮದಾರರಾದ ಶ್ರೀಮಂತ ಅಪ್ಪಾಸಾಹೇಬರು ಅವರಿಗೆ ಬಹಳೇ ಆಗ್ರಹ ಮಾಡಿ ಮಹಾರಾಜರನ್ನು ಬೂದೀಹಾಳಕ್ಕೆ ಕರಕೊಂಡು ಹೋದರು. ಮಹಾರಾಜರು ನಿರ್ವಾಹವಿಲ್ಲದೆ ಅಲ್ಲಿ ಒಂದು ದಿನ ಮಾತ್ರ ಇದ್ದು, ಮರುದಿವಸವೇ ಅಲ್ಲಿಂದ ಹೊರಟುಬಿಟ್ಟರು. ಅಲ್ಲಿಗೆ ತೀರ ಸಮೀಪವಾದ ರೇಲ್ವೆ ನಿಲ್ದಾಣವೆಂದರೆ ಸುಲಧಾಳ. ಅಲ್ಲಿ ಆ ಕಾಲಕ್ಕೆ ಎರಡೂ ಬದಿಯಿಂದ ಗಾಡಿಗಳು ಬಂದು ಒಂದನ್ನೊಂದು ದಾಟುತ್ತಿದ್ದವು. ಎಂದರೆ ಆಗ ಬೇಕಾದವರು ಧಾರವಾಡದ ಕಡೆಗೂ, ಬೇಕಾದವರು ಮಿರಜಿಯ ಕಡೆಗೂ ಹೋಗಬಹುದಾಗಿತ್ತು. ಕೃಷ್ಣಾತಟಾಕಕ್ಕೆ ಹೋಗಬೇಕೆಂದರೆ ಮಿರಜಿಯ ಕಡೆಯ ಗಾಡಿ ಹತ್ತಬೇಕು. ಧಾರವಾಡದ ಮೇಲಿಂದ ಗುರ್ಲಹೊಸೂರಕ್ಕೆ ಹೋಗುವದಾದರೆ ಧಾರವಾಡ ತಿಕೀಟು ತೆಗೆಯಬೇಕು. ಆದುದರಿಂದ ಶಿಷ್ಯರು ಬಂದು ''ಎತ್ತ ಕಡೆಯ ತಿಕೀಟು ತೆಗೆಯಬೇಕು?'' ಎಂದು ಪ್ರಶ್ನೆ ಮಾಡಿದರು. ಮಹಾರಾಜರು ತುಸು ವಿಚಾರ ಮಾಡಿ ಹೇಳಿದರುಃ— ''ಈ ಶರೀರವನ್ನು ಚಿದಂಬರನಿಗೊಪ್ಪಿಸಿದ್ದೇವೆ. ಅವನ ಮನಸ್ಸಿಗೆ ಹೇಗೆ ಬರುವದೋ ಹಾಗೆ ಆಗಲಿ. ಎರಡು ಚೀಟಿಗಳನ್ನು ಬರೆದು ಸಿದ್ಧಪಡಿಸಿರಿ. ಒಂದರ ಮೇಲೆ 'ಕೃಷ್ಣಾತಟಕ' ಎಂದೂ, ಇನ್ನೊಂದರ ಮೇಲೆ 'ಗುರ್ಲಹೊಸೂರ' ಎಂದೂ ಬರೆಯಿರಿ.'' ಅದರಂತೆ ಚೀಟಿಗಳಿರಡು ಸಿದ್ಧವಾದವು. ಮಹಾರಾಜರು ಸ್ವತಃ ಆ ಚೀಟಿಗಳನ್ನು ತಮ್ಮ ಶಾಟಯೊಳಗೆ ಹಾಕಿಕೊಂಡು, ಕಣ್ಣುಮುಚ್ಚಿ, ಕೆಲಹೊತ್ತು ಧ್ಯಾನಸ್ಥರಾಗಿ ಕುಳಿತುಕೊಂಡರು. ಬಳಿಕ ಅವುಗಳನ್ನು ಕೆಳಗಿರಿಸಿ, ಒಬ್ಬ ಹುಡುಗನನ್ನು ಕರೆದು ಅವನಿಗೆ ಆ ಚೀಟಿಗಳಲ್ಲಿ ಬೇಕಾದದ್ದೊಂದನ್ನು ತಕ್ಕೊಳ್ಳಲಿಕ್ಕೆ ಹೇಳಿದರು. ಅದರಂತೆ ಆ ಹುಡುಗನು ತೆಗೆದ ಚೀಟಿಯನ್ನು ಬಿಚ್ಚಿ ನೋಡಲು 'ಗುರ್ಲಹೊಸೂರ' ಎಂದು ಬರೆದಿತ್ತು. ಅದರಂತೆ ಮಹಾರಾಜರು ಶಿಷ್ಯಸಮೇತರಾಗಿ

ಧಾರವಾಡಕ್ಕೆ ಬಂದಿಳಿದರು. (ಶಕೆ ೧೮೩೩ ಭಾದ್ರಪದ ಪಂಚಮೀ ತೃತೀಯಾ, ಸೋಮವಾರ, ಇಶ್ವಿ ಸನ್ ೧೧—೯—೧೯೧೧).

ಧಾರವಾಡದ ಗಂಡು ಹವೆಯಿಂದ ಮಹಾರಾಜರ ಆರೋಗ್ಯವು ಸುಧಾರಿಸಬಹುದೆಂದು ಎಲ್ಲರೂ ತಿಳಿದಿದ್ದರು. ಆದರೆ ಮಹಾರಾಜರ ಪ್ರಕೃತಿಯು ಬರಬರುತ್ತ ಕೆಡಹತ್ತಿತು. ಆದರೂ ಮಹಾರಾಜರು ವಾಜೀಂದ್ರರನ್ನು ಕರೆದು ಉತ್ಸವದ ಸಾಮಾನುಗಳನ್ನೆಲ್ಲ ಕೂಡಲೆ ಕೊಂಡು ಕೊಂಡು ಗುರ್ಲಹೊಸೂರಿಗೆ ಹೋಗೋಣವೆಂದು ಆಗ್ರಹ ಮಾಡಹತ್ತಿದರು. ''ಉತ್ಸವಕ್ಕೆ ಇನ್ನೂ ಅವಧಿಯಿದೆ ತಮ್ಮ ಪ್ರಕೃತಿ ಸರಿ ಸುಧಾರಿಸಲಿ. ಆ ಮೇಲೆ ಉತ್ಸವದ ಸಿದ್ಧತೆ ಮಾಡಬಹುದು ಅದಕ್ಕೆ ಈಗಿಂದಲೇ ಇಷ್ಟೇಕೆ ಗಡಿಬಿಡಿ ?'' ಎಂದು ವಾಜೀಂದ್ರರು ಪ್ರಾರ್ಥಿಸಿಕೊಂಡರು. ಆದರೂ ಮಹಾರಾಜರು ಕೇಳಲಿಲ್ಲ. ''ಹುಚ್ಚಾ, ದೇಹದ ಭರವಸೆಯೇನಿದೆ ? ದೇಹವು ಎಂದಾದರೊಮ್ಮೆ ಬಿದ್ದು ಹೋಗತಕ್ಕದ್ದೇ. ಆದುದರಿಂದ ನನ್ನ ಪ್ರಕೃತಿ ಸುಧಾರಣೆಯ ದಾರೀ ನೋಡದೆ ಉತ್ಸವದ ಎಲ್ಲ ಸಿದ್ಧತೆಯನ್ನು ಕೂಡಲೇ ಮಾಡುವದೊಳಿತು'' ಎಂದು ಅವರು ಸಿಷ್ಟುರವಾಗಿ ಹೇಳಿಬಿಟ್ಟರು. ಇದರಿಂದ ವಾಜೀಂದ್ರರಿಗೆ ಹೇಗೆ ಹೇಗೋ ಎನಿಸಿತು. ಆದರೂ ಗುರುಗಳ ಆಜ್ಞೆಯೆಂದು ಅವರು ಎಲ್ಲ ಪದಾರ್ಥಗಳನ್ನು ಸಂಗ್ರಹಿಸಹತ್ತಿದರು. ಆ ಕಾಲಕ್ಕೆ ಮಹಾರಾಜರು ವಾಜೀಂದ್ರರಿಗೆ ಇನ್ನೊಂದು ಸೂಚನೆ ಕೊಟ್ಟರು: ''ವಾಜೀಂದ್ರ, ಈ ಸಾರೆ ಉಪ್ಪು ಹೆಚ್ಚಾಗಿ ಬೇಕು. ಆದರ ವ್ಯವಸ್ಥೆ ಮಾಡಲಿಕ್ಕೆ ಮರೆಯಬೇಡ.'' ಇದರಿಂದ ಶಿಷ್ಯರಿಗೆ ಇನ್ನೂ ಹೆಚ್ಚಾಗಿ ಕೆಡಕೆನಿಸಿತು. ಆದರೆ ಮಹಾರಾಜರು ಯಾವುದಕ್ಕೂ ಗಮನ ಕೊಡಲಿಲ್ಲ. ಅವರು ನಿಶ್ಚಯವನ್ನೇ ಮಾಡಿಬಿಟ್ಟಿದ್ದರಿಂದ ಮೇಲೆ, ಯಾರ ಆಟವು ಎಂತು ನಡೆಯುವದು ? ವಾಜೀಂದ್ರರು ಎಲ್ಲ ವಸ್ತುಗಳನ್ನೂ ಕೂಡಿಸಿ, ಮೂರು ನಾಲ್ಕು ಗಾಡಿಗಳ ಮೇಲೆ ಹೇರಿಸಿ, ಗುರ್ಲಹೊಸೂರಿಗೆ ಕಳಿಸಿ-ಕೊಟ್ಟರು. ಆದರೆ ಕಾಕತಾಲೀಯ ನ್ಯಾಯದಿಂದ ಉಪ್ಪಿನ ಬಂಡಿಯೇ ಎಲ್ಲಕ್ಕೂ ಮೊದಲು ಗುರ್ಲಹೊಸೂರನ್ನು ಮುಟ್ಟಿತು.

ಧಾರವಾಡದಲ್ಲಿ ಹತ್ತು ಹನ್ನೆರಡು ದಿನಗಳು ಕಳೆದು ಹೋದವು. ಆದರೆ ಮಹಾರಾಜರ ಪ್ರಕೃತಿಯು ಗುಣಮುಖವಾಗಲಿಲ್ಲ. ಶಿಷ್ಯರೆಲ್ಲ ಬಹಳ ಚಿಂತಾಪರರಾದರು. ಆಗ ಮಹಾರಾಜರು ಗುರುಚರಿತ್ರೆಯ ಪ್ರಶ್ನವನ್ನು ಕೇಳಿ ನೋಡೋಣವೆಂಬ ಸೂಚನೆಗೆ ಸಮ್ಮತಿಸಿದರು ಮಹಾರಾಜರ ಬಡ್ಡೆ ಶ್ರೀ ದತ್ತಾತ್ರೇಯನಿಗೆ ಪ್ರಾರ್ಥನೆ ಮಾಡಿಕೊಂಡು ಪ್ರಶ್ನೆನೋಡಲು ಕೆಳಗಿನ ಉತ್ತರವು ಹೊರಟಿತು –

ಜೈಸೇ ಸಗರಾ ಕಾರಣೇ ಗಂಗಾ । ಪಾವನ ಕರಾವಯಾ ಆಲೀ ಜಗಾ ।
ತೈಸೇ ಭಕ್ತಸೇವಕ ವರ್ಗಾ । ತಾರಾವಯಾ ಅವತಾರಲಾಸಿ ॥

ಇದರ ಅರ್ಥವು ಸ್ಪಷ್ಟವಾಗಿಯೇ ಇತ್ತು. ಮಹಾರಾಜರು ತಮ್ಮ ಭಕ್ತ ಸೇವಕ ವರ್ಗವನ್ನು ದ್ಧಾರ ಮಾಡಲಿಕ್ಕೆ ಅವತಾರ ಮಾಡಿದ್ದರೆಂದೂ ಅವರ ಅವತಾರ ಕಾರ್ಯವು ಮುಗಿದಂತಾಯಿತೆಂದೂ ಉತ್ತರದ ಆಶಯವಿತ್ತು. ಆದರೆ ಗುರುಗಳ ವಿಯೋಗವು ಇಷ್ಟವಿಲ್ಲದ ಶಿಷ್ಯರು ಅದರ ಅರ್ಥವನ್ನು ಹೇಗೆ ಮಾಡಬೇಕೆಂಬ ಬಗ್ಗೆ ವಾದವಿವಾದ ಮಾಡಹತ್ತಿದರು. ಕೊನೆಗೆ ಮಹಾರಾಜರು ‘‘ಅದರ ಅರ್ಥವನ್ನು ಪ್ರತಿಯೊಬ್ಬನು ತನ್ನಿಷ್ಟಕ್ಕೆ ತಾನೇ ಮಾಡಿಕೊಳ್ಳಬೇಕು. ಪುನಃ ಪುನಃ ಅದನ್ನೋದಿ ವಿಚಾರ ಮಾಡಿ ಮನನ ಮಾಡಹತ್ತಿದರೆ, ಅದರ ಸರಿಯಾದ ಅರ್ಥವು ನಿಮಗೆ ಹೊಳೆಯದಿರದು ಅದರ ಉಪಯೋಗ ಮಾಡಿಕೊಳ್ಳುವದೂ ನಿಮ್ಮ ಕಡೆಗೇ ಇದೆ.” ಎಂದು ಹೇಳಿದರು.

ಏನು ಮಾಡಿದರೂ ಪ್ರಕೃತಿಯಲ್ಲಿ ಸುಧಾರಣೆಯಾಗದಿದ್ದುದರಿಂದ ಇನ್ನು ಹೆಚ್ಚಾಗಿ ಧಾರವಾಡದಲ್ಲಿ ನಿಲ್ಲುವದರಲ್ಲಿ ಅರ್ಥವಿಲ್ಲ, ಚಿದಂಬರನ ಇಚ್ಛೆಯಂತೆ ಕೂಡಲೇ ಗುರ್ಲಹೊಸೂರಿಗೆ ಹೋಗಿಬಿಡುವದೊಳಿತೆಂದು ಮಹಾರಾಜರು ನಿರ್ಣಯಿಸಿದರು. ಆದರೆ ತೀರ ಅಶಕ್ತರಾದ ಮಹಾರಾಜರನ್ನು ೨೮ ಮೈಲು ದೂರದಲ್ಲಿರುವ ಗುರ್ಲಹೊಸೂರಿಗೆ ಕರಕೊಂಡು ಹೋಗುವದೆಂತು ? ಆದರೆ ಔಂಧದ ಸಂಸ್ಥಾನಿಕರು ಇದೇ ವೇಳೆಗೆ ಮಹಾರಾಜರ ಭೆಟ್ಟಿಗೆ ಬಂದರು. ಅವರ ಹತ್ತರ ಉತ್ಕೃಷ್ಟವಾದುದೊಂದು ಬಗಿಯಿತ್ತು. ಶಿಷ್ಯರು ಆ ಬಗ್ಗೆ ಅವರಿಗೆ ಪ್ರಶ್ನೆ ಮಾಡಿದೊಡನೆ ಅವರು

ಸಂತೋಷದಿಂದಲೇ ಮಹಾರಾಜರ ಸಲುವಾಗಿ ಬಗಿಯನ್ನು ಕೊಡಲು ಒಪ್ಪಿದರು. ಅದರಂತೆ ಮಹಾರಾಜರು ಆಶ್ವೀನ ಶುದ್ಧ ಪ್ರತಿಪದೆಯ ದಿನಸ ಶಿಷ್ಯರನ್ನೊಡಗೊಂಡು ಗುರ್ಲಹೊಸೂರಕ್ಕೆ ಬಂದು ಮುಟ್ಟಿದರು.

ಈ ವೇಳೆಗೆ ಸಭಾಮಂಟಪದ ಕೆಲಸವೆಲ್ಲ ಮುಗಿದು, ಅದರ ನೆಲಗಟ್ಟಿನ ಕೆಲಸವು ಪ್ರಾರಂಭವಾಗಿತ್ತು. ಮಹಾರಾಜರನ್ನು ಅತ್ತಿತ್ತ ಇಬ್ಬರು ಶಿಷ್ಯರು ಹಿಡಿದು ಸಾವಕಾಶವಾಗಿ ಕರಕೊಂಡು ಬಂದರು. ಅಂತಹ ಸ್ಥಿತಿಯಲ್ಲಿ ಕೂಡ ಮೊದಲು ಮಹಾರಾಜರು ದೇವಾಲಯಕ್ಕೆ ಪ್ರದಕ್ಷಿಣೆ ಹಾಕಿ ಆ ಮೇಲೆ ದೇವರ ದರುಶನ ತಕ್ಕೊಂಡರು. ಆ ಮೇಲೆ ಸಭಾಮಂಟಪದೊಳಗೆ ತೂಗಬಿಟ್ಟ ತೂಗಮಣಿಯ ಮೇಲೆ ಅವರನ್ನು ಮಲಗಿಸಿದರು. ಸಭಾಮಂಟಪಕ್ಕೆ ಸಂಬಂಧಿಸಿರುವ ಸಿಂಹಾಸನದ ಕಟ್ಟಿಯು ಇನ್ನೂ ಬರಿದಾಗಿತ್ತು. ಅದರ ಮೇಲೆ ಬಾಬುಳಗಾಂವದಿಂದ ತಂದ ಚಿದಂಬರ, ಸಾವಿತ್ರಿ ಮತ್ತು ಸರಸ್ವತಿ ದೇವರ ಮೂರ್ತಿಗಳನ್ನು ಯಥಾವಿಧಿಯಾಗಿ ಸ್ಥಾಪಿಸಬೇಕೆಂದು ಮಹಾರಾಜರ ಇಚ್ಛೆಯಿತ್ತು. ಆದರೆ ಬಾಬುಳಗಾಂವದ ಮೂರ್ತಿಗಳು ಸಿಕ್ಕಲಿಲ್ಲ. ಆದುದರಿಂದ ಮಹಾರಾಜರು ಗುರ್ಲಹೊಸೂರ ಊರೊಳಗಿನ ಪ್ರಸಿದ್ಧ ಶಿಲ್ಪಿಯಾದ ಕರ್ಜಗಾರ ವಿಟ್ಠಪ್ಪನಿಗೆ ಶ್ರೀ ಚಿದಂಬರನ ಮೂರ್ತಿಯನ್ನು ಮಾಡಬೇಕೆಂದು ಆಜ್ಞಾಪಿಸಿದರು. ಅದರಂತೆ ಅದು ಸಿದ್ಧವಾಗಿತ್ತು. ಸಾವಿತ್ರಿ ಮತ್ತು ಸರಸ್ವತಿಯಮ್ಮನವರ ಮೂರ್ತಿಗಳು ಮುಂಬಯಿಯಿಂದ ಬಂದಿದ್ದವು. ಆದರೆ ಶಾಸ್ತ್ರಕ್ಕನುಸರಿಸಿ ಅವುಗಳ ಪ್ರತಿಷ್ಠಾಪನೆ ಮಾಡಲಿಕ್ಕೆ ಸಾಕಷ್ಟು ಅವಕಾಶವಿರಲಿಲ್ಲ. ಆದುದರಿಂದ ಮಹಾರಾಜರು ಮುಂದೆ ಒಂದೆರಡು ದಿನಗಳಲ್ಲಿ ವಾಜೀಂದ್ರರನ್ನು ಕರೆದು "ವಾಜೀಂದ್ರ, ದೇವರ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡುವದಾಗಲಿಲ್ಲ. ಆದರೂ ಮನಸಾ ನಾವು ಅವುಗಳನ್ನು ಪ್ರತಿಷ್ಠಾಪನೆ ಮಾಡಿಯೇ ಬಿಟ್ಟಿರುತ್ತೇನೆ. ಆದುದರಿಂದ ಮುತ್ತೈದೆಯರನ್ನು ಕರೆಕಳುಹು. ಅವರು ಬಂದು ದೇವರಿಗೆ ಆರತೀ ಮೊದಲಾದವುಗಳನ್ನು ಮಾಡಲಿ. ಆ ಮೇಲೆ ಅವರ ಉಡಿ ತುಂಬಿಸಿ, ಫಲ ಪ್ರಸಾದಗಳನ್ನು ಹಂಚಿರಿ" ಎಂದು ಆಜ್ಞಾಪಿಸಿದರು. ಅದರಂತೆ ಎಲ್ಲ ವ್ಯವಸ್ಥೆಯೂ ಸರಿಯಾಗಿ ಆಯಿತು.

ಗುರ್ಜಹೊಸೂರಿಗೆ ಬಂದು ೩—೪ ದಿನಗಳಾಗಿ ಹೋದವು. ಮಹಾರಾಜರ ಪ್ರಕೃತಿಯು ದಿನದಿನಕ್ಕೆ ಹೆಚ್ಚಿಚ್ಚಾಗಿ ಕೆಡಹತ್ತಿತು. ಈ ಬೇನೆಯೊಳಗಿಂದ ಮಹಾರಾಜರು ಉಳಿಯಬಹುದೆಂಬ ಆಸೆ ಕಡಿನೆಯಾಯಿತು. ಅವರ ಕೆಂಗೇರಿ ಚಾತುರ್ವರ್ಣಸ್ಯವು ಶಕೆ ೧೮೨೩ ರಲ್ಲಿ ಆದಾಗಿನಿಂದ ಅವರ ಪ್ರಕೃತಿಯು ಕೆಡುತ್ತಲೇ ನಡೆದಿತ್ತು. ಅವರಿಗೆ ಹೆಚ್ಚಾಗಿ ಆಹಾರವು ಹೋಗುತ್ತಿರಲಿಲ್ಲ. ನಾಲ್ಕೈದು ತುತ್ತು ಅನ್ನವನ್ನು ಮಾತ್ರ ಅವರು ತಕ್ಕೊಳ್ಳುತ್ತಿದ್ದರು. ಅವರಿಗೆ ಆದರಿಂದ ಮಲಬದ್ಧತೆ ಗಂಟುಬಿದ್ದಿತು. ಕಾಲುಗಳು ಮೇಲಿಂದ ಮೇಲೆ ಬಾಯುತ್ತಿದ್ದವು. ಈಗ ಅದೇ ರೋಗವು ಹೆಚ್ಚಾಗಿ ಬಿಟ್ಟಿತು. ಮಹಾರಾಜರಿಗೆ ಚಳಜ್ವರವಾಗಲಿ, ಉಳಿದಾವ ತರದ ತೊಂದರೆಯಾಗಲಿ, ಈ ಕಾಲಕ್ಕೆ ಆಗಲಿಲ್ಲ. ಆವರ ಅನ್ನವು ತೀರ ಕಡಿದು ಹೋಗಿ ಕಾಲು ಬಾತವು. ಮತ್ತು ಆ ಬಾವು ಮೇಲಕ್ಕೆ ಏರಹತ್ತಿತು. ಕೊನೆಗೆ ಆದರೊಳಗೇ ಅವರು ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿದರು.

ಈ ಕಾಲದಲ್ಲಿ ಶಿಷ್ಯರಾದ ವಿಷ್ಣುಬುವಾ ಅವರು ಮಹಾರಾಜರ ಸೇವೆಯಲ್ಲಿ ಹಗಲಿರುಳೂ ತತ್ಪರರಾಗಿದ್ದರು. ಅವರಿಗೆ ಹಗಲು ರಾತ್ರಿಗಳೆಂಬ ಭೇದವುಳಿಯಲಿಲ್ಲ. ಅವರು ಪಡುವ ಕಷ್ಟವನ್ನು ನೋಡಿ ಮಹಾರಾಜರಿಗೆ ಕೂಡ ಕರುಣೆ ಬಂತು. ಆ. ಶು. ಸಪ್ತಮಿಯ ದಿನ ಮಹಾರಾಜರ ಸ್ನಾನ ನಡೆದಿತ್ತು. ವಿಷ್ಣುಬುವಾ ಅವರು ನೀರು ತೋಡಿಟ್ಟು, ಕೈಯಲ್ಲಿ ಒರಿಸಿಕೊಳ್ಳುವ ವಸ್ತ್ರ, ಶಾಟಿ ಮತ್ತು ಕೌಪೀನಗಳನ್ನು ಹಿಡಿದುಕೊಂಡು ನಿಂತಿದ್ದರು. ಆಗ ಮಹಾರಾಜರು ಮರುಕದಿಂದ ಹೇಳಿದರು:— "ವಿಷ್ಣು, ನನ್ನ ಸಲುವಾಗಿ ನೀವು ಎಷ್ಟು ಕಷ್ಟಬಡುತ್ತಿರುವಿರಪ್ಪ. ಇನ್ನು ಎರಡು ದಿನ ಮಾತ್ರ. ಮುಂದೆ ನನ್ನ ಸಲುವಾಗಿ ಯಾರೂ ಕಷ್ಟಬಡುವ ಕಾರಣವಿಲ್ಲ. ಎರಡು ದಿನಗಳ ಸಲುವಾಗಿ ಇಷ್ಟೇಕೆ ಕಷ್ಟ? ಆ ಶಾಟಿಯನ್ನು ಅಲ್ಲಿಟ್ಟು ಹೋಗಿಬಿಡು. ನಾನು ತಕ್ಕೊಳ್ಳುತ್ತೇನೆ." ಇದನ್ನು ಕೇಳಿದೊಡನೆ ವಿಷ್ಣುಬುವಾ ಅವರ ಹೃದಯವು ವಿದೀರ್ಣವಾಯಿತು. ಅವರ ದುಃಖಿತವಾದ ಅಂತಃಕರುಣದ ದ್ಯೋತಕವೆಂದು ಒಂದೆರಡು ಹನಿ ಕಣ್ಣೀರೂ

ಉದುರಿದವು. ಅವರ ಅಳುಮೋರೆಯನ್ನೂ ಕಣ್ಣೀರನ್ನೂ ನೋಡಿ ಮಹಾರಾಜರು ತಮ್ಮ ಮಾತುಗಳನ್ನು ಮತ್ತೆ ತಿರುಗಿಸಿಕೊಂಡರು. ಅವುಗಳಿಗೆ ಅವರು ಬೇರೊಂದು ಅರ್ಥವನ್ನು ಮಾಡಲೆಳಿಸಿದರು:— "ವಿಷ್ಣು, ಹೀಗೇಕೆ ಹುಚ್ಚನಂತೆ ನಿಂತುಕೊಂಡೆ? ಮನಸ್ಸಿನೊಳಗೆ ಇಲ್ಲದ ಸಂಶಯ ವೇನಾದರೂ ಬಂದಿತೇ? ಛೀ, ಹುಚ್ಚಪ್ಪಾ. ಹಾಗೇನೂ ತಿಳಿದುಕೊಳ್ಳಬೇಡ. ಇನ್ನೆರಡು ದಿನಕ್ಕೆ ನನಗೆ ಪೂರ್ಣ ಆರೋಗ್ಯವಾಗುವದರಿಂದ ನಿಮ್ಮ ಮೇಲೆ ಬಿದ್ದ ಈಗಿನ ಸೇವೆಯ ಭಾರವು ಕಡಿಮೆಯಾಗುವದೆಂದಿಷ್ಟೇ ಹೇಳಿದೆನು. ಅದಕ್ಕೆ ಬೇರಾವ ಅಪಾರ್ಥವನ್ನೂ ಕಲ್ಪಿಸಬೇಡ, ಕಂಡೆಯಾ" ಆದರೂ ಚಾಣಾಕ್ಷರಾದ ಶಿಷ್ಯರ ಮನಸ್ಸಿಗೆ ಸಮಾಧಾನವಾಗಲಿಲ್ಲ. ಅವರ ಎದೆಯು ಅಂಜಿಕೆಯಿಂದ ವ್ಯಗ್ರವೇ ಆಯಿತು. ಆದರೇನು ಮಾಡುವದು? ಎಲ್ಲವನ್ನೂ ಗುರುಗಳ ಇಚ್ಛೆಗೆ ಬಿಟ್ಟು, ಅವರ ಸೇವೆ ಮಾಡುವದಷ್ಟೇ ಆಗಿನ ಅವರ ಕರ್ತವ್ಯವಾಗಿದ್ದಿತು.

ಅಷ್ಟಮಿಯ ದಿವಸ ಮಹಾರಾಜರಿಗೆ ಹಾಸಿಗೆಯನ್ನು ಸಹ ಬಿಡುವದು ಕಠಿಣವಾಯಿತು. ಆದುದರಿಂದ ಅವರು ಆಗ ಮಲಗಿಕೊಳ್ಳುತ್ತಿದ್ದ ಶ್ರೀ ಚಿದಂಬರೇಶ್ವರ ದೇವಾಲಯದೊಳಗಿಂದ ಸಭಾಮಂಟಪಕ್ಕೆ ಹೋಗುವ ಸ್ಥಳದಲ್ಲಿರುವ ಪಾವುಟಗೆಗಳ ಮೇಲೆಯೇ ಅವರಿಗೆ ಸ್ನಾನಕ್ಕೆ ಹಾಕಲಾಯಿತು. ಆ ಮೇಲೆ ಮತ್ತೆ ಚಿದಂಬರೇಶ್ವರ ಗುಡಿಯೊಳಗೆ ಕಟ್ಟಿಗೆ ಹೊಂದಿ ಕೆಳಗಿರುವ ಏನೆಯ ಅಂಗಣದಲ್ಲಿ ಅವರನ್ನು ಮಲಗಿಸಲಾಯಿತು. ಅವರು ಪಶ್ಚಿಮದ ಕಡೆಗೆ ತಲೆ ಮಾಡಿ ಪೂರ್ವಕ್ಕೆ ಕಾಲು ಬಿಟ್ಟು ಮಲಗಿಕೊಂಡಿದ್ದರು. ಅಷ್ಟರಲ್ಲಿ ಧಾರವಾಡದಿಂದ ಸಾಮಾನು ತುಂಬಿದ ಗಾಡಿಗಳು ಬಂದವು. ಅವು ಮಹಾದ್ವಾರದಲ್ಲಿ ನಿಂತವು. ಅವುಗಳೊಳಗಿಂದ ಚೀಲಗಳನ್ನು ಇಳಿಸಿಕೊಂಡು ಗುಡಿಯೊಳಕ್ಕೆ ತಕ್ಕೊಂಡು ಬರುವ ಕೆಲಸವು ನಡೆದಿತ್ತು. ಮಹಾರಾಜರು ಮಲಗಿಕೊಂಡಲ್ಲಿಂದಲೇ ಅದನ್ನೆಲ್ಲ ನೋಡಿದರು. ಅಷ್ಟರಲ್ಲಿ ಶ್ರೀ ವಾಜೀಂದ್ರರು ಮಹಾರಾಜರ ಸಮೀಪಕ್ಕೆ ಬಂದರು. "ವಾಜೀಂದ್ರ, ಸಾಮಾನುಗಳೆಲ್ಲ ಬಂದಂತಾಯಿತೇ? ಉಪ್ಪು ಬಂತೇ?" ಎಂದು ಮಹಾರಾಜರು ಕೇಳಿದರು. ವಾಜೀಂದ್ರರು ತಲೆಯಲ್ಲಾಡಿಸಿದರು. ಮಹಾರಾಜರು ಮತ್ತೆ ಮಾತಾಡಿದರು:— "ಅಪಾ, ನಿನ್ನ ಮನಸಿನಲ್ಲಿ

ಸಂಶಯವೊಂದು ಬಂದಿರಬಹುದು. ಈಗೋ ಇನ್ನೊಂದು ಗಳಿಗೆಗೋ ಸ್ವಾಮಿಗಳು ತಮ್ಮ ದೇಹಯಾತ್ರೆ ಮುಗಿಸತಕ್ಕವರಿದ್ದಾರೆ. ಇವರಿಗೆ ಈ ಸಾಮಾನುಗಳ ಚಿಂತೆಯೇಕೆ ಬೇಕು, ಎಂದು ನಿನಗೆ ಎನಿಸಿರಬಹುದು. ಅಲ್ಲವೇ? ಸಂಶಯವು ಸರಿಯಾದುದೇ. ಕಪ್ಪೆಯೊಂದು ಹಾವಿನ ಬಾಯಲ್ಲಿ ಸಿಕ್ಕಿರುವಾಗ, ಅದು (ಕಪ್ಪೆಯು) ನೊಣವನ್ನೊಂದು ನುಂಗಬೇಕೆಂದು ಯತ್ನ ನಡೆಸಿತ್ತಂತೆ. ಅದರಂತೆ ನಮ್ಮೆಲ್ಲರ ಸ್ಥಿತಿಯಾಗಿರುವದಲ್ಲವೇ? ನಾವೆಲ್ಲರೂ ಕಾಲಗ್ರಸ್ತರಾಗಿದ್ದೇವೆ. ಆದರೂ ಇಲ್ಲದ ಸಾಂಸಾರಿಕ ವಸ್ತುಗಳಿಗಾಗಿ ಹಾತೊರೆಯುತ್ತಿದ್ದೇವೆ. ಆದರೆ ವಾಜೀಂದ್ರ, ನಿಮ್ಮ ಗುರುಗಳ ವಿಷಯಕ್ಕೆ ಸಂಶಯಗೊಳ್ಳಬೇಡ. ದೇಹವಿರುವ ವರೆಗೆ ಇವೆಲ್ಲ ತೆರೆಗಳು ಬರತಕ್ಕವೇ ಆದರೆ ಮೇಲಿನ ತೆರೆಗಳಿಂದ ಸಮುದ್ರಕ್ಕೇನಾಗಬೇಕಾಗಿದೆ ? ಬರುವದು ಬರುತ್ತದೆ, ಹೋಗುವದು ಹೋಗುತ್ತದೆ, ಎಂಬ ನಿರ್ಧಾರದಿಂದ ವಿಚಾರಿಗಳು ತಮ್ಮ ಕಾಲಕಳೆಯುತ್ತಿರುತ್ತಾರೆ. ಇಕೋ ನೋಡು, ಇನ್ನು ಇವೆಲ್ಲ ಲೌಕಿಕ ವಿಚಾರಗಳನ್ನು ಸಂಪೂರ್ಣವಾಗಿ ಬಿಟ್ಟು, ನಾನಿನ್ನು ಕೊನೆಯ ಸಾಧನೆಯತ್ತ ಲಕ್ಷ್ಯಕೊಡುವೆನು.'' ಮಹಾರಾಜರು ಹೀಗೆ ಹೇಳಿದವರೇ ''ನಾರಾಯಣ, ನಾರಾಯಣ'' ಎಂದು ಉಚ್ಚಸ್ವರದಿಂದ ಘೋಷಣೆ ಮಾಡಹತ್ತಿದರು.

ಒದರಿ ಮಾತಾಡಲಿಕ್ಕೆ ಕೂಡ ಬರದಷ್ಟು ಅಶಕ್ತರಾದ ಮಹಾರಾಜರ ಆ ನಾಮಸ್ಮರಣೆಯ ಘೋಷವು ಸುಮಾರು ೫೦ ಹೆಜ್ಜೆಗಳಾಚೆ ಇರುವವರಿಗೆ ಸಹ ಸುಲಭವಾಗಿ ಕೇಳಬಹುದಾಗಿತ್ತು. ಈ ರೀತಿಯ ಘೋಷವು ಸುಮಾರು ಒಂದು ತಾಸಿನ ವರೆಗೆ ನಡೆಯಿತು. ಹತ್ತರದಲ್ಲಿದ್ದವರೊಬ್ಬರು ''ಸ್ವಾಮಿ, ತಾವು ಇಲ್ಲಿಯ ವರೆಗೆ ಶಿವಚಿದಂಬರ, ಶಿವಚಿದಂಬರ ಎಂದು ನಾಮಸ್ಮರಣೆ ಮಾಡುತ್ತ ಬಂದಿರುವಿರಿ. ಈಗೇಕೆ ನಾರಾಯಣ, ನಾರಾಯಣ, ಎಂದು ಸುರುವು ಮಾಡಿರುವಿರಿ?'' ಎಂದು ಕೇಳಿದರು. ಮಹಾರಾಜರು ಅವಕ್ಕೆ ಬಾಯಿಂದ ಉತ್ತರ ಕೊಡಲಿಲ್ಲ. ಅವರು ಆಕ್ಷಣದಿಂದ ಎಲ್ಲ ಮಾತುಕತೆಗಳನ್ನು ನಿಲ್ಲಿಸಿಬಿಟ್ಟಿದ್ದರು. ಸಂಜ್ಞೆಮಾಡಿ ಈ ಕಾಲದಲ್ಲಿ ಇದನ್ನೇ ಮಾಡಬೇಕಾಗಿರುವದೆಂದು ತಿಳಿಸಿದರು. ಬರಬರುತ್ತ ನಾರಾಯಣ ಶಬ್ದದ ಸಪ್ಪಳವು ಕಡಿಮೆ ಕಡಿಮೆಯಾಗಿ ಕೇಳಿಸುತ್ತ

ಹೋಯಿತು. ಆದರೆ ಮಹಾರಾಜರು ಬ್ರಹ್ಮರೂಪರಾಗುವ ವರೆಗೂ ಅದು ಅವಿರತವಾಗಿ ನಡದೇ ಇತ್ತು.

ರಾತ್ರಿ ಸುಮಾರು ಹತ್ತು ಗಂಟೆಗೆ ಮಹಾರಾಜರು ಮತ್ತೊಬ್ಬ ಶಿಷ್ಯರಾದ ಶ್ರೀ ಗೋಪಾಳಬುವಾ ಅವರಿಗೆ ತಮ್ಮ ಹತ್ತರ ಕುಳಿತುಕೊಂಡು ''ಮಾಝಾ ಧಾಕ ಮಾನೀ'' ಎಂಬ ರಾಜಾರಾಮನ ಅಭಂಗವನ್ನು ಅನ್ನುತ್ತ ಕುಳ್ಳಿರಬೇಕೆಂದು ಸಂಜ್ಞೆಮಾಡಿ ಸೂಚಿಸಿದರು. ಅದರಂತೆ ಗೋಪಾಳಬುವಾ ಅವರು ಮಹಾರಾಜರ ದೇಹಾವಸಾನವಾಗುವ ವರೆಗೆ ಅದನ್ನು ಅಖಂಡವಾಗಿ ಪಠಿಸುತ್ತ ಕುಳತುಕೊಂಡರು. ಮಧ್ಯರಾತ್ರಿಯಷ್ಟೊತ್ತಿಗೆ ಜಪಮಾಡುವಾಗ ಅನ್ನುತ್ತಿರುವಂತೆ ನಾರಾಯಣ ನಾಮೋಚ್ಚಾರವು ತೀರ ಸಾವಕಾಶವಾಗಿ ಆಗಹತ್ತಿತು. ಮುಂದೆ ಮುಂದೆ ಮಹಾರಾಜರ ನಾಮಸ್ಮರಣೆಯು ಕೇವಲ ಮನಸ್ಸಿನಲ್ಲಿಯೇ ನಡೆದದ್ದರಿಂದ, ಅವರ ತುಟಿಗಳಷ್ಟು ಮಾತ್ರ ಆಗಳಾಡುವದು ಕಾಣಿಸುತ್ತಿತ್ತೇ ಹೊರತು ಸಪ್ಪಳವು ಕೇಳಿಸುತ್ತಿರಲಿಲ್ಲ. ಶಿಷ್ಯರೆಲ್ಲ ದುಃಖಾಕ್ರಾಂತರಾಗಿ ಕಣ್ಣೀರುದುರಿಸುತ್ತ ಕುಳಿತುಕೊಂಡಿದ್ದರು. ಮಹಾರಾಜರು ರವಿವಾರ (ನವಮಿ) ಬೆಳಗು ಮುಂಜಾನೆ ೪—೩೧ ಗಂಟೆಯ ಸುಮಾರಕ್ಕೊಮ್ಮೆ ಎದ್ದು ಕುಳಿತು ಅಲ್ಲಿಯೇ ಸಮೀಪದಲ್ಲಿ ಕಿಟಕಿಯೊಳಗೆ ಇಟ್ಟಿರುವ ಗಡಿಯಾರವನ್ನು ನೋಡಿದರು. ಅಳುತ್ತಿರುವ ಶಿಷ್ಯರಿಗೆ ಕೈಸನ್ನೆ ಮಾಡಿ ಶಾಂತರಾಗಬೇಕೆಂದು ಸೂಚಿಸಿದರು. ಆ ಮೇಲೆ ಮತ್ತೆ ಹಾಸಿಗೆಯ ಮೇಲೆ ಮಲಗಿಕೊಂಡು ಪ್ರಣವೋಚ್ಚಾರ ಮಾಡಹತ್ತಿದರು. ಮುಂದೆ ೧೫ ನಿಮಿಷುಗಳಲ್ಲಿ ಮಹಾರಾಜರ ಇಹಲೋಕ ಯಾತ್ರೆ ಮುಗಿಯಿತು. ಸುಮಾರು ೪—೪೫ಕ್ಕೆ ಅವರ ಚಿಜ್ಜ್ಯೋತಿಯು ಸಂಕುಚಿತವಾದ ದೇಹಬಂಧನವನ್ನು ತಪ್ಪಿಸಿಕೊಂಡು ಸರ್ವವ್ಯಾಪಕವಾದ ಪರಬ್ರಹ್ಮ ಚೈತನ್ಯದಲ್ಲಿ ಐಕ್ಯವಾಯಿತು! ಇದನ್ನು ತೋರಿಸಲಿಕ್ಕೆಂದು ಶಿಷ್ಯರಾದ ವಾಜೀಂದ್ರರು ಕೂಡಲೇ ಕಪ್ಪುರದ ವಡೆಗಳನ್ನು ಹಚ್ಚಿ, ಮಹಾರಾಜರ ಜ್ಯೋತಿಯು ಪರಮಾತ್ಮ ಜ್ಯೋತಿಯೊಡನೆ ಒಂದಾಯಿತು, ಎಂದು ಹೇಳಿ, ದೊಡ್ಡದನಿ ತೆಗೆದು ಅಳಹತ್ತಿದರು- ಹರ! ಹರ!! ಆಗ ಅವರ ಶಿಷ್ಯಮಂಡಲಿಗಾದ ಅಪಾರವಾದ ದುಃಖವನ್ನು ವರ್ಣಿಸುವದು ಅಶಕ್ಯವೇ ಸರಿ. ಎಲ್ಲರಿಗೂ ಒಮ್ಮೆಲೇ ಅಂಧಕಾರ ಸಮುದ್ರದಲ್ಲಿ ಮುಳುಗಿದಂತಾಯಿತು.

ಎಲ್ಲರೂ ಶೋಕಾವಿಷ್ಟರಾಗಿ ಅಳುತ್ತಿರುವಾಗ ಯಾರು ಯಾರಿಗೆ ಸಮಾಧಾನ ಹೇಳಬೇಕು ?

ಆದರೆ ವಿವೇಕಿಗಳಾದ ಶಿಷ್ಯರು ಹಾಗೆ ಬಹಳ ಹೊತ್ತಿನ ವರೆಗೆ ಶೋಕ ಮಾಡುತ್ತ ಕೂಡುವದು ಸರಿಯಾಗಿರಲಿಲ್ಲ. ತಮಗಾದ ದುಃಖವನ್ನೆಲ್ಲ ಹತ್ತಿಕ್ಕಿ ಮುಂದಿನ ಉದ್ಯೋಗಕ್ಕೆ ಹತ್ತುವದು ಅವರ ಕರ್ತವ್ಯವಾಗಿತ್ತು. ಆಗ ಮಹಾರಾಜರ ಹತ್ತರ ಶ್ರೀಯುತರಾದ ವಾಜೀಂದ್ರ, ವಿಷ್ಣುಬುವಾ, ಗೋಪಾಳಬುವಾ, ಸಾವಳಾರಾಮ, ಭೋಳಾರಾಮ ಮತ್ತು ಕಾಶಕ್ಕಾ ಇವರು ಇದ್ದರು. ಮಹಾರಾಜರು ನಿಜಧಾಮಕ್ಕೆ ಹೋದ ಸುದ್ದಿಯು ಹಾಹಾ ಎನ್ನುವಷ್ಟರಲ್ಲಿ ಎಲ್ಲ ಕಡೆಗೂ ಹಬ್ಬಿತು. ಊರೊಳಗಿಂದ ಶ್ರೀ ಶಂಕರರಾವ ಬೆಹರೆ, ದೀಕ್ಷಿತ ವಂಶಜರು, ಉಳಿದ ಸೆಟ್ಟಿ ಸಾಹುಕಾರರು, ಇವರೇ ಮೊದಲಾದವರೆಲ್ಲ ಕೂಡಲೇ ಚಿದಂಬರನ ಗುಡಿಗೆ ಧಾವಿಸಿ ಬಂದರು. ೫—೩೦ ಗಂಟೆಗೆ ಶ್ರೀಗಳಿಗೆ ಸ್ನಾನಮಾಡಿಸಿ, ಪುಷ್ಪ ಮತ್ತು ತುಳಸೀಹಾರ ಗಳಿಂದ ಅವರ ಪೂಜೆ ಮಾಡಿ ಚಿದಂಬರೇಶ್ವರನ ಗುಡಿಯಲ್ಲಿಯೇ ಪೂರ್ವಕ್ಕೆ ಮುಖಮಾಡಿ ವ್ಯಾಸಪೀಠದ ಮೇಲೆ ಕೂಡಿಸಿದರು. ಸುತ್ತಲಿನ ಹಳ್ಳಿಗಳಾದ ಸವದತ್ತಿ, ಕರೀಕಟ್ಟಿ, ದೊಡವಾಡ ಮೊದಲಾದ ಊರುಗಳಿಗೆ ಸುದ್ದಿ ಕಳಿಸಲಾಯಿತು. ಸವದತ್ತಿಯ ಪ್ರೌಢ ಮಾಸ್ತರರು ಮತ್ತು ಅಲ್ಲಿಯ ಮಾಮಲೇದಾರರಾದ ಶ್ರೀ ಕಿಣಿಯವರು ತಂತಿಮೂಲಕ ಧಾರವಾಡ, ಬೆಳಗಾಂವ, ಮೊದಲಾದ ದೂರಿನ ಊರುಗಳಿಗೆ ಮಹಾರಾಜರ ಸಮಾಧಿಯ ಸಂಗತಿಯನ್ನು ಬಿತ್ತರಿಸಿದರು. ಬೇರೆ ಬೇರೆ ಊರುಗಳಿಂದ ಎಲ್ಲ ಜಾತಿಯ ಜನರೂ ಮಹಾರಾಜರ ಅಂತ್ಯ ದರ್ಶನಕ್ಕಾಗಿ ಕೂಡಿದರು. ಅನೇಕ ಭಕ್ತ ಜನರು ಮಹಾರಾಜರ ಮುಂದೆ ಭಜನೆ ಮಾಡಲುಪಕ್ರಮಿಸಿದರು.

ವಾಜೀಂದ್ರರೇ ಮೊದಲಾದ ಸ್ವಾಮಿಗಳ ಶಿಷ್ಯರು ಅವರ ದೇಹಕ್ಕೆ ಜಲಸಮಾಧಿ ಕೊಡಬೇಕೆಂಬ ಆಲೋಚನೆಯಲ್ಲಿದ್ದರು. ಆದರೆ ಊರ-ಪ್ರಮುಖರೂ, ಶ್ರೀ ಚಿದಂಬರ ದೀಕ್ಷಿತರ ಮೊಮ್ಮಕ್ಕಳೂ ಆದ ಜನರೇ ಈ ಬಗ್ಗೆ ಆಗ್ರಹ ಹಿಡಿದರು. ''ಸ್ವಾಮೀ ಮಹಾರಾಜರು ಮಾಡಿದ ಚಿದಂಬರ ಸೇವೆಯನ್ನು ನೆನಿಸಿದರೆ, ಅವರ ಸಮಾಧಿಯು ಶ್ರೀ ಚಿದಂಬರ-ದೇವಾಲಯದೊಳಗೆ, ಶ್ರೀ ಬ್ರಹ್ಮಾನಂದ ಸ್ವಾಮಿಗಳ ಬಲಗಡೆಯಲ್ಲಿಯೇ

ಆಗುವದು ಸರ್ವಥೈವ ಯೋಗ್ಯವಾಗಿದೆ.'' ಎಂದು ಅವರು ನಿರ್ಧರಿಸಿದರು. ಮತ್ತು ಊರೊಳಗೆ ಸಮಾಧಿ ಮಾಡಬೇಕಾದರೆ ಬೆಳಗಾಂವ ಜಿಲ್ಲೆಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಅಪ್ಪಣೆ ಬೇಕಾದುದರಿಂದ, ಅವರು ಆ ಬಗ್ಗ ತಾವೇ ಅರ್ಜಿಯನ್ನು ಹೇಳಿ ಬರಿಸಿ, ಅದಕ್ಕೆ ಊರ ಪ್ರತಿನಿಧಿಗಳ ಅಂಕಿತಗಳನ್ನು ಹಾಕಿಸಿ ಸಿದ್ಧಪಡಿಸಿದರು. ಅದು ಸವದತ್ತಿಯ ಮ್ಯಾಜಿಸ್ಟ್ರೇಟರ ಮುಖಾಂತರ ವಾಗಿ ಕಳಿಸಲ್ಪಟ್ಟಿತು. ಸವದತ್ತಿಯ ಅಧಿಕಾರಿಗಳು ತಂತೀಮೂಲಕ ಆ ಅರ್ಜಿಯ ಮುಖ್ಯ ಸಂಗತಿಯನ್ನು ಮೇಲಧಿಕಾರಿಗಳಿಗೆ ತಿಳಿಸಿ ಅಪ್ಪಣೆ ಕೊಡ-ಬೇಕೆಂದು ಪ್ರಾರ್ಥಿಸಿಕೊಂಡರು.


ಬೆಳಗಾಂವಿಯಲ್ಲಿದ್ದ ಮಹಾರಾಜರ ಶಿಷ್ಯರಿಗೂ ತಂತೀಮೂಲಕ ತಿಳಿಸಿ ಸಮಾಧಿಗೆ ಅಲ್ಲಿಯ ಅಧಿಕಾರಿಗಳ ಕಡೆಯಿಂದ ತತ್ಕಾಲ ಅಪ್ಪಣೆ ಸಿಕ್ಕುವಂತೆ ಯತ್ನಮಾಡಹೇಳಿದರು. ಆದರೆ ಅಷ್ಟರಲ್ಲಿ ದೀಕ್ಷಿತ ವಂಶದೊಳಗಿನವರಲ್ಲಿ ಒಬ್ಬಿಬ್ಬರಿಗೆ ಈ ಮಾತು ಸರಿಬರದ್ದರಿಂದ, ಅವರು ಸ್ವಾಮಿಗಳ ಸಮಾಧಿಗೆ ವಿರೋಧ ಮಾಡಬೇಕೆಂದು ಟೊಂಕಕಟ್ಟಿ ನಿಂತರು. ಗುರ್ಲಹೊಸೂರ ಖಾತೇದಾರ ಇನಾಮದಾರರು ಆಗ ಊರಲ್ಲಿರಲಿಲ್ಲ. ಆದರೆ ಅವರ ಮನೆಯಲ್ಲಿದ್ದ ಕೆಲವರು ಈ ಬಗ್ಗೆ ತಮ್ಮ ವಿರೋಧವನ್ನು ಮೇಲಿನ ಅಧಿಕಾರಿಗಳಿಗೆ ತಿಳಿಸಬೇಕೆಂದು ಸವದತ್ತಿಗೆ ಹೋದರು. ಆದರೆ ಅವರು ಸವದತ್ತಿಗೆ ಹೋಗಿ ಊಟ ತೀರಿಸಿಕೊಂಡು, ಮಧ್ಯಾಹ್ನದಲ್ಲಿ ತಾರಆಫೀಸು ಸುರುವಾಗುವ ವರೆಗೆ ತುಸು ವಿಶ್ರಾಂತಿ ತಕ್ಕೊಳ್ಳೋಣವೆಂದು ಮಲಗಿ-ಕೊಂಡರು. ಅವರು ಮಲಗುವದಷ್ಟೇ ತಡ, ಅವರಿಗೆ ಗಾಢವಾದ ನಿದ್ರೆ ಹತ್ತಿತು. ಅವರು ತಿರುಗಿ ಎದ್ದು ನೋಡುವಷ್ಟರಲ್ಲಿ ಸಂಜೆಯ ಆರು ಗಂಟೆ ಯಾಗಿತ್ತು. ಅವರು ಲಗುಬಗೆಯಿಂದ ಎದ್ದು ತಮ್ಮ ದೈವವನ್ನು ನಿಂದಿ-ಸುತ್ತ ಅಂಚೆಯ ಮನೆಗೆ ಓಡಿದರು. ಆದರೆ ಅಷ್ಟರಲ್ಲಿ ಅಂಚೆಯ ಮಾಸ್ತರರು ತಮ್ಮ ಕೆಲಸ ಮುಗಿಸಿಕೊಂಡು ವಾಯುಸೇವನೆಗಾಗಿ ಎಲ್ಲಿಯೋ ಹೋಗಿಬಿಟ್ಟಿದ್ದರು. ವಿರೋಧಕ್ಕಾಗಿ ಹೋದ ಸದ್ಗೃಹಸ್ಥರು ನಿರಾಶರಾಗಿ ಕೈಬೀಸುತ್ತ ತಿರುಗಿ ಊರಿಗೆ ಹೋಗಬೇಕಾಯಿತು.

ಅಷ್ಟರಲ್ಲಿ ಮೇಲಾಧಿಕಾರಿಗಳಿಂದ ಆವಶ್ಯಕವಾದ ಪರವಾನಿಗೆಯು ತಂತೀಮೂಲಕ ಬಂದುಬಿಟ್ಟಿತು. ಸಂಜೆಯ ೫ ಗಂಟೆಯ ಸುಮಾರಕ್ಕೆ ತಾಲೂಕ ಅಧಿಕಾರಿಗಳ ಕೈಗೆ ಆದು ಸಿಕ್ಕಿತು. ಅದೇ ಕೆಲಸಕ್ಕಾಗಿ ಅಲ್ಲಿ ದಾರೀ ಕಾಯುತ್ತಿದ್ದ ಶ್ರೀ ವಿಟ್ಟಪ್ಪ ನವಲೇ ಎಂಬ ಭಕ್ತನು, ಕೂಡಲೇ ಅಧಿಕಾರಿಗಳ ಕಡೆಯಿಂದ ಅಪ್ಪಣೆಯ ಚೀಟಿಯನ್ನು ಪಡಕೊಂಡು, ತನ್ನ ಪಾಯುವೇಗದ ಕುದುರೆಯನ್ನೇರಿ ಗುರ್ಲಹೊಸೂರಿಗೆ ಧಾವಿಸಿ ಬಂದು ಎಲ್ಲ ಜನರಿಗೆ ಈ ಸಂಗತಿಯನ್ನು ತಿಳಿಸಿದನು- ಕೂಡಲೇ ಭಕ್ತಜನರು ಸ್ವಾಮಿ ಮಹಾರಾಜರ ದೇಹವನ್ನು ತೂಗುಮಣೆಯ ಮೇಲಿರಿಸಿ, ಸಂಭ್ರಮದಿಂದ ಊದಿಸುತ್ತ ಬಾರಿಸುತ್ತ ಮಲಾಪಹಾರಿಗೆ ಒಯ್ದರು. ಅಲ್ಲಿ ಮಹಾರಾಜರಿಗೆ ಸ್ನಾನ ಮಾಡಿಸಿ, ಶಿವಚಿದಂಬರ ನಾಮಘೋಷ ಮಾಡುತ್ತ ಪುನಃ ಮಹಾರಾಜರ ದೇಹವನ್ನು ದೇವಾಲಯಕ್ಕೆ ತಕ್ಕೊಂಡು ಬಂದರು.

ಈಗ ಮಹಾರಾಜರ ಸಮಾಧಿಯಾಗಿರುವ ಸ್ಥಳದಲ್ಲಿ ಸಾಕಷ್ಟು ದೊಡ್ಡದಾದ ತಗ್ಗು ತೋಡಲ್ಪಟ್ಟಿತು. ದೀಕ್ಷಿತ ವಂಶದವರೇ ಮುಂದಾಗಿ ತಗ್ಗು ತೋಡುವ ಸ್ಥಳವನ್ನು ಪೂಜಿಸಿ, ತೋಡುವ ಕೆಲಸವನ್ನು ಸುರುವು ಮಾಡಿದರು. ತುಸು ಹೊತ್ತಿನಲ್ಲಿ ಸಾಕಷ್ಟು ದೊಡ್ಡದಾದ ತಗ್ಗು ತೋಡಲ್ಪಟ್ಟಿತು. ಆ ಮೇಲೆ ವಿಧಿಪೂರ್ವಕವಾಗಿ ಸ್ವಾಮೀ ಮಹಾರಾಜರ ದೇಹವನ್ನು ಭೂಗರ್ಭದಲ್ಲಿರಿಸಲಾಯಿತು. ಅವರು ಧ್ಯಾನಕಾಲಕ್ಕೆ ಕೂಡುತ್ತಿದ್ದಂತೆ, ಎಂದರೆ ಸ್ವಸ್ತಿಕಾಸನವನ್ನು ಹಾಕಿ, ಎರಡೂ ಕೈಗಳನ್ನು ಒಂದರೊಳಗೊಂದು ಸೇರಿಸಿ ತೊಡೆಯ ಮೇಲೆ ಇಟ್ಟುಕೊಂಡ ಸ್ಥಿತಿಯಲ್ಲಿ ಅವರನ್ನು ಕೂಡಿಸಲಾಯಿತು. ಮಹಾರಾಜರು ಶ್ರೀ ವಿಷ್ಣುಬುವಾ ಅವರಿಗೆ ಅಷ್ಟಗಿಯಲ್ಲಿ ನಿಕ್ಷೇಪದಂತೆ ಬಹು ಭದ್ರವಾಗಿ ಜೋಪಾನ ಮಾಡಬೇಕೆಂದು ಹೇಳಿಕೊಟ್ಟ ಗೀತೆಯ ಪ್ರತಿಯನ್ನು ಅವರ ಕೈಯಲ್ಲಿ ಇರಿಸಲಾಯಿತು. ಆ ಮೇಲೆ ಆ ತಗ್ಗನ್ನು ಮುಚ್ಚುವ ಕೆಲಸ ನಡೆಯಿತು. ಚಿದಂಬರೋತ್ಸವಕ್ಕಾಗಿಯೆಂದು ಪ್ರತಿ ವರ್ಷಕ್ಕಿಂತ ಹೆಚ್ಚಾಗಿ ತಂದ ಬಿಳೇ ಉಪ್ಪನ್ನು ಮಹಾರಾಜರ ದೇಹದ ಸುತ್ತು ಮುತ್ತು ತಗ್ಗಿನಲ್ಲಿ ಹಾಕಲಾಯಿತು. ಮಹಾರಾಜರು ಮುಂಚಿತವಾಗಿ ಹೆಚ್ಚಿನ ಉಪ್ಪನ್ನು ಕೊಳ್ಳಲಿಕ್ಕೆ ಆಜ್ಞಾಪಿಸಿದ್ದರ ಮರ್ಮವು

ಈಗ ಅವರ ಶಿಷ್ಯರಿಗೆ ಹೊಳೆಯಿತು ! ಶಾಸ್ತ್ರಾಜ್ಞೆಯ ಮೇರೆಗೆ ಶಂಖದಿಂದ ಗುರುಮಹಾರಾಜರ ಶಿರೋಭೇದನವನ್ನು ಮಾಡಲಿಕ್ಕೆ ವಾಜೀಂದ್ರರಿಗೆ ಹೇಳಲು, ಅವರು ಕಣ್ಣೀರುಗಳನ್ನು ಅವಿರಳಧಾರೆಯಾಗಿ ಸುರಿಸಿ, ಈ ಕೆಲಸವು ಸರ್ವಥಾ ನನ್ನಿಂದಾಗದೆಂದು ಹೇಳಿದರು. ಕೊನೆಗೆ ಮತ್ತಾರೋ ಶಿಷ್ಯರು ವಾಜೀಂದ್ರರ ಅನುಮತಿಯಿಂದ ಮಹಾರಾಜರ ಶಿರಸ್ಸಿಗೆ ಶಂಖದಿಂದ ತುಸು ಗಾಯವನ್ನು ಮಾಡಿದರು. ಬಳಿಕ ತಗ್ಗಿನಲ್ಲಿ ಮಣ್ಣು ಹಾಕುವ ಕೆಲಸವು ಪ್ರಾರಂಭವಾಯಿತು. ಎಲ್ಲರೂ ಹಿಡಿಹಿಡಿ ಮಣ್ಣನ್ನು ಹಾಕಿದರು. ಸ್ವಲ್ಪೀ ವೇಳೆಯಲ್ಲಿ ತಗ್ಗು ತುಂಬಿ ಹೋಯಿತು. ಸಂಜೆಯಾಗುತ್ತಲೆ ಸೂರ್ಯನು ಕಣ್ಮರೆಯಾಗುವಂತೆ, ಗುರುಮಹಾರಾಜರ ತೇಜಸ್ವಿಯಾದ ಮುಖವು ಮಣ್ಣಿನಿಂದ ಮರೆಯಾಗಿ ಹೋಯಿತು. ಭಕ್ತರ ಮುಖಕಮಲಗಳು ಬಾಡಿದವು. ಗುರುಗಳು ಪ್ರತ್ಯಕ್ಷವಾಗಿ ಕಾಣದಂತಾದುದರಿಂದ ಕರ್ಣಧಾರನಿಲ್ಲದ ನೌಕೆಯಂತೆ ಭಕ್ತರ ಗತಿಯಾಯಿತು. ಎಲ್ಲರೂ ಖಿನ್ನಮುದ್ರೆಯಿಂದ ಪ್ರಸಾದ ಗ್ರಹಣಮಾಡಿ ಮನೆಗೆ ತೆರಳಿದರು. ಇಷ್ಟೆಲ್ಲ ಮುಗಿಯಬೇಕಾದರೆ ರಾತ್ರಿಯ ಹತ್ತು ಗಂಟೆಯಾಯಿತು.

ಮರುದಿವಸ ಶ್ರೀ ಸ್ವಾಮಿಗಳ ಸಮಾಧಿಯ ಸ್ಥಳವನ್ನು ಸರಿಪಡಿಸಿ ಸುಮಾರು ಒಂದು ಅಂಕಣದ ಪೂರ್ತಿ ಮಣ್ಣು ಹೆಂಟೆಯ ಗೋಡೆಯನ್ನು ಹಾಕಿ, ತಗಡಿನ ಚಪ್ಪರವನ್ನಿರಿಸಿ, ಅಂದಿನಿಂದಲೇ ನಿತ್ಯಪೂಜೆ, ನಂದಾದೀಪ ಮತ್ತು ನೈವೇದ್ಯಗಳ ವ್ಯವಸ್ಥೆ ಮಾಡಲಾಯಿತು. ಅವರ ಪ್ರಮುಖ ಶಿಷ್ಯರಾದ ವಾಜೀಂದ್ರರು ಹದಿನೈದು ದಿನಗಳ ವರೆಗೆ ಯತಿಧರ್ಮಕ್ಕನುಸರಿಸಿದ ಧರ್ಮವಿಧಿ, ಬ್ರಾಹ್ಮಣ ಭೋಜನ, ದಾನ, ಮೊದಲಾದ ಕಾರ್ಯಗಳನ್ನು ತುಂಬಾ ವಿಜೃಂಭಣೆಯಿಂದ ಯಥಾಸಾಂಗವಾಗಿ ಮಾಡಿ ಮುಗಿಸಿದರು.



ಶ್ರೀ ಕೈವಲ್ಯಾಶ್ರಮ ಸ್ವಾಮಿ ಮಹಾರಾಜರ ಸಮಾಧಿಯು ೧೯೧೨

(ನಂತವರು ಶ್ರೀ ವಿಷ್ಣುಬುವಾ ಅವರು)

ಸಾಕ್ಷಾತ್ಕಾರ ಪಡೆದ ಜ್ಞಾನಿಗಳು ಪರಮಾತ್ಮನೊಡನೆ ಒಂದಾಗಿ ಹೋಗುತ್ತಾರೆಂದು ಉಪನಿಷತ್ತುಗಳು ಹೇಳುತ್ತವೆ. ಆದರೆ ಅನೇಕ ಜನ ಸತ್ಪುರುಷರ ಚರಿತ್ರೆ ನೋಡಿದರೆ, ಅವರು ತಮ್ಮ ಪಾರ್ಥಿವ ಶರೀರವನ್ನು ಬಿಟ್ಟ ಮೇಲೂ ಕೆಲಸ ಮಾಡುತ್ತಿರುವರೆಂದು ಕಂಡುಬರುವಂತಿದೆ. ಎಂದ ಮೇಲೆ ಇವೆರಡರ ಮೇಳವನ್ನು ಹೇಗೆ ಹಾಕಬೇಕು, ಎಂಬುದೊಂದು ಸಂಶಯ ನಮಗೆ ಬರುವಂತಿದೆ. ಪರಮಾತ್ಮನ ಸ್ವರೂಪವಾದ ವ್ಯಾಪಕ ಚೈತನ್ಯದಲ್ಲಿ ಕೂಡಿ ಹೋದಮೇಲೆ, ಆಯಾ ಸತ್ಪುರುಷರ ವ್ಯಕ್ತಿತ್ವವು ಉಳಿಯಲಾರದೆಂಬುದು ಸ್ಪಷ್ಟವಿದೆ. ಇದಕ್ಕೆ ವಿರುದ್ಧವಾಗಿ ಅವರ ವ್ಯಕ್ತಿತ್ವವು ಉಳಿಯುವದೆಂದು ಹೇಳಬೇಕೇ? ಅದೂ ಸರಿಯೆಂದು ಹೇಳಲಾಗದು. ಹಾಗೆ ಅವರ ವ್ಯಕ್ತಿತ್ವ ಉಳಿದರೆ ಅವರಿಗೆ ಪೂರ್ಣ ಜ್ಞಾನವೇ ಆಗಿಲ್ಲವೆಂದು ಹೇಳಬೇಕಾಗುವದು. ಹೀಗೆ ಇವೆರಡೂ ಪಕ್ಷಗಳನ್ನು ಹೇಗೆ ಸಮನ್ವಯಿಸಬೇಕು?

ಈ ಪ್ರಶ್ನೆಗೆ ಬ್ರಹ್ಮಸೂತ್ರಕಾರರೇ ಉತ್ತರ ಕೊಟ್ಟಿದ್ದಾರೆ: ಯಾವದಧಿಕಾರಮವಸ್ಥಿತಿರಾಧಿಕಾರಿಕಾಣಾಮ್ ॥ ೩.೩.೩೨ ॥ ಇದರ ಅರ್ಥವೇನಂದರೆ— ಜ್ಞಾನಿಗಳಾದರೂ ಕೂಡ ತಮ್ಮ ವ್ಯಕ್ತಿತ್ವವನ್ನು ಕಾಯ್ದುಕೊಂಡು ಕೆಲಸ ಮಾಡಬಹುದು. ಆವಶ್ಯಬಿದ್ದರೆ ಅವರು ಪುನಃ ಜನ್ಮವನ್ನೂ ತೆಗೆದುಕೊಳ್ಳಬಹುದು. ಆದರೆ ಈ ಮಾತು ಎಲ್ಲ ಜ್ಞಾನಿಗಳಿಗೆ ಹತ್ತುವದಿಲ್ಲ. ಯಾವ ಸತ್ಪುರುಷರು ಪರಮೇಶ್ವರನಿಂದ ಇಂತಿಂತಹ ಕೆಲಸಗಳನ್ನು ಮಾಡಬೇಕೆಂದು ನಿಯೋಜಿಸಲ್ಪಟ್ಟಿರುವರೋ ಅವರಿಗೆ ಮಾತ್ರ ಈ ಮಾತು ಹತ್ತುತ್ತದೆ. ಪರಮೇಶ್ವರನಿಂದ ಅವರಿಗೆ ಒಪ್ಪಿಸಿ ಕೊಡಲ್ಪಟ್ಟ ಕೆಲಸಗಳು ಅವರಿಂದ ಪೂರ್ಣವಾಗುವ ವರೆಗೆ ಅವರು ಹಾಗೆಯೇ ಇರಬೇಕಾಗುವದು. ಎಂದರೆ ಅವರು ತಮ್ಮ ಪಾರ್ಥಿವ ಶರೀರವು ಬಿದ್ದ ಮೇಲೆ, ಪುನರ್ಜನ್ಮ ತಕ್ಕೊಳ್ಳದೆ ಹಾಗೆಯೇ ಸೂಕ್ಷ್ಮ ಚೈತನ್ಯ ರೂಪದಿಂದ ಇದ್ದುಕೊಂಡು, ಆದರೆ ತಮ್ಮ ವ್ಯಕ್ತಿತ್ವವನ್ನು ಕಾಯ್ದುಕೊಂಡು ಕೆಲಸ ಮಾಡುತ್ತಿರಬಹುದು.

ಅಥವಾ ಪುನರ್ಜನ್ಮ ತಕ್ಕೊಂಡು ಪರಮೇಶ್ವರನಿಂದ ಒಪ್ಪಿಸಿ ಕೊಡಲ್ಪಟ್ಟ ಕೆಲಸ ಮಾಡಬಹುದು. ಆದರೆ ಇದರಿಂದ ಅವರ ಜ್ಞಾನಕ್ಕಾಗಲೀ, ಅವರ ಮೋಕ್ಷಾವಸ್ಥೆಗಾಗಲೀ, ಯಾವ ರೀತಿಯಲ್ಲಿಯೂ ಪ್ರತಿಬಂಧವು ಉಂಟಾಗ ಲಾರದು. ಪರಮೇಶ್ವರನ ಇಚ್ಛೆಯಿಂದ ಸೃಷ್ಟಿಯಲ್ಲಿ ಮಾಡಬೇಕಾಗಿರುವ ಅವರ ಕೆಲಸವು ಮುಗಿದೊಡನೆ, ಅವರು ಪರಮಾತ್ಮನೊಡನೆ ಒಂದಾಗಿ ಶಾಶ್ವತ ಮೋಕ್ಷವನ್ನು ಹೊಂದುವರು. ಅನೇಕ ಜನ ಸತ್ಪುರುಷರು ತಾವು ಜೀವಿಸಿದ್ದ ಪವಿತ್ರವಾದ ಸ್ಥಲಗಳಲ್ಲಿಯೇ, ತಮ್ಮ ದೇಹತ್ಯಾಗನಂತರವೂ ಲೀಲೆಗಳನ್ನು ತೋರಿಸುತ್ತ, ಅನೇಕ ಜನ ಭಾವಿಕರನ್ನು ಉದ್ಧಾರ ಮಾಡುತ್ತ ಇರುವರೆಂದು ಅನುಭವಕ್ಕೆ ಬರುವ ಮಾತಿಗೆ ಇದೇ ಉಪಪತ್ತಿಯು ಹತ್ತುವ ದೆಂಬುದು ಸ್ಪಷ್ಟವಿದೆ.

ಶ್ರೀ ಕೈವಲ್ಯಾಶ್ರಮ ಸ್ವಾಮೀ ಮಹಾರಾಜರು ಹೀಗೆ ಪರಮೇಶ್ವರನಿಂದ ವಿಶಿಷ್ಟ ಕೆಲಸಗಳಿಗಾಗಿ ನಿಯೋಜಿಸಲ್ಪಟ್ಟವರಲ್ಲಿ ಒಬ್ಬರೆಂಬದು ಅವರ ಚರಿತ್ರೆ ಯನ್ನು ಇಲ್ಲಿಯ ವರೆಗೆ ಓದಿದ ವಾಚಕರಿಗೆ ಹೊಳೆದಿರಲಿಕ್ಕೆ ಸಾಕು. ದೇಹ ತ್ಯಾಗಾನಂತರವೂ ಅವರು ಭಕ್ತರ ಉದ್ಧಾರ, ಪರಮಾತ್ಮ ಭಕ್ತಿಯ ಪ್ರಸಾರ, ಪರಮಾರ್ಥದ ವಿಸ್ತಾರ, ಚಿದಂಬರ ಸಾಂಪ್ರದಾಯದ ಮಹತ್ವ ಬೆಳೆಸುವದು, ಇವೇ ಮೊದಲಾದ ಕೆಲಸಗಳನ್ನು ಮುಂಬಯಿ ಕರ್ನಾಟಕದ ಭಾಗದಲ್ಲಿ ಮಾಡುತ್ತಲೇ ಇರುವರೆಂಬದು ಅನೇಕ ಜನರ ಅನುಭವವಾಗಿದೆ. ಸ್ವಾಮೀ ಮಹಾರಾಜರು ಗುರ್ಲಹೊಸೂರಲ್ಲಿ ಸಾಮಾನ್ಯವಾಗಿ ನಮ್ಮೆಲ್ಲರ ಸ್ಥೂಲ ಕಣ್ಣಿಗೆ ಕಾಣುವಂತಹ ರೂಪದಿಂದ ಇರದಿದ್ದರೂ, ಸೂಕ್ಷ್ಮವಾದ ಚೈತನ್ಯ ರೂಪದಿಂದ ಇದ್ದೇ ಇರುವರೆಂಬ ಬಗ್ಗೆ ನಮಗೆ ಎಳ್ಳಷ್ಟೂ ಸಂದೇಹವಿಲ್ಲ. ಎಷ್ಟೋ ಪುಣ್ಯವಂತರಿಗೆ ಅವರು ಸ್ಥೂಲದರುಶನವನ್ನೂ ದಯಪಾಲಿಸಿದ ಉದಾಹರಣೆಗಳುಂಟು. ಆದರೆ ಇಂದಿನ ಭೌತಿಕ ಶಾಸ್ತ್ರದ ಬೆಳವಣಿಗೆಯ ಯುಗದಲ್ಲಿ ಚಿಕಿತ್ಸಕ ವಾಚಕರಿಗೆ ನಾವು ಬರೆಯುವ ಈ ಮಾತುಗಳು ನಗೆಗೀಡಾದವುಗಳೆಂದು ತೋರಬಹುದು. ಬೇಕಾದವರು ಹಾಗೆ ತಿಳಿದು ಕೊಳ್ಳಬಹುದು. ಅದಕ್ಕೆ ನಮ್ಮದೇನೂ ಪ್ರತಿಬಂಧವಿಲ್ಲ. ಅಥವಾ ಅವರು ಹಾಗೆ ಮಾಡುವದರಿಂದ ನಮ್ಮ ಹಾನಿಯಾದರೂ ಏನೂ ಆಗುವಂತಿಲ್ಲ. ಆದರೆ ಯಾರಿಗೆ ಈ ಬಗ್ಗೆ ಪ್ರಾಮಾಣಿಕವಾದ ಜಿಜ್ಞಾಸೆ-ಇರುವದೊ, ಯಾರು

ಇದರ ವಿಷಯಕವಾಗಿ ವಿಚಾರ ಮಾಡಿ ಅವಶ್ಯ ಬಿದ್ದರೆ ಪ್ರಯೋಗ ಮಾಡಿ, ಇದರ ಸತ್ಯಾಸತ್ಯತೆಯನ್ನು ಮನಗಾಣಬೇಕೆಂದು ಅಪೇಕ್ಷಿಸುವರೋ, ಅಂಥವರಿಗೆ ನಾವು ಹೇಳುವದಿಷ್ಟೇ: ನೀವು ಈ ಇಚ್ಛೆಯಿಂದ ಗುರ್ಲಹೊಸೂರಕ್ಕೆ (ಅದೇಕೆ ಬೇಕಾದ ಸತ್ಪುರುಷರ ಸ್ಥಾನಕ್ಕೆ) ಒಮ್ಮೆ ಹೋಗಿ ನೋಡಿರಿ. ಆ ಮೇಲೆ ನಿಮ್ಮ ಅಭಿಪ್ರಾಯಗಳನ್ನು ಮಾಡಿಕೊಳ್ಳಿರಿ. ಮಹಾರಾಜರು ನಿಮ್ಮ ಪರೀಕ್ಷೆ ಮಾಡುವದು ಒಂದೇ ದೃಷ್ಟಿಯಿಂದ. ನಿಮ್ಮಲ್ಲಿ ಪರಮಾರ್ಥದ ಹಂಬಲವು, ಜಿಜ್ಞಾಸೆಯು, ಸತ್ಯಜ್ಞಾನದ ಲಾಲಸೆಯು ತೀವ್ರವಾಗಿರುವದೇ? ಅದೊಂದಿದ್ದರೆ ಸಾಕು. ನೀವು ಮಹಾರಾಜರ ಕೃಪೆಗೆ ಪಾತ್ರರಾಗುವಿರಿ. ಅದಿಲ್ಲದಿದ್ದರೆ ನೀವು ಕೈಕೊಳ್ಳಬೇಕೆಂದು ಬಯಸುತ್ತಿರುವ ಉಪಾಯಗಳೆಲ್ಲ ನಿರರ್ಥಕವು.

ಮಹಾರಾಜರು ತಮ್ಮ ಸಂಕುಚಿತವಾದ ಪಾರ್ಥಿವ ಶರೀರವನ್ನು ಬಿಟ್ಟು, ಶುದ್ಧವಾದ, ಹೆಚ್ಚು ಕಾರ್ಯಕ್ಷಮವಾದ, ವ್ಯಾಪಕವಾದ ಮತ್ತು ಸಾಮಾನ್ಯರಿಗೆ ಅಗೋಚರವಾದ ರೂಪದಿಂದ, ಗುರ್ಲಹೊಸೂರಲ್ಲಿ ಇಂದಿಗೂ ಇದ್ದುಕೊಂಡು, ಪರಮಾತ್ಮನಿಂದ ಅವರಿಗೆ ಒಪ್ಪಿಸಿಕೊಟ್ಟ ಕೆಲಸವನ್ನು ಮಾಡುತ್ತಿರುವರೆಂಬದಕ್ಕೆ ಅವರ ದೇಹತ್ಯಾಗದ ನಂತರದಲ್ಲಿ ಗುರ್ಲಹೊಸೂರೊಳಗೆ ನಡೆದ ಘಟನೆಗಳೇ ಸಾಕ್ಷಿ. ಮಹಾರಾಜರ ಕೃಪೆಯಿಂದ ಹುಟ್ಟಿ ಬೆಳೆದು ಪ್ರೌಢಾವಸ್ಥೆಯನ್ನು ಹೊಂದಿ, ಲೋಕ ಸೇವೆಯನ್ನು ಮಾಡುತ್ತಿರುವ ಶ್ರೀ ಕೈವಲ್ಯಾಶ್ರಮ ಸ್ವಾಮೀ ಸಂಸ್ಥೆಯ ಇತಿಹಾಸವನ್ನು ಅಧ್ಯಾಸ ಮಾಡುವವರಿಗೆ ಈ ಮಾತು ನಿಃಸಂದೇಹವಾಗಿ ಗೊತ್ತಾಗುವಂತಿದೆ. ಆದರೆ ಅವೆಲ್ಲ ಸಂಗತಿಗಳನ್ನು ಇಲ್ಲಿ ವಿಸ್ತಾರವಾಗಿ ಬರೆಯುವ ಅವಶ್ಯಕತೆಯಿಲ್ಲ. ಇಲ್ಲಿ ಅದು ಅಪ್ರಸ್ತುತವೂ ಆಗುವದು. ದಿಗ್ದರ್ಶನದ ಮಟ್ಟಿಗೆ ಸ್ಥೂಲ ಮಾನದಿಂದ ಕೆಲವು ಸಂಗತಿಗಳನ್ನು ಹೇಳಿ, ಸುದೀರ್ಘವಾಗಿ ಬೆಳೆದ ಶ್ರೀ ಸ್ವಾಮೀ ಚರಿತ್ರೆಯನ್ನು ಮುಗಿಸುತ್ತೇವೆ.

ಸ್ವಾಮಿಗಳ ಶಿಷ್ಯರ ಮನಸ್ಸಿನಲ್ಲಿ ಗುರ್ಲಹೊಸೂರ ಚಿದಂಬರೇಶ್ವರ ದೇವಾಲಯದಲ್ಲಿಯೇ ಸ್ವಾಮಿಗಳ ಸಮಾಧಿ ಮಾಡಬೇಕೆಂಬ ವಿಚಾರವು ಎಷ್ಟೂ ಇರಲಿಲ್ಲ. ಅದು ಅವರ ಕನಸು ಮನಸಿನಲ್ಲಿಯೂ ಬಂದಿದ್ದಿಲ್ಲ.

ಜಲಸಮಾಧಿಯನ್ನೇ ಮಾಡಿಬಿಡಬೇಕೆಂದು ಅವರು ಮಾತಾಡಿಕೊಂಡಿದ್ದರು. ಆದರೆ ಪರಮೇಶ್ವರನ ಇಚ್ಛೆ ಹೇಗಿದೆ, ನೋಡಿರಿ. ಶ್ರೀ ಚಿದಂಬರ ದೀಕ್ಷಿತರ ವಂಶದೊಳಗಿನ ಕೆಲವು ಜನರೇ ಈ ಬಗ್ಗೆ ಆಗ್ರಹ ಮಾಡಿ ಸ್ವಾಮಿಗಳ ಸಮಾಧಿಯನ್ನು ಗುಡಿಯಲ್ಲಿ ಮಾಡಿಸಿದರು. ಆ ಕಾಲಕ್ಕೆ ಅವರ ಮನಸ್ಸಿನಲ್ಲಿಯೇ ಮೊದಲು ಹುಟ್ಟಿದ ಬುದ್ಧಿಯು, ಸಮಾಧಿಯ ನಂತರ ಏಕೆ ಬದಲಾವಣೆ ಹೊಂದಬೇಕು? ಇಷ್ಟೇ ಅಲ್ಲ, ಅದು ಉಪಹಾಸ, ತಿರಸ್ಕಾರ, ವಿರೋಧಗಳಲ್ಲಿ ಕೊನೆಗಾಣಬೇಕೆಂದರೆ ಎಂತಹ ದುರ್ದೈವದ ಮಾತು? ಇದೆಲ್ಲ ಚಿದಂಬರನ ಇಚ್ಛೆಯೇ ಆಗುದಲ್ಲದೆ ಬೇರೆಯೇನು? ಪರಮಾತ್ಮನು ತನ್ನ ಉಪಹಾಸ, ನಿಂದೆ, ತಿರಸ್ಕಾರಗಳಿಂದ ಅಷ್ಟು ನೊಂದುಕೊಳ್ಳುವ ದಿಲ್ಲೆಂದು ಹೇಳುತ್ತಾರೆ. ಆದರೆ ತನ್ನ ಭಕ್ತರ ನಿಂದೆ ಮೊದಲಾದವುಗಳಿಂದ ಮಾತ್ರ ಪರಮಾತ್ಮನು ಹೆಚ್ಚಾಗಿ ನೊಂದುಕೊಳ್ಳುವನಂತೆ. ಈ ಮಾತು ಸ್ವಾಮೀ ಮಹಾರಾಜರ ಸಮಾಧಿಯಾದ ಮೇಲೆ ಎಲ್ಲರ ಅನುಭವಕ್ಕೂ ಬಂತು.

ಮಹಾರಾಜರ ಶಿಷ್ಯರು ಸಮಾಧಿಯಾದ ಮೇಲೆ ಅನುಭವಿಸಿದ ಕಷ್ಟ-ನಷ್ಟಗಳನ್ನೂ, ವನವಾಸ-ಉಪವಾಸಗಳನ್ನೂ, ನಿಂದೆ, ಉಪಹಾಸಗಳನ್ನೂ ವಾದ-ಪ್ರತಿವಾದ ಮತ್ತು ಫಿರ್ಯಾದಿ—ಆರೋಪಿಯಾಗಿ ನಿಲ್ಲುವ ಪ್ರಸಂಗಗಳನ್ನೂ ನೆನೆದರೆ ಮೈಮೇಲೆ ಮುಳ್ಳುಗಳು ಬರುತ್ತವೆ. ಆದರೆ ಅವರು ತಮ್ಮ ಶುದ್ಧವಾದ ಗುರುಭಕ್ತಿ, ನಿರ್ಮಲವಾದ ಆಚರಣೆ, ನಿಷ್ಠಾಪಟ್ಟ, ಧ್ಯೇಯನಿಷ್ಠೆ, ಗುರು ಸೇವೆಗಾಗಿ ಬೇಕಾದ ತೊಂದರೆಗಳನ್ನೂ ಸಹಿಸಬೇಕೆಂಬ ದೃಢ ನಿರ್ಧಾರ, ತಮ್ಮ ಇಚ್ಛೆಯು ಧರ್ಮಕ್ಕೆ ಅನುಸಾರವಾಗಿರುವದರಿಂದ ಕೊನೆಗೆ ತಮಗೇ ಜಯ ಸಿಕ್ಕುವದೆಂಬ ಆತ್ಮವಿಶ್ವಾಸ, ಗುರುಕಾರ್ಯದಲ್ಲಿ ಪ್ರಾಣಕೊಡುವುದೇ ಪರಮಪುರುಷಾರ್ಥವೆಂಬ ತಿಳಿವಳಿಕೆ, ಇವೇ ಮೊದಲಾದ ಸದ್ಗುಣಗಳಿಂದ ಕೊನೆಯವರೆಗೆ ಹೋರಾಡಿ ಜಯಶಾಲಿಗಳಾದರು. " ಬೆನ್ನು ಕಾಯಲಿಕ್ಕೆ ಸದ್ಗುರುವಿನಂಥವನು ಇರುವಾಗ, ಉಳಿದವರ ಅಪೇಕ್ಷೆಯನ್ನೇಕೆ ಮಾಡಬೇಕು? ರಾಜನ ಹೆಂಡತಿಗೆ ಭಿಕ್ಷೆಬೇಡುವ ಪ್ರಸಂಗವೇ?" ಎಂಬ ಜ್ಞಾನೇಶ್ವರ ಮಹಾರಾಜರ ಉಕ್ತಿಯನ್ನು ಪೂರ್ಣ ನಂಬಿದ ಅವರಿಗೆ ಅಪಜಯವೇ? ಆದರೆ ಬಾಯಿಂದ ಬರೇ " ನಾವು ಗುರುಭಕ್ತರೆಂದು " ಹೇಳಿದ

ಮಾತ್ರಕ್ಕೆ ಕೆಲಸವಾಗಲಾರದು. ನಮ್ಮ ಗುರುನಿಷ್ಠೆಯನ್ನು ಗುರುವು ಮೊದಲು ಪರೀಕ್ಷೆ ಮಾಡಿ ನೋಡುವನು. ಆ ಮೇಲೆ ತನ್ನ ಕೃಪಾಛತ್ರವನ್ನು ಹಿಡಿಯುವನು.

ಸಮಾಧಿಯನ್ನು ತಾತ್ಪರ್ತಿಕವಾಗಿ ಮಣ್ಣು ಹೆಂಟೆಯಿಂದ ಕಟ್ಟಿಸ ಲಾಗಿತ್ತೆಂಬದು ವಾಚಕರಿಗೆ ಗೊತ್ತಿದೆ. ಅದನ್ನು ಅಂದವಾಗಿಯೂ ಗಟ್ಟಿ-ಮುಟ್ಟಾಗಿಯೂ ಕಟ್ಟಿಸಬೇಕೆಂದು ಸ್ವಾಮೀ ಮಹಾರಾಜರ ಶಿಷ್ಯರೂ ಸೇವಕರೂ ವಿಚಾರ ಮಾಡಿದರು. ಅದಕ್ಕಾಗಿ ಅವರು ಟೊಂಕಕಟ್ಟಿ ಸಾಕಷ್ಟು ರೂಪಾಯಿಗಳನ್ನೂ ಕೂಡಿಸಿದರು. ಆದರೆ ಅದನ್ನು ಕಟ್ಟಸಲಿಕ್ಕ ಪ್ರಾರಂಭ ಮಾಡಿದೊಡನೆ ಅನೇಕ ತರದ ಅಡಚಣಿಗಳುಂಟಾಗಹತ್ತಿದವು. ಆದರೆ ಧೈರ್ಯಶಾಲಿಗಳಾದ ವಾಜೀಂದ್ರರು ಎಲ್ಲ ಅಡಚಣಿಗಳನ್ನು ಸರಿಯಾಗಿ ಎದುರಿಸಿ ಜಯಶಾಲಿಗಳಾದರು. ಸನ್ ೧೯೧೨ನೇ ಇಸ್ವಿಯಲ್ಲಿ ಈಗಿದ್ದ ಸಮಾಧಿಯು ಚನ್ನಾಗಿ ಸಿದ್ಧವಾಯಿತು. ಅದು ಸಿದ್ಧವಾದಾಗಿನ ಚಿತ್ರ ವೊಂದನ್ನು ಈ ಪುಸ್ತಕದಲ್ಲಿ ಸೇರ್ಪಡೆ ಮಾಡಿದ್ದೇವೆ. ಸಮಾಧಿಯ ಮುಂದೆ ತರುಣರಾದ ಶ್ರೀ ವಿಷ್ಣು ಬುವಾ ಅವರು ಭಸ್ಮಾಂಕಿತರಾಗಿ ನಿಂತದ್ದು ಆದ ರೊಳಗೆ ಕಂಡುಬರುತ್ತದೆ. ಅವರ ಮೋರೆಯ ಮೇಲೆ ಕಾಣುತ್ತಿದ್ದ ಔದಾಸೀನ್ಯ ವೃತ್ತಿಯೂ, ವೈರಾಗ್ಯದ ಚಿಹ್ನಗಳೂ ಸ್ಪಷ್ಟವಾಗಿವೆ. ಇರಲಿ. ವಾಜೀಂದ್ರರು ತಮ್ಮ ಗುರುಗಳ ಸಮಾಧಿಯನ್ನು ಕಟ್ಟಿಸುವದರ ಜೊತೆಗೆ ಶ್ರೀ ಬ್ರಹ್ಮಾನಂದರ ಸಮಾಧಿಯನ್ನೂ ಸರಿಯಾಗಿ ಕಟ್ಟಿಸಿದರೆಂಬದನ್ನು ವಾಚಕರು ನೆನಸಿನಲ್ಲಿಡುವಂತಿದೆ.

ಇಸ್ವಿ ಸನ್ ೧೯೧೩–೧೪ರಿಂದ ೧೯೧೬ರ ವರೆಗಿನ ಕಾಲವೆಂದರೆ ಸ್ವಾಮೀ ಶಿಷ್ಯರ ವನವಾಸ ಕಾಲವು. ಗುರುಗಳ ಸಮಾಧಿ ಸ್ಥಾನದಲ್ಲಿದ್ದು ಕೊಂಡು ಗುರುಸೇವೆ ಮಾಡುತ್ತಿರಬೇಕೆಂಬುದೊಂದೇ ಅವರ ಪ್ರಬಲವಾದ ಇಚ್ಛೆಯಾಗಿತ್ತು. ಇದರ ಹೊರತಾಗಿ ಅವರ ಮನಸ್ಸಿನಲ್ಲಿ ಬೇರೆ ಏನೂ ಇರಲಿಲ್ಲ. ಆದರೆ ಸನ್ ೧೯೧೩–೧೪ನೆಯ ಇಸ್ವಿಯ ಸುಮಾರಕ್ಕೆ ಅವರಿಗೆ ಗುರ್ಲಹೊಸೂರ ಊರಲ್ಲಿರುವದು ಅಶಕ್ಯವಾಗಿ ಬಿಟ್ಟಿತು. ಎಂದರೆ ಗುರು ಸೇವೆ ಮಾಡಲಿಕ್ಕೂ ಅವರಿಗೆ ಅವಕಾಶವಿಲ್ಲದಂತಾಗಿ ಹೋಯಿತು. ಆಗ

ಗುರ್ಲಹೊಸೂರ ಊರು ಬಿಡಬೇಕಾದ ಪ್ರಸಂಗವಷ್ಟೇ ಅಲ್ಲದೆ, ತಿರುಗಿ ಅಲ್ಲಿಗೆ ಬರುವ ಸಂಧಿಯಾದರೂ ಸಿಕ್ಕುವದೋ ಇಲ್ಲವೋ ಎಂಬ ಬಗ್ಗೆ ಸಂದೇಹವುಂಟಾಯಿತು. ಗುರುಚರಣಗಳಲ್ಲಿ ಅತ್ಯಂತ ನಿಷ್ಠೆಯುಳ್ಳವರಾದ ವಿಷ್ಣು ಬುವಾ ಮತ್ತು ವಾಜೀಂದ್ರರಿಬ್ಬರಿಗೂ ಇದರಿಂದ ಅಪಾರವಾದ ದುಃಖವಾಯಿತು. ಅವರ ಅಂತಃಕರಣಗಳು ಶತಶಃ ವಿದೀರ್ಣವಾದವು. ಆದರೆ ಮಾಡುವದೇನು? ಅವರು ಸಮಾಧಿಯ ಪೂಜೆ ಮಾಡುವದಕ್ಕಾಗಿ ತಿಂಗಳಿಗೆ ಐದು ರೂಪಾಯಿ ಕೊಡುವದನ್ನು ಗೊತ್ತು ಮಾಡಿ ಒಬ್ಬನಿಗೆ ಆ ಕೆಲಸವನ್ನು ಒಪ್ಪಿಸಿಕೊಟ್ಟರು. ಆ ಮೇಲೆ ಅವರೀರ್ವರು ಕಣ್ಣೀರುದುರಿಸುತ್ತ ಗುರ್ಲಹೊಸೂರನ್ನು ಬಿಟ್ಟು ಹೊರಟರು. ಹೋಗುವಾಗ ಅವರು ಪ್ರತಿಜ್ಞೆಯನ್ನೇ ಮಾಡಿ ಹೊರಬಿದ್ದರು:— "ನಮ್ಮ ಗುರುನಿಷ್ಠೆಯು ನಿಜವಾಗಿದ್ದರೆ, ನಮಗೆ ಇಲ್ಲಿ ನಿಂತು ಗುರುಸೇವೆ ಮಾಡಲಿಕ್ಕೆ ಅನುವು ಸಿಕ್ಕಬೇಕು. ಇಲ್ಲವಾದರೆ ನಾವು ತಿರುಗಿ ಇತ್ತಕಡೆಗೆ ಬರಲಿಕ್ಕೆಲ್ಲ"

ಅವರಿಬ್ಬರು ಗುರ್ಲಹೊಸೂರಿಂದ ಹೊರಟವರು ತಮ್ಮ ಪರಮಗುರು ಗಳಾದ ಶ್ರೀ ಶಾಂತಾಶ್ರಮ ಸ್ವಾಮಿಗಳವರ ಕಡೆಗೆ ಹೋದರು. ಆಗ ಆ ಸ್ವಾಮಿ ಗಳು ಕರ್ಹಾಡದಲ್ಲಿದ್ದರು. ಗುರುಸೇವೆಗಾಗಿ ಹಂಬಲಿಸುತ್ತಿರುವ ಈ ಇಬ್ಬರು ಸಚ್ಛೀಲ ಶಿಷ್ಯರನ್ನು ನೋಡಿ ಶ್ರೀ. ಶಾಂತಾಶ್ರಮ ಸ್ವಾಮಿಗಳವರಲ್ಲಿ ವಾತ್ಸಲ್ಯ ಭಾವವು ಹುಟ್ಟಿತು. ವಾಜೀಂದ್ರರು ವಿಷ್ಣು ಬುವಾ ಅವರನ್ನು ಅಲ್ಲಿಯೇ ಬಿಟ್ಟು ತಾವೊಬ್ಬರೇ ಮುಂಬಯಿಗೆ ಹೋದರು. ಹೋಗುವಾಗ ಅವರು ವಿಷ್ಣು ಬುವಾ ಅವರಿಗೆ ಹೇಳಿದ್ದೇನೆಂದರೆ "ಮುಂಬಯಿಯಲ್ಲಿ ನಮ್ಮ ಕೆಲಸವು ನಮ್ಮಂತಾದರೆ ನಾನು ತಿರುಗಿ ಇಲ್ಲಿಗೆ ಬರುನೆನು. ಇಲ್ಲವಾದರೆ ನಿನಗೆ ಪತ್ರ ಹಾಕುವೆನು. ನೀನು ಮುಂಬಯಿಗೆ ಬಾ. ಆ ಮೇಲೆ ನಾವಿಬ್ಬರೂ ಕೂಡಿ ಉತ್ತರದ ಕಡೆಗೆ ಹೋಗೋಣ. ತಿರುಗಿ ದಕ್ಷಿಣದ ಕಡೆಗೆ ಕಾಲಿಡಬಾರದು."

ಕರ್ಹಾಡದಲ್ಲಿದ್ದಾಗ ವಿಷ್ಣು ಬುವಾ ಅವರು ತಮ್ಮ ಅತ್ಯುತ್ತಮವಾದ ಸೇವೆಯಿಂದ ಸ್ವಾಮಿಗಳನ್ನು ಸಂತುಷ್ಟಗೊಳಿಸಿದರು. ಸ್ವಾಮಿಗಳು ಅವರ ಭಕ್ತಿಗೆ ಮೆಚ್ಚಿ ಕೇಳಿದರು: "ತಮ್ಮಾ, ನಿನಗೆ ಏನು ಬೇಕು" ಎಂದು. ಅದಕ್ಕೆ ಬುವಾ ಅವರು ಬೇಡಿಕೊಂಡರು:— "ನನ್ನದು ಬೇರೆ ಯಾವ

ಅಪೇಕ್ಷೆಯೂ ಇಲ್ಲ. ಗುರುಸೇವೆಗಾಗಿ ನಾನು ಮನೆಮಾರುಗಳೆಲ್ಲವನ್ನೂ ಬಿಟ್ಟು ಬಂದೆ. ಆದರೆ ನನಗಿಂದು ಗುರುಗಳ ಸ್ಥಾನದಲ್ಲಿದ್ದುಕೊಂಡು ಗುರು ಸೇವೆ ಮಾಡಲಿಕ್ಕೆ ಕೂಡ ಅನುವು ಸಿಕ್ಕದಂತಾಗಿದೆ. ಆದರಿಂದ ಮನಸಿಗೆ ಬಹಳ ತಳಮಳಿಕೆಯಾಗುತ್ತಿದೆ. ತಾವು ದಯವಿಟ್ಟು ಕೃಪೆಮಾಡಿ ಆಶೀರ್ವಾದ ಕೊಡಬೇಕು. ಮತ್ತು ಗುಲ್ಬರ್ಗಾಕ್ಕೆ ಹೊರಟು ಅಲ್ಲಿ ನಿಂತು ಗುರುಸೇವೆ ಮಾಡುವಂತಾಗಬೇಕೆಂದು ಹರಸಬೇಕು. ಇದಿಷ್ಟೇ ನನ್ನ ಪ್ರಬಲ ಇಚ್ಛೆಯಾಗಿದೆ. ತಮ್ಮ ಹೊರತಾಗಿ ನನಗೀಗ ಬೇರೆ ಯಾರೂ ಗತಿಯಿಲ್ಲ. ತಾವು ಮನಸುಮಾಡಿದರೆ ಈ ಕೆಲಸವು ಸುಲಭವಾಗಿ ಆಗಬಹುದು.' ಹೀಗೆ ಹೇಳಿ ಬುವಾ ಅವರು ಸ್ವಾಮಿಗಳ ಕಾಲುಗಳ ಮೇಲೆ ತಲೆಯಿಟ್ಟು ಕಣ್ಣೀರು ಸುರಿಸಹತ್ತಿದರು. ಸ್ವಾಮಿಗಳ ಹೃದಯವು ಇದರಿಂದ ಒಮ್ಮೆಲೇ ಕರಗಿ ನೀರಾಯಿತು. ಅವರು ಅತ್ಯಂತ ಪ್ರೇಮದಿಂದ ಬುವಾ ಅವರನ್ನು ಹಿಡಿದೆಬ್ಬಿಸಿ "ತಮ್ಮಾ, ನಿನ್ನ ಇಚ್ಛೆಯು ಬಹು ನಿರ್ಮಲವಾಗಿದೆ. ನಿನ್ನ ಕೃತಿ ಮತ್ತು ಮಾತುಗಳಿಂದ ನಾನು ಸಂತುಷ್ಟನಾಗಿದ್ದೇನೆ. ನೀನು ಎಳ್ಳಷ್ಟೂ ಚಿಂತೆ ಮಾಡುವ ಕಾರಣವಿಲ್ಲ. ದೇವರು ನಿನ್ನಮೇಲೆ ಕೃಪೆ ಮಾಡುವನು. ವಾಜೀಂದ್ರನು ಮುಂಬಯಿಗೆ ಹೋದ ಕೆಲಸವು ನಿಮ್ಮಂತಾಗುತ್ತದೆ. ಮತ್ತು ಮನದಣಿಯುವಂತೆ ಗುರುಸೇವೆ ಮಾಡುವ ಯೋಗವು ನಿನಗೆ ಸಿಕ್ಕುತ್ತದೆ. ಆದರೆ ಗುರುಸೇವೆ ಮಾಡುವದು ಮಾತ್ರ ಸುಲಭವಲ್ಲ, ಕಂಡೆಯಾ. ಹೆಜ್ಜೆಹೆಜ್ಜೆಗೆ ನಿನ್ನ ಸತ್ತ್ವದ ಪರೀಕ್ಷೆಯಾಗುವ ಪ್ರಸಂಗಗಳು ಬರಲಿವೆ. ನೀನು ಯಾವಾಗಲೂ ಮುಳ್ಳುಗಳ ಮೇಲೆ ನಿಂತಂತೆ ಜೋಕೆಯಿಂದಿರಬೇಕಾಗುವದು. ಆದರೂ ನೀನು ಗುರುಸೇವೆಯ ದಿವ್ಯದೊಳಗಿಂದ ಹೊರಬಿದ್ದು ಮಾನ್ಯನಾಗೆಂದು ಅಂತಃಕರಣಪೂರ್ವಕವಾಗಿ ಹರಸುತ್ತೇನೆ." ಎಂದು ಆಶ್ವಾಸನಕೊಟ್ಟು ಸಂತೈಸಿದರು.

ಅಲ್ಲಿಯೇ ಇದ್ದಾಗ ಬುವಾ ಅವರು ದೇವರನ್ನೂ ಕುರಿತು ಅತ್ಯುಗ್ರವಾದ ತಪಶ್ಚರ್ಯೆಯನ್ನಾಚರಿಸಿದರು. ಆ ತಪಶ್ಚರ್ಯೆಯ ಉದ್ದೇಶವಾದರೂ ಗುರುಸೇವೆಯ ಯೋಗವು ಸಿಕ್ಕಬೇಕೆಂಬದೇ ಆಗಿತ್ತು. ಅವರು ಪ್ರತಿದಿವಸ ಸಂಜೆಯವರೆಗೆ ನಿರಾಹಾರದಿಂದಿದ್ದು ಅನೇಕ ಬಗೆಯ ಅನುಷ್ಠಾನಗಳನ್ನು ಮಾಡುತ್ತಿದ್ದರು. ಕೊನೆ ಕೊನೆಗೆ ಅವರು ದೇವರ ಆಶ್ವಾಸನ ಸಿಕ್ಕದಿದ್ದರೆ ತಪಶ್ಚರ್ಯೆ ಮಾಡಿ ಫಲವೇನು, ಎಂಬ ಈರ್ಷೆಗೆ ಬಿದ್ದು ದೇಹದ ಪರಿವೆ

ಯಿಲ್ಲದೆ ಪಾರಾಯಣ ಮೊದಲಾದವುಗಳನ್ನು ಮಾಡಹತ್ತಿದರು. ಆದರಿಂದ ಸಿಕ್ಕಬೇಕಾದ ಫಲವೂ ಅವರಿಗೆ ಸಿಕ್ಕಿತು. ಒಂದು ದಿನ ದೇವಿಯ ಸಹಸ್ರ ನಾಮದ ಆವರ್ತನೆಗಳನ್ನು ಮಾಡುತ್ತಿದ್ದಾಗ ಬುವಾ ಅವರಿಗೆ ಪ್ರತ್ಯಕ್ಷ ದೇವಿಯ ದರುಶನವಾಗಿ " ಅಪ್ಪಾ, ಸಾಕುಮಾಡು ನೋಡೋಣ. ನಿನ್ನ ಈ ಕಠಿಣವಾದ ತಪಸ್ಸನ್ನು. ನಿನ್ನ ತಪಸ್ಸಿಗೆ ನಾನು ಪ್ರಸನ್ನಳಾಗಿದ್ದೇನೆ. ನಿನ್ನ ಇಚ್ಛೆಯು ಫಲಿಸುವದು " ಎಂದು ಆಶ್ವಾಸನ ಕೊಟ್ಟಳಂತೆ. ಹೀಗೆ ಶ್ರೀ. ಶಾಂತಾಶ್ರಮಸ್ವಾಮಿಗಳೂ, ದೇವಿಯೂ ವರ ಕೊಟ್ಟ ತುಸು ದಿನಗಳಲ್ಲಿಯೇ ಬುವಾ ಅವರ ಬಯಕೆಯು ಪೂರ್ಣವಾಯಿತು. ವಾಜೀಂದ್ರರು ಮುಂಬಯಿಗೆ ಹೋದ ಕೆಲಸವು ಅವರಂತಾಯಿತು. ಗುರುನಿಷ್ಠೆಯು ಸಂಪೂರ್ಣವಾಗಿ ಫಲಿಸಿತು. ಅದರಂತೆ ಅವರು ಸನ್ ೧೯೧೬ರಲ್ಲಿ ಎಪ್ರಿಲ್ ತಿಂಗಳೊಳಗೆ ಪುನಃ ಗುರ್ಲಹೊಸೂರಲ್ಲಿ ಪ್ರವೇಶ ಮಾಡಿ, ಗುಡಿಯೊಳಗೆ ಕಾಲೂರಿ ನಿಂತರು. ಬುವಾ ಅವರು ಅಂದಿನಿಂದ ತಮ್ಮ ಸರ್ವಸ್ವವನ್ನೆಲ್ಲ ಗುರುಸೇವೆಗಾಗಿ ಮೀಸ ಲಾಗಿಟ್ಟು ಕೆಲಸ ನಡಿಸಿದ್ದಾರೆ. ಅವರ ಪ್ರಯತ್ನಗಳ ಫಲವೆಂದು ಶ್ರೀ. ಕೈವಲ್ಯಾಶ್ರಮ ಸ್ವಾಮೀ ಸಂಸ್ಥೆಯು ಇಂದು ಒಂದು ಮಾದರಿಯ ಸಂಸ್ಥೆ ಯಾಗಿ ಕೆಲಸಮಾಡುತ್ತಿದೆ.

ಶಿಷ್ಯರಿಗೆ ಗುರ್ಲಹೊಸೂರಲ್ಲಿ ನಿಂತು ಗುರುಸೇವೆ ಮಾಡಲಿಕ್ಕೆ ಅವಕಾಶ ವೇನೋ ಸಿಕ್ಕಿತು. ಆದರೆ ಅದರ ಲಾಭವು ಮಾತ್ರ ವಾಜೀಂದ್ರರಿಗೆ ದೊರೆಯ ಲಿಲ್ಲ. ಯಾಕೆಂದರೆ ದುರ್ದೈವದಿಂದ ವಾಜೀಂದ್ರರು ಮುಂದೆ ೪–೫ ತಿಂಗ ಳೊಳಗಾಗಿ ತೀರಿಕೊಂಡರು. ಅವರು ಸನ್ ೧೯೧೬ನೆಯ ಇಸ್ವಿಯ ಸ್ವಾಮೀ ಮಹಾರಾಜರ ಆರಾಧನೆಯಾಗುವವರೆಗೆ ಸಹ ಉಳಿಯಲಿಲ್ಲ. ಅವರು ಆರಾಧನೆಯ ಸಾಹಿತ್ಯವನ್ನೆಲ್ಲ ಸಂಗ್ರಹಿಸಿಕೊಂಡು ಆರಾಧನೆಗಾಗಿ ಗುರ್ಲ ಹೊಸೂರಿಗೆ ಬರಬೇಕೆನ್ನುವಷ್ಟರಲ್ಲಿಯೇ, ಎಂದರೆ ತಾ. ೩–೧೦–೧೯೧೬ ದಿವಸ ಬೆಳಗಾವಿಯಲ್ಲಿ ಬ್ರಹ್ಮರೂಪವಾದ ಗುರುಗಳ ಪಾದಪದ್ಮಗಳಲ್ಲಿ ಐಕ್ಯ ವಾದರು. ಆದರೆ ಅವರು ದೇಹಬಿಡುವದರೊಳಗಾಗಿ ಎರಡು ಹೊಲಗಳನ್ನು ಹಿಡಿದು, ಅವುಗಳ ಬಗ್ಗೆ ಮೃತ್ಯುಪತ್ರವನ್ನೂ ಟ್ರಸ್ಟ ಪತ್ರವನ್ನೂ ಮಾಡಿದರು. ಟ್ರಸ್ಟ ಪತ್ರವಾದ ತಾ. ೭—೫—೧೯೫ ಮತ್ತು ಮೃತ್ಯುಪತ್ರವಾದ ತಾ. ೩ ೮–೧೯೧೬. ಆ ಹೊಲಗಳ ಉತ್ಪನದಿಂದ ಶ್ರೀ ಸ್ವಾಮಿಗಳವರ

ನಿತ್ಯ ಪೂಜೆ, ನೈವೇದ್ಯ, ನಂದಾದೀಪ ಮತ್ತು ಆರಾಧನೆಗಳ ವ್ಯವಸ್ಥೆಯಾಗುವಂತೆ ಅವರು ಏರ್ಪಾಟು ಮಾಡಿದರು. ಅವುಗಳಲ್ಲಿ ಬರೆದಂತೆ ವ್ಯವಸ್ಥೆ ಮಾಡುವದಕ್ಕಾಗಿ ಭಕ್ತ ಜನರೆಲ್ಲ ಗುರ್ಲಹೊಸೂರಲ್ಲಿ ವಿಚಾರ ವಿನಿಮಯ ಮಾಡಬೇಕೆಂದು ತಾರೀಖು ೨೭—೧೦—೧೯೮೭ ದಿವಸ ನೇರಿದರು. ಆ ಸಭೆಯಲ್ಲಿ ಒಮ್ಮತದಿಂದ ನಿರ್ಣಯವಾದಂತೆ " ಶ್ರೀ ಕೈವಲ್ಯಾಶ್ರಮ ಸ್ವಾಮೀ ಸಂಸ್ಥೆಯು " ಸ್ಥಾಪಿಸಲ್ಪಟ್ಟಿತು. " ಶ್ರೀ ಕ್ಷೇತ್ರ ಗುರ್ಲಹೊಸೂರಲ್ಲಿ ಶ್ರೀ ಚಿದಂಬರೇಶ್ವರ ದೇವಸ್ಥಾನದ ಪ್ರಾಕಾರದೊಳಗಿರುವ ಶ್ರೀ ಕೈವಲ್ಯಾಶ್ರಮ ಸ್ವಾಮೀ ಮಹಾರಾಜರ ಸಮಾಧಿಯ ನಿತ್ಯ ಪೂಜೆ, ನೈವೇದ್ಯ, ನಂದಾದೀಪ, ಮತ್ತು ಪ್ರತಿವರ್ಷ ಆಶ್ವಿನ ಶುದ್ಧ ನವಮಿಯಿಂದ ದ್ವಾದಶಿಯ ವರೆಗೆ ವಾರ್ಷಿಕ ಆರಾಧನೆ, ಹಾಗೂ ನೈಮಿತ್ತಿಕ ಉರ್ಚಾ, ಅಭಿಷೇಕ, ದೀಪಾರಾಧನೆ ಮತ್ತು ಉಳಿದ ಉತ್ಸವಗಳನ್ನು ಮಾಡುವದು ಈ ಸಂಸ್ಥೆಯ ಉದ್ದೇಶವಾಗಿದೆ. " ಎಂದರೆ ಶ್ರೀಗಳವರ ನಿತ್ಯನೈಮಿತ್ತಿಕ ಪೂಜೆ, ಆರಾಧನೆ, ನಂದಾದೀಪ ಮೊದಲಾದವುಗಳನ್ನು ಚನ್ನಾಗಿ ನಡಿಸುವದರ ಮೂಲಕ, ಸ್ವಾಮೀ ಮಹಾರಾಜರು ತಮ್ಮ ಜೀವಿತಾವಧಿಯಲ್ಲಿ ಮಾಡಿದ ಲೋಕಸಂಗ್ರಹ, ಲೋಕೋಪಕಾರ, ಅಧ್ಯಾತ್ಮ ಮತ್ತು ಚಿದಂಬರ ಭಕ್ತಿಗಳ ಪ್ರಸಾರ ಕಾರ್ಯಗಳನ್ನು ಮುಂದುವರಿಸುವದೇ ಆ ಸಂಸ್ಥೆಯ ಉದ್ದೇಶವಾಗಿದೆ. ಅದಕ್ಕಾಗಿ ಹಣ ಕೂಡಿಸಿ ಕಾಯಂ ಉತ್ಪನ್ನ ಮಾಡಬೇಕೆಂದೂ, ಎಲ್ಲರೂ ಅದಕ್ಕಾಗಿ ದುಡಿಯಬೇಕೆಂದೂ ನಿರ್ಣಯವಾಯಿತು. ಅದರಂತೆ ಆ ಸಂಸ್ಥೆಯು ಆಂದಿನಿಂದ ಶ್ರೀ ಸ್ವಾಮೀ ಮಹಾರಾಜರ ಸ್ಮಾರಕವಾಗಿ, ಪ್ರತೀಕವಾಗಿ, ದೃಶ್ಯವಾದ ಸ್ಥೂಲರೂಪವಾಗಿ, ಗುರುಸೇವೆ, ಚಿದಂಬರ ಸೇವೆ ಮತ್ತು ಲೋಕಸೇವೆಗಳನ್ನು ಅಖಂಡವಾಗಿ ಮಾಡುತ್ತ ಬಂದಿದೆ. ಅದು ಹೀಗೆ ಹುಟ್ಟಿ, ಬೆಳೆದು, ಉತ್ಕರ್ಷ ಹೊಂದಿದ್ದು ಸ್ವಾಮೀ ಮಹಾರಾಜರ ಪ್ರೇರಣೆ ಮತ್ತು ಇಚ್ಛೆಗಳಿಂದಲೇ ಆಹುದೆಂಬದು ಪ್ರಷ್ಟವಿದೆ. ಅವರ ಆಶೀರ್ವಾದ, ಕೃಪೆ ಮತ್ತು ಮೇಲ್ವಿಚಾರಣೆಗಳ ಕೆಳಗೆ ಆ ಸಂಸ್ಥೆಯು ನಡೆದಿರುವದರಿಂದ, ಅದನ್ನು ಮುರಿದುಹಾಕಬೇಕೆಂದು ಬೇಕಾದವರು ಬೇಕಾದಷ್ಟು ಯತ್ನಮಾಡಿದರೂ, ಅವೆಲ್ಲ ಪ್ರಯತ್ನಗಳು ಅಯಶಸ್ವಿಯಾವವೆಂಬದು ಸಹಜವಿದೆ.

ಇಸ್ವಿ ಸನ್ ೧೯೨೩ರಲ್ಲಿ ವಿಷ್ಣು ಬುವಾ ಅವರ ಮೇಲೆ ಮತ್ತೊಂದು ಆಪತ್ತು ಬಂತು. ಅವರ ಮೇಲೆ ಬೈಲಹೊಂಗಲ ಸಬ್ ಜಜ್ಜಕೋರ್ಟಿನಲ್ಲಿ ಒಂದು ದಾವೆಯಾಯಿತು. ಆ ದಾವೆಯು ಬುವಾ ಅವರ ವಿರುದ್ಧವಾಗಿ ನಿಕಾಲೆಯಾಗಿದ್ದರೆ, ಅವರ ಗುರುಸೇವೆಗೆ ಮತ್ತೆ ವಿಘ್ನ ಬರುವಂತಿತ್ತು. ಆದುದರಿಂದ ಅವರು ಬಹಳ ಚಿಂತೆಗೊಳಗಾದರು. ಅವರಿಗೆ ಹಣದ ಸಹಾಯವು ಎಷ್ಟೂ ಇರಲಿಲ್ಲ. ಜನರ ಸಹಾಯವೂ ಕೂಡ ಅಷ್ಟಕ್ಕಷ್ಟೇ. ಆದರಿಂದ ಅವರು ಹಗಲಿರುಳು ಚಡಪಡಿಸಹತ್ತಿದರು. ಒಟ್ಟಿನ ಮೇಲೆ ಆಗಿನ ಪರಿಸ್ಥಿತಿಯು ಅವರಿಗೆ ಎಲ್ಲ ರೀತಿಯಿಂದಲೂ ಪ್ರತಿಕೂಲವಾಗಿತ್ತು. ವಿಚಾರ ಮಾಡಿ ನೋಡಿದರೆ ಆ ದಾವೆಯಲ್ಲಿ ಬುವಾ ಅವರಿಗೆ ಅಪಯಶಸ್ಸು ಕಟ್ಟಿಟ್ಟದ್ದೇ ಎಂದು ತೋರುತ್ತಿತ್ತು. ಆದರೆ ಅವರ ಗುರುನಿಷ್ಠೆಯು ಮಾತ್ರ ಅಪಾರವಾಗಿತ್ತು. ಹೀಗೆ ಎಲ್ಲ ಬಗೆಯಿಂದ ಪ್ರತಿಕೂಲವಾಗಿದ್ದ ಕಾಲದಲ್ಲಿ ಕೂಡ ಅವರು ಗುರುಚರಣದಲ್ಲಿ ವಿಶ್ವಾಸವಿಟ್ಟು ತಮ್ಮ ಗುರುನಿಷ್ಠೆಯನ್ನು ಮತ್ತೊಮ್ಮೆ ಪರೀಕ್ಷೆಗೆ ಹಚ್ಚಿದರು. ಅವರ ಹೃದಯವು ಶುದ್ಧವಾದುದರಿಂದ ಅವರಿಗೆ ಆದರಲ್ಲಿ ಅಪೂರ್ವವಾದ ಯಶಸ್ಸೂ ಸಿಕ್ಕಿತು

ಅವರ ಮೇಲೆ ಒಂದ ದಾವೆಯು ಬಹಳ ತೊಡಕಿನದಾಗಿತ್ತು. ಸಾಮಾನ್ಯ ವಕೀಲರನ್ನು ಕೊಟ್ಟರೆ ತಮ್ಮ ಕೆಲಸವು ಕೆಡಬಹುದೆಂದು ಬುವಾ ಅವರಿಗೆ ಎನಿಸಿದ್ದರೆ ಆಶ್ಚರ್ಯವಿಲ್ಲ. ಆದರೆ ದೊಡ್ಡ ವಕೀಲರನ್ನು ಕೊಡಬೇಕೆಂದರೆ ಹಣದ ಸಹಾಯವಿರಲಿಲ್ಲ. ಆದರೂ ಅವರು ಕಂಗೆಡದೆ ಬೆಳಗಾಂವಿಯ ವರೆಗೆ ಹೋಗಿ ಅಲ್ಲಿ ನಾಮಾಂಕಿತರಾದ ವಕೀಲರು ಯಾರೆಂಬ ಬಗ್ಗೆ ವಿಚಾರಣೆ ನಡಿಸಿದರು. ತಮಗೆ ಗೊತ್ತಿದ್ದ ಜನರ ಹೇಳಿಕೆಯ ಮೇರಿಂದ ಆ ಕಾಲಕ್ಕೆ ಸುಪ್ರಸಿದ್ಧರಾಗಿದ್ದ ಅಜರೇಕರ ಕೇಶವರಾಯರ ಹೆಸರು ಅವರ ಕಿವಿಯ ಮೇಲೆ ಬಿತ್ತು. ಬುವಾ ಅವರು ಕೇಶವರಾಯರ ಕಡೆಯಿಂದಲೇ ತಮ್ಮ ಪಕ್ಷವನ್ನು ಸರಿಯಾಗಿ ಮಂಡಿಸಿಕೊಳ್ಳಬೇಕೆಂದು ನಿಶ್ಚಯಿಸಿದರು. ಆದರಂತೆ ಅವರು ಕೇಶವರಾಯರ ಕಡೆಗೆ ಹೋದರು. ಆದರೆ ವಕೀಲರೆಂದರೆ ಸಾಮಾನ್ಯವಾಗಿ ತಮ್ಮ ಬುದ್ಧಿಯನ್ನು ಹಣಕ್ಕೆ ಮಾರಿ ಕೊಳ್ಳುವವರೇ ಸರಿ. ಕೇಶವರಾಯರಾದರೂ ಅದಕ್ಕೆ ಅಪವಾದವಾಗಿದ್ದಿಲ್ಲ. ಬುವಾ ಅವರು ಕೇಶವರಾಯರಿಗೆ ತಮ್ಮ ಎಲ್ಲ ಸಂಗತಿಗಳನ್ನು ಹೇಳಿ, ತಮ್ಮ

ದಾವೆಯನ್ನು ಸ್ವೀಕರಿಸಬೇಕೆಂದು ಬೇಡಿಕೊಂಡರು. ಅದಕ್ಕೆ "ನಾನು ಬೆಳಗಾಂವಿಯ ಊರನ್ನು ಬಿಟ್ಟು ಬಹುಶಃ ಬೇರೆ ಕಡೆಗೆ ಹೋಗುತ್ತಿರುವದಿಲ್ಲ. ಒಂದು ಸಲ ಜೈಲಹೊಂಗಲಕ್ಕೆ ಬರಬೇಕಾದರೆ ನಾನು ಮೂರು ನೂರು ರೂಪಾಯಿ ಸೇ ತಕ್ಕೊಳ್ಳುವನು. ನೀನಾದರೋ ಬೈರಾಗಿಯಂತೆ ಕಾಣುವಿ. ನಿನ್ನಲ್ಲಿ ನನ್ನನ್ನು ಕರೆದುಕೊಂಡು ಹೋಗುವ ಯೋಗ್ಯತೆಯಿಲ್ಲೆಂಬದು ನೇಲೆಯೇ ಕಾಣುತ್ತಿದೆ. ಆದರೆ ನೀನು ಬೇಕೆಂದರೆ ಕೈಫಿಯತ್ತು ಬರೆದು ಕೊಡುವೆನು. ಅಷ್ಟಕ್ಕೆ ನೀನು ಒಂದು ನೂರು ರೂಪಾಯಿ ಕೊಡಬೇಕು. ಅಷ್ಟು ರೂಪಾಯಿಗಳನ್ನು ತಂದಿಟ್ಟ ಹೊರತು ನಿನ್ನ ಕಾಗದ ಪತ್ರಗಳನ್ನು ನೋಡಲಿಕ್ಕಾಗಲಿ ನಿನ್ನೊಡನೆ ಈ ದಾವೆಯ ಬಗ್ಗೆ ಮಾತಾಡಲಿಕ್ಕಾಗಲಿ ನಾನು ಸಿದ್ಧನಿಲ್ಲ. ನಿನ್ನ ಇಷ್ಟವಿದ್ದಂತೆ ಮಾಡಬಹುದು" ಎಂದು ಕೇಶವ ರಾಯರು ತೀರ ಖಂಡಿತವಾಗಿಯೂ ನಿಷ್ಠುರವಾಗಿಯೂ ಹೇಳಿಬಿಟ್ಟರು.

ಬುವಾ ಅವರು ಮೋರೆಯೊಣಗಿಸಿಕೊಂಡು ಹೊರಬಿದ್ದರು. ಅವರು ಈ ಪ್ರಸಂಗದಲ್ಲಿ ತಮ್ಮ ಎಲ್ಲ ಸ್ನೇಹಿತರನ್ನೂ, ಸ್ವಾಮೀ ಮಹಾರಾಜರ ಶಿಷ್ಯರನ್ನೂ ಸಮೀಪಿಸಿದರು. ಆದರೆ ಏನೂ ಮಾಡಿದರೂ ಅಷ್ಟು ರೂಪಾಯಿಗಳು ಕೂಡಲೊಲ್ಲವು. ಮೊದಲು ಸುಮಾರು ೬೦ ರೂಪಾಯಿಗಳು ಕೂಡಿದವು. ಬುವಾ ಅವರು ಅಷ್ಟನ್ನೇ ಒಯ್ದು ಕೇಶವರಾಯರ ಮುಂದೆ ಇಡುವ ಯತ್ನ ಮಾಡಿದರು. ಇದರಿ ವಕೀಲರು ಅವರ ಮೋರೆಯನ್ನೂ ಕೂಡ ನೋಡದೆ ಆ ರೂಪಾಯಿ ತಿರುಗಿ ಕೊಟ್ಟುಬಿಟ್ಟರು. ಎರಡನೆಯ ಸಲ ಬುವಾ ಅವರು ೭೦ ರೂಪಾಯಿಗಳನ್ನೊಯ್ದು ಪ್ರಯತ್ನ ಮಾಡಿ ನೋಡಿದರು. ಆ ಸಲವೂ ಅದೇ ಪರಿಣಾಮವಾಯಿತು. ಮೂರನೆಯ ಸಲ ೮೦ ರೂಪಾಯಿಗಳನ್ನು ಒಯ್ದಿಟ್ಟರು. ಆದರೂ ವಕೀಲರ ಹೃದಯವು ಕರಗಲಿಲ್ಲ. ಕೊನೆಗೆ ಬುವಾ ಅವರು ಮತ್ತೆ ಕೆಲವು ರೂಪಾಯಿ ಸಾಲವಾಗಿ ತೆಗೆದು ಒಟ್ಟುಗೊಮ್ಮೆ ನೂರು ರೂಪಾಯಿ ಕೂಡಿಸಿ ತಂದರು. ಮತ್ತು ಅವುಗಳನ್ನೂ, ಕಾಗದ ಪತ್ರಗಳನ್ನೂ ವಕೀಲರ ಮುಂದಿಟ್ಟರು. ಹಾಗೂ ಕಾಗದ ಪತ್ರಗಳನ್ನು ನೋಡಿಕೊಂಡು ಕೈಫಿಯತ್ತು ಬರಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಅಜರೇಕರ ಕೇಶವರಾಯರು ಅದಕ್ಕೆ ಸಮ್ಮತಿಸಿದರು

ಮತ್ತು ''ಈಗ ರಾತ್ರಿಯಾಗಿರುವದರಿಂದ ನಾಳೆ ಬೆಳಿಗ್ಗೆ ಬರ್ರಿ. ನಿಮ್ಮ ಕೆಲಸವನ್ನು ಮಾಡಿ ಕೊಡುವೆನು'' ಎಂದು ಹೇಳಿದರು.

ಆದರೆ ರಾತ್ರಿ ಒಂದು ಚಮತ್ಕಾರವಾಯಿತು. ಕೇಶವರಾಯರಿಗೆ ಬೆಳಗು ಮುಂಜಾನೆ ೨–೩ ಗಂಟೆಗೆ ಒಂದು ದೃಷ್ಟಾಂತವಾಯಿತು. ಅವರು ಒಂದು ಕೋಣೆಯಲ್ಲಿದ್ದಂತೆಯೂ, ಅಲ್ಲಿ ಒಬ್ಬರು ಯತಿಗಳಿದ್ದಂತೆಯೂ ಅವರಿಗೆ ಕಾಣಿಸಿತು. ಯತಿಗಳು ರಾಯರಿಗೆ ಮುಗುಳುನಗೆ ನಗುತ್ತ ಹೇಳಿದರು:— ''ನೀವು ನಮ್ಮ ಹುಡುಗನ ಪತಿಯಿಂದ ವಕಾಲತ್ತು ವಹಿಸಿರುವಿರಿ. ಆದರೆ ಒಮ್ಮೆ ಸ್ವತಃ ಹೋಗಿ ಗುರ್ಲಹೊಸೂರು ನೋಡಿಕೊಂಡು ಆ ಮೇಲೆ ಕೈಫಿಯತ್ತು ಬರೆಯಿರಿ. ಅಲ್ಲಿಯ ವರೆಗೆ ಬರೆಯುವದು ಬೇಡ'' ಅಜರೇಕರ ವಕೀಲರು ಎಚ್ಚರಾಗಿ ನೋಡಿದರು. ಇನ್ನೂ ಬಹಳ ರಾತ್ರಿಯಿತ್ತು. ಆದರೆ ದೃಷ್ಟಾಂತದ ಸಂಗತಿಯಿಂದ ಅವರು ಗೊಂದಲಕ್ಕೀಡಾದರು. ಇದಕ್ಕೆಷ್ಟು ಮಹತ್ವ ಕೊಡಬೇಕೆಂಬದು ಅವರಿಗೆ ಹೊಳೆಯದಂತಾಯಿತು. ಅವರ ಚಿಕಿತ್ಸಕ ಬುದ್ಧಿಯು ಅವರಿಗೆ ಹೇಳಿತು: ''ಛೇ ಇದರಲ್ಲೇನಿದೆ? ನಿನ್ನೆ ಮಲಗುವ ಮೊದಲು ನೀನು ಗುರ್ಲಹೊಸೂರ ದಾವೆಯ ಬಗ್ಗೆ ವಿಚಾರ ಮಾಡಿದ್ದಿ. ಅದೇ ಕನಸಿನಲ್ಲಿ ಬಂದಿದೆ. ಇದರ ಪೂರ್ತಾಗಿ ಆ ಕನಸಿಗೆ ಬೇರೆ ಏನೂ ಅರ್ಥವಿಲ್ಲ.'' ಅದರಂತೆ ಕೇಶವ ರಾಯರು ನಿಶ್ಚಯಿಸಿ ಮಲಗಿಕೊಂಡರು

ತುಸು ಹೊತ್ತಿನಲ್ಲಿ ಅವರಿಗೆ ಮತ್ತೆ ಅದೇ ಸ್ವಾಮಿಗಳು ಅದೇ ಕೋಣೆಯಲ್ಲಿ ಕಾಣಿಸಿಕೊಂಡು ಮಾತಾಡಿದರು: – ''ಕಲಿತ ಜನರ ಸಂಶಯಗಳು ಏನು ಮಾಡಿದರೂ ಹೋಗುವದಿಲ್ಲವಲ್ಲವೇ! ನಾನು ಈ ಮೊದಲು ಹೇಳಿದ್ದು ಕನಸಿನ ಭ್ರಾಂತಿ ಇರಬೇಕೆಂದು ನೀವು ತಿಳಿದಿರುವಿರಿ ಆದರೆ ಅದು ಭ್ರಾಂತಿಯಲ್ಲ; ತೀರ ಸತ್ಯ ಸಂಗತಿಯಾಗಿದೆ. ನಾನು ಇನ್ನೊಮ್ಮೆ ನಿಮಗೆ ಹೇಳುತ್ತೇನೆ: — ಗುರ್ಲಹೊಸೂರ ಗುಡಿಯನ್ನೊಮ್ಮೆ ನೋಡಿಕೊಂಡು ಬಂದ ಮೇಲೆ ಮಾತ್ರ ಕೈಫಿಯತ್ತಿಗೆ ಕೈಹಚ್ಚಿರಿ. ಅಲ್ಲಿಯ ವರೆಗೆ ಬೇಡ'' ಅಜರೇಕರರು ಮತ್ತೆ ಎಚ್ಚರಾದರು. ಈ ಸಾರೆ ಮಾತ್ರ ಅವರ ಮನಸ್ಸಿನ ಸಂಶಯವೆಲ್ಲ ಹೇಳಲು ಹೆಸರಿಲ್ಲದೆ ಓಡಿಹೋಯಿತು. ಸ್ವಾಮಿಗಳ ಶಿಷ್ಯನಿಗೆ

ನಾನು ರೂಪಾಯಿಗಳ ಸಲುವಾಗಿ ಎಷ್ಟು ಕಷ್ಟ ಕೊಟ್ಟಿನಲ್ಲ, ಎಂದು ಅವರ ಮನಸು ಬಹಳ ಚಡಪಡಿಸಹತ್ತಿತು. ಎರಡು ಮೂರು ಸಾರೆ ಕಡಿಮೆ ಕಡಿಮೆ ರೂಪಾಯಿಗಳನ್ನು ತಂದು, ದೀನಮೋರೆಯಿಂದ, ಸಣ್ಣ ಮುಖ ಮಾಡಿ ''ಇವಿಷ್ಟೇ ರೂಪಾಯಿ ಸಿಕ್ಕಿವೆ. ಹೆಚ್ಚು ಹುಟ್ಟಲೊಲ್ಲವು. ಮಹಾರಾಜರ ಸೇವೆಯೆಂದು ಇಷ್ಟಕ್ಕೆ ಕೆಲಸ ಮಾಡಿಕೊಟ್ಟರೆ ಉಪಕಾರವಾಗುವದು.'' ಎಂದು ಅಂಗೈಯಲ್ಲಿ ಜೀವ ಹಿಡಿದುಕೊಂಡು ಬೇಡಿಕೊಂಡ ವಿಷ್ಣುಬುವಾ ಅವರ ಮುಖಮುದ್ರೆಯು ಮತ್ತೆ ಮತ್ತೆ ಅವರ ಮನಶ್ಚಕ್ಷುವಿನ ಮುಂದೆ ಕಾಣಿಸಹತ್ತಿತು. ''ಛೇ, ಛೇ, ನಾನು ಆ ಹುಡುಗನಿಗೆ ಎಷ್ಟು ಕಷ್ಟ ಕೊಟ್ಟೆನಲ್ಲ!'' ಎಂದು ಅವರಿಗೆ ಅತ್ಯಂತ ದುಃಖವಾಯಿತು. ಅವರು ಆಗಲೇ ಮನೆಬಿಟ್ಟು ಹೊರಬಿದ್ದರು. ಮತ್ತು ಶ್ರೀ ನರಸಿಂಗರಾವ ಬಾಳೇಕುಂದ್ರಿ ವಕೀಲರನ್ನು ಎಬ್ಬಿಸಿ, ಆ ಗುರ್ಲಹೊಸೂರ ಹುಡುಗನೆಲ್ಲಿ?'' ಎಂದು ವಿಚಾರಣೆ ನಡಿಸಿದರು. ಬೆಳ್ಳಗೆ ಬೆಳಗಾದ ಮೇಲೆ, ಅವರು ಅದೇ ಶೋಧದಲ್ಲಯೇ ಅಡ್ಡಾಡುತ್ತಿರುವಾಗ ಬುವಾ ಅವರು ಮಾರುತಿಯ ಗುಡಿಯ ಹತ್ತರ, ಬೀದಿಯೊಳಗೆ ಎದುರಿಗೆ ಬಂದರು. ಕೇಶವರಾಯರು ಅವರನ್ನು ನೋಡಿದ ಕೂಡಲೇ ಓಡಿ ಹೋಗಿ, ಬೀದಿಯ ದಾರಿಯ ಮೇಲೆಯೇ ಅವರಿಗೆ ಸಾಷ್ಟಾಂಗ ನಮಸ್ಕಾರ ಹಾಕಿದರು. ಆ ಮೇಲೆ ಅವರು ಬುವಾ ಅವರನ್ನು ಗಟ್ಟಿಯಾಗಿ ಅಪ್ಪಿಕೊಂಡು ಕಣ್ಣೀರಿಡುತ್ತ ''ನನ್ನನ್ನು ಕ್ಷಮಿಸಿರಿ, ಕ್ಷಮಿಸಿರಿ'' ಎಂದು ಬೇಡಿಕೊಂಡರು. ಬುವಾ ಅವರು ಇದರಿಂದ ಸ್ತಂಭಿತರಾದರು. ಅವರಿಗೆ ಕೇಶವರಾಯರಂಥ ವೃದ್ಧರೂ ನಾಮಾಂಕಿತರೂ ಆದ ವಕೀಲರು ಹೀಗೇಕೆ ಮಾಡುತ್ತಿರಬಹುದೆಂಬದರ ಗೂಢವು ತಿಳಿಯದಂತಾಯಿತು.

ಆ ಮೇಲೆ ರಾಯರು ಬುವಾ ಅವರನ್ನು ತಮ್ಮ ಮನೆಗೆ ಕರಕೊಂಡು ಹೋಗಿ ಅಲ್ಲಿ ಎಲ್ಲ ಸಂಗತಿಗಳನ್ನೂ ವಿವರವಾಗಿ ತಿಳಿಸಿದರು. ಮತ್ತು ಆವಷ್ಟು ಶೀಘ್ರ ಗುರ್ಲಹೊಸೂರಿಗೆ ಹೋಗುವ ಇಚ್ಛೆಯನ್ನು ಪ್ರಕಟಗೊಳಿಸಿದರು. ಅದರಂತೆ ಅದೇ ದಿನ ಇಬ್ಬರೂ ಕೂಡಿ ಮೋಟಾರ ಗಾಡಿಯ ಮೇಲಿಂದ ಗುರ್ಲಹೊಸೂರಿಗೆ ಬಂದರು. ಅಲ್ಲಿ ಅವರೊಮ್ಮೆ ಸ್ವಾಮೀ ಮಹಾರಾಜರ ಕೋಣೆಯನ್ನು ಪ್ರವೇಶಿಸಿ, ಅದನ್ನು ನಿರೀಕ್ಷಣೆ ಮಾಡುವದಷ್ಟೇ ತಡ, ಹರ್ಷಾತಿರೇಕದಿಂದ ಮೈಯುಬ್ಬಿದವರಾಗಿ ಉದ್ಗಾರ ತೆಗೆದರು:

''ನಾನು ಕನಸಿನಲ್ಲಿ ನೋಡಿದ ಕೋಣೆಯು ಇದೇ. ಕೋಣೆಯ ಬಾಗಿಲಿದ್ದ ದಿಕ್ಕು ಅದರ ಅಳತೆ, ಅದರೊಳಗಿನ ವಸ್ತುಗಳು, ಮುಖ್ಯವಾಗಿ ಇಲ್ಲಿ ಮಾಡದಲ್ಲಿದ್ದ ಗಣಪತಿಯ ಮೂರ್ತಿ—ಇವುಗಳೆಲ್ಲ ನಾನು ನನ್ನ ದೃಷ್ಟಾಂತ ದಲ್ಲಿ ಕಂಡವುಗಳೇ ಆಗಿವೆ ಅವುಗಳಲ್ಲಿ ಎಳ್ಳಷ್ಟೂ ಹೆಚ್ಚು ಕಡಿಮೆಯಿಲ್ಲ. ನಾನು ಈ ಊರಲ್ಲಿ ಕಾಲಿಟ್ಟದ್ದು ಇದೇ ಮೊದಲು. ಆದರೆ ಈ ಕೋಣೆಯು ನನಗೆ ಈ ಮೊದಲೇ ಪರಿಚಿತವಾಗಿದೆ. ಧನ್ಯ, ಧನ್ಯ, ಶ್ರೀ ಸ್ವಾಮೀ ಮಹಾರಾಜರ ಲೀಲೆಯು ಅತರ್ಕ್ಯವಾಗಿದೆ.'' ಅವರು ಅದೇ ನಿಮಿಷಕ್ಕೆ ತಾವು ಕೈಫಿಯತ್ತಿಗಾಗಿ ತಕ್ಕೊಂಡ ರೂಪಾಯಿಗಳನ್ನು ತಿರುಗಿ ಕೊಟ್ಟರಲ್ಲದೆ, ಆ ಕೋಣೆಯಲ್ಲಿ ನಂದಾದೀಪವಿಡುವದಕ್ಕಾಗಿ ಎರಡು ನೂರು ರೂಪಾಯಿಗಳನ್ನು ಕೊಟ್ಟುಬಿಟ್ಟರು. ವಿಷ್ಣು ಬುವಾ ಅವರಿಗೆ ತಾವು ಕೊಟ್ಟ ಕಷ್ಟವನ್ನು ನೆನೆನೆನೆದು ಅವರು ದುಃಖಿಸಹತ್ತಿದರು. ಕೊನೆಗೆ ಅವರು ಬುವಾ ಅವರನ್ನು ಅಲ್ಲಿಯೇ ಅಪ್ಪಿಕೊಂಡು ಪ್ರತಿಜ್ಞೆ ಮಾಡಿ ಹೇಳಿದರು:— ''ಇಂದಿನಿಂದ ಈ ದಾವೆಯು ನಿನ್ನದಲ್ಲ. ನನ್ನದು. ನೀನಿನ್ನು ಇದರ ಬಗ್ಗೆ ಚಿಂತೆ ಮಾಡುವ ಕಾರಣವಿಲ್ಲ. ಇಂದಿನಿಂದ ನನ್ನ ತನುಮನಧನಗಳೆಲ್ಲ ಸ್ವಾಮಿಯ ಸೇವೆಗಾಗಿ ಮೀಸಲಾಗಿವೆ.''

ಅದರಂತೆ ಅವರು ಎಲ್ಲ ರೀತಿಯಿಂದಲೂ ಕೈಕಟ್ಟಿಕೊಂಡು ನಿಂತರು. ದಾವೆಯ ಕೊನೆಯ ನಿರ್ಣಯವು ಇಶ್ವಿ ಸನ್ ೧೯೩೬ರಲ್ಲಾಯಿತು. ನಿರ್ಣಯವೂ ವಿಚಿತ್ರವಾದ ರೀತಿಯಲ್ಲಿಯೇ ಹೊರಬಿತ್ತು. ಚೌಕಸಿಯ ದಿನ ಇಬ್ಬರು ವಾದಿಗಳಲ್ಲಿ ಒಬ್ಬರು ಕೋರ್ಟಿಗೆ ಬಂದಿರಲಿಲ್ಲ. ಆಲ್ಲಿ ಉಪಸ್ಥಿತರಿದ್ದವರು ಚೌಕಸಿಗೆ ಸಿದ್ಧರಿದ್ದಿಲ್ಲ. ಅವರ ವಕೀಲರೂ ಊರಲ್ಲಿರಲಿಲ್ಲ. ದಾವೆಯನ್ನು ಆ ದಿನ ಚೌಕಸಿ ಮಾಡದೆ ಮುಂದೆ ಹಾಕಬೇಕೆಂದು ಅಲ್ಲಿದ್ದ ವಾದಿಯು ಬೇಡಿಕೊಂಡನು. ಆದರೆ ಕೋರ್ಟಿನವರು ಅದಕ್ಕೊಪ್ಪದೆ ದಾವೆಯ ಚೌಕಸಿ ಮಾಡಿ ಕೂಡಲೇ ನಿರ್ಣಯವನ್ನು ಕೊಟ್ಟುಬಿಟ್ಟರು. ಶ್ರೀ ವಿಷ್ಣು ಬುವಾ ಅವರಿಗೆ ತಮ್ಮ ಹೇಳಿಕೆಯನ್ನು ಸಹ ಕೊಡುವ ಪ್ರಸಂಗ ಬರದೇ, ದಾವೆಯು ಅವರಂತೆ ಕೊನೆಗಂಡಿತು. ಬುವಾ ಅವರ ಮೇಲೆ ಬಂದ ಆಪತ್ತಿಯು ದೂರಾಯಿತು. ಆಯಿತು, ಕೇಳುವದೇನು, ಗುರು ಸೇವೆಯ ಫಲವು ಸಿಕ್ಕಿತೆಂದು ಜನರು ಸ್ಪಷ್ಟವಾಗಿ ಮಾತಾಡಹತ್ತಿದರು.

ಆ ನಿರ್ಣಯದ ಮೇಲೆ ಮುಂಬೈ ಹೈಕೋರ್ಟಿನ ವರೆಗೆ ಕೆಲಸ ನಡೆಯಿತು ಆದರೆ ಕೊನೆಯ ತನಕ ಶ್ರೀ ಬುವಾ ಅವರೇ ಜಯಶಾಲಿಗಳಾದರು. ಇದರ ಹೊರತಾಗಿಯೂ ಬುವಾ ಅವರ ಮೇಲೆ ಅನೇಕ ಆಪತ್ತುಗಳು ಬಂದವು. ಆದರೆ ಗುರು ಕೃಪೆಯಿಂದ ಅವೆಲ್ಲ ಸಹಜವಾಗಿ ದೂರಾದವು. ಎಲ್ಲ ಪ್ರಸಂಗಗಳಲ್ಲಿ ಅಜರೇಕರ ವಕೀಲರು ಅವರಿಗೆ ಸಹಾಯಕರಾಗಿದ್ದರೆಂದು ಬೇರೆ ಹೇಳಲಿಕ್ಕೆ ಬೇಡ. ಶ್ರೀ ಬುವಾ ಅವರಿಗೆ ಅನೇಕ ಬಗೆಯಿಂದ ಸಹಾಯ ಮಾಡಿದ ಮಹನೀಯರಲ್ಲಿ ಶ್ರೀ ಮೋರೋ ಹರಿ ಖರೆಯವರನ್ನು ಮರೆಯುವಂತಿಲ್ಲ. ಅವರು ಪುಣೆಯೊಳಗೆ ಎಂಜಿನೀಯರಿಂಗ ಕಾಲೇಜದಲ್ಲಿ ಪ್ರಾಧ್ಯಾಪಕರಿದ್ದರು. ಈಗ ನಿವೃತ್ತಿ ಹೊಂದಿದ್ದಾರೆ. ಅವರು ಸ್ವಾಮೀ ಮಹಾರಾಜರ ಏಕನಿಷ್ಠ ಸೇವಕರಲ್ಲಿ ಒಬ್ಬರಾಗಿರುತ್ತಾರೆ.

ಈಗ ಸಂಸ್ಥೆಯು ಎಲ್ಲ ರೀತಿಯಿಂದಲೂ ಉತ್ಕರ್ಷಾತಿಶಯವನ್ನು ಹೊಂದುತ್ತ ನಡೆದಿರುವದೆಂದು ಹೇಳಬಹುದು. ಮಹಾರಾಜರ ಶಿಷ್ಯರಾದ ಶ್ರೀ ಕೃಷ್ಣಪ್ಪ ಮುರಕುಂಬಿ ಎಂಬವರು ಸಂಸ್ಥೆಗೆ ಕೊಟ್ಟ ದತ್ತಮಂದಿರವೂ ಈಗ ಸಂಸ್ಥೆಯ ಆಡಳಿತಕ್ಕೆ ಒಳಗಾಗಿದೆ. ಆ ಮಂದಿರವು ಬೆಳಗಾಂವಿ ಊರೊಳಗೆ ದೇಶಪಾಂಡೆ ಗಲ್ಲಿಯಲ್ಲಿದೆ. ಅಲ್ಲಿ ಶ್ರೀ ಸ್ವಾಮೀ ಸಮರ್ಥ ಅಕ್ಕಲಕೋಟ ಮಹಾರಾಜರ ಸುಂದರವಾದುದೊಂದು ಚಿತ್ರವಿದ್ದು, ಅದರ ಮುಂದೆ ಶಿಲಾಪಾದುಕೆಗಳಿವೆ. ಆದರೆ ಆ ಪಾದುಕೆಗಳನ್ನು ವಿಧ್ಯುಕ್ತವಾಗಿ ಸ್ಥಾಪನೆ ಮಾಡುವದಾಗಿಲ್ಲ. ಆ ಕೆಲಸವನ್ನು ಸಂಸ್ಥೆಯು ಆದಷ್ಟು ತೀವ್ರ ಮಾಡಬೇಕೆಂದಿಟ್ಟುಕೊಂಡಿದೆ. ಗುರ್ಲಹೊಸೂರೊಳಗೆ ಸ್ವಾಮೀ ಮಹಾರಾಜರ ವೃಂದಾವನದ ಮುಂದೆ ಯಥಾವಿಧಿಯಾಗಿ ಸ್ಥಾಪಿಸಲಾದ ಶಿಲಾಪಾದುಕೆಗಳ ವೆಚ್ಚವನ್ನೆಲ್ಲ ರಾವಬಹಾದ್ದೂರ ನಾರಾಯಣ ರಾಯರೇ ವಹಿಸಿದರೆಂಬದನ್ನು ಇಲ್ಲಿ ಹೇಳುವದುಚಿತವಾಗಿದೆ.

ಈಗ ಪ್ರತಿವರುಷ ಆಶ್ವಿನ ಮಾಸದ ಶುಕ್ಲಪಕ್ಷದಲ್ಲಿ ಸ್ವಾಮೀ ಮಹಾರಾಜರ ಆರಾಧನೆಯು ಒಳ್ಳೇ ವಿಜೃಂಭಣೆಯಿಂದ ನಡೆಯುವದು ಎಲ್ಲರಿಗೂ ಗೊತ್ತಿದ್ದ ಮಾತು. ಶ್ರೀಗಳವರು ನವಮಿಯ ದಿನ ಬ್ರಹ್ಮರೂಪರಾದರು. ಆದುದರಿಂದ ಅವರ ಆರಾಧನೆಯು ಆ ದಿನ ನಡೆಯುವದಂತೂ ಸರಿಯೇ.

ಆದರೆ ಆ ಕಾಲಕ್ಕೆ ನವರಾತ್ರಿಯ ಮೂಲಕ ಭಕ್ತಜನರಿಗೆ ಗುರ್ಲಹೊಸೂರಕ್ಕೆ ಬರುವದು ಅಶಕ್ಯವಾದುದರಿಂದ, ಆರಾಧನಾಮಹೋತ್ಸವವನ್ನು ದ್ವಾದಶಿಯ ದಿನ ಮಾಡಲಾಗುತ್ತದೆ. ಈ ಶಾಸ್ತ್ರಶುದ್ಧವಾದ ನಿರ್ಣಯವನ್ನೂ ಆರಾಧನೆಯ ಕ್ರಮವನ್ನೂ ಗೊತ್ತುಪಡಿಸಿಕೊಟ್ಟವರು ಶ್ರೀ ವಾಸುದೇವಾನಂದ ಸರಸ್ವತೀ ಸ್ವಾಮಿಗಳವರು.

ಸದ್ಗುರುವು ನಮ್ಮೆಲ್ಲರ ಕಡೆಯಿಂದ ತನ್ನ ಸೇವೆಯನ್ನು ಹೆಚ್ಚೆಚ್ಚಾಗಿ ತಕ್ಕೊಳ್ಳುವಂತೆ ಅನುಗ್ರಹಿಸಲೆಂದು ಬೇಡಿಕೊಂಡು, ಈ ಲೆಕ್ಕಣಿಕೆಗೆ ಇನ್ನು ವಿರಾಮಕೊಡುತ್ತೇವೆ.

॥ ಓಂ ತತ್ಸದ್ ಬ್ರಹ್ಮಾರ್ಪಣಮಸ್ತು ॥



ಇದೇ ಗ್ರಂಥಕರ್ತರಿಂದ ಬರೆಯಲ್ಪಟ್ಟ ಬೇರೆ ಪುಸ್ತಕಗಳು

ವಿಕಾಸವಾದ ಅಥವಾ ದೇವರು ಸತ್ತನೇ ?

ಇದಕ್ಕೆ ಮೈಸೂರಿನ ದೇವರಾಜಬಹಾದ್ದೂರ ಬಹುಮಾನವು ದೊರಕಿದೆ. ಆಧುನಿಕ ವಿಚಾರದಲ್ಲಿ ಬಹು ಮಹತ್ವದ ಸ್ಥಾನ ಪಡೆದ ವಿಕಾಸವಾದ (Doctrine of Evolution) ವನ್ನು ಸರ್ವಾಂಗೀಣವಾಗಿ ಚರ್ಚಿಸಿ, ವೇದಾಂತದ ಹೆಚ್ಚಳವನ್ನು ತೋರಿಸುವ ಪ್ರೌಢ ಗ್ರಂಥವಿದು.

ಬೆಲೆ ೧—೪—೦

●

ಮೂರ್ತಿ ಪೂಜೆ

ಇದಕ್ಕೆ ಸುವರ್ಣ ಪದಕ ದೊರೆತಿದೆ. ಮೂರ್ತಿ ಪೂಜೆಯು ತಿರುಳನು ಈಗಿನ ದೃಷ್ಟಿಯಿಂದ ತಿಳಿದುಕೊಳ್ಳಬೇಕೆನ್ನುವವರು ಇದನ್ನು ಅವಶ್ಯವಾಗಿ ಓದಬೇಕು. ಶ್ರೀ. ಡಿ. ಮಂಜಯ್ಯ ಹೆಗ್ಗಡೇರು, ಮು. ಪೋ. ಧರ್ಮಸ್ಥಳ, ಜಿಲ್ಲಾ ದಕ್ಷಿಣ ಕನ್ನಡ, ಈ ವಿಳಾಸಕ್ಕೆ ಬರೆದರೆ ಪುಸ್ತಕಗಳು ಉಚಿತವಾಗಿ ಸಿಕ್ಕುತ್ತವೆ.

●

ವೇದಾಂತದ ಒಳದಾರಿ

ಮಾನವನ ಪರಮಪುರುಷಾರ್ಥವು ಪರಮಾತ್ಮ ಸಾಕ್ಷಾತ್ಕಾರವಾಗಿದ್ದು ಅದನ್ನು ನೇರವಾಗಿ ಹೇಗೆ ಪಡೆಯಬೇಕೆಂಬುದನ್ನು ಇದರಲ್ಲಿ ವಿವರಿಸಲಾಗಿದೆ.

ಬೆಲೆ ೦—೬—೦

ನೈಷ್ಕರ್ಮ್ಯಸಿದ್ಧಿ

ಶೃಂಗೇರೀ ಪೀಠದ ಆದ್ಯಗುರುಗಳಾದ ಶ್ರೀ ಸುರೇಶ್ವರಾಚಾರ್ಯರು ಬರೆದ ಪ್ರಸಿದ್ಧ ಗ್ರಂಥದ ಅನುವಾದ; ಟೀಕೆ ಟಿಪ್ಪಣಿಗಳು ಮೊದಲಾದವುಗಳಿಂದ ಒಡಗೂಡಿದೆ. ಅದ್ವೈತ ವೇದಾಂತದ ರಹಸ್ಯಗಳೆಲ್ಲ ಇದರಲ್ಲಿ ಅಡಕವಾಗಿವೆ.

ಬೆಲೆ ೩—೦—೦

●

ಕೆಳಗಿನ ಗ್ರಂಥಗಳು ಸಿದ್ಧವಾಗಿದ್ದು, ಒಂದೆರಡು ತಿಂಗಳಲ್ಲಿ ಪ್ರಸಿದ್ಧವಾಗಲಿವೆ:

ಸಾಕ್ಷಾತ್ಕಾರ

ಸಾಕ್ಷಾತ್ಕಾರದ ಗೊತ್ತು ಗುರಿಗಳು, ಸ್ವರೂಪ, ಸಾಧನ, ಆದನ್ನು ಎಲ್ಲರೂ ಸಾಧ್ಯಮಾಡಿಕೊಳ್ಳಬಹುದಾದ ಬಗೆ, ಸಾಂಸಾರಿಕರಾದ ಸಾಧಕರು ಅನುಸರಿಸಬಹುದಾದ ರೀತಿನೀತಿ—ಇವೇ ಮೊದಲಾದವುಗಳನ್ನು ಸ್ಪಷ್ಟವಾಗಿ ವಿವರಿಸುವ ಪುಸ್ತಕ.

●

ಮನೋವಿಶ್ಲೇಷಣ ಶಾಸ್ತ್ರ

(Psycho—Analysis)

ಪಾಶ್ಚಾತ್ಯರಲ್ಲಿ ಸದ್ಯಕ್ಕೆ ಕ್ರಾಂತಿಯನ್ನುಂಟು ಮಾಡಿದ ಮನಃಶಾಸ್ತ್ರದ ಶಾಖೆ. ಸುಶಿಕ್ಷಿತರೆಂದೆನಿಸಿಕೊಳ್ಳುವವರು ಅತ್ಯವಶ್ಯವಾಗಿ ಓದಬೇಕಾದ ಪುಸ್ತಕವಿದು.

ಸಾಹಿತ್ಯಭಾಂಡಾರ, ಕೊಪ್ಪೀಕರ ರೋಡ, ಹುಬ್ಬಳ್ಳಿ, ಜಿಲ್ಲಾ ಧಾರವಾಡ, ಇವರಲ್ಲಿ ದೊರೆಯುತ್ತವೆ.

ಶ್ರೀ ಶೇಷಾಚಲ ಗ್ರಂಥಮಾಲೆಯ ಪುಸ್ತಕಗಳು

ಬೇಡಿಕೆಯ ಕೂಡ ೧ ಹಣ ಮುಂಗಡ ಕಳಿಸಬೇಕು.

ಐತಿಹಾಸಿಕ

ಅಲ್ಲಾಹೋ ಅಕಬರ	೧೦ ಅ
ಅಡವುಟ್ಟ ಸಿಪಾಯಿ	೬ ಅ
*ಅಮಾತ್ಯ ರಾಕ್ಷಸ	೮ ಅ
ಈಶ ಸಂಕಲ್ಪ	೧೪ ಅ
ಕುಣಕ್ಕಾ	೨ ರೂ
ಚೋ ಪುರದ ಚೋ. ರಾಯ	೨ ರೂ
ದಳವಾಯಿ ಸಾತನಾಮಿ	೪ ಅ
*ನರವೀರ ಕಾಸೀಮ	೨ ರೂ
ಪತಿತೋದ್ಧಾರಣ	೪ ಅ
*ಪರಮೇಶ್ವರ	೧೦ ಅ
*ಪರಿಣಾಮ	೨ ರೂ
ಪ್ರಾಣದಾನ	೬ ಅ
*ಫಿರಂಗಿಗಳ ಉತ್ಪಾತ	೨ ರೂ
ಮಂದಾಕಿನಿ	೨ ರೂ
*ಮಾತೃಭೂಮಿಗಾಗಿ	೫ ಅ
ರಕ್ತ ಸಿಂಚನ	೪ ಅ
ರಾಣೀಕುರಂಗಿ	೬ ಅ
ರಾಣೀ ಅರುಣಕುಮಾರಿ	೧ ರೂ
ವಡಗಾವಡ ವಿಜಯ	೧—೪—೩
ವೀರಶಾಂತಾ	೧೦ ಅ
*ವಿರರಾಜ ವಿಜಯ	೧೨ ಅ
ಶಕ್ತಿಮಯಿ	೧ ರೂ
ಸಿರಾಜ ಉದ್ದೌಲ	೧—೮—೦
ಸ್ವಾಧೀನ ಜೀವನ	೨—೮—೦
ಸೂರ್ಯಾಸ್ತ	೦—೧೨-೦
ಸೂರ್ಯಗ್ರಹಣ	೦—೧೨-೦
ಸಿಂದೂ ಮುಸಲ್ಮಾನರ ಐಕ್ಯ	೩ ಅ

ಪತ್ತೇದಾರಿ

ಅಂದಿಕೆ	೨—೪—೦
ಇಂದುಮುಖಿ	೧—೪—೦
ಕಳ್ಳನಿಗೆ ಕಾಣಿಕೆ	೧—೪—೦
* ಕೃತಕ ಕೈದೆರಳು	೨—೪—೦
ಕಾಲಸರ್ಪ	೨—೮—೦
ನಿಗೂಢ ಕೊಲೆ	೧—೦—೦
ಪತ್ತೇದಾರ ನರಸಿಂಗರಾಯ	೦—೮—೦
ನರಹರಿ	೩—೦—೦
ನನ್ನ ಗತಿ	೦—೧೨-೦
ಭಗವಾನದಾಸ	೨—೮—೦
ಭಯಂಕರ ಕೊಲೆ	೧—೪—೦
ಮಾಯಾವತಿ	೨—೮—೦
* ವಿಚಿತ್ರ ಚಟ	೧—೪—೦
ವಿಲಕ್ಷಣ ಸಾಹಸ	೦—೮—೦
ಹಗೆ	೧—೪—೦
ಘಾತುಕ ಶಿತಿಕಂಠ	೧—೪—೦

ಸಾಮಾಜಿಕ

ಅಪರಾಜಿತ	೦—೬—೦
ಕರಿನೀರು	೦—೩—೦
ಕಾಳಗದಲ್ಲಿ ಬಾಳು	೧—೪—೦
ಚಂದ್ರಕಾಂತ	೦—೧೨-೦
ಜಯಪರಾಜಯ	೦—೮—೦
ನೀಚ ಇನಾಮದಾರ	೦—೧೨—೦
ನನ್ನ ಗೃಹಿಣಿ	೦—೧೨—೦
* ಪರಿವರ್ತನ	೦—೮—೦
ಬಂಧುದ್ರೋಹ	೮ ಅ
ಭಾಮಿನಿ	೮ ಅ
ಭಾವಭಿನ್ನತೆ	೩ ಅ
ಮಣಿ	೬ ಅ
* ಮಹಾತ್ಮಾ	೫ ಅ
ಯೋಗಾಯೋಗ	೧—೮—೦
ರಾಜನಂದಿ	೮ ಅ

ರಾಮದಾಸ	೧—೦—೦
‡ರಾಕಾಚಂದ್ರ	೧೫ ಆ
‡ವಿಲಕ್ಷಣ ಪತಿಸೇವೆ	೫ ಆ
ಸೌಭಾಗ್ಯ ತಿಲಕ	೧ ರೂ
ಸತೀ ಸಾಹಸ	೬ ಆ
ಸ್ತ್ರೀಯರ ಹಕ್ಕಬಾಧ್ಯತೆ	೧ ರೂ

ಸೌರಾಣಿಕ

ಅಪರಾಧಿಗಳಾರು ?	೧—೧೫—೦
ಸತಿಸುಕನ್ಯೆ	೧—೪—೦
ಅಂಗದನ ಫಿರ್ಯಾದು	೫ ಆ
ಸತೀ ಸಿಮಂತಿನಿ	೩ ಆ

ಚರಿತ್ರೆ

‡ಶ್ರೀ ಏಕನಾಥ ಚರಿತ್ರೆ	೧ ರೂ
ಕನಕಮಹಿಮಾದರ್ಶ	೮ ಆ
ಗುಜರಾಥ ಇತಿಹಾಸ	೬ ಆ
ಟೀಂಬೆ ಮಹಾರಾಜರು	೧೦ ಆ
ಸಂತ ತುಕಾರಾಮ	೧ ರೂ
‡ನಾರಾಯಣ ಭಗವಾಕರು	೮ ಆ
ಬೆಳಧಡಿ ಬ್ರಹ್ಮಾನಂದರು	೮ ಆ
ಶ್ರೀ ಬ್ರಹ್ಮೇಂದ್ರ ಸ್ವಾಮಿ	೪ ಆ
ಮರಾಟರೂ ಇಂಗ್ಲೀಸರೂ	೨ ರೂ
ಮಡಿವಾಳಪ್ಪನವರು	೮ ಆ
‡ಸ್ವಾಮಿ ಶ್ರದಾನಂದ	೧೫ ಆ
‡ ಶ್ರೀ ಪಾವಂಜ ಕಥಾಮೃತ	೧೫ ಆ
ಶ್ರೀಶೇಷಾಚಲ ಸಾಧು(ಪದ್ಯ)	೧೦ ಆ
ಸೌರಾಷ್ಟ್ರ	೫ ಆ
‡ಜ. ಸು. ಆಚಾರ್ಯರು	೧೫ ಆ
‡ಜ್ಞಾನೇಶ್ವರರು	೧೫ ಆ

ನಾಟಕಗಳು

‡ಆರ್ಯ ಮಗಳು	೬ ಆ
ಉತ್ತರ ಸಾವಿತ್ರಿ	೧—೪—೦
ಜಲಂಧರ	೪ ಆ
ನಿರ್ಭಾಗ್ಯ ಭಾರತ	೬ ಆ
‡ ನಾರದ ಲೀಲಾ	೪ ಆ
ಸಳಿನೀ ವಿಜಯ	೧—೮—೦
ಪನ್ನೆ	೧೦ ಆ
‡ ಮೋಜಿನ ವರಣ	೧೫ ಆ

ಪಾರಮಾರ್ಥಿಕ ಇತರ

ಅವಿವಾಹಿತರ ಸಮಸ್ಯೆ	೧ ರೂ
‡ ಆನಂದರಾಮಾಯಣ	೩ ರೂ
ದಿನಕರರಾಮದಾಸ ಐಲಗೀತೆ	೮ ಆ
‡ ಕ. ಕಥಾಸರಿತ್ಸಾಗರ	೦—೮—೦
ಮಡಿ ಮೈಲಿಗೆಗಳ ಗುಟ್ಟು	೪ ಆ
ಮಲ್ಲಾರಿ ಮಹಾತ್ಮ್ಯೆ	೮ ಆ
ರೇಣುಕಾ ಮಹಾತ್ಮ್ಯೆ	೪ ಆ
ವೆಂಕಟೇಶ ಮಹಾತ್ಮ್ಯೆ	೯ ರೂ
ಕರ್ನಾಟಕಕ್ಕೆ ದೇವತೆಗಳು	೧೦ ಆ
ಜ್ವರ ಪ್ರಕರಣ	೧ ರೂ
ಧರ್ಮಸಿಂಧು	೧ ರೂ
ಮಿತ್ರ ದುಃಖ	೪ ಆ

ಧಾರ್ಮಿಕ

ಕಾಣ್ವನಿತ್ಯವಿಧಿ (ಕನ್ನಡಲಿಪಿ)	೮ ಆ

[ದೇವನಾಗುವ ಲಿಪಿಯ ಪುಸ್ತಕಗಳು]

ಶು. ಯ ಶ್ರಾದ್ಧ ಮಾರ್ತಂಡ	೧ ರೂ
ಶು. ಯ ಸಂಸ್ಕಾರಮಾರ್ತಂಡ	೨ ರೂ
ನಿತ್ಯವಿಧಿ(ಆಚಾರಮಾರ್ತಂಡ)	೧ ರೂ
ಉತ್ಸರ್ಜನೋಪಾ ರಣ	೮ ಆ
ಆಂತ್ಯೇಷ್ಟಿ ಮಾರ್ತಂಡ	೧—೪—೦
ಶು. ಯ. ಕಾಣ್ವಸಂಹಿತೆ	೩ ರೂ
ಶಾಂತಿಮಾರ್ತಂಡ ಭಾ ೧-೨	೨ ರೂ

* ‡ ಈ ಚಿಹ್ನ ಹಾಕಿರುವ ಪುಸ್ತಕಗಳು ಅತ್ಯಲ್ಪ ಸಿಲ್ಕ ಇವೆ.

ಬಿ. ಪಿ. ಕಾಳೆ, ಮದಿಹಾಳ ಧಾರವಾಡ